ಭಾಗ-8

ಸತ್ತರ್ಕದೀಪಾವಳಿ ತತ್ವಪ್ರಕಾಶಿಕಾ ತತ್ವಪ್ರದೀಪ

ಭಾವದೀಪ

ಅಧ್ಯಕ್ಷರು :

ಪರಮಪೂಜ್ಯ ॥ ಶ್ರೀ ಸುಬುಧೇಂದ್ರತೀರ್ಥಶ್ರೀಪಾದರು

ಪೀಠಾಧಿಪತಿಗಳು, ಶ್ರೀರಾಘವೇಂದ್ರಸ್ವಾಮಿಗಳ ಮಠ, ಮಂತ್ರಾಲಯ.

ದೌರವ ಸಂಪಾದಕರು :

ವಿ॥ ರಾಜಾ ಎಸ್. ನಿರಿ ಆಚಾರ್ಯ

ಮಂತ್ರಾಲಯ.

ಸಂಪಾದನೆ ಮತ್ತು ಅನುವಾದ :

ವಿ॥ ಬೆಮ್ಮತ್ತಿ ವೇಂಕಟೇಶಾಚಾರ್ಯ

ಬೆಂಗಳೂರು.

॥ ಶ್ರೀಮನ್ಮೂಲರಾಮೋ ವಿಜಯತೇ ॥ ॥ ಶ್ರೀ ಗುರುರಾಜೋ ವಿಜಯತೇ ॥

ಭಾಗ -೮

ಶ್ರೀಪದ್ಮನಾಭತೀರ್ಥಮುನಿ ವಿರಚಿತ
ಸತ್ತರ್ಕದೀಪಾವಳಿ

ಶ್ರೀತ್ರಿವಿಕ್ರಮಪಂಡಿತಾಚಾರ್ಯ ವಿರಚಿತ
ತತ್ವಪ್ರದೀಪ

ಶ್ರೀಜಯತೀರ್ಥಮುನಿ ವಿರಚಿತ
ತತ್ವಪ್ರಕಾಶಿಕಾ

ಭಾವದೀಪ

ಶ್ರೀವೇದವ್ಯಾಸರ ಬ್ರಹ್ಮಸೂತ್ರ, ಶ್ರೀಮಧ್ವಾಚಾರ್ಯರ ಭಾಷ್ಯ,
ಸತ್ತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ ಟೀಕೆಗಳೊಂದಿಗೆ
ಶ್ರೀಮಂತ್ರಾಲಯಪ್ರಭುಗಳ ಭಾವದೀಪ
ಸಂಸ್ಕೃತ ಮೂಲ ಹಾಗೂ ಕನ್ನಡ ಅನುವಾದ

ವಿಶೇಷ ವಿಚಾರ ಹಾಗೂ ಸಮಗ್ರ ವಿಶ್ಲೇಷಣೆಯೊಂದಿಗೆ

* * * * * *

ಪ್ರಕಾಶನ :
ಶ್ರೀಗುರುಸಾರ್ವಭೌಮ ಸಂಶೋಧನ ಮಂದಿರ,
ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ,
ಶ್ರೀರಾಘವೇಂದ್ರಸ್ವಾಮಿಗಳ ಮಠ, ಮಂತ್ರಾಲಯ - 518 345 ಆಂಧ್ರಪ್ರದೇಶ.

॥

'ಭಾವದೀಪ' : ಮಂತ್ರಾಲಯ ಕ್ಷೇತ್ರದಲ್ಲಿ ದುರ್ಮುಖ ॥ ಶ್ರಾವಣ ಮಾಸ ॥ ಕೃಷ್ಣಪಕ್ಷ ಶ್ರೀರಾಘವೇಂದ್ರ ಸ್ವಾಮಿಗಳ ಆರಾಧನೆಯ ದಿನದಂದು (ದಿನಾಂಕ : ೨೦-೮-೨೦೧೬) ಶ್ರೀರಾಘವೇಂದ್ರಸ್ವಾಮಿಗಳ ಪವಿತ್ರಕ್ಷೇತ್ರವಾದ ಮಂತ್ರಾಲಯದಲ್ಲಿ ಪರಮಪೂಜ್ಯ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರು ಈ ಕೃತಿಯನ್ನು ಲೋಕೇಶಾರ್ಪಣೆ ಹಾಗೂ ಲೋಕಾರ್ಪಣೆ ಮಾಡಿದರು.

ಪ್ರಕಾಶನ : ಶ್ರೀಗುರುಸಾರ್ವಭೌಮ ಸಂಶೋಧನ ಮಂದಿರ,
ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ,
ಶ್ರೀರಾಘವೇಂದ್ರಸ್ವಾಮಿಗಳ ಮಠ, ಮಂತ್ರಾಲಯ - 518 345
ಆಂಧ್ರಪ್ರದೇಶ.

ಸಂಪಾದನೆ ಮತ್ತು ಅನುವಾದ : ವಿ ॥ ಬೆಮ್ಮತ್ತಿ ವೇಂಕಟೇಶಾಚಾರ್ಯ, ಬೆಂಗಳೂರು.
ದೂರವಾಣಿ : 914149120

ಪ್ರಥಮಮುದ್ರಣ : 2016

ಪುಟಗಳು : 720

ಬೆಲೆ : 600 ರೂ

ಪ್ರತಿಗಳು : 1000

©

Publication Copy right :

ಶ್ರೀಗುರುಸಾರ್ವಭೌಮ ಸಂಶೋಧನ ಮಂದಿರ,
ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ,
ಶ್ರೀರಾಘವೇಂದ್ರಸ್ವಾಮಿಗಳ ಮಠ, ಮಂತ್ರಾಲಯ - 518 345 ಆಂಧ್ರಪ್ರದೇಶ.

ಅಕ್ಷರಜೋಡಣೆ :

ಶ್ರೀ ಬೆಮ್ಮತ್ತಿ ಶ್ರೀನಿವಾಸ
ಶ್ರೀಮತಿ ಎಸ್. ನಾಗಲತಾ

ಮುದ್ರಣ :
ಮುಕ್ತಪಥ ಮುದ್ರಣಾಲಯ, ಬೆಂಗಳೂರು.

॥ Srimanmoola Ramo Vijayate ॥ ॥ Sri Gururajo Vijayate ॥

Vol. - 8

SRI PADMANABHATIRTHAMUNI'S
SATTARKADIPAVALI

SRIJAYATIRTHAMUNI'S
TATVAPRAKAASHIKAA

SRI TRIVIKRMAPANDITAACHARYA'S
TATVAPRADIPA

BHAVADIPA

Sri Vedavyasa's Brahmasutra,
Sri Madhvacharya's Bhashya,
Teekas - Sattarkadipawali, Tatvapradipa, Tatvaprakaashikaa

Bhavadipa by Sri Mantrayala Prabhu

Sanskrit Original Text with Kannada Translation

with special debate from many commentaries & overall critisism

Published by :

Sri Gurusarvabhouma Samshodhana Mandira,
Jagadguru Srimanmadhvacharya Mula Mahasamsthana,
Sri Raghavendraswamy Mutt, Mantralayam - 518 345 A.P.

'BHAVADIPA' : HH Sri Sri Subhudendra Thirta sripada has submitted this 8th volume to Sri Raghavendraswamiji at Mantralaya.

Publication : Sri Gurusarvabhouma Sanshodhana Mandira,
Jagadguru Srimanmadhvacharya Mula
Mahasamsthana, Sri Raghavendraswamy mutt,
Mantralayam. A.P.

Edited & Translated by : Vidwan Bemmatti Venkateshacharya,
Bangalore. Ph : 9141495120

First Edition : 2016

Price : Rs. 600

Copies : 1000

©

Publication Copy right :

Sri Gurusarvabhouma Samshodhana Mandira,
Jagadguru Srimanmadhvacharya Mula Mahasamsthana,
Sri Raghavendraswamy Mutt, Mantralayam - 518 345 A.P.

Type set :

Smt. S. Nagalatha, Bangalore.
Sri Sri Bemmatti Srinivasa

Printed at :

Muktipatha Mudranalaya, Bangalore.

॥ ಶ್ರೀಮನ್ಮೂಲರಾಮೋ ವಿಜಯತೇ ॥ ॥ ಶ್ರೀಗುರುರಾಜೋ ವಿಜಯತೇ ॥

ಬ್ರಹ್ಮಸೂತ್ರ ಭಾಷ್ಯ

ಸತ್ತರ್ಕದೀಪಾವಳಿ ತತ್ವಪ್ರಕಾಶಿಕಾ ತತ್ವಪ್ರದೀಪ

ಭಾವದೀಪ

* * * *

ಅಧ್ಯಕ್ಷರು :

ಶ್ರೀ ಸುಬುಧೇಂದ್ರತೀರ್ಥಶ್ರೀಪಾದರು

ಪೀಠಾಧಿಪತಿಗಳು, ಶ್ರೀರಾಘವೇಂದ್ರಸ್ವಾಮಿಗಳ ಮಠ, ಮಂತ್ರಾಲಯ.

ಗೌರವ ಸಂಪಾದಕರು :

ವಿ॥ ರಾಜಾ ಎಸ್. ಗಿರಿಆಚಾರ್ಯ

ಮಂತ್ರಾಲಯ

ಸಂಪಾದನೆ ಮತ್ತು ಅನುವಾದ :

ವಿ॥ ಬೆಮ್ಮತ್ತಿ ವೇಂಕಟೇಶಾಚಾರ್ಯ

ಬೆಂಗಳೂರು.

॥ Srimanmoola Ramo Vijayate ॥ ॥ Sri Gururajo Vijayate ॥

Brahmasutra Bhashya

Sattrakadipavali Tatvaprakaashikaa

Tatvapradipa

BHAVADIPA

******

President:

HH Sri Subhudhendratirtha Sripadaru

PeeTadhipati of Sri Raghavendraswamy Mutt,
Mantralayam.

Honorary Editor:

Sri Vidwan Raja S. Giri Acharya

Mantralayam.

Edited & Translated by :

Vidwan Bemmatti Venkateshacharya,

Bangalore.

ಎಂಟನೆಯ

ವಾಙ್ಮಯ-ಕುಸುಮಹಾರ

ಸಮರ್ಪಣೆ

ಶ್ರೀರಾಘವೇಂದ್ರಸ್ವಾಮಿಗಳ ಮಠಾಧೀಶರಾದ

ಪರಮಪೂಜ್ಯ ॥ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರು

ಶ್ರೀರಾಘವೇಂದ್ರತೀರ್ಥಶ್ರೀಪಾದರ ಅಂತರ್ಯಾಮಿಗಳಾದ ಶ್ರೀಮನ್ಮಧ್ವಾಚಾರ್ಯರ

ಅಂತರ್ಯಾಮಿಗಳಾದ ಶ್ರೀಮನ್ ಮೂಲರಾಮಚಂದ್ರದೇವರಿಗೆ ಈ ಕೃತಿಯನ್ನು

ಎಂಟನೆಯ ವಾಙ್ಮಯ ಕುಸುಮಹಾರವನ್ನಾಗಿ ಸಮರ್ಪಣೆ ಮಾಡಿದ್ದಾರೆ.

॥ ಶ್ರೀಮನ್‌ಮೂಲರಾಮೋ ವಿಜಯತೇ ॥ ॥ ಶ್ರೀಗುರುರಾಜೋ ವಿಜಯತೇ ॥

ಶ್ರೀಮತ್-ಪರಮಹಂಸ-ಪರಿವ್ರಾಜಕಾಚಾರ್ಯ-ಪದ-ವಾಕ್ಯ-ಪ್ರವೀಣ-ಪಾರಾವಾರ-ಪಾರಂಗತ-
ಸರ್ವತಂತ್ರ-ಸ್ವತಂತ್ರ-ಶ್ರೀಮನ್-ಮೂಲರಘುಪತಿ-ವೇದವ್ಯಾಸ-ದೇವ-ದಿವ್ಯ-ಶ್ರೀಪಾದ
ಪದ್ಮಾರಾಧಕ-ಜಗದ್ಗುರು-ಶ್ರೀಮನ್-ಮಧ್ವಾಚಾರ್ಯ-ಮೂಲಮಹಾಸಂಸ್ಥಾನ-
ಮಂತ್ರಾಲಯ-ಶ್ರೀರಾಘವೇಂದ್ರಸ್ವಾಮಿಗಳವರ ಮತದ ವೇದಾಂತ-ಸಾಮ್ರಾಜ್ಯ-
ದಿಗ್ವಿಜಯ-ವಿದ್ಯಾಸಿಂಹಾಸನಾಧೀಶ್ವರರಾದ
ಪರಮಪೂಜ್ಯ ಶ್ರೀ ಸುಶಮೀಂದ್ರತೀರ್ಥ ಶ್ರೀಪಾದಂಗಳವರ ಕರಕಮಲಸಂಜಾತರಾದ
ಪರಮಪೂಜ್ಯ ಶ್ರೀ ಸುಯತೀಂದ್ರತೀರ್ಥ ಶ್ರೀಪಾದಂಗಳವರ ವರಕುಮಾರರಾದ
ಪರಮಪೂಜ್ಯ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ

ಅನುಗ್ರಹ ಸಂದೇಶ

ಪರಮಪೂಜ್ಯ ಶ್ರೀರಾಘವೇಂದ್ರತೀರ್ಥಶ್ರೀಪಾದಂಗಳವರ ಆರಾಧನೆಯ ಶುಭಪರ್ವ-ಕಾಲದಲ್ಲಿ ಭಾವದೀಪ ಗ್ರಂಥದ ಎಂಟನೆಯ ಸಂಪುಟವು ಬಿಡುಗಡೆಗೊಳ್ಳುತ್ತಿದೆ. ಸಮಗ್ರ ವೇದವಾಙ್ಮಯದ ಸಮನ್ವಯವನ್ನು ಪರಮಾತ್ಮನಲ್ಲಿ ತಿಳಿಯುವುದೇ ರಾಯರ ಆರಾಧನೆ. ನಿರಂತರ ಅಪೌರುಷೇಯವಾದ ವೇದಗಳ ಅರ್ಥವನ್ನು ಮನನ ಮಾಡುವ ಮೂಲಕ ಪರಮಾತ್ಮನ ಪಾದಾರವಿಂದಗಳ ಧ್ಯಾನದಲ್ಲಿ ರಾಯರು ಆಸಕ್ತರಾಗಿರುವರು. ಪರಮಾತ್ಮನನ್ನು ಬಿಟ್ಟು ಇತರರ ಲೌಕಿಕವಿಚಾರವನ್ನು, ಮಾಡುತ್ತಾ ಕುಳಿತಿರುವವರಲ್ಲ. ಇಂಥ ರಾಯರಿಗೆ ಬ್ರಹ್ಮಮೀಮಾಂಸಾಶಾಸ್ತ್ರದ ಪ್ರಥಮಾಧ್ಯಾಯದ ವಿಚಾರವು ಪರಮಪ್ರೇಮಾಸ್ಪದವಾಗಿದೆ. ಏಕೆಂದರೆ ಸಮಗ್ರ ವೇದಗಳ ಸಮನ್ವಯವನ್ನು ಪರಮಾತ್ಮನಲ್ಲಿ ಮಾಡುವ ಮೂಲಕ ಜಗಜ್ಜನ್ಮಾದಿಕಾರಣನಾದವನು ಹಾಗೂ ಗುಣಪೂರ್ಣನಾದವನು ಶ್ರೀಹರಿ ಮಾತ್ರ ಎಂಬುದಾಗಿ ಈ ಅಧ್ಯಾಯವು ಪ್ರತಿಪಾದನೆ ಮಾಡುತ್ತಿದೆ. ಇಂಥ ಶ್ರೇಷ್ಠವಾದ ಪ್ರಥಾಮಾಧ್ಯಾಯದ ಕಾರ್ಯವು ರಾಯರ ಆರಾಧನೆಯ ದಿವಸ ಪೂರ್ಣಗೊಂಡು ಸಮರ್ಪಣೆ ಆಗುತ್ತಿದೆ.

ಮುಂದಿನ ವಿಚಾರ ವಿರೋಧ ಪರಿಹಾರ. ಶ್ರೀಹರಿಯನ್ನು ಪಡೆಯಬೇಕೆಂಬ ತವಕವುಳ್ಳ ಜಿಜ್ಞಾಸುವು ವೇದಗಳಿಂದ ಶ್ರೀಹರಿಯ ಜ್ಞಾನವನ್ನು ಸಂಪದಾನೆ ಮಾಡಬೇಕು. ಪ್ರಥಮಾಧ್ಯಾಯದಲ್ಲಿ ಹೇಳಿದಂತೆ ಪ್ರತಿಯೊಂದು ಶ್ರುತಿಗಳು, ವಾಕ್ಯಗಳು, ಪದಗಳು, ಅಕ್ಷರಗಳು, ಪ್ರಕೃತಿಗಳು,

ಪ್ರತ್ಯಯಗಳು, ಅಷ್ಟೇಅಲ್ಲದೇ ಧ್ವನಿಗಳೂ ಕೂಡ ಶ್ರೀಹರಿಯನ್ನೊಬ್ಬನನ್ನೇ ಕೊಂಡಾಡುತ್ತವೆ ಎಂಬುದನ್ನು ಮನಗಾಣಬೇಕು. ಈ ವಿಷಯದಲ್ಲಿ ಹತ್ತುಹಲವು ರೀತಿಯಲ್ಲಿ ಪುನಃ ಸಂದೇಹ ಉಂಟಾಗುತ್ತದೆ. ವೇದವಾಕ್ಯಗಳಲ್ಲೇ ಪರಸ್ಪರ ವಿರೋಧವಿದೆ ಅಥವಾ ಸ್ಮೃತಿಗ್ರಂಥಗಳಿಗೂ ವೇದಗಳಿಗೂ ವಿರೋಧಬರುತ್ತದೆ. ಅಥವಾ ಲೌಕಿಕ ಜನರ ವ್ಯವಹಾರ ಅಥವಾ ಸಂಪ್ರದಾಯಗಳಿಂದಲೂ ವಿರೋಧ ಪ್ರಾಪ್ತವಾಗುತ್ತದೆ. ಅಥವಾ ಲೋಕದಲ್ಲಿ ಬಹಳಷ್ಟು ವ್ಯಾಪಕಾಗಿ ಬೆಳೆದಿರುವ ಕೆಲವೊಂದು ಮತಗಳ ವಿರೋಧವೂ ಬರುತ್ತದೆ. ತರ್ಕಗಳ ವಿರೋಧವಷ್ಟೇ ಅಲ್ಲದೇ ತರ್ಕದ ಬೆಂಬಲವಿರುವ ಶ್ರುತಿಗಳ ವಿರೋಧವೂ ಬರುತ್ತದೆ. ಹೀಗೆ ಅನೇಕ ಬಗೆಯ ವಿರೋಧಗಳನ್ನು ಪರಿಹರಿಸಿಕೊಳ್ಳದಿದ್ದರೆ ಪುನಃ ಭಗವಂತನ ಸರ್ವೋತ್ತಮತ್ವದ ಉಪಾಸನೆಯೇ ನಷ್ಟವಾಗುವ ಪರಿಸ್ಥಿತಿ ಪ್ರಾಪ್ತವಾಗುತ್ತದೆ. ಈ ಸಮಸ್ಯೆಯ ಪರಿಹಾರಕ್ಕಾಗಿಯೇ ಬ್ರಹ್ಮಮೀಮಾಂಸಾಶಾಸ್ತ್ರದ ಎರಡನೆ ಅಧ್ಯಾಯ ಹೊರಟಿದೆ. ಸರ್ವೋತ್ತಮತ್ವದ ಉಪಾಸನೆಗೆ ಅಣುಮಾತ್ರದಷ್ಟು ವಿರೋಧವೂ ಇರುವುದಿಲ್ಲ. ಹಾಗೂ ಮೇಲೆ ಹೇಳಿದ ಯಾವುದೇ ವಿರೋಧಗಳಿಗೂ ಅವಕಾಶವಿಲ್ಲ ಎಂಬುದನ್ನು ಈ ಅಧ್ಯಾಯವು ಪ್ರತಿಪಾದನೆ ಮಾಡುತ್ತಿದೆ.

ಪ್ರಕೃತ ಈ ಸಂಪುಟದಲ್ಲಿ ಪ್ರಥಮಾಧ್ಯಾಯವು ಸಮಾಪ್ತವಾಗಿರುವುದಷ್ಟೇ ಅಲ್ಲದೆ ಎರಡನೇ ಅಧ್ಯಾಯದ ಪ್ರಾರಂಭವೂ ಕೂಡ ಆಗಿದೆ. ಹೀಗೆ ಪ್ರಥಾಮಾಧ್ಯಾಯದ ಸಮಾಪ್ತಿ ದ್ವಿತೀಯಾಧ್ಯಾಯದ ಪ್ರಾರಂಭದಿಂದ ಒಳಗೊಂಡ ಈ ಸಂಪುಟವನ್ನು ರಾಯರ ಆರಾಧನೆಯ ಶುಭಸಂದರ್ಭದಲ್ಲಿ ಸಮರ್ಪಣೆ ಮಾಡುತ್ತಿರುವುದು ಬಹಳ ಅರ್ಥಪೂರ್ಣವಾದದ್ದು. ಇದರಿಂದ ನಾವು ತಿಳಿಯಬೇಕಾದದ್ದು ಇಷ್ಟು - 'ಪ್ರತಿನಿತ್ಯ ಭಗವಂತನ ಗುಣಪರಿಪೂರ್ಣತ್ವವನ್ನು ಅನುಸಂಧಾನ ಮಾಡಬೇಕು ಏತನ್ಮೂಲಕವಾಗಿ ವಿಷ್ಣು ಒಬ್ಬನೇ ಸರ್ವೋತ್ತಮನಾಗಿದ್ದಾನೆ ಉಳಿದವರೆಲ್ಲರೂ ಅವನ ಕಿಂಕರರು ಯಾವುದೇ ಶಬ್ದಗಳಿದ್ದರೂ ಅದು ಕೇವಲ ವಿಷ್ಣುವನ್ನೇ ಪ್ರತಿಪಾದನೆ ಮಾಡುತ್ತದೆ ಇತರರನ್ನು ಪ್ರತಿಪಾದನೆ ಮಾಡುವುದಿಲ್ಲ' ಎಂಬ ತತ್ವದ ದೀಕ್ಷೆಯನ್ನು ಪಡೆದು ಗುರುಗಳಾದ ರಾಯರಿಗೆ ಇದನ್ನು ಸಮರ್ಪಣೆ ಮಾಡಬೇಕು. ಮತ್ತು ಈ ವಿಷಯದಲ್ಲಿ ಯಾವುದೇ ಗ್ರಂಥಗಳು ವಿರೋಧ ಮಾಡಿದರೂ ಅಥವಾ ಬೇರೆ ಬೇರೆ ಪ್ರತಿವಾದಿಗಳು ವಿರೋಧ ಮಾಡಿದರೂ ಅಥವಾ ನಮ್ಮ ಜನರೇ ವಿರೋಧ ಮಾಡಿದರೂ ಕೂಡ ಇದರಿಂದ ನಾನು ವಿಚಲಿತನಾಗುವುದಿಲ್ಲ ಎಂಬ ದೃಢ ನಿರ್ಧಾರವನ್ನು ರಾಯರ ಎದುರಿನಲ್ಲಿ ಮಾಡಬೇಕು. ಇದೇ ಜೀವನ, ಇದರ ಹೊರತಾದ ಮತ್ತೊಂದು ಜೀವನವೇ ಇರುವುದಿಲ್ಲ ಇದಕ್ಕಾಗಿಯೇ ಜೀವನದ ಬೇರೆ ಲೌಕಿಕದ ಕಾರ್ಯಗಳನ್ನು

ಮಾಡಬೇಕು, ಇತರ ಅರ್ಥಕಾಮಾದಿಗಳ ಪ್ರಯೋಜನಕ್ಕಲ್ಲ. ಎಲ್ಲಿಯತನಕ ಈ ಅನುಸಂಧಾನವನ್ನು ದೃಢಪಡಿಸಿಕೊಳ್ಳುವುದಿಲ್ಲವೋ ಅಲ್ಲಿಯತನಕ ಬದುಕಿದ್ದೂ ವ್ಯರ್ಥ.

ರಾಘವೇಂದ್ರಸ್ವಾಮಿಗಳ ಆರಾಧನೆಯೆಂದರೆ ವಿಷ್ಣುಸರ್ವೋತ್ತಮತ್ವದ ದೀಕ್ಷಾಸಂಪತ್ತನ್ನು ಪ್ರಚುರಮಾಡಿಕೊಳ್ಳುವುದೇ ಹೊರತು ಬೇರೇನೂ ಅಲ್ಲ. ರಾಯರಿಗೆ ಹಲವುವಿಧ ಭಕ್ತರು ಹಲವಾರು ರೀತಿಯಲ್ಲಿ ತಮ್ಮ ಸೇವೆಯನ್ನು ಸಲ್ಲಿಸುತ್ತಾರೆ. ಅವೆಲ್ಲವೂ ವ್ಯರ್ಥವೆಂಬುದು ನಮ್ಮ ಮಾತಿನ ಉದ್ದೇಶವಲ್ಲ. ಆ ಎಲ್ಲ ಸೇವೆಗಳು ಬ್ರಹ್ಮಮೀಮಾಂಸಾಶಾಸ್ತ್ರ ಹೇಳುವ ಗುಣಪರಿಪೂರ್ಣತ್ವ ಹಾಗೂ ದೋಷವಿದೂರತ್ವದ ಚಿಂತನೆಯಲ್ಲಿ ಅಂತಿಮಗೊಳ್ಳಬೇಕು ಎಂಬುದಷ್ಟೇ ಮುಖ್ಯ ಅಭಿಪ್ರಾಯ.

ಜಗತ್ತಿನಲ್ಲಿ ಹಲವು ರೀತಿಯ ಗುರುಗಳ ಬಳಿ ನಾವು ಹೋಗಬಹುದು. ಯಾರ ಬಳಿ ಬೇಕಾದರೂ ಶಿಷ್ಯತ್ವವನ್ನು ವಹಿಸಬಹುದು. ಆದರೆ ಅಂಥ ನೂರಾರು ಮಂದಿ ಗುರುಗಳೆನಿಸಿಕೊಂಡಿರುವವರ ಬಳಿ ತೆರಳಿದರೆ ವಿಷ್ಣುವೇ ಸರ್ವೋತ್ತಮನಾಗಿದ್ದಾನೆ ಅವನು ದೋಷವಿದೂರನಾಗಿದ್ದಾನೆಂಬ ಅನುಸಂಧಾನ ಬರಲು ಸಾಧ್ಯವಿಲ್ಲ. ಈ ಪ್ರಯೋಜನವು ದೊರಕಬೇಕೆಂದರೆ ರಾಯರನ್ನೇ ಶರಣಾಗಬೇಕು, ರಾಯರನ್ನೇ ಸೇವೆಗೈಯಬೇಕು, ರಾಯರನ್ನೇ ಗುರುಗಳೆಂದು ಉಪಾಸನೆ ಮಾಡಬೇಕು. ಇದರಿಂದ ನಮಗೆ ಸಂಕಲ್ಪ ಇಲ್ಲದಿದ್ದರೂ ಕರುಣಾಮಯಿಗಳಾದ ರಾಯರು ಭಗವಂತನೆಡೆ ನಮ್ಮನ್ನು ಕರೆದುಕೊಂಡು ಹೋಗುತ್ತಾರೆ. ಅವರಿಗಿರುವ ಭಕ್ತವಾತ್ಸಲ್ಯ ಶಬ್ದಗಳಿಂದ ವರ್ಣಿಸಲೇ ಸಾಧ್ಯವಿಲ್ಲ. ನಾವು ಮಾಡಿದ ಎಲ್ಲ ದೋಷಗಳನ್ನು ಪರಿಹರಿಸಿ ನಮ್ಮನ್ನು ಗುಣಶಾಲಿಗಳನ್ನಾಗಿ ಮಾಡುವ ದೊಡ್ಡ ಗುಣ ಇರುವುದು ರಾಯರಲ್ಲಿ ಮಾತ್ರ. ಹಾಗಾಗಿ ಬ್ರಹ್ಮಮೀಮಾಂಸಾಶಾಸ್ತ್ರದ ಪ್ರಥಮಾಧ್ಯಾಯ ಹಾಗೂ ಎರಡನೇ ಅಧ್ಯಾಯವನ್ನು ಯಾರು ಅಧ್ಯಯನ ಮಾಡುತ್ತಾರೋ ಅಂಥವರ ಎಲ್ಲ ದೋಷಗಳನ್ನು ರಾಯರು ಪರಿಹರಿಸುತ್ತಾರೆ, ಅಷ್ಟೇ ಅಲ್ಲದೇ ಗುಣಭರಿತರನ್ನಾಗಿ ಮಾಡಿ ಮೋಕ್ಷಕ್ಕೆ ಕರೆದೊಯ್ಯುತ್ತಾರೆ. ಇದನ್ನು ತಿಳಿಸುವುದಕ್ಕಾಗಿಯೇ ಭಾವದೀಪ ಗ್ರಂಥವನ್ನು ರಚನೆ ಮಾಡಿದ್ದಾರೆ. ದೀಪದ ಗುಣ ಕತ್ತಲೆಯನ್ನು ಪರಿಹರಿಸುವುದು ಮಾತ್ರವಲ್ಲ ಬೆಳಕನ್ನು ನೀಡುವುದು ಕೂಡ ಆಗಿದೆ. ಹಾಗೆಯೇ ನಮ್ಮ ಜೀವನದಲ್ಲಿರುವ ದೋಷಗಳೆಂಬ ಕತ್ತಲೆಯನ್ನು ಪರಿಹರಿಸಿ ಗುಣಗಳೆಂಬ ಬೆಳಕನ್ನು ನೀಡಿ ಅನಂತಕಾಲದ ತನಕ ಸುಖವನ್ನೀಯುವ ಏಕೈಕ ಗುರುಗಳು ಶ್ರೀರಾಘವೇಂದ್ರತೀರ್ಥಶ್ರೀಪಾದಂಗಳವರು.

ಇಂಥ ಗುರುಗಳ ಆರಾಧನೆ ವರ್ಷಕ್ಕೊಮ್ಮೆ ಅಲ್ಲ ಪ್ರತಿನಿತ್ಯ ಪ್ರತಿಕ್ಷಣವೂ ನಮ್ಮ ಹೃದಯದಲ್ಲಿ ನಡೆಯತ್ತಲೇ ಇರಲಿ, ಎಂದೆಂದೂ ರಾಯರೇ ಗುರುಗಳಾಗಿರಲಿ ತನ್ಮೂಲಕವಾಗಿ ಶ್ರೀಮದಾಚಾರ್ಯರ ಮುಖ್ಯಗುರುತ್ವದ ಉಪಾಸನೆ ಮತ್ತಷ್ಟು ಹೆಚ್ಚಾಗಲಿ.

ಅವಿರತವಾಗಿ ಎರಡು ವರುಷಗಳಿಂದ ಮೂರು ಟೀಕೆಗಳ ಜೊತೆ ಭಾವದೀಪ ಗ್ರಂಥವನ್ನು ಅಚ್ಚುಕಟ್ಟಾಗಿ ವಿದ್ವಾನ್. ಬೆಮ್ಮತ್ತಿ ವೇಂಕಟೇಶಾಚಾರ್ಯರು ಅನುವಾದ ಮಾಡುತ್ತಿದ್ದಾರೆ. ಎರಡು ವರ್ಷಗಳಲ್ಲಿ ಎಂಟು ಸಂಪುಟವನ್ನು ಬರೆದು ರಾಯರಿಗೆ ಸಮರ್ಪಣೆ ಮಾಡಿದ್ದಾರೆ. ಬ್ರಹ್ಮಮೀಮಾಂಸಾಶಾಸ್ತ್ರದ ನಾಕು ಅಧ್ಯಾಯಗಳಲ್ಲಿ ಒಂದು ಅಧ್ಯಾಯ ಪೂರ್ಣಗೊಂಡಿದೆ. ಇನ್ನೂ ಮೂರು ಅಧ್ಯಾಯಗಳ ಅನುವಾದಕಾರ್ಯ ನಡೆಯಬೇಕು. ಎಂಟಕ್ಕೂ ಹೆಚ್ಚಿನ ಸಂಪುಟಗಳನ್ನು ಬರೆಯಬೇಕು. ಅದನ್ನು ನಿರ್ದುಷ್ಟವಾಗಿ ಬರೆಯುವಂತೆ ರಾಯರು ಅವರಿಗೆ ಅನುಗ್ರಹಿಸಲಿ ಮತ್ತು 'ಮುಂದಿನ ರಾಯರ ಆರಾಧನೆಯಲ್ಲಿ ಮುಂದಿನ ಮೂರು ಅಧ್ಯಾಯಗಳನ್ನು ಪರಿಪೂರ್ಣವಾಗಿ ಬರೆದು ಸಮರ್ಪಣೆ ಮಾಡಬೇಕು ಅದಕ್ಕಾಗಿ ಅವರಿಗೆ ಸರಸ್ವತಿಯ ವಿಶೇಷ ಅನುಗ್ರಹವಾಗಲಿ' ಎಂಬುದಾಗಿ ನಾವು ಬೆಮ್ಮತ್ತಿ ವೇಂಕಟೇಶಾಚಾರ್ಯರಿಗೆ ಆಶೀರ್ವಾದವನ್ನು ಮಾಡುತ್ತಿದ್ದೇವೆ. ಜಿಜ್ಞಾಸುಗಳಿಗೆ ಸಂಪೂರ್ಣ ಭಾವದೀಪ ಕೃತಿಯ ಅವಶ್ಯಕತೆ ಬಹಳಷ್ಟು ಇರುವುದರಿಂದ ಸುಮಾರು ಇಪ್ಪತ್ತು ಸಂಪುಟಗಳಷ್ಟು ಆಗುವ ಈ ಭಾವದೀಪ ಕೃತಿಯನ್ನು ಬಹಳ ಕಡಿಮೆ ದರದಲ್ಲಿ ನೀಡಬೇಕೆಂದು ಸಂಕಲ್ಪಿಸಿದ್ದೇವೆ. ಈ ನಮ್ಮ ಸಂಕಲ್ಪ ಮುಂದಿನ ರಾಯರ ಆರಾಧನೆಯಲ್ಲಿ ಪೂರ್ಣಗೊಳ್ಳಬೇಕೆಂಬುದೇ ನಮ್ಮ ಆಶಯವಾಗಿದೆ. ಹಾಗಾಗಿ ಅತ್ಯಂತ ಮುತುವರ್ಜಿಯಿಂದ ನಿರ್ದುಷ್ಟವಾಗಿ ವಿಷಯವೈಶಾಲ್ಯದಿಂದ ಈ ಯೋಜನೆಯನ್ನು ಮುಂದಿನ ಆರಾಧನೆಯಲ್ಲಿ ಮುಕ್ತಾಯಗೊಳಿಸುವಂಥ ಶಕ್ತಿ ವಿದ್ವಾನ್ ಬೆಮ್ಮತ್ತಿ ವೇಂಕಟೇಶಾಚಾರ್ಯರಿಗೆ ಶ್ರೀಮನ್ ಮೂಲರಘುಪತಿರಾಮಚಂದ್ರದೇವರು ಹಾಗೂ ಹರಿವಾಯುಗುರುಗಳು ವಿಶೇಷ ಅನುಗ್ರಹವನ್ನು ಮಾಡಿ ಇನ್ನು ಹೆಚ್ಚಿನ ಅನುವಾದ ಕಾರ್ಯದ ಸಾಮರ್ಥ್ಯವನ್ನು ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ಅಸ್ಮದ್ಗುರ್ವಂತರ್ಗತ ಶ್ರೀಮದ್ರಾಘವೇಂದ್ರತೀರ್ಥಗುರ್ವಂತರ್ಗತ-
ಭಾರತೀರಮಣ - ಮುಖ್ಯಪ್ರಾಣಾಂತರ್ಗತ - ಶ್ರೀಮನ್‌ಮೂಲರಘುಪತಿ -
ವೇದವ್ಯಾಸದೇವರು ಸಂಪೂರ್ಣವಾಗಿ ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇವೆ.

ಇತಿ ನಾರಾಯಣಸ್ಮರಣೆಗಳು.

Brahmasutra Bhashya
With
Select Commentaries including
Bhavadipa of Sri Raghavendra Tirtha

By

Vachaspati Dr. V. R. Panchamukhi

At the outset, I would like to express our sincere respectful danda pranams, to His Holiness Sri Subudhendra Tirtha for his encouragement to publish this Series of Volumes on Sutra Bjhashya, Tatvaprakasika, and other commentaries with Focus on Bhavadipa, with Kannada Translations.

We would also express our gratitude to Mahamahopadhyaya, Pandita Kesari, Vidwan Sri Raja .S. Giri Acharya, for his guidance, support and encouragement in the finalisation of the different Volumes.

The present Volume is concerned with the last six Adhikaranas of the Fourth Pada and the Three Adhikarana's of the First Pada of the Second Adhyaya.

As done in the other Volumes, Vidwan Venkateshacharya has provided translations, with critical notes and discussions, of other commentaries on Sutra Bhashya, such as Sattarkadipavali, Tatva prakasika, Tatvapradipa, along with the Translation of Bhavadipa of Sri Raghavendra Swamigalu. He has also given the account of Tantradipika of Sri Raghavendra Tirtha, whenever necessary.

The present Volume - Volume No. 8 in the series of Volumes on Sri Madhva Bhashya and the Commentaries/Tippanis, thereupon, consists

of the Kannada Translation and Notes, pertaining to the following Nine Adhikaranas:

1. *Jyotirupkramadhikarana (the Second Adhikarana of the Fourth pada of the first Adhyaya);*
2. *Na Sankyopasangrahadhikarna, (the Third Adhikarana of the Fourth pada of the first Adhyaya));*
3. *Akshadhikarana, (the Fourth Adhikarana of the Fourth pada of the first Adhyaya);*
4. *Samakarshadhikarana (the Fifth Adhikarana of the Fourth pada of the first Adhyaya);*
5. *Prakrutyadhikarana (the Sixth Adhikarana of the Fourth pada of the first Adhyaya);*
6. *Etenadhikarana (the Seventh Adhikarana of the Fourth pada of the first Adhyaya);*
7. *Smrutyadhikarana (the First Adhikarana in the First Pada of the Second Adhyaya);*
8. *Navilakshnatvadhikarana (the Second Adhikarana of the First Pada of the Second Adhyaya).*
9. *Abhimanyadhikarna (the Third Adhikarana of the First Pada of the Second Adhyaya).*

Thus, this Eighth Volume deals with, Nine Adhikaranas, in Total - the first six being the Adhikarana of the Fourth Pada of the First Adhyaya, while the remaining three Adhikarana's, belonging to the First Pada of the Second Adhyaya.

Vidwan Sri Bemmatti Venkateshacharya, has covered the detailed explanations given in all the commentaries stated above, in the sequential manner. He has very competently presented the main arguments of Purvapaksha and Siddhanta, and has upheld the superiority of Siddhanta of Madhvacharya, as the final interpretation.

Sri Venkateshacharya, presents, in a succinct manner, the summaries of arguments, developed in the different Adhikaranas listed above.

In order to facilitate the understanding of the main themes dealt with in the different Brahmasutras, covered in this Volume, I have ventured to present brief English Translations of the Brahmasutras. These translations are based upon one of my earlier Books, published by Rashtriya Sanskrita Vidyapeetha, (deemed University) Tirupati.

Jyorirupakramadhikarna

।। ज्योतिरुपक्रमात्तु तथा ह्यधीयत एके ।।

The word Jyotis referring to the Jyotishtoma Yajna in the context of a Sruti, has the prime meaning of Lord Brahma because this is how all the words are interpreted to refer to Lord Brahma by the use of various interpretative approaches such a etymological meaning (Yougika), more significant etymology (Mahayaga) and the usage by the learned (Vidwadrudhi)

।। कल्पनोपदेशाच्च मध्वादिवदविरोधः ।।

To interpret Avyakta to have the prime meaning of Brahma does not conflict with its use in prescribing or implementing the Karmas. Keeping in view the meanings in common usage, the approach of more significant etomology (Mahayoga) will have to be invoked derive the prime meaning. Interpretation of the Avyakta as Brahman has the purpose of facilitating Upasana or worshipping Lord Brahma as an entity who is described by all Vedic words. This approach does not disturb the use of the same words for common wordly activities. For example, the word Madhu is used, in its prime sense, to refer to Lord Vishnu residing inside the Sun, and in its secondary sense to refer to the honey.

Na Sankyopasangrahadhikarna

।। न सङ्ख्योपसङ्ग्रहादपि नानाभावादतिरेकाच्च ।।

Here the words dealing with large numbers are reconciled to mean Lord Brahma. In the Phrase "Pancha Pancha Janah" the words Pancha Pancha refer to Lord Brahma in their prime meaning and not the five entities viz. Prana, Eyes, Ears, Food and Mind. All the reasonings, given earlier, justifying such interpretation, are applicable, since the entities like Prana, Eyes etc., are under the control of Lord Brahma, as such the words used to describe the subordinate entities can also be used to describe the commanding entities. Further it is not prescribed that these subordinate entities should be understood to be eligible for Moksha. Lord Brahma has several forms which, though not distinct from each other, can be distinguished from each other on account of 'Visesha". Further, the features of the 'resort' and 'resortee' (Adhara and Adheya) are also applicable to the same Lord Brahma.

।। प्राणादया वाक्यशेषात् ।।

The entities which give the respective capabilities in the Prana, Eyes, Ears, Food and Mind are nothing but the different forms of Lord Brahma because it is only he who has the prowess to bestow these capabitilites and this inference is indicated by the remaining part of the text in the same Sruti.

।। ज्योतिषैकेषामसत्यन्ने ।।

According to a school of thought of the Kanwas, if Food (Anna) is not one of the given entities, Jyotis or the Brahman in the form of lustre could be regarded as the fifth entity. The two systems of counting the five entities with Anna as the fifty entity or with Jyotis as the fifty entity can be mutually reconciled by arguing either that Jyotis and Anna mean the same thing or that these different sets of five are meant for Uapansa by different types of eligible people.

Akashadhikarna

।। कारणत्वेन चाकाशादिषु यथा व्यपदिष्टोक्तेः ।।

The entity Akasha described in the Sruti, both as the cause and as the effect, refers to Lord Vishnu residing in it and not to the physical entity of Akasha. Just as Vishnu was described in one context as the entity that cannot be fully understood in the same way here also it is described that entity inside the Akasha is the one that cannot be fully understood.

Samakarshadhikarna

।। समाकर्षात् ।।

All the Vedic words by prime relevance (Mukhya Vrtti) signify Lord Vishnu by the special power of Drawal (Samakarsha), the same words could also be used to refer to the objects of common activities of the world.

।। जगद्वाचित्वात् ।।

Since the words, due to everday common use signify the objects of everyday life, they are obviously well-known in those uses, concealing their prime reference to Brahman.

।। जीवमुख्यप्राणलिङ्गादिति चेत् तद्व्याख्यातम् ।।

Earlier many words were reconciled in Lord Brahma on the reasoning that the entitites denoted by them are under the control of Lord Brhama. However in many contexts in the Sruti, it is stated that as Jiva leaves, every thing dries up or that Mukhya Prana leads all the beings into activities, and hence it appears that Jiva and Mukhya Prana are also the controlling entities. This is not so because in all such contexts it is explained that Lord Vishnu is the inner commanding entity (Antaryami) in Jiva and Mukhya Prana and it is he who motivates everyting into action.

।। अन्यार्थं तु जैमिनिः प्रश्नव्याख्यानाभ्यामपि चैवमेके ।।

Drawing away the words from their prime meaning of Vishnu for facilitating their use in wordly activities is also meant to promote knowledge of Lord Brahma. This is understood by close scrutiny of the questions put forth by Shounaka and the explanations given by Angirasa, and also of the questions put forth by Swetaketu and the explanations given by Uddalaka. In all these contexts the significance of the knowledge of Para Brahma is well brought out. This is the view of sage Jaimini.

।। वाक्यान्वयात् ।।

The prime relevance of the Vaidika words which apparently signify the worldly objects and actions (karma), in referring to Lord Brahma is meant for facilitating a consistent interpretation of the complete sentences of the Vedic text in relation to Lord Brahma.

।। प्रतिज्ञासिद्धेर्लिङ्गमाश्मरथ्यः ।।

Sage Ashmarathya believes that the purpose of using Vedic words to signify wordly actions and objects is necessarily meant for convincingly establishing the thesis that knowledge is the only instrument for achieving salvation and not Karma. If the actions (Karmas) are explained in details, the ultimate futility of their results will be demonstrated and thereby the prime status of knowledge is clearly established.

।। उत्क्रमिष्यत एवं भावादित्यौडुलोमिः ।।

Sage Audulomi opines that for every eligible person desiring to realise salvation through the path of knowledge, the performance of action (Karmas) is an extremely essential step for acquiring purity of mind and thereby realising greater devotion and inquisitiveness for true knowledge - Jijnasa. Hence the use of the Vedic words to describe Karmas is Justified.

।। अवस्थितेरिति काशकृत्स्नः ।।

Sage Kasa Krtsna holds the view that if we have to acquire the conviction that Lord Brahma is the ultimate Resort of everything in world, such as Karma, deities etc, we should acquire knowledge about the Karmas and the worldly objects which are all dependent on Him. Hence the use of the Vedic words to describe the wordly actions is justified.

Prakrutyadhikarna

।। प्रकृतिश्च प्रतिज्ञादृष्टान्तानुपरोधात् ।।

Lord Brahma is referred to not only by words of masculine gender but also by all words of feminine gender. The word Prakrti and all such faminine gender words signify Lord Vishnu. It is only if such interpretation is accepted that the various statements and similies and examples given in the Srutis become appropriate.

।। अभिध्योपदेशाच्च ।।

The word Prakrti signifies Lord Brahma because is it preached in Smrtis that Lord Brahma is in the form of his desire referred to by the word Prakrti.

।। साक्षाच्चोभयाम्नानात् ।।

The feminine words like Prakrti also should signify Lord Brahma because in a single context Lord Vishnu is directly described as both feminine (Stri) and masculine (Purusha)

।। आत्मकृतेः परिणामात् ।।

The word Prakrti would also mean special action. Since Lord Brahma causes the transformations of the Prakrti and thereby demonstrated the diversity of his Special Actions, he is aptly described by the word Prakrti.

।। योनिश्च हि गीयते ।।

Lord Brahma can be described by all the feminine words because in many contexts His capability to reproduce from his own body is well narrated.

Etena sarve vyakhyataadhikarna

।। एतेन सर्वे व्याख्याता व्याख्याताः ।।

As a result of the reasoning given in the earlier sections, all the Vedic words-even those signifying Null and Void etc. would have the prime meaning of Lord Vishnu. This is firmly True and True only.

First Adhyaya Ends

ADHYAYA - II

AVIRODHADHAYAYA

Pada -1

Smrutyadhikarna

।। स्मृत्यनवकाशदोषप्रसङ्ग इति चेन्नान्यस्मृत्यनवकाशदोषप्रसङ्गात् ।।

We cannot argue that the Srutis which proclaim that Lord Vishnu is the creator of the Universe, become unauthentic because they are incongruent with respect to the Smrtis like Pasupata, Sankhya, Kanada etc. which preach that Shiva is the cause of the entire Universe. On the contrary, the Smrtis proclaiming Shiva's supremacy themselves should be regarded as unauthentic since they are incogruent with the relatively more forceful Srutis like Pancharatra that preach the Supremacy of Lord Vishnu.

।। इतरेषां चानुपलब्धेः ।।

It is actually observed in reality that even by performing the functions prescribed in the Smrtis like Pashupata and by conforming to the Do's and Don't prescribed in them one would not derive the results that ought to have been visible and perceptible as stipulated in them. Hence these Smrtis are obviously not authoritative for knowledge.

।। एतेन योगः प्रत्युक्तः ।।

For the same reason that often the prescribed results are not realised in reality, even the Yogasastra deserves to be discarded. Yogasastra stipulates that by performing Yogas, first one would experience sweat, then body tremble etc. but his sequence of effects if often not seen in many cases of the practitioners.

Na Vilakshnatvadhikarna

।। न विलक्षणत्वादस्य तथात्वं च शब्दात् ।।

On the contrary, we cannot argue that the Srutis and those Smrtis that conform to the Srutis, are not authentic because they have the special features distinct from others. Srutis are Apourusheya unwritten by anybody and are also self-authentic (Swatah-Pramana) without the needs of any other authority. Smrtis that conform to Srutis have the distinction of strictly conforming to the thesis propounded in the Srutis. There is corroborative evidence in this regard. Thus Srutis and the conforming Smrtis are indeed authentic unlike the Shaiva Smrtis.

।। दृश्यते तु ।।

In the case of Srutis and the Srouta Smrtis, the results of the Do's and Don'ts prescribed in them are invariably realised by the eligible ones in the same manner as stated in them.

Abhimanyadhikarna

।। अभिमानिव्यपदेशस्तु विशेषानुगतिभ्याम् ।।

There are many statements in the Srutis such as 'The earth spoke, water spoke'. In their apparent meaning, such statements seem to imply falsehood because earth or water cannot speak as they are motionless and inanimate. We cannot argue that for this reason, the Srutis are unauthentic. In all such statements, the reference, is to the commanding deities which provide the inner motive force. The commanding deities have the special prowess of being invisible despite possessing their own bodies and being all-pervasive. They have also the special capability of entering the other objects and being pervasive despite the feature of limited size.

।। दृश्यते च ।।

The commanding deities are visible to the eligible Yogins.

The Jijnasus are indeed grateful to Vidwan Sri Bemmatti Venkateshacharya, for preparing such an extremely useful Volume on Brahmasutra Bhashya, covering several Commentaries and providing good critical comparative discussions.

We pray the the scholar author continues his pains-taking exercise to complete all the Four Adhyayas of Brahmasutras, in a similar manner with useful details.

Vachaspati Dr. V. R. Panchamukhi
Chancellor, Sri Gurusarvabhouma Sanskrit Vidyapeeth and
Executive Director,
Sri Gurusarvabhouma Samsodhan Mandir
Mantralayam

XXII

ಜನಮನದಲ್ಲಿ ಸದ್-ಭಾವನೆ ಬಿತ್ತಲು
ಇನ್ನೊಮ್ಮೆ ಬಾ ಗುರುರಾಯ ..!!

''ನಾ ಗುಣವಂತ...'' ''ನಾ ಸಿರಿವಂತ...'' ''ನಾ ರೂಪವಂತ...'' ''ನಾ ಮಾಡಿದ್ದು ತಪ್ಪಲ್ಲ...'' ''ನಾ ತಪ್ಪು ಮಾಡೋದೂ ಇಲ್ಲ...'' ''ನಾ ಹೇಳಿದಂತೆಯೇ ಆಗಬೇಕು...'' ''ನಾ ಅಂದುಕೊಂಡಿದ್ದೇ ಸತ್ಯ...'' ಇಂಥ ಅಹಂಕಾರ ಮಮಕಾರಗಳಿಂದ ತುಂಬಿದ ಬಿಗುಮಾನದ ಜಗತ್ತಿದು. ಇಲ್ಲಿ ತಪ್ಪಿಗೆ ಮಾತ್ರ ಸಮರ್ಥನೆ, ಸತ್ಯಕ್ಕಲ್ಲ...!!!

ಇಂಥ ಜಗತ್ತಿನಲ್ಲಿ ಸತ್ಯ ತಲೆ ಎತ್ತಲು ಸಾಧ್ಯವಾ....? ಸಾತ್ವಿಕ ಬಯಕೆಗಳು ಚಿಗುರಲು ಸಾಧ್ಯವಾ...? ಏನು ಮಾಡೋದು...? ಕಣ್ಣಾರೆ ಕಂಡದ್ದನ್ನು ''ಕಂಡಿದ್ದೇನೆ'' ಎನ್ನುವಂತಿಲ್ಲ. ಕಿವಿಯಾರೆ ಕೇಳಿದ್ದನ್ನು ''ಕೇಳಿದ್ದೇನೆ'' ಎನ್ನುವಂತಿಲ್ಲ. ಕಣ್ಣನ್ದೂ ಕುರುಡರಾಗಿ ಬದುಕಬೇಕು. ಕಿವಿಯಿದ್ದೂ ಕಿವುಡರಾಗಿ ಬದುಕಬೇಕು. ಎಲ್ಲಿ ಏನೇ ಆದರೂ ತುಟಿ ಬಿಚ್ಚುವಂತಿಲ್ಲ. ಅನ್ಯಾಯ ಪ್ರತಿಭಟಿಸುವಂತಿಲ್ಲ. ಮೌನಪ್ರತಿಭಟನೆಗೆ ಕಿಮ್ಮತ್ತಿಲ್ಲ.

ಬಿಸಿರಕ್ತ ಕುದಿಯುವ ಈ ಯೌವನದಲ್ಲೂ ತಾಕತ್ತಿಲ್ಲದ ನಪುಂಸಕನಂತೆ ಬದುಕಬೇಕಾಗಿದೆ. ಇಂಥವರ ನಡುವೆ ಬದುಕುವ ದೌರ್ಭಾಗ್ಯ ಒಂದೇ ನನ್ನ ಸ್ವತ್ತು. ''ಅಬ್ಬಾ .... !!'' ಈಗಲೇ ಹೀಗೆ. ಮುಂದೆ ..... ಹೇಗೋ..... ? ಏನೋ .... !!!! ನೆನೆದರೆ ದಿಗಿಲಾಗುತ್ತೆ. ಮೈ ಜುಮ್ ಎನ್ನುತ್ತೆ. ಅನ್ಯಾಯ, ಅಧರ್ಮಗಳ ಈ ಬಿರುಗಾಳಿಗೆ ಜಗತ್ತನ್ನು ಮುಗಿಸುವ ತನಕವೂ ಸಮಾಧಾನ ಇಲ್ಲವೆನಿಸುತ್ತೆ.... !!!!

ಜಗತ್ತು ಕೆಟ್ಟಿತು. ಈ ಜಗತ್ತಿನಲ್ಲಿ ಮುಂದೆ ನಾ ಬದುಕಲಾರೆ. ಇಂಥ ಗೊಂದಲದ ಬಿರುಗಾಳಿಯಲ್ಲಿ ನಾ ಸಿಲುಕಿ ಕಂಗಾಲಾಗಿರುವೆ. ಗುರುರಾಯರೇ ಭಕ್ತಿಯಿಂದ ನಿಮ್ಮಲ್ಲೊಂದು ನನ್ನ ಕಳಕಳಿಯ ಪ್ರಾರ್ಥನೆ.... -

ಜನಮನದಲಿ ಸದ್ಭಾವನೆ ಬಿತ್ತಲು ಇನ್ನೊಮ್ಮೆ ಬಾ ಗುರುರಾಯ...!!

ಇನ್ನೊಮ್ಮೆ ಬಾ ಗುರುರಾಯ...!!

ಗುರುರಾಯರು ಉತ್ತರಿಸುವರು : - ''ಜಗತ್ತು ಕೆಟ್ಟಿಲ್ಲ, ಕೆಡುವುದೂ ಇಲ್ಲ'. ಜನರ ಮನಸ್ಸುಗಳು ಕೆಟ್ಟಿವೆ. ಇದ ಕಂಡು ''ಜಗತ್ತೇ ಕೆಟ್ಟಿದೆ'' ಎಂದು ಕಂಗಲಾಗಬೇಕಿಲ್ಲ. ಒಮ್ಮೆ ಕಣ್ಮುಚ್ಚಿ ಕುಳಿತು ಯೋಚಿಸಿದರೆ ಸತ್ಯಸಂಗತಿ ಅರಿವಾಗುವುದು. ಮತ್ತೊಬ್ಬರ ಮನಸ್ಸು ಎಷ್ಟು ಹಾಳಾಗಿದೆ ಎಂದು ಅರಿಯುವ ಮೊದಲು ನಿನ್ನ ಮನಸ್ಸು ಎಷ್ಟು ಶುದ್ಧವಾಗಿದೆ ಎಂದು ಪರೀಕ್ಷಿಸು. ನಿನ್ನ ಮನಸ್ಸು ಉಚ್ಛ್ರಾಯಸ್ಥಿತಿಯಲ್ಲಿದ್ದರೆ ನೂರು ಕೋಟಿ ಜನರ ಮನಸ್ಸು ಹಾಳಾದರೂ ನಿನ್ನ ಆತ್ಮೋದ್ಧಾರಕ್ಕೆ ಭಂಗವಿಲ್ಲ. ನಿನ್ನ ಎಲ್ಲ ಸಾಧನೆಯ ದಾರಿದೀಪಗಳು ಬೆಳಗುತ್ತಲೇ ಇವೆ''.

ಆ ಭಗವಂತ ಮಾತ್ರ ಗುಣವಂತ, ಸಿರಿವಂತ, ಸಕಲರ ಕಣ್ಮಣಿಯಾದ ರೂಪವಂತ. ಕ್ರಿಯಾವಂತ, ಹಿರಿವಂತ. ಅವನ ಮುಂದೆ ಈ ವಿಶಾಲ ಜಗತ್ತು ಪರಮಾಣು ಕೂಡ ಅಲ್ಲ. ಕಣ್ಣು ಹರಿಸಿದಷ್ಟು ಎತ್ತರದ ಗುಣಗಳ ಹಿಮಾಲಯ. ಮೈಮನಗಳ ಮರೆಸುವ ದಿವ್ಯಚೆಲುವು. ಪ್ರತಿಯೊಬ್ಬರ ನೆಮ್ಮದಿಯ ಶಾಶ್ವತ ತಾಣ. ವೇದಗಂಗೆಯ ರಭಸದ ಪ್ರವಾಹದ ಏಕೈಕ ದಿವ್ಯಸಂಗಮ. ಇದುವೇ ವಾಚ್ಯ-ವಾಚಕಗಳ ಗಂಗಾ-ಸಾಗರ ಸಂಗಮ. ಭಗವತ್‌ಸಾಗರಕ್ಕೆ ಬಂದು ಸೇರುವುದು ವೇದಗಂಗೆ ಮಾತ್ರವಲ್ಲ. ಇತಿಹಾಸ

ಪುರಾಣಾದಿಗಳೆಂಬ ಸಿಂಧು, ಸರಸ್ವತಿ, ಯಮುನಾ ಮೊದಲಾದ ಮಹಾನದಿಗಳೂ ಕೂಡ ಒಮ್ಮತದಿಂದ ಬಂದು ಸೇರುವವು. ಲೌಕಿಕ ಶಬ್ದಗಳೆಂಬ ಹಳ್ಳ-ಕೊಳ್ಳಗಳ ನೀರು, ಬೈಗುಳ ಶಬ್ದಗಳೆಂಬ ರಸ್ತೆ ಬದಿಗಳ ನೀರುಗಳೂ ಸಹ ನದಿಯ ಜೊತೆ ಸೇರಿ, ಸಮುದ್ರ ಸೇರುವವು. ಪ್ರತಿಯೊಂದು ಶಬ್ದಗಳೆಂಬ ನೀರಿನ ಹನಿಗಳು ಬಹುಗುಣಗಳನ್ನು ಹೊತ್ತು ತರುವವು. ಆದ್ದರಿಂದ ಇವನು ಉಪ್ಪಿನ ಸಮುದ್ರವಲ್ಲ, ಗುಣಗಣಸಮುದ್ರ. ಜಗತ್ತಿನಲ್ಲಿ ಎಲ್ಲೆಲ್ಲೂ ಹುಡುಕಿದರೂ ದೊರೆಯದ ಅನರ್ಘ್ಯ ರತ್ನಗಳೆಂಬ ಮಹಾಗುಣಗಳಿಂದ ತುಂಬಿದ ಅನಂತ ಸಮುದ್ರ. ಇದುವೇ ಗುರುರಾಯರು ಸಾಧಿಸಿದ ಸಮನ್ವಯಾಧ್ಯಾಯದ ಸಾರಸರ್ವಸ್ವ. ಏತನ್ಮೂಲಕ ಸದ್ಭಾವನೆ ಬಿತ್ತಲು ಶಿಷ್ಯನಿಗಿಂತ ಮೊದಲೇ ಬಂದು ಕುಳಿತಿರುವ ನಿಜವಾದ ಗುರು, ಗುರುಗಳಿಗೂ ಗುರು, ಆದ್ದರಿಂದಲೇ ಗುರುರಾಘವೇಂದ್ರರಿವರು.

ಎಲ್ಲಾ ನಾದದಲ್ಲೂ ಭಗವಂತನ ಗುಣವೇ ಕಾಣುತ್ತದೆ. ಸಮುದ್ರದ ಭೋರ್ಗರೆಯುವ ಶಬ್ದವೂ ಕೂಡ ಕೈಯೆತ್ತಿ ಹರಿಪಾದಗಳಲ್ಲಿ ಶರಣೆಂದು 'ಜಗದೊಡೆಯನೆಂದರೆ ನೀನೊಬ್ಬನೇ' ಎಂದು ಸಾರುತ್ತಿದೆ. ಹಲ್ಲಿಯ ಲೊಚ ಲೊಚ ಶಬ್ದ 'ಎಷ್ಟು ಅದ್ಭುತ ಹರಿಮಹಿಮೆ' ಎನ್ನುತ್ತಿದೆ. ಗಾಳಿ ಬೀಸುವ ಶಬ್ದ ಶ್ರೀಹರಿಗೆ ಸುವ್ವೀ ಸುವ್ವೀ ಎಂದು ಜೋಗುಳ ಪಾಡುತ್ತಿದೆ. ಪ್ರಪಂಚದ ಚರಾಚರವೆಲ್ಲ ಭಗವಂತನನ್ನೇ ಕೊಂಡಾಡುತ್ತಿದೆ. ಅಜ್ಞಾನದ ಕೊಂಪೆಯಲ್ಲಿ ಮುಳುಗಿದ ಮನದಲ್ಲಿ ಇಂಥ ಶ್ರೀಹರಿಯೆಂಬ ಸದ್-ಭಾವವೆಂಬ ಬೀಜಬಿತ್ತಿದ ಗುರುರಾಯರಿಗೆ ಶರಣು ! ಶರಣು !!

ಸಮನ್ವಯಾಧ್ಯಾಯ ಓದಿ ಮುಗಿಸಿದ ನನ್ನ ಬಾಳು ಪಾವನವಾಯಿತು. ಆಹಾ !! ಗುರುರಾಯರೇ ತಮ್ಮ ತಿಳಿವಿನ ಸಾಗರ ಕಂಡಾಗ ಆಗುವ ಸಂತೋಷ ಬಣ್ಣಿಸಲಸಾಧ್ಯ. ಭಗವಂತನ ಸರ್ವೋತ್ಕರ್ಷವನ್ನು ಪ್ರತಿಪಾದನೆ ಮಾಡುವ ತಮ್ಮ ಜ್ಞಾನಾಮೃತದ ಸಮುದ್ರದಲ್ಲಿ ಮುಳುಗಿ ಎದ್ದವನಿಗೆ ಸುರಲೋಕದ ಸುಖವೂ ಕೂಡ ಅತಿ ತುಚ್ಛ ! ಏನಿದು ತಮ್ಮ ಪ್ರತಿಭೆ ! ತಮ್ಮ ಈ ಗ್ರಂಥ ಪ್ರಪಂಚದ ಸಂಶಯಗಳಿಗೆಲ್ಲಾ ಉತ್ತರಿಸುತ್ತಿದೆ. ಅದೆಷ್ಟೋ ಜನ್ಮದ ನನ್ನ ಪುಣ್ಯ ಫಲಿಸಿದೆ. ಈ ಭಾವದೀಪ ಗ್ರಂಥದಲ್ಲಿ ತಮ್ಮನ್ನೇ ಸಾಕ್ಷಾತ್ತಾಗಿ ಕಾಣುವ ಸೌಭಾಗ್ಯ ಈ ಕಣ್ಣುಗಳಿಗೆ ಬಂದೊದಗಿದೆ. ನನ್ನ ಬಹು ಜನ್ಮಗಳ ದಾರಿದೀಪ ಈಗ ಕಂಗೊಳಿಸುತ್ತಿದೆ. ಸಮನ್ವಯಾಧ್ಯಾಯದ ಮೂಲಕ ಭಗವಂತನ ನಿಖಿಲಪೂರ್ಣಗುಣತ್ವವನ್ನು ಮನದಟ್ಟು ಮಾಡಿಸಿದ ತಮ್ಮ ಸೇವೆಯಲ್ಲಿ ನಾ ಅವಿರತನಿರತ.

ಪರಮಪೂಜ್ಯ ಶ್ರೀ ಸುಬುಧೇಂದ್ರತೀರ್ಥರು ಶ್ರೀಪಾದಂಗಳವರೇ

ತಮ್ಮ ಮಹಿಮೆಯನ್ನೇ ತಿಳಿಯಲು ಸಾಧ್ಯವಾಗದ ನನಗೆ ರಾಯರ ಮಹಿಮೆಯನ್ನು ತಿಳಿಯುವುದು ಹೇಗೆ ಸಾಧ್ಯ ? ತಮ್ಮ ಆಶೀರ್ವಾದದಿಂದ ಸಮನ್ವಯಾಧ್ಯಾಯದ ಕಾರ್ಯ ಮುಗಿಯಿತು. ಭಗವಂತನು ಸಕಲಗುಣಪರಿಪೂರ್ಣ ಎಂಬುದು ಸಾಬೀತಾಯಿತು. ರಾಯರ ಭಾವದೀಪದ ಪ್ರಕಾಶ

ನಿರಂತರ ಅಭಿವೃದ್ಧಿಯಾಯಿತು. ಎಂಟು ಬೃಹತ್ ಸಂಪುಟಗಳ ಮೂಲಕ ಬ್ರಹ್ಮಮೀಮಾಂಸಾಶಾಸ್ತ್ರದ ಒಂದು ಅಧ್ಯಾಯದ ಅನುವಾದ ಕಾರ್ಯ ಮುಗಿಯಿತು. ಇದು ತಮ್ಮ ಆಶೀರ್ವಾದದಿಂದ ಸಾಧ್ಯವಾಯಿತು. ಈ ಕಾರ್ಯ ತಾವೊಬ್ಬರು ಬಿಟ್ಟರೆ, ಬೇರೆ ಯಾರಿಂದಲೂ ಕೂಡ ಸಾಧ್ಯವಾಗುತ್ತಿರಲಿಲ್ಲ. ತಮ್ಮ ನರನಾಡಿಗಳಲ್ಲಿ ಹರಿಯುತ್ತಿರುವ ಗುರುಗಳ ಭಕ್ತಿ ದೇವರ ಚಿಂತನೆ ಅದ್ಭುತ ! ಅತ್ಯದ್ಭುತ !! ಒಂದೆಡೆ ಆಧ್ಯಾತ್ಮಿಕ ಸೇವೆ. ಮತ್ತೊಂದು ಕಡೆ ಆದಿಭೌತಿಕ ಸೇವೆ ತಾವು ಊಹೆಗೂ ನಿಲುಕದಷ್ಟು ಸಂಪತ್ತನ್ನು ವಿನಿಯೋಗ ಮಾಡಿ, ಇಂಥ ರಾಯರ ಗ್ರಂಥಗಳನ್ನು ಪ್ರಕಾಶನ ಮಾಡುತ್ತಿರುವಿರಿ. ಜೊತೆಯಾಗಿ ರಾಯರಲ್ಲಿ ಅತಿಶಯವಾದ ಭಕ್ತಿಯಿಂದ ಲೌಕಿಕ ಸಂಪತ್ತಿನಿಂದಲೂ ಅವರನ್ನು ಅಲಂಕರಿಸುತ್ತಿರುವಿರಿ. ಅದೇನು ಅದ್ಭುತ ! ರಾಯರ ಮೂಲ ಬೃಂದಾವನಕ್ಕೆ ಬಹುಕೋಟಿ ಮೌಲ್ಯದ ಶಿಲಾಮಂಟಪದ ನಿರ್ಮಾಣ. ಸುವರ್ಣಗೋಪುರದ ನಿರ್ಮಾಣ. ವಿಮಾನ ರಾಘವೇಂದ್ರರ ಪ್ರತಿಷ್ಠಾಪನೆ. ಮೂಲರಾಮಚಂದ್ರದೇವರಿಗೆ ಕಲ್ಪನೆಗೂ ಸಿಗದ ಬಹುಕೋಟಿ ಮೌಲ್ಯದ ಸುವರ್ಣ ಮಂಟಪದ ನಿರ್ಮಾಣ. ಒಂದೊಂದು ಅದ್ಭುತ ! ಒಂದೊಂದು ಅನ್ಯಾದೃಶ....!!

ಈಗ ದ್ವಿತೀಯಾಧ್ಯಾಯ ಪ್ರಾರಂಭ. ಸಕಲ ಕುವಾದಿಗಳ ನಿರಾಕರಣೆ ಶುರು. ಎರಡನೇ ಅಧ್ಯಾಯದ ಮೂಲಕ ಸಕಲ ಕುಮತಗಳ ನಿರಾಕರಣೆಯನ್ನು ಅಂತರಂಗದಲ್ಲಿ ಹೇಗೆ ತಂದುಕೊಳ್ಳಬೇಕೆಂಬ ವಿಚಾರವನ್ನು ಭಾವದೀಪಗ್ರಂಥದಲ್ಲಿ ಗುರುರಾಜರು ಖಚಿತಪಡಿಸಿರುವರು. ಅದನ್ನು ಯಥಾರ್ಥವಾಗಿ ಅನುವಾದ ಮಾಡಿ ರಾಯರ ಕೃಪೆಗೆ ಪಾತ್ರರಾಗುವಂತೆ ಆಶೀರ್ವದಿಸಿರಿ. ಎಂದೆಂದೂ ತಮ್ಮ ಅನುಗ್ರಹದ ರಕ್ಷಾಕವಚವಾಗಿರಲಿ. ತಮ್ಮ ಚರಣಕಮಗಳಲ್ಲಿ ಅನಂತಾನಂತ ನಮನಗಳು.

ಲೇಖಕ - ಬೆಮ್ಮತ್ತಿ ವೇಂಕಟೇಶಾಚಾರ್ಯ

ಅನುಕ್ರಮಣಿಕಾ

ಅನುಗ್ರಹ ಸಂದೇಶ	VIII-XII
ಪ್ರಾಸ್ತಾವಿಕ - (ಆಂಗ್ಲಭಾಷೆ)	XII-XXI
ಜನಮನದಲಿ ಸದ್-ಭಾವನೆ ಬಿತ್ತಲು ಇನ್ನೊಮ್ಮೆ ಬಾ ಗುರುರಾಯ..!!	XXII-XXV
ಅಧಿಕರಣ ಸಾರಾಂಶ	XXVII-LXIV
ಜ್ಯೋತಿರುಪಕ್ರಮಾಧಿಕರಣ	೧-೯೨
ನ ಸಂಖ್ಯೋಪಸಂಗ್ರಹಾಧಿಕರಣ	೯೩-೧೪೨
ಆಕಾಶಾಧಿಕರಣ	೧೪೩-೧೭೪
ಸಮಾಕರ್ಷಾಧಿಕರಣ	೧೭೫-೩೦೪
ಪ್ರಕೃತ್ಯಧಿಕರಣ	೩೦೫-೩೯೬
ಏತೇನಾಧಿಕರಣ	೩೯೭-೪೩೨
ಸ್ಮೃತ್ಯಧಿಕರಣ	೪೩೩-೪೯೮
ನ ವಿಲಕ್ಷಣತ್ವಾಧಿಕರಣ	೪೯೯-೫೫೪
ಅಭಿಮಾನ್ಯಧಿಕರಣ	೫೫೫-೫೯೨
ಪರಿಶಿಷ್ಟ-ಅನುಮಾನಿಕಾಧಿಕರಣ ಸತ್ತರ್ಕದೀಪಾವಳಿ	೫೯೩-೬೦೬
ವಿವರವಾದ ವಿಷಯಾನುಕ್ರಮಣಿಕೆ	೬೦೭-೬೪೦

ತತ್ವಪ್ರಕಾಶಿಕಾ - ಭಾವದೀಪ

ಸಾರಾಂಶ

ಜ್ಯೋತಿರುಪಕ್ರಮಾಧಿಕರಣ

ಈ ಅಧಿಕರಣದಲ್ಲಿ ವರ್ಣ, ಪದ ಮೊದಲಾದ ಸಕಲವಿಧವಾದ ಶಬ್ದಗಳ ಸಮನ್ವಯವನ್ನು ಮಹಾವಿಷ್ಣುವಿನಲ್ಲಿ ಮಾಡಲು ಹೊರಟಿದ್ದಾರೆ. 'ತಾವಾ ಏತಾಃ ಸರ್ವಾ ಋಚಃ ಸರ್ವೇ ವೇದಾಃ, ಸರ್ವೇ ಘೋಷಾಃ' ಎಂಬುದಾಗಿ ಐದನೆಯ ಆರಣ್ಯಕವು ಭಗವಂತನನ್ನು ಸಕಲ ಶಬ್ದಪ್ರತಿಪಾದ್ಯನೆಂದು ಅವಶ್ಯವಾಗಿ ಮುಮುಕ್ಷುಗಳು ತಿಳಿಯಬೇಕೆಂದು ಘೋಷಣೆ ಮಾಡಿದೆ. ಆದ್ದರಿಂದ ಪ್ರತಿಯೊಂದು ವರ್ಣಗಳ, ಪ್ರತಿಯೊಂದು ಪದಗಳ ಸಮನ್ವಯವು ಅತ್ಯಂತ ಅನಿವಾರ್ಯ. ಹಿಂದಿನ ಅಧಿಕರಣದಲ್ಲಿ ದೇವತಾ ವಾಚಕವಾದ ಪದಗಳ ಸಮನ್ವಯವನ್ನು ಹಾಗೂ 'ಇಂದ್ರಿಯೇಭ್ಯಃ' ಇತ್ಯಾದಿ ಪದಗಳಲ್ಲಿರುವ ಪಂಚಮ್ಯಾದಿ ವಿಭಕ್ತಿಗಳ ಸಮನ್ವಯವನ್ನು ವಿಷ್ಣುವಿನಲ್ಲಿ ಮಾಡಲಾಯಿತು. ಪ್ರಕೃತ ಈ ಅಧಿಕರಣದಲ್ಲಿ ಕರ್ಮವನ್ನು ಪ್ರತಿಪಾದನೆ ಮಾಡಲು ಹೊರಟಿರುವ ಕರ್ಮಕಾಂಡವೆನಿಸಿದ ಯಜುರ್ವೇದದ ಮಂತ್ರಗಳನ್ನೆಲ್ಲಾ ಸಮನ್ವಯ ಮಾಡಲಾಗಿದೆ. ಮತ್ತು ಪಂಚಮ್ಯಾದಿ ವಿಭಕ್ತಿಗಳ ಸಮನ್ವಯವನ್ನೂ ಕೂಡ ಮಾಡಲಾಗಿದೆ. ಅಷ್ಟೇ ಅಲ್ಲದೇ ಆಯಾ ಕರ್ಮವಾಚಕವಾದ ಜ್ಯೋತಿಷ್ಟೋಮಾದಿ ಸಮುದಾಯರೂಪವಾದ ಪದಗಳ ಅವಯವವೆನಿಸಿದ 'ಜ್ಯೋತಿಃ' 'ಸ್ತೋಮ' ಮೊದಲಾದ ಪದಗಳ ಸಮನ್ವಯವನ್ನೂ ಕೂಡ ಈ ಅಧಿಕರಣದಲ್ಲಿ ಮಾಡುತ್ತಿದ್ದಾರೆ. ಸಿದ್ಧಸ್ವರೂಪವಾದ ದೇವತಾವಾಚಕ ಪದಗಳ ಸಮನ್ವಯದ ಅನಂತರ ಸಾಧ್ಯಸ್ವರೂಪವಾದ ಕರ್ಮದ ಸಮನ್ವಯವು ಅತ್ಯಂತ ಪ್ರಸ್ತುತವಾಗುತ್ತದೆ. ಹಿಂದಿನ ಅಧಿಕರಣದಲ್ಲಿ ಸ್ವಾತಂತ್ರ್ಯ ಎಂಬ ಪ್ರವೃತ್ತಿನಿಮಿತ್ತದಿಂದ 'ದುಃಖೀ', 'ಬದ್ಧಃ', 'ಅವರಃ' ಮೊದಲಾದ ಅನ್ಯತ್ರಪ್ರಸಿದ್ಧವಾದ ಶಬ್ದಗಳ ಸಮನ್ವಯವನ್ನು ಮಾಡಿದ್ದಾಯಿತು. ಇದರಿಂದ ಪರಮಾತ್ಮನಲ್ಲಿ ಸ್ವಾತಂತ್ರ್ಯವೆಂಬ ಗುಣವಷ್ಟೇ ಸಿದ್ಧವಾಗುತ್ತದೆ. ಆದರೆ ಈ ಅಧಿಕರಣದಲ್ಲಿ ಸ್ವಾತಂತ್ರ್ಯವೆಂಬ ಪ್ರವೃತ್ತಿನಿಮಿತ್ತವನ್ನು ಅಪೇಕ್ಷಿಸದೇ ಪ್ರತ್ಯೇಕವಾಗಿ ಒಂದೊಂದು ಪದಗಳ ಪ್ರವೃತ್ತಿನಿಮಿತ್ತವೂ ಕೂಡ ಪರಮಾತ್ಮನಲ್ಲೇ ಬರುತ್ತಿದೆಯೆಂದು ಹೇಳುತ್ತಿರುವುದರಿಂದ ಅನೇಕ ಪದಗಳ ಸಮನ್ವಯವೂ ಸಿದ್ಧವಾಗುತ್ತದೆ.

ಸಕಲಶಬ್ದಗಳ ಸಮನ್ವಯವನ್ನು ಬ್ರಹ್ಮನಲ್ಲಿ ತಿಳಿದರೆ ಮಾತ್ರ, ಸಕಲಗುಣಪರಿಪೂರ್ಣತ್ವವು ಸಿದ್ಧವಾಗುತ್ತದೆ. ಹಾಗಾಗಿ ಪ್ರಥಮಾಧ್ಯಾಯದಲ್ಲಿ ಸಕಲಶಬ್ದಗಳ ಸಮನ್ವಯವನ್ನು ಮಾಡಲಾಗುತ್ತಿದೆಯೆಂದು ಸಮನ್ವಯಾಧಿ- ಕರಣದಲ್ಲಿ ಪ್ರತಿಜ್ಞೆ ಮಾಡಲಾಯಿತು. ಇದು ಸಾಧ್ಯವಿಲ್ಲ. ಏಕೆಂದರೆ 'ವಸಂತೇ ವಸಂತೇ ಜ್ಯೋತಿಷಾ ಯಜೇತ' ಇತ್ಯಾದಿ ವಾಕ್ಯಗಳಲ್ಲಿರುವ 'ಜ್ಯೋತಿಃ' ಮೊದಲಾದ ಶಬ್ದಗಳು ಜ್ಯೋತಿಷ್ಟೋಮಾದಿ ಕರ್ಮಗಳಲ್ಲೇ ಪ್ರಸಿದ್ಧವಾಗಿವೆ. ಎಲ್ಲವೂ ಹರಿನಾಮಗಳೇ ಆದರೆ ಸ್ವರ್ಗವನ್ನು ಬಯಸುವವನು ವಸಂತಕಾಲದಲ್ಲಿ ಜ್ಯೋತಿಷ್ಟೋಮಯಾಗವನ್ನು ಮಾಡಬೇಕು ಎಂಬ ಅರಿವು ಹೇಗೆ ತಾನೇ ಮೂಡುತ್ತದೆ. ಸ್ವಾತಂತ್ರ್ಯವೆಂಬ ಪ್ರವೃತ್ತಿನಿಮಿತ್ತವನ್ನು ವಿವಕ್ಷಿಸಿ, ಆಯಾ ಶಬ್ದಗಳು ಕರ್ಮಪ್ರತಿಪಾದಕವಾಗಲಿ ಎಂಬ ಸಮಾಧಾನವನ್ನೇನೋ ಹೇಳಬಹುದು. ಇದರಿಂದ ಸ್ವಾತಂತ್ರ್ಯವೆಂಬ ಒಂದೇ ಗುಣವು ಬ್ರಹ್ಮನಲ್ಲಿ ಸಿದ್ಧವಾಗುತ್ತದೆ ಹೊರತು, ವಿಭಿನ್ನವಾದ ಶಬ್ದಗಳ ಸಮನ್ವಯದಿಂದ ಆಯಾ ಪ್ರವೃತ್ತಿನಿಮಿತ್ತಗಳು ಹೇಳುವ ವಿಭಿನ್ನವಾದ ಗುಣಗಳು ಬ್ರಹ್ಮನಲ್ಲಿ ಸಿದ್ಧವಾಗುವುದೇ ಇಲ್ಲ. ಆದ್ದರಿಂದ ಯಾವುದೇ ಶಬ್ದಗಳನ್ನು ಬ್ರಹ್ಮನಲ್ಲಿ ಸಮನ್ವಯ ಮಾಡಬೇಕಾದರೆ, ಸ್ವಾತಂತ್ರ್ಯವೆಂಬ ಪ್ರವೃತ್ತಿನಿಮಿತ್ತವನ್ನು ಅಪೇಕ್ಷಿಸುವಂತೆ ಆಯಾ ಪ್ರವೃತ್ತಿನಿಮಿತ್ತಗಳನ್ನೂ ಕೂಡ ಬ್ರಹ್ಮನಲ್ಲಿ ಸಮನ್ವಯ ಮಾಡಲೇಬೇಕು. ಆವಾಗ ಮಾತ್ರ ಅನೇಕ ಗುಣಗಳನ್ನು ಸಾಧಿಸಿದಂತಾಗುತ್ತದೆ. ಹಾಗೇನಾದರೂ ಪ್ರತಿಯೊಂದು ಪದಗಳ ಸಮನ್ವಯವನ್ನು ಬ್ರಹ್ಮನಲ್ಲಿ ಮಾಡಲು ಹೊರಟರೆ, ಎಲ್ಲವೂ ಹರಿನಾಮವಾಗುತ್ತದೆ. ಆದ್ದರಿಂದ ವೇದದಲ್ಲಿರುವ ಕರ್ಮಕಾಂಡವು ವ್ಯರ್ಥವಾಗಿ ಕರ್ಮಾನುಷ್ಠಾನವೇ ಲೋಪವಾಗುವ ಪ್ರಸಂಗ ಬರುತ್ತದೆ.

ಮತ್ತು 'ಜ್ಯೋತಿಷ್ಟೋಮೇನ' ಎಂಬಲ್ಲಿರುವ 'ಜ್ಯೋತಿ', 'ಸ್ತೋಮ' ಎಂಬ ಅವಯವಗಳು ಬ್ರಹ್ಮನನ್ನು ಪ್ರತಿಪಾದನೆ ಮಾಡುವುದಾದರೆ, 'ಜ್ಯೋತಿಷ್ಟೋಮ' ಎಂಬ ಸಮುದಾಯವು ಬ್ರಹ್ಮನನ್ನು ಪ್ರತಿಪಾದನೆ ಮಾಡಲು ಸಾಧ್ಯವಾಗುವುದಿಲ್ಲ. ಅದರಂತೆ 'ಜ್ಯೋತಿ' ಎಂಬ ಪದದಲ್ಲಿರುವ 'ಜಿ' ಮತ್ತು 'ಓತಿಃ' ಎಂಬೆರಡು ಅವಯವಗಳು ಬ್ರಹ್ಮನ ಹೆಸರುಗಳಾದರೆ, 'ಜ್ಯೋತಿ' ಎಂಬ ಪದವು ಬ್ರಹ್ಮನ ಹೆಸರಾಗಲು ಸಾಧ್ಯವಿಲ್ಲ. ಏಕೆಂದರೆ ಯಾವ ಅರ್ಥವು ಯಾವ ಸಮುದಾಯದಿಂದ ಪ್ರತಿಪಾದ್ಯವಾಗುತ್ತದೋ, ಅದೇ ಅರ್ಥವು ಅದರ ಅವಯವದಿಂದ ಪ್ರತಿಪಾದ್ಯವಾಗುವುದಿಲ್ಲವೆಂಬುದು ಲೋಕಸಿದ್ಧವಾದ ನಿಯಮ. 'ಪಂಕಜ' ಎಂಬ ಶಬ್ದದಿಂದ ಕಮಲವು ಪ್ರತಿಪಾದ್ಯವಾಗುತ್ತದೆ. ಆದರೆ 'ಪಂಕಜ' ಶಬ್ದದ ಅವಯವವಾದ 'ಪಂಕ' ಮತ್ತು 'ಜ' ಎಂಬ ಶಬ್ದದಿಂದ ಕಮಲವು ಪ್ರತಿಪಾದ್ಯವಾಗುವುದಿಲ್ಲ. ಆದ್ದರಿಂದ ಸರ್ವಶಬ್ದಸಮನ್ವಯವನ್ನು ಮಾಡುವುದು ಸುಲಭದ ಮಾತಲ್ಲ.

ಜಗತ್ತಿನಲ್ಲಿ ಶ್ರುತವಾದ ಸರ್ವಶಬ್ದಗಳಿಂದ ಪರಮಾತ್ಮನೇ ಮುಖ್ಯವಾಗಿ ಪ್ರತಿಪಾದ್ಯನಾಗಿದ್ದಾನೆ. ಇದನ್ನು 'ಜ್ಯೋತಿರುಪಕ್ರಮಾತ್ತು ತಥಾ ಹ್ಯಧೀಯತೇ ಏಕೇ' ಎಂಬ ಸೂತ್ರವು ಪ್ರತಿಪಾದನೆ ಮಾಡುತ್ತಿದೆ.

ಐತರೇಯೋಪನಿಷತ್ತಿನಲ್ಲಿ ಪರಮಾತ್ಮನು ಬ್ರಹ್ಮಾದಿಜೀವರ ಶರೀರದಲ್ಲಿ ಪ್ರವೇಶ ಮಾಡಿದ್ದಾನೆಂದು ಪ್ರಾರಂಭ ಮಾಡಿ, ಸಕಲ ಋಙ್ ಮಂತ್ರಗಳೂ, ಸಕಲ ವೇದಗಳೂ, ಧ್ವನಿಗಳೆಲ್ಲವೂ ಪರಮಾತ್ಮನ ನಾಮಗಳೆಂದು ಮುಕ್ತಾಯ ಮಾಡಲಾಗಿದೆ. ಆದ್ದರಿಂದ ಸೂತ್ರದಲ್ಲಿ ಶ್ರುತವಾದ 'ಜ್ಯೋತಿಃ' ಎಂಬ ಶಬ್ದವು ಉಪಲಕ್ಷಣವೆಂದು ತಿಳಿಯಬೇಕು. ಅಂದರೆ 'ಜ್ಯೋತಿಃ' ಶಬ್ದದ ಸಮನ್ವಯವಷ್ಟೇ ವಿವಕ್ಷಿತವಲ್ಲ. ಹಾಗಾಗಿದ್ದಲ್ಲಿ ಸರ್ವಶಬ್ದಸಮನ್ವಯದ ಉಪಪಾದನೆಗಾಗಿ 'ಉಪಕ್ರಮಾತ್ತು ತಥಾ ಹ್ಯಧೀಯತೇ ಏಕೇ' ಎಂಬುದಾಗಿ ಉಪನಿಷತ್ತನ್ನು ಉಲ್ಲೇಖಿಸುವ ಅವಶ್ಯಕತೆ ಇರುತ್ತಿರಲಿಲ್ಲ. ಹೀಗೆ ಸರ್ವಶಬ್ದಸಮನ್ವಯಕ್ಕೆ ಉಪಯುಕ್ತವಾದ ಪ್ರಮಾಣವನ್ನು ಹೇಳಿದ್ದರಿಂದ ಸೂತ್ರದಲ್ಲಿ ಶ್ರುತವಾದ 'ಜ್ಯೋತಿಃ' ಎಂಬ ಶಬ್ದವು ಉಪಲಕ್ಷಣವೆಂದು ತಿಳಿಯಬೇಕು. ಅಂದರೆ ಸಕಲಶಬ್ದಗಳೂ ಕೂಡ ಪರಮಾತ್ಮನನ್ನೇ ಮುಖ್ಯವಾಗಿ ಪ್ರತಿಪಾದನೆ ಮಾಡುತ್ತವೆ. ಈ ವಿಷಯದಲ್ಲಿ ಐತರೇಯೋಪನಿಷತ್ತೇ ಆಧಾರವಾದ ಪ್ರಮಾಣ. ಮತ್ತು

ಅವಸ್ಫರತಿ ಗರ್ಗರೋ ಗೋಧಾ ಪರಿ ಸನಿಷ್ಣತ್ ।
ಪಿಂಗಾ ಪರಿ ಚನಿಷ್ಕದದಿಂದ್ರಾಯ ಬ್ರಹ್ಮೋದ್ಯತಮ್ ॥

ಎಂಬ ಶ್ರುತಿಯೂ ಸಹ ಸಕಲವಿಧವಾದ ಧ್ವನಿಗಳಿಂದ ಪರಮಾತ್ಮನು ಪ್ರತಿಪಾದ್ಯನೆಂದು ಹೇಳಿ, ವಿಶೇಷವಾಗಿ ವೇದಪ್ರತಿಪಾದ್ಯತ್ವವನ್ನು ಸಮರ್ಥನೆ ಮಾಡುತ್ತಿದೆ. ಆದ್ದರಿಂದಲೂ ಪರಮಾತ್ಮನೇ ಸರ್ವಶಬ್ದಗಳಿಂದ ಮುಖ್ಯವಾಗಿ ಪ್ರತಿಪಾದ್ಯನು.

ವೇದದಲ್ಲಿರುವ ಎಲ್ಲ ಸಂಧಿಗಳೂ ಪೂರ್ವೋತ್ತರವರ್ಣಗಳೂ ವಿಷ್ಣುವೆಂಬ ನಾಮದ ಅರ್ಥವೇ ಆಗಿವೆ. ಆದ್ದರಿಂದ ಎಲ್ಲವೂ ಪರಮಾತ್ಮ ಪ್ರತಿಪಾದಕವೆಂದು ತಿಳಿಯಬೇಕು. ಎಲ್ಲ ವರ್ಣಗಳೂ, ಎಲ್ಲ ಸಂಧಿಗಳೂ ವಿಷ್ಣುವನ್ನೇ ಪ್ರತಿಪಾದನೆ ಮಾಡುತ್ತವೆ. 'ಣಕಾರೋ ಬಲಂ ಷಕಾರಃ ಪ್ರಾಣ ಆತ್ಮಾ' ಎಂಬ ಶ್ರುತಿಯು ವಿಷ್ಣುನಾಮಾರ್ಥವೆಂದು ತಿಳಿದೇ ವೇದಾಧ್ಯಯನದಲ್ಲಿ ತೊಡಗಬೇಕೆಂದು ಎಚ್ಚರಿಸುತ್ತಿದೆ.

'ಣ'ಕಾರ, 'ಷ'ಕಾರಗಳ ಅರ್ಥವನ್ನು ಸಕಲವರ್ಣಗಳು ಹೇಳಿದ ಮಾತ್ರದಿಂದ ವಿಷ್ಣುನಾಮಾರ್ಥವನ್ನು ಹೇಳಿದಂತೆ ಹೇಗಾಗುತ್ತದೆ ? ಎಂದು ಶಂಕಿಸಬಾರದು. 'ಣ'ಕಾರ ಹಾಗೂ 'ಷ'ಕಾರ ಎಂಬೆರಡು ಅಕ್ಷರಗಳೇ ವಿಷ್ಣುನಾಮದಲ್ಲಿ ಮುಖ್ಯವಾಗಿವೆ. 'ವಿ' ಎಂಬುವುದು ಉಪಸರ್ಗವಾಗಿದೆ. 'ಉನ್' ಎಂಬುದೂ ಕೂಡ ಶೀಲಾರ್ಥಕವಾದ ಪ್ರತ್ಯಯವಾಗಿದೆ. ಇವೆರಡೂ ಅಪ್ರಧಾನವಾದ್ದರಿಂದ ಮುಖ್ಯವಾಗಿ ಣಕಾರ, ಷಕಾರಗಳೇ ವಿಷ್ಣುನಾಮವೆಂದು ಶ್ರುತಿಯ ಅಭಿಪ್ರಾಯವಾಗಿದೆ. ಆದ್ದರಿಂದ ಸ್ವರ, ವರ್ಣ, ಪದ ರೂಪದಿಂದಲೂ ವೇದಕ್ಕೆ ಪರಮಾತ್ಮನಲ್ಲೇ ಸಮನ್ವಯವಿದೆ ಎಂದು ಹೇಳುವುದರಿಂದ ವಾಕ್ಯದ ಸಮನ್ವಯೂ ಕೂಡ ಇದೆಯೆಂಬುದು ಅರ್ಥಾತ್ ಸಿದ್ಧವಾಗುತ್ತದೆ.

ಇದರಂತೆ 'ಅಃ ಇತಿ ಬ್ರಹ್ಮ' ಅ ಎಂಬ ಅಕ್ಷರವು ಪರಮಾತ್ಮನ ನಾಮ ಎಂಬ ಮತ್ತೊಂದು ಶ್ರುತಿಯಲ್ಲಿ ಅಕಾರವು ಪರಮಾತ್ಮನ ನಾಮಸ್ವರೂಪವೆಂದು ಹೇಳಲಾಗಿದೆ. 'ಅಕಾರೋ ವೈ ಸರ್ವಾವಾಕ್' ಎಂಬ ಮತ್ತೊಂದು ಶ್ರುತಿಯಲ್ಲಿ ಅಕಾರವು ಸಕಲಶಬ್ದಗಳ ಸ್ವರೂಪವಾಗಿದೆಯೆಂದು ಹೇಳಲಾಗಿದೆ. ಅಕಾರವು ಸರ್ವಶಬ್ದಗಳ ಸ್ವರೂಪವಾಗುವುದು ಪ್ರತ್ಯಕ್ಷವಾದ್ದರಿಂದ, ಎಲ್ಲಾ ಶಬ್ದಗಳೂ ಅಕಾರಕ್ಕೆ ವ್ಯಾಖ್ಯಾನಗಳಾಗಿವೆ ಎಂದು ಲಕ್ಷಣಾವೃತ್ತಿಯನ್ನು ಆಶ್ರಯಿಸಬೇಕು. ಆವಾಗ ವ್ಯಾಖ್ಯೇಯವಾದ ಅಕಾರವು ಯಾರನ್ನು ಪ್ರತಿಪಾದನೆ ಮಾಡುತ್ತದೋ, ವ್ಯಾಖ್ಯಾನರೂಪವಾದ ಸಕಲಶಬ್ದಗಳೂ ಕೂಡ ಅವನನ್ನೇ ಪ್ರತಿಪಾದನೆ ಮಾಡಬೇಕು. ಇದರಿಂದ ಸರ್ವಶಬ್ದಗಳ ಮುಖ್ಯತಾತ್ಪರ್ಯ ಪರಮಾತ್ಮನೆಂದು ನಿರ್ಣಯವಾಗುತ್ತದೆ.

ಐತರೇಯೋಪನಿಷತ್ತಿನಲ್ಲಿ 'ಯದ್ವಾಚ ಓಮಿತಿ ಯಚ್ಚ ನೇತಿ ಯಚ್ಚಾನ್ಯಾಃ' ಇತ್ಯಾದಿಯಾಗಿ ಅಂಗೀಕಾರವಾಚಕವಾದ, ನಿಷೇಧಾರ್ಥಕವಾದ, ಕಠಿಣಾರ್ಥಕವಾದ ಎಲ್ಲಾ ವಿಧ ಶಬ್ದಗಳ ಪ್ರವೃತ್ತಿನಿಮಿತ್ತಗಳನ್ನು ತಿಳಿದರೂ ಆ ಜ್ಞಾನವು ಪರಿಪಕ್ವವಾದಾಗ ಮುಕ್ತರಾಗಿ ಕೃತಕೃತ್ಯರಾದರು ಎಂದು ಹೇಳಲಾಗಿದೆ. ಆದರೆ 'ತಮೇವಂ ವಿದ್ವಾನ್' ಎಂಬ ಮತ್ತೊಂದು ಶ್ರುತಿಯಲ್ಲಿ ಪರಮಾತ್ಮನನ್ನು ತಿಳಿದವನೇ ಮುಕ್ತನಾಗುತ್ತಾನೆಂದು ಹೇಳಲಾಗಿದೆ. ಈ ಎರಡೂ ವಾಕ್ಯಗಳು ಉಪಪನ್ನವಾಗಬೇಕಾದರೆ ವೈದಿಕಶಬ್ದಗಳೆಲ್ಲವೂ ಪರಮಾತ್ಮ ವಾಚಕಗಳೇ ಆಗಬೇಕು. ಹೀಗೆ ಈ ಶ್ರುತಿಯಿಂದಲೂ ಸಕಲಶಬ್ದಗಳಿಂದ ಪರಮಾತ್ಮನೇ ಪ್ರತಿಪಾದ್ಯನೆಂದು ನಿರ್ಣಯವಾಗುತ್ತದೆ.

ಮತ್ತು 'ಕಶ್ಛಂದಸಾಂ ಯೋಗಮಾವೇದ ಧೀರ' ಯಾರು ತಾನೇ ವೇದದ ಯೋಗಾರ್ಥವನ್ನು ತಿಳಿಯಲು ಸಮರ್ಥನು ಎಂದು ಶ್ರುತಿಯು ಆಕ್ಷೇಪ ಮಾಡಿದೆ. ಅನಂತರ ಪ್ರಜಾಪತಿಯೇ ಎಲ್ಲಾ ವೈದಿಕಶಬ್ದಗಳ ಯೋಗಾರ್ಥವನ್ನು ತಿಳಿಯಲು ಸಮರ್ಥನಾಗಿದ್ದಾನೆಂದು 'ಕಶ್ಛಂದಸಾಂ' ಎಂಬ ಶ್ರುತಿಯು ಉತ್ತರಿಸುತ್ತಿದೆ. 'ಪ್ರಜಾಪತಿರ್ವೈ ಕಃ' ಎಂಬ ಶ್ರುತಿಯು ಹೇಳುವಂತೆ ಪ್ರಜಾಪತಿಯು 'ಕಃ' ಎನಿಸಿದ್ದಾನೆ. ಆಕ್ಷೇಪಾರ್ಥದಲ್ಲಿಯೂ 'ಕಃ' ಎಂಬ ಶಬ್ದವನ್ನು ಪ್ರಯೋಗಮಾಡಬಹುದು. ಪ್ರಜಾಪತಿಯೆಂಬರ್ಥದಲ್ಲಿಯೂ 'ಕಃ' ಎಂಬರ್ಥವನ್ನು ಪ್ರಯೋಗ ಮಾಡಬಹುದು. ಶ್ರುತಿಯು ಎರಡು ಅರ್ಥಗಳನ್ನು ವಿವಕ್ಷಿಸುತ್ತಿದೆ. ಚತುರ್ಮುಖ ಎಂಬರ್ಥವನ್ನು ಇಟ್ಟುಕೊಂಡಾಗ, ಚತುರ್ಮುಖನಿಗೆ ಯೋಗಾರ್ಥಜ್ಞಾನ ಸಾಮರ್ಥ್ಯವನ್ನು ಹೇಳಿದಂತಾಗುತ್ತದೆ. ಆದ್ದರಿಂದ ಪದಸಮನ್ವಯಕ್ಕೆ ಯಾರೂ ಅರ್ಹರಲ್ಲ ಎಂದು ಹೇಳಲಾಗದು. 'ಕಃ' ಎಂಬುದಕ್ಕೆ ಆಕ್ಷೇಪಾರ್ಥವನ್ನಿಟ್ಟುಕೊಂಡಾಗ ಬೇರೆಯವರಿಗೆ ಅರ್ಹತೆಯಿಲ್ಲ ಎಂದಷ್ಟೇ ಶ್ರುತಿಯ ಅಭಿಪ್ರಾಯ. ಆದ್ದರಿಂದ ಯೌಗಿಕವಾದ ಪದಸಮನ್ವಯವು ಕಠಿಣವೆಂದು ಹೇಳಿದ್ದರಿಂದ ಚತುರ್ಮುಖಾದಿಗಳು ಅರ್ಹರಾಗಿದ್ದಾರೆಂದು ತಿಳಿಯುತ್ತದೆ. ಕೃಷ್ಣ ಪರಮಾತ್ಮನೂ ಕೂಡ ಭಾಗವತದಲ್ಲಿ 'ಇತ್ಯಸ್ಯಾ ಹೃದಯಂ ಸಾಕ್ಷಾನ್ನಾನ್ಯೋ ಮದ್ವೇದ ಕಶ್ಚನ' ಎಂಬುದಾಗಿ ಸಕಲ ವೈದಿಕಶಬ್ದಗಳ ತಾತ್ಪರ್ಯವನು ತಾನೇ ಆಗಿದ್ದೇನೆಂದು

ಹೇಳಿಕೊಂಡಿದ್ದಾನೆ. ಈ ಎಲ್ಲಾ ಪ್ರಮಾಣಗಳ ಆಧಾರದಿಂದ ವೇದದಲ್ಲಿರುವ ಪ್ರತಿಯೊಂದು ಸ್ವರಗಳು, ವರ್ಣಗಳು, ಪದಗಳು, ವಾಕ್ಯಗಳು ಶ್ರೀಹರಿಯಲ್ಲಿಯೇ ಸಮನ್ವಯಗೊಳ್ಳುತ್ತವೆಂದು ನಿರ್ಣಯವಾಗುತ್ತವೆ.

ರೂಢಿ ಹಾಗೂ ಯೋಗಗಳ ನಡುವೆ ಯೌಗಿಕವಾದ ಅರ್ಥವೇ ಮುಖ್ಯವಾಗಿರುತ್ತದೆ. ವೇದದಲ್ಲಿರುವ ಸಕಲಶಬ್ದಗಳು ರೂಢ್ಯರ್ಥವನ್ನು ಹಾಗೂ ಯೋಗಾರ್ಥವನ್ನು ಹೇಳಿದರೂ ಯೋಗಾರ್ಥವೇ ಮುಖ್ಯ. ಅನವಸ್ಥಾದೋಷ ಪರಿಹಾರಕ್ಕಾಗಿ ಮಾತ್ರ ಯೌಗಿಕವಾದ ಶಬ್ದಗಳಲ್ಲಿ ರೂಢಿಗಳನ್ನು ಕಲ್ಪಿಸಲಾಗಿರುತ್ತದೆ.

ಯೌಗಿಕಾರ್ಥದಲ್ಲಿಯೂ ಕೂಡ ಪರಮಮುಖ್ಯವೃತ್ತಿಯಿಂದ ವಾಚ್ಯನಾದವನು ಶ್ರೀಹರಿಯೇ ಆಗಿದ್ದಾನೆ. ಉಳಿದೆಲ್ಲಾ ಪದಾರ್ಥಗಳು ಮುಖ್ಯವೃತ್ತಿಯಿಂದ ಪ್ರತಿಪಾದ್ಯವಾಗುತ್ತವೆ.

ಇವೇ ಮೊದಲಾದ ಸ್ಮೃತಿಗಳಿಂದ ಪರಮಾತ್ಮನೊಬ್ಬನೇ ಪರಮಮುಖ್ಯವೃತ್ತಿಯಿಂದ ಸಕಲವೇದ-ಪ್ರತಿಪಾದ್ಯನೆಂದು ತಿಳಿಯಬೇಕು.

ಹೀಗೆ ಭಗವಂತನಲ್ಲಿ ವೇದಗಳ ಅನೇಕರೀತಿಯ ಸಮನ್ವಯಗಳನ್ನು ತಿಳಿಯಬೇಕು. ವೇದದಲ್ಲಿರುವ ಪ್ರತಿಯೊಂದು ಪದಗಳು ಧರ್ಮ, ದೇವತೆ, ಯಜ್ಞ ಮತ್ತು ಅವುಗಳಿಗೆ ಸಂಬಂಧಪಟ್ಟ ವಸ್ತುಗಳನ್ನು ಅಮುಖ್ಯವಾಗಿ ತಿಳಿಸುವುದರ ಜೊತೆಗೆ ಭಗವಂತನನ್ನು ಮುಖ್ಯವಾಗಿ ತಿಳಿಸುತ್ತವೆ. ಪ್ರತಿಯೊಂದು ಪದಗಳು ಅಕ್ಷರಗಳು ಭಗವಂತನನ್ನೇ ಬೋಧಿಸುತ್ತವೆ. ಇಂಥ ಸಮನ್ವಯವನ್ನು ಬ್ರಹ್ಮದೇವರು ಮಾತ್ರ ತಿಳಿಯಬಲ್ಲರು. ಇದಕ್ಕೆ ಪದಸಮನ್ವಯವೆಂದು ಹೆಸರು.

ಮತ್ತೊಂದು ವಾಕ್ಯಸಮನ್ವಯ. ವಾಕ್ಯದಲ್ಲಿರುವ ಇಂದ್ರ, ಅಗ್ನಿ, ವರುಣ ಮುಂತಾದ ಒಂದೊಂದು ಪದಗಳು ಭಗವಂತನನ್ನು ತಿಳಿಸಿದಾಗ ಮಾತ್ರ ಇಡೀ ವಾಕ್ಯವು ಭಗವಂತನ ಗುಣವರ್ಣನೆಯಲ್ಲಿ ಪರ್ಯವಸಾನವಾಗುತ್ತದೆ. ಇದನ್ನು ವಾಕ್ಯಸಮನ್ವಯವೆಂದು ಹೇಳುತ್ತಾರೆ.

ವಾಕ್ಯಸಮನ್ವಯದ ಮತ್ತೊಂದು ಕ್ರಮ ಹೀಗಿದೆ - ಯಜ್ಞ ಮುಂತಾದ ಅನೇಕ ಕರ್ಮಗಳ ಅನುಷ್ಠಾನ ಪ್ರಕಾರವನ್ನು ವಾಕ್ಯಗಳು ತಿಳಿಸುತ್ತವೆ ಮತ್ತು ದೇವತೆಗಳನ್ನೂ ಕೂಡ ಸಮಗ್ರವಾಗಿ ತಿಳಿಸುತ್ತವೆ. ಆದರೆ ವಾಕ್ಯಗಳ ಮುಖ್ಯತಾತ್ಪರ್ಯ ಸ್ವರ್ಗವಾಗಲೀ, ದೇವತೆಗಳಾಗಲೀ ಆಗಿರುವುದಿಲ್ಲ. ಹೊರತಾಗಿ ಇಂತಹ ಸತ್ಕರ್ಮಗಳ ಅನುಷ್ಠಾನದಿಂದ ಅಂತಃಕರಣದ ನೈರ್ಮಲ್ಯವನ್ನು ಪಡೆದು ಅದರ ಜೊತೆಗೆ ಈ ಕರ್ಮಗಳು ಕೇವಲ ಅಲ್ಪವಾದ ಸಾಂಸಾರಿಕ ಫಲವನ್ನಷ್ಟೇ ನೀಡುತ್ತವೆಂದು ತಿಳಿದು ಶುದ್ಧವಾದ ಅಂತಃಕರಣದಿಂದ ಭಗವಂತನ ಸಾಕ್ಷಾತ್ಕಾರವನ್ನು ಪಡೆಯಲು ನಮ್ಮನ್ನು ಪ್ರಚೋದಿಸುವುದೇ ಕರ್ಮಕಾಂಡದ ಉದ್ದೇಶವಾಗಿರುತ್ತದೆ. ಹೀಗೆ ಭಗವಂತನ ಉದ್ದೇಶವಾಗಿಯೇ ಎಲ್ಲಾ ವಾಕ್ಯಗಳು ಪರ್ಯವಾಸನಗೊಳ್ಳುತ್ತವೆ. ಇದು ವಾಕ್ಯಸಮನ್ವಯದ ಮತ್ತೊಂದು ಪ್ರಕಾರ.

ಇನ್ನೂ ಹೆಚ್ಚೆಂದರೆ ವೇದದಲ್ಲಿರುವ ಶಬ್ದಗಳಷ್ಟೇ ಅಲ್ಲದೇ ನಮ್ಮ ವ್ಯವಹಾರದಲ್ಲಿರುವ ಸಕಲ ಶಬ್ದಗಳೂ ಭಗವಂತನನ್ನೇ ಪ್ರತಿಪಾದಿಸುತ್ತವೆ. ಅಷ್ಟೇ ಅಲ್ಲದೇ ಹಕ್ಕಿಗಳ ಕಲರವ, ಸಮುದ್ರದ ಘೋಷ, ಮಗುವಿನ ಗೆಜ್ಜೆಯ ನಿನಾದ, ಹಲ್ಲಿಯ ಲೊಚಗುಟ್ಟುವಿಕೆ ಇವೆಲ್ಲಾ ಧ್ವನಿಗಳು ಪರಮಾತ್ಮನ ಗುಣಗಾನಗಳೆಂದು ಜ್ಞಾನಿಗಳು ತಿಳಿಯುತ್ತಾರೆ. ಅತ್ಯಂತ ಕಠಿಣವಾದ ಪದಸಮನ್ವಯದ ವಿಷಯದಲ್ಲಿ 'ತಂ ಯಚ್ಛತಮ್' ಎಂಬ ವಾಕ್ಯವು ಪ್ರಮಾಣವಾಗಿದೆ. ಎಲ್ಲಾ ಪದಗಳೂ ಬ್ರಹ್ಮನ ಹೆಸರೇ ಆದಲ್ಲಿ ಸರ್ವಶಬ್ದವಾಚ್ಯತ್ವವನ್ನು ಈ ವಾಕ್ಯಕ್ಕೂ ಕೂಡ ವಿಧಾನ ಮಾಡಲು ಬರುವುದಿಲ್ಲ. ಏಕೆಂದರೆ ಈ 'ತಂ ಯಚ್ಛತಮ್' ಎಂಬ ವಾಕ್ಯದಲ್ಲಿರುವ ಪ್ರತಿಯೊಂದು ಪದಗಳೂ ಪರಮಾತ್ಮನ ಹೆಸರೇ ಆದಲ್ಲಿ ಎಲ್ಲಾ ಪದಗಳಿಂದಲೂ ವಾಚ್ಯನೆಂಬ ತಾತ್ಪರ್ಯವನ್ನು ಹೇಗೆ ಹೊಂದುತ್ತದೆ ? ಈ ಗೊಂದಲವು ಸಹಜವಾಗಿ ಬರುತ್ತದೆ. ಆದರೆ ಲೋಕಪ್ರಸಿದ್ಧವಾದ ಪದಾರ್ಥಸಂಸರ್ಗಬೋಧಕವಾದ ಪದಸಮನ್ವಯವು ತನಗೆ ಉಪಜೀವ್ಯವಾದ ವಾಕ್ಯಸಮನ್ವಯವನ್ನು ವಿರೋಧಿಸಲು ಸಾಧ್ಯವಿಲ್ಲ. ಆದ್ದರಿಂದ ಪದಸಮನ್ವಯದ ಜೊತೆಗೆ ವಾಕ್ಯಸಮನ್ವಯವನ್ನೂ ಕೂಡ ಇದರಿಂದ ತಿಳಿಯಬೇಕು.

ವೇದಗಳಲ್ಲಿ ಎಲ್ಲಾ ಶಬ್ದಗಳು ಪರಮಾತ್ಮನನ್ನೇ ಪ್ರತಿಪಾದನೆ ಮಾಡುವುದಾದರೆ, ಎಲ್ಲವೂ ಭಗವಂತನ ನಾಮಗಳೇ ಆಗುತ್ತವೆ. ಪರಮಾತ್ಮನನ್ನು ಬಿಟ್ಟು ಬೇರೆ ಯಾವುದೇ ವಿಷಯವನ್ನು ಅವು ಹೇಳಲಾರವು. ಆವಾಗ ವೇದದಿಂದ ಯಾವ ಕರ್ಮಾನುಷ್ಠಾನಗಳನ್ನು ಯಾವುದೇ ಶಬ್ದಗಳ ವ್ಯುತ್ಪತ್ತಿಯನ್ನೂ ಕೂಡ ತಿಳಿಯಲು ಸಾಧ್ಯವಿಲ್ಲದಂತಾಗುತ್ತದೆ. ನಮ್ಮ ಎಲ್ಲಾ ಕರ್ಮಾನುಷ್ಠಾನಗಳು ಲೋಪವಾಗುವುದಲ್ಲದೇ, ಸಕಲ ವ್ಯವಹಾರಗಳೂ ಲೋಪವಾಗುತ್ತವೆ. ಆದ್ದರಿಂದ ಸರ್ವಶಬ್ದ ಸಮನ್ವಯವನ್ನು ತಿಳಿಯುವುದು ಬಹಳ ಕಷ್ಟವಲ್ಲವೇ?

ಸಮನ್ವಯದ ಕ್ರಮಗಳನ್ನು ಸರಿಯಾಗಿ ತಿಳಿದಾಗ ಈ ಆಕ್ಷೇಪಕ್ಕೆ ಅವಕಾಶವಿಲ್ಲ. ಯಾವುದೇ ಶಬ್ದವು ಪರಮಾತ್ಮನನ್ನು ಪ್ರತಿಪಾದನೆ ಮಾಡುವಾಗ ಆ ಶಬ್ದಗಳ ಅವಯವಗಳು ಲೌಕಿಕವಾದ ಅರ್ಥವನ್ನೇ ಪ್ರತಿಪಾದನೆ ಮಾಡುತ್ತವೆ. 'ಜ್ಯೋತಿ' ಎಂಬ ಶಬ್ದವು ಪರಮಾತ್ಮನನ್ನು ಪ್ರತಿಪಾದನೆ ಮಾಡುವಾಗ, 'ಜೀ' 'ಓತಿ' ಎಂಬ ಅವಯವಗಳು ಲೌಕಿಕವಾದ ಅರ್ಥವನ್ನು ಪ್ರತಿಪಾದನೆ ಮಾಡುತ್ತವೆ. 'ಓತಿ' 'ಜೀ' ಎಂಬುದು ಪರಮಾತ್ಮನನ್ನು ಪ್ರತಿಪಾದನೆ ಮಾಡುವುದಾದರೆ ಅದರ ಅವಯವಗಳು ಲೌಕಿಕಾರ್ಥವನ್ನು ಪ್ರತಿಪಾದನೆ ಮಾಡುತ್ತವೆ. ಆದ್ದರಿಂದ ವ್ಯುತ್ಪತ್ತಿಯ ತಿಳುವಳಿಕೆಯು ಕಷ್ಟವಾಗುವುದಿಲ್ಲ. ಇದರಂತೆ ಕರ್ಮವಿಲೋಪ ಪ್ರಸಂಗಕ್ಕೂ ಅವಕಾಶವಿಲ್ಲ. ಏಕೆಂದರೆ ಎಲ್ಲಾ ಶಬ್ದಗಳು ಪರಮಾತ್ಮನನ್ನು ಪ್ರತಿಪಾದನೆ ಮಾಡಿದರೂ, ಪರಮಮುಖ್ಯವೃತ್ತಿಯಿಂದ ಪರಮಾತ್ಮನನ್ನು ಮಾತ್ರ ಪ್ರತಿಪಾದನೆ ಮಾಡುತ್ತವೆ. ಮುಖ್ಯವೃತ್ತಿಯಿಂದ ಯಜ್ಞಯಾಗಾದಿಕರ್ಮಗಳನ್ನೂ ಕೂಡ ಪ್ರತಿಪಾದಿಸುತ್ತವೆ. 'ವಸಂತೇ ವಸಂತೇ ಜ್ಯೋತಿಷಾ ಯಜೇತ'

ಎಂಬ ವಾಕ್ಯವು ವಸಂತಮಾಸದಲ್ಲಿ ಜ್ಯೋತಿಷ್ಟೋಮಯಾಗವನ್ನು ಮಾಡಬೇಕೆಂದು ತಿಳಿಸುತ್ತದೆ. ಅದರ ಜೊತೆಗೆ ಪರಮಮುಖ್ಯವೃತ್ತಿಯಿಂದ ಪ್ರತಿಯೊಂದು ಪದಗಳೂ ಭಗವಂತನ ವಿಭಿನ್ನವಾದ ಗುಣಗಳನ್ನು ವರ್ಣಿಸುತ್ತವೆಂದು ಹೇಳುತ್ತವೆ. ಶಬ್ದಗಳಲ್ಲಿ ಮುಖ್ಯವೃತ್ತಿ, ಪರಮಮುಖ್ಯವೃತ್ತಿಯೆಂಬ ವೈವಿಧ್ಯವಿದೆ. ಶಬ್ದಗಳು ಪರಮಾತ್ಮನ ಗುಣಧರ್ಮಗಳನ್ನು ಹೇಳುವುದಷ್ಟೇ ಅಲ್ಲದೇ, ಜ್ಞಾನಿಗಳ ರೂಢಿಯು ಇದ್ದಲ್ಲಿ ಪರಮಮುಖ್ಯವೃತ್ತಿಯೆಂದು ಕರೆಸಿಕೊಳ್ಳುತ್ತದೆ. ಒಂದು ವೇಳೆ ಲೌಕಿಕವಾಗಿ ಯೋಗರೂಢಿಗಳಿದ್ದಲ್ಲಿ ಮುಖ್ಯವೃತ್ತಿಯೆನಿಸಿಕೊಳ್ಳುತ್ತದೆ. ಹೀಗೆ ವೈವಿಧ್ಯವನ್ನು ತಿಳಿದಾಗ ಯಾವುದೇ ಆಕ್ಷೇಪಕ್ಕೆ ಅವಕಾಶವಿರುವುದಿಲ್ಲ. ಮತ್ತು ಲೌಕಿಕಪದಾರ್ಥಗಳೆಲ್ಲವನ್ನೂ ಶಬ್ದಗಳು ಲಕ್ಷಣಾವೃತ್ತಿಯಿಂದಲೇ ಪ್ರತಿಪಾದನೆ ಮಾಡಿದಂತಾಗುತ್ತದೆಂಬ ಆಕ್ಷೇಪಕ್ಕೂ ಅವಕಾಶವಿಲ್ಲ. ಏಕೆಂದರೆ ಕೋಶ, ವ್ಯಾಕರಣ ಮೊದಲಾದವುಗಳಿಂದ ಲೌಕಿಕಾರ್ಥಗಳಲ್ಲಿ ಶಬ್ದಗಳು ಪ್ರಮಾಣಸಿದ್ಧವಾಗಿವೆ. ಬಾಧಕವಿಲ್ಲದೇ ಇಂತಹ ಪ್ರಮಾಣಸಿದ್ಧವಾದ ಅರ್ಥವನ್ನು ಬಿಡುವುದು ಯುಕ್ತವಾಗುವುದಿಲ್ಲ. ಆದ್ದರಿಂದ ಲೋಕದಲ್ಲಿ ಮುಖ್ಯವೃತ್ತಿಯನ್ನು ಒಪ್ಪಿಯೇ ಪರಮಾತ್ಮನಲ್ಲಿ ಶಬ್ದಗಳ ಸಮನ್ವಯವನ್ನು ಮಾಡಬೇಕೆಂಬುದು ಗಮನಿಸಬೇಕಾದ ಸೂಕ್ಷ್ಮವಿಚಾರ.

ಶಬ್ದದಲ್ಲಿ ಅನೇಕವಿಧವಾದ ವೃತ್ತಿಗಳಿವೆ. ಅವುಗಳಲ್ಲಿ ಮಹಾಯೋಗ ಮತ್ತು ಮಹಾಯೋಗರೂಢಿ ಎಂಬುದು ಮುಖ್ಯವಾದ ಶಬ್ದವೃತ್ತಿಗಳು. ಆ ಶಬ್ದಗಳು ಹೇಳುವ ಗುಣಧರ್ಮಗಳು ಶ್ರೀಹರಿಯಲ್ಲಿ ನಿರತಿಶಯವಾಗಿ ಅಥವಾ ಸ್ವತಂತ್ರವಾಗಿ ಇರುವುದರಿಂದ ಜ್ಞಾನಿಜನರು ಅದನ್ನು ಶ್ರೀಹರಿಯಲ್ಲಿ ಬಹಳವಾಗಿ ಪ್ರಯೋಗಿಸುತ್ತಾರೆ. ಆದ್ದರಿಂದ ಶಬ್ದಗಳು ಪರಮಾತ್ಮನನ್ನು ಮಹಾಯೋಗವೃತ್ತಿಯಿಂದ ಕರೆಯುತ್ತವೆ. ಇಂದ್ರ, ಪ್ರಾಣ ಮೊದಲಾದ ಶಬ್ದಗಳೇ ಇದಕ್ಕೆ ಉದಾಹರಣೆಗಳು. ಇನ್ನು ಇಂದ್ರಶಬ್ದದ ಪ್ರವೃತ್ತಿನಿಮಿತ್ತವಾಗಿರುವ ಐಶ್ವರ್ಯ, ಅಗ್ನಿ, ಪ್ರಾಣ ಮೊದಲಾದ ಶಬ್ದಗಳ ಪ್ರವೃತ್ತಿನಿಮಿತ್ತವಾಗಿರುವ ಜಗತ್‌ಪ್ರವರ್ತಕತ್ವ ಇವುಗಳೆಲ್ಲವೂ ಶ್ರೀಹರಿಯಲ್ಲಿ ನಿರತಿಶಯವಾಗಿ ಇರುತ್ತವೆ. ಆದ್ದರಿಂದ ಈ ಶಬ್ದಗಳು ಭಗವಂತನಲ್ಲಿ ಮಹಾಯೋಗವೃತ್ತಿಯಿಂದ ಇರುತ್ತವೆ.

ಆಯಾ ಶಬ್ದಗಳ ಗುಣಧರ್ಮಗಳು ಪರಮಾತ್ಮನಲ್ಲಿ ನಿರತಿಶಯವಾಗಿ ಇರುವುದರ ಜೊತೆಗೆ ಲೋಕದಲ್ಲಿ ಹಾಗೂ ವೇದದಲ್ಲಿ ಪ್ರಸಿದ್ಧಿಯಿದ್ದರೆ ಆ ಶಬ್ದಗಳು ಮಹಾಯೋಗರೂಢಿಯೆಂಬ ಶಬ್ದಶಕ್ತಿಯಿಂದ ಪರಮಾತ್ಮನನ್ನು ಪ್ರತಿಪಾದನೆ ಮಾಡುತ್ತವೆ. ವಿಷ್ಣು, ನಾರಾಯಣ, ಹರಿ ಮೊದಲಾದ ಶಬ್ದಗಳು ಇದಕ್ಕೆ ಉದಾಹರಣೆ. ಈ ಮಹಾಯೋಗ ಮತ್ತು ಮಹಾಯೋಗ ರೂಢಿಗಳನ್ನು ಪರಮಮುಖ್ಯವೃತ್ತಿಯೆಂದು ಕರೆಯುತ್ತಾರೆ. ಇದರಂತೆ ಯೋಗ, ರೂಢಿ, ಯೋಗರೂಢಿಯೆಂಬ ಮೂರು ಮುಖ್ಯವೃತ್ತಿಗಳಿವೆ. ಇವುಗಳು ಲೌಕಿಕವಾದ ಪದಾರ್ಥಗಳನ್ನು ಮುಖ್ಯವಾಗಿ ಪ್ರತಿಪಾದನೆ ಮಾಡುತ್ತವೆ. ರೂಢೋಪಚಾರ, ರೂಢಲಕ್ಷಣಾ. ಉಪಚಾರ, ಲಕ್ಷಣಾ ಎಂಬ ನಾಲ್ಕುಬಗೆಯ ವೃತ್ತಿಗಳು ಗೌಣವಾದ ವೃತ್ತಿಗಳೆಂದು ಕರೆಸಿಕೊಳ್ಳುತ್ತಾ

ಲೌಕಿಕವಾದ ಪದಾರ್ಥಗಳನ್ನು ಗೌಣವಾಗಿಯೇ ಪ್ರತಿಪಾದನೆ ಮಾಡುತ್ತವೆ. ಆದ್ದರಿಂದ ಪರಮಾತ್ಮನಲ್ಲಿ ಮಾತ್ರ ಇರುವ ಎರಡು ವೃತ್ತಿಗಳನ್ನು ಬಿಟ್ಟರೆ ಲೋಕದಲ್ಲಿ ಏಳುಬಗೆಯ ವೃತ್ತಿಗಳು ಪದಾರ್ಥಗಳನ್ನು ಪ್ರತಿಪಾದನೆ ಮಾಡುತ್ತವೆ. ೧. ರೂಢಿ, ೨. ಯೋಗ, ೩. ಯೋಗರೂಢಿ, ೪. ರೂಢೋಪಚಾರ, ೫. ರೂಢಲಕ್ಷಣ, ೬. ಉಪಚಾರ, ೭. ಲಕ್ಷಣಾ ಎಂಬುದಾಗಿ.

ಈ ಅಧಿಕರಣದಲ್ಲಿ 'ಜ್ಯೋತಿರುಪಕ್ರಮಾತ್ತು ತಥಾ ಹ್ಯಧಿಯತೇ ಏಕೇ', 'ಕಲ್ಪನೋಪದೇಶಾಚ್ಚ ಮಧ್ವಾದಿವದವಿರೋಧಃ' ಎಂಬೆರಡು ಸೂತ್ರಗಳಿವೆ. ಪ್ರಥಮಸೂತ್ರದಲ್ಲಿ ಪ್ರತಿಯೊಂದು ಪದಗಳಿಂದ ಶ್ರೀಹರಿಯೇ ಪ್ರತಿಪಾದ್ಯನೆನ್ನಲು ಸ್ವಪಕ್ಷಸಾಧಕಪ್ರಮಾಣವನ್ನು ಹೇಳಿದ್ದಾರೆ. ಎರಡನೆಯ ಸೂತ್ರದಲ್ಲಿ ಸಕಲಪದಗಳ ಸಮನ್ವಯವನ್ನು ಶ್ರೀಹರಿಯಲ್ಲಿ ಮಾಡಿದರೆ ಬರುವಂತಹ ಬಾಧಕವನ್ನು ಪರಿಹರಿಸಿದ್ದಾರೆ.

ಪ್ರಥಮಸೂತ್ರದಲ್ಲಿ 'ವಸಂತೇ ವಸಂತೇ ಜ್ಯೋತಿಷಾ ಯಜೇತ' ಎಂಬುದು ವಿಷಯವಾಕ್ಯವಾಗಿದೆ. ವಿಷಯವಾಕ್ಯದಲ್ಲಿ ಮೊದಲು ಶ್ರುತವಾದ ವಸಂತ ಶಬ್ದವನ್ನೇ ಸೂತ್ರದಲ್ಲಿ ಉಲ್ಲೇಖಿಸಬೇಕಿತ್ತಲ್ಲವೇ? ಎಂಬ ಪ್ರಶ್ನೆ ಬರಬಹುದು. ಆದರೆ ಜ್ಯೋತಿಷ್ಟೋಮಯಾಗವು ಅತ್ಯಂತ ಪ್ರಧಾನವಾದ್ದರಿಂದ ತತ್ ಪ್ರತಿಪಾದಕವಾದ 'ಜ್ಯೋತಿಃ' ಶಬ್ದದಿಂದ ಉಳಿದ ಅಮುಖ್ಯವಾದ ಅರ್ಥಗಳನ್ನು ಪ್ರತಿಪಾದನೆ ಮಾಡುವ ಶಬ್ದಗಳನ್ನು ಉಪಲಕ್ಷಣಯಾ ವಿವಕ್ಷಿಸುವುದು ಸೂಕ್ತವೆಂಬ ದೃಷ್ಟಿಯಿಂದ 'ಜ್ಯೋತಿಃ' ಶಬ್ದವನ್ನೇ ಸೂತ್ರಕಾರರು ಉಲ್ಲೇಖಿಸಿದ್ದಾರೆ. ಎರಡನೆಯ ಸೂತ್ರದಲ್ಲಿ 'ಕಲ್ಪನೋಪದೇಶಾತ್' ಎಂಬ ಹೇತುವಿನಿಂದ ಕರ್ಮಕ್ರಮಗಳ ವಿರೋಧವನ್ನು ಎಲ್ಲಾ ಶಬ್ದಗಳು ಶ್ರೀಹರಿಯಲ್ಲಿ ಸಮನ್ವಯವಾದರೆ ಶಬ್ದಗಳ ವ್ಯುತ್ಪತ್ತಿಯೇ ಅಶಕ್ಯವಾಗುತ್ತದೆಂಬ ವಿರೋಧವನ್ನು ಪರಿಹರಿಸಿದ್ದಾರೆ. ಪ್ರತಿಯೊಂದು ಪದಗಳೂ ಅವಾಂತರತಾತ್ಪರ್ಯದಿಂದ ಮುಖ್ಯವೃತ್ತಿಯನ್ನೇ ಹೊಂದಿ, ಲೌಕಿಕಾರ್ಥಗಳನ್ನು ಪ್ರತಿಪಾದನೆ ಮಾಡುತ್ತವೆ. ಮುಖ್ಯತಾತ್ಪರ್ಯವನ್ನು ಹೊಂದಿ, ಅಲೌಕಿಕನಾದ ವಿಷ್ಣುವನ್ನು ಪ್ರತಿಪಾದನೆ ಮಾಡುತ್ತವೆ. ಆದ್ದರಿಂದ 'ಜ್ಯೋತಿಃ' ಎಂಬ ಶಬ್ದವನ್ನು ಶ್ರೀಹರಿಯಲ್ಲಿ ಸಮನ್ವಯ ಮಾಡುವಾಗ 'ಜೀ' ಮತ್ತು 'ಓತಿ' ಎಂಬ ಎರಡು ಅವಯವಗಳು ಲೌಕಿಕಾರ್ಥವನ್ನು ಪ್ರತಿಪಾದನೆ ಮಾಡುತ್ತವೆ. 'ಜ್ಯೋತಿಃ' ಎಂಬ ಸಮಸ್ತಪದವು ಶ್ರೀಹರಿಯನ್ನು ಪ್ರತಿಪಾದನೆ ಮಾಡುತ್ತದೆ. ಹೀಗೆ ಪ್ರತಿಯೊಂದು ಪದಗಳ ಯೋಗಾರ್ಥವನ್ನು ಶ್ರೀಹರಿಯಲ್ಲಿ ತಿಳಿಯಬೇಕು.

ಗಮನಿಸಬೇಕಾದ ಮುಖ್ಯವಿಚಾರ - ಈ ಅಧಿಕರಣದಲ್ಲಿ ವೇದದಲ್ಲಿರುವ ಎಲ್ಲಾ ಪದಗಳ ಸಮನ್ವಯವನ್ನು ಮಾಡಿದ್ದಾರೆ. ಉಳಿದ ಅಧಿಕರಣಗಳಲ್ಲಿ ಒಂದೊಂದು ವಾಕ್ಯಗಳ ಸಮನ್ವಯವನ್ನು ಮಾಡಿದ್ದಾರೆ. ಹೊರತು, ಸಮಸ್ತ ವೇದಸಮನ್ವಯವನ್ನು ಎಲ್ಲಿಯೂ ಮಾಡಿಲ್ಲ. ಈ ಅಧಿಕರಣದ ವಿಶೇಷವೆಂದರೆ ಬೇರೆ ಅಧಿಕರಣಗಳಲ್ಲಿ ಪ್ರಸಕ್ತವಾದ ಎಲ್ಲಾ ವಾಕ್ಯಗಳಲ್ಲಿರುವ ಪದಗಳ ಸಮನ್ವಯ. ಆದ್ದರಿಂದಲೇ ಶ್ರೀಮದಾಚಾರ್ಯರು ಅಧಿಕರಣನ್ಯಾಯಗಳನ್ನು ಸಂಗ್ರಹಿಸುವಾಗ 'ಸರ್ವ' ಎಂಬುದನ್ನು ಈ ಅಧಿಕರಣದ ನ್ಯಾಯಗಳೆಂದು ಹೇಳಿರುತ್ತಾರೆ.

ನಸಂಖ್ಯೋಪಸಂಗ್ರಹಾಧಿಕರಣ

ಈ ಅಧಿಕರಣದ ಪೂರ್ವಪಕ್ಷ ಹೀಗಿದೆ - 'ಯಸ್ಮಿನ್ ಪಂಚ ಪಂಚ ಜನಾಃ ಆಕಾಶಶ್ಚ ಪ್ರತಿಷ್ಠಿತಃ' ಎಂಬ ಬೃಹದಾರಣ್ಯಕೋಪನಿಷತ್ತಿನಲ್ಲಿ ಬಹುತ್ವಸಂಖ್ಯೆಯನ್ನು ಹೇಳುವ 'ಪಂಚ' 'ಜನಾಃ' ಮೊದಲಾದ ಶಬ್ದಗಳು ಇರುತ್ತವೆ. ಈ ಶಬ್ದಗಳು ಒಬ್ಬನೇ ಬ್ರಹ್ಮನನ್ನು ಹೇಳಲು ಸಾಧ್ಯವಿಲ್ಲ. ಬಹುತ್ವವಾಚಕವಾದ ಈ ಶಬ್ದಗಳು ಬಹುಜನರನ್ನೇ ಹೇಳಬೇಕು ಹೊರತು, ಒಬ್ಬನನ್ನು ಹೇಳಲು ಸಾಧ್ಯವಿಲ್ಲ. ಮತ್ತು ಆಧಾರಾಧೇಯಭಾವವೂ ಕೂಡ ಈ ಶ್ರುತಿಯಿಂದಲೇ ತಿಳಿಯುತ್ತಿದೆ. ಒಬ್ಬನೇ ಬ್ರಹ್ಮನಲ್ಲಿ ಆಧಾರಾಧೇಯಭಾವವೂ ಕೂಡ ಯುಕ್ತವಾಗುವುದಿಲ್ಲ. ಆದ್ದರಿಂದ 'ಪ್ರಾಣಸ್ಯ ಪ್ರಾಣಮ್' ಇತ್ಯಾದಿ ವಾಕ್ಯಶೇಷದಲ್ಲಿ ಪ್ರಸಕ್ತರಾದ ಪ್ರಾಣಾದಿಗಳೇ ಈ ಶ್ರುತಿಗಳಿಂದ ಪ್ರತಿಪಾದ್ಯರಾಗುತ್ತಾರೆ ಹೊರತು, ಬ್ರಹ್ಮನಾಗುವುದಿಲ್ಲ.

'ಯಸ್ಮಿನ್ ಪಂಚ ಪಂಚ ಜನಾಃ' ಎಂಬ ಶ್ರುತಿಯ ಸಮನ್ವಯಕ್ಕಾಗಿ ಈ ಅಧಿಕರಣವು ಪ್ರಾರಂಭವಾಗಬೇಕಾಗಿಲ್ಲ. ಏಕೆಂದರೆ ಹಿಂದಿನ ತದಧೀನತ್ವಾಧಿಕರಣದಿಂದಲೇ ಇಲ್ಲಿರುವ ಶಬ್ದಗಳ ಸಮನ್ವಯವೂ ಕೂಡ ಶ್ರೀಹರಿಯಲ್ಲಿ ಸಿದ್ಧವಾಗುತ್ತದೆ. ಬಹುತ್ವವೆಂಬ ಪ್ರವೃತ್ತಿನಿಮಿತ್ತವು ಪರಮಾತ್ಮನ ಅಧೀನವಾದ್ದರಿಂದ ತದ್ವಾಚಕವಾದ 'ಪಂಚ' ಮೊದಲಾದ ಶಬ್ದಗಳು ಪರಮಾತ್ಮನಲ್ಲಿ ಸಮನ್ವಯ-ಗೊಳ್ಳುತ್ತವೆಂದು ಹೇಳಬಹುದೆಂಬ ಪ್ರಶ್ನೆಯು ಬರುತ್ತದೆ. ಆದರೆ ತದಧೀನತ್ವನ್ಯಾಯವನ್ನು ಆಚ್ಛಾದನೆ ಮಾಡಿ, ಈ ಅಧಿಕರಣದ ಪೂರ್ವಪಕ್ಷ ಹೊರಟಿದೆ. ಎಲ್ಲೆಡೆಯೂ ತದಧೀನತ್ವನ್ಯಾಯವನ್ನು ವಿವಕ್ಷಿಸುವುದಾದಲ್ಲಿ ಆಯಾ ಶಬ್ದಗಳಿಂದ ಪ್ರತಿಪಾದ್ಯವಾದ ಗುಣಗಳ ಸಮನ್ವಯವನ್ನು ಶ್ರೀಹರಿಯಲ್ಲಿ ಮಾಡಲು ಸಾಧ್ಯವೇ ಆಗುವುದಿಲ್ಲ. ಇಂದ್ರಾದಿಶಬ್ದಗಳ ಸಮನ್ವಯದ ವಿಷಯದಲ್ಲಿಯೂ ತದಧೀನತ್ವನ್ಯಾಯವನ್ನೇ ವಿವಕ್ಷಿಸುವುದಾದಲ್ಲಿ ಪರಮೈಶ್ವರ್ಯಾದಿ ಗುಣಗಳೂ ಕೂಡ ಶ್ರೀಹರಿಯಲ್ಲಿ ಸಿದ್ಧವಾಗದಿರುವ ಪ್ರಸಂಗ ಬರುತ್ತದೆ. ಆದ್ದರಿಂದ ಪ್ರತಿಯೊಂದು ಅಧಿಕರಣಗಳಲ್ಲಿಯೂ ತದಧೀನತ್ವನ್ಯಾಯವನ್ನು ಮುಚ್ಚಿಟ್ಟು ಪೂರ್ವಪಕ್ಷ ಮಾಡಬೇಕು. 'ದುಃಖೀ', 'ಅವರ' ಮೊದಲಾದ ಶಬ್ದಗಳ ಸಮನ್ವಯವನ್ನು ಮಾಡುವಾಗ 'ತದ್ಗತತ್ವ' ಎಂಬ ಪ್ರವೃತ್ತಿನಿಮಿತ್ತವನ್ನು ವಿವಕ್ಷಿಸಲು ಸಾಧ್ಯವೇ ಆಗುವುದಿಲ್ಲ. ಅನಿವಾರ್ಯವಾಗಿ ಸ್ವಾತಂತ್ರ್ಯ ಎಂಬ ಪ್ರವೃತ್ತಿನಿಮಿತ್ತವನ್ನು ಅನುಸರಿಸಬೇಕಾಗುತ್ತದೆ. ಆದರೆ ಉಳಿದ ಅಧಿಕರಣಗಳಲ್ಲಿ ಅಂತಹ ಅನಿವಾರ್ಯತೆ ಇರುವುದಿಲ್ಲವೆಂಬುದನ್ನು ಗಮನಿಸಬೇಕು. ಅಥವಾ ಸ್ವಾತಂತ್ರ್ಯವೆಂಬುದನ್ನು ಪ್ರವೃತ್ತಿನಿಮಿತ್ತವೆನ್ನುವುದಾದರೆ ಅನೇಕ ಜನರನ್ನು ವಶಮಾಡಿಕೊಂಡ ರಾಜನಲ್ಲಿಯೂ

ಬಹುತ್ವವ್ಯವಹಾರವು ಬರಬೇಕಾಗುತ್ತದೆ. ಒಬ್ಬನೇ ರಾಜನನ್ನು ಬಹುರಾಜನೆಂದು ಎಲ್ಲರೂ ಕರೆಯಬೇಕಾಗುತ್ತದೆ. ಯಾರೂ ಸಹ ಲೋಕದಲ್ಲಿ ಒಬ್ಬ ರಾಜನನ್ನು ಬಹುರಾಜನೆಂದು ಕರೆಯುವುದಿಲ್ಲ. ಆದ್ದರಿಂದ ಸ್ವಾತಂತ್ರ್ಯವನ್ನು ಪ್ರವೃತ್ತಿನಿಮಿತ್ತವೆಂದು ಹೇಳಲು ಸಾಧ್ಯವಿಲ್ಲ. ಹೀಗೆ ಸ್ವಾತಂತ್ರ್ಯವನ್ನೇ ಆಕ್ಷೇಪ ಮಾಡಿ ಪೂರ್ವಪಕ್ಷವನ್ನೂ ಕೂಡ ಮಾಡಬಹುದು. ಆದ್ದರಿಂದ ಈ ಅಧಿಕರಣವು ತದಧೀನತ್ವನ್ಯಾಯದಿಂದ ಗತಾರ್ಥವಾಗುವುದಿಲ್ಲ.

ತದಧೀನತ್ವನ್ಯಾಯದಿಂದ ಈ ಅಧಿಕರಣದ ಪ್ರಮೇಯವು ಗತಾರ್ಥವಾಗದಿದ್ದರೂ ಗುಹಾಧಿಕರಣದಿಂದ ಗತಾರ್ಥವಾಗಿದೆಯಲ್ಲವೇ? ಎಂಬುದಾಗಿ ಮತ್ತೊಂದು ಗೊಂದಲ ಹುಟ್ಟುತ್ತದೆ. ಏಕೆಂದರೆ ಗುಹಾಧಿಕರಣದಲ್ಲಿ 'ಗುಹಾಂ ಪ್ರವಿಷ್ಟೌ' ಇತ್ಯಾದಿ ಸೂತ್ರದಿಂದ 'ದ್ವಿತ್ವ' ಮೊದಲಾದ ಧರ್ಮಗಳನ್ನು ಬ್ರಹ್ಮನಲ್ಲಿ ಸಮನ್ವಯ ಮಾಡಲಾಗಿದೆ. ಏಕತ್ವಕ್ಕೆ ವಿರೋಧಿಯಾದ ದ್ವಿತ್ವವು ಬ್ರಹ್ಮನಲ್ಲಿ ಇದೆ ಎಂದು ಸಿದ್ಧವಾದ ಮೇಲೆ ಏಕತ್ವಕ್ಕೆ ವಿರೋಧಿಯಾದ ಬಹುತ್ವವೂ ಕೂಡ ಇರಲೇಬೇಕು. ಹೀಗೆ ಅನೇಕತ್ವ ಸಂಖ್ಯೆಯ ಸಮನ್ವಯವನ್ನು ಗುಹಾಧಿಕರಣದಲ್ಲಿ ಸಾಧಿಸಿದ ಮೇಲೆ ಪುನಃ ಈ ಅಧಿಕರಣದಲ್ಲಿಯೂ ಅದರ ಸಮನ್ವಯವು ವ್ಯರ್ಥವಲ್ಲವೇ? ಎಂಬ ಪ್ರಶ್ನೆಗೆ ಹೀಗೆ ಉತ್ತರಿಸಬೇಕು. ಅನೇಕತ್ವಸಂಖ್ಯೆಯು ಭಿನ್ನವೃತ್ತಿಯಾಗಿದೆ ಎಂಬ ನಿಯಮವು ಔತ್ಸರ್ಗಿಕವಾದದ್ದು. ಹೀಗೊಪ್ಪದಿದ್ದರೆ 'ದ್ವಾಸುಪರ್ಣಾ' ಎಂಬ ಶ್ರುತಿಯೂ ಕೂಡ ಭೇದವನ್ನು ಸಮರ್ಥನೆ ಮಾಡುವುದಿಲ್ಲ ಎಂದಾಗಬೇಕಾದೀತು. ಆದ್ದರಿಂದ ಯಾವ ಶ್ರುತಿಯು ಅನೇಕತ್ವ ಸಂಖ್ಯೆಯನ್ನು ಹೇಳುತ್ತಿದೆಯೋ, ಅದು ಭೇದವನ್ನೂ ಕೂಡ ಹೇಳುತ್ತದೆಯೆಂದೇ ಒಪ್ಪಬೇಕಾಗುತ್ತದೆ. ಆದರೆ 'ಋತಂ ಪಿಬಂತೌ' ಎಂಬ ಶ್ರುತಿಯಲ್ಲಿ ಬ್ರಹ್ಮಶಬ್ದವೇ ಮೊದಲಾದ ಬಾಧಕಪ್ರಮಾಣಗಳಿರುವುದರಿಂದ ಈ ನಿಯಮವನ್ನು ಕೈಬಿಡಲಾಗಿತ್ತು. ಆದರೆ 'ಯಸ್ಮಿನ್ ಪಂಚ ಪಂಚ ಜನಾಃ' ಎಂಬ ಪ್ರಕೃತ ವಿಷಯವಾಕ್ಯದಲ್ಲಿ ಅಂತಹ ಬಾಧಕಗಳೇನೂ ಕಾಣಿಸುತ್ತಿಲ್ಲ. ಆದ್ದರಿಂದ ಅನೇಕತ್ವ ಸಂಖ್ಯೆಯನ್ನು ಈ ಶ್ರುತಿಯು ಪ್ರತಿಪಾದನೆ ಮಾಡುವುದರಿಂದ ಭೇದವನ್ನೂ ಕೂಡ ಹೇಳುತ್ತದೆಯೆಂದೇ ಒಪ್ಪಬೇಕು. ವಾಕ್ಯಶೇಷದಲ್ಲಿ 'ಪ್ರಾಣಸ್ಯ ಪ್ರಾಣಮ್' ಇತ್ಯಾದಿಯಾಗಿ ಶ್ರುತವಾಗಿದೆ. ಅಲ್ಲಿರುವ ದ್ವಿತೀಯಾವಿಭಕ್ತ್ಯಂತವಾದ 'ಪ್ರಾಣಮ್' ಮೊದಲಾದ ಶಬ್ದಗಳಿಂದ ಬ್ರಹ್ಮನು ಪ್ರತಿಪಾದ್ಯನಾಗಿದ್ದಾನೆ. ಅವನೇ ಪ್ರಕೃತ 'ಯಸ್ಮಿನ್' ಎಂಬ ಸಪ್ತಮ್ಯಂತವಾದ ಪದದಿಂದ ಪ್ರತಿಪಾದ್ಯನಾಗಿದ್ದಾನೆ. 'ಪ್ರಾಣಸ್ಯ' ಎಂಬ ಷಷ್ಠ್ಯಂತವಾದ ಪದಗಳಿಂದ ನಿರ್ದಿಷ್ಟರಾದ ಪ್ರಾಣಾದಿಗಳು ಈ ವಿಷಯವಾಕ್ಯದಲ್ಲಿ 'ಪಂಚ ಜನಾ' ಮೊದಲಾದ ಶಬ್ದಗಳಿಂದ ಪ್ರತಿಪಾದ್ಯರಾಗಿದ್ದಾರೆಂದು ಒಪ್ಪಬೇಕು. ಕಾರಣವೇನೆಂದರೆ ಬಹುತ್ವಸಂಖ್ಯೆಯು ಬ್ರಹ್ಮನಲ್ಲಿ ಅಯುಕ್ತವಾಗಿದೆ. ಸ್ವಾಶ್ರಿತತ್ವವೂ ಕೂಡ ಬ್ರಹ್ಮನಲ್ಲಿ ಅಯುಕ್ತವಾಗಿದೆ. ಈ ಎರಡು ಕಾರಣಗಳಿಂದ ಪ್ರಾಣಾದಿಗಳಿಗೆ ಆಶ್ರಿತನಾದ ಬ್ರಹ್ಮನು 'ಪಂಚ ಜನಾ' ಮೊದಲಾದ ಬಹುತ್ವಸಂಖ್ಯಾವಾಚಕ ಶಬ್ದಗಳಿಂದ ಪ್ರತಿಪಾದ್ಯನಾಗುವುದಿಲ್ಲವೆಂಬ ಪೂರ್ವಪಕ್ಷವು ಉದಯವಾಗುತ್ತದೆ.

'ಪ್ರಾಣಸ್ಯ ಪ್ರಾಣಮ್' ಎಂಬ ಶ್ರುತಿಯಲ್ಲಿ 'ಪ್ರಾಣಮ್' ಇತ್ಯಾದಿಯಾದ ದ್ವಿತೀಯಾವಿಭಕ್ತ್ಯಂತವಾದ ಪದದಿಂದ ನಿರ್ದಿಷ್ಟನಾದ ವ್ಯಕ್ತಿಯೇ ಪ್ರಧಾನನಾಗಿದ್ದಾನೆ. ಅರ್ಥದಿಂದ ಮತ್ತು ಶಬ್ದದಿಂದಲೂ ಷಷ್ಠ್ಯಂತವಾದ 'ಪ್ರಾಣಸ್ಯ' ಇತ್ಯಾದಿ ಶಬ್ದದಿಂದ ಪ್ರತಿಪಾದ್ಯವಾದದ್ದು ಪ್ರಧಾನವಲ್ಲ.

ಒಬ್ಬನೇ ಬ್ರಹ್ಮನಲ್ಲಿ ಪಂಚತ್ವ ಸಂಖ್ಯೆಯು ಯುಕ್ತವಾಗುವುದಿಲ್ಲವೆಂದು ಹೇಗೆ ಹೇಳುತ್ತೀರೋ, ಆದರಂತೆ ಅನಂತ ಪ್ರಾಣರಲ್ಲಿ ಪಂಚತ್ವ ಸಂಖ್ಯೆಯು ಯುಕ್ತವಾಗುವುದಿಲ್ಲ ಎಂಬ ಪ್ರತಿಬಂದಿಯು ನಿಮಗೂ ಇರುತ್ತದೆ.

ಭೇದವಿಲ್ಲದಿದ್ದರೂ ಕೂಡ ಬ್ರಹ್ಮನ ವಿಷಯದಲ್ಲಿ ಆಧಾರಾಧೇಯಭಾವವು ಯುಕ್ತವೇ ಆಗುತ್ತದೆ. 'ಕಾಲಃ ಸದಾऽಸ್ತಿ, ದೇಶಃ ಸರ್ವತ್ರ ಅಸ್ತಿ' ಕಾಲವು ಯಾವಾಗಲೂ ಇರುತ್ತದೆ. ದೇಶವು ಎಲ್ಲೆಡೆಯೂ ಇದೆ. ಇತ್ಯಾದಿ ಪ್ರಯೋಗಗಳೇ ಈ ವಿಷಯದಲ್ಲಿ ಉದಾಹರಣೆ.

ಆದ್ದರಿಂದ ಜಗತ್ತಿನಲ್ಲಿ ಒಟ್ಟು ಎಷ್ಟು ನಿಯಮ್ಯ ಪದಾರ್ಥಗಳಿವೆಯೋ, ಅಷ್ಟೇ ನಿಯಾಮಕವಾದ ಭಗವದ್ರೂಪಗಳೂ ಕೂಡ ಇರುತ್ತವೆ. ಆದ್ದರಿಂದ ಶರೀರದಲ್ಲಿ ಪಂಚಪ್ರಾಣಗಳು ಇವೆ. ಪಂಚಪ್ರಾಣಗಳೆಂಬ ನಿಯಮ್ಯಪದಾರ್ಥಗಳು ಐದುಸಂಖ್ಯೆಯಲ್ಲಿರುವುದರಿಂದ ತನ್ನಿಯಾಮಕವಾದ ಭಗವದ್ರೂಪಗಳೂ ಕೂಡ ಐದುಸಂಖ್ಯೆಯಲ್ಲಿಯೇ ಇರುತ್ತವೆ.

ಶರೀರದಲ್ಲಿರುವ 'ಆಕಾಶ' ಎಂಬ ನಿಯಾಮಕ ರೂಪವು ಆರನೆಯದಾದ್ದರಿಂದ ಶ್ರುತಿಯಲ್ಲಿ ಹೇಳಲ್ಪಟ್ಟ 'ಆಕಾಶಶ್ಚ ಪ್ರತಿಷ್ಠಿತಃ' ಎಂಬುದು ಸಾಧುವಾಗುತ್ತದೆ.

ಶರೀರವು ಪಂಚಪ್ರಾಣಗಳಿಗೆ ಆಧಾರವಾಗಿದೆ. ಪಂಚಪ್ರಾಣಗಳು ಆಧೇಯವಾಗಿವೆ. ಶರೀರದಲ್ಲಿರುವ ನಿಯಾಮಕ ಭಗವದ್ರೂಪವು ಆಧಾರವೆಂದು, ಆಧೇಯವಾದ ಪಂಚಪ್ರಾಣಗಳಲ್ಲಿರುವ ರೂಪಗಳು ಆಧೇಯವೆಂದು ಕರೆಸಿಕೊಳ್ಳುತ್ತವೆ. ಹೀಗೆ ಒಬ್ಬನೇ ಭಗವಂತನ ರೂಪಗಳಿಗೆ ಆಧಾರಾಧೇಯಭಾವವು ಯುಕ್ತವಾಗುತ್ತದೆ.

ಇದನ್ನೇ ನ್ಯಾಯವಿವರಣದಲ್ಲಿ 'ಬಹುರೂಪತ್ವಾತ್ ಅಧಿಕರಣಾಧೇಯತ್ವಾದಿ ತಸ್ಯೈವ ಯುಜ್ಯತೇ' ಭಗವಂತನಿಗೆ ಬಹುರೂಪಗಳಿರುವುದರಿಂದ ಅಧಿಕರಣಭಾವ ಹಾಗೂ ಆಧೇಯಭಾವವು ಒಬ್ಬನಲ್ಲಿಯೇ ಯುಕ್ತವಾಗುತ್ತದೆ ಎಂದು ಹೇಳಿರುತ್ತಾರೆ.

ಆಕಾಶಾಧಿಕರಣ

ಆಕಾಶಾಧಿಕರಣದಲ್ಲಿ ಪರಮಾತ್ಮನು ಅವಾಂತರಕಾರಣನಾಗಿದ್ದಾನೆಂದು ಸಮರ್ಥಿಸಲಾಗಿದೆ. ಈ ಅಧಿಕರಣದಲ್ಲಿ 'ಆಕಾಶ' ಎಂಬ ಶಬ್ದದ ಸಮನ್ವಯವು ಮುಖ್ಯವಾದ ಉದ್ದೇಶವಲ್ಲ. ತೈತ್ತಿರೀಯಶ್ರುತಿಯ ಬ್ರಹ್ಮವಲ್ಲಿಯಲ್ಲಿ 'ಆತ್ಮನ ಆಕಾಶಃ ಸಂಭೂತಃ ಆಕಾಶಾದ್ವಾಯುಃ ವಾಯೋರಗ್ನಿಃ' ಇತ್ಯಾದಿಯಾದ ವಾಕ್ಯಗಳು ಶ್ರುತವಾಗಿವೆ. ಆತ್ಮನಿಂದ ಆಕಾಶವು ಹುಟ್ಟಿತು. ಆಕಾಶದಿಂದ ವಾಯುವು ಹುಟ್ಟಿತು ಎಂಬುದು ಇದರ ಅಭಿಪ್ರಾಯ. ಆತ್ಮನಿಂದ ಹುಟ್ಟಿದ ಆಕಾಶವು ಕಾರ್ಯರೂಪವನ್ನು ತಾಳಿದೆ. ಆದರೆ ವಾಯುವಿನ ಹುಟ್ಟುವಿಕೆಗೆ ಕಾರಣವಾದ್ದರಿಂದ, ಕಾರಣಸ್ವರೂಪವನ್ನೂ ಕೂಡ ತಾಳಿದೆ. ಯಾವ ಪದಾರ್ಥವು ಕಾರ್ಯವೂ, ಕಾರಣವೂ ಆಗಿರುತ್ತದೋ, ಅದನ್ನೇ ಅವಾಂತರಕಾರಣವೆಂದು ಕರೆಯುತ್ತಾರೆ. ಪ್ರಕೃತ ಆಕಾಶವು ಆತ್ಮನಿಂದ ಹುಟ್ಟಿ, ವಾಯುವಿಗೆ ಕಾರಣವೂ ಆಗಿರುವುದರಿಂದ ಅವಾಂತರಕಾರಣವೆಂದು ಇದನ್ನು ಕರೆಯಬೇಕು. ಈ ತೈತ್ತಿರೀಯಶ್ರುತಿಯಲ್ಲಿ ಅವಾಂತರ ಕಾರಣತ್ವವು ಆಕಾಶಕ್ಕೆ ನೇರವಾಗಿ ಹೇಳಲ್ಪಡದಿದ್ದರೂ ಅರ್ಥಾತ್ ತಿಳಿಯುತ್ತಿದೆ. ಅರ್ಥಾತ್‌ಸಿದ್ಧವಾದ ಅವಾಂತರ ಕಾರಣತ್ವ ಎಂಬ ಧರ್ಮವೂ ಕೂಡ ಮಹಾವಿಷ್ಣುವಿನಲ್ಲೇ ಇರುತ್ತದೆ. ಈ ಭೂತಾಕಾಶಾದಿಗಳಲ್ಲಿರಲು ಸಾಧ್ಯವಿಲ್ಲ ಎಂಬುದು ಈ ಅಧಿಕರಣದ ಉದ್ದೇಶ.

ತೈತ್ತಿರೀಯೋಪನಿಷತ್ತಿನ ಬ್ರಹ್ಮವಲ್ಲಿಯಲ್ಲಿ 'ಆತ್ಮನಃ ಆಕಾಶ ಸಂಭೂತಃ ಆಕಾಶದ್ವಾಯುಃ ವಾಯೋರಗ್ನಿಃ ಅಗ್ನೇರಾಪಃ' ಇತ್ಯಾದಿಯಾದ ವಾಕ್ಯಗಳು ಶ್ರುತವಾಗಿವೆ. ಆತ್ಮನಿಂದ ಆಕಾಶವು, ಆಕಾಶದಿಂದ ವಾಯು, ವಾಯುವಿನಿಂದ ಅಗ್ನಿ, ಅಗ್ನಿಯಿಂದ ನೀರು, ಹೀಗೆ ಸೃಷ್ಟಿಯ ಕ್ರಮವನ್ನು ಹೇಳಲಾಗಿದೆ. ಇಲ್ಲಿರುವ ಆತ್ಮಶಬ್ದದಿಂದ ವಿಷ್ಣು ಪ್ರತಿಪಾದ್ಯನೆಂಬುದರಲ್ಲಿ ವಿವಾದವಿಲ್ಲ. ಇಂತಹ ವಿಷ್ಣುವಿನಿಂದ ಆಕಾಶವು ಹುಟ್ಟುತ್ತಿದೆಯೆಂದು ಶ್ರುತಿ ಹೇಳುತ್ತಿದೆ. ಹೀಗಿರುವಾಗ ವಿಷ್ಣುವೇ ಪುನಃ ಆಕಾಶಶಬ್ದದಿಂದ ಪ್ರತಿಪಾದ್ಯನಾಗಲಾರನು. ಒಂದು ವೇಳೆ ಮಹಾವಿಷ್ಣುವೇ ಪ್ರತಿಪಾದ್ಯನಾದರೆ, ತನ್ನಿಂದಲೇ ತಾನು ಹುಟ್ಟಿದನೆಂದು ಶ್ರುತಿ ಹೇಳಿದಂತಾಗುತ್ತದೆ. ತನ್ನಿಂದಲೇ ತಾನು ಹುಟ್ಟಬೇಕಾದರೆ ತನಗಿಂತ ತಾನು ಮೊದಲು ಇದ್ದಾನೆಂದು ಒಪ್ಪಬೇಕು. ಭಗವದ್ರೂಪದ ಅಭಿವ್ಯಕ್ತಿಯ ದೃಷ್ಟಿಯಿಂದ ಹೇಳಿದರೂ ಇಂತಹ ಪೌರ್ವಾಪರ್ಯವನ್ನು ಒಬ್ಬನೇ ವ್ಯಕ್ತಿಯಲ್ಲಿ ಹೇಳುವುದು ಅನಿವಾರ್ಯ. ಆದ್ದರಿಂದ ಆಕಾಶಾದಿಶಬ್ದಗಳಿಂದ ಭೌತಿಕಪದಾರ್ಥಗಳೇ ಪ್ರತಿಪಾದ್ಯವಾಗುತ್ತವೆ. 'ನಾಮಾನಿ ಸರ್ವಾಣಿ' ಎಂಬ ಶ್ರುತಿಯಲ್ಲಿರುವ ಸರ್ವಶಬ್ದಕ್ಕೆ ಇಂತಹ ಶಬ್ದಗಳನ್ನು ಬಿಟ್ಟು, ಬೇರೆ ಶಬ್ದಗಳಿಂದ ಪ್ರತಿಪಾದ್ಯನೆಂದು ಸಂಕುಚಿತವಾದ ಅರ್ಥವನ್ನು ಹೇಳಬೇಕು. ಆದ್ದರಿಂದ ಸಮನ್ವಯಸೂತ್ರದಲ್ಲಿ ಮಾಡಿದ ಸಕಲಶಬ್ದಸಮನ್ವಯದ ಪ್ರತಿಜ್ಞೆಯು ಅಸಾಧುವಾಗಿದೆ. ಇಷ್ಟು ಪೂರ್ವಪಕ್ಷ.

ಸಿದ್ಧಾಂತ - ಇಲ್ಲಿರುವ ಆಕಾಶಶಬ್ದದಿಂದಲೂ ಮಹಾವಿಷ್ಣುವೇ ಮುಖ್ಯವಾಗಿ ಪ್ರತಿಪಾದ್ಯನು. ಆತ್ಮರೂಪಿಯಾದ ವಿಷ್ಣುವಿನಿಂದ ಆಕಾಶರೂಪಿಯಾದ ವಿಷ್ಣುವು ಅಭಿವ್ಯಕ್ತನಾಗುತ್ತಾನೆ. ಭೂತಾಕಾಶಾದಿಗಳಿಗೆ ನಿಯಾಮಕವಾದ ಭಗವದ್ರೂಪಕ್ಕೆ 'ಆಕಾಶ' ಎಂದು ಹೆಸರು. ಇಂತಹ ಭಗವದ್ರೂಪದ ಅಭಿವ್ಯಕ್ತಿಯನ್ನು ಹೇಳುವುದೇ ಶ್ರುತಿಯ ಮುಖ್ಯ ಉದ್ದೇಶ. ಇದರಂತೆ ಆಕಾಶ ಎಂಬ ವಿಷ್ಣುವಿನ ರೂಪದಿಂದ ವಾಯುವಿಗೆ ನಿಯಾಮಕವಾದ ವಾಯು ಎಂಬ ವಿಷ್ಣುವಿನ ರೂಪವು ಅಭಿವ್ಯಕ್ತವಾಗುತ್ತದೆ. ಆದ್ದರಿಂದ ಆತ್ಮ ಎಂಬ ರೂಪದಿಂದ ವಿಷ್ಣು ಮುಖ್ಯಕಾರಣನಾಗಿದ್ದಾನೆ. ಆಕಾಶ ಮೊದಲಾದ ರೂಪದಿಂದ ಕಾರ್ಯಸ್ವರೂಪನಾಗಿದ್ದಾನೆ. ಮತ್ತು ಮುಂದಿನ ವಾಯುವಿಗೆ ಕಾರಣಸ್ವರೂಪನಾಗಿದ್ದಾನೆ ಹೀಗೆ ಒಬ್ಬನೇ ಪರಮಾತ್ಮನು ಕಾರ್ಯನೂ, ಕಾರಣನೂ ಆಗಿದ್ದಾನೆಂದು ತಿಳಿಯಬೇಕು. ಒಬ್ಬನೇ ಮಹಾವಿಷ್ಣುವಿನಲ್ಲಿ ಇಂತಹ ಕಾರ್ಯತ್ವ, ಕಾರಣತ್ವಗಳೆರಡೂ ಅಚಿಂತ್ಯಾದ್ಭುತಶಕ್ತಿಯಿಂದ ಕೂಡುತ್ತವೆ. ತನಗಿಂತ ತಾನೇ ಮೊದಲು ಇರುತ್ತಾನೆಂದು ಹೇಳಿದರೆ ವ್ಯಾಹತವಾಗುವುದೇ ಇಲ್ಲ. ಯಾವ ಪದಾರ್ಥದಲ್ಲಿ ಕಾರ್ಯತ್ವ, ಕಾರಣತ್ವಗಳೆರಡೂ ಇರುತ್ತವೋ ಅದನ್ನು ಅವಾಂತರಕಾರಣವೆಂದು ಕರೆಯುತ್ತಾರೆ. ಆಕಾಶವೆಂಬ ಭಗವದ್ರೂಪವು ಆತ್ಮರೂಪದ ಕಾರ್ಯವಾಗಿದೆ. ವಾಯುರೂಪಕ್ಕೆ ಕಾರಣವಾಗಿದೆ. ಆದ್ದರಿಂದ ಅವಾಂತರಕಾರಣತ್ವ ಎಂಬ ಧರ್ಮವೂ ವಿಷ್ಣುವಿನಲ್ಲಿ ಹೇಳಿದಂತಾಗುತ್ತದೆ. ಇಂತಹ ಧರ್ಮದ ಸಮನ್ವಯವೇ ಈ ಅಧಿಕರಣದ ಉದ್ದೇಶ. ಸೂತ್ರದಲ್ಲಿರುವ 'ಚ'ಶಬ್ದವು ವಿಷ್ಣು ಪ್ರಧಾನಕಾರಣನಷ್ಟೇ ಅಲ್ಲ, ಅವಾಂತರಕಾರಣನೂ ಆಗಿದ್ದಾನೆಂದು ತಿಳಿಸುತ್ತಿದೆ.

ಭೂತಾಕಾಶದಲ್ಲಿ ವಿಷ್ಣುವಿನ ಆಕಾಶ ಎಂಬ ರೂಪವಿಶೇಷವಿದೆ ಎನ್ನಲು ಆಧಾರವನ್ನು 'ಯಥಾ ವ್ಯಪದಿಷ್ಟೋಕ್ತೇಃ' ಎಂಬ ಸೂತ್ರದ ಭಾಗದಿಂದ ಹೇಳಿದ್ದಾರೆ. ಬೃಹದಾರಣ್ಯಕೋಪನಿಷತ್ತಿನಲ್ಲಿ 'ಯ ಆಕಾಶೇ ತಿಷ್ಠನ್ ಆಕಾಶಸ್ಯ ಅಂತರಃ ಯಮ್ ಆಕಾಶೋ ನ ವೇದ ಯಸ್ಯ ಆಕಾಶಃ ಶರೀರಮ್ ಯ ಆಕಾಶಮಂತರೋ ಯಮಯತಿ ಸ ತೇ ಆತ್ಮಾ ಅಂತರ್ಯಾಮ್ಯಮೃತಃ' ಹೀಗೆ ಆಕಾಶಾದಿಗಳಲ್ಲಿ ನಿಯಾಮಕವಾಗಿ ಭಗವದ್ರೂಪವಿದೆ ಎಂದು ಹೇಳಲಾಗಿದೆ. ಈ ಬೃಹದಾರಣ್ಯಕೋಪನಿಷತ್ತಿನಲ್ಲಿ ಪರಮಾತ್ಮನೇ ಅಂತರ್ಯಾಮಿಯಾಗಿ ವಿವಕ್ಷಿತನಾಗಿದ್ದಾನೆನ್ನಲು ಐತರೇಯ ಆರಣ್ಯಕದಲ್ಲಿ 'ಸ ಯೋತೋSಶ್ರುತಃ ಎಂದು ವಿಷ್ಣು ಅಜ್ಞೇಯನಾಗಿದ್ದಾನೆಂದು ಹೇಳಲಾಗಿದೆ. ಅಂತಹ ಅಜ್ಞೇಯತ್ವವನ್ನೇ ಇಲ್ಲಿಯೂ ಕೂಡ 'ಯಂ ಆಕಾಶೋ ನ ವೇದ' ಎಂದು ಹೇಳಲಾಗಿದೆ. ಆದ್ದರಿಂದ ಬೃಹದಾರಣ್ಯಕೋಪನಿಷತ್ತು ನಿಯಾಮಕವಾದ ರೂಪವನ್ನೇ ಹೇಳುತ್ತಿದೆಯೆಂದು ನಿರ್ಣಯವಾಗುತ್ತದೆ. ಅದರಂತೆ ಪ್ರಕೃತದಲ್ಲಿಯೂ 'ಆತ್ಮನಃ ಆಕಾಶಸ್ಸಂಭೂತಃ' ಇತ್ಯಾದಿ ವಾಕ್ಯಗಳಲ್ಲಿ ಅಂತರ್ಯಾಮಿಯಾದ ವಿಷ್ಣುವೇ ಆಕಾಶಾದಿ ಪದಗಳಿಂದ ಪ್ರತಿಪಾದ್ಯನಾಗಿದ್ದಾನೆ. ಇಷ್ಟು 'ಯಥಾ ವ್ಯಪದಿಷ್ಟೋಕ್ತೇಃ' ಎಂಬ ಸೂತ್ರದ ಭಾಗದ ಅಭಿಪ್ರಾಯ.

ಸಮಾಕರ್ಷಾಧಿಕರಣ

ತತ್ವಪ್ರದೀಪಕಾರರು ಸಮಾಕರ್ಷಾಧಿಕರಣವನ್ನು ಪ್ರತ್ಯೇಕವೆಂದು ಪರಿಗಣಿಸಿಯೇ ಇಲ್ಲ. 'ಕಾರಣತ್ವೇನ ಚ ಆಕಾಶಾದಿಷು' ಇತ್ಯಾದಿ ಹಿಂದಿನ ಅಧಿಕರಣದ ಸೂತ್ರದ ಅಂಗವಾಗಿದೆಯೆಂದು ಅಭಿಪ್ರಾಯ ಪಡುತ್ತಾರೆ. ಆದರೆ ಎಂಟು ಸೂತ್ರಗಳನ್ನು ಸೇರಿಸಿ ಇದನ್ನು ಪ್ರತ್ಯೇಕ ಅಧಿಕರಣವೆಂದು ಪರಿಗಣಿಸಬೇಕೆಂದು ಟೀಕಾಕಾರರು ಅಭಿಪ್ರಾಯ ಪಡುತ್ತಾರೆ. ಹೀಗೆ ತತ್ವಪ್ರದೀಪಕಾರರ ಪಕ್ಷಕ್ಕೂ, ಟೀಕಾಕಾರರ ಪಕ್ಷಕ್ಕೂ ಮೇಲ್ನೋಟಕ್ಕೆ ವಿರೋಧ ಕಾಣಿಸುತ್ತದೆ. ಈ ವಿರೋಧವನ್ನು ಪ್ರಕೃತ ಗ್ರಂಥಕಾರರು ಪರಿಹರಿಸಲು ಹೊರಟಿದ್ದಾರೆ.

ಅನುವ್ಯಾಖ್ಯಾನದಲ್ಲಿ 'ವಿರೋಧಿಸರ್ವಬಾಹುಲ್ಯಕಾರಣಸ್ತ್ರೀನಿಷೇಧಿನಾಮ್' ಎಂಬ ಶ್ಲೋಕದಿಂದ ನಾಲ್ಕನೇ ಪಾದದಲ್ಲಿರುವ ಎಲ್ಲಾ ಅಧಿಕರಣಗಳ ಉಪಾಧಿಯನ್ನು ಸಂಗ್ರಹಿಸಿದ್ದಾರೆ. ಆ ಸಂದರ್ಭದಲ್ಲಿ ಸಮಾಕರ್ಷಾಧಿಕರಣದಲ್ಲಿ ಸಂಬಂಧಪಟ್ಟ ಉಪಾಧಿಯನ್ನು ಸಂಗ್ರಹಿಸಿಲ್ಲ. ಅಷ್ಟೇ ಅಲ್ಲದೇ 'ಸರ್ವಮಾನ್ಯೆರ್ವಿರೋಧಶ್ಚ' ಇತ್ಯಾದಿ ಶ್ಲೋಕದಿಂದ ಪ್ರತಿಯೊಂದು ಅಧಿಕರಣಗಳ ಪೂರ್ವಪಕ್ಷಯುಕ್ತಿ ಹಾಗೂ ಸಿದ್ಧಾಂತಯುಕ್ತಿಗಳನ್ನು ಸಂಗ್ರಹಿಸುವಾಗಲೂ, ಸಮಾಕರ್ಷಾಧಿಕರಣದ ಯುಕ್ತಿಯನ್ನು ಸಂಗ್ರಹಿಸಿರುವುದಿಲ್ಲ. ಹೀಗೆ ಶ್ರೀಮದಾಚಾರ್ಯರ ವಾಕ್ಯಗಳನ್ನು ಗಮನಿಸಿದಾಗಲೂ ತತ್ವಪ್ರದೀಪಕಾರರ ಪಕ್ಷವೇ ಸಾಧುವಾಗಿದೆಯೆಂದು ತಿಳಿಯುತ್ತದೆ. ಭಾಷ್ಯದಲ್ಲಿಯೂ ಕೂಡ ಈ ಅಧಿಕರಣದಲ್ಲಿ ಸಮನ್ವಯ ಮಾಡಲ್ಪಡುವ ಶಬ್ದಗಳನ್ನು ಪ್ರತ್ಯೇಕವಾಗಿ ಉಲ್ಲೇಖ ಮಾಡಿಲ್ಲ. ಆದ್ದರಿಂದ ಹೇಗೆ 'ಸಾಕ್ಷಾದಪ್ಯವಿರೋಧಂ ಜೈಮಿನಿಃ' ಇತ್ಯಾದಿ ಸೂತ್ರಗಳನ್ನು ವೈಶ್ವಾನರಾಧಿಕರಣದ ಅಂಗಸೂತ್ರಗಳೆಂದು ಪರಿಗಣಿಸಿದ್ದರೋ, ಅದರಂತೆ ಹಿಂದಿನ ಆಕಾಶಾಧಿಕರಣದ ಅಂಗಸೂತ್ರಗಳೆಂದು ಈ ಎಂಟು ಸೂತ್ರಗಳನ್ನು ಪರಿಗಣಿಸಬೇಕು ಹೊರತು, ಪ್ರತ್ಯೇಕ ಅಧಿಕರಣವೆಂದು ಹೇಳಬಾರದು. ಇಷ್ಟು ವಿಚಾರವು ತತ್ವಪ್ರದೀಪವನ್ನು ನೋಡಿದಾಗ ಭಾಸವಾಗುತ್ತದೆ.

ತತ್ವಪ್ರದೀಪಕಾರರು ಹೇಳುವಂತೆ ಹಿಂದಿನ ಅಧಿಕರಣದ ಅಂಗಸೂತ್ರಗಳೆಂದೇ ಇವುಗಳನ್ನು ಪರಿಗಣಿಸುವುದು ತಪ್ಪಾಗುವುದಿಲ್ಲ. ಆದರೂ ಕೂಡ ಟೀಕಾಕಾರರು ಪ್ರತ್ಯೇಕ ಅಧಿಕರಣವೆಂದು ಹೇಳಿದ್ದಾರೆ. ಟೀಕಾಕಾರರ ಪಕ್ಷವೂ ಕೂಡ ಸಾಧುವೇ ಆಗಿದೆ. ಹೇಗೆಂದರೆ ಪೂರ್ವಮೀಮಾಂಸೆಯಲ್ಲಿ 'ಹೇತುದರ್ಶನಾಚ್ಚ' ಎಂಬ ಸೂತ್ರವನ್ನು ವಿರೋಧಾಧಿಕರಣದ ಅಂಗಸೂತ್ರವೆಂದು ಕೆಲವರು ಹೇಳಿದರೆ ಬೇರೆ ಕೆಲವರು ಪ್ರತ್ಯೇಕ ಅಧಿಕರಣವೆಂದೇ ಪರಿಗಣಿಸುತ್ತಾರೆ. ಅಭಿಪ್ರಾಯಭೇದದಿಂದ 'ಹೇತುದರ್ಶನಾಚ್ಚ' ಎಂಬ ಒಂದೇ ಸೂತ್ರವು ಹಿಂದಿನ ಅಧಿಕರಣದ ಅಂಗವೂ ಆಗುತ್ತದೆ. ಪ್ರತ್ಯೇಕ ಅಧಿಕರಣವೂ ಆಗುತ್ತದೆ.

ಅದರಂತೆ 'ಸಮಾಕರ್ಷಾತ್' ಇವೇ ಮೊದಲಾದ ಸೂತ್ರಗಳು ತ್ರಿವಿಕ್ರಮಪಂಡಿತರ ಅಭಿಪ್ರಾಯದಂತೆ ಹಿಂದಿನ ಅಧಿಕರಣದ ಅಂಗಸೂತ್ರಗಳೂ ಆಗುತ್ತವೆ. ಟೀಕಾಕಾರರ ಅಭಿಪ್ರಾಯದಂತೆ ಪ್ರತ್ಯೇಕ ಅಧಿಕರಣವೂ ಕೂಡ ಆಗುತ್ತವೆ. ಆದ್ದರಿಂದ ಇಬ್ಬರ ಅಭಿಪ್ರಾಯದಲ್ಲಿ ವಿರೋಧವನ್ನು ತಿಳಿಯಬಾರದು.

ಈ ಅಧಿಕರಣದಲ್ಲಿ ಯಾವುದೇ ಶಬ್ದವನ್ನು ಸಮನ್ವಯ ಮಾಡುತ್ತಿಲ್ಲ ಹೊರತಾಗಿ ಸಮನ್ವಯದ ವಿಷಯದಲ್ಲಿರುವ ಆಕ್ಷೇಪವನ್ನಷ್ಟೇ ಪರಿಹರಿಸುತ್ತಿದ್ದಾರೆ.

'ಕಲ್ಪನೋಪದೇಶಾತ್' ಎಂಬ ಸೂತ್ರವು ಪ್ರತಿಯೊಂದು ಶಬ್ದಗಳು ಲೋಕದಲ್ಲಿಯೂ ಕೂಡ ಮುಖ್ಯವೃತ್ತಿಯಿಂದಲೇ ಇರುತ್ತವೆಂದು ಸಮರ್ಥಿಸಿತು. ಹಾಗಾದರೆ ಯಾವುದೇ ಶಬ್ದವನ್ನು ಕೇಳಿದಾಗ ಪರಮಾತ್ಮನನ್ನು ಹಾಗೂ ಲೌಕಿಕಪದಾರ್ಥವನ್ನು ಅದು ಪ್ರತಿಪಾದನೆ ಮಾಡುತ್ತದೆಂದು ಹೇಳಿದಂತಾಯಿತು. ಆದರೆ ಪರಮಮುಖ್ಯವೃತ್ತಿಯಿಂದ ವಿಷ್ಣುವನ್ನು ಪ್ರತಿಪಾದನೆ ಮಾಡಿ, ಮುಖ್ಯವೃತ್ತಿಯಿಂದಷ್ಟೇ ಲೌಕಿಕವಸ್ತುವೊಂದನ್ನು ಪ್ರತಿಪಾದನೆ ಮಾಡುತ್ತವೆಂದು ತಿಳಿಯಬೇಕು. ಹೀಗೆ ಹೇಳಿದಾಗ ಲೌಕಿಕ ಪದಾರ್ಥಗಳಲ್ಲಿ ಶಬ್ದವೃತ್ತಿಯು ಹೀನವಾಗಿದೆಯೆಂದು ಹೇಳಿದಂತಾಗುತ್ತದೆ. ಹಾಗಾದರೆ ಲಕ್ಷಣಾವೃತ್ತಿ ಮೊದಲಾದವು ಮುಖ್ಯವೃತ್ತಿಯ ಪ್ರಭೇದವೆಂದೇ ಒಪ್ಪಬೇಕಾಗುತ್ತದೆಂಬುದು ಪೂರ್ವಪಕ್ಷಕಾರರ ಆಕ್ಷೇಪ. ಸ್ವಾತಂತ್ರ್ಯವನ್ನು ಪ್ರವೃತ್ತಿನಿಮಿತ್ತವೆಂದೇನೋ ಒಪ್ಪಿರಿ. ತದ್ಗತತ್ವಕ್ಕಿಂತ ಮುಖ್ಯತ್ವವನ್ನು ಸ್ವಾತಂತ್ರ್ಯದಲ್ಲಿ ಹೇಳಲು ಸರ್ವಥಾ ಸಾಧ್ಯವಿಲ್ಲ. ಪರಮಾತ್ಮನಲ್ಲಿ ಪರಮಮುಖ್ಯವೃತ್ತಿಯಿಂದ ಪ್ರತಿಪಾದ್ಯವಾದ ಶಬ್ದಗಳು ಲೌಕಿಕಪದಾರ್ಥಗಳಲ್ಲಿ ನೀಚವೃತ್ತಿಯಿಂದ ಇರುತ್ತವೆಂದು ಹೇಳಬಾರದು. ಪರಮಾತ್ಮನನ್ನು ಪ್ರತಿಪಾದನೆ ಮಾಡಿದಂತೆ ಲೌಕಿಕಪದಾರ್ಥಗಳನ್ನೂ ಕೂಡ ಪ್ರತಿಪಾದನೆ ಮಾಡುತ್ತವೆಂಬುದು ಪೂರ್ವಪಕ್ಷ.

ಶಬ್ದಗಳು ಪರಮಾತ್ಮನನ್ನು ಮುಖ್ಯವಾಗಿ ಪ್ರತಿಪಾದನೆ ಮಾಡುವಂತೆ ಲೌಕಿಕಪದಾರ್ಥಗಳನ್ನೂ ಕೂಡ ಮುಖ್ಯವಾಗಿಯೇ ಪ್ರತಿಪಾದಿಸುತ್ತವೆ. ಹಾಗಾದರೆ ಅಶ್ವಾದಿಶಬ್ದಗಳಂತೆ ಪ್ರತಿಯೊಂದು ಶಬ್ದಗಳೂ ಕೂಡ ಅನೇಕಾರ್ಥಗಳಾಗಬೇಕಾದೀತಲ್ಲವೇ? ಎಂಬ ಆಶಂಕೆಗೆ ಹೀಗೆ ಉತ್ತರಿಸಬೇಕು. ಮುಖ್ಯವೃತ್ತಿಯಲ್ಲಿ ಪರಸ್ಪರ ತಾರತಮ್ಯವಿದೆ. ಅದರಲ್ಲಿಯೂ ಕೂಡ ರೂಢಿಯಲ್ಲಿ ತಾರತಮ್ಯವಿದೆ. ಯೋಗದಲ್ಲಿಯೂ ತಾರತಮ್ಯವಿದೆ. ಯಾವರೀತಿಯಾಗಿ ಗೌಣೀವೃತ್ತಿ, ಲಕ್ಷಣಾವೃತ್ತಿಗಳಲ್ಲಿ ತಾರತಮ್ಯವಿದೆಯೋ, ಲಕ್ಷಣಾವೃತ್ತಿಯಲ್ಲಿಯೂ ಕೂಡ ಅಂತರಂಗಲಕ್ಷಣಾ, ಬಹಿರಂಗಲಕ್ಷಣಾಗಳಲ್ಲಿ ತಾರತಮ್ಯವಿದೆಯೋ, ಉಪಚಾರ ರೂಢೋಪಚಾರಗಳಲ್ಲಿ ತಾರತಮ್ಯವಿದೆಯೋ, ಅದರಂತೆ ಅವಿದ್ವದ್ರೂಢಿ, ವಿದ್ವದ್ರೂಢಿಗಳಲ್ಲಿಯೂ ತಾರತಮ್ಯವಿದೆ. ಅಂದರೆ ಮತ್ತು ಅವಿದ್ವದ್ರೂಢಿಗಿಂತಲೂ ವಿದ್ವದ್ರೂಢಿಯು ಪ್ರಬಲವಾಗಿರುತ್ತದೆ. ಮತ್ತು ಯೋಗಕ್ಕಿಂತಲೂ ಮಹಾಯೋಗವು ಪ್ರಬಲವಾಗಿರುತ್ತದೆ. ಹಾಗಾಗಿ ಲೋಕದಲ್ಲಿ ಶಬ್ದಗಳು ಅವಿದ್ವದ್ರೂಢಿಯಿಂದ ಪ್ರಸಿದ್ಧವಾಗಿರುತ್ತವೆ. ಮತ್ತು ಕೇವಲ ಯೋಗರೂಢಿಯಿಂದ ಪ್ರಸಿದ್ಧವಾಗಿರುತ್ತದೆ. ಆದರೆ ಮಹಾವಿಷ್ಣುವಿನಲ್ಲಿ ವಿದ್ವದ್ರೂಢಿಯಿಂದ ಮತ್ತು

ಮಹಾಯೋಗದಿಂದಷ್ಟೇ ಶಬ್ದಗಳು ಸಮನ್ವಯಗೊಳ್ಳುತ್ತವೆ. ಪರಮಾತ್ಮನಲ್ಲಿ ಶಬ್ದಗಳು ವಿದ್ವದ್ರೂಢಿಯಿಂದ ಇರುತ್ತವೆಂದು ಹೇಳಿದಾಗಲೇ ಪ್ರಾಬಲ್ಯವು ಸಿದ್ಧವಾಗುತ್ತದೆ. ಮಹಾಯೋಗವೃತ್ತಿಯಿಂದಲೂ ಇರುತ್ತದೆಂದು ಹೇಳಿದಾಗ ಪ್ರಾಬಲ್ಯವು ಸುತರಾಂ ಸಿದ್ಧವಾಗುತ್ತದೆ. ಆದ್ದರಿಂದ ಅಕ್ಷಾದಿಶಬ್ದಗಳಂತೆ ಎಲ್ಲಾ ಶಬ್ದಗಳೂ ಅನೇಕಾರ್ಥಗಳಾಗಲೀ ಎಂಬ ಆಶಂಕೆಯು ಉದಯವಾಗುವುದಿಲ್ಲ.

ಮೇಲೆ ಹೇಳಿದ ಈ ವಿಷಯವನ್ನು ಅನೇಕ ಸೂತ್ರಗಳಲ್ಲಿ ಸಮರ್ಥಿಸಲಾಗಿದೆ. ಆದ್ದರಿಂದ ಪುನರುಕ್ತಿ ಬರುತ್ತದಲ್ಲವೇ? ಎಂಬ ಆಶಂಕೆಯು ಆಪಾತತಃ ಪ್ರಾಪ್ತವಾಗುತ್ತದೆ. ಆದರೆ ಸೂತ್ರಕಾರರ ವಿಭಿನ್ನವಾದ ವಿವಕ್ಷೆಗಳನ್ನು ಏಕಾಗ್ರತೆಯಿಂದ ಗಮನಿಸಬೇಕು. 'ಸಾಕ್ಷಾದಪ್ಯವಿರೋಧಂ ಜೈಮಿನಿಃ' ಎಂಬ ಸೂತ್ರದಲ್ಲಿ ಸೂತ್ರಕಾರರು ಹಾನಾದಿ ವ್ಯವಹಾರಕ್ಕೋಸ್ಕರ ಮಾತ್ರ ಶಬ್ದಗಳನ್ನು ಬೇರೆಡೆ ಉಪಯೋಗಿಸುತ್ತಾರೆ ಎಂದು ಹೇಳಿದ್ದಾರೆ. 'ಶರೀರರೂಪಕವಿನ್ಯಸ್ತಗೃಹಿತೇಃ' ಎಂಬ ಸೂತ್ರದಲ್ಲಿ ಈಶ್ವರನ ಸಂಬಂಧದಿಂದಷ್ಟೇ ಶಬ್ದಗಳು ಲೌಕಿಕಾರ್ಥಗಳನ್ನು ಪ್ರತಿಪಾದನೆ ಮಾಡುತ್ತವೆಂದು ಹೇಳಿದ್ದಾರೆ. 'ಕಲ್ಪನೋಪದೇಶಾತ್' ಎಂಬ ಸೂತ್ರದಲ್ಲಿ ಲೌಕಿಕಪದಾರ್ಥಗಳಲ್ಲಿ ಲಕ್ಷಣಾವೃತ್ತಿಯನ್ನು ಒಪ್ಪಿದಂತಾಗುವುದಿಲ್ಲವೆಂದು ಸಮರ್ಥಿಸಿದ್ದಾರೆ. 'ಸಮಾಕರ್ಷಾತ್' ಎಂಬ ಈ ಅಧಿಕರಣದ ಸೂತ್ರದಲ್ಲಿ ಅಕ್ಷಾದಿಶಬ್ದಗಳಂತೆ ಸಕಲಶಬ್ದಗಳು ನಾನಾರ್ಥಕಗಳಾಗುವುದಿಲ್ಲವೆಂದು ಸಮರ್ಥಿಸಿದ್ದಾರೆ. 'ಜಗದ್ವಾಚಿತ್ವಾತ್' ಎಂಬ ಸೂತ್ರದಲ್ಲಿ ಬಾಲಕರು ಚಿತ್ರಲಿಖಿತ ಸಿಂಹವನ್ನು ನೋಡಿ, ಸಿಂಹವೆಂದು ಪ್ರಯೋಗಿಸುವಂತೆ ಅಜ್ಞರು ಪರಮಾತ್ಮನನ್ನು ಪ್ರತಿಪಾದನೆ ಮಾಡುವ ಶಬ್ದಗಳನ್ನು ಲೋಕದಲ್ಲಿ ವ್ಯವಹರಿಸುತ್ತಾರೆ ಎಂದು ಸಮರ್ಥಿಸುತ್ತಾರೆ. 'ಜೀವಮುಖ್ಯಪ್ರಾಣಲಿಂಗಾನ್ನೇತಿ ಚೇತ್ ನ' ಎಂಬ ಸೂತ್ರದಲ್ಲಿ ತದಧೀನತ್ವನ್ಯಾಯದಿಂದ ಸಕಲ ಶಬ್ದಗಳು ವಿಷ್ಣುವನ್ನು ಪ್ರತಿಪಾದನೆ ಮಾಡುವುದಾದರೆ, ಮುಖ್ಯಪ್ರಾಣ ದೇವರನ್ನೂ ಕೂಡ ಪ್ರತಿಪಾದನೆ ಮಾಡಲಿ ಎಂಬ ಆಶಂಕೆಯನ್ನು ನಿರಾಕರಿಸಿದ್ದಾರೆ. 'ಅನ್ಯಾರ್ಥಂ ತು ಜೈಮಿನಿಃ' ಎಂಬ ಸೂತ್ರದಲ್ಲಿ ಬ್ರಹ್ಮಜ್ಞಾನಕ್ಕೋಸ್ಕರವೇ ಜ್ಞಾನಿಗಳು ಭಗವತ್ ಪ್ರತಿಪಾದಕ ಶಬ್ದಗಳನ್ನು ಕರ್ಮಾದಿಗಳಲ್ಲಿ, ದೇವತಾದಿಗಳಲ್ಲಿ ಪ್ರತಿಪಾದನೆ ಮಾಡುತ್ತಾರೆ ಎಂದು ಸಮರ್ಥಿಸಿದ್ದಾರೆ. ಹೀಗೆ ಪ್ರತಿಯೊಂದು ಸೂತ್ರಗಳಲ್ಲಿಯೂ ಭಿನ್ನ-ಭಿನ್ನವಾದ ಅಭಿಪ್ರಾಯವನ್ನು ತಾಳಿರುವುದರಿಂದ ಪರಸ್ಪರ- ಸೂತ್ರಗಳಲ್ಲಿ ಪುನರುಕ್ತಿದೋಷಕ್ಕೆ ಅವಕಾಶವಿಲ್ಲ.

ಪ್ರತಿಯೊಂದು ಶಬ್ದಗಳು ಬ್ರಹ್ಮನನ್ನೇ ಪ್ರತಿಪಾದನೆ ಮಾಡುತ್ತವೆ. ಅಂತಹ ಶಬ್ದಗಳನ್ನು ಸಮಾಕರ್ಷಣ ಮಾಡಿ, ಕರ್ಮ, ದೇವತಾದಿಗಳನ್ನು ತಿಳಿಯಬೇಕು. ಕರ್ಮ, ದೇವತೆ ಮೊದಲಾದವುಗಳನ್ನು ಪ್ರತಿಪಾದನೆ ಮಾಡುವ ಶಬ್ದಗಳಿಗೆ ಪರಮಾತ್ಮನನ್ನು ತಿಳಿಯುವುದರಲ್ಲೇ ಮುಖ್ಯತಾತ್ಪರ್ಯವಿರುತ್ತದೆ. ಹೇಗೆಂದರೆ ಒಂದು ಮಣ್ಣಿನ ಮುದ್ದೆಯನ್ನು ತಿಳಿದರೆ ಮಣ್ಣಿನಿಂದಾಗುವ ಎಲ್ಲ ವಸ್ತುಗಳು ತಿಳಿಯುತ್ತವೆ. ಅದರಂತೆ ಪರಮಾತ್ಮನ ಜ್ಞಾನದಿಂದ ಎಲ್ಲಾ ಕರ್ಮಾದಿಗಳನ್ನು ತಿಳಿದಂತಾಗುತ್ತದೆ. ಒಂದುವೇಳೆ ವೈದಿಕಶಬ್ದಗಳನ್ನು

ಹೀಗೆ ಬೇರೆಡೆ ಸಮಾಕರ್ಷಣ ಮಾಡದಿದ್ದರೆ, ಬ್ರಹ್ಮನನ್ನಷ್ಟೇ ಪ್ರತಿಪಾದನೆ ಮಾಡುವುದಾದರೆ, ಮಂದರು ವೇದವನ್ನು ಅಧ್ಯಯನ ಮಾಡಲು ತೊಡಗುವುದೇ ಇಲ್ಲ. ಅಷ್ಟೇ ಅಲ್ಲದೇ ಪ್ರತಿಯೊಂದು ಪದಗಳು ಬ್ರಹ್ಮನ ಹೆಸರುಗಳಾದ್ದರಿಂದ ಪರಸ್ಪರ ಅನ್ವಯವನ್ನು ಹೊಂದದೇ ವಾಕ್ಯದ ಅರ್ಥವೇ ಸಿದ್ಧವಾಗದಿರಬೇಕಾದೀತು. 'ಯತೋ ವಾ ಇಮಾನಿ ಭೂತಾನಿ ಜಾಯಂತೇ' ಮತ್ತು 'ಯತೋ ವಾಚೋ ನಿವರ್ತಂತೇ' ಇತ್ಯಾದಿ ವಾಕ್ಯವು ಸರ್ವಶಬ್ದವಾಚ್ಯತ್ವವನ್ನು ಬ್ರಹ್ಮನಲ್ಲಿ ಪ್ರತಿಪಾದನೆ ಮಾಡದಿರಬೇಕಾದೀತು. ಅಷ್ಟೇ ಅಲ್ಲದೇ ವೇದವು ವಿಧಿಸುವ ಶ್ರವಣಾದಿಗಳ ಜ್ಞಾನವು ಬಾರದಿರಬೇಕಾದೀತು. ಕರ್ಮದೇವತೆಗಳ ಜ್ಞಾನವೂ ಉಂಟಾಗದಿರಬೇಕಾದೀತು. ಇಂತಹವರು ಉತ್ತಮಾಧಿಕಾರಿಗಳು, ಇವರು ಅಧಮಾಧಿಕಾರಿಗಳು ಎಂಬ ವಿಷಯವೂ ಕೂಡ ತಿಳಿಯದಿರಬೇಕಾದೀತು. ಈ ಎಲ್ಲಾ ಕಾರಣಗಳಿಂದ ಬ್ರಹ್ಮನನ್ನು ಪ್ರತಿಪಾದನೆ ಮಾಡುವ ಶಬ್ದಗಳನ್ನು ಬೇರೆಡೆ ಸಮಾಕರ್ಷಣ ಮಾಡಿ, ಅರ್ಥವನ್ನು ನಾವು ತಿಳಿಯಲೇ ಬೇಕು. ಆದ್ದರಿಂದ ಯಾವುದೇ ಶಬ್ದಗಳು ಸ್ವಾರ್ಥವನ್ನು ಮೊದಲು ಪ್ರತಿಪಾದನೆ ಮಾಡಿ, ಅನಂತರ ಏಕವಾಕ್ಯತ್ವವನ್ನು ಹೊಂದಿ ವಾಕ್ಯಾರ್ಥಜ್ಞಾನವನ್ನು ತಂದುಕೊಡುತ್ತವೆ. ಅಂತಹ ಮಹಾವಾಕ್ಯದಿಂದ ಬ್ರಹ್ಮನು ಪ್ರತಿಪಾದ್ಯನಾಗುತ್ತಾನೆ. ಆದ್ದರಿಂದ ವೈದಿಕವಾಕ್ಯಗಳಲ್ಲಿರುವ ಪ್ರತ್ಯೇಕ ಪದಗಳು ಬ್ರಹ್ಮಭಿನ್ನವಾದ ಅರ್ಥವನ್ನು ಹೇಳುತ್ತಿದ್ದರೂ ಸಮಗ್ರವಾಕ್ಯವು ಪರಮಾತ್ಮನೊಂದಿಗೆ ಅನ್ವಯವನ್ನು ಹೊಂದುತ್ತದೆಂಬುದು 'ವಾಕ್ಯಾನ್ವಯಾತ್' ಎಂಬ ಸೂತ್ರದ ಅಭಿಪ್ರಾಯ.

'ಪ್ರತಿಜ್ಞಾಸಿದ್ಧೇರ್ಲಿಂಗಮಾಶ್ಮರಥ್ಯಃ' ಎಂಬ ಸೂತ್ರದಲ್ಲಿ ಮೋಕ್ಷಕ್ಕೆ ಜ್ಞಾನದ ಹೊರತು ಬೇರೆ ಸಾಧನ ಇರುವುದಿಲ್ಲ ಎಂಬ ಪ್ರತಿಜ್ಞೆಯ ಸಾಧನೆಗಾಗಿ, ಕರ್ಮಾದಿಗಳನ್ನು ಹೇಳಲಾಗಿದೆ. ಆದ್ದರಿಂದ ಕರ್ಮಾದಿಗಳನ್ನು ವೇದವು ಪ್ರತಿಪಾದನೆ ಮಾಡಿದರೂ ಕ್ಷುದ್ರಫಲಕ್ಕೋಸ್ಕರ ಮುಮುಕ್ಷು ಆದವನು ಪ್ರಯತ್ನಿಸಬಾರದು. ಶಾಶ್ವತ ಫಲವನ್ನು ನೀಡುವ ಬ್ರಹ್ಮಜ್ಞಾನದಲ್ಲಿಯೇ ಪ್ರಯತ್ನಿಸಬೇಕು ಎಂಬುದಾಗಿ ವೈರಾಗ್ಯಕ್ಕೋಸ್ಕರ ಕರ್ಮಕಾಂಡವು ಕರ್ಮವನ್ನು ಪ್ರತಿಪಾದನೆ ಮಾಡುತ್ತಿದೆ ಎಂದು ಆಶ್ಮರಥ್ಯಾಚಾರ್ಯರು ಹೇಳುತ್ತಾರೆ.

'ಉತ್ಕ್ರಮಿಷ್ಯತ ಏವಂಭಾವಾದಿತ್ಯೌಡುಲೋಮಿಃ' ಎಂಬ ಸೂತ್ರದಲ್ಲಿ ಧ್ಯಾನಕ್ಕಾಗಿ ಅಂತಃಕರಣವನ್ನು ಶುದ್ಧಿ ಮಾಡಬೇಕು. ಅಂತಃಕರಣಸಿದ್ಧಿಗೋಸ್ಕರ ಕರ್ಮಾಚರಣೆಯಲ್ಲಿ ತೊಡಗಬೇಕು. ಆವಾಗ ಅಂತಃಕರಣಶುದ್ಧಿಯಿಂದ ತತ್ವಜ್ಞಾನವನ್ನು ಸಂಪಾದನೆ ಮಾಡಿ, ಧ್ಯಾನದಲ್ಲಿ ತೊಡಗಬಹುದು. ಹೀಗೆ ಕರ್ಮಗಳೆಲ್ಲವೂ ಧ್ಯಾನಕ್ಕೆ ಸಾಧನವಾಗಿ ಆಚರಿಸಬೇಕೆಂದು ತಿಳಿಸಲು ಕರ್ಮಕಾಂಡವು ಹೊರಟಿರುತ್ತದೆಂದು ಔಡುಲೋಮಿ ಆಚಾರ್ಯರು ಹೇಳುತ್ತಾರೆ.

ಸಮಗ್ರ ಜಗತ್ತು ಬ್ರಹ್ಮನ ಅಧೀನವಾಗಿದೆ. ಕರ್ಮಗಳೂ ಕೂಡ ಬ್ರಹ್ಮನ ಅಧೀನವಾಗಿದೆ. ಎಲ್ಲವೂ ಕೂಡ ಬ್ರಹ್ಮನಲ್ಲಿ ಆಶ್ರಿತವಾಗಿವೆ. ಇದನ್ನು ತಿಳಿಯಬೇಕೆಂದರೆ ಜಗತ್ತನ್ನು ಹಾಗೂ ಕರ್ಮಗಳನ್ನು

ತಿಳಿಯಲೇಬೇಕು. ಅದಕ್ಕಾಗಿ ಕರ್ಮಕಾಂಡವು ಸಾರ್ಥಕವಾಗಿದೆ ಎಂದು ಕಾಶಕೃತ್ಸ್ನಾಚಾರ್ಯರು ಹೇಳುತ್ತಾರೆ. ಈ ವ್ಯಾಸರ ಶಿಷ್ಯರ ಅಭಿಪ್ರಾಯದಲ್ಲಿ ಮತ್ತು ಕರ್ಮವು ಬ್ರಹ್ಮಜ್ಞಾನಕ್ಕೆ ಅವಶ್ಯಕವೆಂದು ಹೇಳುವುದರಲ್ಲಿ ಅಂತರಂಗತ್ವವು ಇರುವುದರಿಂದ ಸೂತ್ರಕ್ರಮವಿನ್ಯಾಸವು ಸಾರ್ಥಕವಾಗಿದೆ. ಆಶ್ಮರಥ್ಯಾಚಾರ್ಯರಿಗಿಂತ ಔಡುಲೋಮಿಚಾರ್ಯರು, ಅವರಿಗಿಂತಲೂ ಕಾಶಕೃತ್ಸ್ನಾಚಾರ್ಯರು ಕರ್ಮಕ್ಕೆ ಹೆಚ್ಚಿನ ಅಂತರಂಗತ್ವವನ್ನು ಒಪ್ಪಿರುತ್ತಾರೆ. ಆದ್ದರಿಂದ ಸೂತ್ರಕ್ರಮವಿನ್ಯಾಸವು ಅತ್ಯಂತ ಸ್ವರಸವಾಗಿದೆ.

'ಸಮಾಕರ್ಷಾತ್' ಇತ್ಯಾದಿ ಸೂತ್ರಗಳನ್ನು ಅಧ್ಯಾಯದ ಕೊನೆಯಲ್ಲಿ ಹೇಳಬೇಕಿತ್ತಲ್ಲವೇ? ಏಕೆಂದರೆ ಪರಮಾತ್ಮನಲ್ಲಿ ಪ್ರತಿಯೊಂದು ಶಬ್ದಗಳ ಸಮನ್ವಯವನ್ನು ಮಾಡುವಾಗ ಬರುವಂತಹ ಬಾಧಕಗಳನ್ನು ಪರಿಹರಿಸಲಾಗಿದೆ. ಆದ್ದರಿಂದ ಅಧ್ಯಾಯದ ಕೊನೆಯಲ್ಲಿ ಇದನ್ನು ಹೇಳುವುದು ಹೆಚ್ಚು ಸ್ವರಸವಾಗುತ್ತಿತ್ತು ಎಂಬ ಪ್ರಶ್ನೆಯು ಪ್ರಾಪ್ತವಾಗುತ್ತದೆ. ಆದರೆ 'ಏತೇನ ಸರ್ವೇ ವ್ಯಾಖ್ಯಾತಾಃ' ಎಂಬ ಕೊನೆಯ ಸೂತ್ರದಲ್ಲಿ 'ಏತೇನ' ಎಂಬುದರಿಂದ ಹಿಂದೆ ಹೇಳಲ್ಪಟ್ಟ ಸಮಸ್ತ ಹೇತುಗಳನ್ನು ಪರಾಮರ್ಶಿಸುವುದರ ಜೊತೆಗೆ ಬಾಧಕೋದ್ಧಾರ ಪ್ರಕಾರವನ್ನೂ ಕೂಡ ಪರಾಮರ್ಶಿಸಲಾಗಿದೆ. ಒಂದುವೇಳೆ ಈ ಸಮಾಕರ್ಷಾಧಿಕರಣವನ್ನು ಅಧ್ಯಾಯದ ಕೊನೆಯಲ್ಲಿ ಹೇಳಿದ್ದರೆ 'ಏತೇನ' ಎಂಬ ಪದದಿಂದ ಈ ಬಾಧಕೋದ್ಧಾರ ಪ್ರಕಾರವನ್ನು ಪರಾಮರ್ಶಿಸಲು ಸಾಧ್ಯವಾಗುತ್ತಿರಲಿಲ್ಲ. ಅಷ್ಟೇ ಅಲ್ಲದೇ 'ಆತ್ಮನಃ ಆಕಾಶ ಸಂಭೂತಃ' ಎಂಬುದಾಗಿ ಹಿಂದಿನ ಅಧಿಕರಣದಲ್ಲಿ ಆಕಾಶಾದಿಶಬ್ದಗಳು ಬ್ರಹ್ಮನನ್ನೇ ಮುಖ್ಯವಾಗಿ ಪ್ರತಿಪಾದನೆ ಮಾಡುವುದಾದರೆ, ಭೂತಾಕಾಶಾದಿಗಳ ಉತ್ಪತ್ತಿಯೇ ಸಿದ್ಧವಾಗದಿರಬೇಕಾದೀತು ಎಂಬ ಪ್ರಬಲ ಬಾಧಕವು ಪ್ರಾಪ್ತವಾಗಿದೆ. ಅದನ್ನು ಪರಿಹರಿಸುವ ಜವಾಬ್ದಾರಿ ಈ ಸಮಾಕರ್ಷಾಧಿಕರಣಕ್ಕೆ ಇದ್ದಾಗ ಅಧ್ಯಾಯದ ಕೊನೆಯಲ್ಲಿ ಇದು ಅಸಂಗತವೇ ಆಗುತ್ತದೆ.

ಪ್ರಕೃತ್ಯಧಿಕರಣ

ಪ್ರಕೃತ್ಯಧಿಕರಣದಲ್ಲಿ ಎಲ್ಲಾ ಬಗೆಯ ಸ್ತ್ರೀಲಿಂಗಶಬ್ದಗಳನ್ನು ಶ್ರೀಹರಿಯಲ್ಲಿ ಪ್ರತಿಪಾದನೆ ಮಾಡಲಾಗಿದೆ. ಇದರ ಹಿಂದಿನ ಅಧಿಕರಣ ಸಮಾಕರ್ಷಾಧಿಕರಣ. ಆದರೆ ಗ್ರಂಥಕಾರರು ಆಕಾಶಾಧಿಕರಣದಿಂದ ಸಂಗತಿ ತೋರಿಸಿದ್ದಾರೆ. ಕಾರಣವೇನೆಂದರೆ ಸಮಾಕರ್ಷಾಧಿಕರಣದಲ್ಲಿರುವ ಸೂತ್ರಗಳು ಹೊಸ ನ್ಯಾಯವನ್ನು ಹೇಳುತ್ತಿರುವುದರಿಂದ ಪ್ರತ್ಯೇಕ ಅಧಿಕರಣವಾಗಿದ್ದರೂ 'ಕಾರಣತ್ವೇನ ಚ ಆಕಾಶಾದಿಷು' ಎಂಬ ಸೂತ್ರಕ್ಕೆ ಅಂಗಭೂತವೇ ಆಗಿವೆ. ಆದ್ದರಿಂದ

ಸಮಾಕರ್ಷಾಧಿಕರಣವನ್ನು ಪ್ರತ್ಯೇಕವಾಗಿ ಪರಿಗಣಿಸದೇ ಆಕಾಶಾಧಿಕರಣದಿಂದ ಸಂಗತಿ ತೋರಿಸಿರುತ್ತಾರೆ. ಆಕಾಶಾಧಿಕರಣದ ರೂಪಗಳಲ್ಲಿ ಭಗವಂತನ ಅಭಿವ್ಯಕ್ತಿತ್ವ ಹಾಗೂ ಅನಭಿವ್ಯಕ್ತಿತ್ವ ಎಂಬೆರಡು ವಿರುದ್ಧ ಧರ್ಮಗಳನ್ನು ಸಮರ್ಥಿಸಿ, 'ಆತ್ಮನಃ ಆಕಾಶ ಸಂಭೂತಃ' ಇತ್ಯಾದಿ ಶ್ರುತಿಗಳಲ್ಲಿರುವ ಆಕಾಶಾದಿಶಬ್ದಗಳಿಂದ ಪರಮಾತ್ಮನೇ ಪ್ರತಿಪಾದ್ಯನೆಂದು ಸಮರ್ಥಸಲಾಯಿತು. ಇದನ್ನು ಒಪ್ಪಬಹುದು. ಆದರೆ ಒಬ್ಬನೇ ಪರಮಾತ್ಮನಲ್ಲಿ ಸ್ತ್ರೀತ್ವ ಹಾಗೂ ಪುರುಷತ್ವ ಎರಡು ಬಗೆಯ ವಿರುದ್ಧಧರ್ಮಗಳು ಇರಲು ಸಾಧ್ಯವಿಲ್ಲ. ಲೋಕದಲ್ಲಿ ಸ್ತ್ರೀತ್ವವಿದ್ದಲ್ಲಿ ಪುರುಷತ್ವವು ಎಲ್ಲಿಯೂ ಕಂಡಿಲ್ಲ. ಈ ಆಕ್ಷೇಪದ ಪರಿಹಾರಕ್ಕಾಗಿ ಪ್ರಕೃತ್ಯಧಿಕರಣವು ಹೊರಟಿದೆ. ಪರಮಾತ್ಮನು ರಾಮ, ಕೃಷ್ಣ ಮೊದಲಾದ ಪುರುಷರೂಪಗಳನ್ನು ಹೇಗೆ ಪಡೆದಿದ್ದಾನೋ, ಅದರಂತೆ ನಾರಾಯಣೀ, ಮೋಹಿನೀ, ವಡವಾ ಮೊದಲಾದ ಅನೇಕ ಸ್ತ್ರೀರೂಪಗಳನ್ನೂ ಕೂಡ ಪಡೆದಿರುತ್ತಾನೆ. ಭಗವಂತನಿಗೆ ಪುರುಷರೂಪಗಳು ಎಷ್ಟು ಇವೆಯೋ, ಅಷ್ಟೇ ಸ್ತ್ರೀರೂಪಗಳು ನಮ್ಮ ದೇಹದಲ್ಲಿಯೂ ಕೂಡ ಇರುತ್ತವೆಂದು ಉಪನಿಷತ್ತುಗಳು ಪ್ರತಿಪಾದನೆ ಮಾಡುತ್ತಿವೆ. ಆದ್ದರಿಂದ ಒಬ್ಬನೇ ಪರಮಾತ್ಮನು ಸ್ತ್ರೀಲಿಂಗನೂ ಆಗುತ್ತಾನೆ. ಪುಲ್ಲಿಂಗನೂ ಆಗುತ್ತಾನೆ. ಶ್ರುತಿಯಲ್ಲಿ 'ಏಷಾ ಹ್ಯೇವ ಪ್ರಕೃತಿಃ' ಇತ್ಯಾದಿಯಾಗಿ ಪ್ರಕೃತ್ಯಾದಿ ಶಬ್ದಗಳು ಕೇಳಿಸುತ್ತಿವೆ. ಈ ಪ್ರಕೃತಿ ಮೊದಲಾದ ಶಬ್ದಗಳು ಸ್ತ್ರೀಯಾದ ಲಕ್ಷ್ಮೀದೇವಿಯನ್ನು ಮಾತ್ರ ಪ್ರತಿಪಾದನೆ ಮಾಡುತ್ತಿರುವುದಲ್ಲ. ಅದಕ್ಕಿಂತಲೂ ಮುಖ್ಯವಾಗಿ ಶ್ರೀಹರಿಯನ್ನು ಪ್ರತಿಪಾದನೆ ಮಾಡುತ್ತಿದೆ ಎಂದು ಸಮರ್ಥಿಸುವುದೇ ಈ ಅಧಿಕರಣದ ಉದ್ದೇಶ.

ಪ್ರಕೃತ್ಯಾದಿಶಬ್ದಗಳ ಸ್ತ್ರೀತ್ವವೆಂಬ ಪ್ರವೃತ್ತಿನಿಮಿತ್ತವು ಅರ್ಥಸಾಧುತ್ವಕ್ಕೆ ಕಾರಣವಾಗಿದೆ ಎಂದು ಸಿದ್ಧವಾದರೆ ಬ್ರಹ್ಮನಲ್ಲಿ ಅರ್ಥಸಾಧುತ್ವವು ಯುಕ್ತವಾಗದ ಕಾರಣ ಲಕ್ಷ್ಮ್ಯಾದಿಗಳೇ ಪ್ರತಿಪಾದ್ಯರಾಗುತ್ತಾರೆಂದು ಸಿದ್ಧವಾಗುತ್ತದೆ. ಇದು ಪೂರ್ವಪಕ್ಷಿಗಳ ಅಭಿಪ್ರಾಯ. ಪ್ರಸಿದ್ಧವಾದ ಸ್ತ್ರೀತ್ವಕ್ಕಿಂತ ವಿಭಿನ್ನವಾದ ಪ್ರವೃತ್ತಿನಿಮಿತ್ತವು ಇರುವುದರಿಂದ ಅರ್ಥಸಾಧುತ್ವವು ಬ್ರಹ್ಮನಲ್ಲಿ ಯುಕ್ತವಾಗುತ್ತದೆ ಆದ್ದರಿಂದ ಪ್ರಕೃತ್ಯಾದಿಶಬ್ದಗಳು ಬ್ರಹ್ಮನನ್ನೇ ಪ್ರತಿಪಾದನೆ ಮಾಡುತ್ತವೆಂಬುದು ಸಿದ್ಧಾಂತಿಗಳ ಅಭಿಪ್ರಾಯ.

ಭಗವಂತನ ಪುರುಷರೂಪದಲ್ಲಿ ಸ್ತ್ರೀತ್ವವು ಇರುವುದಿಲ್ಲ. ಆದ್ದರಿಂದ ಪುರುಷರೂಪಗಳು ಸ್ತ್ರೀಲಿಂಗಶಬ್ದಗಳಿಂದ ಪ್ರತಿಪಾದ್ಯವಾಗಲು ಸಾಧ್ಯವಿಲ್ಲ. 'ಕಲತ್ರಂ' ಎಂಬ ನಪುಂಸಕಲಿಂಗದ ಶಬ್ದಕ್ಕೆ 'ಪತ್ನಿ' ಎಂಬರ್ಥವಿದೆ. ಆದರೆ ಆ ಶಬ್ದವಾಚ್ಯಳಾದ ಸ್ತ್ರೀಯಲ್ಲಿ ನಪುಂಸಕತ್ವವು ಇರುವುದಿಲ್ಲ. ಇಂತಹ ಸಂದರ್ಭಗಳಲ್ಲಿ ಲಿಂಗವು ಕೇವಲ ಶಬ್ದಸ್ವಭಾವ ಎಂದು ಒಪ್ಪುವುದು ಅನಿವಾರ್ಯ. ಆದರೆ ಪ್ರಕೃತ ಲಕ್ಷ್ಮೀದೇವಿಯು ಸ್ತ್ರೀಲಿಂಗಶಬ್ದಗಳೆನಿಸಿದ ಪ್ರಕೃತಿ ಮೊದಲಾದ ಶಬ್ದಗಳಿಂದ ಪರಮಮುಖ್ಯವೃತ್ತಿಯಿಂದಲೇ ಪ್ರತಿಪಾದ್ಯಳಾಗುತ್ತಾಳೆ. ಅವಳಲ್ಲಿ ಸ್ತ್ರೀತ್ವವೂ ಇದೆ. ಪ್ರಕೃತಿತ್ವವೂ ಕೂಡ ಇದೆ. ಹೀಗೆ ಲಕ್ಷ್ಮೀದೇವಿಯಲ್ಲಿಯೇ

ಪರಮಮುಖ್ಯವೃತ್ತಿಯಿಂದ ಶಬ್ದಪ್ರತಿಪಾದ್ಯತ್ವವು ಸಂಭವಿಸುತ್ತಿರುವಾಗ ಪರಮಾತ್ಮನಲ್ಲಿ ಪ್ರಕೃತಿತ್ವವು ಮತ್ತು ಸ್ತ್ರೀತ್ವವು ಇಲ್ಲದಿರುವಾಗ ಕಷ್ಟದಿಂದ ಏಕೆ ಶಬ್ದವನ್ನು ಸಮನ್ವಯ ಮಾಡಬೇಕು.

ಪರಮಾತ್ಮನ ಸ್ತ್ರೀರೂಪಗಳು ಸ್ತ್ರೀಲಿಂಗಶಬ್ದಗಳಿಂದ ಪ್ರತಿಪಾದ್ಯವಾಗಿವೆ ಎಂಬುದನ್ನು ಪೂರ್ವಪಕ್ಷಿಯು ಒಪ್ಪಿರುತ್ತಾನೆ. ಆದರೆ ಪರಮಾತ್ಮನ ಪುರುಷರೂಪಗಳಿಗೆ ಸ್ತ್ರೀಲಿಂಗಶಬ್ದಪ್ರತಿಪಾದ್ಯತ್ವವು ಹೇಗೆ ಬರುತ್ತದೆಂಬುದೇ ವಿಚಾರ ಮಾಡುವ ವಿಷಯ.

ಬ್ರಹ್ಮ ಮೊದಲಾದ ಶಬ್ದಗಳು ನಪುಂಸಕಲಿಂಗವಾಗಿದ್ದರೂ ಬ್ರಹ್ಮನು ನಪುಂಸಕನಾಗಿರುವುದಿಲ್ಲ. ಪರಮಾತ್ಮನು ನಪುಂಸಕನಾಗದಿದ್ದರೂ, ನಪುಂಸಕಲಿಂಗಶಬ್ದಗಳಿಂದ ಪ್ರತಿಪಾದ್ಯವಾಗುವಂತೆ ಸ್ತ್ರೀಯಾಗದಿದ್ದರೂ, ಸ್ತ್ರೀಲಿಂಗಶಬ್ದಗಳಿಂದ ಪ್ರತಿಪಾದ್ಯನಾಗಬಹುದಲ್ಲವೇ? ಎಂದು ಪ್ರಶ್ನಿಸಿದರೆ ಪೂರ್ವಪಕ್ಷಿಯು ಹೀಗೆ ಉತ್ತರಿಸುತ್ತಾನೆ- ನಪುಂಸಕಲಿಂಗಶಬ್ದಗಳಿಗೆ ಅರ್ಥಸಾಧುತ್ವವು ಇರುವುದೇ ಇಲ್ಲ. ಯಾರು ನಪುಂಸಕರಿರುತ್ತಾರೋ, ಅವರೇ ನಪುಂಸಕಲಿಂಗಶಬ್ದಗಳಿಂದ ಪ್ರತಿಪಾದ್ಯರಾಗಬೇಕೆಂಬ ನಿಯಮ ಇರುವುದಿಲ್ಲ. ಕಲತ್ರ, ಅಪತ್ಯ ಮೊದಲಾದ ಶಬ್ದಗಳೆಲ್ಲವೂ ನಪುಂಸಕಲಿಂಗಗಳಾಗಿವೆ. ಆದರೆ ಸ್ತ್ರೀ, ಪುತ್ರ ಮೊದಲಾದವರೇ ಇದರಿಂದ ಪ್ರತಿಪಾದ್ಯರಾಗಿದ್ದಾರೆ. ಆದ್ದರಿಂದ ನಪುಂಸಕಲಿಂಗಶಬ್ದವು ಪ್ರಾಯಃ ಪ್ರಯೋಗಮಾತ್ರದಿಂದಲೇ ಸಾಧುವಾಗುತ್ತದೆ. ಆದರೆ ಸ್ತ್ರೀಲಿಂಗಶಬ್ದಗಳಿಗೆ ಹೀಗಲ್ಲ. ಅರ್ಥಸಾಧುತ್ವವೂ ಕೂಡ ಇರುತ್ತದೆ. ಪ್ರಯೋಗಸಾಧುತ್ವವೂ ಕೂಡ ಇರುತ್ತದೆ. ಪ್ರಕೃತ್ಯಾದಿಶಬ್ದಗಳನ್ನು ಲಕ್ಷ್ಯಾದಿಗಳಲ್ಲಿ ಪ್ರಯೋಗ ಮಾಡಿದರೆ ಅರ್ಥಸಾಧುತ್ವ ಹಾಗೂ ಪ್ರಯೋಗಮಾತ್ರಸಾಧುತ್ವ ಎರಡೂ ಲಭಿಸುತ್ತದೆ. ಇದನ್ನು ಬಿಟ್ಟು ಪರಮಾತ್ಮನಲ್ಲಿ ಕೇವಲ ಪ್ರಯೋಗಮಾತ್ರಸಾಧುತ್ವವನ್ನು ವಿವಕ್ಷಿಸುವುದು ಸೂಕ್ತವಲ್ಲ. ಒಂದುವೇಳೆ ಅರ್ಥಸಾಧುತ್ವವನ್ನು ವಿವಕ್ಷಿಸದೇ ಪ್ರಯೋಗಸಾಧುತ್ವವನ್ನು ಮಾತ್ರ ವಿವಕ್ಷಿಸಿ, ಪರಮಾತ್ಮನಲ್ಲಿ ಸ್ತ್ರೀಶಬ್ದಗಳನ್ನು ವಿವಕ್ಷಿಸುವುದಾದರೆ ಪೂರ್ವಮೀಮಾಂಸೆಯ ವಿರೋಧವು ಬರುತ್ತದೆ. 'ಪಶುನಾ ಯಜೇತ' ಎಂದು ಹೇಳಿದಾಗ ಸ್ತ್ರೀಲಿಂಗಶಬ್ದವನ್ನು ನೋಡಿ, ಪುರುಷಪಶುವನ್ನೇ ಯಾಗಸಾಧನವೆಂದು ಹೇಳುತ್ತಾರೆ. 'ಅರುಣಯಾ ಪಿಂಗಾಕ್ಷ್ಯಾ' ಎಂಬಲ್ಲಿ ಸ್ತ್ರೀಲಿಂಗಶಬ್ದವನ್ನು ನೋಡಿ ಸ್ತ್ರೀಪಶುವನ್ನೇ ತೆಗೆದುಕೊಳ್ಳುತ್ತಾರೆ. ಈ ಶ್ರುತಿವಾಕ್ಯಗಳಲ್ಲಿ ಏಕತ್ವವು ವಿವಕ್ಷಿತವಾದಂತೆ ಲಿಂಗವೂ ಕೂಡ ವಿವಕ್ಷಿತವೆಂದು ಜೈಮಿನ್ಯಾಚಾರ್ಯರು ಹೇಳಿರುತ್ತಾರೆ.

'ಪ್ರಕೃತಿಃ' ಮೊದಲಾದ ಸ್ತ್ರೀಲಿಂಗಾಂತವಾದ ಶಬ್ದಗಳನ್ನು ಪ್ರಯೋಗತಃ ಸಾಧುವೆಂದು ಸಮರ್ಥಿಸಬಹುದು. ಆದರೆ 'ಸ್ತ್ರೀ', 'ಯೋಷಿತ್', 'ನಾರೀ' ಮೊದಲಾದ ಶಬ್ದಗಳನ್ನು ಸಮನ್ವಯ ಮಾಡಲು ಸಾಧ್ಯವೇ ಇಲ್ಲ. ಈ ಎಲ್ಲಾ ಶಬ್ದಗಳ ಪ್ರಾತಿಪದಿಕಾರ್ಥವು ಸ್ತ್ರೀವ್ಯಕ್ತಿಯೇ ಆಗಿರುತ್ತದೆ. ಪುರುಷನಾದ ಪರಮಾತ್ಮನು ಸ್ತ್ರೀಯಾಗಲು ಸಾಧ್ಯವಿಲ್ಲ. ಆದ್ದರಿಂದಲೇ ಅವನನ್ನು 'ಸ್ತ್ರೀ'ಯೆಂದಾಗಲೀ, 'ನಾರೀ' ಎಂದಾಗಲು ಕರೆಯಲು ಸಾಧ್ಯವಿಲ್ಲ.

ಪೂರ್ವಮೀಮಾಂಸೆಯಲ್ಲಿ ಉದ್ದೇಶ್ಯವಿಶೇಷಣವಾದದ್ದು, ಅವಿವಕ್ಷಿತವಾಗುತ್ತದೆಂದು ತೀರ್ಮಾನಿಸಲಾಗಿದೆ. 'ಸ್ವರ್ಗಕಾಮಃ ಯಜೇತ' ಎಂಬಲ್ಲಿ ಸ್ವರ್ಗವನ್ನು ಬಯಸುವವನು ಯಾಗ ಮಾಡಬೇಕು ಎಂದು ಆಪಾತತಃ ಕಾಣಿಸುತ್ತದೆ. ಸ್ವರ್ಗವನ್ನು ಬಯಸುವವನು ಪುರುಷನಾಗಬೇಕೆಂದೇನೂ ಇಲ್ಲ. ಸ್ತ್ರೀಯೂ ಕೂಡ ಸ್ವರ್ಗವನ್ನು ಬಯಸಬಹುದು. ಅಂತಹ ಬಯಕೆಯುಳ್ಳ ಸ್ತ್ರೀಗೂ ಕೂಡ ಪುರುಷನ ಜೊತೆಗೆ ಯಾಗಾಧಿಕಾರವಿರುತ್ತದೆಂದು ಪೂರ್ವಮೀಮಾಂಸೆಯ ಅಧಿಕಾರಾಧಿಕರಣದಲ್ಲಿ ನಿರ್ಣಯಿಸಲಾಗಿದೆ. ಆದ್ದರಿಂದ 'ಸ್ವರ್ಗಕಾಮಃ' ಎಂಬಲ್ಲಿರುವ ಪುಲ್ಲಿಂಗವು ಉದ್ದೇಶ್ಯವಿಶೇಷಣವಾದ್ದರಿಂದ ಅವಿವಕ್ಷಿತವಾಗುತ್ತದೆ. 'ಬ್ರಾಹಣೋ ನ ಹಂತವ್ಯಃ' ಎಂಬಲ್ಲಿಯೂ ಕೂಡ ಪುಲ್ಲಿಂಗವು ಅವಿವಕ್ಷಿತ. ಬ್ರಾಹ್ಮಣನನ್ನು ಕೊಲ್ಲಬಾರದು ಎಂದರೆ ಬ್ರಾಹ್ಮಣಸ್ತ್ರೀಯನ್ನೂ ಕೂಡ ಕೊಲ್ಲಬಾರದೆಂದೇ ಎಲ್ಲರೂ ತಿಳಿಯುತ್ತಾರೆ. ಅದರಂತೆ 'ಪ್ರಕೃತಿಃ' ಎಂಬಲ್ಲಿರುವ ಸ್ತ್ರೀಲಿಂಗವು ಉದ್ದೇಶ್ಯವಿಶೇಷಣವಾದ್ದರಿಂದ ಅವಿವಕ್ಷಿತವಾಗುತ್ತದೆ. ಪ್ರತ್ಯಯಾರ್ಥ ಮಾತ್ರ ಉದ್ದೇಶ್ಯವಿಶೇಷಣವಾಗಬೇಕಾಗಿಲ್ಲ. ಕೆಲವೊಮ್ಮೆ ಪ್ರಾತಿಪದಿಕಾರ್ಥವೂ ಕೂಡ ಉದ್ದೇಶವಿಶೇಷಣವಾಗುತ್ತದೆ. ಆದ್ದರಿಂದ 'ಸ್ತ್ರೀ', 'ನಾರೀ' ಇತ್ಯಾದಿ ಶಬ್ದಗಳ ಅರ್ಥವೂ ಕೂಡ ಉದ್ದೇಶ್ಯ ವಿಶೇಷಣವಾಗಬಹುದಾದ್ದರಿಂದ ಅವಿವಕ್ಷಿತವಾಗಬಹುದಲ್ಲವೇ? ಎಂದು ಪ್ರಶ್ನಿಸಬಹುದು.

ಇದು ಸರಿಯಲ್ಲ. 'ಬ್ರಾಹ್ಮಣೋ ನ ಹಂತವ್ಯಃ' ಎಂಬಲ್ಲಿ ಪುಲ್ಲಿಂಗವು ಉದ್ದೇಶ್ಯವಿಶೇಷಣವಾಗಿದೆ. ಅದರಂತೆ ಪ್ರಕೃತಿ ಎಂಬುದು ಉದ್ದೇಶ್ಯವಿಶೇಷಣವಾಗಿಲ್ಲ. ಹೊರತಾಗಿ ವಿಧೇಯವಿಶೇಷಣವಾಗಿದೆ. ವಿಧೇಯ-ವಿಶೇಷಣವಾದದ್ದು ವಿವಕ್ಷಿತವಾಗಬಹುದಾದ್ದರಿಂದ ಪ್ರಕೃತಿಯೆಂಬಲ್ಲಿರುವ ಸ್ತ್ರೀಲಿಂಗವು ಅವಿವಕ್ಷಿತವೆಂದು ಸಮರ್ಥಿಸಲಾಗದು. ಮತ್ತು ಬ್ರಾಹ್ಮಣತ್ವವು ಬ್ರಾಹ್ಮಣಶಬ್ದದ ಪ್ರಾತಿಪದಿಕಾರ್ಥವಾಗಿರುವಂತೆ, ಸ್ತ್ರೀತ್ವವು 'ಸ್ತ್ರೀ' ಎಂಬ ಪ್ರಾತಿಪದಿಕಾರ್ಥದ ಅರ್ಥವಾಗಿದೆ. ಇದೂ ಕೂಡ ಉದ್ದೇಶ್ಯವಿಶೇಷಣವಾಗಲು ಸಾಧ್ಯವಿಲ್ಲ. ಇಂತಹ ಶಬ್ದಗಳಿಂದ ಪರಮಾತ್ಮನು ಪ್ರತಿಪಾದ್ಯನೆಂದು ಸಮರ್ಥಿಸುವುದು ಸುಲಭದ ಮಾತಲ್ಲ.

ಆದ್ದರಿಂದ ಸ್ತ್ರೀಲಿಂಗಾಂತವಾದ ಪ್ರಕೃತಿಃ, ವಿಕೃತಿಃ ಮೊದಲಾದ ಶಬ್ದಗಳಿಂದ ಪರಮಾತ್ಮನು ಪ್ರತಿಪಾದ್ಯನಾಗಲಾರ. 'ಸ್ತ್ರೀ', 'ನಾರೀ', 'ಯೋಷಿತ್' ಮೊದಲಾದ ಸ್ತ್ರೀತ್ವವೇ ಪ್ರಾತಿಪಾದಿಕಾರ್ಥವಾಗಿವುಳ್ಳ ಶಬ್ದಗಳಿಂದಲೂ ಕೂಡ ಪರಮಾತ್ಮನು ಪ್ರತಿಪಾದ್ಯನಾಗಲಾರ. ಇವೆರಡರ ಜೊತೆಗೆ 'ನಪುಂಕಸಂ' ಮೊದಲಾದ ಶಬ್ದಗಳಿಂದಲೂ ಕೂಡ ಪರಮಾತ್ಮನು ಪ್ರತಿಪಾದ್ಯನಾಗಲಾರ. ಸ್ತ್ರೀಯರಿಂದಾಗಲೀ, ಪುರುಷರಿಂದಾಗಲೀ, ಪರಮಾತ್ಮನು ಆಕರ್ಷಿತನಲ್ಲದ ಕಾರಣ ನಪುಂಸಕನಾಗಿದ್ದಾನೆ ಎಂದು ಯೌಗಿಕಾರ್ಥವನ್ನು ತಿಳಿಯಬಹುದು. ಏನೇ ಆದರೂ ನಪುಂಸಕ ಶಬ್ದದ ಪ್ರವೃತ್ತಿನಿಮಿತ್ತವೆನಿಸಿದ ನಪುಂಸಕತ್ವವು ಪರಮಾತ್ಮನಲ್ಲಿ ಸರ್ವಥಾ ಬರುವುದಿಲ್ಲ. ಈ ಅಧಿಕರಣದಲ್ಲಿ ಸ್ವಾತಂತ್ರ್ಯವೆಂಬ ಪ್ರವೃತ್ತಿನಿಮಿತ್ತವನ್ನಾಗಲೀ, ಯೌಗಿಕಾರ್ಥವನ್ನಾಗಲೀ ವಿವಕ್ಷಿಸಿ, ಶಬ್ದಸಮನ್ವಯವನ್ನು ಆಕ್ಷೇಪ ಮಾಡುತ್ತಿಲ್ಲ. ಹೊರತಾಗಿ, ಪ್ರಕೃತಸ್ಯ ಎಂಬ ಪ್ರವೃತ್ತಿನಿಮಿತ್ತವನ್ನು

ಅಪೇಕ್ಷಿಸಿ, ರೂಢವಾದ ಅರ್ಥವನ್ನು ಉದ್ದೇಶಿಸಿ ಆಕ್ಷೇಪ ಮಾಡಲಾಗಿದೆ. ಯಾವಾಗ ತದ್ಗತತ್ವವನ್ನೇ ಅನುಸರಿಸಲಾಗುತ್ತದೋ, ಆವಾಗ ನಪುಂಸಕ ಮೊದಲಾದ ಶಬ್ದದಿಂದಾಗಲೀ, 'ಸ್ತ್ರೀ' ಮೊದಲಾದ ಶಬ್ದಗಳಿಂದಾಗಲೀ, ಪರಮಾತ್ಮನು ಪ್ರತಿಪಾದ್ಯನೆಂದು ಸಮರ್ಥಿಸುವುದು ಅತ್ಯಂತ ಕಠಿಣವಾದ ವಿಷಯ. ಹೀಗಿರುವಾಗ 'ತತ್ತು ಸಮನ್ವಯಾತ್' ಎಂಬ ಅಧಿಕರಣದಲ್ಲಿ ಪರಮಾತ್ಮನು ಸಕಲ ಶಬ್ದಗಳಿಂದ ಪ್ರತಿಪಾದ್ಯನಾಗಿದ್ದಾನೆಂದು ಹೇಗೆ ನಿರ್ಧರಿಸುತ್ತಿರಿ? ಇಷ್ಟು ಈ ಪ್ರಕೃತ್ಯಧಿಕರಣದ ಪೂರ್ವಪಕ್ಷ.

ಪ್ರಕೃತ್ಯಧಿಕರಣದ ಸಿದ್ಧಾಂತ ಹೀಗಿದೆ -

ತನ್ನ ದೇಹದಿಂದ ನೇರವಾಗಿ ಪುತ್ರೋತ್ಪತ್ತಿಗೆ ಕಾರಣವಾದರೆ, 'ಸ್ತ್ರೀ' ಎಂದು ಲೋಕದಲ್ಲಿ ಕರೆಯುತ್ತಾರೆ. ಪರಮಾತ್ಮನು ತನ್ನ ದೇಹದಿಂದ ನೇರವಾಗಿ ಪ್ರಾಣಿಗಳನ್ನು ಹುಟ್ಟಿಸುವುದರಿಂದ ಅವನೂ ಕೂಡ 'ಸ್ತ್ರೀ' ಎಂದು ಕರೆಸಿಕೊಳ್ಳುತ್ತಾನೆ. ಆದ್ದರಿಂದ ಸ್ತ್ರೀಲಿಂಗವಾದ ಶಬ್ದಗಳಿಂದ ಪರಮಾತ್ಮನು ಮುಖ್ಯವಾಗಿ ಪ್ರತಿಪಾದ್ಯನಾಗಿದ್ದಾನೆ.

ಜಗದೊಡೆಯನಾದ ಈಶ್ವರನು ಪ್ರಲಯಕಾಲದಲ್ಲಿ ತನ್ನ ಹೊಟ್ಟೆಯಲ್ಲಿ ಇಟ್ಟುಕೊಂಡ ಬ್ರಹ್ಮ, ರುದ್ರ ಮೊದಲಾದ ಸಮಸ್ತ ಪ್ರಾಣಿಗಳನ್ನು ತನ್ನ ದೇಹದಿಂದ ಹುಟ್ಟಿಸುತ್ತಾನೆ. ಅಂದರೆ ಬ್ರಹ್ಮಾದಿ ದೇವತೆಗಳಿಗೆ ಸ್ಥೂಲದೇಹವನ್ನು ನೀಡಿ, ಅವರ ಉತ್ಪತ್ತಿಗೆ ಕಾರಣನಾಗಿದ್ದಾನೆ. ಇದನ್ನು ಶ್ರುತಿವಾಕ್ಯ ಹೀಗೆ ಹೇಳುತ್ತದೆ -

ಹಿಂದಿನ ಕಲ್ಪದಲ್ಲಿ ಯಾವ ಸಮಸ್ತ ಜಗತ್ತನ್ನು ಪರಮಾತ್ಮನು ತಿಂದಿದ್ದನೋ, ಅದಕ್ಕೆ ಸರಿಸಮಾನವಾದ ಮತ್ತೊಂದು ಜಗತ್ತನ್ನು ತನ್ನ ದೇಹದಿಂದ ಇಚ್ಛಾಪೂರ್ವಕವಾಗಿ ಪುನಃ ಸೃಷ್ಟಿ ಮಾಡುತ್ತಾನೆ. ಜೇಡರ ಹುಳವು ಹೇಗೆ ತನ್ನ ಉಗುಳಿನಿಂದ ಬಲೆಯನ್ನು ಕಟ್ಟಿ ಪುನಃ ನುಂಗುತ್ತದೋ, ಅದರಂತೆ ಪರಮಾತ್ಮನು ಈ ಜಗತ್ತನ್ನು ಸೃಷ್ಟಿಸಿ, ಪುನಃ ತಿನ್ನುತ್ತಾನೆ. ತನ್ನ ತಂದೆ-ತಾಯಿಯಂದಿರು ಮಕ್ಕಳನ್ನು ಹುಟ್ಟಿಸುವಂತೆ ಪರಮಾತ್ಮನೊಬ್ಬನೇ ಈ ಸಮಸ್ತ ಜಗತ್ತನ್ನು ಸೃಷ್ಟಿ ಮಾಡುತ್ತಾನೆ.

ಈ ಪ್ರಕೃತ್ಯಧಿಕರಣದಲ್ಲಿ ಒಟ್ಟು ಐದು ಸೂತ್ರಗಳಿವೆ. ಇವುಗಳ ಜೋಡಣೆಯು ಅತ್ಯಂತ ಅರ್ಥಪೂರ್ಣವಾಗಿದೆ. 'ಪ್ರಕೃತಿಶ್ಚ ಪ್ರತಿಜ್ಞಾದೃಷ್ಟಾಂತಾನುಪರೋಧಾತ್' ಎಂಬುದು ಮೊದಲನೆಯ ಸೂತ್ರ. ಈ ಸೂತ್ರದಲ್ಲಿ ಪ್ರತಿಜ್ಞೆ ಹಾಗೂ ದೃಷ್ಟಾಂತವಾಕ್ಯಗಳಿಗೆ ವಿರೋಧವು ಬರಬಾರದೆಂದರೆ ಪರಮಾತ್ಮನು ಪುಲ್ಲಿಂಗಶಬ್ದದಂತೆ ಪ್ರಕೃತಿ ಮೊದಲಾದ ಸ್ತ್ರೀಲಿಂಗಶಬ್ದದಿಂದಲೂ ಪ್ರತಿಪಾದ್ಯನಾಗಿದ್ದಾನೆಂದು ಸಿದ್ಧವಾಗಬೇಕು. 'ನಾಮಾನಿ ಸರ್ವಾಣಿ' ಎಂಬ ಶ್ರುತಿಯಲ್ಲಿರುವ ಸರ್ವಶಬ್ದಕ್ಕೆ ಸ್ತ್ರೀಲಿಂಗಶಬ್ದಗಳನ್ನು ಬಿಟ್ಟು, ಉಳಿದ ಶಬ್ದಗಳಿಂದ ಪ್ರತಿಪಾದ್ಯನಾಗಿದ್ದಾನೆಂದು ಅರ್ಥಸಂಕೋಚ ಮಾಡಬಾರದು. ಪರಮಾತ್ಮನಲ್ಲಿ ಸ್ತ್ರೀತ್ವವು ಇರುವಂತೆ ಪುರುಷತ್ವವೂ ಕೂಡ ಇರುತ್ತದೆ. ಹೀಗೆ ಪ್ರಕೃತಿಶಬ್ದವನ್ನು ಉಪಲಕ್ಷಣಯಾ ವಿವಕ್ಷಿಸಿ ಸಕಲ ಸ್ತ್ರೀವಾಚಕ ಶಬ್ದಗಳಿಂದ ಪರಮಾತ್ಮನೇ ಪ್ರತಿಪಾದ್ಯನಾಗಿದ್ದಾನೆಂದು ಸಮರ್ಥಿಸಲಾಗಿದೆ.

'ಅಭಿಧ್ಯೋಪದೇಶಾಚ್ಚ' ಎಂಬುದು ಎರಡನೆಯ ಸೂತ್ರ. ಪರಮಾತ್ಮನ ಇಚ್ಛೆಯನ್ನು ಸ್ಮೃತಿಯಲ್ಲಿ ಪ್ರಕೃತಿ ಎಂದು ಕರೆಯಲಾಗಿದೆ. 'ಪ್ರಕೃತಿರ್ವಾಸನೇತ್ಯೇವಂ ತವೇಚ್ಛಾSನಂತ ಕಥ್ಯತೇ' ಎಂಬ ಸ್ಮೃತಿಯಲ್ಲಿ ಕರೆಯಲಾಗಿದೆ. ಈ ಇಚ್ಛೆಯು ಪರಮಾತ್ಮನ ಸ್ವರೂಪವೇ ಆಗಿದೆಯೆಂದು 'ಸೋSಭಿಧ್ಯಾ ಸ ಜೂತಿಃ' ಎಂಬ ಶ್ರುತಿಯಲ್ಲಿ ಹೇಳಲಾಗಿದೆ. ಆದ್ದರಿಂದ ಪರಮಾತ್ಮನು ಪ್ರಕೃತಿಶಬ್ದದಿಂದ ಪ್ರತಿಪಾದ್ಯನಾಗುತ್ತಾನೆಂದು ಸಮರ್ಥಿಸಲು ಎರಡನೆಯ ಸೂತ್ರ ಹೊರಟಿದೆ.

'ಸಾಕ್ಷಾಚ್ಚೋಭಯಾಮ್ನಾನಾತ್' ಎಂಬ ಮೂರನೆಯ ಸೂತ್ರದಲ್ಲಿ ಇಚ್ಛೆಯ ವ್ಯವಧಾನವಿಲ್ಲದೇ ಮತ್ತು 'ನಾಮಾನಿ ಸರ್ವಾಣಿ' ಎಂಬಲ್ಲಿ ನೇರವಾಗಿಯೇ ಪರಮಾತ್ಮನು ಪ್ರಕೃತಿ ಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆಂದು ಸಮರ್ಥಿಸಲಾಗಿದೆ. ಆದ್ದರಿಂದ ಪ್ರಕೃತಿಶಬ್ದದ ಉದಾಹರಣೆಯಿಂದ ಸಕಲ ಸ್ತ್ರೀಶಬ್ದಗಳು ಪರಮಾತ್ಮನನ್ನೇ ಮುಖ್ಯವಾಗಿ ಪ್ರತಿಪಾದಿಸುತ್ತದೆ.

'ಆತ್ಮಕೃತೇಃ ಪರಿಣಾಮಾತ್' ಎಂಬುದು ನಾಲ್ಕನೆಯ ಸೂತ್ರ. ಸಕಲಸ್ತ್ರೀಲಿಂಗಶಬ್ದಗಳಿಗೆ ಉಪಲಕ್ಷಕವಾದ ಪ್ರಕೃತಿ ಶಬ್ದದ ಪ್ರವೃತ್ತಿನಿಮಿತ್ತವು ಪರಮಾತ್ಮನಲ್ಲಿ ಬರುವುದೇ ಇಲ್ಲವೆಂಬ ಬಾಧಕವನ್ನು ಈ ಸೂತ್ರವು ಪರಿಹರಿಸಿದೆ. ಮೊದಲ ಮೂರು ಸೂತ್ರಗಳಲ್ಲಿ ಸಾಧಕಪ್ರಮಾಣಗಳನ್ನು ಹೇಳಿದ ಮೇಲೆ ನಾಲ್ಕನೆಯ ಸೂತ್ರವು ಬಾಧಕೋದ್ಧಾರಕ್ಕಾಗಿ ಹೊರಟಿದೆ. ಪ್ರಕೃತಿಯಲ್ಲಿ ಪ್ರವೇಶ ಮಾಡಿರುವ ಪರಮಾತ್ಮನು ಮಹದಾದಿರೂಪದಿಂದ ಪರಿಣಾಮವನ್ನು ಉಂಟುಮಾಡಿ, ಅವುಗಳನ್ನು ನಿಯಂತ್ರಣ ಮಾಡಲು ಪುನಃ ಅನೇಕ ರೂಪಗಳನ್ನು ತಾಳಿ, ಅವುಗಳಲ್ಲಿ ಪ್ರವೇಶಿಸುತ್ತಾನೆ. ಆದ್ದರಿಂದ 'ಪ್ರಕೃತಿ' ಶಬ್ದದಿಂದ ವಿಷ್ಣುವೇ ವಾಚ್ಯನಾಗಿದ್ದಾನೆಂಬುದು ಈ ಸೂತ್ರದ ಅಭಿಪ್ರಾಯ.

'ಯೋನಿಶ್ಚ ಹಿ ಗೀಯತೇ' ಎಂಬುದು ಐದನೆಯ ಸೂತ್ರ. ಪ್ರಕೃತಿಶಬ್ದದಲ್ಲಿ ಬಾಧಕೋದ್ಧಾರವನ್ನು ಹಿಂದಿನ ಸೂತ್ರದಲ್ಲಿ ಮಾಡಲಾಯಿತು. ಉಳಿದ ಎಲ್ಲಾ ಸ್ತ್ರೀಲಿಂಗಶಬ್ದಗಳ ಸಮನ್ವಯ ವಿಷಯದಲ್ಲಿ ಬರುವ ಬಾಧಕಪ್ರಮಾಣವನ್ನು ಈ ಕೊನೆಯ ಸೂತ್ರವು ಮಾಡುತ್ತಿದೆ. 'ಯದ್ ಭೂತಯೋನಿಂ' ಎಂಬ ಶ್ರುತಿಯಲ್ಲಿ ವಿಷ್ಣುವು ತನ್ನ ದೇಹದಿಂದಲೇ ನೇರವಾಗಿ ಪುತ್ರೋತ್ಪಾದಕನಾಗಿದ್ದಾನೆಂದು ಹೇಳಲಾಗಿದೆ. ಆದ್ದರಿಂದ ಪ್ರಕೃತಿ ಸ್ತ್ರೀ ಮೊದಲಾದ ಶಬ್ದಗಳಿಂದ ಪರಮಾತ್ಮನು ಪ್ರತಿಪಾದ್ಯನಾಗಿದ್ದಾನೆಂದು ಸಿದ್ಧವಾಯಿತು.

*****

L

ಏತೇನಾಧಿಕರಣ

ಹಿಂದಿನ ಪ್ರಕೃತ್ಯಧಿಕರಣದಲ್ಲಿ 'ಅವ್ಯವಧಾನೇನ ಸೂತಿಹೇತುತ್ವ' ಎಂಬ ಪ್ರವೃತ್ತಿನಿಮಿತ್ತವನ್ನು ಮಹಾವಿಷ್ಣುವಿನಲ್ಲಿ ಸಮನ್ವಯ ಮಾಡುವ ಮೂಲಕ ಸ್ತ್ರೀಲಿಂಗಶಬ್ದಗಳೆನಿಸಿದ ಪ್ರಕೃತಿ ಮೊದಲಾದ ಶಬ್ದಗಳನ್ನು ಮಹಾವಿಷ್ಣುವಿನಲ್ಲಿ ಸಮನ್ವಯ ಮಾಡಲಾಯಿತು. ಇದರಿಂದ ಮಹಾವಿಷ್ಣುವಿನ ಸ್ವರೂಪಕ್ಕೆ ಯಾವುದೇ ರೀತಿ ಚ್ಯುತಿ ಬರಲಿಲ್ಲ. ಎಲ್ಲಾ ಶಬ್ದಗಳನ್ನೂ ಸಮನ್ವಯ ಮಾಡಬೇಕೆಂಬ ಧೋರಣೆಯಿಂದ 'ಅಸತ್', 'ಶೂನ್ಯ' ಮೊದಲಾದ ಶಬ್ದಗಳನ್ನು ಸಮನ್ವಯ ಮಾಡಲು ಸಾಧ್ಯವೇ ಇಲ್ಲ. ಹಾಗೇನಾದರೂ ಅಂತಹ ಶಬ್ದಗಳನ್ನು ಸಮನ್ವಯ ಮಾಡಿದರೆ, ಭಗವಂತನು ನಿಃಸ್ವರೂಪನೆಂದಾಗಬೇಕಾದೀತು. ಆದ್ದರಿಂದ 'ಅಸದ್ವಾ ಇದಮಗ್ರ ಆಸೀತ್' ಇತ್ಯಾದಿ ಶ್ರುತಿಗಳಲ್ಲಿರುವ 'ಅಸತ್' ಮೊದಲಾದ ಶಬ್ದಗಳು ಮಹಾವಿಷ್ಣುವಿನಲ್ಲಿ ಸರ್ವಥಾ ಬರುವುದಿಲ್ಲ. ಅಷ್ಟೇ ಅಲ್ಲದೇ ಸ್ವಾತಂತ್ರ್ಯವೆಂಬ ಪ್ರವೃತ್ತಿನಿಮಿತ್ತದಿಂದಲೂ ಮಹಾವಿಷ್ಣುವಿನಲ್ಲಿ ಸಮನ್ವಯ ಮಾಡಲಾಗದು. ಏಕೆಂದರೆ ಅಸತ್‌ಪದಾರ್ಥಗಳು ನಿಃಸ್ವರೂಪಗಳಾದ್ದರಿಂದ ಅವುಗಳ ಸೃಷ್ಟಿ, ನಿಯಮನ ಮೊದಲಾದವುಗಳನ್ನು ಮಾಡಲು ಸಾಧ್ಯವಿಲ್ಲದ ಕಾರಣ, ಈಶಾಧೀನತ್ವವನ್ನು ಅವುಗಳಿಗೆ ಹೇಳಲು ಹೇಗೆ ಸಾಧ್ಯ ? ಇಷ್ಟು ಈ ಅಧಿಕರಣದ ಪೂರ್ವಪಕ್ಷ.

ಶೂನ್ಯ, ಅಸತ್ ಮೊದಲಾದ ಶಬ್ದಗಳನ್ನು ಮಹಾವಿಷ್ಣುವಿನಲ್ಲಿ ಸಮನ್ವಯ ಮಾಡಿದ ಮಾತ್ರಕ್ಕೆ ಭಗವಂತನು ನಿಃಸ್ವರೂಪನೆಂದಾಗಬೇಕಾಗಿಲ್ಲ. ಹೊರತಾಗಿ, 'ಶಮೂನಂ ಕುರುತೇ' 'ದುರ್ಜನರಿಗೆ ಬರುವಂತಹ ಆನಂದಾದಿಗಳನ್ನು ಮೊಟುಕುಗೊಳಿಸುತ್ತಾನೆ' ಎಂಬುದಾಗಿ ಭಗವಂತನು ಶೂನ್ಯನೆನಿಸುತ್ತಾನೆ. ದುರ್ಜನರಿಗೆ ಅವ್ಯಕ್ತನಾದ ಕಾರಣ 'ಅಸತ್' ಎನಿಸುತ್ತಾನೆ. ಹೀಗೆ ಯೋಗವೃತ್ತಿಯಿಂದ ಶೂನ್ಯಾದಿಶಬ್ದಗಳ ಸಮನ್ವಯವನ್ನು ಮಹಾವಿಷ್ಣುವಿನಲ್ಲಿ ತಿಳಿದುಕೊಳ್ಳಬೇಕು. ಮತ್ತು ಲೋಕಪ್ರಸಿದ್ಧವಾದ ಶೂನ್ಯತ್ವಾದಿಗಳನ್ನೇ ಶೂನ್ಯಾದಿ ಶಬ್ದಗಳ ಪ್ರವೃತ್ತಿನಿಮಿತ್ತವೆಂದು ಪರಿಗಣಿಸಿದರೂ ಕೂಡ ಅವುಗಳು ಭಗವದಧೀನವಾಗಿವೆ. ಯಾವುದೇ ಕಾಲದಲ್ಲೂ ಭಗವಂತನು ಶಶವಿಷಾಣಾದಿಗಳನ್ನು ಸೃಷ್ಟಿ ಮಾಡಲಾರ. ಅವನಿಗೆ ಸೃಷ್ಟಿ ಮಾಡುವ ಸಾಮರ್ಥ್ಯವಿದೆ. ಆದರೂ ಕೂಡ ಅಸತ್‌ಪದಾರ್ಥವನ್ನು ಸೃಷ್ಟಿಮಾಡುವುದಿಲ್ಲ ಎಂಬ ಕಾರಣದಿಂದಲೇ ಅಸತ್ ಪದಾರ್ಥವು ಭಗವದಧೀನವಾಗುತ್ತದೆ. ಹೀಗೆ ಸ್ವಾತಂತ್ರ್ಯವೆಂಬ ಪ್ರವೃತ್ತಿನಿಮಿತ್ತದಿಂದ ಶೂನ್ಯ, ಅಸತ್ ಮೊದಲಾದ ಶಬ್ದಗಳನ್ನು ಮಹಾವಿಷ್ಣುವಿನಲ್ಲಿ ಸಮನ್ವಯ ಮಾಡಬಹುದೆಂದು ಸಿದ್ಧಾಂತ.

ಇಲ್ಲಿಗೆ ಸಮನ್ವಯಾಧ್ಯಾಯವು ಮುಗಿಯಿತು.

* * * * *

ಎರಡನೆಯ ಅಧ್ಯಾಯ-ಪ್ರಥಮಪಾದ

ಸ್ಮೃತ್ಯಧಿಕರಣ

ವೇದದಲ್ಲಿರುವ ಸಮಗ್ರ ಶಬ್ದಗಳು ಮಹಾವಿಷ್ಣುವಿನಲ್ಲಿಯೇ ಸಮನ್ವಯವಾಗುತ್ತವೆ. ಆದ್ದರಿಂದ ಅವನೇ ಜಗಜ್ಜನ್ಮಾದಿಕರ್ತೃವಾಗಿದ್ದಾನೆ. ಆದ್ದರಿಂದಲೇ ಸಕಲಗುಣಪರಿಪೂರ್ಣನಾಗಿದ್ದಾನೆ ಎಂಬುದಾಗಿ ಪ್ರಥಮಾಧ್ಯಾಯದಲ್ಲಿ ಸಾಧಿಸಲಾಯಿತು. ಈ ಸಮರ್ಥನೆಯ ಮೇಲೆ ಅನೇಕ ಬಗೆಯ ವಿರೋಧಗಳು ಎದುರಾಗುತ್ತವೆ. ಆ ಎಲ್ಲಾ ಬಗೆಯ ವಿರೋಧಗಳನ್ನು ಪರಿಹರಿಸುವುದಕ್ಕಾಗಿಯೇ ಎರಡನೆಯ ಅಧ್ಯಾಯವು ಪ್ರಾರಂಭವಾಗುತ್ತಿದೆ. ಆದ್ದರಿಂದಲೇ ಇದನ್ನು 'ಅವಿರೋಧಾಧ್ಯಾಯ' ಎಂದು ಕರೆಯುತ್ತಾರೆ. ಎರಡನೆಯ ಅಧ್ಯಾಯಕ್ಕೆ ಪ್ರಥಮಾಧ್ಯಾಯದಿಂದ ಎರಡು ಬಗೆಯ ಸಂಗತಿಗಳನ್ನು ತಿಳಿಯಬಹುದು. ಈ ಅಧ್ಯಾಯದಲ್ಲಿ ವಿರೋಧದ ಪರಿಹಾರವನ್ನು ಮಾಡುತ್ತಿದ್ದಾರೆ. ಯಾವುದರ ವಿರೋಧ ? ಎಂಬ ಪ್ರಶ್ನೆಯು ಬಂದರೆ ಸಮನ್ವಯ ವಿಷಯದಲ್ಲಿ ಬರುವಂತಹ ವಿರೋಧದ ಪರಿಹಾರವೆಂದು ಉತ್ತರಿಸಬೇಕು. ಆದ್ದರಿಂದ ಮೊದಲನೆಯ ಅಧ್ಯಾಯದಲ್ಲಿ ಮಾಡಿದ ಸಮನ್ವಯವೇ ಹೇತುವಾಗುತ್ತದೆ. ಈ ಅಧ್ಯಾಯದಲ್ಲಿ ಸಮರ್ಥಿಸುತ್ತಿರುವ ಅವಿರೋಧವು ಹೇತುಮತ್ ಆಗುತ್ತದೆ. ಆದ್ದರಿಂದ ಹೇತುಹೇತುಮದ್ಭಾವ ಸಂಗತಿಯನ್ನು ತಿಳಿಯಬಹುದು.

ಅಥವಾ ಎಲ್ಲಾ ಬಗೆಯ ವಿರೋಧವನ್ನು ಪರಿಹರಿಸಿದ ಮೇಲೆ ಪ್ರಥಮಾಧ್ಯಾಯದ ಸಮನ್ವಯವು ಸ್ಥಿರವಾಗುತ್ತದೆ. ಆವಾಗ ಅವಿರೋಧವೇ ಹೇತುವಾಗುತ್ತದೆ. ಸಮನ್ವಯವು ಹೇತುಮತ್ತಾಗುತ್ತದೆ. ಹೀಗೂ ಹೇತುಹೇತುಮದ್ಭಾವ ಸಂಗತಿಯನ್ನು ತಿಳಿಯಬಹುದು. ಏನೇ ಆಗಲಿ. ಸಮನ್ವಯ ವಿಷಯದಲ್ಲಿ ಮಾಡುತ್ತಿರುವ ಆಕ್ಷೇಪಕ್ಕೆ ಸಮಾಧಾನ ನೀಡಲು ಎರಡನೆಯ ಅಧ್ಯಾಯವು ಹೊರಟಿದೆ. ಆದ್ದರಿಂದ ಪ್ರಥಮಾಧ್ಯಾಯದ ಆನಂತರ್ಯವು ಇದಕ್ಕೆ ಯುಕ್ತವಾಗುತ್ತದೆ.

೧. ಯುಕ್ತಿಗಳ ವಿರೋಧಪರಿಹಾರ, ೨. ಸಮಯಗಳ ವಿರೋಧಪರಿಹಾರ, ೩. ಕೇವಲ ಶ್ರುತಿಗಳ ವಿರೋಧಪರಿಹಾರ, ೪. ಯುಕ್ತಿಸಹಿತವಾದ ಶ್ರುತಿಗಳ ವಿರೋಧಪರಿಹಾರ. ಈ ನಾಕು ಬಗೆಯ ವಿರೋಧ ಪರಿಹಾರವನ್ನು ಕ್ರಮವಾಗಿ ನಾಕು ಪಾದಗಳಲ್ಲಿ ಸೂತ್ರಕಾರರು ಮಾಡುತ್ತಿದ್ದಾರೆ.

ಮೂರನೆಯ ಪಾದದಲ್ಲಿ ಕೆಲವು ಶ್ರುತಿಗಳು ಸ್ವತಂತ್ರವಾದ ಯುಕ್ತಿಗಳಿಂದ ಕೂಡಿರುತ್ತದೆ. ನಾಲ್ಕನೆಯ ಪಾದವು ಶ್ರುತಿಗಳಲ್ಲಿಯೇ ಸೇರಿರುವ ಯುಕ್ತಿಗಳಿಂದ ಬಲಿಷ್ಠವಾಗಿರುತ್ತವೆ. ಕೇವಲ ಯುಕ್ತಿಗಳು ಶ್ರುತಿಯಲ್ಲಿ ಹೇಳಲ್ಪಟ್ಟ ಯುಕ್ತಿಗಳಿಗಿಂತ ದುರ್ಬಲವಾದ ಕಾರಣ ಮೂರು ಹಾಗೂ ನಾಕನೆಯ ಪಾದಗಳಲ್ಲಿ ಅವಾಂತರಭೇದವಿರುತ್ತದೆ.

ಎರಡನೆಯ ಅಧ್ಯಾಯದಲ್ಲಿ ನಾಕು ಬಗೆಯ ವಿರೋಧಗಳನ್ನು ಪರಿಹರಿಸುತ್ತಿದ್ದಾರೆಂದು ತಿಳಿಯಿತು. ಮೊದಲು ಯುಕ್ತಿವಿರೋಧವನ್ನು ಪರಿಹರಿಸಿ ಅನಂತರ ಸಮಯವಿರೋಧವನ್ನೇ ಏಕೆ ಪರಿಹರಿಸಬೇಕು? ಅನಂತರವೇ ಶ್ರುತಿವಿರೋಧವನ್ನು, ತದನಂತರ ಯುಕ್ತಿಸಹಿತವಾದ ಶ್ರುತಿವಿರೋಧವನ್ನು ಪರಿಹರಿಸಲು ಏನು ಕಾರಣ? ವಿಪರೀತವಾಗಿ ಏಕೆ ಪಾದಗಳ ವಿನ್ಯಾಸವಿರಬಾರದು ? ಈ ಜಿಜ್ಞಾಸೆಗೆ ನಾಕು ಬಗೆಯಲ್ಲಿ ಉತ್ತರವನ್ನು ತಿಳಿಯಬಹುದು-

ಮಹಾಯುದ್ಧದಲ್ಲಿ ಮೊದಲು ಸೈನಿಕರು ಸತ್ತ ಮೇಲೆ ಆನೆ, ಕುದುರೆ ಮೊದಲಾದವುಗಳು ಪ್ರವೃತ್ತಿ ಮಾಡುತ್ತವೆ. ಕಡಿಮೆ ಶಕ್ತಿಯಿರುವವರು ಮೊದಲು ಯುದ್ಧ ಮಾಡಿ, ಹೆಚ್ಚಿನ ಶಕ್ತಿಯಿರುವವರು ಅನಂತರ ಯುದ್ಧಕ್ಕೆ ಬರುತ್ತಾರೆ. ಅದೇ ರೀತಿಯಲ್ಲಿ ದುರ್ಬಲವಾದ ಯುಕ್ತಿ ಮೊದಲಾದವುಗಳನ್ನು ಮೊದಲು ನಿರಾಕರಣೆ ಮಾಡಿದ ಮೇಲೆ ಹೆಚ್ಚು ಬಲಿಷ್ಠವಾದ ಸಮಯ, ಶ್ರುತಿ ಇವುಗಳ ವಿರೋಧವು ಪ್ರವೃತ್ತವಾಗುತ್ತವೆ. ಅತ್ಯಂತ ದುರ್ಬಲವಾದ ಅನುಮಾನವಿರೋಧವು ಮೊದಲು ನಿರಸ್ತವಾಗುತ್ತದೆ. ಅದಕ್ಕಿಂತ ಹೆಚ್ಚು ಪ್ರಬಲವಾದ ಸಮಯವಿರೋಧವು ಅನಂತರ ಪ್ರಾಪ್ತವಾಗುತ್ತದೆ. ಅದಕ್ಕಿಂತಲೂ ಹೆಚ್ಚು ಬಲಿಷ್ಠವಾದ ಶ್ರುತಿವಿರೋಧವು ತದನಂತರ ಪ್ರಸಕ್ತವಾಗುತ್ತದೆ. ಈ ಎಲ್ಲದಕ್ಕಿಂತ ಅತ್ಯಂತ ಬಲಶಾಲಿಯಾದ ಯುಕ್ತಿಸಹಿತವಾದ ಶ್ರುತಿವಿರೋಧವು ಕೊನೆಯಲ್ಲಿ ಪ್ರಾಪ್ತವಾಗುತ್ತದೆ. ಸೋಪಾನಾರೋಹಣ ಕ್ರಮದಿಂದಲೇ ದುರ್ಬಲವಾದ ವಿರೋಧಗಳನ್ನು ಮೊದಲು ಪರಿಹರಿಸಿ, ಬಲಿಷ್ಠವಾದ ವಿರೋಧವನ್ನು ಅನಂತರ ಪರಿಹರಿಸಿದ್ದಾರೆ.

ಮತ್ತೊಂದು ಬಗೆಯಲ್ಲಿಯೂ ಪಾದಕ್ರಮದ ವಿನ್ಯಾಸದ ಸ್ವಾರಸ್ಯವನ್ನು ತಿಳಿಯಬಹುದು -

ನಮ್ಮ ಜೀವನದಲ್ಲಿ ಬೇರೆಯವರು ವಿರೋಧ ಮಾಡಿದರೆ ಕೂಡಲೇ ತಿಳಿಯುತ್ತದೆ. ಆದರೆ ನಮ್ಮ ಗೋತ್ರದವರೇ ಆದ ಮನೆಮಂದಿಯೇ ವಿರೋಧ ಮಾಡಿದರೆ ಕೂಡಲೇ ತಿಳಿಯುವುದಿಲ್ಲ. ವಿಳಂಬವಾಗಿ ಅರ್ಥವಾಗುತ್ತದೆ. ಹೀಗೆ - ಬಹಿರಂಗವಿರೋಧಕ್ಕಿಂತ ಅಂತರಂಗವಿರೋಧವು ಬಲಿಷ್ಠವಾಗಿದೆ. ಅನುಮಾನವು ಶಬ್ದಕ್ಕಿಂತ ಬರ್ಹಿಭೂತವಾದ್ದರಿಂದ ಬಹಿರಂಗವಾಗಿದೆ. ಅತ್ಯಂತ ಬಹಿರಂಗವಾದ ಅನುಮಾನದಲ್ಲಿ ಯಾವುದೇ ಪ್ರಾಬಲ್ಯವಿರುವುದಿಲ್ಲ. ಆದ್ದರಿಂದ ಮೊದಲು ಇದರ ವಿರೋಧವನ್ನು ಪರಿಹರಿಸಿದ್ದಾರೆ. ಅನಂತರ ಸಮಯಗಳು ಶಬ್ದದಲ್ಲಿಯೇ ಸೇರುತ್ತವೆ. ಆದರೆ ಅಪೌರುಷೇಯವಲ್ಲದ ಕಾರಣ

ಒಂದು ರೀತಿಯಲ್ಲಿ ಬಹಿರಂಗವೇ ಆಗುತ್ತದೆ. ಆದ್ದರಿಂದ ಅನುಮಾನವನ್ನು ನಿರಾಕರಣೆ ಮಾಡಿದ ಮೇಲೆ ಸಮಯಗಳ ವಿರೋಧವನ್ನು ಪರಿಹರಿಸಿದ್ದಾರೆ. ಕೇವಲ ಶ್ರುತಿಗಳು ಶಬ್ದಪ್ರಮಾಣದಲ್ಲಿ ಸೇರುವುದರಿಂದ ಅಂತರಂಗವಾಗಿವೆ. ಆದರೂ ಕೂಡ ಯಾವುದೇ ಯುಕ್ತಿಗಳ ಬೆಂಬಲವಿಲ್ಲದ ಕಾರಣ ಅಂತರಂಗವಾಗಿದ್ದರೂ ಕೂಡ ದುರ್ಬಲವೇ ಆಗಿವೆ. ಸಮಯಗಳಿಗಿಂತಲೂ ಹೆಚ್ಚು ಬಲಿಷ್ಠವಾದ್ದರಿಂದ ಮೂರನೆಯ ಪಾದದಲ್ಲಿ ಶ್ರುತಿವಿರೋಧವನ್ನು ಪರಿಹರಿಸಿದ್ದಾರೆ. ಕೇವಲ ಶ್ರುತಿಗಳಿಗಿಂತಲೂ ಯುಕ್ತಿಸಹಿತವಾದ ಶ್ರುತಿಗಳು ಇನ್ನೂ ಹೆಚ್ಚು ಬಲಿಷ್ಠವಾದ್ದರಿಂದ ನಾಕನೆಯ ಪಾದದಲ್ಲಿ ಯುಕ್ತಿಸಹಿತವಾದ ಶ್ರುತಿವಿರೋಧವನ್ನು ಪರಿಹರಿಸಿದ್ದಾರೆ. ಹೀಗೆ ಬಹಿರಂಗವಿರೋಧದ ಅನಂತರವೇ ಬಲಿಷ್ಠವಾದ ಅಂತರಂಗವಿರೋಧವನ್ನು ಪರಿಹರಿಸುವ ಉದ್ದೇಶದಿಂದ ಪಾದಗಳ ವಿನ್ಯಾಸಕ್ರಮವು ಇರುತ್ತದೆ.

ಅಥವಾ ಯುಕ್ತಿಗಳನ್ನು ಅತ್ಯಂತ ದುರ್ಬಲವೆಂದು, ಅಥವಾ ಯುಕ್ತಿಗಳೇ ಹೆಚ್ಚು ಬಲಿಷ್ಠವೆಂದೂ ಕೂಡ ತಿಳಿಯಬಹುದು. ಕಾರಣವೇನೆಂದರೆ ಎಲ್ಲಾ ವಿರೋಧಗಳೂ ಕೂಡ ಯುಕ್ತಿಮೂಲಕವೇ ಆಗಿರುತ್ತವೆ. ಬ್ರಹ್ಮಮೀಮಾಂಸಾಶಾಸ್ತ್ರವೂ ಕೂಡ ಯುಕ್ತಿಯ ಮೂಲಕವೇ ಹೊರಟಿರುತ್ತದೆ. ಸಮಯಗಳೂ ಕೂಡ ಯುಕ್ತಿಮೂಲಕವೇ ಆಗಿದೆ. ಶ್ರುತಿಗಳೂ ಕೂಡ ಯುಕ್ತಿಮೂಲಕವೇ ಆಗಿವೆ. ಆದ್ದರಿಂದ ಎಲ್ಲವೂ ಕೂಡ ಯುಕ್ತಿಯನ್ನೇ ಆಶ್ರಯಿಸಿರುವುದರಿಂದ ಯುಕ್ತಿಯು ಅತ್ಯಂತ ಬಲಿಷ್ಠ. ಮತ್ತು ಈ ಯುಕ್ತಿಯಿಂದ ಸಮಗ್ರ ವೇದವನ್ನೇ ಅಪ್ರಮಾಣವೆಂದು ಸಾಧಿಸಲು ಬರುತ್ತದೆ. 'ವೇದಃ ಅಪ್ರಮಾಣಂ ಆಪ್ತ-ಅಪ್ರಣೀತತ್ವಾತ್' ಎಂಬ ಒಂದೇ ಯುಕ್ತಿಯಿಂದ ಸಮಗ್ರ ವೇದಕ್ಕೆ ಅಪ್ರಾಮಾಣ್ಯ ಬರುತ್ತದೆ. ಅಷ್ಟೇ ಅಲ್ಲದೇ ಎಲ್ಲಾ ದಾರ್ಶನಿಕರೂ ಕೂಡ ಯುಕ್ತಿಯನ್ನು ಪ್ರಮಾಣವೆಂದು ಒಪ್ಪಿರುತ್ತಾರೆ. ಆದ್ದರಿಂದ ಸಮಯವಿರೋಧಕ್ಕಿಂತಲೂ ಯುಕ್ತಿವಿರೋಧವು ಹೆಚ್ಚು ಬಲಿಷ್ಠ. ಅತ್ಯಂತ ಬಲಿಷ್ಠವಾದ ಯುಕ್ತಿವಿರೋಧವನ್ನು ಪ್ರಥಮಪಾದದಲ್ಲಿ ನಿರಾಕರಣೆ ಮಾಡುವುದು ಹೆಚ್ಚು ಸೂಕ್ತ. ಅನಂತರ ಸಮಯವಿರೋಧವೂ ಪ್ರಸಕ್ತವಾಗುತ್ತದೆ. ಏಕೆಂದರೆ ವೇದವು ಅಪೌರುಷೇಯವಾದ್ದರಿಂದ ಆಪ್ತಪ್ರಣೀತವಲ್ಲದ ಕಾರಣ ಪ್ರಾಮಾಣ್ಯವನ್ನು ಸುಲಭವಾಗಿ ಸಮರ್ಥಿಸಲು ಬರುವುದಿಲ್ಲ. ಆದರೆ ಎಲ್ಲಾ ಸಮಯಿಗಳು ರಚನೆ ಮಾಡಿರುವ ಶಾಸ್ತ್ರಗಳು ಆಪ್ತೋಕ್ತವಾದ್ದರಿಂದ ಪ್ರಮಾಣವಾಗುತ್ತದೆ. ಮತ್ತು ಬಹುಜನಪರಿಗೃಹೀತವಾಗಿಯೂ ಅನಾದಿಕಾಲದಿಂದ ಅವಿಚ್ಛಿನ್ನಪರಂಪರೆಯಿಂದಲೂ ಬಂದಿರುತ್ತವೆ. ಮತ್ತು ಶ್ರುತಿಗಳಲ್ಲಿ ತೋರುವ ವಿರೋಧವು ಕೇವಲ ಆಪಾತತಃ ಭಾಸವಾಗುತ್ತದೆ ಹೊರತು, ಸ್ಪಷ್ಟವಾಗಿ ವಿರೋಧವು ಕಾಣಿಸುವುದಿಲ್ಲ. ಆದರೆ ಸಮಯಗಳ ವಿರೋಧವು ಅತ್ಯಂತ ಸ್ಪಷ್ಟವಾಗಿರುವುದರಿಂದ ಶ್ರುತಿವಿರೋಧಕ್ಕಿಂತಲೂ ಸಮಯವಿರೋಧವು ಹೆಚ್ಚು ಬಲಿಷ್ಠವಾಗಿರುತ್ತದೆ. ಆದ್ದರಿಂದ ಶ್ರುತಿವಿರೋಧಕ್ಕಿಂತ ಮೊದಲು ಎರಡನೆಯ ಪಾದದಲ್ಲಿ ಸಮಯವಿರೋಧವನ್ನು ಪರಿಹರಿಸಿದ್ದಾರೆ. ಅನಂತರ ಶ್ರುತಿವಿರೋಧವನ್ನು ಮೂರನೆಯ ಪಾದದಲ್ಲಿ

ಪರಿಹರಿಸಿದ್ದಾರೆ. ಹೀಗೆ ಮಹಾಮಲ್ಲಭಂಗನ್ಯಾಯದಿಂದ ಪಾದಕ್ರಮವನ್ನು ತಿಳಿಯಬೇಕು. ನಾಕನೆಯ ಪಾದವನ್ನು ಬಿಟ್ಟು, ಉಳಿದ ಮೂರು ಪಾದಗಳಲ್ಲಷ್ಟೇ ಈ ಮಹಾಮಲ್ಲಭಂಗನ್ಯಾಯವನ್ನು ವಿವಕ್ಷಿಸಬೇಕು. ಏಕೆಂದರೆ ನಾಕನೆಯ ಪಾದವು ಯುಕ್ತಿಸಹಿತವಾದ ಶ್ರುತಿವಿರೋಧವನ್ನು ಪರಿಹರಿಸುತ್ತಿರುವುದರಿಂದ ಇವೆಲ್ಲದಕ್ಕಿಂತಲೂ ಶ್ರೇಷ್ಠವಾಗಿದೆ. ಮತ್ತು ಮುಮುಕ್ಷು ಆದವನು ಅಂತಿಮವಾಗಿ ತಿಳಿಯಬೇಕಾದ ಅಧ್ಯಾತ್ಮವಿಷಯದಲ್ಲಿ ಪ್ರವೃತ್ತವಾಗುವುದರಿಂದ ಕೊನೆಯಲ್ಲಿಯೇ ಅದು ಪ್ರಸಕ್ತವಾಗುತ್ತದೆ.

ಅಥವಾ ಸೋಪಾನಾರೋಹಣಕ್ರಮನ್ಯಾಯದಿಂದಲಾಗಲೀ, ಮಹಾಮಲ್ಲಭಂಗನ್ಯಾಯದಿಂದಾಗಲೀ, ಪಾದಕ್ರಮವನ್ನು ಚಿಂತಿಸುವ ಅಗತ್ಯವಿಲ್ಲ. ಪ್ರಪಂಚ್ಯಪ್ರಪಂಚಕಭಾವಸಂಗತಿಯಿಂದಲೇ ಪಾದಕ್ರಮವನ್ನು ತಿಳಿಯಬಹುದು. ಯುಕ್ತಿವಿರೋಧವಂತೂ ಈಗಾಗಲೇ ಹೇಳಿದಂತೆ ಬಹಳ ಬಲಿಷ್ಠವಾಗಿರುತ್ತದೆ ಆದ್ದರಿಂದ ಮೊದಲು ಅದರ ಪರಿಹಾರವನ್ನು ಮಾಡುವುದು ಸಂಗತವೇ ಆಗಿದೆ ಎಂಬ ವಿಷಯದಲ್ಲಿ ವಿವಾದವಿಲ್ಲ. ಅನಂತರ ಸಮಯವಿರೋಧವೇ ಏಕೆ ಪ್ರಸಕ್ತವಾಗಿದೆ ಎಂದರೆ ಸ್ಮೃತ್ಯಧಿಕರಣದಲ್ಲಿಯೇ ಇರುವ 'ಇತರೇಷಾಂ ಚಾನುಪಲಬ್ಧೇಃ' ಎಂಬ ಸೂತ್ರದಲ್ಲಿ ಎಲ್ಲಾ ಸಮಯಗಳನ್ನು ಸಾಮಾನ್ಯವಾಗಿ ನಿರಾಕರಣೆ ಮಾಡಿದ್ದಾರೆ. ಇದರ ವಿವರಣೆಗಾಗಿಯೇ ಸಮಯಪಾದ ಹೊರಟಿದೆ. ಅನಂತರ 'ವಿಪ್ರತಿಷೇಧಾಚ್ಚ' ಎಂಬ ಸಮಯಪಾದದ ಕೊನೆಯ ಸೂತ್ರದಲ್ಲಿ ಪರಸ್ಪರ ಎಲ್ಲಾ ಮತಗಳಲ್ಲಿ ವಿರೋಧವನ್ನು ಹೇಳಿ, ಅಪ್ರಾಮಾಣ್ಯವನ್ನು ಸಾಧಿಸಿದ್ದಾರೆ. ಇದೇ ನ್ಯಾಯದಿಂದ ಶ್ರುತಿಗಳಲ್ಲಿಯೂ ಕೂಡ ಅಪ್ರಾಮಾಣ್ಯವು ಬರುತ್ತದಲ್ಲವೇ? ಎಂಬ ಆಶಂಕೆಯನ್ನು ಪರಿಹರಿಸಲು ಶ್ರುತಿವಿರೋಧಪರಿಹಾರಕ್ಕಾಗಿ ಮೂರನೆಯ ಪಾದ ಹೊರಟಿದೆ. ಅನಂತರ 'ಯಾವದ್ವಿಕಾರಂ ತು ವಿಭಾಗೋ ಲೋಕವತ್' ಎಂಬ ಸೂತ್ರದಲ್ಲಿ ಯುಕ್ತಿಸಹಿತವಾದ ಶ್ರುತಿಯಿಂದ ಮತ್ತೊಂದು ಶ್ರುತಿಗೆ ಗೌಣಾರ್ಥವನ್ನು ಮಾಡುವುದಾದರೆ, ಇಂದ್ರಿಯಗಳಿಗೆ ಅನಿತ್ಯತ್ವವನ್ನು ಹೇಳುವ ಶ್ರುತಿಗೂ ಕೂಡ ಗೌಣಾರ್ಥವನ್ನು ಮಾಡಬೇಕಾಗುತ್ತದೆ ಎಂಬ ಆಶಂಕೆಯು ಉದಯವಾಗುತ್ತದೆ. ಅದರ ಪರಿಹಾರಕ್ಕಾಗಿ ನಾಕನೆಯ ಪಾದವು ಹೊರಟಿರುತ್ತದೆ. ಹೀಗೆ ಪಾದಗಳ ಕ್ರಮದಲ್ಲಿ ಇರುವ ಸ್ವಾರಸ್ಯವನ್ನು ತಿಳಿಯಬೇಕು.

ಎರಡು ವಿಧದಲ್ಲಿ ಇದಕ್ಕೆ ಉತ್ತರಿಸಬಹುದು. ಪಾಶುಪತಾದಿ ಸ್ಮೃತಿಗಳು ಎಂದರೆ ರುದ್ರಾದಿಗಳು ಕಲ್ಪಿಸಿರುವ ಒಂದೊಂದು ಸಮಯಗಳು ಎಂದೇ ಅರ್ಥವಾಗಿರುತ್ತದೆ. ಮತ್ತು ತಾವು ಸಮರ್ಥಿಸಿದ ವಿಷಯದಲ್ಲಿ ಶ್ರುತಿ ಹಾಗೂ ಯುಕ್ತಿಗಳನ್ನು ಆಧಾರವನ್ನಾಗಿ ನೀಡುತ್ತಾರೆ. ಆದ್ದರಿಂದ ಪಾಶುಪತಾದಿಸ್ಮೃತಿಗಳು ಯುಕ್ತಿ, ಶ್ರುತಿ, ಸಮಯ, ಯುಕ್ತಿಸಹಿತ ಶ್ರುತಿ ಹೀಗೆ ನಾಕು ಪಾದೋಪಾಧಿಗಳನ್ನು ಹೊಂದಿರುತ್ತವೆ. ನಾಕು ಪಾದೋಪಾಧಿಗಳನ್ನು ಹೊಂದಿರುವ ಸ್ಮೃತಿವಿರೋಧವನ್ನು ಪರಿಹರಿಸಲು ನಾಕು ಪಾದಗಳಲ್ಲಿಯೂ ಕೂಡ ಸಂಗತಿ ದೊರೆಯುವುದಿಲ್ಲ. ಅಧ್ಯಾಯದ ಪ್ರಾರಂಭದಲ್ಲಿಯೋ, ಅಥವಾ ಕೊನೆಯಲ್ಲಿಯೋ ಸ್ಮೃತಿವಿರೋಧವನ್ನು ಪರಿಹಾರ ಮಾಡಬೇಕು. 'ಪ್ರಥಮಾತಿಕ್ರಮಣೇ ಕಾರಣಾಭಾವಾತ್' ಪ್ರಾರಂಭದಲ್ಲಿಯೇ

ಸ್ಮೃತ್ಯಧಿಕರಣವು ಹೊರಟಿದೆ. ಮತ್ತು ನಾಲ್ಕು ಪಾದೋಪಾಧಿಗಳನ್ನು ಹೊಂದಿರುವ ಕಾರಣ, ಅತ್ಯಂತ ಪ್ರಬಲವಾಗಿದೆ. ಮಹಾಮಲ್ಲಭಂಗನ್ಯಾಯದಿಂದ ಬಲಿಷ್ಠವಾದದ್ದನ್ನು ಮೊದಲೇ ನಿರಾಕರಣೆ ಮಾಡುತ್ತಿದ್ದಾರೆ.

ಸ್ಮೃತ್ಯಧಿಕರಣದ ಪೂರ್ವಪಕ್ಷ ಹೀಗಿದೆ - ಹಿಂದಿನ ಅಧ್ಯಾಯದಲ್ಲಿ ಎಲ್ಲಾ ಶ್ರುತಿಗಳನ್ನು ಮಹಾವಿಷ್ಣುವಿನಲ್ಲಿ ಸಮನ್ವಯ ಮಾಡುವ ಮೂಲಕ ಜಗತ್‌ಕಾರಣತ್ವವನ್ನು ಸಮರ್ಥಿಸಲಾಯಿತು. ಏಕೆಂದರೆ ಪಾಶುಪತಾದಿಸ್ಮೃತಿಗಳೆಲ್ಲವೂ ರುದ್ರನಿಗೆ ಜಗತ್‌ಕಾರಣತ್ವವನ್ನು ಪ್ರತಿಪಾದಿಸುತ್ತಿವೆ.

ಶ್ರುತಿಗಳು ವಿಷ್ಣುವನ್ನು ಜಗತ್‌ಕಾರಣವೆನ್ನುತ್ತಿದೆ, ಸ್ಮೃತಿಗಳು ರುದ್ರನನ್ನು ಜಗತ್‌ಕಾರಣವೆನ್ನುತ್ತಿದೆ. ಈ ಎರಡು ಪಕ್ಷಗಳಲ್ಲಿ ಯಾವುದೇ ಒಂದು ಪಕ್ಷವನ್ನು ಒಪ್ಪಿದರೂ ಶ್ರುತಿಗಾಗಲೀ, ಸ್ಮೃತಿಗಾಗಲೀ ಅಪ್ರಾಮಾಣ್ಯವನ್ನು ಹೇಳುವಂತಹ ಪರಿಸ್ಥಿತಿ ಬರುತ್ತದೆ. ಅದಕ್ಕಾಗಿ ರುದ್ರ ಹಾಗೂ ವಿಷ್ಣು ಇವರಿಬ್ಬರಲ್ಲಿ ಯಾರಾದರೂ ಕೂಡ ಜಗತ್‌ಕಾರಣರಾಗಬಹುದೆಂಬ ವಿಕಲ್ಪವನ್ನು ಆಶ್ರಯಿಸಬಹುದಲ್ಲವೇ? ಎಂದು ಪ್ರಶ್ನಿಸಬಾರದು. ಪುರುಷಾಧೀನವಾದ ಕಾರ್ಯಗಳಲ್ಲಿ ವಿಕಲ್ಪವನ್ನು ಆಶ್ರಯಿಸಬಹುದೇ ಹೊರತು, ಸಿದ್ಧವಾದ ವಿಷಯದಲ್ಲಿ ವಿಕಲ್ಪವು ಎಂದೂ ಕೂಡುವುದಿಲ್ಲ. ಜಗತ್ತಿಗೆ ಕಾರಣನಾದ ಒಬ್ಬ ವ್ಯಕ್ತಿಯು ಈಗಾಗಲೇ ಸಿದ್ಧನಾಗಿದ್ದಾನೆ. ಅವನ ಬಗ್ಗೆ ತಿಳಿಯಬೇಕಾದದ್ದಷ್ಟೇ ನಮ್ಮ ಕರ್ತವ್ಯ. ಅದನ್ನು ಬಿಟ್ಟು ಸಮಾಧಾನಕ್ಕಾಗಿ ವಿಕಲ್ಪಪಕ್ಷವನ್ನು ಆಶ್ರಯಿಸಬಾರದು.

ವಿಷ್ಣು ಹಾಗೂ ರುದ್ರ ಇವರಿಬ್ಬರೂ ಕೂಡ ಜಗತ್‌ಕಾರಣರೆಂದು ಒಪ್ಪಬಹುದಲ್ಲವೇ? ಕೆಲವು ದೇಶಗಳಲ್ಲಿ ಶ್ರುತಿ-ಸ್ಮೃತಿಗಳಲ್ಲಿ ನಿರಪೇಕ್ಷಿತವಾಗಿ ಒಬ್ಬೊಬ್ಬರೇ ಜಗತ್‌ಕಾರಣರೆಂದು ಹೇಳಿರಬಹುದು. ಆ ವಿರೋಧವನ್ನು ದೇಶಭೇದ, ಕಾಲಭೇದ ಮತ್ತು ಕಾರ್ಯಭೇದಗಳಿಂದ ಪರಿಹರಿಸಲು ಬರುತ್ತದೆ. ಈ ಬಗೆಯ ವಿಚಾರವೂ ಕೂಡ ಸರಿಯಿಲ್ಲ. ಏಕೆಂದರೆ ಶ್ರುತಿಯಲ್ಲಿ ವಿಷ್ಣುವೇ ಸರ್ವದೇಶ, ಸರ್ವಕಾಲಗಳಲ್ಲಿ ಸಕಲವಿಧಕಾರ್ಯಗಳಿಗೆ ಕಾರಣನಾಗಿದ್ದಾನೆಂದು ಹೇಳಲಾಗಿದೆ. ಸ್ಮೃತಿಯಲ್ಲಿ ರುದ್ರದೇವರೇ ಸಕಲದೇಶ, ಸಕಲಕಾಲಗಳಲ್ಲಿ ಸಕಲವಿಧಕಾರ್ಯಗಳಿಗೆ ಕಾರಣರಾಗಿದ್ದಾರೆಂದು ಹೇಳಲಾಗಿದೆ. ಅಷ್ಟೇ ಅಲ್ಲದೇ ಶ್ರುತಿಯಲ್ಲಿ ವಿಷ್ಣುವನ್ನು ಹೊರತಾಗಿ, ಬೇರೆ ಯಾರೂ ಕೂಡ ಜಗತ್‌ಕಾರಣರಾಗಲು ಸ್ಯಾಧವಿಲ್ಲವೆಂಬ ನಿಷೇಧ ವಚನವಿದೆ. ಸ್ಮೃತಿವಾಕ್ಯದಲ್ಲೂ ಕೂಡ ರುದ್ರನನ್ನು ಹೊರತಾಗಿ, ಬೇರೆ ಯಾರೂ ಕೂಡ ಜಗತ್‌ಕಾರಣರಾಗಲು ಸ್ಯಾಧವಿಲ್ಲವೆಂಬ ವಚನವಿದೆ. ಆದ್ದರಿಂದ ವಿಕಲ್ಪವನ್ನು ಆಶ್ರಯಿಸಲು ಹೇಗೆ ಸಾಧ್ಯವಿಲ್ಲವೋ? ಇಬ್ಬರೂ ಒಟ್ಟಿಗೆ ಸೇರಿ ಜಗತ್‌ಕಾರಣರಾಗುತ್ತಾರೆಂಬ ಸಮುಚ್ಚಯಪಕ್ಷವೂ ಕೂಡ ಸಾಧುವಲ್ಲ. ಪೂರ್ವಮೀಮಾಂಸೆಯ ವಿರೋಧಾಧಿಕರಣ ನ್ಯಾಯದಿಂದ ಸ್ಮೃತಿಗೆ ಅಪ್ರಾಮಾಣ್ಯವನ್ನು ಹೇಳಲಾಗದು. ಏಕೆಂದರೆ ಶ್ರುತಿಗಳು ಅಪೌರುಷೇಯವಾದ್ದರಿಂದ ನಿರ್ಮೂಲವಾಗಿವೆ. ಸ್ಮೃತಿಗಳು ಪೌರುಷೇಯವಾಗಿ ಆಪ್ತೋಕ್ತವಾದ್ದರಿಂದ

ಸಮೂಲವಾಗಿವೆ. ಸಮೂಲವಾದ ಸ್ಮೃತಿಗಳಿಗೆ ಅನುಸಾರಿಯಾಗಿಯೇ ನಿರ್ಮೂಲವಾದ ವೇದಗಳನ್ನು ನಯನ ಮಾಡಬೇಕು. ಹೀಗೆ ಪ್ರಬಲವಾದ ಪಾಶುಪತಾದಿ ಸ್ಮೃತಿಗಳು ರುದ್ರನಿಗೆ ಜಗತ್‌ಕಾರಣತ್ವವನ್ನು ಸಮರ್ಥಿಸುತ್ತಿವೆ.

ಸುಂದೋಪಸುಂದನ್ಯಾಯದಿಂದ ಶ್ರುತಿ-ಸ್ಮೃತಿಗಳೆರಡೂ ಪರಸ್ಪರ ವಿರುದ್ಧವಾಗಿವೆ. ಈ ಕಾರಣದಿಂದ ಎರಡಕ್ಕೂ ಅಪ್ರಾಮಾಣ್ಯವನ್ನು ಹೇಳಬೇಕು ಎಂಬ ಆಕ್ಷೇಪವನ್ನು ಶೈವರೇ ಪರಿಹರಿಸುತ್ತಾರೆ. ಸ್ಮೃತಿಗಳು ಅತ್ಯಂತ ಸ್ಪಷ್ಟವಾದ ವಿಷಯಗಳನ್ನು ಮಂಡಿಸುತ್ತವೆ. ಯಾವ ಶಿವಾದಿಗಳು ಸ್ಮೃತಿಗಳನ್ನು ರಚನೆ ಮಾಡಿರುತ್ತಾರೋ, ಅವರೇ ತಮ್ಮ ಶಿಷ್ಯಂದಿರಿಗೆ ಅದರ ಅರ್ಥವನ್ನು ಉಪದೇಶಿಸಿರುತ್ತಾರೆ. ಆದರೆ ಶ್ರುತಿಗಳಾದರೋ, ಎಲ್ಲಾ ವಿಷಯಗಳನ್ನು ಅಸ್ಪಷ್ಟವಾಗಿ ಹೇಳುತ್ತವೆ. ಒಂದು ವಿಷಯವನ್ನು ಹೇಳಲು ಪ್ರಾರಂಭಿಸಿ, ಅರ್ಧದಲ್ಲಿ ಆ ವಿಚಾರವನ್ನು ಕೈಬಿಟ್ಟು ಮತ್ತೊಂದು ವಿಚಾರದಲ್ಲಿ ತೊಡಗುತ್ತವೆ. ಅವ್ಯವಸ್ಥಿತವಾದ ಪ್ರಕರಣಗಳಿಂದ ಕೂಡಿವೆ. ಬಹಳ ವಿಸ್ತಾರವಾಗಿ ಅಧ್ಯಯನವನ್ನು ಮಾಡಲಾರದಷ್ಟು ವಾಕ್ಯಸಂದರ್ಭಗಳನ್ನು ಹೊಂದಿವೆ. ಅರ್ಥವಿಶೇಷದಲ್ಲಿ ನಿಷ್ಠವಾಗಿಲ್ಲ. ಯಾರೂ ಕೂಡ ರಚನೆ ಮಾಡದ ಕಾರಣ ಅದರ ಅರ್ಥವನ್ನು ಅವರಿಂದ ತಿಳಿಯಲೂ ಕೂಡ ಸಾಧ್ಯವಾಗುವುದಿಲ್ಲ. ಸ್ವತಃ ತಾವು ಯಾವುದೇ ಅರ್ಥವನ್ನು ಬೋಧನೆ ಮಾಡುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಶ್ರುತಿಗಳು ದುರ್ಬಲವಾಗಿವೆ. ಈ ಶ್ರುತಿಗಳ ಅರ್ಥವು ಸ್ಮೃತಿಯನ್ನೇ ಅವಲಂಬಿಸಿರುವುದರಿಂದ, ಸ್ಮೃತಿಗಳಿಗೆ ವಿರುದ್ಧವಾಗಿ ಏನನ್ನಾದರೂ ಹೇಳಲು ಹೊರಟರೆ ಉಪಜೀವ್ಯವಿರೋಧವು ಬರುತ್ತದೆ.

ಸಮೂಲವಾದ ಸ್ಮೃತಿಗಳ ವಿರೋಧವು ಪ್ರಾಪ್ತವಾದರೆ. ನಿರ್ಮೂಲವಾದ ಶ್ರುತಿಗಳಿಗೆ ಅಪ್ರಾಮಾಣ್ಯವನ್ನೇ ಹೇಳಬೇಕೆಂಬುದು ಪೂರ್ವಪಕ್ಷಿಗಳ ಬಲವಾದ ಆಕ್ಷೇಪ. ಈ ಅಧಿಕರಣದಲ್ಲಿ ಶ್ರುತಿಗಳಿಗೆ ಅಪ್ರಾಮಾಣ್ಯವನ್ನು ಆಕ್ಷೇಪ ಮಾಡುತ್ತಿಲ್ಲ. ಹೊರತಾಗಿ, ಸ್ಮೃತಿಗಳಿಗೆ ಅನುಸಾರಿಯಾಗಿ ಶ್ರುತಿಗಳನ್ನು ಅರ್ಥೈಸಬೇಕೆಂದು ಆಕ್ಷೇಪಿಸಲಾಗಿದೆ. ಆದ್ದರಿಂದಲೇ ಸೂತ್ರದಲ್ಲಿ ಪ್ರಸಂಗಶಬ್ದವು ಇರುತ್ತದೆ. ಭಾಷ್ಯದಲ್ಲಿ 'ಸ್ಯಾತ್' ಎಂಬ ಶಬ್ದವು, ಟೀಕೆಯಲ್ಲಿ 'ಪ್ರಸಂಗ' ಶಬ್ದವೂ ಕೂಡ ಇದೇ ಅಭಿಪ್ರಾಯದಲ್ಲಿ ಉಲ್ಲೇಖಿತವಾಗಿದೆ. ಇನ್ನು ಕಣಾದಾದಿಗಳ ಮತದಲ್ಲಿ ಶ್ರುತಿಗಳಿಗೆ ಪ್ರಾಮಾಣ್ಯವನ್ನು ಹಾಗೂ ಪೌರುಷೇಯತ್ವವನ್ನು ಒಪ್ಪಿರುವುದರಿಂದ, ಸ್ಮೃತಿಯಂತೆ ಶ್ರುತಿಗಳು ಸಮಬಲವಾಗುತ್ತವೆ. ಆದರೆ ಅವರನ್ನು ಪೂರ್ವಪಕ್ಷಿಗಳನ್ನಾಗಿ ಇಲ್ಲಿ ವಿವಕ್ಷಿಸಬಾರದು.

ಒಂದುವೇಳೆ ಕಣಾದಾದಿಗಳೂ ಕೂಡ ಪೂರ್ವಪಕ್ಷಿಗಳಾದರೆ ಕಣಾದಾದಿಸ್ಮೃತಿಗಳು ಯುಕ್ತಿಬದ್ಧವಾಗಿ ವಿಚಾರವನ್ನು ಪ್ರತಿಪಾದನೆ ಮಾಡುತ್ತಿವೆ. ಶ್ರುತಿಗಳು ಹಾಗಿಲ್ಲದ ಕಾರಣ ದುರ್ಬಲವಾಗಿವೆಯೆಂದು ಪೂರ್ವಪಕ್ಷವನ್ನು ತಿಳಿಯಬೇಕಾಗುತ್ತದೆ.

ಬೌದ್ಧಾದಿಗಳೂ ಕೂಡ ವೇದವನ್ನು ಅಪ್ರಮಾಣವೆನ್ನುತ್ತಾರೆ. ಅವರ ಪ್ರಕಾರ ಆಪ್ತಪ್ರಣೀತವಾದ ಬೌದ್ಧಾಗಮಗಳ ವಿರೋಧ ಬರುವುದರಿಂದ ವೇದವು ಅಪ್ರಮಾಣವಾಗುತ್ತದೆಂಬ ಪೂರ್ವಪಕ್ಷವನ್ನು ತಿಳಿಯಬೇಕು. ಆದ್ದರಿಂದ ತತ್ವಪ್ರಕಾಶಿಕೆಯ ಪ್ರಕಾರ ಸೂತ್ರಕ್ಕೆ ಹೀಗರ್ಥ - ಸಾಂಖ್ಯಾದಿಸ್ಮೃತಿಗಳು ನಿರವಕಾಶವಾದ್ದರಿಂದ ಶ್ರುತಿಗಳಿಗೆ ಅರ್ಥಾಂತರ ಮಾಡಬೇಕೆಂದು ಆಕ್ಷೇಪ. ಪಂಚರಾತ್ರಾದಿಸ್ಮೃತಿಗಳೂ ಕೂಡ ನಿರವಕಾಶವಾಗಿರುವುದರಿಂದ ಶೈವಾದಿಸ್ಮೃತಿಗಳಿಗೆ ಅಪ್ರಾಮಾಣ್ಯ ಬರುತ್ತದೆಂದು ಸಿದ್ಧಾಂತ ಎಂದು. ನ್ಯಾಯಸುಧೆಯ ಮತ್ತು ತತ್ವಪ್ರದೀಪದ ಪ್ರಕಾರ ಬೌದ್ಧಾದಿಸ್ಮೃತಿಗಳು ನಿರವಕಾಶವಾಗಿರುವುದರಿಂದ ಶ್ರುತಿಗಳಿಗೆ ಅಪ್ರಾಮಾಣ್ಯವನ್ನು ಆಕ್ಷೇಪ ಮಾಡಿ, ಪಂಚರಾತ್ರಾದಿಸ್ಮೃತಿಗಳಿಗೆ ನಿರವಕಾಶತ್ವವನ್ನು ಸಮರ್ಥಿಸುವ ಮೂಲಕ, ಬೌದ್ಧಾದಿಸ್ಮೃತಿಗಳಿಗೆ ಅಪ್ರಾಮಾಣ್ಯವನ್ನು ಸಮರ್ಥಿಸಬೇಕೆಂಬ ಸಿದ್ಧಾಂತದ ಅರ್ಥವನ್ನು ತಿಳಿಯಬೇಕು. ಹೀಗೆ ವ್ಯವಸ್ಥಿತವಾಗಿ ಸೂತ್ರದ ಅರ್ಥವನ್ನು ಎರಡು ಬಗೆಯಲ್ಲಿ ಗಮನಿಸಬೇಕು. ಶ್ರುತಿಗಳೆಲ್ಲವೂ ಅಪ್ರಮಾಣವಾಗಿವೆಯೆಂದು ಪೂರ್ವಪಕ್ಷ ಮಾಡಿದಾಗ, ಶ್ರುತಿಗಳಿಗೆ ಸಂಪೂರ್ಣವಾಗಿ ಸ್ಮೃತಿವಿರೋಧವನ್ನು ಆಕ್ಷೇಪ ಮಾಡಬೇಕು. ಶ್ರುತಿಗೆಳಿಗೆ ಪ್ರಾಮಾಣ್ಯವನ್ನು ಒಪ್ಪಿದಾಗ ಸಿದ್ಧಾಂತಿಗಳಿಗೆ ಅಭಿಪ್ರೇತವಾದ ಅರ್ಥವನ್ನು ಕೈಬಿಡಬೇಕಾಗುತ್ತದೆಂದು ಆಕ್ಷೇಪ ಮಾಡಬೇಕು. ಎರಡೂ ಪಕ್ಷಗಳಲ್ಲಿಯೂ ಶ್ರುತಿಗಳಿಗೆ ಸ್ಮೃತಿವಿರೋಧವು ಬರುವುದರಿಂದ ಸ್ಮೃತ್ಯಧಿಕರಣಕ್ಕೆ ಅಧ್ಯಾಯದಲ್ಲಿ ಅಸಾಂಗತ್ಯವಿರುವುದಿಲ್ಲ.

ಪಾಶುಪತಾದಿ ಸ್ಮೃತಿಗಳನ್ನು ಪಂಚರಾತ್ರಾದಿ ಸ್ಮೃತಿಗಳು ಆಪಾತತಃ ಪ್ರತಿರೋಧ ಮಾಡುತ್ತದೆ. ಸ್ವಲ್ಪ ವಿಮರ್ಶೆ ಮಾಡಿದರೆ, ಪಂಚರಾತ್ರಾದಿ ಸ್ಮೃತಿಗಳು ಪಾಶುಪತಾದಿ ಸ್ಮೃತಿಗಳನ್ನು ಬಾಧಿಸುತ್ತದೆ. ಅದೇ ಪಂಚರಾತ್ರಾದಿ ಸ್ಮೃತಿಗಳು ಅಪೌರುಷೇಯವಾದ ಶ್ರುತಿಗಳ ಬೆಂಬಲ ಪಡೆದಾಗ ಸರ್ವಾತ್ಮನಾ ಪಾಶುಪತಾದಿಸ್ಮೃತಿಗಳನ್ನು ಬಾಧಿಸುತ್ತದೆ.

ಆಪಾತತಃ ನೋಡಿದರೆ ಶೈವಸ್ಮೃತಿಗಳು ಹೇಗೋ, ಅದರಂತೆ ಪಂಚರಾತ್ರಾದಿಸ್ಮೃತಿಗಳೂ ಕೂಡ ಸ್ಪಷ್ಟವಾಗಿಯೇ ವಿಷಯಗಳನ್ನು ಪ್ರತಿಪಾದನೆ ಮಾಡುತ್ತಿವೆ. ಸರ್ವಜ್ಞನಾದ ವಿಷ್ಣುವಿನಿಂದಲೇ ರಚಿತವಾಗಿವೆ. ಆದ್ದರಿಂದ ಶೈವಾದಿಸ್ಮೃತಿಗಳಿಂದ ಸಮಾನಬಲವನ್ನು ಹೊಂದಿರುತ್ತವೆ. ಇಂತಹ ಪಂಚರಾತ್ರಾದಿಸ್ಮೃತಿಗಳಿಂದ ಶೈವಾದಿಸ್ಮೃತಿಗಳು ಪ್ರತಿರುದ್ಧವಾಗುತ್ತವೆ. ಆವಾಗ ಶೈವಾದಿಸ್ಮೃತಿಗಳ ವಿರೋಧವಿಲ್ಲದ ಶ್ರುತಿಗಳು ವಿಷ್ಣುವನ್ನು ಪ್ರತಿಪಾದನೆ ಮಾಡುತ್ತವೆಂಬ ಸಿದ್ಧಾಂತಿಗಳ ಅಭಿಲಾಷೆಯು ಪೂರೈಸುತ್ತದೆ.

ಸ್ವಲ್ಪ ವಿಮರ್ಶೆ ಮಾಡಿದರೆ ವಿಷ್ಣುವಿನಲ್ಲಿ ರುದ್ರಾದಿಗಳಿಗಿಂತ ಹೆಚ್ಚಿನ ಸಾರ್ವಜ್ಞವಿದೆ. ವಿಷ್ಣುವಿನಿಂದ ಹೇಳಲ್ಪಟ್ಟ ಪಂಚರಾತ್ರಾದಿಸ್ಮೃತಿಗಳಿಗೆ ಶ್ರುತಿಗಳ ಸಂವಾದವೂ ಇದೆ. ರುದ್ರಾದಿಗಳಿಗಿಂತಲೂ ವಿಷ್ಣು ಹೆಚ್ಚು ಆಪ್ತನೆಂದು ಇದರಿಂದ ಸಿದ್ಧವಾಗುತ್ತದೆ. ಆದ್ದರಿಂದ ಶೈವಾದಿಸ್ಮೃತಿಗಳಿಗಿಂತಲೂ ಪಂಚರಾತ್ರಾದಿಸ್ಮೃತಿಗಳೇ ಪ್ರಬಲ ಎನಿಸುತ್ತವೆ. ಯುಕ್ತಿಯ ಸಂವಾದವಿಲ್ಲದೇ ಸುಮ್ಮನೆ ವಾಕ್ಯ ಪ್ರಯೋಗವನ್ನು ಮಾಡುವವನಿಗಿಂತಲೂ

ಯುಕ್ತಿಬದ್ಧವಾಗಿ ಅರ್ಥಪೂರ್ಣವಾದ ವಾಕ್ಯಗಳನ್ನು ರಚನೆ ಮಾಡುವವನು ಹೇಗೆ ಬಲಿಷ್ಠನೋ ? ಅದರಂತೆ ಶ್ರುತಿಗಳ ಸಂವಾದವಿರುವ ಅರ್ಥಪೂರ್ಣವಾದ ಪಂಚರಾತ್ರಾದಿಸ್ಮೃತಿಗಳು ಬಲಿಷ್ಠವಾಗುತ್ತವೆ.

ಇನ್ನೂ ಹೆಚ್ಚು ವಿಮರ್ಶೆ ಮಾಡಿದರೆ ಶೈವಾದಿಸ್ಮೃತಿಗಳು ಶ್ರುತಿಗಳಿಂದಲೇ ಅತ್ಯಂತವಾಗಿ ಬಾಧಿತವಾಗುತ್ತವೆ. ಏಕೆಂದರೆ ಶೈವಾದಿಸ್ಮೃತಿಗಳಂತೆ ಸಮಾನಬಲಹೊಂದಿರುವ ಅಥವಾ ಹೆಚ್ಚು ಬಲಹೊಂದಿರುವ ಪಂಚರಾತ್ರಾದಿಸ್ಮೃತಿಗಳ ಬೆಂಬಲ ಶ್ರುತಿಗಳಿಗಿದೆ. ಕೇವಲ ಶ್ರುತಿಯು ಪೂರ್ವಪಕ್ಷಿಗಳು ಹೇಳುವಂತೆ ದುರ್ಬಲವಾಗಿರಬಹುದು. ಆದರೆ ಪಂಚರಾತ್ರಾದಿ ಸ್ಮೃತಿಗಳಿಂದ ಸಹಿತವಾದ ಶ್ರುತಿಯು ಬಹಳ ಬಲಿಷ್ಠವಾಗುತ್ತದೆ. ಕುದುರೆಯನ್ನು ಎದುರಿಸಲು ಕೇವಲ ಕಾಲಾಳುವಿಗೆ ಸಾಧ್ಯವಾಗದಿರಬಹುದು. ಆದರೆ ಮತ್ತೊಂದು ಕುದುರೆಯ ಮೇಲೆ, ಅಥವಾ ಆನೆಯ ಮೇಲೆ ಕುಳಿತಾಗ ಅದೇ ಕಾಲಾಳುವಿಗೆ ಹೆಚ್ಚಿನ ಬಲ ಬರುವಂತೆ ಶ್ರುತಿಗಳಿಗೂ ಪಾಶುಪತಾದಿಸ್ಮೃತಿಗಳಿಗಿಂತ ಹೆಚ್ಚಿನ ಬಲವಿರುತ್ತದೆ.

ಅಥವಾ ಮುಂದೆ ನವಿಲಕ್ಷಣತ್ವಾಧಿಕರಣದಲ್ಲಿ ಯಾವುದೇ ದೋಷಗಳ ಆಶಂಕೆಯಿಲ್ಲದ ಶ್ರುತಿಗಳು ಸಹಜವಾಗಿ ಪ್ರಬಲವಾಗಿರುತ್ತವೆಂದು ಸಮರ್ಥಿಸುತ್ತಾರೆ. ಅದನ್ನು ವಿವಕ್ಷಿಸಿದಾಗ ಪಾಶುಪತಾದಿಸ್ಮೃತಿಗಳಿಗೆ ಇನ್ನೂ ಹೆಚ್ಚಿನ ಬಾಧದೋಷವು ಬರುತ್ತದೆ. ಅಥವಾ ಅನೇಕ ಪ್ರಮಾಣಗಳಿಂದ ಶೈವಾದಿಸ್ಮೃತಿಗಳೆಲ್ಲವೂ ಅಪ್ರಮಾಣವಾಗಿವೆ ಎಂದು ನೇರವಾಗಿಯೇ ತೀರ್ಮಾನವಾಗುತ್ತಿದೆ. 'ತ್ವಂ ಚ ರುದ್ರ ಮಹಾಬಾಹೋ ಮೋಹಶಾಸ್ತ್ರಾಣಿ ಕಾರಯ' ಇತ್ಯಾದಿ ವಾಕ್ಯವನ್ನು ಗಮನಿಸಿದಾಗ ಕೇವಲ ದುರ್ಜನರಿಗೆ ದಿಕ್ಕು ತಪ್ಪಿಸುವುದಕ್ಕಾಗಿಯೇ ಶೈವಾದಿಸ್ಮೃತಿಗಳು ರಚಿತವಾಗಿವೆ ಎಂದು ತಿಳಿಯುವುದರಿಂದ ಸ್ವತಃ ಅಪ್ರಮಾಣಗಳಾಗಿವೆ. ಇಂತಹ ಶೈವಾದಿಸ್ಮೃತಿಗಳಿಗೆ ಯಾವುದೇ ರೀತಿಯಲ್ಲಿಯೂ ಪ್ರಾಬಲ್ಯ ಬರಲು ಸಾಧ್ಯವಿಲ್ಲ. ಹೊರತಾಗಿ ಅತಿತಮವಾದ ಬಾಧದೋಷವೇ ಬರುತ್ತದೆ.

ಪಾಶುಪತಾದಿಸ್ಮೃತಿಗಳಿಂದ ವೇದ, ಪಂಚರಾತ್ರಗಳಲ್ಲಿ ಹೇಳಲ್ಪಟ್ಟ ವಿಷ್ಣುಪಾರಮ್ಯವನ್ನು ನಿರಾಕರಣೆ ಮಾಡಬೇಕಾದರೆ ಮೊದಲು ಪಾಶುಪತಾದಿ ಸ್ಮೃತಿಗಳಿಗೆ ಪ್ರಾಮಾಣ್ಯವನ್ನು ನಿರ್ಧಾರ ಮಾಡಬೇಕು. ಆದರೆ ಇದು ಸಾಧ್ಯವಿಲ್ಲ. ಶೈವ, ಪಂಚರಾತ್ರ, ಸೌರ ಮೊದಲಾದ ಆಗಮಗಳು ಏಕರೂಪವಾಗಿ ಯಾವುದೇ ವಿಷಯವನ್ನು ಪ್ರತಿಪಾದನೆ ಮಾಡುತ್ತಿಲ್ಲ. ಒಂದು ಆಗಮದಲ್ಲಿ ಯಾವ ವಿಚಾರವನ್ನು ಪ್ರತಿಪಾದನೆ ಮಾಡಲಾಗಿರುತ್ತದೋ, ಅದಕ್ಕೆ ವಿರುದ್ಧವಾಗಿ ಇನ್ನೊಂದು ಆಗಮವು ವಿಷಯವನ್ನು ಪ್ರತಿಪಾದನೆ ಮಾಡುತ್ತದೆ. ಶಿವಪಾರಮ್ಯವನ್ನು ಶೈವಶಾಸ್ತ್ರವು ನಿರೂಪಣೆ ಮಾಡಿದರೆ, ಕಾಪಿಲಾದಿ ಆಗಮಗಳು ಅದನ್ನು ನಿರಾಕರಣೆ ಮಾಡುತ್ತವೆ. ಪರಸ್ಪರ ವಿರೋಧಿಯಾದ ನಿರೂಪಣೆಯಿರುವ ಈ ಎರಡು ಆಗಮಗಳು ಪ್ರಮಾಣವಾಗಲಾರವು. ಇವುಗಳಲ್ಲಿ ಒಂದು ಮಾತ್ರ ಸಾಧುವಾಗುತ್ತದೆ.ಇದಕ್ಕೆ ವಿರೋಧಿಯಾಗಿರುವ ಉಳಿದ ಆಗಮಗಳು ಅಸಾಧುವಾಗಿವೆಯೆಂದು ನಿರ್ಧಾರ ಮಾಡಲು ಹೇಗೆ ಸಾಧ್ಯ? ಆಯಾ ಪಂಥದವರು ತಮ್ಮ ತಮ್ಮ ಗುರುಗಳನ್ನೇ ಸರ್ವಜ್ಞರೆಂದು, ಆಪ್ತರೆಂದು ಹೇಳುತ್ತಾರೆ. ಪ್ರತಿಯೊಬ್ಬರೂ ಕೂಡ ಹೀಗೆಯೇ

ಹೇಳುವುದರಿಂದ ಇವನೇ ಸರ್ವಜ್ಞನಾಗಿದ್ದಾನೆ, ಇವನೇ ವಿಶ್ವಾಸಕ್ಕೆ ಅರ್ಹನಾಗಿದ್ದಾನೆ ಎಂಬ ನಿರ್ಧಾರವು ಬಹಳ ಕಷ್ಟವಾಗುತ್ತದೆ. ಏಕೆಂದರೆ ಆಯಾ ಆಗಮಗಳು ಅನುಯಾಯಿಗಳು ತಮ್ಮ ಮೂಲಪುರುಷರ ಬಗ್ಗೆ ಹೇಳುವ ಚರಿತ್ರೆ ಮಹಾತ್ಮ್ಯಗಳನ್ನು ಉಳಿದವರು ಒಪ್ಪುವುದಿಲ್ಲ. ಹೀಗೆ ಎಲ್ಲಾ ಸ್ಮೃತಿಗಳು ಸಮಾನವಾಗಿರುವಾಗ ಇವುಗಳಲ್ಲಿ ಯಾವುದನ್ನು ಪ್ರಮಾಣವೆಂದು ಸ್ವೀಕಾರ ಮಾಡಬೇಕು, ಯಾವುದನ್ನು ಅಪ್ರಮಾಣವೆಂದು ಪರಿತ್ಯಾಗ ಮಾಡಬೇಕು ಎಂಬ ನಿರ್ಧಾರವೇ ಕಷ್ಟವಾಗುತ್ತದೆ. ಅಂತಿಮವಾಗಿ ಇದರ ಪರಿಹಾರಕ್ಕಾಗಿ ಅಪೌರುಷೇಯವಾದ ವೇದವನ್ನೇ ಅವಲಂಬಿಸಬೇಕು. ಅಪೌರುಷೇಯವಾದ ವೇದವು ಸ್ವತಃಪ್ರಮಾಣವಾಗಿದೆ. ಈ ದೃಷ್ಟಿಯಿಂದ ವೇದದ ಸಂವಾದವಿರುವ ಪಂಚರಾತ್ರ ಮೊದಲಾದ ಆಗಮಗಳು ಪ್ರಮಾಣವಾಗುತ್ತವೆಂದು ನಿರ್ಧಾರ ಮಾಡಬಹುದು.

ಮತ್ತು ಶೈವಾದಿ ಆಗಮಗಳು ಹೇಳುವ ರೀತಿಯಲ್ಲಿ ಕರ್ಮಾನುಷ್ಠಾನಗಳನ್ನು ಮಾಡಿದರೂ ಕೂಡ ಕೆಲವು ವೇಳೆ ಮಾತ್ರ ಫಲ ದೊರೆಯುತ್ತದೆ. ಅನೇಕ ಬಾರಿ ಅನುಷ್ಠಾನಗಳು ವಿಫಲವಾಗುವುದನ್ನು ನಾವು ಕಂಡಿದ್ದೇವೆ. ನಮ್ಮ ಲೋಪದೋಷಗಳಿಂದ ಫಲವು ದೊರೆಯುತ್ತಿಲ್ಲವೋ, ಅಥವಾ ಆಯಾ ಆಗಮಪ್ರವರ್ತಕರೇ ಸುಳ್ಳು ಹೇಳಿ ವಂಚನೆ ಮಾಡಿದ್ದಾರೋ, ಎಂಬ ಸಂದೇಹ ನಮ್ಮ ಮನಸ್ಸಿನಲ್ಲಿ ಮೂಡುತ್ತದೆ. ಆವಾಗ ಆಯಾ ಗ್ರಂಥಗಳ ಪ್ರಾಮಾಣ್ಯವನ್ನೂ ಕೂಡ ನಿರ್ಧಾರ ಮಾಡಲು ಸಾಧ್ಯವಾಗುವುದಿಲ್ಲ. ಇದರಂತೆ ವೇದ ಪಂಚರಾತ್ರಗಳಲ್ಲಿ ಹೇಳಿದ ಕರ್ಮಾನುಷ್ಠಾನಗಳನ್ನು ಮಾಡಿದರೂ ಅನೇಕ ಬಾರಿ ನಮಗೆ ಫಲ ದೊರೆಯುತ್ತಿಲ್ಲ. ಆದ್ದರಿಂದ ವೇದ ಪಂಚರಾತ್ರಗಳನ್ನೂ ಕೂಡ ನೀವು ಅಪ್ರಮಾಣವೆಂದು ಹೇಳಬೇಕಾಗುತ್ತದಲ್ಲವೇ? ಎಂಬ ಪ್ರಶ್ನೆ ಬರುತ್ತದೆ. ಆದರೆ ವೇದದಲ್ಲಿ ಹೇಳಿದ ಕರ್ಮಾನುಷ್ಠಾನ ಬಹಳ ಕಠಿಣ. ಕುಲಶುದ್ಧಿ, ಬಾಲ್ಯದಿಂದ ಅನುಷ್ಠಾನ ಮಾಡಬೇಕಾದ ಎಲ್ಲಾ ವೈದಿಕಸಂಸ್ಕಾರಗಳ ಸಂಪನ್ನತೆ, ಸ್ವಲ್ಪವೂ ಲೋಪವಿಲ್ಲದ ಕರ್ಮಾನುಷ್ಠಾನ ಮುಂತಾದವುಗಳು ಪರಿಪೂರ್ಣವಾಗಿದ್ದರೆ ಮಾತ್ರ ಫಲವು ದೊರೆಯುತ್ತದೆ. ಕಠಿಣನಿಯಮನಿಬಂಧನೆಗಳನ್ನೊಳಗೊಂಡ ವೈದಿಕ ಕರ್ಮಾನುಷ್ಠಾನಗಳಿಂದ ಅನೇಕ ಬಾರಿ ಫಲವು ದೊರೆಯಲಿಲ್ಲವೆಂದು ವೇದಗಳನ್ನು ಅಪ್ರಮಾಣವೆಂದು ನಿರ್ಣಯಿಸಲು ಸಾಧ್ಯವಾಗುವುದಿಲ್ಲ. ಇಷ್ಟೊಂದು ಕಠಿಣನಿಯಮಗಳು ಆಗಮದಲ್ಲಿ ಹೇಳಿರುವುದಿಲ್ಲ. ಶೈವಾದಿ ಆಗಮಗಳಲ್ಲಿ ಹೇಳಲ್ಪಟ್ಟ ನಿಯಮಗಳೆಲ್ಲವೂ ಬಹಳ ಸುಲಭ ಹಾಗೂ ಸರಳ. ಹೀಗಿದ್ದರೂ ಕೂಡ ಅವುಗಳಿಂದ ಫಲವು ದೊರಯದಿದ್ದಾಗ ಅವುಗಳ ಪ್ರಾಮಾಣ್ಯದ ಬಗ್ಗೆಯೇ ಸಂದೇಹವುಂಟಾಗುತ್ತದೆ. ಕರ್ಮಾನುಷ್ಠಾನಗಳು ವಿಫಲವಾಗಿರುವುದೇ ಹೆಚ್ಚು ಕಂಡಿರುವುದರಿಂದ ಪಾಶುಪತ ಮುಂತಾದ ಆಗಮಗಳಿಗೆ ಪ್ರಾಮಾಣ್ಯವನ್ನು ನಿರ್ಧರಿಸುವುದು ಸಾಧ್ಯವಿಲ್ಲ.

ವೇದದಲ್ಲಿ ಹೇಳಿದಂತೆ ಕರ್ಮಗಳನ್ನು ಆಚರಣೆ ಮಾಡಿದಾಗ ಫಲವು ದೊರೆಯದಿದ್ದರೂ ವೇದದ ಪ್ರಾಮಾಣ್ಯಕ್ಕೆ ಯಾವುದೇ ಚ್ಯುತಿಯಿಲ್ಲ ಎನ್ನಲು ಇನ್ನೂ ಒಂದು ಕಾರಣವಿದೆ. ಯಾವುದೇ ಒಂದು ವಾಕ್ಯವು ಅಪ್ರಮಾಣವೆನಿಸಬೇಕಾದರೆ ಅದನ್ನು ರಚನೆ ಮಾಡಿರುವ ವ್ಯಕ್ತಿಯಲ್ಲಿ ಅಜ್ಞಾನ, ಭ್ರಾಂತಿ

ಮೊದಲಾದ ಮಾನಸಿಕ ದೋಷಗಳಿರಬೇಕು. ವಸ್ತುಗಳನ್ನು ಸರಿಯಾಗಿ ತಿಳಿದುಕೊಳ್ಳದಿರುವಾಗ ಅದನ್ನು ತಪ್ಪಾಗಿ ಗ್ರಹಿಸಿ, ಇನ್ನೊಬ್ಬರಿಗೆ ಭ್ರಾಂತಿಯನ್ನು ಹುಟ್ಟಿಸಿ, ಮೋಸಗೊಳಿಸಬೇಕೆಂಬ ಉದ್ದೇಶವಿದ್ದಾಗ ವಾಕ್ಯಗಳು ಭ್ರಮೆಯನ್ನುಂಟು ಮಾಡಿ, ಅಪ್ರಮಾಣವಾಗುತ್ತವೆ. ಇದು ಪೌರುಷೇಯ ಗ್ರಂಥಗಳಲ್ಲಿ ಮಾತ್ರ ಮನೋದೋಷದಿಂದ ಬರುವಂತಹ ಅಪ್ರಾಮಾಣ್ಯದೋಷ. ಆದರೆ ವೇದಗಳು ಅಪೌರುಷೇಯವಾದ್ದರಿಂದ ಇಂತಹ ಮಾನಸಿಕದೋಷ ದೌರ್ಬಲ್ಯಗಳಿಗೆ ಅವಕಾಶವೇ ಇಲ್ಲ. ಯಾವುದೇ ವ್ಯಕ್ತಿಯು ವೇದವನ್ನು ರಚನೆ ಮಾಡಿಲ್ಲ. ಆದ್ದರಿಂದ ವೇದವನ್ನು ಅಪ್ರಮಾಣವೆಂದು ಸಾಧಿಸಲಾಗದು. ಅಪೌರುಷೇಯವಾದ್ದರಿಂದಲೇ ಅದು ಪ್ರಮಾಣವೆಂದು ಸಿದ್ಧವಾಗಿದೆ.

* * * *

ನ ವಿಲಕ್ಷಣತ್ವಾಧಿಕರಣ

ಅಪೌರುಷೇಯವಾದ ವೇದವನ್ನು ಅಪ್ರಮಾಣವೆಂದು ಹೇಳಲು ಸಾಧ್ಯವೇ ಇಲ್ಲ. ವೇದದಲ್ಲಿ ಹೇಳಿದ ಅನುಷ್ಠಾನಗಳನ್ನು ಮಾಡಿದಾಗ ಕೆಲವೊಮ್ಮೆ ಫಲವು ದೊರೆಯುವುದಿಲ್ಲವೆಂಬ ಕಾರಣದಿಂದ ವೇದವನ್ನು ಅಪ್ರಮಾಣವೆಂದು ತಿಳಿಯಬಾರದು. ಅಪೌರುಷೇಯವಾದ ವೇದದಲ್ಲಿ ಪುರುಷನ ದೋಷಗಳಿಗೆ ಅವಕಾಶವೇ ಇಲ್ಲ. ಆದ್ದರಿಂದ ಅಪ್ರಾಮಾಣ್ಯಕ್ಕೆ ಕಾರಣವಾದ ಯಾವುದೇ ದೋಷವು ಇರುವುದಿಲ್ಲ.

ಸಾಕ್ಷಿಯುಯಾವುದೇದೋಷವಿಲ್ಲವೆಂಬಕಾರಣದಿಂದಗುಣವಿಲ್ಲದಿದ್ದರೂಸ್ವತಃಪ್ರಮಾಣವಾಗುತ್ತದೆ. ಅದರಂತೆ ವೇದದಲ್ಲಿಯೂ ಯಾವುದೇ ಅಪವಾದಕವಾದ ದೋಷವಿಲ್ಲದಿರುವುದರಿಂದ ಆಪ್ತೋಕ್ತತ್ವ ಮೊದಲಾದ ಗುಣಗಳಿಲ್ಲದಿದ್ದರೂ ಸ್ವತಃ ಪ್ರಮಾಣವಾಗುತ್ತದೆ ಎಂಬುದು ಸಿದ್ಧವಾಯಿತು.

ಕೆಲವೊಮ್ಮೆ ವೇದದಲ್ಲಿ ಹೇಳಿದ ಕರ್ಮವನ್ನು ಅನುಷ್ಠಾನ ಮಾಡಿದಾಗಲೂ ವಿಫಲವಾಗಬಹುದು. ಅದಕ್ಕೆ ಕಾರಣ ಕರ್ತೃವಿನ ದೋಷವೇ ಹೊರತು, ವೇದದ ದೋಷವಲ್ಲ. ಕಾರೀರಿ ಎಂಬ ಯಾಗವನ್ನು ಅನುಷ್ಠಾನ ಮಾಡಿದಾಗ ಕರ್ತೃವಿನಲ್ಲಿ ದೋಷವಿದ್ದರೆ ಮಳೆ ಬರುವುದಿಲ್ಲ. ಕರ್ತೃವಿನಲ್ಲಿ ದೋಷವಿಲ್ಲದಿದ್ದಾಗ ಅಂತಹ ಯಾಗವನ್ನು ಅನುಷ್ಠಾನ ಮಾಡಿದಾಗ ಮಳೆ ಬರುವುದು ಅನೇಕ ಕಡೆ ಕಂಡಿದೆ. ವೇದವನ್ನು ಸ್ವತಃ ಪ್ರಮಾಣವೆಂದು ಹೇಳುವಂತೆ ಶೈವರೂ ಕೂಡ ಶೈವಾದಿಶಾಸ್ತ್ರಗಳನ್ನು ಸ್ವತಃ ಪ್ರಮಾಣವೆನ್ನಬಹುದು. ಆದರೆ ಅಪವಾದಕವಾದ ದೋಷಾಭಾವವಿದ್ದರೆ ಮಾತ್ರ ನಾವು ಪ್ರಾಮಾಣ್ಯಸ್ವತಸ್ತ್ವನ್ನು ಒಪ್ಪುತ್ತೇವೆ. ಶೈವಶಾಸ್ತ್ರಗಳಲ್ಲಿ ಅಪವಾದಕವಾದ ದೋಷಗಳಿರುವುದರಿಂದ ಪ್ರಾಮಾಣ್ಯಸ್ವತಸ್ತ್ವವನ್ನು ಸಮರ್ಥಿಸಲು ಅವರಿಗೆ ಸಾಧ್ಯವಿಲ್ಲ.

ಯಾವುದು ರೋಗಕ್ಕೆ ಔಷಧಿಯೆಂದು ನಿರ್ಣಯವಾಗಿರುತ್ತದೋ, ಅಂತಹ ಔಷಧಿಯನ್ನು ಸೇವನೆ ಮಾಡಿದಾಗ ಕೆಲವೊಮ್ಮೆ ಕೆಲವು ರೋಗಿಗಳಿಗೆ ಗುಣವಾಗುವುದಿಲ್ಲ. ಅಂದಮಾತ್ರಕ್ಕೆ ರೋಗಕ್ಕೆ ಅದು ಔಷಧಿಯೇ ಅಲ್ಲವೆಂದು ಯಾರೂ ಹೇಳುವುದಿಲ್ಲ.

ಅಪಥ್ಯಸೇವನೆಯಿಂದ ರೋಗವೇ ಬರುತ್ತದೆ ಹೊರತು ಆರೋಗ್ಯವು ಬರಲು ಸಾಧ್ಯವಿಲ್ಲ. ಕೆಲವೊಮ್ಮೆ ಯಾವುದನ್ನು ಅಪಥ್ಯವೆಂದು ನಿರ್ಣಯ ಮಾಡಿರುತ್ತಾರೋ, ಅದನ್ನು ಸೇವನೆ ಮಾಡಿದಾಗಲೂ ರೋಗವು ಬಾರದೇ ಆರೋಗ್ಯವಂತನಾಗಿಯೇ ಇರುತ್ತಾನೆ. ಅಂದಮಾತ್ರಕ್ಕೆ ಅಪಥ್ಯವಾದ ವಸ್ತುವನ್ನು ಯಾರೂ ಕೂಡ ಆರೋಗ್ಯಕ್ಕೆ ಕಾರಣವೆಂದು ಹೇಳುವುದಿಲ್ಲ.

ಅದರಂತೆ ವೇದದಲ್ಲಿ ಕೆಲವೊಮ್ಮೆ ಫಲಸ್ವರೂಪವಿದ್ದ ಮಾತ್ರಕ್ಕೆ ಅಪ್ರಾಮಾಣ್ಯವನ್ನು ಹೇಳಬಾರದು. ಶೈವಾದಿಸ್ಮೃತಿಗಳಲ್ಲಿ ಕೆಲವೊಮ್ಮೆ ಫಲ ದೊರೆತಿದೆ ಎಂಬ ಕಾರಣಕ್ಕೆ ಪ್ರಾಮಾಣ್ಯವನ್ನೂ ಕೂಡ ಹೇಳಬಾರದು.

ವೇದವು ಅಪೌರುಷೇಯವೇ ಅಲ್ಲವೆಂದು ಹೇಳಲಾಗದು. ಏಕೆಂದರೆ 'ವಾಚಾ ವಿರೂಪ ನಿತ್ಯಯಾ' ಎಂಬ ಶ್ರುತಿಯು ವೇದವು ನಿತ್ಯವಾಗಿದೆ ಮತ್ತು ಪ್ರಮಾಣವಾಗಿದೆ ಎಂದು ಸಮರ್ಥನೆ ಮಾಡುತ್ತಿದೆ. ಹಾಗಾದರೆ ವೇದಪ್ರಾಮಾಣ್ಯಸಿದ್ಧವಾದರೆ ತದಂತರ್ಗತವಾದ 'ವಾಚಾ ವಿರೂಪ ನಿತ್ಯಯಾ' ಎಂಬ ವಾಕ್ಯಕ್ಕೆ ಪ್ರಾಮಾಣ್ಯವು ಸಿದ್ಧವಾಗುತ್ತದೆ. ಈ ವಾಕ್ಯಕ್ಕೆ ಪ್ರಾಮಾಣ್ಯವು ಸಿದ್ಧವಾದರೆ ಮಾತ್ರ, ಸಮಗ್ರವಾಕ್ಯಕ್ಕೆ ಪ್ರಾಮಾಣ್ಯವು ಸಿದ್ಧವಾಗುತ್ತದೆಂಬ ಅನ್ಯೋನ್ಯಾಶ್ರಯದೋಷ ಬರುತ್ತದಲ್ಲವೇ? ಎಂದು ಪ್ರಶ್ನಿಸಬಾರದು.

ವಿಸಂವಾದವಿಲ್ಲದ 'ವಾಚಾ ವಿರೂಪ ನಿತ್ಯಯಾ' ಎಂಬ ಶ್ರುತಿವಾಕ್ಯದಿಂದ ಸಕಲ ವೇದಕ್ಕೆ ನಿತ್ಯತ್ವವು ಸಿದ್ಧವಾಗುತ್ತದೆ. ಆದರಿಂದಲೇ ಸಕಲ ವೇದಗಳಲ್ಲಿ ವಿಸಂವಾದವಿಲ್ಲವೆಂಬುದೂ ಕೂಡ ನಿಶ್ಚಯವಾಗುತ್ತದೆ.

* * * *

ಅಭಿಮಾನ್ಯಧಿಕರಣ

ಹಿಂದಿನ ಅಧಿಕರಣದಲ್ಲಿ ಸಾಮಾನ್ಯವಾದ ಯುಕ್ತಿಗಳ ವಿರೋಧವನ್ನು ಪರಿಹರಿಸಿದ್ದಾಯಿತು. ಈ ಅಭಿಮಾನ್ಯಧಿಕರಣದಲ್ಲಿ ಬಲಿಷ್ಠವಾದ ಯುಕ್ತಿಗಳ ವಿರೋಧವನ್ನು ಪರಿಹರಿಸುತ್ತಿದ್ದಾರೆ. ಯುಕ್ತಿಗಳು ದೃಢವಾಗಿವೆ ಎಂಬುದನ್ನು ಉಪಪಾದನೆ ಮಾಡಲು ಶ್ರುತಿಗೆ ಅಪ್ರಾಮಾಣ್ಯವೆನ್ನೇನೂ ಅಂಗೀಕರಿಸಬೇಕಾಗಿಲ್ಲ. ಶ್ರುತಿಯು ಆಪಾತತಃ ಯಾವ ಅರ್ಥವನ್ನು ಹೇಳುತ್ತಿದೆಯೋ, ಅದನ್ನು ಪರಿತ್ಯಾಗ ಮಾಡಿ, ಅನ್ಯಾರ್ಥವನ್ನು ಕಲ್ಪಿಸಬೇಕು ಎಂದು ಅಂಗೀಕರಿಸಿದರೆ ಸಾಕು. 'ಮೃದಬ್ರವೀತ್' ಇತ್ಯಾದಿ ಶ್ರುತಿವಾಕ್ಯಗಳು 'ಮಣ್ಣು

ಮಾತನಾಡಿತು' ಇತ್ಯಾದಿಯಾಗಿ ಜಡಪದಾರ್ಥಗಳಲ್ಲಿ ವಕ್ತೃತ್ವಾದಿಗಳನ್ನು ಪ್ರತಿಪಾದನೆ ಮಾಡುತ್ತಿವೆ. 'ಮೃತ್ ನವಕ್ತೃ ಜಡತ್ವಾತ್' ಎಂಬ ಪ್ರಬಲವಾದ ಯುಕ್ತಿಯ ವಿರೋಧವಿರುವುದರಿಂದ ಆಪಾತತಃ ಪ್ರತೀತವಾದ ಅರ್ಥವನ್ನು ತ್ಯಾಗಮಾಡಬೇಕು. ಮೃದಭಿಮಾನಿ ದೇವತೆಗಳು ಮಾತನಾಡುತ್ತಾರೆ ಎಂದರ್ಥವನ್ನು ಮಾಡಬೇಕು. ಯಾವುದೇ ಶ್ರುತಿಗಳಿಗೂ ಪ್ರಬಲವಾದ ಯುಕ್ತಿಯ ವಿರೋಧ ಬಂದರೆ ಹೀಗೆಯೇ ಅರ್ಥಾಂತರವನ್ನು ಹೇಳಲೇಬೇಕೆಂಬುದು ಈ ಅಧಿಕರಣದ ಮುಖ್ಯ ಉದ್ದೇಶ. ಆದ್ದರಿಂದ ಪ್ರಬಲ ಯುಕ್ತಿವಿರೋಧವನ್ನು ಸಿದ್ಧಾಂತದಲ್ಲಿಯೂ ಕೂಡ ಒಪ್ಪಿದ್ದಾರೆ.

ಈ ಅಧಿಕರಣವು ಹೇಗೆ ಆರಂಭಣೀಯವಾಗುತ್ತದೆ? ಹಿಂದಿನ ಅಧಿಕರಣದಲ್ಲಿ ವೇದಾಪೌರುಷೇಯತ್ವವನ್ನು ಸಮರ್ಥನೆ ಮಾಡಿದ್ದರಿಂದ ವೇದಕ್ಕೆ ಅಪ್ರಾಮಾಣ್ಯವನ್ನು ಹೇಳುವ ಮೂಲಕ ಪೂರ್ವಪಕ್ಷವನ್ನು ಇಲ್ಲಿ ಮಾಡಲು ಹೇಗೆ ಸಾಧ್ಯವಾಗುತ್ತದೆ ? ಎಂಬ ಪ್ರಶ್ನೆ ಬರುತ್ತದೆ. ಅಪೌರುಷೇಯತ್ವವು ಪ್ರಾಮಾಣ್ಯವಿಲ್ಲದಿದ್ದರೂ ಯುಕ್ತವಾಗಬಹುದು. ಅಥವಾ ಪಿಪೀಲಿಕಾಲಿಪಿಯಂತೆ ಅಥವಾ ಅನುಕರಿಸುವ ಗಿಳಿಯ ಮಾತುಗಳಂತೆ ವೇದಾಪೌರುಷೇಯತ್ವವಿದ್ದರೂ ಪ್ರಾಮಾಣ್ಯವನ್ನು ಒಪ್ಪಬೇಕಾಗಿಲ್ಲ. ಪಿಪೀಲಿಕಾಲಿಪಿಯಲ್ಲಿ ಪುರುಷದೋಷವಿಲ್ಲದಿದ್ದರೂ ಪ್ರಾಮಾಣ್ಯವಿರುವುದಿಲ್ಲ. ಗಿಳಿಯ ಮಾತುಗಳಲ್ಲಿಯೂ ಪುರುಷದೋಷವಿಲ್ಲದಿದ್ದರೂ ಪ್ರಾಮಾಣ್ಯವಿರುವುದಿಲ್ಲ. ಆದರಂತೆ ವೇದವೂ ಕೂಡ ಅಪ್ರಮಾಣವಾಗಬಹುದೆಂಬ ಪೂರ್ವಪಕ್ಷವು ಇಲ್ಲಿ ಉದಯವಾಗುತ್ತದೆ. ಆದ್ದರಿಂದ ಈ ಅಧಿಕರಣವು ಆರಂಭಣೀಯವೇ ಆಗಿದೆ

'ಮೃದಬ್ರವೀತ್' 'ಮಣ್ಣು ಮಾತನಾಡಿತು' 'ಆಪೋऽಬ್ರುವನ್' 'ನೀರುಗಳು ಮಾತನಾಡಿದವು' 'ತತ್ತೇಜ ಐಕ್ಷತ' 'ಬೆಂಕಿಯು ನೋಡಿತು' 'ಶ್ರುಣೋತ ಗ್ರಾವಾಣಃ' 'ಕಲ್ಲುಗಳು ಕೇಳಿದವು' 'ವಿದುಶೋನುಪ್ರಾಣಾಃ ಅಹಂ ಶ್ರೇಯಸಿ ವ್ಯೂದಿರೇ' 'ಇಂದ್ರಿಯಗಳು ನಾನು ಶ್ರೇಷ್ಠವೆಂದು ವಿವಾದ ಮಾಡಿದವು'. 'ಆಪೋ ವಾ ಅಕಾಮಯಂತ' 'ನೀರುಗಳು ಬಯಸಿದವು' ಇವೇ ಮೊದಲಾದ ವೇದವಾಕ್ಯಗಳು ಜಡಪದಾರ್ಥಗಳಿಗೆ ಚೇತನಧರ್ಮವನ್ನು ಹೇಳುತ್ತಿವೆ. ಯುಕ್ತಿವಿರುದ್ಧವಾದ ವಿಷಯವನ್ನು ಹೇಳುತ್ತಿರುವುದರಿಂದ 'ನೀಲಂ ನಭಃ' ಎಂಬ ಪ್ರತ್ಯಕ್ಷದಂತೆ ಇವುಗಳು ಅಪ್ರಮಾಣವಾಗುತ್ತವೆ. 'ಆಕಾಶವು ವಿಭುವಾದ್ದರಿಂದ ರೂಪರಹಿತವಾಗಿದೆ' ಎಂಬ ಯುಕ್ತಿಗೆ ವಿರುದ್ಧವಾದ್ದರಿಂದ 'ಆಕಾಶವು ನೀಲವಾಗಿದೆ' ಎಂಬ ಪ್ರತ್ಯಕ್ಷವು ಹೇಗೆ ಅಪ್ರಮಾಣವಾಗುತ್ತದೋ, ಅದರಂತೆ, ಮಣ್ಣು ಮಾತನಾಡಿತು. ನೀರುಗಳು ಮಾತನಾಡಿದವು, ತೇಜಸ್ಸು ನೋಡಿತು, ಇತ್ಯಾದಿ ವಾಕ್ಯಗಳೂ ಕೂಡ ಅಪ್ರಮಾಣವಾಗುತ್ತವೆ. ಮಣ್ಣು ಮಣ್ಣಾದ್ದರಿಂದ ಅಥವಾ ಜಡವಾದ್ದರಿಂದ ಘಟಾದಿಗಳಂತೆ ಮಾತನಾಡುವುದಿಲ್ಲ ಎಂಬ ಯುಕ್ತಿಗೆ ವಿರುದ್ಧವಾದ್ದರಿಂದ ಶ್ರುತಿಯು ಅಪ್ರಮಾಣವಾಗುತ್ತದೆ. ಏಕದೇಶವಾದ 'ಮೃದಬ್ರವೀತ್' ಇತ್ಯಾದಿ

ವಾಕ್ಯಗಳಿಗೆ ಅಪ್ರಾಮಾಣ್ಯವು ಪ್ರಾಪ್ತವಾದರೆ ಸಮಗ್ರ ವೇದಭಾಗಕ್ಕೂ ಕೂಡ ಅಪ್ರಾಮಾಣ್ಯವನ್ನು ಸಾಧಿಸಬಹುದು.

ನ ವಿಲಕ್ಷಣತ್ವಾಧಿಕರಣದಲ್ಲಿ ಹೇಳಿದ ನ್ಯಾಯದಿಂದಲೇ ಈ ವಿರೋಧವೂ ಕೂಡ ಪರಿಹಾರವಾಗುತ್ತದಲ್ಲವೇ? ಎಂದು ಪ್ರಶ್ನಿಸಬಾರದು. ಈ ಅಧಿಕರಣದಲ್ಲಿ ಹೇಳುತ್ತಿರುವ ನ್ಯಾಯಕ್ಕೆ ಅಲ್ಲಿ ವ್ಯಭಿಚಾರವಿಲ್ಲ. ನ ವಿಲಕ್ಷಣತ್ವಾಧಿಕರಣದಲ್ಲಿ ವೇದದಲ್ಲಿ ಹೇಳಿದಂತೆ ಅನುಷ್ಠಾನ ಮಾಡಿದರೂ ಕೂಡ ಫಲವು ದೊರೆಯುತ್ತಿಲ್ಲ. ಕಾರೀರ್ಯಾದಿವಾಕ್ಯಗಳೇ ಈ ವಿಷಯದಲ್ಲಿ ದೃಷ್ಟಾಂತವಾಗಿವೆ ಎಂದು ಸಾಧಿಸಲಾಗಿತ್ತು. ಕಾರೀರ್ಯಾದಿಯಾಗಗಳನ್ನು ಪ್ರತಿಪಾದಿಸುವ ವಾಕ್ಯಗಳು ವೃಷ್ಟ್ಯಾದಿಗಳಿಗೆ ಕಾರಣತ್ವವನ್ನು ಪ್ರತಿಪಾದನೆ ಮಾಡುತ್ತಿವೆ. ಅಂತಹ ವಾಕ್ಯಗಳಿಗೆ ಪ್ರತ್ಯಕ್ಷ ವಿರೋಧವು ಬರುತ್ತದೆಂದು ಅಲ್ಲಿ ಸಮರ್ಥನೆ ಮಾಡಿದ ವಿಚಾರ. ಆದರೆ ಈ ಅಧಿಕರಣದಲ್ಲಿ 'ಮಣ್ಣು ಮಾತನಾಡಿತು' ಇತ್ಯಾದಿ ವಾಕ್ಯಗಳು ಪ್ರತ್ಯಕ್ಷಕ್ಕೆ ವಿರುದ್ಧವಾದ ವಿಷಯಗಳನ್ನು ಪ್ರತಿಪಾದನೆ ಮಾಡುತ್ತಿವೆ. ಆದ್ದರಿಂದ ಶ್ರುತಿಗೆ ಪ್ರತ್ಯಕ್ಷವಿರೋಧ ಬರುತ್ತದೆಂಬ ಆಕ್ಷೇಪವನ್ನು ಮಾಡಲಾಗಿದೆ. ಈ ಅಧಿಕರಣದಲ್ಲಿ ಯುಕ್ತಿವಿರೋಧವನ್ನು ಹೇಳುತ್ತಿಲ್ಲ. ನ ವಿಲಕ್ಷಣತ್ವಾಧಿಕರಣದಲ್ಲಿ ಪ್ರತ್ಯಕ್ಷವಿರೋಧವನ್ನು ಹೇಳುತ್ತಿಲ್ಲ. ಹೀಗೆ ಈ ಅಧಿಕರಣದಲ್ಲಿ ಪ್ರತ್ಯಕ್ಷವಿರೋಧವನ್ನು ಪರಿಹರಿಸಲಾಗಿದೆ. ನ ವಿಲಕ್ಷಣತ್ವಾಧಿಕರಣದಲ್ಲಿ ಯುಕ್ತಿವಿರೋಧವನ್ನು ಪರಿಹರಿಸಲಾಗಿದೆ. ಆದ್ದರಿಂದ ಅಧಿಕರಣಕ್ಕೆ ಸಾರ್ಥಕ್ಯವು ಬರುತ್ತದೆ. (ತತ್ವಪ್ರಕಾಶಿಕೆಯಲ್ಲಿ ಜಡತ್ವವನ್ನು ಹೇತುವೆಂದು ಹೇಳಿರುವುದರಿಂದ ಇಲ್ಲಿ ಜಡತ್ವವು ಹೇತು. ಇದು ಪಕ್ಷದಲ್ಲಿ ಬಾರದ ಕಾರಣ ಅಸಿದ್ಧಿದೋಷ ಹೇಳುವುದು ಹೇಗೆ ? ಎಂದು ಆಶಂಕಿಸಬಾರದು. ಮೃತ್ತ್ವರೂಪ ಹೇತುವಿನಿಂದ ಜಡತ್ವವನ್ನು ಅನುಮಾನ ಮಾಡಬೇಕೆಂದು ಹೇಳಿರುವುದರಿಂದ ಅಸಿದ್ಧಿಗೆ ಅವಕಾಶವಿಲ್ಲ.) ನ್ಯಾಯಸುಧೆಯಲ್ಲಿ ಮೃತ್ತ್ವವನ್ನು ಹೇತು ಮಾಡಿರುವ ಹಾಗೇ, ತತ್ವಪ್ರಕಾಶಿಕೆಯಲ್ಲಿ ಮೃತ್ತ್ವವನ್ನು ಏಕೆ ಹೇತುವನ್ನಾಗಿ ಮಾಡಿಲ್ಲ? ಎಂದು ಆಕ್ಷೇಪ ಮಾಡಬಾರದು. ಏಕೆಂದರೆ ವಕ್ಯೃತ್ವಾದಿಗಳಿಂದ ಹೇಗೆ ವಿರೋಧವು ಸ್ಪಷ್ಟವಾಗಿ ತೋರುತ್ತದೋ, ಹಾಗೇ ಮೃತ್ತ್ವಾದಿಗಳಿಗೆ ವಿರೋಧವು ತೋರುವುದಿಲ್ಲ. ಆದ್ದರಿಂದ ಅವಕ್ಯೃತ್ವಾದಿಗಳಿಂದ ಮೃತ್ತ್ವಾದಿಗಳಿಗೆ ವ್ಯಾಪ್ತಿಯು ಸ್ಪಷ್ಟವಾಗಿ ತಿಳಿಯುವುದಿಲ್ಲ. ಆದ್ದರಿಂದಲೇ ಇಲ್ಲಿ ವ್ಯಾಪ್ತಿಯನ್ನು ಉಪಪಾದನೆ ಮಾಡಲಾಗಿದೆ. ವ್ಯಾಪ್ತಿಯು ಅಲ್ಲಿ ಸ್ಪಷ್ಟವಾಗಿದ್ದರೂ ಪಕ್ಷಧರ್ಮತಾವನ್ನು ಉಪಪಾದನೆ ಮಾಡುವ ಅವಶ್ಯಕತೆಯಿದೆ. ನ್ಯಾಯಸುಧೆಯಲ್ಲಿ ಪಕ್ಷಧರ್ಮತಾವು ಸ್ಫುಟವಾಗಿದ್ದರೂ ವ್ಯಾಪ್ತಿಯು ಸ್ಪಷ್ಟವಾಗಿರುವುದಿಲ್ಲ. ಹೀಗೆ ಎರಡೂ ಕಡೆ ಒಂದೊಂದರ ಅಗತ್ಯವು ಸಮಾನವಾಗಿರುತ್ತದೆ.

ಈ ಅಧಿಕರಣದ ಸಿದ್ಧಾಂತ ಹೀಗಿದೆ -

ಪ್ರಸಿದ್ಧವಾದ ಜಡಭೂತವಾದ ಪೃಥಿವ್ಯಾದಿಗಳನ್ನು ಪಕ್ಷವನ್ನಾಗಿ ಮಾಡಿ, ವಕ್ಯೃತ್ವಾಭಾವವನ್ನು ಜಡತ್ವ ಹೇತುವಿನಿಂದ ಸಾಧನೆ ಮಾಡಿದರೆ ಸಿದ್ಧಸಾಧನದೋಷವು ಬರುತ್ತದೆ. ಮೃದಭಿಮಾನಿದೇವತೆಗಳನ್ನು ಪಕ್ಷವನ್ನಾಗಿ

ಮಾಡಿ, ಜಡತ್ವಹೇತುವಿನಿಂದ ವಕ್ಯತ್ವಾಭಾವವನ್ನು ಸಾಧನೆ ಮಾಡಿದರೆ ಅಸಿದ್ಧಾದಿದೋಷಗಳು ಬರುತ್ತವೆ. ಏಕೆಂದರೆ ದೇವತೆಗಳಲ್ಲಿ ಜಡತ್ವವಾಗಲೀ, ಮೃತ್ತ್ವವಾಗಲೀ ಇರುವುದಿಲ್ಲ.

ಪ್ರಮಾಣಸಿದ್ಧವಾದ ವೇದಕ್ಕೆ ಪ್ರಾಮಾಣ್ಯದ ಸಂರಕ್ಷಣೆಗೋಸ್ಕರ ಅನೇಕ ವಿಷಯಗಳನ್ನು ಕಲ್ಪನೆ ಮಾಡುವುದೇ ಯುಕ್ತ. ಅದನ್ನು ಬಿಟ್ಟು, ವೇದಪ್ರಾಮಾಣ್ಯದ ಭಯದಿಂದ ಪ್ರಮಿತವಾದದ್ದನ್ನು ತಿರಸ್ಕರಿಸುವುದು ಅಯುಕ್ತವಾಗುತ್ತದೆ.

'ಮೃದಬ್ರವೀತ್' ಎಂಬ ವಾಕ್ಯವು ಜಡವಾದ ಮಣ್ಣಿನಲ್ಲಿ ವಕ್ಯತ್ವವನ್ನು ಹೇಳುತ್ತಿದೆ ಎಂಬ ಉದ್ದೇಶದಿಂದ 'ಮೃತ್ ನ ವಕ್ತ್ರೀ ಜಡತ್ವಾತ್' ಎಂಬ ಯುಕ್ತಿಯು ಶ್ರುತ್ಯರ್ಥವನ್ನು ಬಾಧಿಸಲು ಹೊರಟಿದೆ. ವಿಚಾರ ಮಾಡಿದರೆ ಶ್ರುತಿಯು ಜಡವಾದ ಮಣ್ಣಿಗೆ ವಕ್ಯತ್ವವನ್ನು ಹೇಳಲು ಹೊರಟಿಲ್ಲ. ತದಭಿಮಾನಿಚೇತನರಲ್ಲಿ ವಕ್ಯತ್ವವನ್ನು ಸಾರಲು ಹೊರಟಿದೆ. ತಾನು ಕಾಣುತ್ತಿರುವ ವಿಷಯದಲ್ಲಿ ಯುಕ್ತಿಗೆ ಪ್ರವೇಶವೇ ಇಲ್ಲವೆಂಬ ದೃಷ್ಟಿಯಿಂದ ಶ್ರುತಿಯು ಅದನ್ನು ವಿರೋಧ ಮಾಡಲು ಕೂಡ ಹೋಗುವುದಿಲ್ಲ.

ಪ್ರಬಲವಾದ ಪ್ರಮಾಣದಿಂದ ಪ್ರಮಾಣಾಭಾಸವು ಬಾಧಿತವಾಗಬೇಕೆಂದರೆ ದುರ್ಬಲತ್ವವಷ್ಟೇ ಕಾರಣವಲ್ಲ. ಪ್ರತಿಕೂಲತ್ವವಿಶಿಷ್ಟವಾದ ದುರ್ಬಲತ್ವವೇ ಕಾರಣವಾಗಿದೆ. ಯುಕ್ತಿಯಲ್ಲಿ ದುರ್ಬಲತ್ವವಿದ್ದರೂ ಪ್ರತಿಕೂಲತ್ವವಿಶಿಷ್ಟವಾದ ದುರ್ಬಲತ್ವವು ಇರುವುದಿಲ್ಲ.

ಅಭಿಪ್ರಾಯವಿಷ್ಟು - ಯುಕ್ತಿಯು ಜಡವಾದ ಪದಾರ್ಥಗಳಿಗೆ ವಕ್ಯತ್ವವನ್ನು ನಿಷೇಧ ಮಾಡುತ್ತಿದೆ. ಶ್ರುತಿಯು ಚೇತನರಾದ ಅಭಿಮಾನಿದೇವತೆಗಳಲ್ಲಿ ವಕ್ಯತ್ವವನ್ನು ವಿಧಿಸುತ್ತಿದೆ. ಭಿನ್ನಭಿನ್ನ ವಿಷಯಕವಾದ್ದರಿಂದ ಪರಸ್ಪರ ವಿರೋಧವೇ ಇರುವುದಿಲ್ಲ. 'ಮೃದಬ್ರವೀತ್'ಎಂಬ ವಾಕ್ಯದಲ್ಲಿರುವ 'ಮೃತ್' ಎಂಬ ಶಬ್ದದಿಂದ ಲೋಕಪ್ರಸಿದ್ಧಿಯಂತೆ ಜಡಪದಾರ್ಥವನ್ನು ವಿವಕ್ಷಿಸಬೇಕೋ? ಅಥವಾ ತದಧೀನತ್ವನ್ಯಾಯದಂತೆ ಅಭಿಮಾನಿಚೇತನರನ್ನು ವಿವಕ್ಷಿಸಬೇಕೋ ? ಎಂಬ ಗೊಂದಲವುಂಟಾದರೆ ಮುಖ್ಯಾಮುಖ್ಯಗಳಲ್ಲಿ ಮುಖ್ಯವನ್ನೇ ಸ್ವೀಕರಿಸಬೇಕಾದ್ದರಿಂದ ಅಭಿಮಾನಿಚೇತನರೆಂಬ ಅರ್ಥವನ್ನೇ ವಿವಕ್ಷಿಸಬೇಕು. ಯಾವಾಗ ಶ್ರುತಿಗಳಿಂದ ಮುಖ್ಯವಾದ ಅಭಿಮಾನಿಚೇತನರೆಂಬ ಅರ್ಥವನ್ನು ಸ್ವೀಕರಿಸುತ್ತೇವೋ ಆವಾಗ ಯುಕ್ತಿಯು ದುರ್ಬಲವಾಗಿದ್ದರೂ ಕೂಡ ಶ್ರುತಿಯನ್ನು ವಿರೋಧ ಮಾಡಿದಂತಾಗುವುದಿಲ್ಲ. ರಾಜಕುಮಾರನು ತನ್ನ ಸ್ವಚ್ಛಂದಪ್ರವೃತ್ತಿಗೆ ಪ್ರತಿಬಂಧಕರಾದ ದುರ್ಬಲರನ್ನು ನಿಗ್ರಹಿಸುತ್ತಾನೆ ಹೊರತು, ಪ್ರತಿಬಂಧಕವಾಗದ ದುರ್ಬಲನಾದ ಭಿಕ್ಷುಕನನ್ನು ನಿಗ್ರಹಿಸುವುದಿಲ್ಲ.

*****

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥

ಜ್ಯೋತಿರುಪಕ್ರಮಾಧಿಕರಣ

ಬ್ರಹ್ಮಸೂತ್ರ, ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ತ್ವಪ್ರದೀಪ, ತತ್ತ್ವಪ್ರಕಾಶಿಕಾ, ಭಾವದೀಪ

ವಿಶೇಷವಿಚಾರದೊಂದಿಗೆ ಕನ್ನಡಭಾಷೆಯಲ್ಲಿ ಅನುವಾದ

ಮತ್ತು

ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆ

ಮಾಡಿ, ಜಡತ್ವಹೇತುವಿನಿಂದ ವಕ್ತೃತ್ವಾಭಾವವನ್ನು ಸಾಧನೆ ಮಾಡಿದರೆ ಅಸಿದ್ಧಾದಿದೋಷಗಳು ಬರುತ್ತವೆ. ಏಕೆಂದರೆ ದೇವತೆಗಳಲ್ಲಿ ಜಡತ್ವವಾಗಲೀ, ಮೃತ್ತ್ವವಾಗಲೀ ಇರುವುದಿಲ್ಲ.

ಪ್ರಮಾಣಸಿದ್ಧವಾದ ವೇದಕ್ಕೆ ಪ್ರಾಮಾಣ್ಯದ ಸಂರಕ್ಷಣೆಗೋಸ್ಕರ ಅನೇಕ ವಿಷಯಗಳನ್ನು ಕಲ್ಪನೆ ಮಾಡುವುದೇ ಯುಕ್ತ. ಅದನ್ನು ಬಿಟ್ಟು, ವೇದಪ್ರಾಮಾಣ್ಯದ ಭಯದಿಂದ ಪ್ರಮಿತವಾದದ್ದನ್ನು ತಿರಸ್ಕರಿಸುವುದು ಅಯುಕ್ತವಾಗುತ್ತದೆ.

'ಮೃದಬ್ರವೀತ್' ಎಂಬ ವಾಕ್ಯವು ಜಡವಾದ ಮಣ್ಣಿನಲ್ಲಿ ವಕ್ತೃತ್ವವನ್ನು ಹೇಳುತ್ತಿದೆ ಎಂಬ ಉದ್ದೇಶದಿಂದ 'ಮೃತ್ ನ ವಕ್ತ್ರೀ ಜಡತ್ವಾತ್' ಎಂಬ ಯುಕ್ತಿಯು ಶ್ರುತ್ಯರ್ಥವನ್ನು ಬಾಧಿಸಲು ಹೊರಟಿದೆ. ವಿಚಾರ ಮಾಡಿದರೆ ಶ್ರುತಿಯು ಜಡವಾದ ಮಣ್ಣಿಗೆ ವಕ್ತೃತ್ವವನ್ನು ಹೇಳಲು ಹೊರಟಿಲ್ಲ. ತದಭಿಮಾನಿಚೇತನರಲ್ಲಿ ವಕ್ತೃತ್ವವನ್ನು ಸಾರಲು ಹೊರಟಿದೆ. ತಾನು ಕಾಣುತ್ತಿರುವ ವಿಷಯದಲ್ಲಿ ಯುಕ್ತಿಗೆ ಪ್ರವೇಶವೇ ಇಲ್ಲವೆಂಬ ದೃಷ್ಟಿಯಿಂದ ಶ್ರುತಿಯು ಅದನ್ನು ವಿರೋಧ ಮಾಡಲು ಕೂಡ ಹೋಗುವುದಿಲ್ಲ.

ಪ್ರಬಲವಾದ ಪ್ರಮಾಣದಿಂದ ಪ್ರಮಾಣಾಭಾಸವು ಬಾಧಿತವಾಗಬೇಕೆಂದರೆ ದುರ್ಬಲತ್ವವಷ್ಟೇ ಕಾರಣವಲ್ಲ. ಪ್ರತಿಕೂಲತ್ವವಿಶಿಷ್ಟವಾದ ದುರ್ಬಲತ್ವವೇ ಕಾರಣವಾಗಿದೆ. ಯುಕ್ತಿಯಲ್ಲಿ ದುರ್ಬಲತ್ವವಿದ್ದರೂ ಪ್ರತಿಕೂಲತ್ವವಿಶಿಷ್ಟವಾದ ದುರ್ಬಲತ್ವವು ಇರುವುದಿಲ್ಲ.

ಅಭಿಪ್ರಾಯವಿಷ್ಟು - ಯುಕ್ತಿಯು ಜಡವಾದ ಪದಾರ್ಥಗಳಿಗೆ ವಕ್ತೃತ್ವವನ್ನು ನಿಷೇಧ ಮಾಡುತ್ತಿದೆ. ಶ್ರುತಿಯು ಚೇತನರಾದ ಅಭಿಮಾನಿದೇವತೆಗಳಲ್ಲಿ ವಕ್ತೃತ್ವವನ್ನು ವಿಧಿಸುತ್ತಿದೆ. ಭಿನ್ನಭಿನ್ನ ವಿಷಯಕವಾದ್ದರಿಂದ ಪರಸ್ಪರ ವಿರೋಧವೇ ಇರುವುದಿಲ್ಲ. 'ಮೃದಬ್ರವೀತ್'ಎಂಬ ವಾಕ್ಯದಲ್ಲಿರುವ 'ಮೃತ್' ಎಂಬ ಶಬ್ದದಿಂದ ಲೋಕಪ್ರಸಿದ್ಧಿಯಂತೆ ಜಡಪದಾರ್ಥವನ್ನು ವಿವಕ್ಷಿಸಬೇಕೋ? ಅಥವಾ ತದಧೀನತ್ವನ್ಯಾಯದಂತೆ ಅಭಿಮಾನಿಚೇತನರನ್ನು ವಿವಕ್ಷಿಸಬೇಕೋ ? ಎಂಬ ಗೊಂದಲವುಂಟಾದರೆ ಮುಖ್ಯಾಮುಖ್ಯಗಳಲ್ಲಿ ಮುಖ್ಯವನ್ನೇ ಸ್ವೀಕರಿಸಬೇಕಾದ್ದರಿಂದ ಅಭಿಮಾನಿಚೇತನರೆಂಬ ಅರ್ಥವನ್ನೇ ವಿವಕ್ಷಿಸಬೇಕು. ಯಾವಾಗ ಶ್ರುತಿಗಳಿಂದ ಮುಖ್ಯವಾದ ಅಭಿಮಾನಿಚೇತನರೆಂಬ ಅರ್ಥವನ್ನು ಸ್ವೀಕರಿಸುತ್ತೇವೋ ಆವಾಗ ಯುಕ್ತಿಯು ದುರ್ಬಲವಾಗಿದ್ದರೂ ಕೂಡ ಶ್ರುತಿಯನ್ನು ವಿರೋಧ ಮಾಡಿದಂತಾಗುವುದಿಲ್ಲ. ರಾಜಕುಮಾರನು ತನ್ನ ಸ್ವಚ್ಛಂದಪ್ರವೃತ್ತಿಗೆ ಪ್ರತಿಬಂಧಕರಾದ ದುರ್ಬಲರನ್ನು ನಿಗ್ರಹಿಸುತ್ತಾನೆ ಹೊರತು, ಪ್ರತಿಬಂಧಕವಾಗದ ದುರ್ಬಲನಾದ ಭಿಕ್ಷುಕನನ್ನು ನಿಗ್ರಹಿಸುವುದಿಲ್ಲ.

*****

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥

ಜ್ಯೋತಿರುಪಕ್ರಮಾಧಿಕರಣ

ಬ್ರಹ್ಮಸೂತ್ರ, ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ

ವಿಶೇಷವಿಚಾರದೊಂದಿಗೆ ಕನ್ನಡಭಾಷೆಯಲ್ಲಿ ಅನುವಾದ

ಮತ್ತು

ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆ

॥ ಹರಿಃ ಓಂ ॥

॥ ಶ್ರೀವೇದವ್ಯಾಸಾಯ ನಮಃ ॥

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಗುರುಭ್ಯೋ ನಮಃ ॥

॥ ಶ್ರೀಮದ್ರಾಘವೇಂದ್ರತೀರ್ಥಗುರುಭ್ಯೋ ನಮಃ ॥

॥ ಶ್ರೀಗುರುಭ್ಯೋ ನಮಃ ॥

ಜ್ಯೋತಿರುಪಕ್ರಮಾಧಿಕರಣ

ಬ್ರಹ್ಮಸೂತ್ರ

'ಜ್ಯೋತಿರುಪಕ್ರಮಾತ್ತು ತಥಾ ಹ್ಯಧೀಯತೇ ಏಕೇ' ಎಂಬ ಸೂತ್ರದ ವ್ಯಾಖ್ಯಾನ

ಬ್ರಹ್ಮಸೂತ್ರಮ್ – ।। ಜ್ಯೋತಿರುಪಕ್ರಮಾತ್ತು ತಥಾ ಹ್ಯಧೀಯತ ಏಕೇ ।।೧।।

ಸೂತ್ರಾರ್ಥ - 'ಕರ್ಮಪರವಾದ ಜ್ಯೋತಿರಾದಿ ಶಬ್ದಗಳಿಂದ ಪ್ರತಿಪಾದ್ಯನಾದವನು ಮಹಾವಿಷ್ಣುವೇ ಆಗಿದ್ದಾನೆ ಹೊರತು, ಯಾಗಾದಿ ಕರ್ಮಗಳಲ್ಲ. ಏಕೆಂದರೆ ಚತುರ್ಮುಖ ಮೊದಲಾದವರ ಶರೀರವನ್ನು ಅಂತರ್ಯಾಮಿಯಾಗಿ ಪ್ರವೇಶ ಮಾಡಿದನು ಇತ್ಯಾದಿಯಾಗಿ ಋಷಿಪ್ರತಿಪಾದಕವಾದ ಕೆಲವು ಶಬ್ದಗಳನ್ನು ಸಮನ್ವಯ ಮಾಡಿ, 'ತಾ ವಾ ಏತಾಃ' ಎಂಬಲ್ಲಿ ಸಕಲ ವೈದಿಕಶಬ್ದಗಳಿಂದ ವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆಂದು ಕೆಲವು ಶಾಖೆಯವರು ಅಧ್ಯಯನ ಮಾಡುತ್ತಾರೆ.

ಅರ್ಥ -- ತು ಶಬ್ದವು ಏವಾರ್ಥದಲ್ಲಿದೆ. ಜ್ಯೋತಿಃ = 'ಜ್ಯೋತಿಷಾ ಯಜೇತ' ಇತ್ಯಾದಿ ವಾಕ್ಯದಲ್ಲಿ ಹೇಳಲ್ಪಟ್ಟ ಜ್ಯೋತಿರಾದಿ ಶಬ್ದಗಳಿಂದ ಪ್ರತಿಪಾದ್ಯನಾದವನು ವಿಷ್ಣುವೇ ಆಗಿದ್ದಾನೆ ಹೊರತು, ಜ್ಯೋತಿಷ್ಟೋಮಾದಿ ಯಾಗಗಳಲ್ಲ. ಹಿ = ಯಾವ ಕಾರಣದಿಂದ, ಏಕೇ = ಕೆಲವು ಶಾಖೆಯವರು, ಉಪಕ್ರಮಾತ್ = ಏಷ ಇಮಂ ಎಂದು ಪ್ರಾರಂಭ ಮಾಡಿ, ತಥಾ = ಸರ್ವಶಬ್ದಾಭಿಧೇಯನನ್ನಾಗಿ ಶ್ರೀಹರಿಯನ್ನೇ, ತಾ ವಾ ಏತಾಃ = ಇತ್ಯಾದಿಯಾಗಿ, ಅಧೀಯತೇ = ಅಧ್ಯಯನ ಮಾಡುತ್ತಾರೆ.

ಜಗದ್ಗುರು ಶ್ರೀಮಧ್ವಾಚಾರ್ಯರಿಂದ ವಿರಚಿತವಾದ

ಬ್ರಹ್ಮಸೂತ್ರಭಾಷ್ಯ

ಬ್ರಹ್ಮನಲ್ಲಿ ಶಬ್ದಸಮನ್ವಯಕ್ಕೆ ಕರ್ಮಕಾಂಡದ ವಿರೋಧ

ब्रह्मसूत्रभाष्यम् — 'वसन्ते वसन्ते ज्योतिषा यजेत' इत्यादि कर्माभिधायकस्य कर्मक्रमादिविरोधान्न युज्यत इति

ಅನುವಾದ - 'ವಸಂತೇ ವಸಂತೇ ಜ್ಯೋತಿಷಾ ಯಜೇತ' 'ಪ್ರತಿಯೊಂದು ವಸಂತ ಋತುಗಳಲ್ಲಿ ಜ್ಯೋತಿಷ್ಟೋಮ ಯಾಗಗಳನ್ನು ಮಾಡಬೇಕು' ಇವೇ ಮೊದಲಾದ ವಾಕ್ಯಗಳು ಕರ್ಮವಿಧಾಯಕವಾಗಿವೆ. ಕರ್ಮ ತದಂಗವಾದ ಕಾಲ, ಕ್ರಮ, ಅಧಿಕಾರಿ, ಫಲ, ಋತ್ವಿಕ್, ವ್ಯತ್ಯಾಸ, ಪ್ರಾಯಶ್ಚಿತ್ತ ಇವೇ ಮೊದಲಾದವುಗಳನ್ನು ಹೇಳುವ ವಸಂತಾದಿ ಶಬ್ದರಾಶಿಗಳಿಗೆ ಒಂದು ವೇಳೆ ಭಗವತ್ಪರತ್ವವನ್ನು ಹೇಳಿದರೆ, ಕರ್ಮಕ್ರಮಾದಿಗಳೇ ಲೋಪವಾಗುವ ಪ್ರಸಂಗ ಬರುತ್ತದೆ. ಹಾಗಾಗಿ ಬ್ರಹ್ಮವಾಚಕತ್ವವನ್ನು ಸರ್ವಥಾ ಹೇಳಬಾರದು. ಇಷ್ಟು ಆಕ್ಷೇಪ.

ಪ್ರತಿಪದಾರ್ಥ -- ಈ ಅಧಿಕರಣದಲ್ಲಿ ಕರ್ಮ ಮತ್ತು ತದಂಗಗಳಲ್ಲಷ್ಟೇ ಪ್ರಸಿದ್ಧವಾದ ಜ್ಯೋತಿಷ್ಟೋಮಾದಿ ಶಬ್ದಗಳಿಗೆ ಭಗವಂತನಲ್ಲಿ ಸಮನ್ವಯವನ್ನು ಪ್ರತಿಪಾದನೆ ಮಾಡುತ್ತಿದ್ದಾರೆ. ಶ್ರುತ್ಯಾದಿಸಂಗತಿ, ವಿಷಯಾದಿಗಳನ್ನೂ ಕೂಡ ಸೂಚನೆ ಮಾಡುತ್ತಿದ್ದಾರೆ.–

ವಸಂತೇ ವಸಂತೇ = ಪ್ರತಿಯೊಂದು ವಸಂತ ಋತುಗಳಲ್ಲಿ, ಜ್ಯೋತಿಷಾ = ಜ್ಯೋತಿಷ್ಟೋಮಾದಿ ಯಾಗಗಳಿಂದ, ಯಜೇತ = ಪೂಜಿಸಬೇಕು. ಇತ್ಯಾದಿ = ಇವೇ ಮೊದಲಾದ, ಕರ್ಮಾಭಿಧಾಯಕಸ್ಯ = ಕ್ರಿಯಾವಿಶೇಷವನ್ನು ಹೇಳುವ, ಕರ್ಮಕ್ರಿಯಾದಿ = ಕರ್ಮ, ತದಂಗವಾದ ಕಾಲ, ಕ್ರಮ, ಅಧಿಕಾರಿ, ಫಲ, ಋತ್ವಿಕ್ ಇವುಗಳ ವ್ಯತ್ಯಾಸ ಪ್ರಾಯಶ್ಚಿತ್ತ ಇವೇ ಮೊದಲಾದವುಗಳನ್ನು ಹೇಳುವ ವಸಂತಾದಿ ಶಬ್ದರಾಶಿಗಳಿಗೆ ಭಗವತ್ಪರತ್ವವನ್ನು ಹೇಳಿದರೆ, ವಿರೋಧಾತ್ = ಕರ್ಮಕ್ರಮ ಕ್ರಮಾಭಾವ ಎಂಬ ವಿರೋಧ ಬರುವುದರಿಂದ, ನ ಯುಜ್ಯತೇ = ಯುಕ್ತವಾಗುವುದಿಲ್ಲ. ಇತಿ = ಇಷ್ಟು ಆಕ್ಷೇಪ.

ಕರ್ಮಪ್ರತಿಪಾದಕ ವಾಕ್ಯಗಳಿಂದ ಮಹಾವಿಷ್ಣುವೇ ಮುಖ್ಯಪ್ರತಿಪಾದ್ಯ

ಬ್ರಹ್ಮಸೂತ್ರಭಾಷ್ಯಮ್ – ಆಹ –

।। ಜ್ಯೋತಿರುಪಕ್ರಮಾತ್ತು ತಥಾ ಹ್ಯಧೀಯತ ಏಕೆ ।।

ಜ್ಯೋತಿರಾದಿಕರ್ಮವಾಚಕತ್ವೇನ ಪ್ರಸಿದ್ಧಾಭಿಧೇಯೋऽಪಿ ಸ ಏವ । 'ಏಷ ಇಮಂ ಲೋಕಮಭ್ಯಾರ್ಚತ್' ಇತ್ಯುಪಕ್ರಮ್ಯ 'ತಾ ವಾ ಏತಾಃ ಸರ್ವಾ ಋಚಃ ಸರ್ವೇ ವೇದಾಸ್ಸರ್ವೇ ಘೋಷಾಃ ಏಕೈವ ವ್ಯಾಹೃತಿಃ ಪ್ರಾಣ ಏವ ಪ್ರಾಣ ಋಚ ಇತ್ಯೇವ ವಿದ್ಯಾತ್' ಇತಿ (ಐ.ಆ.೨-೨-೨) ಹ್ಯಧೀಯತ ಏಕೆ ।।೧।।

ಅನುವಾದ - ಮೇಲಿನ ಆಕ್ಷೇಪಕ್ಕೆ ಸೂತ್ರಕಾರರೇ ಉತ್ತರಿಸುತ್ತಿದ್ದಾರೆ. 'ಜ್ಯೋತಿ' ಮೊದಲಾದ ಶಬ್ದಗಳು, ಕರ್ಮವಾಚಕಗಳಾಗಿ ಪ್ರಸಿದ್ಧವಾಗಿದ್ದರೂ, ವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆ. ಈ ವಿಷಯದಲ್ಲಿ ಪ್ರಮಾಣವೇನೆಂದರೆ ಐತರೇಯ ಶಾಖೆಯವರು ಸಕಲಶಬ್ದವಾಚ್ಯತ್ವವನ್ನು ತಿಳಿಯುತ್ತಾ, ಅಧ್ಯಯನ ಮಾಡುತ್ತಾರೆಂದು ಐತರೇಯ ಆರಣ್ಯಕದಲ್ಲಿ ಹೇಳಲ್ಪಟ್ಟಿದೆ. ಪರಮಾತ್ಮನು ಚತುರ್ಮುಖಾದಿಗಳ ಶರೀರವನ್ನು ಅಂತರ್ಯಾಮಿಯಾಗಿ ಪ್ರವೇಶ ಮಾಡಿದನು. ಹೀಗೆ ವಿಷ್ಣುವಾಚಕವಾದ ಕೆಲವು ಶಬ್ದಗಳನ್ನು ಸಮನ್ವಯ ಮಾಡುತ್ತಾ ಪ್ರಾರಂಭ ಮಾಡಿ, ಅನಂತರ 'ತಾ ವಾ ಏತಾಃ' ಇತ್ಯಾದಿಯಾಗಿ ಸಕಲ ವಿಧವಾದ ಶಬ್ದಗಳಿಂದ ವಿಷ್ಣುವನ್ನೇ ಪ್ರತಿಪಾದ್ಯನನ್ನಾಗಿ ತಿಳಿಯುತ್ತಾ ಐತರೇಯ ಶಾಖೆಯವರು ಅಧ್ಯಯನ ಮಾಡುತ್ತಾರೆ. ಪ್ರಸಿದ್ಧವಾದ ಎಲ್ಲಾ ಮಂತ್ರಗಳು ಸಕಲವೇದಗಳೂ, ಸಕಲ ಧ್ವನಿಗಳೂ ಒಂದೇ ವಿಧವಾದ ವ್ಯಾಹೃತಿಯು ಪ್ರಾಣ, ಇಂದ್ರ, ಅಗ್ನಿ ಮೊದಲಾದ ದೇವತೆಗಳ ಹೆಸರುಳ್ಳ ಮಂತ್ರಗಳು ನಾರಾಯಣನ ಬಗ್ಗೆಯೇ ಹೊರಟಿವೆ. ಹೀಗೆ ತಿಳಿಯಬೇಕು.

ಪ್ರತಿಪದಾರ್ಥ --ಸಿದ್ಧಾಂತ ಸ್ಥಾಪನೆಗಾಗಿ ಸೂತ್ರವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ. –

ಅತಃ ಆಹ = ಮೇಲಿನ ಆಕ್ಷೇಪಕ್ಕೆ ಸೂತ್ರಕಾರರು ಉತ್ತರಿಸುತ್ತಿದ್ದಾರೆ - 'ಜ್ಯೋತಿರುಮಕ್ರಮಾತ್ತು ತಥಾ ಹ್ಯಧೀಯತೇ ಏಕೇ' ಎಂಬುದಾಗಿ.

ಜ್ಯೋತಿರಾದಿ = ಜ್ಯೋತಿಷ್ಟೋಮಾದಿ, ಕರ್ಮವಾಚಕತ್ವೇನ = ಕಾಲ, ಕರ್ಮ, ದೇಶ, ಅಧಿಕಾರಿ, ಫಲ, ಕ್ರಮಾದಿ ವಾಚಕಗಳೆಂದು,

ಪ್ರಸಿದ್ಧಾಭಿಧೇಯೋಽಪಿ = ಪ್ರಸಿದ್ಧವಾದ ವಚನವಿದ್ದರೂ, ಸ ಏವ = ಮಹಾವಿಷ್ಣುವೇ ಪ್ರತಿಪಾದ್ಯನಾಗುತ್ತಾನೆ. ಏಕೆಂದರೆ, ಏಷ = ಈ ಪರಮಾತ್ಮನೇ, ಇಮಂ ಲೋಕಂ = ಬ್ರಹ್ಮಾಂಡವೆಂಬ ಲೋಕಾಧಾರಕವಾದ ಚತುರ್ಮುಖನನ್ನು, ಅಭ್ಯಾರ್ಚತ್ = ಪ್ರವೇಶಿಸಿದನು. ಹೀಗೆ ಐತರೇಯ ಶಾಖೆಯಲ್ಲಿ, ಉಪಕ್ರಮ್ಯ = ಪ್ರಾರಂಭಿಸಿ, ತಾ ವಾ ಏತಾಃ ಸರ್ವಾ ಋಚಃ = ಸಕಲವಿಧವಾದ ಋಙ್ ಮಂತ್ರಗಳು, ಸರ್ವೇ ವೇದಾಃ = ಸಮಸ್ತ ವೇದಗಳು, ಸರ್ವೇ ಘೋಷಾಃ = ಸಕಲ ಶಬ್ದಗಳೂ, ಏಕೈವ ವ್ಯಾಹೃತಿಃ = ಒಂದೇ ವ್ಯಾಹೃತಿಯು, ಪ್ರಾಣ ಏವ = ಮಹಾವಿಷ್ಣುವಿನಲ್ಲಿಯೇ, ಪ್ರಾಣ ಋಚ = ಪ್ರಾಣನಾಮಕ ಋಙ್‌ಮಂತ್ರವು ಮಹಾವಿಷ್ಣುವಿನಲ್ಲಿ, ಇತ್ಯೇವ ವಿದ್ಯಾತ್ = ಹೀಗೆ ತಿಳಿಯಬೇಕು. ಹಿ = ಈ ರೀತಿಯಾಗಿಯೇ, ಏಕೇ = ಕೆಲವರು, ಅಧೀಯತೇ = ಹೇಳುತ್ತಾರೆ. ಆದ್ದರಿಂದ ಪರಮಾತ್ಮನಲ್ಲಿ ಶಕ್ತಿವೃತ್ತಿಯಿಲ್ಲವೆಂದು ತಿಳಿಯಬಾರದು. ಹೀಗೆ ಪರಬ್ರಹ್ಮನಲ್ಲಿ ವಿದ್ವದ್ರೂಢಿಸಹಿತವಾದ ಮಹಾಯೋಗ ಇರುವುದರಿಂದ ಹಿಂದಿನ ಯಾವ ದೋಷಗಳಿಗೂ ಅವಕಾಶವಿಲ್ಲ.

ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ

ಸತ್ತರ್ಕದೀಪಾವಳಿ

'ವಸಂತೇ ವಸಂತೇ' ಇತ್ಯಾದಿ ಭಾಷ್ಯಕ್ಕೆ ವ್ಯಾಖ್ಯಾನ

सत्तर्कदीपावलिः – तथापि तस्य प्रतिपादकत्वं भगवद्वाचकत्वे न युज्यते। कर्मक्रमकालाद्युक्त्या भगवद्वाचकत्वस्य विशेषेण विरोधात् । न च जातमोतमित्यादिव्युत्पत्त्या भगवद्वाचकत्वम् । तया कर्मक्रमादिवाचकत्वस्य विशेषेण विरोधापत्तेः । जातादिशब्दानामपि भगवद्वाचकत्वेन व्युत्पत्तेरप्य-शक्यत्वादितिभावेन पूर्वपक्षमाह – वसन्त इत्यादिना ।

ಕರ್ಮಕಾಂಡದಿಂದ ಭಗವಂತನೇ ಪ್ರತಿಪಾದ್ಯನಾಗುವುದಾದರೆ ಕರ್ಮಕಾಂಡದಿಂದ ಸಿದ್ಧವಾಗುವ ವಿಷಯಗಳೆಲ್ಲವೂ ಕೂಡ ಅಯುಕ್ತವಾಗುತ್ತವೆ. ಕರ್ಮದ ಕ್ರಮ, ಕರ್ಮಾಚರಣೆಯ ಕಾಲ ಇವುಗಳನ್ನೆಲ್ಲಾ ಕರ್ಮಕಾಂಡದಲ್ಲಿ ಹೇಳಿದ್ದಾರೆ. ಭಗವದ್ವಾಚಕತ್ವಕ್ಕೆ ಕರ್ಮಕ್ರಮಾದಿಗಳನ್ನು ಹೇಳುವ ವಿಶೇಷಣಗಳ ವಿರೋಧವು ಪ್ರಾಪ್ತವಾಗುತ್ತದೆ.

'ಜಾತಮೋತಂ' ಇತ್ಯಾದಿಯಾಗಿ ಅನುವ್ಯಾಖ್ಯಾನದಲ್ಲಿ ಜ್ಯೋತಿ ಮೊದಲಾದ ಶಬ್ದಗಳಿಗೆ ವ್ಯುತ್ಪತ್ತಿಯನ್ನು ತೋರಿಸಿದ್ದಾರೆ. ಹಾಗಾಗಿ ಭಗವದ್ವಾಚಕತ್ವವನ್ನು ಹೇಳಬಹುದಲ್ಲವೇ? ಎಂದು ಪ್ರಶ್ನಿಸಬಾರದು. ಆ ವಿಷಯದಲ್ಲಿ ಕರ್ಮಕ್ರಮಾದಿಗಳನ್ನು ಪ್ರತಿಪಾದನೆ ಮಾಡುವ ವಿಶೇಷಣಗಳ ವಿರೋಧವು ಪ್ರಾಪ್ತವಾಗುತ್ತದೆ. ಅಷ್ಟೇ ಅಲ್ಲದೇ ಜ್ಯೋತಿಯೆಂಬ ಶಬ್ದವನ್ನು ನಿಷ್ಪತ್ತಿ ಮಾಡಲು ಮತ್ತು ಓತಿ ಎಂಬ ಯಾವ ಅವಯವಗಳನ್ನು ಆಶ್ರಯಿಸಲಾಗುತ್ತದೋ, ಅವುಗಳಿಗೂ ಕೂಡ ಭಗವದ್ವಾಚಕತ್ವವನ್ನು ಒಪ್ಪಿದರೆ ವ್ಯುತ್ಪತ್ತಿಯೇ ಅಸಂಭಾವಿತವಾಗುತ್ತದೆ. ಆದ್ದರಿಂದ ಜ್ಯೋತಿರಾದಿಶಬ್ದಗಳಿಗೆ ಭಗವದ್ವಾಚಕತ್ವವನ್ನು ಸಮರ್ಥನೆ ಮಾಡಲೂ ಕೂಡ ಸಾಧ್ಯವಾಗುವುದಿಲ್ಲ. ಈ ಪೂರ್ವಪಕ್ಷವನ್ನು ಭಾಷ್ಯದಲ್ಲಿ 'ವಸಂತೇ' ಇತ್ಯಾದಿಯಾಗಿ ತೋರಿಸುತ್ತಿದ್ದಾರೆ.

ಐತರೇಯೋಪನಿಷತ್ತಿನಲ್ಲಿ ಸಕಲಶಬ್ದ ಪ್ರತಿಪಾದ್ಯತ್ವದ ಬಗ್ಗೆ

सत्तर्कदीपावलिः – ज्योतिष्टोमादिकर्मवाचकत्वेन प्रसिद्धशब्दार्थोपि भगवानेव यथा तदिज्येन्द्रवाय्वादिशब्दार्थोऽसौ । न च तद्वाचकत्वं कर्मक्रमाद्युक्तिं विरुणद्धिज्ञातमोतमित्यादिव्युत्पत्तिसम्भवात् । व्युत्पत्त्यैव त्वध्यायोपक्रमादारभ्य सूक्त ऋगर्धर्चगदाक्षरा तद्भक्षमुनिवाचकत्वेन प्रसिद्धशब्दानां भगवद्वाचकत्वं विद्वद्रूढिं च तद्विषयां प्रदर्श्य तथैव सर्ववेदानां भगवदर्थत्वमभिधीयते । श्रीमन्महैतरेय इत्यर्थः ।

ಜ್ಯೋತಿಷ್ಟೋಮಾದಿ ಕರ್ಮವಾಚಕತ್ವೇನ ಪ್ರಸಿದ್ಧವಾದ ಶಬ್ದಗಳೆಲ್ಲವೂ ಭಗವಂತನನ್ನೇ ಮುಖ್ಯವಾಗಿ ಪ್ರತಿಪಾದನೆ ಮಾಡುತ್ತವೆ. ಹೇಗೆ ಇಂದ್ರ, ವಾಯು ಮೊದಲಾದ ಶಬ್ದಗಳು ಮುಖ್ಯವಾಗಿ ಭಗವಂತನನ್ನೇ ಪ್ರತಿಪಾದನೆ ಮಾಡುತ್ತವೆಂದು ಈ ಹಿಂದೆ ಪ್ರತಿಪಾದನೆ

ಮಾಡಲಾಗಿದೆಯೋ, ಅದರಂತೆ ಈ ಕರ್ಮಕಾಂಡವೂ ಕೂಡ ಭಗವತ್ಪರವೆಂದು ತಿಳಿಯಬೇಕು. ಭಗವದ್ವಾಚಕತ್ವವು ಕರ್ಮಕ್ರಮಾದಿಗಳ ವಚನವನ್ನು ವಿರೋಧ ಮಾಡುವುದಿಲ್ಲ. ಏಕೆಂದರೆ 'ಜಾತಮೋತಮ್' ಇತ್ಯಾದಿಯಾದ ವ್ಯುತ್ಪತ್ತಿಯನ್ನು ಶ್ರೀಮದಾಚಾರ್ಯರು ತೋರಿಸಿರುತ್ತಾರೆ. ಐತರೇಯೋಪನಿಷತ್ತಿನ ಎರಡನೆಯ ಅಧ್ಯಾಯದ ಪ್ರಾರಂಭದಿಂದ ಇದೇ ವ್ಯುತ್ಪತ್ತಿಯನ್ನು ಶ್ರೀಮದಾಚಾರ್ಯರು ತೋರಿಸಿದ್ದಾರೆ. ಸೂಕ್ತ, ಋಕ್, ಅರ್ಧ - ಋಕ್, ಪಾದ, ಅಕ್ಷರ ಇವುಗಳೆಲ್ಲವು ಭಗವದ್ವಾಚಕವೇ ಆಗಿವೆ. ಅದರಂತೆ ವೃಕ್ಷ, ಮುನಿ ಇವುಗಳನ್ನು ಪ್ರತಿಪಾದನೆ ಮಾಡುವ ಶಬ್ದಗಳೂ ಕೂಡ ಭಗವದ್ವಾಚಕಗಳೇ ಆಗಿವೆ. ಈ ವಿಷಯದಲ್ಲಿ ವಿದ್ವದ್‌ರೂಢಿಯೇ ಪ್ರಮಾಣವಾಗಿದೆ. ಎಂಬುದಾಗಿ ಉದಾಹರಣೆಯ ಮೂಲಕ ವ್ಯುತ್ಪತ್ತಿಗಳನ್ನು ತೋರಿಸುತ್ತಾ ಸಕಲವೇದಕ್ಕೆ ಭಗವದರ್ಥತ್ವವನ್ನು ಐತರೇಯೋಪನಿಷದ್ಭಾಷ್ಯದಲ್ಲಿ ಸಮರ್ಥಿಸಿದ್ದಾರೆ.

ವಿವರಣೆ – ಐತರೇಯೋಪನಿಷತ್ತಿನ ಎರಡನೆಯ ಅಧ್ಯಾಯದಲ್ಲಿ ಶಬ್ದಗಳ ನಿಷ್ಪತ್ತಿಯ ಬಗ್ಗೆ ಶ್ರೀಮದಾಚಾರ್ಯರು ವ್ಯಾಖ್ಯಾನ ಮಾಡಿದ್ದನ್ನು ಯಥಾವತ್ತಾಗಿ ಇಲ್ಲಿ ನೀಡಲಾಗಿದೆ. (ಸಂಗ್ರಹ)

ಸೋಽಬ್ರವೀದ್ 'ಅಹಮಿದಂ ಸರ್ವಮಸಾನಿ, ಯಚ್ಚ ಕ್ಷುದ್ರಂ ಯಚ್ಚ ಮಹದ್' ಇತಿ । ತೇ ಕ್ಷುದ್ರಸೂಕ್ತಾಶ್ಚಾಭವನ್ ಮಹಾಸೂಕ್ತಾಶ್ಚ । ತಸ್ಮಾತ್ ಕ್ಷುದ್ರಸೂಕ್ತಾಃ । ತಸ್ಮಾತ್ ಕ್ಷುದ್ರಸೂಕ್ತಾ ಇತ್ಯಾಚಕ್ಷತ ಏತಮೇವ ಸಂತಂ ।

ಸೂಕ್ತಂ ಬತಾವೋಚತೇತಿ, ತತ್ ಸೂಕ್ತಮಭವತ್ । ತಸ್ಮಾತ್ ಸೂಕ್ತಂ ತಸ್ಮಾತ್ ಸೂಕ್ತಮಿತ್ಯಾಚಕ್ಷತ ಏತಮೇವ ಸಂತಂ ।

ಆ ಹರಿಯು ಹೇಳಿದನು. 'ನಾನು ಸರ್ವವೇದಪ್ರಸಿದ್ಧ ಪರಿಪೂರ್ಣವಸ್ತುವಾಗಿದ್ದು ಸಣ್ಣ ದೊಡ್ಡ ರೂಪಗಳಿಂದ ಸಣ್ಣ ದೊಡ್ಡ ಎಲ್ಲ ವಸ್ತುಗಳಲ್ಲಿಯೂ ಇರುವೆನು' ಎಂದು ಸಣ್ಣವಸ್ತುಗಳಲ್ಲಿ ಸಣ್ಣರೂಪದಿಂದ ಇರುವೆನೆಂದು ಹೇಳಿದ್ದರಿಂದ ಆ ರೂಪಗಳು ಕ್ಷುದ್ರಸೂಕ್ತಗಳೆನಿಸಿದವು. ದೊಡ್ಡ ವಸ್ತುಗಳಲ್ಲಿ ದೊಡ್ಡ ರೂಪಗಳಿಂದಿರುವೆನೆಂದುದರಿಂದ ಆ ರೂಪಗಳು ಮಹಾಸೂಕ್ತಗಳೆನಿಸಿದವು. ಆದ್ದರಿಂದ ಸಣ್ಣ ರೂಪಗಳೇ ಕ್ಷುದ್ರಸೂಕ್ತಗಳು. ಆದ್ದರಿಂದ ಸಣ್ಣ ರೂಪಗಳನ್ನೇ ಮುಖ್ಯವಾಗಿ ಕ್ಷುದ್ರಸೂಕ್ತಗಳೆನ್ನುತ್ತಾರೆ.

ಹರಿಯು ವೇದವನ್ನು ಬ್ರಹ್ಮಾದಿಗಳಿಗೆ ಉಪದೇಶಿಸಿದುದು ಅತ್ಯಂತ ಆಶ್ಚರ್ಯಕರ. ಆದ್ದರಿಂದ ಅವನು ಸೂಕ್ತನೆನಿಸಿದನು. ಆದ್ದರಿಂದಲೇ ಅವನು ಸೂಕ್ತ. ಅವನನ್ನೇ ಮುಖ್ಯವಾಗಿ ಸೂಕ್ತನೆನ್ನುತ್ತಾರೆ.

'ತದ್' ವಿಷ್ಣ್ವಾಖ್ಯಂ ಬ್ರಹ್ಮ ಸೂಕ್ತಾನ್ಯವೋಚತೇತಿ ಸೂಕ್ತನಾಮಕಮಭವತ್ । ಬತೇತ್ಯಾಸ್ವಾದನೇ । ಸ್ವಾತ್ಮನೈವ ಸ್ವಯಂ ಸುಷ್ಠೂಕ್ತಮಿತಿ ವಾ । ಇದಂ 'ಸರ್ವಂ' ಪರಿಪೂರ್ಣಂ ಸನ್ನಹಂ ಅಲ್ಪ ಪ್ರಾಣೇಷು ಪ್ರವಿಶ್ಯ ಸೂಕ್ಷ್ಮರೂಪೋ, ಮಹಾಪ್ರಾಣೇಷು ಮಹಾರೂಪಶ್ಚ ಭವಾನೀತಿ 'ಸ' ಭಗವಾನ್ ಅಬ್ರವೀತ್ । 'ತಸ್ಮಾತ್' ಕ್ಷುದ್ರೋಽಸಾನೀತ್ಯುಕ್ತತ್ವಾತ್ ಕ್ಷುದ್ರಸೂಕ್ತಾಃ 'ತೇ ಕ್ಷುದ್ರಪ್ರಾಣೇಷು ಸ್ಥಿತಾಃ ಭಗವದ್ರೂಪಸಂಘಾಃ । ಮಹಾನಸಾನೀತ್ಯುಕ್ತತ್ವಾನ್ಮಹಾಸೂಕ್ತಾ ಮಹಾಪ್ರಾಣೇಷು ಸ್ಥಿತಾಃ । ಸೂಕ್ಷ್ಮರೂಪತ್ವಾದೇವ ಕ್ಷುದ್ರನಾಮ ಭಗವತಃ । ನ ತು ಸಾಮರ್ಥ್ಯಾಲ್ಪತ್ವಾತ್ । ನ ಹಿ ಸಾಮರ್ಥ್ಯಾದಿಗುಣೇಷು ಕಶ್ಚಿದ್ವಿಶೇಷೋ ಭಗವದ್ರೂಪೇಷು॥

'ತದ್' ಎಂದರೆ ಮಹಾವಿಷ್ಣುವೆಂಬ ಪರಬ್ರಹ್ಮ ಆದಿಭಾಗವತಾದಿ ಸೂಕ್ತಿಗಳನ್ನು ರಚಿಸಿ ಅಪೌರುಷೇಯವಾದ ಸೂಕ್ತಗಳನ್ನು ಅಭಿವ್ಯಕ್ತಗೊಳಿಸಿ ಉಪದೇಶಿಸಿದುದರಿಂದ ಸೂಕ್ತನಾಮಕವಾಯಿತು. 'ಬತ' ಎಂಬುದು ವಿಷಯದ್ಯೋತಕ ಶಬ್ದವಲ್ಲ. 'ಎಂಥ ಅದ್ಭುತ ಕಾರ್ಯವಿದು!' ಎಂದು ಆಶ್ಚರ್ಯರಸವನ್ನು ಆಸ್ವಾದಿಸುವಾಗ ಹೇಳುವ ಶಬ್ದ - ಅನಂತವಾದ ಅಪೌರುಷೇಯ ವೇದಗಳೂ ಪೌರುಷೇಯ ಗ್ರಂಥಗಳೂ ಪ್ರತಿಕ್ಷಣ ಹರಿಯ ಮುಖದಿಂದ ಹೊರಹೊಮ್ಮುವುದು ಅತ್ಯಾಶ್ಚರ್ಯ ಎಂದು. 'ಸೂಕ್ತಂ ಬತಾವೋಚತ' ಎಂಬುದಕ್ಕೆ ವಿಷ್ಣುರೂಪ ಪರಬ್ರಹ್ಮತನ್ನಿಂದಲೆ ತಾನು ಚೆನ್ನಾಗಿ ವರ್ಣಿಸಲ್ಪಟ್ಟಿದ್ದರಿಂದ ಸೂಕ್ತನಾಮಕವಾಯಿತು ಎಂದು ಇನ್ನೊಂದು ಅರ್ಥ. ಅಪ್ರಮೇಯನಾದ ತನ್ನನ್ನು ಸರಿಯಾಗಿ ವರ್ಣಿಸಲು ಇನ್ನೊಬ್ಬರಿಗೆ ಸಾಮರ್ಥ್ಯವಿಲ್ಲವೆಂದು ತಾನೆ ತನ್ನನ್ನು ವರ್ಣಿಸಿದುದು ಅತ್ಯಾಶ್ಚರ್ಯ ಎಂದೆನ್ನಲು ಬತ ಶಬ್ದ. 'ಸರ್ವಂ' ಎಂದರೆ ಈ ಪರಿಪೂರ್ಣ ವಸ್ತು ತಾನಾಗಿಯೇ ಸಣ್ಣ ಜೀವಿಗಳಲ್ಲಿ ಪ್ರವೇಶಿಸಿ ಸೂಕ್ಷ್ಮರೂಪನಾಗುತ್ತೇನೆ. ಮತ್ತು ದೊಡ್ಡ ಜೀವಿಗಳಲ್ಲಿ ಪ್ರವೇಶಿಸಿ ಮಹಾರೂಪನಾಗುತ್ತೇನೆ ಎಂದು 'ಸಃ' ಅಂದರೆ ಭಗವಂತನು ಹೇಳಿದನು 'ತಸ್ಮಾತ್' ಅಂದರೆ ಸೂಕ್ಷ್ಮರೂಪನಾಗುತ್ತೇನೆ ಎಂದು ಹೇಳಿದ್ದರಿಂದ, 'ತೇ' ಅಂದರೆ ಸೂಕ್ಷ್ಮಜೀವಿಗಳಲ್ಲಿರುವ ಭಗವಂತನ ರೂಪ ಸಮೂಹಗಳು ಕ್ಷುದ್ರಸೂಕ್ತಗಳೆನಿಸಿವೆ. ಮಹಾರೂಪನಾಗುತ್ತೇನೆ ಎಂದು ಹೇಳಿದ್ದರಿಂದ ಮಹಾ ಜೀವಿಗಳಲ್ಲಿರುವ ಭಗವಂತನ ರೂಪಸಮೂಹಗಳು ಮಹಾಸೂಕ್ತಗಳೆನಿಸಿವೆ. ಸೂಕ್ಷ್ಮರೂಪನಾದ ಪ್ರಯುಕ್ತವೆ ಕ್ಷುದ್ರಸೂಕ್ತ ಎಂಬ ಹೆಸರು ಭಗವಂತನಿಗೆ. ಸಾಮರ್ಥ್ಯ ಕಡಿಮೆಯಾದುದರಿಂದಲ್ಲ. ಏಕೆಂದರೆ ಭಗವಂತನ ರೂಪಗಳಲ್ಲಿ ಸಾಮರ್ಥ್ಯಾದಿ ಗುಣಗಳಲ್ಲಿ ಯಾವ ವ್ಯತ್ಯಾಸವೂ ಇಲ್ಲ.

ಏಷ ವಾ ಋಕ್ । ಏಷ ಹ್ಯೇಭ್ಯಃ ಸರ್ವೇಭ್ಯೋ ಭೂತೇಭ್ಯೋಽರ್ಚತ । ಸ ಯದ್ ಏಭ್ಯಃ ಸರ್ವೇಭ್ಯೋ ಭೂತೇಭ್ಯೋಽರ್ಚತ, ತಸ್ಮಾದ್ ಋಕ್ । ತಸ್ಮಾದ್ ಋಗಿತ್ಯಾಚಕ್ಷತ ಏತಮೇವ ಸಂತಮ್ ।

ಏಷ ವಾ ಅರ್ದರ್ಚಃ। ಏಷ ಹ್ಯೇಭ್ಯಃ ಸರ್ವೇಭ್ಯೋ೨ರ್ದೇಭ್ಯೋ೨ರ್ಚತ। ಸ ಯದ್ ಏಭ್ಯಃ ಸರ್ವೇಭ್ಯೋ೨ರ್ದೇಭ್ಯೋ೨ರ್ಚತ, ತಸ್ಮಾದ್ ಅರ್ದರ್ಚಃ । ತಸ್ಮಾದ್ ಅರ್ದರ್ಚ ಇತ್ಯಾಚಕ್ಷತ ಏತಮೇವ ಸಂತಮ್ ।

ಏಷ ವೈ ಪದಂ। ಏಷ ಹೀಮಾನಿ ಸರ್ವಾಣಿ ಭೂತಾನಿ ಪಾದಿ। ಸ ಯದ್ ಇಮಾನಿ ಸರ್ವಾಣಿ ಭೂತಾನಿ ಪಾದಿ, ತಸ್ಮಾತ್ ಪದಮ್ । ತಸ್ಮಾತ್ ಪದಮಿತ್ಯಾಚಕ್ಷತ ಏತಮೇವ ಸಂತಮ್ ।

ಏಷ ವಾ ಅಕ್ಷರಮ್ । ಏಷ ಹ್ಯೇಭ್ಯಃ ಸರ್ವೇಭ್ಯೋ ಭೂತೇಭ್ಯಃ ಕ್ಷರತಿ । ನ ಚೈನಂ ಅತಿಕ್ಷರಂತಿ । ಸ ಯದ್ ಏಭ್ಯಃ ಸರ್ವೇಭ್ಯೋ ಭೂತೇಭ್ಯಃ ಕ್ಷರತಿ, ನ ಚೈನಂ ಅತಿಕ್ಷರಂತಿ, ತಸ್ಮಾದ್ ಅಕ್ಷರಮ್ । ತಸ್ಮಾದ್ ಅಕ್ಷರಮಿತ್ಯಾಚಕ್ಷತ ಏತಮೇವ ಸಂತಮ್ ।

ತಾ ವಾ ಏತಾಃ ಸರ್ವಾ ಋಚಃ ಸರ್ವೇ ವೇದಾಃ ಘೋಷಾ ಏಕೈವ ವ್ಯಾಹೃತಿಃ ಪ್ರಾಣ ಏವ। ಪ್ರಾಣ ಋಚ ಇತ್ಯೇವ ವಿದ್ಯಾತ್ ॥

ಈ ಹರಿಯೆ ಋಕ್. ಏಕೆಂದರೆ ಇವನು ಎಲ್ಲ ಜೀವಿಗಳನ್ನೂ ಮರಣ ಕಾಲದಲ್ಲಿ ಒಂದು ಅಂಶದಿಂದ ಬಿಟ್ಟು ದೂರ ಹೋಗುತ್ತಾನೆ. ಅವನು ಎಲ್ಲ ಜೀವಿಗಳನ್ನೂ ಬಿಟ್ಟು ಹೋಗುವುದರಿಂದ ಋಕ್. ಆದ್ದರಿಂದ ಅವನನ್ನೇ ಮುಖ್ಯವಾಗಿ ಋಕ್ ಎನ್ನುತ್ತಾರೆ.

ಈ ಹರಿಯೆ ಅರ್ದರ್ಚ. ಏಕೆಂದರೆ ಇವನು ಜೀವರ ವಾಸಸ್ಥಾನವಾದ ಈ ಎಲ್ಲ ಶರೀರದಿಂದ ಮರಣ ಕಾಲದಲ್ಲಿ ದೂರ ಹೋಗುತ್ತಾನೆ. ಅವನು ಜೀವರ ವಾಸಸ್ಥಾನವಾದ ಈ ಎಲ್ಲ ಶರೀರದಿಂದ ದೂರ ಹೋಗುವುದರಿಂದ ಅರ್ದರ್ಚ. ಆದ್ದರಿಂದ ಅವನನ್ನೇ ಮುಖ್ಯವಾಗಿ ಅರ್ದರ್ಚನೆನ್ನುತ್ತಾರೆ.

ಈ ಹರಿಯೆ ಪದ. ಏಕೆಂದರೆ ಇವನು ಎಲ್ಲ ಜೀವಿಗಳನ್ನೂ ಜನನ ಕಾಲದಲ್ಲಿ ಪ್ರವೇಶಿಸುವನು. ಅವನು ಎಲ್ಲ ಜೀವಿಗಳನ್ನೂ ಜನನ ಕಾಲದಲ್ಲಿ ಪ್ರವೇಶಿಸುವುದರಿಂದ ಪದ ಎನಿಸಿದ್ದಾನೆ. ಆದ್ದರಿಂದ ಅವನನ್ನೇ ಮುಖ್ಯವಾಗಿ ಪದ ಎಂದು ಕರೆಯುತ್ತಾರೆ.

ಈ ಹರಿಯೆ ಅಕ್ಷರ. ಏಕೆಂದರೆ ಇವನು ಎಲ್ಲ ಜೀವಿಗಳಿಗೂ ಬಹಳ ಅಭೀಷ್ಟಗಳನ್ನು ನೀಡುತ್ತಾನೆ. ಇವನನ್ನೂ ಮೀರಿಸಿ ಅಧಿಕವಾಗಿ ಯಾರೂ ಅಭೀಷ್ಟ ಪ್ರದರಾಗಲಾರರು. ಅವನು ಎಲ್ಲ ಜೀವಿಗಳಿಗೂ ಬಹಳ ಅಭೀಷ್ಟ ನೀಡುವುದರಿಂದ ಮತ್ತು ಅವನನ್ನು ಮೀರಿ ಅಧಿಕವಾಗಿ ಅಭೀಷ್ಟಗಳನ್ನು ಯಾರೂ ನೀಡದಿರುವುದರಿಂದ ಅವನು ಅಕ್ಷರ. ಆದ್ದರಿಂದ ಅವನನ್ನೇ ಮುಖ್ಯವಾಗಿ ಅಕ್ಷರನೆಂದು ಕರೆಯುತ್ತಾರೆ.

ದೇವತಾಪರವೆಂದು ಪ್ರಸಿದ್ಧವಾದ ಎಲ್ಲ ಋಕ್ಕುಗಳೂ, ಎಲ್ಲ ವೇದಗಳೂ, ಎಲ್ಲ ಧ್ವನಿಗಳೂ ಏಕಪ್ರಕಾರವಾಗಿ ನಿರ್ದೋಷಗುಣಪೂರ್ಣನೆಂದು ನಾರಾಯಣನನ್ನೇ ಹೇಳುವ ನಾಮಗಳು. ಋಕ್ಕುಗಳನ್ನು ವಿಶೇಷವಾಗಿ ನಾರಾಯಣಪರವೆಂದು ತಿಳಿಯಬೇಕು.

ಏಭ್ಯಃ ಪ್ರಾಣೇಭ್ಯೋ ಗತವಾನ್ ಇತಿ ಋಕ್ । ಗಚ್ಛತಿ ಹಿ ಮರಣಕಾಲೇ । 'ಬ್ರಹ್ಮಣಾ ಸಂಪರಿತ್ಯಕ್ತೋ ಮೃತ ಇತ್ಯುಚ್ಯತೇ ಬುಧೈಃ' ಇತಿ ಹಿ ಭಾರತೇ ।

ಮ್ರಿಯಮಾಣಮಿಮಂ ಜೀವಂ ವಾಸುದೇವಾದಿದೇವತಾಃ ।
ತ್ಯಕ್ತ್ವಾ ಭಾಗೇನ ಗಚ್ಛಂತಿ ಭಾಗತೋऽನುವ್ರಜಂತಿ ತಂ ।
ಗತೈರ್ಭಾಗೈರಪಿ ಪುನರ್ವಿಶೇಯುರ್ಭೋಗಸಿದ್ಧಯೇ ।
ಭೋಗ್ಯಲೋಕಮನುಪ್ರಾಪ್ತಂ ತಸ್ಮಾತ್ ಸ್ವಪ್ನವದಂತರಾ ।

ಇತಿ ಚ । 'ಅರ್ಚ ಗತಿ ಪೂಜನಯೋಃ' 'ಋ ಗತೌ' ಇತಿ ಧಾತೋಃ । ಸರ್ವೇಭ್ಯೋऽರ್ಥೇಭ್ಯಃ ಸ್ಥಾನೇಭ್ಯಃ ಶರೀರೇಭ್ಯೋ ಗತವಾನ್ ಇತ್ಯರ್ಥರ್ಚಃ । ಸರ್ವಾಣಿ ಭೂತಾನಿ ಅಪಾದಿ । ಪದ ಗತೌ । ತಸ್ಮಾತ್ ಪದಂ ನಾಮ । ಅಧಿಕಂ ಕ್ಷರತೀತಿ ಅಕ್ಷರಂ । ಕ್ಷರಣಂ ನಾಮ ಸಂತತದಾನಂ । ಕ್ಷರ ವಿನಾಶಸಂತತದಾನಯೋಃ ಇತಿ ಧಾತೋಃ ।

ಭಗವಂತನು ಈ ಜೀವಿಗಳಿಂದ ಹೊರಟು ಹೋದುದರಿಂದ 'ಋಕ್' ಎನಿಸಿದ್ದಾನೆ. ಅವನು ಜೀವಿಗಳನ್ನು ಮರಣ ಕಾಲದಲ್ಲಿ ತೊರೆದು ಹೋಗುವುದು ಪ್ರಸಿದ್ಧ. 'ಭಗವಂತನಿಂದ ಪರಿತ್ಯಕ್ತನಾದ ಜೀವಿಯನ್ನು ಮೃತ ಎನ್ನುತ್ತಾರೆ ಬಲ್ಲವರು' ಎಂದು ಮಹಾಭಾರತದಲ್ಲಿ ಹೇಳಿದೆ. 'ಜೀವನು ಮರಣ ಹೊಂದುವಾಗ ವಾಸುದೇವಾದಿ ದೇವತೆಗಳು ಒಂದು ಅಂಶದಿಂದ ಅವನನ್ನು ತೊರೆದು ಹೋಗುತ್ತಾರೆ. ಒಂದು ಅಂಶದಿಂದ ಆ ಜೀವನ ಜೊತೆಗೇ ಹೋಗುತ್ತಾರೆ. ಆ ಜೀವನು ಸುಖದುಃಖ ಭೋಗಕ್ಕೆ ಯೋಗ್ಯವಾದ ಮಾನವ ಶರೀರವನ್ನೋ ದಿವ್ಯ ಶರೀರವನ್ನೋ ಕರ್ಮಾನುಸಾರ ಯಥಾಯೋಗ್ಯವಾಗಿ ಹೊಂದಿದಾಗ ಅವನಿಗೆ ಆ ಶರೀರದಲ್ಲಿ ಭೋಗ ಉಂಟಾಗುವುದಕ್ಕಾಗಿ ಹಿಂದೆ ತೊರೆದು ಹೋದ ಅಂಶಗಳಿಂದಲೆ ಪುನಃ ಅವನನ್ನು ಪ್ರವೇಶಿಸುತ್ತಾರೆ. ಆದ್ದರಿಂದ ಮರಣ ಪುನರ್ಜನ್ಮಗಳ ನಡುವಿನ ಸುಖದುಃಖ ಭೋಗವು ಸ್ವಪ್ನದಂತೆ ಅಸ್ಪಷ್ಟವಾಗಿರುತ್ತದೆ' ಎಂದೂ ಪ್ರಮಾಣ ವಚನವಿದೆ. 'ಋಕ್' ಶಬ್ದದ ನಿರ್ವಚನ ಮಾಡುವ ಉಪನಿಷದ್ವಾಕ್ಯದಲ್ಲಿ 'ಅರ್ಚತ' ಎಂಬ ಶಬ್ದದ ಪ್ರಕೃತಿಯಾದ ಅರ್ಚ ಧಾತು ಗಮನ ಮತ್ತು ಪೂಜೆ ಎಂಬ ಅರ್ಥದಲ್ಲಿ ಇದೆ ಎಂದೂ' ಋಕ್ ಶಬ್ದದ ಮೂಲವಾದ ಋ ಧಾತು ಗಮನ ಎಂಬ ಅರ್ಥದಲ್ಲಿ ಇದೆ ಎಂದೂ ಧಾತುವ್ಯಾಖ್ಯಾನವಿರುವುದರಿಂದ 'ಅರ್ಚತ' ಎಂಬ ಶಬ್ದದಿಂದ 'ಋಕ್' ಶಬ್ದ ನಿರ್ವಚನ ಮಾಡಿರುವುದು ಯುಕ್ತವೆ.

ಎಲ್ಲ ಅರ್ಧಗಳಿಂದ ಸ್ಥಾನಗಳಿಂದ ಅಂದರೆ ಜೀವರಿಗೆ ವಾಸಸ್ಥಾನವಾದ ಶರೀರಗಳಿಂದ ಹೊರಟು ಹೋದನು; ಆದ್ದರಿಂದ ಅರ್ಧಚರ್ಚನೆನಿಸಿದನು.

'ಸರ್ವಾಣಿ ಭೂತಾನಿ ಪಾದಿ' ಎಂಬಲ್ಲಿ 'ಪಾದಿ' ಎಂಬುದು 'ಅಪಾದಿ'ಯ ಛಾಂದಸ ಪ್ರಯೋಗ. ಪದ ಧಾತು ಗಮನಾರ್ಥಕ. ಹೊಂದುವುದು, ಮರಣ ಕಾಲದಲ್ಲಿ ಬಿಟ್ಟು ಹೋಗಿದ್ದ ಒಂದು ಭಗವದ್ರೂಪ ಜನನಕಾಲದಲ್ಲಿ ತಿರುಗಿ ಜೀವನನ್ನು ಹೊಂದುವುದು ಎಂದರ್ಥ. ಹಾಗೆ ಹೊಂದುವುದರಿಂದ ಪದ ಎಂದು ಪ್ರಸಿದ್ಧನಾಗಿದ್ದಾನೆ.

'ಅಧಿಕಂ ಕ್ಷರತಿ' ಎಂದು ಅಕ್ಷರ ಶಬ್ದದ ನಿರ್ವಚನ, ಕ್ಷರಣವೆಂದರೆ ಸತತವಾಗಿ ದಾನಮಾಡುವುದು. ಅಧಿಕವಾಗಿ, ನಿರಂತರವಾಗಿ ಭಕ್ತರಿಗೆ ಅಭೀಷ್ಟಗಳನ್ನು ನೀಡುವುದು. ಕ್ಷರ ಧಾತುವು ವಿನಾಶ ಮತ್ತು ಸತತ ದಾನ ಎಂಬ ಅರ್ಥಗಳನ್ನು ಹೇಳುತ್ತದೆ ಎಂದು ಧಾತು ವ್ಯಾಖ್ಯಾನ.

ಏವಂ ಋಷಿಷು ಶಬ್ದೇಷು ಚ ವ್ಯವಹ್ರಿಯಮಾಣಾನಿ ಸರ್ವಾಣಿ ನಾಮಾನಿ ವಿಷ್ಣೋರೇವ ಮುಖ್ಯತಃ। ಕಿಮು ದೇವತಾನಾಮಾನಿ ?

ಯೋ ದೇವಾನಾಂ ನಾಮಧಾ ಏಕ ಏವ
ತಂ ಸಂಪ್ರಶ್ನಂ ಭುವನಾ ಯಂತ್ಯನ್ಯಾ ॥

ಇಂದ್ರಂ ಮಿತ್ರಂ ವರುಣಮಗ್ನಿಮಾಹುಃ
ರಥೋ ದಿವ್ಯಃ ಸ ಸುಪರ್ಣೋ ಗರುತ್ಮಾನ್ ॥

ಯಮಿಂದ್ರಮಾಹುರ್ವರುಣಂ ಯಮಾಹು-
ರ್ಯಂ ಮಿತ್ರಮಾಹುರ್ಯಮು ಸತ್ಯಮಾಹುಃ ॥

ನಾಮಾನಿ ಸರ್ವಾಣಿ ಯಮಾವಿಶಂತಿ
ತಂ ವೈ ವಿಷ್ಣುಂ ಪರಮಮುದಾಹರಂತಿ ॥

ಇತ್ಯಾದಿ ಶ್ರುತಿಭ್ಯಃ। ನ ಕೇವಲಂ ಋಷ್ಯಾದೀನಾಂ ನಾಮ ಭಗವತಃ। ಸರ್ವೇ ವೇದಾ ಅಪಿ ತಸ್ಯೈವ ನಾಮ। ಕಿಮು ವೇದಾಃ? ಸಮುದ್ರ ಮೇಘ ವೃಕ್ಷಪತನ ಭೇರಿತಾಡನಾದಿ ಸರ್ವಘೋಷಾ ಅಪಿ ತಸ್ಯೈವ ನಾಮಾನಿ, ಯಥಾಯೋಗ್ಯಂ ಯೋಜನೀಯಾನಿ। ಏಕಮೇವ ವ್ಯಾಹರಣಂ, ಏಕಪ್ರಕಾರಮೇವ ನಾಮ । ನಿರ್ದೋಷ ಗುಣಪೂರ್ತಿವಾಚಕತ್ವಾದ್ ಏಕಪ್ರಕಾರತಾ । ಪ್ರಾಣೇ ನಾರಾಯಣ ಏವ, ನಾರಾಯಣ ವಿಷಯ ಏವ ವ್ಯವಹಾರಃ। ಋಚಸ್ತು ವಿಶೇಷತ ಇಂದ್ರಾದಿನಾಮವತೋ ವಿಷ್ಣೋರ್ಗುಣಾನ್ ಅಲ್ಪಜ್ಞಾನಾಮಪಿ ಪ್ರಕಾಶಯಂತೀತಿ ಪ್ರಾಣೇ ನಾರಾಯಣ ಏವೇತಿ ವಿದ್ಯಾತ್ ॥

ಹೀಗೆ ಋಷಿಪರವಾಗಿಯೂ ಸೂಕ್ತಪರವಾಗಿಯೂ ವ್ಯವಹಾರದಲ್ಲಿರುವ ಎಲ್ಲ ಹೆಸರುಗಳೂ ಮುಖ್ಯವಾಗಿ ವಿಷ್ಣು ನಾಮಗಳೇ ಆಗಿವೆ ಎಂದಮೇಲೆ -

'ಎಲ್ಲ ದೇವತೆಗಳ ಹೆಸರುಗಳಿಗೂ ಮುಖ್ಯ ವಿಷಯನಾಗಿದ್ದು ಎಲ್ಲ ಒಳ್ಳೆಯ ವಿಚಾರಗಳಿಗೂ ಯೋಗ್ಯ ವಿಷಯನಾದ ಆ ಹರಿಯನ್ನೇ ಎಲ್ಲ ಲೋಕಗಳೂ ಆಶ್ರಯಿಸಿವೆ. ಇವನನ್ನೇ ಇಂದ್ರ, ಮಿತ್ರ, ವರುಣ, ಅಗ್ನಿ ಎಂದೆಲ್ಲ ಕರೆಯುತ್ತಾರೆ. ಮತ್ತು ಇವನೇ ದಿವ್ಯ ಸುಪರ್ಣನೂ ಗರುತ್ಮಂತನೂ ಎನಿಸಿದ್ದಾನೆ. ಯಾರನ್ನು ಇಂದ್ರನೆನ್ನುವರೋ, ಯಾರನ್ನು ವರುಣನೆನ್ನುವರೋ, ಯಾರನ್ನು ಮಿತ್ರನೆನ್ನುವರೋ, ಯಾರನ್ನು ಸತ್ಯನೆನ್ನುವರೋ, ಎಲ್ಲ ನಾಮಗಳೂ ಯಾರನ್ನು ಆಶ್ರಯಿಸಿವೆಯೋ, ಸರ್ವೋತ್ತಮನಾದ ಅವನನ್ನೇ ವಿಷ್ಣು ಎಂದೆನ್ನುತ್ತಾರೆ'' -

ಇದೇ ಮೊದಲಾದ ಶ್ರುತಿವಾಕ್ಯಗಳಿರುವುದರಿಂದ ವಿಷ್ಣುವಿನ ಹೆಸರುಗಳೆಂದು ಮೊದಲೆ ಪ್ರಸಿದ್ಧವಾದ ದೇವತೆಗಳ ಹೆಸರುಗಳು ಮುಖ್ಯವಾಗಿ ವಿಷ್ಣುವಿನ ಹೆಸರುಗಳೆಂದು ಬೇರೆ ಏನು ಹೇಳಬೇಕು ?

ಋಷಿನಾಮಗಳು ಸೂಕ್ತನಾಮಗಳು ಮಾತ್ರವೆ ಭಗವಂತನ ನಾಮಗಳೆಂದಲ್ಲ. ಎಲ್ಲ ವೇದ ಶಬ್ದಗಳೂ ಅವನ ಹೆಸರುಗಳೆ. ವೇದಶಬ್ದಗಳೆ ಎಂದೇನು ? ಸಮುದ್ರಘೋಷ, ಮೇಘಗರ್ಜನೆ, ಮರಗಳು ಬೀಳುವ ಶಬ್ದ, ನಗಾರಿಯ ಶಬ್ದ ಮುಂತಾದ ಎಲ್ಲ ಧ್ವನಿಗಳೂ ಭಗವಂತನ ನಾಮಗಳೆ, ಅವನ ಅಯಾ ಗುಣಗಳಿಗುಣವಾಗಿ ಆಯಾ ಧ್ವನಿಗಳನ್ನು ಅರ್ಥೈಸಬೇಕು.

'ಏಕೈವ ವ್ಯಾಹೃತಿಃ' ಅಂದರೆ, ಒಂದೇ ವ್ಯವಹಾರ, ಒಂದೇ ರೀತಿಯ ಹೆಸರು. ಎಲ್ಲ ಶಬ್ದಗಳೂ ಭಗವಂತನ ನಿರ್ದೋಷಗುಣಪೂರ್ಣತ್ವವನ್ನೇ ಹೇಳುವುದರಿಂದ ಒಂದೇ ರೀತಿ.

'ಪ್ರಾಣ ಏವ' ಎಂದರೆ ಪ್ರಾಣನೆನಿಸಿದ ನಾರಾಯಣನಲ್ಲಿಯೇ, ನಾರಾಯಣನ ವಿಷಯದಲ್ಲಿಯೇ ವ್ಯವಹಾರ, ಹೆಸರು.

'ಪ್ರಾಣ ಋಚ ಇತ್ಯೇವ ವಿದ್ಯಾತ್' ಅಂದರೆ, ಋಕ್ಕುಗಳು, ವಿಶೇಷವಾಗಿ ಇಂದ್ರಾದಿನಾಮಗಳಿಂದ ಕರೆಸಿಕೊಳ್ಳುವ ವಿಷ್ಣುವಿನ ಗುಣಗಳನ್ನು ಅಲ್ಪಜ್ಞರಿಗೂ ಕೂಡ ತಿಳಿಸಿಕೊಡುವುದರಿಂದ ವಿಶೇಷವಾಗಿ ಪ್ರಾಣಪರ, ಅಂದರೆ ನಾರಾಯಣಪರ ಎಂದೇ ತಿಳಿಯಬೇಕು.

ಉಕ್ತಂ ಚ ಬೃಹತ್ಸಂಹಿತಾಯಾಂ -

ಹುಂಕಾರೇಣ ಸಹೈವಾಬ್ಧಿಃ ಸರ್ವಾಭಿಭವಶಕ್ತಿತಾಂ।
ವಿಷ್ಣೋರ್ವಕ್ತಿ, ಯತೋ ಹುಂ ಚ ಪರಾಭಿಭವವಾಚಕಃ।
ಓಮಿತಿ ಸ್ವರತೇ ನಿತ್ಯಂ ವಾಯುರ್ಮೇಘೇಷು ಸಂಸ್ಥಿತಃ।
ಬಲವನ್ನಾದ ಸಂಯುಕ್ತೋ, ಹ್ಯಧಿಕೋಚ್ಚತ್ವಮಸ್ಯ ತು।
ಓಂಕಾರಸ್ಯಾರ್ಥ ಉದ್ದಿಷ್ಟ, ಉಕ್ತಾರ್ಥಾಧಿಕ್ಯಮೇವ ಚ।
ನಾದೋ ಬಲೀ ಪ್ರವದತಿ, ತಥಾ ಭೇರೀಧ್ವನಿಃ ಪ್ರಭೋಃ।
ಅನುದಾತ್ತಸ್ವರೂಪತ್ವಾದ್ ಔದಾರ್ಯಂ ವದತೀಶಿತುಃ।
ತಪೇದಕ್ಷಯಾನ್ಯನೀಚತ್ವಂ ಘಂಟಾದ್ಯಾಃ ಸ್ವರಿತಾತ್ಮಕಾಃ।
ಉಚ್ಚಸ್ಥಿತಿಮುದಾತ್ತಸ್ತು ಸ್ವರ್ಣಚಂಚ್ವಾದಿಕಃ ಸ್ವರಃ।
ವಿಷ್ಣೋರ್ವರ್ವಕ್ತಿ, ತಥಾ ಮಂದ್ರಃ ಶ್ವಾಸಾದಿಪ್ರಚಯಾತ್ಮಕಃ।
ಏಕಪ್ರಕಾರತಾಂ ವಿಷ್ಣೋಃ ಸದಾಚಾಲ್ಯಾಂ ವದತ್ಯಪಿ -
ಇತ್ಯಾದಯಃ ಸರ್ವಘೋಷಾ ವಿಷ್ಣೋರೇವ ಗುಣೋನ್ನತಿಂ।
ವದಂತಿ, ಕಿಮು ವೇದಾದ್ಯ, ಮಾರ್ಜಾರಾದ್ಯಭಿಧಾಸ್ತಥಾ ?
ಮಾರಯಿತ್ವಾ ಪ್ರಭಕ್ಷ್ಯೈವ ಜರಯತ್ಯಖಿಲಂ ಜಗತ್।
ತೇನ ಮಾರ್ಜಾರ ಉದ್ದಿಷ್ಟೋ, ಮೋಷಣಾನ್ಮೂಷಕೋ ಹರಿಃ।
ವರ್ಷಣಾದ್ ವೃಷ ಉದ್ದಿಷ್ಟೋ, ವಲನಾದ್ ವಲ್ಲಿನಾಮಕಃ।
ತಾರಣಾತ್ ತೃಣನಾಮಾಸೌ ಇತ್ಯಾದ್ಯೇಕೋऽಭೀಧೀಯತೇ।

ಬೃಹತ್ ಸಂಹಿತೆಯಲ್ಲಿ ಹೀಗೆ ಹೇಳಿದೆ - 'ಸಮುದ್ರವು ಹುಂಕಾರ ಮಾಡುತ್ತಲೆ ವಿಷ್ಣುವಿನಲ್ಲಿ ಎಲ್ಲ ಜಗತ್ತನ್ನೂ ಗೆಲ್ಲುವ ಶಕ್ತಿ ಇದೆ ಎನ್ನುತ್ತಿದೆ. ಏಕೆಂದರೆ 'ಹುಂ'ಕಾರವು ಇದಿರಾಳಿಯನ್ನು ಗೆಲ್ಲುವ ಶಕ್ತಿಯನ್ನು ಹೇಳುವ ಶಬ್ದ. ಮೋಡಗಳಲ್ಲಿರುವ ವಾಯುವು ಗುಡುಗಿನಿಂದ ವ್ಯಕ್ತವಾಗುವ ಓಂಕಾರವನ್ನು ಸದಾ ಉಚ್ಚರಿಸುತ್ತದೆ ಮತ್ತು ಪ್ರಬಲವಾದ ನಾದ ವ್ಯಂಜಕ ಧ್ವನಿಯನ್ನು ಉಂಟುಮಾಡುತ್ತದೆ. ಓಂಕಾರಕ್ಕೆ ಹರಿಯ ಸರ್ವಾಧಿಕ ಶ್ರೇಷ್ಠತ್ವವೆಂಬ ಅರ್ಥ ವಿವಕ್ಷಿತ. ಪ್ರಬಲವಾದ ನಾದವ್ಯಂಜಕ ಧ್ವನಿ ಉಕ್ತಾರ್ಥದಲ್ಲಿ ಆಧಿಕ್ಯವಿದೆ ಎನ್ನುತ್ತದೆ. ನಗಾರಿಯ ಶಬ್ದವು ಅನುದಾತ್ತಸ್ವರವ್ಯಂಜಕವಾದ್ದರಿಂದ ಸರ್ವಾಭೀಷ್ಟಕೊಡಲು ಸಮರ್ಥನಾದ ಹರಿಯ ಔದಾರ್ಯಗುಣವನ್ನು ಹೇಳುತ್ತದೆ. ಘಂಟೆ ಮುಂತಾದವು ಸ್ವರಿತಸ್ವರವ್ಯಂಜಕವಾಗಿದ್ದು ಬೇರೆ ಎಲ್ಲ ವಿಷ್ಣುವಿಗಿಂತ ಕಡಿಮೆ ಎನ್ನುತ್ತವೆ. ನಾಗಸ್ವರ ಮುಂತಾದವುಗಳ ಧ್ವನಿಗಳು ಉದಾತ್ತ ಸ್ವರವ್ಯಂಜಕವಾಗಿದ್ದು ವಿಷ್ಣುವಿನ ಉನ್ನತ ಸ್ಥಿತಿಯನ್ನು ಹೇಳುತ್ತವೆ. ಶ್ವಾಸ ಮುಂತಾದವುಗಳ

ಸಮಸ್ಥಿತಿಯಿಂದ ವ್ಯಂಗ್ಯವಾದ ಮಂದ್ರ ಸ್ವರವು ವಿಷ್ಣುವಿನ ಏಕಪ್ರಕಾರವಾದ ಸ್ಥಿತಿ ಎಂದೂ ವ್ಯತ್ಯಾಸಗೊಳಿಸಲಾಗದುದು ಎನ್ನುತ್ತದೆ. ಇವೇ ಮೊದಲಾದ ಎಲ್ಲ ಧ್ವನಿಗಳೂ ವಿಷ್ಣುವಿನ ಉನ್ನತ ಗುಣಗಳನ್ನೇ ಹೇಳುತ್ತವೆ. ಇನ್ನು ವೇದಾದಿಗಳ ಮತ್ತು ಮಾರ್ಜಾರ ಮುಂತಾದ ಶಬ್ದಗಳ ಪಾಡೇನು ? ಪ್ರಳಯಕಾಲದಲ್ಲಿ ಎಲ್ಲರನ್ನೂ ಕೊಂದು ತಿಂದು ಅರಗಿಸಿಕೊಳ್ಳುವುದರಿಂದ ಹರಿಯು ಮಾರ್ಜಾರನೆನಿಸಿದ್ದಾನೆ. ಭಕ್ತರ ಪಾಪಗಳನ್ನು ಪರಿಹರಿಸುವುದರಿಂದ ಮೂಷಕ, ಭಕ್ತರಿಗೆ ಅಭೀಷ್ಟಗಳ ಮಳೆಗರೆಯುವುದರಿಂದ ವೃಷನೆನಿಸುತ್ತಾನೆ. ಎಲ್ಲ ವಸ್ತುಗಳನ್ನೂ ಸುತ್ತಲೂ ಬಳ್ಳಿಯಂತೆ ಆವರಿಸುವುದರಿಂದ ವಲಿನಾಮಕನಾಗಿದ್ದಾನೆ. ಸಂಸಾರದಿಂದ ಭಕ್ತರನ್ನು ದಾಟಿಸುವುದರಿಂದ ತೃಣನಾಮಕನೀತ. ಇದೇ ರೀತಿಯಿಂದ ಎಲ್ಲ ಶಬ್ದಗಳಿಂದಲೂ ಮುಖ್ಯವಾಗಿ ಹರಿಯೊಬ್ಬನೆ ಕರೆಸಿಕೊಳ್ಳುತ್ತಾನೆ''.

ಸರ್ವನಾಮಾಪಿ ಭಗವಾನ್ ಸರ್ವಶಕ್ತಿಶ್ಚ ಸರ್ವವಿತ್ ।
ಬ್ರಹ್ಮರುದ್ರಾದಿಜೀವೇಭ್ಯೋ ಜಡೇಭ್ಯಃ ಶ್ರಿಯ ಏವ ತು।
ವ್ಯತಿರಿಕ್ತಃ ಸದಾನಂತ ಸಾಂದ್ರಾನಂದೈಕರೂಪಕಃ।
ತಸ್ಯೈವ ಮುಖ್ಯನಾಮಾನಿ ಸಮಾಕೃಷ್ಯೇತರೇಷ್ವಪಿ।
ಉಪಚಾರಾತ್ ಪ್ರವರ್ತಂತೇ ವ್ಯವಹಾರಪ್ರಸಿದ್ಧಯೇ।
ತಥೈವ ಸರ್ವನಾಮಾನಿ ಪ್ರವರ್ತಂತೇ ಚ ಮಾರುತೇ।
ನ ತಾವನ್ಮುಖ್ಯವೃತ್ತ್ಯೈವ, ಮುಖ್ಯತೋಽನ್ಯವ್ಯಪೇಕ್ಷಯಾ।
ಮುಖ್ಯತಃ ಸರ್ವನಾಮಾ ತು ವಿಷ್ಣುರೇಕೋ ನ ಚಾಪರಃ।
ತಸ್ಮಾತ್ ಪ್ರಾಣಾದಿಶಬ್ದಾಶ್ಚ ವಿಷ್ಣಾವೇವ ಹಿ ಮುಖ್ಯತಃ।
ಅನ್ಯವ್ಯಪೇಕ್ಷಯಾ ವಾಯೌ ಮುಖ್ಯವೃತ್ತಿರ್ವಿಧೀಯತೇ।
ವಾಯುಶ್ಚ ಸೂರ್ಯಸಂಸ್ಥಃ ಸನ್ ತಪತ್ಯೇತಜ್ಜಗತ್ತ್ರಯಂ।
ಆಜ್ಞಯೈವ ಹರೇರ್ವಾಯೋಃ ಶಕ್ತ್ಯಾ ಸೂರ್ಯಸ್ತಪತ್ಯಯಂ' । ಇತ್ಯಾದಿ

'ಎಲ್ಲ ಶಬ್ದಗಳಿಂದ ಕರೆಸಿಕೊಂಡರೂ ಅವನು ಸರ್ವಜ್ಞನಾದ್ದರಿಂದ ಜಡಗಳಿಗಿಂತ ಭಿನ್ನ, ವಿಲಕ್ಷಣ. ಸದಾ ಅಭಿವ್ಯಕ್ತಸಾಂದ್ರಾನಂದರೂಪನಾಗಿರುವುದರಿಂದ ಬ್ರಹ್ಮರುದ್ರಾದಿಜೀವರಿಗಿಂತ ಭಿನ್ನ, ವಿಲಕ್ಷಣ. ಅನಂತಾನಂದರೂಪನಾದ್ದರಿಂದ ಲಕ್ಷ್ಮೀದೇವಿಗಿಂತಲೂ ಭಿನ್ನ, ವಿಲಕ್ಷಣ. ಸರ್ವಶಕ್ತನಾದ್ದರಿಂದ ಈ ಎಲ್ಲ ಮಹಿಮೆ ಅವನಲ್ಲಿ ಇದೆ. ಎಲ್ಲ ಶಬ್ದಗಳೂ ಮುಖ್ಯವಾಗಿ ಅವನ ನಾಮಗಳೇ ಆದರೂ ಬೇರೆ ವಸ್ತುಗಳಲ್ಲಿ ಆ ಶಬ್ದಗಳ ವ್ಯವಹಾರ ಉಂಟಾಗುವುದಕ್ಕಾಗಿ ಆ ನಾಮಗಳನ್ನೇ ಸೆಳೆದು ತಂದು ಅಮುಖ್ಯವಾಗಿ ಪ್ರಯೋಗಿಸಲಾಗುತ್ತದೆ. ಹಾಗೆಯೇ ಎಲ್ಲ ಶಬ್ದಗಳೂ ಮುಖ್ಯ ಪ್ರಾಣನಲ್ಲಿಯೂ ವ್ಯವಹರಿಸಲ್ಪಡುತ್ತವೆ. ಹರಿಯಂತೆ

ಪರಮಮುಖ್ಯವೃತ್ತಿಯಿಂದಲ್ಲ. ಬೇರೆ ವಸ್ತುಗಳಿಗೆ ಹೋಲಿಸಿದಾಗ ಹೆಚ್ಚು ಮುಖ್ಯವೆನಿಸಿದ ವೃತ್ತಿಯಿಂದ, ಪರಮಮುಖ್ಯವೃತ್ತಿಯಿಂದ ಸರ್ವಶಬ್ದವಾಚ್ಯ ವಿಷ್ಣು ಒಬ್ಬನೆ, ಬೇರಾರು ಅಲ್ಲ. ಆದ್ದರಿಂದ ಯದ್ಯಪಿ ಪ್ರಾಣಾದಿ ಶಬ್ದಗಳು ವಿಷ್ಣುವಿನಲ್ಲಿಯೇ ಮುಖ್ಯವೆಂದು ಪ್ರಸಿದ್ಧಿ. ಆದರೂ ವಾಯುವಿನಲ್ಲಿ ಬೇರೆ ವಸ್ತುಗಳಿಗೆ ಹೋಲಿಸಿ ಮುಖ್ಯವೃತ್ತಿ ಇದೆ ಎನ್ನಲಾಗುತ್ತದೆ. ವಾಯುವೂ ಸೂರ್ಯನಲ್ಲಿದ್ದು ಹರಿಯಾಜ್ಞೆಯಿಂದ ಮೂರ್ಲೋಕಕ್ಕೂ ಶಾಖ ನೀಡುತ್ತಾನೆ. ವಾಯು ಶಾಖ ನೀಡುವುದು ಅಸಂಭವವೇನಲ್ಲ. ಏಕೆಂದರೆ ಈ ಸೂರ್ಯನೂ ಕೂಡ ವಾಯುವಿನ ಶಕ್ತಿಯಿಂದ ಶಾಖ ನೀಡುತ್ತಾನೆ' ಎಂದು ಮುಂತಾಗಿ.

'ಏಷ ನಾರಾಯಣೋ ದೇವೋ ವಾಯುನಾ ಸಹೈವೇಮಂ ಲೋಕಮಭ್ಯರ್ಚತ್' ಎಂದು ಭಾಷ್ಯದಲ್ಲಿ ಹಿಂದೆ ಶತರ್ಚಿ ಮುಂತಾದ ಎಲ್ಲ ಶಬ್ದಗಳನ್ನೂ ನಾರಾಯಣಪರವಾಗಿಯೂ ವಾಯುಪರವಾಗಿಯೂ ತಿಳಿದುಕೊಳ್ಳಬೇಕೆನ್ನುವ ಅಭಿಪ್ರಾಯ ವ್ಯಕ್ತವಾಗಿದೆ. ಆದರೆ ಉಪನಿಷತ್ತಿನಲ್ಲಿ 'ಪ್ರಾಣ ಏವ ಪ್ರಾಣ ಋಚ ಇತ್ಯೇವ' ಪ್ರಾಣ ಪರವಾಗಿಯೆ ವೇದಾದಿಗಳನ್ನು ತಿಳಿಯಬೇಕೆಂದಿದೆ. ಪ್ರಾಣ ಎಂದರೆ ಬ್ರಹ್ಮಸೂತ್ರ ಸಿದ್ಧಾಂತದಂತೆ ನಾರಾಯಣನೆಂದಿಟ್ಟುಕೊಂಡರೆ ಸರ್ವಶಬ್ದವಾಚ್ಯ ನಾರಾಯಣನೆ, ವಾಯು ಅಲ್ಲ ಎಂದಂತಾಯಿತು. ಮುಖ್ಯಪ್ರಾಣನೆಂದಿಟ್ಟುಕೊಂಡರೆ ಮುಖ್ಯಪ್ರಾಣನೆ ಸರ್ವಶಬ್ದವಾಚ್ಯ, ನಾರಾಯಣನಲ್ಲ ಎಂದಂತಾಯಿತು. ಈ ಸಮಸ್ಯೆಗೆ ಪರಿಹಾರ ಭಾಷ್ಯದಲ್ಲಿ ಉಕ್ತವಾಗಿದೆ. ಪರಮಮುಖ್ಯವೃತ್ತಿ ವಿವಕ್ಷೆಯಿಂದ ನಾರಾಯಣನೆ ಸರ್ವಶಬ್ದವಾಚ್ಯ. ಅವನನ್ನು ಬಿಟ್ಟು ಇತರರಿಗೆ ಹೋಲಿಸಿದಾಗ ಅವರೆಲ್ಲರಿಗಿಂತ ಹೆಚ್ಚು ಮುಖ್ಯವಾದ ವೃತ್ತಿಯಿಂದ ವಾಯುವೆ ಸರ್ವಶಬ್ದವಾಚ್ಯ. ಇಲ್ಲಿ ಭಾಷ್ಯದಲ್ಲಿ ಪುನರುಕ್ತಿ ಇಲ್ಲ. 'ಪ್ರಾಣಾದಿ ಸರ್ವ ಶಬ್ದಗಳಿಗೂ ವಾಯುವಿನಲ್ಲಿ ಇತರರಿಗಿಂತ ಹೆಚ್ಚು ಮುಖ್ಯವಾದ ವೃತ್ತಿ ಇದ್ದರೂ ತಾತ್ಪರ್ಯ ಇರಲಾರದು. ಬ್ರಹ್ಮಸೂತ್ರದಲ್ಲಿ, ವಿಷ್ಣುವಿನಲ್ಲಿಯೇ ತಾತ್ಪರ್ಯವೆಂದು ಸಿದ್ಧಾಂತ ಮಾಡಲಾಗಿದೆ. ಆದ್ದರಿಂದ 'ಪ್ರಾಣ ಏವ' ಎಂಬಲ್ಲಿ ಮುಖ್ಯಪ್ರಾಣಪರತ್ವ ಹೇಗೆ ? ಎಂಬ ಶಂಕೆಗೆ ಭಾಷ್ಯದಲ್ಲಿ ಸಮಾಧಾನ ನೀಡಲಾಗಿದೆ. ಬ್ರಹ್ಮಸೂತ್ರದಲ್ಲಿ ವಿಷ್ಣುಪರತ್ವ ಹೇಳಿದುದು ಪರಮುಖ್ಯತಾತ್ಪರ್ಯದಿಂದ, ಇತರರಿಗಿಂತ ಹೆಚ್ಚು ಮುಖ್ಯವಾದ ತಾತ್ಪರ್ಯದಿಂದ ವಾಯುಪರತ್ವ ಹೇಳಿದರೆ ವಿರೋಧವಿಲ್ಲವೆಂದು. ಇದನ್ನು ಬೃಹತ್‌ಸಂಹಿತಾವಚನದಿಂದ ಹೇಳಿ, ಆಚಾರ್ಯರು ಸ್ವವಚನದಿಂದಲೂ ಮುಂದೆ ಹೇಳುತ್ತಾರೆ.

ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ

ತತ್ತ್ವಪ್ರದೀಪ

ಸಕಲಶಬ್ದ ಸಮನ್ವಯ ಮಾಡಿದರೆ ಕರ್ಮಾನುಷ್ಠಾನ ಹೇಗೆ ಸಾಧ್ಯ ?

तत्वप्रदीपः – वसन्ते वसन्ते ज्योतिषा यजेतेत्यादिकर्माद्यभिधायकस्य पदकदम्बकस्य प्रत्येकं ब्रह्मवाचकत्वं न युज्यते । कर्तृकरणकर्मक्रमादि वचनविरोधात् । मुख्यत एकस्योभयार्थत्वसम्भवेन तद्वचनाभावे कृत्यनुष्ठानलोपप्रसङ्गादित्यत आह – ज्योतिरुक्रमात्तु तथा ह्यधीयते एके ।।

'ವಸಂತೇ ವಸಂತೇ ಜ್ಯೋತಿಷಾ ಯಜೇತ' ಇವೇ ಮೊದಲಾದವು ಯಜ್ಞಾದಿ ಕರ್ಮಗಳನ್ನು ಪ್ರತಿಪಾದನೆ ಮಾಡುತ್ತಿವೆ. ಈ ವಾಕ್ಯದಲ್ಲಿರುವ ಪದಸಮೂಹಗಳು ಪ್ರತ್ಯೇಕವಾಗಿ ಬ್ರಹ್ಮವಾಚಕವಾಗಲು ಸಾಧ್ಯವಿಲ್ಲ. ಏಕೆಂದರೆ ಕರ್ತೃ, ಕರಣ, ಕರ್ಮ ಇವುಗಳನ್ನು ಪ್ರತಿಪಾದನೆ ಮಾಡುವ ಕ್ರಮದಲ್ಲಿ ಈ ವಾಕ್ಯವಿರುತ್ತದೆ. ತದ್ವಿರೋಧವು ಪ್ರಾಪ್ತವಾಗುತ್ತದೆ. ಒಂದೇ ಪದಕ್ಕೆ ಬ್ರಹ್ಮ ಹಾಗೂ ಕರ್ಮ ಎಂಬೆರಡೂ ಅರ್ಥವನ್ನು ಅಂಗೀಕಾರ ಮಾಡಬಾರದು. ಸಕಲಶಬ್ದಗಳಿಂದ ಬ್ರಹ್ಮನೇ ಪ್ರತಿಪಾದ್ಯನಾಗಿದ್ದಾನೆಂದು ಹೇಳಿದರೆ 'ವಸಂತೇ ವಸಂತೇ' ಇತ್ಯಾದಿ ವಾಕ್ಯದಿಂದಲೂ ಪ್ರತಿಪಾದ್ಯನಾಗುತ್ತಾನೆ. ಆಗ ಜ್ಯೋತಿಷ್ಟೋಮಾದಿ ಕರ್ಮಗಳ ಅನುಷ್ಠಾನವೇ ಲೋಪವಾಗುವ ಪ್ರಸಂಗ ಬರುತ್ತದೆ ? ಈ ಆಕ್ಷೇಪಕ್ಕೆ ಉತ್ತರ ನೀಡಲು 'ಜ್ಯೋತಿರುಪಕ್ರಮಾತ್ತು ತಥಾ ಹ್ಯಧೀಯತೇ' ಎಂಬ ಸೂತ್ರವು ಹೊರಟಿದೆ.

ವಿವರಣೆ - ಹಿಂದಿನ ಮೂರು ಪಾದಗಳಲ್ಲಿ ಸಮನ್ವಯಾಧಿಕರಣದಲ್ಲಿ ಪ್ರತಿಜ್ಞೆ ಮಾಡಲ್ಪಟ್ಟ ಸಕಲ ವೈದಿಕಶಬ್ದಗಳನ್ನು ಭಗವಂತನಲ್ಲಿ ಸಮನ್ವಯ ಮಾಡಲಾಯಿತು. ಇದರ ಮೇಲೆ ಹೀಗೆ ಆಕ್ಷೇಪವು ಪ್ರಾಪ್ತವಾಗುತ್ತದೆ - ವೇದದ ಕೆಲವು ಭಾಗವು ಜ್ಯೋತಿಷ್ಟೋಮಾದಿ ಕರ್ಮವನ್ನು ವಿಧಾನ ಮಾಡುತ್ತಿದೆ. ಆ ವಾಕ್ಯಗಳಲ್ಲಿ ಕೆಲವು ಪದಗಳು ಕರ್ತೃವನ್ನು ಇನ್ನೂ ಕೆಲವು ಯಜ್ಞಸಾಮಗ್ರಿಗಳನ್ನು ಹಾಗೂ ಕರ್ಮಗಳ ಕ್ರಮವನ್ನು ಪ್ರತಿಪಾದನೆ ಮಾಡುತ್ತಿವೆ. ಈಗ ಪ್ರತಿಯೊಂದು ಪದಗಳಿಂದ ಬ್ರಹ್ಮನೇ ಪ್ರತಿಪಾದ್ಯನೆಂದು ಹೇಳಿದರೆ ಈ ಕರ್ಮಕ್ರಮಾದಿಗಳನ್ನು ಪ್ರತಿಪಾದನೆ ಮಾಡುವ ಶಬ್ದಗಳೇ ಇಲ್ಲದಾಗುತ್ತವೆ. ಆಗ ವೈದಿಕವಾದ ಕರ್ಮಾನುಷ್ಠಾನವೇ ಲೋಪವಾಗುವ ಪ್ರಸಂಗ ಬರುತ್ತದೆ ಎಂದು.

ಐತರೇಯಶಾಖೆಯಲ್ಲಿ ಇದಕ್ಕೆ ಉತ್ತರವಿದೆ

तत्वप्रदीपः – ज्योतिष्टोमादिकर्मकर्तृकरणादीनामशेषाणां पदार्थानां वाचकत्वेन प्रसिद्धशब्दानामभिधेयोऽपि स एव । यथा चायं सर्वशब्दवाच्यो भवति तथा ह्यधीयत एके शाखिनः प्रघट्टकोपक्रमादेवाऽरभ्य ।

ಭಾಷ್ಯದಲ್ಲಿ 'ಜ್ಯೋತಿರಾದಿಕರ್ಮವಾಚಕತ್ವೇನ ಪ್ರಸಿದ್ಧಶಬ್ದಾನಾಮಭಿಧೇಯೋಽಪಿ ಸ ಏವ' ಎಂಬುದರಿಂದ ಸೂತ್ರಾರ್ಥವನ್ನು ಹೇಳಿದ್ದಾರೆ. ಭಾಷ್ಯದ ಈ ಮಾತಿಗೆ ಹೀಗೆ ಅರ್ಥ - ಜ್ಯೋತಿಷ್ಟೋಮ ಮೊದಲಾದ ಕರ್ಮ, ಕರ್ತೃ, ಕರಣ ಎಂಬ ಸಕಲ ಪದಾರ್ಥಗಳ ವಾಚಕವೆಂದು ಪ್ರಸಿದ್ಧವಾದ ಶಬ್ದಗಳಿಂದ ಮಹಾವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆ. ಈ ಮಹಾವಿಷ್ಣುವು ಸರ್ವಶಬ್ದವಾಚ್ಯನಾಗಿದ್ದಾನೆಂದೇ ಕೆಲವು ಶಾಖೆಯವರು ಅಧ್ಯಯನ ಮಾಡುತ್ತಾರೆ. ಆ ಉಪನಿಷತ್ತಿನ ಪ್ರಾರಂಭ ಹೀಗೆಯೇ ಆಗಿದೆ.

ವಿವರಣೆ - ಐತರೇಯ ಶಾಖೆಯವರು ಸಕಲ ಕರ್ಮವಾಚಕಪದಗಳನ್ನು ವಿಷ್ಣುವಿನಲ್ಲಿಯೇ ಸಮನ್ವಯ ಮಾಡುತ್ತಾರೆ. ಆದ್ದರಿಂದ ಕರ್ಮಪ್ರತಿಪಾದಕವಾದ ವಾಕ್ಯಗಳೂ ಕೂಡ ವಿಷ್ಣುವನ್ನೇ ಪ್ರತಿಪಾದನೆ ಮಾಡುತ್ತವೆ ಎಂಬುದು ಈ ಅಧಿಕರಣದ ಸಿದ್ಧಾಂತ.

'ಉಪಕ್ರಮಾತ್' ಎಂಬ ಸೂತ್ರದಲ್ಲಿರುವ ಪಂಚಮೀ ವಿಭಕ್ತಿಯು ಲ್ಯಬ್ ಲೋಪನಿಮಿತ್ತಿಕವಾಗಿದೆ. 'ತು' ಎಂಬ ಶಬ್ದವು ಏವಾರ್ಥದಲ್ಲಿದೆ. 'ಹಿ' ಎಂಬ ಶಬ್ದವು ಹೇತ್ವರ್ಥದಲ್ಲಿದೆ. ಆದ್ದರಿಂದ ತೈತ್ತಿರೀಯೋಪನಿಷತ್ತು ಸಕಲಶಬ್ದಗಳು ಬ್ರಹ್ಮನಲ್ಲಿ ಸಮನ್ವಯಗೊಳ್ಳುತ್ತವೆ ಎಂದು ಹೇಳುವ ಮೊದಲು ಕೆಲವು ಋಷಿವಾಚಕಪದಗಳನ್ನು ಬ್ರಹ್ಮನಲ್ಲಿ ಸಮನ್ವಯ ಮಾಡಿ ತೋರಿಸಿದೆ. ಹೀಗೆ ಸಕಲಗುಣಪರಿಪೂರ್ಣತ್ವವನ್ನು ಸಮರ್ಥನೆ ಮಾಡುವುದಕ್ಕಾಗಿ ಸರ್ವಶಬ್ದಸಮನ್ವಯವನ್ನು ಈ ಉಪನಿಷತ್ತು ಮಾಡುತ್ತಿದೆ.

'ಏಷ ಇಮಂ ಲೋಕಂ' ಎಂಬ ಶ್ರುತ್ಯರ್ಥ

तत्वप्रदीपः – अयं श्रुत्यर्थः - एष परमात्मा इमे देहं लोकं जीवान्तर्यामि रूपेणाभ्यार्चत् । य एष आदित्यस्थस्तपति, ''यश्चासावदित्ये'' ''अथ य एषोऽन्तर आदित्ये हिरण्यश्मश्रुः'' ''येनाऽदित्यस्तपति तेजसा भ्राजसा च''

''यदादित्यगतं तेजः'' इत्यादि श्रुतिस्मृतिभ्यो विष्णुरेव हि तत्रस्थस्तपति । सर्वप्रणेता ह्येष यस्तपति । शतं वर्षाणि तं लोकमभ्यार्चदिति यत्तस्माच्छतर्चिन इत्याचक्षते विद्वांसः । एतमेव शतर्चिनः सन्तं शतर्चिन इत्याचक्षते न त्वन्यानिति । एवमन्यानामान्यपि परमात्मनि पृथक्पृथङ्निरुच्य पुनः सर्ववेदप्रभृतयः समद्रघोषान्ताः शब्दाः एकविषययैव व्याहृतिः । सा च सर्वप्रणेतृपरमात्मविषयैवेति विद्यादिति सतात्पर्यमधीयते।

'ಏಷ ಇಮಂ ಲೋಕಂ' ಇತ್ಯಾದಿ ಶ್ರುತ್ಯರ್ಥ ಹೀಗಿದೆ - ಏಷಃ = ಪರಮಾತ್ಮನು, ಇಮಂ= ದೇಹಂ, ಈ ಬ್ರಹ್ಮಾದಿ ದೇವತೆಗಳ ಶರೀರವನ್ನು, ಅಭ್ಯಾರ್ಚತ್ = ಅಂತರ್ಯಾಮಿರೂಪದಿಂದ ಪ್ರವೇಶ ಮಾಡಿದನು. 'ಯ ಏಷ ಆದಿತ್ಯಸ್ತಪತಿ' 'ಯಶ್ಚಾಸಾವಾದಿತ್ಯೇ' = ಯಾವ ಈ ಆದಿತ್ಯನು ಜ್ವಲಿಸುತ್ತಿದ್ದಾನೋ, ಅವನಲ್ಲಿ ಈ ನಾರಾಯಣನೇ ನೆಲೆಸಿದ್ದಾನೆ. 'ಅಥ ಯ ಏಷೋಽಂತರ ಆದಿತ್ಯೇ ಹಿರಣ್ಮಶ್ಮಶ್ರುಃ' ಯಾವ ಹಿರಣ್ಮಶ್ಮಶ್ರು ಎನಿಸಿದ ಭಗವಂತನು ಈ ಆದಿತ್ಯನಲ್ಲಿ ನೆಲೆಸಿದ್ದಾನೋ, 'ಯೇನಾದಿತ್ಯಸ್ತಪತಿ ತೇಜಸಾ ಭ್ರಾಜಸಾ ಚ' ಯಾರಿಂದ ಈ ಸೂರ್ಯನು ತೇಜಸ್ಸಿನಿಂದ ಎಲ್ಲವನ್ನೂ ಸುಡುವನೋ, 'ಯದಾದಿತ್ಯಗತಂ ತೇಜಃ' ಯಾರ ಅಧೀನವಾದ ತೇಜಸ್ಸು ಸೂರ್ಯನಲ್ಲಿದೆಯೋ, ಇವೇ ಮೊದಲಾದ ಶ್ರುತಿ-ಸ್ಮೃತಿಗಳಿಂದ ವಿಷ್ಣುವೇ ಆದಿತ್ಯನಲ್ಲಿದ್ದು ಎಲ್ಲವನ್ನೂ ಬೆಳಗುತ್ತಾನೆ. ಸಕಲ ಪ್ರಣೇತೃವಾದವನೇ ಇಲ್ಲಿ ನೆಲೆಸಿದ್ದಾನೆ. ಮತ್ತು ನೂರು ವರ್ಷಗಳ ಕಾಲ ಚತುರ್ಮುಖಬ್ರಹ್ಮನ ಶರೀರದಲ್ಲಿಯೇ ವಿಷ್ಣುವು ನೆಲಿಸಿದ್ದನು. ಆದ್ದರಿಂದ ಇವನಿಗೆ 'ಶತರ್ಚಿ' ಎಂಬ ಹೆಸರು ಬಂದಿತು ಎಂಬುದಾಗಿ ವಿದ್ವಾಂಸರು ಹೇಳುತ್ತಾರೆ. ಬೇರೆಯವರನ್ನು ಶತರ್ಚಿ ಎಂದು ವಿದ್ವಾಂಸರು ಕರೆಯುವುದಿಲ್ಲ ಎಂಬುದಾಗಿ ಐತರೇಯೋಪನಿಷತ್ತಿನ ಪ್ರಾರಂಭದಲ್ಲಿ 'ಶತರ್ಚಿ' ಎಂಬ ಪದವನ್ನು ಸಮನ್ವಯ ಮಾಡುವ ಮೂಲಕ ಸಕಲಶಬ್ದವಾಚ್ಯತ್ವವನ್ನು ಸಮರ್ಥನೆ ಮಾಡಲಾಗಿದೆ. ಪರಮಾತ್ಮನಲ್ಲಿ ಒಂದೊಂದೇ ಪದಗಳನ್ನು ಮೊದಲು ಉದಾಹರಣೆಯ ಮೂಲಕ ಸಕಲವೇದಸಮನ್ವಯದಿಂದ ಪ್ರಾರಂಭಮಾಡಿ, ಸಮುದ್ರ ಧ್ವನಿಯ ತನಕ ಸಕಲಶಬ್ದಗಳನ್ನು ಪರಮಾತ್ಮನಲ್ಲಿಯೇ ಸಮನ್ವಯ ಮಾಡಲಾಗಿದೆ. ಎಲ್ಲವನ್ನೂ ಪ್ರೇರಣೆ ಮಾಡುವ ಪರಮಾತ್ಮನೇ ಈ ಎಲ್ಲ ಶಬ್ದಗಳಿಂದ ಪ್ರತಿಪಾದ್ಯನಾಗಿದ್ದಾನೆಂದು ತಾತ್ಪರ್ಯಸಹಿತವಾಗಿ ಆರಣ್ಯಕರು ಅಧ್ಯಯನ ಮಾಡುತ್ತಾರೆ.

ವಿವರಣೆ - ಓದುಗರ ಅನುಕೂಲಕ್ಕಾಗಿ ಐತರೇಯೋಪನಿಷತ್ತಿನ ಎರಡನೇ ಪ್ರಘಟ್ಟಕದ ಎರಡನೆಯ ಅಧ್ಯಾಯದಲ್ಲಿ ಪ್ರಾಪ್ತವಾಗುವ ಉಪನಿಷದ್ಭಾಗವನ್ನು ಭಾಷ್ಯಸಹಿತವಾಗಿ ನೀಡಲಾಗಿದೆ. ಮತ್ತು ಪ್ರಸಿದ್ಧವಾದ ಸಂಧ್ಯಾವಂದನೆಯ 'ಧ್ಯೇಯಃ ಸದಾಃ' ಎಂಬ ಮಂತ್ರವು ಇದೇ ಸಂದರ್ಭದಲ್ಲಿ ಆಚಾರ್ಯರು ಉಲ್ಲೇಖಿಸಿದ್ದಾರೆ ಎಂಬುದನ್ನು ಗಮನಿಸಬೇಕು.

ಏಷ ಇಮಂ ಲೋಕಮಭ್ಯಾರ್ಚತ್ ಪುರುಷರೂಪೇಣ, ಯ ಏಷ ತಪತಿ । ಪ್ರಾಣೋ ವಾವ ತದಭ್ಯಾರ್ಚತ್ । ಪ್ರಾಣೋ ಹ್ಯೇಷ ಯ ಏಷ ತಪತಿ ।

ಸೂರ್ಯಮಂಡಲದಲ್ಲಿದ್ದು ಯಾರು ಜ್ವಲಿಸುತ್ತಿರುವನೋ ಅವನೇ ಲಕ್ಷ್ಮೀ ಮುಖ್ಯಪ್ರಾಣಸಮೇತನಾಗಿ ಅಂತರ್ಯಾಮಿರೂಪದಿಂದ ಬ್ರಹ್ಮಾದಿಜೀವರ ಶರೀರಗಳನ್ನು ಪ್ರವೇಶಿಸಿದನು. ಅಂದರೆ ನಾರಾಣನೆ ಬ್ರಹ್ಮಾದಿ ಜೀವರಶರೀರವನ್ನು ಪ್ರವೇಶಿಸಿದನು. ಸೂರ್ಯಮಂಡಲದಲ್ಲಿ ಜ್ವಲಿಸುತ್ತಿರುವವನು ನಾರಾಯಣನೆ.

'ಏಷ' ನಾರಾಯಣೋ ದೇವೋ ವಾಯುನಾ ಸಹೈವೇಮಂ ಲೋಕಮಭ್ಯಾರ್ಚತ್ ಬ್ರಹ್ಮಾದಿ ಶರೀರೇಷು ಪ್ರವಿವೇಶ । ಪುರುಷ ಇತಿ ಅಂತರ್ಯಾಮಿರೂಪಸ್ಯಾಖ್ಯಾ , ಪುರಿ ಶೇತೇ ಇತಿ । ಪ್ರಸಿದ್ಧತ್ವಾಚ್ಚ ಪಂಚರಾತ್ರೇಷು। ಯ ಏಷ ಸೂರ್ಯಮಂಡಲೇ ಸ್ಥಿತ್ವಾ ತಪತಿ ಭಗವಾನ್, ಸ ನಾರಾಯಣಃ । 'ಯ ಆದಿತ್ಯೇ ತಿಷ್ಠನ್ ಆದಿತ್ಯಾದಂತರೋ ಯಮಾದಿತ್ಯೋ ನ ವೇದ' ಇತ್ಯಾದಿ ಶ್ರುತಿಭ್ಯಃ। 'ಯ ಏಷೋಽಂತರಾದಿತ್ಯೇ ಹಿರಣ್ಮಯಃ ಪುರುಷೋ ದೃಶ್ಯತೇ' ಇತ್ಯುಕ್ತ್ವಾ 'ತಸ್ಯ ಯಥಾ ಕಪ್ಯಾಸಂ ಪುಂಡರೀಕಮೇವಮಕ್ಷಿಣೀ' ಇತ್ಯುಕ್ತತ್ವಾನ್ನ ಶಿವಾದಯಃ । ಶಿವೋ ಹಿ ವಿರೂಪಾಕ್ಷಃ । ಪ್ರಸಿದ್ಧಶ್ಚ ಪುಂಡರೀಕಾಕ್ಷ ಇತಿ ಭಗವಾನ್ ನಾರಾಯಣಃ ।

'ಏಷಃ' ಅಂದರೆ ಮುಖ್ಯಪ್ರಾಣ ಸಮೇತನಾದ ಈ ನಾರಾಯಣದೇವನು 'ಇಮಂ ಲೋಕಮಭ್ಯಾರ್ಚತ್' ಎಂದರೆ ಬ್ರಹ್ಮಾದಿಜೀವರ ಶರೀರಗಳಲ್ಲಿ ಪ್ರವೇಶಿಸಿದನು. 'ಪುರಿ ಶೇತೇ' ಶರೀರದಲ್ಲಿ ಇರುವವನೆಂಬ ಅರ್ಥದಲ್ಲಿ ಪುರುಷ ಎಂಬ ಶಬ್ದ ಅಂತರ್ಯಾಮಿ ರೂಪಕ್ಕೆ ಹೆಸರು. ಪಂಚರಾತ್ರಗ್ರಂಥಗಳಲ್ಲಿ ಈ ಅರ್ಥದಲ್ಲಿ ಪುರುಷ ಶಬ್ದವು ಪ್ರಸಿದ್ಧವೂ ಆಗಿದೆ. ಸೂರ್ಯಮಂಡಲದಲ್ಲಿದ್ದು ಜ್ವಲಿಸುತ್ತಿರುವವನು ಭಗವಾನ್ ನಾರಾಯಣನೆ. ಏಕೆಂದರೆ 'ಯಾರು ಆದಿತ್ಯನೊಳಗಿದ್ದು ಆದಿತ್ಯನಿಗಿಂತ ಬೇರೆಯಾಗಿದ್ದು ಯಾರನ್ನು ಆ ಆದಿತ್ಯನೆ ತಿಳಿದಿಲ್ಲವೋ' ಎಂದು ಶ್ರುತಿಗಳಲ್ಲಿ ಇವನೆ ಸೂರ್ಯಮಂಡಲದೊಳಗಿರುವವನೆಂದು ಪ್ರಸಿದ್ಧನಾಗಿದ್ದಾನೆ. 'ಲೋಕವಿಲಕ್ಷಣಸುಖಪೂರ್ಣನಾದ ಯಾವ ಪುರುಷನು ಆದಿತ್ಯನೊಳಗೆ ಕಾಣುತ್ತಿರುವನೋ' ಎಂದು ಹೇಳಿ 'ಅವನ ಕಣ್ಣುಗಳು ನೀರ ಮೇಲೆ ಅರಳಿ ನಿಂತ ಕಮಲದಂತೆ' ಎಂದು ಹೇಳಿದ್ದರಿಂದ ಸೂರ್ಯಮಂಡಲಾಂತರ್ಗತನೆಂದು ವರ್ಣಿತನಾಗುವವನು ಶಿವ

ಮುಂತಾದವರು ಯಾರೂ ಅಲ್ಲ. ಶಿವ ವಿರೂಪಾಕ್ಷನೆಂದು ಪ್ರಸಿದ್ಧನಾಗಿದ್ದಾನೆ. ಭಗವಾನ್ ನಾರಾಯಣ ಪುಂಡರೀಕಾಕ್ಷನೆಂದು ಪ್ರಸಿದ್ಧ.

'ಯಾದಿತ್ಯೋ ನ ವೇದ' ಇಳ್ಯುಕ್ತತ್ವಾನ್ನಾದಿತ್ಯಃ। 'ಭೇದವ್ಯಪದೇಶಾಚ್ಚಾನ್ಯಃ' ಇತಿ ಚ ಭಗವದ್ವನಮ್।

ವೃತ್ರಂ ಯದಿಂದ್ರ ಶವಸಾऽವಧೀರಹಿಂ
ಆದಿತ್ ಸೂರ್ಯಂ ದಿವ್ಯಾರೋಹಯೇ ದೃಶೇ।
ಯತ್ ಸೂರ್ಯಸ್ಯ ಹರಿತಃ ಪತಂತೀಃ
ಪುರಃ ಸತೀರುಪರಾ ಏತಸೇ ಕಃ।
ಸೀದನ್ನಿಂದ್ರಸ್ಯ ಜಠರೇ ಕನಿಕ್ರದನ್ -
ನೃಭಯರತಃ ಸೂರ್ಯಮಾರೋಹಯೋ ದಿವಿ।
ಚಂದ್ರಮಾ ಮನಸೋ ಜಾತಶ್ಚಕ್ಷೋಃ ಸೂರ್ಯೋ ಅಜಾಯತ।
ಯಃ ಸೂರ್ಯಂ ಯ ಉಷಸಂ ಜಜಾನ
ಯೋ ಅಪಾಂ ನೇತಾ ಸ ಜನಾಸ ಇಂದ್ರಃ।
ಉದ್ವೇತಿ ಪ್ರಸವೀತಾ ಜನಾನಾಂ
ಮಹಾನ್ ಕೇತುರರ್ಣವಃ ಸೂರ್ಯಸ್ಯ।
ಯೇನಾವೃತಂ ಖಂ ಚ ದಿವಂ ಮಹೀಂ ಚ
ಯೇನಾದಿತ್ಯಸ್ತಪತಿ ತೇಜಸಾ ಭ್ರಾಜಸಾ ಚ।
ಯಮಂತಃ ಸಮುದೆರೇ ಕವಯೋऽವಯಂತಿ
ಯದಕ್ಷರೇ ಪರಮೇ ಪ್ರಜಾಃ।
ತಮೇತಾಃ ಪಂಚ ದೇವತಾಃ ಪರಿಮ್ರಿಯಂತೇ
ವಿದ್ಯುದ್ ವೃಷ್ಟಿಶ್ಚಂದ್ರಮಾ ಆದಿತ್ಯೋऽಗ್ನಿಃ।
ಇತ್ಯಾದೌ ಸೂರ್ಯಸ್ಯ ಸರ್ವತ್ರ ಪರಾಧೀನತ್ವಾವಗತೇಶ್ಚ॥

ಹೇ ಪರಮೈಶ್ವರ್ಯಶಾಲಿಯಾದ ನಾರಾಯಣನೆ, ನೀನು ವೃತ್ರನನ್ನೂ ಅಹಿಯನ್ನೂ ಅನಾಯಾಸದಿಂದ ಕೊಂದು ಜೀವಿಗಳಿಗೆ ಜ್ಞಾನ ಲಾಭಕ್ಕಾಗಿ ಸೂರ್ಯನನ್ನು ಅಂತರಿಕ್ಷದಲ್ಲಿ ಮೇಲೇರಿಸಿರುವಿ.

ಎಲ್ಲ ದಿಕ್ಕುಗಳಲ್ಲಿಯೂ ಮುಂಭಾಗದಲ್ಲಿಯೂ ಮೇಲ್ಭಾಗದಲ್ಲಿಯೂ ಪಸರಿಸುವ ಸೂರ್ಯನ ಕಿರಣಗಳನ್ನು ಜೀವಿಗಳಿಗೆ ಜ್ಞಾನಕಾರಣವನ್ನಾಗಿ ಮಾಡಿರುವಿ.

ಇಂದ್ರನ ಒಳಗಿರುವ ನೀನು ಸೂರ್ಯನನ್ನು ಅಂತರಿಕ್ಷದಲ್ಲಿ ಮೇಲೇರಿಸುವ ಮೂಲಕ ಜೀವಿಗಳಿಂದ ಕರ್ಮ ಮಾಡಿಸಿರುವಿ. ಆದರಿಂದಲೇ ಅವರಿಗೆ ಜ್ಞಾನಲಾಭ.

ಪರಮ ಪುರುಷನ ಮನಸ್ಸಿನಿಂದ ಚಂದ್ರನೂ ಕಣ್ಣಿನಿಂದ ಸೂರ್ಯನೂ ಹುಟ್ಟಿದನು.

ಜನರೆ, ಯಾರು ಸೂರ್ಯನನ್ನೂ ಉಷೆಯನ್ನೂ ಹುಟ್ಟಿಸಿರುವನೋ ನೀರು ಹರಿಯಲು ಯಾರು ಕಾರಣನೋ ಅವನೆ ಪರಮೈಶ್ವರ್ಯಶಾಲಿ ನಾರಾಯಣ.

ಜನರ ಉತ್ಪತ್ತಿಗೆ ಕಾರಣನೂ ನಿತ್ಯ ನೂತನನೂ ಜ್ಞಾನಾನಂದಸ್ವರೂಪಿಯೂ ಆದ ನಾರಾಯಣನು ಸೂರ್ಯನಿಗೆ ಆಧಾರನಾಗಿ ಮತ್ತು ಜ್ಞಾನದಾಯಕನಾಗಿ ಉದಯಿಸುತ್ತಾನೆ.

ಯಾರಿಂದ ಆವರಿಸಲ್ಪಟ್ಟಿರುವ ಆಕಾಶ ಸ್ವರ್ಗಭೂಮಿಗಳನ್ನು ಯಾರ ಪ್ರೇರಣೆಯಿಂದ ಸೂರ್ಯನು ತೇಜಸ್ಸಿನಿಂದ ಉಷ್ಣಗೊಳಿಸುವನೋ, ಮತ್ತು ಪ್ರಕಾಶದಿಂದ ಬೆಳಗುವನೋ, ಜ್ಞಾನಿಗಳೂ ಕೂಡ ಸಮುದ್ರ ಶಾಯಿಯಾದ ಯಾರನ್ನು ಸ್ವಲ್ಪವೇ ತಿಳಿಯಬಲ್ಲರೋ, ನಾಶರಹಿತನಾದ ಯಾರಲ್ಲಿ ಎಲ್ಲ ಜೀವಿಗಳೂ ಆಸರೆ ಪಡೆದಿವೆಯೋ ಅವನೆ ಪರಬ್ರಹ್ಮ ನಾರಾಯಣ. ವಿದ್ಯುತ್ ವೃಷ್ಟಿ ಚಂದ್ರ ಸೂರ್ಯ ಅಗ್ನಿ ಈ ಐವರು ದೇವತೆಗಳೂ ಆ ಪರಮಾತ್ಮನ ಸಂಕಲ್ಪಾನುಸಾರ ಕೊನೆಯಲ್ಲಿ ಮರಣ ಹೊಂದುತ್ತಾರೆ.

ಇಂಥ ಅನೇಕ ಶ್ರುತಿಗಳಲ್ಲಿ ಸೂರ್ಯ ಆಕಾಶದಲ್ಲಿ ಸಂಚರಿಸುವುದೂ, ತನ್ನ ಪ್ರಕಾಶದಿಂದ ಜೀವಿಗಳಿಗೆ ಜ್ಞಾನ ಮತ್ತು ಕರ್ಮಾಚರಣಸಾಮರ್ಥ್ಯ ಲಭಿಸುವಂತೆ ಮಾಡುವುದೂ, ತಾನು ಹುಟ್ಟುವುದೂ, ಜಗತ್ತಿಗೆ ಬೆಳಕು ಶಾಖಗಳನ್ನು ನೀಡುವುದೂ ಕೊನೆಯಲ್ಲಿ ಮರಣ ಹೊಂದುವುದೂ ಹರಿಯ ಅಧೀನ ಎಂದು ಎಲ್ಲ ವಿಷಯಗಳಲ್ಲಿಯೂ ಸೂರ್ಯನಿಗೆ ಪರಾಧೀನತ್ವವೆ ಕಂಡುಬರುವುದರಿಂದ ವಿಷ್ಣು ಸೂರ್ಯರು ಬೇರೆ ಬೇರೆಯೆ.

ಧ್ಯೇಯಃ ಸದಾ ಸವಿತೃಮಂಡಲಮಧ್ಯವರ್ತೀ
ನಾರಾಯಣಃ ಸರಸಿಜಾಸನಸನ್ನಿವಿಷ್ಟಃ।
ಕೇಯೂರವಾನ್ ಮಕರಕುಂಡಲವಾನ್ ಕಿರೀಟೀ
ಹಾರೀ ಹಿರಣ್ಮಯವಪುರ್ಧೃತಶಂಖಚಕ್ರಃ॥ - ಇತಿ ನಾರಸಿಂಹ ಪುರಾಣೇ।

ತಾಪನೀ ಪಾಚಿಕಾ ಚೈವ ಶೋಷಣೀ ಚ ಪ್ರಕಾಶನೀ।
ನೈವ ರಾಜನ್ ರವೇಃ ಶಕ್ತಿಃ ಶಕ್ತಿರ್ನಾರಾಯಣಸ್ಯ ಸಾ॥
- ಇತಿ ಚ ಪಾದ್ಮೇ॥

ಯದಾದಿತ್ಯಗತಂ ತೇಜೋ ಜಗದ್ ಭಾಸಯತೇऽಖಿಲಮ್।
ಯಚ್ಚಂದ್ರಮಸಿ ಯಚ್ಚಾಗ್ನೌ ತತ್ತೇಜೋ ವಿದ್ಧಿ ಮಾಮಕಮ್॥ ಇತಿ ಚ।

ಕೇಯೂರ ಮಕರಕುಂಡಲ ಕಿರೀಟ ಹಾರಗಳಿಂದೊಪ್ಪುತ್ತ, ಶಂಖಚಕ್ರಧಾರಿಯಾಗಿ, ಪದ್ಮಾಸದಲ್ಲಿ ಕುಳಿತು ಸೂರ್ಯಮಂಡಲದ ನಡುವೆ ವಿರಾಜಿಸುವ ಪೂರ್ಣಾನಂದ ಶರೀರಿಯಾದ ನಾರಾಯಣ ಸರ್ವದಾ ಧ್ಯಾನಯೋಗ್ಯನೆಂದು ನರಸಿಂಹ ಪುರಾಣದಲ್ಲಿ ಹೇಳಿದೆ.

ರಾಜನೆ, ಉಷ್ಣಗೊಳಿಸುವುದು, ಪಕ್ವಗೊಳಿಸುವುದು, ಒಣಗಿಸುವುದು, ಬೆಳಗಿಸುವುದು ಇವು ಸೂರ್ಯನ ಶಕ್ತಿಯಲ್ಲ; ನಾರಾಯಣನ ಶಕ್ತಿ ಎಂದು ಪದ್ಮಪುರಾಣದಲ್ಲಿ ಹೇಳಿದೆ.

ಸೂರ್ಯನಲ್ಲಿ ಚಂದ್ರನಲ್ಲಿ ಮತ್ತು ಅಗ್ನಿಯಲ್ಲಿ ಇರುವ ಯಾವ ತೇಜಸ್ಸು ಸಮಸ್ತ ಜಗತ್ತನ್ನು ಬೆಳಗಿಸುವುದೋ ಅದನ್ನು ನನ್ನ ತೇಜಸ್ಸೆಂದು ತಿಳಿ ಎಂದೂ ಹೇಳಿದೆ.

> ''ನ ಚ ವಿಷ್ಣೋರನ್ಯಾಧೀನತ್ವಂ ಶ್ರುತಿಷೂಕ್ತಂ ಕುತ್ರಚಿತ್ । ಉತ್ಪತ್ತಿಸ್ತು ಪ್ರಾದುರ್ಭಾವಾಪೇಕ್ಷಯಾ । 'ಏಕೋ ನಾರಾಯಣ ಆಸೀನ್ನ ಬ್ರಹ್ಮಾ ನ ಚ ಶಂಕರಃ' ಇತಿ ಮಹಾಪ್ರಲಯೇ ತಸ್ಯೈವಾವಸ್ಥಾನಶ್ರುತೇಃ । 'ಯಂ ಕಾಮಯೇ ತಂ ತಮುಗ್ರಂ ಕೃಣೋಮಿ ತಂ ಬ್ರಹ್ಮಾಣಂ ತಮೃಷಿಂ ತಂ ಸುಮೇಧಾಂ' ಇತಿ ಬ್ರಹ್ಮಶಿವಾದೀನಾಂ ದೇವ್ಯಧೀನಪದಪ್ರಾಪ್ತಿಮುಕ್ತ್ವಾ ತಸ್ಯಾ ಅಪಿ ಭಗವದಧೀನತ್ವಂ, 'ಮಮ ಯೋನಿರಪ್ಸ್ವಂತಃ ಸಮುದ್ರೇ । ತತೋ ವಿತಿಷ್ಠೇ ಭುವನಾನು ವಿಶ್ವೋತಾಮೂಂ ದ್ಯಾಂ ವರ್ಷ್ಮಣೋಪಸ್ಪೃಶಾಮಿ । ಪರೋದಿವಾ ಪರ ಏನಾ ಪೃಥಿವ್ಯಾ' ಇತ್ಯಾಹ । 'ಅಹಂ ರುದ್ರಾಯ ಧನುರಾತನೋಮಿ ಬ್ರಹ್ಮದ್ವಿಷೇ ಶರವೇ ಹಂತವಾ ಉ। ಅಹಂ ಸುವೇ ಪಿತರಮಸ್ಯ ಮೂರ್ಧನ್' ಇತಿ ಬ್ರಹ್ಮರುದ್ರಯೋರ್ದೇವ್ಯಾಃ ಸಕಾಶಾತ್ ಸೃಷ್ಟಿಸಂಹಾರೌ ಚೋಕ್ತೌ । 'ಅಸ್ಯ ದೇವಸ್ಯ ಮೀಳ್ಹುಷೋ ವಯಾ ವಿಷ್ಣೋರೇಷಸ್ಯ ಪ್ರಭೃಥೇ ಹವಿರ್ಭಿಃ। ವಿದೇ ಹಿ ರುದ್ರೋ ರುದ್ರಿಯಂ ಮಹಿತ್ವಂ ಯಾಸಿಷ್ಠಂ ವರ್ತಿರಶ್ವಿನಾವಿರಾವತ್' ಇತ್ಯಾದಿನಾ ವಿಷ್ಣೋಃ ಪ್ರಸಾದಾದೇವ ಶಿವಾದೀನಾಂ ಪದಪ್ರಾಪ್ತಿ ಕಥನಾಚ್ಚ।''

ವಿಷ್ಣುವಿಗೆ ಪರಾಧೀನತೆ ಎಲ್ಲಿಯೂ ಹೇಳಿಲ್ಲ. ರಾಮ ಕೃಷ್ಣಾದ್ಯವತಾರಗಳಲ್ಲಿ ಉತ್ಪತ್ತಿಯನ್ನು ಹೇಳಿದ್ದರೂ ಅದು ಸ್ವೇಚ್ಛೆಯಿಂದ ಭಕ್ತರ ಕಣ್ಣಿಗೆ ಗೋಚರಿಸುವುದೆಂಬ ಅರ್ಥವಿವಕ್ಷೆಯಿಂದಲೆ ಹೇಳಿದ್ದು. ಮೂಲರೂಪದಲ್ಲಿ ಉತ್ಪತ್ತಿಯನ್ನು ಹೇಳುವುದು ಶಕ್ಯವಿಲ್ಲ. ಏಕೆಂದರೆ 'ನಾರಾಯಣನೊಬ್ಬನೆ ಇದ್ದನು, ಬ್ರಹ್ಮನಿರಲಿಲ್ಲ ರುದ್ರನೂ ಇರಲಿಲ್ಲ' ಎಂದು ಶ್ರುತಿಯು ಮಹಾಪ್ರಳಯದಲ್ಲಿ ನಾರಾಯಣನೊಬ್ಬನಿಗೇ ಅಸ್ತಿತ್ವವನ್ನು ಹೇಳುತ್ತಿದೆ.

'ನಾನು ಯಾರು ಯಾರನ್ನು ರುದ್ರಪದವಿಗೇರಿಸಬಯಸುವೆನೋ ಅವನನ್ನು ಆ ಪದವಿಗೇರಿಸುವೆನು. ಯಾರನ್ನು ಬ್ರಹ್ಮಪದವಿಗೇರಿಸಬಯಸುವೆನೋ ಅವನನ್ನು ಆ ಪದವಿಗೆ ಏರಿಸುವೆನು. ಅವನನ್ನು ಹಾಗೆಯೇ ಮಾಡುವೆನು' ಎಂದು ಮುಂತಾಗಿ ಬ್ರಹ್ಮ ಶಿವಾದಿಗಳಿಗೆ

ಅವರವರ ಪದವಿ ಲಭಿಸುವುದು ಮಹಾಲಕ್ಷ್ಮಿಯ ಅಧೀನವೆಂದು ಹೇಳಿ 'ನನಗೂ ಕಾರಣನಾದವನೊಬ್ಬನಿದ್ದಾನೆ. ಸಮುದ್ರದ ಮಧ್ಯದಲ್ಲಿ. ಅವನ ಅನುಗ್ರಹದಿಂದ ನಾನು ಎಲ್ಲ ಲೋಕಗಳಿಗೆ ಅಧಿಷ್ಠಾತ್ರಿಯಾಗಿದ್ದೇನೆ. ಭೂಮ್ಯಂತರಿಕ್ಷಗಳನ್ನೆಲ್ಲ ವ್ಯಾಪಿಸಿದ್ದೇನೆ. ಆ ನಾರಾಯಣ ನನ್ನ ಶ್ರೀರೂಪಕ್ಕಿಂತಲೂ ಶ್ರೇಷ್ಠ. ನನ್ನ ಭೂರೂಪಕ್ಕಿಂತಲೂ ಶ್ರೇಷ್ಠ' ಎಂದು ಆ ಮಹಾಲಕ್ಷ್ಮಿಗೂ ಭಗವದಧೀನತ್ವವನ್ನು ಹೇಳುತ್ತವೆ.

'ಬ್ರಹ್ಮದ್ವೇಷಿಯೂ ಲಯಕಾರಕನೂ ಆದ ರುದ್ರನ ಸಂಹಾರಕ್ಕಾಗಿ ನಾನು ಧನುಸ್ಸನ್ನು ಹೆದೆ ಏರಿಸುವೆನು. ಜಗತ್ತಿನ ಸೃಷ್ಟಿಕರ್ತನಾದ ಬ್ರಹ್ಮನನ್ನು ಮೊತ್ತಮೊದಲಿಗೆ ಪ್ರಸವಿಸುವೆನು' ಎಂದು ಬ್ರಹ್ಮರುದ್ರರಿಗೆ ಮಹಾಲಕ್ಷ್ಮಿಯಿಂದ ಸೃಷ್ಟಿಲಯಗಳಾಗುವುದು ಎಂದಿದೆ. 'ಭಕ್ತಾಭೀಷ್ಟಪ್ರದನೂ ಸತ್ಯಕಾಮನೂ ಕ್ರೀಡಾದಿಗುಣ ವಿಶಿಷ್ಟನೂ ಆದ ಈ ವಿಷ್ಣುವನ್ನು ಹವಿಸ್ಸುಗಳಿಂದ ಆರಾಧಿಸಿದುದರಿಂದಲೇ ಅಹಂಕಾರಾಭಿಮಾನಿ ರುದ್ರನು ರುದ್ರಪದವಿಯನ್ನು ಪಡೆದನು. ಅಶ್ವಿನೀ ದೇವತೆಗಳೆ, ನೀವೂ ಕೂಡ ಸಕಲ ಭೋಗಯುಕ್ತವಾದ ನಿಮ್ಮ ಸ್ಥಾನವನ್ನು ವಿಷ್ಣುವಿನ ಆರಾಧನೆಯಿಂದಲೇ ಪಡೆದಿರುವಿರಿ' ಎಂದು ಮುಂತಾಗಿ ರುದ್ರಾದಿಗಳಿಗೆ ಅವರವರ ಪದವಿ ಸಿಕ್ಕಿದುದು ವಿಷ್ಣುವಿನ ಅನುಗ್ರಹದಿಂದಲೇ ಎನ್ನಲಾಗಿದೆ.

'ತಮೇತಾಃ ಸಪ್ತಾಕ್ಷಿತಯ ಉಪತಿಷ್ಠಂತೇ । ತದ್ ಯಾ ಇಮಾ ಅಕ್ಷನ್ ಲೋಹಿನ್ಯೋ ರಾಜಯಃ ತಾಭಿರೇನಂ ರುದ್ರೋಽನ್ವಾಯತ್ತಃ' ಇತ್ಯಾದಿನಾ ಶಿವಾದಿಸರ್ವದೇವೋಪಾಸ್ಯಸ್ಯ ವಾಯೋಃ 'ಅಯಂ ವಾವ ಶಿಶುಃ ಯೋಽಯಂ ಮಧ್ಯಮಃ ಪ್ರಾಣಃ' ಇತಿ ಮಧ್ಯಮಪ್ರಾಣ ಶಬ್ದೋಕ್ತಸ್ಯ 'ಪ್ರಾಣಃ ಸ್ಥೂಣಾ' ಇತಿ ಪ್ರಾಣಶಬ್ದಿತೋ ನಾರಾಯಣ ಏವಾಶ್ರಯ ಉಕ್ತಃ।

ತಸ್ಮಾತ್ ಸರ್ವೋತ್ತಮೋ ಭಗವಾನ್ ನಾರಾಯಣಃ ಪ್ರಾಣ ಶಬ್ದೋದಿತಃ ಆದಿತ್ಯಮಂಡಲಸ್ಥಸ್ತಪತೀತ್ಯಾದಿ ಸಿದ್ಧಂ ॥

'ಗೋವತ್ಸರೂಪದ ವಾಯುವನ್ನು ರುದ್ರ, ಪರ್ಜನ್ಯ, ಆದಿತ್ಯ ಮುಂತಾದ ಏಳುಮಂದಿ ದೇವತೆಗಳು ಉಪಾಸನೆ ಮಾಡುತ್ತಾರೆ. ಕಣ್ಣನಲ್ಲಿ ತೋರುವ ಕೆಂಬಣ್ಣದ ರೇಖೆಗಳಿದ್ದು ರುದ್ರನೂ ಉಪಾಸನೆ ಮಾಡುತ್ತಾನೆ' ಎಂದು ಮುಂತಾಗಿ ಹೇಳಿದ ಶಿವಾದಿ ಸರ್ವದೇವೋಪಾಸ್ಯನಾದ ವಾಯುವನ್ನು 'ಯಾರು ಮಧ್ಯಮ ಪ್ರಾಣನೋ ಅವನೆ ಶಿಶು' ಎಂಬ ವಾಕ್ಯದಿಂದ ಮಧ್ಯಮ ಪ್ರಾಣನೆಂದು ಕರೆದು ಅವನಿಗೆ 'ಪ್ರಾಣನು ಆಶ್ರಯ' ಎಂದು ಪ್ರಾಣಶಬ್ದವಾಚ್ಯನಾದ ನಾರಾಯಣನೆ ಆಶ್ರಯ ಎನ್ನಲಾಗಿದೆ.

ಆದ್ದರಿಂದ ಪ್ರಾಣನಾಮಕನಾದ ಸರ್ವೋತ್ತಮ ಭಗವಾನ್ ನಾರಾಯಣನೇ ಸೂರ್ಯಮಂಡಲದಲ್ಲಿದ್ದು ಜ್ವಲಿಸುತ್ತಾನೆ ಎಂದು ಮುಂತಾಗಿ ಹೇಳಿದುದು ಸರಿ ಎಂದೇ ಸಿದ್ಧವಾಗುವುದು.

ಕ್ಷತ್ರಿಪಾ ಮನುಷ್ಯಗಂಧರ್ವಾ ದೇವಾಶ್ಚಪಿತರಶ್ಚಿರಾಃ।
ಆಜಾನಜಾಃ ಕರ್ಮದೇವಾಸ್ತಾತ್ವಿಕಾ ದಕ್ಷ ಏವ ಚ।
ಶಕ್ರಶ್ಚೋಮಾ ಚ ರುದ್ರಶ್ಚ ಭಾರತೀ ವಾಯುರೇವ ಚ।
ಮುಕ್ತಾ ಉಕ್ತಾಃ ಶತಗುಣಾ ಬಲಜ್ಞಾನಸುಖಾದಿಭಿಃ।
ವಿಷ್ಣುಭಕ್ತ್ಯಾದಿಭಿಶ್ಚೈವ ಗುಣೈಃ ಸರ್ವೈಃ ಕ್ರಮಾಧಿಕಾಃ।
ತಸ್ಮಾದ್ ರಮಾ, ತತೋ ವಿಷ್ಣುರನಂತಗುಣತೋಽಧಿಕಃ।
ನಿತ್ಯಮುಕ್ತಃ ಸ್ವತಂತ್ರಶ್ಚ ನ ಚಾನ್ಯಸ್ತಾದೃಶಃ ಕ್ವಚಿತ್ ।
ಕುತ ಏವಾಧಿಕೋಽನ್ಯಃ ಸ್ಯಾದ್ ಯನ್ಮುಕ್ತಾ ಅಪಿ ತದ್ದಶಾಃ।
ರಮಾಪಿ ತದ್ವತಾ ನಿತ್ಯಂ, ಸ ನಾನ್ಯಸ್ಯ ವಶೇ ಪ್ರಭುಃ।
ನ ಭೇದಃ ಶೇಷಶಿವಯೋಃ, ಸುಪರ್ಣಃ ಶೇಷಸಮ್ಮಿತಃ।
ಕಾಮಃ ಶಕ್ರಸಮೋ ನಿತ್ಯಂ, ಪ್ರತಿಬಿಂಬಾಶ್ಚತೇ ಕ್ರಮಾತ್ ॥
ಇತಿ ಚ ಮಹಾಸಂಹಿತಾಯಾಂ ॥

ಚಕ್ರವರ್ತಿಗಳು, ಮನುಷ್ಯ ಗಂಧರ್ವರು, ದೇವಗಂಧರ್ವರು, ಚಿರಪಿತೃದೇವತೆಗಳು, ಆಜಾನಜ ದೇವತೆಗಳು. ಕರ್ಮದೇವತೆಗಳು, ತತ್ವಾಭಿಮಾನಿ ದೇವತೆಗಳು, ದಕ್ಷಪ್ರಜಾಪತಿ, ಇಂದ್ರ, ಪಾರ್ವತಿ, ರುದ್ರ, ಭಾರತೀ ಮತ್ತು ವಾಯು ಈ ಕ್ರಮದಿಂದ ಮುಕ್ತರೆಲ್ಲರೂ ಬಲಜ್ಞಾನ ಸುಖಾದಿಗುಣಗಳಲ್ಲಿಯೂ ವಿಷ್ಣುಭಕ್ತ್ಯಾದಿಗುಣಗಳಲ್ಲಿಯೂ ನೂರು ಪಾಲು ಉತ್ತಮರೆನಿಸಿದ್ದಾರೆ. ವಾಯುವಿಗಿಂತ ರಮಾದೇವಿ ಕೋಟಿಪಾಲು ಉತ್ತಮಳು. ಆಕೆಗಿಂತ ವಿಷ್ಣು ಅನಂತಪಾಲು ಶ್ರೇಷ್ಠ, ನಿತ್ಯಮುಕ್ತ, ಸ್ವತಂತ್ರ. ಅವನಿಗೆ ಸಮನಾದವನಿನ್ನೊಬ್ಬನಿಲ್ಲ. ಹೀಗಿರಲು ಅವನಗಿಂತ ಉತ್ತಮನಿನ್ನೊಬ್ಬನೆಲ್ಲಿ ? ಏಕೆಂದರೆ ಮುಕ್ತರೂ ಅವನಿಗೆ ಅಧೀನರು. ರಮೆಯೂ ಅವನಿಗೆ ಅಧೀನಳು. ಅವನು ಯಾರಿಗೂ ಅಧೀನನಲ್ಲ. ಶೇಷ ರುದ್ರರೊಳಗೆ ತಾರತಮ್ಯವಿಲ್ಲ. ಗರುಡನೂ ಶೇಷನಿಗೆ ಸಮಾನ, ಕಾಮನೂ ಇಂದ್ರನಿಗೆ ಸಮಾನ. ಇವರೆಲ್ಲರೂ ಹಿಂದೆ ಹೇಳಿದ ಕ್ರಮದಿಂದ ಹಿಂದಿನವರು ಮುಂದಿನವರಿಗೆ ನಿತ್ಯ ಪ್ರತಿಬಿಂಬರಾಗಿರುವರು' ಎಂದು ಮಹಾಸಂಹಿತೆಯಲ್ಲಿ ಹೇಳಿದೆ.

ತಂ ಶತಂ ವರ್ಷಾಣ್ಯಭ್ಯಾರ್ಚತ್। ತಸ್ಮಾಚ್ಛತಂ ವರ್ಷಾಣಿ ಪುರುಷಾಯುಷೋ ಭವಂತಿ।
ತಂ ಯಚ್ಛತಂ ವರ್ಷಾಣ್ಯಭ್ಯಾರ್ಚತ್, ತಸ್ಮಾಚ್ಛತರ್ಚಿನಸ್ತಸ್ಮಾಚ್ಛತರ್ಚಿನ ಇತ್ಯಾಚಕ್ಷತ ಏತಮೇವ ಸಂತಮ್ ।

ಸ ಇದಂ ಸರ್ವಂ ಮಧ್ಯತೋ ದಧೇ ಯದಿದಂ ಕಿಂಚ। ಸ ಯದಿದಂ ಸರ್ವಂ ಮಧ್ಯತೋ ವಧೇ ಯದಿದಂ ಕಿಂಚ, ತಸ್ಮಾನ್ಮಧ್ಯಮಾಸ್ತಸ್ಮಾನ್ಮಧ್ಯಮಾ ಇತ್ಯಾಚಕ್ಷತ ಏತಮೇವ ಸಂತಂ।

ಆ ಭಗವಂತನು ಬ್ರಹ್ಮಾದಿಜೀವಶರೀರದಲ್ಲಿ ಪ್ರವೇಶಿಸಿ ನೂರು ವರ್ಷಗಳ ಕಾಲ ಇದ್ದನು. ಆದ್ದರಿಂದ ಪುರುಷನ ಆಯುಷ್ಯ ನೂರು ವರ್ಷವಿರುತ್ತದೆ. ಅವನು ನೂರು ವರ್ಷಗಳ ಕಾಲ ಬ್ರಹ್ಮಾದಿಜೀವಶರೀರವನ್ನು ಪ್ರವೇಶಿಸಿ ಇದ್ದುದರಿಂದ ಅವನ ರೂಪಗಳು 'ಶತರ್ಚಿನಃ' ಎನಿಸಿದುವು. ಆದ್ದರಿಂದ ಅವನ' ರೂಪಗಳನ್ನು ಮುಖ್ಯವಾಗಿ 'ಶತರ್ಚಿನಃ' ಎಂದು ಕರೆಯುತ್ತಾರೆ.

ಅವನು ಎಲ್ಲವನ್ನೂ ತನ್ನ ಶರೀರದ ಮಧ್ಯದಲ್ಲಿ ಧರಿಸಿದ್ದಾನೆ. ಎಲ್ಲದರಲ್ಲಿಯೂ ಮಧ್ಯದಲ್ಲಿ ತಾನಿದ್ದು ಎಲ್ಲವನ್ನೂ ಧರಿಸಿದ್ದಾನೆ. ಹೀಗೆ ಎಲ್ಲವನ್ನೂ ಮಧ್ಯದಲ್ಲಿ ಧರಿಸಿದ್ದರಿಂದ ಅವನ ರೂಪಗಳು 'ಮಧ್ಯಮಾಃ' ಎನಿಸಿದುವು. ಆದ್ದರಿಂದ ಅವನ ರೂಪಗಳನ್ನು ಮುಖ್ಯವಾಗಿ 'ಮಧ್ಯಮಾಃ' ಎನಿಸಿದುವು. ಆದ್ದರಿಂದ ಅವನ ರೂಪಗಳನ್ನು ಮುಖ್ಯವಾಗಿ 'ಮಧ್ಯಮಾಃ' ಎಂದು ಕರೆಯುತ್ತಾರೆ.

'ಏಷ ಇಮಂ ಲೋಕಮಭ್ಯಾರ್ಚತ್' ಎಂದು ಹೇಳಿದ ಭಗವಂತನ ಸರ್ವಾಂತರ್ಯಾಮಿತ್ವ ಅವನು ಗುಣಪೂರ್ಣನಾಗದೆ ಯುಕ್ತವಾಗಲಾರದು. ಗುಣಪೂರ್ಣನೆಂದು ಹೇಗೆ ತಿಳಿಯಬೇಕೆಂದರೆ ಅವನು ಸರ್ವಶಬ್ದವಾಚ್ಯನ್ನಾದರಿಂದ ಎನ್ನಬೇಕು. ಅದಕ್ಕಾಗಿ ದೃಷ್ಟಾಂತರೂಪದಿಂದ ಶತರ್ಚಿ, ಮಧ್ಯಮ, ಗೃತ್ಸಮದ, ವಿಶ್ವಾಮಿತ್ರ, ವಾಮದೇವ, ಅತ್ರಿ ಮುಂತಾದ ಋಷಿನಾಮಗಳೂ ಸೂಕ್ತ ಋಕ್ ಮುಂತಾದ ಶಬ್ದಗಳೂ ಮುಖ್ಯವಾಗಿ ಭಗವಂತನ ನಾಮಗಳು ಎಂದು ಉಪನಿಷತ್ತು ವರ್ಣಿಸುತ್ತಿದೆ.

> ಸ ಪುರುಷೇಷು ಶತವರ್ಷಂ ಗತ ಇತಿ ಶತರ್ಚಿನಾಮಾ । ಬಹುರೂಪತ್ವಾತ್ ಬಹುವಚನಂ। ಏತಮೇವ ತಥಾ ಸಂತಂ ಮುಖ್ಯತ ಆಚಕ್ಷತೇ। ಋಷೀಂಸ್ತೂಪಚಾರತಃ। ಆತ್ಮನ ಉದರೇ ಧೃತವಾನ್ । ಮಧ್ಯೇ ಸ್ಥಿತ್ವಾ ಧೃತವಾಂಶ್ಚ।

ಭಗವಂತನು ಪುರುಷರಲ್ಲಿ ನೂರುವರ್ಷ ಪರ್ಯಂತ ಇದುದರಿಂದ ಶತರ್ಚಿ ಎನಿಸಿದನು. ಆ ಅಂತರ್ಯಾಮಿ ಬಹುರೂಪನಾದ್ದರಿಂದ 'ಶತರ್ಚಿನಃ' ಎಂದು ಬಹುವಚನ ಪ್ರಯೋಗ ಕೂಡುತ್ತದೆ. ಸ್ವತಂತ್ರವಾಗಿ ಪೂರ್ಣವಾಗಿ ಶಬ್ದಪ್ರವೃತ್ತಿನಿಮಿತ್ತವುಳ್ಳ ಈ ಭಗವಂತನನ್ನೇ ವಚನವೃತ್ತಿಯಲ್ಲಿಯೂ ಮುಖ್ಯವಾಗಿ ಕರೆಯುತ್ತಾರೆ. ಋಷಿಗಳನ್ನು ವಚನವೃತ್ತಿಯಲ್ಲಿಯೇ ಅಮುಖ್ಯವಾಗಿ ಋಷಿನಾಮಗಳಿಂದ ಕರೆಯುತ್ತಾರೆ. 'ಮಧ್ಯತೋ ದಧೇ' ಎಂದರೆ ತನ್ನ ಉದರದಲ್ಲಿ ಧರಿಸಿದ್ದಾನೆ ಮತ್ತು ಮಧ್ಯದಲ್ಲಿ ತಾನಿದ್ದು ಧರಿಸಿದ್ದಾನೆ.

ಅನುವ್ಯಾಖ್ಯಾನದಲ್ಲಿ 'ಜ್ಯೋತಿಃ' ಮೊದಲಾದ ಶಬ್ದಗಳ ನಿಷ್ಪತ್ತಿ

तत्वप्रदीपः – निखिलपदानां तद्वाचकत्वपदवी तु गुरुभिरेवोपसन्दर्शयितुं सुशकेति नास्माभिरत्र प्रयत्यते । दर्शिता च सा भङ्गी भगवतैवानुव्याख्याने-

''जातमोतं हरौ यस्माज्ज्योतिः षः प्राणरूपतः ।
आयजेतश्चायजेतो वसन्तिश्च वसंस्ततः'' इत्यादिका ।।

ಪ್ರತಿಯೊಂದು ಪದಗಳು ವಿಷ್ಣುವಿನಲ್ಲಿ ಹೇಗೆ ಸಮನ್ವಯಗೊಳ್ಳುತ್ತವೆ ಎಂಬುದರ ನಿಷ್ಪತ್ತಿಯನ್ನು ತೋರಿಸಲು ಗುರುಗಳೇ (ಶ್ರೀಮದಾಚಾರ್ಯರೇ) ಸಮರ್ಥರು. ಆದ್ದರಿಂದ ನಾವಿಲ್ಲಿ ಅದರ ಸಮನ್ವಯಕ್ಕಾಗಿ ಪ್ರಯತ್ನ ಪಟ್ಟಿಲ್ಲ. ಆ ಸಮನ್ವಯದ ಭಂಗಿಯನ್ನು ಭಗವತ್ಪಾದರೇ ಅನುವ್ಯಾಖ್ಯಾನದಲ್ಲಿ ಹೀಗೆ ತೋರಿಸಿದ್ದಾರೆ -

'ಜಾತಮೋತಂ ಹರೌ ಯಸ್ಮಾಜ್ಜ್ಯೋತಿಃ ಷಃ ಪ್ರಾಣರೂಪತಃ।
ಆಯಜೇತಶ್ಚಾಯಜೇತೋ ವಸಂತಿಶ್ಚ ವಸಂಸ್ತತಃ ॥'

ಯಾವ ಜಗತ್ತು ಶ್ರೀಹರಿಯಲ್ಲಿ ಆಶ್ರಯವನ್ನು ಹೊಂದಿದೆಯೋ, ಆದ್ದರಿಂದ ಶ್ರೀಹರಿಯು ಜ್ಯೋತಿಯೆನಿಸಿದ್ದಾನೆ. 'ಷ' ಎಂದರೆ ಜಗತ್ತಿಗೆ ಚೇಷ್ಟಕನಾಗಿದ್ದಾನೆ ಮತ್ತು ಸಕಲ ಯಜ್ಞಗಳಿಂದ ಪ್ರಾಪ್ಯನಾಗಿದ್ದಾನೆ. ಅಥವಾ ಯಾಜ್ಞಿಕನಿಂದ ಪ್ರಾಪ್ಯನಾಗಿರುವುದರಿಂದ 'ಆಯಜೇತ' ಎನಿಸುತ್ತಾನೆ. ಎಲ್ಲೆಡೆ ವ್ಯಾಪ್ತನಾಗಿರುವುದರಿಂದ 'ವಸಂತಿ' ಎನಿಸುತ್ತಾನೆ ಇತ್ಯಾದಿಯಾಗಿ ಹೇಳಿರುತ್ತಾರೆ.

ಶ್ರೀಮಜ್ಜಯತೀರ್ಥಭಿಕ್ಷುಗಳಿಂದ ವಿರಚಿತವಾದ

ತತ್ವಪ್ರಕಾಶಿಕಾ

ಎಲ್ಲವೂ ಬ್ರಹ್ಮಪರವಾದರೆ ಕರ್ಮಾಚರಣೆ ಎಂತು ?

अत्र कर्मक्रमादिलोपप्रसङ्गेन कर्मतदङ्गेष्वेव प्रसिद्धानां ज्योतिष्टोमादिसर्वशब्दानां भगवति समन्वयप्रतिपादनादस्ति शास्त्रादिसङ्गतिः । श्रुत्यादिसङ्गतिं विषयादिकं च सूचयति – वसन्त इति ।।

ಈ ಜ್ಯೋತಿರುಪಕ್ರಮಾಧಿಕರಣದಲ್ಲಿ ಕರ್ಮಪ್ರತಿಪಾದಕವಾದ ಅನೇಕ ಶಬ್ದಗಳ ಸಮನ್ವಯವನ್ನು ಮಹಾವಿಷ್ಣುವಿನಲ್ಲಿ ಮಾಡಲಾಗುತ್ತಿದೆ.

'ಜ್ಯೋತಿಷ್ಟೋಮ' ಮೊದಲಾದ ವೈದಿಕಶಬ್ದಗಳು ಜ್ಯೋತಿಷ್ಟೋಮಾದಿ ಕರ್ಮ ಹಾಗೂ ಅವುಗಳ ಅಂಗಗಳಲ್ಲಿಯೇ ಪ್ರಸಿದ್ಧವಾಗಿವೆ. ಹೀಗೆ ಒಪ್ಪದಿದ್ದರೆ ಜ್ಯೋತಿಷ್ಟೋಮಾದಿ ಕರ್ಮ ಹಾಗೂ ಅವುಗಳ ಕ್ರಮ ಇವುಗಳನ್ನು ಪ್ರತಿಪಾದನೆ ಮಾಡುವ ಶಬ್ದಗಳೇ ಇಲ್ಲದಂತಾಗಿ ಕರ್ಮ, ಕ್ರಮಗಳ ಲೋಪವು ಆಗಬೇಕಾದೀತು. ಆದ್ದರಿಂದ ಕರ್ಮ ಹಾಗೂ ಕ್ರಮಗಳನ್ನೇ ಜ್ಯೋತಿಷ್ಟೋಮಾದಿ ಶಬ್ದಗಳು ಪ್ರತಿಪಾದನೆ ಮಾಡುತ್ತವೆ. ಇಂತಹ ಜ್ಯೋತಿಷ್ಟೋಮಾದಿ ಸಕಲಶಬ್ದಗಳ ಸಮನ್ವಯವನ್ನು ಮಹಾವಿಷ್ಣುವಿನಲ್ಲಿ ಪ್ರತಿಪಾದನೆ ಮಾಡುತ್ತಿರುವುದರಿಂದ ಶಾಸ್ತ್ರಸಂಗತಿ, ಅಧ್ಯಾಯಸಂಗತಿ ಪಾದಸಂಗತಿಗಳನ್ನು ತಿಳಿಯಬೇಕು. ಶ್ರುತಿಸಂಗತಿ, ಅಧಿಕರಣಸಂಗತಿ ವಿಷಯಾದಿಗಳನ್ನು ಭಾಷ್ಯಕಾರರು 'ವಸಂತೇ' ಇತ್ಯಾದಿಯಾಗಿ ಸೂಚನೆ ಮಾಡುತ್ತಿದ್ದಾರೆ.

ಕರ್ಮಕಾಂಡವು ಕರ್ಮಪರವಾದರೆ ಸರ್ವಶಬ್ದವಾಚ್ಯತ್ವ ಎಂತು ?

तत्वप्रकाशिका – 'तत्तु समन्वयात्' इति सर्वशब्दानां परमात्मवाचकत्वमुक्तम्। सर्वमध्यपतिता ज्योतिरादिशब्दाः श्रुतिषु पठ्यन्ते । तेषां चान्यपरत्वे न विष्णोः सर्वशब्दवाच्यता सिध्येत्, इत्यवश्यं निर्णेयता ।

'ತತ್ತು ಸಮನ್ವಯಾತ್' ಎಂಬ ಸೂತ್ರದಲ್ಲಿ 'ಎಲ್ಲಾ ಶಬ್ದಗಳು ಪರಮಾತ್ಮನನ್ನೇ ಪ್ರತಿಪಾದನೆ ಮಾಡುತ್ತವೆ' ಎಂದು ಪ್ರತಿಜ್ಞೆ ಮಾಡಲಾಗಿದೆ. ಆ ಶಬ್ದಗಳ ಮಧ್ಯದಲ್ಲಿ 'ಜ್ಯೋತಿಃ' ಮೊದಲಾದ ಕರ್ಮಪ್ರತಿಪಾದಕವಾದ ಶಬ್ದಗಳು ಶ್ರುತಿಯಲ್ಲಿ ಪಠಿತವಾಗಿವೆ. ಇಂತಹ 'ಜ್ಯೋತಿಃ' ಮೊದಲಾದ ಶಬ್ದಗಳು ವಿಷ್ಣುವನ್ನು ಬಿಟ್ಟು ಜ್ಯೋತಿಷ್ಟೋಮಾದಿ ಕರ್ಮಗಳನ್ನು ಪ್ರತಿಪಾದನೆ ಮಾಡುವುದಾದಲ್ಲಿ, ವಿಷ್ಣುವಿನಲ್ಲಿ ಸರ್ವಶಬ್ದವಾಚ್ಯತ್ವವು ಸಿದ್ಧವಾಗುವುದಿಲ್ಲ. ಇಂತಹ 'ಜ್ಯೋತಿಃ' ಮೊದಲಾದ ಶಬ್ದಗಳ ಸಮನ್ವಯವನ್ನು ಅವಶ್ಯವಾಗಿ ಮಾಡಲೇಬೇಕು.

ಅಧಿಕರಣದ ವಿಷಯಾದಿಗಳು

तत्वप्रकाशिका – तज्ज्योतिरादिशब्दवाच्यं विषयः । किं विष्णुरन्यद्वेति सन्देहः । समन्वयसूत्रमन्यत्रैव प्रसिद्धिश्च सन्देहबीजम् । तत्र ज्योतिरादिशब्दवाच्यो न विष्णुरिति पूर्वः पक्षः ।।

'ಜ್ಯೋತಿಃ' ಮೊದಲಾದ ಶಬ್ದವಾಚ್ಯತ್ವವೇ ಈ ಅಧಿಕರಣದ ವಿಷಯವಾಗಿದೆ. ಈ ಶಬ್ದಗಳು ವಿಷ್ಣುವನ್ನು ಪ್ರತಿಪಾದನೆ ಮಾಡುತ್ತವೆಯೋ, ಅಥವಾ ಬೇರೆ ಪದಾರ್ಥಗಳನ್ನು ಪ್ರತಿಪಾದನೆ ಮಾಡುತ್ತವೆಯೋ ? ಎಂಬುದೇ ಸಂದೇಹ. ಸಮನ್ವಯ ಸೂತ್ರ ಹಾಗೂ ಅನ್ಯತ್ರೈವಪ್ರಸಿದ್ಧಿ ಇವೆರಡೂ ಸಂದೇಹಬೀಜಗಳು. 'ಜ್ಯೋತಿಃ' ಮೊದಲಾದ ಶಬ್ದಗಳಿಂದ ವಿಷ್ಣುವು ಪ್ರತಿಪಾದ್ಯನಾಗುವುದಿಲ್ಲ ಎಂಬುದು ಪೂರ್ವಪಕ್ಷ.

ಕರ್ಮಾಚರಣೆಗಳೇ ನಿಂತು ಹೋಗುತ್ತದೆ

तत्वप्रकाशिका – तस्य ज्योतिष्टोमादिकर्मतदङ्गाभिधायकत्वेन प्रसिद्धत्वात्। तत्प्रसिद्धिं चापहाय परमात्मवाचित्वाङ्गीकारे काल-कर्म-क्रमधिकारि-नियोज्य-यजमान-फलऋत्विगाद्यभिधायकाभावेन तदभावाख्य-विरोधापातात् ।

ಏಕೆಂದರೆ 'ಜ್ಯೋತಿಃ' ಮೊದಲಾದ ಶಬ್ದಗಳು 'ಜ್ಯೋತಿಷ್ಟೋಮ' ಮೊದಲಾದ ಕರ್ಮಗಳನ್ನು ಅವುಗಳ ಅಂಗಗಳನ್ನು ಪ್ರತಿಪಾದನೆ ಮಾಡುವುದರಲ್ಲಿಯೇ ಪ್ರಸಿದ್ಧವಾಗಿವೆ.

ಇಂತಹ ಪ್ರಸಿದ್ಧಿಯನ್ನು ಬಿಟ್ಟು, ಪರಮಾತ್ಮನನ್ನೇ ಪ್ರತಿಪಾದನೆ ಮಾಡುತ್ತವೆಂದು ಒಪ್ಪಿದರೆ ವಸಂತಾದಿಕಾಲ, ಯಜ್ಞಾಧಿಕರ್ಮ, ಅವುಗಳ ಕ್ರಮ, ಅಧಿಕಾರಿ, ನಿಯೋಜ್ಯ, ಯಜಮಾನ, ಸ್ವರ್ಗಾದಿಫಲ, ಹೋತೃ, ಋತ್ವಿಕ್ ಇವೇ ಮೊದಲಾದ ಪದಾರ್ಥಗಳನ್ನು ಪ್ರತಿಪಾದನೆ ಮಾಡುವ ಶಬ್ದಗಳೇ ಇಲ್ಲವೆಂದಾಗುವುದರಿಂದ ಈ ಎಲ್ಲಾ ಪದಾರ್ಥಗಳು ಅಸಿದ್ಧವಾಗುತ್ತವೆ. ಆದ್ದರಿಂದ ಪದಾರ್ಥಗಳ ಅಭಾವರೂಪವಾದ ವಿರೋಧವು ಬರುತ್ತದೆ.

ಕರ್ಮಾಚರಣೆಗೆ ಬೇರೆ ಪ್ರಮಾಣವಿಲ್ಲ

तत्वप्रकाशिका – नहि तत् प्रमाणान्तरेण सिध्यति । तथा च विहितानुष्ठानलोपप्रसङ्गः ।

ಇಂತಹ ಪದಾರ್ಥಗಳು ವೇದದಲ್ಲಿರುವ 'ಜ್ಯೋತಿಃ' ಮೊದಲಾದ ಶಬ್ದಗಳನ್ನು ಬಿಟ್ಟು ಬೇರೆ ಪ್ರಮಾಣಗಳಿಂದ ಸರ್ವಥಾ ಸಿದ್ಧವಾಗುವುದಿಲ್ಲ. ಆದ್ದರಿಂದ ವಿಶಿಷ್ಟವಾದ ಕರ್ಮಾನುಷ್ಠಾನಗಳೆಲ್ಲವೂ ಸಿದ್ಧವಾಗದಿರಬೇಕಾದೀತು.

ಹಾಗೆಂದು ಕರ್ಮಪರತ್ವ ಒಪ್ಪಿದರೆ ಗುಣಪೂರ್ಣತ್ವವು ಅಸಿದ್ಧವಾಗುತ್ತದೆ

तत्वप्रकाशिका – किञ्च ज्योतिरादिसर्वशब्दवाच्यत्वं परमात्मनो योगेनैव वाच्यम्, रूढेरभावात् । ततो गुणपूर्त्यसिद्धेश्च ।

ಮತ್ತು 'ಜ್ಯೋತಿಃ' ಮೊದಲಾದ ಸಕಲವಿಧವಾದ ಶಬ್ದಗಳಿಂದ ಪರಮಾತ್ಮನು ಯೋಗವೃತ್ತಿಯಿಂದ ಪ್ರತಿಪಾದ್ಯನಾಗಿದ್ದಾನೆಂದೇ ಹೇಳಬೇಕು. ಏಕೆಂದರೆ ಲೋಕರೂಢಿಯಂತೂ ಸರ್ವಥಾ ಪರಮಾತ್ಮನಲ್ಲಿ ಇರುವುದಿಲ್ಲ. ಹಾಗೇನಾದರೂ ರೂಢಿಯನ್ನು ಒಪ್ಪಿದರೆ ಆಯಾ ಶಬ್ದಗಳಿಂದ ಗುಣಗಳ ಸಮನ್ವಯವು ಸಿದ್ಧವಾಗದೆ ಗುಣಪೂರ್ಣತ್ವ ಎಂಬ ಧರ್ಮವು ಪರಮಾತ್ಮನಲ್ಲಿ ಸಿದ್ಧವಾಗದಿರಬೇಕಾದೀತು.

ರೂಢಿಯಂತೇ ಯೋಗವೂ ಕೂಡ ಪರಮಾತ್ಮನಲ್ಲಿಲ್ಲ

तत्वप्रकाशिका – नच योगमात्रेण रूढार्थापहारो युज्यते । अभ्युपेत्यैव चेदमुदितम् । न योगोऽपि सम्भवति ।

ಮತ್ತು ಪರಮಾತ್ಮನಲ್ಲಿ ಶಬ್ದಗಳ ಯೋಗವೃತ್ತಿಯಿದೆ ಎಂಬ ಮಾತ್ರದಿಂದ ಲೋಕಪ್ರಸಿದ್ಧವಾದ ರೂಢಾರ್ಥವನ್ನು ಬಿಡಲು ಸಾಧ್ಯವಿಲ್ಲ. ಏಕೆಂದರೆ ಯೋಗಕ್ಕಿಂತಲೂ ರೂಢಿಯೇ ಪ್ರಬಲವಾಗಿರುತ್ತದೆ. ಅಂಗೀಕಾರವಾದ ಮಾಡಿ ಹೀಗೆ ಹೇಳಿದ್ದು, ವಿಚಾರ ಮಾಡಿದರೆ ಯೋಗವೂ ಕೂಡ ಪರಮಾತ್ಮನಲ್ಲಿ ಕೂಡುವುದಿಲ್ಲ.

ಬ್ರಹ್ಮಪರವಾದಲ್ಲಿ ಶಬ್ದಗಳ ನಿಷ್ಪತ್ತಿಯೂ ನಿಂತುಹೋಗುತ್ತವೆ

तत्वप्रकाशिका – 'ज्योतिषां स्तोमः' इत्यादिरूपा हि ज्योतिष्टोमादि-शब्दव्युत्पत्तिः। कथमसौ स्तोमादिशब्दानामन्यपरत्वानभ्युपगमे सम्भवेत् ? अन्यथा भगवन्नामावृत्तिमात्रत्वप्राप्तेः ।

ಏಕೆಂದರೆ 'ಜ್ಯೋತಿಷಾಂ ಸ್ತೋಮಃ' ಎಂಬ ವ್ಯುತ್ಪತ್ತಿಯಿಂದ 'ಜ್ಯೋತಿಷ್ಟೋಮ' ಶಬ್ದವು ವ್ಯುತ್ಪನ್ನವಾಗಿದೆ. ಇಲ್ಲಿರುವ 'ಸ್ತೋಮ' ಶಬ್ದವು ಅನ್ಯಪದಾರ್ಥವನ್ನು ಪ್ರತಿಪಾದನೆ ಮಾಡುತ್ತಿದೆಯೆಂದು ಒಪ್ಪದಿದ್ದರೆ ಶಬ್ದದ ವ್ಯುತ್ಪತ್ತಿಯೇ ಅಸಾಧ್ಯವಾಗುತ್ತದೆ. ಇಲ್ಲದಿದ್ದರೆ 'ಜ್ಯೋತಿ' ಎಂಬ ಪದವು ಹೇಗೆ ವಿಷ್ಣುನಾಮವೋ, ಅದರಂತೆ 'ಸ್ತೋಮ' ಎಂಬ ಪದವೂ ಕೂಡ ವಿಷ್ಣುನಾಮ ಎಂದಾಗುತ್ತದೆ. ಹೇಳಿದ ಅರ್ಥವನ್ನೇ ಪುನಃ ಮುಂದಿನ ಪದವು ಹೇಳುವುದರಿಂದ ವ್ಯುತ್ಪತ್ತಿಯನ್ನು ಮಾಡಲು ಸಾಧ್ಯವಾಗುವುದಿಲ್ಲ.

ನಿಷ್ಪತ್ತಿಗಾಗಿ ಅನ್ಯಪರತ್ವವನ್ನು ಒಪ್ಪಿದರೆ ಪುನಃ ಅದೇ ತೊಂದರೆ

तत्वप्रकाशिका – स्तोमादिशब्दानामन्यपरत्वाभ्युपगमे किं ज्योतिष्टोमादि-शब्दैरेव विशेषतोऽपराद्धम् ।

ಆದ್ದರಿಂದ 'ಸ್ತೋಮ' ಎಂಬ ಪದಕ್ಕೆ ಅನ್ಯಪರತ್ವವನ್ನು ಅವಶ್ಯವಾಗಿ ಒಪ್ಪಲೇ ಬೇಕು. ಹಾಗೇ ಒಪ್ಪಿದಾಗ 'ಜ್ಯೋತಿಷ್ಟೋಮ' ಎಂಬ ಶಬ್ದವೂ ಕೂಡ ಬೇರೆ ಅರ್ಥವನ್ನೇ ಪ್ರತಿಪಾದನೆ ಮಾಡುತ್ತದೆ. ಈ ಜ್ಯೋತಿಷ್ಟೋಮ ಪದವು ಯಾವ ಅಪರಾಧವನ್ನು ಮಾಡಿದೆ. ಸ್ತೋಮಪದವು ಅನ್ಯಪದಾರ್ಥ ಪ್ರತಿಪಾದಕವಾದಾಗ 'ಜ್ಯೋತಿಷ್ಟೋಮ' ಎಂಬ ಶಬ್ದವೂ ಕೂಡ ಅನ್ಯಪದಾರ್ಥ ಪ್ರತಿಪಾದಕವೇ ಆಗಬೇಕು.

ಲಕ್ಷಣಾವೃತ್ತಿಯನ್ನು ಮಾತ್ರ ಒಪ್ಪಬೇಕಾಗುತ್ತದೆ

तत्वप्रकाशिका – नच वाच्यं 'परमात्मसम्बन्धेनान्यत्रापि शब्दवृत्तिरभ्युपगता' इति । यथा सति लोके लक्षणेतरवृत्त्यभावप्रसङ्गात् ।

ಸಕಲಶಬ್ದಗಳೂ ಪರಮಾತ್ಮನನ್ನೇ ಪ್ರತಿಪಾದನೆ ಮಾಡುತ್ತಿವೆ. ಪರಮಾತ್ಮನ ಸಂಬಂಧದಿಂದ ಇತರ ಪದಾರ್ಥಗಳಲ್ಲಿಯೂ ಕೂಡ ಶಬ್ದಗಳು ಪ್ರವೃತ್ತವಾಗುತ್ತವೆ ಎಂದು ಹೇಳಬಾರದು. ಹಾಗಾದಲ್ಲಿ ಎಲ್ಲಾ ಪದಾರ್ಥಗಳನ್ನು ಶಬ್ದಗಳು ಲಕ್ಷಣಾವೃತ್ತಿಯಿಂದ ಪ್ರತಿಪಾದನೆ ಮಾಡುತ್ತಿವೆ ಎಂದು ಹೇಳಿದಂತಾಗುತ್ತದೆ. ಆವಾಗ ಲೋಕದಲ್ಲಿ ಲಕ್ಷಣಾವೃತ್ತಿಯನ್ನು ಬಿಟ್ಟು, ಬೇರೆ ಅಭಿಧಾವೃತ್ತಿಯೇ ಇಲ್ಲವೆಂದಾಗಬೇಕು.

ಸರ್ವಶಬ್ದಸಮನ್ವಯವನ್ನು ಕೈ ಬಿಡುವುದೇ ಲೇಸು

तत्वप्रकाशिका – अतो न ज्योतिरादिशब्दजातस्य परमात्मवाचित्वं युक्तम् इति न समन्वयसूत्रं युक्तमिति भावः ।

ಆದ್ದರಿಂದ 'ಜ್ಯೋತಿಃ' ಮೊದಲಾದ ಶಬ್ದಗಳ ಸಮೂಹವು ಪರಮಾತ್ಮನನ್ನು ಪ್ರತಿಪಾದನೆ ಮಾಡುತ್ತಿವೆ ಎಂಬುದು ಸರ್ವಥಾ ಯುಕ್ತವಾಗುವುದಿಲ್ಲ. ಆದ್ದರಿಂದ ಸಮನ್ವಯ ಸೂತ್ರದಲ್ಲಿ ಸಕಲಶಬ್ದಗಳಿಂದ ಪರಮಾತ್ಮನೇ ಪ್ರತಿಪಾದ್ಯನಾಗಿದ್ದಾನೆಂಬ ಪ್ರತಿಜ್ಞೆಯೂ ಕೂಡ ಯುಕ್ತವಾಗುತ್ತದೆ. ಇಷ್ಟು ಪೂರ್ವಪಕ್ಷದ ಅಭಿಪ್ರಾಯ.

ಸಿದ್ಧಾಂತ ಸ್ಥಾಪನೆ

तत्वप्रकाशिका – सिद्धान्तयत्सूत्रमवतार्य व्याचष्टे – अत इति ।। ज्योतिष्टोमादिकर्मतदङ्गवाचकत्वेन प्रसिद्धज्योतिरादिशब्दाभिधेयो हरिरेव ।

ಸಿದ್ಧಾಂತ ಸ್ಥಾಪಕವಾದ ಸೂತ್ರಕ್ಕೆ ಅವತಾರಿಕೆ ನೀಡಿ ವ್ಯಾಖ್ಯಾನ ಮಾಡುತ್ತಿದ್ದಾರೆ 'ಅತಃ' ಇತ್ಯಾದಿಯಾಗಿ. ಜ್ಯೋತಿರಾದಿ ಶಬ್ದಗಳು 'ಜ್ಯೋತಿಷ್ಟೋಮ' ಮೊದಲಾದ ಕರ್ಮಗಳನ್ನು ಮತ್ತು ಅವುಗಳ ಅಂಗಗಳನ್ನು ಪ್ರತಿಪಾದನೆ ಮಾಡುತ್ತಿವೆ ಎಂದು ಲೋಕಪ್ರಸಿದ್ಧವಾಗಿದೆ. ಆದರೆ ಈ ಜ್ಯೋತಿರಾದಿ ಶಬ್ದಗಳಿಂದೆಲ್ಲಾ ಪರಮಾತ್ಮನೇ ಮುಖ್ಯವಾಗಿ ಪ್ರತಿಪಾದ್ಯನಾಗಿದ್ದಾನೆ.

ಏನೆಂದು ಅಧ್ಯಯನ ಮಾಡುತ್ತಾರೆ !

तत्वप्रकाशिका – यस्मादेके शाखिनः 'ता वा एताः' इति तथा - सर्वशब्दाभिधेयत्वेन हरिमेवाभिधीयते ।

ಯಾವ ಕಾರಣದಿಂದ ಕೆಲವು ಐತರೇಯ ಶಾಖಿಗಳು 'ತಾ ವಾ ಏತಾಃ' ಎಂಬುದಾಗಿ ಸಕಲಶಬ್ದಗಳಿಂದ ಶ್ರೀಹರಿಯೇ ಪ್ರತಿಪಾದ್ಯನಾಗಿದ್ದಾನೆಂದು ಅಧ್ಯಯನ ಮಾಡುತ್ತಿದ್ದಾರೋ, ಆ ಕಾರಣದಿಂದ ಸಕಲಶಬ್ದಗಳು ಭಗವದ್ವಾಚಕವೇ ಆಗುತ್ತವೆ.

ಪರಮಾತ್ಮನಲ್ಲಿ ಯೋಗವೃತ್ತಿಯಿಂದಲೇ ಅಧ್ಯಯನ

तत्वप्रकाशिका – नच शब्दानां भगवत्परत्वे वृत्त्यभावः । 'एष इमं लोकमभ्यार्चत्' इत्यादिना शतर्च्यादिशब्दानां परमात्मनि योगस्योक्तत्वात् ।

ಭಗವಂತನು ಇಂತಹ ಕರ್ಮಪ್ರತಿಪಾದಕ ಶಬ್ದಗಳಿಂದ ವಾಚ್ಯನಾಗಿದ್ದಾನೆನ್ನಲು ಶಬ್ದವೃತ್ತಿಯೇ ಇಲ್ಲವೆಂದು ಆಕ್ಷೇಪ ಮಾಡಬಾರದು. ಏಕೆಂದರೆ 'ಏಷ ಇಮಂ ಲೋಕಮಭ್ಯಾರ್ಚತ್' ಇವೇ ಮೊದಲಾದ ಶ್ರುತಿಗಳಿಂದ 'ಶತರ್ಚಿ' ಮೊದಲಾದ ಶಬ್ದಗಳ ಯೋಗವೃತ್ತಿಯನ್ನು ಪರಮಾತ್ಮನಲ್ಲಿ ಶ್ರುತಿಯೇ ಹೇಳುತ್ತಿದೆ.

'ತಸ್ಮಾಚ್ಛತರ್ಚಿನ' ಎಂಬ ಶ್ರುತಿಯ ಅಭಿಪ್ರಾಯ

तत्वप्रकाशिका – नच शब्दानामन्यत्र रूढत्वेन योगाङ्गीकारायोगः 'तस्माच्छतर्चिन इत्याचक्षत एतमेव सन्तम्' इति योगेन रूढेरपहारोक्तेः ।

'ಜ್ಯೋತಿಃ' ಮೊದಲಾದ ಶಬ್ದಗಳು ಜ್ಯೋತಿಷ್ಟೋಮಾದಿ ಅನ್ಯಪದಾರ್ಥಗಳಲ್ಲಿ ಪ್ರಸಿದ್ಧ-ವಾಗಿರುವುದರಿಂದ ವಿಷ್ಣುವಿನಲ್ಲಿ ಯೋಗವೃತ್ತಿಯನ್ನು ಅಂಗೀಕರಿಸುವುದು ತಪ್ಪಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ 'ತಸ್ಮಾಚ್ಛತರ್ಚಿನ ಇತ್ಯಾಚಕ್ಷತೇ ಏತಮೇವ ಸಂತಮ್' ಎಂಬುದಾಗಿ ಪರಮಾತ್ಮನಲ್ಲಿ ಶಬ್ದಗಳ ಯೋಗವೃತ್ತಿಯನ್ನು ತೋರಿಸಿ, ಲೋಕರೂಢಿಯನ್ನು ನಿರಾಕರಿಸಲಾಗಿದೆ.

ಪರಮಾತ್ಮನೇ 'ಶತರ್ಚಿ'

तत्वप्रकाशिका – 'एतमेव परमात्मानं मुख्यतो यौगिकार्थं सन्तं शतर्च्यादिनामभिराचक्षते, नतु मुख्यतो रूढत्वेऽपि मुनीन्' इति प्रतीतेः ।

ಇಂತಹ ಪರಮಾತ್ಮನನ್ನು 'ಶತರ್ಚಿ' ಮೊದಲಾದ ಶಬ್ದಗಳಿಂದ ಎಲ್ಲಾ ಜ್ಞಾನಿಜನರು ಮುಖ್ಯವಾಗಿ ಯೌಗಿಕಾರ್ಥದಿಂದ ತಿಳಿದಿದ್ದಾರೆ. ಆದ್ದರಿಂದಲೇ ಅವನನ್ನು 'ಶತರ್ಚಿ' ಎಂದು ಕರೆಯುತ್ತಾರೆ. ಲೋಕರೂಢಿಯಿಂದ 'ಶತರ್ಚಿ' ಮೊದಲಾದ ಶಬ್ದಗಳು ಋಷಿಯಲ್ಲಿ ಪ್ರಸಿದ್ಧವಾಗಿದ್ದರೂ, ಜ್ಞಾನಿಜನರು ಅಂತಹ ಶಬ್ದಗಳಿಂದ ಋಷಿಗಳನ್ನು ತಿಳಿಯುವುದೇ ಇಲ್ಲ. ಹೀಗೆ ಶ್ರುತಿಯಿಂದ ತಿಳಿಯುತ್ತಿದೆ.

ಪರಮಾತ್ಮನಲ್ಲಿ ವಿದ್ವದ್ಗೂಢಿಸಹಿತವಾದ ಯೋಗ

तत्वप्रकाशिका – यद्यपि पङ्कजादिशब्दे योगापहारित्वं रूढेर्दृश्यते तथाप्यत्र ''आचक्षते'' इति विद्वद्गूढिसहितत्वेनोक्तयोगस्य रूढ्यपहारित्वं युक्तमेव ।।

ವಾಸ್ತವಿಕವಾಗಿ 'ಪಂಕಜ' ಮೊದಲಾದ ಶಬ್ದಗಳಲ್ಲಿ ರೂಢ್ಯರ್ಥವನ್ನೇ ಸ್ವೀಕರಿಸಿ ಯೋಗಾರ್ಥವನ್ನು ಬಿಡುವುದು ಕಂಡಿದೆ. ಆದರೂ ಕೂಡ ಪ್ರಕೃತ 'ಆಚಕ್ಷತೇ' ಎಂಬುದಾಗಿ ಶ್ರುತಿ ಹೇಳುತ್ತಿರುವುದರಿಂದ ಯೋಗವು ವಿದ್ವದ್ಗೂಢಿಸಹಿತವಾಗಿದೆ ಎಂದು ತಿಳಿಯಬೇಕು. ಆದ್ದರಿಂದ ವಿದ್ವದ್ಗೂಢಿಸಹಿತವಾದ ಈ ಯೋಗವು ಅಜ್ಞರೂಢಿಯನ್ನು ನಿರಾಕರಿಸುವುದು ಯುಕ್ತವೇ ಆಗಿದೆ.

ಸರ್ವಶಬ್ದಸಮನ್ವಯಕ್ಕೆ ಯಾವುದೇ ಬಾಧಕವಿಲ್ಲ

तत्वप्रकाशिका – अतो हरेः कर्माभिधायकशब्दवाच्यत्वाद्युक्तं समन्वयसूत्रमिति भावः ।

ಆದ್ದರಿಂದ ಶ್ರೀಹರಿಯೇ ಕರ್ಮಪ್ರತಿಪಾದಕವಾದ ಸಕಲವಿಧಶಬ್ದಗಳಿಂದ ವಾಚ್ಯನಾಗಿದ್ದಾನೆ. ಆದ್ದರಿಂದ ಸಮನ್ವಯ ಸೂತ್ರದಲ್ಲಿ ಮಾಡಿದ ಪ್ರತಿಜ್ಞೆಯು ಅತ್ಯಂತ ಸಮಂಜಸವಾಗಿದೆ. ಇಷ್ಟು ಸಿದ್ಧಾಂತದ ಅಭಿಪ್ರಾಯ.

ಸೂತ್ರಕಾರರೇಕೆ ವಸಂತ ಶಬ್ದವನ್ನು ಬಿಟ್ಟರು ?

तत्वप्रकाशिका – ज्योतिःशब्दस्याप्रथमपठितत्वेऽपि प्रधानकर्माभिधायकत्वात् तस्यैवान्योपलक्षकत्वसम्भवाच्च सङ्ग्रहः । तुशब्द एवार्थे ।

'ವಸಂತೇ ವಸಂತೇ ಜ್ಯೋತಿಷಾ ಯಜೇತ' ಎಂಬುದಾಗಿ ಶ್ರುತಿಯಲ್ಲಿ ಮೊದಲು ವಸಂತ ಪದವು ಕೇಳಿಸುತ್ತಿದೆ. ಅನಂತರ 'ಜ್ಯೋತಿಃ' ಎಂಬ ಶಬ್ದವು ಕೇಳಿಸುತ್ತಿದೆ. ಅದಕ್ಕನುಗುಣವಾಗಿ ಸೂತ್ರಕಾರರು ವಸಂತಪದವನ್ನೇ ಮೊದಲು ತೆಗೆದುಕೊಳ್ಳಬೇಕಿತ್ತು. ಅದನ್ನು ಬಿಟ್ಟು ಅನಂತರ ಶ್ರುತವಾದ 'ಜ್ಯೋತಿಃ' ಎಂಬ ಶಬ್ದವನ್ನು ತೆಗೆದುಕೊಳ್ಳಲು ಏನು ಕಾರಣ? ಎಂದರೆ 'ಜ್ಯೋತಿಃ' ಎಂಬ ಶಬ್ದವು ಪ್ರಧಾನವಾದ 'ಜ್ಯೋತಿಷ್ಟೋಮ' ಎಂಬ ಕರ್ಮವನ್ನು ಪ್ರತಿಪಾದನೆ ಮಾಡುತ್ತಿದೆ. 'ವಸಂತ' ಎಂಬ ಪದವು ಕೇವಲ ಕಾಲವನ್ನಷ್ಟೇ ಪ್ರತಿಪಾದನೆ ಮಾಡುತ್ತಿದೆ. ಮುಖ್ಯ ಹಾಗೂ ಅಮುಖ್ಯಗಳಲ್ಲಿ ಮುಖ್ಯವನ್ನೇ ಸ್ವೀಕರಿಸಬೇಕಾದ್ದರಿಂದ, 'ಜ್ಯೋತಿಃ' ಎಂಬ ಮುಖ್ಯವಾದ ಪದವನ್ನು ಉಲ್ಲೇಖಿಸಿ, ಅದರಿಂದ ಅಮುಖ್ಯವಾದವುಗಳನ್ನೆಲ್ಲಾ ಉಪಲಕ್ಷಣಯಾ ಸೂತ್ರಕಾರರು ವಿವಕ್ಷಿಸುತ್ತಾರೆ. ಸೂತ್ರದಲ್ಲಿರುವ 'ತು' ಎಂಬ ಶಬ್ದವು ಅವಧಾರಣಾರ್ಥದಲ್ಲಿದೆ.

ಧ್ವನಿಯಿಂದಲೂ ಶ್ರೀಹರಿಯೇ ವಾಚ್ಯ

तत्वप्रकाशिका – 'यास्ता एताः सर्वा ऋचस्तासामेकमेव व्याहर्तव्यं, तच्च विष्णुरेव । किं च ये सर्वे वेदाः, तेषामपीश्वर एव प्रतिपाद्यः, किमृचाम्! अपि च ये समुद्रादिघोषाः, तेषामपि, किमु वेदानां ! तत्र ऋचस्तु विशेषतः परमात्मप्रतिपादिका इति जानीयात् इत्यर्थः ।। १ ।।

ವೇದದಲ್ಲಿ ಯಾವ ಯಾವ 'ಋಜ್'ಮಂತ್ರಗಳಿವೆಯೋ, ಅವೆಲ್ಲವೂ ಒಬ್ಬನೇ ವಿಷ್ಣುವನ್ನು ಪ್ರತಿಪಾದನೆ ಮಾಡುತ್ತಿವೆಯೆಂದು ಹೇಳಬೇಕು. ಸಕಲ ವೇದಗಳಿಂದ ವಿಷ್ಣು ಪ್ರತಿಪಾದ್ಯನಾದ ಮೇಲೆ 'ಋಜ್' ಮಂತ್ರಗಳಿಂದಲೂ ಪ್ರತಿಪಾದ್ಯನಾಗಿದ್ದಾನೆಂದು ಪ್ರತ್ಯೇಕ ಹೇಳಬೇಕೇನು? ಮತ್ತು ಯಾವ ಸಮುದ್ರ ಮೊದಲಾದವುಗಳ ಧ್ವನಿಗಳಿವೆಯೋ, ಆ ಧ್ವನ್ಯಾತ್ಮಕವಾದ ಶಬ್ದಗಳೂ ಕೂಡ ವಿಷ್ಣುವನ್ನು ಪ್ರತಿಪಾದನೆ ಮಾಡುತ್ತಿರುವಾಗ ವೇದಗಳಿಂದ ಪ್ರತಿಪಾದ್ಯನಾಗಿದ್ದಾನೆಂದು ಪ್ರತ್ಯೇಕ ಹೇಳಬೇಕೇನು ? ಇಲ್ಲಿ ಸಕಲ ಶಬ್ದಗಳ ಮಧ್ಯದಲ್ಲಿ ಋಕ್‌ಗಳಿಂದ ಪರಮಾತ್ಮನು ವಿಶೇಷವಾಗಿ ಪ್ರತಿಪಾದ್ಯನಾಗಿದ್ದಾನೆಂದು ತಿಳಿಯಬೇಕೆಂದರ್ಥ.

ಮಂತ್ರಾಲಯ ಪ್ರಭುಗಳಾದ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ

ಭಾವದೀಪ

ಅಧಿಕರಣದ ಉಪಾಧಿ

एतदधिकरणोपाधिभूतशब्दानां भाष्योक्तबलवद्युपपत्त्याऽन्यत्रैव प्रसिद्धत्वं वदन्नन्तर्भावसङ्गतिमाह – अत्र कर्मक्रमादीति ।।

ಜ್ಯೋತಿರುಪಕ್ರಮಾಧಿಕರಣವು ಪ್ರಾರಂಭವಾಗುತ್ತಿದೆ. ''ಸರ್ವ'' ಎಂಬುದು ಈ ಅಧಿಕರಣದ ಉಪಾಧಿ. ಈ ಉಪಾಧಿಕೋಟಿಯಲ್ಲಿ ಪ್ರವೇಶ ಹೊಂದುವ ಸಕಲಶಬ್ದಗಳನ್ನು ಇಲ್ಲಿ ಸಮನ್ವಯ ಮಾಡಲಾಗುತ್ತಿದೆ. ಇಂಥ ಶಬ್ದಗಳು ಭಾಷ್ಯದಲ್ಲಿ ಹೇಳಿದ ಬಲಿಷ್ಠವಾದ ಉಪಪತ್ತಿಗಳಿಂದ ಅನ್ಯತ್ರಪ್ರಸಿದ್ಧವಾಗಿದೆ. ಇಂಥ ಶಬ್ದಗಳನ್ನು ಈ ಅಧಿಕರಣದಲ್ಲಿ ಸಮನ್ವಯ ಮಾಡುತ್ತಿರುವುದರಿಂದ ಜ್ಯೋತಿರುಪಕ್ರಮಾಧಿಕರಣಕ್ಕೆ ಶಾಸ್ತ್ರಾಂತರ್ಭಾವ, ಅಧ್ಯಾಯಾಂತರ್ಭಾವ, ಪಾದಾಂತರ್ಭಾವ ಎಂಬ ಸಂಗತಿತ್ರಯಗಳು ಇರುತ್ತವೆಂಬುದನ್ನು 'ಅತ್ರ ಕರ್ಮಕ್ರಮಾದಿ' ಇತ್ಯಾದಿ ಟೀಕಾವಾಕ್ಯದಿಂದ ಸ್ಪಷ್ಟಪಡಿಸುತ್ತಿದ್ದಾರೆ.

ಈ ಅಧಿಕರಣ ಏಕೆ ?

भावदीपः – यद्यपि शरीररूपकविन्यस्तगृहीते रित्युक्तन्यायेन तच्छब्दवाच्येश्वर-सम्बन्धादन्यत्रापि शब्दवृत्तेरङ्गीकारेण न कर्मादिलोपप्रसङ्ग। अन्यथा पूर्वत्रापि तारतम्यलोपप्रसङ्गः स्यात् ।

ಪ್ರಶ್ನೆ- ಸಕಲಶಬ್ದಗಳು ಪರಮಾತ್ಮನನ್ನೆ ಪ್ರತಿಪಾದನೆ ಮಾಡುತ್ತವೆ ಆದರೂ ಸಹ ಅವನ ಸಂಬಂಧದಿಂದ ಬೇರೆ ಪದಾರ್ಥಗಳನ್ನು ಕೂಡ ಪ್ರತಿಪಾದನೆ ಮಾಡುತ್ತವೆ. ಹೀಗೆ 'ಶರೀರರೂಪಕವಿನ್ಯಸ್ತಗೃಹೀತೇಃ' ಎಂಬ ಸೂತ್ರದಲ್ಲಿ ಲೌಕಿಕಪದಾರ್ಥಗಳಲ್ಲಿಯೂ ಶಬ್ದವೃತ್ತಿಯನ್ನು ಅಂಗೀಕರಿಸಲಾಗಿದೆ. ಆದ್ದರಿಂದಲೇ ಕರ್ಮಪ್ರತಿಪಾದ್ಯವಾದ ವಾಕ್ಯಗಳೇ ಇಲ್ಲವಾದ್ದರಿಂದ ಕರ್ಮಾನುಷ್ಠಾನಗಳ ಲೋಪವಾಗಲಿ ಎಂಬ ಅತಿಪ್ರಸಂಗಕ್ಕೆ ಅವಕಾಶವಿಲ್ಲ. ಹೀಗೆ ಒಪ್ಪದಿದ್ದರೆ ಹಿಂದೆ ಸಮರ್ಥಿಸಿದ ತಾರತಮ್ಯವೂ ಕೂಡ ಲೋಪವಾಗಬೇಕಾದೀತು. ಹೀಗಿರುವಾಗ ಈ ಅಧಿಕರಣ ಏಕೆ ಹೊರಡಬೇಕು?

ಅಧಿಕರಣವು ಸಾರ್ಥಕ

भावदीपः – तथापीह पदवर्णस्वरादिरूपेणैव समन्वयस्याभिप्रेतत्वेन कर्मक्रमादिप्रतीतेरेवाभावात् । तच्छब्दावाच्येशसम्बन्धात् अन्यत्र वृत्तिश्चेत् गङ्गसम्बन्धात्तीरे गङ्गापदस्येव सर्वशब्दानां लोके लक्षणाप्रसङ्गेन प्राक्तनन्यायस्यैव अयोगेन इहाप्याक्षेप्यत्वादिति भावः ।।

ಉತ್ತರ - ಹೌದು, ಆದರೂ ಸಹ ಈ ಅಧಿಕರಣ ಸಾರ್ಥಕ. ಏಕೆಂದರೆ ಇಲ್ಲಿ ಪದ ಅಕ್ಷರ ಸ್ವರ ಇವೇ ಮೊದಲಾದ ಶಬ್ದಗಳ ಸಮನ್ವಯವನ್ನು ಮಾಡಲಾಗಿದೆ. ಆದ್ದರಿಂದ ಕರ್ಮಕ್ರಮಾದಿಗಳ ಪ್ರತೀತಿಯೇ ಬರುವುದಿಲ್ಲ. ಮತ್ತು ಪ್ರತಿಯೊಂದು ಶಬ್ದಗಳಿಂದ ಪ್ರತಿಪಾದ್ಯನಾದ ಪರಮಾತ್ಮನ ಸಂಪರ್ಕದಿಂದ ಶಬ್ದಗಳು ಲೌಕಿಕ ಪದಾರ್ಥಗಳನ್ನು ಪ್ರತಿಪಾದನೆ ಮಾಡುತ್ತವೆಂದು ಹೇಳಿದರೆ ಸಕಲ ಶಬ್ದಗಳಿಗೆ ಲಕ್ಷಣಾವೃತ್ತಿಯನ್ನು ಒಪ್ಪಿದ ದೋಷ ಬರುತ್ತದೆ. ''ಗಂಗಾಯಾಂ ಘೋಷಃ'' ಎಂಬಲ್ಲಿ ಗಂಗಾಸಂಪರ್ಕ ಇರುವುದರಿಂದ ತೀರದಲ್ಲಿ 'ಗಂಗಾ' ಎಂಬ ಪದವನ್ನು ಪ್ರಯೋಗಿಸುವುದರಿಂದ ತೀರದಲ್ಲಿ ಗಂಗಾಪದಕ್ಕೆ ಲಕ್ಷಣಾವೃತ್ತಿ ಎಂದು ಎಲ್ಲರೂ ಒಪ್ಪಿದ್ದಾರೆ. ಅದರಂತೆ ಪರಮಾತ್ಮನ ಸಂಬಂಧವಿರುವುದರಿಂದ ಎಲ್ಲ ಪದಾರ್ಥಗಳನ್ನು ಸಕಲಶಬ್ದಗಳು ಪ್ರತಿಪಾದನೆ ಮಾಡುವುದಾದರೆ ಲಕ್ಷಣಾವೃತ್ತಿಯನ್ನು ಒಪ್ಪಿದಂತಾಗುತ್ತದೆ. ಆದ್ದರಿಂದ 'ಶರೀರರೂಪಕ' ಇತ್ಯಾದಿ ಸೂತ್ರದಲ್ಲಿ ಹೇಳಿದ ನ್ಯಾಯವೇ ಅಯುಕ್ತವಾಗಿದೆ. ಹೀಗೆ ಅಭ್ಯಧಿಕಾಶಂಕೆಯು ಪ್ರಾಪ್ತವಾಗುವುದರಿಂದ ಅದರ ಪರಿಹಾರಕ್ಕಾಗಿ ಈ ಅಧಿಕರಣವು ಹೊರಡಲೇಬೇಕು.

ಪದ, ವರ್ಣ, ಸ್ವರಗಳ ಸಮನ್ವಯಕ್ಕಾಗಿ ಈ ಅಧಿಕರಣ ಹೊರಟಿದೆ

भावदीपः – सर्वशब्दानामिति ।। पूर्वनयेषु समन्वितानाम् अन्यत्रासमन्वितानां च वाक्यानां पदवर्णस्वरादिभेदेनेह समन्वीयमानत्वात् तद्रूपेणोदाहरणत्वमित्यर्थः ।

ಟೀಕೆಯಲ್ಲಿ ಹೇಳಿದ 'ಸರ್ವಶಬ್ದಾನಾಂ' ಎಂಬ ಪದದ ಅಭಿಪ್ರಾಯ ಹೀಗಿದೆ - ಹಿಂದಿನ ಎಲ್ಲಾ ಅಧಿಕರಣಗಳಲ್ಲಿ ಅನೇಕ ಶಬ್ದಗಳನ್ನು ಸಮನ್ವಯ ಮಾಡಲಾಗಿದೆ. ಮತ್ತು ಸಮನ್ವಯ ಮಾಡದ ಇನ್ನೂ ಅನೇಕ ಶಬ್ದಗಳಿವೆ. ಈ ಎಲ್ಲಾ ಬಗೆಯ ಶಬ್ದಗಳಲ್ಲಿರುವ ಪದ, ವರ್ಣ, ಸ್ವರಗಳ ಸಮನ್ವಯಕ್ಕಾಗಿ ಈ

ಅಧಿಕರಣ ಹೊರಟಿದೆ. ಈ ಕ್ರಮದಿಂದ ಸಕಲ ಶಬ್ದಗಳು ಈ ಅಧಿಕರಣದ ವಿಷಯವಾಗಿದೆ ಎಂದು ತಿಳಿಯಬೇಕು.

'ಸರ್ವ' ಎಂಬುದು ಅಧಿಕರಣದ ಉಪಾಧಿ

भावदीपः – विरोधिसर्वबाहुल्येत्यनुभाष्ये सर्वेत्येतदधिकरणोपाधेरुक्तेः इति भावः ।

''ವಿರೋಧಿಸರ್ವಬಾಹುಲ್ಯ'' ಎಂಬ ಅನುವ್ಯಾಖ್ಯಾನದಲ್ಲಿ 'ಸರ್ವ' ಎಂಬ ಪದದಿಂದ ಈ ಅಧಿಕರಣದ ಉಪಾಧಿಯನ್ನು ಹೇಳಿರುತ್ತಾರೆ. ಪದ, ವರ್ಣ, ಸ್ವರಾದಿಗಳ ಕ್ರಮದಿಂದ ಎಲ್ಲಾ ಬಗೆಯ ಶಬ್ದಗಳ ಸಮನ್ವಯವೇ ಈ ಅಧಿಕರಣದ ಉದ್ದೇಶವೆಂದು ಇದರ ಅರ್ಥ.

ಹಿಂದಿನ ಅಧಿಕರಣದ ಭಾಷ್ಯವಾಕ್ಯವನ್ನು ಇಲ್ಲೂ ಯೋಜನೆ ಮಾಡಬೇಕು

भावदीपः – 'तत्तु समन्वयात्' इति सर्वशब्दानां परमेश्वरे समन्वय उक्त इति पूर्वनयस्थभाष्यवाक्यमिहापि योज्यमिति भावेन तदर्थं वदन् सङ्गतिसूचकत्वेन तावत् भाष्यं व्याचष्टे – तत्तु, इति।।

''ತತ್ತು ಸಮನ್ವಯಾದಿತಿ ಸರ್ವಶಬ್ದಾನಾಂ ಪರಮೇಶ್ವರೇ ಸಮನ್ವಯ ಉಕ್ತಃ'' ''ತತ್ತುಸಮನ್ವಯಾತ್ ಎಂಬ ಸೂತ್ರದಲ್ಲಿ ಪರಮಾತ್ಮನಲ್ಲಿ ಸಕಲ ಶಬ್ದಗಳು ಸಮನ್ವಯವಾಗುತ್ತವೆಂದು ಹೇಳಲಾಯಿತು''. ಹೀಗೆ ಹಿಂದಿನ ಅಧಿಕರಣದ ಭಾಷ್ಯದಲ್ಲಿರುವ ವಾಕ್ಯವನ್ನು ಈ ಅಧಿಕರಣದಲ್ಲೂ ಕೂಡ ಯೋಜನೆ ಮಾಡಿಕೊಳ್ಳಬೇಕು. ಈ ಅಭಿಪ್ರಾಯದಿಂದ ಟೀಕೆಯಲ್ಲಿ ಭಾಷ್ಯದ ಮಾತನ್ನು ವ್ಯಾಖ್ಯಾನ ಮಾಡುತ್ತಾ ಸಂಗತಿಯನ್ನು ತೋರಿಸುವ ಮೂಲಕ 'ತತ್ತು' ಇತ್ಯಾದಿ ವಾಕ್ಯವು ಹೊರಟಿವೆ.

ಕರ್ಮಕ್ರಮಾದಿ ಇತ್ಯಾದಿ ಭಾಷ್ಯಕ್ರಮದ ತಾತ್ಪರ್ಯ

भावदीपः – वसन्त इत्यादिभाष्यभावमाह – सर्वमध्येति ।। कर्मक्रमादीत्यादिवाक्यतात्पर्यमाह – तेषां चान्यपरत्वे, इति ।। वक्ष्यमाणदिशेति भावः ।। तदिति ।। निर्णेतव्यत्वेन प्राप्तेत्यर्थः ।

'ವಸಂತೇ' ಇತ್ಯಾದಿ ಭಾಷ್ಯದ ಅಭಿಪ್ರಾಯವನ್ನು ಟೀಕೆಯಲ್ಲಿ 'ಸರ್ವಮಧ್ಯ' ಇತ್ಯಾದಿ ವಾಕ್ಯದಿಂದ ಸ್ಪಷ್ಟಪಡಿಸಿದ್ದಾರೆ. 'ಕರ್ಮಕ್ರಮಾದಿ' ಇತ್ಯಾದಿ ಭಾಷ್ಯದ ಮಾತಿನ ತಾತ್ಪರ್ಯವನ್ನು 'ತೇಷಾಂ ಚ ಅನ್ಯಪರತ್ವೇ' ಇತ್ಯಾದಿ ಟೀಕಾವಾಕ್ಯದಿಂದ ಸ್ಪಷ್ಟಪಡಿಸಿದ್ದಾರೆ ಶಬ್ದಗಳು ಹೇಗೆ ಅನ್ಯಪರವಾಗುತ್ತವೆಂಬುದನ್ನು ಮುಂದೆ ಹೇಳುವ ಕ್ರಮದಲ್ಲಿ ತಿಳಿದುಕೊಳ್ಳಬೇಕು. 'ತತ್' ಎಂದರೆ 'ನಿರ್ಹೇತವ್ಯತ್ವೇನ' ಪ್ರಸಕ್ತವಾದ ಎಂದರ್ಥ.

ಸಂಗತಿಪರ ಭಾಷ್ಯವು ಪೂರ್ವಪಕ್ಷ ಪರವೂ ಹೌದು

भावदीपः – पूर्वपक्षादिपरत्वेनापि भाष्यं व्याकुर्वन् कर्माभिधायकस्य इत्येतल्लब्धहेतुमाह – तस्य ज्योतिष्टोमादीति ।।

ಸಂಗತಿಪ್ರದರ್ಶಕವಷ್ಟೇ ಅಲ್ಲದೆ ಪ್ರರ್ವಪಕ್ಷಪ್ರದರ್ಶಕವೂ ಆಗಿದೆ ಎಂಬ ದೃಷ್ಟಿಯಿಂದ ಭಾಷ್ಯವನ್ನು ವ್ಯಾಖ್ಯಾನ ಮಾಡುತ್ತಾ 'ಕರ್ಮಾಭಿಧಾಯಕಸ್ಯ' ಎಂಬುದರಿಂದ ತಿಳಿಯುವ ಹೇತುವನ್ನು 'ತಸ್ಯ ಜ್ಯೋತಿಷ್ಟೋಮಾದಿ' ಇತ್ಯಾದಿ ಟೀಕೆಯಿಂದ ತೋರಿಸಿದ್ದಾರೆ.

'ಕರ್ಮಕ್ರಮಾದಿ ವಿರೋಧಾತ್' ಎಂಬ ಭಾಷ್ಯಕ್ಕೆ ವ್ಯಾಖ್ಯಾನ

भावदीपः – प्रसिद्धाभिधेयोऽपीत्यग्रेतनभाष्यानुरोधात् प्रसिद्धत्वादित्युक्तम्। कर्मक्रमादिविरोधादित्येतद्वाक्यं व्यनक्ति – तत्प्रसिद्धिमिति।।

'ಪ್ರಸಿದ್ಧಾಭಿಧೇಯೋಽಪಿ' ಎಂಬ ಮುಂದಿನ ಭಾಷ್ಯವಾಕ್ಯಕ್ಕೆ ಅನುಸಾರಿಯಾಗಿ ಟೀಕೆಯಲ್ಲಿ 'ಪ್ರಸಿದ್ಧತ್ವಾತ್' ಎಂದು ಹೇಳಿದ್ದಾರೆ. 'ಕರ್ಮಕ್ರಮಾದಿವಿರೋಧಾತ್' ಎಂಬ ಭಾಷ್ಯದ ಮಾತನ್ನು 'ತತ್ ಪ್ರಸಿದ್ಧಿಮ್' ಎಂಬ ಟೀಕೆಯಿಂದ ವ್ಯಾಖ್ಯಾನ ಮಾಡಿದ್ದಾರೆ.

ಅಧಿಕಾರಿ, ನಿಯೋಜ್ಯ, ಯಜಮಾನ ಇವುಗಳ ಅರ್ಥ

भावदीपः – अधिकारीति ।। फलस्वामित्वावस्थायुक्तोऽधिकारी । विधिप्रेर्यत्वावस्थावान् नियोज्यः । कर्मकर्तृत्वावस्थायुक्तो यजमान इत्येकस्यैवावस्थाभेदात् भेदेन व्यपदेशः ।

ಟೀಕೆಯಲ್ಲಿ 'ಅಧಿಕಾರಿ', 'ನಿಯೋಜ್ಯ', 'ಯಜಮಾನ' ಎಂಬ ಮೂರು ಪದಗಳನ್ನು ಪ್ರಯೋಗಿಸಿದ್ದಾರೆ. ಮೂರು ಪದಗಳು ಒಬ್ಬನೇ ವ್ಯಕ್ತಿಯನ್ನು ಹೇಳಿದರೂ ಕೂಡ ಅವಸ್ಥಾಭೇದವನ್ನು ವಿವಕ್ಷಿಸುತ್ತಿದೆ. ಫಲಸ್ವಾಮಿಯಾದ ಅವಸ್ಥೆಯಲ್ಲಿ 'ಅಧಿಕಾರಿ' ಎನಿಸುತ್ತಾನೆ. ವಿಧಿವಾಕ್ಯದಿಂದ ಪ್ರೇರ್ಯನಾದಾಗ 'ನಿಯೋಜ್ಯ' ಎನಿಸುತ್ತಾನೆ. ಕರ್ಮಕರ್ತೃತ್ವವೆಂಬ ಅವಸ್ಥೆಯಿಂದ ಯುಕ್ತನಾದಾಗ 'ಯಜಮಾನ' ಎನಿಸುತ್ತಾನೆ. ಈ ಅರ್ಥವನ್ನು ತಿಳಿದಾಗ ಒಬ್ಬನನ್ನೇ ಮೂರು ಪದಗಳಿಂದ ಹೇಳಿದ್ದಾರೆಂಬ ಆಕ್ಷೇಪ ಬರುವುದಿಲ್ಲ.

ಪ್ರಸಿದ್ಧಪದದಿಂದ ಪೂರ್ವಪಕ್ಷವು ಸೂಚಿತ

भावदीपः – हरौ महायोगविद्धद्रूढिपरस्योपक्रमादिति सूत्रांशस्य व्यावर्त्यं भाष्यस्थप्रसिद्धपदसूचितमाह – किं चेति ।।

ಶ್ರೀಹರಿಯಲ್ಲಿ ಸಕಲಶಬ್ದಗಳು ಮಹಾಯೋಗವೃತ್ತಿಯಿಂದ ಹಾಗೂ ವಿದ್ವದ್‌ರೂಢಿಯಿಂದ ಸಮನ್ವಯಗೊಳ್ಳುತ್ತವೆಂಬುದನ್ನು ಸೂತ್ರದಲ್ಲಿರುವ 'ಉಪಕ್ರಮಾತ್' ಎಂಬ ಪದವು ಸಾಧಿಸುತ್ತವೆ. ಇದರಿಂದ ವ್ಯಾವರ್ತ್ಯವಾದ ಪೂರ್ವಪಕ್ಷವನ್ನು ಟೀಕೆಯಲ್ಲಿ 'ಕಿಂಚ' ಇತ್ಯಾದಿ ವಾಕ್ಯದಿಂದ ಪ್ರದರ್ಶಿಸುತ್ತಿದ್ದಾರೆ. ಈ ಪೂರ್ವಪಕ್ಷವು ಭಾಷ್ಯದಲ್ಲಿರುವ 'ಪ್ರಸಿದ್ಧ' ಎಂಬ ಪದದಿಂದ ಸೂಚಿತವಾಗಿದೆ.

ಶ್ರೀಹರಿಯಲ್ಲಿ ರೂಢಿ ಒಪ್ಪಬಹುದೇ?

भावदीपः – हरौ शब्दानां रूढ्यङ्गीकारे बाधकं चाह – तत इति ।। रूढित इत्यर्थः ।

ಶ್ರೀಹರಿಯಲ್ಲಿ ಶಬ್ದಗಳಿಗೆ ರೂಢಿಯನ್ನು ಅಂಗೀಕಾರ ಮಾಡಿದರೆ ಬರುವ ಬಾಧಕವನ್ನು ಟೀಕೆಯಲ್ಲಿ 'ತತೋ' ಎಂಬ ವಾಕ್ಯದಿಂದ ತೋರಿಸಿದ್ದಾರೆ. 'ತತಃ' ಎಂಬ ಪದಕ್ಕೆ ರೂಢಿಯನ್ನು ಒಪ್ಪುವುದರಿಂದ ಎಂದರ್ಥ.

ಸಕಲಗುಣಪರಿಪೂರ್ಣತ್ವಕ್ಕೆ ಸಕಲಶಬ್ದಸಮನ್ವಯವು ಕಾರಣವಾಯಿತು

भावदीपः – 'अतोऽनन्तगुणो विष्णुर्यच्छब्दा योगवृत्तयः' इति सङ्क्षेपभाष्योक्तदिशा समन्वीयमानशब्दानां हरौ यौगिकत्व एव जिज्ञासासूत्रस्थब्रह्म शब्दोक्तगुणपूर्णत्वसिद्धिरन्यथा तदसिद्धेरित्यर्थः ।

''ಅತೋऽನಂತಗುಣೋ ವಿಷ್ಣುರ್ಯಚ್ಛಬ್ದಾ ಯೋಗವೃತ್ತಯಃ'' ''ಯಾವ ಕಾರಣಗಳಿಂದ ಶಬ್ದಗಳು ವಿಷ್ಣುವಿನಲ್ಲಿ ಯೌಗಿಕವಾಗಿ ಸಮನ್ವಯಗೊಳ್ಳುತ್ತವೋ ಆ ಕಾರಣದಿಂದಲೇ ವಿಷ್ಣು ಸಕಲಗುಣಪರಿಪೂರ್ಣ-ನಾಗಿದ್ದಾನೆಂದು ಸಿದ್ಧವಾಯಿತು'' ಹೀಗೆ ಅಣುಭಾಷ್ಯದಲ್ಲಿ ಶ್ರೀಮದಾಚಾರ್ಯರು ಹೇಳಿದ್ದಾರೆ. ಈ ದೃಷ್ಟಿಯಿಂದ ಸಮನ್ವಯ ಮಾಡುವ ಸಕಲ ಶಬ್ದಗಳು ಶ್ರೀಹರಿಯಲ್ಲಿ ಯೌಗಿಕವಾದರೆ ಮಾತ್ರ ಜಿಜ್ಞಾಸಾಸೂತ್ರದಲ್ಲಿರುವ ಬ್ರಹ್ಮಶಬ್ದದಿಂದ ಹೇಳಲ್ಪಟ್ಟ ಸಕಲಗುಣಪರಿಪೂರ್ಣತ್ವವು ಸಿದ್ಧವಾಗುತ್ತದೆ. ಯೋಗವೃತ್ತಿಯನ್ನು ಒಪ್ಪದೆ ರೂಢಿಯನ್ನು ಒಪ್ಪಿದರೆ ಈ ಸಕಲಗುಣಪರಿಪೂರ್ಣತ್ವವು ಸಿದ್ಧವಾಗುವುದಿಲ್ಲ. ಇಷ್ಟು ಅಭಿಪ್ರಾಯವನ್ನು 'ತತೋ' ಇತ್ಯಾದಿ ಟೀಕಾವಾಕ್ಯದಿಂದ ತಿಳಿದುಕೊಳ್ಳಬೇಕು.

'ವ್ಯುತ್ಪತ್ತೇರಪ್ಯಶಕ್ಯತಾ' ಎಂಬುದರ ವ್ಯಾಖ್ಯಾನ

ಭಾವದೀಪಃ – कल्पनासूत्रव्यावर्त्यं व्युत्पत्तेरप्यशक्यता इत्यनुभाष्योक्तमाह – न योगोऽपि सम्भवतीति ।।

'ಕಲ್ಪನೋಪದೇಶಚ್ಚ' ಎಂಬ ಸೂತ್ರದಿಂದ ಪರಿಹಾರವಾಗುವ ಪೂರ್ವಪಕ್ಷವನ್ನು 'ನ ಯೋಗೋऽಪಿ ಸಂಭವತಿ' ಎಂಬ ಟೀಕಾವಾಕ್ಯದಿಂದ ತೊರಿಸುತ್ತಿದ್ದಾರೆ. ''ವ್ಯುತ್ಪತ್ತೇರಪ್ಯಶಕ್ಯತಾ'' ಎಂಬ ಅನುವ್ಯಾಖ್ಯಾನದ ಮಾತಿಗೆ ಇದು ವ್ಯಾಖ್ಯಾನವಾಗಿದೆ.

'ಜ್ಯೋತಿಷಾಂ ಸ್ತೋಮಃ' ಎಂದೇಕೆ ಹೇಳಿಲ್ಲ ?

ಭಾವದೀಪಃ – ज्योतिषां स्तोम इत्यादिरूपा हीति ।। सूत्रे ज्योतिः पदस्यैवोपात्तत्वेऽपि जातमोतं हरौ यस्माज्ज्योतिरित्यनुभाष्ये च ज्योतिः पदस्यैव व्युत्पत्त्युक्तावपीह ज्योतिष्टोमशब्दोऽप्युदाहरणम् ।

ಟೀಕೆಯಲ್ಲಿ 'ಜ್ಯೋತಿಷಾಂ ಸ್ತೋಮಃ' ಎಂದು ಉದಾಹರಿಸಬೇಕಿತ್ತು. ಆದರೆ 'ಜ್ಯೋತಿಃ' ಎಂಬ ಪದವನ್ನಷ್ಟೆ ಉದಾಹರಿಸಿದ್ದಾರೆ. 'ಜಾತಮೋತಂ ಹರೌ ಯಸ್ಮಾಜ್ಜ್ಯೋತಿಃ' ಎಂಬ ಅನುವ್ಯಾಖ್ಯಾನದಲ್ಲಿ ಹೇಳಿದ 'ಜ್ಯೋತಿಷ್ಟೋಮ' ಇಲ್ಲಿ ಉದಾಹರಿಸಬೇಕು.

'ಜ್ಯೋತಿಃ' ಎಂಬ ಪದವು ಜ್ಯೋತಿಷ್ಟೋಮಾರ್ಥಕ

ಭಾವದೀಪಃ – ज्योतिः शब्दो ज्योतिष्टोमवाचीति च दर्शयितुं ज्योतिष्टोमशब्दस्य व्युत्पत्तिप्रदर्शनमिति ध्येयम् ।। नामावृत्तिमात्रत्वेति ।। जगज्जनकत्वादिगुणपूर्तिसिद्धिर्नस्यादिति मात्रशब्दार्थः ।

ಸೂತ್ರದಲ್ಲಿರುವ 'ಜ್ಯೋತಿಃ' ಎಂಬ ಪದವು 'ಜ್ಯೋತಿಷ್ಟೋಮ' ಎಂಬ ಕರ್ಮದ ವಾಚಕವಾಗಿದೆ. ಇದನ್ನು ತಿಳಿಸಲು ಟೀಕೆಯಲ್ಲಿ ಜ್ಯೋತಿಷ್ಟೋಮಪದದ ವ್ಯುತ್ಪತ್ತಿಯನ್ನು ತೋರಿಸಿದ್ದಾರೆ. ಇಲ್ಲದಿದ್ದರೆ 'ಜ್ಯೋತಿಃ' ಎಂಬ ಪದದ ನಿಷ್ಪತ್ತಿಯನ್ನಷ್ಟೇ ತೋರಿಸಿದ್ದರೆ ಸಾಕಾಗುತ್ತಿತ್ತು.

ಟೀಕೆಯಲ್ಲಿ 'ನಾಮಾವ್ಯತ್ತಿಮಾತ್ರತ್ವಾತ್ ಪ್ರಾಪ್ತೇಃ' ಎಂದು ಹೇಳಿದ್ದಾರೆ. ಇಲ್ಲಿ ಮಾತ್ರ ಪದವನ್ನು ಪ್ರಯೋಗಿಸಿದ್ದರಿಂದ ಪರಮಾತ್ಮನಲ್ಲಿ ಜಗಜ್ಜನಕತ್ವಾದಿ ಗುಣಪೂರ್ಣತ್ವವು ಸಿದ್ಧವಾಗದಿರಬೇಕಾದೀತು ಎಂಬ ಬಾಧಕವನ್ನು ಸೂಚಿಸಿದಂತಾಯಿತು.

ಪುನರುಕ್ತಿಯ ಪರಿಹಾರ

भावदीपः – शरीररूपकविन्यस्तगृहीतेरिति पूर्वोक्तेन परिहृतत्वमाशङ्क्य तदाक्षेपेणागतार्थत्वमाह – नच वाच्यमिति ।।

'ಶರೀರರೂಪಕವಿನ್ಯಸ್ತಗೃಹೀತೇಃ' ಎಂಬ ಸೂತ್ರದ ಭಾಗದಿಂದ ಈ ಅಧಿಕರಣದ ಪೂರ್ವಪಕ್ಷವನ್ನು ಪರಿಹಾರ ಮಾಡಿದ್ದಾಗಿದೆ ಎಂದು ಆಶಂಕಿಸಿ ಆ ಸೂತ್ರದಲ್ಲಿ ಹೇಳಿದ ಸಿದ್ಧಾಂತದ ಮೇಲೆ ಬರುವ ಅಭ್ಯಧಿಕಾಶಂಕೆಯನ್ನು 'ನಚ ವಾಚ್ಯಮ್' ಇತ್ಯಾದಿ ಟೀಕಾವಾಕ್ಯದಿಂದ ಸಮರ್ಥಿಸುತ್ತಿದ್ದಾರೆ. ಇದರಿಂದ ಪುನರುಕ್ತಿಯನ್ನು ಪರಿಹರಿಸಿದಂತಾಯಿತು.

ರೂಢಿಗಿಂತಲು ಯೋಗವು ದುರ್ಬಲ

भावदीपः – अत इति ।। कर्मक्रमादिविरोधाद्योगस्य च रूढितोऽपि दुर्बलत्वादीशे शब्दानां व्युत्पत्तेरशक्यत्वाच्चेत्यर्थः । न युज्यत इत्यस्य अर्थो न ज्योतिरादीति ।

'ಅತಃ' ಎಂಬ ಪದಕ್ಕೆ ಹೀಗರ್ಥ - ಕರ್ಮಕ್ರಮಾದಿ ವಿರೋಧ ಬರುವುದರಿಂದ ಯೋಗವು ರೂಢಿಗಿಂತಲೂ ದುರ್ಬಲವಾದ್ದರಿಂದ ಪರಮಾತ್ಮನಲ್ಲಿ ಶಬ್ದಗಳಿಗೆ ವ್ಯುತ್ಪತ್ತಿಯನ್ನು ಹೇಳಲು ಸಾಧ್ಯವಾಗದೆ ಇರುವುದರಿಂದಲೂ ಎಂದು ನಾಲ್ಕು ಅರ್ಥಗಳನ್ನು ತಿಳಿಯಬೇಕು. 'ನ ಯುಜ್ಯತೇ' ಎಂಬ ಭಾಷ್ಯದ ಮಾತಿಗೆ ಟೀಕೆಯಲ್ಲಿ 'ನ ಜ್ಯೋತಿರಾದಿ' ಎಂಬುದರಿಂದ ಅರ್ಥವನ್ನು ಹೇಳಿದ್ದಾರೆ.

'ಸ ಏವ' ಎಂಬ ಭಾಷ್ಯದ ವ್ಯಾಖ್ಯಾನ

भावदीपः – पूर्वपक्षफलमाह – न समन्वयेति ।। ज्योतिरादीति भाष्यमाकाङ्क्षितपूर्त्या व्याचष्टे – **ज्योतिष्टोमेति ।।** 'तत्तु' इत्यनुवृत्तस्य स एवेति भाष्यम् । तस्यार्थो हरिरेवेति ।

ಈ ಅಧಿಕರಣದ ಪೂರ್ವಪಕ್ಷಫಲವನ್ನು 'ನ ಸಮನ್ವಯ ಸೂತ್ರಮ್' ಎಂಬುದರಿಂದ ತೋರಿಸಿದ್ದಾರೆ. 'ಜ್ಯೋತಿರಾದಿ' ಎಂಬ ಭಾಷ್ಯದ ಮಾತನ್ನು ನೋಡಿದಾಗ ಹುಟ್ಟುವ ಆಕಾಂಕ್ಷೆಯನ್ನು ಪೂರ್ಣಮಾಡುವ ಪದಗಳನ್ನು ವಿವಕ್ಷಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ 'ಜ್ಯೋತಿಷ್ಟೋಮ' ಇತ್ಯಾದಿಯಾಗಿ. 'ತತ್ತು ಸಮನ್ವಯಾತ್' ಇತ್ಯಾದಿ ವಾಕ್ಯಗಳನ್ನು ಅನುವೃತ್ತಿ ಮಾಡಿಕೊಂಡಾಗ ಯಾವ ಅರ್ಥವು ಬರುತ್ತದೊ ಅದನ್ನು 'ಸ ಏವ' ಇತ್ಯಾದಿ ಭಾಷ್ಯವಾಕ್ಯದಿಂದ ಹೇಳಿದ್ದಾರೆ. ಇದನ್ನು ಟೀಕೆಯಲ್ಲಿ 'ಹರಿರೇವ' ಇತ್ಯಾದಿಯಾಗಿ ವ್ಯಾಖ್ಯಾನ ಮಾಡುತ್ತಾ ಸ್ಪಷ್ಟಪಡಿಸಿದ್ದಾರೆ.

'ತಾ ವಾ ಏತಾಃ' ಎಂಬ ಭಾಷ್ಯದ ವ್ಯಾಖ್ಯಾನ

भावदीपः – कुत इत्यतो हिशब्दो हेत्वर्थ इत्युपेत्य 'ता वा एताः' इत्यंशं व्याचष्टे – यस्मादिति ।।

'ಜ್ಯೋತಿರಾದಿ' ಶಬ್ದಗಳಿಂದ ಪರಮಾತ್ಮನೆ ಏಕೆ ಮುಖ್ಯವಾಗಿ ಪ್ರತಿಪಾದ್ಯನಾಗಬೇಕು ? ಎಂಬ ಪ್ರಶ್ನೆಗೆ 'ಹಿ' ಶಬ್ದವು ಹೇತ್ವರ್ಥದಲ್ಲಿದೆಯೆಂದು ಅಂಗೀಕಾರ ಮಾಡಿ ಭಾಷ್ಯದ 'ತಾವಾ ಏತಾಃ' ಇತ್ಯಾದಿ ಮಾತಿಗೆ 'ಯಸ್ಮಾತ್' ಎಂಬುದಾಗಿ ವ್ಯಾಖ್ಯಾನ ಮಾಡಿದ್ದಾರೆ.

'ತಥಾ' ಎಂಬ ಪದವನ್ನು ಅಧ್ಯಾಹಾರ ಮಾಡಬೇಕು

भावदीपः – इतीत्यनन्तरं सौत्रतथाशब्दमध्याहृत्य तस्यार्थमाह – सर्वशब्दाभिधेयत्वेनेति ।।

ಭಾಷ್ಯದಲ್ಲಿರುವ 'ಇತಿ' ಎಂಬ ಪದದ ಅನಂತರ ಸೂತ್ರದಲ್ಲಿರುವ 'ತಥಾ' ಎಂಬ ಪದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ಅದರಿಂದ ತಿಳಿಯುವ ಅರ್ಥವನ್ನು ಟೀಕೆಯಲ್ಲಿ 'ಸರ್ವಶಬ್ದಾಭಿಧೇಯತ್ವೇನ' ಎಂಬುದರಿಂದ ಹೇಳಿದ್ದಾರೆ.

ಅಧೀಯತೇ ಎಂಬುದರ ನಿಷ್ಪತ್ತಿ

भावदीपः – इङध्ययन इत्यस्य कर्तरि बहुवचनान्तं रूपम् । अतो हरिमित्युक्तम्। तेन सूत्रे तत्त्वित्यत्राप्यन्वेतीति सूचितम् ।

'ಅಧೀಯತೇ' ಎಂಬುದು 'ಇಙಧ್ಯಯನೇ' ಎಂಬ ಧಾತುವಿನಿಂದ ನಿಷ್ಪನ್ನವಾದ ಲಟ್‌ಲಕಾರದ ಬಹುವಚನ ಪ್ರಯೋಗ. (ಅಧೀತೇ, ಅಧೀಯಾತೇ, ಅಧೀಯತೇ) ಆತ್ಮನೇಪದಿಯಲ್ಲಿ ಕರ್ತರ್ಥದಲ್ಲಿರುವುದರಿಂದ 'ಹರಿಂ' ಎಂಬುದಾಗಿ ದ್ವಿತೀಯಾವಿಭಕ್ತಿಯನ್ನು ಹೇಳಿದ್ದು ಸಾಧುವಾಗಿದೆ. ಅಧೀಯತೇ ಎಂಬುದು ಕರ್ಮಣಿ ಪ್ರಯೋಗವೆಂದು ಆಪಾತತಃ ತೋರುವುದರಿಂದ 'ಹರಿಃ' ಎಂದು ಹೇಳಬೇಕಿತ್ತಲ್ಲವೆ? ಎಂಬ ಆಕ್ಷೇಪಕ್ಕೆ ಈಗ ಅವಕಾಶವಿಲ್ಲ. ಆದ್ದರಿಂದಲೇ 'ತತ್ತು' ಎಂಬುದು ಇಲ್ಲಿಯೂ ಅನುವೃತ್ತವಾಗುತ್ತದೆ.

'ಉಪಕ್ರಮಾತ್' ಎಂಬ ಸೂತ್ರ ಭಾಗಕ್ಕೆ ವ್ಯಾಖ್ಯಾನ

ಭಾವದೀಪಃ – उपक्रमादिति सूत्रांशस्य 'एष इमम्' इत्यादिभाष्यं तदवतार्य व्याचष्टे – न चेति ।।

'ಉಪಕ್ರಮಾತ್' ಎಂಬ ಸೂತ್ರದ ಭಾಗಕ್ಕೆ ಭಾಷ್ಯದಲ್ಲಿ 'ಏಷ ಇಮಮ್' ಇತ್ಯಾದಿಯಾಗಿ ವ್ಯಾಖ್ಯಾನ ಮಾಡಿದ್ದಾರೆ. ಭಾಷ್ಯಕ್ಕೆ ಅವತಾರಿಕೆ ನೀಡಿ 'ನ ಚ' ಇತ್ಯಾದಿ ಟೀಕೆಯಿಂದ ಭಾಷ್ಯವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ.

'ಶತರ್ಚಿ' ಶ್ರುತಿಯು ಅಂತಿಮಪ್ರಾಣಾಧಿಕರಣದಲ್ಲಿದೆ

ಭಾವದೀಪಃ – एष प्राणशब्देन प्रकृतपरमात्मा । इमं लोकं ब्रह्मादिदेहमभ्यार्चत् प्राविशादिति व्याख्यातेयं श्रुतिः पादान्त्यप्राणनये । प्रागुक्तशङ्कामनूद्य निराह – नच शब्दानामन्यत्रेति ।।

'ಏಷಃ' ಎಂಬ ಪದಕ್ಕೆ ಪ್ರಾಣಶಬ್ದದಿಂದ ಪ್ರಕೃತನಾದ ಪರಮಾತ್ಮನು ಎಂದರ್ಥ. 'ಇಮಮ್ ಲೋಕಮ್' ಎಂದರೆ ಬ್ರಹ್ಮಾದಿಗಳ ದೇಹವನ್ನು ಎಂದರ್ಥ. 'ಅಭ್ಯಾರ್ಚತ್' ಎಂಬ ಪದಕ್ಕೆ ಪ್ರವೇಶ ಮಾಡಿದನು ಎಂದರ್ಥ. ಹೀಗೆ ಈ ಶ್ರುತಿಯನ್ನು ಅಂತಿಮಪ್ರಾಣಾಧಿಕರಣದಲ್ಲಿ ವ್ಯಾಖ್ಯಾನಿಸಲಾಗಿದೆ. ಹಿಂದೆ ಮಾಡಿದ ಆಶಂಕೆಯನ್ನು ಅನುವಾದ ಮಾಡಿ ನಿರಾಕರಣೆ ಮಾಡುತ್ತಿದ್ದಾರೆ. 'ನ ಚ ಶಬ್ದಾನಾಮ್' ಇತ್ಯಾದಿಯಾಗಿ.

'ಆಚಕ್ಷತೇ' ಎಂಬುದರ ಸ್ವಾರಸ್ಯ

ಭಾವದೀಪಃ – तस्मादिति ।। तं देहं यस्माच्छतं वर्षाण्यभ्यार्चत् तस्मादित्यर्थः ।। **योगापहारित्वमिति ।।** अन्यथा पङ्कजपदात् भेदकादि-

प्रतीतिप्रसङ्ग इति भावः ।। आचक्षत इति ।। प्रयोगबाहुल्यस्य रूढित्वादिति भावः ।

ಟೀಕೆಯಲ್ಲಿ ಉದಾಹರಿಸಿದ ಶ್ರುತಿಯಲ್ಲಿರುವ 'ತಸ್ಮಾದ್' ಎಂಬುದರ ಅರ್ಥ ಹೀಗಿದೆ - ಯಾವ ಕಾರಣದಿಂದ ದೇಹವನ್ನು ನೂರು ವರ್ಷಗಳ ಕಾಲ ಪ್ರವೇಶಿಸಿದ್ದನೋ ಆ ಕಾರಣದಿಂದ ಎಂದು. 'योगापहारित्वम्' ಎಂಬ ಟೀಕೆಯಲ್ಲಿ ಹೇಳಿದ್ದಾರೆ. 'ಪಂಕಜ' ಮೊದಲಾದ ಶಬ್ದಗಳಿಗೆ ರೂಢ್ಯರ್ಥವನ್ನು ಸ್ವೀಕರಿಸಿ ಯೋಗಾರ್ಥವನ್ನು ಬಿಡುವುದು ಕಂಡಿದೆ. ಒಂದುವೇಳೆ ಯೋಗಾರ್ಥವನ್ನೇ ಸ್ವೀಕರಿಸುವುದಾದರೆ ಪಂಕಜಪದದಿಂದ ಕಪ್ಪೆ ಮೊದಲಾದ ಅರ್ಥಗಳ ಪ್ರತೀತಿ ಬರದೇ ಇರಬೇಕಾದೀತು, ಎಂಬುದು ಇದರ ಅಭಿಪ್ರಾಯ 'आचक्षते' ಎಂಬ ಪದದಿಂದ ಪ್ರಯೋಗಬಾಹುಲ್ಯವೇ ರೂಢಿಯಾದ್ದರಿಂದ ಶ್ರುತಿಯಲ್ಲಿ 'आचक्षते' ಎಂಬ ಪದದಿಂದ ಯೋಗವು ವಿದ್ವದ್ರೂಢಿಸಹಿತವಾಗಿದೆ ಎಂಬ ಅಭಿಪ್ರಾಯವನ್ನು ತಿಳಿಯಬೇಕು.

ವಿದ್ವದ್ರೂಢಿಯನ್ನು ವಿವಕ್ಷಿಸಲು ಕಾರಣ

भावदीपः – यद्यपि श्रौतस्य स्मार्तस्य वा केवलयोगस्यैव अज्ञरूढितः प्राबल्यमस्त्येव । अन्यथा श्रुत्यादौ योगोक्तेर्वैयर्थ्यापत्तेः उपपादितमेतन्निपुणतरं चन्द्रिकायां कम्पनादित्यत्र ।।

ಪ್ರಶ್ನೆ- ಶ್ರುತಿ ಅಥವಾ ಸ್ಮೃತಿಯಲ್ಲಿರುವ ಪದಗಳು ಕೇವಲ ಯೋಗಾರ್ಥವಾಗಿದ್ದರೂ ಸಾಕು. ಅಜ್ಞರೂಢಿಗಿಂತಲೂ ಪ್ರಬಲವಾಗಿರುತ್ತವೆ. ಇಲ್ಲದಿದ್ದರೆ ಶ್ರುತ್ಯಾದಿಗಳಲ್ಲಿ ಯೋಗವನ್ನು ಹೇಳಿದ್ದೇ ವ್ಯರ್ಥವಾಗುತ್ತದೆ. ಇದನ್ನು 'कंपनात्' ಎಂಬ ಸೂತ್ರಕ್ಕೆ ವ್ಯಾಖ್ಯಾನ ಮಾಡುವಾಗ ತಾತ್ಪರ್ಯ ಚಂದ್ರಿಕೆಯಲ್ಲಿ ಅತ್ಯಂತ ಸ್ಪಷ್ಟವಾಗಿ ಪ್ರತಿಪಾದನೆ ಮಾಡಿದ್ದಾರೆ. ಆದ್ದರಿಂದ ವಿದ್ವದ್‌ರೂಢಿಯನ್ನೇಕೆ ಇಲ್ಲಿ ಸಮರ್ಥಿಸಬೇಕು?

ಅಪ್ಯಭ್ಯುಪೇತ್ಯವಾದ

भावदीपः – तथाप्यभ्युपेत्यवादेन श्रौतयोगस्याज्ञरूढ्यपहारकत्वेऽपि विद्वद्रूढिसाहित्यमुक्तमिति ध्येयम् ।।

ಉತ್ತರ - ಹೌದು ಅಂಗೀಕಾರವಾದ ಮಾಡಿ ಇಲ್ಲಿ ವಿದ್ವದ್‌ರೂಢಿಯನ್ನು ಹೇಳಿದ್ದಾರೆ. ಶ್ರುತಿಸಿದ್ಧವಾದ ಯೋಗವು ಅಜ್ಞರೂಢಿಗಿಂತ ಪ್ರಬಲವಾಗಿದ್ದರೂ ವಿದ್ವದ್‌ರೂಢಿಯಿಂದ ಸಹಿತವಾಗಿದೆ ಎಂದು ಹೇಳಿದ್ದಾರೆ.

ಶ್ರುತಿಯಿಂದಲೇ ಸಕಲಶಬ್ದ ವಾಚ್ಯತ್ವ

ಭಾವದೀಪಃ – अत इति ।। महायोगविद्वद्रूढिभ्यां सर्वशब्दवाच्यत्वस्य श्रौतत्वादित्यर्थः ।

'ಅತಃ' ಎಂಬ ಪದಕ್ಕೆ ಮಹಾಯೋಗ ಹಾಗೂ ವಿದ್ವದ್‌ರೂಢಿಗಳಿಂದ ಪರಮಾತ್ಮನು ಕರ್ಮಾದಿಪ್ರತಿಪಾದಕ ಶಬ್ದಗಳಿಂದ ಪ್ರತಿಪಾದ್ಯನಾಗಿದ್ದಾನೆ. ಹೀಗೆ ಸಕಲಶಬ್ದವಾಚ್ಯತ್ವವು ಶ್ರುತಿಯಿಂದಲೇ ಸಿದ್ಧವಾಗಿರುವುದರಿಂದ ಎಂದರ್ಥ.

'ವಸಂತೇ ಉಪಕ್ರಮಾತ್' ಎಂದೇಕೆ ಸೂತ್ರವಿಲ್ಲ?

ಭಾವದೀಪಃ – वसन्ते वसन्ते ज्योतिषा यजेतेति श्रुतौ वसन्तपदस्यैवादौ श्रुतत्वेन सूत्रे वसन्त उपक्रमादिति वक्तव्ये कुतो ज्योतिषा उक्तिरित्यत आह – ज्योतिः शब्दस्येति तु शब्द इति ।। सौत्र इत्यर्थः । पञ्चमी ल्यब्लोपे उपक्रम्येत्यर्थो दर्शितः ।

''ವಸಂತೇ ವಸಂತೇ ಜ್ಯೋತಿಷಾ ಯಜೇತ'' ಎಂಬ ಶ್ರುತಿಯಲ್ಲಿ 'ವಸಂತ' ಪದವೇ ಮೊದಲು ಶ್ರುತವಾಗಿದೆ. ಅದಕ್ಕೆ ಅನುಗುಣವಾಗಿ ಸೂತ್ರದಲ್ಲಿ 'ವಸಂತ ಉಪಕ್ರಮಾತ್' ಎಂದೇ ಹೇಳಬೇಕಿತ್ತು. ಹೀಗೆ ಹೇಳದೆ 'ಜ್ಯೋತಿರುಪಕ್ರಮಾತ್' ಎಂದೇಕೆ ಹೇಳಿದರು ? ಎಂಬ ಪ್ರಶ್ನೆಗೆ 'ಜ್ಯೋತಿಃ ಶಬ್ದಸ್ಯೇತಿ ತು ಶಬ್ದಃ' ಎಂಬ ಟೀಕೆಯಿಂದ ಉತ್ತರಿಸಿದ್ದಾರೆ ಇಲ್ಲಿ 'ಸೌತ್ರೇ' ಎಂಬುದನ್ನು ಅನುವೃತ್ತಿ ಮಾಡಿಕೊಳ್ಳಬೇಕು. ಸೂತ್ರದಲ್ಲಿರುವ ಪಂಚಮೀ ವಿಭಕ್ತಿಯು ಲ್ಯಬ್‌ಲೋಪನಿಮಿತ್ತಕವಾಗಿದೆ. ಆದ್ದರಿಂದ 'ಉಪಕ್ರಮ್ಯ' ಎಂಬ ಅರ್ಥವನ್ನು ಹೇಳಿದಂತಾಗುತ್ತದೆ.

ಋಷಿವಾಚಕಶಬ್ದಗಳಷ್ಟೇ ಹರಿಪರವಲ್ಲ

ಭಾವದೀಪಃ – न केवलमृष्यादीनां नाम भगवतः सर्वे वेदा अपि तस्यैव नाम किमु च वेदाः समुद्रघोषवृक्षपतनभेरीताडनादिसर्वघोषा अपि तस्यैव

नामानि यथायोग्यं योजनीयानि इत्यैतरेयभाष्यदिशा श्रुत्यर्थमाह – यास्ता इति ।।

''न केवलमृष्यादीनां नाम भगवतः सर्वे वेदा अपि तस्यैव नाम किमु च वेदाः समुद्रघोषवृक्षपतनभेरीताडनादिसर्वघोषा अपि तस्यैव नामानि यथायोग्यं योजनीयानि'' ''ಕೇವಲ ಋಷಿವಾಚಕ ಪದಗಳಷ್ಟೇ ಭಗವಂತನ ಹೆಸರುಗಳಲ್ಲ. ವೇದದಲ್ಲಿರುವ ಸಕಲ ಶಬ್ದಗಳು ಕೂಡ ಭಗವಂತನ ಹೇಸರೆ ಆಗಿವೆ. ಹೀಗಿರುವಾಗ ಸಮುದ್ರದ ಶಬ್ದ, ಮರಬೀಳುವ ಶಬ್ದ, ನಗಾರಿಯ ಶಬ್ದ, ಮೊದಲಾದ ಧ್ವನ್ಯಾತ್ಮಕಶಬ್ದಗಳು ಭಗವಂತನ ನಾಮಗಳಾಗಿವೆ. ಅವನ ಆಯಾ ಗುಣಗಳಿಗೆ ಅನುಸಾರಿಯಾಗಿ ಆಯಾ ಧ್ವನಿಗಳನ್ನು ಅರ್ಥೈಸಬೇಕು'' ಎಂಬುದರಲ್ಲಿ ಸಂದೇಹವೇ ಇಲ್ಲ. ಹೀಗೆ ಐತರೇಯ ಭಾಷ್ಯದಲ್ಲಿ ಹೇಳಿದ್ದಾರೆ. ಅದಕ್ಕೆ ಅನುಗುಣವಾಗಿ ಶ್ರುತಿಯು ಅರ್ಥವನ್ನು ಟೀಕೆಯಲ್ಲಿ 'ಯಾಸ್ತಾಃ' ಇತ್ಯಾದಿಯಾಗಿ ವ್ಯಾಖ್ಯಾನ ಮಾಡಿದ್ದಾರೆ.

ಪ್ರಥಮಾಂತವಾಗಿ ಏಕೆ ವ್ಯಾಖ್ಯಾನ ಮಾಡಿರುವರು ?

भावदीपः – व्याहर्तव्यं तच्च विष्णुरेवेति ।। यद्यप्यैतरेयभाष्ये एकमेव व्याहरणं एकमेव नाम निर्दोषगुणपूर्तिवाचित्वादेकप्रकारता । प्राणे नारायण एव नारायणविषय एव व्यवहार इति प्राणपदं सप्तम्यन्तं कृत्वा योजितम्। तथापि प्रथमान्तमुपेत्य व्याख्यानान्तरमेतदित्यदोषः ।

''ವ್ಯಾಹರ್ತವ್ಯಂ ತಚ್ಚ ವಿಷ್ಣುರೇವೇತಿ'' ಎಂಬುದಾಗಿ ಟೀಕೆಯಲ್ಲಿ ಪ್ರಥಮಾಂತವಾಗಿ ವ್ಯಾಖ್ಯಾನ ಮಾಡಿದ್ದಾರೆ. ಆದರೆ ಐತರೇಯ ಭಾಷ್ಯದಲ್ಲಿ ''ಏಕಮೇವ ವ್ಯಾಹರಣಂ ಏಕಮೇವ ನಾಮ ನಿರ್ದೋಷ-ಗುಣಪೂರ್ತಿವಾಚಿತ್ವಾದೇಕಪ್ರಕಾರತಾ । ಪ್ರಾಣೇ ನಾರಾಯಣ ಏವ ನಾರಾಯಣವಿಷಯ ಏವ ವ್ಯಾವಹಾರ'' ಐತರೇಯಭಾಷ್ಯದಲ್ಲಿ ಹೀಗೆ ವ್ಯಾಖ್ಯಾನ ಮಾಡಿದ್ದಾರೆ - ''ಏಕೈವವ್ಯಾಹೃತಿಃ'' ಎಂದರೆ ಒಂದೇ ವ್ಯವಹಾರ ಒಂದೇ ರೀತಿಯ ಹೆಸರು. ಈ ಎಲ್ಲಾ ಶಬ್ದಗಳು ಭಗವಂತನ ನಿರ್ದೋಷಗುಣಪೂರ್ಣತ್ವವನ್ನೇ ಹೇಳುತ್ತವೆ. ಆದ್ದರಿಂದ ಒಂದೇ ರೀತಿಯಾಗಿವೆ. 'ಪ್ರಾಣ ಏವ' ಎಂದರೆ ಪ್ರಾಣನೆನಿಸಿದ ನಾರಾಯಣನ ವಿಷಯದಲ್ಲಿಯೇ ವ್ಯವಹಾರ ಹೊಂದಿವೆ. ('ವ್ಯವಹಾರ' ಶಬ್ದಕ್ಕೆ 'ಹೆಸರು' ಎಂದರ್ಥ). ಹೀಗೆ ಪ್ರಾಣಶಬ್ದವನ್ನು ಸಪ್ತಮ್ಯಂತವಾಗಿ ವಿವಕ್ಷಿಸಿ ಯೋಜನೆ ಮಾಡಿದ್ದಾರೆ. ಆದರೆ ಟೀಕೆಯಲ್ಲಿ ಪ್ರಥಮಾಂತವಾಗಿ ಏಕೆ ವ್ಯಾಖ್ಯಾನ ಮಾಡಿದರು ?

ಉತ್ತರ - ಹೌದು; ಆದರೂ ಇದು ಮತ್ತೊಂದು ವ್ಯಾಖ್ಯಾನವೆಂದು ತಿಳಿಯಬೇಕು.

ಅಲ್ಪಜ್ಞರಿಗೂ ಕೂಡ ವಿಷ್ಣುಗುಣ ಬೋಧಕಗಳು

भावदीपः – ऋचस्तु विशेषत इन्द्रादिनामवतो विष्णोर्गुणानल्पज्ञानामपि प्रकाशयन्तीति प्राणे नारायण एवेति विद्यादिति तद्भाष्यदिशैवार्थमाह – तत्रर्चस्त्विति ।।१।।

"ಋಚಸ್ತು ವಿಶೇಷತ ಇಂದ್ರಾದಿನಾಮವತೋ ವಿಷ್ಣೋರ್ಗುಣಾನಲ್ಪಜ್ಞಾನಾಮಪಿ ಪ್ರಕಾಶ್ಯಂತೀತಿ ಪ್ರಾಣೇ ನಾರಾಯಣ ಏವೇತಿ ವಿದ್ಯಾದಿತಿ'' ''ಪ್ರಾಣ ಋಚ ಇತ್ಯೇವ ವಿದ್ಯಾತ್'' ಎಂದರೆ ಋಕ್‌ಗಳು ವಿಶೇಷವಾಗಿ ಇಂದ್ರಾದಿ ನಾಮಗಳಿಂದ ಪ್ರತಿಪಾದ್ಯನಾದ ವಿಷ್ಣುವಿನ ಗುಣಗಳನ್ನು ಅಲ್ಪಜ್ಞರಿಗೂ ಕೂಡ ತಿಳಿಸಿಕೊಡುತ್ತವೆ. ಆದ್ದರಿಂದ ವಿಶೇಷವಾಗಿ ಪ್ರಾಣಪರವಾಗಿವೆ. ನಾರಾಯಣ ಪರವಾಗಿವೆ ಎಂದು ಇದರ ಅರ್ಥ. ಹೀಗೆ ಐತರೇಯ ಭಾಷ್ಯದಲ್ಲಿ ವ್ಯಾಖ್ಯಾನ ಮಾಡಿದ್ದಾರೆ. ಅದಕ್ಕೆ ಅನುಗುಣವಾಗಿಯೇ ಟೀಕೆಯಲ್ಲಿ ತತ್ರ ಋಚಸ್ತು ಇತ್ಯಾದಿಯಾಗಿ ವ್ಯಾಖ್ಯಾನ ಮಾಡಿದ್ದಾರೆ.

ಬ್ರಹ್ಮಸೂತ್ರ

'ಕಲ್ಪನೋಪದೇಶಾಚ್ಚ ಮಧ್ವಾದಿವದವಿರೋಧಃ' ಎಂಬ ಸೂತ್ರದ ವ್ಯಾಖ್ಯಾನ

ब्रह्मसूत्रम् – ।। कल्पनोपदेशाच्च मध्वादिवदविरोधः ।। २ ।।

ಸೂತ್ರಾರ್ಥ - ಮಧುವಿದ್ಯೆಯಲ್ಲಿ 'ಮಧು'ಶಬ್ದವನ್ನು ಹೇಗೆ ಆದಿತ್ಯನಲ್ಲಿ ಪ್ರಯೋಗಿಸಿದ್ದಾರೋ, ಅದರಂತೆ ಸಕಲ ಶಬ್ದಗಳ ಅರ್ಥವನ್ನು ಪರಮಾತ್ಮನಲ್ಲಿ ತೋರಿಸಿ, ಆಯಾ ಶಬ್ದ ಪ್ರತಿಪಾದ್ಯತ್ವವನ್ನು ಐತರೇಯೋಪನಿಷತ್ತಿನಲ್ಲಿ ತೋರಿಸಲಾಗಿದೆ. ಆದ್ದರಿಂದ ಜ್ಯೋತಿಷ್ಟೋಮಾದಿ ಕರ್ಮಗಳು ಸಿದ್ಧವಾಗುವುದಿಲ್ಲ ಎಂಬ ವಿರೋಧಕ್ಕೆ ಅವಕಾಶವಿಲ್ಲ.

ಅರ್ಥ -- ಚ ಶಬ್ದವು ಏವಾರ್ಥದಲ್ಲಿದೆ. ಅಥವಾ ಸಮುಚ್ಚಯಾರ್ಥದಲ್ಲೂ ಇದೆ. ಆದ್ದರಿಂದ 'ಮಧ್ವಾದಿವತ್' = ಯಾವ ರೀತಿಯಾಗಿ ಮಧುವಿದ್ಯೆಯಲ್ಲಿರುವ 'ಮಧು' ಮೊದಲಾದ ಶಬ್ದಗಳು ವಿಷ್ಣುವಾಚಿಯಾಗಿದ್ದರೂ, ಅವಿರೋಧಃ = ಲೋಕಸಿದ್ಧವಾದ ಜೇನಿನಲ್ಲಿ ಶಬ್ದವಿಲ್ಲವೆಂಬ ವಿರೋಧಕ್ಕೆ ಅವಕಾಶವಿಲ್ಲವೋ, ತಥಾ = ಅದೇ ರೀತಿಯಾಗಿ, ಪರಮಾತ್ಮನು ಸರ್ವಶಬ್ದವಾಚ್ಯನೆಂದು ಅಂಗೀಕಾರ ಮಾಡಿದರೂ,

ಜ್ಯೋತಿಷ್ಟೋಮಾದಿ ಕರ್ಮಗಳೇ ಇಲ್ಲದಾಗಬೇಕಾದೀತು ಎಂಬ ವಿರೋಧಕ್ಕೂ ಅವಕಾಶವಿಲ್ಲ. ಏಕೆಂದರೆ ಶಬ್ದಗಳು ಬೇರೆಡೆ ಯೋಗರೂಢಿವೃತ್ತಿಯಿಂದ ಪ್ರಸಿದ್ಧವಾಗಿದ್ದರೂ ಈಶ್ವರನಲ್ಲಿ ಮಹಾಯೋಗವೃತ್ತಿಯಿಂದ ಇರುತ್ತದೆಂದು ಅಂಗೀಕರಿಸಿದ್ದರಿಂದ ವಿರೋಧವಿಲ್ಲ. ಇದನ್ನು ಹೇಗೆ ಹೇಳುತ್ತೀರಿ ಎಂದರೆ, ಕಲ್ಪನೋಪದೇಶಾತ್ = 'ಪ್ರಾಣಾಯಚಃ' ಎಂಬಲ್ಲಿ ವಿಷ್ಣುವೇ ಸರ್ವಶಬ್ದವಾಚ್ಯನಾಗಿದ್ದಾನೆಂದು ವಿಷ್ಣುವಿನಲ್ಲಿ ತೋರಿಸಿ, ಉಪದೇಶಾತ್ = ಸರ್ವಶಬ್ದವಾಚ್ಯತ್ವವನ್ನು 'ತಾ ವಾ ಏತಾಃ' ಎಂಬುದಾಗಿ ಉಪದೇಶ ಮಾಡಿರುವುದರಿಂದ, ಇಂತಹ ಉಪದೇಶವಾದರೂ ಮುಖ್ಯಗುಣವತ್ವವೆಂಬ ಮಹಾಯೋಗವೃತ್ತಿಯನ್ನು ಒಪ್ಪದೇ ಕೂಡುವುದಿಲ್ಲ.

॥ ಶ್ರೀವೇದವ್ಯಾಸದೇವರಿಂದ ರಚಿಸಲ್ಪಟ್ಟ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ
ಜ್ಯೋತಿರುಪಕ್ರಮಾಧಿಕರಣವು ಸಮಾಪ್ತವಾಯಿತು ॥

ಬ್ರಹ್ಮಸೂತ್ರಭಾಷ್ಯ

ಪರಮಾತ್ಮ ಪ್ರತಿಪಾದ್ಯನಾದರೂ ಲೌಕಿಕಕರ್ಮಗಳಿಗೆ ಚ್ಯುತಿ ಇಲ್ಲ

ब्रह्मसूत्रभाष्यम् – मधुविद्यादिवत् सर्वशब्दार्थत्वेन परस्य कल्पनोपदेशान्न कर्मक्रमादिविरोधः ॥२॥

॥ इति श्रीमदानन्दतीर्थभगवत्पादाचार्यविरचिते ब्रह्मसूत्रभाष्ये ज्योतिरुपक्रमाधिकरणम् ॥ २ ॥

ಅನುವಾದ - 'ಅತೋ ವಾ ಆದಿತ್ಯೋ ದೇವಮಧು' ಇತ್ಯಾದಿ ಮಧುವಿದ್ಯೆಯಲ್ಲಿ 'ಮಧು' ಶಬ್ದವನ್ನು ಸೂರ್ಯಾಂತರ್ಗತನಾದ ವಿಷ್ಣುವಿನಲ್ಲಿ ಪ್ರಯೋಗಿಸಲಾಗಿದೆ. ಆದರೂ ಕೂಡ ಲೋಕಸಿದ್ಧವಾದ ಜೇನು ಎಂಬರ್ಥವನ್ನೇನು ಬಿಟ್ಟಿಲ್ಲ. ಅದರಂತೆ ಪರಮಾತ್ಮನಲ್ಲಿ ಕರ್ಮಾದಿವಾಚಕ ಸಕಲಶಬ್ದಗಳನ್ನು ಸಮನ್ವಯ ಮಾಡಬಹುದು. ಆದರೂ ಕೂಡ ಆಯಾ ಲೌಕಿಕಕರ್ಮಗಳನ್ನು ಕರ್ಮವಾಚಕ ಶಬ್ದಗಳು ಹೇಳುತ್ತವೆ. ಹೀಗೆ ಐತರೇಯ ಶಾಖೆಯಲ್ಲಿ ನಿರ್ಣಯಿಸಲಾಗಿದೆ. ಆದ್ದರಿಂದ ಕರ್ಮಾದಿಗಳೇ ಲೋಪವಾಗಲಿ ಎಂಬ ವಿರೋಧಕ್ಕೆ ಅವಕಾಶವಿಲ್ಲ.

ಪ್ರತಿಪದಾರ್ಥ -- ಜ್ಯೋತಿರಾದಿ ಶಬ್ದವಾಚ್ಯತ್ವವು ಪರಮಾತ್ಮನಲ್ಲಿ ಹೇಗೆ ಬರುತ್ತದೆ? ಹಾಗಾದಲ್ಲಿ ಕರ್ಮಕ್ರಮಾದಿಗಳ ವಿರೋಧ ಬರುತ್ತದಲ್ಲವೇ? ಜ್ಯೋತಿಷ್ಟೋಮಾದಿ ಶಬ್ದಗಳಿಗೆ ಅನ್ಯಪರತ್ವವನ್ನು ಒಪ್ಪದಿದ್ದರೆ ಪರಮಾತ್ಮನಲ್ಲಿ ಆಯಾ ಶಬ್ದಗಳಿಗೆ ವ್ಯುತ್ಪತ್ತಿಯೇ ಕೂಡದಿರಬೇಕಾದೀತು. ಈ ಆಶಂಕೆಯನ್ನು ಪರಿಹರಿಸುತ್ತಾ ಸೂತ್ರವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ. –

ಮಧುವಿದ್ಯಾದಿವತ್ = ಮಧುವಿದ್ಯೆಯಲ್ಲಿ ಮಧುಶಬ್ದವನ್ನು ಸೂರ್ಯಾಂಗತನಾದ ವಿಷ್ಣುವಿನಲ್ಲಿ ಪ್ರಯೋಗಿಸಿದಂತೆ, ಸರ್ವಶಬ್ದಾರ್ಥತ್ವೇನ = ಸಮಸ್ತ ಶಬ್ದಗಳ ಅರ್ಥವನ್ನು ತೋರಿಸಿ, ಆಯಾ ಶಬ್ದವಾಚ್ಯತ್ವವನ್ನು, ಪರಸ್ಯ = ಪರಮಾತ್ಮನಲ್ಲಿ, ಕಲ್ಪನೋಪದೇಶಾಚ್ಚ = ನಿರ್ಧಾರ ಮಾಡಿರುವುದರಿಂದ, ನ ಕರ್ಮಕ್ರಮಾದಿ ವಿರೋಧಃ = ಕರ್ಮಾದಿಗಳೇ ಲೋಪವಾಗಲಿ ಎಂಬ ವಿರೋಧಕ್ಕೆ ಅವಕಾಶವಿಲ್ಲ.

॥ ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ವಿರಚಿತವಾದ ಬ್ರಹ್ಮಸೂತ್ರಭಾಷ್ಯದ ಕನ್ನಡಾನುವಾದದಲ್ಲಿ ಜ್ಯೋತಿರುಪಕ್ರಮಾಧಿಕರಣವು ಸಮಾಪ್ತವಾಯಿತು ॥

ಸತ್ತರ್ಕದೀಪಾವಳಿ

ಛಾಂದೋಗ್ಯದಲ್ಲಿ ಮಧುವಿದ್ಯೆಯಂತೆ

सत्तर्कदीपावलिः –

न केवलं व्युत्पत्तिसम्भवात् कर्मक्रमादिविरोधापरिहारः किं तर्हीत्यत आह – कल्पनेत्यादिना । द्व्याख्यरमातिरोवंशाश्रितान्तरिक्षाख्यवायुमध्वरूप-रथादित्यमण्डलान्तर्गतस्य भगवतः पञ्चमूर्तेरग्र्यादिप्रधानवस्वादिमधुकरमुख-संस्पर्शेन पञ्चधा विभिन्न ऋगादि सर्ववेदाख्यपुष्पोत्थ यशस्तेज इन्द्रियवीर्यान्ना द्यात्मकमधुरसत्वे कल्पनापि मधुविद्या

ಕೇವಲ ಶಬ್ದಗಳ ವ್ಯುತ್ಪತ್ತಿಯಿಂದ ಕರ್ಮಕ್ರಮಾದಿಗಳ ವಿರೋಧವು ಪರಿಹಾರವಾಗುವುದಲ್ಲ. ಮತ್ತೇನು ? ಎಂಬುದನ್ನು ಕಲ್ಪನೋಪದೇಶಾಚ್ಚ ಎಂಬ ಸೂತ್ರದಿಂದ ಹೇಳುತ್ತಿದ್ದಾರೆ. ಹೇಗೆ

ಮಧುಶಬ್ದವನ್ನು ಆದಿತ್ಯನಲ್ಲಿ ಪ್ರಯೋಗಿಸಲಾಗಿದೆಯೋ, ಅದರಂತೆ ಸಕಲಶಬ್ದವಾಚ್ಯತ್ವವನ್ನು ಪರಮಾತ್ಮನಲ್ಲಿ ತೋರಿಸಲಾಗಿದೆ ಎಂಬುದು ಸೂತ್ರದ ಅಭಿಪ್ರಾಯ.

'ದ್ಯು' ಎಂಬ ರಮೆಯೇ ತೀರೋಂಶಳಾಗಿದ್ದಾಳೆ. ಅವಳಲ್ಲಿ ಅಂತರಿಕ್ಷ ಎಂಬ ವಾಯುವು ಜೇನುಗೂಡಾಗಿ ಆಶ್ರಿತರಾಗಿದ್ದಾರೆ. ವಾಯು ಆಶ್ರಿತನಾಗಿದ್ದಾನೆ. ಇವನಲ್ಲಿ ಭಗವಂತನು ಅಂತರ್ಯಾಮಿಯಾಗಿ ನೆಲಸಿದ್ದಾನೆ. ಈ ಭಗವಂತನೇ ಸೂರ್ಯಮಂಡಲದಲ್ಲಿ ನೆಲಸಿ ಪಂಚರೂಪಗಳಿಂದ ಎಲ್ಲೆಡೆಯೂ ಐದು ಬಣ್ಣದಲ್ಲಿ ಕಂಗೊಳಿಸುತ್ತಿದ್ದಾನೆ. ಇವನು ಅಗ್ನಿ ಮೊದಲಾದ ಪ್ರಧಾನ ವಸು ಮೊದಲಾದ ದೇವತೆಗಳೆಂಬ ಜೇನುನೊಣಗಳ ಮುಖಸಂಸ್ಪರ್ಶದಿಂದ ಐದುರೂಪಗಳಿಂದ ಕಂಗೊಳಿಸುತ್ತಿದ್ದಾನೆ. ಇವನೇ ಋಗಾದಿ ಸರ್ವವೇದಗಳಿಂದ ಪ್ರತಿಪಾದ್ಯನಾಗಿದ್ದಾನೆ. ಋಗಾದಿ ಸರ್ವವೇದಗಳೆಂಬ ಹೂವಿನಿಂದ ಹುಟ್ಟಿದ ಯಶಸ್ಸು, ತೇಜಸ್ಸು, ವೀರ್ಯ ಮೊದಲಾದ ಮಧುರಸ ಸ್ವರೂಪನಾಗಿದ್ದಾನೆ. ಆದ್ದರಿಂದ ಇವನೇ 'ಮಧುವಿದ್ಯೆ' ಎಂದು ಕರೆಸಿಕೊಳ್ಳುತ್ತಾನೆ.

ವಿವರಣೆ - ಛಾಂದೋಗ್ಯೋಪನಿಷತ್ತಿನಲ್ಲಿರುವ ಮಧುವಿದ್ಯೆನ್ನು ಯಥಾವತ್ತಾಗಿ ನೀಡಲಾಗಿದೆ (ಸಂಗ್ರಹ)

ಅಸೌ ವಾ ಆದಿತ್ಯೋ ದೇವಮಧು । ತಸ್ಯ ದ್ಯೌರೇವ ತಿರಶ್ಚೀನವಂಶಃ । ಅಂತರಿಕ್ಷಮಪೂಪಃ। ಮರೀಚಯಃ ಪುತ್ರಾಃ।

ಜ್ಞಾನಿಗಳಿಗೆ ಗೋಚರಾಗುವ, ಆದಿತ್ಯನಲ್ಲಿರುವ, ಆದಿತ್ಯನಾಮಕನಾದ ವಿಷ್ಣುವು ದೇವತೆಗಳಿಗೆ ಆಶ್ರಯ ಮತ್ತು ಅಧಿಕವಾದ ಸುಖಾನುಭವಪೂರ್ಣನಾದ್ದರಿಂದ ಮಧುನಾಮಕನಾಗಿರುವನು. ದೇವತೆಗಳಿಗೆ ಜೇನುತುಪ್ಪದಂತೆ ಆಹ್ಲಾದಕನೂ ಆಗಿರುವನು. ದ್ಯುಲೋಕದಲ್ಲಿರುವ, ದ್ಯುನಾಮಕಳಾದ ಲಕ್ಷ್ಮಿಯು ಭಗವಂತನ ಬದಿಯಲ್ಲಿ ಬಗ್ಗಿನಿಂತು ನಮಸ್ಕರಿಸಿ, ಅವನನ್ನು ವಶಪಡಿಸಿಕೊಂಡಿರುವಳು. ಆ ಲಕ್ಷ್ಮಿಯು ಜೇನುಗೂಡಿಗೆ ಆಶ್ರಯವಾದ ಅಡ್ಡತೊಲೆಯಂತೆ, ಶ್ರೀಹರಿಯ ಸಾನಿಧ್ಯವುಳ್ಳ ವಾಯುವಿಗೆ ಆಶ್ರಯಳು. ತನ್ನೊಳಗೆ ಶ್ರೀಹರಿಯನ್ನು ಕಾಣುವುದರಿಂದ ಅಂತರಿಕ್ಷನಾಮಕನಾದ, ಅಂತರಿಕ್ಷಲೋಕದಲ್ಲಿರುವ ವಾಯುವು, ಜೇನಿನಂತೆ ಆಹ್ಲಾದಕನಾದ ಶ್ರೀಹರಿಯ ಸನ್ನಿಧಾನ ಪಾತ್ರನಾದ್ದರಿಂದ ಜೇನುಗೂಡಿನಂತೆ, ಜೇನಿನಂಥ ಶ್ರೀಹರಿಯನ್ನು ಪ್ರಕಟಗೊಳಿಸುವುದರಿಂದ ವಸು-ರುದ್ರಾದಿಗಳು ಜೇನುಹುಳುಗಳಂತೆ. ಸೂರ್ಯಕಿರಣಗಳನ್ನಾಶ್ರಯಿಸಿರುವ ಮರೀಚ್ಯಾದಿ ಋಷಿಗಳು ಜೇನುಹುಳುಗಳ ಮರಿಗಳಂತೆ.

ಯ ಆದಿತ್ಯಗತೋ ವಿಷ್ಣುಃ ಸ ಏವ ಮಧುನಾಮಕಃ।
ಮದಧಿರ್ಮದ್ಧಿತಿ ಪ್ರೋಕ್ತೋ ಮದಃ ಸುಖಮಿಹೋಚ್ಯತೇ।
ಅ ಇತ್ಯಾಧಿಕ್ಯಮುದ್ದಿಷ್ಟಂ ಮದ್ ಜ್ಞಾನತತಿರುಚ್ಯತೇ।
ತದ್ವತ್ತಾ ತತಿರುದ್ದಿಷ್ಟಾತೇನಾನುಭವ ಈರಿತಃ।
ಅಧಿಕೋऽನುಭವೋ ಯಸ್ಯ ಸರ್ವಸ್ಮಾದೀಪ್ಸಿತಾದಪಿ।
ಸೋऽಯಂ ಮದ ಇತಿ ಪ್ರೋಕ್ತಃ ಸರ್ವಂ ಹಿ ಸುಖಸಾಧನಮ್।
ತತ್ಪೂರ್ಣೋ ಮಧುನಾಮಾ ಸ್ಯಾತ್ ತೃತೀಯೋऽತಿಶಯಾರ್ಥಕಃ।
ದೇವಾನಾಮುಪಜೀವ್ಯತ್ವಾತ್ ಸ ದೇವಮಧುನಾಮಕಃ।
ಆದಿತ್ವಾದಾತತತ್ವಾಚ್ಚ ಜ್ಞಾನರೂಪತ್ವತಸ್ತಥಾ।
ಆದಿತ್ಯ ಇತಿ ಸಂಪ್ರೋಕ್ತಃ ಪ್ರಸಿದ್ಧ ಮಧುವಚ್ಚಸಃ।
ತಿರೋವಂಶಾದಿಸಂಯುಕ್ತೋ ದ್ಯುನಾಮ್ನೀ ಚ ದ್ಯುಸಂಸ್ಥಿತಾ।
ಪ್ರಕಾಶಾದಿಗುಣೈಃ ಶ್ರೀಸ್ತು ವಾಯೋರಾಶ್ರಯರೂಪತಃ।
ತಿರೋ ವಂಶ ಇತಿ ಪ್ರೋಕ್ತಾ ಮಧ್ವಪೂಪಸ್ತು ಮಾರುತಃ।
ತಸ್ಮಿನ್ ಸನ್ನಿಹಿತೋ ವಿಷ್ಣುಃ ವಿಶೇಷೇಣ ಯತಸ್ಸದಾ।

ಸೋऽಂತರಿಕ್ಷಮಿತಿ ಪ್ರೋಕ್ತಃ ಸ್ವಾಂತಸ್ಸಮ್ಯಗ್ ಹರೀಕ್ಷಣಾತ್।
ಅಂತರಿಕ್ಷಸ್ಥಿತಶ್ಚಾಸೌ ವಸ್ವಾದ್ಯಾ ಮಧುಕಾರಿಣಃ।
ತತ್ ಪುತ್ರಾಸ್ತು ಮರೀಚಾದ್ಯಾಃ ಸೂರ್ಯರಶ್ಮಿಷು ಸಂಸ್ಥಿತಾಃ।
ತಿರ್ಯಕ್‌ಸ್ಥಿತ್ವಾ ವಶೇ ಕುರ್ಯಾತ್ ಯಸ್ಮಾದ್ ದೇವೀ ರಮಾ ಹರಿಂ।
ಭಕ್ತೈವಾತಸ್ತಿರೋವಂಶಃ ತಿರ್ಯಕ್ತ್ವಂ ಪ್ರಣತಿಃ ಸ್ಮೃತಾ।
ತಿರ್ಯಕ್ ಸ್ಥಿತ್ವಾ ಸ್ವಸಂಸ್ಥಂ ತು ವಶೀಕುರ್ಯಾದ್ಯತಸ್ತತಃ।
ವಂಶಸ್ತಿರಶ್ಚೀನೋऽನ್ಯೋऽಪಿ ಯಸ್ಮಿನ್ ಆಪ್ಯಮುಪಸ್ಥಿತಮ್।
ಸೋऽಪೂಪ ಆಪ್ಯೋ ಭಗವಾನ್ ಮಧ್ವಾಜ್ಯಾದಿ ಪ್ರಸಿದ್ಧಗಮ್।

ಯಾವ ವಿಷ್ಣುವು ಆದಿತ್ಯನಲ್ಲಿರುವನೋ ಅವನೇ ಮಧುನಾಮಕನು. ಮಧು ಎಂದರೆ ಮದ ಉಳ್ಳವನೆಂದರ್ಥ. ಮದ ಎಂದರೆ ಸುಖ. ಮದ ಶಬ್ದದಲ್ಲಿ ಕೊನೆಯಲ್ಲಿರುವ ಆಕಾರವು ಅಧಿಕ್ಯವನ್ನು ತಿಳಿಸುತ್ತದೆ. ಮ ಎಂದರೆ ಜ್ಞಾನ, ತ್ ಎಂದರೆ ತತಿ, ಜ್ಞಾನತತಿ

ಎಂದರೆ ಜ್ಞಾನವಿಷಯತ್ವ ಎಂದರ್ಥ. ಜ್ಞಾನವೆಂದರೆ ಇಲ್ಲಿ ಸಾಕ್ಷಿಯಿಂದ ಬರುವ ಯಥಾರ್ಥ ಅನುಭವವೇ ವಿವಕ್ಷಿತ. ಆದ್ದರಿಂದ ಒಟ್ಟಿನಲ್ಲಿ, ಎಲ್ಲ ಅಭೀಷ್ಟಕ್ಕಿಂತಲೂ ಅಧಿಕವಾಗಿ ಸಾಕ್ಷಿಯ ಅನುಭವಕ್ಕೆ ಗೋಚರವಾದುದೇ ಮದ ಎಂದಾಯಿತು. ಅಂತಹ ವಸ್ತು ಸುಖವೇ ಆಗಿರುತ್ತದೆ.

ವಿಷಯಪದಾರ್ಥಗಳು ಎಲ್ಲವೂ ಕೇವಲ ಸುಖಸಾಧನವೇ ಹೊರತು ಸುಖದಂತೆ ಅತ್ಯಂತ ಅಭೀಷ್ಟವಲ್ಲ. 'ಮದಧಿ' ಅಂದರೆ ಸುಖಪೂರ್ಣನಾದವನೇ ಮಧು ಎನಿಸುವನು. ಮದಧಿ ಶಬ್ದದಲ್ಲಿ ದ ಎಂಬ ಅಕ್ಷರ ಲೋಪವಾಗುತ್ತದೆ. ಮತ್ತು ಇಕಾರಕ್ಕೆ ಉಕಾರದೇಶ ಬಂದಿದೆ. ಇ ಈ ಉ ಎಂಬ ಕ್ರಮದಲ್ಲಿ ಮೂರನೆಯದಾದ ಉ ವರ್ಣವು ಅತಿಶಯಾರ್ಥಕ. ಅದು ಮಧು ಶಬ್ದದಲ್ಲಿರುವುದರಿಂದ ಸುಖಪೂರ್ಣ ಎಂದರ್ಥ ದೊರೆಯುವುದು. ದೇವತೆಗಳಿಗೆ ಆಶ್ರಯನೂ ಆದ್ದರಿಂದ ವಿಷ್ಣುವು ದೇವಮಧು ಎನಿಸುವನು. ಎಲ್ಲರಿಗೂ ಆದಿ, ವ್ಯಾಪ್ತ ಮತ್ತು ಜ್ಞಾನ ಸ್ವರೂಪನಾದ್ದರಿಂದ ಆದಿತ್ಯನೆನಿಸುತ್ತಾನೆ. ಮಧುಶಬ್ದ ಪ್ರಯೋಗವಿರುವುದರಿಂದ ಜೇನಿನ ಸಾದೃಶವೂ ವಿವಕ್ಷಿತವೆ. ಆದ್ದರಿಂದ ಜೇನುತುಪ್ಪವು ಜೇನುಗೂಡು, ಅಡ್ಡತೊಲೆ ಮೊದಲಾದವುಗಳಿಂದ ಕೂಡಿರುವಂತೆ ವಿಷ್ಣುವೂ ಲಕ್ಷ್ಮೀಯೇ ಮೊದಲಾದವರಿಂದ ಕೂಡಿರುವನು. ಪ್ರಕಾಶಾದಿ ಗುಣಗಳಿರುವುದರಿಂದ ದ್ಯುನಾಮಕಳಾದ, ದ್ಯುಲೋಕದಲ್ಲಿರುವ ಲಕ್ಷ್ಮಿಯು ಜೇನುಗೂಡಿನಂತಿರುವ ವಾಯುವಿಗೆ ಆಶ್ರಯಳಾದ ಪ್ರಯುಕ್ತ ಅಡ್ಡತೊಲೆಯಂತೆ, ವಿಷ್ಣುವು ವಿಶೇಷವಾಗಿ ವಾಯುದೇವರಲ್ಲಿ ಸದಾ ಸನ್ನಿಹಿತನಾಗಿರುವುದರಿಂದ ವಾಯುವು ಜೇನುಗೂಡಿನಂತೆ. ಆ ವಾಯುವು ತನ್ನೊಳಗೆ ಶ್ರೀಹರಿಯನ್ನು ಚೆನ್ನಾಗಿ ನೋಡುವುದರಿಂದ ಮತ್ತು ಅಂತರಿಕ್ಷಲೋಕದಲ್ಲಿರುವುದರಿಂದ ಅಂತರಿಕ್ಷನಾಮಕ, ವಸುರುದ್ರಾದಿತ್ಯರು ಮಧುವನ್ನುಂಟುಮಾಡುವ ಹುಳುಗಳಂತೆ, ಸೂರ್ಯಕಿರಣಗಳಲ್ಲಿರುವ ಮರೀಚಿ ಮೊದಲಾದ ಋಷಿಗಳು ಜೇನುನೊಣಗಳ ಮರಿಗಳಂತೆ.

ಲಕ್ಷ್ಮೀದೇವಿಯು ಭಕ್ತಿಯಿಂದ ಬಾಗಿ ನಿಂತು ಶ್ರೀಹರಿಯನ್ನು ವಶೀಕರಿಸುವುದರಿಂದ 'ತಿರಶ್ಚೀನವಂಶ' ಎನಿಸುವಳು. ಬಾಗಿನಿಲ್ಲುವುದೆಂದರೆ ನಮಸ್ಕಾರ. ಅಡ್ಡತೊಲೆಯೂ ಸಹ ಜೇನುಗೂಡಿನಲ್ಲಿ ಅಡ್ಡವಾಗಿ ನಿಂತು ಅದನ್ನು ತನ್ನ ವಶದಲ್ಲಿಟ್ಟುಕೊಳ್ಳುವುದರಿಂದಲೇ ತಿರಶ್ಚೀನವಂಶ ಎನಿಸುವುದು. 'ಆಪ್' ಎಂದರೆ ಆಪ್ಯ. ಮುಕ್ತಪ್ರಾಪ್ಯನಾದ ವಿಷ್ಣುವು ವಾಯುದೇವನಲ್ಲಿ 'ಉಪ' ಸಮೀಪದಲ್ಲಿಯೇ ಸ್ಥಿನಾಗಿರುವುದರಿಂದ ವಾಯುವು ಅಪೂಪನೆನಿಸುವನು. ಜೇನುಗೂಡಿನಲ್ಲಿರುವ ಜೇನುತುಪ್ಪವೂ ನೀರಿನ ಪರಿಣಾಮವಾದುದರಿಂದ ಆಪ್ಯ, ಆದ್ದರಿಂದ ಜೇನುಗೂಡು ಅಪೂಪವೆಂದು ಪ್ರಸಿದ್ಧವಾಗಿದೆ.

ತಸ್ಯ ಯೇ ಪ್ರಾಂಚೋ ರಶ್ಮಯಃ ತಾ ಏವಾಸ್ಯ ಪ್ರಾಚ್ಯೋ ಮಧುನಾಡ್ಯಃ । ಋಚ ಏವ ಮಧುಕೃತಃ । ಋಗ್ವೇದ ಏವ ಪುಷ್ಪಂ । ತಾ ಅಮೃತಾ ಆಪಃ । ತಾ ವಾ ಏತಾಋಚಃ

ಏತಮೃಗ್ವೇದಮಭ್ಯತಪನ್ । ತಸ್ಯಾಭಿತಪ್ತಸ್ಯ ಯಶಸ್ತೇಜ ಇಂದ್ರಿಯಂ ವೀರ್ಯಮನ್ನಾದ್ಯಂ ರಸೋ೬ಜಾಯತ । ತದ್ ವ್ಯಕ್ಷರತ್ । ತದಾದಿತ್ಯಮಭಿತೋ೬ಶ್ರಯತ್ । ತದ್ವಾ ಏತತ್ ಯದೇತದಾದಿತ್ಯಸ್ಯ ರೋಹಿತಂ ರೂಪಮ್ ।

ಸೂರ್ಯನ ಪೂರ್ವದಿಕ್ಕಿನ ಕಿರಣಗಳು ಜೇನುಗೂಡಿನ ಪೂರ್ವಭಾಗದಲ್ಲಿರುವ ಮಧುಛಿದ್ರಗಳಂತೆ ಇರುವುವು. ಆ ಕಿರಣಗಳಲ್ಲಿರುವ ರಶ್ಮಿನಾಮಕ ಭಗವದ್ರೂಪಗಳು ಮಧುನಾಡೀ ಎನಿಸುತ್ತವೆ. ಏಕೆಂದರೆ ಈ ರೂಪಗಳ ಅನುಗ್ರಹವಿಲ್ಲದೇ ಉಪಾಸಕನು ಸುಖಪೂರ್ಣನಾದ ಶ್ರೀಹರಿಯ ಮೂಲರೂಪವನ್ನು ಹೊಂದಲಾರ. ಋಗ್ವೇದಾಭಿಮಾನಿಗಳಾದ ಮತ್ತು ಪ್ರಾತಃಸವನದಲ್ಲಿ ವಿಶೇಷಪೂಜ್ಯರೂ ಆದ ಅಷ್ಟವಸುಗಳು ಮಧುನಾಮಕ ಪರಮಾತ್ಮನನ್ನು ಪ್ರಕಟಿಸುವುದರಿಂದ ಜೇನನ್ನು ತಯಾರಿಸುವ ಜೇನುಹುಳುಗಳಂತೆ, ಋಗ್ವೇದವು ಪುಷ್ಪ ಅಂದರೆ, ಜ್ಞಾನಕ್ಕೆ ಪೋಷಕ. ಅದು ಪ್ರಸಿದ್ಧವಾದ ಹೂವಿನಂತೆ. ಋಗ್ವೇದದ ಮಂತ್ರಗಳು ಹೂವಿನೊಳಗಿರುವ ಮಕರಂದ ರಸದಂತೆ. ಆ ಮಂತ್ರಗಳೂ ನಿತ್ಯವಾದುದರಿಂದ ಅಮೃತ ಎಂದೂ, ದೇವತೆಗಳಿಂದ ಚೆನ್ನಾಗಿ ಅಧ್ಯಯನ ಮಾಡಲ್ಪಡುವ ಕಾರಣ ಆಪಃ ಎಂದೂ ಹೇಳಲ್ಪಡುತ್ತವೆ. ಜೇನುಹುಳುಗಳು ಮಕರಂದ ರಸವನ್ನು ಪಾನಮಾಡುವಂತೆ, ಋಗ್ವೇದಾಭಿಮಾನಿಗಳಾದ ವಹ್ನಿ ಮತ್ತು ವಸುಗಳು ಋಗ್ವೇದವನ್ನು ಚೆನ್ನಾಗಿ ಅಧ್ಯಯನ ಮಾಡಿದರು. ಅಧ್ಯಯನ ಮಾಡಿದಾಗ ಆ ವೇದದಿಂದ ಜ್ಞಾನಾನಂದಾತ್ಮಕನಾದ, ಪ್ರಕಾಶರೂಪನಾದ, ಪರಮೈಶ್ವರ್ಯರೂಪನಾದ, ಸರ್ವಾನುಗ್ರಹಶಕ್ತನಾದ, ಬಲರೂಪನಾದ, ಶ್ರೇಷ್ಠನಾದ ವಾಸುದೇವನು, ಪುಷ್ಪದಿಂದ ಪ್ರಸಿದ್ಧ ಮಧುವಿನಂತೆ ಪ್ರಕಟಗೊಂಡನು. ಸಿದ್ಧಗೊಂಡ ಜೇನುತುಪ್ಪವು ಜಿನುಗಿ ಜೇನುಗೂಡಿನ ಛಿದ್ರಗಳಲ್ಲಿ ಸಂಚಿತವಾಗುವುದು. ಅದರಂತೆ ಜ್ಞಾನಾನಂದಾದಿಗುಣಪೂರ್ಣನಾದ ಆ ವಾಸುದೇವನು ದೇವತೆಗಳಿಗೆ ಧರ್ಮ-ಮೋಕ್ಷಾದಿಗಳನ್ನು ಕೊಟ್ಟು ಸೂರ್ಯನ ಪೂರ್ವದಿಕ್ಕಿನ ಕಿರಣಗಳಲ್ಲಿ ನೆಲಸಿದನು. ಅವನೇ ಸೂರ್ಯನ ಕೆಂಪುವರ್ಣದಲ್ಲೂ ಇರುವನು.

ಪ್ರಾಚ್ಯರಶ್ಮಿಷು ಸಂಸ್ಥಸ್ತು ರತಿಶಂಮಾನರೂಪತಃ ।
ಪ್ರಾಚ್ಯರಶ್ಮಿರಿತಿ ಪ್ರೋಕ್ತೋ ವಾಸುದೇವಾಭಿದೋ ಹರಿಃ ।
ಏತದ್ವಿನಾ ನಾಲಮಿತಿ ನಾಡೀತ್ಯಂತ ಉದಾಹೃತಃ ।
ಸ್ವರೂಪಾಂಶೈರ್ವಿನಾ ಪ್ರಾಪ್ತುಂ ನಾಲಂ ಹಿ ಪ್ರಾಪಿತಾಂಶಿನಮ್ ।
ಋಗ್ವೇದಮಾನಿನಶ್ಚೈವ ವಹ್ನ್ಯಾದ್ಯಾ ವಸವಸ್ತ್ವಲ ಚಃ ।
ಅರ್ಚ್ಯತ್ವಾತ್ ಪ್ರಥಮಂ ಚೈವ ವಿಶೇಷಾದ್ ಯಜ್ಞದೇವತಾಃ ।

ಸೂರ್ಯಮಂಡಲದ ಪೂರ್ವದಕ್ಕಿನ ಕಿರಣಗಳಲ್ಲಿರುವ ವಾಸುದೇವನು ಕ್ರೀಡೆ, ಸುಖ ಮತ್ತು ಜ್ಞಾನಸ್ವರೂಪನಾದ್ದರಿಂದ ರಶ್ಮಿ ಎನಿಸುವನು. 'ಏತದ್ ವಿನಾ ನ ಅಲಂ' ಎಂಬ

ಅರ್ಥದಲ್ಲಿ ನಾಡೀಶಬ್ದವಿರುವುದರಿಂದ ಅಂಶರೂಪಗಳು ನಾಡೀ ಎನಿಸಿವೆ. ವಾಸುದೇವಾದಿ ಸ್ವರೂಪಾಂಶಗಳ ಅನುಗ್ರಹವಿಲ್ಲದೆ ಉಪಾಸಕನು ಮೂಲರೂಪವನ್ನು ಹೊಂದಲಾರನಷ್ಟೇ! 'ಋಚ ಏವ ಮಧುಕೃತಃ' ಇತ್ಯಾದಿ ವಾಕ್ಯಗಳಲ್ಲಿ ಋಗ್ವೇದಾಭಿಮಾನಿಗಳಾದ ಅಗ್ನಿಯೇ ಮೊದಲಾದ ಋಕ್ ಎಂದು ವಿವಕ್ಷಿತರಾಗಿದ್ದಾರೆ. ಮಂತ್ರಗಳಲ್ಲ ಅಗ್ನ್ಯಾದಿ ವಸುಗಳು ಪ್ರಾತಃ ಸವನದಲ್ಲಿ ವಿಶೇಷವಾಗಿ ಅರ್ಚಿತರಾದ್ದರಿಂದ ಅವರು ಋಕ್ ಶಬ್ದವಾಚ್ಯರಾಗಿದ್ದಾರೆ.

ಅಥ ಯೇಽಸ್ಯ ದಕ್ಷಿಣಾ ರಶ್ಮಯಸ್ತಾ ಏವಾಸ್ಯ ದಕ್ಷಿಣಾ ಮಧುನಾಡ್ಯಃ। ಯಜೂಂಷ್ಯೇವ ಮಧುಕೃತಃ । ಯಜುರ್ವೇದ ಏವ ಪುಷ್ಪಂ । ತಾ ಅಮೃತಾ ಅಪಃ । ತಾನಿ ವಾ ಏತಾನಿ ಯಜೂಂಷಿ ಏತಂ ಯಜುರ್ವೇದಮಭ್ಯತಪತ್ । ತಸ್ಯಾಭಿತಪ್ತಸ್ಯ ಯಶಸ್ತೇಜ ಇಂದ್ರಿಯಂ ವೀರ್ಯಮನ್ನಾದ್ಯಂ ರಸೋಽಜಾಯತ। ತದ್ ವ್ಯಕ್ಷರತ್ । ತದಾದಿತ್ಯಮಭಿತೋಽಶ್ರಯತ್ । ತದ್ ವಾ ಏತದ್ ಯದೇತದಾದಿತ್ಯಸ್ಯ ಶುಕ್ಲಂ ರೂಪಮ್ ।

ಸೂರ್ಯನ ದಕ್ಷಿಣ ದಿಕ್ಕಿನ ಕಿರಣಗಳು ಜೇನುಗೂಡಿನ ದಕ್ಷಿಣ ಭಾಗದ ಮಧುನಾಡಿಗಳಂತೆ, ಆ ಕಿರಣಗಳಲ್ಲಿ ರಶ್ಮಿ ಎಂಬ ಹೆಸರಿನ ಸಂಕರ್ಷಣ ರೂಪಗಳು ಇರುವವು. ಆ ರೂಪಗಳೂ ಮಧುನಾಡಿ ಎನಿಸುತ್ತವೆ. ಯಜುರ್ವೇದಾಭಿಮಾನಿಗಳಾದ ಏಕಾದಶ ರುದ್ರನು ಜೇನುಹುಳುಗಳಂತೆ. ಅವರು ಭಗವಂತನನ್ನು ಪ್ರಕಟಗೊಳಿಸುವವರು. ಯಜುರ್ವೇದವು ಪುಷ್ಪದಂತೆ. ಅದರ ಮಂತ್ರಗಳು ಮಕರಂದ ರಸದಂತೆ. ಆ ಮಂತ್ರಗಳು ಅಮೃತ ಎಂದೂ, 'ಅಪ್' ಎಂದೂ ಹೇಳಲ್ಪಡುತ್ತವೆ. ಯಜುರ್ವೇದಾಭಿಮಾನಿಗಳಾದ 'ಯಜುಸ್' ಎನಿಸಿದ ಏಕಾದಶ ರುದ್ರರು ಯಜುರ್ವೇದವನ್ನು ಅಧ್ಯಯನ ಮಾಡಿದರು. ಅದರಿಂದ ಜ್ಞಾನಾನಂದಾತ್ಮಕನೂ, ಪ್ರಕಾಶರೂಪನೂ, ಪರಮೈಶ್ವರ್ಯಸ್ವರೂಪನೂ, ಸರ್ವಾನುಗ್ರಹಶಕ್ತನೂ, ಬಲರೂಪನೂ, ಶ್ರೇಷ್ಠನೂ ಆದ ಸಂಕರ್ಷಣನು ಪ್ರಕಟನಾದ. ಅವನೇ ದೇವತೆಗಳಿಗೆ ಧರ್ಮ-ಮೋಕ್ಷಾದಿಗಳನ್ನು ದಯಪಾಲಿಸಿದ. ಅವನು ಸೂರ್ಯನ ದಕ್ಷಿಣದ ಕಿರಣಗಳಲ್ಲಿರುವನು. ಆ ಸಂಕರ್ಷಣನೇ ಸೂರ್ಯನ ಶುಕ್ಲರೂಪದಲ್ಲೂ ಇರುವನು.

ಇಂದ್ರಾದ್ಯಾ ಯಜುರುದ್ದಿಷ್ಟಾ ರುದ್ರಾ ಇಂದ್ರಸಖಾ ಯತಃ।
ಇಂದ್ರಶಬ್ದೋದಿತೋ ವಾಯುಃ ಸ ಯಾಜ್ಯಃ ಸೋಮಭುಕ್ ಪುರಃ।
ಸ ಹಿ ಶಂಕರಪೂರ್ವಾಣಾಂ ರುದ್ರಾಣಾಂ ಮುಖ್ಯ ಏವ ಚ।

ಯಜ್ಞದೇವತೆಗಳಾದ್ದರಿಂದ ಇಂದ್ರನೇ ಮೊದಲಾದ ರುದ್ರರು ಯಜುಸ್-ಶಬ್ದವಾಚ್ಯರಾಗಿದ್ದಾರೆ. ರುದ್ರರು ಇಂದ್ರನ ಸ್ನೇಹಿತರಾದ್ದರಿಂದ ಇಂದ್ರನೂ ರುದ್ರರಲ್ಲಿ ಸೇರುವನು. ಈ ಇಂದ್ರನೆಂದರೆ ವಾಯುವೇ ಹೊರತು ಪುರಂದರನಲ್ಲ. ಮಾಧ್ಯಂದಿನಸವನದಲ್ಲಿ

ಸೋಮಪಾನ ಮಾಡುವ ರುದ್ರರಿಗಿಂತ ಪೂರ್ವದಲ್ಲಿ ವಾಯುವೇ ಪೂಜಿಸಲ್ಪಡುವುದರಿಂದ ಆ ವಾಯುವೇ ಇಂದ್ರಶಬ್ದದಿಂದ ವಿವಕ್ಷಿತ, ಉಪನಿಷತ್ತಿನಲ್ಲಿಯೇ ಮುಂದೆ 'ರುದ್ರಾ ಉಪಜೀವಂತಿ ಇಂದ್ರೇಣ ಮುಖೇನ' ಎಂಬಲ್ಲಿ, ರುದ್ರರಲ್ಲಿ ಇಂದ್ರ ಮುಖ್ಯನೆಂದು ಹೇಳುವುದರಿಂದ, ಶಂಕರನೇ ಮೊದಲಾದ ರುದ್ರರಿಗಿಂತ ಮುಖ್ಯನಾದವನು ವಾಯುವೇ, ಆದ್ದರಿಂದ ಇಲ್ಲಿ ಇಂದ್ರಪದದಿಂದ ವಾಯುವೇ ವಿವಕ್ಷಿತ.

ಅಥ ಯೇಽಸ್ಯ ಪ್ರತ್ಯಂಚೋ ರಶ್ಮಯಃ ತಾ ಏವಾಸ್ಯ ಪ್ರತೀಚ್ಯೋ ಮಧುನಾಡ್ಯಃ । ಸಾಮಾನ್ಯೇವ ಮಧುಕೃತಃ । ಸಾಮವೇದ ಏವ ಪುಷ್ಪಂ । ತಾ ಅಮೃತಾ ಆಪಃ । ತಾನಿ ವಾ ಏತಾನಿ ಸಾಮಾನಿ ಏತಂ ಸಾಮವೇದಮಭ್ಯತಪನ್ । ತಸ್ಯಾಭಿತಪ್ತಸ್ಯ ಯಶಸ್ತೇಜ ಇಂದ್ರಿಯಂ ವೀರ್ಯಮನ್ನಾದ್ಯಂ ರಸೋಽಜಾಯತ । ತದ್ ವ್ಯಕ್ಷರತ್ । ತದಾದಿತ್ಯಮಭಿತೋಽಶ್ರಯತ್। ತದ್ವಾ ಏತದ್ ಯದೇತದಾದಿತ್ಯಸ್ಯ ಕೃಷ್ಣಂ ರೂಪಮ್ ।

ಸೂರ್ಯನ ಪಶ್ಚಿಮ ದಿಕ್ಕಿನ ಕಿರಣಗಳು, ಜೇನುಗೂಡಿನ ಪಶ್ಚಿಮದ ಮಧುನಾಡಿಗಳಂತೆ. ಆ ಕಿರಣಗಳಲ್ಲಿ ರಶ್ಮಿ ಎನಿಸಿದ ಪ್ರದ್ಯುಮ್ನರೂಪಗಳು ಇರುವುವು. ಈ ರೂಪಗಳು ಮಧುನಾಡಿ ಎನಿಸಿವೆ. ಸಾಮನಾಮಕರಾದ, ಸಾಮಾಭಿಮಾನಿಗಳಾದ ಆದಿತ್ಯರು ಜೇನುಹುಳುಗಳಿದ್ದಂತೆ ಅವರು ಭಗವಂತನನ್ನು ಪ್ರಕಟಗೊಳಿಸುವರು. ಸಾಮದೇವು ಪುಷ್ಪದಂತೆ. ಅದರಲ್ಲಿರುವ ಮಂತ್ರಗಳು ಮಕರಂದಕ್ಕೆ ಸಮಾನ. ಅವುಗಳು ಅಮೃತ ಎಂದೂ ಅಪ್ ಎಂದೂ ಹೇಳಲ್ಪಡುತ್ತವೆ. ಸಾಮವೇದಾಭಿಮಾನಿ ಆದಿತ್ಯರು ಸಾಮದೇವನ್ನು ಅಧ್ಯಯನ ಮಾಡಿದರು. ಅದರಿಂದ ಜ್ಞಾನಾನಂದಾತ್ಮಕನೂ, ಪ್ರಕಾಶರೂಪನೂ, ಪರಮೈಶ್ವರ್ಯಸ್ವರೂಪನೂ, ಸರ್ವಾನುಗ್ರಹಶಕ್ತನೂ, ಬಲರೂಪನೂ, ಶ್ರೇಷ್ಠನೂ ಆದ ಪ್ರದ್ಯುಮ್ನನು ಪ್ರಕಟನಾದ. ಆ ಪ್ರದ್ಯುಮ್ನನೇ ದೇವತೆಗಳಿಗೆ ಧರ್ಮ-ಮೋಕ್ಷಾದಿಗಳನ್ನು ಕೊಟ್ಟನು. ಅವನು ಸೂರ್ಯನ ಪಶ್ಚಿಮ ಕಿರಣದಲ್ಲಿರುವನು. ಅವನೇ ಸೂರ್ಯನ ಕಪ್ಪುವರ್ಣದಲ್ಲೂ ಇರುವನು.

ಸಾಮಾನಾಮನ ಆದಿತ್ಯಾಃ ಮಾಸಶಃ ಸಮಭೋಗತಃ।
ಇಂದ್ರೋ ವರುಣ ಉದ್ದಿಷ್ಟೋ ಯಜ್ಞೇಷು ವ್ರಿಯತೇ ಯತಃ।
ಆದಿತ್ಯಾನಾಮಧಿಪತಿಃ ಸ ಹಿ ವಿಷ್ಣುನಿಯೋಜಿತಃ।
ವಿಷ್ಣುಸ್ತೂಪಾಸ್ಯ ರೂಪತ್ವಾತ್ ನೋಪಾಸಕಗಣೇ ಯುತಃ।

ಒಂದೊಂದು ಮಾಸಕ್ಕೆ ಒಬ್ಬೊಬ್ಬರಂತೆ ಸಮವಾದ ಭೋಗ ಉಳ್ಳವರಾದ ಕಾರಣ ಹನ್ನೆರಡು ಮಂದಿ ಆದಿತ್ಯರು ಸಾಮ ಎಂದು ಹೆಸರುಳ್ಳವರಾಗಿದ್ದಾರೆ. ಮುಂದೆ 'ಆದಿತ್ಯಾ ಉಪಜೀವಂತಿ ವರುಣೇನ ಮುಖೇನ' ಎಂಬಲ್ಲಿ ವರುಣನೆಂದರೆ ಪುರಂದರ. 'ವ್ರಿಯತೇ ಇತಿ ವರುಣಃ' ಎಂಬ ವ್ಯುತ್ಪತ್ತಿಯಿಂದ ಯಾಗಗಳಲ್ಲಿ ವರಿಸಲ್ಪಡುವವನಾದ್ದರಿಂದ,

ಅಂದರೆ ಸ್ತುತಿಸಲ್ಪಡುವುದರಿಂದ ಪುರಂದರನೇ ಇಲ್ಲಿ ವರುಣ, ಮತ್ತು ಮೇಲಿನ ವಾಕ್ಯದಲ್ಲಿ, ಆದಿತ್ಯರಲ್ಲಿ ಮುಖ್ಯ ಎಂದು ಹೇಳಿದೆ. ಪುರಂದರನೇ ಆದಿತ್ಯರಲ್ಲಿ ಮುಖ್ಯ ಎಂದು ವಿಷ್ಣುವಿನಿಂದ ನೇಮಿಸಲ್ಪಟ್ಟಿರುವನು. ಆದ್ದರಿಂದ ಇಲ್ಲಿ ಪ್ರಸಿದ್ಧ ವರುಣನಲ್ಲದೇ ಪುರಂದರನೇ ವರುಣಪದದಿಂದ ವಿವಕ್ಷಿತ. ಆದಿತ್ಯರಲ್ಲಿ ಮುಖ್ಯ ವಿಷ್ಣುವಾಗಿದ್ದರೂ, ಅವನು ಉಪಾಸ್ಯನಾಗಿರುವುದರಿಂದ ಪ್ರಕೃತದಲ್ಲಿ ಪ್ರಸ್ತುತವಾದ ಉಪಾಸಕಗಣದಲ್ಲಿ ಅವನು ಸೇರುವುದಿಲ್ಲವಾದ್ದರಿಂದ ಪುರಂದರನನ್ನೇ ಇಟ್ಟುಕೊಳ್ಳಬೇಕು.

ಅಥ ಯೇऽಸ್ಯೋದಂಚೋ ರಶ್ಮಯಃ ತಾ ಏವಾಸ್ಯೋದೀಚ್ಯೋ ಮಧುನಾಡ್ಯಃ। ಅರ್ಥರ್ವಾಂಗಿರಸ ಏವ ಮಧುಕೃತಃ । ಇತಿಹಾಸ ಪುರಾಣಂ ಪುಷ್ಪಂ । ತಾ ಅಮೃತಾ ಅಪಃ । ತೇ ವಾ ಏತೇऽಥರ್ವಾಂಗಿರಸ ಏತದಿತಿಹಾಸ ಪುರಾಣಂ ಅಭ್ಯತಪನ್ । ತಸ್ಯಾಭಿ ತಪ್ತಸ್ಯ ಯಶಸ್ತೇಜ ಇಂದ್ರಿಯಂ ವೀರ್ಯಮನ್ನಾದ್ಯಂ ರಸೋऽಜಾಯತ । ತದ್ ವ್ಯಕ್ಷರತ್। ತದಾದಿತ್ಯಮಭಿತೋऽಶ್ರಯತ್ । ತದ್ ವಾ ಏತದ್ ಯದೇತದಾದಿತ್ಯಸ್ಯ ಪರಃ ಕೃಷ್ಣಂ ರೂಪಮ್ ।

ಸೂರ್ಯನ ಉತ್ತರ ಕಿರಣಗಳು, ಜೇನುಗೂಡಿನ ಉತ್ತರದ ಮಧುನಾಡಿಗಳಂತೆ. ಆ ಕಿರಣಗಳಲ್ಲಿ ರಶ್ಮಿ ಎಂಬ ಹೆಸರಿನಿಂದ ಅನಿರುದ್ಧರೂಪಗಳು ಇರುವವು. ಈ ರೂಪಗಳು ಮಧುನಾಡಿ ಎಂದೆನಿಸಿವೆ.

ಅಥರ್ವವೇದ ಹಾಗೂ ಇತಿಹಾಸ ಪುರಾಣಗಳಿಗೆ ಅಭಿಮಾನಿಗಳಾದ ಅಥರ್ವ. ಅಂಗಿರಸ ಎಂದೂ ಹೆಸರುಳ್ಳ ಚಂದ್ರ ಮತ್ತು ಇತರ ಮರುತ್ ದೇವತೆಗಳು, ಜೇನನ್ನು ಜೇನುಹುಳುಗಳು ಪ್ರಕಟಗೊಳಿಸುವಂತೆ ಭಗವಂತನನ್ನು ಪ್ರಕಟಪಡಿಸುವರು. ಅಥರ್ವವೇದ ಮತ್ತು ಇತಿಹಾಸ ಪುರಾಣಾದಿಗಳು ಪುಷ್ಪವಿದ್ದಂತೆ. ಆ ಅಥರ್ವವೇದ ಮತ್ತು ಇತಿಹಾಸ ಪುರಾಣಾದಿಗಳ ವಚನಗಳು ಮಕರಂದರಸವಿದ್ದಂತೆ. ಇವು ಅಮೃತ ಮತ್ತು ಅಪ್ ಎನಿಸುತ್ತವೆ. ಅಥರ್ವವೇದ ಹಾಗೂ ಇತಿಹಾಸ ಪುರಾಣಗಳ ಅಭಿಮಾನಿಗಳು ಅವುಗಳನ್ನು ಅಧ್ಯಯನ ಮಾಡಿದರು. ಆದ್ದರಿಂದ ಜ್ಞಾನಾನಂದಾತ್ಮಕನೂ ಪ್ರಕಾಶರೂಪನೂ, ಪರಮೈಶ್ವರ್ಯಸ್ವರೂಪನೂ, ಸರ್ವಾನುಗ್ರಹ ಶಕ್ತನೂ, ಬಲರೂಪನೂ, ಶ್ರೇಷ್ಠನೂ ಆದ ಅನಿರುದ್ಧನು ಪ್ರಕಟನಾದ. ಅವನು ದೇವತೆಗಳಿಗೆ ಧರ್ಮ-ಮೋಕ್ಷಾದಿಗಳನ್ನು ಕೊಟ್ಟನು. ಅವನು ಸೂರ್ಯನ ಉತ್ತರ ಕಿರಣಗಳಲ್ಲಿ ನೆಲೆಸಿದನು. ಆ ಅನಿರುದ್ಧನೇ ಸೂರ್ಯನ ಅತಿಶಯವಾದ ಕಪ್ಪುಬಣ್ಣದಲ್ಲಿರುವನು.

ಇತಿಹಾಸ ಪುರಾಣಾನಾಂ ಸೋಮಾದ್ಯಾ ಅಭಿಮಾನಿನಃ।
ಅಥರ್ವಾಂಗಿರಸಾಂ ಚೈವಾಪ್ಯಥರ್ವಾಂಗಿರನಾಮಕಾಃ।
ಅಧರಂ ವರ್ತಯೇಯುಸ್ತೇ ವೃಷ್ಟಿಮಂಗರಸಾಸ್ತಥಾ।
ಮನಸ್ತ್ವಾತ್ ಪ್ರಾಣರೂಪತ್ವಾದ್ ಅಥರ್ವಾಂಗಿರಸಸ್ತತಃ।

ಚಂದ್ರಾದಿದೇವತೆಗಳು ಇತಿಹಾಸ ಪುರಾಣ ಹಾಗೂ ಅಥರ್ವವೇದಗಳಿಗೆ ಅಭಿಮಾನಿಗಳಾಗಿರುವುದರಿಂದ, ಅಥರ್ವಾಂಗಿರಸ ಎಂದು ಹೆಸರುಳ್ಳವರು. ಅವರು ಮಳೆಯನ್ನು ಕೆಳಗೆ ಸುರಿಸುವವರೂ ಮತ್ತು ಅಂಗಗಳಿಗೆ ನಿಯಾಮಕರೂ ಆಗಿರುವುದರಿಂದ 'ಅಧರಂ ವರ್ತಯಂತಿ', ಹಾಗೂ 'ಅಂಗಾನಾಂ ರಸಾಃ' ಎಂಬ ವ್ಯುತ್ಪತ್ತಿಯಿಂದ, ಅಥರ್ವಾಂಗಿರಸ ನಾಮಕರಾಗಿರುವವರು. ಚಂದ್ರನು ಮನಸ್ಸಿಗೆ ನಿಯಾಮಕ. ಇತರ ಮರುತ್ ದೇವತೆಗಳು ಪ್ರಾಣಾಪಾನಾದಿ ರೂಪರಾಗಿರುವರು. ಅಥವಾ ಇಂದ್ರಿಯಾಭಿಮಾನಿಗಳಾಗಿರುವರು. ಆದ್ದರಿಂದ ಚಂದ್ರಾದಿ ದೇವತೆಗಳು ಅಂಗಗಳಿಗೆ ನಿಯಾಮಕರು.

ಅಥ ಯೇಽಸ್ಯೋರ್ಧ್ವಾ ರಶ್ಮಯಃ ತಾ ಏವಾಸ್ಯೋರ್ಧ್ವಾ ಮಧುನಾಡ್ಯಃ । ಗುಹ್ಯಾ ಏವಾದೇಶಾ ಮಧುಕೃತಃ । ಬ್ರಹ್ಮೈವ ಪುಷ್ಪಂ । ತಾ ಅಮೃತಾ ಆಪಃ । ತೇ ವಾ ಏತೇ ಗುಹ್ಯಾ ಆದೇಶಾ ಏತದ್ ಬ್ರಹ್ಮ ಅಭ್ಯತಪನ್ । ತಸ್ಯಾಭಿತಪ್ತಸ್ಯ ಯಶಸ್ತೇಜ ಇಂದ್ರಿಯಂ ವೀರ್ಯಮನ್ನಾದ್ಯಂ ರಸೋಽಜಾಯತ। ತದ್ ವ್ಯಕ್ಷರತ್ । ತದಾದಿತ್ಯಮಭಿತೋಽಶ್ರಯತ್। ತದ್ವಾ ಏತದ್ ಯದೇತದಾದಿತ್ಯಸ್ಯ ಮಧ್ಯೇ ಕ್ಷ್ವೇಭತ ಇವ । ತೇ ವಾ ರಸಾನಾಂ ರಸಾಃ । ವೇದಾ ಹಿ ರಸಾಃ ತೇಷಾಮೇತೇ ರಸಾಃ। ತಾನಿ ವಾ ಏತಾನ್ಯಮೃತಾನಾಮಮೃತಾನಿ। ವೇದಾ ಹ್ಯಮೃತಾಃ ತೇಷಾಮೇತಾನ್ಯಮೃತಾನಿ।

ಸೂರ್ಯನ ಊರ್ಧ್ವದಿಕ್ಕಿನ ಕಿರಣಗಳು ಜೇನುಗೂಡಿನ ಮೇಲಿನ ಮಧುಛಿದ್ರಗಳಂತೆ, ಆ ಕಿರಣಗಳಲ್ಲಿರುವ ರಶ್ಮಿನಾಮಕ ನಾರಾಯಣರೂಪಗಳು ಮಧುನಾಡಿ ಎನಿಸಿವೆ. ಗೋಪ್ಯವಾದ ವೇದದ ಆದೇಶವನ್ನು ಉಪದೇಶಿಸುವುದರಿಂದ ಗುಹ್ಯಾದೇಶ ಶಬ್ದವಾಚ್ಯರಾದ ಸರ್ವವೇದಾಭಿಮಾನಿ ಋಜುಗಳು ಜೇನುಹುಳುಗಳಿದ್ದಂತೆ. ವೇದರಾಶಿಯೇ ಪುಷ್ಪದಂತೆ. ಅದರೊಳಗಿನ ವಚನಗಳು ಮಕರಂದದ ರಸದಂತೆ. ಆ ವಚನಗಳು ಅಮೃತ ಎಂದೂ ಆಪ್ ಎಂದೂ ಹೇಳಲ್ಪಡುತ್ತವೆ. ಆ ವೇದಾಭಿಮಾನಿಗಳಾದ ಋಜುಗಳು ವೇದರಾಶಿಯನ್ನು ಚೆನ್ನಾಗಿ ಅಧ್ಯಯನ ಮಾಡಿದರು. ಅದರಿಂದ ಜ್ಞಾನಾನಂದಾತ್ಮಕನೂ ಪ್ರಕಾಶರೂಪನೂ ಪರಮೈಶ್ವರ್ಯ ಸ್ವರೂಪನೂ, ಸರ್ವಾನುಗ್ರಹಶಕ್ತನೂ, ಬಲರೂಪನೂ, ಸರ್ವಶ್ರೇಷ್ಠನೂ ಆದ ನಾರಾಯಣನು ಪ್ರಕಟನಾದ. ಅವನು ದೇವತೆಗಳಿಗೆ ಧರ್ಮಮೋಕ್ಷಗಳನ್ನು ವಿತರಿಸಿದ. ಆ ನಾರಾಯಣನು ಸೂರ್ಯನ ಮೇಲ್ಭಾಗದ ಕಿರಣಗಳಲ್ಲಿ ನೆಲೆಸಿದ. ಅವನು ಸೂರ್ಯಮಂಡಲದ ಮಧ್ಯದಲ್ಲಿ ಅಚಲನಾದರೂ ನೋಡುವವರ ದೃಷ್ಟಿಗೆ ಚಲಿಸುವವನಂತೆ ಕಾಣುವನು. ಆ ವಾಸುದೇವಾದಿ ಪಂಚರೂಪಗಳು ಸಾರಗಳಲ್ಲಿ ಸಾರ. ಏಕೆಂದರೆ ಋಗ್ವೇದಾದಿಗಳು ಸಾರಭೂತವಾಗಿವೆ. ಅವುಗಳಿಂದ ಮುಖ್ಯವಾಗಿ ಪ್ರತಿಪಾದ್ಯವಾಗಿರುವುದಿರಂದ ವಾಸುದೇವಾದಿರೂಪಗಳು

ಅವುಗಳಲ್ಲಿ ಸಾರಭೂತವಾಗಿವೆ. ಆಪಂಚರೂಪಗಳು ಅಮೃತದಲ್ಲಿ ಅಮೃತಗಳೂ ಆಗಿವೆ. ಋಗ್ವೇದಾದಿಗಳು ನಿತ್ಯವಾದುದರಿಂದ ಅಮೃತ, ಅವುಗಳಿಗೆ ಅಮೃತತ್ವವನ್ನು ಕೊಟ್ಟಿರುವುದರಿಂದ ವಾಸುದೇವಾದಿ ಪಂಚರೂಪಗಳು ಅಮೃತಗಳಲ್ಲಿ ಅಮೃತ.

ಗುಹ್ಯಾದೇಶಾ ಬ್ರಹ್ಮಪದೇ ಯೇ ಯೋಗ್ಯಾ ಬ್ರಹ್ಮಣಾ ಸಹ।
ಸರ್ವಗುಹ್ಯೋಪದೇಷ್ಟಾರಃ ಸರ್ವೇಷಾಂ ಗುರವೋ ಹಿ ತೇ।
ಬ್ರಹ್ಮೇತಿ ಸರ್ವವೇದಾನಾಂ ನಾಮಾನಂತತ್ವತಃ ಸ್ಮೃತಮ್ ।

ಎಲ್ಲರಿಗೂ ಗೋಪ್ಯ ತತ್ತ್ವಗಳನ್ನು ಉಪದೇಶ ಮಾಡಿರುವುದರಿಂದ ಬ್ರಹ್ಮನೂ ಬ್ರಹ್ಮಪದಯೋಗ್ಯರಾದ ಋಜುಗಳೂ ಗುಹ್ಯಾದೇಶರೆನಿಸಿರುವರು, ಋಜುಗಳು ಎಲ್ಲರಿಗೂ ಗುರುಗಳು ಉಪದೇಶಕರೆಂಬುದು ಪ್ರಸಿದ್ಧವೇ ಆಗಿದೆ. ವೇದಗಳು ಅನಂತ ಇರುವುದರಿಂದಲೂ, ಬ್ರಹ್ಮಶಬ್ದವು ಅನಂತತ್ವವನ್ನು ಹೇಳುವುದರಿಂದರೂ, ಬ್ರಹ್ಮ ಎಂದರೆ ವೇದರಾಶಿ ಎಂದರ್ಥ.

ಋಗ್ವೇದಾದೀಂಸ್ತು ತೇ ದೇವಾಃ ಅಗ್ನ್ಯಾದ್ಯಾಃ ಸಂವ್ಯಚಾರಯನ್ ।
ಮಧುಬ್ರಹ್ಮವ್ಯಕ್ತಿಕೃತ್ವಾತ್ತ್ವ್ ತೇ ವೈ ಮಧುಕೃತಃ ಸ್ಮೃತಾಃ।
ಜ್ಞಾನಪೋಷಕರತ್ವಾತ್ತು ವೇದಾಃ ಪುಷ್ಪಾಭಿಧಾಃ ಸ್ಮೃತಾಃ।
ಅನ್ಯತ್ರ ಮಧುಕೃತ್‌ಪೋಷಾತ್ ನಿತ್ಯತ್ವಾದಮೃತಾಶ್ಚ ತಾಃ।
ವೇದವಾಚಃ ಸುರೈಃ ಪೇಯಾ ಭೋಗ್ಯತ್ವಾದ್ ಆಪ ಈರಿತಾಃ।
ವೇದಪಾನಂ ವಿಚಾರಶ್ಚ ಶ್ರವಣಂ ಪಾಠ ಏವ ಚ।
ದೇವೈರ್ವಿಚಾರಿತೇಭ್ಯಶ್ಚ ವೇದೇಭ್ಯೋ ವ್ಯಕ್ತತಾಂ ಗತಃ।
ಜ್ಞಾನಾನಂದ ಸ್ವರೂಪತತ್ವಾತ್ ಯಶಸ್ತೇಜಃಸ್ವರೂಪಕಃ।
ಇಂದ್ರಿಯಂ ಪರಮೈಶ್ವರ್ಯಾದ್ ವೀರ್ಯರೂಪಶ್ಚ ಸರ್ವದಾ।
ಸರ್ವಾನುಗ್ರಹಶಕ್ತಿತ್ವಾದ್ ಅನ್ನಾದ್ಯೋ ಬಲರೂಪತಃ।
ರಸನಾಮಾ ಚ ಭಗವಾನ್ .....।

ಋಗ್ವೇದವೇ ಮೊದಲಾದ ವೇದಗಳಿಗೆ ಅಭಿಮಾನಿಗಳಾದ ಪೂರ್ವೋಕ್ತ ಅಗ್ನ್ಯಾದಿದೇವತೆಗಳು ಆಯಾ ವೇದಗಳನ್ನು ಚೆನ್ನಾಗಿ ಅಧ್ಯಯನ ಮಾಡಿದರು. ಆ ದೇವತೆಗಳು ಜೇನುತುಪ್ಪಕ್ಕೆ ಸದೃಶವಾದ ಪರಬ್ರಹ್ಮನನ್ನು ಪ್ರಕಟಪಡಿಸುವುದರಿಂದ ಅವರನ್ನು ಮಧುಕರರೆಂದು ಹೋಲಿಸಲಾಗಿದೆ. 'ಪೋಷಯತಿ ಇತಿ ಪುಷ್ಪಂ' ಎಂಬ ವ್ಯುತ್ಪತ್ತಿಯಿಂದ ಜ್ಞಾನಾಭಿವೃದ್ಧಿಗೆ ಕಾರಣವಾದ ವೇದಗಳನ್ನು ಪುಷ್ಪ ಎನ್ನಲಾಗಿದೆ. ಉಪಮಾನದ ವಿವಕ್ಷೆಯ ಪ್ರಕಾರ, ಜೇನುಹುಳುಗಳ ಪೋಷಣೆಗೈಯುವುದರಿಂದ ಪ್ರಸಿದ್ಧ ಹೂಗಳೂ ಪುಷ್ಪ ಎನಿಸುತ್ತದೆ. ನಿತ್ಯವಾದುದರಿಂದ ವೇದವಚನಗಳು ಅಮೃತ. ದೇವತೆಗಳು ಅವುಗಳನ್ನು

ಪಾಲಿಸುವುದರಿಂದಲೂ ಭೋಗಿಸುವುದರಿಂದಲೂ 'ಆ ಪೀಯಂತೇ ಇತಿ ಅಪಃ' ಎಂಬ ನಿರ್ವಚನದಿಂದ ಆ ವೇದವಚನಗಳು 'ಅಪಃ' ಎಂದೆನಿಸಿವೆ. ವೇದಗಳ ಪಾಲನ ಮತ್ತು ಪಾನವೆಂದರೆ ವಿಚಾರ ಶ್ರವಣ ಮತ್ತು ಪಾಠರೂಪವಾದುದು. ದೇವತೆಗಳಿಂದ ವಿಚಾರಿಸಲ್ಪಟ್ಟ ವೇದಗಳಿಂದ ಭಗವಂತ ವ್ಯಕ್ತನಾಗುತ್ತನೆ. ಅವನು ಜ್ಞಾನಾನಂದರೂಪಿಯಾದ್ದರಿಂದ ಅವನನ್ನು ಯಶಃ ಎಂದೂ ತೇಜೋರೂಪನಾದ್ದರಿಂದ ತೇಜಃ ಎಂದು ಪರಮೈಶ್ವರ್ಯಶಾಲಿಯಾದ್ದರಿಂದ ಇದಿ ಪರಮೈಶ್ವರ್ಯೇ ಎಂಬ ಧಾತುವಿನ ಪ್ರಕಾರ ಇಂದ್ರಿಯ ಎಂದೂ, ವೀರ್ಯರೂಪನಾದ್ದರಿಂದ, ವೀರ್ಯಂ ಎಂದೂ, ಸರ್ವಾನುಗ್ರಹಶಕ್ತನಾದ್ದರಿಂದ ಅನ್ನಾದ್ಯ ಎಂದೂ, ಬಲರೂಪಿಯಾದ್ದರಿಂದ ರಸ ಎಂದೂ ಹೇಳಲ್ಪಟ್ಟಿದ್ದಾನೆ.

..... ಸಂಸ್ಥಿತಃ ಸೂರ್ಯಮಂಡಲೇ।
ವ್ಯಕ್ಷರದ್ ಧರ್ಮಮೋಕ್ಷಾದೀನ್ ದೇವಾನಾಂ ಭಗವಾನ್ ಹರಿಃ।
ಋಕ್ ಪ್ರೋಕ್ತೋ ಲೋಹಿತಾಕಾರೋ ವಾಸುದೇವಃ ಪರಃ ಪುಮಾನ್।
ಸ ಏವ ಸೂರ್ಯ ಲೌಹಿತ್ಯೇ ಪ್ರಾಚ್ಯರಶ್ಮಿಷು ಸಂಸ್ಥಿತಃ।
ಸಂಕರ್ಷಣಃ ಶುಕ್ಲವರ್ಣೋ ಯಜುರ್ವೇದೋದಿತಃ ಪ್ರಭುಃ।
ಶುಕ್ಲವರ್ಣೇ ಚ ಸೂರ್ಯಸ್ಯ ದಕ್ಷರಶ್ಮಿಷು ಸಂಸ್ಥಿತಃ।
ಪ್ರದ್ಯುಮ್ನಃ ಶ್ಯಾಮವರ್ಣಸ್ತು ಸಾಮವೇದೋದಿತಃ ಪ್ರಭುಃ।
ಪ್ರತ್ಯಗ್ ರಶ್ಮಿಷು ಸೂರ್ಯಸ್ಯ ಶ್ಯಾಮವರ್ಣೇऽಪಿ ಚ ಸ್ಥಿತಃ।
ಅನಿರುದ್ಧಃ ಸುನೀಲಶ್ಚ ಇತಿಹಾಸಪುರಾಣೋಃ।
ಅಥರ್ವವೇದೇ ಚೋಕ್ತಸ್ತು ಉದಗ್ ರಶ್ಮಿಷು ಸಂಸ್ಥಿತಃ।
ಸುಕೃಷ್ಣೇ ಸೂರ್ಯರೂಪೇ ಚ ಮಧ್ಯೇ ನಾರಾಯಣಃ ಪ್ರಭುಃ।
ಊರ್ಧ್ವರಶ್ಮಿಷು ಸಂಸ್ಥಶ್ಚ ಪ್ರೋದ್ಯದಾದಿತ್ಯಸಪ್ರಭಃ।
ಮಹಾಮರೀಚಿಪುಂಜೇನ ಚಲತೀವಾಚಲೋऽಪಿ ಸನ್।
ಸ ವಾಚ್ಯಃ ಸರ್ವವೇದಾನಾಮೇವಂ ಪಂಚಾತ್ಮಕೋ ಹರಿಃ।
ವೇದಾನಾಂ ಸಾರಭೂತೋऽಸೌ ವೇದಾನಾಂ ನಿತ್ಯತಾಪ್ರದಃ।
ಅತೋऽಮೃತಾನಾಮಮೃತೋ ರಸಾನಾಂ ರಸ ಏವ ಚ।
ಇತಿ ಸಾಮಸಂಹಿತಾಯಾಮ್।

ಭಗವಾನ್ ಶ್ರೀಹರಿಯು ಸೂರ್ಯಮಂಡಲದಲ್ಲಿ ನೆಲಸಿದವನಾಗಿ ದೇವತೆಗಳಿಗೆ ಧರ್ಮ-ಮೋಕ್ಷಾದಿಗಳನ್ನು ಕೊಡುವನು. ಋಗ್ವೇದಪ್ರತಿಪಾದ್ಯನಾದ, ಕೆಂಪುಬಣ್ಣದ, ಸರ್ವೋತ್ತಮನಾದ ಆ ವಾಸುದೇವನು ಸೂರ್ಯನ ಕೆಂಪುವರ್ಣದಲ್ಲಿಯೂ ಪೂರ್ವದಿಕ್ಕಿನ

ಕಿರಣಗಳಲ್ಲಿಯೂ ಇರುವನು. ಸರ್ವೋತ್ತಮನೂ, ಯಜುರ್ವೇದ ಪ್ರತಿಪಾದ್ಯನೂ ಆದ ಬಿಳಿ ಬಣ್ಣಸಂಕರ್ಷಣನುಸೂರ್ಯನಶುಕ್ಲವರ್ಣದಲ್ಲಿಮತ್ತುಅವನದಕ್ಷಿಣದಿಕ್ಕಿನಕಿರಣಗಳಲ್ಲಿಯೂ ಇರುವನು. ಸರ್ವೋತ್ಕೃಷ್ಟನೂ, ಸಾಮವೇದಪ್ರತಿಪಾದ್ಯನೂ ಆದ ಕಪ್ಪು ಬಣ್ಣದ ಪ್ರದ್ಯುಮ್ನನು ಸೂರ್ಯನ ಪಶ್ಚಿಮದ ಕಿರಣಗಳಲ್ಲಿ ಮತ್ತು ಅವನ ಅತಿಕಪ್ಪು ಬಣ್ಣದಲ್ಲಿಯೂ ಇರುವನು. ಸರ್ವೋತ್ತಮನಾದ ನಾರಾಯಣನು ಸೂರ್ಯಮಂಡಲದ ಮಧ್ಯದಲ್ಲಿಯೂ, ಸೂರ್ಯನ ಉತ್ತರದ ಕಿರಣಗಳಲ್ಲಿಯೂ ಇರುವನು. ಉದಯಿಸುವ ಸೂರ್ಯನಂತೆ ಪ್ರಭೆಯುಳ್ಳ ಅವನು ನಿಶ್ಚಲನಾದರೂ, ಅತಿಯಾದ ಕಿರಣಗಳ ಸಮೂಹದಿಂದಾಗಿ ನೋಡುವವನ ದೃಷ್ಟಿಗೆ ಚಲಿಸುವವನಂತೆ ತೋರುವನು. ಆ ನಾರಾಯಣನು ಸಮಸ್ತ ವೇದಗಳಿಂದಲೂ ಪ್ರತಿಪಾದ್ಯನು. ಹೀಗೆ ಪಂಚರೂಪಿಯಾದ ಭಗವಂತನು ವೇದಗಳಿಂದ ಮುಖ್ಯಪ್ರತಿಪಾದ್ಯನೂ, ವೇದಗಳಿಗೆ ನಿತ್ಯತ್ವಪ್ರದಾಯಕನೂ ಆಗಿರುವನು. ಆದ್ದರಿಂದ 'ರಸಾನಾಂ ರಸಃ' ಎಂದೂ 'ಅಮೃತಾನಾಂ ಅಮೃತ' ಎಂದೂ ಹೇಳಲ್ಪಡುವನು, ಎಂದು ಸಾಮಸಂಹಿತೆಯಲ್ಲಿದೆ.

ನ ಚ ಅಚೇತನಮಾತ್ರಮುಪಾಸಿತಂ ಪುರುಷಾರ್ಥಪ್ರದಾನಶಕ್ತಮ್ । 'ಜ್ಯೇಷ್ಠಾಯ ಪುತ್ರಾಯ ಪಿತಾ ಬ್ರಹ್ಮ ಪ್ರಬ್ರೂಯಾತ್' ಇತಿ ವಾಕ್ಯಶೇಷಾಚ್ಚ ಏತದವಗಮ್ಯತೇ । 'ಯ ಏತಾಮೇವಂ ಬ್ರಹ್ಮೋಪನಿಷದಂ ವೇದೇ'ತಿ ಚ । ಕಥಂ ಚಾಚೇತನೋಪಾಸನಂ ಬ್ರಹ್ಮಾದಿಪದಪ್ರದಂ ಭವತಿ ? 'ನೈವ ತತ್ರ ನ ನಿಮ್ಲೋಚೋ ನೋದಿಯಾಯ ಕದಾಚನ' । 'ಸಕೃದ್ದಿವಾ ಹೈವಾಸ್ಮೈ ಭವತಿ' ಇತ್ಯಾದಿ ಮುಕ್ತಸ್ಯೈವ ಮುಖ್ಯತೋ ಯುಜ್ಯತೇ।

ಹಿಂದಿನ ಮಂತ್ರಗಳಲ್ಲಿ ಬೇರೆಯವರು ವ್ಯಾಖ್ಯಾನ ಮಾಡುವಂತೆ, ಆದಿತ್ಯನಲ್ಲಿರುವ ಜಡವಾದ ಕಪ್ಪುಬಣ್ಣದ ರೂಪವೇ ಮಧುವೆಂದು ಉಪಾಸನೆಗಾಗಿ ಪ್ರತಿಪಾದ್ಯವೆನ್ನುವುದು ಸರಿಯಲ್ಲ. ಚೇತನ ಸಂಬಂಧವಿಲ್ಲದ ಕೇವಲ ಜಡವಸ್ತುವು ಉಪಾಸನೆ ಮಾಡಲ್ಪಟ್ಟು ಫಲವನ್ನು ಕೊಡುವುದರಲ್ಲಿ ಸಮರ್ಥವಲ್ಲ. ಏಕೆಂದರೆ ಮುಂದಿನ ಮಂತ್ರಗಳಲ್ಲಿ ಉಪಾಸಕರಿಗೆ ವಸುರುದ್ರಾದಿಗಳ ಪದಪ್ರಾಪ್ತಿ ರೂಪವಾದ ಪುರುಷಾರ್ಥವನ್ನು ಹೇಳಿದ್ದಾರೆ. ಅದು ಅಸ್ವತಂತ್ರವಾದ ಜಡಕ್ಕೆ ಸರಿಯಾಗುವುದಿಲ್ಲವಾದ ಕಾರಣ, ಹಿಂದಿನ ಮಧುವಿದ್ಯೆಲ್ಲಿ ಚೇತನನಾದ ಪರಬ್ರಹ್ಮನೇ ಪ್ರತಿಪಾದ್ಯನಾಗಿರುವನು.

ಈ ಮಧುವಿದ್ಯಾ ಪ್ರಕರಣದ ಕೊನೆಯಲ್ಲಿ ಜ್ಯೇಷ್ಠಪುತ್ರನಿಗೆ ತಂದೆಯು ಬ್ರಹ್ಮನನ್ನುಪದೇಶಿಸಬೇಕು ಎಂದಿರುವುದರಿಂದಲೂ ಈ ಮಧುವಿದ್ಯೆಯು ಬ್ರಹ್ಮಪರವೆಂದು ತಿಳಿಯುವುದು. 'ಯಾರು ಪರಬ್ರಹ್ಮವಿಷಯಕವಾದ ಈ ರಹಸ್ಯವಿದ್ಯೆಯನ್ನು ತಿಳಿಯುವರೋ' ಎಂದೂ ಇರುವುದರಿಂದ ಮಧುವಿದ್ಯೆಯು ಪರಬ್ರಹ್ಮಪರವೆಂದು ತಿಳಿಯುತ್ತದೆ. ಸಾಧ್ಯಾನಾಮೇವೈಕೋ ಭೂತ್ವಾ ಎಂಬಲ್ಲಿ ಹೇಳಿರುವಂತೆ, ಬ್ರಹ್ಮಪದವೀಪ್ರಾಪ್ತಿರೂಪವಾದ

ಮಹಾಫಲಪ್ರದತ್ವವೂ ಕೂಡ ಅಚೇತನದ ಉಪಾಸನೆಗೆ ಹೇಗೆ ಯುಕ್ತವಾದೀತು ? ಮತ್ತು 'ಪರಬ್ರಹ್ಮನಲ್ಲಿ ಯಾವ ದೋಷಗಳೂ ಇಲ್ಲ. ಅವನಲ್ಲಿ ಉದಯಾಸ್ತಮಯಾದಿ ದೋಷಗಳೂ ಇಲ್ಲ' ಎಂದು ಹೇಳುವುದು ಯುಕ್ತವಾಗಲಾರದು. ಈ ವಿದ್ಯೆಯನ್ನು ಉಪಾಸನೆ ಮಾಡಿದವನಿಗೆ ಯಾವಾಗಲೂ ಹಗಲೇ ಇರುವುದು, ಎಂದು ಮುಂತಾಗಿ ಉದಯಾಸ್ತಮಯಾದಿ ದೋಷವಿಲ್ಲವೆಂದು ಈ ಪ್ರಕರಣದಲ್ಲಿ ಹೇಳಿರುವುದು ಮುಕ್ತನಾದ ಅಧಿಕಾರಿಗೆ ಮುಖ್ಯವಾಗಿ ಯುಕ್ತವಾಗುತ್ತದೆ.

ಯಶಸ್ತೇಜಃ ಇಂದ್ರಿಯವೀರ್ಯಾನ್ನಾದ್ಯರಸತ್ವಂ ಚ ಭಗವಂತಂ ವಿನಾ ಕಸ್ಯ ಮುಖ್ಯತೋ ಯುಜ್ಯತೇ ? ''ತಸ್ಯ ನಾಮ ಮಹದ್ ಯಶಃ'', ''ಐಶ್ವರ್ಯಸ್ಯ ಸಮಗ್ರಸ್ಯ ವೀರ್ಯಸ್ಯ ಯಶಸಃ ಶ್ರಿಯಃ । ಜ್ಞಾನ ವಿಜ್ಞಾನಯೋಶ್ಚೈವ ಷಣ್ಣಾಂ ಭಗ ಇತೀರಣಾ'' ''ರಸೋ ವೈ ಸಃ'', ''ಸುಖಾತ್ಮಕಂ ಷಡ್ ಗುಣವಿಗ್ರಹಂ ಪರಂ ಹೃದಿ ಸ್ಥಿತಂ ಬ್ರಹ್ಮ ನಿರಂಜನಂ ಸ್ವರುಕ್। ಐಶ್ವರ್ಯವೈರಾಗ್ಯಯಶೋವಿಬೋಧ ವೀರ್ಯಶ್ರಿಯಾ ಪೂರ್ಣಮಹಂ ಪ್ರಪದ್ಯೇ'' ''ಅಹಂ ತತ್ ತೇಜೋ ರಶ್ಮೀನ್ನಾರಾಯಣಂ ಪುರುಷಂ'' ಇತ್ಯಾದೇಶ್ಚ। ''ಧ್ಯೇಯಃ ಸದಾ ಸವಿತೃಮಂಡಲ ಮಧ್ಯವರ್ತೀ ನಾರಾಯಣಃ'' ಇತಿ ಚ ॥

ಮತ್ತು, ಜ್ಞಾನಾನಂದಸ್ವರೂಪತ್ವ, ಪ್ರಕಾಶರೂಪತ್ವ, ಪರಮೈಶ್ವರ್ಯರೂಪತ್ವ, ವೀರ್ಯರೂಪತ್ವ, ಸರ್ವಾನುಗ್ರಹಶಕ್ತತ್ವ, ಬಲರೂಪತ್ವ ಹಾಗೂ ಸರ್ವಶ್ರೇಷ್ಠತ್ವಗಳು ಭಗವಂತನಲ್ಲದೆ ಬೇರೆ ಯಾರಲ್ಲಿ ಮುಖ್ಯವಾಗಿ ಇರಲು ಸಾಧ್ಯ ? ಭಗವಂತನಲ್ಲಿ ಈ ಧರ್ಮಗಳಿವೆ ಎನ್ನಲು ಪ್ರಮಾಣವಿದೆ - ಆ ಭಗವಂತನ ಹೆಸರು 'ಮಹತ್ ಯಶಃ' ಎಂಬುದಾಗಿದೆ. ಸಮಗ್ರವಾದ ಸಾಮರ್ಥ್ಯ, ಪರಾಕ್ರಮ, ಯಶಸ್ಸು, ಜ್ಞಾನ, ಸಂಪತ್ತು, ವಿಜ್ಞಾನ ಈ ಆರಕ್ಕೆ 'ಭಗ' ಎಂದು ಹೆಸರು. ಇವುಗಳುಳ್ಳವನು ಭಗವಂತನಾದ ಶ್ರೀಹರಿಯೇ ರಸ, ಎಂದರೆ ಆ ಭಗವಂತನೇ. 'ಸುಖಸ್ವರೂಪನಾದ, ಸಾಮರ್ಥ್ಯ ಮೊದಲಾದ ಆರು ಗುಣಗಳೇ ದೇಹವಾಗಿವುಳ್ಳ ಉತ್ತಮನಾದ, ಹೃದಯದಲ್ಲಿರುವ, ಗುಣಪೂರ್ಣನಾದ, ದೋಷದೂರನಾದ, ಸ್ವಪ್ರಕಾಶನಾದ, ಸಾಮರ್ಥ್ಯ ವೈರಾಗ್ಯ, ಯಶಸ್ಸು, ವಿಜ್ಞಾನ, ವೀರ್ಯ, ಸಂಪತ್ತುಗಳಿಂದ ಪೂರ್ಣನಾದ ನಾರಾಯಣನನ್ನು ಮೊರೆಹೊಂದುವೆನು', ದೋಷದೂರನು, ವ್ಯಾಪ್ತನು, ತೇಜಃಸ್ವರೂಪನು, ಸೂರ್ಯಾದಿಗಳ ಕಿರಣಗಳಿಗೆ ಪ್ರೇರಕನೂ, ಪೂರ್ಣಷಡ್ಗುಣನೂ, ಸೃಷ್ಟಿಯ ಆದಿಕಾಲದಲ್ಲಿ ಪ್ರಾದುರ್ಭೂತನೂ ಆಗಿರುವ ನಾರಾಯಣನನ್ನು' ಎಂಬಿವೇ ಮೊದಲಾದ ಪ್ರಮಾಣಗಳಿರುವುದರಿಂದ, 'ಯಶಸ್ತೇಜಃ' ಇತ್ಯಾದಿಯಾಗಿ ಹೇಳಿದ್ದು ಭಗವಂತನಲ್ಲಿಯೇ ಸಮನ್ವಯವಾಗುತ್ತದೆ. 'ಸೂರ್ಯಮಂಡಲ ಮಧ್ಯದಲ್ಲಿರುವ ನಾರಾಯಣನು ಯಾವಾಗಲೂ ಧ್ಯಾನಮಾಡಲ್ಪಡಬೇಕು' ಎಂದೂ

ಪ್ರಮಾಣ ಇರುವುದರಿಂದ, 'ಭಗವಂತನು ಆದಿತ್ಯಾಂತರ್ಗತನಾಗಿದ್ದಾನೆ. ಆದ್ದರಿಂದ ಆದಿತ್ಯಾಂತರ್ಗತ ಭಗವಂತನು ಮಧು ಸದೃಶನೆಂದು ಉಪಾಸ್ಯನಾಗಿದ್ದಾನೆ' ಎಂದು ನಾವು ವ್ಯಾಖ್ಯಾನ ಮಾಡಿರುವುದೂ ಯುಕ್ತವಾಗುತ್ತದೆ.

ನ ಚಾಚೇತನಸ್ಯೈಶ್ವರ್ಯಾದಿರೂಪತ್ವಂ ಯುಜ್ಯತೇ । ''ಜ್ಞಾನಾತ್ಮಕೋ ಭಗವಾನ್ ಐಶ್ವರ್ಯಾತ್ಮಕೋ ಭಗವಾನ್ ಶಕ್ತ್ಯಾತ್ಮಕೋ ಭಗವಾನ್'' ಇತಿ ಚ ಶ್ರುತಿಃ । ''ಸರ್ವವೇದಾಂತಪ್ರತ್ಯಯಂ ಚೋದನಾದ್ಯವಿಶೇಷಾತ್'' ಇತಿ ಸರ್ವವೇದಪ್ರತಿಪಾದ್ಯತ್ವಂ ಭಗವತ ಉಕ್ತಂ ಭಗವತಾ । ''ಸ ಸರ್ವನಾಮಾ ಸ ಚ ವಿಶ್ವರೂಪಃ ಪ್ರಸೀದತಾಂ ಬ್ರಹ್ಮ ಮಹಾವಿಭೂತಿಃ।'' ಇತಿ ಚ। 'ಸರ್ವೇ ವೇದಾ ಯತ್ ಪದಮಾಮನಂತಿ', 'ತಾ ವಾ ಏತಾಃ ಸರ್ವಾ ಋಚಃ ಸರ್ವೇ ವೇದಾಃ ಸರ್ವೇ ಘೋಷಾ ಏಕೈವ ವ್ಯಾಹೃತಿಃ ಪ್ರಾಣ ಏವ', 'ವೇದೇ ರಾಮಾಯಣೇ ಚೈವ ಪುರಾಣೇ ಭಾರತೇ ತಥಾ। ಆದಾವಂತೇ ಚ ಮಧ್ಯೇ ಚ ವಿಷ್ಣುಃ ಸರ್ವತ್ರ ಗೀಯತೇ', 'ನಾಮಾನಿ ಸರ್ವಾಣಿ ಯಮಾವಿಶಂತಿ ತಂ ವೈ ವಿಷ್ಣುಂ ಪರಮಮುದಾಹರಂತಿ' ಇತ್ಯಾದೇಶ್ಚ।

ಅಚೇತನದಲ್ಲ ತೇಜೋರೂಪತ್ವ ಒಂದು ಪಕ್ಷ ಕೂಡಿದರೂ, ಐಶ್ವರ್ಯಾದಿ ರೂಪತ್ವವು ಸರ್ವಥಾ ಕೂಡುವುದಿಲ್ಲ. ಶ್ರೀಹರಿಯಾದರೆ ಕೂಡುತ್ತದೆ. ಭಗವಂತನು ಜ್ಞಾನಾತ್ಮಕ, ಐಶ್ವರ್ಯಾತ್ಮಕ, ಶಕ್ತ್ಯಾತ್ಮಕ ಎಂದು ಶ್ರುತಿ ಇದೆ. 'ಸರ್ವವೇದಾಂತ ಪ್ರತ್ಯಯಂ ಚೋದನಾದ್ಯವಿಶೇಷಾತ್' ಎಂಬ ಬ್ರಹ್ಮಸೂತ್ರದಲ್ಲಿ, ಭಗವಾನ್ ಶ್ರೀವೇದವ್ಯಾಸರು ಭಗವಂತನಿಗೇನೆ ಸರ್ವವೇದ ಪ್ರತಿಪಾದ್ಯತ್ವವನ್ನು ನಿರ್ಣಯಿಸಿದ್ದಾರೆ. ಆದ್ದರಿಂದಲೂ ಅಚೇತನವಾದ ಮಧುವು ಈ ವಿದ್ಯೆಯಲ್ಲಿ ಪ್ರತಿಪಾದ್ಯವಲ್ಲ. ''ಆ ಭಗವಂತನು ಸರ್ವನಾಮಗಳುಳ್ಳವನು. ಅವನೇ ಅನೇಕ ರೂಪಗಳುಳ್ಳವನು, ಮಹಾಐಶ್ವರ್ಯವುಳ್ಳ ಪರಿಪೂರ್ಣನಾದ ಆ ಭಗವಂತನು ಪ್ರಸನ್ನನಾಗಲಿ,' 'ಎಲ್ಲ ವೇದಗಳು ಯಾವ ಭಗವಂತನನ್ನು ಹೇಳುತ್ತವೋ', 'ಎಲ್ಲ ಋಕ್ಕುಗಳೂ ಎಲ್ಲ ವೇದಗಳೂ, ಎಲ್ಲ ಧ್ವನಿಗಳೂ ನಾರಾಯಣನಲ್ಲಿಯೇ ನಿರ್ದುಷ್ಟತ್ವ, ಗುಣಪೂರ್ಣತ್ವವನ್ನು ಹೇಳುವ ನಾಮಗಳೇ ಆಗಿವೆ'. 'ವೇದ ರಾಮಾಯಣ ಪುರಾಣ ಹಾಗೂ ಭಾರತ ಇವುಗಳಲ್ಲಿ ಆದಿ ಅಂತ್ಯ ಹಾಗೂ ಮಧ್ಯದಲ್ಲಿ ಎಲ್ಲೆಡೆಯಲ್ಲಿಯೂ ಆ ವಿಷ್ಣುವೇ ಸ್ತುತಿಸಲ್ಪಡುತ್ತಾನೆ', 'ಎಲ್ಲ ನಾಮಗಳೂ ಯಾರನ್ನು ಹೇಳುತ್ತವೋ ಅಂತ ವಿಷ್ಣುವನ್ನು ಸರ್ವೋತ್ತಮನೆನ್ನುತ್ತಾರೆ' ಇತ್ಯಾದಿ ಪ್ರಮಾಣಗಳಿರುವುದರಿಂದಲೂ ಶ್ರೀಹರಿಯೇ ಈ ಮಧುವಿದ್ಯೆಯಲ್ಲಿ ಪ್ರತಿಪಾದ್ಯ.

ಉಪನಿಷತ್ಸ್ವಚ್ಚ ವಿಶೇಷತೋ ನ ಯತ್ ಕಿಂಚಿದುಚ್ಯತೇ ಇತಿ ವಕ್ತುಂ ಯುಕ್ತಂ।
ವಿಷ್ಣುರುಕ್ತಃ ಸರ್ವವೇದ್ಯೆರ್ಮಂತ್ರೇಷು ತು ವಿಶೇಷತಃ।
ಆರಣ್ಯಕೇ ವಿಶೇಷೇಣ ನೈವಾನ್ಯತ್ ಕಿಂಚಿದುಚ್ಯತೇ।

ಕರ್ಮಾರ್ಥಂ ಚ ಬ್ರಾಹ್ಮಣಂ ಸ್ಯಾದ್ ಅಮುಖ್ಯಾರ್ಥವಿವಕ್ಷಯಾ -
ಮುಖ್ಯತೋ ವಿಷ್ಣುರೇವೈಕೋ ಬ್ರಾಹ್ಮಣೇಷ್ವಪಿ ಕಥ್ಯತೇ।
ಅರಣ್ಯಕೇಷು ಋತೇ ವಿಷ್ಣುಂ ನೈವಾನ್ಯತ್ ಕಿಂಚಿದುಚ್ಯತೇ।
ಸೂತ್ರಾತ್ಮಾ ತೂಚ್ಯತೇ ವಿಷ್ಣೋಃ ತದ್ವಿಶಿಷ್ಟತ್ವ ಎತ್ತಯೇ।
ಕುತ್ರಚಿತ್ ತದುಪಾಸ್ತಿಶ್ಚ ತಸ್ಯಾಧ್ಯರ್ಧತನುತ್ವತಃ।
ತಸ್ಮಿನ್ ವಿಷ್ಣೋರುಪಾಸ್ತ್ಯರ್ಥಂ ನಾನ್ಯಥಾ ಕಿಂಚಿದುಚ್ಯತೇ।

ಇತಿ ಬ್ರಹ್ಮಾಂಡೇ।

ಯಸ್ಯಾಂ ನ ಮೇ ಪಾವನಮಂಗ ಕರ್ಮ
ಸ್ಥಿತ್ಯುದ್ಭವತ್ರಾಣ ನಿರೋಧಮಸ್ಯ।
ಲೀಲಾವತಾರೈಧಿತಕರ್ಮ ವಾ ಸ್ಯಾತ್
ವಂಧ್ಯಾಂ ಗಿರಂ ತಾಂ ಬಿಭೃಯಾನ್ನ ಧೀರಃ।
ವಿತ್ತಂ ತ್ವತೀರ್ಥಿಕೃತಮಂಗ ವಾಚಂ
ಹೀನಾಂ ಮಯಾ ರಕ್ಷತಿ ದುಃಖದುಃಖೀ।
ಯನ್ನ ವ್ರಜಂತ್ಯಘಭಿದೋಽರಚನಾನುವಾದಾಃ।
ಶೃಣ್ವಂತಿ ಯೇಽನ್ಯ ವಿಷಯಾಃ ಕುಕಥಾ ಮತಿಘ್ನೀಃ।
ಯಾಸ್ತು ಶ್ರುತಾ ಹತ ಭಗೈಃ ನೃಭಿರಾತ್ತವೀರ್ಯಾಃ
ತಾನ್ ತಾನ್ ಕ್ಷಿಪಂತ್ಯಶರಣೇಷು ತಮಃಸು ಹಂತ''।

ಇತ್ಯಾದಿ ಭಗವದ್ವಚನಾಚ್ಚ।

''ಸರ್ವಾಸು ಶಾಖಾಸ್ವಾರಣಮಾವರ್ತಯೇದ್ ಆರಣಮಾವರ್ತಯೇದ್
ಉಪನಿಷದಮಾವರ್ತಯೇದ್ ಉಪನಿಷದಮಾವರ್ತಯೇತ್।''
ಇತ್ಯುಪನಿಷದಭ್ಯಾಸಸ್ಯ ಸತಾತ್ಪರ್ಯಂ ವಿಹಿತತ್ವಾತ್ ಅಭಗವದ್ವಿಷಯಸ್ಯ
ನಿಂದಿತತ್ವಾಚ್ಚನೋಪನಿಷತ್ತು ಅನ್ಯದುಚ್ಯತೇ।
ಅಭ್ಯಸೇದಧಿಯಜ್ಞಂ ಚಾಪ್ಯಧಿದೈವಂ ವಿಶೇಷತಃ।
ಆಧ್ಯಾತ್ಮಂ ತು ವಿಶೇಷೇಣ ಯಸ್ಮಾದ್ ವಿಷ್ಣುಸ್ತ್ರೀಷೂದಿತಃ। ಇತಿ ಸ್ಕಾಂದೇ।
ಮಾಂ ವಿಧತ್ತೇಽಭಿಧತ್ತೇ ಮಾಂ ವಿಕಲ್ಪ್ಯಾಪೋಹ್ಯ ಇತ್ಯಹಮ್।
ಇತ್ಯಸ್ಯಾ ಹೃದಯಂ ಸಾಕ್ಷಾನ್ನಾನ್ಯೋ ಮದ್ ವೇದ ಕಶ್ಚನ।
ಇತ್ಯಾದೇಶ್ಚ ಭಗವದುಪಾಸನಾ ಏವ ಸರ್ವತ್ರೋಕ್ತಾಃ।

ಪ್ರಸ್ತುತವಾದ ಮಧುವಿದ್ಯೆಯು ವಿಶೇಷವಾಗಿ ಉಪನಿಷತ್ ಆದ್ದರಿಂದಲೂ, ಬ್ರಹ್ಮಾತಿರಿಕ್ತವಾದ ಯಾವುದೋ ಒಂದು ವಿಷಯ ಇಲ್ಲಿ ಪ್ರತಿಪಾದ್ಯವಾಗಿದೆ ಎನ್ನುವುದು ಸರಿಯಲ್ಲ.

ಎಲ್ಲ ವೇದಗಳಿಂದ, ವಿಶೇಷವಾಗಿ ಎಲ್ಲ ಮಂತ್ರಗಳಿಂದ ವಿಷ್ಣುವೇ ಪ್ರತಿಪಾದ್ಯ ಉಪನಿಷತ್ತಿನಲ್ಲಿಯೂ ವಿಶೇಷವಾಗಿ ಶ್ರೀವಿಷ್ಣುವೇ ಪ್ರತಿಪಾದ್ಯ , ಹೊರತು ಬೇರೆ ಯಾವುದೋ ವಿಷಯವಲ್ಲ. ಬ್ರಾಹ್ಮಣ ಎಂಬ ವೇದಭಾಗವು ಮಾತ್ರ ಅಮುಖ್ಯಾರ್ಥ ವಿವಕ್ಷೆಯಿಂದ ಕರ್ಮಪ್ರಕ್ರಿಯೆಗಳನ್ನು ತಿಳಿಸುತ್ತದೆ. ಆದರೆ ಮುಖ್ಯವೃತ್ತಿಯಿಂದ ಶ್ರೀವಿಷ್ಣು ಒಬ್ಬನೇ ಬ್ರಾಹ್ಮಣಗಳಿಂದಲೂ ಪ್ರತಿಪಾದ್ಯ . ಉಪನಿಷತ್ತುಗಳಲ್ಲಿ ಶ್ರೀವಿಷ್ಣುವನ್ನು ಬಿಟ್ಟು ಬೇರೆ ಯಾವುದೂ ಪ್ರತಿಪಾದ್ಯವಲ್ಲ. ಆದರೂ ಉಪನಿಷತ್ತಿನಲ್ಲಿ ಕೆಲವು ಕಡೆ ಸೂತ್ರಸ್ವರೂಪನಾದ ವಾಯುವು ಪ್ರತಿಪಾದ್ಯನಾಗಿದ್ದಾನೆ. ಅದು, ವಾಯುವಿಗಿಂತಲೂ ಶ್ರೀಹರಿಯಲ್ಲಿ ಉತ್ತಮತ್ವವನ್ನು ತಿಳಿಸುವ ಉದ್ದೇಶದಿಂದಲೇ ಹೊರತು ಮುಖ್ಯವಾಗಿ ವಾಯುವನ್ನು ಹೇಳುವ ಉದ್ದೇಶದಿಂದಲ್ಲ. ಕೆಲವು ಕಡೆ ವಾಯುದೇವರ ಉಪಾಸನೆಯೇ ವಿಹಿತವಾದದ್ದು ಕಂಡಿದೆ. ಅದೂ ಕೂಡ ಬೇರೆಯವರಿಗಿಂತ ಅತ್ಯಂತ ಉತ್ತಮವಾದ ಪ್ರತಿಮೆಯೆನಿಸಿದ್ದರಿಂದ ವಾಯುವಿನಲ್ಲಿಯೇ ಶ್ರೀಹರಿಯ ಉಪಾಸನೆ ಮಾಡಬೇಕೆಂಬುದನ್ನು ತಿಳಿಸಲು ಹೊರತು ವಾಯುವೇ ಮುಖ್ಯ ಪ್ರತಿಪಾದ್ಯನೆಂದು ಅರ್ಥವಲ್ಲ, ಎಂದು ಬ್ರಹ್ಮಾಂಡ ಪುರಾಣದಲ್ಲಿದೆ.

'ಉದ್ಧವ ! ಯಾವ ಮಾತಿನಲ್ಲಿ ಜಗತ್ತಿನ ಸ್ಥಿತಿ, ಸೃಷ್ಟಿ, ಪಾಲನೆ, ಸಂಹಾರ ರೂಪವಾದ ನನ್ನ ಪಾವನ ಕರ್ಮಗಳಾಗಲೀ ಅಥವಾ ಲೀಲಾವತಾರಗಳಲ್ಲಿ ನಾನು ತೋರಿದ ಕರ್ಮಗಳಾಗಲೀ, ವರ್ಣಿಸಲ್ಪಡುವುದಿಲ್ಲವೋ, ಅಂಥ ವ್ಯರ್ಥವಾದ ಮಾತುಗಳನ್ನು ವಿವೇಕಿಯು ಆಡಬಾರದು', 'ಉದ್ಧವ ! ಸತ್ಪಾತ್ರದಲ್ಲಿ ದಾನ ಮಾಡದ ಸಂಪತ್ತನ್ನು ಇಟ್ಟುಕೊಳ್ಳುವವನು ಮತ್ತು ನನ್ನ ವಿಚಾರವಿಲ್ಲದ ಮಾತನ್ನು ಆಡುವವನು ಬಹುದುಃಖವನ್ನು ಅನುಭವಿಸುತ್ತಾನೆ', ಪಾಪಗಳನ್ನು ಕಳೆಯುವ ಶ್ರೀಹರಿಯ ಗುಣಾನುವಾದವಿಲ್ಲದ, ಅನ್ಯವಿಷಯಕವಾದ, ಹತಭಾಗ್ಯಜನರಿಂದಲೇ ಕೇಳಲ್ಪಡುವ, ಶ್ರೋತೃಗಳ ಶಕ್ತಿಯನ್ನು ಹೀರುವ ಆಯಾ ಅಯೋಗ್ಯ ಜನರನ್ನು ಅಂಧಂತಮಸ್ಸಿಗೆ ತಳ್ಳುವ, ತಲೆಕೆಡಿಸುವ ಕೆಟ್ಟಕಥೆಗಳಭ್ಞ ಯಾರು ಕೇಳುತ್ತಾರೋ ಅಂತಹವರಿಂದ ಹೊಂದಲ್ಪಡದಿರುವುದೇ ಶ್ರೀಹರಿಯ ಲೋಕ', ಇತ್ಯಾದಿಯಾಗಿ ಶ್ರೀಕೃಷ್ಣನ ಮಾತಿರುವುದರಿಂದಲೂ, 'ಎಲ್ಲಾ ಶಾಖೆಗಳಲ್ಲಿಯೂ ಅರಣ್ಯಕವನ್ನು ಆವೃತ್ತಿಮಾಡಬೇಕು. ಅರಣ್ಯಕವನ್ನು ಆವೃತ್ತಿಮಾಡಬೇಕು' ಉಪನಿಷತ್ತನ್ನು ಆವೃತ್ತಿಮಾಡಬೇಕು. ಉಪನಿಷತ್ತನ್ನು ಆವೃತ್ತಿ ಮಾಡಬೇಕು, ಎಂದು ಉಪನಿಷತ್ತಿನ ಅಭ್ಯಾಸವನ್ನು ತಾತ್ಪರ್ಯಪೂರ್ವಕ ವಿಧಿಸಿದ್ದರಿಂದಲೂ,

ಭಗವದ್ವಿಷಯಕವಲ್ಲದ ವಚನಗಳನ್ನು ನಿಂದಿಸಿರುವುದರಿಂದಲೂ ಉಪನಿಷತ್ತುಗಳಲ್ಲಿ ಬೇರೆ ಯಾವ ವಿಷಯವೂ ಮುಖ್ಯಪ್ರತಿಪಾದ್ಯವಲ್ಲ. 'ಯಜ್ಞಾದಿಕರ್ಮಗಳನ್ನು ಪ್ರತಿಪಾದಿಸುವ ಬ್ರಾಹ್ಮಣಗಳು, ದೇವತೆಗಳನ್ನು ವರ್ಣಿಸುವ ಮಂತ್ರಗಳು, ಪರಮಾತ್ಮನನ್ನು ಕುರಿತು ಹೇಳುವ ಆರಣ್ಯಕ ಈ ಮೂರನ್ನು ವಿಶೇಷವಾಗಿ ಅಧ್ಯಯನ ಮಾಡಬೇಕು ಏಕೆಂದರೆ ಈ ಮೂರರಲ್ಲೂ ಶ್ರೀವಿಷ್ಣುವೇ ಹೇಳಲ್ಪಟ್ಟಿದ್ದಾನೆ', ಎಂದೂ ಸ್ಕಾಂದಪುರಾಣದಲ್ಲಿದೆ. ಕರ್ಮಗಳನ್ನು ವಿಧಾನ ಮಾಡುವ ಶ್ರುತಿಯೂ ನನ್ನನ್ನೇ ವಿಧಿಸುತ್ತದೆ. ಇಂದ್ರಾದಿಗಳನ್ನು ಹೇಳುವ ಶ್ರುತಿಯೂ ನನ್ನನ್ನೇ ಹೇಳುತ್ತದೆ. ಚತ್ವಾರಿ ವಾಕ್ ಇತ್ಯಾದಿ ವೇದಗಳಿಂದಲೂ ನಾನೇ ವಿವಿಧರೂಪಗಳಿಂದ ಪ್ರತಿಪಾದ್ಯ, 'ನ ಸುರಾಂ ಪಿಬೇತ್' ಇತ್ಯಾದಿ ಶ್ರುತಿವಾಕ್ಯಗಳಿಂದ ಹೇಳಲ್ಪಟ್ಟ ನಿಷೇಧಕ್ಕೂ ನಾನೇ ವಿಷಯ ಅಂದರೆ "ಶ್ರೀಹರಿಯ ಗುಣಗಳು ನನಗಿರಲಿ" ಎಂಬ ಅನುಸಂಧಾನದ ನಿಷೇಧಕ್ಕೆ ನಾನೇ ವಿಷಯ, ಇಂಥ ಶ್ರುತಿಯ ಅಭಿಪ್ರಾಯವನ್ನು ನನ್ನ ಹೊರತು ಯಾರೂ ತಿಳಿಯುವುದಿಲ್ಲ' ಎಂದು ಮೊದಲಾಗಿ ಪ್ರಮಾಣಗಳಿರುವುದರಿಂದ ಎಲ್ಲ ಕಡೆಗಳಲ್ಲಿಯೂ ಭಗವಂತನ ಉಪಾಸನೆಯೇ ಹೇಳಲ್ಪಟ್ಟಿದೆ.

ಶ್ರೇಷ್ಠನಾದ ಮಹಾವಿಷ್ಣುವೇ ಸರ್ವಶಬ್ದಾರ್ಥ

सत्तर्कदीपावलिः – आदिशब्दादिदं तच्छिर एष ह्यवार्ग्-बिलश्चमस इत्यादि। तद्वदेव सर्वे वेदघोषाः सर्वदा यत्पदमामनन्ति यमिन्द्रमित्यादिवाक्यैरपि इन्द्रं मित्रमित्यादिवाक्यैरपि ज्योतिरादिकर्मक्रमकालादिप्रसिद्धसर्वशब्दार्थत्वेन सर्वस्मात्परत्वेन परस्य परमात्मनः कल्पनोपदेशात् । न कर्म क्रमकालाद्युक्त्या भगवद्वाचकत्वविरोधो भगवदुक्त्या वा कर्मक्रमादिवाचकत्वविरोध इत्यर्थः ।

'ಮಧವಿದ್ಯಾದಿವತ್' ಎಂಬ ಭಾಷ್ಯದಲ್ಲಿ ಆದಿಶಬ್ದವಿದೆ. ಇದರಿಂದ 'ಇದಂ ತಚ್ಛಿರ ಏಷ ಹ್ಯರ್ವಾಗ್-ಬಿಲಶ್ಚಮಸ' ಇತ್ಯಾದಿ ಶ್ರುತಿಯನ್ನೂ ಕೂಡ ವಿವಕ್ಷಿಸಬೇಕು. ಇದರಂತೆ 'ಸಕಲ ಸರ್ವೇ ವೇದಘೋಷಾಃ', 'ಸರ್ವದಾ ಯತ್ಪದಮಾಮನಂತಿ' 'ಯಮಿಂದ್ರಮ್' ಇತ್ಯಾದಿ ವಾಕ್ಯಗಳಿಂದ ಹಾಗೂ 'ಇಂದ್ರಂ ಮಿತ್ರಮ್' ಇತ್ಯಾದಿ ವಾಕ್ಯಗಳಿಂದಲೂ ಜ್ಯೋತಿರಾದಿ ಕರ್ಮಕ್ರಮ ಕಾಲ ಮೊದಲಾದ ಸರ್ವಶಬ್ದಗಳಿಂದ ಸರ್ವಶ್ರೇಷ್ಠನಾಗಿ ಪರಮಾತ್ಮನು ಪ್ರತಿಪಾದ್ಯನಾಗುತ್ತಾನೆ. ಹೀಗೆ ವೇದವು ಹೇಳುತ್ತಿದೆ ಎಂಬ ಅರ್ಥವನ್ನು ಭಾಷ್ಯದ ಮಾತಿಗೆ ತಿಳಿಯಬೇಕು.

ಕರ್ಮಕ್ರಮ ಹಾಗೂ ಕರ್ಮದ ಕಾಲ ಇವುಗಳನ್ನು ಹೇಳಿರುವುದರಿಂದ ಭಗವದ್ವಾಚಕತ್ವಕ್ಕೆ ವಿರೋಧ ಬರುತ್ತದೆ. ಅಥವಾ ಭಗವದುಕ್ತಿಯಿಂದ ಕರ್ಮಕ್ರಮಾದಿವಾಚಕತ್ವದ ವಿರೋಧ ಬರುತ್ತದೆಂದು ತಿಳಿಯಬಾರದು.

ಅನೇಕ ವೃತ್ತಿಪ್ರಭೇದಗಳಿಂದ ವಿರೋಧ ಪರಿಹಾರ

सत्तर्कदीपावलिः – न हि तिरोवंशादिशब्दानां द्यावावाकत्वे द्यौरेव तिरश्चनिवंशा इत्याद्यौपदेशिककल्पना युज्यते । एवं च रुढरुढयोगादिशब्दवृत्ति भेदाज्जातादिशब्दानां अर्थान्तरेऽपि मुख्यमात्रवृत्तौ सत्यां तत्पूर्वकत्वेन महयोगवृत्या परमेश्वरे ज्योतिरादिसर्वशब्दयुत्पत्तिः शक्तैव ।

'ತಿರೋವಂಶ' ಮೊದಲಾದ ಶಬ್ದಗಳು 'ದ್ಯು' ಎಂಬ ಲಕ್ಷ್ಯಾರ್ಥವನ್ನು ಪ್ರತಿಪಾದನೆ ಮಾಡದಿದ್ದರೆ, 'ದ್ಯು' ಎಂಬ ಲಕ್ಷ್ಯಾರ್ಥವೇ ತಿರೋವಂಶಳಾಗಿದ್ದಾಳೆ ಇತ್ಯಾದಿ ವೇದಗಳಲ್ಲಿ ಹೇಳಿದ್ದು ಯುಕ್ತವಾಗುವುದಿಲ್ಲ. ಆದ್ದರಿಂದ ರೂಢ, ರೂಢಯೋಗ ಇತ್ಯಾದಿ ಅನೇಕ ಶಬ್ದವೃತ್ತಿ - ಗಳಿರುವುದರಿಂದ ಜಾತಾದಿಶಬ್ದಗಳಿಗೆ ಬೇರೆ ಅರ್ಥದಲ್ಲಿ ಮುಖ್ಯವೃತ್ತಿಯನ್ನು ಅಂಗೀಕಾರ ಮಾಡಬೇಕು. ಅದೇ ಸಂದರ್ಭದಲ್ಲಿ ಮಹಾಯೋಗವೃತ್ತಿಯನ್ನು ವಿಷ್ಣುವಿನಲ್ಲೇ ಅಂಗೀಕರಿಸಿ ಜ್ಯೋತಿರಾದಿಶಬ್ದಗಳ ವ್ಯುತ್ಪತ್ತಿಯನ್ನು ಸಂಪಾದನೆ ಮಾಡಬೇಕು.

ಬಾಲರೂಢಿಯಿಲ್ಲದ ಕಾರಣ ಕಲ್ಪನೋಪದೇಶ

सत्तर्कदीपावलिः – यज्ञो वै विष्णुः अहम् क्रतुरहं यज्ञः त्वं क्रतुस्त्वंहविस्त्वं हुताशः स्वयमित्यादि विद्धद्रूढिदर्शनेपि बालरुढ्यभावादेव कल्पनोपदेशः । अतः प्रतिपदं च भगवद्वाचकत्वं सर्ववेदानामिति सिद्धम् ।

।। इति ज्योतिरुपक्रमाधिकरणम् ।।२।।

'ಯಜ್ಞೋ ವೈ ವಿಷ್ಣುಃ ಅಹಂ ಋತುರಹಂ ಯಜ್ಞಃ ತ್ವಂಕ್ರತುಸ್ತ್ವಂಹವಿಸ್ತ್ವಂ ಹುತಾಶಃ ಸ್ವಯಮ್' ಇತ್ಯಾದಿಯಾದ ವಿದ್ವದ್‌ರೂಢಿಗಳು ವೇದದಲ್ಲಿ ಇರುತ್ತವೆ. ಆದರೆ ಬಾಲರೂಢಿಯು

ಇಲ್ಲದ ಕಾರಣ ಲೋಕಸಿದ್ಧವಾದ ಶಬ್ದವೃತ್ತಿಯನ್ನು ವಿಷ್ಣುವಿನಲ್ಲಿ 'ತಾ ವಾ ಏತಾ' ಎಂಬುದಾಗಿ ಸರ್ವಶಬ್ದವಾಚ್ಯತ್ವವನ್ನು ಉಪದೇಶ ಮಾಡಲಾಗಿದೆ. ಆದ್ದರಿಂದ ವೇದದಲ್ಲಿರುವ ಪ್ರತಿಯೊಂದು ಪದಗಳು ಭಗವದ್ವಾಚಕವಾಗಿದೆ ಎಂಬುದು ಸಿದ್ಧವಾಯಿತು.

॥ ಇಲ್ಲಿಗೆ ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ ಸತ್ತರ್ಕದೀಪಾವಳಿಯಲ್ಲಿ
ಜ್ಯೋತಿರುಪಕ್ರಮಾಧಿಕರಣದ ಕನ್ನಡಾನುವಾದವು ಸಮಾಪ್ತವಾಯಿತು ॥

ತತ್ವಪ್ರದೀಪ

ಕರ್ಮಕ್ರಮಾದಿಗಳ ವಿರೋಧಪರಿಹಾರ

तत्वप्रदीपः – कर्मक्रमादिविरोधं परिहरति - कल्पनोपदेशाच्च मध्वादिवदविरोधः ।। ''असौ वा आदित्यो देवमधु'' इत्याद्यायां मधुविद्याश्रुतौ यथा मधुशब्दार्थत्वेनाऽदित्यस्थो विष्णुः कृत्स्न उपदिश्यते । मधुगुणानां तत्राधिक्यात्तस्यैव च परममुख्यमधुत्वं भवति ।

ಕರ್ಮಕ್ರಮಾದಿಗಳ ವಿರೋಧವನ್ನು ಪರಿಹರಿಸಲು 'ಕಲ್ಪನೋಪದೇಶಾಚ್ಚ ಮಧ್ವಾದಿವದ-ವಿರೋಧಃ' ಎಂಬ ಸೂತ್ರವು ಹೊರಟಿದೆ. 'ಅಸೌ ವಾ ಆದಿತ್ಯೋ ದೇವಮಧು' ಇತ್ಯಾದಿಯಾಗಿ ಛಾಂದೋಗ್ಯೋಪನಿಷತ್ತಿನಲ್ಲಿ ಆದಿತ್ಯಮಂಡಲದಲ್ಲಿರುವ ವಿಷ್ಣುವೇ ದೇವತೆಗಳಿಗೆ ಮಧು ಎನಿಸಿದ್ದಾನೆ ಎಂದು ಹೇಳಿದೆ. ಜೇನು ಹೇಗೆ ತನ್ನ ಮರಿಗಳಿಗೆ ಮಧುರಸದಿಂದ ತೃಪ್ತಿಯನ್ನು ನೀಡುತ್ತದೋ, ಅದರಂತೆ ಆದಿತ್ಯಮಂಡಲದಲ್ಲಿರುವ ವಿಷ್ಣುವು ತನ್ನ ಕಿರಣಗಳಿಂದ ವಸು ಮೊದಲಾದ ದೇವತೆಗಳಿಗೆ ತೃಪ್ತಿಯನ್ನು ನೀಡುತ್ತಾನೆ. ಆದ್ದರಿಂದಲೇ 'ಮಧು' ಎನಿಸಿದ್ದಾನೆ ಎಂದು ಈ ಶ್ರುತಿ ಹೇಳುತ್ತಿದೆ. ಹೀಗೆ ಮಧುಶಬ್ದಾರ್ಥ ಎನಿಸಿದವನು ಆದಿತ್ಯನಲ್ಲಿರುವ ವಿಷ್ಣುವೇ ಆಗಿದ್ದಾನೆ ಎಂದು ಉಪದೇಶಿಸಲಾಗಿದೆ. ಮಧುವಿನಲ್ಲಿರುವ ಗುಣವು ಅತ್ಯಧಿಕವಾಗಿ ಆ ವಿಷ್ಣುವಿನಲ್ಲೇ ಇರುವುದರಿಂದ ಪರಮಮುಖ್ಯಮಧುತ್ವವು ಅವನಲ್ಲೇ ಬರುತ್ತದೆ.

ಲೌಕಿಕಪದಾರ್ಥಗಳು ಮುಖ್ಯವೃತ್ತಿಯಿಂದ ಪ್ರತಿಪಾದ್ಯ

तत्वप्रदीपः – नच तावता प्रसिद्धमधुनि व्यवहारलोपो लोकानां भवति। एवमेव सर्वशब्दानां परममुख्यार्थत्वेन कृप्तिर्विष्णौ वेदेनोपदिश्यते । सा च कल्पना प्रबलाऽनादित्वात्, विद्वत्सम्बन्धित्वाच्च । तथाच श्रुतिः ''कश्छन्दसां योगमावेद धीर'' इत्यादिका ।

ವಿಷ್ಣುವನ್ನು ಮಧುವೆಂದ ಮಾತ್ರಕ್ಕೆ ಈ ಲೌಕಿಕವಾದ ಮಧುವಿನಲ್ಲೇ ವ್ಯವಹಾರಲೋಪಕ್ಕೆ ಅವಕಾಶವಿಲ್ಲ. ಅದರಂತೆ ಸಕಲಶಬ್ದಗಳು ಪರಮಮುಖ್ಯಾರ್ಥತ್ವೇನ ವಿಷ್ಣುವಿನಲ್ಲಿ ವೇದವು ಉಪದೇಶ ಮಾಡುತ್ತಿದೆ. ಹೀಗೆ ವ್ಯಾಖ್ಯಾನ ಮಾಡುವುದು ಅನಾದಿಸಂಪ್ರದಾಯಬದ್ಧವಾಗಿದೆ. ಆದ್ದರಿಂದಲೇ ಪ್ರಬಲವಾಗಿದೆ. ವಿದ್ವತ್‌ಸಂಬಂಧಿಯಾಗಿರುವುದರಿಂದಲೂ ಪ್ರಬಲವಾಗಿದೆ. ಆದ್ದರಿಂದಲೇ ಶ್ರುತಿ 'ಕಶ್ಛಂದಸಾಂ ಯೋಗಮಾವೇದ ಧೀರ' ಎಂಬುದಾಗಿ ಅನಾದಿ-ಸಂಪ್ರದಾಯವನ್ನು ಉಲ್ಲೇಖ ಮಾಡುತ್ತಿದೆ.

ಪರಮಮುಖ್ಯವೃತ್ತಿಯಿಂದ ವಿಷ್ಣುವೇ ಪ್ರತಿಪಾದ್ಯ

तत्वप्रदीपः – अविद्वदपेक्षया कल्पनेत्युच्यते । मुख्यातिमुख्यवृत्तिभेदेन च वाच्यद्वयसम्भवो न दण्डवारितः । कृष्णादिशब्देषु तद्दर्शनात् । तस्मान्न व्यवहारलोपः ।।

।। इति ज्योतिरधिकरणम् ।।

ಸೂತ್ರದಲ್ಲಿ ಅವಿದ್ವಾಂಸರ ಅರ್ಥವನ್ನು ಉಲ್ಲೇಖ ಮಾಡಲು 'ಕಲ್ಪನಾ' ಎಂಬ ಪದವನ್ನು ಪ್ರಯೋಗ ಮಾಡಲಾಗಿದೆ. 'ಕಲ್ಪನಾ' ಎಂದರೆ 'ಲೋಕದಲ್ಲಿ ಕ್ಲೃಪ್ತವಾದದ್ದು' ಎಂದರ್ಥ. ಒಂದೇ ಶಬ್ದವು ಮುಖ್ಯವೃತ್ತಿಯಿಂದ ಲೌಕಿಕಾರ್ಥವನ್ನು ಹೇಳಿದರೆ ಅತಿಮುಖ್ಯವೃತ್ತಿಯಿಂದ ವಿಷ್ಣುವನ್ನು ಹೇಳುತ್ತದೆ. ಒಂದೇ ಪದಕ್ಕೆ ಮುಖ್ಯ ಮತ್ತು ಅತಿಮುಖ್ಯಭೇದದಿಂದ ಎರಡು ವಾಚ್ಯಗಳು ಸಿದ್ಧವಾಗುತ್ತದೆಂಬುದನ್ನು ಸಮರ್ಥಿಸಿದಂತಾಯಿತು. ಲೋಕದಲ್ಲೂ ಕೂಡ ಕೃಷ್ಣ ಮೊದಲಾದ ಶಬ್ದಗಳನ್ನು ಮನುಷ್ಯರಲ್ಲಿ ಪ್ರಯೋಗ ಮಾಡಲಾಗುತ್ತದೆ. ಮುಖ್ಯವೃತ್ತಿಯಿಂದ

ಪರಮಾತ್ಮನಲ್ಲೂ ಪ್ರಯೋಗ ಮಾಡುವುದು ಕಂಡಿದೆ. ಆದ್ದರಿಂದ ವ್ಯವಹಾರಲೋಪಕ್ಕೆ ಅವಕಾಶವಿಲ್ಲ.

ವಿವರಣೆ - ಛಾಂದೋಗ್ಯೋಪನಿಷತ್ತಿನಲ್ಲಿ ಆದಿತ್ಯನಲ್ಲಿರುವ ವಿಷ್ಣುವನ್ನು 'ಮಧು' ಎಂದು ಕರೆಯಲಾಗಿದೆ. ಅಂದಮಾತ್ರಕ್ಕೆ ಲೌಕಿಕವಾದ ಜೇನನ್ನು ಯಾರೂ ಕೂಡ ಮಧು ಎಂದು ಕರೆಯುವುದಿಲ್ಲ ಎಂದೇನಿಲ್ಲ. ಆದ್ದರಿಂದ ವೈದಿಕಶಬ್ದಗಳಿಂದ ವಿಷ್ಣು ಪರಮಮುಖ್ಯವೃತ್ತಿಯಿಂದ ವಾಚ್ಯನಾಗುತ್ತಾನೆ. ಮುಖ್ಯವೃತ್ತಿಯಿಂದ ಲೌಕಿಕಪದಾರ್ಥಗಳು ಪ್ರತಿಪಾದ್ಯವಾಗುತ್ತವೆ. ಸೂತ್ರದಲ್ಲಿರುವ 'ಕಲ್ಪನಾ' ಎಂಬ ಪದಕ್ಕೆ ಲೋಕದಲ್ಲಿ ಕ್ಲೃಪ್ತವಾದದ್ದು ಎಂದರ್ಥ. ಅಂಥ ಶಬ್ದಗಳನ್ನು ವಿಷ್ಣುವಿನಲ್ಲಿ ಬೃಹದಾರಣ್ಯಕವು 'ಮಧು' ಇತ್ಯಾದಿ ಶಬ್ದಗಳ ಉದಾಹರಣೆಯಿಂದ ಸಮನ್ವಯ ಮಾಡುತ್ತಿದೆ. ಆದ್ದರಿಂದ ಸರ್ವಶಬ್ದವಾಚ್ಯತ್ವಕ್ಕೆ ಯಾವುದೇ ವಿರೋಧವಿಲ್ಲ ಎಂಬುದು ಈ ಸೂತ್ರದ ಅಭಿಪ್ರಾಯ.

॥ ಇಲ್ಲಿಗೆ ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ ತತ್ತ್ವಪ್ರದೀಪದಲ್ಲಿ ಜ್ಯೋತಿರುಪಕ್ರಮಾಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

ತತ್ತ್ವಪ್ರಕಾಶಿಕಾ

ವ್ಯುತ್ಪತ್ತಿಯ ಸಮರ್ಥನೆಗಾಗಿ ಈ ಸೂತ್ರ

ननु कथं ज्योतिरादिशब्दवाच्यत्वं परमात्मनः सम्भवति ? कर्मक्रमादि-विरोधात्, व्युत्पत्त्यसम्भवाच्च, इत्याशङ्कामपनुदत् सूत्रमुपन्यस्य व्याचष्टे – कल्पनेति ॥

ಪ್ರಶ್ನೆ - ವೇದದಲ್ಲಿರುವ 'ಜ್ಯೋತಿಃ' ಮೊದಲಾದ ಶಬ್ದಗಳಿಂದ ಪರಮಾತ್ಮನೊಬ್ಬನೇ ಪ್ರತಿಪಾದ್ಯನಾಗಲು ಹೇಗೆ ಸಾಧ್ಯ ? ಹಾಗೇನಾದರೂ ಸಕಲವಿಧ ಶಬ್ದಗಳಿಂದ ಪರಮಾತ್ಮನು ಮಾತ್ರ ಪ್ರತಿಪಾದ್ಯನಾಗಿದ್ದಾನೆಂದು ಹೇಳುವುದಾದರೆ ಜ್ಯೋತಿಷ್ಟೋಮಾದಿ ಕರ್ಮಗಳು ಅವುಗಳ ಕ್ರಮಗಳು, ಬೇರೆ ಯಾವುದೇ ಶಬ್ದಗಳಿಂದ ಪ್ರತಿಪಾದ್ಯವಾಗದ ಕಾರಣ ಅವುಗಳಿಗೆ ಲೋಪ ಬರಬೇಕಾದೀತು. ಮತ್ತು ಆಯಾ ಶಬ್ದಗಳ ವ್ಯುತ್ಪತ್ತಿಯನ್ನೂ ಕೂಡ ಪರಮಾತ್ಮನಲ್ಲಿ ಮಾಡಲು

ಸಾಧ್ಯವಾಗುವುದಿಲ್ಲ. ಏಕೆಂದರೆ ಹಿಂದಿನ ಮುಂದಿನ ಪದಗಳೆಲ್ಲವೂ ವಿಷ್ಣು ಎಂಬ ಒಂದೇ ಅರ್ಥವನ್ನು ಹೇಳುವುದಾದರೆ ವ್ಯುತ್ಪತ್ತಿ ಹೇಗೆ ಕೂಡುತ್ತದೆ?

ಉತ್ತರ - ಈ ಆಶಂಕೆಗೆ ಉತ್ತರಿಸಲು ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ 'ಕಲ್ಪನಾ' ಇತ್ಯಾದಿಯಾಗಿ.

ಕರ್ಮಕ್ರಮದ ವಿರೋಧವೂ ಇಲ್ಲ, ವ್ಯುತ್ಪತ್ತಿಯೂ ಕೂಡುತ್ತದೆ

तत्वप्रकाशिका – सर्वशब्दानां परमात्मवाचित्वेऽपि न कर्मक्रमादिविरोधः, व्युत्पत्त्ययोगो वा ।

ಎಲ್ಲಾ ವಿಧವಾದ ಶಬ್ದಗಳಿಂದ ಪರಮಾತ್ಮನು ಪ್ರತಿಪಾದ್ಯನಾಗಿದ್ದಾನೆಂದು ಒಪ್ಪಿದರೂ ಕೂಡ ಜ್ಯೋತಿಷ್ಟೋಮಾದಿ ಕರ್ಮಗಳ ಹಾಗೂ ಅವುಗಳ ಕ್ರಮಗಳ ವಿರೋಧವೂ ಬರಬೇಕಾದೀತು ಎಂಬ ವಿರೋಧವು ಬರುವುದಿಲ್ಲ. ಮತ್ತು ಶಬ್ದಗಳ ವ್ಯುತ್ಪತ್ತಿಯೂ ಕೂಡ ಅಸಂಭಾವಿತ-ವಾಗುತ್ತದೆಂಬ ಆಕ್ಷೇಪಕ್ಕೂ ಅವಕಾಶವಿಲ್ಲ.

ಈ ವಿಷಯದಲ್ಲಿ 'ಅಸೌ ವಾ ಆದಿತ್ಯೋ ದೇವಮಧು' ಎಂಬ ಶ್ರುತಿಯ ಉದಾಹರಣೆ

तत्वप्रकाशिका – यथा खलु मधुविद्यायाम् 'असौ वा आदित्यो देवमधु' इत्यादिना मध्वादिपदार्थतया परमात्मोपासनोपदेशेऽपि, न लौकिकमध्वादि-वाचकाभावेन तदभावविरोधः ।

ಯಾವರೀತಿಯಾಗಿ ಮಧುವಿದ್ಯೆಯಲ್ಲಿ 'ಅಸೌ ವಾ ಆದಿತ್ಯೋ ದೇವಮಧು' ಇತ್ಯಾದಿಯಾಗಿ ಆದಿತ್ಯನಲ್ಲಿರುವ ಪರಮಾತ್ಮನು ಮಧುವಾಗಿದ್ದಾನೆ. ಎಲ್ಲಾ ದೇವತೆಗಳಿಗೆ ಆಶ್ರಯನಾಗಿದ್ದಾನೆ ಮತ್ತು ಸುಖಪೂರ್ಣನಾಗಿದ್ದಾನೆಂಬುದಾಗಿ 'ಮಧು' ಮೊದಲಾದ ಪದಗಳಿಂದ ಪ್ರತಿಪಾದ್ಯನಾಗಿದ್ದಾನೆಂಬ ಉಪಾಸನೆಯನ್ನು ಶ್ರುತಿಯು ಉಪದೇಶಿಸುತ್ತಿದೆ. ಆದರೂ ಕೂಡ ಲೌಕಿಕವಾದ ಮಧುವನ್ನು ಕೂಡ ಶ್ರುತಿಯು ಪ್ರತಿಪಾದನೆ ಮಾಡುತ್ತಿದೆ. ಆದ್ದರಿಂದ ಲೌಕಿಕವಾದ 'ಮಧು' ಎಂಬ ಪದಾರ್ಥವು ಅಸಿದ್ಧವಾಗುತ್ತದೆಂಬ ವಿರೋಧ ಬರುವುದಿಲ್ಲ.

ಈಶ್ವರನಲ್ಲಿ ಮಹಾಯೋಗವೃತ್ತಿಯಿಂದ ಸಮನ್ವಯ

तत्वप्रकाशिका – अन्यत्ररूढिमनिवार्यैव महायोगवृत्त्या मध्वादि-शब्दानामीश्वरादौ वृत्त्यभ्युपगमात् ।

ಏಕೆಂದರೆ ಬೇರೆ ಪದಾರ್ಥಗಳಲ್ಲಿ ರೂಢಿಯನ್ನು ಅಂಗೀಕರಿಸಿಯೇ ಮಹಾಯೋಗವೃತ್ತಿಯಿಂದ ಮಧು ಮೊದಲಾದ ಶಬ್ದಗಳನ್ನು ಈಶ್ವರನಲ್ಲಿ ಮುಖ್ಯವೃತ್ತಿಯಿಂದ ನಾವು ಸಮನ್ವಯ ಮಾಡುತ್ತಿದ್ದೇವೆ.

ಅನೇಕ ಬಗೆಯ ವೃತ್ತಿಗಳು

तत्वप्रकाशिका – एवं सर्वशब्दवाच्यत्वे परमात्मनोऽभ्युपगतेऽपि न कर्मादिविरोधः । ज्योतिरादिशब्दानामन्यत्ररूढिः, योगः, योगरूढिः, रूढोपचारः, रूढलक्षणा, उपचारः, लक्षणा इति वृत्तीरभ्युपेत्य महायोगवृत्येश्वर-वाचित्वाभ्युपगमात् ।

ಇದರಂತೆ ಪರಮಾತ್ಮನು ಸಕಲವಿಧವಾದ ಶಬ್ದಗಳಿಂದ ಪ್ರತಿಪಾದ್ಯನಾಗಿದ್ದಾನೆ ಎಂದು ಅಂಗೀಕರಿಸಿದರೂ ಕೂಡ ಯಾವುದೇ ಕರ್ಮ, ಕ್ರಮಾದಿಗಳ ವಿರೋಧವು ಬರುವುದಿಲ್ಲ. ಏಕೆಂದರೆ 'ಜ್ಯೋತಿ' ಮೊದಲಾದ ಶಬ್ದಗಳಿಗೆ ಯುಗಾದಿ ಪದಾರ್ಥಗಳಲ್ಲಿ ರೂಢಿ, ಯೋಗ, ಯೋಗರೂಢಿ, ರೂಢೋಪಚಾರ, ರೂಢಲಕ್ಷಣಾ, ಉಪಚಾರ, ಲಕ್ಷಣಾ. ಇಷ್ಟು ವೃತ್ತಿಗಳಲ್ಲಿ ಯಾವುದೇ ಒಂದು ವೃತ್ತಿಯಿಂದಲೂ ಪ್ರತಿಪಾದನೆ ಮಾಡಬಹುದು. ಆದರೆ ಮಹಾಯೋಗ-ವೃತ್ತಿಯಿಂದ ಪರಮಾತ್ಮನನ್ನೇ ಪ್ರತಿಪಾದನೆ ಮಾಡುತ್ತವೆ ಎಂಬುದು ನಮ್ಮ ಸಿದ್ಧಾಂತ.

'ಪ್ರಾಣ ಋಚ ಇತ್ಯೇವ ವಿದ್ಯಾತ್' ಎಂಬ ಶ್ರುತಿಯ ಆಧಾರ

तत्वप्रकाशिका – सर्वशब्दवाच्यत्वमीश्वरस्य चोपासनार्थमेव त्वुपदिश्यते 'प्राण ऋच इत्येव विद्यात्' इत्यादेः ।।

ಸಕಲವಿಧವಾದ ಶಬ್ದಗಳು ಈಶ್ವರನನ್ನು ಉಪಾಸನೆಗೋಸ್ಕರ ಪ್ರತಿಪಾದನೆ ಮಾಡುತ್ತಿದೆ ಎಂಬುದಾಗಿ 'ಪ್ರಾಣ ಋಚ ಇತ್ಯೇವ ವಿದ್ಯಾತ್' ಎಂಬ ಉಪದೇಶವಾಕ್ಯವಿದೆ.

ಪರಮಾತ್ಮನಲ್ಲಿರುವ ಶಬ್ದಗಳು ಸಂಕೇತವಲ್ಲ

तत्वप्रकाशिका – उपासना च महायोगवृत्त्या सर्वशब्दार्थगुणवत्त्वेनैव, नतु सङ्केतमात्रेण, इति भावः ।

ಈ ಉಪಾಸನೆಯಾದರೂ ಕೂಡ ಮಹಾಯೋಗವೃತ್ತಿಯಿಂದ ಸಕಲಶಬ್ದಗಳ ಅಭಿಧಾವೃತ್ತಿಯನ್ನು ತಿಳಿಯಬೇಕು. ಆವಾಗ ಆಯಾ ಶಬ್ದಗಳಿಂದ ತಿಳಿಯುವಂತಹ ಗುಣಗಳು ಪರಮಾತ್ಮನಲ್ಲಿ ನಿರವಧಿಕವಾಗಿ ಸಿದ್ಧವಾಗುತ್ತವೆ ಹೊರತು, ಲೋಕದಲ್ಲಿ ಚೈತ್ರಮೈತ್ರಾದಿ ಶಬ್ದಗಳಂತೆ ಕೇವಲ ಸಂಕೇತದಿಂದ ಪರಮಾತ್ಮನು ಪ್ರತಿಪಾದ್ಯನಾಗುವುದಿಲ್ಲ.

ಸೂತ್ರದ 'ಚ' ಶಬ್ದಾರ್ಥ

तत्वप्रकाशिका – 'च' शब्द एवार्थः । 'विरोधश्च न' इति वा ।

ಸೂತ್ರದಲ್ಲಿರುವ 'ಚ' ಶಬ್ದವು ಅವಧಾರಣಾರ್ಥದಲ್ಲಿದೆ. ಅಥವಾ ವಿರೋಧವೂ ಕೂಡ ಇರುವುದಿಲ್ಲ ಎಂಬುದಾಗಿ ಸಮುಚ್ಚಯಾರ್ಥದಲ್ಲಿಯೂ ಇರುತ್ತದೆ.

ಏಳು ಬಗೆಯ ವೃತ್ತಿಗಳ ಲಕ್ಷಣ

तत्वप्रकाशिका – प्रयोगमात्रबाहुल्यं रूढिः । यथा घटादिशब्दानां कुम्भादौ ।

ಒಟ್ಟು ಏಳು ಬಗೆಯ ವೃತ್ತಿಗಳಿವೆ. ಅವುಗಳ ಲಕ್ಷಣ ಹಾಗೂ ಉದಾಹರಣೆಗಳನ್ನು ಹೀಗೆ ತಿಳಿಯಬೇಕು - ಯಾವ ಅರ್ಥದಲ್ಲಿ ಬಹಳವಾದ ಪ್ರಯೋಗವಷ್ಟೇ ಇರುತ್ತದೋ, ಅದು 'ರೂಢಿ' ಎನಿಸಿಕೊಳ್ಳುತ್ತದೆ. ಉದಾಹರಣೆ - 'ಮಡಿಕೆ' ಮೊದಲಾದವುಗಳಲ್ಲಿ 'ಘಟ' ಮೊದಲಾದ ಶಬ್ದಗಳನ್ನು ಪ್ರಯೋಗಿಸುತ್ತಾರೆ. 'ಮಡಿಕೆ' ಎಂಬರ್ಥದಲ್ಲಿ ಘಟಶಬ್ದಕ್ಕೆ ಕೇವಲ ರೂಢಿಯಿರುತ್ತದೆ.

ಯೋಗವೃತ್ತಿ

तत्वप्रकाशिका – प्रवृत्तिनिमित्तमात्रमपेक्ष्य वृत्तिर्योगः । यथा धूमध्वजादिशब्दानामग्न्यादौ । प्रवृत्तिनिमित्तं प्रयोगबाहुल्यं च योगरूढिः ।

ಪ್ರವೃತ್ತಿನಿಮಿತ್ತವನ್ನು ಮಾತ್ರ ಅಪೇಕ್ಷಿಸಿ, ಶಬ್ದವೃತ್ತಿಯಿದ್ದರೆ 'ಯೋಗ' ಎನ್ನುತ್ತಾರೆ.

ಉದಾಹರಣೆ - 'ಧೂಮಧ್ವಜ' ಎಂಬ ಶಬ್ದವು ಅಗ್ನಿಯಲ್ಲಿ ಪ್ರವೃತ್ತಿನಿಮಿತ್ತ ಹಾಗೂ ಪ್ರಯೋಗ-ಬಾಹುಲ್ಯ ಎರಡನ್ನೂ ಹೊಂದಿ ಪ್ರಸಿದ್ಧವಾಗಿವೆ.

ಯೋಗರೂಢಿ

तत्वप्रकाशिका – यथा पङ्कजादिशब्दानां पद्मादौ ।

ಮತ್ತು 'ಪಂಕಜ' ಶಬ್ದಕ್ಕೆ ಕಮಲದಲ್ಲಿ ರೂಢಿಯೇ ಇರುತ್ತದೆ. 'ಪಂಕಜನಿಕರ್ತೃತ್ವ' ಎಂಬ ಅರ್ಥದ ವಿವಕ್ಷೆಯಿಂದ ಯೋಗವೂ ಕೂಡ ಇರುತ್ತದೆ. ಇಂತಹ ಶಬ್ದಗಳೂ ಯೋಗರೂಢಿ-ಯೆನಿಸಿಕೊಳ್ಳುತ್ತದೆ.

ಉಪಚಾರ

तत्वप्रकाशिका – मुख्यार्थस्य शब्दप्रवृत्तिनिमित्तातिरिक्तगुणयोगेन वृत्तिरुपचारः । तत्र च प्रयोगबाहुल्यं रूढोपचारः । यथा लिखितसिंहादौ सिंहादिशब्दानाम् ।

ಶಬ್ದದ ಪ್ರವೃತ್ತಿನಿಮಿತ್ತವೆನಿಸಿದ ಮುಖ್ಯಾರ್ಥವನ್ನು ಬಿಟ್ಟು, ಬೇರೆ ಗುಣಗಳನ್ನು ಶ್ರುತಿಯು ಪ್ರತಿಪಾದನೆ ಮಾಡಿದರೆ ಅದನ್ನು ಉಪಚಾರ ಎನ್ನುತ್ತಾರೆ. ಈ ಉಪಚಾರವೂ ಕೂಡ ಎರಡು ವಿಧ - ರೂಢೋಪಚಾರ, ರೂಢಲಕ್ಷಣ ಎಂದು. ಪ್ರಯೋಗಬಾಹುಲ್ಯವಿದ್ದರೆ ಅದನ್ನು ರೂಢೋಪಚಾರ ಎನ್ನಬೇಕು. ಉದಾಹರಣೆ - ಚಿತ್ರದಲ್ಲಿ ಬರೆದಿರುವ ಸಿಂಹವನ್ನು ನೋಡಿ, 'ಸಿಂಹಃ' ಎಂಬ ಶಬ್ದವನ್ನು ಪ್ರಯೋಗಿಸುತ್ತಾರೆ. ಸಿಂಹಶಬ್ದದ ಪ್ರವೃತ್ತಿನಿಮಿತ್ತವನ್ನು ವಿವಕ್ಷಿಸದೇ ಎಲ್ಲರೂ ವ್ಯವಹರಿಸುವುದರಿಂದ ಇದನ್ನು ರೂಢೋಪಚಾರ ಎನ್ನಬೇಕು.

ಲಕ್ಷಣಾ

तत्वप्रकाशिका – वाच्यार्थानुपपत्त्या योग्येऽवाच्ये वृत्तिर्लक्षणा । तत्र च प्रयोगबाहुल्ये रूढलक्षणा । यथा ग्रामो गच्छतीत्यत्र ग्रामसम्बन्धिपुरुषे ग्रामशब्दस्य ।

ವಾಚ್ಯಾರ್ಥವು ಅನುಪಪನ್ನವಾದಾಗ ಯೋಗ್ಯವಾದ ವಾಚ್ಯವಲ್ಲದ ಅರ್ಥದಲ್ಲಿ ವೃತ್ತಿಯಿದ್ದರೆ ಅದನ್ನು ಲಕ್ಷಣಾವೃತ್ತಿಯೆನ್ನುತ್ತಾರೆ. ಅಲ್ಲಿ ಪ್ರಯೋಗಬಾಹುಲ್ಯವಿದ್ದರೆ 'ರೂಢಿಲಕ್ಷಣಾ' ಎನ್ನುತ್ತಾರೆ. ಉದಾಹರಣೆ - 'ಗ್ರಾಮೋ ಗಚ್ಛತಿ' 'ಗ್ರಾಮವು ಹೋಗುತ್ತಿದೆ' ಎಂಬಲ್ಲಿ ಗಮನವೆಂಬ ಕ್ರಿಯೆಯು ಗ್ರಾಮದಲ್ಲಿ ಅನುಪಪನ್ನವಾದ್ದರಿಂದ ಗ್ರಾಮಶಬ್ದಕ್ಕೆ 'ಗ್ರಾಮಕ್ಕೆ ಸಂಬಂಧಪಟ್ಟ ಜನರು' ಎಂಬರ್ಥವನ್ನು ಮಾಡಬೇಕು. ಹೀಗೆ ಬಹುಜನರ ಪ್ರಯೋಗವಿರುವುದರಿಂದ ಇದನ್ನು ರೂಢಲಕ್ಷಣಾ ಎನ್ನುತ್ತಾರೆ.

ಲಕ್ಷಣಾವೃತ್ತಿಗೆ ಉದಾಹರಣೆ

तत्वप्रकाशिका – उपचारमात्रं यथा पैङ्गल्यादियुते माणावकेऽग्निशब्दस्य। लक्षणामात्रं यथा नदीशब्दस्य तीरे ।

ಹಳದಿಬಣ್ಣದ ಬಟ್ಟೆಯುಟ್ಟಿರುವ ಮಾಣವಕನಲ್ಲಿ 'ಅಗ್ನಿರ್ಮಾಣವಕಃ' ಎಂಬ ಶಬ್ದವನ್ನು ಪ್ರಯೋಗಿಸಲಾಗುತ್ತದೆ. ಇದನ್ನು ಉಪಚಾರ ವೃತ್ತಿಯೆಂದಿದ್ದಾರೆ. ಕೇವಲ ಲಕ್ಷಣಾವೃತ್ತಿಗೆ ಉದಾಹರಣೆ- 'ಗಂಗಾಯಾಂ ಘೋಷಃ' ಎಂಬುದು. ಗಂಗಾ ಶಬ್ದವು ಪ್ರವಾಹವನ್ನು ಹೇಳದೇ ತೀರವನ್ನು ಹೇಳುತ್ತಿವುದರಿಂದ ತೀರದಲ್ಲಿ ಲಕ್ಷಣಾವೃತ್ತಿಯನ್ನು ಹೇಳಬೇಕಾಗುತ್ತದೆ.

ಎರಡು ಪ್ರಕಾರದ ವೃತ್ತಿಗಳು ಮಾತ್ರ ದೇವರಲ್ಲಿ

तत्वप्रकाशिका – एताः वृत्तयो लोके । हरौ तु महायोगो महारुढियोगश्च। तत्र तदितरत्र प्रसिद्धशब्दानां महायोगः, निरतिशयप्रवृत्तिनिमित्तसद्भावात् ।

ಹೀಗೆ ಲೌಕಿಕ ವ್ಯವಹಾರದಲ್ಲಿ ಏಳು ಬಗೆಯ ವಸ್ತುಗಳಿರುತ್ತವೆ. ಪರಮಾತ್ಮನಲ್ಲಾದರೂ ಮಹಾಯೋಗ, ಮಹಾರೂಢಿಯೋಗ ಎಂಬ ಎರಡೇ ಪ್ರಕಾರದ ಶಬ್ದಗಳಿರುತ್ತವೆ. ಇವುಗಳಲ್ಲಿ ಬೇರೆಡೆ ಪ್ರಸಿದ್ಧವಾದ ಇಂದ್ರಾದಿ ಶಬ್ದಗಳನ್ನು ಪರಮಾತ್ಮನಲ್ಲಿ ಮಹಾಯೋಗವೃತ್ತಿಯಿಂದ ತಿಳಿಯಬೇಕು. ಏಕೆಂದರೆ ಆಯಾ ಶಬ್ದಗಳ ಪ್ರವೃತ್ತಿನಿಮಿತ್ತವಾದ ಗುಣವು ನಿರತಿಶಯವಾಗಿ ಪರಮಾತ್ಮನಲ್ಲೇ ಇರುತ್ತದೆ.

ಮಹಾಯೋಗರೂಢಿಗೆ ಉದಾಹರಣೆ

तत्वप्रकाशिका – तदेकनिष्ठानां महारूढियोगः । नारायणादिशब्दानां तत्र बहुप्रयोगयुक्तत्वान्निरतिशयप्रवृत्तिनिमित्तसद्भावाच्च ।

ಮತ್ತು ಯಾವ ಶಬ್ದಗಳು ಪರಮಾತ್ಮನನ್ನೇ ಪ್ರತಿಪಾದನೆ ಮಾಡುತ್ತವೋ ಅಂತಹ ಶಬ್ದಗಳು ಅವನಲ್ಲಿ ಮಹಾರೂಢಯೋಗದಿಂದ ಇರುತ್ತವೆಂದು ತಿಳಿಯಬೇಕು. ಉದಾಹರಣೆ - ನಾರಾಯಣ ಮೊದಲಾದ ಶಬ್ದಗಳು ಪರಮಾತ್ಮನಲ್ಲಿ ಹೆಚ್ಚಾಗಿ ಪ್ರವೃತ್ತವಾಗಿವೆ. ಅವುಗಳ ಪ್ರವೃತ್ತಿನಿಮಿತ್ತವೂ ಕೂಡ ಪರಮಾತ್ಮನಲ್ಲಿ ನಿರತಿಶಯವಾಗಿ ಇರುತ್ತವೆ.

ಈಗ ಸಮನ್ವಯವು ನಿರಾತಂಕ

तत्वप्रकाशिका – स्तम्भादिशब्दानां हरौ विद्यद्रूढिसद्भावेऽपि, सार्वजनीनताऽभावेनाऽमहत्त्वात् भेदः । अतः कर्मतदङ्गवाजिशब्दवाच्यो हरिरिति सिद्धम् ।।

।। इति श्रीमज्जयतीर्थभिक्षुविरचितायां तत्वप्रकाशिकायाम्
ज्योतिरुपक्रमाधिकरणम् ।।

'ಸ್ತಂಭ' ಮೊದಲಾದ ಶಬ್ದಗಳಿಗೆ ಶ್ರೀಹರಿಯಲ್ಲಿ ವಿದ್ವದ್ರೂಢಿ ಇದ್ದರೂ ಕೂಡ ಎಲ್ಲಾ ಬಗೆಯ ಜನರು ಪರಮಾತ್ಮನಲ್ಲಿ ಅದನ್ನು ವ್ಯವಹರಿಸುವುದಿಲ್ಲ. ಮಹಾರೂಢಿ ಎಂಬುದನ್ನು ಅಲ್ಲಿ ಪ್ರತ್ಯೇಕವಾಗಿ ಅಂಗೀಕರಿಸಿಲ್ಲ. ಆದ್ದರಿಂದ ಕರ್ಮ ಹಾಗೂ ತದಂಗಗಳನ್ನು ಪ್ರತಿಪಾದನೆ ಮಾಡುವ ಶಬ್ದಗಳಿಗೆಲ್ಲಾ ಪರಮಾತ್ಮನೇ ಮುಖ್ಯವಾಗಿ ಪ್ರತಿಪಾದ್ಯನಾಗುತ್ತಾನೆಂಬ ವಿಷಯವು ಸಿದ್ಧವಾಯಿತು.

।। ಇಲ್ಲಿಗೆ ಶ್ರೀಮಜ್ಜಯತೀರ್ಥಮುನಿಗಳಿಂದ ವಿರಚಿತವಾದ ತತ್ವಪ್ರಕಾಶಿಕಾಟೀಕೆಯಲ್ಲಿ
ಜ್ಯೋತಿರುಪಕ್ರಮಾಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ।।

।। ಶ್ರೀಕೃಷ್ಣಾರ್ಪಣಮಸ್ತು ।।

ಭಾವದೀಪ

ಆಕಾಂಕ್ಷಾಕ್ರಮದಿಂದ ವ್ಯಾಖ್ಯಾನ

मध्वित्यादिभाष्यमाकाङ्क्षाक्रमेण व्याचष्टे – सर्वशब्दानामिति ।।

'ಮಧುವಿದ್ಯಾದಿ' ಇತ್ಯಾದಿ ಭಾಷ್ಯವನ್ನು ಆಕಾಂಕ್ಷಾಕ್ರಮದಿಂದ ವ್ಯಾಖ್ಯಾನ ಮಾಡಲು ಟೀಕೆಯಲ್ಲಿ 'ಸರ್ವಶಬ್ದಾನಾಮ್' ಇತ್ಯಾದಿ ವಾಕ್ಯಗಳು ಹೊರಟಿವೆ.

ಭಾಷ್ಯದ ಮಾತು ಉಪಲಕ್ಷಣ

भावदीपः – न कर्मक्रमादिविरोध इति भाष्यं व्युत्पत्तेरप्यशक्यतेत्यनुभाष्योक्तस्य उपलक्षणमिति भावः ।।

'न कर्मक्रमादिविरोधः' ಎಂಬ ಭಾಷ್ಯವಾಕ್ಯವು ಮತ್ತು 'व्युत्पत्तेरप्यशक्यता' ಎಂಬ ಅನುವ್ಯಾಖ್ಯಾನದ ವಾಕ್ಯವು ಉಪಲಕ್ಷಣವಾಗಿದೆ ಎಂದು ತಿಳಿಯಬೇಕು. ಇದನ್ನು ಟೀಕೆಯಲ್ಲಿ 'ಸರ್ವಶಬ್ದಾನಾಮ್' ಇತ್ಯಾದಿ ವಾಕ್ಯದಿಂದ ಸ್ಪಷ್ಟಪಡಿಸಿದ್ದಾರೆ.

'ತಾವಾ ಏತಾಃ' ಎಂಬ ಶ್ರುತ್ಯರ್ಥ

भावदीपः – यथेति ।। छन्दोग्ये तृतीयाध्यायोक्तमधुविद्यायामित्यर्थः । कल्पनोपदेशादित्यत्र कल्पनं लोकतः क्रमं तत्तद्वाचित्वमनिवार्यैव लोकात् क्रमहायोगवृत्तेः कल्पनाया व्युत्पादनेन ।

'ಯಥಾ ಖಲು' ಇತ್ಯಾದಿಯಾಗಿ ಟೀಕೆಯಲ್ಲಿ ಉದಾಹರಿಸಿದ ವಾಕ್ಯವು ಛಾಂದೋಗ್ಯದ ತೃತೀಯಾಧ್ಯಾಯದಲ್ಲಿರುವ ಮಧುವಿದ್ಯೆಯಲ್ಲಿ ಪ್ರಸಕ್ತವಾಗಿದೆ ಎಂದು ತಿಳಿಯಬೇಕು. 'ಕಲ್ಪನೋಪದೇಶಾತ್' ಎಂಬ ಸೂತ್ರದಲ್ಲಿ ಎರಡು ಅರ್ಥವನ್ನು ತಿಳಿಯಬೇಕು. ಕಲ್ಪನಂ = ಲೋಕ ವ್ಯವಹಾರದಲ್ಲಿರುವ ಶಬ್ದಗಳಿಗೆ ಆಯಾ ಪದಾರ್ಥವಾಚಕತ್ವವನ್ನು ಬಿಡದೆ ಮಹಾಯೋಗವೃತ್ತಿಯನ್ನು, 'ಕಲ್ಪನಾಯಾಃ' = ಮಹಾವಿಷ್ಣುವಿನಲ್ಲಿ ವ್ಯುತ್ಪತ್ತಿಯಿಂದ, 'ಉಪದೇಶಾತ್' = ಅಂಗೀಕರಿಸಿರುವುದರಿಂದ ಲೋಕಸಿದ್ಧವಾದ ವೃತ್ತಿಯನ್ನು ಬಿಡದೆ ಕಲ್ಪನಯಾ = ಮಾಹಾವಿಷ್ಣುವಿನಲ್ಲಿ ಪರಮುಖ್ಯಯಿಂದ ವೃತ್ತಿಯನ್ನು ಸ್ವೀಕರಿಸಿದ್ದರಿಂದ, ಉಪದೇಶಾತ್ = ಸರ್ವಶಬ್ದವಾಚ್ಯನೆಂದು 'ತಾವಾ ಏತಾಃ.....' ಇತ್ಯಾದಿ ಮಂತ್ರಗಳಿಂದ

ಉಪದೇಶ ಮಾಡಿರುವುದರಿಂದ, ಕಲ್ಪನಾಯಾಃ = 'ಸರ್ವಶಬ್ದವಾಚ್ಯ' ಎಂಬ ಉಪಾಸನೆಯನ್ನು 'ಪ್ರಾಣ ಋಚ ಇತ್ಯೇವ ವಿದ್ಯಾತ್' ಇತ್ಯಾದಿಯಾಗಿ ಉಪದೇಶಾತ್ = ಉಪದೇಶ ಮಾಡಿದ್ದರಿಂದ ಅವಿರೋಧಃ = ಯಾಗಾದಿ ಕರ್ಮಗಳು ಇಲ್ಲದ ಪರಿಸ್ಥಿತಿ ಬರುವುದಿಲ್ಲ. ಮಧ್ವಾದಿತವ್ = ಮಧುಶಬ್ದದ ಪ್ರಯೋಗದಂತೆ. ಹೀಗೆ ಎರಡು ಅರ್ಥವನ್ನು ಸೂತ್ರದಲ್ಲಿ ವಿವಕ್ಷಿಸಿ ಹೇತು ಅಂಶವನ್ನು ದೃಷ್ಟಾಂತದಲ್ಲಿ ಸಮನ್ವಯ ಮಾಡುತ್ತಿದ್ದಾರೆ. 'ಅನ್ಯತ್ರ' ಇತ್ಯಾದಿಯಾಗಿ.

ಹೇತುವನ್ನು ಪರಾಮರ್ಶಿಸಬೇಕು

भावदीपः – उपदेशादिति अर्थद्वयमुपेत्य हेत्वंशं दृष्टान्तेऽपि योजयति – अन्यत्रेति ।। उक्तहेतुं परामृश्य दार्ष्टान्तिकं योजयति – एवमिति ।।

ಹಿಂದೆ ಹೇಳಿದ ಹೇತುವನ್ನು ಪರಾಮರ್ಶೆ ಮಾಡಿ ದಾರ್ಷ್ಟಾಂತಿಕದಲ್ಲಿ ಸಮನ್ವಯಮಾಡಲು 'ಏವಂ' ಇತ್ಯಾದಿ ವಾಕ್ಯವು ಹೊರಟಿದೆ.

ನ್ಯಾಯವಿವರಣದ ಮಾತೂ ಕೂಡ ಉಪಲಕ್ಷಣ

भावदीपः – कथमित्याकाङ्क्षायां रूढी, रूढियोगो, महायोगो, महारूढियोगो रूढोपचारो रूढलक्षणा उपचारो लक्षणा इति शब्दवृत्तिभेदात् रूढिपूर्वकत्वेन महायोगवृत्त्या परमेश्वरेऽखिलशब्दव्युत्पत्त्युपपत्तेरिति न्यायविवरणोक्तमुपलक्षणं मत्वा लोकविषयं वृत्तिसप्तकं दर्शयन्नेव तद्विवृण्वान एवमित्युक्तं व्यनक्ति – ज्योतिरादीति ।।

ದಾರ್ಷ್ಟಾಂತಿಕನಾದ ಪರಮಾತ್ಮನಲ್ಲಿ ಸಕಲಶಬ್ದವಾಚತ್ವವನ್ನು ಹೇಗೆ ತಿಳಿಯಬೇಕು ಎಂಬ ಆಕಾಂಕ್ಷೆಗೆ ಹೀಗೆ ಉತ್ತರವನ್ನು ತಿಳಿಯಬೇಕು. ೧ ರೂಢಿ, ೨. ರೂಢಿಯೋಗ, ೩. ಮಹಾಯೋಗ, ೪. ಮಹಾರೂಢಿಯೋಗ, ೫. ರೂಢೋಪಚಾರ, ೬. ರೂಢಲಕ್ಷಣ, ೭. ಉಪಚಾರ, ೮. ಲಕ್ಷಣಾ ಹೀಗೆ ಎಂಟು ಬಗೆಯ ಶಬ್ದವೃತ್ತಿಗಳು ಪ್ರಸಿದ್ಧವಾಗಿವೆ. ಇವುಗಳಲ್ಲಿ ರೂಢಿಯಿಂದ ಸಹಿತವಾದ ಮಹಾಯೋಗ ವೃತ್ತಿಯಿಂದ ಪರಮಾತ್ಮನು ಮಾತ್ರ ಸಕಲಶಬ್ದಪ್ರತಿಪಾದ್ಯನಾಗುತ್ತಾನೆ. ಹೀಗೆ ನ್ಯಾಯವಿವರಣದ ಮಾತನ್ನು ಉಪಲಕ್ಷಣವನ್ನಾಗಿ ತಿಳಿದು ಲೋಕವಿಷಯದಲ್ಲಿರುವ ಏಳು ಬಗೆಯ ವೃತ್ತಿಗಳನ್ನು ತೋರಿಸುತ್ತಾ ಅದನ್ನು ವಿವರಿಸಲು 'ಏವಂ' ಎಂಬ ವಾಕ್ಯದಿಂದ ಹೇಳಿದ್ದನ್ನೇ 'ಜ್ಯೋತಿರಾದಿ' ಎಂಬ ಮುಂದಿನ ವಾಕ್ಯದಿಂದ ವಿವರಿಸುತ್ತಿದ್ದಾರೆ.

ಪರಮಾತ್ಮನಲ್ಲಿರುವ ಪ್ರವೃತಿನಿಮಿತ್ತವು ಅತ್ಯಧಿಕ

ಭಾವದೀಪಃ – ಮಹಾಯೋಗೇತಿ ।। ಪ್ರವೃತ್ತಿನಿಮಿತ್ತಾಧಿಕ್ಯಾದಿತಿ ಭಾವಃ । ಭಾಷ್ಯೇ 'ಪ್ರಾಣ ಋಚ ಇತ್ಯೇವ ವಿದ್ಯಾತ್' ಇತಿ ವಾಕ್ಯಶೇಷೋಕ್ತ್ಯನುರೋಧೇನ ಕಲ್ಪನೋಪದೇಶಾದಿತ್ಯಸ್ಯ ಸರ್ವಶಬ್ದವಾಚ್ಯತ್ವೇನ ಕಲ್ಪನಾಯಾ ಉಪದೇಶಾದಿತ್ಯರ್ಥಾನ್ತರಂ ಚಾಹ – ಸರ್ವಶಬ್ದವಾಚ್ಯತ್ವಮಿತಿ ।।

'ಮಹಾಯೋಗವೃತ್ಯಾ' ಎಂಬುದಾಗಿ ಟೀಕೆಯಲ್ಲಿ ಪರಮಾತ್ಮನನ್ನೇ ಮಹಾಯೋಗವೃತ್ತಿಯಿಂದ ಶಬ್ದಗಳು ಪ್ರತಿಪಾದನೆ ಮಾಡುತ್ತವೆ ಎಂದು ಹೇಳಿದ್ದಾರೆ. ಏಕೆಂದರೆ ಪರಮಾತ್ಮನಲ್ಲಿ ಪ್ರವೃತ್ತಿನಿಮಿತ್ತವು ಅಧಿಕಮಾಗಿವೆ.

ಭಾಷ್ಯದಲ್ಲಿ 'ಪ್ರಾಣ ಋಚ ಇತ್ಯೇವ ವಿದ್ಯಾತ್' ಎಂಬ ವಾಕ್ಯಶೇಷವನ್ನು ಉಲ್ಲೇಖಿಸಿದ್ದಕ್ಕೆ ಅನುಸಾರಿಯಾಗಿ 'ಕಲ್ಪನೋಪದೇಶಾತ್' ಎಂಬ ಸೂತ್ರಕ್ಕೆ 'ಕಲ್ಪನಾಯಾ ಉಪದೇಶಾತ್' ಎಂಬ ಅರ್ಥಾಂತರವನ್ನು ವಿವಕ್ಷಿಸಿ 'ಸರ್ವಶಬ್ದವಾಚ್ಯತ್ವಮ್' ಎಂಬ ಮುಂದಿನ ಟೀಕಾವಾಕ್ಯವು ಹೊರಟಿದೆ.

ಸೂತ್ರದ 'ಚ' ಶಬ್ದವು ಅವಧಾರಣಾರ್ಥಕ

ಭಾವದೀಪಃ – ವಾಚ್ಯತ್ವಂ ಚೇತಿ ಚಾನ್ವಯಃ ।। ಚಶಬ್ದ ಇತಿ ।। ಲೋಕಸಿದ್ಧವೃತ್ತೀರ ನಿವಾರ್ಯೈವೇತಿ ಸರ್ವಶಬ್ದಾರ್ಥಗುಣತ್ವೇನೈವೇತಿ ವಾऽಧ್ಯಾಹೃತೇನಾನ್ವಯ ಇತಿ ಭಾವಃ ।।

ಮುಂದಿರುವ 'ಚ' ಶಬ್ದವನ್ನು 'ವಾಚ್ಯತ್ವ' ಎಂಬಲ್ಲಿ ಅನ್ವಯ ಮಾಡಬೇಕು.

ಸೂತ್ರದಲ್ಲಿರುವ 'ಚ' ಶಬ್ದವು ಅವಧಾರಣಾರ್ಥದಲ್ಲಿದೆ ಎಂದು ಟೀಕೆಯಲ್ಲಿ 'ಚ ಶಬ್ದಃ' ಎಂಬ ವಾಕ್ಯದಿಂದ ಹೇಳಿದ್ದಾರೆ. ''ಲೋಕಸಿದ್ಧವೃತ್ತೀಃ ಅನಿರ್ವಾರ್ಯೈವ'' ಅಥವಾ ''ಸರ್ವಶಬ್ದಾರ್ಥ-ಗುಣತ್ವೇನೈವ'' ಎಂಬುದಾಗಿ ಅಧ್ಯಾಹೃತವಾದ ಪದದ ಜೊತೆಗೆ ಏವಾರ್ಥದಲ್ಲಿರುವ 'ಚ' ಶಬ್ದಾರ್ಥಕ್ಕೆ ಅನ್ವಯವನ್ನು ತಿಳಿಯಬೇಕು.

ಯಾವುದನ್ನು ಸಮುಚ್ಚಯ ಮಾಡಬೇಕು ?

ಭಾವದೀಪಃ – ವಿರೋಧಶ್ಚೇತಿ ।। ನ ಕೇವಲಂ ತಥಾ ಹ್ಯಧೀಯತ ಇತ್ಯುಕ್ತಸಾಧಕಮಸ್ತೀತಿ ಸಮುಚ್ಚಯಾರ್ಥ ಇತ್ಯರ್ಥಃ ।

ಟೀಕೆಯಲ್ಲಿ 'ವಿರೋಧಶ್ಚ ನೇತಿ ವಾ' ಎಂಬುದಾಗಿ ವಿರೋಧವೂ ಕೂಡ ಇರುವುದಿಲ್ಲವೆಂಬ ಸಮುಚ್ಛಯಾರ್ಥದಲ್ಲಿ 'ಚ' ಶಬ್ದವು ಇರುತ್ತದೆಂದು ವ್ಯಾಖ್ಯಾನ ಮಾಡಿದ್ದಾರೆ. ಯಾವುದನ್ನು ಸಮುಚ್ಚಯ ಮಾಡಬೇಕೆಂದರೆ 'ನ ಕೇವಲಂ ತಥಾ ಹ್ಯಧೀಯತ ಇತ್ಯುಕ್ತಸಾಧಕಮಸ್ತೀತಿ'' 'ಹಿಂದೆ ಹೇಳಿದ 'ತಥಾಹ್ಯಧೀಯತೇ' ಎಂಬ ಸಾಧನವಷ್ಟೇ ಇರುವುದಲ್ಲ' ಎಂಬುದನ್ನು ಸಮುಚ್ಛಯ ಮಾಡಬೇಕು.

ವೃತ್ತಿಗಳು ಒಂಬತ್ತು

भावदीपः – न्यायविवरणोक्तं वृत्त्यष्टकं योगवृत्तेरुपलक्षणमिति भावेन लक्षणोदाहरणाभ्यां वृत्तिनवकं व्यनक्ति – प्रयोगमात्रेति ।।

ನ್ಯಾಯವಿವರಣದಲ್ಲಿ ಉಲ್ಲೇಖಿಸಿದ ಎಂಟು ಬಗೆಯ ವೃತ್ತಿಗಳು ಯೋಗವೃತ್ತಿಗೆ ಉಪಲಕ್ಷಣವಾಗಿದೆ ಎಂಬ ಅಭಿಪ್ರಾಯದಿಂದ ಅದರ ಲಕ್ಷಣವನ್ನು ಮತ್ತು ಉದಾರಣೆಯನ್ನು ಹೇಳುವ ಮೂಲಕ ಒಂಬತ್ತು ಬಗೆಯ ವೃತ್ತಿಯನ್ನು 'ಪ್ರಯೋಗಮಾತ್ರ' ಇತ್ಯಾದಿ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ.

ಅನುವ್ಯಾಖ್ಯಾನದಲ್ಲಿ ರೂಢಿಯ ಬಗ್ಗೆ

भावदीपः – 'प्रयोगमात्रबाहुल्यं रूढिरित्यभिधीयते' इत्याद्यनुभाष्योक्तेरिति भावः ।

''ಪ್ರಯೋಗಮಾತ್ರಬಾಹುಲ್ಯಂ ರೂಢಿರಿತ್ಯಭಿಧೀಯತೇ'' ಬಹಳವಾದ ಪ್ರಯೋಗವಿದ್ದರೆ ಅದನ್ನು 'ರೂಢಿ' ಎನ್ನುತ್ತಾರೆ ಎಂಬ ಅನುವ್ಯಾಖ್ಯಾನ ಮಾತಿನಂತೆ ಪ್ರಯೋಗಮಾತ್ರಬಾಹುಲ್ಯವೇ ರೂಢಿಶಬ್ದದ ಲಕ್ಷಣವೆಂದು ತಿಳಿಯಬೇಕು.

ಇನ್ನೂ ಹೆಚ್ಚಿನ ವಿಚಾರ ತರ್ಕತಾಂಡವದಲ್ಲಿ

भावदीपः – मात्रेति अवयवार्थसादृश्यादिसापेक्षतान्युदासः । व्यक्तमेतत्सर्वं तर्कताण्डवे द्वितीयपरिच्छेदे ।। मुख्यार्थस्येति ।। गुणयोगेनेत्यन्वयः ।।

ಮಾತ್ರಪದದಿಂದ ಅವಯವಾರ್ಥಸಾದೃಶ್ಯ ಮೊದಲಾದವುಗಳನ್ನು ನಿರಾಕರಿಸಿದ್ದಾರೆ. ತರ್ಕತಾಂಡವದ ದ್ವಿತೀಯ ಪರಿಚ್ಛೇದದಲ್ಲಿ ಈ ವಿಷಯ ಹೆಚ್ಚು ಸ್ಪಷ್ಟವಾಗುತ್ತದೆ. 'ಮುಖ್ಯಾರ್ಥಸ್ಯ' ಎಂಬುದಕ್ಕೆ 'ಗುಣಯೋಗೇನ' ಎಂಬಲ್ಲಿ ಅನ್ವಯವನ್ನು ತಿಳಿಯಬೇಕು.

ಮಹಾರೂಢಿಯು ಶ್ರೀಹರಿಯಲ್ಲಿ ಏಕಿಲ್ಲ ?

ಭಾವದೀಪಃ – तदितरत्रेति ।। स्तम्भेन्द्रादिशब्दानामित्यर्थः । महारूढिस्तु हरौ न सम्भवति 'विद्वद्रूढिर्वैदिका स्यात् सा योगादेव लभ्यते' इत्यनुभाष्ये ब्रह्मणि योगं विना विद्वद्रूढेरभावोक्तेरिति भावः ।

'ತದಿತರತ್ರ' ಎಂಬ ಪದಕ್ಕೆ ಸ್ತಂಭ, ಇಂದ್ರ ಮೊದಲಾದ ಶಬ್ದಗಳಲ್ಲಿ ಎಂದರ್ಥ. ಮಹಾರೂಢಿಯು ಶ್ರೀಹರಿಯಲ್ಲಿ ಯುಕ್ತವಾಗುವುದಿಲ್ಲ. ಏಕೆಂದರೆ ''ವಿದ್ವದ್ರೂಢಿರ್ವೈದಿಕಾ ಸ್ಯಾತ್ ಸಾ ಯೋಗಾದೇವ ಲಭ್ಯತೇ' ವಿದ್ವದ್‌ರೂಢಿಯು ವೈದಿಕವಾದ್ದರಿಂದ ಅದು ಯೋಗದಿಂದಲೇ ಲಭ್ಯವಾಗುತ್ತದೆ. ಹೀಗೆ ಅನುವ್ಯಾಖ್ಯಾನದಲ್ಲಿ ಯೋಗವನ್ನು ಒಪ್ಪದೆ ವಿದ್ವದ್‌ರೂಢಿಯನ್ನು ಶ್ರೀಹರಿಯಲ್ಲಿ ಹೇಳಲು ಸಾಧ್ಯವಿಲ್ಲವೆಂದು ಹೇಳಿದ್ದಾರೆ.

ಮಹಾಯೋಗ ಹಾಗೂ ಮಹಾರೂಢಿಯೋಗಗಳಿಗೆ ಸಾಂಕರ್ಯ್ಯವಿಲ್ಲ

ಭಾವದೀಪಃ – हरावुक्तवृत्तिद्वयस्य साङ्कर्यमाशङ्क्य भेदमाह – स्तम्भादीति ।। तद्भेदः महारूढियोगाद्भेदः महायोग इत्यर्थः ।। अत इति ।। साधकभावात् बाधकाभावाच्चेत्यर्थः ।।२।।

।। इति श्रीराघवेन्द्रयतिकृते भावदीपे ज्योतिरुपक्रमाधिकरणम् ।।

ಶ್ರೀಹರಿಯಲ್ಲಿ ಎರಡು ಬಗೆಯ ವೃತ್ತಿಗಳನ್ನು ಒಪ್ಪಿದರೆ ಸಾಂಕರ್ಯ್ಯದೋಷ ಬರುತ್ತದಲ್ಲವೆ?

ಶ್ರೀಹರಿಯಲ್ಲಿ ಮಹಾಯೋಗ ಹಾಗೂ ಮಹಾರೂಢಿಯೋಗ ಈ ಎರಡು ವೃತ್ತಿಗಳನ್ನು ಒಪ್ಪಿದರೆ ಸಾಂಕರ್ಯ್ಯದೋಷ ಬರುತ್ತದಲ್ಲವೆ? ಎಂದು ಆಶಂಕಿಸಿ ಉತ್ತರಿಸಲು 'ಸ್ತಂಭಾದಿ' ಇತ್ಯಾದಿ ಟೀಕಾವಾಕ್ಯವು ಹೊರಟಿದೆ. 'ತದ್‌ಭೇದಃ' ಎಂಬ ಪದಕ್ಕೆ ಮಹಾರೂಡಿಯೋಗಕ್ಕಿಂತಲೂ ಮಹಾಯೋಗವು ಇಲ್ಲದಿರುವುದರಿಂದ ಎಂದರ್ಥ.

॥ ಇಲ್ಲಿಗೆ ಶ್ರೀಮದ್‌ರಾಘವೇಂದ್ರತೀರ್ಥರಿಂದ ವಿರಚಿತವಾದ ಭಾವದೀಪದ
ಜ್ಯೋತಿರುಪಕ್ರಮಾಧಿಕರಣದ ಕನ್ನಡ ಅನುವಾದವು ಮುಗಿಯಿತು ॥

॥ ಶ್ರೀ ಮಧ್ವೇಶಾರ್ಪಣಮಸ್ತು ॥

।। श्रीजानकीवदनाम्भोजराजहंसाय रामचन्द्राय नमः ।।

।। श्री गुरुभ्यो नमः ।।

श्री राघवेन्द्रतीर्थविरचिता

तन्त्रदीपिका

ज्योतिरुपक्रमाधिकरणम् (१।४।२)

ಸೂತ್ರದ ಪ್ರತಿಪದಾರ್ಥ

।। ज्योतिरुपक्रमात्तु तथा ह्यधीयत एके ।। १-४-१० ।।

अत्र सर्वे शब्दा वर्णपदादिरूपेण समन्वीयन्ते । तत्त्वित्यस्ति । तुरेव। ल्यब्लोपनिमित्ता पञ्चमी । हिर्हेतौ । ''ज्योतिषा यजेत'' इत्युक्तज्योतिरादिः तत्तु परममुख्यवृत्त्या ब्रह्मैव । नतु कर्मादिः । कुतः ? हि यस्मादेके शाखिनः, तदित्यावर्तते, तद् ब्रह्म तथा सर्वशब्दवाच्यत्वेन ''ता वा एतास्सर्वा ऋचः'' इत्यादिनाऽधीयते पठन्ति तस्मादित्यर्थः । कया वृत्त्येत्यत उक्तम् – उपक्रमादिति। उपक्रमं विधायैव । ''एष इति अधीयत इति उपलक्षणत्वेन कांश्चिदृष्यादिशब्दान् ब्रह्मणि यौगिकत्वाद्युक्त्योपक्रम्य सर्वशब्दानां तन्निष्ठतोक्ते महायोगरूढिवृत्त्या तद्वाचित्वमिति भावः । श्रुतौ वसन्तादेरादित्वेऽपि प्रधान कर्मवाचित्वेनप्राधान्यादन्योपलक्षणत्वेनज्योतिरुक्तिः । महायोगविद्वद्रूढ्योः प्रदर्शनायोपक्रमात्त्वित्युक्तिः ।

ಈ ಅಧಿಕರಣದಲ್ಲಿ ವರ್ಣ, ಪದ ಮೊದಲಾದ ಸ್ವರೂಪದಿಂದ ಸಕಲ ಶಬ್ದಗಳ ಸಮನ್ವಯವನ್ನು ಮಾಡಲಾಗಿದೆ. 'ತತ್ತು' ಎಂಬೆರಡು ಪದಗಳು ಈ ಸೂತ್ರದಲ್ಲಿ ಅನುವೃತ್ತವಾಗುತ್ತದೆ. 'ತು' ಶಬ್ದವು 'ಏವ' ಎಂಬರ್ಥದಲ್ಲಿದೆ. 'ಉಪಕ್ರಮಾತ್' ಎಂಬಲ್ಲಿ 'ಲ್ಯಬ್ ಲೋಪೇ ಕರ್ಮಣ್ಯಧಿಕರಣೇ ಚ' ಎಂಬ ವಾರ್ತಿಕದಂತೆ 'ಲ್ಯಪ್' ಪ್ರತ್ಯಯದ ಲೋಪದಿಂದ ಪಂಚಮೀ ವಿಭಕ್ತಿಯು ಬಂದಿರುತ್ತದೆ. 'ಹಿ' ಶಬ್ದವು ಹೇತ್ವರ್ಥದಲ್ಲಿದೆ.

ಸೂತ್ರಾರ್ಥ - ಜ್ಯೋತಿಃ = 'ಜ್ಯೋತಿಷಾ ಯಜೇತ' ಎಂಬುದರಲ್ಲಿರುವ ಜ್ಯೋತಿರಾದಿಗಳು ತತ್ತು = ಪರಮಮುಖ್ಯವೃತ್ತಿಯಿಂದ ವಿಷ್ಣುವೇ ಆಗಿರುತ್ತಾನೆ. ಹೊರತು, ಕರ್ಮ ಮೊದಲಾದವುಗಳಲ್ಲ. 'ಹಿ' = ಏಕೆಂದರೆ, ಏಕೇ = ಐತರೇಯಶಾಖಿಗಳು 'ತತ್' = ಆ ಬ್ರಹ್ಮನನ್ನು, ತಥಾ = ಸಕಲಶಬ್ದವಾಚ್ಯನೆಂದು, ಅಧೀಯತೇ = 'ತಾ ವಾ ಏತಾಃ' ಎಂಬುದಾಗಿ ಅಧ್ಯಯನ ಮಾಡಿದ್ದಾರೆ. ಉಪ್ರಕಮಾತ್ = ಯೋಗವೃತ್ತಿಯಿಂದ ಕೆಲವು ಋಷಿಗಳ ಹೆಸರನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡಿದ್ದಾರೆ ಎಂದು ಉತ್ತರಿಸಲಾಗಿದೆ. ಉಪಲಕ್ಷಣಯಾ ಕರ್ಮವಾಚಕ ಪದಗಳಷ್ಟೇ ಅಲ್ಲದೇ ಋಷ್ಯಾದಿವಾಚಕವಾದ ಶಬ್ದಗಳ ಸಮನ್ವಯವನ್ನು ತಿಳಿಯಬೇಕು. ಋಷ್ಯಾದಿ ವಾಚಕವಾದ ಶಬ್ದಗಳನ್ನು ಬ್ರಹ್ಮನಲ್ಲಿ ಯೌಗಿಕವೆಂದು ಹೇಳಿದಾಗ ಸಕಲಶಬ್ದಗಳು ಬ್ರಹ್ಮನನ್ನೇ ಹೇಳುತ್ತವೆಂದು ತಿಳಿಯುತ್ತದೆ. ಆದ್ದರಿಂದ ಮಹಾಯೋಗ ಹಾಗೂ ವಿದ್ವದ್ರೂಢಿಯಿಂದ ಬ್ರಹ್ಮನು ಸಕಲಶಬ್ದವಾಚ್ಯನೆಂದು ನಿರ್ಣೀತನಾಗಿದ್ದಾನೆ. ಶ್ರುತಿಯಲ್ಲಿ ವಸಂತ ಮೊದಲಾದ ಪದಗಳೇ ಮೊದಲಿರುತ್ತವೆ. ಅದಕ್ಕನುಗುಣವಾಗಿ ಸೂತ್ರದಲ್ಲಿ ಹೇಳಬೇಕಿತ್ತು. ಆದರೂ 'ಜ್ಯೋತಿಃ' ಎಂಬ ಪದವು ಕರ್ಮವಾಚಕವಾದ್ದರಿಂದ ಬಹಳ ಮುಖ್ಯವಾಗಿದೆ. ಪ್ರಧಾನವಾದ್ದರಿಂದ ಅಪ್ರಧಾನವಾದದ್ದನ್ನು ಉಪಲಕ್ಷಣಯಾ ಸ್ವೀಕರಿಸಬೇಕು ಎಂಬ ಕಾರಣಕ್ಕಾಗಿ ವಸಂತ ಪದವನ್ನು ಪ್ರಯೋಗಿಸದೇ ಜ್ಯೋತಿಃ' ಎಂಬ ಪದವನ್ನೇ ಪ್ರಯೋಗಿಸಿದ್ದಾರೆ. ಮಹಾಯೋಗ ಹಾಗೂ ವಿದ್ವದ್ರೂಢಿಗಳನ್ನು ಪ್ರದರ್ಶಿಸುವುದಕ್ಕಾಗಿ 'ಉಪಕ್ರಮಾತ್ತು' ಎಂದು ಹೇಳಿದ್ದಾರೆ.

'ಕಲ್ಪನೋಪದೇಶಾತ್' ಎಂಬ ಸೂತ್ರದ ಪ್ರತಿಪದಾರ್ಥ

नन्तु कथं ज्योतिरादिसर्वशब्दवाच्यं ब्रह्म ? कर्मक्रमादिविरोधात् व्युत्पत्त्यसम्भवाच्चेत्यत आह -

।। कल्पनोपदेशाच्च मध्वादिवदविरोधः ।। १-४-११ ।।

च एव समुच्चये वा । कल्पनेति तन्त्रम् । कल्पनां क्लृप्तिम् । लोकसिद्धरूढ्यादिवृतिक्लृप्तिमुपेत्यैव कल्पनया व्युत्पादनेन लोकक्लृप्त-महायोगवृत्तेर्युपादनेन सर्वशब्दवाच्यवेन ''ता वा'' इत्यादिनोपदेशात् । कल्पनायाः सर्वशब्दवाच्यत्वेनोपासनायाः ''प्राण ऋच इत्येव विद्यात्'' इत्यादावुपदेशादविरोधश्च । न केवलं साधकमस्ति, कर्माद्यननुष्ठानविरोधश्च नेत्यर्थः । मध्वादिवत् । यथा ''असावादित्यो देवमधु'' इति मधुशब्दस्यादित्यस्थविष्णौ उपासनार्थमुक्तावपि न क्षौद्रकादौ व्यवहारविरोधस्तद्वदित्यर्थः । एवार्थचशब्दस्य उपेत्यैवेत्याद्याहृतेनान्वयः । योग्यतया कल्पनापदेन वा उपदेशादेवेति वाऽन्वय इत्येके । तथा चान्यत्रापि वृत्त्यङ्गीकाराद् व्युत्पत्त्यादि युज्यत इति भावः । पूर्वोत्तरनयशेषत्वेऽप्यस्य योगस्यात्र निवेशो व्युत्पत्त्युक्त्यर्थः ।। २ ।।

'ಜ್ಯೋತಿಃ' ಮೊದಲಾದ ಸಕಲಶಬ್ದಗಳಿಂದ ಬ್ರಹ್ಮನು ವಾಚ್ಯನಾಗುವುದಾದರೆ ಜ್ಯೋತಿಷ್ಟೋಮಾದಿ ಯಜ್ಞಯಾಗಾದಿಗಳೇ ಇಲ್ಲದಂತಾಗಬೇಕಾದೀತು. ಮತ್ತು ಶಬ್ದಗಳ ವ್ಯುತ್ಪತ್ತಿಯೂ ಕೂಡ ಅಸಾಧ್ಯವಾಗಬೇಕಾದೀತು? ಈ ಪ್ರಶ್ನೆಗೆ ಮುಂದಿನ ಸೂತ್ರವು ಉತ್ತರಿಸುತ್ತದೆ.

'ಕಲ್ಪನೋಪದೇಶಾಚ್ಚ ಮಧ್ವಾದಿವದವಿರೋಧಃ'

ಸೂತ್ರದಲ್ಲಿರುವ 'ಚ' ಶಬ್ದವು ಏವ ಎಂಬರ್ಥದಲ್ಲಿದೆ. ಅಥವಾ ಸಮುಚ್ಚಯಾರ್ಥದಲ್ಲಿ ಇರುತ್ತದೆ. 'ಕಲ್ಪನಾ' ಎಂಬ ಪದವನ್ನು ಎರಡು ಬಾರಿ ಅನ್ವಯ ಮಾಡಿಕೊಳ್ಳಬೇಕು.

ಸೂತ್ರಾರ್ಥ - ಕಲ್ಪನಾ = ಲೋಕಸಿದ್ಧವಾದ ರೂಢಿವೃತ್ತಿಯನ್ನು ಒಪ್ಪಿಯೇ, ಕಲ್ಪನಯಾ = ವಿಷ್ಣುವಿನಲ್ಲಿ ವ್ಯುತ್ಪತ್ತಿಯನ್ನು ತೋರಿಸುವುದರಿಂದ, ಉಪದೇಶಾತ್ = 'ತಾ ವಾ ಏತಾಃ' ಇತ್ಯಾದಿಯಾಗಿ ಮಹಾಯೋಗವೃತ್ತಿಯಿಂದ ಸಕಲಶಬ್ದವಾಚ್ಯತ್ವವನ್ನು ವಿಷ್ಣುವಿನಲ್ಲಿ ಉಪದೇಶ ಮಾಡಿರುವುದರಿಂದ, ಕಲ್ಪನಾಯಾಃ = 'ಪ್ರಾಣ ಋಚ ಇತ್ಯೇವ ವಿದ್ಯಾತ್' ಇತ್ಯಾದಿ ಶ್ರುತಿಯಲ್ಲಿ ಸಕಲಶಬ್ದವಾಚ್ಯತ್ವೇನ ಭಗವದುಪಾಸನೆಯ ಉಪದೇಶವಿರುವುದರಿಂದ, ಅವಿರೋಧಃ =

ಕರ್ಮ, ಕ್ರಮ ಮೊದಲಾದವುಗಳ ಲೋಪಪ್ರಸಂಗದ ವಿರೋಧವಿರುವುದಿಲ್ಲ. ಬ್ರಹ್ಮನು ಸಕಲಶಬ್ದವಾಚ್ಯನಾಗಿದ್ದಾನೆಂಬ ವಿಷಯದಲ್ಲಿ ಸಾಧಕಪ್ರಮಾಣವಷ್ಟೇ ಅಲ್ಲ. ಕರ್ಮಾದಿಗಳ ಅನುಷ್ಠಾನಲೋಪವೆಂಬ ಬಾಧಕವೂ ಕೂಡ ಇರುವುದಿಲ್ಲ ಎಂದಭಿಪ್ರಾಯ. ಮಧ್ವಾದಿವತ್ = 'ಅಸಾವಾದಿತ್ಯೋ ದೇವಮಧು' ಎಂಬಲ್ಲಿ ಆದಿತ್ಯನಲ್ಲಿರುವ ಭಗವಂತನ ಉಪಾಸನೆಗೋಸ್ಕರ ಮಧು ಶಬ್ದವನ್ನು ಹೇಳಿದ್ದರೂ 'ಜೇನು' ಎಂಬರ್ಥದಲ್ಲಿ ಮಧು ಶಬ್ದದ ವ್ಯವಹಾರಕ್ಕೆ ಹೇಗೆ ವಿರೋಧವಿಲ್ಲವೋ, ಅದರಂತೆ ಇಲ್ಲಿಯೂ, ಅವಿರೋಧಃ = ಭಗವಂತನಲ್ಲಿ ಸಕಲಶಬ್ದವಾಚ್ಯತ್ವವನ್ನು ಹೇಳಿದರೂ ಇತರ ಪದಾರ್ಥದಲ್ಲಿ ವ್ಯವಹಾರ ವಿರೋಧ ಬರುವುದಿಲ್ಲ.

'ಏವ' ಎಂಬುದು ಅವಧಾರಣಾರ್ಥದಲ್ಲಿದೆ. 'ಚ' ಶಬ್ದವನ್ನು ಅಧ್ಯಾಹೃತವಾದ 'ಉಪೇತ್ಯ' ಎಂಬಲ್ಲಿ ಅನ್ವಯ ಮಾಡಬೇಕು. ಕೆಲವರು 'ಕಲ್ಪನಾ' ಎಂಬ ಪದದ ಜೊತೆಗೆ, ಅಥವಾ 'ಉಪದೇಶಾತ್' ಎಂಬ ಪದದ ಜೊತೆಗೆ ಅನ್ವಯವನ್ನು ಹೇಳುತ್ತಾರೆ. ಆದ್ದರಿಂದ ಬ್ರಹ್ಮನಲ್ಲಿ ಮಾತ್ರವಲ್ಲದೇ ಬೇರೆ ಪದಾರ್ಥಗಳಲ್ಲಿಯೂ ಶಬ್ದವೃತ್ತಿಯನ್ನು ಅಂಗೀಕಾರ ಮಾಡಿರುವುದರಿಂದ, ವ್ಯವಹಾರವಿರೋಧವಾಗಲೀ, ವ್ಯುತ್ಪತ್ತಿಯ ಅನುಪಪತ್ತಿಯಾಗಲೀ ಬರುವುದಿಲ್ಲ.

ಈ ಸೂತ್ರವನ್ನು ಈ ಅಧಿಕರಣದಲ್ಲೇ ಹೇಳಬೇಕಾಗಿಲ್ಲ. ಹಿಂದಿನ-ಮುಂದಿನ ಅಧಿಕರಣದ ಕೊನೆಯಲ್ಲಿ ಸೇರಿಸಬಹುದಿತ್ತು. ಆದರೂ ಬ್ರಹ್ಮನಲ್ಲಿ ಯೋಗವೃತ್ತಿಯನ್ನು ತಿಳಿಸಲು ಇಲ್ಲಿ ಪ್ರಯೋಗಿಸಲಾಗಿದೆ.

ಶ್ರೀರಾಘವೇಂದ್ರತೀರ್ಥಶ್ರೀಪಾದಂಗಳವರಿಂದ ರಚಿತವಾದ

ತಂತ್ರದೀಪಿಕಾದ ಕನ್ನಡಾನುವಾದದಲ್ಲಿ ಜ್ಯೋತಿರುಪಕ್ರಮಾಧಿಕರಣವು ಸಮಾಪ್ತವಾಯಿತು.

ಅದ್ವೈತ-ವಿಶಿಷ್ಟಾದ್ವೈತಮತದಲ್ಲಿ ಜ್ಯೋತಿರುಪಕ್ರಮಾಧಿಕರಣ ಮತ್ತು ವಿಮರ್ಶೆ

ಅದ್ವೈತಿಗಳು 'ಚಮಸವತ್' ಇತ್ಯಾದಿ ಮೂರು ಸೂತ್ರಗಳನ್ನು ಸೇರಿ ಒಂದೇ ಅಧಿಕರಣವೆಂದು ಹೇಳುತ್ತಾರೆ. ಪೂರ್ವಪಕ್ಷ ಹೀಗಿದೆ - 'ಅಜಾಮೇಕಾಂ ಲೋಹಿತಶುಕ್ಲಕೃಷ್ಣಾಂ ಬಹ್ವೀಃ ಪ್ರಜಾಃ ಸೃಜಮಾನಾಂ ಸರೂಪಾ' ಎಂಬ ಶ್ವೇತಾಶ್ವತರೋಪನಿಷತ್ತಿನಲ್ಲಿ ಎಲ್ಲ ಪ್ರಜೆಗಳಿಗೆ ಜನಕವಾದ 'ಅಜ' ಎಂದರೆ ಸಾಂಖ್ಯರಿಗೆ ಅಭಿಮತವಾದ ಸತ್ವರಜಸ್ತಮೋಗುಣಾತ್ಮಕವಾದ ಪ್ರಕೃತಿಯೇ ಆಗಿದೆಯೆಂದು ಪೂರ್ವಪಕ್ಷ.

ಶ್ರುತಿಯಲ್ಲಿರುವ 'ಅಜಾ' ಎಂದರೆ ಸಾಂಖ್ಯರಿಗೆ ಅಭಿಮತವಾದ ಪ್ರಕೃತಿಯಾಗಿದೆಯೆಂದು ನಿಶ್ಚಯಿಸಲು ಸಾಧ್ಯವಿಲ್ಲ. ಯಾವಕಾರಣದಿಂದ ಪ್ರಕೃತಿಯೆಂದು ನಿಶ್ಚಯಿಸುತ್ತೀರಿ? ಪ್ರಜೆಗಳನ್ನು ಸೃಷ್ಟಿ ಮಾಡುತ್ತದೆಂಬ ಕಾರಣದಿಂದಲೋ, ಅಥವಾ ಲೋಹಿತಶುಕ್ಲಕೃಷ್ಣಾದಿ ವರ್ಣಗಳನ್ನು ಹೊಂದಿದೆಯೆಂಬ ಕಾರಣದಿಂದಲೋ? ಈ ಯಾವುದೇ ಕಾರಣದಿಂದಲೂ ಅಜಾ ಶಬ್ದದಿಂದ ಪ್ರಕೃತಿಯನ್ನೇ ತೆಗೆದುಕೊಳ್ಳಬೇಕೆಂದು ನಿಶ್ಚಯಿಸಲಾಗದು. ಏಕೆಂದರೆ ಉಳಿದ ಕಡೆಯೂ ಕೂಡ ಗೌಣವಾಗಿ ಇಂತಹ ಲೋಹಿತಶುಕ್ಲಕೃಷ್ಣವರ್ಣಾದಿಗಳನ್ನು ಹೇಳಬಹುದು. ಪ್ರಕೃತಿಯನ್ನೇ ತೆಗೆದುಕೊಳ್ಳಬೇಕೆನ್ನಲು ಯಾವುದೇ ಅಸಾಧಾರಣ ಧರ್ಮಗಳು ಕೇಳಿಸುತ್ತಿಲ್ಲ.

ಯಾವ ರೀತಿಯಾಗಿ 'ಏಷಹ್ಯರ್ವಾಗ್ಬಿಲಶ್ಚಮಸಃ' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಚಮಸದ ಆಕಾರವಿಶೇಷವನ್ನು ನಿಶ್ಚಯಿಸಲು ಸಾಧ್ಯವಿಲ್ಲ. ಏಕೆಂದರೆ ಅರ್ವಾಗ್ಬಿಲತ್ವವೆಂಬುದು ಬೇರೆ ಕಡೆಯೂ ಕೂಡ ಗೌಣವಾಗಿ ಬರುತ್ತದೆ. ಇದೇ ಚಮಸವೆಂದು ನಿರ್ಣಯಿಸಲು ಶ್ರುತಿಯಲ್ಲಿ ಯಾವುದೇ ವಿಶೇಷಕಾರಣವನ್ನು ಹೇಳಿರುವುದಿಲ್ಲ. ಆದ್ದರಿಂದ ಚಮಸವೆಂದು ಹೇಗೆ ನಿರ್ಣಯಿಸಲು ಸಾಧ್ಯವಿಲ್ಲವೋ, ಅದರಂತೆ ಅಜಾ ಶಬ್ದಪ್ರತಿಪಾದ್ಯವಾದದ್ದನ್ನೂ ಕೂಡ ನಿರ್ಣಯಿಸಲು ಸಾಧ್ಯವಿಲ್ಲ ಎಂಬುದಾಗಿ 'ಚಮಸವದವಿಶೇಷಾತ್' ಎಂಬ ಸೂತ್ರದಿಂದ ಹೇಳಿ, ಮುಂದೆ 'ಜ್ಯೋತಿಃ' ಸೂತ್ರದಿಂದ ಅಜಾಶಬ್ದದಿಂದ ಸಾಂಖ್ಯರ ತ್ರಿಗುಣಾತ್ಮಕವಾದ ಪ್ರಕೃತಿ ಪ್ರತಿಪಾದ್ಯವಲ್ಲ. ಹೊರತು, 'ಜ್ಯೋತಿರುಪಕ್ರಮೈವ' ತೇಜಸ್ಸು ಮೊದಲಾದ ಸ್ವರೂಪವನ್ನು ಹೊಂದಿರುವ ತೇಜೋಬನ್ನವೇ ಪ್ರತಿಪಾದ್ಯವಾಗಿದೆ.

ಏಕೆಂದರೆ 'ಯದಗ್ನೇರೋಹಿತಂ ರೂಪಂ ತೇಜಸಸ್ತದ್ರೂಪಂ ಯಚ್ಛುಕ್ಲಂ ತದಪಾಂ ಯತ್ ಕೃಷ್ಣಂ ತದನ್ನಸ್ಯ' ಎಂಬ ಮತ್ತೊಂದು ಶ್ರುತಿಯಲ್ಲಿ ತೇಜೋಬನ್ನಗಳೇ ಲೋಹಿತಶುಕ್ಲಕೃಷ್ಣರೂಪವು ಳ್ಳವುಗಳಾಗಿವೆ ಎಂದು ಹೇಳಲಾಗಿದೆ.

ಒಂದುವೇಳೆ ಸಾಂಖ್ಯರ ಪ್ರಕೃತಿಯನ್ನೇ ಅಜಾಶಬ್ದದಿಂದ ಸ್ವೀಕರಿಸುವುದಾದರೆ, ಶ್ರುತಿಯಲ್ಲಿರುವ ಲೋಹಿತಾದಿ ಶಬ್ದಗಳಿಗೆ ರಜೋಗುಣ, ತಮೋಗುಣ ಮೊದಲಾದವುಗಳಲ್ಲಿ ಗೌಣಾರ್ಥವನ್ನು ಮಾಡಬೇಕಾಗುತ್ತದೆ. 'ಚಮಸವದವಿಶೇಷಾತ್' ಎಂಬ ಸೂತ್ರವು ಹೀಗೆ ಜ್ಯೋತಿರಧಿಕರಣಕ್ಕೆ ಗುಣಸೂತ್ರವಾಗಿದೆಯೆಂದು ವ್ಯಾಖ್ಯಾನ ಮಾಡುತ್ತಾರೆ.

ಅದ್ವೈತಿಗಳ ಈ ಅಧಿಕರಣಶರೀರ ಸರಿಯಿಲ್ಲ. ಏಕೆಂದರೆ 'ಇದಂ ತಚ್ಛಿರ ಏಷ ಹ್ಯರ್ವಾಗ್ಬಿಲಶ್ಚಮಸಃ' ಎಂಬ ವಾಕ್ಯಶೇಷದಲ್ಲಿ ಸ್ಪಷ್ಟವಾಗಿ ಇದು ಚಮಸದ ಶಿರಸ್ಸಾಗಿದೆ ಎಂಬುದಾಗಿ ಅಸಾಧಾರಣ ಲಕ್ಷಣವನ್ನೇ ಹೇಳುತ್ತಿರುವಾಗ ಶ್ರುತಿಯು ಚಮಸದ ಬಗ್ಗೆ ಹೇಳಿದರೂ ಆಕಾರವಿಶೇಷದ ಜ್ಞಾನವು ಬರುವುದಿಲ್ಲವೆಂದು ಹೇಳಿದ್ದು ತಪ್ಪು. ಯಾವರೀತಿಯಾಗಿ ಚಮಸವು ಇದೇ ಆಗಿದೆಯೆಂದು ನಿಶ್ಚಯಿಸಲು ಸಾಧ್ಯವಾಗುವುದಿಲ್ಲವೋ, ಅದರಂತೆ ಅಜಾಶಬ್ದಿತವಾದದ್ದನ್ನು ನಿಶ್ಚಯಿಸಲು ಸಾಧ್ಯವಾಗುವುದಿಲ್ಲ ಎಂಬುದಾಗಿ ದೃಷ್ಟಾಂತವನ್ನು ನೀಡಿದ್ದು ತಪ್ಪಾಗುತ್ತದೆ.

ಮತ್ತು ಅದ್ವೈತಿಗಳು 'ಅಜಾಮೇಕಾಮ್' ಎಂಬ ಶ್ರುತಿಯಿಂದ ಪ್ರಕೃತಿಯು ಪ್ರತಿಪಾದ್ಯವಲ್ಲ. ತೇಜೋಬನ್ನಗಳು ಪ್ರತಿಪಾದ್ಯವೆಂದು ಹೇಳುತ್ತಿದ್ದಾರೆ. ಇದು ಹೇಗಾಯಿತೆಂದರೆ ಜಗತ್ಕಾರಣತ್ವವೆಂಬ ಬ್ರಹ್ಮನ ಲಕ್ಷಣಕ್ಕೆ ಪ್ರಕೃತಿಯಲ್ಲಿ ಅತಿವ್ಯಾಪ್ತಿ ಬರುವುದಿಲ್ಲ. ತೇಜೋಬನ್ನಗಳಲ್ಲಿ ಅತಿವ್ಯಾಪ್ತಿ ಬರುತ್ತದೆ ಎಂದು ಸಮರ್ಥಿಸಿದಂತಾಯಿತು. ತೇಜೋಬನ್ನಗಳು ಜಗತ್ತಿಗೆ ಕಾರಣವೆಂದು ಸಮರ್ಥನೆ ಮಾಡುವುದರಿಂದ ಏನೂ ಪ್ರಯೋಜನವಿರುವುದಿಲ್ಲ.

ಮತ್ತು

ಅಜಾ ಚೇತ್ ಜ್ಯೋತಿರಾದಿಃ ಸ್ಯಾದಜೈಕತ್ವಾದ್ಯಸಂಭವಃ ।
ಅವಿದ್ಯೇತಿ ತು ಪಕ್ಷೇ ಸ್ಯಾತ್ ಲೋಹಿತತ್ವಾದ್ಯಸಂಭವಃ ॥೧॥

ಅಜಾಶಬ್ದದಿಂದ ತೇಜೋಬನ್ನಾದಿಗಳು ಪ್ರತಿಪಾದ್ಯವೆಂದು ಹೇಳಿದರೆ, ಶ್ರುತಿಯಲ್ಲಿರುವ ಏಕತ್ವ ಮೊದಲಾದವು ಅಸಂಭಾವಿತವಾಗುತ್ತವೆ. ಅವಿದ್ಯೆಯು ಪ್ರತಿಪಾದ್ಯವೆಂದರೆ ಶ್ರುತಿಯಲ್ಲೇ ಹೇಳಿರುವ ಲೋಹಿತತ್ವಾದಿಗಳು ಅಸಂಭಾವಿತವಾಗುತ್ತವೆ.

'ಅಜಾಮೇಕಾಮ್' ಎಂಬ ಶ್ರುತಿಯಿಂದ ತೇಜೋಬನ್ನಗಳು ಪ್ರತಿಪಾದ್ಯವಾಗಿವೆ ಎಂದು ಹೇಳುತ್ತೀರೋ? ಅಥವಾ ಅವಿದ್ಯೆಯು ಪ್ರತಿಪಾದ್ಯವೆಂದು ಹೇಳುತ್ತೀರೋ? (ಶಾಂಕರಭಾಷ್ಯದ ವ್ಯಾಖ್ಯಾನಗಳಲ್ಲಿ ಕೆಲವೊಂದೆಡೆ ಅವಿದ್ಯೆಯನ್ನು ಶ್ರುತಿಪ್ರತಿಪಾದ್ಯವೆಂದು ಹೇಳಲಾಗಿದೆ. ಆದ್ದರಿಂದ ಪ್ರಕೃತ ಗ್ರಂಥಕಾರರು ಅವಿದ್ಯಾಪಕ್ಷವನ್ನೂ ಕೂಡ ವಿಕಲ್ಪಮಾಡಿ ಖಂಡನೆ ಮಾಡುತ್ತಿದ್ದಾರೆ.)

ತೇಜೋಬನ್ನಗಳೇ ಪ್ರತಿಪಾದ್ಯವೆಂಬ ಪ್ರಥಮಪಕ್ಷವು ಅಯುಕ್ತ. ಏಕೆಂದರೆ ತೇಜೋಬನ್ನಗಳಿಗೆ ಜನಿಮತ್ವವು ಇರುವುದರಿಂದ ಶ್ರುತಿಯಲ್ಲಿ ಹೇಳಿರುವ ಜನನರಾಹಿತ್ಯವೆಂಬ ಅಜಾತ್ವವು ಕೂಡುವುದಿಲ್ಲ. ಮತ್ತು ಅನೇಕವಾಗಿರುವುದರಿಂದ ಏಕತ್ವವೂ ಕೂಡ ಕೂಡುವುದಿಲ್ಲ. ಆದ್ದರಿಂದ 'ಅಜಾಮೇಕಾಮ್' ಎಂಬ ಪದಗಳಿಂದ ಪ್ರತಿಪಾದ್ಯವಾಗಲು ಸಾಧ್ಯವಿಲ್ಲ.

ತೇಜಸ್ಸು, ನೀರು, ಅನ್ನ ಇವು ಮೂರು ಪ್ರತ್ಯೇಕವಾಗಿ ಬೇರೆ ಬೇರೆಯಾಗಿದ್ದರೂ ಮೂರು ಕೂಡ ಒಟ್ಟಿಗೆ ಸೇರಿ ತ್ರಿವೃತ್ಕರಣವನ್ನು ಹೊಂದುತ್ತವೆ. ಸಮುದಾಯ ವಿವಕ್ಷೆಯಿಂದ ಶ್ರುತಿಯಲ್ಲಿ ಏಕತ್ವವನ್ನು ಹೇಳಿದ್ದು ಕೂಡಬಹುದೆಂಬ ಸಮರ್ಥನೆಯೂ ಕೂಡ ಸಾಧುವಲ್ಲ.

ಏಕೆಂದರೆ ತೇಜಸ್, ಅಪ್, ಅನ್ನ, ಮೂರು ಸೇರಿ ಒಂದೇ ಆಗಿದೆಯೆಂದು ಶ್ರುತಿಯು ಹೇಳಿದ್ದರೆ ಸಮುದಾಯವಿವಕ್ಷೆಯಿಂದ ಏಕವಚನವನ್ನು ಪ್ರಯೋಗಿಸಬಹುದಿತ್ತು. ಆದರೆ ಪ್ರತಿಯೊಂದೂ ಕೂಡ ತ್ರಿವೃತ್ಕರಣವನ್ನು ಹೊಂದಿವೆಯೆಂದು ಶ್ರುತಿ ಹೇಳುತ್ತಿದೆ. 'ತಾಸಾಂ ತ್ರಿವೃತಂ ತ್ರಿವೃತಮೈಕೈಕಾಂ ಕರವಾಣಿ' ಎಂಬ ವಾಕ್ಯವನ್ನು ನೋಡಿದಾಗ ತೇಜಸ್ಸು, ತ್ರಿವೃತ್ಕರಣವನ್ನು ಹೊಂದಿದೆ. ನೀರೂ ಕೂಡ ತ್ರಿವೃತ್ಕರಣವನ್ನು ಹೊಂದಿದೆ. ಪೃಥಿವಿಯೂ ಕೂಡ ತ್ರಿವೃತ್ಕರಣವನ್ನು ಹೊಂದಿದೆ. ಹೀಗೆ ಪ್ರತ್ಯೇಕವಾಗಿ ಒಂದೊಂದೂ ಕೂಡ ತ್ರಿವೃತ್ಕರಣವಾಗಿದೆ ಎಂದು ಶ್ರುತವಾಗಿರುವುದರಿಂದ, ತ್ರಿವೃತ್ಕೃತವಾದ ಮೂರು ಸಮುದಾಯಗಳಿವೆ ಎಂದು ಹೇಳಿದಂತಾಯಿತು. ಆದ್ದರಿಂದ ಏಕವಚನವನ್ನು ಸಮರ್ಥಿಸಲು ಸಾಧ್ಯವಾಗುವುದಿಲ್ಲ.

ಪ್ರಶ್ನೆ - ಈ ಆಶಂಕೆಯನ್ನು 'ಕಲ್ಪನೋಪದೇಶಾಚ್ಚ' ಎಂಬ ಸೂತ್ರದಿಂದಲೇ ಪರಿಹರಿಸಿದ್ದಾಗಿದೆ. ಯಾವರೀತಿಯಾಗಿ 'ಆದಿತ್ಯೋವಾ ದೇವತಾಮಧ್ವ' ಇತ್ಯಾದಿ ಶ್ರುತಿಯಲ್ಲಿ ಆದಿತ್ಯನನ್ನೇ 'ಮಧು' ಎಂದು ಕರೆಯಲಾಗಿದೆ. ಇದರ ಅಭಿಪ್ರಾಯವೇನೆಂದರೆ ಆದಿತ್ಯನಲ್ಲಿ ಮಧುತ್ವವು ಸರ್ವಥಾ ಇರುವುದಿಲ್ಲ. ಆದರೂ ಕೂಡ ಆರೋಪಿತವಾಗಿ ಮಧುತ್ವವನ್ನು ಕಲ್ಪನೆ ಮಾಡಿ, ಉಪಾಸನೆ ಮಾಡಬೇಕೆಂದು ಶ್ರುತಿ ಹೇಳುತ್ತಿದೆ. ಅದರಂತೆ ತೇಜೋಬನ್ನಗಳಲ್ಲಿ ಅಜಾತ್ವವಾಗಲೀ, ಏಕತ್ವವಾಗಲೀ, ಛಾಗೀತ್ವವಾಗಲೀ ಇರುವುದಿಲ್ಲ. ಆದರೂ ಕಲ್ಪನೆ ಮಾಡಬೇಕು.

ಏಕೆಂದರೆ 'ಯದಗ್ನೇರೋಹಿತಂ ರೂಪಂ ತೇಜಸಸ್ತದ್ರೂಪಂ ಯಚ್ಛುಕ್ಲಂ ತದಪಾಂ ಯತ್ ಕೃಷ್ಣಂ ತದನ್ನಸ್ಯ' ಎಂಬ ಮತ್ತೊಂದು ಶ್ರುತಿಯಲ್ಲಿ ತೇಜೋಬನ್ನಗಳೇ ಲೋಹಿತಶುಕ್ಲಕೃಷ್ಣರೂಪವು ಳ್ಳವುಗಳಾಗಿವೆ ಎಂದು ಹೇಳಲಾಗಿದೆ.

ಒಂದುವೇಳೆ ಸಾಂಖ್ಯರ ಪ್ರಕೃತಿಯನ್ನೇ ಅಜಾಶಬ್ದದಿಂದ ಸ್ವೀಕರಿಸುವುದಾದರೆ, ಶ್ರುತಿಯಲ್ಲಿರುವ ಲೋಹಿತಾದಿ ಶಬ್ದಗಳಿಗೆ ರಜೋಗುಣ, ತಮೋಗುಣ ಮೊದಲಾದವುಗಳಲ್ಲಿ ಗೌಣಾರ್ಥವನ್ನು ಮಾಡಬೇಕಾಗುತ್ತದೆ. 'ಚಮಸವದವಿಶೇಷಾತ್' ಎಂಬ ಸೂತ್ರವು ಹೀಗೆ ಜ್ಯೋತಿರಧಿಕರಣಕ್ಕೆ ಗುಣಸೂತ್ರವಾಗಿದೆಯೆಂದು ವ್ಯಾಖ್ಯಾನ ಮಾಡುತ್ತಾರೆ.

ಅದ್ವೈತಿಗಳ ಈ ಅಧಿಕರಣಶರೀರ ಸರಿಯಿಲ್ಲ. ಏಕೆಂದರೆ 'ಇದಂ ತಚ್ಛಿರ ಏಷ ಹ್ಯರ್ವಾಗ್ಬಿಲಶ್ಚಮಸಃ' ಎಂಬ ವಾಕ್ಯಶೇಷದಲ್ಲಿ ಸ್ಪಷ್ಟವಾಗಿ ಇದು ಚಮಸದ ಶಿರಸ್ಸಾಗಿದೆ ಎಂಬುದಾಗಿ ಅಸಾಧಾರಣ ಲಕ್ಷಣವನ್ನೇ ಹೇಳುತ್ತಿರುವಾಗ ಶ್ರುತಿಯು ಚಮಸದ ಬಗ್ಗೆ ಹೇಳಿದರೂ ಆಕಾರವಿಶೇಷದ ಜ್ಞಾನವು ಬರುವುದಿಲ್ಲವೆಂದು ಹೇಳಿದ್ದು ತಪ್ಪು. ಯಾವರೀತಿಯಾಗಿ ಚಮಸವು ಇದೇ ಆಗಿದೆಯೆಂದು ನಿಶ್ಚಯಿಸಲು ಸಾಧ್ಯವಾಗುವುದಿಲ್ಲವೋ, ಅದರಂತೆ ಅಜಾಶಬ್ದಿತವಾದದ್ದನ್ನು ನಿಶ್ಚಯಿಸಲು ಸಾಧ್ಯವಾಗುವುದಿಲ್ಲ ಎಂಬುದಾಗಿ ದೃಷ್ಟಾಂತವನ್ನು ನೀಡಿದ್ದು ತಪ್ಪಾಗುತ್ತದೆ.

ಮತ್ತು ಅದ್ವೈತಿಗಳು 'ಅಜಾಮೇಕಾಮ್' ಎಂಬ ಶ್ರುತಿಯಿಂದ ಪ್ರಕೃತಿಯು ಪ್ರತಿಪಾದ್ಯವಲ್ಲ. ತೇಜೋಬನ್ನಗಳು ಪ್ರತಿಪಾದ್ಯವೆಂದು ಹೇಳುತ್ತಿದ್ದಾರೆ. ಇದು ಹೇಗಾಯಿತೆಂದರೆ ಜಗತ್ಕಾರಣತ್ವವೆಂಬ ಬ್ರಹ್ಮನ ಲಕ್ಷಣಕ್ಕೆ ಪ್ರಕೃತಿಯಲ್ಲಿ ಅತಿವ್ಯಾಪ್ತಿ ಬರುವುದಿಲ್ಲ. ತೇಜೋಬನ್ನಗಳಲ್ಲಿ ಅತಿವ್ಯಾಪ್ತಿ ಬರುತ್ತದೆ ಎಂದು ಸಮರ್ಥಿಸಿದಂತಾಯಿತು. ತೇಜೋಬನ್ನಗಳು ಜಗತ್ತಿಗೆ ಕಾರಣವೆಂದು ಸಮರ್ಥನೆ ಮಾಡುವುದರಿಂದ ಏನೂ ಪ್ರಯೋಜನವಿರುವುದಿಲ್ಲ.

ಮತ್ತು

ಅಜಾ ಚೇತ್ ಜ್ಯೋತಿರಾದಿಃ ಸ್ಯಾದಜೈಕತ್ವಾದ್ಯಸಂಭವಃ ।
ಅವಿದ್ಯೇತಿ ತು ಪಕ್ಷೇ ಸ್ಯಾತ್ ಲೋಹಿತತ್ವಾದ್ಯಸಂಭವಃ ॥೧॥

ಅಜಾಶಬ್ದದಿಂದ ತೇಜೋಬನ್ನಾದಿಗಳು ಪ್ರತಿಪಾದ್ಯವೆಂದು ಹೇಳಿದರೆ, ಶ್ರುತಿಯಲ್ಲಿರುವ ಏಕತ್ವ ಮೊದಲಾದವು ಅಸಂಭಾವಿತವಾಗುತ್ತವೆ. ಅವಿದ್ಯೆಯು ಪ್ರತಿಪಾದ್ಯವೆಂದರೆ ಶ್ರುತಿಯಲ್ಲೇ ಹೇಳಿರುವ ಲೋಹಿತತ್ವಾದಿಗಳು ಅಸಂಭಾವಿತವಾಗುತ್ತವೆ.

'ಅಜಾಮೇಕಾಮ್' ಎಂಬ ಶ್ರುತಿಯಿಂದ ತೇಜೋಬನ್ನಗಳು ಪ್ರತಿಪಾದ್ಯವಾಗಿವೆ ಎಂದು ಹೇಳುತ್ತೀರೋ? ಅಥವಾ ಅವಿದ್ಯೆಯು ಪ್ರತಿಪಾದ್ಯವೆಂದು ಹೇಳುತ್ತೀರೋ? (ಶಾಂಕರಭಾಷ್ಯದ ವ್ಯಾಖ್ಯಾನಗಳಲ್ಲಿ ಕೆಲವೊಂದೆಡೆ ಅವಿದ್ಯೆಯನ್ನು ಶ್ರುತಿಪ್ರತಿಪಾದ್ಯವೆಂದು ಹೇಳಲಾಗಿದೆ. ಆದ್ದರಿಂದ ಪ್ರಕೃತ ಗ್ರಂಥಕಾರರು ಅವಿದ್ಯಾಪಕ್ಷವನ್ನೂ ಕೂಡ ಓಕಲ್ಪಮಾಡಿ ಖಂಡನೆ ಮಾಡುತ್ತಿದ್ದಾರೆ.)

ತೇಜೋಬನ್ನಗಳೇ ಪ್ರತಿಪಾದ್ಯವೆಂಬ ಪ್ರಥಮಪಕ್ಷವು ಅಯುಕ್ತ. ಏಕೆಂದರೆ ತೇಜೋಬನ್ನಗಳಿಗೆ ಜನಿಮತ್ವವು ಇರುವುದರಿಂದ ಶ್ರುತಿಯಲ್ಲಿ ಹೇಳಿರುವ ಜನನರಾಹಿತ್ಯವೆಂಬ ಅಜಾತ್ವವು ಕೂಡುವುದಿಲ್ಲ. ಮತ್ತು ಅನೇಕವಾಗಿರುವುದರಿಂದ ಏಕತ್ವವೂ ಕೂಡ ಕೂಡುವುದಿಲ್ಲ. ಆದ್ದರಿಂದ 'ಅಜಾಮೇಕಾಮ್' ಎಂಬ ಪದಗಳಿಂದ ಪ್ರತಿಪಾದ್ಯವಾಗಲು ಸಾಧ್ಯವಿಲ್ಲ.

ತೇಜಸ್ಸು, ನೀರು, ಅನ್ನ ಇವು ಮೂರು ಪ್ರತ್ಯೇಕವಾಗಿ ಬೇರೆ ಬೇರೆಯಾಗಿದ್ದರೂ ಮೂರು ಕೂಡ ಒಟ್ಟಿಗೆ ಸೇರಿ ತ್ರಿವೃತ್ಕರಣವನ್ನು ಹೊಂದುತ್ತವೆ. ಸಮುದಾಯ ವಿವಕ್ಷೆಯಿಂದ ಶ್ರುತಿಯಲ್ಲಿ ಏಕತ್ವವನ್ನು ಹೇಳಿದ್ದು ಕೂಡಬಹುದೆಂಬ ಸಮರ್ಥನೆಯೂ ಕೂಡ ಸಾಧುವಲ್ಲ.

ಏಕೆಂದರೆ ತೇಜಸ್, ಅಪ್, ಅನ್ನ, ಮೂರು ಸೇರಿ ಒಂದೇ ಆಗಿದೆಯೆಂದು ಶ್ರುತಿಯು ಹೇಳಿದ್ದರೆ ಸಮುದಾಯವಿವಕ್ಷೆಯಿಂದ ಏಕವಚನವನ್ನು ಪ್ರಯೋಗಿಸಬಹುದಿತ್ತು. ಆದರೆ ಪ್ರತಿಯೊಂದೂ ಕೂಡ ತ್ರಿವೃತ್ಕರಣವನ್ನು ಹೊಂದಿವೆಯೆಂದು ಶ್ರುತಿ ಹೇಳುತ್ತಿದೆ. 'ತಾಸಾಂ ತ್ರಿವೃತಂ ತ್ರಿವೃತಮೈಕೈಕಾಂ ಕರವಾಣಿ' ಎಂಬ ವಾಕ್ಯವನ್ನು ನೋಡಿದಾಗ ತೇಜಸ್ಸು, ತ್ರಿವೃತ್ಕರಣವನ್ನು ಹೊಂದಿದೆ. ನೀರೂ ಕೂಡ ತ್ರಿವೃತ್ಕರಣವನ್ನು ಹೊಂದಿದೆ. ಪೃಥಿವಿಯೂ ಕೂಡ ತ್ರಿವೃತ್ಕರಣವನ್ನು ಹೊಂದಿದೆ. ಹೀಗೆ ಪ್ರತ್ಯೇಕವಾಗಿ ಒಂದೊಂದೂ ಕೂಡ ತ್ರಿವೃತ್ಕರಣವಾಗಿದೆ ಎಂದು ಶ್ರುತವಾಗಿರುವುದರಿಂದ, ತ್ರಿವೃತ್ಕೃತವಾದ ಮೂರು ಸಮುದಾಯಗಳಿವೆ ಎಂದು ಹೇಳಿದಂತಾಯಿತು. ಆದ್ದರಿಂದ ಏಕವಚನವನ್ನು ಸಮರ್ಥಿಸಲು ಸಾಧ್ಯವಾಗುವುದಿಲ್ಲ.

ಪ್ರಶ್ನೆ - ಈ ಆಶಂಕೆಯನ್ನು 'ಕಲ್ಪನೋಪದೇಶಾಚ್ಚ' ಎಂಬ ಸೂತ್ರದಿಂದಲೇ ಪರಿಹರಿಸಿದ್ದಾಗಿದೆ. ಯಾವರೀತಿಯಾಗಿ 'ಆದಿತ್ಯೋವಾ ದೇವತಾಮಧ್ವ' ಇತ್ಯಾದಿ ಶ್ರುತಿಯಲ್ಲಿ ಆದಿತ್ಯನನ್ನೇ 'ಮಧು' ಎಂದು ಕರೆಯಲಾಗಿದೆ. ಇದರ ಅಭಿಪ್ರಾಯವೇನೆಂದರೆ ಆದಿತ್ಯನಲ್ಲಿ ಮಧುತ್ವವು ಸರ್ವಥಾ ಇರುವುದಿಲ್ಲ. ಆದರೂ ಕೂಡ ಆರೋಪಿತವಾಗಿ ಮಧುತ್ವವನ್ನು ಕಲ್ಪನೆ ಮಾಡಿ, ಉಪಾಸನೆ ಮಾಡಬೇಕೆಂದು ಶ್ರುತಿ ಹೇಳುತ್ತಿದೆ. ಅದರಂತೆ ತೇಜೋಬನ್ನಗಳಲ್ಲಿ ಅಜಾತ್ವವಾಗಲೀ, ಏಕತ್ವವಾಗಲೀ, ಛಾಗೀತ್ವವಾಗಲೀ ಇರುವುದಿಲ್ಲ. ಆದರೂ ಕಲ್ಪನೆ ಮಾಡಬೇಕು.

ಉತ್ತರ - ಕಲ್ಪನಾ ಎಂದರೆ ಆರೋಪ ಎಂದರ್ಥವೋ, ಅಥವಾ ಗೌಣೀವೃತ್ತಿಯಿಂದ ಹಾಗೆ ವ್ಯಾಖ್ಯಾನ ಮಾಡಬೇಕೆಂದರ್ಥವೋ? ಆರೋಪವೆಂದು ಹೇಳಲಾಗದು. ಏಕೆಂದರೆ ಕಾವ್ಯಾದಿಗಳಲ್ಲಿ ಪಾಮರಜನರ ಮನೋರಂಜನೆಗೋಸ್ಕರ ಮುಖವನ್ನೇ ಚಂದ್ರ ಎಂದು ಕಲ್ಪನೆ ಮಾಡಿ ವರ್ಣಿಸಲಾಗುತ್ತದೆ. ಅದರಂತೆ ಶ್ರುತಿಯು ಪಾಮರಜನರ ಮನೋರಂಜನಕ್ಕಾಗಿ ಹೊರಟಿರುವುದಲ್ಲ. ಆದ್ದರಿಂದ ಶ್ರುತಿಯ ಯಾವುದೇ ವಾಕ್ಯದಲ್ಲಿಯೂ ಇಂತಹ ಕಲ್ಪನೆಗಳಿರುತ್ತವೆಂದು ಊಹಿಸಬಾರದು.

ಹಾಗೇನಾದರೂ ಶ್ರುತಿಯು ಕಲ್ಪಿತವಾದುದ್ದನ್ನು ಹೇಳುತ್ತಿದೆ ಎನ್ನುವುದಾದಲ್ಲಿ, ಸಾಂಖ್ಯರಿಗೆ ಅಭಿಮತವಾದ ಪ್ರಕೃತಿಯಲ್ಲಿಯೇ ಲೋಹಿತತ್ವಾದಿಗಳನ್ನೇ ಆರೋಪ ಮಾಡಬಹುದು.

ಪ್ರಶ್ನೆ - ಶ್ರುತಿಯಲ್ಲಿ 'ಆದಿತ್ಯೋವಾ ದೇವತಾಮಧು' ಎಂಬುದಾಗಿ ಆದಿತ್ಯನಲ್ಲಿ ಮಧುತ್ವದ ಕಲ್ಪನೆ ಇದೆಯಲ್ಲವೆ ?

ಉತ್ತರ - ಆದಿತ್ಯನು ಸುಖಕರನಾದ್ದರಿಂದ ಶ್ರುತಿಯು ಮಧು ಎಂದು ಆದಿತ್ಯನನ್ನು ಕರೆದಿದೆ. ಆದ್ದರಿಂದ ಆದಿತ್ಯನಲ್ಲಿ ಮಧುತ್ವವು ಕಲ್ಪಿತವಾಗಿಲ್ಲ. ಹೊರತಾಗಿ, ಮಧುಶಬ್ದ ವಾಚ್ಯತ್ವವೇ ಇರುತ್ತದೆಂದು ತಿಳಿಯಬೇಕು.

ಪ್ರಶ್ನೆ - ಅಜಾಶಬ್ದಕ್ಕೆ ಬೇರೆ ಗತಿಯಿಲ್ಲದ ಕಾರಣ ಹೀಗೆ ವ್ಯಾಖ್ಯಾನ ಮಾಡುವುದು ಅನಿವಾರ್ಯವಲ್ಲವೇ?

ಉತ್ತರ - ಹಾಗೇನಿಲ್ಲ. ಪ್ರಕೃತಿಯಲ್ಲಿ ಜನನರಾಹಿತ್ಯವೆಂಬ ಯೋಗಾರ್ಥವನ್ನೇ ಹೇಳಲು ಸಾಧ್ಯವಿದೆ.

ಪ್ರಶ್ನೆ - 'ಶರೀರಂ ರಥಮೇವ ಚ' ಎಂಬ ಶ್ರುತಿಯಲ್ಲಿ ಶರೀರವನ್ನೇ ರಥವೆಂದು ಶ್ರುತಿಯು ಆರೋಪ ಮಾಡುತ್ತಿದೆ. 'ಗೌರನಾದ್ಯಂತವತಿ' ಎಂಬ ಶ್ರುತಿಯು ಪ್ರಕೃತಿಯಲ್ಲಿ ಗೋತ್ವವನ್ನು ಆರೋಪ ಮಾಡುತ್ತಿದೆಯಲ್ಲವೇ?

ಉತ್ತರ - ಶ್ರುತಿಗೆ ಹಾಗರ್ಥವಲ್ಲ. ಶರೀರವನ್ನು ರಥವೆಂದು ಹೇಳಿದ್ದು. ಅಥವಾ ಪ್ರಕೃತಿಯನ್ನು 'ಗೋ' ಎಂದು ಹೇಳಿದ್ದು ಗೌಣಪ್ರಯೋಗ ಹೊರತು, ಆರೋಪನಿಮಿತ್ತಕವಲ್ಲ.

ಕಲ್ಪನಾಶಬ್ದಕ್ಕೆ ಗೌಣವಾಗಿ ವ್ಯಾಖ್ಯಾನ ಮಾಡಬೇಕೆಂಬ ಎರಡನೆಯ ಪಕ್ಷವೂ ಕೂಡ ಸರಿಯಲ್ಲ. ಏಕೆಂದರೆ ಅಜಾ ಮೊದಲಾದ ಶಬ್ದಗಳಿಗೆ ಮುಖ್ಯಾರ್ಥವನ್ನೇ ಹೇಳಲು ಬರುವಾಗ ಗೌಣಾರ್ಥವನ್ನು ಸ್ವೀಕರಿಸಬಾರದು. ಶ್ರುತಿಯಲ್ಲಿ ಅಜಾಶಬ್ದವು ವಿಶೇಷ್ಯವಾಗಿದೆ. ಲೋಹಿತಾದಿಶಬ್ದಗಳು ವಿಶೇಷಣವಾಗಿದೆ. ಪ್ರಧಾನವಾದ ವಿಶೇಷ್ಯವಾಚಕವಾದ ಅಜಾಶಬ್ದಕ್ಕೆ ಪ್ರಕೃತಿಯೆಂಬ ಮುಖ್ಯಾರ್ಥವನ್ನೇ ವಿವಕ್ಷಿಸಿ, ವಿಶೇಷಣವಾದ್ದರಿಂದ ಅಪ್ರಧಾನವಾದ ಲೋಹಿತಾದಿ

ಶಬ್ದಗಳಿಗೆ ಪ್ರಕೃತಿಯಲ್ಲಿ ಗೌಣಾರ್ಥವನ್ನು ಮಾಡುವುದೇ ನ್ಯಾಯವಾದದ್ದು. ಇದಕ್ಕೆ ವಿರುದ್ಧವಾಗಿ ಅಪ್ರಧಾನವಾದ ಲೋಹಿತಾದಿಶಬ್ದಗಳಿಗೆ ಮುಖ್ಯಾರ್ಥವನ್ನು ಮಾಡಿ ಪ್ರಧಾನವಾದ ಅಜಾಶಬ್ದಕ್ಕೆ ಗೌಣಾರ್ಥ ಮಾಡುವುದು ಅನ್ಯಾಯವಾಗಿದೆ.

ಮತ್ತು 'ಗೌರನಾದ್ಯಂತವತೀ ಭೂತಭಾವಿನೀ ಸಿತಾऽಸಿತಾಚ ರಕ್ತಾಚ' ಎಂಬ ಮತ್ತೊಂದು ಶ್ರುತಿಯಲ್ಲಿ ಇದೇ ರೀತಿಯ ಪದಗಳಿಂದ ಪ್ರಕೃತಿಯನ್ನು ವರ್ಣಿಸಲಾಗಿದೆ. ಆಥರ್ವಣೋಪನಿಷತ್ತಿನಲ್ಲಿ ಹೇಳಿದ್ದೇ ಈ ಶ್ರುತಿಯಲ್ಲಿ ಪ್ರತ್ಯಭಿಜ್ಞಾನವಾಗುತ್ತಿದೆ.

ಪ್ರಶ್ನೆ - ಆಥರ್ವಣೋಪನಿಷತ್ತಿನಲ್ಲಿರುವ ಗೌರನಾದ್ಯವಂತವತೀ ಎಂಬ ಶ್ರುತಿಯೂ ಕೂಡ ತೇಜೋಬನ್ನವಿಷಯಕ ಆಗಿದೆಯಲ್ಲವೇ?

ಉತ್ತರ - ಹಾಗೇ ಹೇಳಲಾಗದು. ತೇಜೋಬನ್ನಗಳು ಅನಾದ್ಯಂತಗಳಲ್ಲ. ಮತ್ತು 'ಸಿತಾऽಸಿತಾಚ ರಕ್ತಾಚ' ಎಂಬುದಾಗಿ ಲೋಹಿತಾದಿ ಶಬ್ದಗಳಿಗೆ ಕೆಂಪು, ಬಿಳಿ ಮೊದಲಾದ ಅರ್ಥವನ್ನೂ ಕೂಡ ನೀವು ಹೇಳುತ್ತಿಲ್ಲ. ಆದರೆ ಲೋಹಿತಾದಿ ಶಬ್ದಗಳಿಗೆ ಬಣ್ಣ ಎಂಬರ್ಥವನ್ನೂ ಕೂಡ ಹೇಳುವುದು ಅಯುಕ್ತವಾಗಿದೆ.

ಇದೇ ಶ್ರುತಿಯ ವಾಕ್ಯಶೇಷದಲ್ಲಿ 'ದೇವಾತ್ಮಶಕ್ತಿಂ ಸ್ವಗುಣೈರ್ನಿಗೂಢಾಮ್' ಎಂಬುದಾಗಿ ಸತ್ವರಜಸ್ತಮೋಗುಣಗಳಲ್ಲಿ ಪ್ರಸಿದ್ಧವಾದ ಗುಣಶಬ್ದವು ಶ್ರುತವಾಗಿದೆ. ಆದ್ದರಿಂದ ಲೋಹಿತಾದಿಶಬ್ದಗಳಿಗೆ ಬಣ್ಣ ಎಂಬರ್ಥವನ್ನು ಹೇಳದೇ ಸತ್ವಾದಿಗುಣಗಳು ಎಂಬರ್ಥವನ್ನೇ ಹೇಳಬೇಕು. ಮತ್ತು ನೀನೂ ಸಹ ಈ ಶಕ್ತಿವಾಕ್ಯಕ್ಕೆ ಅವಿದ್ಯಾಪರತ್ವವನ್ನು ಅಂಗೀಕರಿಸಿರುವಿ.

'ಅಜಾಮೇಕಾಮ್ ಲೋಹಿತಶುಕ್ಲಕೃಷ್ಣಾಮ್' ಎಂಬ ಶ್ರುತಿಯು ತೇಜೋಬನ್ನಗಳನ್ನು ಪ್ರತಿಪಾದನೆ ಮಾಡುತ್ತದೆಂಬ ಪಕ್ಷವನ್ನು ಇಲ್ಲಿಯ ತನಕ ನಿರಾಕರಿಸಿದ್ದಾಯಿತು. ಅವಿದ್ಯೆಯನ್ನು ಪ್ರತಿಪಾದನೆ ಮಾಡುತ್ತದೆಂಬ ಪಕ್ಷವೂ ಕೂಡ ಸರಿಯಲ್ಲ. ಏಕೆಂದರೆ ಶ್ರುತಿಯಲ್ಲಿ ಹೇಳಿರುವ ಲೋಹಿತಾದಿರೂಪಗಳು ಅವಿದ್ಯೆಯಲ್ಲಿ ಸರ್ವಥಾ ಇರುವುದಿಲ್ಲ.

ಅವಿದ್ಯೆಯು ಜಗತ್ತಾಗಿ ಪರಿಣಾಮವನ್ನು ಹೊಂದಿದಾಗ ಲೋಹಿತಾದಿರೂಪಗಳಿಗೆ ಆಶ್ರಯವಾಗಬಹುದಲ್ಲವೇ? ಎಂದು ಪ್ರಶ್ನಿಸಬಾರದು. ಪ್ರಕೃತಿಯಲ್ಲಿಯೂ ಕೂಡ ಇಂತಹ ಲೋಹಿತಾದಿರೂಪಗಳನ್ನು ಹೇಳಬಹುದು. ಆವಾಗ ಸಾಂಖ್ಯರನ್ನು ನಿಮಗೆ ನಿರಾಕರಿಸಲು ಸಾಧ್ಯವಿಲ್ಲ.

ಮತ್ತು 'ಜ್ಯೋತಿರುಪಕ್ರಮಾತ್' ಇತ್ಯಾದಿ ಸೂತ್ರದ್ವಯಗಳ ವಿರೋಧವು ನಿಮಗೆ ಬರುತ್ತದೆ. ಏಕೆಂದರೆ 'ಜ್ಯೋತಿರುಪಕ್ರಮಾತ್' ಎಂಬ ಸೂತ್ರಕ್ಕೆ ಅದ್ವೈತಿಗಳಾದ ನೀವು

ತೇಜೋಬನ್ನರೂಪ ಎಂಬುದಾಗಿ ವ್ಯಾಖ್ಯಾನ ಮಾಡಿದ್ದೀರಿ. ಈಗ ಅವಿದ್ಯೆಯನ್ನು ಶ್ರುತಿಯು ಪ್ರತಿಪಾದನೆ ಮಾಡುತ್ತದೆ ಎಂದು ಹೇಳಿದರೆ ವಿರೋಧವು ತಪ್ಪಿದ್ದಲ್ಲ.

ಮತ್ತು ಪ್ರಧಾನಸ್ವರೂಪವನ್ನೇ ನಿರಾಕರಿಸಲು ನಿಮಗೆ ಸಾಧ್ಯವಿಲ್ಲ. ಏಕೆಂದರೆ ತ್ರಿಗುಣವಾದ ಅನಾದಿಭಾವರೂಪವಾದ ಪ್ರಕೃತಿ ಮೊದಲಾದ ಶಬ್ದಗಳಿಂದ ಪ್ರತಿಪಾದ್ಯವಾದ ಜಗತ್ತಿಗೆ ಉಪಾದಾನವಾದದ್ದು ಅವಿದ್ಯೆಯೆಂದು ನೀವೂ ಕೂಡ ಅಂಗೀಕಾರ ಮಾಡಿದ್ದೀರಿ. ಇದನ್ನೇ ಸಾಂಖ್ಯರು ಪ್ರಕೃತಿಯೆಂದು ಕರೆಯುತ್ತಾರೆ. ಆದ್ದರಿಂದ ಪ್ರಕೃತಿಯನ್ನು ಅಲ್ಲಗಳೆಯಲು ನಿಮಗೆ ಸಾಧ್ಯವಿಲ್ಲ. ಇದು ಕೇವಲ ನಾಮಮಾತ್ರದಲ್ಲಷ್ಟೇ ವಿವಾದ ಹೊರತು, ಪ್ರಮೇಯದಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ.

ಇನ್ನು ಸಾಂಖ್ಯರಿಗೆ ಅಭಿಮತವಾದ ಸ್ವತಂತ್ರವಾದ ಪ್ರಕೃತಿಯನ್ನು ನಿರಾಕರಿಸುತ್ತಿದ್ದೇವೆ ಎಂದು ಉತ್ತರಿಸಬೇಕು. ಆದರೆ ಪ್ರಕೃತಿಗೆ ಸ್ವಾತಂತ್ರ್ಯವಿಲ್ಲ ಎಂಬುದನ್ನು ಎರಡನೆಯ ಅಧ್ಯಾಯದ ಸಮಯಪಾದದಲ್ಲಿ ಸೂತ್ರಕಾರರೇ ನಿರಾಕರಿಸುವವರಿದ್ದಾರೆ. ಮತ್ತು 'ತದಧೀನತ್ವಾತ್ ಅರ್ಥವತ್' ಎಂಬ ಸೂತ್ರದಲ್ಲಿ ಈಗಾಗಲೇ ನಿರಾಕರಿಸಿದ್ದಾಗಿದೆ. ಹೀಗಿರುವಾಗ ಈ ಅಧಿಕರಣವು ಅದ್ವೈತಮತದಲ್ಲಿ ವ್ಯರ್ಥವೇ ಆಗುತ್ತದೆ.

ಈ ದೋಷವನ್ನು ಅನುವ್ಯಾಖ್ಯಾನದಲ್ಲಿ ಹೇಳಿದ್ದಾರೆ -

ತೇಜೋಬನ್ನಾತ್ಮಕಂ ವಾಪಿ ಯದ್ಯುಪಾದಾನಮಿಷ್ಯತೇ ।
ಅನಾದ್ಯೇವಾಪರಾಧಃ ಕಃ ಪ್ರಧಾನಮಿತಿ ಚೋದಿತೇ ॥

ತೇಜೋಬನ್ನರೂಪವಾದ ಅನಾದಿಯಾದ ಭೂತಸೂಕ್ಷ್ಮವನ್ನೇ ಉಪಾದಾನಕಾರಣವೆಂದು ಹೇಳುವುದಾದರೆ, ಸಾಂಖ್ಯರು ಹೇಳುವಂತೆ ಪ್ರಧಾನವನ್ನೇ ಕಾರಣವೆಂದು ಒಪ್ಪಿದರೆ ಏನು ದೋಷ ಬರುತ್ತದೆ?

ಅದ್ವೈತಿಗಳ ಪ್ರಕಾರ 'ಜ್ಯೋತಿಃ' ಸೂತ್ರದಲ್ಲಿ ಉಪಕ್ರಮಾ ಎಂಬುದು ಅಪಪಾಠವಾಗಿದೆ. ಹಾಗೂ 'ಅಜಾ' ಎಂಬ ಪದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕಾಗುತ್ತದೆ. ಏಕೆಂದರೆ ತೇಜೋಬನ್ನಾದಿಗಳೇ ಅಜಾ ಶಬ್ದವಾಚ್ಯವಾಗಿದೆಯೆಂದು ಹೇಳುವುದಕ್ಕಾಗಿ. ಮತ್ತು ಸೂತ್ರದಲ್ಲಿ ಶ್ರುತಿಯ ಅನುಗಮಕ್ಕೋಸ್ಕರ 'ತೇಜಆದಿಃ' ಎಂದೇ ಹೇಳಬೇಕಿತ್ತು. ಇದರಿಂದ ಸೂತ್ರವು ಲಘುಭೂತವೂ ಆಗುತ್ತದೆ. 'ಕಲ್ಪನೋಪದೇಶಾಚ್ಚ' ಎಂಬ ಮುಂದಿನ ಸೂತ್ರದಲ್ಲಿ ಅನುಪಪತ್ತಿಯನ್ನು ಈಗಾಗಲೇ ಹೇಳಿದ್ದಾಗಿದೆ. ಆರೋಪಿತವಾದದ್ದನ್ನು ಶ್ರುತಿಯು ಸಮರ್ಥನೆ ಮಾಡುವುದಿಲ್ಲ ಇತ್ಯಾದಿಯಾಗಿ.

ಚಮಸಸೂತ್ರಕ್ಕೆ ರಾಮಾನುಜರು ಅದ್ವೈತಿಗಳಂತೆ ವ್ಯಾಖ್ಯಾನ ಮಾಡುತ್ತಾರೆ. ಆದರೆ ಜ್ಯೋತಿಸೂತ್ರಕ್ಕೆ ಬೇರೆ ಅರ್ಥವನ್ನು ಹೇಳಿದ್ದಾರೆ. ಅದು ಹೀಗೆ - 'ಜ್ಯೋತಿಃ' = ಬ್ರಹ್ಮನು, ಉಪಕ್ರಮಾ = ಕಾರಣವಾಗಿವುಳ್ಳವನು. ಅಂದರೆ ಪ್ರಕೃತ್ಯಾದಿಗಳು ಬ್ರಹ್ಮನಿಂದ ಸೃಜ್ಯವಾಗಿವೆ. ಬ್ರಹ್ಮನು ಅವುಗಳಿಗೆಲ್ಲಾ ಕಾರಣನಾಗಿದ್ದಾನೆಂದು ಸೂತ್ರವು ಪ್ರತಿಪಾದನೆ ಮಾಡುತ್ತಿದೆ.

'ತಥಾಹ್ಯಧೀಯತೇ' = ತೈತ್ತಿರೀಯಶಾಖಾದಲ್ಲಿ 'ಅಣೋರಣೀಯಾನ್' ಇತ್ಯಾದಿಯಾಗಿ ಬ್ರಹ್ಮನನ್ನು ಪ್ರಸ್ತಾಪ ಮಾಡಿ 'ಸಪ್ತಪ್ರಾಣಾಃ ಪ್ರಭವಂತಿ ತಸ್ಮಾತ್' ಇತ್ಯಾದಿ ವಾಕ್ಯದಿಂದ ಬ್ರಹ್ಮನಿಂದ ಎಲ್ಲವೂ ಕೂಡ ಸೃಷ್ಟಿಯನ್ನು ಹೊಂದುತ್ತವೆಂದು ಹೇಳಿ, ಅನಂತರ 'ಅಜಾಮೇಕಾಮ್' ಎಂಬ ಮಂತ್ರವು ಪ್ರಸಕ್ತವಾಗಿದೆ. ಈ ಶ್ರುತಿಯಲ್ಲಿರುವ ಅಜಾಶಬ್ದದಿಂದ ಪ್ರತಿಪಾದ್ಯವಾದ ಪ್ರಕೃತಿಯೂ ಕೂಡ ಬ್ರಹ್ಮನ ಕಾರ್ಯವೇ ಆಗಿದೆಯೆಂದು ಅಧ್ಯಯನ ಮಾಡುತ್ತಾರೆ. ಇಷ್ಟು ರಾಮಾನುಜರ ಸೂತ್ರಾರ್ಥ.

ರಾಮಾನುಜರ ಈ ಸೂತ್ರವ್ಯಾಖ್ಯಾನವು ಅಸಾಧುವಾಗಿದೆ. ಏಕೆಂದರೆ 'ಅಜಾಮೇಕಾಮ್' ಎಂಬ ಮಂತ್ರದಲ್ಲಿ ಪ್ರಕೃತಿಯು ಬ್ರಹ್ಮನ ಕಾರ್ಯವಾಗಿವೆಯೆಂದು ತಿಳಿಯುತ್ತಿಲ್ಲ.

ಆಕ್ಷೇಪ - 'ಸಮಿಧೋ ಯಜತಿ, 'ಇಡೋ ಯಜತಿ' ಇತ್ಯಾದಿ ವಾಕ್ಯಗಳನ್ನು ನೋಡಿದಾಗಲೂ ದರ್ಶಪೂರ್ಣಮಾಸದ ಅಂಗಯಾಗಗಳೆಂದು ಕಾಣಿಸುತ್ತಿಲ್ಲ. ಆದರೂ ಕೂಡ ದರ್ಶಪೂರ್ಣಮಾಸ ಪ್ರಕರಣದಲ್ಲಿ ಈ ವಾಕ್ಯಗಳು ಪ್ರಸಕ್ತವಾಗಿವೆ ಎಂಬ ದೃಷ್ಟಿಯಿಂದ ಹೇಗೆ ಅಂಗಯಾಗಗಳಾಗುತ್ತವೋ, ಅದರಂತೆ ಇಲ್ಲಿಯೂ ಕೂಡ ಬ್ರಹ್ಮನ ಸೃಷ್ಟಿ ಬಗ್ಗೆ ಹೇಳುವ ಪ್ರಕರಣದಲ್ಲಿ 'ಅಜಾಮೇಕಾಮ್' ಎಂಬ ಶ್ರುತಿಯು ಪ್ರಸಕ್ತವಾಗಿರುವುದರಿಂದ ಪ್ರಕೃತಿಗೂ ಕೂಡ ಸೃಜ್ಯತ್ವವು ಸಿದ್ಧವಾಗುತ್ತದಲ್ಲವೇ?

ಸಮಾಧಾನ - ಇದು ತಪ್ಪು. ದರ್ಶಪೂರ್ಣಮಾಸಪ್ರಕರಣದಲ್ಲಿ ಕಥಂಭಾವಾಕಾಂಕ್ಷೆಯು ಪ್ರಾಪ್ತವಾದರೆ ಅದಕ್ಕೆ ಸಮಾಧಾನ ನೀಡಲು ಪಂಚಪ್ರಯಾಜಯಾಗಗಳು ಪ್ರಸಕ್ತವಾಗುತ್ತವೆ. ಆದರೆ ಪ್ರಕೃತದಲ್ಲಿ ಅಂತಹ ಆಕಾಂಕ್ಷೆಯಿರುವುದಿಲ್ಲ. ಆದರೆ ಸೃಷ್ಟಿಪ್ರಕರಣದಲ್ಲಿ ಸೃಜ್ಯತ್ವದ ಆಕಾಂಕ್ಷೆಯೇ ಇರುತ್ತದೆಂಬ ನಿಯಮವಿಲ್ಲ. ಉಪಾದಾನತ್ವದ ಆಕಾಂಕ್ಷೆಯೂ ಕೂಡ ಬಂದಿರಬಹುದು. ಅದಕ್ಕೆ ಸಮಾಧಾನ ನೀಡಲು 'ಅಜಾಮೇಕಾಮ್' ಎಂಬ ಶ್ರುತಿಯು ಹೊರಟಿರಬಹುದು. ಹೀಗಿರುವಾಗ ಬ್ರಹ್ಮಕಾರ್ಯತ್ವವನ್ನು ಪ್ರಕೃತಿಯಲ್ಲಿ ಹೇಗೆ ಸಾಧಿಸುತ್ತೀರಿ?

ಮತ್ತು ಪ್ರಕೃತಿಯು ಬ್ರಹ್ಮಕಾರ್ಯವೆಂದು ಹೇಳಿದರೆ ಶ್ರುತಿ-ಸ್ಮೃತಿಗಳ ವಿರೋಧ ಬರುತ್ತದೆ. ಏಕೆಂದರೆ 'ಗೌರನಾದ್ಯಂತವತೀ' ಎಂಬ ಶ್ರುತಿಯು ಪ್ರಕೃತಿಗೆ ಅನಾದಿತನಿತ್ಯತ್ವವನ್ನು ಸಮರ್ಥಿಸುತ್ತಿದೆ. 'ಪ್ರಕೃತಿಂ ಪುರುಷಂ ಚೈವ ವಿದ್ಧ್ಯನಾದೀ ಉಭಾವಪಿ' ಎಂಬ ಸ್ಮೃತಿಯೂ ಕೂಡ ಪ್ರಕೃತಿಗೆ ಅನಾದಿತ್ವವನ್ನು ಸಮರ್ಥಿಸುತ್ತಿದೆ. 'ಅಜಾಮೇಕಾಮ್' ಎಂಬ ಶ್ರುತಿಯಲ್ಲಿಯೂ

ಕೂಡ ಪ್ರಕೃತಿಗೆ ಜನನವು ಇರುವುದಿಲ್ಲವೆಂದು ಅಜಾಶಬ್ದವೇ ತಿಳಿಸುತ್ತಿದೆ. ಆದ್ದರಿಂದ ಅಜಾಶಬ್ದದ ವಿರೋಧವೂ ಕೂಡ ಬರುತ್ತದೆ. ಆದ್ದರಿಂದ ಪ್ರಕೃತಿಯು ಬ್ರಹ್ಮನಿಂದ ಸೃಜ್ಯವಾಗಿದೆಯೆಂದು ಹೇಳಲು ಸಾಧ್ಯವಿಲ್ಲ.

ಆಕ್ಷೇಪ - ಪ್ರಕೃತಿಯು ಕಾರಣಸ್ವರೂಪದಿಂದ 'ಅಜಾ' ಎನಿಸುತ್ತದೆ. ಆದರೆ ತನ್ನ ಕಾರ್ಯವಾದ ತೇಜೋಬನ್ನಾತ್ಮಕವಾಗಿ ಕಾರ್ಯರೂಪವು ಆಗುತ್ತದೆ. ಲೋಹಿತತ್ವಾದಿಗಳಿಗೂ ಆಶ್ರಯವಾಗುತ್ತದೆ. ಆದ್ದರಿಂದ ಶ್ರುತಿ-ಸ್ಮೃತಿಗಳ ವಿರೋಧಕ್ಕೆ ಅವಕಾಶವಿಲ್ಲ. ಇದನ್ನು ಕಲ್ಪನಾಸೂತ್ರದಲ್ಲಿಯೇ ಹೇಳಲಾಗಿದೆ. ಏಕೆಂದರೆ ಕಲ್ಪನಾಶಬ್ದವು 'ಯಥಾ ಪೂರ್ವಮಕಲ್ಪಯತ್' ಎಂಬ ಶ್ರುತಿಯಂತೆ ಸೃಷ್ಟಿಪರವಾಗುತ್ತದೆ.

ಸಮಾಧಾನ - ಈ ಆಕ್ಷೇಪವು ತಪ್ಪು. ಏಕೆಂದರೆ ಅಜಾತ್ವ ಹಾಗೂ ಲೋಹಿತತ್ವಾದಿಗಳು ಏಕವಿಷಯಕವಾಗಿ ಸ್ವತಃ ಪ್ರಾಪ್ತವಾಗುತ್ತಿವೆ. ಇದನ್ನು ಬಿಟ್ಟು ಅವಸ್ಥಾಭೇದದಿಂದ ಭಿನ್ನವಿಷಯಕವಾಗಿ ಒಪ್ಪುವುದು ಅಯುಕ್ತವಾಗುತ್ತದೆ. ಮತ್ತು 'ಅಜಾಂ ಸೃಜಮಾನಾಮ್' ಎಂಬುದಾಗಿ ಕಾರಣಾವಸ್ಥೆಯನ್ನು ಹೇಳುವಾಗಲೇ, ಲೋಹಿತತ್ವಾದಿಗಳು ಪ್ರತೀತವಾಗುತ್ತಿವೆ. ಹೀಗಿರುವಾಗ ಕಾರ್ಯಾವಸ್ಥೆಯಲ್ಲಿ ಲೋಹಿತತ್ವಾದಿಗಳನ್ನು ಹೇಳುವುದು ಸರ್ವಥಾ ಕೂಡುವುದಿಲ್ಲ.

ಮತ್ತು ಪ್ರಕೃತಿ ಸ್ವರೂಪವನ್ನು ಸಾಂಖ್ಯರಂತೆ ನೀನೂ ಕೂಡ ಅಂಗೀಕರಿಸಿರುವಿ. ಹೀಗಿರುವಾಗ ಸಾಂಖ್ಯರ ಪ್ರಕೃತಿಯನ್ನು ನಿರಾಕರಿಸಲು ನಿನಗೂ ಕೂಡ ಅರ್ಹತೆಯಿರುವುದಿಲ್ಲ. ಇನ್ನು ಸಾಂಖ್ಯರಿಗೆ ಅಭಿಮತವಾದ ಸ್ವಾತಂತ್ರ್ಯವನ್ನು ನಿರಾಕರಿಸುತ್ತೇನೆಂದು ಉತ್ತರಿಸಬೇಕು. ಆದರೆ 'ತದಧೀನತ್ವಾತ್' ಎಂಬ ಸೂತ್ರದಲ್ಲಿ ಈಗಾಗಲೇ ಅದನ್ನು ನಿರಾಕರಿಸಿದ್ದಾಗಿದೆ.

ಆದ್ದರಿಂದ 'ಜ್ಯೋತಿಃ' ಎಂಬ ಸೂತ್ರದಲ್ಲಿ ಪ್ರಕೃತಿಯು 'ಅಜಾ' ಶಬ್ದ ಪ್ರತಿಪಾದ್ಯವಾದ ಪ್ರಕೃತಿಯು ಬ್ರಹ್ಮನ ಕಾರ್ಯವಾಗಿದೆಯೆಂಬುದನ್ನು ಅನುಪಯುಕ್ತವಾಗಿ ಹೇಳಿ, ಅದರ ನಿರ್ವಹಣೆಗೋಸ್ಕರ 'ಕಲ್ಪನಾ' ಎಂಬ ಸೂತ್ರದಲ್ಲಿ ಅಜಾತ್ವ ಹಾಗೂ ಕಾರ್ಯತ್ವಗಳಿಗೆ ಆಕಾರಭೇದದಿಂದ ಅವಿರೋಧವನ್ನು ಸಮರ್ಥಿಸಿದ್ದು ಅತ್ಯಂತ ವ್ಯರ್ಥವಾಗಿದೆ. (ಹೆಚ್ಚಾಗಿ ಉಪ್ಪನ್ನು ತಿಂದು ನೀರು ಕುಡಿಯುವುದು ಹೇಗೆ ವ್ಯರ್ಥವೋ ಅದರಂತೆ)

ಇಲ್ಲಿಗೆ ಜ್ಯೋತಿರುಪಕ್ರಮಾಧಿಕರಣದಲ್ಲಿ ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ ಇವುಗಳ ಅನುವಾದವು ಮತ್ತು ತಂತ್ರದೀಪಿಕೆಯ ಹಾಗೂ ಮತತ್ರಯ ವಿಮರ್ಶೆಯು ಸಮಾಪ್ತವಾಯಿತು.

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥

ನ ಸಂಖ್ಯೋಪಸಂಗ್ರಹಾಧಿಕರಣ

ಬ್ರಹ್ಮಸೂತ್ರ, ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ,
ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ

ವಿಶೇಷವಿಚಾರದೊಂದಿಗೆ ಕನ್ನಡಭಾಷೆಯಲ್ಲಿ ಅನುವಾದ

ಮತ್ತು

ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆ

॥ ಹರಿಃ ಓಂ ॥

॥ ಶ್ರೀವೇದವ್ಯಾಸಾಯ ನಮಃ ॥

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಗುರುಭ್ಯೋ ನಮಃ ॥

॥ ಶ್ರೀಮದ್ರಾಘವೇಂದ್ರತೀರ್ಥಗುರುಭ್ಯೋ ನಮಃ ॥

॥ ಶ್ರೀಗುರುಭ್ಯೋ ನಮಃ ॥

ನ ಸಂಖ್ಯೋಪಸಂಗ್ರಹಾಧಿಕರಣ

ಬ್ರಹ್ಮಸೂತ್ರ

॥ अथ नसङ्ख्योपसङ्ग्रहाधिकरणम् ॥

'ನಸಂಖ್ಯೋಪಸಂಗ್ರಹಾದಪಿ ನಾನಾಭಾವಾದತಿರೇಕಾಚ್ಚ' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – ॥ नसङ्ख्योपसङ्ग्रहादपि नानाभावादतिरेकाच्च ॥ १ ॥

ಸೂತ್ರಾರ್ಥ - 'ಯಸ್ಮಿನ್ ಪಂಚ ಪಂಚ ಜನಾ' ಇತ್ಯಾದಿ ವಾಕ್ಯಗಳಲ್ಲಿ ಬಹುತ್ವ ಸಂಖ್ಯೆಯನ್ನು ಆಧಾರಾಧೇಯಭಾವವನ್ನು ಹೇಳಿದ್ದರೂ ಸಹ ವಿಷ್ಣುವೇ ಪಂಚ ಜನಾ, ಆಕಾಶ ಮೊದಲಾದ ಶಬ್ದಗಳಿಂದ ಪ್ರತಿಪಾದ್ಯನಾಗಿದ್ದಾನೆನ್ನಲು ವಿರೋಧ ಬರುವುದಿಲ್ಲ. ಏಕೆಂದರೆ ಅನೇಕ ರೂಪಗಳನ್ನು ಸ್ವೀಕರಿಸಿ, ಆಕಾಶಾದಿಗಳಲ್ಲಿ ಆಧಾರನಾದವನು ವಿಷ್ಣುವೇ ಆಗಿದ್ದಾನೆ. ಸವಿಶೇಷಾಭೇದವಿರುವುದರಿಂದ, ಆಧಾರಾಧೇಯಭಾವವು ಬಹುತ್ವ- ಸಂಖ್ಯೆಯು ಅವನಲ್ಲಿ ಯುಕ್ತವಾಗುತ್ತದೆ.

ಅರ್ಥ -- ಸಂಖ್ಯೋಪಸಂಗ್ರಹಾತ್ = 'ಯಸ್ಮಿನ್ ಪಂಚ ಪಂಚ ಜನಾಃ' ಎಂಬಲ್ಲಿ ಹೇಳಲ್ಪಟ್ಟ ಬಹುತ್ವ ಸಂಖ್ಯೆಯ ವಚನದಿಂದ, ಅಪಿ = 'ಯಸ್ಮಿನ್' ಎಂಬಲ್ಲಿ ಆಧಾರಾಧೇಯ ಭಾವವನ್ನು ನಿರ್ದೇಶ ಮಾಡಿದ್ದರಿಂದಲೂ ವಿಷ್ಣುವೇ ಪಂಚ ಜನಾದಿ ಶಬ್ದವಾಚ್ಯನಾಗಿದ್ದಾನೆಂಬುದಕ್ಕೆ, ನ = ವಿರೋಧ ಬರುವುದಿಲ್ಲ. ಏಕೆಂದರೆ ನಾನಾಭಾವಾತ್ = ವಿಷ್ಣುವಿಗೆ ಅನೇಕ ರೂಪಗಳಿರುವುದರಿಂದ, ಅತಿರೇಕಾಚ್ಚ = 'ಯಸ್ಮಿನ್' ಎಂಬಲ್ಲಿ ಆಧಾರವಾದ ರೂಪಕ್ಕೂ, ಪಂಚ ಜನಾಃ ಎಂಬಲ್ಲಿ ಹೇಳಲ್ಪಟ್ಟ ಆಧೇಯವಾದ ರೂಪಕ್ಕೂ ಸವಿಶೇಷಾಭೇದವಿರುವುದರಿಂದ ಎಂದಭಿಪ್ರಾಯ.

ಜಗದ್ಗುರು ಶ್ರೀಮಧ್ವಾಚಾರ್ಯರಿಂದ ವಿರಚಿತವಾದ

ಬ್ರಹ್ಮಸೂತ್ರಭಾಷ್ಯ

ಒಬ್ಬನೇ ಪರಮಾತ್ಮನಲ್ಲಿ ಬಹುತ್ವ ಸಂಖ್ಯೆ ಹಾಗೂ ಆಧಾರಾಧೇಯಭಾವವು ಯುಕ್ತವಾಗುತ್ತವೆ

ब्रह्मसूत्रभाष्यम् – 'यस्मिन् पञ्च पञ्च जना आकाशश्च प्रतिष्ठितः' (बृ.उ. ६-४-१७) इत्यादिषु बहुसङ्ख्योपसङ्ग्रहेऽपि न विरोधः ।

ಅನುವಾದ - 'ಯಸ್ಮಿನ್ ಪಂಚ ಪಂಚ ಜನಾ ಆಕಾಶಶ್ಚ ಪ್ರತಿಷ್ಠಿತಃ' ಇತ್ಯಾದಿ ವಾಕ್ಯದಲ್ಲಿ ಬಹುತ್ವ ಸಂಖ್ಯೆಯನ್ನು ಆಧೇಯತ್ವವನ್ನು ಹೇಳಿದ್ದರೂ ಪಂಚ ಜನಾ, ಆಕಾಶ ಇತ್ಯಾದಿ ಶಬ್ದಗಳಿಂದ ವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆ.

ಪ್ರತಿಪದಾರ್ಥ -- ಈ ಅಧಿಕರಣದಲ್ಲಿ ಪ್ರತ್ಯಯದಿಂದ ತಿಳಿಯುವ ಬಹುತ್ವಸಂಖ್ಯಾವಿಶಿಷ್ಟವಾದ ವಸ್ತುವಾಚಕ ಶಬ್ದಗಳನ್ನುಆಧಾರಾಧೇಯ-ಭಾವವಾಚಕವಾದ ಶಬ್ದವನ್ನು ಸಮನ್ವಯ ಮಾಡುತ್ತಿದ್ದಾರೆ.

'ತತ್ತುಸಮನ್ವಯಾತ್' ಎಂಬ ಸೂತ್ರದಲ್ಲಿ ಮಾಡಿದ ಸರ್ವಶಬ್ದದ ಸಮನ್ವಯವು ಯುಕ್ತವಲ್ಲ. ಏಕೆಂದರೆ ವಿರೋಧ ಬರುತ್ತದೆ. ಬಹುತ್ವವಾಚಕವಾದ ಆಧಾರಾಧೇಯವಾಚಕವಾದ ಶಬ್ದಗಳು ವಿಷ್ಣುವಿನಲ್ಲಿ ಬರುವುದಿಲ್ಲ. ಏಕೆಂದರೆ ಒಬ್ಬನಲ್ಲಿ ಆಧಾರಾಧೇಯ-ಭಾವವು ಯುಕ್ತವಲ್ಲ. ಒಬ್ಬನೇ ವ್ಯಕ್ತಿಯಲ್ಲಿ ಬಹುತ್ವಸಂಖ್ಯೆಯೂ ಕೂಡ ಯುಕ್ತವಲ್ಲ. ಹೀಗೆ ಹಿಂದಿನ ಅಧಿಕರಣದ ವಾಕ್ಯದ ಜೊತೆ ಸಂಯೋಜನೆ ಮಾಡುವ ಮೂಲಕ ಶಿಷ್ಯರಿಗೆ ಸಂಗತಿ ವಿಷಯಾದಿಗಳನ್ನು ತಿಳಿಸುತ್ತಾ ಸಿದ್ಧಾಂತ ಸ್ಥಾಪಕವಾದ ಸೂತ್ರವನ್ನು ಉಪನ್ಯಾಸ ಮಾಡಿ, ವ್ಯಾಖ್ಯಾನ ಮಾಡುತ್ತಿದ್ದಾರೆ.

ಯಸ್ಮಿನ್ = ಸರ್ವಶರೀರದಲ್ಲಿರುವ ಪರಮಾತ್ಮನಲ್ಲಿ, ಪಂಚ ಪಂಚ ಜನಾ = ಪ್ರತಿದೇಹದಲ್ಲಿ ಪ್ರಾಣಾದಿ ಪಂಚಕಗಳಿಗೆ ನಿಯಾಮಕವಾದ, ಪಂಚಜನ ಶಬ್ದವಾಚ್ಯವಾದ ಪರಮಾತ್ಮನ ಐದು ರೂಪಗಳು, ಆಕಾಶಶ್ಚ

= ಆಕಾಶ ಪದದಿಂದ ಪ್ರತಿಪಾದ್ಯನಾದ ವಿಷ್ಣುವೂ ಕೂಡ, ಪ್ರತಿಷ್ಠಿತಃ = ನೆಲೆಸಿರುವನೋ, ತಂ = ಅಂತಹ ಪರಮಾತ್ಮನನ್ನು, ಮನ್ಯೇ = ತಿಳಿಯುತ್ತೇನೆ. ಇವೇ ಈ ಮೊದಲಾದ ವಾಕ್ಯಗಳಲ್ಲಿ, ಬಹುಸಂಖ್ಯೋಪಸಂಗ್ರಹೇऽಪಿ = ಬಹುತ್ವಸಂಖ್ಯಾವಾಚಕವಾದ ವಸ್ತುಗಳ ಆಧಾರತ್ವವನ್ನು ವಿಷ್ಣುವಿನಲ್ಲಿ ಹೇಳಿರುವುದರಿಂದ, ಪಂಚಜನಾದಿ ಶಬ್ದಗಳು ವಿಷ್ಣುವಾಚಕಗಳಾಗುವುದಿಲ್ಲ. ನ ವಿರೋಧಃ = ಈ ವಿಷಯದಲ್ಲಿ ವಿರೋಧವಿಲ್ಲ.

'ನಾನಾಭಾವಾತ್' ಎಂಬ ಹೇತುವಿನ ವ್ಯಾಖ್ಯಾನ

ब्रह्मसूत्रभाष्यम् –

तस्यैवाकाशादिषु नानाभावात्, तदतिरिक्तस्वरूपवत्वाच्च ।।१।।

ಅನುವಾದ – ಆಕಾಶಾದಿಗಳಲ್ಲಿ ನಿಯಾಮಕನಾಗಿ, ವಿಷ್ಣುವಿಗೆ ಅನೇಕ ರೂಪಗಳಿರುತ್ತವೆ. ಹಾಗೂ ಆಧಾರವಾದ ರೂಪಕ್ಕಿಂತ ಆಧೇಯವಾದ ರೂಪವು ವಿಶೇಷಬಲದಿಂದ ಅತಿರಿಕ್ತವಾಗಿದೆ. ಆದ್ದರಿಂದ ಆಧಾರಾಧೇಯಭಾವ ಮತ್ತು ಬಹುತ್ವ ಇವೆರಡು ಅವನಲ್ಲಿ ಯುಕ್ತವಾಗುತ್ತವೆ. (ದೇಹನಿಯಾಮಕ ಎಂಬ ಒಂದು ರೂಪದಲ್ಲಿ ಬೇರೆ ನಿಯಾಮಕರೂಪಗಳಿರುವುದರಿಂದ ಒಬ್ಬನಲ್ಲಿಯೇ ಆಧಾರಾಧೇಯಭಾವವು ಯುಕ್ತವಾಗುತ್ತದೆ.)

ಪ್ರತಿಪದಾರ್ಥ -- ವಿರೋಧವೇಕೆ ಬರುವುದಿಲ್ಲ ? ಎಂಬ ಪ್ರಶ್ನೆಗೆ ಸೂತ್ರದಲ್ಲೇ ಹೇಳಲ್ಪಟ್ಟ 'ನಾನಾಭಾವಾತ್' ಎಂಬ ಹೇತುವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ. –

ತಸ್ಯೈವ = ಆ ಪರಮಾತ್ಮನೇ, ಆಕಾಶಾದಿಷು = ಆಕಾಶಾದಿಗಳಲ್ಲಿ, ನಾನಾಭಾವಾತ್ = ಅನೇಕ ರೂಪಗಳಿಂದ ಇರುವುದರಿಂದ, ತದತಿರಿಕ್ತಸ್ವರೂಪತ್ವಾಚ್ಚ = ಅಂತರ್ಗತವಾದ ರೂಪಗಳು ಬೇರೆಯಾಗಿರುವುದರಿಂದ ಆಧಾರಾಧೇಯಭಾವ ಬಹುತ್ವಗಳೆರಡು ಯುಕ್ತವಾಗುತ್ತವೆ.

ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ

ಸತ್ತರ್ಕದೀಪಾವಳಿ

ಏಕತ್ವವಿರುವವನಲ್ಲಿ ಬಹುತ್ವ ಹೇಗೆ ?

सत्तर्कदीपावलिः – नन्वेवमपि ये बहुसङ्ख्याभिवायिनः शब्दाः न ते विष्णुवाचकाः तस्य एकत्वात् । एकत्वबहुत्वयोः परस्परं विरोधादितीमं पूर्वपक्षं प्रतिक्षिपति न सङ्ख्येत्यादिना ।

ಹಾಗಾದರೂ ಕೂಡ ಬಹುಸಂಖ್ಯಾವಾಚಕವಾದ ಶಬ್ದಗಳಿಂದ ವಿಷ್ಣು ಪ್ರತಿಪಾದ್ಯ-ನಾಗುವುದಿಲ್ಲ. ಏಕೆಂದರೆ ವಿಷ್ಣುವೊಬ್ಬನೇ ಆಗಿದ್ದಾನೆ. ಇವನಲ್ಲಿ ಬಹುತ್ವವು ಅಯುಕ್ತವಾಗಿದೆ. ಏಕತ್ವವಿರುವ ವಿಷ್ಣುವಿನಲ್ಲಿ ಬಹುತ್ವವನ್ನು ಒಪ್ಪಲಾಗದು. ಏಕತ್ವ ಹಾಗೂ ಬಹುತ್ವಗಳಿಗೆ ಪರಸ್ಪರ ವಿರೋಧವಿದೆ. ಆಕ್ಷೇಪವನ್ನು ಪ್ರತಿಕ್ಷೇಪ ಮಾಡಲು 'ನ ಸಂಖ್ಯೋಪಸಂಗ್ರಹ' ಎಂಬ ಸೂತ್ರವು ಹೊರಟಿದೆ.

ಒಬ್ಬನಿಗೆ ಅನೇಕ ರೂಪಗಳಿವೆ

सत्तर्कदीपावलिः – बहुसङ्ख्याभिधायित्वेपि पञ्चजनशब्दस्य न भगवद्वाचकत्वविरोधः । भगवत एव आकाशप्राणचक्षुः श्रोत्रान्नमनस्सुबहुरुपत्वेन प्रादुर्भूतत्वात् तदाधारत्वेन तदतिरिक्तस्वरूपत्वात् ।

'यस्मिन् पंच पंच जना' ಎಂಬ ಶ್ರುತಿಯಲ್ಲಿರುವ ಪಂಚಜನ ಶಬ್ದವು ಬಹುಸಂಖ್ಯೆಯನ್ನು ಪ್ರತಿಪಾದನೆ ಮಾಡುತ್ತಿದೆ. ಆದರೂ ಕೂಡ ಭಗವದ್ವಾಚಕತ್ವಕ್ಕೆ ವಿರೋಧ ಪ್ರಾಪ್ತವಾಗುವುದಿಲ್ಲ. ಏಕೆಂದರೆ ಒಬ್ಬನೇ ಭಗವಂತನು ಆಕಾಶ, ಪ್ರಾಣ, ಚಕ್ಷುಸ್ಸು, ಶ್ರೋತ್ರ, ಅನ್ನ, ಮನಸ್ಸು ಎಂಬುದಾಗಿ ಐದುರೂಪಗಳನ್ನು ತಾಳುತ್ತಾನೆ. ಈ ಐದು ರೂಪಕ್ಕೆ ಆಧಾರನಾಗಿ ಮತ್ತೊಂದು ರೂಪವನ್ನು ತಾಳುತ್ತಾನೆ. ಆದ್ದರಿಂದ ವಿರೋಧವಿಲ್ಲ.

ಪಂಚಭೂತಗಳ ಬಂಧನದ ಮೋಚನಕ್ಕೆ ಉಪಾಯ

सत्तर्कदीपावलिः – तथा चायं वाक्यार्थः । यस्मिन् सर्वदेहगते परत्मात्मनि प्रतिदेहं पञ्चपञ्चजना आकाशाख्या प्रकृतिश्च प्रतिष्ठिताः । स्वयं च षडन्तर्नियामको अतिमुख्यतः तन्नामा लीलया स्वस्मिन्नेव प्रतिष्ठितः । एवमुक्तप्रकारेण सर्वशब्दवाच्यं तं परमात्मानं परब्रह्मविद्वान् स पञ्चाऽन्योऽमृतो भवतीति । के पञ्चपञ्च जनाः येषां विष्णुत्वमेवावधेयत्वमित्यत आह – पञ्चपञ्चेति

ಒಟ್ಟು ಶ್ರುತಿಯ ಅಭಿಪ್ರಾಯವನ್ನು ಹೀಗೆ ಹೇಳಿದಂತಾಯಿತು - ಯಾವ ಪರಮಾತ್ಮನು ಸಕಲರ ಶರೀರದಲ್ಲಿ ಆಕಾಶ ಮೊದಲಾದ ಐದು ರೂಪಗಳನ್ನು ಧರಿಸಿ, ಹಾಗೂ ಪ್ರಕೃತಿಯನ್ನೂ ಕೂಡ ಧರಿಸಿರುತ್ತಾನೆ. ಈ ಆರು ಪದಾರ್ಥಗಳಿಗೆ ನಿಯಾಮಕನಾಗಿದ್ದಾನೆ. ಮತ್ತು ಈ ಆಕಾಶ ಮೊದಲಾದ ರೂಪಗಳಿಂದ ತಾನೂ ಅದರೊಳಗೆ ನೆಲಸಿದ್ದಾನೆ. ಹೀಗೆ ಪರಮಮುಖ್ಯವೃತ್ತಿಯಿಂದ ಆಕಾಶ ಮೊದಲಾದ ಶಬ್ದಗಳಿಂದ ಪ್ರತಿಪಾದ್ಯನಾಗುತ್ತಾನೆ. ಲೀಲೆಯಿಂದ ತನ್ನಲ್ಲೇ ತಾನು ನೆಲಸಿದ್ದಾನೆ. ಯಾರು ಈ ಕ್ರಮದಲ್ಲಿ ಪರಮಾತ್ಮನನ್ನು ಸರ್ವಶಬ್ದವಾಚ್ಯನೆಂದು ತಿಳಿಯುತ್ತಾರೋ, ಅವನು ಈ ಪಂಚಭೂತಗಳನ್ನು ದಾಟಿ, ಆ ಪರಮಾತ್ಮನ ಲೋಕವನ್ನು ಪಡೆಯುತ್ತಾನೆ.

ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ

ತತ್ತ್ವಪ್ರದೀಪ

ವಿಶೇಷಬಲದಿಂದ ಒಬ್ಬನೇ ಪರಮಾತ್ಮನಲ್ಲಿ ಅನೇಕತ್ವ ಸಂಖ್ಯೆ ಹಾಗೂ ಆಧಾರಾಧೇಯಭಾವ

तत्वप्रदीपः – न सङ्ख्योपसंग्रहादपि नानाभावादतिरेकाच्च । ''यस्मिन् पञ्च पञ्च जना'' इत्यादिषु बहुसङ्ख्ययोपसंगृहीतत्वादन्य एवोच्यन्ते, न विष्णुः। तस्यैकस्य बहुत्वासम्भवात्, ''यस्मिन्' इति विष्णावुपसंग्रहाच्च, तेषां बहुसङ्ख्यानां न विष्णुत्वमिति न मन्तव्यम् । तस्यैव विष्णोराकाशे

जनेषु च स्थितानां बहुरूपाणां भावात् । ''यस्मिन्'' इति तेषामविकरणत्वेन तदतिरिक्तस्वरूपवत्त्वाच्च । न चैकस्य बहुत्वविरोधः । विशेषादेवोपपत्तेः ।।

'ನ ಸಂಖ್ಯೋಪಸಂಗ್ರಹಾದಪಿ ನಾನಾಭಾವಾದಿತಿರೇಕಾಚ್ಚ' ಎಂಬ ಸೂತ್ರದ ವ್ಯಾಖ್ಯಾನ ಹೀಗಿದೆ - 'ಯಸ್ಮಿನ್ ಪಂಚ ಪಂಚ ಜನಾಃ' ಇತ್ಯಾದಿಯಾಗಿ ಛಾಂದೋಗ್ಯೋಪನಿಷತ್ತು ಬಹುತ್ವಸಂಖ್ಯೆಯನ್ನು ಜನರಲ್ಲಿ ಹೇಳುತ್ತಿದೆ. ವಿಷ್ಣುವೊಬ್ಬನೇ ಇದ್ದಾನೆ. ಅವನಲ್ಲಿ ಬಹುತ್ವಸಂಖ್ಯೆಯೇ ಯುಕ್ತವಾಗುವುದಿಲ್ಲ. ಮತ್ತು ವಿಷ್ಣುವಿನಲ್ಲಿ ಈ ಪಂಚಜನರು ಇದ್ದಾರೆ ಎಂಬುದಾಗಿ 'ಯಸ್ಮಿನ್ ಪ್ರತಿಷ್ಠಿತಃ' ಎಂದು ಹೇಳುತ್ತಿದೆ. ವಿಷ್ಣು ಆಧಾರನಾಗಿದ್ದಾನೆ ಪಂಚಜನರು ಆಧೇಯರಾಗಿದ್ದಾರೆ ಎಂದು ತಿಳಿಯುವುದರಿಂದ ವಿರುದ್ಧಧರ್ಮಗಳಾದ ಆಧಾರಾಧೇಯಭಾವವು ಒಬ್ಬನಲ್ಲಿ ಯುಕ್ತವಾಗುವುದಿಲ್ಲ. ಆದ್ದರಿಂದ ವಿಷ್ಣು ಪಂಚಜನಾದಿಶಬ್ದಗಳಿಂದ ಪ್ರತಿಪಾದ್ಯನಾಗುವುದಿಲ್ಲ.

ಈ ಪೂರ್ವಪಕ್ಷಕ್ಕೆ ಉತ್ತರವನ್ನು ನೀಡಲು 'ನ ಸಂಖ್ಯೋಪಸಂಗ್ರಹಾದಪಿ' ಎಂಬ ಸೂತ್ರವು ಹೊರಟಿದೆ. ಪಂಚಜನಾದಿ ಶಬ್ದಗಳಿಂದಲೂ ಕೂಡ ವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆ. ಈ ದೇಹದಲ್ಲಿ ಮತ್ತು ದೇಹದಲ್ಲಿರುವ ಪಂಚಭೂತಗಳಲ್ಲಿ ವಿಷ್ಣು ನಿಯಾಮಕನಾಗಿ ನೆಲೆಸಿದ್ದಾನೆ. ಆ ನಿಯಾಮಕ ರೂಪಗಳು ಐದು ಸಂಖ್ಯೆಯಲ್ಲಿರುವುದರಿಂದ 'ಪಂಚ' ಎಂಬ ಶಬ್ದವನ್ನು ಅವನಲ್ಲಿ ಪ್ರಯೋಗ ಮಾಡಬಹುದು. ಹಾಗೂ ಪರಮಾತ್ಮನು ಒಬ್ಬನೇ ಆದರೂ ಕೂಡ ಅವನ ಒಂದು ರೂಪದಲ್ಲಿ ಅವನ ಬೇರೆ ರೂಪಗಳು ಆಧೇಯವಾಗಿವೆ. ಆಧಾರಾಧೇಯಭಾವವೂ ಕೂಡ ಅವನಲ್ಲಿ ಹೀಗೆ ಉಪಪನ್ನವಾಗುತ್ತದೆ. ಹೀಗೆ ಯಾವುದೇ ಅನುಪಪತ್ತಿಯು ಇಲ್ಲದ ಕಾರಣ ಈ ಶಬ್ದವನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡಬಹುದು. ಒಬ್ಬನೇ ವಿಷ್ಣುವಿನಲ್ಲಿ ಆಧಾರಾಧೇಯಭಾವ ಹಾಗೂ ಅನೇಕತ್ವಸಂಖ್ಯೆಯು ವಿಶೇಷ ಎಂಬ ಪದಾರ್ಥವನ್ನು ಒಪ್ಪಿರುವುದರಿಂದ ಉಪಪನ್ನವಾಗುತ್ತದೆ.

ವಿವರಣೆ - ಬೃಹದಾರಣ್ಯೋಪನಿಷತ್ತಿನ ತೃತೀಯಾಧ್ಯಾಯದಲ್ಲಿ ಬರುವ ಪ್ರಕರಣ ಹೀಗಿದೆ -

'ಯಸ್ಮಿನ್ ಪಂಚ ಪಂಚ ಜನಾ ಆಕಾಶಶ್ಚ ಪ್ರತಿಷ್ಠಿತಃ।
ತಮೇವಮನ್ಯ ಆತ್ಮಾನಂ ವಿದ್ವಾನ್ ಬ್ರಹ್ಮಾಮೃತೋऽಮೃತಮ್ ॥

ಪ್ರತಿಯೊಬ್ಬ ಜೀವಾತ್ಮನ ಶರೀರದಲ್ಲೂ ಐದು ಐದು ಜನರೂ, ಮೂಲ ಪ್ರಕೃತಿಯೂ ಯಾರನ್ನು ಆಶ್ರಯಿಸಿಕೊಂಡಿವೆಯೋ, ಆ ಪರಮಾತ್ಮನನ್ನೇ ತಿಳಿಯುವೆನು. ನಿತ್ಯಮುಕ್ತನಾದ ಆ ಪರಬ್ರಹ್ಮನನ್ನು ತಿಳಿದವರು ಮುಕ್ತರಾಗುತ್ತಾರೆ.

ಪ್ರಾಣಶ್ಚಕ್ಷುಸ್ತಥೈವಾನ್ನ ಮನಃ ಶ್ರೋತ್ರಂ ಚ ಪಂಚಮಂ।
ಮೂಲ ಪ್ರಕೃತಿಸಂಯುಕ್ತಂ ಯದ್ಗತಂ ಪ್ರತಿಪೂರುಷಂ।

ಪ್ರತಿ ಜೀವನ ಶರೀರದಲ್ಲಿಯೂ ಪ್ರಾಣ, ಚಕ್ಷುಸ್, ಅನ್ನ, ಮನಸ್, ಶ್ರೋತ್ರ ಎಂಬ ಐದು ಜನರೂ, ಮೂಲಪ್ರಕೃತಿಯೂ ಪರಮಾತ್ಮನನ್ನು ಆಶ್ರಯಿಸಿವೆ.

ಪ್ರಾಣಸ್ಯ ಪ್ರಾಣಮುತ ಚಕ್ಷುಷಶ್ಚಕ್ಷು-
ರುತ ಶ್ರೋತ್ರಸ್ಯ ಶ್ರೋತ್ರಂ ಮನಸೋ ಮನೋ ಯೇ।
ಏದುಸ್ತೇ ನಿಚಿಕ್ಯುರ್ಬ್ರಹ್ಮ ಪುರಾಣ ಮಗ್ರ್ಯಮ್।

ಪ್ರಾಣಕ್ಕೆ ಪ್ರಾಣಶಕ್ತಿ ನೀಡುವವನೂ, ಕಣ್ಣಿಗೆ ದೃಷ್ಟಿಶಕ್ತಿ ನೀಡುವವನೂ, ಕಿವಿಗೆ ಶ್ರವಣಶಕ್ತಿ ನೀಡುವವನೂ, ಮನಸ್ಸಿಗೆ ತಿಳಿಯುವ ಶಕ್ತಿ ನೀಡುವವನೂ ಆದ ಪರಬ್ರಹ್ಮನನ್ನು ಯಾರು ತಿಳಿಯುತ್ತಾರೋ ಅವರು ಅನಾದಿಯೂ ಸರ್ವಶ್ರೇಷ್ಠನೂ ಆದ ಆ ಪರಬ್ರಹ್ಮನನ್ನು ಹೊಂದುವರು.

ಶ್ರೀಮಜ್ಜಯತೀರ್ಥಭಿಕ್ಷುಗಳಿಂದ ವಿರಚಿತವಾದ

ತತ್ವಪ್ರಕಾಶಿಕಾ

ಪಂಚ ಜನಾದಿ ಶಬ್ದಸಮನ್ವಯಕ್ಕೆ ಎರಡು ಲಿಂಗಗಳು

अत्राधाराधेयत्वादिलिङ्गेनान्यत्रैव प्रसिद्धानां पञ्चजनादिशब्दानां हरौ समन्वयप्रतिपादनादस्ति शास्त्रादिसङ्गतिः ।

ಈ ನ ಸಂಖ್ಯೋಪಸಂಗ್ರಹಾಧಿಕರಣದಲ್ಲಿ 'ಆಧಾರಾಧೇಯತ್ವ' ಎಂಬ ಲಿಂಗದಿಂದ ಮತ್ತು 'ಬಹುತ್ವಸಂಖ್ಯಾ ವಿಶಿಷ್ಟವಸ್ತುವಾಚಿತ್ವ' ಎಂಬ ಲಿಂಗದಿಂದ ಅನ್ಯತ್ರೈವಪ್ರಸಿದ್ಧವಾದ ಪಂಚ ಜನಾ ಮೊದಲಾದ ಶಬ್ದಗಳನ್ನು ಶ್ರೀಹರಿಯಲ್ಲಿ ಸಮನ್ವಯ ಮಾಡಲಾಗುತ್ತಿದೆ. ಆದ್ದರಿಂದ ಶಾಸ್ತ್ರಸಂಗತಿ, ಅಧ್ಯಾಯಸಂಗತಿ ಹಾಗೂ ಪಾದಸಂಗತಿಗಳನ್ನು ತಿಳಿಯಬೇಕು.

ವಾಜಸನೇಯ ಶಾಖಾದಲ್ಲಿ ವಿಷಯವಾಕ್ಯ

तत्वप्रकाशिका – समन्वयसूत्रे सर्वशब्दानां परमात्मपरत्वमुक्तम् । सर्वान्तर्गताश्च पञ्चजनादिब्दा वाजसनेयके श्रूयन्ते – ''यस्मिन् पञ्च पञ्च जना आकाशश्च प्रतिष्ठितः । तमेवं मन्य आत्मानं विद्वान् ब्रह्मामृतोऽमृतम्''।। इति ।

'ತತ್ತು ಸಮನ್ವಯಾತ್' ಎಂಬ ಸೂತ್ರದಲ್ಲಿ ಸಕಲಶಬ್ದಗಳು ಪರಮಾತ್ಮ ಪರವಾಗಿವೆ ಎಂದು ಪ್ರತಿಜ್ಞೆ ಮಾಡಲಾಯಿತು. ಆ ಸಕಲ ಶಬ್ದಗಳ ಮಧ್ಯದಲ್ಲಿ 'ಪಂಚ ಜನಾ' ಮೊದಲಾದ ಶಬ್ದಗಳೂ ಕೂಡ ಸೇರಿರುತ್ತವೆ. ಇದನ್ನೇ ವಾಜಸನೇಯ ಶಾಖಾದಲ್ಲಿ ಹೀಗೆ ಹೇಳಲಾಗಿದೆ - 'ಯಸ್ಮಿನ್ ಪಂಚ ಪಂಚ ಜನಾ ಆಕಾಶಶ್ಚ ಪ್ರತಿಷ್ಠಿತಃ । ತಮೇವ ಮನ್ಯ ಆತ್ಮಾನಂ ವಿದ್ವಾನ್ ಬ್ರಹ್ಮಾಮೃತೋಽಮೃತಮ್' 'ಯಾವ ಶರೀರನಿಯಾಮಕನಲ್ಲಿ ಪ್ರಾಣಾದಿ ಐದು ಪದಾರ್ಥಗಳು ಮತ್ತು ಆಕಾಶವು ಆಶ್ರಿತವಾಗಿವೆಯೋ, ಅಂತಹ ಪದಾರ್ಥವನ್ನು ನಾನು ತಿಳಿಯುತ್ತೇನೆ. ಯಾರು ಈ ವಿನಾಶವಿಲ್ಲದ ಆತ್ಮನನ್ನು ತಿಳಿಯುತ್ತಾರೋ, ಅವರು ಮುಕ್ತರಾಗುತ್ತಾರೆ' ಎಂದು.

ಒಬ್ಬನಾದ ಶ್ರೀಹರಿ ಐದು ಮಂದಿ ಆಗುವನೇ ?

तत्वप्रकाशिका – सर्वशरीरेषु अनुवृत्त्यर्थं पञ्च पञ्च जनेति । तद्वाच्यं विष्णोरन्यच्चेत्, तर्हि समन्वयसूत्रानुपपत्तिरित्यवश्यं निर्णेतव्यम् । तत् पञ्च जनादिशब्दवाच्यं विषयः ।

ಪ್ರತಿಯೊಬ್ಬರ ಶರೀರದಲ್ಲಿಯೂ ಪಂಚವಿಧ ಪ್ರಾಣಾದಿಪದಾರ್ಥಗಳು ಇರುತ್ತವೆಂದು ಸೂಚನೆ ಮಾಡಲು ಶ್ರುತಿಯಲ್ಲಿ 'ಪಂಚ ಪಂಚ ಜನಾ' ಎಂಬ ಆವೃತ್ತಿಯು ಕೇಳಿಸುತ್ತಿದೆ. ಈ ಪಂಚ ಜನ ಶಬ್ದವಾಚ್ಯರಾದ ವ್ಯಕ್ತಿಗಳು ವಿಷ್ಣುವಿಗಿಂತ ಭಿನ್ನರಾದರೆ ಸರ್ವಶಬ್ದವಾಚ್ಯ ಪರಮಾತ್ಮನೇ ಆಗಿದ್ದಾನೆಂದು ಹೇಳುವ ಸಮನ್ವಯಸೂತ್ರವು ಅನುಪಪನ್ನವಾಗುತ್ತದೆ. ಆದ್ದರಿಂದ ಪಂಚ ಜನ ಶಬ್ದದಿಂದ ಪ್ರತಿಪಾದ್ಯ ಪದಾರ್ಥವನ್ನು ಅವಶ್ಯವಾಗಿ ಇಲ್ಲಿ ನಿರ್ಣಯಿಸಬೇಕು. ಯಾರು ಪ್ರತಿಪಾದ್ಯರಾಗಿದ್ದಾರೋ ಅವರೇ ಈ ಅಧಿಕರಣದ ವಿಷಯರಾಗುತ್ತಾರೆ.

ಅಥವಾ ಆ ಐದು ಮಂದಿ ಬೇರೆಯವರೋ ?

तत्वप्रकाशिका – विष्णुरन्यद्वेति सन्देहः । समन्वयसूत्रमन्यत्रैव प्रसिद्धिश्च सन्देहबीजम् । न पञ्च जनादिशब्दवाच्यो विष्णुरिति पूर्वः पक्षः ।

ಈ ಪಂಚ ಜನ ಶಬ್ದದಿಂದ ಪ್ರತಿಪಾದ್ಯನಾದವನು ವಿಷ್ಣುವೋ ಅಥವಾ ಬೇರೆ ಪದಾರ್ಥವೋ? ಎಂಬುದೇ ಸಂಶಯ. ಸಮನ್ವಯಸೂತ್ರ ಹಾಗೂ ಅನ್ಯತ್ರಪ್ರಸಿದ್ಧಿ ಇವೆರಡೂ ಸಂಶಯ ಬೀಜಗಳು. ಈ ಪಂಚ ಜನಾದಿ ಶಬ್ದಗಳಿಂದ ವಿಷ್ಣುವು ವಾಚ್ಯನಲ್ಲ ಎಂಬುದು ಪೂರ್ವಪಕ್ಷ.

'ಏಕಮೇವಾದ್ವಿತೀಯಮ್' ಎಂಬ ಶ್ರುತಿ ಪರಮಾತ್ಮನನ್ನು ಒಬ್ಬನೇ ಎನ್ನುತ್ತಿದೆ

तत्वप्रकाशिका – तच्छब्दस्य बहुत्वसंख्याविशिष्टवस्तुवाचित्वात् । बहुत्वस्य चेश्वरे विरुद्धत्वात् । 'एकमेवाद्वितीयम्' इत्यादिश्रुतेः ।

'ಪಂಚ' ಎಂಬ ಶಬ್ದವು ಬಹುತ್ವಸಂಖ್ಯಾವಿಶಿಷ್ಟವಾದ ವಸ್ತುವನ್ನು ಪ್ರತಿಪಾದನೆ ಮಾಡುತ್ತಿದೆ. ಒಬ್ಬನೇ ಆದ ಈಶ್ವರನಲ್ಲಿ ಈ ಬಹುತ್ವ ಸಂಖ್ಯೆಯು ವಿರುದ್ಧವಾಗುತ್ತದೆ. ಏಕೆಂದರೆ 'ಏಕಮೇವಾದ್ವಿತೀಯಮ್' ಎಂಬ ಶ್ರುತಿಯು 'ಪರಮಾತ್ಮನು ಒಬ್ಬನೇ ಆಗಿದ್ದಾನೆ ಅನೇಕರಲ್ಲ' ಎಂದು ಸ್ಪಷ್ಟವಾಗಿ ಹೇಳುತ್ತಿದೆ.

ಒಬ್ಬನಲ್ಲಿ ಬಹುತ್ವ ಹೇಗೆ ?

तत्वप्रकाशिका – न च स्वस्य ईश्वरस्य बहुत्वाभावेऽप्यन्यगतबहुत्वस्य तदधीनत्वेन बहुत्वसंख्यावाचिशब्दवृत्तिः ।

ಪರಮಾತ್ಮನು ಸ್ವತಃ ಒಬ್ಬನೇ ಆಗಿರುವ ಕಾರಣ 'ಬಹುತ್ವ' ಎಂಬ ಧರ್ಮವು ಅವನಲ್ಲಿ ಬಾರದಿದ್ದರೂ ಬೇರೆ ಪದಾರ್ಥಗಳಲ್ಲಿರುವ ಬಹುತ್ವವು ಪರಮಾತ್ಮನ ಅಧೀನವಾದ್ದರಿಂದ ಬಹುತ್ವಸಂಖ್ಯಾವಾಚಕವಾದ ಶಬ್ದಗಳು ಪರಮಾತ್ಮನಲ್ಲಿ ಪ್ರವೃತ್ತವಾಗುತ್ತವಲ್ಲವೇ? ಎಂದು ಪ್ರಶ್ನಿಸಬಾರದು.

ತದಧೀನತ್ವನ್ಯಾಯವು ಉಪಯೋಗವಾಗುವುದಿಲ್ಲ

तत्वप्रकाशिका – वशीकृतबहुजनेऽपि राजनि तददर्शनात् ।

ಏಕೆಂದರೆ ಅನೇಕ ಜನರನ್ನು ವಶಮಾಡಿಕೊಂಡಿರುವ ರಾಜನಲ್ಲಿ ಬಹುತ್ವಸಂಖ್ಯಾವಾಚಕವಾದ ಶಬ್ದಪ್ರಯೋಗಗಳು ಎಲ್ಲಿಯೂ ಕಾಣಿಸುತ್ತಿಲ್ಲ. ತದಧೀನತ್ವ ನ್ಯಾಯದಿಂದ ಪರಮಾತ್ಮನಲ್ಲಿ ಬಹುತ್ವಸಂಖ್ಯಾವಾಚಕ ಶಬ್ದಗಳ ಸಮನ್ವಯವನ್ನು ಮಾಡುವುದಾದರೆ ಅನೇಕ ಜನರನ್ನು ವಶಮಾಡಿಕೊಂಡಿರುವ ರಾಜನಲ್ಲಿಯೂ ಬಹುತ್ವಸಂಖ್ಯಾವಾಚಕವಾದ ಶಬ್ದಗಳನ್ನು ಪ್ರಯೋಗಿಸಬೇಕಾದೀತು.

ದುಃಖೀ ಬದ್ಧಾದಿ ಶಬ್ದಗಳಂತೆ ಇದಲ್ಲ

तत्वप्रकाशिका – अवरादिशब्दवदन्यत्रादृष्टत्वेऽपि वृत्तिः किं न स्यात् ? इति चेत् न ।

'ಅವರ', 'ದುಃಖೀ', 'ಬದ್ಧಃ' ಇವೇ ಮೊದಲಾದ ಶಬ್ದಗಳನ್ನು 'ಅವರ'ನಲ್ಲದ, 'ದುಃಖೀ'ಯಲ್ಲದ, 'ಬದ್ಧ'ನಾಗದ ವ್ಯಕ್ತಿಯಲ್ಲಿ ಪ್ರಯೋಗ ಮಾಡುವುದು ಲೋಕದಲ್ಲಿ ಕಾಣಿಸುತ್ತಿಲ್ಲ. ಆದರೆ 'ಅವರ'ನಲ್ಲದ 'ದುಃಖೀ'ಅಲ್ಲದ, 'ಬದ್ಧ'ನಲ್ಲದ ಪರಮಾತ್ಮನಲ್ಲಿ 'ಅವರಃ' 'ದುಃಖೀ' ಇತ್ಯಾದಿ ಶಬ್ದಗಳ ಪ್ರಯೋಗವನ್ನು ಮಾಡುವುದು, ಕಾಣಿಸುತ್ತಿದೆ. ಇದೇ ರೀತಿಯಾಗಿ ಬಹುತ್ವಸಂಖ್ಯಾವಾಚಕವಾದ ಶಬ್ದಗಳನ್ನು ಲೋಕದಲ್ಲಿ ಒಬ್ಬನೇ ವ್ಯಕ್ತಿಯಲ್ಲಿ ಮಾಡದಿದ್ದರೂ, ಪರಮಾತ್ಮನಲ್ಲಿ ಪ್ರಯೋಗ ಮಾಡಬಹುದಲ್ಲವೇ?

ಏಕೆಂದರೆ ಇದಕ್ಕೆ ಪ್ರಮಾಣವಿಲ್ಲ

तत्वप्रकाशिका – तत्र हेत्वन्तरेण सिद्धायां वृत्तौ निमित्तमात्राश्रयणात्। न चात्रास्ति तादृशं नियामकम् ।

ಈ ಪ್ರಶ್ನೆ ತಪ್ಪು. ಏಕೆಂದರೆ 'ಅವರಃ' 'ದುಃಖೀ' 'ಬದ್ಧಃ' ಮೊದಲಾದ ಶಬ್ದಗಳನ್ನು ಪರಮಾತ್ಮನಲ್ಲಿ ಪ್ರಯೋಗಿಸಲು 'ನಾಮಾನಿ ಸರ್ವಾಣಿ ಯಮಾವಿಶಂತಿ' 'ಸೋವರಃ ಸೋನಿತ್ಯ, ಸೋऽವರಯತಿ, ಸೋऽನಿತ್ಯಯತಿ' ಇವೇ ಮೊದಲಾದ ವಿಶೇಷ ಶ್ರುತಿಗಳು ಪ್ರಮಾಣವಾಗಿವೆ.

ಆದ್ದರಿಂದ ಈ ಪ್ರಯೋಗಗಳಿಗೆ ಸೂತ್ರಕಾರರು 'ತದಧೀನತ್ವ' ಎಂಬ ಕಾರಣವನ್ನಷ್ಟೇ ತಿಳಿಸಿರುತ್ತಾರೆ. ಆದರೆ 'ಪಂಚ ಜನ' ಮೊದಲಾದ ಶಬ್ದಗಳು ಪರಮಾತ್ಮ ಪ್ರತಿಪಾದಕ-ವಾಗುತ್ತವೆನ್ನಲು ಯಾವುದೇ ವಿಶೇಷ ಪ್ರಮಾಣಗಳು ಇರುವುದಿಲ್ಲ.

'ಸರ್ವೇ ವೇದಾಃ' ಎಂಬ ಶ್ರುತಿಯೂ ಕೂಡ ಪ್ರಮಾಣವಲ್ಲ

तत्वप्रकाशिका – न च 'सर्वे वेदाः' इति श्रुतिर्नियामिका । तस्याः सङ्कोचसम्भवात् ।

'ಸರ್ವೇ ವೇದಾ ಯತ್ಪದಮಾಮನಂತಿ' ಎಂಬ ಶ್ರುತಿಯೇ 'ಪಂಚ ಜನ' ಮೊದಲಾದ ಶಬ್ದಗಳ ಸಮನ್ವಯಕ್ಕೆ ನಿಯಾಮಕ ಪ್ರಮಾಣವೆಂದು ಹೇಳಬಾರದು. ಶ್ರುತಿಯಲ್ಲಿರುವ 'ಸರ್ವ' ಪದಕ್ಕೆ ಇಂತಹ ಸಂಖ್ಯಾವಾಚಕ ಶಬ್ದಗಳನ್ನು ಬಿಟ್ಟು ಅನುಪಪತ್ತಿ ಇರದ ಸಕಲ ಶಬ್ದಗಳೆಂದು ಸಂಕೋಚ ಮಾಡಲು ಬರುತ್ತದೆ.

ದ್ವಿತ್ವಕ್ಕೆ ಆಶ್ರಯನಾದರೂ ಪಂಚತ್ವಕ್ಕೆ ಆಶ್ರಯನಾಗಲಾರ

तत्वप्रकाशिका – 'ऋतं पिबन्तौ' इत्यादाविव स्वगतभेदशून्यस्यापि परमात्मनो बहुरूपत्वेन बहुत्वोक्तिः किं न स्यात्, इति चेन्न ।

'ಋತಂ ಪಿಬಂತೌ' ಎಂಬ ಶ್ರುತಿಯಲ್ಲಿ ಸ್ವಗತಭೇದಶೂನ್ಯನಾಗಿದ್ದರೂ ಪರಮಾತ್ಮನು ದ್ವಿತ್ವ ಎಂಬ ಧರ್ಮಕ್ಕೆ ಆಶ್ರಯನಾಗಿದ್ದಾನೆಂದು ಪ್ರತಿಪಾದನೆ ಮಾಡಲಾಗಿದೆ. ಅದರಂತೆ ಸ್ವಗತಭೇದಶೂನ್ಯನಾದ ಪರಮಾತ್ಮನಲ್ಲಿ ಪಂಚತ್ವ ಮೊದಲಾದ ಸಂಖ್ಯೆಗಳನ್ನು ಏಕೆ ಹೇಳಬಾರದು? ಎಂದು ಪ್ರಶ್ನಿಸಬಾರದು.

ಏಕೆಂದರೆ ಪ್ರಮಾಣವಿಲ್ಲ

तत्वप्रकाशिका – प्रतिशरीरमात्मान्तरात्मवद् बहुत्वे मानाभावात् ।

ಪ್ರತಿಯೊಂದು ಶರೀರಗಳಲ್ಲಿಯೂ ಪರಮಾತ್ಮನು 'ಆತ್ಮ' ಹಾಗೂ 'ಅಂತರಾತ್ಮ' ಎಂಬೆರಡು ರೂಪಗಳಿಂದ ನೆಲೆಸಿರುತ್ತಾನೆನ್ನಲು ಪ್ರಮಾಣವಿದೆ. ಆದರೆ ಬಹುತ್ವಸಂಖ್ಯಾದಿಂದ ನೆಲೆಸಿರುತ್ತಾನೆನ್ನಲು ಯಾವುದೇ ಪ್ರಮಾಣಗಳಿರುವುದಿಲ್ಲ.

ಆಧಾರನಾದವನು ಆಧೇಯನಾಗಲಾರ

तत्वप्रकाशिका – 'यस्मिन्' इति सप्तम्या निर्दिष्टस्य वाक्यशेषबलेन परमात्मत्वाच्च न तदाधेयानां पञ्चजनाकाशानां परमात्मत्वम् ।

ಶ್ರುತಿಯಲ್ಲಿ 'ಯಸ್ಮಿನ್' ಎಂಬುದಾಗಿ ಸಪ್ತಮೀ ವಿಭಕ್ತಿಯಿಂದ ನಿರ್ದೇಶಿಸಲ್ಪಟ್ಟ ವಾಕ್ಯಶೇಷದ ಬಲದಿಂದ ಪರಮಾತ್ಮನು ಆಧಾರನಾಗಿ ಪ್ರತಿಪಾದ್ಯನಾಗಿದ್ದಾನೆ. ಪುನಃ ಅವನೇ ಆಧೇಯನಾಗಿ ಪಂಚ ಜನಾ, ಆಕಾಶ ಮೊದಲಾದ ಶಬ್ದಗಳಿಂದ ಪ್ರತಿಪಾದ್ಯನಾಗಲು ಸಾಧ್ಯವಿಲ್ಲ.

ವಿರುದ್ಧವಾದ ಸ್ವಾಧಾರತ್ವ ಪರಮಾತ್ಮನಲ್ಲಿ ಹೇಗೆ ?

तत्वप्रकाशिका – न लोकस्यैवाधाराधेयभावो युज्यते । हरेराधेयत्वं च नास्ति, किमुत विरुद्धं स्वाधारत्वम् ।

ಒಬ್ಬನೇ ವ್ಯಕ್ತಿಯು ಆಧಾರನೂ, ಆಧೇಯನು ಆಗಲು ಸಾಧ್ಯವೇ ಇಲ್ಲ. ಮತ್ತು ಶ್ರೀಹರಿಯು 'ಏಕೋ ದಾಧಾರ ಭುವನಾನಿ ವಿಶ್ವಾ' ಎಂಬ ಶ್ರುತಿ ಹೇಳುವಂತೆ ಎಲ್ಲಕ್ಕೂ ಆಧಾರನಾಗಿರುವಾಗ ಆಧೇಯನಾಗಲು ಸಾಧ್ಯವೇ ಇಲ್ಲ. ಹೀಗಿರುವಾಗ ವಿರುದ್ಧವಾದ ಸ್ವಾಧಾರತ್ವವು ಪರಮಾತ್ಮನಲ್ಲಿ ಹೇಗೆ ತಾನೇ ಕೂಡುತ್ತದೆ?

ಸಮನ್ವಯ ಸೂತ್ರದ ಸಕಲಶಬ್ದವಾಚ್ಯತ್ವವನ್ನು ಕೈಬಿಡಬೇಕು

तत्वप्रकाशिका – अतस्तस्य पञ्चजनादिशब्दवाच्यताऽसम्भवान्न युक्तं समन्वयसूत्रमिति ।

ಆದ್ದರಿಂದ ಪಂಚ ಜನಾದಿ ಶಬ್ದಗಳಿಂದ ಪರಮಾತ್ಮನು ಪ್ರತಿಪಾದ್ಯನಾಗುವುದು ಅತ್ಯಂತ ಅಸಂಭಾವಿತ. ಆದ್ದರಿಂದಲೇ ಸಮನ್ವಯಸೂತ್ರದಲ್ಲಿ ಸಕಲಶಬ್ದವಾಚ್ಯತ್ವವನ್ನು ಪ್ರತಿಜ್ಞೆ ಮಾಡಿದ್ದೂ ಕೂಡ ಅಸಾಧುವಾಗಿದೆ. ಇಷ್ಟು ಪೂರ್ವಪಕ್ಷದ ಅಭಿಪ್ರಾಯ.

ಸಿದ್ಧಾಂತ ಸ್ಥಾಪನೆ

तत्वप्रकाशिका – एवं प्राप्ते सिद्धान्तयत् सूत्रमुपन्यस्य व्याचष्टे – नेति।।

अपिपदेन पूर्वसूत्राद् विरोधपदाकर्षणम् । युक्तमेव पञ्चजनाऽऽकाशशब्दवाच्यत्वं भगवतः । स्वगतभेदशून्यस्यापि नानारूपत्वेन बहुत्वसङ्ख्योपसङ्ग्रहाविरोधात्।

ಈ ಪೂರ್ವಪಕ್ಷವನ್ನು ನಿರಾಕರಣೆ ಮಾಡುತ್ತಾ, ಸಿದ್ಧಾಂತ ಸ್ಥಾಪನೆಗೋಸ್ಕರ ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ 'ನ' ಇತ್ಯಾದಿಯಾಗಿ. ಸೂತ್ರದಲ್ಲಿರುವ 'ಅಪಿ' ಪದದಿಂದ ಹಿಂದಿನ ಸೂತ್ರದಲ್ಲಿರುವ 'ಅವಿರೋಧಃ' ಎಂಬ ಪದದಿಂದ ವಿರೋಧ ಪದವನ್ನು ಆಕರ್ಷಣೆ ಮಾಡಬೇಕು. ಪಂಚ ಜನಾ, ಆಕಾಶ ಮೊದಲಾದ ಶಬ್ದಗಳಿಂದ ಭಗವಂತನೇ ಪ್ರತಿಪಾದ್ಯನಾಗಿದ್ದಾನೆ. ಸ್ವಗತಭೇದಶೂನ್ಯನಾಗಿದ್ದರೂ ಕೂಡ ಅನೇಕ ರೂಪಗಳನ್ನು ಅವನು ಹೊಂದಿರುವ ಕಾರಣ, ಬಹುತ್ವ ಸಂಖ್ಯೆಗೆ ಆಶ್ರಯನಾಗಿದ್ದಾನೆ. ಬಹುತ್ವಸಂಖ್ಯೆಯನ್ನು ಅವನಲ್ಲಿ ಪ್ರತಿಪಾದನೆ ಮಾಡಿದಾಗ ಯಾವ ವಿರೋಧವೂ ಕೂಡ ಬರುವುದಿಲ್ಲ.

ಒಬ್ಬನನ್ನು ಐದುಮಂದಿ ಎನ್ನಬಹುದು

तत्वप्रकाशिका – न च प्रतिशरीरं परमात्मनो बहुरूपत्वमप्रामाणिकम्। शरीरान्तर्गताकाशप्राणादिपञ्चजननियामकत्वेन तेषु नानाभावस्य न्यायप्राप्तत्वात् ।

ಪ್ರತಿಯೊಂದು ಶರೀರಗಳಲ್ಲಿಯೂ ಪರಮಾತ್ಮನು ಅನೇಕ ರೂಪಗಳಿಂದ ಇರುತ್ತಾನೆಂಬುದಕ್ಕೆ ಯಾವುದೇ ಪ್ರಮಾಣವಿಲ್ಲವೆಂದು ಶಂಕಿಸಬಾರದು. ಏಕೆಂದರೆ ಶರೀರದಲ್ಲಿರುವ ಪ್ರಾಣಾದಿ ಪಂಚ ಪದಾರ್ಥಗಳು ಮತ್ತು ಆಕಾಶ ಇವುಗಳ ನಿಯಾಮಕನಾಗಿ ಅನೇಕ ರೂಪಗಳಿಂದ ಪರಮಾತ್ಮನಿದ್ದಾನೆಂಬುದು ನ್ಯಾಯಪ್ರಾಪ್ತವೇ ಆಗಿರುತ್ತದೆ.

ಆಧಾರನಾದ ಶ್ರೀಹರಿ ಆಧೇಯನೂ ಆಗಿದ್ದಾನೆ

तत्वप्रकाशिका – न च 'यस्मिन्' इत्याधारस्य विष्णुत्वात् पञ्चजनादीनामाधेयानाम् अविष्णुत्वम् । आकाशादिगतरूपेभ्योऽतिरिक्तस्य शरीरनियामकरूपस्य तत्रोक्तेः ।

ಇನ್ನು 'ಯಸ್ಮಿನ್' ಎಂಬ ವಾಕ್ಯಶೇಷದಲ್ಲಿ ಆಧಾರನಾಗಿ ಪ್ರಸ್ತುತನಾದ ಪರಮಾತ್ಮನು ಪುನಃ ಆಧೇಯನಾಗಿ ಪಂಚ ಜನಾದಿ ಶಬ್ದಗಳಿಂದ ಪ್ರತಿಪಾದ್ಯನಾಗಲು ಸಾಧ್ಯವಿಲ್ಲ ಎಂಬ ಶಂಕೆಗೂ

ಅವಕಾಶವಿಲ್ಲ. ಏಕೆಂದರೆ ಆಕಾಶಾದಿ ಪದಾರ್ಥದಲ್ಲಿ ಭಗವಂತನು ಯಾವ ನಿಯಾಮಕ-ರೂಪದಿಂದ ನೆಲೆಸಿದ್ದಾನೋ, ಆ ರೂಪಕ್ಕಿಂತ ಅತಿರಿಕ್ತವಾದ 'ಶರೀರನಿಯಾಮಕ' ಎಂಬ ರೂಪದಿಂದ ಸಪ್ತಮ್ಯಂತ ಪದದಿಂದ ಪ್ರತಿಪಾದ್ಯನಾಗಿದ್ದಾನೆ.

ಸಕಲಶಬ್ದವಾಚ್ಯತ್ವವು ಸಿದ್ಧವಾಯಿತು

तत्वप्रकाशिका – शरीरनियामकेश्वराधाराकाशादिषु भगवतोऽवस्थानमात्रेण आधाराधेयभावोऽपि युज्यते । अतः परमात्मनः पञ्चजनादिशब्दवाच्यत्वाद्युक्तं समन्वयसूत्रमिति भावः ।। १ ।।

ಶರೀರಾದಿ ನಿಯಾಮಕನಾದ ಈಶ್ವರನು ಆಕಾಶಾದಿಗಳಿಗೆ ಆಧಾರನಾಗಿದ್ದಾನೆ. ಅಂತಹ ಆಕಾಶಾದಿ ಪದಾರ್ಥಗಳಲ್ಲಿ ಇರುವಂತಹ ಭಗವಂತನ ಯಾವ ನಿಯಾಮಕರೂಪವಿದೆಯೋ, ಅದು ಶರೀರನಿಯಾಮಕವಾದ ರೂಪದಲ್ಲಿ ಆಶ್ರಿತವಾಗಿದೆ. ಆದ್ದರಿಂದ ಆಕಾಶದ ಅಂತರ್ಯಾಮಿಯಾದ ಭಗವಂತನು ಆಧೇಯನು, ಶರೀರದ ನಿಯಾಮಕನಾದ ಭಗವಂತನು ಆಧಾರನು ಆಗಿದ್ದಾನೆ. ಹೀಗೆ ಒಬ್ಬನೇ ಪರಮಾತ್ಮನಲ್ಲಿ ಆಧಾರಾಧೇಯಭಾವವನ್ನು ಶ್ರುತಿಯು ಪ್ರತಿಪಾದನೆ ಮಾಡುತ್ತಿದೆ. ಹಾಗಾಗಿ ಪರಮಾತ್ಮನು 'ಪಂಚ ಜನಾ' ಮೊದಲಾದ ಶಬ್ದಗಳಿಂದ ವಾಚ್ಯನಾಗಿದ್ದಾನೆಂಬುದು ಸಿದ್ಧವಾಯಿತು. ಸಮನ್ವಯಸೂತ್ರದಲ್ಲಿ ಸಕಲಶಬ್ದವಾಚ್ಯತ್ವವನ್ನು ಪ್ರತಿಜ್ಞೆ ಮಾಡಿದ್ದೂ ಕೂಡ ಅತ್ಯಂತ ಯುಕ್ತವೇ ಆಗಿದೆ.

ಮಂತ್ರಾಲಯ ಪ್ರಭುಗಳಾದ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ

ಭಾವದೀಪ

ನ್ಯಾಯವಿವರಣದಲ್ಲಿ ಸೂಚಿಸಿದ ಅಧಿಕರಣದ ಲಿಂಗ

भावदीपः – 'अधिकरणाधेयत्वादिकम्' इति न्यायविवरणसूचितलिङ्गेन अन्यत्रैव प्रसिद्धिमाह – अत्राधाराधेयत्वेति ।।

"ಅಧಿಕರಣಾಧೇಯತ್ವಾದಿಕಮ್" ಎಂಬ ನ್ಯಾಯವಿವರಣದಲ್ಲಿ ಸೂಚಿತವಾದ ಲಿಂಗದಿಂದ ಅನ್ಯತ್ರಪ್ರಸಿದ್ಧಿಯನ್ನು ಸಮರ್ಥಿಸಲು 'ಅತ್ರ ಆಧಾರಾಧೇಯತ್ವ' ಇತ್ಯಾದಿ ಟೀಕಾವಾಕ್ಯವು ಹೊರಟಿದೆ.

ಬಾಹುಲ್ಯವು ಅಧಿಕರಣದ ಉಪಾಧಿ

ಭಾವದೀಪಃ – बहुत्वमादिपदार्थः । अन्यत्रैव प्राणचक्षुः प्रभृतिषु । भाष्ये पञ्चजनशब्दो बहुत्ववाचिशब्दमात्रोपलक्षणम् । 'विरोधिसर्वबाहुल्य' इत्यनुभाष्योक्तेरिति भावेनाह – पञ्च जनादिशब्दानामिति ।।

ಆದಿಪದದಿಂದ ಬಹುತ್ವವನ್ನು ವಿವಕ್ಷಿಸಬೇಕು. ಬಹುತ್ವವೂ ಕೂಡ ಅನ್ಯತ್ರೈವ ಪ್ರಸಿದ್ಧಿಗೆ ಸೂಚಕವಾದ ಲಿಂಗವಾಗಿದೆ 'ಅನ್ಯತ್ರ' ಎಂದರೆ ಪ್ರಾಣ, ಚಕ್ಷುಸ್ಸು ಮೊದಲಾದವುಗಳಲ್ಲಿ ಎಂದರ್ಥ. ಭಾಷ್ಯದಲ್ಲಿ ಪ್ರಯೋಗಿಸಿದ ಪಂಚ ಜನ ಶಬ್ದವು ಬಹುತ್ವವಾಚಕವಾದ ಸಕಲಶಬ್ದಗಳಿಗೆ ಉಪಲಕ್ಷಣವಾಗಿದೆಯೆಂದು 'ಪಂಚ ಜನಾದಿಶಬ್ದಾನಾಮ್' ಎಂಬ ಮಾತಿನಿಂದ ಹೇಳಿರುತ್ತಾರೆ. 'ವಿರೋಧಿಸರ್ವಬಾಹುಲ್ಯ' ಎಂಬ ಅನುವ್ಯಾಖ್ಯಾನದ ಮಾತಿನಲ್ಲಿ 'ಬಾಹುಲ್ಯ' ಎಂಬ ಪದದಿಂದ ಈ ಅಧಿಕರಣದ ಉಪಾಧಿಯನ್ನು ಹೇಳಿದ್ದಾರೆ. ಅದನ್ನು ಟೀಕೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

ಆನುಮಾನಿಕಾಧಿಕರಣದ ಭಾಷ್ಯದಲ್ಲಿ ಸಂಗತಿ ಸೂಚನೆ

ಭಾವದೀಪಃ – आनुमानिकनयभाष्येण तुल्यन्यायतया सूचिते श्रुत्यधिकरणसङ्गती स्वयमाह – समन्वयेति ।।

ಆನುಮಾನಿಕಾಧಿಕರಣದ ಭಾಷ್ಯದಲ್ಲಿ ಸಮಾನನ್ಯಾಯದಿಂದ ಸೂಚಿತವಾದ ಶ್ರುತಿಸಂಗತಿ ಹಾಗೂ ಅಧಿಕರಣಸಂಗತಿಗಳನ್ನು ಸ್ವತಃ ಟೀಕೆಯಲ್ಲಿ 'ಸಮನ್ವಯ ಪ್ರತಿಪಾದನಾತ್' ಎಂಬ ಮಾತಿನಿಂದ ತೋರಿಸಿದ್ದಾರೆ.

ಬೃಹದಾರಣ್ಯಕದ ಆರನೇ ಅಧ್ಯಾಯದ ವಿಷಯವಾಕ್ಯ

ಭಾವದೀಪಃ – श्रूयन्त इति ।। षष्ठेऽध्याये । यस्मिन्निति सप्तम्यन्तस्य सर्वप्राणिशरीरवाचिनः शरीरनियामकतया सर्वशरीरेषु विन्यस्तभगवद्रूपपरत्वं द्योतयितुं तमेवेति श्रुतिलिङ्गोक्तिपरवाक्यशेषोद्धारः । स्युः पुमांसः

पञ्चजना इत्युक्तेः समस्तपदमिति भ्रमं निरस्यन् पञ्च पञ्चेति वीप्सायाः कृत्यमाह – सर्वेति ।।

ಬೃಹದಾರಣ್ಯಕದ ಆರನೆಯ ಅಧ್ಯಾಯದ ವಾಕ್ಯವನ್ನು 'ಯಸ್ಮಿನ್ ಪಂಚ' ಇತ್ಯಾದಿಯಾಗಿ ಉಲ್ಲೇಖ ಮಾಡಿದ್ದಾರೆ. 'ಯಸ್ಮಿನ್' ಎಂಬ ಸಪ್ತಮ್ಯಂತ ಪದದಿಂದ ಸಕಲಪ್ರಾಣಿಗಳ ಶರೀರದಿಂದ ಪ್ರತಿಪಾದ್ಯವಾದ ಶರೀರನಿಯಾಮಕವಾಗಿ ಸಕಲ ಶರೀರಗಳಲ್ಲಿ ಇರುವ ಭಗವದ್‌ರೂಪವನ್ನು ಹೇಳಲಾಗಿದೆ. ಅದನ್ನು 'ತಮೇವ' ಎಂಬ ವಾಕ್ಯಶೇಷವನ್ನು ಉಲ್ಲೇಖಿಸುವ ಮೂಲಕ ಸ್ಪಷ್ಟಪಡಿಸಿದ್ದಾರೆ. 'ಸ್ಯುಃ ಪುಮಾಂಸಃ ಪಂಚ ಜನಾಃ' ಎಂದು ಹೇಳಿರುವುದರಿಂದ ಪಂಚ ಜನಪದವು ಸಮಸ್ತಪದವೆಂಬ ಭ್ರಾಂತಿ ಬರುತ್ತದೆ. ಅದರ ಪರಿಹಾರಕ್ಕಾಗಿ 'ಪಂಚ ಪಂಚ' ಎಂಬ ವೀಪ್ಸಾಗ್ರಹಣದ ಸಾರ್ಥಕ್ಯವನ್ನು 'ಸರ್ವ' ಇತ್ಯಾದಿ ಪದದಿಂದ ಸಮರ್ಥಿಸುತ್ತಿದ್ದಾರೆ.

ಪುನರುಕ್ತಿಯ ಪರಿಹಾರ

भावदीपः – ''सर्वमानैर्विरोधश्च व्युत्पत्तेरप्यशक्यता । परस्परविरोधश्च विरोधः कार्यतद्वतोः'' इत्याद्यनुभाष्ये परस्परविरोध इत्युक्तं विवृण्वानः बहुसङ्ख्योपसङ्ग्रहेऽपीति भाष्यसूचितयुक्तिमाह – तच्छब्दस्येति ।। तदधीनत्वादर्थवदित्यनेन गतार्थत्वमाशङ्क्याह – नच स्वस्येति ।।

'ಸರ್ವಮಾನೈರ್ವಿರೋಧಶ್ಚ ವ್ಯುತ್ಪತ್ತೇರಪ್ಯಶಕ್ಯತಾ ।
ಪರಸ್ಪರವಿರೋಧಶ್ಚ ವಿರೋಧಃ ಕಾರ್ಯತದ್ವತೋಃ' ।।

ಎಂಬ ಅನುವ್ಯಾಖ್ಯಾನದ ಮಾತಿನಂತೆ ಪರಸ್ಪರ ವಿರೋಧವು ಈ ಅಧಿಕರಣದ ಪೂರ್ವಪಕ್ಷವಾಗಿದೆ. ಅದನ್ನು ವಿವರಿಸುವವರಾಗಿ 'ಬಹುಸಂಖ್ಯೋಪಸಂಗ್ರಹೇऽಪಿ' ಎಂಬ ಭಾಷ್ಯದಿಂದ ಸೂಚಿತವಾದ ಯುಕ್ತಿಯನ್ನು 'ತಚ್ಛಬ್ದಸ್ಯ' ಎಂಬ ವಾಕ್ಯದಿಂದ ತೋರಿಸುತ್ತಿದ್ದಾರೆ. 'ತದಧೀನತ್ವಾದರ್ಥವತ್' ಎಂಬ ಸೂತ್ರದಿಂದ ಪುನರುಕ್ತಿಯನ್ನು ಆಶಂಕಿಸಿ ಉತ್ತರಿಸುತ್ತಿದ್ದಾರೆ.

ರಾಜನಲ್ಲಿ ವ್ಯಭಿಚಾರ ಹೇಗೆ ?

भावदीपः – वशीकृतेति ।। ननु जनानां राजवशत्वेऽपि न तद्गतं बहुत्वं राजाधीनम् । अस्तु वा कथञ्चित् बहुत्वं राजाधीनम्। तथापि

भृत्यगतदुःखनिगडबन्धादेः राजाधीनत्वेऽपि राज्ञि दुःखिबद्धादिपदाप्रयोगव दुपपत्तेर्नव्यभिचार इति चेत् ।

ಪ್ರಶ್ನೆ - ಟೀಕೆಯಲ್ಲಿ ಅನೇಕ ಜನರನ್ನು ವಶಮಾಡಿಕೊಂಡಿರುವ ರಾಜನಲ್ಲಿ ಬಹುತ್ವಸಂಖ್ಯಾವಾಚಕವಾದ ಶಬ್ದ ಪ್ರಯೋಗಗಳು ಇರುವುದಿಲ್ಲವೆಂದು ಹೇಳಿದ್ದಾರೆ. ಇದರ ಅಭಿಪ್ರಾಯವನ್ನು ಹೀಗೆ ತಿಳಿಯಬೇಕು. ಅನೇಕ ಜನರು ರಾಜನ ವಶದಲ್ಲಿದ್ದರೂ ಅವರಲ್ಲಿರುವ ಬಹುತ್ವವು ರಾಜನ ಅಧೀನವಲ್ಲ. ಅಥವಾ ಬಹುತ್ವವು ರಾಜನ ಅಧೀನವೆಂದೇ ಒಪ್ಪೋಣ. ಆದರೂ ಕೂಡ ಭೃತ್ಯನಲ್ಲಿರುವ ದುಃಖ ನಿಗಡಬಂಧ ಇವುಗಳು ರಾಜಾಧೀನವಾಗಿದ್ದರೂ ರಾಜನಲ್ಲಿ 'ದುಃಖೀ' 'ಬದ್ಧಃ' ಮೊದಲಾದ ಪ್ರಯೋಗಗಳು ಇರುವುದಿಲ್ಲ. ಅದರಂತೆ ಬಹುತ್ವದ ಪ್ರಯೋಗವೂ ಕೂಡ ರಾಜನಲ್ಲಿ ಬಾರದ ಕಾರಣ ವ್ಯಭಿಚಾರವನ್ನು ಹೇಗೆ ಹೇಳುವಿರಿ?

ತಾತ್ಪರ್ಯಚಂದ್ರಿಕೆಯಲ್ಲಿ ಉತ್ತರ

भावदीपः – अत्रोक्तं चन्द्रिकायाम् । तदधीनत्वन्याये सत्यपि हरौ बहुत्वाद्यस्ति न वेति विचारात्तदाच्छादन एव तात्पर्यमिति वा बहुत्ववाचिशब्देषु स्वातन्त्र्यस्य निमित्तत्वे 'अमङ्गलत्वाच्छब्दानां राज्ञो योगादमङ्गले। अप्रियत्वात्तु शब्दस्य स्यात् प्रयोगनिवर्तनम्' इत्यनुभाष्योक्तदिशा बद्धादिशब्दवदमङ्गलत्वाभावात् वशीकृतबहुजनेऽपि राज्ञि तत्प्रयोगोपपत्तेः न तन्निमित्तमित्यभिप्रायो वेति ।।

ಉತ್ತರ - ಈ ವಿಷಯದಲ್ಲಿ ತಾತ್ಪರ್ಯಚಂದ್ರಿಕೆಯ ಉತ್ತರ ಹೀಗಿದೆ - ತದಧೀನತ್ವ ನ್ಯಾಯವಿದ್ದರೂ ಕೂಡ ಶ್ರೀಹರಿಯಲ್ಲಿ ಬಹುತ್ವವು ಇದೆಯೋ ಇಲ್ಲವೋ ಎಂಬ ವಿಚಾರವು ಪ್ರವೃತ್ತವಾಗುವುದರಿಂದ ಅದನ್ನು ಮುಚ್ಚಿಟ್ಟು ಪೂರ್ವಪಕ್ಷ ಮಾಡಬಹುದು. ಅಥವಾ ಬಹುತ್ವವಾಚಕವಾದ ಶಬ್ದಗಳಲ್ಲಿ ಸ್ವಾತಂತ್ರ್ಯವನ್ನು ಪ್ರವೃತ್ತಿನಿಮಿತ್ತವೆಂದು ಹೇಳಿದರೆ

'ಅಮಂಗಲತ್ವಾತ್ ಶಬ್ದಾನಾಂ ರಾಜ್ಞೋ ಯೋಗಾದಮಂಗಲೇ।
ಅಪ್ರಿಯತ್ವಾತ್ತು ಶಬ್ದಸ್ಯ ಸ್ಯಾತ್ ಪ್ರಯೋಗನಿವರ್ತನಮ್ ॥

ಶಬ್ದಗಳು ಅಮಂಗಳವಾದ್ದರಿಂದ ರಾಜನಲ್ಲಿ ಪ್ರಯೋಗ ಮಾಡಿದರೆ ಅವನಿಗೆ ಅಪ್ರಿಯವಾಗುವ ಕಾರಣದಿಂದ ಯಾರೂ ಸಹ ರಾಜನಲ್ಲಿ ಪ್ರಯೋಗ ಮಾಡುವುದಿಲ್ಲ.

ಹೀಗೆ ಅನುವ್ಯಾಖ್ಯಾನದಲ್ಲಿ ಹೇಳಿದಂತೆ ಬದ್ಧಾದಿಶಬ್ದಗಳು ಹೇಗೆ ಅಮಂಗಳವಾಗಿವೆಯೋ, ಅದರಂತೆ ಬಹುತ್ವವಾಚಕ ಶಬ್ದಗಳು ಅಮಂಗಳವಾಗಿರುವುದಿಲ್ಲ. ಆದ್ದರಿಂದ ಅನೇಕ ಜನರನ್ನು ವಶಮಾಡಿಕೊಂಡಿರುವ ರಾಜನಲ್ಲಿ ಬಹುತ್ವವಾಚಕವಾದ ಶಬ್ದಗಳನ್ನು ಪ್ರಯೋಗ ಮಾಡಬಹುದು. ಹೀಗೆ ವ್ಯಭಿಚಾರ ದೋಷವು ಬರುವುದರಿಂದ ಸ್ವಾತಂತ್ರ್ಯವನ್ನು ಪ್ರವೃತ್ತಿನಿಮಿತ್ತವೆಂದು ಒಪ್ಪಬಾರದು.

ಅನೇಕ ಪ್ರಮಾಣಗಳ ಆಧಾರ

ಭಾವದೀಪಃ – ಹೇತ್ವನ್ತರೇಣೇತಿ ।। ನಾಮಾನಿ ಸರ್ವಾಣಿ । ಸೋऽವರಃ ಸೋऽನಿತ್ಯ ಇತಿ ಪ್ರಮಾಣಾನ್ತರೇಣೇತ್ಯರ್ಥಃ ।

ಟೀಕೆಯಲ್ಲಿರುವ 'ಹೇತ್ವಂತರ' ಪದಕ್ಕೆ 'ನಾಮಾನಿ ಸಾರ್ವಣಿ' ಮತ್ತು 'ಸೋऽವರಃ ಸೋऽನಿತ್ಯಃ' ಇವೇ ಮೊದಲಾದ ಪ್ರಮಾಣಾಂತರಗಳಿಂದ ಎಂದರ್ಥ.

ಗುಹಾಧಿಕರಣದಿಂದ ಇದು ಗತಾರ್ಥವಲ್ಲ

ಭಾವದೀಪಃ – ನನು ಗುಹಾಂ ಪ್ರವಿಷ್ಟಾವಿತ್ಯತ್ರೋಕ್ತನ್ಯಾಯೇನ ಹರೌ ದ್ವಿತ್ವವತ್ ಬಹುತ್ವಮಪಿ ಸಿದ್ಧಮ್ । ಏಕತ್ವವಿರೋಧಿತ್ವೇ ದ್ವಿತ್ವಬಹುತ್ವಯೋರವಿಶೇಷಾದಿತಿ ಭಾವೇನ ತೇನಾಸ್ಯ ಗತಾರ್ಥತ್ವಮಾಶಙ್ಕ್ಯ ನಿರಾಹ – ಋತಂ ಪಿಬನ್ತಾವಿತ್ಯಾದಾವಿವೇತಿ ।।

'ಗುಹಾಂ ಪ್ರವಿಷ್ಟೌ' ಎಂಬ ಸೂತ್ರದಲ್ಲಿ ಹೇಳಿದ ನ್ಯಾಯದಂತೆ ಶ್ರೀಹರಿಯಲ್ಲಿ ದ್ವಿತ್ವವು ಸಿದ್ಧವಾಗಿದೆ ಅದರಂತೆ ಬಹುತ್ವವು ಕೂಡ ಸಿದ್ಧವಾಗುತ್ತದೆ. ಬಹುತ್ವವನ್ನು ಒಪ್ಪಿದರೆ ಏಕತ್ವದಿಂದ ವಿರೋಧ ಬರುವುದಾದರೆ ಅದೇ ಏಕತ್ವಕ್ಕೆ ದ್ವಿತ್ವದಿಂದಲೂ ಕೂಡ ವಿರೋಧವು ಬಂದೇ ಬರುತ್ತದೆ. ದ್ವಿತ್ವ ಹಾಗೂ ಬಹುತ್ವಗಳಲ್ಲಿ ಯಾವುದೇ ವ್ಯತ್ಯಾಸಗಳಿರುವುದಿಲ್ಲ. ಈ ಅಭಿಪ್ರಾಯದಿಂದ ಗುಹಾಧಿಕರಣದಿಂದಲೇ ಈ ಅಧಿಕರಣವು ಗತಾರ್ಥವಾಯಿತೆಂದು ಆಶಂಕಿಸಿ ಉತ್ತರಿಸಲು 'ಋತಂ ಪಿಬಂತೌ' ಇತ್ಯಾದಿ ವಾಕ್ಯಗಳು ಹೊರಟಿವೆ.

ಎರಡನೆಯ ಸೂತ್ರ ವ್ಯಾವರ್ತ್ಯವಾದ ಪೂರ್ವಪಕ್ಷ

ಭಾವದೀಪಃ – ದ್ವಿತೀಯಸೂತ್ರವ್ಯಾವರ್ತ್ಯೇ ಹೇತುಮಾಹ – ಮಾನಾಭಾವಾದಿತಿ ।। ತತ್ರ ತು ''ಘರ್ಮಾ ಸಮನ್ತಾ ತ್ರಿವೃತಂ ವ್ಯಾಪತುಃ'', ''ಆತ್ಮಾನ್ತರಾತ್ಮೇತಿ ಹರಿಃ'' ಇತಿ ಮಾನಮಸ್ತೀತಿ ಭಾವಃ ।

ಎರಡನೆ ಸೂತ್ರದಿಂದ ವ್ಯಾವರ್ತ್ಯವಾದ ಪೂರ್ವಪಕ್ಷದ ಹೇತುವನ್ನು 'ಮಾನಾಭಾವಾತ್' ಎಂಬುದರಿಂದ ಹೇಳುತ್ತಿದ್ದಾರೆ. 'ಘರ್ಮಾ ಸಮಂತಾ ತ್ರಿವೃತಂ ವ್ಯಾಪತುಃ' ಮತ್ತು 'ಆತ್ಮಾಂತರಾತ್ಮೇತಿ ಹರಿಃ' ಎಂಬ ಪ್ರಮಾಣದಿಂದ ಶ್ರೀಹರಿಯಲ್ಲಿ ದ್ವಿತ್ವವು ಸಿದ್ಧವಾಗುತ್ತದೆ. ಆದರೆ ಬಹುತ್ವವು ಸಿದ್ಧವಾಗುವುದಿಲ್ಲ ಎಂದಭಿಪ್ರಾಯ.

ನ್ಯಾಯವಿವರಣದ ಪ್ರಕಾರ ಮತ್ತೊಂದು ವ್ಯಾಖ್ಯಾನ

ಭಾವದೀಪಃ – 'परस्परविरोधश्च' इत्येतद्भाष्यदिशा एकस्यानेकत्वं विरुद्धमिति व्याख्यायेदानीं न्यायविवरणदिशा प्रकारान्तरेण व्याख्यातुमाह – यस्मिन्निति ।। तमेवेति वाक्यशेषबलेनेत्यर्थः ।।

'ಪರಸ್ಪರವಿರೋಧಶ್ಚ' ಎಂಬ ಭಾಷ್ಯದ ಮಾತಿನಂತೆ ಒಬ್ಬನೇ ಪರಮಾತ್ಮನಿಗೆ ಅನೇಕತ್ವವು ವಿರುದ್ಧವಾಗಿದೆ ಎಂದು ಇಲ್ಲಿಯ ತನಕ ವ್ಯಾಖ್ಯಾನ ಮಾಡಿದ್ದಾಯಿತು. ಈಗ ನ್ಯಾಯವಿವರಣದ ಪ್ರಕಾರ ಮತ್ತೊಂದು ಪ್ರಕಾರದಲ್ಲಿ 'ಯಸ್ಮಿನ್' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ. 'ತಮೇವ' ಎಂಬ ವಾಕ್ಯಶೇಷದ ಬಲದಿಂದ ಎಂದು ಇದರ ಅರ್ಥ.

ಆಧಾರನಾಗಿದ್ದಾನೆನ್ನಲು ಪ್ರಮಾಣ

ಭಾವದೀಪಃ – हरेरिति ।। ''एको दधार'' इत्यादिना हरेरेव सर्वाधारत्वादिति भावः ।। अत इति ।। बहुत्वादिविरोधादित्यर्थः ।।

''ಏಕೋ ದಧಾರ'' ಇತ್ಯಾದಿ ಪ್ರಮಾಣದ ಆಧಾರದಿಂದ ಶ್ರೀಹರಿಯೇ ಸಕಲಕ್ಕೂ ಆಧಾರನಾಗಿದ್ದಾನೆ ಎಂದು 'ಹರೇಃ' ಎಂಬ ವಾಕ್ಯದಿಂದ ತಿಳಿಸಿದ್ದಾರೆ. 'ಅತಃ' ಎಂಬ ಪದಕ್ಕೆ ಬಹುತ್ವದ ವಿರೋಧವಿರುವುದರಿಂದ ಎಂದರ್ಥ.

ಉತ್ಪ್ರೇಕ್ಷಿತತ್ವ ದೋಷವಿಲ್ಲ

ಭಾವದೀಪಃ – असूत्रितं विरोध इत्येतत्किमिति भाषितमित्यत आह – अपिपदेनेति ।। बुद्धिविभागेनेति भावः ।

ಬಹುತ್ವಸಂಖ್ಯೆಯನ್ನು ಪ್ರತಿಪಾದನೆ ಮಾಡಿದಾಗ ಯಾವ ವಿರೋಧವು ಇರುವುದಿಲ್ಲವೆಂದು ಹೇಳುತ್ತಿದ್ದೀರಿ. ಆದರೆ ಸೂತ್ರದಲ್ಲಿ ವಿರೋಧ ಎಂಬ ಪದವೇ ಕಾಣುಸುತ್ತಿಲ್ಲ. ಹೀಗಿರುವಾಗ ಈ ವ್ಯಾಖ್ಯಾನವು ಹೇಗೆ ಸಮಂಜಸವಾಗುತ್ತದೆ ? ಎಂಬ ಪ್ರಶ್ನೆಗೆ 'ಅಪಿಪದೇನ' ಎಂಬ ಟೀಕಾವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಸೂತ್ರದಲ್ಲಿ 'ನಾನಾಭಾವಾತ್' ಎಂಬ ಪದವನ್ನು ಬುದ್ಧಿಯಿಂದ ವಿಭಾಗ ಮಾಡಿಕೊಂಡು ಹಿಂದಿನ ಸೂತ್ರದಲ್ಲಿರುವ ವಿರೋಧಪದವನ್ನು ಆಕರ್ಷಣೆ ಮಾಡಬೇಕು. ಆವಾಗ 'ಉತ್ಪೊತ್ತಿತತ್ವ' ಎಂಬ ದೋಷವು ಬರುವುದಿಲ್ಲ.

ಬಹುತ್ವಸಂಖ್ಯೆ ಪರಮಾತ್ಮನಲ್ಲಿ ಯುಕ್ತವಾಗಿದೆ

ಭಾವದೀಪಃ – समन्वयपरत्वं स्फोरयन् शेषोक्त्या भाष्यं हेतुत्वेन व्याचष्टे – युक्तमिति ।।

ಬಹುತ್ವಸಂಖ್ಯೆಯೂ ಕೂಡ ಪರಮಾತ್ಮನಲ್ಲಿ ಸಮನ್ವಯವಾಗುತ್ತದೆ ಎಂಬುದನ್ನು ಸ್ಪಷ್ಟಪಡಿಸುತ್ತಾ ಭಾಷ್ಯದಲ್ಲಿರುವ ವಾಕ್ಯದಲ್ಲಿ ಶೇಷಪೂರಣ ಮಾಡಿಕೊಂಡು ವ್ಯಾಖ್ಯಾನ ಮಾಡಲು 'ಯುಕ್ತಮ್' ಇತ್ಯಾದಿ ವಾಕ್ಯವು ಹೊರಟಿದೆ.

'ನಾನಾಭಾವಾತ್ ನ ವಿರೋಧಃ' ಎಂಬ ಭಾಷ್ಯಕ್ಕೆ ವ್ಯಾಖ್ಯಾನ

ಭಾವದೀಪಃ – तस्यैव इत्येवकारसूचितमाह – स्वगतभेदशून्यस्यापीति ।। नानाभावान्न विरोध इत्यंशस्यार्थो नानेत्यादि ।

ಭಾಷ್ಯದಲ್ಲಿ 'ತಸ್ಯೈವ' ಎಂಬಲ್ಲಿರುವ ಏವಕಾರದಿಂದ ಸೂಚಿತವಾದ ಅರ್ಥವನ್ನು 'ಸ್ವಗತಭೇದಶೂನ್ಯಸ್ಯಾಪಿ' ಎಂಬುದರಿಂದ ವ್ಯಾಖ್ಯಾನ ಮಾಡಿದ್ದಾರೆ. 'ನಾನಾಭಾವಾತ್ ನ ವಿರೋಧಃ' ಎಂಬ ಭಾಷ್ಯದ ಮಾತಿಗೆ 'ನಾನಾ' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನ ಮಾಡಿದ್ದಾರೆ.

'ಆಕಾಶಾದಿಷು' ಎಂಬ ಭಾಷ್ಯಕ್ಕೆ ಸಾರ್ಥಕ್ಯ

ಭಾವದೀಪಃ – आकाशादिष्विति भाष्योक्तेरुपयोगाय मानाभावादिति प्रागुक्तशङ्कामनूद्योत्तरसूत्रतात्पर्यलब्धमाह – नच प्रतिशरीरमिति ।।

'ಆಕಾಶಾದಿಷು' ಎಂಬ ಭಾಷ್ಯದ ಮಾತಿಗೆ ಸಾರ್ಥಕ್ಯವನ್ನು ಹೇಳಲು 'ಮಾನಾಭಾವಾತ್' ಎಂಬುದಾಗಿ ಹಿಂದೆ ಮಾಡಿದ ಆಶಂಕೆಯನ್ನು ಅನುವಾದ ಮಾಡಿ ಮುಂದಿನ ಸೂತ್ರದಿಂದ ತಾತ್ಪರ್ಯತಃ ಲಬ್ಧವಾದ ಅರ್ಥವನ್ನು 'ನ ಚ ಪ್ರತಿಶರೀರಮ್' ಇತ್ಯಾದಿಯಾಗಿ ನಿರೂಪಣೆ ಮಾಡುತ್ತಿದ್ದಾರೆ.

'ನಚ ಯಸ್ಮಿನ್' ಇತ್ಯಾದಿ ಟೀಕೆಗೆ ಪೀಠಿಕೆ

भावदीपः – एतेन बहुरूपत्वादधिकरणाधेयत्वं तस्यैव युज्यत इत्यंशं विवृण्वानः तत्र हेत्वाकाङ्क्षायां तस्यैवातिरिक्तस्वरूपत्वाच्च इति भाष्योक्तं हेतुं योजयन्नुक्तशङ्कामनूद्य निराह – नच यस्मिन्निति ।।

ಹೀಗೆ ವ್ಯಾಖ್ಯಾನ ಮಾಡಿದ್ದರಿಂದ ಪರಮಾತ್ಮನಲ್ಲಿ ಅನೇಕ ರೂಪಗಳಿರುವುದರಿಂದ ಬಹುತ್ವಸಂಖ್ಯೆಯು ಯುಕ್ತವಾಗುತ್ತದೆ. ಆದ್ದರಿಂದಲೇ ಪರಸ್ಪರ ವಿರುದ್ಧವಾದ ಆಧೇಯತ್ವ-ಆಧಾರತ್ವಗಳೂ ಕೂಡ ಅವನಲ್ಲಿ ಯುಕ್ತವಾಗುತ್ತವೆ. ಇದನ್ನು ವಿವರಿಸುತ್ತಾ. ಈ ವಿಷಯದಲ್ಲಿ ಹುಟ್ಟುವ ಹೇತುವಿನ ಆಕಾಂಕ್ಷೆಗೆ 'ತಸ್ಯೈವ ಅತಿರಿಕ್ತಸ್ವರೂಪತ್ವಾಚ್ಚ' ಎಂಬ ಭಾಷ್ಯದಲ್ಲಿ ಹೇಳಿದ ಹೇತುವನ್ನು ಯೋಜನೆ ಮಾಡುತ್ತಾ ಹಿಂದಿನ ಆಶಂಕೆಯನ್ನು ಅನುವಾದ ಮಾಡಿ ನಿರಾಕರಿಸಲು 'ನಚ ಯಸ್ಮಿನ್' ಇತ್ಯಾದಿ ಟೀಕಾವಾಕ್ಯವು ಹೊರಟಿದೆ.

ನ್ಯಾಯವಿವರಣದ ವಾಕ್ಯಕ್ಕೂ ಸಂಗತಿ

भावदीपः – इदानीं न्यायविवरणं सङ्गमयति – शरीरेति ।। अत इति ।। बाधकभावादित्यर्थः ।।१२।।

ಪ್ರಕೃತ ನ್ಯಾಯವಿವರಣದ ವಾಕ್ಯಕ್ಕೂ ಸಂಗತಿಯನ್ನು ತೋರಿಸುತ್ತಾ 'ಶರೀರ' ಇತ್ಯಾದಿ ವಾಕ್ಯವು ಹೊರಟಿದೆ. 'ಅತಃ' ಎಂಬ ಪದಕ್ಕೆ ಬಾಧಕ ಇರುವುದರಿಂದ ಎಂದರ್ಥ.

ಬ್ರಹ್ಮಸೂತ್ರ

'ಪ್ರಾಣಾದಯೋ ವಾಕ್ಯಶೇಷಾತ್' ಎಂಬ ಸೂತ್ರದ ವ್ಯಾಖ್ಯಾನ

ब्रह्मसूत्रम् – ।। प्राणादयो वाक्यशेषात् ।।२।।

ಸೂತ್ರಾರ್ಥ - 'ಪ್ರಾಣಸ್ಯ ಪ್ರಾಣಂ' ಎಂಬ ಮುಂದಿನ ವಾಕ್ಯಶೇಷದಿಂದ, ಹಿಂದೆ ಹೇಳಿದ ಪಂಚ ಜನರು, ಪ್ರಾಣ, ಚಕ್ಷುಸ್ಸು, ಶ್ರೋತ್ರ, ಅನ್ನ ಮತ್ತು ಮನಸ್ಸು ಈ ಶಬ್ದಗಳಿಂದ ಭಗವಂತನ ರೂಪಗಳು ಪ್ರತಿಪಾದ್ಯವಾಗಿವೆ.

ಅರ್ಥ -- ಶ್ರುತಿಯಲ್ಲಿರುವ ಪಂಚ ಜನರೆಂದರೆ ಭಗವದ್ರೂಪಗಳೇ ಆಗಿವೆ. ಪ್ರಾಣಾದಯಃ = 'ಪ್ರಾಣಸ್ಯ ಪ್ರಾಣಂ' ಇತ್ಯಾದಿ ದ್ವಿತೀಯಾಂತ ಶಬ್ದಗಳಿಂದ ನಿರ್ದೇಶಿಸಲ್ಪಟ್ಟ, ಪ್ರಾಣ, ಚಕ್ಷುಃ, ಶ್ರೋತ್ರ, ಅನ್ನ, ಮನಃ ಈ ಶಬ್ದಗಳಿಂದ ಪ್ರತಿಪಾದ್ಯವಾದವು ವಿಷ್ಣುವೇ ಎಂದು ತಿಳಿಯಬೇಕು. ಏಕೆಂದರೆ, ವಾಕ್ಯಶೇಷಾತ್ = ವಿಷ್ಣುವನ್ನು ಬಿಟ್ಟು, ಬೇರೆಡೆ ಅಸಂಭಾವಿತವಾದ, 'ಪ್ರಾಣಪ್ರಾಣಪ್ರದತ್ವ' ಎಂಬ ಪ್ರವೃತ್ತಿನಿಮಿತ್ತವನ್ನು ಹೇಳುವ, 'ಪ್ರಾಣಸ್ಯ ಪ್ರಾಣಂ' ಎಂಬ ವಾಕ್ಯಶೇಷವಿರುವುದರಿಂದ.

ಬ್ರಹ್ಮಸೂತ್ರಭಾಷ್ಯ

ಭಗವಂತನ ಐದುರೂಪಗಳು ಪ್ರತಿಪಾದ್ಯ

ब्रह्मसूत्रभाष्यम् – पञ्च पञ्च जनानाह –

।। प्राणादयो वाक्यशेषात् ।।

ಅನುವಾದ - ಪಂಚ ಜನ ಶಬ್ದದಿಂದ ತಿಳಿದ ಐದು ರೂಪಗಳನ್ನು ಸೂತ್ರಕಾರರೇ ಸೂತ್ರದಲ್ಲಿ ಹೇಳುತ್ತಿದ್ದಾರೆ. 'ಪ್ರಾಣಾದಯೋ ವಾಕ್ಯಶೇಷಾತ್' ಪ್ರಾಣ, ಚಕ್ಷುಸ್ಸು, ಶ್ರೋತ್ರ, ಅನ್ನ, ಮನಸ್ಸು, ಈ ಶಬ್ದಗಳಿಂದ ಪ್ರತಿಪಾದ್ಯವಾದವು ಭಗವಂತನ ಐದು ರೂಪಗಳೇ ಆಗಿವೆ. ಏಕೆಂದರೆ 'ಪ್ರಾಣಸ್ಯ ಪ್ರಾಣಮ್' ಎಂಬ ವಾಕ್ಯಶೇಷವಿರುವುದರಿಂದ.

ಪ್ರತಿಪದಾರ್ಥ -- ವಿಷ್ಣುವಿನಲ್ಲಿ ಬಹುತ್ವಾದಿ ಸಂಖ್ಯೆಗಳು ಯುಕ್ತವಾಗುತ್ತವೆಂಬ ವಿಚಾರವು ಯುಕ್ತವಾಗುತ್ತಿತ್ತು. ಒಂದುವೇಳೆ

ಪಂಚ ಜನಾದಿ ಶಬ್ದವಾಚ್ಯತ್ವವು ವಿಷ್ಣುವಿನಲ್ಲಿ ಬರುತ್ತದೆ ಎಂದಾಗಿದ್ದಲ್ಲಿ, ಆದರೆ ಈ ವಿಷಯದಲ್ಲಿ ಯಾವುದೇ ವಿಶೇಷ ಕಾರಣಗಳಿರುವುದಿಲ್ಲ. 'ಸರ್ವೇ ವೇದಾಃ' ಇತ್ಯಾದಿ ಶ್ರುತ್ಯಂತರಗಳು ಸಕಲಶಬ್ದ ಸಾಧಾರಣವಾದ್ದರಿಂದ ವಿಶೇಷವಾದ ಪ್ರಮಾಣವಾಗುವುದಿಲ್ಲ. ಆದ್ದರಿಂದ ಬಹುತ್ವಾದಿಗಳು ವಿಷ್ಣುವಿನಲ್ಲಿ ಯುಕ್ತವಾಗುವುದಾದರೂ, ಪಂಚ ಜನಾದಿ ಶಬ್ದವಾಚ್ಯತ್ವವು ಅವನಲ್ಲಿ ಬರುವುದಿಲ್ಲವಲ್ಲವೇ? ಈ ಆಕ್ಷೇಪವನ್ನು ಪರಿಗಣಿಸಲು ಸೂತ್ರಕ್ಕೆ ಅವತಾರಿಕೆ ನೀಡುತ್ತಿದ್ದಾರೆ.–

ಪಂಚ ಪಂಚ ಜನಾನಾಹ = ಪಂಚ ಜನ ಶಬ್ದದಿಂದ ವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆಂದು ಹೇಳುತ್ತಿದ್ದಾರೆ.

ಪಂಚ ಜನರು-ಭಗವಂತನ ಐದುರೂಪಗಳು

ब्रह्मसूत्रभाष्यम् – 'प्राणस्य प्राणमुत चक्षुषश्चक्षुः श्रोत्रस्य श्रोत्रमन्नस्यान्नं मनसो मनः' (बृ.६-४-१७) इति वाक्यशेषात् ॥२॥

ಅನುವಾದ - ಮುಂದಿನ ವಾಕ್ಯವು ಐದು ಮಂದಿ ಭಗವಂತನ ಪ್ರಾಣಾದಿರೂಪಗಳೆನ್ನುತ್ತಿದೆ. ಪ್ರಾಣನಿಗೆ ಚೇಷ್ಟಾಪ್ರದನು, ಕಣ್ಣಿಗೆ ದರ್ಶನಶಕ್ತಿಪ್ರದನು, ಕಿವಿಗೆ ಶ್ರವಣಶಕ್ತಿಪ್ರದನು, ಅನ್ನಕ್ಕೆ ಅನ್ನತ್ವಪ್ರದನು, ಮನಸ್ಸಿಗೆ ಮನನಶಕ್ತಿಪ್ರದನು ಆಗಿದ್ದಾನೆ ಎಂದು ಯಾರು ತಿಳಿಯುತ್ತಾರೋ, ಅವರು ಬ್ರಹ್ಮನನ್ನೇ ಹೊಂದುತ್ತಾರೆ. ಈ ವಾಕ್ಯಶೇಷದಿಂದ ಪ್ರಾಣಾದಿಗಳು ಭಗವದ್ರೂಪಗಳೆಂದು ದೃಢವಾಗುತ್ತದೆ.

ಪ್ರತಿಪದಾರ್ಥ -- ಐದು ಮಂದಿಯು ಭಗವಂತನ ರೂಪಗಳೇ ಆಗಿವೆಯೆಂದು ಸಮರ್ಥಿಸುತ್ತಿದ್ದಾರೆ –

ಪ್ರಾಣಸ್ಯ = ಪ್ರಾಣನಿಗೆ, ಪ್ರಾಣಮ್ = ಚೇಷ್ಟಾಪ್ರದನು, ಉತ = ಮತ್ತು, ಚಕ್ಷುಷಃ = ಕಣ್ಣಿಗೆ, ಚಕ್ಷುಃ = ದರ್ಶನಶಕ್ತಿಪ್ರದನು, ಶ್ರೋತ್ರಸ್ಯ = ಕಿವಿಗೆ, ಶ್ರೋತ್ರಮ್ = ಶ್ರವಣಶಕ್ತಿಪ್ರದನು, ಅನ್ನಸ್ಯ = ಅನ್ನಕ್ಕೆ, ಅನ್ನಂ = ಅನ್ನತ್ವಪ್ರದನು, ಮನಸಃ = ಮನಸ್ಸಿಗೆ, ಮನಃ = ಮನನ ಶಕ್ತಿಪ್ರದನು ಆಗಿದ್ದಾನೆ. ಇತಿ = ಇಂತಹ, ವಾಕ್ಯಶೇಷಾತ್ = ವಾಕ್ಯಶೇಷದಿಂದ ಪ್ರಾಣಾದಿಗಳು ಭಗವದ್ರೂಪಗಳೆಂದು ದೃಢವಾಗುತ್ತದೆ.

ಸತ್ತರ್ಕದೀಪಾವಳಿ

ಲೀಲೆಗೋಸ್ಕರ ಸ್ವಾಧೇಯತ್ವ

सत्तर्कदीपावलिः – न हि भवगतोऽन्यस्य प्राणप्रणेतृत्वादिकं युज्यते । स्वाधेयत्वं तु लीलयेति भावः ।

ಆ ಪಂಚಜನರು ಯಾರು ? ಆ ಪಂಚ ಜನರನ್ನು ವಿಷ್ಣುವೆಂದು ಹೇಗೆ ನಿರ್ಣಯ ಮಾಡುತ್ತೀರಿ ? ಎಂಬ ಪ್ರಶ್ನೆಗೆ ಉತ್ತರವನ್ನು 'पंच जनाः' ಇತ್ಯಾದಿ ಭಾಷ್ಯದಿಂದ ಹೇಳುತ್ತಿದ್ದಾರೆ. ಭಗವಂತನಿಗಿಂತ ಬೇರೆ ಯಾರು ತಾನೆ ಪ್ರಾಣಪ್ರಣೇತೃಗಳಾಗಲು ಸಾಧ್ಯ ? ತನಗೆ ತಾನು ಆಧಾರನಾಗಿದ್ದಾನೆ ಎಂಬುದನ್ನು ಲೀಲೆಯಿಂದ ಕೂಡಿಸಬೇಕು.

सत्तर्कदीपावलिः – नन्वन्नाभावात् पञ्चेति निर्देशः काण्वानां कथमित्यत आह – ज्योतिषेत्यादिना ।

ಅನ್ನವೇ ಇಲ್ಲದ್ದರಿಂದ ಪಂಚ ಎಂಬ ವಿಶೇಷವನ್ನು ಕಾಣ್ವರು ಹೇಗೆ ಮಾಡುತ್ತಾರೆ? ಎಂಬ ಪ್ರಶ್ನೆಗೆ ಉತ್ತರವನ್ನು ನೀಡಲು 'ಜ್ಯೋತಿಷೈಕೇಷಾಮಸತ್ಯನ್ನೇ'ಎಂಬ ಸೂತ್ರವು ಹೊರಟಿದೆ.

॥ ಇಲ್ಲಿಗೆ ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ ಸತ್ತರ್ಕದೀಪಾವಳಿಯಲ್ಲಿ
ನ ಸಂಖ್ಯೋಪಸಂಗ್ರಹಾಧಿಕರಣದ ಕನ್ನಡಾನುವಾದವು ಸಮಾಪ್ತವಾಯಿತು ॥

ತತ್ವಪ್ರದೀಪ

ವಿಷ್ಣುವೇ 'ಪಂಚ ಜನಾ'

तत्वप्रदीपः – पञ्च पञ्चेति वीप्सा प्रतिशरीरं पृथक् पृथगवस्थितिसन्दर्शिका। जनानां जनयितृत्वाज्जनाः ।। प्राणादयो वाक्यशेषात् ।। प्राणादिस्थानि प्राणादिप्रेरकाणि प्राणादिनामकानि तद्रूपाणि पञ्च पञ्च जना इत्युच्यन्ते ।।

ಉಪನಿಷತ್ತಿನಲ್ಲಿ ಪಂಚ ಪಂಚ ಎಂಬ ವೀಪ್ಸಾಗ್ರಹಣವಿದೆ. ಇದರಿಂದ ಪ್ರತಿಯೊಬ್ಬರ ಶರೀರದಲ್ಲಿಯೂ ಭಗವಂತನು ಐದು ರೂಪಗಳಿಂದ ನೆಲೆಸಿರುತ್ತಾನೆ ಎಂದು ಹೇಳಿದಂತಾಗುತ್ತದೆ. ಎಲ್ಲದಕ್ಕೂ ಕಾರಣನಾದ್ದರಿಂದ ಮತ್ತು ನಿಯಾಮಕನಾದ್ದರಿಂದ ಪರಮಾತ್ಮನು 'ಜನಾ' ಎಂದು ಕರೆಸಿಕೊಳ್ಳುತ್ತಾನೆ.

'ಪ್ರಾಣಾದಯೋ ವಾಕ್ಯಶೇಷಾತ್'ಎಂಬ ಸೂತ್ರದ ಅರ್ಥ ಹೀಗಿದೆ - ಪ್ರಾಣ, ಚಕ್ಷು, ಶ್ರೋತ್ರ, ಅನ್ನ ಮತ್ತು ಮನಃ ಇವುಗಳಲ್ಲಿ ಪ್ರೇರಕನಾಗಿ ಇದೇ ಹೆಸರುಗಳಿಂದ ಭಗವಂತನ ರೂಪಗಳು ನೆಲೆಸಿವೆ. ಆದ್ದರಿಂದ ಆ ರೂಪಗಳಿಗೆ 'ಪಂಚ ಜನಾ' ಎಂದು ಕರೆಯಲಾಗುತ್ತದೆ.

ತತ್ವಪ್ರಕಾಶಿಕಾ

'ನಾಮಾನಿ ಸರ್ವಾಣಿ' ಎಂಬ ಶ್ರುತಿಯು ಸಾವಕಾಶವಲ್ಲವೇ?

ननु भवेदियं बहुत्वादिसम्भवविषया चिन्ता यदि पञ्चजनादीनां विष्णुत्वे भवेद् विशेषहेतुः; न चासावस्ति । श्रुत्यन्तराणां साधारणत्वात् ।

ಪಂಚ ಜನಾ ಮೊದಲಾದ ಸಂಖ್ಯಾವಾಚಕ ಶಬ್ದಗಳಿಂದ ಪರಮಾತ್ಮನೇ ಪ್ರತಿಪಾದ್ಯನಾಗಿದ್ದಾನೆಂದು ಒಪ್ಪಲು ವಿಶೇಷ ಕಾರಣಗಳಿದ್ದಲ್ಲಿ ಬಹುತ್ವಾದಿ ಧರ್ಮಗಳಿಗೆ ಆಶ್ರಯನಾಗಿದ್ದಾನೆಂದು ವಿಚಾರ ಮಾಡಬಹುದಿತ್ತು. ಆದರೆ ಇಂತಹ ಶಬ್ದಗಳಿಂದ ಪ್ರತಿಪಾದ್ಯನಾಗಿದ್ದಾನೆನ್ನಲು ಯಾವುದೇ ವಿಶೇಷಹೇತುಗಳಿರುವುದಿಲ್ಲ. 'ನಾಮಾನಿ ಸರ್ವಾಣಿ' ಇತ್ಯಾದಿ ಶ್ರುತಿಗಳು ಸಾಮಾನ್ಯವಾಗಿ ಸಕಲಶಬ್ದಗಳು ಪರಮಾತ್ಮನಲ್ಲಿ ಸಮನ್ವಯಗೊಳ್ಳುತ್ತವೆ ಎಂದಷ್ಟೇ ಹೇಳುತ್ತಿವೆ. ಆದ್ದರಿಂದ ಆ ಶ್ರುತಿಯು ಸಾವಕಾಶವಾಗಿದೆ.

ಶ್ರೀಹರಿಯಲ್ಲಿ ಬಹುತ್ವವಿದ್ದರೂ ಪಂಚ ಜನ ಎನಿಸಲಾರ

तत्वप्रकाशिका – अतो बहुत्वादिसम्भवेऽपि, न पञ्च जनादिशब्दवाच्यो हरिः, इत्याशङ्कां परिहरत्सूत्रमवतार्य व्याचष्टे – पञ्चेति ।।

ಆದ್ದರಿಂದ ಪರಮಾತ್ಮನಲ್ಲಿ ಬಹುತ್ವ ಎಂಬ ಧರ್ಮವು ಸಂಭವಿಸುವುದಾದರೂ ಪಂಚ ಜನಾ ಮೊದಲಾದ ಶಬ್ದಗಳಿಂದ ಶ್ರೀಹರಿಯು ಪ್ರತಿಪಾದ್ಯನಾಗಲಾರ. ಈ ಆಶಂಕೆಯನ್ನು ನಿರಾಕರಣೆ ಮಾಡಲು ಸೂತ್ರಕ್ಕೆ ಅವತಾರಿಕೆ ನೀಡಿ ವ್ಯಾಖ್ಯಾನ ಮಾಡುತ್ತಿದ್ದಾರೆ 'ಪಂಚ ಜನಾ' ಇತ್ಯಾದಿಯಾಗಿದೆ.

ಪಂಚ ಜನರ ಸ್ವರೂಪ

तत्वप्रकाशिका – पञ्च जनलिङ्गोक्त्योक्तशङ्कां परिहर्तुं पञ्च जनस्वरूपमाह सूत्रकार इति सम्बन्धभाष्यार्थः

ಪಂಚ ಜನರು ವಿಷ್ಣುವೇ ಆಗಿದ್ದಾರೆಂದು ನಿಶ್ಚಯಿಸಲು ಲಿಂಗವನ್ನು ಹೇಳಿದ್ದರಿಂದ ಹಿಂದಿನ ಆಕ್ಷೇಪವನ್ನು ಪರಿಹರಿಸಲು ಮೊದಲು ಸೂತ್ರಕಾರರು ಪಂಚ ಜನ ಸ್ವರೂಪವನ್ನು ಹೇಳುತ್ತಿದ್ದಾರೆ. ಇದು ಅವತಾರಿಕೆ ನೀಡುವ ಭಾಷ್ಯದ ಅಭಿಪ್ರಾಯ.

ಐದು ಜನರು ಪ್ರಾಣಾದಿಗಳು

तत्वप्रकाशिका – एते पञ्च जनाः तावत् प्राणादीनां प्राणत्वादिप्रदाः । 'प्राणस्य प्राणम्' इति वाक्यशेषात् । प्राणादीनां प्राणत्वादिप्रदत्वं भगवत एव सम्भवति ।

ಪ್ರಾಣ, ಚಕ್ಷುಸ್ಸು, ಶ್ರೋತ್ರ, ಜ್ಯೋತಿಸ್ಸು, ಮನಸ್ಸು ಈ ಪಂಚ ಜನರು ಪ್ರಾಣಾದಿಗಳಿಗೆ ಪ್ರಾಣತ್ವವನ್ನು ನೀಡುವವರು. ಏಕೆಂದರೆ 'ಪ್ರಾಣಸ್ಯ ಪ್ರಾಣಮ್' ಎಂಬುದಾಗಿ 'ಯಸ್ಮಿನ್ ಪಂಚ' ಎಂಬ ಶ್ರುತಿಯ ಮುಂದಿನ ವಾಕ್ಯವೇ ಹೇಳುತ್ತಿದೆ. ಪ್ರಾಣಾದಿಗಳಿಗೆಲ್ಲಾ ಪ್ರಾಣತ್ವವನ್ನು ನೀಡುವವನೆಂದರೆ ಭಗವಂತನೇ ಆಗಬೇಕು.

ಅವನಲ್ಲಿ ಐದುರೂಪಗಳಿಂದ ಶ್ರೀಹರಿಯೇ ನೆಲಸಿರುವನು

तत्वप्रकाशिका – 'यत् श्रोत्रस्य श्रोत्रं मनसो मनो यद्वाचो ह वाचं स उ प्राणस्य प्राणश्चक्षुषश्चक्षुः' इति श्रुतेः । अतो भगवल्लिङ्गसद्भावात् तस्यैव पञ्चजनत्वमिति भावः ॥ २ ॥

'ಯಚ್ಛ್ರೋತ್ರಸ್ಯ ಶ್ರೋತ್ರಂ ಮನಸೋ ಮನೋ ಯದ್ವಾಚೋ ಹ ವಾಚಂ ಸ ಉ ಪ್ರಾಣಸ್ಯ ಪ್ರಾಣಶ್ಚಕ್ಷುಷಶ್ಚಕ್ಷುಃ' 'ಯಾವ ಪರಮಾತ್ಮನು ಶ್ರೋತ್ರೇಂದ್ರಿಯಕ್ಕೆ ಶ್ರವಣಶಕ್ತಿಯನ್ನು ನೀಡುತ್ತಾನೋ, ಮನಸ್ಸಿಗೆ ಮನಶ್ಶಕ್ತಿಯನ್ನು ನೀಡುತ್ತಾನೋ' ಇತ್ಯಾದಿಯಾಗಿ ವಾಕ್ಯಶೇಷ ಶ್ರುತಿಯಿರುವುದರಿಂದ ಪಂಚ ಜನರಲ್ಲಿ ಪರಮಾತ್ಮನ ಅಸಾಧಾರಣ ಲಿಂಗವಿರುತ್ತದೆ. ಆದ್ದರಿಂದ ಪಂಚ ಜನ ಶಬ್ದದಿಂದ ಪರಮಾತ್ಮನೇ ಪ್ರತಿಪಾದ್ಯನಾಗುತ್ತಾನೆ.

ಭಾವದೀಪ

'ವಿಶೇಷ ಹೇತು' ಹೇಳುವುದಕ್ಕಾಗಿ ಈ ಸೂತ್ರ

भावदीपः – विशेषहेतुरित्युक्तविशेषपदकृत्यं व्यनक्ति – श्रुत्यन्तराणामिति।।

'ವಿಶೇಷಹೇತುಃ' ಎಂಬುದಾಗಿ ಟೀಕೆಯಲ್ಲಿ ಪಂಚ ಜನಾದಿ ಶಬ್ದಗಳು ವಿಷ್ಣುವನ್ನೇ ಪ್ರತಿಪಾದನೆ ಮಾಡಲು ವಿಶೇಷಹೇತು ಇರುವುದಿಲ್ಲ ಎಂದು ಹೇಳಲಾಯಿತು. ಹೇತುವಿಲ್ಲವೆಂದಷ್ಟೆ ಹೇಳಿದರೂ ಸಾಕಾಗಿತ್ತು. ವಿಶೇಷಪದವನ್ನೇಕೆ ಹೇಳಿದರು? ಎಂಬ ಪ್ರಶ್ನೆಗೆ 'ಶ್ರುತ್ಯಂತರಾಣಾಮ್' ಎಂಬ ಮುಂದಿನ ವಾಕ್ಯದಿಂದ ಉತ್ತರಿಸಿದ್ದಾರೆ.

'ಸರ್ವೇ ವೇದಾ' ಎಂಬ ಶ್ರುತಿಯನ್ನೂ ವಿವಕ್ಷಿಸಬೇಕು

भावदीपः – नामानि सर्वाणि, सर्वे वेदाः सर्वे घोषा इत्यादीनामित्यर्थः।। अत इति ।। विशेषहेत्वभावादित्यर्थः ।

ಶ್ರುತ್ಯಂತರವೆಂದರೆ 'ನಾಮಾನಿ ಸರ್ವಾಣಿ' ಮತ್ತು 'ಸರ್ವೇ ವೇದಾ ಸರ್ವೇ ಘೋಷಾಃ' ಇವೆ ಮೊದಲಾದ ಶ್ರುತಿಗಳು ಎಂದರ್ಥ. 'ಅತಃ' ಎಂಬ ಪದಕ್ಕೆ ವಿಶೇಷ ಕಾರಣವಿಲ್ಲದ್ದರಿಂದ ಎಂದರ್ಥ.

ಸೂತ್ರವು ಪಂಚ ಜನರ ಸ್ವರೂಪ ಹೇಳಲು ಹೇಗೆ ಸಾಧ್ಯ ?

भावदीपः – सूत्रस्य न्यायनिबन्धरूपत्वात् पञ्च जनस्वरूपोक्तिरयुक्तेत्यतो व्याचष्टे – पञ्च जनेति ।।

ಸೂತ್ರವು ನ್ಯಾಯನಿಬಂಧನ ರೂಪವಾಗಿರುವುದರಿಂದ ಕೇವಲ ಪಂಚ ಜನ ಸ್ವರೂಪವನ್ನು ಹೇಳುವುದು ಅಯುಕ್ತವಲ್ಲವೆ ? ಎಂಬ ಪ್ರಶ್ನೆಗೆ 'ಪಂಚ ಜನ' ಇತ್ಯಾದಿ ವಾಕ್ಯದಿಂದ ಉತ್ತರಿಸಿದ್ದಾರೆ.

ಷಷ್ಠೀವಿಭಕ್ತ್ಯಂತಪದದಿಂದ ಪಂಚ ಜನರನ್ನು ವಿವಕ್ಷಿಸಬಾರದು

भावदीपः – द्वितीयान्तप्राणादीनां शब्दोऽर्थतश्च प्राधान्यात् तेषामेव पञ्च जनशब्देन ग्रहणं न षष्ठीनिर्दिष्टानामिति भावेन पञ्च जनलिङ्गोक्त्येत्युक्तम् ।

ದ್ವಿತೀಯಾಂತವಾದ ಪ್ರಾಣಾದಿಶಬ್ದಗಳು ಶಬ್ದದಿಂದ ಹಾಗೂ ಅರ್ಥದಿಂದ ಪ್ರಧಾನವಾಗಿವೆ. ಅವುಗಳನ್ನೇ ಪಂಚ ಜನಶಬ್ದದಿಂದ ಸ್ವೀಕರಿಸಬೇಕು. ಷಷ್ಠೀವಿಭಕ್ತ್ಯಂತವಾದ ಪದದಿಂದ ನಿರ್ದಿಷ್ಟವಾದುದನ್ನು ಪಂಚ ಜನ ಶಬ್ದದಿಂದ ವಿವಕ್ಷಿಸಬಾರದು. ಇದನ್ನು ತಿಳಿಸಲು 'ಪಂಚ ಜನಲಿಂಗೋಕ್ತ್ಯಾ' ಎಂದು ಹೇಳಿರುತ್ತಾರೆ.

ಬೃಹದಾರಣ್ಯಕದ ವಾಕ್ಯಶೇಷವು ಗ್ರಾಹ್ಯ

भावदीपः – वाक्यशेषोक्त्या किं लिङ्गमुक्तमित्यतो व्यनक्ति – एत इति ।। इति श्रुतेरिति ।। तलवकारश्रुतेरित्यर्थः ।।२।।

ವಾಕ್ಯಶೇಷದ ಉಲ್ಲೇಖದಿಂದ ಲಿಂಗವನ್ನೇಕೆ ಉಲ್ಲೇಖಿಸಿದ್ದಾರೆ ಎಂಬ ಪ್ರಶ್ನೆಗೆ 'ಏತೇ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ.

'ಪ್ರಾಣಸ್ಯ ಪ್ರಾಣಮುತ ಚಕ್ಷುಷಶ್ಚಕ್ಷುರುತ ಶ್ರೋತ್ರಸ್ಯ ಶ್ರೋತ್ರಂ ಮನಸೋ ಮನೋ ಯೇ ವಿದುಸ್ತೇ ನಿಚಿಕ್ಯುರ್ಬ್ರಹ್ಮ ಪುರಾಣಮಗ್ರ್ಯಮ್' ಎಂಬುದು ಬೃಹದಾರಣ್ಯಕದ ವಾಕ್ಯಶೇಷ. 'ಇತಿ ಶ್ರುತೇಃ' ಎಂದರೆ ತಲವಕಾರಶ್ರುತಿ ಪ್ರಮಾಣವಾಗಿರುವುದರಿಂದ ಎಂದರ್ಥ.

ಬ್ರಹ್ಮಸೂತ್ರ

'ಜ್ಯೋತಿಷೈಕೇಷಾಮಸತ್ಯನ್ನೇ' ಎಂಬ ಸೂತ್ರದ ವ್ಯಾಖ್ಯಾನ

ಬ್ರಹ್ಮಸೂತ್ರಮ್ – ।। ಜ್ಯೋತಿಷೈಕೇಷಾಮಸತ್ಯನ್ನೇ ।। ೩ ।।

ಸೂತ್ರಾರ್ಥ - ಕಾಣ್ವಶಾಖೆಯ ವಾಕ್ಯದಲ್ಲಿ ಪ್ರಾಣಾದಿ ನಾಲ್ಕು ರೂಪಗಳನ್ನಷ್ಟೇ ಹೇಳಿ, 'ಅನ್ನ' ಎಂಬ ರೂಪವನ್ನು ಹೇಳದಿದ್ದರೂ 'ತದ್ದೇವಾ ಜ್ಯೋತಿಷಾಂ ಜ್ಯೋತಿಃ' ಎಂಬುದಾಗಿ ಹಿಂದೆ ಹೇಳಲ್ಪಟ್ಟಿರುವ ಜ್ಯೋತಿರೂಪವನ್ನು ಪರಿಗಣಿಸಿದಾಗ, ಐದು ರೂಪಗಳಾಗುತ್ತವೆ.

ಅರ್ಥ -- ಏಕೇಷಾಂ = ಕಾಣ್ವಾದಿ ಶಾಖೆಗಳಲ್ಲಿ ಅನ್ನೇ = ಅನ್ನ ಎಂಬ ಭಗವದ್ರೂಪವು, ಅಸತಿ = ಹೇಳದಿದ್ದರೂ ಕೂಡ, ಜ್ಯೋತಿಷಾ = ಹಿಂದಿನ ಮಂತ್ರದಲ್ಲಿರುವ ಹೇಳಿರುವ ಜ್ಯೋತಿಯನ್ನು ಅನ್ನದ ಸ್ಥಾನದಲ್ಲಿ ಸೇರಿಸಿಕೊಳ್ಳಬೇಕು. ಹೀಗೆ ಪಂಚತ್ವ ಸಂಖ್ಯೆಯ ಪೂರ್ತಿಯನ್ನು ತಿಳಿಯಬೇಕು.

॥ ಶ್ರೀವೇದವ್ಯಾಸದೇವರಿಂದ ರಚಿಸಲ್ಪಟ್ಟ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ
ನ ಸಂಖ್ಯೋಪಸಂಗ್ರಹಾಧಿಕರಣವು ಸಮಾಪ್ತವಾಯಿತು ॥

ಬ್ರಹ್ಮಸೂತ್ರಭಾಷ್ಯ

ಕಾಣ್ವಶಾಖೆಯಲ್ಲಿಯೂ ಕೂಡ ಭಗವಂತನ ಐದುರೂಪಗಳೇ ಹೇಳಲ್ಪಟ್ಟಿವೆ

ಬ್ರಹ್ಮಸೂತ್ರಭಾಷ್ಯಮ್ –

'ತದ್ ದೇವಾ ಜ್ಯೋತಿಷಾಂ ಜ್ಯೋತಿಃ' (ಬೃ. ೬-೪-೧೬) ಇತ್ಯನೇನ ಕಾಣ್ವಾನಾಂ ಪಞ್ಚಕತ್ವಮ್ ।।೩।।

।। ಇತಿ ಶ್ರೀಮದಾನನ್ದತೀರ್ಥಭಗವತ್ಪಾದಾಚಾರ್ಯವಿರಚಿತೇ
ಬ್ರಹ್ಮಸೂತ್ರಭಾಷ್ಯೇ ನ ಸङ್ಖ್ಯೋಪಸङ್ಗ್ರಹಾಧಿಕರಣಮ್ ।। ೩ ।।

ಅನುವಾದ - ಕಾಣ್ವಶಾಖೆಯ ವಾಕ್ಯಶೇಷದಲ್ಲಿ ನಾಲ್ಕೇ ರೂಪಗಳನ್ನು ಹೇಳಿದ್ದಾರೆ 'ತದ್ದೇವಾ ಜ್ಯೋತಿಷಾಂ ಜ್ಯೋತಿಃ' ಪ್ರಕಾಶಗಳಿಗೆ ಅಂತಃಪ್ರಕಾಶಕನಾಗಿರುವನು ಎಂದು ಹಿಂದೆ ಹೇಳಿದೆ. ಅದನ್ನು ಪರಿಗಣಿಸಿದಾಗ ಕಾಣ್ವಶಾಖೆಯಲ್ಲಿಯೂ ಐದು ರೂಪಗಳು ಹೇಳಿದಂತಾಗುತ್ತದೆ.

ಪ್ರತಿಪದಾರ್ಥ -- ಮಾಧ್ಯಂದಿನ ಶಾಖೆಯಲ್ಲಿ ಹೇಳಲ್ಪಟ್ಟ ಪ್ರಾಣಾದಿಗಳು ವಿಷ್ಣುವೇ ಆಗಿದ್ದರೂ, ಪಂಚ ಜನ ಶಬ್ದದಿಂದ ವಿಷ್ಣುವು ಪ್ರತಿಪಾದ್ಯನಾಗಲಾರ. ಏಕೆಂದರೆ ಕಾಣ್ವಶಾಖೆಯ ವಾಕ್ಯಶೇಷದಲ್ಲಿ ನಾಲ್ಕೇ ರೂಪಗಳನ್ನು ಹೇಳಲಾಗಿದೆ. ಈ ಆಶಂಕೆಯನ್ನು ಪರಿಹರಿಸಲು ಸೂತ್ರವನ್ನು ಪಠಿಸಿ, ವ್ಯಾಖ್ಯಾನ ಮಾಡುತ್ತಿದ್ದಾರೆ –

ತದ್ದೇವಾ ಜ್ಯೋತಿಷಾಂ ಜ್ಯೋತಿಃ = ಪ್ರಕಾಶಕಗಳಿಗೆ ಪ್ರಕಾಶಶಕ್ತಿ ಕೊಡುವವನು, ಇತ್ಯನೇನ = ಹೀಗೆ ಹೇಳಿದ್ದರಿಂದ, ಕಾಣ್ವಾನಾಂ = ಕಾಣ್ವಶಾಖೆಯಲ್ಲಿಯೂ, ಪಂಚಕತ್ವಂ = ಐದು ರೂಪಗಳು ಪ್ರತಿಪಾದ್ಯವಾಗುತ್ತವೆ. ಆದ್ದರಿಂದ ಎರಡೂ ಶಾಖೆಗಳಿಗೆ ಪರಸ್ಪರ ವಿರೋಧ ಬರುವುದಿಲ್ಲ.

॥ ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ವಿರಚಿತವಾದ ಬ್ರಹ್ಮಸೂತ್ರಭಾಷ್ಯದ ಕನ್ನಡಾನುವಾದದಲ್ಲಿ ನ ಸಂಖ್ಯೋಪಸಂಗ್ರಹಾಧಿಕರಣವು ಸಮಾಪ್ತವಾಯಿತು ॥

ತತ್ತ್ವಪ್ರದೀಪ

ಅನ್ನದ ಬದಲು ಜ್ಯೋತಿ

तत्वप्रदीपः – ज्योतिषैकेषामसत्यन्न ॥ ज्योतिषां भासकेन तत् शब्दवाच्येन काण्वानां शाखिनां पञ्चत्वपूर्तिः । तत्रान्नाभावात् ॥

इति पञ्चजनाधिकरणम्

'ಜ್ಯೋತಿಷ್ಯೇಕೇಷಾಮಸತ್ಯನ್ನೇ' ಎಂಬ ಸೂತ್ರದ ವ್ಯಾಖ್ಯಾನ ಹೀಗಿದೆ - 'ಜ್ಯೋತಿಷಾಂ ಜ್ಯೋತಿಃ' ಎಂಬಲ್ಲಿ ಹೇಳಿರುವ ಜ್ಯೋತಿರೂಪವನ್ನು ಪರಿಗಣಿಸಿದಾಗ ಒಟ್ಟು ಐದು ರೂಪಗಳಾಗುತ್ತವೆ. ಕಾಣ್ವಶಾಖೆಯವರು ಸಕಲ ಜ್ಯೋತಿಗಳನ್ನೂ ಬೆಳಗಿಸುವನಾದ್ದರಿಂದ ಪರಮಾತ್ಮನನ್ನು 'ಜ್ಯೋತಿ' ಎಂದು ಉಪಾಸನೆ ಮಾಡುತ್ತಾರೆ. ಆದ್ದರಿಂದ ಅನ್ನದ ಸ್ಥಾನದಲ್ಲಿ ಜ್ಯೋತಿಯನ್ನು ಪರಿಗಣಿಸಬೇಕು.

ವಿವರಣೆ - ಮಾಧ್ಯಂದಿನ ಶಾಖೆಯಲ್ಲಿ ಪಂಚತತ್ವಗಳ ಉಲ್ಲೇಖವಿದೆ. ಆದರೆ ಕಾಣ್ವಶಾಖೆಯಲ್ಲಿ ಅನ್ನವನ್ನು ಬಿಟ್ಟು ನಾಕರ ಉಲ್ಲೇಖ ಮಾತ್ರವಿದೆ. ಆದರೆ ಹಿಂದೆ ಹೇಳಿರುವ ಜ್ಯೋತಿಯನ್ನು ಅನ್ನದ ಸ್ಥಾನದಲ್ಲಿ ಪರಿಗಣಿಸಿದಾಗ ಜ್ಯೋತಿ ಮತ್ತು ಅನ್ನಗಳಿಗೆ ಒಂದೇ ಅರ್ಥವನ್ನು ವಿವಕ್ಷಿಸಿ, ವಿರೋಧವನ್ನು ಪರಿಹರಿಸಬೇಕು. ಆಗ ಕೆಲವು ಅಧಿಕಾರಿಗಳಿಗೆ ಜ್ಯೋತಿರಾದಿ ಪಂಚರೂಪಗಳ ಉಪಾಸನೆ, ಇನ್ನೂ ಕೆಲವರಿಗೆ ಅನ್ನಾದಿ ಪಂಚರೂಪಗಳ ಉಪಾಸನೆ ಎಂಬರ್ಥವನ್ನು ಹೇಳಿದಂತಾಗುತ್ತದೆ.

॥ ಇಲ್ಲಿಗೆ ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ ತತ್ವಪ್ರದೀಪದಲ್ಲಿ
ನ ಸಂಖ್ಯೋಪಸಂಗ್ರಹಾಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

ತತ್ವಪ್ರಕಾಶಿಕಾ

ವಿಷ್ಣು ಪಂಚ ಜನ ಎನಿಸಲಾರ ಎನ್ನಲು ಅಧಿಕಾಕ್ಷೇಪ

ननु वाक्यशेषोक्तानां प्राणादीनां विष्णुत्वेऽपि, न पञ्च जनानां विष्णुत्वम्, वाक्यशेषे चतुर्णामेवोक्तत्वेन, तस्य पूर्ववाक्यतो भिन्नार्थत्वात् इत्याशङ्कां परिहरत्सूत्रं पठित्वा व्याचष्टे – ज्योतिषेति ॥

ಹಿಂದಿನ ಸೂತ್ರದಲ್ಲಿ ಉದಾಹರಿಸಿದ 'ಯಸ್ಮಿನ್ ಪಂಚ' ಎಂಬ ವಾಕ್ಯಶೇಷದಲ್ಲಿ ಹೇಳಲ್ಪಟ್ಟ ಪ್ರಾಣಾದಿಗಳು ವಿಷ್ಣುವೇ ಆಗಿದ್ದಾನೆಂದು ನಿಶ್ಚಯವಾದರೂ ಕೂಡ ಪಂಚ ಜನ ಶಬ್ದದಿಂದ ವಿಷ್ಣುವು ಪ್ರತಿಪಾದ್ಯನಾಗಲಾರನು, ಪ್ರಾಣ, ಚಕ್ಷುಸ್ಸು, ಶ್ರೋತ್ರ, ಮನಸ್ಸು ಈ ನಾಲ್ಕು

ಪದಾರ್ಥಗಳು ಮಾತ್ರ ಹೇಳಲ್ಪಟ್ಟಿವೆ. ಆದ್ದರಿಂದ ಈ ವಾಕ್ಯವು 'ಯಸ್ಮಿನ್ ಪಂಚ' ಎಂಬ ಹಿಂದಿನ ವಾಕ್ಯದಿಂದ ಭಿನ್ನಾರ್ಥಕವಾಗಿದೆ. ಈ ಆಕ್ಷೇಪವನ್ನು ಪರಿಹರಿಸಲು ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ 'ಜ್ಯೋತಿಷಾ' ಇತ್ಯಾದಿಯಾಗಿ.

ಮಾಧ್ಯಂದಿನಶಾಖೆಯು ಐದುರೂಪಗಳನ್ನು ಹೇಳಿದೆ

तत्वप्रकाशिका – न वाक्यशेषे चतुर्णामेवोक्तिः । माध्यन्दिनशाखायां पञ्चजनानामप्युक्तेः । काण्वानां शाखायामन्नस्यान्नत्वप्रदातृरूपे तत्रैवाऽकथिते सत्यपि 'यस्मादर्वाक् संवत्सरोऽहोभिः परिवर्तते, तद्देवा ज्योतिषां ज्योतिरायुर्होपासतेऽमृतम्' इति किञ्चिद्दूरोक्तेन ज्योतिषां ज्योतिषा पञ्चत्वसम्भवात् ।

ವಾಕ್ಯಶೇಷದಲ್ಲಿ ಕೇವಲ ನಾಲ್ಕು ಭಗವದ್ರೂಪಗಳಷ್ಟೇ ಉಕ್ತವಾಗಿವೆ ಎಂದು ಹೇಳಬಾರದು. ಏಕೆಂದರೆ ಮಾಧ್ಯಂದಿನ ಶಾಖೆಯಲ್ಲಿ ಐದು ಬಗೆಯ ಭಗವದ್ರೂಪಗಳು ಹೇಳಲ್ಪಟ್ಟಿವೆ. ಕಾಣ್ವಶಾಖೆಯಲ್ಲಿ ಅನ್ನಕ್ಕೆ ಅನ್ನತ್ವವನ್ನು ಕೊಡುವಂತಹ ಭಗವದ್ರೂಪವು ಹೇಳಲ್ಪಟ್ಟಿಲ್ಲ. ಆದರೂ 'ಯಸ್ಮಾದರ್ವಾಕ್ ಸಂವತ್ಸರೋ೨ಹೋಭಿಃ ಪರಿವರ್ತತೇ ತದ್ದೇವಾ ಜ್ಯೋತಿಷಾಂ ಜ್ಯೋತಿರಾಯು-ರ್ಹೋಪಾಸತೇ೨ಮೃತಮ್' ದಿವಸಗಳಿಂದ ಕೂಡಿರುವಂತಹ ಸಂವತ್ಸರವು ಯಾವ ಆದಿತ್ಯನಿಂದ ಪರಿವರ್ತಿತವಾಗುತ್ತದೋ, ಇಂತಹ ಆದಿತ್ಯಾದಿ ಜ್ಯೋತಿಗಳಿಗೂ ಜ್ಯೋತಿಷ್ಟ್ವವನ್ನು ಕೊಡುವಂತಹ ಆಯುಸ್ಸನ್ನು ನೀಡುವ ನಿತ್ಯಮುಕ್ತನಾದ ಪರಮಾತ್ಮನನ್ನು ದೇವತೆಗಳು ಸದಾ ಉಪಾಸನೆ ಮಾಡುತ್ತಾರೆ ಎಂಬ ವಾಕ್ಯವನ್ನು ಸ್ವಲ್ಪ ದೂರದಲ್ಲಿ ಹೇಳಲಾಗಿದೆ. ಜ್ಯೋತಿಗಳಿಗೆ ಜ್ಯೋತಿಷ್ಟ್ವವನ್ನು ನೀಡುವಂತಹ ಈ ಭಗವದ್ರೂಪವನ್ನು ವಿವಕ್ಷಿಸಿದಾಗ ಐದು ರೂಪಗಳನ್ನು ಹೇಳಿದಂತಾಗುತ್ತದೆ.

ವಾಕ್ಯಶೇಷದ ಬಲವೇ ಇಲ್ಲಿ ಮುಖ್ಯ

तत्वप्रकाशिका – अतो वाक्यशेषस्य भिन्नार्थत्वाभावात् तद्बलेन युक्तं पञ्चजनानां विष्णुत्वमिति भावः।

ಆದ್ದರಿಂದ ಭಿನ್ನಾರ್ಥಕವಾಗದ ಕಾರಣ ಈ ವಾಕ್ಯಶೇಷದ ಬಲದಿಂದ ಪಂಚ ಜನ ಶಬ್ದದಿಂದ ಮಹಾವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆಂದು ತಿಳಿಯಬೇಕು.

ಅನ್ನ ಎಂಬ ಭಗವದ್ರೂಪವನ್ನು ಸೇರಿಸಬೇಕು

तत्वप्रकाशिका – अत्र ज्योतिरन्नशब्दयोरेकार्थत्वं पृथक् पञ्चकं वेत्युपपन्नम्। अतो बहुत्वसंख्याविशिष्टवाचिशब्दवाच्यो हरिरेवेति सिद्धम् ।।

।। इति श्रीमज्जयतीर्थभिक्षुविरचितायां तत्वप्रकाशिकायाम्
न सङ्ख्योपसङ्ग्राधिकरणम् ।।

ಮಾಧ್ಯಂದಿನ ಶಾಖೆಯಲ್ಲಿ ಹೇಳಿದ 'ಅನ್ನ' ಮತ್ತು ಕಾಣ್ವಶಾಖೆಯಲ್ಲಿ ಹೇಳಿದ 'ಜ್ಯೋತಿ' ಇವೆರಡೂ ಏಕರೂಪವೇ ಆಗಿರುತ್ತವೆಂದು ತಿಳಿಯಬೇಕು. ಕಾಣ್ವಶಾಖೆಯ ಪ್ರಕಾರ 'ಜ್ಯೋತಿಸ್' ಎಂಬ ಭಗವದ್ರೂಪವನ್ನು ಸೇರಿಸಿಕೊಳ್ಳಬೇಕು. ಮಾಧ್ಯಂದಿನ ಶಾಖೆಯ ಪ್ರಕಾರ 'ಅನ್ನ' ಎಂಬ ಭಗವದ್ರೂಪವನ್ನು ಸೇರಿಸಿಕೊಳ್ಳಬೇಕು. ಆವಾಗ ಪಂಚರೂಪತ್ವವು ಯುಕ್ತವಾಗುತ್ತದೆ.

ಹೀಗೆ ಸಾಧಕ ಪ್ರಮಾಣವಿರುವುದರಿಂದ ಬಾಧಕವಿಲ್ಲದ್ದರಿಂದ ಬಹುತ್ವಸಂಖ್ಯಾವಿಶಿಷ್ಟವಾದ ಪದಾರ್ಥವನ್ನು ಹೇಳುವಂತಹ ಪಂಚ ಜನಾದಿ ಶಬ್ದಗಳಿಂದ ಶ್ರೀಹರಿಯೇ ಪ್ರತಿಪಾದ್ಯ-ನಾಗಿದ್ದಾನೆಂದು ಸಿದ್ಧವಾಯಿತು.

।। ಇಲ್ಲಿಗೆ ಶ್ರೀಮಜ್ಜಯತೀರ್ಥಮುನಿಗಳಿಂದ ವಿರಚಿತವಾದ ತತ್ವಪ್ರಕಾಶಿಕಾಟೀಕೆಯಲ್ಲಿ
ನ ಸಂಖ್ಯೋಪಸಂಗ್ರಹಾಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ।।

ಭಾವದೀಪ

ಟೀಕೆಗೂ ಭಾಷ್ಯಕ್ಕೂ ಹೇಗೆ ಸಂಗತಿ ?

चतुर्णामेवेति ।। भाष्ये वाक्यशेषे पञ्चानामप्युक्तिर्माध्यन्दिनशाखाशयेन । नत्तु वाजसनेयवाक्यशेषाभिप्रायेणेति भावः ।

ಟೀಕೆಯಲ್ಲಿ 'ಚತುರ್ಣಾಮೇವ' ಎಂಬ ಪದದಿಂದ ವಾಕ್ಯಶೇಷದಲ್ಲಿ ನಾಲ್ಕು ಭಗವದ್‌ರೂಪಗಳು ಉಕ್ತವಾಗಿವೆ ಎಂದು ಹೇಳಿರುತ್ತಾರೆ. ಆದರೆ ಭಾಷ್ಯದಲ್ಲಿ ಐದು ಭಗವದ್‌ರೂಪಗಳನ್ನು ಉಲ್ಲೇಖಿಸಿದ್ದಾರೆ. ಇದು ಹೇಗೆ ? ಎಂಬ ಪ್ರಶ್ನೆಗೆ ಉತ್ತರವನ್ನು ಹೀಗೆ ತಿಳಿಯಬೇಕು - ಮಾಧ್ಯಂದಿನ ಶಾಖೆಯಲ್ಲಿ ಭಗವಂತನ ಐದು ರೂಪಗಳನ್ನು ಹೇಳಲಾಗಿದೆ. ಅದನ್ನು ವಿವಕ್ಷಿಸಿ ಭಾಷ್ಯದಲ್ಲಿ ಐದು ರೂಪಗಳನ್ನು ಉಲ್ಲೇಖಿಸಿದ್ದಾರೆ. ಆದರೆ ವಾಜಸನೇಯ ಶ್ರುತಿಯ ವಾಕ್ಯಶೇಷದಲ್ಲಿ ನಾಲ್ಕು ಭಗವದ್ ರೂಪಗಳನ್ನು ಉಲ್ಲೇಖಿಸಲಾಗಿದೆ. ಈ ವಿವಕ್ಷೆಯಿಂದ ಭಾಷ್ಯದ ಮಾತು ಹೊರಟಿಲ್ಲ ಎಂದು ತಿಳಿಯಬೇಕು.

ಮಾಧ್ಯಂದಿನ ಶಾಖೆ ಹಾಗೂ ಕಾಣ್ವಶಾಖೆಗಳಲ್ಲಿ ಹೇಳಿದ ರೂಪವು ಬೇರೆ ಬೇರೆಯಲ್ಲವೇ?

भावदीपः – पूर्ववाक्यतः यस्मिन् पञ्च पञ्चजना इति वाक्यतः । नन्तु अन्नेन कचित् पञ्चकं कचिज्ज्योतिषा सह । तथाच विरोध इत्यत आह – अत्रेति ।। एकार्थत्वम् एकरूपवाचित्वमित्यर्थः ।।

'ಪೂರ್ವವಾಕ್ಯತಃ' ಎಂಬ ಪದಕ್ಕೆ 'ಯಸ್ಮಿನ್ ಪಂಚ ಪಂಚ ಜನಾಃ' ಎಂಬ ಹಿಂದಿನ ವಾಕ್ಯದಿಂದ ಎಂದರ್ಥ.

ಮಾಧ್ಯಂದಿನ ಶಾಖೆಯಲ್ಲಿ ಅನ್ನವೆಂಬ ಐದನೆಯ ರೂಪವನ್ನು ಹೇಳಲಾಗಿದೆ. ಕಾಣ್ವಶಾಖೆಯಲ್ಲಿ 'ಜ್ಯೋತಿ' ಎಂಬ ಐದನೆಯ ರೂಪವನ್ನು ಹೇಳಲಾಗಿದೆ. ಆದ್ದರಿಂದ ವಿರೋಧ ಬರುತ್ತದಲ್ಲವೆ ? ಎಂಬ ಪ್ರಶ್ನೆಗೆ 'ಅತ್ರ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. 'ಏಕಾರ್ಥತ್ವಮ್' ಎಂಬ ಪದಕ್ಕೆ ಒಂದೇ ರೂಪವನ್ನು ಪ್ರತಿಪಾದನೆ ಮಾಡುತ್ತದೆ ಎಂದರ್ಥ.

ಉಪಾಸನಾಧಿಕಾರಿಗಳು ಮಾತ್ರ ಬೇರೆ

ಭಾವದೀಪಃ – ಪೃಥಗಿತಿ ।। ರೂಪಭೇದೇऽಪಿ ಅಧಿಕಾರಿಭೇದಾತ್ ಅನ್ನಾಖ್ಯರೂಪೇಣ ಸಹ ಭಗವದ್ರೂಪಪಞ್ಚಕಂ ಮಾಧ್ಯನ್ದಿನಾದಿಭಿರುಪಾಸ್ಯಮ್ । ಜ್ಯೋತಿರಾಖ್ಯರೂಪೇಣ ಸಹ ರೂಪಪಞ್ಚಕಂ ಕಾಣ್ವಾದಿಭಿರುಪಾಸ್ಯಮಿತಿ ವರ್ಗದ್ವಯಮವಿರುದ್ಧಮಿತ್ಯರ್ಥಃ ।।

ಟೀಕೆಯಲ್ಲಿ 'ಪೃಥಕ್' ಎಂಬ ಪದದ ಅರ್ಥ ಹೀಗಿದೆ - 'ಅನ್ನ' ಹಾಗೂ 'ಜ್ಯೋತಿ' ಎಂಬ ರೂಪಗಳಿಗೆ ಭೇದವಿದ್ದರೂ ಅಧಿಕಾರಿಗಳಲ್ಲಿ ಭೇದವಿರುವುದರಿಂದ ಅನ್ನವೆಂಬ ರೂಪದ ಜೊತೆ ಐದು ಭಗವದ್ ರೂಪಗಳನ್ನು ಮಾಧ್ಯಂದಿನ ಶಾಖೆಗಳು ಉಪಾಸನೆ ಮಾಡಬೇಕು. 'ಜ್ಯೋತಿ' ಎಂಬ ಭಗವದ್ ರೂಪದ ಜೊತೆಗೆ ಐದು ರೂಪಗಳ ಉಪಾಸನೆಯನ್ನು ಕಾಣ್ವಶಾಖಿಗಳು ಮಾಡಬೇಕು. ಹೀಗೆ ಎರಡು ಬಗೆಯ ಉಪಾಸಕರ ವಿವಕ್ಷೆಯಿಂದ ವಿರೋಧವನ್ನು ಪರಿಹರಿಸಬೇಕು.

ಪರಮಮುಖ್ಯವೃತ್ತಿಯಿಂದ ಶ್ರೀಹರಿಯೇ ಪಂಚಜನಾ

ಭಾವದೀಪಃ – ಅತ ಇತಿ ।। ಸಾಧಕಭಾವಾತ್ ಬಾಧಕಾಭಾವಾಚ್ಚ ಇತ್ಯರ್ಥಃ ।। ಹರಿರೇವೇತಿ ।। ಪರಮಮುಖ್ಯವೃತ್ತ್ಯೇತಿ ಯೋಜ್ಯಮ್ । ಮುಖ್ಯವೃತ್ತ್ಯಾऽನ್ಯದಪಿ ವಾಚ್ಯಮ್ । ಕಲ್ಪನೋಪದೇಶಾದಿತಿ ನ್ಯಾಯಾದಿತಿ ಧ್ಯೇಯಮ್ ।।

।। ಇತಿ ಶ್ರೀರಾಘವೇನ್ದ್ರಯತಿಕೃತೇ ಭಾವದೀಪೇ ನ ಸಙ್ಖ್ಯೋಪಸಙ್ಗ್ರಹಾಧಿಕರಣಮ್ ।।

'ಅತಃ' ಎಂಬ ಪದಕ್ಕೆ ಸಾಧಕ ಪ್ರಮಾಣವಿರುವುದರಿಂದ ಬಾಧಕಪ್ರಮಾಣವಿಲ್ಲದಿರುವುದರಿಂದ ಎಂದರ್ಥ. 'ಹರಿರೇವ' ಎಂಬಲ್ಲಿ 'ಪರಮಮುಖ್ಯವೃತ್ತ್ಯಾ' ಎಂಬುದನ್ನು ಯೋಜನೆ ಮಾಡಿಕೊಳ್ಳಬೇಕು. ಆವಾಗ ಪಂಚ ಜನಾದಿ ಶಬ್ದಗಳಿಂದ ಶ್ರೀಹರಿಯೇ ಪರಮಮುಖ್ಯವೃತ್ತಿಯಿಂದ ಪ್ರತಿಪಾದ್ಯನಾಗುತ್ತಾನೆಂದು ಸಿದ್ಧವಾಗುತ್ತದೆ. ಮುಖ್ಯವೃತ್ತಿಯಿಂದ ಉಳಿದ ಪದಾರ್ಥಗಳೂ ಕೂಡ ಪ್ರತಿಪಾದ್ಯವಾಗುತ್ತವೆಂಬುದನ್ನು 'ಕಲ್ಪನೋಪದೇಶಾತ್' ಎಂಬ ಸೂತ್ರ ನ್ಯಾಯದಿಂದ ಸ್ಪಷ್ಟಮಾಡಿಕೊಳ್ಳಬೇಕು.

॥ ಇಲ್ಲಿಗೆ ಶ್ರೀಮದ್‌ರಾಘವೇಂದ್ರತೀರ್ಥರಿಂದ ವಿರಚಿತವಾದ ಭಾವದೀಪದ
ನ ಸಂಖ್ಯೋಪಸಂಗ್ರಹಾಧಿಕರಣದ ಕನ್ನಡ ಅನುವಾದವು ಮುಗಿಯಿತು ॥

॥ ಶ್ರೀ ಮಧ್ವೇಶಾರ್ಪಣಮಸ್ತು ॥

।। श्रीजानकीवदनाम्भोजराजहंसाय रामचन्द्राय नमः ।।

।। श्री गुरुभ्यो नमः ।।

श्री राघवेन्द्रतीर्थविरचिता

तन्त्रदीपिका

नसङ्ख्योपसंग्रहाधिकरणम् (१।४।३)

पञ्चजनाधिकरणम् - ३

ಬಹುತ್ವವಾಚಕ ಶಬ್ದಗಳ ಸಮನ್ವಯಕ್ಕಾಗಿ ಈ ಅಧಿಕರಣ

।। न सङ्ख्योपसंग्रहादपि नानाभावादतिरेकाच्च ।। १-४-१२ ।।

अत्र बहुत्ववाचिशब्दाः समन्वीयन्ते । अपिर्विभागेन विरोधपदाकर्षणार्थः। आधाराधेयभावसमुच्चयार्थो वा । पञ्च जना इति योग्यतयाऽन्वेति । तत्त्वित्यस्ति । ''यस्मिन् पञ्च पञ्च जना'' इत्युक्तपञ्चपञ्चेति विशेषणयुक्ता जनाः तत्तु ब्रह्मैव परममुख्यवृत्त्या । न प्राणःचक्षुश्रोत्रमनांसि । कुतः ? तदधीनत्वज्ञेयवावचनादि-विशोषाद्युक्तहेतुभ्यः । अग्रेतनहेतोश्चेति भावः । एवं तर्हि पञ्चेत्युक्तवहुत्सङ्ख्यादिविरोध इत्यतः सूत्रम् - सङ्ख्योपसङ्ग्रहादपि । पञ्चेति बहुत्वसङ्ख्योपसङ्ग्रहात् यस्मिन्ब्रह्मणीत्युक्ताधाराधेयभावादपि न विरोधः । कुतः ? नानाभावात्। नानानशब्दो भिन्नवाची । नानारूपाणां भावात् सत्त्वादतिरेकाच्च भेदाच्च जना इत्युक्तरूपापेक्षया यस्मिन्नित्युक्तशरीरस्थ रूपस्यातिरिक्तत्वाच्चेति द्वयोः क्रमेण निरासः। प्रागुक्तहेतुभिरेहापि

ब्रह्मत्वसिद्धेः बाधकमात्रमुद्ध–तम् । एवमग्रेऽपि । अत्र भेदो विशेषो बोध्यः। अत्राविरोधपक्षमनुवर्त्य नेत्यवक्तुं शक्यत्वेऽपि तदुक्तिः सङ्ख्योपसङ्ग्रहादपि ''प्राणस्य प्राणम्'' इत्यादिषष्ठीनिर्दिष्टप्राणादयो न पञ्चजना नानाभावात् तेषां प्रतिशरीरं नानात्वेन पञ्चत्वायोगात् । न ह्येकस्मिन् देहे एक एव प्राणादिरित्यादिवृत्त्यन्तरं चन्द्रिकोक्तदिशा ज्ञापयितुं सङ्ख्योपसङ्ग्रहादपि यो विरोधः स नेत्यन्वयलाभाय चेति ।।

ಈ ಅಧಿಕರಣದಲ್ಲಿ ಬಹುತ್ವವಾಚಕವಾದ ಶಬ್ದಗಳನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡಲಾಗಿದೆ. ಸೂತ್ರದಲ್ಲಿರುವ 'ಅಪಿ' ಎಂಬ ಪದವು ಹಿಂದಿನ ಸೂತ್ರದ 'ಅವಿರೋಧ' ಎಂಬ ಪದವನ್ನು ವಿರೋಧ ಎಂಬುದಾಗಿ ಪದವಿಭಾಗ ಮಾಡಿ, ಅನ್ವಯಮಾಡಿಕೊಳ್ಳಲು ಇರುತ್ತದೆ. ಅಥವಾ ಆಧಾರಾಧೇಯಭಾವವನ್ನು ಸಮುಚ್ಚಯ ಮಾಡಲೂ ಕೂಡ ಸಾರ್ಥಕವಾಗಿದೆ. 'ಪಂಚ ಜನಾಃ' ಎಂಬ ಪದವು ಅನ್ವಯಕ್ಕೆ ಯೋಗ್ಯವಾದ್ದರಿಂದ ಅನ್ವಿತವಾಗಿದೆ. 'ತತ್ತು' ಎಂಬ ಎರಡು ಪದಗಳು ಇಲ್ಲಿಯೂ ಅನುವೃತ್ತವಾಗಿವೆ.

'ಯಸ್ಮಿನ್ ಪಂಚ ಪಂಚ ಜನಾಃ' ಎಂಬ ಶ್ರುತಿಯಲ್ಲಿ ಪಂಚ ಪಂಚ ಎಂಬ ವಿಶೇಷಣಯುಕ್ತವಾದ ಜನಶಬ್ದವು 'ತತ್ತು' ಬ್ರಹ್ಮನನ್ನೇ ಪರಮಮುಖ್ಯವೃತ್ತಿಯಿಂದ ಪ್ರತಿಪಾದನೆ ಮಾಡುತ್ತದೆ. ಹೊರತು, ಪ್ರಾಣ, ಚಕ್ಷುಸ್ಸು, ಶ್ರೋತ್ರ, ಮನಸ್ಸು ಇವುಗಳನ್ನು ಪ್ರತಿಪಾದನೆ ಮಾಡುವುದಿಲ್ಲ. ಏಕೆಂದರೆ ತದಧೀನತ್ವ, ಜ್ಞೇಯತ್ವಾವಚನ ಮೊದಲಾದ ಹೇತುಗಳಿರುವುದರಿಂದ, ಅಷ್ಟೇ ಅಲ್ಲದೇ ಮುಂದೆ ಹೇಳುವ ಹೇತುವಿನಿಂದಲೂ ಬ್ರಹ್ಮನೇ ವಾಚ್ಯನಾಗುತ್ತಾನೆ ಎಂದಭಿಪ್ರಾಯ.

ಹಾಗಾದರೆ 'ಪಂಚ' ಎಂಬಲ್ಲಿ ಹೇಳಿರುವ ಬಹುತ್ವಸಂಖ್ಯೆಯಿಂದ ವಿರೋಧ ಬರುತ್ತದಲ್ಲವೇ? ಎಂಬ ಪ್ರಶ್ನೆಗೆ ಉತ್ತರಿಸಲು ಸೂತ್ರವು ಹೊರಟಿದೆ.

ಸೂತ್ರಾರ್ಥ - ಸಂಖ್ಯೋಪಸಂಗ್ರಹಾದಪಿ = 'ಪಂಚ' ಎಂಬ ಬಹುತ್ವ ಸಂಖ್ಯೆಯಿಂದ ಸಂಗ್ರಹ ಮಾಡಿರವುದರಿಂದಲೂ 'ನ ವಿರೋಧಃ' = ಆಯಾ ಶಬ್ದಗಳ ವಾಚ್ಯತ್ವ ಬರುವುದಿಲ್ಲವೆಂಬ ವಿರೋಧಕ್ಕೆ ಅವಕಾಶವಿಲ್ಲ. 'ಯಸ್ಮಿನ್ ಬ್ರಹ್ಮಣಿ' ಎಂಬಲ್ಲಿ ಹೇಳಲ್ಪಟ್ಟ ಆಧಾರಾಧೇಯಭಾವದಿಂದಲೂ ವಿರೋಧ ಇರುವುದಿಲ್ಲ. ಏಕೆಂದರೆ ನಾನಾಭಾವಾತ್ = ನಾನಾ ಶಬ್ದಕ್ಕೆ ಭಿನ್ನ ಎಂಬರ್ಥ, ಹಾಗೂ ನಾನಾ ರೂಪಗಳಿರುವುದರಿಂದ, ಅತಿರೇಕಾಚ್ಚ = ಎಲ್ಲಾ ಪದಾರ್ಥಗಳಿಂದ

ಭೇದವಿರುವುದರಿಂದ, ಜನಾ = 'ಯಸ್ಮಿನ್ ಪಂಚ ಪಂಚ ಜನಾಃ' ಎಂಬಲ್ಲಿ 'ಪಂಚ ಜನಾ' ಶಬ್ದದಿಂದ ಮಹಾವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆ. 'ಪಂಚ ಜನಾಃ' ಎಂಬಲ್ಲಿ ಪ್ರತಿಪಾದಿತವಾದ ಭಗವದ್ರೂಪಕ್ಕಿಂತ 'ಯಸ್ಮಿನ್' ಎಂಬ ಪದದಿಂದ ಪ್ರತಿಪಾದ್ಯವಾದ ಭಗವದ್ರೂಪವು ಅತಿರಿಕ್ತವೇ ಆಗಿದೆ. ಆದರಿಂದಲೂ ಆಧಾರಾಧೇಯಭಾವದ ವಿರೋಧ ಬರುವುದಿಲ್ಲ. ಬಹುತ್ವಸಂಖ್ಯೆಯಾಗಲೀ, ಆಧಾರಾಧೇಯಭಾವವಾಗಲೀ ಒಬ್ಬನೇ ಬ್ರಹ್ಮನಲ್ಲಿ ಬರುವುದಿಲ್ಲ ಎಂಬ ಆಕ್ಷೇಪವು ನಿರಾಕೃತವಾಯಿತು. ಹಿಂದೆ ಹೇಳಿದ ಹೇತುಗಳಿಂದಲೇ ಬ್ರಹತ್ತ್ವವೂ ಕೂಡ ಸಿದ್ಧವಾಗುವುದರಿಂದ ಸೂತ್ರದಲ್ಲಿ ಬ್ರಹತ್ತ್ವಕ್ಕೆ ಸಾಧಕವಾದ ಬಾಧಕವನ್ನಷ್ಟೇ ಪರಿಹರಿಸಲಾಗಿದೆ. ಮುಂದೆಯೂ ಕೂಡ ಇದರಂತೆ ತಿಳಿಯಬೇಕು. 'ಭೇದ' ಶಬ್ದಕ್ಕೆ ವಿಶೇಷ ಎಂದರ್ಥ.

ಹಿಂದಿನ ಸೂತ್ರದಿಂದ ಅವಿರೋಧ ಎಂಬ ಪದವನ್ನು ಅನುವೃತ್ತಿ ಮಾಡಿಕೊಂಡಾಗ ಪುನಃ 'ನ' ಎಂಬುದನ್ನು ಹೇಳುವ ಅವಶ್ಯಕತೆಯಿರುವುದಿಲ್ಲ. ಆದರೂ ಸಂಖ್ಯೆಯನ್ನು ಸಂಗ್ರಹ ಮಾಡಿರುವ ಕಾರಣದಿಂದ 'ಪ್ರಾಣಸ್ಯ ಪ್ರಾಣಮ್' ಇತ್ಯಾದಿ ಶ್ರುತಿಯಲ್ಲಿ ಷಷ್ಠೀ ವಿಭಕ್ತ್ಯಂತವಾದ ಪ್ರಾಣಾದಿ ಶಬ್ದಗಳಿಂದ ಪಂಚ ಜನರು ನಿರ್ದೇಶಿಸಿಲ್ಲ. ಏಕೆಂದರೆ 'ನಾನಾಭಾವಾತ್' ಪ್ರಾಣಾದಿಗಳು ಪ್ರತಿಶರೀರದಲ್ಲಿಯೂ ಭಿನ್ನರಾಗಿರುವುದರಿಂದ ಅವರಲ್ಲಿ ಐದು ಎಂಬ ಸಂಖ್ಯೆಯು ಯುಕ್ತವಾಗುವುದಿಲ್ಲ. ಒಂದು ದೇಹದಲ್ಲಿ ಒಬ್ಬನೇ ಪ್ರಾಣ ಎಂದು ಹೇಳಲು ಸಾಧ್ಯವಿಲ್ಲವಷ್ಟೇ. ಹೀಗೆ ಬೇರೆ ವ್ಯಾಖ್ಯಾನವನ್ನು ತಾತ್ಪರ್ಯಚಂದ್ರಿಕೆಯಲ್ಲಿ ಮಾಡಿರುತ್ತಾರೆ. ಅದನ್ನು ಸೂಚಿಸಲು ಮತ್ತು ಸಂಖ್ಯೆಯ ಉಪಸಂಗ್ರಹದಿಂದ ಯಾವ ವಿರೋಧವು ಬರುತ್ತದೋ, ಅದೂ ಕೂಡ ಇರುವುದಿಲ್ಲ ಎಂಬ ಅನ್ವಯವನ್ನು ತಿಳಿಸಲು 'ನ' ಎಂಬ ಪದವನ್ನು ಸೂತ್ರದಲ್ಲಿ ಸೇರಿಸಿದ್ದಾರೆ.

ಭಗವಂತನೇ ಐದು ರೂಪಗಳಾಗಿದ್ದಾನೆನ್ನಲು ಕಾರಣ

के ते पञ्चत्वाश्रयरूपविशेषाः, कुतश्च हेतुविशेषात्ते ब्रह्मेत्यत आह -

।। प्राणादयो वाक्यशेषात् ।। १-४-१३ ।।

पञ्च जना इत्यस्ति । ''प्राणस्य प्राणमुत चक्षुषश्चक्षुः'' इत्यादिद्वितीयान्तनिर्दिष्टप्राणचक्षुःश्रोत्रान्नमनःशब्दिताः पञ्च जनाः ''प्राणस्य प्राणम्'' इत्यादिवाक्यशेषादित्यर्थः । अत्र प्राणप्राणदत्वादिलिङ्गात् पञ्च

जना ब्रह्मरूपविशेषा इत्युक्तं भवति । तेन पञ्च जनस्वरूपोक्तिः व्यर्थेति न शङ्क्यम् । उत्तरार्थत्वाच्च । न ह्येतदनुक्तौ ज्योतिषेत्याद्युक्तिर्युक्ता ।।

ಭಗವಂತನ ಐದು ರೂಪಗಳು ಎಂದರೆ ಯಾವುವು ? ಆ ಐದು ರೂಪಗಳೂ ಕೂಡ ಭಗವಂತನೇ ಆಗಿದ್ದಾನೆನ್ನಲು ಏನು ಕಾರಣ? ಎಂಬ ಪ್ರಶ್ನೆಗೆ ಉತ್ತರಿಸಲು ಮುಂದಿನ ಸೂತ್ರ ಹೊರಟಿದೆ -

ಪ್ರಾಣಾದಯೋ ವಾಕ್ಯಶೇಷಾತ್

ಪಂಚ ಜನಾ ಎಂಬ ಪದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ಪ್ರಾಣಾದಯಃ = 'ಪ್ರಾಣಸ್ಯ ಪ್ರಾಣಮುತ ಚಕ್ಷುಷಶ್ಚಕ್ಷುಃ' ಇತ್ಯಾದಿಯಾದ ದ್ವಿತೀಯಾವಿಭಕ್ಯಂತವಾದ ಪದಗಳಿಂದ ನಿರ್ದೇಶಿಸಲ್ಪಟ್ಟ, ಪ್ರಾಣ, ಚಕ್ಷುಸ್ಸು, ಶ್ರೋತ್ರ, ಅನ್ನ ಮತ್ತು ಮನಸ್ಸು ಈ ಶಬ್ದಗಳಿಂದ ಯಾರು ಪ್ರತಿಪಾದ್ಯರೋ, ಅವರೇ ಪಂಚ ಜನ ಶಬ್ದದಿಂದ ಪ್ರತಿಪಾದ್ಯರಾಗಿದ್ದಾರೆ. ವಾಕ್ಯಶೇಷಾತ್ = 'ಪ್ರಾಣಸ್ಯ ಪ್ರಾಣಮ್' ಎಂಬುದಾಗಿ ಮುಂದೆ ವಾಕ್ಯಶೇಷವಿರುವುದರಿಂದ. ಇಷ್ಟು ಸೂತ್ರಾರ್ಥ.

ಪ್ರಾಣನಿಗೂ ಕೂಡ ಪ್ರಾಣತ್ವವನ್ನು ನೀಡುವ ಲಿಂಗದಿಂದ ಪಂಚ ಜನರು ಬ್ರಹ್ಮನ ರೂಪವಿಶೇಷವೇ ಆಗಿವೆಯೆಂದು ಹೇಳಿದಂತಾಯಿತು. ಇದರಿಂದ ಪಂಚ ಜನರ ಸ್ವರೂಪವನ್ನು ಇಲ್ಲಿ ಹೇಳಿರುವುದು ವ್ಯರ್ಥವೆಂಬ ಆಶಂಕೆಗೆ ಅವಕಾಶವಿರುವುದಿಲ್ಲ. ಮತ್ತು ಮುಂದಿನ ಸೂತ್ರಕ್ಕೋಸ್ಕರ ಈ ಸೂತ್ರದಲ್ಲಿ ಪಂಚ ಜನರ ಸ್ವರೂಪವನ್ನು ಹೇಳಲೇ ಬೇಕು. ಇಲ್ಲದಿದ್ದರೆ ಮುಂದಿನ ಸೂತ್ರವು ಅಯುಕ್ತವಾಗುತ್ತಿತ್ತು. ಅಂದರೆ ಮುಂದಿನ ಸೂತ್ರದಲ್ಲಿ ಪಂಚ ಜನರು ಬ್ರಹ್ಮನ ರೂಪವಿಶೇಷವೆಂದು ಹೇಳಲು ಸಾಧ್ಯವಿಲ್ಲವೆಂಬ ಆಕ್ಷೇಪವನ್ನು ಪರಿಹರಿಸಲಾಗಿದೆ. ಪ್ರಕೃತ ಈ ಸೂತ್ರದಲ್ಲಿ ಪ್ರಾಣಾದಿಗಳೇ ಪಂಚ ಜನರು ಎಂದು ಹೇಳಿದರೆ ಈ ಆಕ್ಷೇಪ ಸಮಾಧಾನಗಳೇ ಅಯುಕ್ತವಾಗುತ್ತದೆ.

ಕಾಣ್ವಶಾಖೆಯಲ್ಲಿ ಅನ್ನ ಎಂಬ ರೂಪವೇ ಇಲ್ಲವಲ್ಲ ?

वाजसनेये वाक्यशेषे पञ्चजना न श्रूयन्त इत्यत आह -

।। ज्योतिषैकेषामसत्यन्ने ।। १-४-१४ ।।

एकेषां काण्वानां शाखायामन्ने अन्नाख्यरूपे असत्यपि जयोतिषां

ज्योतिरिति प्रागुक्तजयोतिषा पञ्चत्वं बोध्यमित्यर्थः । ज्योतिषेत्येक-वचनोक्त्या न षष्ठ्यन्तज्योतिरादेः पञ्चजनत्वमिति सूचितम् । द्वयोरेकार्थत्वं वा अधिकारिभेदात् पञ्चकद्वयं वेति भावः ॥ ३ ॥

ಬೃಹದಾರಣ್ಯಕದ ವಾಕ್ಯಶೇಷದಲ್ಲಿ ಪಂಚ ಜನರು ಕೇಳಿಸುತ್ತಿದೆಯಲ್ಲವೇ? ಎಂಬ ಆಶಂಕೆಗೆ ಉತ್ತರಿಸಲು. ಮುಂದಿನ ಸೂತ್ರ ಹೊರಟಿದೆ.

ಜ್ಯೋತಿಷೈಕೇಷಾಮಸತ್ಯನ್ನೇ

ಸೂತ್ರಾರ್ಥ - ಏಕೇಷಾಂ = ಕಾಣ್ವಶಾಖೆಯಲ್ಲಿ, ಅನ್ನೇ = ಅನ್ನವೆಂಬ ರೂಪವು, ಅಸತ್ಯಪಿ = ಇಲ್ಲದಿದ್ದರೂ, ಜೋತಿಷಾಂ = 'ಜ್ಯೋತಿಷಾಂ ಜ್ಯೋತಿಃ' ಎಂದು ಹಿಂದೆ ಹೇಳಿದ ಜ್ಯೋತಿ ಎಂಬ ರೂಪದಿಂದ ಐದು ರೂಪಗಳನ್ನು ತಿಳಿಯಬೇಕು.

ಸೂತ್ರದಲ್ಲಿ 'ಜ್ಯೋತಿಷಾ' ಎಂಬ ಏಕವಚನ ಪ್ರಯೋಗವಿರುವುದರಿಂದ ಷಷ್ಠೀವಿಭಕ್ತ್ಯಂತವಾದ ಜ್ಯೋತಿರಾದಿಶಬ್ದಗಳು ಪಂಚ ಜನರಲ್ಲ ಎಂದು ಸೂಚಿಸಿದಂತಾಯಿತು. ಏಕೆಂದರೆ 'ಜ್ಯೋತಿಷಾಮ್' ಎಂಬ ಷಷ್ಠ್ಯಂತ ಪದವು ಬಹುವಚನದಲ್ಲಿದೆ. ಸೂತ್ರದಲ್ಲಿ 'ಜ್ಯೋತಿಷಾ' ಎಂಬ ಏಕವಚನ ಪ್ರಯೋಗವಿರುವುದರಿಂದ ಬಹುವಚನಾಂತವಾದ 'ಜ್ಯೋತಿಷ್' ಶಬ್ದವಾಚ್ಯನು ಪಂಚ ಜನರಲ್ಲಿ ಸೇರುವುದಿಲ್ಲವೆಂದು ತಿಳಿಯುತ್ತದೆ.

'ಜ್ಯೋತಿಷ್' ಶಬ್ದ ಹಾಗೂ ಅನ್ನ ಶಬ್ದಗಳಿಗೆ ಒಂದೇ ಅರ್ಥವಿರುವುದರಿಂದ ಬೇರೆ ಶಾಖೆಯಲ್ಲಿ ಅನ್ನ ಎಂಬ ರೂಪವನ್ನು ಹೇಳಿದ್ದರೂ ಪಂಚತ್ವ ಸಂಖ್ಯೆಗೆ ಪೂರಕವಾದ ರೂಪವಿಶೇಷವಿಲ್ಲವೆಂಬ ಆಕ್ಷೇಪಕ್ಕೆ ಅವಕಾಶವಿರುವುದಿಲ್ಲ. ಆದ್ದರಿಂದ ವಿಭಿನ್ನರೂಪಗಳಿಂದ ಬೇರೆ ಶಾಖೆಯಿಂದ ವಿರೋಧ ಬರುತ್ತದೆಂದು ಆಕ್ಷೇಪಿಸಬಾರದು.

ಶ್ರೀರಾಘವೇಂದ್ರತೀರ್ಥಶ್ರೀಪಾದಂಗಳವರಿಂದ ರಚಿತವಾದ

ತಂತ್ರದೀಪಿಕಾದ ಕನ್ನಡಾನುವಾದದಲ್ಲಿ ನ ಸಂಖ್ಯೋಪಸಂಗ್ರಹಾಧಿಕರಣವು ಸಮಾಪ್ತವಾಯಿತು.

ಅದ್ವೈತ-ವಿಶಿಷ್ಟಾದ್ವೈತಮತದಲ್ಲಿನ ಸಂಖ್ಯೋಪಸಂಗ್ರಹಾಧಿಕರಣ
ಮತ್ತು
ವಿಮರ್ಶೆ

ಆದ್ವೈತಿಗಳ ಅಧಿಕರಣ ಶರೀರ ಹೀಗಿದೆ - 'ಯಸ್ಮಿನ್ ಪಂಚ ಪಂಚ ಜನಾ ಆಕಾಶಶ್ಚ ಪ್ರತಿಷ್ಠಿತಃ' ಎಂಬುದೇ ಅಧಿಕರಣದ ವಿಷಯವಾಕ್ಯ. ಈ ವಾಕ್ಯದಲ್ಲಿ ಸಮಾಸ ಹೊಂದಿರುವ ಪಂಚ ಜನ ಶಬ್ದದಿಂದ ಐದು ತತ್ವಗಳ ಸಮಾಹಾರವನ್ನು ಹೇಳಲಾಗಿದೆ. ಈ ಪಂಚ ಜನಶಬ್ದಕ್ಕೆ ಸಮಾಸ ಹೊಂದದೇ ಪ್ರತ್ಯೇಕವಾಗಿರುವ ಪಂಚ ಎಂಬ ಶಬ್ದದಿಂದ ಯಾವ ಪಂಚತ್ವ ಸಂಖ್ಯೆಯು ತಿಳಿಯುತ್ತಿದೆಯೋ, ಅದರಲ್ಲಿ ಅನ್ವಯವನ್ನು ಮಾಡಬೇಕು. ಆವಾಗ ಐದು ತತ್ವಗಳ ಐದರ ಗುಂಪು ಎಂಬರ್ಥವು ದೊರೆಯುತ್ತದೆ. ಇಪ್ಪತ್ತೈದು ತತ್ವಗಳನ್ನು ಈ ವಾಕ್ಯವು ಪ್ರತಿಪಾದನೆ ಮಾಡುತ್ತಿದೆಯೆಂದು ಹೇಳಿದಂತಾಗುತ್ತದೆ.

ಯಾವರೀತಿಯಾಗಿ 'ಪಂಚಪಂಚಪೂಲ್ಯಃ' ಎಂದು ಹೇಳಿದಾಗ ಇಪ್ಪತ್ತೈದು ಹಣ್ಣುಗಳು ಎಂಬರ್ಥವು ದೊರೆಯುತ್ತದೋ, ಅದರಂತೆ ಇಲ್ಲಿಯೂ ಕೂಡ 'ಪಂಚ ಪಂಚ ಜನಾಃ' ಎಂಬುದರಿಂದ ಇಪ್ಪತ್ತೈದು ತತ್ವಗಳು ಎಂಬರ್ಥವು ದೊರೆಯುತ್ತದೆ. ಹಾಗಾದರೆ 'ದ್ವಿಗೋಃ' ಎಂಬ ಸೂತ್ರದಿಂದ ಙ್ೀಪ್ ಪ್ರತ್ಯಯವು ಬಂದು ಪಂಚಜನೀ ಎಂಬ ಸ್ತ್ರೀಲಿಂಗ ಪ್ರಯೋಗವನ್ನು ಮಾಡಬೇಕಲ್ಲವೇ? ಎಂದು ಪ್ರಶ್ನಿಸಬಾರದು. 'ಪಂಚ ಜನಾಃ' ಎಂಬ ಪುಲ್ಲಿಂಗ ನಿರ್ದೇಶವು ಛಾಂದಸವಾದ್ದರಿಂದ ಸಾಧುವಾಗುತ್ತದೆ.

ಆದ್ದರಿಂದ ಇಪ್ಪತ್ತೈದು ತತ್ವಗಳನ್ನು ಶ್ರುತಿಯು ಪ್ರತಿಪಾದನೆ ಮಾಡುತ್ತಿದೆ. ಸಾಂಖ್ಯಸ್ಮೃತಿಯಲ್ಲಿ ಸಿದ್ಧವಾದ ಪ್ರಧಾನಾದಿಗಳಿಗೆ ಶ್ರುತಿಪ್ರಮಾಣಸಿದ್ಧತ್ವವನ್ನು ಸಮರ್ಥನೆ ಮಾಡಿದಂತಾಯಿತು. ಇಷ್ಟು ಪೂರ್ವಪಕ್ಷ.

ಸಿದ್ಧಾಂತ ಹೀಗಿದೆ - ಶ್ರುತಿಸಿದ್ಧವಾದ ಸಂಖ್ಯೆಯಿಂದ ಸ್ಮೃತಿಸಿದ್ಧವಾದ ಪ್ರಧಾನಾದಿಗಳಿಗೆ ಶ್ರುತಿಸಿದ್ಧತ್ವವನ್ನು ಸಮರ್ಥಿಸುವುದು ಅಯುಕ್ತವಾಗಿದೆ.

ಏಕೆಂದರೆ ನಾನಾಭಾವಾತ್ = ಈ ಪಂಚವಿಂಶತಿ ತತ್ವಗಳು ವಿವಿಧವಾಗಿವೆ. ಇವುಗಳಲ್ಲಿ 'ನಾನಾಭಾವಾತ್' ಎಂಬ ಸೂತ್ರದ ಭಾಗಕ್ಕೆ ಹೀಗೆ ಅರ್ಥ - ಪಂಚವಿಂಶತಿ ತತ್ವಗಳು

ವಿಭಿನ್ನವಾಗಿವೆ. ಏಕೆಂದರೆ ಐದೈದು ತತ್ವಗಳಲ್ಲಿ ಯಾವುದೇ ಸಾಧಾರಣ ಧರ್ಮಗಳು ಕಾಣಿಸುತ್ತಿಲ್ಲ. ಹಾಗೇನಾದರೂ ಸಾಧಾರಣಧರ್ಮಗಳಿದ್ದಲ್ಲಿ ಇಪ್ಪತ್ತೈದು ತತ್ವಗಳ ನಡುವೆ ಐದೈದರ ಐದು ಗುಂಪುಗಳನ್ನು ಮಾಡಬಹುದಿತ್ತು. ಯಾವುದೇ ಸಂಗ್ರಾಹಕ ಧರ್ಮಗಳಿಲ್ಲದೇ ವಿವಿಧವಾದ ಪದಾರ್ಥಗಳಲ್ಲಿ ದ್ವಿತ್ವಾದಿ ಸಂಖ್ಯೆಗಳನ್ನು ನಿರ್ವಾಹ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಇಪ್ಪತ್ತೈದು ತತ್ವಗಳಲ್ಲಿ ಸಂಗ್ರಾಹಕ- ಧರ್ಮವಿಲ್ಲದೇ ಐದೈದರ ಗುಂಪನ್ನು ರಚನೆ ಮಾಡಲು ಬರುವುದಿಲ್ಲ.

'ಅತಿರೇಕಾಚ್ಚ' ಎಂಬ ಸೂತ್ರದ ಭಾಗಕ್ಕೆ ಹೀಗೆ ಅರ್ಥ - 'ಆತ್ಮ' ಹಾಗೂ 'ಆಕಾಶ' ಎಂಬೆರಡು ತತ್ವಗಳನ್ನು ಇಪ್ಪತ್ತೈದು ತತ್ವಕ್ಕಿಂತಲೂ ಅತಿರಿಕ್ತವಾಗಿ ಉಲ್ಲೇಖಿಸಲಾಗಿದೆ. ಆದರೂ ಕೂಡ ಆತ್ಮನನ್ನು ಇಪ್ಪತ್ತೈದು ತತ್ವದಲ್ಲೇ ಸೇರಿಸುವುದಾದರೆ, 'ಯಸ್ಮಿನ್' ಎಂಬ ಪದದಿಂದ ಹೇಳಲ್ಪಟ್ಟ ಆತ್ಮನೇ ಎಲ್ಲ ತತ್ವಗಳಿಗೆ ಅಧಿಕರಣನಾಗಿದ್ದಾನೆಂಬ ಮಾತಿನ ವಿರೋಧ ಪ್ರಾಪ್ತವಾಗುತ್ತದೆ. ಮತ್ತು 'ಆಕಾಶಶ್ಚ ಪ್ರತಿಷ್ಠಿತಃ' ಎಂಬಲ್ಲಿ ಆಕಾಶವನ್ನು ಪ್ರತ್ಯೇಕವಾಗಿ ಪರಿಗಣಿಸಿದ್ದೂ ಕೂಡ ತಪ್ಪಾಗುತ್ತದೆ. ಆದ್ದರಿಂದ ಈ ಶ್ರುತಿಯು ಸಾಂಖ್ಯರ ತತ್ವಗಳನ್ನು ಪ್ರತಿಪಾದನೆ ಮಾಡಲು ಹೊರಟಿರುವುದಿಲ್ಲ. ಇಷ್ಟು ಅದ್ವೈತಿಗಳ ಸಿದ್ಧಾಂತ.

ಇವರ ಈ ಅಧಿಕರಣ ಶರೀರ ಅಸಾಧುವಾಗಿದೆ.

ಪಂಚವಿಂಶತಿತತ್ತ್ವಾನಿ ಶ್ರುತಿಸ್ಮೃತಿಸಮಾಜತಃ ।
ಪ್ರಮಿತಾನ್ಯಪಲಪ್ಯಂತೇ ಕಥಂ ವೈದಿಕಮಾನಿನಾ ॥೧॥

ಇಪ್ಪತ್ತೈದು ತತ್ವಗಳು ಶ್ರುತಿ ಹಾಗೂ ಸ್ಮೃತಿಗಳೆಂಬ ಸಮಾಜದಿಂದ ಪ್ರಮಿತವಾಗಿರುವಾಗ ವೈದಿಕತತ್ವಗಳಿಗೆ ಮಾನ್ಯತೆಯನ್ನು ನೀಡುವ ನೀನು ಹೇಗೆ ತಾನೇ ಅಪಲಾಪ ಮಾಡುವಿ?

'ಯಸ್ಮಿನ್ ಪಂಚ ಪಂಚ ಜನಾಃ' ಎಂಬ ಶ್ರುತಿಯು ಇಪ್ಪತ್ತೈದು ತತ್ವಗಳನ್ನು ಪ್ರತಿಪಾದನೆ ಮಾಡುತ್ತಿಲ್ಲವೆಂದು ಹೇಳುತ್ತಿರುವ ನಿನ್ನ ಅಭಿಪ್ರಾಯವೇನು? ಪಂಚವಿಂಶತಿ ತತ್ವವೇ ಅಪ್ರಾಮಾಣಿಕವೆಂದೋ, ಅಥವಾ 'ಯಸ್ಮಿನ್ ಪಂಚ' ಎಂಬ ವಾಕ್ಯವು ಪಂಚವಿಂಶತಿ ತತ್ವವನ್ನು ಪ್ರತಿಪಾದನೆ ಮಾಡುತ್ತಿಲ್ಲವೆಂದೋ?

ಮೊದಲನೆಯ ಪಕ್ಷ ಸರಿಯಿಲ್ಲ. ಏಕೆಂದರೆ 'ತಂ ಷಡ್ವಿಂಶಮಿತಿ ಪ್ರಾಹುಃ' ಎಂಬ ಆಥರ್ವಣೋಪನಿಷತ್ತಿನಲ್ಲಿ, 'ತನ್ಮಾತ್ರಾಣಿ ಭೂತಾದೌ ಲೀಯಂತೇ ಭೂತಾದಿರ್ಮಹತಿ

ಮಹಾನವ್ಯಕ್ತೇ ಲೀಯತೇ' ಎಂಬುದಾಗಿ ಮತ್ತೊಂದು ಶ್ರುತಿಯಲ್ಲಿ, 'ಯಸ್ಯಾಹಂಕಾರಃ ಶರೀರಂ ಯಸ್ಯ ಬುದ್ಧಿಃ ಶರೀರಂ ಯಸ್ಯಾವ್ಯಕ್ತಂ ಶರೀರಮ್' ಎಂಬುದಾಗಿ ಸುಬಾಲೋಪನಿಷತ್ತಿನಲ್ಲಿ 'ಪಂಚಭಿಃ ಪಂಚಭಿರ್ಬ್ರಹ್ಮ ಚತುರ್ಭಿರ್ದಶಭಿಸ್ತಥಾ । ಏತಚ್ಚತುರ್ವಿಂಶತಿಕಂ ಗಣಂ ಪ್ರಾಧಾನಿಕಂ ವಿದುಃ' ಎಂಬುದಾಗಿ ಭಾಗವತದ ಕಪಿಲಗೀತೆಯಲ್ಲಿ, 'ತ್ರಿವಿಧೋऽಯಮಹಂಕಾರಃ ಮಹತ್ತತ್ತ್ವಾದಜಾಯತೇ' ಎಂಬ ಸ್ಮೃತಿಯಲ್ಲಿಯೂ ಕೂಡ ಪಂಚವಿಂಶತಿ ತತ್ವಗಳ ನಿರೂಪಣೆಯು ಸ್ಪಷ್ಟವಾಗಿರುತ್ತದೆ. ಹೀಗೆ ಅನೇಕ ಶ್ರುತಿ-ಸ್ಮೃತಿಗಳ ಆಧಾರದಿಂದ ಪಂಚವಿಂಶತಿ ತತ್ವವು ಪ್ರಮಾಣಸಿದ್ಧವಾಗಿರುವಾಗ ಅಪ್ರಾಮಾಣಿಕವೆಂಬ ನಿನ್ನ ಊಹೆಯು ಅಸಮೀಚೀನವಾಗಿದೆ.

'ಯಸ್ಮಿನ್ ಪಂಚ ಪಂಚ ಜನಾಃ' ಎಂಬ ವಾಕ್ಯವು ಪಂಚವಿಂಶತಿ ತತ್ವವನ್ನು ಪ್ರತಿಪಾದನೆ ಮಾಡುವುದಿಲ್ಲ ಎಂಬ ಎರಡನೆಯ ಪಕ್ಷವು ಸರಿಯಲ್ಲ. ಆ ಪಕ್ಷವನ್ನು ನೀನು ಒಪ್ಪುವುದಾದರೆ ನನಗೆ ವಿರೋಧವೇ ಇಲ್ಲ. ಏಕೆಂದರೆ ನಾವೂ ಸಹ 'ಯಸ್ಮಿನ್ ಪಂಚ' ಇತ್ಯಾದಿ ವಾಕ್ಯಕ್ಕೆ ತತ್ವಪರತ್ವವನ್ನು ಅಂಗೀಕರಿಸುವುದಿಲ್ಲ. ಮತ್ತು ಕೇವಲ ಈ ವಾಕ್ಯವು ಪಂಚವಿಂಶತಿತತ್ವವನ್ನು ಪ್ರತಿಪಾದನೆ ಮಾಡುವುದಿಲ್ಲ ಎಂದ ಮಾತ್ರಕ್ಕೆ ಪ್ರಕೃತಿಗೆ ಅಶಬ್ದತ್ವವನ್ನು ಸಮರ್ಥನೆ ಮಾಡಿದಂತಾಗುವುದಿಲ್ಲ.

ಇದರಂತೆ ಅದ್ವೈತಿಗಳ ಸೂತ್ರವ್ಯಾಖ್ಯಾನವೂ ಕೂಡ ಸರಿಯಿಲ್ಲ. ಏಕೆಂದರೆ ಪೃಥಿವ್ಯಾದಿಗಳಲ್ಲಿ ಪಂಚಭೂತತ್ವ, ಶಬ್ದಾದಿಗಳಲ್ಲಿ ತನ್ಮಾತ್ರತ್ವ, ಘ್ರಾಣಾದಿಗಳಲ್ಲಿ ಬಾಹ್ಯಜ್ಞಾನೇಂದ್ರಿಯತ್ವ, ವಾಗಾದಿ ಇಂದ್ರಿಯಗಳಲ್ಲಿ ಕರ್ಮೇಂದ್ರಿಯತ್ವ, ಮಹದಹಂಕಾರ ಮನಸ್ಸು, ಪ್ರಕೃತಿ, ಪುರುಷ ಇವುಗಳಲ್ಲಿ ಏಕವಿಂಶತ್ಯನ್ಯತ್ವ ಇತ್ಯಾದಿಯಾದ ಉಪಸಂಗ್ರಾಹಕ ಧರ್ಮವಿರುವಾಗ, ಯಾವುದೇ ಸಂಗ್ರಾಹಕಧರ್ಮಗಳಿಲ್ಲದ ಕಾರಣ ಇಪ್ಪತ್ತೈದು ತತ್ವವನ್ನು ಈ ಶ್ರುತಿಯು ಪ್ರತಿಪಾದನೆ ಮಾಡುವುದಿಲ್ಲವೆಂಬ ಈ ವ್ಯಾಖ್ಯಾನವು ಅಸಾಧುವಾಗಿದೆ. ಒಂದುವೇಳೆ ಹೀಗೆ ಸಂಗ್ರಾಹಕಧರ್ಮಗಳಿಲ್ಲವೆಂಬುದು ಸೂತ್ರಕಾರರ ಉದ್ದೇಶವಾಗಿದ್ದಲ್ಲಿ ಅವರೇ ಸ್ವತಃ ಭಾಗವತದಲ್ಲಿ 'ಪಂಚಭಿಃ ಪಂಚಭಿರ್ಬ್ರಹ್ಮ' ಎಂಬುದಾಗಿ ಐದೈದರ ಗುಂಪುಗಳನ್ನಾಗಿ ತತ್ವಗಳ ವಿಂಗಡನೆಯನ್ನು ಮಾಡಿದ್ದು ತಪ್ಪಾಗುತ್ತಿತ್ತು.

ಆಕ್ಷೇಪ - 'ಯಸ್ಮಿನ್ ಪಂಚ ಪಂಚ ಜನಾಃ ಆಕಾಶಶ್ಚ ಪ್ರತಿಷ್ಠಿತಃ' ಎಂಬ ಶ್ರುತಿಯಲ್ಲಿ ಆಕಾಶ ಹಾಗೂ ಆತ್ಮರನ್ನು ಪ್ರತ್ಯೇಕವಾಗಿ ಉಲ್ಲೇಖಿಸಲಾಗಿದೆ. ಆದ್ದರಿಂದ ಇಪ್ಪತ್ತೈದು ತತ್ವಗಳಲ್ಲಿ ಆಕಾಶ

ಹಾಗೂ ಆತ್ಮರನ್ನು ಸೇರಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಸತ್ವರಜಸ್ತಮೋ-ರೂಪವಾದ ಪ್ರಕೃತಿಯ ಭಾಗವನ್ನು ಸ್ವೀಕರಿಸಿ ಐದರ ಗುಂಪನ್ನು ಮಾಡಬೇಕು. ಸತ್ವ, ರಜಸ್ಸು, ತಮಸ್ಸು, ಮಹತ್ತತ್ವ, ಅಹಂಕಾರತತ್ವ ಈ ಐದನ್ನೂ ಸೇರಿಸಿದಾಗ ಒಂದು ಗುಂಪಾಗುತ್ತದೆ. ಜ್ಞಾನೇಂದ್ರಿಯಗಳ ನಡುವೆ ಇರುವ ಘ್ರಾಣೇಂದ್ರಿಯವನ್ನು ಪಂಚಭೂತಗಳಲ್ಲಿ ಸೇರಿಸಬೇಕು. ಏಕೆಂದರೆ ಆಕಾಶವನ್ನು ಪ್ರತ್ಯೇಕವಾಗಿ ಹೇಳಿರುವುದರಿಂದ ಪಂಚಭೂತಗಳಲ್ಲಿ ಆಕಾಶವನ್ನು ಸೇರಿಸಿಕೊಳ್ಳಲಾಗದು. ಆದ್ದರಿಂದ ಪೃಥಿವೀ, ಅಪ್, ತೇಜಸ್ಸು, ವಾಯು, ಘ್ರಾಣೇಂದ್ರಿಯ ಈ ಐದು ಸೇರಿ ಒಂದು ಗುಂಪಾಗುತ್ತವೆ. ಅನಂತರ ಜ್ಞಾನೇಂದ್ರಿಯದಲ್ಲಿ ಘ್ರಾಣೇಂದ್ರಿಯವನ್ನು ಹಿಂದೆ ಸೇರಿಸಿದ್ದರಿಂದ ಮುಂದಿನ ಕರ್ಮೇಂದ್ರಿಯಗಳ ನಡುವೆ ಇರುವ ವಾಗಿಂದ್ರಿಯವನ್ನು ಜ್ಞಾನೇಂದ್ರಿಯಗಳ ನಡುವೆ ಸೇರಿಸಬೇಕು. ಆವಾಗ ರಸನ, ಚಕ್ಷುಷ್, ತ್ವಕ್, ಶ್ರೋತ್ರ, ವಾಕ್ ಈ ಐದು ಸೇರಿ ಒಂದು ಗುಂಪಾಗಬೇಕು. ಇದರಂತೆ ಕರ್ಮೇಂದ್ರಿಯಗಳ ನಡುವೆ ಮನಸ್ಸನ್ನು ಸೇರಿಸಿದಾಗ ಪಾಣಿ, ಪಾದ, ಉಪಾಯು, ಉಪಸ್ಥ ಮನಸ್ಸು ಇವುಗಳು ಒಂದು ಗುಂಪಾಗುತ್ತವೆ. ಅನಂತರ ಶಬ್ದ, ಸ್ಪರ್ಶ, ರೂಪ, ರಸ, ಗಂಧ ಎಂಬ ಪಂಚತನ್ಮಾತ್ರಗಳು ಮತ್ತೊಂದು ಗುಂಪಾಗುತ್ತವೆ. ಹೀಗೆ ಐದೈದರ ಐದು ಗುಂಪುಗಳನ್ನು ನಿರ್ವಹಣೆ ಮಾಡಿ, ಇಪ್ಪತ್ತೈದು ಎಂಬ ಸಂಖ್ಯೆಯನ್ನು ಉಪಪಾದನೆ ಮಾಡಬೇಕು.

ಇದರ ಮೊದಲನೆಯ ಗುಂಪಾಗಿರುವ ಸತ್ವಾದಿ ಐದರಲ್ಲಿ ಯಾವುದೇ ಉಪಸಂಗ್ರಾಹಕ ಧರ್ಮವು ಇರುವುದಿಲ್ಲ.

ಸಮಾಧಾನ - ಇದು ತಪ್ಪು. ಒಂದು ವೇಳೆ ಪಂಚಭೂತಗಳಲ್ಲಿ ಆಕಾಶದ ಸ್ಥಾನದಲ್ಲಿ ಘ್ರಾಣೇಂದ್ರಿಯವನ್ನು ಸೇರಿಸಿ ಪಂಚಜ್ಞಾನೇಂದ್ರಿಯಗಳಲ್ಲಿ ಘ್ರಾಣೇಂದ್ರಿಯದ ಸ್ಥಾನದಲ್ಲಿ ವಾಗಿಂದ್ರಿಯವನ್ನು ಸೇರಿಸಿ, ಪಂಚಕರ್ಮೇಂದ್ರಿಯಗಳ ನಡುವೆ ವಾಗಿಂದ್ರಿಯ ಸ್ಥಾನದಲ್ಲಿ ಮನಸ್ಸೆಂಬ ಇಂದ್ರಿಯವನ್ನು ಸೇರಿಸಿದಲ್ಲಿ ಯಾವುದೇ ಉಪಸಂಗ್ರಾಹಕ ಧರ್ಮಗಳು ಇರುತ್ತಿರಲಿಲ್ಲ. ಆದರೆ ಹೀಗೆ ಐದೈದರ ಗುಂಪನ್ನು ಮಾಡುವುದೇ ತಪ್ಪು. ಗುಂಪುಗಳ ರಚನೆಯು ಐಚ್ಛಿಕವಾದ್ದರಿಂದ ಹೇಗೆ ಐದೈದರ ಗುಂಪನ್ನು ಮಾಡಿದರೆ ಉಪಸಂಗ್ರಾಹಕ ಧರ್ಮಗಳನ್ನು ಹೇಳಲು ಸಾಧ್ಯವಿರುತ್ತದೆಯೋ, ಅದರಂತೆಯೇ ಮಾಡಬೇಕಾಗುತ್ತದೆ. ಆದ್ದರಿಂದ ಪೃಥಿವ್ಯಾದಿ ಪಂಚಭೂತಗಳಲ್ಲಿ ಘ್ರಾಣೇಂದ್ರಿಯವನ್ನು ಸೇರಿಸದೇ ಮನಸ್ಸನ್ನು ಸೇರಿಸಬೇಕು. ಆವಾಗ ಘ್ರಾಣಾದಿ ಐದು ಜ್ಞಾನೇಂದ್ರಿಯಗಳು ಒಂದು ಗುಂಪಾಗುತ್ತವೆ. ವಾಗಿಂದ್ರಿಯವೇ ಮೊದಲಾದ

ಐದು ಕರ್ಮೇಂದ್ರಿಯಗಳು ಒಂದಾಗುತ್ತವೆ. ಶಬ್ದಸ್ಪರ್ಶಾದಿಗಳೂ ಕೂಡ ಪಂಚತನ್ಮಾತ್ರಗಳೆಂದು ಒಂದು ಗುಂಪಾಗುತ್ತವೆ. ಮೊದಲಿನ ಸತ್ವ, ರಜಸ್ಸು, ತಮಸ್ಸು, ಮಹತ್ತತ್ವ, ಅಹಂಕಾರತತ್ವ ಈ ಐದರಲ್ಲಿ ಮನಃಪರತ್ವವೆಂಬ ಸಂಗ್ರಾಹಕ ಧರ್ಮವನ್ನು ಹೇಳಬೇಕು. ಏಕೆಂದರೆ ಪೃಥಿವ್ಯಾದಿಗಳ ನಡುವೆ ಮನಸ್ತತ್ವವನ್ನು ಸೇರಿಸಿದ್ದರಿಂದ. ಈ ಪೃಥಿವ್ಯಾದಿಗಳಲ್ಲಿ 'ಪಂಚಭೂತತ್ವ' ಎಂಬ ಉಪಸಂಗ್ರಾಹಕಧರ್ಮವಿಲ್ಲದಿದ್ದರೂ 'ವಿಂಶತ್ಯತಿರಿಕ್ತತ್ವ' ಎಂಬ ಉಪಸಂಗ್ರಾಹಕಧರ್ಮ ಇರುತ್ತದೆ. ಆದ್ದರಿಂದ ಮೊದಲನೇ ಗುಂಪಿನಲ್ಲಿ 'ಮನಃಪರತ್ವ' ಎಂಬುದು ಉಪಸಂಗ್ರಾಹಕಧರ್ಮ. ಎರಡನೆಯ ಗುಂಪಿನಲ್ಲಿ 'ವಿಂಶತ್ಯತಿರಿಕ್ತತ್ವ' ಎಂಬುದು ಉಪಸಂಗ್ರಾಹಕಧರ್ಮ. ಮೂರನೆಯ ಗುಂಪಿನಲ್ಲಿ ಜ್ಞಾನೇಂದ್ರಿಯತ್ವ, ನಾಲ್ಕನೆಯ ಗುಂಪಿನಲ್ಲಿ ಕರ್ಮೇಂದ್ರಿಯತ್ವ, ಐದನೆಯ ಗುಂಪಿನಲ್ಲಿ ಪಂಚತನ್ಮಾತ್ರತ್ವ ಹೀಗೆ ಐದು ಗುಂಪುಗಳಲ್ಲಿಯೂ ಪ್ರತ್ಯೇಕ ಪ್ರತ್ಯೇಕವಾದ ಉಪಸಂಗ್ರಾಹಕಧರ್ಮಗಳು ಇರುತ್ತವೆ. ಆದ್ದರಿಂದ ಪಂಚವಿಂಶತಿತತ್ವವು ಸರಿಯಾಗಿ ಉಪಪನ್ನವಾಗುತ್ತದೆ.

ಮತ್ತು ಈ ಪಕ್ಷದಲ್ಲಿ 'ಅತಿರೇಕಾಚ್ಚ' ಎಂಬ ಸೂತ್ರದ ಭಾಗಕ್ಕೆ ಮಾಡಿದ ವ್ಯಾಖ್ಯಾನವೂ ಕೂಡ ಹೇಗೆ ಸರಿಯಾಗುತ್ತದೆ. ಏಕೆಂದರೆ ಆಕಾಶ ಹಾಗೂ ಆತ್ಮ ಈ ಎರಡು ತತ್ವಗಳನ್ನು ಬಿಟ್ಟರೆ, ಇಪ್ಪತ್ತೂರು ತತ್ವಗಳಾಗುತ್ತವೆ. ಆದರೆ ಪ್ರಕೃತಿಯ ಭಾಗವೆನಿಸಿದ ಸತ್ವ, ರಜಸ್ಸು, ತಮಸ್ಸು ಎಂಬ ಮೂರು ತತ್ವಗಳನ್ನು ಅತಿರಿಕ್ತವೆಂದು ವಿವಕ್ಷಿಸಿದಾಗ 'ಪಂಚವಿಂಶತಿತತ್ವ' ಎಂಬ ಸಂಖ್ಯೆಯು ನಿರ್ವಾಹವಾಗುತ್ತದೆ. ಆದ್ದರಿಂದ 'ಅತಿರೇಕಾಚ್ಚ' ಎಂಬ ಸೂತ್ರವ್ಯಾಖ್ಯಾನವು ಸರಿಯಲ್ಲ.

ಪ್ರಶ್ನೆ - ಪ್ರಕೃತಿಭಾಗವೆನಿಸಿದ ಸತ್ವಾದಿಗುಣಗಳನ್ನು ಸ್ವೀಕರಿಸಿ 'ಪಂಚವಿಂಶತಿತತ್ವ' ಎಂಬ ಸಂಖ್ಯೆಯನ್ನು ನಿರ್ವಹಿಸುವುದಾದರೆ ಸಂಗ್ರಾಹಕ ಧರ್ಮಗಳಿರುವುದಿಲ್ಲ. ಒಂದುವೇಳೆ ಪ್ರತ್ಯೇಕವಾಗಿ ಪರಿಗಣಿಸದೇ ಆಕಾಶಾದಿಗಳನ್ನು ಪಂಚವಿಂಶತಿ ತತ್ವಗಳಲ್ಲೇ ಸೇರಿಸುವುದಾದರೆ, 'ಆಕಾಶಶ್ಚ ಪ್ರತಿಷ್ಠಿತಃ' ಎಂಬ ಪ್ರತಿಗುಕ್ತಿಯ ವಿರೋಧವು ಬರುತ್ತದಲ್ಲವೇ?

ಉತ್ತರ - ಹಾಗಾದರೆ 'ನಾನಾಭಾವಾತ್' 'ಅತಿರೇಕಾತ್' ಎಂಬೆರಡು ಹೇತುಗಳಿಗೆ ವೈಕಲ್ಪಿಕವನ್ನು ನೀವು ಹೇಳಬೇಕಿತ್ತು. ಆದರೆ ಸೂತ್ರದಲ್ಲಿರುವ ಸಮುಚ್ಚಯಾರ್ಥದಲ್ಲಿ 'ಚ'ಶಬ್ದವನ್ನು ಸೂತ್ರಕಾರರು ಪ್ರಯೋಗಿಸಿರುತ್ತಾರೆ. ನೀವಾದರೂ 'ಚ'ಶಬ್ದಕ್ಕೆ ವಿಕಲ್ಪ ಎಂಬರ್ಥವನ್ನು ಹೇಳಬೇಕಿತ್ತು. ಆದ್ದರಿಂದ ನಿಮ್ಮ ವ್ಯಾಖ್ಯಾನವು ಅಸ್ವರಸವಾಗಿದೆ.

'ಯಸ್ಮಿನ್ ಪಂಚ ಪಂಚ ಜನಾಃ' ಎಂಬ ಶ್ರುತಿಯಲ್ಲಿ ಇಪ್ಪತ್ತೈದು ತತ್ವಗಳು ಪ್ರತಿಪಾದ್ಯವಾಗಿಲ್ಲ. ಏಕೆಂದರೆ ಇಪ್ಪತ್ತೈದು ತತ್ವಗಳಲ್ಲಿ ಐದೈದರ ವಿಭಾಗವನ್ನು ಮಾಡಲು ಯಾವುದೇ ಉಪಸಂಗ್ರಾಹಕಧರ್ಮಗಳಿಲ್ಲ ಎಂಬುದಾಗಿ ಅದ್ವೈತಿಗಳು ಹೇಳುವುದಾದರೆ ನಾವು ಪ್ರಶ್ನಿಸುತ್ತೇವೆ. ಉಪಸಂಗ್ರಾಹಕವಾದ ಧರ್ಮಗಳಿಲ್ಲದಿದ್ದರೆ ಎಲ್ಲಿಯೂ ಕೂಡ ದ್ವಿತ್ವ, ತ್ರಿತ್ವ ಮೊದಲಾದ ಸಂಖ್ಯೆಗಳನ್ನು ಹೇಳಬಾರದೆಂದೋ, ಅಥವಾ ಮಹಾಸಂಖ್ಯೆಯಲ್ಲಿ ಅವಾಂತರಸಂಖ್ಯೆಯನ್ನು ಹೇಳಬಾರದೆಂದೋ ?

ಮೊದಲಿನ ಪಕ್ಷ ಸರಿಯಲ್ಲ. ಏಕೆಂದರೆ ಪ್ರಾಣ, ಚಕ್ಷುಸ್ಸು, ಶ್ರೋತ್ರ, ಅನ್ನ, ಮನಸ್ಸು ಈ ಐದರಲ್ಲಿ ಯಾವುದೇ ಉಪಸಂಗ್ರಾಹಕಧರ್ಮಗಳಿಲ್ಲದಿದ್ದರೂ ಪಂಚತ್ವವನ್ನು ನೀವು ಒಪ್ಪಿದ್ದೀರಿ. ಇದು ತಪ್ಪಾಗಬೇಕಾದೀತು.

ಎರಡನೆಯ ಪಕ್ಷವು ಸರಿಯಲ್ಲ. 'ಪಂಚಸಪ್ತಚ ವರ್ಷಾಣಿ ನವವರ್ಷ ಶತಕ್ರತುಃ' ಐದೇಳು ವರ್ಷಗಳ ಕಾಲ ಇಂದ್ರನು ಮಳೆಯನ್ನು ಸುರಿಸಲಿಲ್ಲ. ಎಂದರೆ ಹನ್ನೆರಡು ವರ್ಷಗಳ ಕಾಲ ಮಳೆಯೇ ಬರಲಿಲ್ಲ ಎಂದರ್ಥ. ಹನ್ನೆರಡು ವರ್ಷ ಎಂಬ ಮಹಾಸಂಖ್ಯೆಯಲ್ಲಿ ಐದು ಮತ್ತು ಏಳು ಎಂಬ ಅವಾಂತರಸಂಖ್ಯೆಯನ್ನು ಪರಿಗಣಿಸಲಾಗಿದೆ. ಈ ಅವಾಂತರಸಂಖ್ಯೆಯನ್ನು ಪರಿಗಣಿಸಲು ಯಾವುದೇ ಉಪಸಂಗ್ರಾಹಕಧರ್ಮಗಳು ಕಾಣಿಸುತ್ತಿಲ್ಲ. ಮತ್ತು 'ವ್ರತಮೇತದನುಷ್ಠೇಯಂ ವರ್ಷಾಣಿ ನವ ಪಂಚ ಚ' ಒಂಭತ್ತು ಐದು ವರ್ಷಗಳ ಕಾಲ ವ್ರತವನ್ನು ಆಚರಿಸಬೇಕು. ಎಂದರೆ ಹದಿನಾಲ್ಕು ವರ್ಷಗಳ ಕಾಲ ವ್ರತವನ್ನು ಆಚರಿಸಬೇಕು ಎಂದರ್ಥ. ಇಲ್ಲಿಯೂ ಕೂಡ ಹದಿನಾಲ್ಕು ವರ್ಷ ಎಂಬ ಮಹಾಸಂಖ್ಯೆಯಲ್ಲಿ ಒಂಭತ್ತು ಮತ್ತು ಐದು ಎಂಬ ಅವಾಂತರ ಸಂಖ್ಯೆಯನ್ನು ಪರಿಗಣಿಸಲಾಗಿದೆ. ಆದರೆ ಉಪಸಂಗ್ರಾಹಕಧರ್ಮವಿಲ್ಲದ ಕಾರಣ ಇಲ್ಲಿಯೂ ಕೂಡ ವ್ಯಭಿಚಾರ ದೋಷವು ಬರುತ್ತದೆ. ಆದ್ದರಿಂದ ಯಾವಸ್ಥಳದಲ್ಲಿ ಮಹಾಸಂಖ್ಯೆಯಲ್ಲಿ ಅವಾಂತರಸಂಖ್ಯೆಯನ್ನು ಹೇಳಿರುತ್ತಾರೋ ಅಲ್ಲಿ ಉಪಸಂಗ್ರಾಹಕಧರ್ಮವು ಇರಲೇಬೇಕು ಎಂಬ ವ್ಯಾಪ್ತಿಯು ಸಿದ್ಧವಾಗುವುದಿಲ್ಲ. ಆದ್ದರಿಂದ ಅದ್ವೈತಿಗಳ ಮೊದಲನೆಯ ಸೂತ್ರವ್ಯಾಖ್ಯಾನವು ಅಯುಕ್ತವಾಗಿದೆ.

'ಪ್ರಾಣಾದಯೋ ವಾಕ್ಯಶೇಷಾತ್' ಎಂಬ ಎರಡನೆಯ ಸೂತ್ರವ್ಯಾಖ್ಯಾನವೂ ಕೂಡ ಸಾಧುವಲ್ಲ. ಏಕೆಂದರೆ 'ಪ್ರಾಣಸ್ಯ ಪ್ರಾಣಮ್' ಇತ್ಯಾದಿ ಶ್ರುತಿಯಲ್ಲಿ ಷಷ್ಠೀವಿಭಕ್ತ್ಯಂತವಾದ

'ಪ್ರಾಣಸ್ಯ' ಎಂಬ ಪದದಿಂದ ಯಾರು ನಿರ್ದಿಷ್ಟರಾಗಿದ್ದಾರೋ ಅಂತಹ ಪ್ರಾಣಾದಿಗಳನ್ನೇ ಸೂತ್ರದಲ್ಲಿ ಸ್ವೀಕರಿಸಬೇಕು ಎಂಬ ಅದ್ವೈತಿಗಳ ವಾದವನ್ನು ನಮ್ಮ ಸಿದ್ಧಾಂತದ ಪೂರ್ವಪಕ್ಷದಲ್ಲಿಯೇ ಅನುವಾದ ಮಾಡಿ ನಿರಾಕರಿಸಿದ್ದಾಗಿದೆ. ದ್ವಿತೀಯಾಂತವಾದ ಪ್ರಾಣಾದಿಶಬ್ದಗಳೇ ಪ್ರಧಾನವಾಗಿರುವುದರಿಂದ ಅವುಗಳನ್ನೇ ಸೂತ್ರದಲ್ಲಿ ನಿರ್ದೇಶಿಸಬೇಕು.

ಮತ್ತು 'ಜ್ಯೋತಿಷ್ಯೈಕೇಷಾಮಸತ್ಯನ್ನೇ' ಎಂಬ ಮೂರನೆಯ ಸೂತ್ರದಲ್ಲಿ ಏಕವಚನಾಂತವಾದ 'ಜ್ಯೋತಿಷಾ' ಎಂಬ ಪದದಿಂದ 'ಜ್ಯೋತಿಷಾಂ ಜ್ಯೋತಿಃ' ಎಂಬ ಶ್ರುತಿಯಲ್ಲಿ ಏಕವಚನದಿಂದ ನಿರ್ದೇಶಿಸಲ್ಪಟ್ಟ ಜ್ಯೋತಿಯನ್ನೇ ಸ್ವೀಕರಿಸಲಾಗಿದೆ. ಅದರಂತೆ 'ಪ್ರಾಣಾದಯೋ ವಾಕ್ಯಶೇಷಾತ್' ಎಂಬ ಎರಡನೆಯ ಸೂತ್ರದಲ್ಲಿಯೂ ಕೂಡ ಪ್ರಾಣಾದಿ ಶಬ್ದದಿಂದ ದ್ವಿತೀಯಾವಿಭಕ್ತ್ಯಂತವಾದ 'ಪ್ರಾಣಮ್' ಇತ್ಯಾದಿ ಶಬ್ದದಿಂದ ನಿರ್ದೇಶಿಸಲ್ಪಟ್ಟ ಪ್ರಾಣಾದಿಗಳನ್ನೇ ಸ್ವೀಕರಿಸಬೇಕು. ಹೀಗೆ ಅದ್ವೈತಮತವನ್ನು ನಿರಾಕರಣ ಮಾಡಿದ್ದರಿಂದ ರಾಮಾನುಜರ ಪಕ್ಷವನ್ನೂ ಕೂಡ ನಿರಾಕರಣೆ ಮಾಡಿದಂತಾಯಿತು.

ಮತ್ತು ರಾಮಾನುಜ ಪಕ್ಷದಲ್ಲಿ ಈ ಅಧಿಕರಣಕ್ಕೆ ಆರಂಭಣೀಯತ್ವವೇ ಕೂಡುವುದಿಲ್ಲ. ಏಕೆಂದರೆ ಈ ಬ್ರಹ್ಮಮೀಮಾಂಸಾಶಾಸ್ತ್ರವು ರಾಮಾನುಜರ ಪ್ರಕಾರ ಪೂರ್ವಮೀಮಾಂಸೆಯ ಜೊತೆಗೆ ಸೇರಿ ಒಂದೇ ಶಾಸ್ತ್ರವೆನಿಸಿದೆ. ಆದ್ದರಿಂದ ಈ ಶಾಸ್ತ್ರದ ಪೂರ್ವಭಾಗವೆನಿಸಿದ ಪೂರ್ವಮೀಮಾಂಸಾ ಗ್ರಂಥದಲ್ಲಿ 'ಸಂದಿಗ್ಧೇ ತು ವಾಕ್ಯಶೇಷಾತ್' ಎಂಬ ಅಧಿಕರಣದಿಂದ ಇದು ಗತಾರ್ಥವಾಗಿದೆ. ಏಕೆಂದರೆ ಆ ಅಧಿಕರಣದಲ್ಲಿ ವಾಕ್ಯಶೇಷದಿಂದಲೇ ಶ್ರುತ್ಯರ್ಥವನ್ನು ನಿರ್ಣಯ ಮಾಡಬೇಕು ಎಂದು ಸಾಧಿಸಿದ್ದಾಗಿದೆ. ಅದೇ ವಿಷಯವನ್ನೇ 'ಪ್ರಾಣಾದಯೋ ವಾಕ್ಯಶೇಷಾತ್' ಎಂಬ ಈ ಅಧಿಕರಣದ ಸೂತ್ರದಲ್ಲಿಯೂ ಸಮರ್ಥನೆ ಮಾಡುವುದು ವ್ಯರ್ಥ. 'ಪ್ರಾಣಸ್ಯ ಪ್ರಾಣಮ್' ಎಂಬ ವಾಕ್ಯಶೇಷದ ಬಲದಿಂದ 'ಯಸ್ಮಿನ್ ಪಂಚ ಪಂಚ ಜನಾಃ' ಎಂಬ ಶ್ರುತಿಯ ಅರ್ಥವನ್ನು ನಿರ್ಣಯಿಸಲು ಪೂರ್ವಮೀಮಾಂಸೆಯ 'ಸಂದಿಗ್ಧೇ ತು ವಾಕ್ಯಶೇಷಾತ್' ಎಂಬ ಅಧಿಕರಣವು ಸಾಕು.

ಆಕ್ಷೇಪ - ಪೂರ್ವಮೀಮಾಂಸೆಯ ಅಧಿಕರಣದಿಂದ ಇದು ಗತಾರ್ಥವಾಗುವುದಿಲ್ಲ. ಏಕೆಂದರೆ 'ಸಂದಿಗ್ಧೇ ತು ವಾಕ್ಯಶೇಷಾತ್' ಎಂಬ ಸೂತ್ರದಲ್ಲಿ 'ತೇಜೋ ವೈ ಘೃತಮ್' ಎಂಬ ವಾಕ್ಯಶೇಷವು ಘೃತಪರವೆಂದು ನಿರ್ಣೀತವಾಗಿದೆ. ಅದಕ್ಕನುಸಾರಿಯಾಗಿ 'ಅಕ್ತಾ' ಎಂಬ ಸಂದಿಗ್ಧವಾದ ವಾಕ್ಯವನ್ನು, ತುಪ್ಪದಿಂದ ಮಿಶ್ರಣ ಮಾಡಬೇಕು ಎಂಬರ್ಥದಲ್ಲಿ

ನಿರ್ಣಯಿಸುವುದು ಸೂಕ್ತವಾಗುತ್ತದೆ. ಆದರೆ ಪ್ರಕೃತ 'ಪ್ರಾಣಸ್ಯ ಪ್ರಾಣಮ್' ಎಂಬ ವಾಕ್ಯಶೇಷವು ಇಂದ್ರಿಯಪರವಾಗಿದೆಯೆಂದು ಇದುವರೆಗೂ ನಿರ್ಣಯವಾಗಿಲ್ಲ. ಏಕೆಂದರೆ ವಾಕ್ಯಶೇಷದಲ್ಲಿ ಇಂದ್ರಿಯವಲ್ಲದ ಪ್ರಾಣ ಹಾಗೂ ಅನ್ನಗಳು ಶ್ರುತವಾಗಿವೆ. ಎಲ್ಲಿಯ ತನಕ ಈ ವಾಕ್ಯವು ಇಂದ್ರಿಯಪರವಾಗಿದೆ ಎಂದು ನಿರ್ಣಯವಾಗುವುದಿಲ್ಲವೋ, ಅಲ್ಲಿಯ ತನಕ ಪ್ರಾಣಾದಿಗಳು 'ಯಸ್ಮಿನ್ ಪಂಚ ಪಂಚ ಜನಾಃ' ಎಂಬ ಶ್ರುತಿಯು ಹೇಳುತ್ತಿರುವ ಪಂಚತ್ವಸಂಖ್ಯೆಯನ್ನು ಪೂರಣೆ ಮಾಡಲು ಯೋಗ್ಯಗಳಾಗುವುದಿಲ್ಲ. ಏಕೆಂದರೆ ಪಂಚತ್ವಸಂಖ್ಯೆಯನ್ನು ನಿವೇಶ ಮಾಡಲು ಇಂದ್ರಿಯ ಹಾಗೂ ಅನಿಂದ್ರಿಯಗಳಲ್ಲಿ ಒಂದು ಉಪಾಧಿಯನ್ನು ಹೇಳಲು ಸಾಧ್ಯವಿಲ್ಲ. ಪ್ರಾಣಾದಿ ಐದು ತತ್ವಗಳೂ ಕೂಡ ಇಂದ್ರಿಯವೆಂದು ನಿರ್ಣಯವಾದರೆ ಪಂಚತ್ವಸಂಖ್ಯೆಗೆ ಅನುಕೂಲವಾದ ಇಂದ್ರಿಯತ್ವ ಎಂಬ ಉಪಾಧಿಯನ್ನು ಹೇಳಿದಂತಾಗುತ್ತಿತ್ತು.

ಹೀಗೆ ಪ್ರಶ್ನಿಸಿಕೊಂಡು ರಾಮಾನುಜರೇ ಉತ್ತರವನ್ನು ನೀಡಿದ್ದಾರೆ. ವಾಕ್ಯಶೇಷವು ಸಂಪೂರ್ಣವಾಗಿ ಐದು ಇಂದ್ರಿಯಗಳನ್ನೇ ಪ್ರತಿಪಾದನೆ ಮಾಡುತ್ತದೆಯೆಂದು ನಿರ್ಣಯಿಸಬೇಕು. ಹೇಗೆಂದರೆ ಚಕ್ಷುಃಶ್ರೋತ್ರ, ಮನಃ, ಈ ಮೂರು ಶಬ್ದಗಳು ಇಂದ್ರಿಯಪರವಾಗಿವೆ. ಆದರೆ ಪ್ರಾಣ, ಅನ್ನ ಎಂಬ ಎರಡೇ ಶಬ್ದಗಳು ಬೇರೆ ಅರ್ಥಗಳನ್ನು ಹೇಳುತ್ತಿವೆ. ಅನೇಕ ಶಬ್ದಗಳು ಇಂದ್ರಿಯಗಳನ್ನು ಪ್ರತಿಪಾದನೆ ಮಾಡುತ್ತಿರುವುದರಿಂದ ಅವುಗಳಿಗೆ ಅನುಸಾರಿಯಾಗಿ ಈ ಎರಡು ಶಬ್ದಗಳಿಗೂ ಇಂದ್ರಿಯಪರತ್ವವನ್ನೇ ಸಾಧಿಸಬೇಕು. ಅದು ಹೀಗೆ - ಪ್ರಾಣಶಬ್ದಕ್ಕೆ ವಾಯು ಎಂದರ್ಥ. ವಾಯುವಿನಲ್ಲಿ ಸ್ಪರ್ಶ ಎಂಬ ಗುಣವಿದೆ. ಅಂತಹ ಸ್ಪರ್ಶವನ್ನು ತಿಳಿಸುವ ಸ್ಪರ್ಶನೇಂದ್ರಿಯವನ್ನು ಪ್ರಾಣಶಬ್ದವು ತಿಳಿಸುತ್ತದೆ. ಅನ್ನ ಶಬ್ದಕ್ಕೆ ಪೃಥಿವೀ ಎಂದರ್ಥ. ಪೃಥಿವೀಯಲ್ಲಿ ಗಂಧ ಎಂಬ ಗುಣವಿದೆ. ಈ ಗಂಧ ಎಂಬ ಗುಣವನ್ನು ತಿಳಿಸುವಂತಹದ್ದು ಘ್ರಾಣೇಂದ್ರಿಯ. ಆದ್ದರಿಂದ ಅನ್ನಶಬ್ದಕ್ಕೆ ಘ್ರಾಣೇಂದ್ರಿಯ ಎಂಬರ್ಥವನ್ನು ತಿಳಿಯಬೇಕು. ಅಥವಾ 'ಅದ್ಯತೇऽನೇನ' ಎಂಬ ವ್ಯುತ್ಪತ್ತಿಯನ್ನು ಮಾಡಿದಾಗ ರಸನೇಂದ್ರಿಯ ಎಂಬರ್ಥವನ್ನೂ ಕೂಡ ತಿಳಿಸುತ್ತದೆ. ಹೀಗೆ ಅನ್ನಶಬ್ದವು ಘ್ರಾಣೇಂದ್ರಿಯ ಮತ್ತು ರಸನೇಂದ್ರಿಯಗಳನ್ನು ತಂತ್ರದಿಂದ ಅನ್ವಯ ಮಾಡಿದಾಗ ತಿಳಿಸುತ್ತದೆ. ಆದ್ದರಿಂದ ಐದು ಇಂದ್ರಿಯಗಳನ್ನು ಈ ವಾಕ್ಯಶೇಷವು ಪ್ರತಿಪಾದನೆ ಮಾಡುತ್ತದೆಂದು ಹೇಳಲು ಯಾವ ವಿರೋಧವೂ ಇರುವುದಿಲ್ಲ. ಹೀಗೆ ವಾಕ್ಯಶೇಷವು ಇಂದ್ರಿಯಪರವಾಗಿದೆಯೆಂದು ನಿರ್ಣಯವಾದ ಮೇಲೆ

ಇದಕ್ಕನುಸಾರಿಯಾಗಿ 'ಯಸ್ಮಿನ್ ಪಂಚ ಪಂಚ ಜನಾಃ' ಎಂಬ ವಾಕ್ಯವೂ ಕೂಡ ಇಂದ್ರಿಯಪರವೇ ಆಗಿದೆಯೆಂದು ಸಮರ್ಥಿಸಲು 'ಪ್ರಾಣಾದಯೋ ವಾಕ್ಯಶೇಷಾತ್'ಎಂಬ ಸೂತ್ರವು ಹೊರಟಿದೆ. ಹೀಗೆ ಹೇಳಿದಾಗ 'ಸಂದಿಗ್ಧೇತು ವಾಕ್ಯಶೇಷಾತ್'ಎಂಬ ಪೂರ್ವಮೀಮಾಂಸೆಯ ಅಧಿಕರಣದಿಂದ ಪುನರುಕ್ತಿದೋಷವನ್ನು ಹೇಗೆ ಹೇಳುತ್ತೀರಿ ?

ಸಮಾಧಾನ - ಹೀಗೆ ರಾಮಾನುಜರು 'ಸಂದಿಗ್ಧೇತು ವಾಕ್ಯಶೇಷಾತ್' ಎಂಬ ಪೂರ್ವಮೀಮಾಂಸೆಯ ಸೂತ್ರದಿಂದ ಪುನರುಕ್ತಿಯನ್ನು ಪರಿಹರಿಸಕೊಳ್ಳಬಹುದು. ಆದರೆ ಈ ಬಹ್ವನುಗ್ರಹನ್ಯಾಯವೂ ಕೂಡ ಪೂರ್ವಮೀಮಾಂಸೆಯ ಅಧಿಕರಣದಿಂದಲೇ ಸಿದ್ಧವಾಗುತ್ತದೆ. ಅಂದರೆ ವಾಕ್ಯಶೇಷದಲ್ಲಿ ಮೂರು ಪದಗಳು ಇಂದ್ರಿಯಗಳನ್ನು ಪ್ರತಿಪಾದನೆ ಮಾಡುತ್ತಿವೆ. ಅದಕ್ಕನುಗುಣವಾಗಿ ಉಳಿದೆರಡೂ ಪದಗಳೂ ಕೂಡ ಇಂದ್ರಿಯಗಳನ್ನೇ ಪ್ರತಿಪಾದನೆ ಮಾಡಬೇಕು ಎಂಬುದು ಬಹ್ವನುಗ್ರಹನ್ಯಾಯವಾಗುತ್ತದೆ. ಇದನ್ನೂ ಕೂಡ ಪೂರ್ವಮೀಮಾಂಸೆಯಲ್ಲಿ 'ವಿಪ್ರತಿಷಿದ್ಧಧರ್ಮಾಣಾಂ ಸಮನ್ವಯೇ ಭೂಯಸಾಂ ಸ್ಯಾತ್ ಸಧರ್ಮತ್ವಮ್' ಎಂಬ ಪೂರ್ವಮೀಮಾಂಸೆಯ ಅಧಿಕರಣದಿಂದಲೇ ಸಿದ್ಧವಾಗಿದೆ. ಆದ್ದರಿಂದ ವಾಕ್ಯಶೇಷಾಧಿಕರಣದಿಂದ ಪುನರುಕ್ತಿ ಬಾರದಿದ್ದರೂ ಬಹ್ವನುಗ್ರಹನ್ಯಾಯಾಧಿಕರಣದಿಂದ ಪುನರುಕ್ತಿಯು ಬಂದೇ ಬರುತ್ತದೆ.

ಇಲ್ಲಿಗೆ ನ ಸಂಖ್ಯೋಪಸಂಗ್ರಹಾಧಿಕರಣದಲ್ಲಿ ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ ಇವುಗಳ ಅನುವಾದವು ಮತ್ತು ತಂತ್ರದೀಪಿಕೆ ಹಾಗೂ ಮತತ್ರಯ ವಿಮರ್ಶೆಯು ಸಮಾಪ್ತವಾಯಿತು

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥

ಆಕಾಶಾಧಿಕರಣ

ಬ್ರಹ್ಮಸೂತ್ರ, ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ,
ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ

ವಿಶೇಷವಿಚಾರದೊಂದಿಗೆ ಕನ್ನಡಭಾಷೆಯಲ್ಲಿ ಅನುವಾದ

ಮತ್ತು

ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆ

॥ ಹರಿಃ ಓಂ ॥

॥ ಶ್ರೀವೇದವ್ಯಾಸಾಯ ನಮಃ ॥

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಗುರುಭ್ಯೋ ನಮಃ ॥

॥ ಶ್ರೀಮದ್ರಾಘವೇಂದ್ರತೀರ್ಥಗುರುಭ್ಯೋ ನಮಃ ॥

॥ ಶ್ರೀಗುರುಭ್ಯೋ ನಮಃ ॥

ಆಕಾಶಾಧಿಕರಣ

ಬ್ರಹ್ಮಸೂತ್ರ

।। अथ आकाशाधिकरणम् ।।

'ಕಾರಣತ್ವೇನ ಚಾऽಕಾಶಾದಿಷು ಯಥಾವ್ಯಪದಿಷ್ಟೋಕ್ತೇಃ' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – ।। कारणत्वेन चाऽकाशादिषु यथाव्यपदिष्टोक्तेः।। १ ।।

ಸೂತ್ರಾರ್ಥ - ಪರಮಾತ್ಮನು ಪ್ರಧಾನ ಕಾರಣನು, ಅದರಂತೆ ಅವಾಂತರ ಕಾರಣನೂ ಆಗಿದ್ದಾನೆಂದು ಶ್ರುತಿ ಪ್ರತಿಪಾದಿಸುತ್ತಿದೆ. ಆಕಾಶಾದಿಗಳು ಅವಾಂತರಕಾರಣವೆಂದು ಲೋಕಪ್ರಸಿದ್ಧವಾಗಿವೆ. ಆದರೆ ಅಂತಹ ಆಕಾಶಾದಿಗಳಲ್ಲಿಯೂ ಅಂತರ್ಯಾಮಿಯಾದವನು ಪರಮಾತ್ಮನೇ ಆಗಿದ್ದಾನೆಂದು 'ಸ ಯೋ ಅತಃ ಅಶ್ರುತಃ' ಇತ್ಯಾದಿ ಐತರೇಯೋಪನಿಷತ್ತು ಹೇಳುತ್ತಿದೆ. ಮತ್ತು 'ಯ ಆಕಾಶೇ ತಿಷ್ಠನ್' ಎಂಬ ಬೃಹದಾರಣ್ಯಕದಲ್ಲಿಯೂ ಅವನೇ ಆಕಾಶಾದಿಗಳಲ್ಲಿ ಅಂತರ್ಯಾಮಿಯಾಗಿದ್ದಾನೆಂದು ಹೇಳಲಾಗಿದೆ.

ಅರ್ಥ -- ಆಕಾಶಾದಿಷು = 'ಆತ್ಮನ ಆಕಾಶಸ್ಸಂಭೂತಃ ಆಕಾಶಾದ್ವಾಯುಃ' ಇತ್ಯಾದಿ ಶ್ರುತಿಯಲ್ಲಿರುವ ಆಕಾಶಾದಿಶಬ್ದಗಳಿಂದ ವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆ. 'ಕಾರ್ಯತ್ವೇ ಸತಿ ಕಾರಣತ್ವಂ' ಎಂಬುದು ಅವಾಂತರಕಾರಣದ ಲಕ್ಷಣ. ಭೂತಾಕಾಶವು ಅವಾಂತರಕಾರಣವೆಂದು ಲೋಕಪ್ರಸಿದ್ಧವಾಗಿದ್ದರೂ, ಇಂತಹ ಆಕಾಶಾದಿಗಳಲ್ಲಿ ಅಂತರ್ಯಾಮಿಯಾಗಿ ನೆಲೆಸಿದವನು ಮಹಾವಿಷ್ಣುವೇ ಆಗಿದ್ದಾನೆ. ಕಾರಣತ್ವೇನ ಚ = ಕಾರ್ಯನು,

ಕಾರಣನೂ ಆದವನು ವಿಷ್ಣುವೇ ಹೊರತು, ಭೂತಾಕಾಶವಲ್ಲ. ಏಕೆಂದರೆ, ಯಥಾ ವ್ಯಪದಿಷ್ಟೋಕ್ತೇಃ = 'ಸ ಯೋಽಕೋಽಶ್ರುತ' ಇತ್ಯಾದಿ ಶ್ರುತಿಯಲ್ಲಿ ಅವಿದಿತತ್ವ ಮೊದಲಾದ ವಿಷ್ಣುವಿನ ಅಸಾಧಾರಣ ಲಕ್ಷಣಗಳನ್ನು ಹೇಳಿ, ಅವನ್ನೇ ಆಕಾಶವೆಂದು 'ಯಮಾಕಾಶೋ ನ ವೇದ' ಇತ್ಯಾದಿ ವಾಕ್ಯಗಳಲ್ಲಿ ಹೇಳಲಾಗಿದೆ. ಆದ್ದರಿಂದ ವಿಷ್ಣು ಪ್ರಧಾನಕಾರಣನಾದಂತೆ ಅವಾಂತಕಾರಣನೂ ಆಗಿದ್ದಾನೆಂದು ಸಿದ್ಧವಾಯಿತು.

॥ ಶ್ರೀವೇದವ್ಯಾಸದೇವರಿಂದ ರಚಿಸಲ್ಪಟ್ಟ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ
ಆಕಾಶಾಧಿಕರಣವು ಸಮಾಪ್ತವಾಯಿತು ॥

ಜಗದ್ಗುರು ಶ್ರೀಮಧ್ವಾಚಾರ್ಯರಿಂದ ವಿರಚಿತವಾದ

ಬ್ರಹ್ಮಸೂತ್ರಭಾಷ್ಯ

ಅವಾಂತರಕಾರಣನಾಗಿದ್ದಾನೆನ್ನಲು ಆಕಾಶಶಬ್ದ ಸಮನ್ವಯ

ब्रह्मसूत्रभाष्यम् — अवान्तरकारणत्वेनापि स एवोच्यत इति वक्ति -

॥ कारणत्वेन चाऽऽकाशादिषु यथाव्यपदिष्टोक्तेः ॥

ಅನುವಾದ - ಆಕಾಶಾದಿಗಳಲ್ಲಿ ಅವಾಂತರಕಾರಣನಾಗಿ ವಿಷ್ಣುವೇ ನೆಲೆಸಿದ್ದಾನೆ. ಆದ್ದರಿಂದ ಆಕಾಶಶಬ್ದದಿಂದ ವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆ ಎಂದು ಸಮರ್ಥಿಸಲು ಸೂತ್ರ ಹೊರಟಿದೆ.

ಪ್ರತಿಪದಾರ್ಥ -- ಈ ಅಧಿಕರಣದಲ್ಲಿ ಅವಾಂತರಕಾರಣವಾಚಕವಾದ ಆಕಾಶ ಮೊದಲಾದ ಶಬ್ದಗಳ ಸಮನ್ವಯವನ್ನು ಮಾಡುತ್ತಿರುವುದರಿಂದ ಶಾಸ್ತ್ರಾದಿಸಂಗತಿಗಳಿರುತ್ತವೆ.

'ತತ್ತು ಸಮನ್ವಯಾತ್' ಎಂಬ ಅಧಿಕರಣದಲ್ಲಿ ಸಕಲಶಬ್ದ ಸಮನ್ವಯ ಪ್ರತಿಜ್ಞೆ ಮಾಡಿದ್ದು, ಯುಕ್ತವಲ್ಲ. ಏಕೆಂದರೆ ಅವಾಂತರ ಕಾರಣವಾಚಕವಾದ ಆಕಾಶಾದಿ ಶಬ್ದಗಳಿಂದ ಬೇರೆ ಪದಾರ್ಥಗಳೇ ಪ್ರತಿಪಾದ್ಯವಾಗುತ್ತವೆ ಹೊರತು, ವಿಷ್ಣುವಲ್ಲ. ವಿಷ್ಣು ಕೇವಲ ಕಾರಣನಾಗಿದ್ದಾನೆ ಹೊರತು, ಕಾರ್ಯತ್ವವು ಅವನಲ್ಲಿ ಬರುವುದಿಲ್ಲ.

ಹೀಗೆ ಹಿಂದಿನ ಅಧಿಕರಣದ ವಾಕ್ಯದ ಜೊತೆ ಸಂಯೋಜನೆ ಮಾಡುತ್ತಾ, ಶ್ರುತ್ಯಾದಿಸಂಗತಿಗಳನ್ನು ವಿಷಯಪೂರ್ವಪಕ್ಷ ಮೊದಲಾದವುಗಳನ್ನು ಸ್ವತಃ ಶಿಷ್ಯಂದಿರೇ ತಿಳಿದುಕೊಳ್ಳುತ್ತಾರೆಂಬ ಅಭಿಪ್ರಾಯದಿಂದ ಸಿದ್ಧಾಂತಸ್ಥಾಪಕವಾದ ಸೂತ್ರಕ್ಕೆ ಅವತಾರಿಕೆಯನ್ನು ನೀಡುತ್ತಿದ್ದಾರೆ –

ಅವಾಂತರಕಾರಣತ್ವೇನಾಪಿ = ಆಕಾಶಾದಿಗಳಲ್ಲಿ ಅವಾಂತರ-ಕಾರಣನಾಗಿಯೂ ಕೂಡ, ಸ ಏವ = ಮಹಾವಿಷ್ಣುವೇ, ಉಚ್ಯತೇ = ಪ್ರತಿಪಾದ್ಯನಾಗಿದ್ದಾನೆ, ಇತಿ = ಹೀಗೆ, ವಕ್ತಿ = ಸೂತ್ರಕಾರರು ವ್ಯಾಖ್ಯಾನ ಮಾಡುತ್ತಿದ್ದಾರೆ.

ವಿಷ್ಣು ಆಕಾಶನೆನ್ನಲು ಕಾರಣ ನಿರೂಪಣೆ

ब्रह्मसूत्रभाष्यम् – आकाशादिष्ववान्तरकारणत्वेन स एव स्थितः । यथाव्यपदिष्टस्यैव परस्य 'य आकाशे तिष्ठन्' इत्यादिना आकाशादिषूक्तेः ।।१।।

।। इति श्रीमदानन्दतीर्थभगवत्पादाचार्यविरचिते ब्रह्मसूत्रभाष्ये आकाशाधिकरणम् ।। ४ ।।

ಅನುವಾದ - ಆಕಾಶಾದಿಗಳಲ್ಲಿ ಅವಾಂತರ ಕಾರಣತ್ವೇನ ಸ್ಥಿತನಾದವನು ಮಹಾವಿಷ್ಣುವೇ ಆಗಿದ್ದಾನೆ. 'ಸ ಯೋ ಅತಃ ಅಶ್ರುತಃ' ಎಂಬುದಾಗಿ ಐತರೇಯದಲ್ಲಿ ವಿಷ್ಣುವನ್ನು ಅಜ್ಞೇಯನನ್ನಾಗಿ ಹೇಳಲಾಗಿದೆ. ಅದರಂತೆ ಬೃಹದಾರಣ್ಯಕದಲ್ಲಿಯೂ 'ಯ ಆಕಾಶೇ ತಿಷ್ಠನ್' ಎಂದು ಅವೇದ್ಯನಾದವನನ್ನು ಆಕಾಶದಲ್ಲಿರುವನನ್ನಾಗಿ ಹೇಳಲಾಗಿದೆ. ಆದ್ದರಿಂದ ಅವಾಂತರಕಾರಣವಾದ ಆಕಾಶಾದಿಶಬ್ದಗಳಿಂದ ವಾಚ್ಯನಾದವನು ಮಹಾವಿಷ್ಣುವೇ ಆಗಿದ್ದಾನೆಂದು ಸಿದ್ಧವಾಯಿತು.

ಪ್ರತಿಪದಾರ್ಥ --ಸೂತ್ರವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ –

ಆಕಾಶಾದಿಷು = ಆಕಾಶಾದಿಗಳಲ್ಲಿ, ಅವಾಂತಕಾರಣತ್ವೇನ = ಅವಾಂತರ

ಕಾರಣರೂಪನಾಗಿ, ಸ ಏವ = ಮಹಾವಿಷ್ಣುವೇ, ಸ್ಥಿತಃ = ನೆಲೆಸಿದ್ದಾನೆ. ಯಥಾ ವ್ಯಪದಿಷ್ಟಸ್ಯೈವ = 'ಸ ಯೋ ಅತಃ ಅಶ್ರುತಃ' ಐತರೇಯದಲ್ಲಿ ಯಾವ ಗುಣಗಳಿಂದ ವಿಷ್ಣುವು ಹೇಳಲ್ಪಟ್ಟಿದ್ದಾನೋ, ಅದೇ ಗುಣಗಳುಳ್ಳವನನ್ನಾಗಿ, ಪರಸ್ಯ = ವಿಷ್ಣುವು, ಯ ಆಕಾಶೇ ತಿಷ್ಠನ್ ಇತ್ಯಾದಿನಾ = ಬೃಹದಾರಣ್ಯಕದಲ್ಲಿರುವ ಈ ಶ್ರುತಿಯಿಂದಲೂ, ಆಕಾಶಾದಿಷು = ಆಕಾಶಾದಿಗಳಲ್ಲಿ ಅಂತರ್ಯಾಮಿಯಾಗಿ ನೆಲೆಸಿದ್ದಾನೆಂದು, ಉಕ್ತೇಃ = ಹೇಳಲ್ಪಟ್ಟಿದೆ.

॥ ಇಲ್ಲಿಗೆ ಶ್ರೀಪದಾನಂದತೀರ್ಥಭಗವತ್ಪಾದಾಚಾರ್ಯರಿಂದ ವಿರಚಿತವಾದ ಬ್ರಹ್ಮಸೂತ್ರಭಾಷ್ಯದ ಕನ್ನಡಾನುವಾದದಲ್ಲಿ ಆಕಾಶಾಧಿಕರಣವು ಸಮಾಪ್ತವಾಯಿತು ॥

ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ
ಸತ್ತರ್ಕದೀಪಾವಳಿ

ಸ್ವತಂತ್ರನಲ್ಲಿ ಕಾರ್ಯತ್ವ ಹೇಗೆ ?

सत्तर्कदीपावलिः – ननु भवतु भगवतः प्रकृत्यादिषु तत् तच्छब्दपरममुख्यार्थत्वं नानात्वं तदतिरिक्तत्वं च यद्यप्याकाशाद्वायुरित्याद्यवान्तर-कारणत्वेनोच्यमानानि भूतानीत्येव । तेषामेव आत्मन आकशः सम्भूत इति कार्यत्वेनोच्यमानत्वात् । स्वतन्त्रस्य कार्यत्वविरोधादितीमं पूर्वपक्षमपाकरोति – अवान्तरकारणत्वेत्यादिना ।

ಪ್ರಕೃತ್ಯಾದಿಗಳಲ್ಲಿ ಆಯಾ ಶಬ್ದಗಳಿಂದ ಪ್ರತಿಪಾದ್ಯನಾದವನು ಭಗವಂತನೇ ಆಗಿದ್ದಾನೆಂದು, ಪರಮಮುಖ್ಯಾರ್ಥತ್ವೇನ ಪ್ರತಿಪಾದ್ಯನಾಗಿದ್ದಾನೆಂದು ಅನೇಕ ರೂಪಗಳುಳ್ಳವನಾಗಿದ್ದಾನೆಂದು

ಹೀಗೆ ಹಿಂದಿನ ಅಧಿಕರಣದ ವಾಕ್ಯದ ಜೊತೆ ಸಂಯೋಜನೆ ಮಾಡುತ್ತಾ, ಶ್ರುತ್ಯಾದಿಸಂಗತಿಗಳನ್ನು ವಿಷಯಪೂರ್ವಪಕ್ಷ ಮೊದಲಾದವುಗಳನ್ನು ಸ್ವತಃ ಶಿಷ್ಯಂದಿರೇ ತಿಳಿದುಕೊಳ್ಳುತ್ತಾರೆಂಬ ಅಭಿಪ್ರಾಯದಿಂದ ಸಿದ್ಧಾಂತಸ್ಥಾಪಕವಾದ ಸೂತ್ರಕ್ಕೆ ಅವತಾರಿಕೆಯನ್ನು ನೀಡುತ್ತಿದ್ದಾರೆ –

ಅವಾಂತರಕಾರಣತ್ವೇನಾಪಿ = ಆಕಾಶಾದಿಗಳಲ್ಲಿ ಅವಾಂತರ-ಕಾರಣನಾಗಿಯೂ ಕೂಡ, ಸ ಏವ = ಮಹಾವಿಷ್ಣುವೇ, ಉಚ್ಯತೇ = ಪ್ರತಿಪಾದ್ಯನಾಗಿದ್ದಾನೆ, ಇತಿ = ಹೀಗೆ, ವಕ್ತಿ = ಸೂತ್ರಕಾರರು ವ್ಯಾಖ್ಯಾನ ಮಾಡುತ್ತಿದ್ದಾರೆ.

ವಿಷ್ಣು ಆಕಾಶನೆನ್ನಲು ಕಾರಣ ನಿರೂಪಣೆ

ಬ್ರಹ್ಮಸೂತ್ರಭಾಷ್ಯಮ್ — ಆಕಾಶಾದಿಷ್ವವಾನ್ತರಕಾರಣತ್ವೇನ ಸ ಏವ ಸ್ಥಿತಃ । ಯಥಾವ್ಯಪದಿಷ್ಟಸ್ಯೈವ ಪರಸ್ಯ 'ಯ ಆಕಾಶೇ ತಿಷ್ಠನ್' ಇತ್ಯಾದಿನಾ ಆಕಾಶಾದಿಷೂಕ್ತೇಃ ।।೧।।

।। ಇತಿ ಶ್ರೀಮದಾನನ್ದತೀರ್ಥಭಗವತ್ಪಾದಾಚಾರ್ಯವಿರಚಿತೇ ಬ್ರಹ್ಮಸೂತ್ರಭಾಷ್ಯೇ ಆಕಾಶಾಧಿಕರಣಮ್ ।। ೪ ।।

ಅನುವಾದ - ಆಕಾಶಾದಿಗಳಲ್ಲಿ ಅವಾಂತರ ಕಾರಣತ್ವೇನ ಸ್ಥಿತನಾದವನು ಮಹಾವಿಷ್ಣುವೇ ಆಗಿದ್ದಾನೆ. 'ಸ ಯೋ ಅತಃ ಅಶ್ರುತಃ' ಎಂಬುದಾಗಿ ಐತರೇಯದಲ್ಲಿ ವಿಷ್ಣುವನ್ನು ಅಜ್ಞೇಯನನ್ನಾಗಿ ಹೇಳಲಾಗಿದೆ. ಅದರಂತೆ ಬೃಹದಾರಣ್ಯಕದಲ್ಲಿಯೂ 'ಯ ಆಕಾಶೇ ತಿಷ್ಠನ್' ಎಂದು ಅವೇದ್ಯನಾದವನನ್ನು ಆಕಾಶದಲ್ಲಿರುವನನ್ನಾಗಿ ಹೇಳಲಾಗಿದೆ. ಆದ್ದರಿಂದ ಅವಾಂತರಕಾರಣವಾದ ಆಕಾಶಾದಿಶಬ್ದಗಳಿಂದ ವಾಚ್ಯನಾದವನು ಮಹಾವಿಷ್ಣುವೇ ಆಗಿದ್ದಾನೆಂದು ಸಿದ್ಧವಾಯಿತು.

ಪ್ರತಿಪದಾರ್ಥ --ಸೂತ್ರವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ –

ಆಕಾಶಾದಿಷು = ಆಕಾಶಾದಿಗಳಲ್ಲಿ, ಅವಾಂತಕಾರಣತ್ವೇನ = ಅವಾಂತರ

ಕಾರಣರೂಪನಾಗಿ, ಸ ಏವ = ಮಹಾವಿಷ್ಣುವೇ, ಸ್ಥಿತಃ = ನೆಲೆಸಿದ್ದಾನೆ. ಯಥಾ ವ್ಯಪದಿಷ್ಟಸ್ಯೈವ = 'ಸ ಯೋ ಅತಃ ಅಶ್ರುತಃ' ಐತರೇಯದಲ್ಲಿ ಯಾವ ಗುಣಗಳಿಂದ ವಿಷ್ಣುವು ಹೇಳಲ್ಪಟ್ಟಿದ್ದಾನೋ, ಅದೇ ಗುಣಗಳುಳ್ಳವನನ್ನಾಗಿ, ಪರಸ್ಯ = ವಿಷ್ಣುವು, ಯ ಆಕಾಶೇ ತಿಷ್ಠನ್ ಇತ್ಯಾದಿನಾ = ಬೃಹದಾರಣ್ಯಕದಲ್ಲಿರುವ ಈ ಶ್ರುತಿಯಿಂದಲೂ, ಆಕಾಶಾದಿಷು = ಆಕಾಶಾದಿಗಳಲ್ಲಿ ಅಂತರ್ಯಾಮಿಯಾಗಿ ನೆಲೆಸಿದ್ದಾನೆಂದು, ಉಕ್ತೇಃ = ಹೇಳಲ್ಪಟ್ಟಿದೆ.

॥ ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ವಿರಚಿತವಾದ ಬ್ರಹ್ಮಸೂತ್ರಭಾಷ್ಯದ ಕನ್ನಡಾನುವಾದದಲ್ಲಿ ಆಕಾಶಾಧಿಕರಣವು ಸಮಾಪ್ತವಾಯಿತು ॥

ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ
ಸತ್ತರ್ಕದೀಪಾವಳಿ

ಸ್ವತಂತ್ರನಲ್ಲಿ ಕಾರ್ಯತ್ವ ಹೇಗೆ ?

सत्तर्कदीपावलिः – ननु भवतु भगवतः प्रकृत्यादिषु तत् तच्छब्दपरममुख्यार्थत्वं नानात्वं तदतिरिक्तत्वं च यद्यप्याकाशाद्वायुरित्याद्यवान्तर-कारणत्वेनोच्यमानानि भूतानीत्येव । तेषामेव आत्मन आकशः सम्भूत इति कार्यत्वेनोच्यमानत्वात् । स्वतन्त्रस्य कार्यत्वविरोधादितीमं पूर्वपक्षमपाकरोति – अवान्तरकारणत्वेत्यादिना ।

ಪ್ರಕೃತ್ಯಾದಿಗಳಲ್ಲಿ ಆಯಾ ಶಬ್ದಗಳಿಂದ ಪ್ರತಿಪಾದ್ಯನಾದವನು ಭಗವಂತನೇ ಆಗಿದ್ದಾನೆಂದು, ಪರಮಮುಖ್ಯಾರ್ಥತ್ವೇನ ಪ್ರತಿಪಾದ್ಯನಾಗಿದ್ದಾನೆಂದು ಅನೇಕ ರೂಪಗಳುಳ್ಳವನಾಗಿದ್ದಾನೆಂದು

ಹಾಗೂ ಆಕಾಶಾದಿಗಳಿಗಿಂತ ಅತಿರಿಕ್ತನಾಗಿದ್ದಾನೆಂದು ಒಪ್ಪೋಣ. ಆದರೆ 'ಆಕಾಶಾದ್ವಾಯುಃ' ಇತ್ಯಾದಿ ಶ್ರುತಿಗಳಲ್ಲಿರುವ ಅವಾಂತರಕಾರಣತ್ವೇನ ಪ್ರತಿಪಾದ್ಯವಾದ ಆಕಾಶಾದಿಗಳೆಂದರೆ ಪರಮಾತ್ಮನಾಗಲು ಸಾಧ್ಯವಿಲ್ಲ. ಭೂತಪದಾರ್ಥಗಳೇ ಆಗಬೇಕು. ಏಕೆಂದರೆ 'ಆತ್ಮನಃ ಆಕಾಶಃ ಸಂಭೂತಃ' ಎಂಬುದಾಗಿ ಕಾರ್ಯತ್ವೇನ ಪ್ರತಿಪಾದ್ಯವಾಗಿವೆ. ಸ್ವತಂತ್ರನಾದವನಿಗೆ ಕಾರ್ಯತ್ವವು ವಿರುದ್ಧವಾಗುತ್ತದೆ. ಈ ಪೂರ್ವಪಕ್ಷವನ್ನು ನಿರಾಕರಣೆ ಮಾಡಲು ಅವಾಂತರಕಾರಣತ್ವೇನ ಇತ್ಯಾದಿ ಭಾಷ್ಯವು ಹೊರಟಿದೆ.

'ಅನುಕ್ತಾವಪಿ ಮುಖ್ಯಾರ್ಥಸಂಭವೇ ಕಿಮುಕ್ತೌ'

सत्तर्कदीपावलिः – यः प्रतिपुरुषं प्रकृति-प्राण-चक्षुः-श्रोत्रान्नमनःसु नानाभावेन तदतिरेकेण च तदाश्रयत्वेन स्थितः स एवाकाशादिष्ववान्तरकारणत्वेन उच्यमानः स्थितः स्वतः सम्पूर्णशब्दप्रवृत्तिनिमित्तनियामकत्वेन च यथा व्यपदिष्टस्य व्यपदेशमात्रपरममुख्यार्थत्वस्य परमात्मनो य आकाशे तिष्ठन्नित्यादिना आकाशवाय्वादिभूततदभिमानिषु यः प्राणे तिष्ठन्नित्यादिना । अतः प्राणचक्षुरादिषु चोक्तेः । अनुक्तावपि मुख्यार्थसम्भवेन स एव ग्राह्यः । किमुक्ताविति भावः । सम्भूतत्वं तु भगवतः तत्तत्क्रियाप्रवर्तकत्वेन प्रादुर्भावादित्यनवद्यम् ।।

।। इति कारणत्वेनाकाशाधिकरणम् ।।

ಯಾವ ಪರಮಾತ್ಮನು ಪ್ರತಿಯೊಬ್ಬರಲ್ಲಿಯೂ ಪ್ರಕೃತಿ, ಪ್ರಾಣ, ಚಕ್ಷುಸ್ಸು, ಶ್ರೋತ್ರ, ಅನ್ನ, ಮನಸ್ಸು ಮೊದಲಾದ ಅನೇಕ ರೂಪಗಳಿಂದ ನೆಲಸಿದ್ದಾನೋ, ಮತ್ತು ಆಯಾ ಪದಾರ್ಥಗಳಿಗಿಂತ ಅತಿರಿಕ್ತನಾಗಿದ್ದು ಅವುಗಳಿಗೆಲ್ಲಾ ಆಶ್ರಯನಾಗಿದ್ದಾನೋ, ಅವನೇ ಆಕಾಶಾದಿಗಳಲ್ಲೂ ಕೂಡ ನೆಲಸಿ ಅವಾಂತರಕಾರಣತ್ವೇನ ಪ್ರತಿಪಾದ್ಯನಾಗುತ್ತಾನೆ. ಶಬ್ದಪ್ರವೃತ್ತಿನಿಮಿತ್ತವು ಇವನಲ್ಲಿ ಸಂಪೂರ್ಣವಾಗಿರುತ್ತದೆ. ಮತ್ತು ಆ ಪ್ರವೃತ್ತಿನಿಮಿತ್ತಗಳಿಗೆ ನಿಯಾಮಕನು ಆಗಿದ್ದಾನೆ. ಇಂಥ

ಪರಮಮುಖ್ಯಾರ್ಥನಾದ ಪರಮಾತ್ಮನನ್ನೇ 'ಆಕಾಶೇ ತಿಷ್ಠನ್' ಇತ್ಯಾದಿ ಶ್ರುತಿಯು ಆಕಾಶ, ವಾಯು ಮೊದಲಾದ ಭೂತಾಭಿಮಾನಿದೇವತೆಗಳಲ್ಲಿ ನೆಲಸಿದ್ದಾನೆಂದು ಹೇಳುತ್ತಿದೆ.

ಪರಮಾತ್ಮನು ಪರಮಮುಖ್ಯವೃತ್ತಿಯಿಂದ ಪ್ರತಿಪಾದ್ಯನಾಗಿದ್ದಾನೆಂದು ಹೇಳದಿದ್ದರೂ ಕೂಡ ಅವನನ್ನೇ ವಿವಕ್ಷಿಸಬೇಕು. ಹೀಗಿರುವಾಗ 'ಯ ಆಕಾಶೇ ತಿಷ್ಠನ್' ಇತ್ಯಾದಿ ಶ್ರುತಿಯು ಸ್ಪಷ್ಟವಾಗಿ ಆಕಾಶಾದಿಗಳಲ್ಲಿ ನೆಲಸಿದ್ದಾನೆಂದು ಹೇಳುತ್ತಿದೆ. ಕಾರ್ಯತ್ವದ ವಿರೋಧ ಬರುತ್ತದಲ್ಲವೇ? ಎಂಬ ಪ್ರಶ್ನೆಗೂ ಈಗ ಅವಕಾಶವಿಲ್ಲ. ತತ್ತತ್‌ಕ್ರಿಯಾಪ್ರವರ್ತಕತ್ವೇನ ಆಯಾ ರೂಪಗಳಲ್ಲಿ ಪ್ರಾದುರ್ಭೂತನಾಗುವುದರಿಂದ ಕಾರ್ಯವು ಇವನಲ್ಲಿ ಯುಕ್ತವಾಗುತ್ತದೆ.

॥ ಇಲ್ಲಿಗೆ ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ ಸತ್ತರ್ಕದೀಪಾವಳಿಯಲ್ಲಿ
ಆಕಾಶಾಧಿಕರಣದ ಕನ್ನಡಾನುವಾದವು ಸಮಾಪ್ತವಾಯಿತು ॥

ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ

ತತ್ತ್ವಪ್ರದೀಪ

ಆಕಾಶಶಬ್ದದಿಂದ ವಿಷ್ಣುವು ಹೇಗೆ ಪ್ರತಿಪಾದ್ಯನಾಗುವನು ?

तत्वप्रदीपः – ''आत्मन आकाशः सम्भूतः । आकाशाद्वायुः'' इत्यादाववान्तरकारणादीनामकाशादीनामुत्पत्तिरुच्यते । परस्य तदसम्भवात् तत् शब्दवाच्यत्वं न युक्तमित्यत आह – अवान्तरकारणत्वेनापीत्यादि ।

'ಆತ್ಮನ ಆಕಾಶಃ ಸಂಭೂತಃ ಆಕಾಶಾದ್ವಾಯುಃ' ಆತ್ಮನಿಂದ ಆಕಾಶ ಹುಟ್ಟಿತು. ಆಕಾಶದಿಂದ ವಾಯು ಹುಟ್ಟಿತು. ಎಂಬುದಾಗಿ ತೈತ್ತಿರೀಯೋಪನಿಷತ್ತು ಹೇಳುತ್ತಿದೆ. ಆತ್ಮಶಬ್ದಕ್ಕೆ ವಿಷ್ಣುವೆಂದರ್ಥ. ಅವನಿಂದ ಆಕಾಶ ಹುಟ್ಟಿತು ಎಂದು ಹೇಳಿದ ಮೇಲೆ, ಪುನಃ ಅದೇ ಆಕಾಶಶಬ್ದದಿಂದ ವಿಷ್ಣು ಪ್ರತಿಪಾದ್ಯನಾಗುವುದು ಯುಕ್ತವಾಗುವುದಿಲ್ಲ. ಈ ಪ್ರಶ್ನೆಗೆ 'ಅವಾಂತರಕಾರಣತ್ವೇಪಿ' ಇತ್ಯಾದಿ ಭಾಷ್ಯದಿಂದ ಉತ್ತರಿಸುತ್ತಿದ್ದಾರೆ.

ವಿವರಣೆ - 'ನಾಮಾನಿ ಸರ್ವಾಣಿ ಯಮಾವಿಶಂತಿ' ಎಂಬ ಶ್ರುತಿಯು ಸಕಲಶಬ್ದಗಳಿಂದ ವಿಷ್ಣುವೇ ಪ್ರತಿಪಾದ್ಯನೆಂದು ಹೇಳುತ್ತಿದೆ. ಆದರೆ 'ಆಕಾಶಾದ್ವಾಯುಃ' ಎಂಬಲ್ಲಿ ಆಕಾಶಶಬ್ದಕ್ಕೆ ವಿಷ್ಣು ಎಂಬರ್ಥವು ಅಸಂಭಾವಿತವಾಗಿದೆ. ಆದ್ದರಿಂದ ಸಮನ್ವಯಸೂತ್ರದಲ್ಲಿ ಹೇಳಿದ ಸಿದ್ಧಾಂತವು ಅಯುಕ್ತವೆಂಬುದು ಈ ಅಧಿಕರಣದ ಪೂರ್ವಪಕ್ಷ. ಆಕಾಶಶಬ್ದದಿಂದ ಭೂತಾಕಾಶ ಹೇಗೆ ಪ್ರತಿಪಾದ್ಯವಾಗುತ್ತದೋ, ಅದರಂತೆ ಮಹಾವಿಷ್ಣುವೂ ಕೂಡ ನಿಯಾಮಕನಾಗಿ ಪ್ರತಿಪಾದ್ಯನಾಗುತ್ತಾನೆಂಬುದು ಅಧಿಕರಣದ ಸಿದ್ಧಾಂತ. ಆತ್ಮ ಎಂಬ ಭಗವಂತನ ರೂಪದಿಂದ ಆಕಾಶ ಎಂಬ ಭಗವಂತನ ಮತ್ತೊಂದು ರೂಪವು ಅಭಿವ್ಯಕ್ತವಾಯಿತು ಎಂಬುದಾಗಿ 'ಆತ್ಮನ ಆಕಾಶಃ ಸಂಭೂತಃ' ಎಂಬ ಶ್ರುತಿಯು ಹೇಳುತ್ತಿದ. ಈ ಆಕಾಶ ಎಂಬ ರೂಪದಿಂದ ಭಗವಂತನು ಅವಾಂತರಕಾರಣನಾಗುತ್ತಾನೆ. ಮತ್ತು ಆತ್ಮ ಎಂಬ ರೂಪದಿಂದ ಮುಖ್ಯಕಾರಣನೂ ಆಗಿದ್ದಾನೆ.

ಅವಾಂತರಕಾರಣನೂ ಆಗಿರುವುದರಿಂದ ಆಕಾಶನೆನಿಸುವನು

तत्वप्रदीपः – आकाशादिषु वाय्वादीनामवान्तरकारणत्वेनाऽकाशादिशब्द वाच्यः स एव स्थितः ।। ''स योऽतोऽश्रुतः'' ''एष आत्मेति होवाचैतदमृतम्'' इत्यादौ यत्प्रकारः परो व्यपदिष्ट तत्प्रकारस्यैव परस्य य आकाशे तिष्ठन्' इत्यादि वाक्यैराकाशादिषु स्थितत्वेनोक्त्वात् । नचोत्पत्तिश्रुतिविरोधः । आकाश ादिरूपाद्वाय्वादिस्थरूपस्य व्यक्तेर्विवक्षितत्वात्।।

।। इति आकाशाधिकरणम् ।।

ಆಕಾಶಾದಿಗಳಲ್ಲಿ ನೆಲೆಸಿ ವಾಯು ಮೊದಲಾದವುಗಳಿಗೆ ವಿಷ್ಣುವು ಅವಾಂತರಕಾರಣನಾಗಿದ್ದಾನೆ ಆದ್ದರಿಂದಲೇ ಆಕಾಶಾದಿ ಶಬ್ದವಾಚ್ಯನಾಗುತ್ತಾನೆ. 'ಸ ಯೊऽತೋऽಶ್ರುತಃ' 'ಏಷ ಆತ್ಮೇತಿ ಹೋವಾಚೈತದಮೃತಮ್' ಎಂಬ ಐತರೇಯೋಪನಿಷತ್ತಿನ ಮಾತು ವಿಷ್ಣು ಆಕಾಶದಲ್ಲಿ ನಿಯಾಮಕನಾಗಿ ನೆಲಸಿದ್ದಾನೆನ್ನಲು ಆಧಾರವಾಗಿದೆ. ಏಕೆಂದರೆ ಅಶ್ರುತತ್ವ, ಅವೇದ್ಯತ್ವ ಎಂಬ ಗುಣಗಳಿರುವುದು ಮಹಾವಿಷ್ಣುವಿನಲ್ಲಿ ಮಾತ್ರ. ಹೀಗೆ ಯಾರು ಅವೇದ್ಯತ್ವಾದಿ ಪ್ರಕಾರಗಳಿಂದ

ವ್ಯಪದಿಷ್ಟನಾಗಿದ್ದಾನೋ, ಅವನೇ ಆಕಾಶದಲ್ಲಿ ನೆಲೆಸಿದ್ದಾನೆಂದು 'ಯ ಆಕಾಶೇ ತಿಷ್ಠನ್' ಇತ್ಯಾದಿ ವಾಕ್ಯಗಳಿಂದ ತಿಳಿಯುತ್ತಿದೆ. ಹೀಗೆ ಹೇಳಿದಾಗ ಪರಮಾತ್ಮನಿಗೆ ಉತ್ಪತ್ತಿ ಇಲ್ಲ ಎಂದು ಹೇಳುವ ಶ್ರುತಿಯ ವಿರೋಧ ಬರುತ್ತದಲ್ಲವೇ? ಎಂದು ಪ್ರಶ್ನಿಸಬಾರದು. ಆಕಾಶದಲ್ಲಿರುವ ಆಕಾಶ ಎಂಬ ರೂಪದಿಂದ ವಾಯುವಿನಲ್ಲಿ ವಾಯು ಎಂಬ ರೂಪದಿಂದ ಅಭಿವ್ಯಕ್ತನಾಗುತ್ತಾನೆಂಬುದು ಶ್ರುತಿಯ ಅರ್ಥ.

॥ ಇಲ್ಲಿಗೆ ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ ತತ್ವಪ್ರದೀಪದಲ್ಲಿ
ಆಕಾಶಾಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

ಶ್ರೀಮಜ್ಜಯತೀರ್ಥಭಿಕ್ಷುಗಳಿಂದ ವಿರಚಿತವಾದ

ತತ್ವಪ್ರಕಾಶಿಕಾ

'ಉತ್ಪತ್ತಿಮತ್ವ' ಎಂಬ ಲಿಂಗದಿಂದ ಶಬ್ದಸಮನ್ವಯ

अत्रोत्पत्तिमत्त्वलिङ्गेनान्यत्रैव प्रसिद्धानामाकाशादिशब्दानां परमात्मनि समन्वयप्रतिपादनादस्ति शास्त्रादिसङ्गतिः ।

ಈ ಆಕಾಶಾಧಿಕರಣದಲ್ಲಿ 'ಉತ್ಪತ್ತಿಮತ್ವ' ಎಂಬ ಲಿಂಗದಿಂದ ಅನ್ಯತ್ರೈವಪ್ರಸಿದ್ಧವಾದ ಆಕಾಶ ಮೊದಲಾದ ಶಬ್ದಗಳನ್ನು ಪರಮಾತ್ಮನಲ್ಲಿ ಸಮನ್ವಯ ಮಾಡುತ್ತಿರುವ ಕಾರಣ, ಶಾಸ್ತ್ರಸಂಗತಿ, ಅಧ್ಯಾಯಸಂಗತಿ ಹಾಗೂ ಪಾದಸಂಗತಿಗಳು ಇರುತ್ತವೆ.

ಸಕಲಶಬ್ದಗಳ ನಡುವೆ ಆಕಾಶಶಬ್ದವೂ ಸೇರಿದೆ

तत्वप्रकाशिका – समन्वयसूत्रे सर्वशब्दानां परमात्मवाचित्वमुक्तम् । सर्वमध्यपतितश्चाकाशादिशब्दास्तैत्तिरीयादिश्रुतौ पठ्यन्ते –

ಸಮನ್ವಯಸೂತ್ರದಲ್ಲಿ ಸಕಲ ಶಬ್ದಗಳು ಪರಮಾತ್ಮವಾಚಕಗಳಾಗಿವೆಯೆಂದು ಪ್ರತಿಜ್ಞೆ ಮಾಡಲಾಗಿದೆ. ಸಕಲ ಶಬ್ದಗಳ ಮಧ್ಯದಲ್ಲಿ 'ಆಕಾಶ' ಮೊದಲಾದ ಶಬ್ದಗಳು ತೈತ್ತಿರೀಯಶ್ರುತಿಯಲ್ಲಿ ಪಠಿತವಾಗಿವೆ.

ಅಧಿಕರಣದ ವಿಷಯವಾಕ್ಯ

तत्वप्रकाशिका – 'आत्मन आकाशः सम्भूतः, आकाशाद्वायुः, वायोरग्निः, अग्नेरापः, अद्भ्यः पृथिवी, पृथिव्या ओषधयः, ओषधीभ्योऽन्नम्, अन्नात् पुरुषः' इति ।

'ಆತ್ಮನ ಆಕಾಶಃ ಸಂಭೂತಃ, ಆಕಾಶಾದ್ವಾಯುಃ, ವಾಯೋರಗ್ನಿಃ, ಅಗ್ನೇರಾಪಃ, ಅದ್ಭ್ಯಃ, ಪೃಥಿವೀ, ಪೃಥಿವ್ಯಾ ಓಷಧಯಃ, ಓಷಧೀಭ್ಯೋಽನ್ನಮ್, ಅನ್ನಾತ್‌ಪುರುಷಃ' ಆತ್ಮನಿಂದ ಆಕಾಶವು, ಆಕಾಶದಿಂದ ವಾಯು, ವಾಯುವಿನಿಂದ ಅಗ್ನಿ, ಅಗ್ನಿಯಿಂದ ನೀರು, ನೀರಿನಿಂದ ಭೂಮಿ, ಭೂಮಿಯಿಂದ ಓಷಧಿಗಳು, ಓಷಧಿಗಳಿಂದ ಅನ್ನವು, ಅನ್ನದಿಂದ ಪುರುಷನ ಸೃಷ್ಟಿಯು ಆಗಿರುತ್ತದೆಂಬುದು ಈ ಅಧಿಕರಣದ ವಿಷಯವಾಕ್ಯ.

ಆಕಾಶ ಎಂದರೆ ವಿಷ್ಣುವೋ? ಬೇರೆ ಪದಾರ್ಥವೋ?

तत्वप्रकाशिका – तद्वाच्यस्य विष्णोरन्यत्वे न तस्याशेषशास्त्रयोनित्वं सम्भवतीत्यवश्यं निर्धार्यता । तदाकाशादिशब्दवाच्यं विषयः । विष्णुरन्यद्वेति सन्देहः । समन्वयसूत्रमन्यत्रैव प्रसिद्धिश्च सन्देहबीजम् । न विष्णुरिति पूर्वः पक्षः ।

ಈ ಆಕಾಶಾದಿ ಶಬ್ದಗಳ ಮುಖ್ಯಾರ್ಥ ವಿಷ್ಣುವಿಗಿಂತ ಬೇರೆಯೇ ಆದರೆ ಸಮನ್ವಯಸೂತ್ರವು ಅಯುಕ್ತವಾಗುತ್ತದೆ. ಸಕಲ ಶಾಸ್ತ್ರಗಳು ಪರಮಾತ್ಮನ ವಿಷಯದಲ್ಲಿ ಪ್ರಮಾಣವಾಗಿವೆ ಎಂಬುದು ನಿರ್ಧಾರವಾಗುವುದಿಲ್ಲ. ಆದ್ದರಿಂದ ಇಂತಹ ಆಕಾಶಾದಿಶಬ್ದಗಳು ಯಾರನ್ನು ಹೇಳುತ್ತವೆ ಎಂಬುದನ್ನು ಅವಶ್ಯವಾಗಿ ನಿರ್ಧಾರ ಮಾಡಲೇ ಬೇಕು. ಅಂತಹ ಆಕಾಶಾದಿ ಶಬ್ದಗಳಿಂದ ವಾಚ್ಯವಾದ ಪದಾರ್ಥವೇ ಈ ಅಧಿಕರಣದ ವಿಷಯವಾಗಿದೆ. ವಿಷ್ಣುವೋ ಅಥವಾ ಬೇರೆ

ಪದಾರ್ಥವೋ ? ಎಂಬುದು ಸಂದೇಹ. ಸಮನ್ವಯಸೂತ್ರ ಹಾಗೂ ಅನ್ಯತ್ರಪ್ರಸಿದ್ಧಿಯು ಸಂದೇಹಬೀಜ. ವಿಷ್ಣು ಆಕಾಶಶಬ್ದದಿಂದ ಪ್ರತಿಪಾದ್ಯನಲ್ಲ ಎಂಬುದು ಪೂರ್ವಪಕ್ಷ.

ಆತ್ಮನಿಂದ ಹುಟ್ಟಿದ್ದು ಆಕಾಶ

तत्वप्रकाशिका – आकाशादीनां आत्मादिकार्यत्वश्रवणात्; परमात्मनश्च कार्यत्वायोगात् । 'न जायते म्रियते' इत्यादेः ।

ಆಕಾಶಾದಿ ಪದಾರ್ಥಗಳು ಆತ್ಮನಿಂದ ಹುಟ್ಟವೆ ಎಂದು ಶ್ರುತಿಯು ಹೇಳುತ್ತಿದೆ. ಮತ್ತು ಪರಮಾತ್ಮನು ಯಾರಿಂದಲೂ ಕೂಡ ಹುಟ್ಟಲು ಸಾಧ್ಯವಿಲ್ಲ. ಏಕೆಂದರೆ 'ನ ಜಾಯತೇ ಮ್ರಿಯತೇ' ಎಂಬ ಗೀತಾವಾಕ್ಯವು ಪರಮಾತ್ಮನು ಸರ್ವಥಾ ಹುಟ್ಟಲಾರ ಎಂದು ಹೇಳುತ್ತಿದೆ.

ಒಬ್ಬನಲ್ಲಿಯೇ ಕಾರ್ಯಕಾರಣಭಾವ ವಿರುದ್ಧ

तत्वप्रकाशिका – यदा तु भगवति कार्यत्वमेवायुक्तं तदा स्वस्यैव कार्यकारणभावो लोकेऽप्यसम्भावितो नितरां विरुद्धः स्यात् ।

ಯಾವಾಗ ವಿಷ್ಣುವಿಗೆ ಕಾರ್ಯತ್ವವು ಅಯುಕ್ತವಾಗುತ್ತದೋ, ಆವಾಗ ಲೋಕದಲ್ಲಿ ಅತ್ಯಂತ ಅಸಂಭಾವಿತವಾದ ಒಬ್ಬನೇ ವ್ಯಕ್ತಿಯಲ್ಲಿ ಕಾರ್ಯಕಾರಣಭಾವವು ಅತ್ಯಂತ ವಿರುದ್ಧವಾಗುತ್ತದೆ.

ತದಧೀನತ್ವಲಿಂಗದಿಂದ ವಿಷ್ಣುವಿನಲ್ಲಿ ಕೂಡುವುದಿಲ್ಲ

तत्वप्रकाशिका – न च आकाशादिसम्भवस्य तदधीनत्वेन सम्भूतशब्दोपपत्तिः। सुतोत्पत्तौ जनके जातशब्दप्रयोगादर्शनात् ।

ಆಕಾಶಾದಿ ಪದಾರ್ಥಗಳ ಉತ್ಪತ್ತಿಯು ವಿಷ್ಣುವಿನ ಅಧೀನವಾದ್ದರಿಂದ 'ಸಂಭೂತಃ' ಎಂಬ ಶಬ್ದವು ಅವನಲ್ಲಿ ಯುಕ್ತವಾಗುತ್ತದೆಂದು ಆಕ್ಷೇಪ ಮಾಡಬಾರದು. ಏಕೆಂದರೆ ಮಗನು ಹುಟ್ಟಿದಾಗ ತಂದೆಯು ಹುಟ್ಟಿದನೆಂದು ಹೇಳುವುದು ಎಲ್ಲಿಯೂ ಕಂಡಿಲ್ಲ.

ಪೂರ್ವಪಕ್ಷದ ಉಪಸಂಹಾರ

तत्वप्रकाशिका – निमित्तविशेषादर्शनाच्च । वाक्ययोजनानुपपत्तेश्च ।

तस्मादात्मशब्दोदितस्य मुख्यकारणस्यैव विष्णुत्वं, न त्ववान्तरकारणानामाकाशादीनामिति न समन्वयसूत्रं युक्तमिति ।

ಮತ್ತು ಪರಮಾತ್ಮನೇ 'ಆಕಾಶಃ ಸಂಭೂತಃ' ಇತ್ಯಾದಿ ವಾಕ್ಯಗಳಿಂದ ಪ್ರತಿಪಾದ್ಯನೆನ್ನಲು ಯಾವುದೇ ವಿಶೇಷ ಕಾರಣವಿಲ್ಲರುವುದಿಲ್ಲ. ಮತ್ತು 'ಆತ್ಮನಃ ಆಕಾಶಃ ಸಂಭೂತಃ' ಇತ್ಯಾದಿ ವಾಕ್ಯದಲ್ಲಿ ಉಕ್ತವಾಗಿರುವ ಕ್ರಮವೂ ಅನುಪಪನ್ನವಾಗುತ್ತದೆ. ಆವಾಗ ವಾಕ್ಯಯೋಜನೆಯು ಅನುಪಪನ್ನವಾಗುತ್ತದೆ. ಆದ್ದರಿಂದ ಆತ್ಮಶಬ್ದದಿಂದ ಪ್ರತಿಪಾದ್ಯನಾದ ವಿಷ್ಣುವೇ ಮುಖ್ಯಕಾರಣನು. ಅವಾಂತರಕಾರಣವನ್ನು ಹೇಳುವ ಆಕಾಶಾದಿ ಶಬ್ದಗಳು ಆಕಾಶಾದಿ ಭೂತಪದಾರ್ಥವನ್ನೇ ಪ್ರತಿಪಾದನೆ ಮಾಡುತ್ತವೆ ಹೊರತು ವಿಷ್ಣುವನ್ನು ಪ್ರತಿಪಾದನೆ ಮಾಡುವುದಿಲ್ಲ. ಆದ್ದರಿಂದ ಸಕಲ ಶಬ್ದಗಳು ವಿಷ್ಣುವನ್ನೇ ಪ್ರತಿಪಾದಿಸುತ್ತವೆ ಎಂಬ ಸಮನ್ವಯ ಸೂತ್ರದ ಪ್ರತಿಜ್ಞೆಯು ಅಯುಕ್ತವಾಗುತ್ತದೆ. ಇಷ್ಟು ಪೂರ್ವಪಕ್ಷದ ಅಭಿಪ್ರಾಯ.

ಸಿದ್ಧಾಂತ ಸ್ಥಾಪನೆ

तत्वप्रकाशिका – एवं प्राप्ते सिद्धान्तयत् सूत्रमवतारयति – अवान्तरेति।। एतत्पूर्वपक्षनिरासायावान्तरकारणत्वेन विष्णुरेवाकाशादिशब्दैरुच्यत इति सूत्रकारो वक्तीत्यर्थः ।

ಈ ಪೂರ್ವಪಕ್ಷವನ್ನು ನಿರಾಕರಿಸಿ ಸಿದ್ಧಾಂತ ಸ್ಥಾಪನೆಗಾಗಿ ಸೂತ್ರಕ್ಕೆ ಅವತಾರಿಕೆ ನೀಡುತ್ತಿದ್ದಾರೆ 'ಅವಾಂತರ' ಇತ್ಯಾದಿಯಾಗಿ. ಮೇಲಿನ ಪೂರ್ವಪಕ್ಷವನ್ನು ನಿರಾಕರಣೆ ಮಾಡುವುದಕ್ಕಾಗಿ ವಿಷ್ಣುವೇ ಅವಾಂತರಕಾರಣನಾಗಿದ್ದಾನೆಂದು ಸೂತ್ರಕಾರರು ಸಮರ್ಥನೆ ಮಾಡುತ್ತಿದ್ದಾರೆಂದರ್ಥ.

ಶ್ರೀಹರಿಯು ಅವಾಂತರಕಾರಣನೂ ಹೌದು

तत्वप्रकाशिका – सूत्रं व्याचष्टे – आकाशादिष्विति ।। न केवलं मूलकारण-वाचकात्मशब्दवाच्यो हरिः, अपि तु कार्यत्वे सति कारणम् = अवान्तरकारणं, तद्वाचकाकाशादिशब्दवाच्यश्च ।

ಸೂತ್ರವನ್ನು ಭಾಷ್ಯಕಾರರು 'ಆಕಾಶಾದಿಷು' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ. ಸಕಲ ಪದಾರ್ಥಗಳಿಗೆ ಮೂಲಕಾರಣವನ್ನು ಹೇಳುವಂತಹ ಆತ್ಮಶಬ್ದದಿಂದಷ್ಟೇ

ಶ್ರೀಹರಿಯು ಪ್ರತಿಪಾದ್ಯನೆಂದಲ್ಲ. ಕಾರ್ಯವಾಗಿದ್ದು ಕಾರಣವೂ ಆಗಿರುವಂತಹ ಅವಾಂತರಕಾರಣವನ್ನು ಪ್ರತಿಪಾದನೆ ಮಾಡುವಂತಹ ಆಕಾಶ ಮೊದಲಾದ ಶಬ್ದಗಳಿಂದಲೂ ಶ್ರೀಹರಿಯು ಪ್ರತಿಪಾದ್ಯನಾಗಿದ್ದಾನೆ.

ವಿಷ್ಣುವಿನಲ್ಲಿ ಕಾರ್ಯಕಾರಣಭಾವಕ್ಕೆ ವಿರೋಧವಿಲ್ಲ

तत्वप्रकाशिका – न च कार्यकारणभावविरोधः । आकाशादिषु तस्य स्थितत्वात् । 'य आकाशे तिष्ठन्' 'यो वायौ तिष्ठन्' 'यस्तेजसि तिष्ठन्' 'योऽप्सु तिष्ठन्' 'यः पृथिव्यां तिष्ठन्' इत्यादिनाऽऽकाशादिषु स्थितत्वोक्तेः ।

ಒಬ್ಬನೇ ವ್ಯಕ್ತಿಯು ಕಾರ್ಯ ಹಾಗೂ ಕಾರಣ ಎರಡೂ ಕೂಡ ಆಗಲು ಹೇಗೆ ಸಾಧ್ಯ? ಎಂದು ಪ್ರಶ್ನಿಸಬಾರದು. ಆಕಾಶ ಮೊದಲಾದ ಭೂತಪದಾರ್ಥಗಳಲ್ಲಿ ಪರಮಾತ್ಮನು ನೆಲೆಸಿರುವ ಕಾರಣ ಕಾರ್ಯವಾಚಕಶಬ್ದಗಳಿಂದ ಪ್ರತಿಪಾದ್ಯನಾಗುತ್ತಾನೆ. ಈ ವಿಷಯದಲ್ಲಿ 'य आकाशे तिष्ठन्' 'यो वायौ तिष्ठन्' 'यः तेजसि तिष्ठन्' 'योऽप्सु तिष्ठन्' 'यः पृथिव्यां तिष्ठन्' ಇವೇ ಮೊದಲಾದ ಶ್ರುತಿಗಳು ಆಕಾಶ, ವಾಯು, ತೇಜಸ್ಸು, ನೀರು, ಪೃಥ್ವೀ ಇವುಗಳಲ್ಲಿ ಪರಮಾತ್ಮನು ನೆಲೆಸಿದ್ದಾನೆಂದು ಹೇಳುತ್ತಿವೆ.

ಪ್ರಮಾಣದ ಆಧಾರದಿಂದ ಅವಾಂತರಕಾರಣತ್ವದ ಸಮರ್ಥನೆ

तत्वप्रकाशिका – न च तत्रापि विष्णुः कुतः? इति वाच्यम् । यथा 'स योऽतोऽश्रुतः' इत्यादौ विष्णुरविदितत्वादिरूपेण व्यपदिष्टस्तादृशस्यैवाकाशादिषु 'यमाकाशो न वेद' इत्यादिनोक्तत्वात् । तथा चाऽऽकाशाद्युत्पत्तावाकाशाद्यान्तर्गतत्वेन भगवतोऽभिव्यक्त्या वाय्वादिगतस्वरूपाभिव्यक्तिहेतुत्वेन चावान्तरकारणत्वमुपपन्नम् ।

ಈ ಬೃಹದಾರಣ್ಯಕ ವಾಕ್ಯಗಳಲ್ಲಿ ವಿಷ್ಣುವೇ ಹೇಳಲ್ಪಟ್ಟಿದ್ದಾನೆ ಎಂದು ಹೇಗೆ ನಿಶ್ಚಯಿಸುತ್ತೀರಿ? ಎಂದು ಶಂಕಿಸಬಾರದು. ಯಾವರೀತಿಯಾಗಿ 'स योऽतोऽश्रुतः' ಇತ್ಯಾದಿ ಐತರೇಯ ಶ್ರುತಿಗಳಲ್ಲಿ ವಿಷ್ಣುವು ಅವಿದಿತನು ಅಶ್ರುತನು, ಅದೃಷ್ಟನು ಇತ್ಯಾದಿಯಾಗಿ ಅವಿದಿತತ್ವ, ಅಶ್ರುತತ್ವ

ಮೊದಲಾದ ಧರ್ಮಗಳುಳ್ಳವನೆಂದು ಹೇಳಲಾಗಿದೆ. 'ಯಮಾಕಾಶೋ ನ ವೇದ' ಇತ್ಯಾದಿ ಬೃಹದಾರಣ್ಯಕದ ವಾಕ್ಯದಲ್ಲಿಯೂ 'ನ ವೇದ' ಎಂಬುದಾಗಿ ಅವಿದಿತತ್ವ ಧರ್ಮವನ್ನು ಆಕಾಶಾಂತರ್ಗತನಲ್ಲಿ ಹೇಳಲಾಗಿದೆ. ಆದ್ದರಿಂದ ಬೃಹದಾರಣ್ಯಕದಲ್ಲಿರುವ ಆಕಾಶ ಶಬ್ದದಿಂದ ವಿಷ್ಣುವೇ ವಾಚ್ಯನಾಗುತ್ತಾನೆ. ಆದ್ದರಿಂದ ಆಕಾಶಾದಿಗಳು ಹುಟ್ಟುವಾಗ ಅಂತರ್ಗತವಾದ ಪರಮಾತ್ಮನು ಅಭಿವ್ಯಕ್ತನಾಗುತ್ತಾನೆ. ಆಕಾಶದಲ್ಲಿ ನೆಲೆಸಿರುವ ಭಗವಂತನ ಯಾವ ಅಭಿವ್ಯಕ್ತರೂಪವಿದೆಯೋ, ಅದು ವಾಯುವಿನಲ್ಲಿರುವ ಭಗವದ್ರೂಪಕ್ಕೆ ಕಾರಣವಾಗಿದೆ. ಆಕಾಶದ ಅಂತರ್ಗತವಾದ ಭಗವದ್ರೂಪವು ಆತ್ಮನ ಕಾರ್ಯರೂಪವಾಗಿದೆ. ಹೀಗೆ ವಿಷ್ಣುವಿಗೆ ಅವಾಂತರ ಕಾರಣತ್ವವು ಯುಕ್ತವಾಗುತ್ತದೆ.

ಅದಕ್ಕಾಗಿ ಆಕಾಶಶಬ್ದ ಸಮನ್ವಯ

तत्वप्रकाशिका – अतोऽवान्तरकारणाभिधायकशब्दवाच्यत्वात् विष्णोर्युक्तं समन्वयसूत्रमिति भावः ।

ಆದ್ದರಿಂದ ಅವಾಂತರಕಾರಣತ್ವವನ್ನು ಸಮರ್ಥನೆ ಮಾಡುವಂತಹ ಆಕಾಶ ಮೊದಲಾದ ಶಬ್ದಗಳಿಂದ ವಿಷ್ಣುವೇ ಪ್ರತಿಪಾದ್ಯನಾಗುತ್ತಾನೆಂಬುದು ಯುಕ್ತವಾಗುತ್ತದೆ. ಆದ್ದರಿಂದ ಸಮನ್ವಯ ಸೂತ್ರದಲ್ಲಿ ಮಾಡಿದ ಸಕಲ ಶಬ್ದಗಳ ಸಮನ್ವಯಪ್ರತಿಜ್ಞೆಯು ಅತ್ಯಂತ ಸಾಧುವಾಗಿದೆ. ಇಷ್ಟು ಸಿದ್ಧಾಂತದ ಅಭಿಪ್ರಾಯ.

ಅವಾಂತಕಾರಣನೆನ್ನಲು ವಿಶೇಷ ಕಾರಣ

तत्वप्रकाशिका – स्थितः 'तच्छब्दैरुच्यते' इति शेषः । नच वक्तव्यम् 'अस्त्वेवमवान्तरकारणत्वं विष्णोर्युक्तम्; तथापि तच्छब्दवाच्यत्वे विशेषहेत्वर्वाच्यः' इति । 'नामानि सर्वाणि' इत्याद्युक्तरीत्या परमात्मनि सिद्धेऽखिलशब्दसमन्वये, तत्र प्रतीतविरोधाभासनिरासेनैव सूत्रकृतश्चरितार्थत्वात्।

ಭಾಷ್ಯದಲ್ಲಿ 'ಸ್ಥಿತಃ' ಎಂಬಲ್ಲಿ 'ತಚ್ಛಬ್ದೈರುಚ್ಯತೇ' ಎಂಬುದನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ಆಕಾಶ ಮೊದಲಾದ ಭೂತಪದಾರ್ಥಗಳಲ್ಲಿರುವ ಪರಮಾತ್ಮನು ಆಕಾಶ ಮೊದಲಾದ ಶಬ್ದಗಳಿಂದ ಪ್ರತಿಪಾದ್ಯನಾಗುತ್ತಾನೆ ಎಂದರ್ಥ. ಆದ್ದರಿಂದಲೇ ವಿಷ್ಣು ಅವಾಂತರಕಾರಣನೂ ಆಗುತ್ತಾನೆ.

ಅವಾಂತರ ಕಾರಣತ್ವವನ್ನು ಪ್ರತಿಪಾದನೆ ಮಾಡುವಂತಹ ಆಕಾಶಾದಿ ಶಬ್ದಗಳಿಂದ ವಿಷ್ಣುವೇ ಪ್ರತಿಪಾದ್ಯನಾಗುತ್ತಾನೆಂಬ ವಿಷಯದಲ್ಲಿ ಯಾವುದಾದರೂ ವಿಶೇಷ ಕಾರಣವನ್ನು ಹೇಳಬೇಕಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ 'ನಾಮಾನಿ ಸರ್ವಾಣಿ' ಎಂಬ ಶ್ರುತಿಯು ಪರಮಾತ್ಮನಲ್ಲಿ ಸಕಲಶಬ್ದಗಳ ಸಮನ್ವಯವನ್ನು ಪ್ರತಿಜ್ಞೆ ಮಾಡುತ್ತಿದೆ. ಪರಮಾತ್ಮನು ಸಕಲಶಬ್ದಗಳಿಂದ ಪ್ರತಿಪಾದ್ಯನಾಗುತ್ತಾನೆಂಬ ವಿಷಯವು ಸಿದ್ಧವಾದ ಮೇಲೆ ಈ ವಿಷಯದಲ್ಲಿ ತೋರುವಂತಹ ವಿರೋಧಾಭಾಸಗಳನ್ನು ನಿರಾಕರಣೆ ಮಾಡಲು ಸೂತ್ರದಲ್ಲಿ ವಿಶೇಷಹೇತುವನ್ನು ಹೇಳಲಾಗಿದೆ. 'ನಾಮಾನಿ ಸರ್ವಾಣಿ' ಎಂಬ ಶ್ರುತಿಯ ಮೇಲೆ ಬರುವಂತಹ ವಿರೋಧಗಳನ್ನು ಪರಿಹರಿಸಲು ಸೂತ್ರಕಾರರು ಚರಿತಾರ್ಥರಾಗಿದ್ದಾರೆ. ಪುನಃ ಪ್ರತ್ಯೇಕವಾಗಿ ಸಮನ್ವಯದಲ್ಲಿ ಕಾರಣವನ್ನು ತೋರಿಸಬೇಕಾಗಿಲ್ಲ.

ಸರ್ವಶಬ್ದಸಮನ್ವಯವು ಸಮಂಜಸವಾಯಿತು

तत्वप्रकाशिका – यत्तु युक्तिविशेषं च वक्ति स त्वधिको लाभः । (समाकर्षाधिकरणे भिन्नाधिकरणपक्षे पाठस्तु स त्वधिको लाभः) । अतोऽवान्तरकारणवाचिनामपि शब्दानां परमात्मपरत्वाद्युक्तं समन्वयसूत्रमिति सिद्धम् ।।१५।।

।। इति श्रीमज्जयतीर्थभिक्षुविरचितायां तत्वप्रकाशिकायाम् आकाशाधिकरणम् ।।

ಕೆಲವು ಸ್ಥಳಗಳಲ್ಲಿ 'ಪ್ರಾಣಾದಯೋ ವಾಕ್ಯಶೇಷಾತ್' ಇತ್ಯಾದಿ ಕಡೆ ಸೂತ್ರಕಾರರು ವಿಶೇಷ ಯುಕ್ತಿಯನ್ನು ಹೇಳಿದರೂ ಅದು ಕೇವಲ ವಿಶೇಷ ಲಾಭವೆಂದಷ್ಟೇ ತಿಳಿಯಬೇಕು. ಆದ್ದರಿಂದ ಅವಾಂತರಕಾರಣವನ್ನು ಪ್ರತಿಪಾದನೆ ಮಾಡುವಂತಹ ಆಕಾಶಾದಿ ಶಬ್ದಗಳಿಂದ ಪರಮಾತ್ಮನೇ ಪ್ರತಿಪಾದ್ಯನಾಗಿದ್ದಾನೆಂದು ಸಿದ್ಧವಾಯಿತು. ಆದ್ದರಿಂದ ಸಮನ್ವಯ ಸೂತ್ರದಲ್ಲಿ ಪ್ರತಿಜ್ಞೆ ಮಾಡಿದ ಸಕಲಶಬ್ದಗಳ ಸಮನ್ವಯವು ಅತ್ಯಂತ ಸಮಂಜಸವಾಯಿತು.

।। ಇಲ್ಲಿಗೆ ಶ್ರೀಮಜ್ಜಯತೀರ್ಥಮುನಿಗಳಿಂದ ವಿರಚಿತವಾದ ತತ್ವಪ್ರಕಾಶಿಕಾಟೀಕೆಯಲ್ಲಿ
ಆಕಾಶಾಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ।।

ಮಂತ್ರಾಲಯ ಪ್ರಭುಗಳಾದ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ

ಭಾವದೀಪ

ನ್ಯಾಯವಿವರಣದ ವ್ಯಾಖ್ಯಾನ

व्यक्त्यपेक्षया कार्यत्वं चेति न्यायविवरणेन अवान्तरेण इत्यादिभाष्येण वा सूचितलिङ्गेनान्यत्रैव प्रसिद्धिमाह – अत्रोत्पत्तिमत्त्वेति ।।

'ವ್ಯಕ್ತಪೇಕ್ಷಯಾ ಕಾರ್ಯತ್ವಂ ಚ' ಎಂಬ ನ್ಯಾಯವಿವರಣದಿಂದ 'ಅವಾಂತರೇಣ' ಎಂಬ ಭಾಷ್ಯದ ಮಾತಿನಿಂದ ಸೂಚಿತವಾದ ಲಿಂಗವನ್ನು ಉಲ್ಲೇಖ ಮಾಡುವ ಮೂಲಕ ಅನ್ಯತ್ರೈವ ಪ್ರಸಿದ್ಧಿಯನ್ನು 'ಅತ್ರ ಉತ್ಪತ್ತಿಮತ್ವಲಿಂಗೇನ' ಇತ್ಯಾದಿ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ.

ಈ ಅಧಿಕರಣ ಪುನಃ ಏಕೆ ?

भावदीपः – यद्यपि द्युभ्वादिनय एव प्रादुर्भावरूपा हरेरुत्पत्तिर्निर्णीता । अन्यथा तत्र श्रुतजायमानशब्दस्योक्तरूपजन्मवति विष्णौ सावकाशत्वाभावे अतच्छब्दात् प्राणभृच्च नेति जीवनिरासायोगात् । उक्तं च भाष्ये । अजायमानो बहुधा विजायत इति तस्यैव बहुधा जन्मोक्तेरिति ।

ಪ್ರಶ್ನೆ - ದ್ಯುಭ್ವಾದ್ಯಧಿಕರಣದಲ್ಲಿ ಭಗವಂತನ ಉತ್ಪತ್ತಿಯು ಪ್ರಾದುರ್ಭಾವರೂಪವಾಗಿದೆ ಎಂದು ಈಗಾಗಲೇ ನಿರ್ಣಯಿಸಲ್ಪಟ್ಟಿದೆ. ಹೀಗೆ ಒಪ್ಪದೆ ಶ್ರುತಿಯಲ್ಲಿ ಕೇಳಿಸುತ್ತಿರುವ ಜಾಯಮಾನ ಶಬ್ದಕ್ಕೆ ಜನ್ಮವುಳ್ಳವನು ಎಂದು ಅರ್ಥೈಸುವುದಾದರೆ "ಅತಚ್ಛಬ್ದಾತ್' ಎಂಬುದರಿಂದ ಮತ್ತು 'ಪ್ರಾಣಭೃಚ್ಚ' ಎಂಬ ಪದದಿಂದ ಜೀವನನ್ನು ನಿರಾಸ ಮಾಡಲು ಸಾಧ್ಯವಾಗುವುದಿಲ್ಲ. ಏಕೆಂದರೆ ಅಂಥ ಉತ್ಪತ್ತಿಯು ಜೀವನಲ್ಲಿಯೂ ಕೂಡ ಇರುತ್ತದೆ. ಭಾಷ್ಯದಲ್ಲಿಯೂ ಕೂಡ 'ಅಜಾಯಮಾನೋ ಬಹುಧಾ ವಿಜಾಯತೇ ಎಂಬುದಾಗಿ ಪರಮಾತ್ಮನಿಗೆ ಅನೇಕ ಬಗೆಯ ಜನ್ಮವನ್ನು ಹೇಳಿದ್ದಾರೆ. ಆದ್ದರಿಂದ ಪ್ರಾದುರ್ಭಾವರೂಪವಾದ ಜನ್ಮವನ್ನೇ ಒಪ್ಪಬೇಕು. ಪುನಃ ಈ ಅಧಿಕರಣ ಹೊರಟಿದ್ದು ಏಕೆ?

'ವಿರೋಧಃ ಕಾರ್ಯತತ್ವದೋಃ' ಎಂಬ ಅನುವ್ಯಾಖ್ಯಾನಕ್ಕೆ ವ್ಯಾಖ್ಯಾನ

भावदीपः – तथाप्येकदेशोक्त्या कारणत्वे सत्युत्पत्तिमत्त्वरूपावान्तर-कारणत्वलिङ्गेन इत्यत्र तात्पर्यम् । कारणत्वांशस्तु अविरुद्ध इति नोक्तः ।

कार्यत्वायोगादित्याद्यग्रेतनटीकावाक्यं तु प्रादुर्भावरूपं जन्मेति पूर्वं भाष्ये स्पष्टमुक्तत्वात् व्यक्त्यपेक्षया कार्यत्वमिति स्पष्टमत्रन्यायविवरणेऽभिहितत्वात् तद्भावर्त्योक्त्यर्थं नतु उत्पत्तिमत्त्वमेवायुक्तमिति भावेन । अत एवानुभाष्यविरोधः कार्यतद्धतोरित्येव पूर्वपक्षयुक्तिरुक्ता । नतु कार्यत्वविरोध इति ।

ಉತ್ತರ - ಆದರೂ ಕೂಡ ಈ ಅಧಿಕರಣ ಸಾರ್ಥಕ. ಏಕೆಂದರೆ 'ಕಾರಣತ್ವೇ ಸತಿ ಉತ್ಪತ್ತಿಮತ್ವ' ಎಂಬ ಅವಾಂತರ ಕಾರಣತ್ವಲಿಂಗದಿಂದ ಪರಮಾತ್ಮನಲ್ಲಿ ಶಬ್ದವನ್ನು ಸಮರ್ಥನೆ ಮಾಡುವ ತಾತ್ಪರ್ಯವಿದೆ. ಹಾಗಾದರೆ ಟೀಕೆಯಲ್ಲಿ ಕಾರಣತ್ವ ಅಂಶವನ್ನು ಏಕೆ ಉಲ್ಲೇಖಿಸಿಲ್ಲ ಎಂದರೆ ಕಾರಣತ್ವವಿಷಯದಲ್ಲಿ ಯಾವುದೇ ವಿವಾದವಿಲ್ಲದ ಕಾರಣ ಉಲ್ಲೇಖಿಸಿರುವುದಿಲ್ಲ. 'ಕಾರ್ಯತ್ವಾಯೋಗಾತ್' ಎಂಬ ಮುಂದಿನ ಟೀಕಾವಾಕ್ಯದ ಅಭಿಪ್ರಾಯ ಹೀಗಿದೆ - ಪ್ರಾರ್ದುಭಾವರೂಪವಾದ ಜನ್ಮವನ್ನು ಪರಮಾತ್ಮನಲ್ಲಿ ವಿವಕ್ಷಿಸಬೇಕೆಂದು ದ್ಯುಭ್ವಾದಧಿಕರಣದ ಭಾಷ್ಯದಿಂದ ಸ್ಪಷ್ಟವಾಗುತ್ತದೆ. ಅಭಿವ್ಯಕ್ತಿಯ ಅಪೇಕ್ಷೆಯಿಂದ ಕಾರ್ಯತ್ವವನ್ನು ಪರಮಾತ್ಮನಲ್ಲಿ ಹೇಳಬೇಕೆಂದು ಈ ಅಧಿಕರಣದ ನ್ಯಾಯವಿವರಣದಿಂದ ಸ್ಪಷ್ಟವಾಗುತ್ತದೆ. ಇದರಿಂದ ವ್ಯಾವರ್ತ್ಯವಾದುದನ್ನು ತೋರಿಸುವ ಉದ್ದೇಶದಿಂದ 'ಕಾರ್ಯತ್ವಾಯೋಗಾತ್' ಎಂಬ ಮುಂದಿನ ಟೀಕಾವಾಕ್ಯ ಹೊರಟಿದೆ ಹೊರತು ಪರಮಾತ್ಮನಲ್ಲಿ ಉತ್ಪತ್ತಿಮತ್ವವೇ ಅಯುಕ್ತವಾಗಿದೆ ಎಂಬ ಅಭಿಪ್ರಾಯದಿಂದಲ್ಲ. ಆದ್ದರಿಂದಲೇ ಅನುವ್ಯಾಖ್ಯಾನದಲ್ಲಿ 'ವಿರೋಧಃ ಕಾರ್ಯತದ್ವತೋಃ' ಎಂಬುದಾಗಿಯೇ ಪೂರ್ವಪಕ್ಷ ಯುಕ್ತಿಯನ್ನು ಹೇಳಿದ್ದಾರೆ. ಹೊರತು ಕೇವಲ 'ಕಾರ್ಯತ್ವವಿರೋಧಃ' ಎಂದು ಹೇಳಿರುವುದಿಲ್ಲ.

ಅಧಿಕರಣದ ಸಂಗತಿ ವಿಚಾರ

भावदीपः – श्रुत्यादिसङ्गतिमाह – समन्वयेति ।। व्यक्त्यपेक्षया कार्यत्वमिति न्यायविवरणस्वारस्याय तद्भावर्त्यमाह – आकाशादीनामिति ।। 'विरोधः कार्यतद्धतोः' इत्यनुभाष्योक्तमाह – स्वस्यैवेति ।।

ಶ್ರುತಿಸಂಗತಿ, ಅಧಿಕರಣಸಂಗತಿ ಮೊದಲಾದವನ್ನು ಸಮರ್ಥಿಸಲು 'ಸಮನ್ವಯ' ಇತ್ಯಾದಿ ವಾಕ್ಯವು ಹೊರಟಿದೆ. ಅಭಿವ್ಯಕ್ತಿಯ ಅಪೇಕ್ಷೆಯಿಂದ ಭಗವಂತನಲ್ಲಿ ಕಾರ್ಯತ್ವವು ಯುಕ್ತವಾಗುತ್ತದೆ ಎಂಬುದಾಗಿ ನ್ಯಾಯವಿವರಣಕ್ಕೆ ಸ್ವಾರಸ್ಯವಾದ ಅರ್ಥವನ್ನು ಸಮರ್ಥಿಸಲು ವ್ಯಾವೃತ್ತವಾಗುವ ಪೂರ್ವಪಕ್ಷವನ್ನು

'ಆಕಾಶಾದೀನಾಮ್' ಎಂಬ ವಾಕ್ಯದಿಂದ ಸಮರ್ಥಿಸಿದ್ದಾರೆ. 'ವಿರೋಧಃ ಕಾರ್ಯತದ್ವತೋಃ' ಎಂಬ ಅನುವ್ಯಾಖ್ಯಾನದ ಮಾತನ್ನು 'ಸ್ವಸ್ಮೈವ' ಎಂಬ ಮಾತಿನಿಂದ ವ್ಯಾಖ್ಯಾನಿಸಿದ್ದಾರೆ.

'ತದಧೀನತ್ವಾತ್ ಅರ್ಥವತ್' ಎಂಬ ಸೂತ್ರದಿಂದ ಪುನರುಕ್ತಿ ಇಲ್ಲ

ಭಾವದೀಪಃ – 'तदधीनत्वादर्थवत्' इत्यनेन गतार्थतामाशङ्क्य च निराह – नचेति ।। सुतोत्पत्ताविति पूर्वोक्ताशयोरत्राप्यनुसन्धेयः ।

'ತದಧೀನತ್ವಾತ್ ಅರ್ಥವತ್' ಎಂಬ ಸೂತ್ರದಿಂದ ಈ ಅಧಿಕರಣಕ್ಕೆ ಪುನರುಕ್ತಿದೋಷ ಬರುತ್ತದೆಂದು ಆಶಂಕಿಸಿ 'ನಚ' ಇತ್ಯಾದಿ ಗ್ರಂಥದಿಂದ ನಿರಾಕರಿಸಿದ್ದಾರೆ.

ಪೂರ್ವಪಕ್ಷಕ್ಕೆ ಪ್ರಾಬಲ್ಯ ಸಮರ್ಥನೆ

ಭಾವದೀಪಃ – अवरादिशब्दवदन्यत्रादृष्टत्वेऽपि वृत्तिः किं न स्यादित्यत आह – निमित्तेति ।। विशेषकारणाभावाच्चेत्यर्थः । नामानि सर्वाणीत्यादि श्रुतीनां साधारण्येन सङ्कोचसम्भवादिति भावः ।।

ಅವರಾದಿಶಬ್ದಗಳು ಬೇರೆ ಎಲ್ಲೂ ಕಾಣದಿದ್ದರೂ ಅವರಾದಿಶಬ್ದಗಳು ಹೇಗೆ ಪರಮಾತ್ಮನಲ್ಲಿ ಸಮನ್ವಯಗೊಳ್ಳುತ್ತವೋ, ಅದರಂತೆ ಆಕಾಶಾದಿಶಬ್ದಗಳೂ ಕೂಡ ಪರಮಾತ್ಮನಲ್ಲಿ ಸಮನ್ವಯವಾಗಬಹುದಲ್ಲವೇ? ಎಂಬ 'ಪ್ರಶ್ನೆಗೆ ನಿಮಿತ್ತ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. ಅವಾಂತರಕಾರಣತ್ವ ಪ್ರತಿಪಾದಕವಾದ ಆಕಾಶಾದಿ ಶಬ್ದಗಳು ಪರಮಾತ್ಮನಲ್ಲಿ ಸಮನ್ವಯಗೊಳ್ಳುತ್ತವೆನ್ನಲು ಯಾವುದೇ ವಿಶೇಷ ಕಾರಣವಿರುವುದಿಲ್ಲ ಎಂದರ್ಥ. 'ನಾಮಾನಿ ಸರ್ವಾಣಿ' ಎಂಬ ಶ್ರುತಿಯನ್ನು ವಿಶೇಷ ಕಾರಣವೆಂದು ಉಲ್ಲೇಖಿಸಲು ಸಾಧ್ಯವಿಲ್ಲ. ಏಕೆಂದರೆ ಇದು ಸಾಧಾರಣಶ್ರುತಿಯಾಗಿರುವುದರಿಂದ ಸಂಕೋಚ ಮಾಡಬಹುದು ಎಂಬುದು ಟೀಕೆಯ ಅಭಿಪ್ರಾಯ.

'ಆತ್ಮನಃ ಆಕಾಶಃ ಸಂಭೂತಃ' ಇತ್ಯಾದಿ ಸೃಷ್ಟಿ ಪ್ರಕರಣಕ್ಕೆ ಏನು ಅರ್ಥ ?

ಭಾವದೀಪಃ – वाक्ययोजनेति ।। हरेरेवात्माकाशादि शब्दवाच्यत्वे तस्यैकत्वेन क्रमाभावादात्मन आकाश आकाशाद्वायुरित्यादिक्रमप्रतिपादकवाक्ययोजनानुपपत्तेश्चेत्यर्थः ।।

'ವಾಕ್ಯಯೋಜನೆ' ಇತ್ಯಾದಿ ಟೀಕೆಯ ಅಭಿಪ್ರಾಯ ಹೀಗಿದೆ - ಶ್ರೀಹರಿಯೇ ಆತ್ಮ, ಆಕಾಶ ಮೊದಲಾದ ಶಬ್ದಗಳಿಂದ ಪ್ರತಿಪಾದ್ಯನಾಗುವುದಾದರೆ ಅವನು ಒಬ್ಬನೇ ಆಗಿರುವುದರಿಂದ ಆತ್ಮನಿಂದ ಆಕಾಶ ಹುಟ್ಟಿತು, ಆಕಾಶದಿಂದ ವಾಯು ಹುಟ್ಟಿತು ಇತ್ಯಾದಿ ಸೃಷ್ಟಿಯ ಕ್ರಮವೇ ಅಯುಕ್ತವಾಗುತ್ತವೆ. ಆದ್ದರಿಂದ 'ಆತ್ಮನಃ ಆಕಾಶಃ' 'ಆಕಾಶಾದ್ವಾಯುಃ' ಇತ್ಯಾದಿ ಕ್ರಮಪ್ರತಿಪಾದಕವಾಕ್ಯಯೋಜನೆಯು ಅನುಪಪನ್ನವಾಗುತ್ತದೆ ಎಂಬ 'ವಾಕ್ಯಯೋಜನ' ಇತ್ಯಾದಿ ಟೀಕೆಯ ಅಭಿಪ್ರಾಯ.

ಅವಾಂತರ ಕಾರಣ ಎಂದರೇನು ?

भावदीपः – तस्मादिति ।। विशेषहेत्वभावात् । बाधकभावाच्चेत्यर्थः ।। अवान्तरेति ।। कार्यत्वे सति कारणानामित्यर्थः ।

ಟೀಕೆಯಲ್ಲಿ 'ತಸ್ಮಾತ್' ಎಂಬುವುದಕ್ಕೆ ವಿಶೇಷ ಕಾರಣವಿರುವುದಿಲ್ಲ ಎಂದರ್ಥ. ಮತ್ತು ಆಕಾಶಾದಿಶಬ್ದಗಳಿಂದ ಪ್ರತಿಪಾದ್ಯನೆಂದು ಹೇಳಿದರೆ ಬಾಧಕವೂ ಕೂಡ ಇರುತ್ತದೆಂದು ಎಂಬುದನ್ನೂ ಕೂಡ ವಿವಕ್ಷಿಸಬೇಕು. 'ಅವಾಂತರಕಾರಣ' ಎಂದರೆ 'ಕಾರ್ಯತ್ವೇಸತಿ ಕಾರಣತ್ವಂ' ಎಂದರ್ಥ. ಮತ್ತೊಂದರ ಕಾರ್ಯವಾಗಿರಬೇಕು. ಮುಂದಿನದಕ್ಕೆ ಕಾರಣವಾಗಿರಬೇಕು. ಇದನ್ನು ಅವಾಂತರ-ಕಾರಣವೆಂದು ಕರೆಯುತ್ತಾರೆ.

ಪರಮಾತ್ಮನಲ್ಲಿ ಇದು ವಿರುದ್ಧವಲ್ಲವೇ?

भावदीपः – वायुकारणाकाशकारणस्य वायुकारणत्वं विरुद्धमिति चोद्यं तु आनुमानिकनयोक्तन्यायेन महतः परस्मात् परस्य महतः परत्ववत् परिहृतमिति नैवोद्धाटितम् ।।

ಆಕಾಶಕ್ಕೆ ಕಾರಣವಾದದ್ದನ್ನು ವಾಯುವಿಗೆ ಕಾರಣವೆಂದು ಹೇಳಲಾಗದು. ವಾಯುವಿಗೆ ಆಕಾಶವು ಕಾರಣವಾಗಿದೆ. ಆಕಾಶಕ್ಕೆ ಆತ್ಮನು ಕಾರಣನಾಗಿದ್ದಾನೆ. ಈ ಆತ್ಮನನ್ನು ವಾಯುವಿಗೆ ಕಾರಣನೆಂದು ಹೇಳುವುದು ವಿರುದ್ಧವಲ್ಲವೇ? ಎಂಬ ಪ್ರಶ್ನೆಗೆ ಮಹತ್ತತ್ತ್ವಕ್ಕಿಂತಲೂ ಶ್ರೇಷ್ಠವಾದ ಪದಾರ್ಥಕ್ಕಿಂತ ಯಾವುದು ಶ್ರೇಷ್ಠವಾಗಿದೆಯೋ ಅದು ಮಹತ್ತತ್ತ್ವಕ್ಕಿಂತ ಶ್ರೇಷ್ಠವಾಗಿದೆಯೆಂದು ಹೇಗೆ ಕರೆಸಿಕೊಳ್ಳುತ್ತದೋ ಅದರಂತೆ ಇಲ್ಲಿಯೂ ಪರಿಹಾರವನ್ನು ತಿಳಿದುಕೊಳ್ಳಬೇಕು. ಹೀಗೆ ಆನುಮಾನಿಕ ನ್ಯಾಯದಿಂದಲೇ ಉತ್ತರವನ್ನು ತಿಳಿಯಬಹುದಾದ್ದರಿಂದ ಇಲ್ಲಿ ಪ್ರಶ್ನೆಯನ್ನಾಗಲಿ, ಉತ್ತರವನ್ನಾಗಲಿ ಟೀಕೆಯಲ್ಲಿ ಉಲ್ಲೇಖಿಸಿಲ್ಲ.

ಅವಾಂತರಕಾರಣನೆಂದು ಸೂತ್ರದಲ್ಲಿ ಹೇಳಿಲ್ಲವಲ್ಲ ?

ಭಾವದೀಪಃ – हरेरवान्तरकारणत्ववचनं सूत्रे न सङ्गतमिति भ्रमनिरासाय शेषपूर्त्या सम्बन्धभाष्यं व्याचष्टे – न केवलमिति ।।

ಶ್ರೀಹರಿಯು ಅವಾಂತರಕಾರಣನಾಗಿದ್ದಾನೆಂದು ಸೂತ್ರದಲ್ಲಿ ಹೇಳಿಲ್ಲವಲ್ಲ ? ಎಂಬ ಭ್ರಾಂತಿಯನ್ನು ನಿರಾಸ ಮಾಡಲು ಶೇಷಪೂರಣ ಮಾಡುವ ಮೂಲಕ ಸಂಬಂಧಭಾಷ್ಯವನ್ನು ವ್ಯಾಖ್ಯಾನ ಮಾಡಲು 'ನ ಕೇವಲಮ್' ಇತ್ಯಾದಿ ಟೀಕಾವಾಕ್ಯವು ಹೊರಟಿದೆ.

ಕಾರಣಶಬ್ದಕ್ಕೆ ಅವಾಂತರಕಾರಣ ಎಂದೇ ಅರ್ಥ

ಭಾವದೀಪಃ – सौत्रकारणत्वशब्दः अवान्तरकारणत्वपर इति वा कार्यत्वेन चेत्यपि समुच्चीयत इति वा भावेन 'अवान्तरकारणत्वेन' इत्युक्तं भाष्ये, इत्यभिप्रेत्यार्थमाह – कार्यत्वे सतीति ।।

ಸೂತ್ರದಲ್ಲಿರುವ ಕಾರಣತ್ವ ಶಬ್ದವು ಅವಾಂತರಕಾರಣತ್ವಪರವಾಗಿವೆ ಅಥವಾ ಕಾರ್ಯತ್ವಕ್ಕೆ ಸಮುಚ್ಚಾಯಕವಾಗಿದೆ ಎಂಬ ಅಭಿಪ್ರಾಯದಿಂದ ಭಾಷ್ಯದಲ್ಲಿ 'ಅವಾಂತರ ಕಾರಣತ್ವೇನ' ಎಂದು ಹೇಳಿದ್ದಾರೆ ಈ ಅಭಿಪ್ರಾಯದಿಂದ 'ಕಾರ್ಯತ್ವೇ ಸತಿ' ಎಂಬ ವಾಕ್ಯವು ಹೊರಟಿದೆ.

ಭಾಷ್ಯದಲ್ಲಿರುವ 'ಅಪಿ' ಪದದ ವ್ಯಾಖ್ಯಾನ

ಭಾವದೀಪಃ – वाच्यश्चेति ।। एतेन भाष्ये 'अपि' शब्दो व्याख्यातः । 'आकाशादिषु' इत्यादिभाष्यं व्याकुर्वन् सूत्रशेषमवतार्य व्याचष्टे – नचेति।।

'ತದ್ವಾಚಕ ಆಕಾಶಾದಿ ಶಬ್ದವಾಚ್ಯಶ್ಚ' ಎಂದು ಟೀಕೆಯಲ್ಲಿ ಹೇಳಿದ್ದಾರೆ. ಹೀಗೆ ಹೇಳಿದ್ದರಿಂದ ಭಾಷ್ಯದಲ್ಲಿರುವ 'ಅಪಿ' ಶಬ್ದಕ್ಕೆ ವ್ಯಾಖ್ಯಾನ ಮಾಡಿದಂತಾಯಿತು.

'ಆಕಾಶಾದಿಷು' ಇತ್ಯಾದಿ ಭಾಷ್ಯವನ್ನು ವ್ಯಾಖ್ಯಾನ ಮಾಡುವವರಾಗಿ ಉಳಿದ ಸೂತ್ರಕ್ಕೆ ಅವತಾರಿಕೆಯನ್ನು ನೀಡುತ್ತಾ ವ್ಯಾಖ್ಯಾನಿಸಲು 'ನ ಚ' ಇತ್ಯಾದಿ ವಾಕ್ಯವು ಹೊರಟಿದೆ.

ಅಧ್ಯಾಹೃತ ಹೇತುವಿಗೆ ಅಸಿದ್ಧಿ ಪರಿಹಾರ

ಭಾವದೀಪಃ – भाष्ये 'स एव स्थितः' इत्येतत् 'तस्य स्थितत्वात्' इति व्याख्यातम् । सूत्रेऽध्याहृतहेतोरसिद्धिनिरासाय 'आकाशे तिष्ठन्' इत्यादिभाष्यं व्याचष्टे – य इति ।।

ಭಾಷ್ಯದಲ್ಲಿರುವ 'ಸ ಏವ ಸ್ಥಿತಃ' ಎಂಬ ವಾಕ್ಯಕ್ಕೆ 'ತಸ್ಯ ಸ್ಥಿತತ್ವಾತ್' ಎಂದು ವ್ಯಾಖ್ಯಾನ ಮಾಡಿದ್ದಾರೆ. ಸೂತ್ರದಲ್ಲಿ ಅಧ್ಯಾಹಾರ ಮಾಡಿಕೊಂಡ ಹೇತುವಿಗೆ ಅಸಿದ್ಧಿ ಪರಿಹಾರಕ್ಕಾಗಿ 'ಆಕಾಶೇ ತಿಷ್ಠನ್' ಎಂಬ ಭಾಷ್ಯವು ಹೊರಟಿದೆ. ಅದನ್ನು ವ್ಯಾಖ್ಯಾನಿಸಲು 'ಯ' ಇತ್ಯಾದಿ ಟೀಕಾವಾಕ್ಯವು ಹೊರಟಿದೆ.

'ಯಥಾ' ಇತ್ಯಾದಿ ಭಾಷ್ಯಕ್ಕೆ ವ್ಯಾಖ್ಯಾನ

भावदीपः – एतेनानाकाशादिषूक्तेरित्यपि सूत्रेऽन्वयो दर्शितः । यथेत्यादिभाष्यं व्याचष्टे – न चेत्यादिना ।।

ಹೀಗೆ ಹೇಳಿದ್ದರಿಂದ ಸೂತ್ರದಲ್ಲಿರುವ 'ಆಕಾಶಾದಿಷು' ಎಂಬ ಪದಕ್ಕೆ 'ಉಕ್ತೇಃ' ಎಂಬ ಅಧ್ಯಾಹೃತವಾದ ಪದದ ಜೊತೆಗೆ ಅನ್ವಯವನ್ನು ತಿಳಿಸಿದ್ದಾರೆ. 'ಯಥಾ' ಇತ್ಯಾದಿ ಮುಂದಿನ ಭಾಷ್ಯವಾಕ್ಯವನ್ನು 'ನ ಚ' ಇತ್ಯಾದಿ ಗ್ರಂಥದಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ.

ವಿವರಣೆ - ಬೃಹದಾರಣ್ಯಕೋಪನಿಷತ್ತಿನಲ್ಲಿರುವ ಶ್ರುತಿ ವಾಕ್ಯ ಹೀಗಿದೆ - ''ಯ ಆಕಾಶೇತಿಷ್ಠನ್ ಆಕಾಶದಂತರೋ, ಯಮಾಕಾಶೋ ನ ವೇದ, ಯಸ್ಯಾಕಾಶಃ ಶರೀರಮ್, ಯ ಆಕಾಶಮಂತರೋ ಯಮಯತಿ, ಏಷ ತೇ ಆತ್ಮಾ ಅಂತರ್ಯಾಮ್ಯಮೃತಃ'' ''ಯಾರು ಆಕಾಶಾಭಿಮಾನಿದೇವತೆಯಲ್ಲಿ ನೆಲೆಸಿ ಅವನಿಂದ ಭಿನ್ನನಾಗಿ ಆಕಾಶಾಭಿಮಾನಿಯಿಂದ ತಿಳಿಯಲು ಸಾಧ್ಯವಿಲ್ಲದವನಾಗಿ, ಆಕಾಶಾಭಿಮಾನಿಯು ಅವನಿಗೆ ಶರೀರದಂತೆ ಇರುವನೋ, ಯಾವಾತನು ಆಕಾಶಾಭಿಮಾನಿಯನ್ನು ನಿಯಮನ ಮಾಡುವನೋ, ಅವನೇ ನಿನ್ನ ನಿಯಾಮಕನಾದ ಅಂತರ್ಯಾಮಿಯಾಗಿದ್ದಾನೆ''. ಇದೇ ರೀತಿಯಲ್ಲಿ 'ಏ ವಾಯೋ ತಿಷ್ಠನ್' ಇತ್ಯಾದಿ ವಾಕ್ಯಗಳೂ ಕೂಡ ಅದೇ ಸಂದರ್ಭದಲ್ಲಿ ಪ್ರಸ್ತಕವಾಗಿದೆ. ಇಲ್ಲಿರುವ ಆಕಾಶ, ವಾಯು, ಅಗ್ನಿ, ಅಪು, ಪೃಥ್ವೀ ಮೊದಲಾದ ಶಬ್ದಗಳು ಭಗವಂತನನ್ನೇ ಪ್ರತಿಪಾದಿಸುತ್ತಿವೆ.

'ಆತ್ಮ' ಎಂಬ ಭಗವಂತನ ರೂಪದಿಂದ 'ಆಕಾಶ' ಎಂಬ ಭಗವದ್ರೂಪವು ಅಭಿವ್ಯಕ್ತವಾಗುತ್ತದೆ. 'ಆಕಾಶ' ಎಂಬ ಭಗವದ್ರೂಪವು 'ವಾಯು' ಎಂಬ ಭಗವದ್ರೂಪಕ್ಕೆ ಅಭಿವ್ಯಂಜಕವಾಗಿದೆ. ಆದ್ದರಿಂದ 'ಆಕಾಶ' ಎಂಬ ಭಗವಂತನ ಒಂದೇ ರೂಪವು ಕಾರ್ಯವು ಹಾಗೂ ಕಾರಣವೂ ಆಗಿರುತ್ತದೆ. ಆದ್ದರಿಂದ ಅವಾಂತರ ಕಾರಣವಾಚಕವಾದ ಆಕಾಶಶಬ್ದದಿಂದ ತದಂತರ್ಯಾಮಿಯಾದ ಆಕಾಶನೆಂದು ಕರೆಸಿಕೊಳ್ಳುವ ಪರಮಾತ್ಮನು ಪ್ರತಿಪಾದ್ಯನಾಗಿದ್ದಾನೆ.

ಕಾರ್ಯಕಾರಣಗಳ ವಿರೋಧ ಪರಿಹಾರ

भावदीपः – तावता कथमुक्तविरोधनिरासः? इत्यतो 'व्यक्त्यपेक्षया कार्यत्वञ्च' इति न्यायविवरणोक्तदिशा कार्यत्वविरोधं परिहरन् आकाशादिषु

स्थित इत्यादिभाष्यतात्पर्योक्त्या कार्यकारणभावविरोधं च निराह – तथाचेति ।।

ಒಬ್ಬನೇ ವಿಷ್ಣುವಿನಲ್ಲಿ ಕಾರ್ಯತ್ವ ಮತ್ತು ಕಾರಣತ್ವಗಳು ಹೇಗೆ ಬರುತ್ತವೆ ? ಎಂಬ ಪ್ರಶ್ನೆಗೆ ಹೀಗೆ ಉತ್ತರವನ್ನು ತಿಳಿಯಬೇಕು - ಅಭಿವ್ಯಕ್ತಿಯ ಅಪೇಕ್ಷೆಯಿಂದ ಕಾರ್ಯತ್ವವು ಯುಕ್ತವಾಗುತ್ತದೆ ಎಂದು 'ವ್ಯಕ್ತ್ಯಪೇಕ್ಷಯಾ ಕಾರ್ಯತ್ವಂಚ' ಎಂಬ ನ್ಯಾಯವಿವರಣದ ಮಾತಿನಲ್ಲಿ ಹೇಳಿದ್ದಾರೆ. ಹೀಗೆ ಕಾರ್ಯತ್ವದ ವಿರೋಧವನ್ನು ಪರಿಹರಿಸಬೇಕು. 'ಆಕಾಶಾದಿಷು ಸ್ಥಿತಃ' ಇತ್ಯಾದಿ ಭಾಷ್ಯವಾಕ್ಯದ ತಾತ್ಪರ್ಯವನ್ನು ಹೇಳುವ ಮೂಲಕ ಕಾರ್ಯಕಾರಣಗಳ ವಿರೋಧವನ್ನು ನಿರಾಕರಣೆ ಮಾಡಲು 'ತಥಾಚ' ಎಂಬ ವಾಕ್ಯವು ಹೊರಟಿದೆ.

ಆಕಾಶಶಬ್ದ ಸಮನ್ವಯಕ್ಕಾಗಿಯೇ ಈ ಸೂತ್ರ ಹೊರಟಿದೆ

भावदीपः – अत इति ।। विरोधाभावादित्यर्थः । सूत्रस्य समन्वयपरत्वस्फोरणाय भाष्ये शेषमाह – स्थित इति ।। भाष्यस्थानुवादः। तच्छब्दैराकाशादिशब्दैरित्यर्थः ।

'ಅತಃ' ಎಂಬ ಪದಕ್ಕೆ 'ವಿರೋಧವಿಲ್ಲದ್ದರಿಂದ' ಇಲ್ಲವೆಂದರ್ಥ. 'ಕಾರಣತ್ವೇನ' ಎಂಬ ಸೂತ್ರವು ಆಕಾಶಶಬ್ದದ ಸಮನ್ವಯಕ್ಕಾಗಿ ಹೊರಟಿದೆಯೆಂದು ಸ್ಪಷ್ಟವಾಗಿ ತೋರಿಸಲು ಭಾಷ್ಯದಲ್ಲಿ ಶೇಷಪೂರಣ ಮಾಡಿಕೊಳ್ಳಬೇಕಾದ ಪದಗಳನ್ನು 'ಸ್ಥಿತಃ' ಇತ್ಯಾದಿಯಾಗಿ ಟೀಕೆಯಲ್ಲಿ ಹೇಳಿರುತ್ತಾರೆ 'ಸ್ಥಿತಃ' ಎಂಬ ಪದವು ಭಾಷ್ಯದ ಅನುವಾದವಾಗಿದೆ. 'ತಚ್ಛಶಬ್ದೈಃ' ಎಂದರೆ 'ಆಕಾಶಾದಿ ಶಬ್ದಗಳಿಂದ' ಎಂದರ್ಥ.

ನಾಮಸಮನ್ವಯಕ್ಕಾಗಿ ಈ ಅಧಿಕರಣ

भावदीपः – 'अवान्तरं कारणञ्च' इति सङ्क्षेपभाष्ये अवान्तरकारणत्वलिङ्ग-समन्वयोक्तावपीह नामसमन्वयपरत्वोक्तिः 'नामानि सर्वाणि' इति वक्ष्यमाणसमाधानाय समाकर्षाद्युक्त्युपयोगाय चेत्याहुः ।

'ಅವಾಂತರಂ ಕಾರಣಂ ಚ' ಎಂಬುದಾಗಿ ಅಣುಭಾಷ್ಯದಲ್ಲಿ ಅವಾಂತರಕಾರಣತ್ವಲಿಂಗದ ಸಮನ್ವಯವನ್ನು ಮಾಡಿದ್ದರೂ ಕೂಡ ಪ್ರಕೃತ ನಾಮಸಮನ್ವಯಕ್ಕಾಗಿ ಸೂತ್ರ ಹೊರಟಿದೆ ಎಂದು ಹೇಳಿದ್ದಾರೆ. ಏಕೆಂದರೆ 'ನಾಮಾನಿ ಸರ್ವಾಣಿ' ಎಂಬ ಶ್ರುತಿಯ ಆಧಾರದಿಂದ ಮುಂದೆ ಯಾವ

ಸಮಾಧಾನವನ್ನು ಹೇಳುತ್ತಾರೊ ಅದರ ಸಮಾಕರ್ಷಕ್ಕಾಗಿ ಹೀಗೆ ನಾಮಸಮನ್ವಯನ್ನು ಹೇಳಿರುತ್ತಾರೆಂದು ತಿಳಿಯಬೇಕು.

ಹಿಂದಿನ ಆಕ್ಷೇಪಕ್ಕೆ ಉತ್ತರ

भावदीपः – निमित्तविशेषादर्शनाच्चेति प्रागुक्तचोद्यमनूद्य निराह – नच वक्तव्यमिति ।। इत्याद्युक्तेति ।। आकाशनय आदिपदार्थः ।

ಹಿಂದೆ 'ನಿಮಿತ್ತವಿಶೇಷಾದರ್ಶನಾಚ್ಚ' ಎಂಬುದಾಗಿ ಪರಮಾತ್ಮನು ಅವಾಂತರ ಕಾರಣನಾಗಿದ್ದಾನೆ ಎನ್ನಲು ಯಾವುದೇ ವಿಶೇಷಕಾರಣ ಇರುವುದಿಲ್ಲ ಎಂದು ಆಕ್ಷೇಪ ಮಾಡಲಾಗಿತ್ತು. ಅದನ್ನು 'ನ ಚ ವಕ್ತವ್ಯಮ್' ಎಂಬ ಟೀಕಾಮಾತಿನಿಂದ ನಿರಾಕರಣೆ ಮಾಡಿದ್ದಾರೆ.

'यत्तु विशेषं च' ಎಂಬ ಟೀಕೆಗೆ ಪೀಠಿಕೆ

भावदीपः – नन्वेवं पूर्वत्र प्राणप्राणदत्वादिविशेषहेतुरग्रे प्रतिज्ञा-दृष्टान्तानुपरोधादिश्च न वाच्यः स्यादित्यत आह – यत्तु विशेषं च वक्तीति ।।

।। इति श्रीराघवेन्द्रयतिकृते भावदीपे आकाशाधिकरणम् ।।

ಹಿಂದೆ ಹೇಳಲ್ಪಟ್ಟ 'ಪ್ರಾಣಪ್ರಾಣದತ್ವ' ಮೊದಲಾದ ವಿಶೇಷ ಹೇತುವನ್ನು ಮುಂದೆ ಹೇಳಲ್ಪಡುವ ಪ್ರತಿಜ್ಞಾದೃಷ್ಟಾಂತಾನುಪರೋಧವು ಮೊದಲಾದ ವಿಶೇಷ ಹೇತುವನ್ನು ಹೇಳದಿರಬೇಕಾದೀತು ಎಂಬ ಪ್ರಶ್ನೆಗೆ 'ಯತ್ತು ವಿಶೇಷಂ ಚ ವಕ್ತಿ' ಎಂಬ ಟೀಕಾ ಮಾತಿನಿಂದ ಉತ್ತರಿಸಿದ್ದಾರೆ.

॥ ಇಲ್ಲಿಗೆ ಶ್ರೀಮದ್‌ರಾಘವೇಂದ್ರತೀರ್ಥರಿಂದ ವಿರಚಿತವಾದ ಭಾವದೀಪದ
ಆಕಾಶಾಧಿಕರಣದ ಕನ್ನಡ ಅನುವಾದವು ಮುಗಿಯಿತು ॥

॥ ಶ್ರೀ ಮದ್ವೇಶಾರ್ಪಣಮಸ್ತು ॥

।। श्रीजानकीवदनाम्भोजराजहंसाय रामचन्द्राय नमः ।।

।। श्री गुरुभ्यो नमः ।।

श्री राघवेन्द्रतीर्थविरचिता

तन्त्रदीपिका

आकाशाधिकरणम् (१।४।४)

ಅವಾಂತರ ಕಾರಣತ್ವವನ್ನು ಹೇಳುವ ಮೂಲಕ ನಾಮಾತ್ಮಕ ಶಬ್ದದ ಉದ್ದೇಶವೂ ಇದೆ

।। कारणत्वेन चाकाशादिषु यथा व्यपदिष्टोक्तेः ।। १-४-१५ ।।

अत्रावान्तरकारणत्वलिङ्गं वा तादृशाकाशादिनाम वा समन्वीयते । आकाशादिसमुच्चायकश्चः । कार्यत्वसमुच्चायको वा । आकाशादिष्वित्यावृत्तिः। तत्त्वित्यस्ति । न विरोध इति च । ''आत्मन आकाशः सम्भूत'' इत्यादौ कारणत्वेन कार्यत्वेन चोक्ताकाशादिश्च परममुख्यवृत्त्या ब्रह्मैव न केवलं मूलकारणात्मेत्यर्थः । नतु भूतादिः । कुतः ? प्रागुक्तहेतुभ्य इत्यर्थः । नच कार्यकारणभावस्य द्युभ्वादिनयरीत्या व्यङ्ग्यव्यञ्जकरूपत्वेप्येकस्य विरोध इति शङ्क्यम् । आकाशादिषु स्थितत्वादिति शेषः । न विरोध इत्यर्थः । आकाशाद्युत्पत्तौ तदन्तस्थत्वेन तस्याप्यभिव्यक्त्या कार्यत्वं, वाय्वादिस्थरूपव्यक्तिहेतुत्वेन कारणत्वं च युक्तमिति भावः । आकाशादिषु स्थितत्वमेव कुत इत्यत उक्तम् – यथेति । यथा येन प्रकारेणाविदितत्वादिना ''स योऽतोक्षुत'' इत्यादौ व्यपदिष्टस्तस्योक्त्योक्तेराकाशादिषु ''य आकाशो तिष्ठन् यो वायौ तिष्ठन्'' इत्यादावित्यर्थः । उक्तेरित्येव वाच्ये यथा

व्यपदिष्टेत्युक्तिः ''आकाशे तिष्ठन्'' इत्यादावपि आकाशादौ स्थितं ब्रह्मेति कुत इति न शङ्क्यम्, श्रुत्यन्तरोक्ताविदितत्वप्रकारस्य ''यमाकाशो न वेद'' इत्यादिश्रवणादित्यन्तर्यामिनयोक्तन्यायस्मरणार्था ।। ४ ।।

'ಕಾರಣತ್ವೇನ ಚಾಕಾಶಾದಿಷು ಯಥಾ ವ್ಯಪದಿಷ್ಟೋಕ್ತೇಃ'

ಈ ಅಧಿಕರಣದಲ್ಲಿ ಮಹಾವಿಷ್ಣುವು ಪ್ರಧಾನ ಕಾರಣನಷ್ಟೇ ಅಲ್ಲ. ಅವಾಂತರ ಕಾರಣನೂ ಆಗಿದ್ದಾನೆಂಬ ಉದ್ದೇಶದಿಂದ ಅವಾಂತರಕಾರಣತ್ವ ಎಂಬ ಲಿಂಗವನ್ನು ಸಮನ್ವಯ ಮಾಡಲಾಗಿದೆ. ಅಥವಾ ಅವಾಂತರಕಾರಣವನ್ನು ಹೇಳುವ 'ಆಕಾಶ' ಎಂಬ ನಾಮಾತ್ಮಕಶಬ್ದವನ್ನು ಸಮನ್ವಯ ಮಾಡಲಾಗಿದೆ. ಸೂತ್ರದಲ್ಲಿರುವ 'ಚ' ಶಬ್ದವು ಆಕಾಶಾದಿಗಳನ್ನು ಸಮುಚ್ಚಯ ಮಾಡುತ್ತಿದೆ. ಅಥವಾ ಕಾರ್ಯತ್ವ ಎಂಬ ಧರ್ಮದ ಸಮುಚ್ಚಯವನ್ನು ಮಾಡುತ್ತಿದೆ. 'ಆಕಾಶಾದಿಷು' ಎಂಬ ಪದವು ಆವೃತ್ತವಾಗುತ್ತದೆ. 'ತತ್ತು' ಎಂಬ ಪದಗಳು ಅನುವೃತ್ತವಾಗುತ್ತವೆ. 'ನ ವಿರೋಧಃ' ಎಂಬ ಪದಗಳೂ ಕೂಡ ಅನುವೃತ್ತವಾಗುತ್ತವೆ.

ಸೂತ್ರಾರ್ಥ - ಕಾರಣತ್ವೇನ ಚ = 'ಆತ್ಮನಃ ಆಕಾಶಃ ಸಂಭೂತಃ' ಇತ್ಯಾದಿ ಶ್ರುತಿಯಲ್ಲಿ ಮೂಲಕಾರಣನೆಂದು ಪ್ರತಿಪಾದ್ಯನಾದ ಆತ್ಮನೇ ಕಾರ್ಯವಾಚಕವಾದ 'ಆಕಾಶ' ಮೊದಲಾದ ಶಬ್ದಗಳಿಂದಲೂ ಪರಮಮುಖ್ಯವೃತ್ತಿಯಿಂದ ಪ್ರತಿಪಾದ್ಯನಾಗಿದ್ದಾನೆ. ಕೇವಲ ಬ್ರಹ್ಮನು ಮುಖ್ಯಕಾರಣನಷ್ಟೇ ಅಲ್ಲ. ಅವಾಂತರ ಕಾರಣನೂ ಆಗಿದ್ದಾನೆ ಎಂದಭಿಪ್ರಾಯ. ಹೊರತು ಭೂತಾಕಾಶಾದಿಗಳು ಪ್ರತಿಪಾದ್ಯವಲ್ಲ. ಏಕೆಂದರೆ, ವ್ಯಪದಿಷ್ಟೋಕ್ತೇಃ = ಹಿಂದೆ ಹೇಳಿದ ತತ್ತದ್ರೂಪಗಳಿಂದ ಇರುವವನೆಂದು ಹೇಳಿರುವುದರಿಂದ.

ಕಾರ್ಯಕಾರಣಭಾವವು ದ್ಯುಭ್ವಾದ್ಯಧಿಕರಣದಲ್ಲಿ ಹೇಳಿರುವಂತೆ ವ್ಯಂಗ್ಯವ್ಯಂಜಕಭಾವ-ರೂಪದಿಂದ ಒಬ್ಬನಲ್ಲೇ ವಿರುದ್ಧವಾಗುತ್ತದಲ್ಲವೇ? ಎಂದು ಆಶಂಕಿಸಬಾರದು. 'ಆಕಾಶ' ಮೊದಲಾದವುಗಳಲ್ಲಿ ಇರುವುದರಿಂದ ಎಂಬ ಪದವನ್ನು ಸೇರಿಸಿಕೊಳ್ಳಬೇಕು. ಆದ್ದರಿಂದ ವಿರೋಧಕ್ಕೆ ಅವಕಾಶವಿಲ್ಲ. ಯಾವಾಗ ಆಕಾಶಾದಿ ಭೂತಪದಾರ್ಥಗಳು ಹುಟ್ಟುತ್ತವೋ, ಅವುಗಳಲ್ಲಿರುವ ಬ್ರಹ್ಮನೂ ಕೂಡ ಆವಾಗಲೇ ಅಭಿವ್ಯಕ್ತನಾಗುತ್ತಾನೆ. ಈ ಅಭಿವ್ಯಕ್ತಿರೂಪದ ಉದ್ದೇಶದಿಂದ ಪರಮಾತ್ಮನಲ್ಲಿ ಕಾರ್ಯತ್ವವು ಯುಕ್ತವಾಗುತ್ತದೆ. ಆಕಾಶಾದಿಗಳಿಂದ ವಾಯು ಮೊದಲಾದವುಗಳು ಹುಟ್ಟುವಾಗ ಆಕಾಶಾದಿಗಳಿಗೆ ವಾಯುವು ಕಾರಣವಾಗುತ್ತದೆ. ಆವಾಗ

ಭಗವಂತನ ರೂಪವಿಶೇಷವು ಕಾರಣವೆನಿಸುತ್ತದೆ. ಆದ್ದರಿಂದ ವಾಯು ಮೊದಲಾದವುಗಳಲ್ಲಿರುವ ರೂಪದ ಅಭಿವ್ಯಕ್ತಿಗೆ ಕಾರಣವಾದ್ದರಿಂದ ಕಾರಣತ್ವವು ಯುಕ್ತವಾಗುತ್ತದೆ.

ಆಕಾಶಾದಿಗಳಲ್ಲಿ ಬ್ರಹ್ಮನಿದ್ದಾನೆನ್ನಲು ಏನು ಪ್ರಮಾಣ? ಎಂಬ ಆಶಂಕೆಗೆ 'ಯಥಾ' ಎಂದು ಉತ್ತರಿಸಿದ್ದಾರೆ. ಯಥಾ = ಯಾವರೀತಿಯಾಗಿ ಅವಿದಿತತ್ವ ಮೊದಲಾದ ಪ್ರಕಾರಗಳಿಂದ 'ಸ ಯೋऽತೋಶ್ರುತಃ' ಇತ್ಯಾದಿ ಶ್ರುತಿಯಲ್ಲಿ ಪ್ರತಿಪಾದ್ಯನಾಗಿದ್ದಾನೋ, ಆ ಕಾರಣದಿಂದಲೇ ಯುಕ್ತನಾದವನನ್ನು 'ಯ ಆಕಾಶೇ ತಿಷ್ಠನ್ ಯೋ ವಾಯೌ ತಿಷ್ಠನ್' ಇತ್ಯಾದಿ ಶ್ರುತಿಯಲ್ಲಿ ಆಕಾಶಾದಿಗಳಲ್ಲಿರುವವನೆಂದು ಹೇಳಲಾಗಿದೆ ಎಂದು ಸೂತ್ರದ ಅಭಿಪ್ರಾಯ.

ಸೂತ್ರದಲ್ಲಿ 'ಉಕ್ತೇಃ' ಎಂದಷ್ಟೇ ಹೇಳಿದ್ದರು 'ಯಥಾ ವ್ಯಪದಿಷ್ಟೋಕ್ತೇಃ' ಎಂದು ಹೇಳಿದ್ದರಿಂದ 'ಆಕಾಶೇ ತಿಷ್ಠನ್' ಇತ್ಯಾದಿ ಶ್ರುತಿಯಲ್ಲಿಯೂ ಆಕಾಶಾದಿಗಳಲ್ಲಿ ಸ್ಥಿತನಾದವನು ಬ್ರಹ್ಮನೇ ಆಗಿದ್ದಾನೆನ್ನಲು ಏನು ಆಧಾರ ? ಎಂಬ ಆಶಂಕೆಗೆ ಉತ್ತರಿಸಬೇಕಾಗಿದೆ. ಏಕೆಂದರೆ 'ಸ ಯೋऽತೋಶ್ರುತಃ' ಎಂಬ ಐತರೇಯೋಪನಿಷತ್ತಿನಲ್ಲಿ ಬ್ರಹ್ಮನನ್ನು ಅವಿದಿತನೆಂದು ಹೇಳಲಾಗಿದೆ. ಆದರೆ ಇಲ್ಲಿ 'ಯೋ ಆಕಾಶೇ ತಿಷ್ಠನ್' ಎಂಬ ಬೃಹದಾರಣ್ಯಕ ಶ್ರುತಿಯಲ್ಲಿ 'ಯಮಾಕಾಶೋ ನ ವೇದ' ಇತ್ಯಾದಿಯಾದ ಅದೇ ಪ್ರಕರಣದ ಶ್ರುತಿಯಲ್ಲಿ ಆಕಾಶದಲ್ಲಿರುವನನ್ನು ಅವಿದಿತನೆಂದು ವರ್ಣಿಸಲಾಗಿದೆ. ಆದ್ದರಿಂದ ಆಕಾಶದಲ್ಲಿರುವವನು ಬ್ರಹ್ಮನೆಂದು ಸಿದ್ಧವಾಗುತ್ತದೆ ಎಂದು ತಿಳಿಯಬೇಕು. ಹೀಗೆ ಬೇರೆ ಶ್ರುತಿಯಲ್ಲಿ ಹೇಳಿರುವ ಅವಿದಿತತ್ವ ಮೊದಲಾದ ಧರ್ಮಗಳು 'ಯಮಾಕಾಶೋ ನ ವೇದ' ಇತ್ಯಾದಿ ವಾಕ್ಯದಲ್ಲಿ ಶ್ರುತವಾಗಿರುವುದರಿಂದ ಎಂಬುದಾಗಿ ಅಂತರ್ಯಾಮ್ಯಧಿಕರಣದಲ್ಲಿ ಹೇಳಿರುವ ನ್ಯಾಯವನ್ನು ಸ್ಮರಣೆಗೆ ತಂದುಕೊಡಲು 'ಯಥಾ ವ್ಯಪದಿಷ್ಟೋಕ್ತೇಃ' ಎಂದು ಸೂತ್ರಕಾರರು ಹೇಳಿರುತ್ತಾರೆ.

ಶ್ರೀರಾಘವೇಂದ್ರತೀರ್ಥಶ್ರೀಪಾದಂಗಳವರಿಂದ ರಚಿತವಾದ

ತಂತ್ರದೀಪಿಕಾದ ಕನ್ನಡಾನುವಾದದಲ್ಲಿ ಆಕಾಶಾಧಿಕರಣವು ಸಮಾಪ್ತವಾಯಿತು.

ಅದ್ವೈತ-ವಿಶಿಷ್ಟಾದ್ವೈತಮತದಲ್ಲಿ ಆಕಾಶಾಧಿಕರಣ
ಮತ್ತು
ವಿಮರ್ಶೆ

ಅದ್ವೈತಿಗಳ ಅಧಿಕರಣ ಶರೀರ ಹೀಗಿದೆ - ಉಪನಿಷತ್ತುಗಳಲ್ಲಿ ಕೆಲವೆಡೆ ಆಕಾಶವೇ ಮೊದಲಾದ ಸೃಷ್ಟಿಯನ್ನು ಹೇಳಲಾಗಿದೆ. 'ಆತ್ಮನ ಆಕಾಶಃ ಸಂಭೂತಃ' ಆತ್ಮನಿಂದ ಮೊದಲು ಆಕಾಶ ಹುಟ್ಟಿತು ಇತ್ಯಾದಿಯಾಗಿ. ಕೆಲವೆಡೆ ತೇಜಸ್ಸೇ ಮೊದಲಾದ ಸೃಷ್ಟಿಯನ್ನು ಹೇಳಲಾಗಿದೆ. 'ತತ್ತೇಜೋಸೃಜತ' ಬ್ರಹ್ಮನಿಂದ ಮೊದಲು ತೇಜಸ್ಸು ಹುಟ್ಟಿತು ಎಂಬುದಾಗಿ ಹೇಳಲಾಗಿದೆ. ಆದ್ದರಿಂದ ವೇದಾಂತಗಳಲ್ಲಿ ಪರಸ್ಪರ ವಿರೋಧ ಬರುತ್ತದೆ.

ಕಾರ್ಯಸ್ವರೂಪವಾದ ಆಕಾಶ, ತೇಜಸ್ಸು ಇವುಗಳ ಸೃಷ್ಟಿಕ್ರಮದಲ್ಲಿ ಪರಸ್ಪರ ವಿರೋಧವಿದೆ. ಕಾರಣಸ್ವರೂಪನಾದ ಬ್ರಹ್ಮನ ವಿಷಯದಲ್ಲಿ ಯಾವುದೇ ವಿರೋಧವಿರುವುದಿಲ್ಲ. ಸೃಷ್ಟಿಯು ಆಕಾಶದಿಂದ ಪ್ರಾರಂಭವಾಯಿತೆಂದು ಕೆಲವೆಡೆ ಹೇಳಿರಬಹುದು. ತೇಜಸ್ಸಿನಿಂದ ಪ್ರಾರಂಭವಾಯಿತೆಂದು ಕೆಲವೆಡೆ ಹೇಳಿರಬಹುದು. ಆದರೆ ಎಲ್ಲಾ ಬಗೆಯ ಸೃಷ್ಟಿಗೂ ಬ್ರಹ್ಮನೇ ಕಾರಣನಾಗಿದ್ದಾನೆಂಬ ವಿಷಯದಲ್ಲಿ ಯಾವುದೇ ವಿರೋಧವಿರುವುದಿಲ್ಲ. ಏಕೆಂದರೆ 'ಯಥಾ ವ್ಯಪದಿಷ್ಟೋಕ್ತೇಃ' - ವೇದಾಂತಗಳಲ್ಲಿ ಚೇತನನಾದ ಬ್ರಹ್ಮನೇ ಕಾರಣನಾಗಿದ್ದಾನೆಂದು ಒಂದೇ ರೀತಿಯಲ್ಲಿ ಹೇಳಲಾಗಿದೆ. 'ಸೋಕಾಮಯತ ಬಹುಃಸ್ಯಾಮ್' ಎಂಬುದಾಗಿ ಒಂದು ವೇದಭಾಗದಲ್ಲಿ ಹೇಗೆ ಹೇಳಲಾಗಿದೆಯೋ, ಅದರಂತೆ ಮತ್ತೊಂದು ವೇದಭಾಗದಲ್ಲಿ 'ತದೈಕ್ಷತ ಬಹುಃಸ್ಯಾಮ್ ಪ್ರಜಾಯೇಯ ತತ್ತೇಜೋ೨ಸೃಜತ' ಎಂಬುದಾಗಿ ಹೇಳಲಾಗಿದೆ. ಆದ್ದರಿಂದ ಬ್ರಹ್ಮನೇ ಜಗತ್ಕಾರಣನೆಂಬ ವಿಷಯದಲ್ಲಿ ಯಾವ ವಿವಾದವೂ ಇರುವುದಿಲ್ಲ. ಇಷ್ಟು ಸಿದ್ಧಾಂತ.

ಆದ್ದರಿಂದ 'ಕಾರಣತ್ವೇನ ಚ ಆಕಾಶಾದಿಷು ಯಥಾವ್ಯಪದಿಷ್ಟೋಕ್ತೇಃ' ಎಂಬ ಸೂತ್ರದಲ್ಲಿ 'ಕಾರಣತ್ವೇನ' ಎಂಬ ಪದವನ್ನು 'ಕಾರಣತ್ವೇ-ನ' ಎಂಬುದಾಗಿ ಮತ್ತು 'ಕಾರಣತ್ವೇನ' ಎಂಬುದಾಗಿಯೂ ಪದಚ್ಛೇದವನ್ನು ಮಾಡಿಕೊಂಡು ಅರ್ಥೈಸಿಕೊಳ್ಳಬೇಕು. 'ಕಾರಣತ್ವೇ ನ' ಎಂದು ಪದಚ್ಛೇದ ಮಾಡಿದಾಗ 'ಚ' ಶಬ್ದಕ್ಕೆ 'ತು' ಎಂದರ್ಥ. ಆಕಾಶಾದಿಗಳ ಕಾರಣದ ವಿಷಯದಲ್ಲಿ ವಿಪ್ರತಿಪತ್ತಿಯಿರುವುದಿಲ್ಲ. ಏಕೆಂದರೆ ಕಾರಣತ್ವೇನ 'ಯಥಾವ್ಯಪದಿಷ್ಟೋಕ್ತೇಃ' ಒಂದು ವೇದಭಾಗದಲ್ಲಿ ಕಾರಣಸ್ವರೂಪವನ್ನು ಹೇಳಿದಂತೆಯೇ, ಮತ್ತೊಂದು ವೇದಭಾಗದಲ್ಲಿಯೂ ಹೇಳಲಾಗಿದೆ. ಇಷ್ಟು ಸೂತ್ರಾರ್ಥ.

ಅದ್ವೈತಿಗಳ ಈ ಸೂತ್ರಾರ್ಥವು ಅಸಾಧುವಾಗಿದೆ. ಏಕೆಂದರೆ ಸೂತ್ರದಲ್ಲಿರುವ 'ಚ' ಶಬ್ದಕ್ಕೆ 'ತು' ಎಂಬ ಶಬ್ದದ ಅರ್ಥವನ್ನು ಹೇಳಬೇಕು. ಮತ್ತು 'ಕಾರಣತ್ವೇನ' ಎಂಬ ಪದವನ್ನು ಒಮ್ಮೆ ವಿಭಾಗ ಮಾಡಿಕೊಂಡು, ಮತ್ತೊಮ್ಮೆ ವಿಭಾಗ ಮಾಡದೇ ಎರಡೂ ಅರ್ಥವನ್ನು ಒಂದೇ ಪದಕ್ಕೆ ಹೇಳುವಂತದ್ದು, ಬಹಳ ಕ್ಲಿಷ್ಟಕರವಾಗಿದೆ. ಅಷ್ಟೇ ಅಲ್ಲದೇ 'ಆಕಾಶಾದಿಷು' ಎಂಬ ಪದಕ್ಕೆ ಅನ್ವಯವನ್ನು ತೋರಿಸಿಕೊಡಲು 'ಸೃಷ್ಟಿಕ್ರಮದ ಮೂಲಕ ವಿರೋಧವಿದೆ' ಎಂಬ ಪದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕಾಗುತ್ತದೆ.

ಅದ್ವೈತಿಗಳ ಅಧಿಕರಣಶರೀರ ಅಸಾಧುವಾಗಿದೆ. ಏಕೆಂದರೆ

ಅಧ್ಯಾಯಸಂಗತೇಃ ಪಾದಸಂಗತೇರಪ್ಯಭಾವತಃ ।
ಪೂರ್ವಪಕ್ಷಾನುತ್ಥಿತೇಶ್ಚ ಸಿದ್ಧಾಂತಸ್ಯಾಪ್ಯಯೋಗತಃ ॥೧ ॥

ಈ ಅಧಿಕರಣಕ್ಕೆ ಅಧ್ಯಾಯಸಂಗತಿಯಿರುವುದಿಲ್ಲ. ಪಾದಸಂಗತಿಯೂ ಇರುವುದಿಲ್ಲ. ಪೂರ್ವಪಕ್ಷವೇ ಹುಟ್ಟುವುದಿಲ್ಲ. ಸಿದ್ಧಾಂತವೂ ಅಯುಕ್ತವಾಗಿದೆ.

ಶ್ರುತಿಗಳ ಪರಸ್ಪರವಿರೋಧವನ್ನು ಈ ಅಧಿಕರಣದಲ್ಲಿ ನಿರಾಸ ಮಾಡುತ್ತಿದ್ದೀರಿ. ಆದರೆ ಎರಡನೆಯ ಅಧ್ಯಾಯದಲ್ಲೇ ಇದು ಸಂಗತವಾಗುತ್ತದೆ. ಮೊದಲನೆಯ ಸಮನ್ವಯಾಧ್ಯಾಯದಲ್ಲಿ ಈ ಅಧಿಕರಣವು ಅಸಂಗತವಾಗಿದೆ.

ಆಕ್ಷೇಪ - ದ್ವಿತೀಯಾಧ್ಯಾಯದಲ್ಲಿ ಬೇರೆ ಪ್ರಮಾಣಗಳ ವಿರೋಧಪರಿಹಾರವನ್ನಷ್ಟೇ ಮಾಡಲಾಗಿದೆ. ಈ ಅಧ್ಯಾಯದಲ್ಲಿ ಕೆಲವೆಡೆ ಶ್ರುತಿಗಳ ಪರಸ್ಪರವಿರೋಧವನ್ನು ಮಾಡಲಾಗಿದೆ. ಶ್ರುತಿಗಳಿಗಿರುವ ಪರಸ್ಪರ ವಿರೋಧದ ಪರಿಹಾರವನ್ನು ಮಾಡುತ್ತಿರುವುದರಿಂದ ಎರಡನೆಯ ಅಧ್ಯಾಯದಲ್ಲಿ ಹೇಗೆ ಸೇರುತ್ತದೆ ?

ಸಮಾಧಾನ - ಇದು ಸರಿಯಲ್ಲ. ಏಕೆಂದರೆ ವಿರೋಧವಿಲ್ಲ ಎಂಬ ವಿಷಯದಲ್ಲೇ ಶ್ರುತಿಗಳ ಪರಸ್ಪರ ವಿರೋಧ ಪರಿಹಾರವು ಒಂದು ಅವಾಂತರ ಭೇದವಾಗಿದೆ. ಇಂತಹ ಅವಾಂತರಭೇದದಿಂದ ಎರಡನೆಯ ಅಧ್ಯಾಯದಲ್ಲಿ ಪಾದಭೇದಕ್ಕೆ ಇದು ಕಾರಣವಾಗುತ್ತದೆ. ಎರಡನೆಯ ಅಧ್ಯಾಯಕ್ಕಿಂತ ಬಹಿರ್ಭೂತವಾದ ಸಂಗತಿಯನ್ನು ಹೊಂದುವುದಿಲ್ಲ. ಹೀಗೊಪ್ಪದೇ ಇಂತಹ ಶ್ರುತಿಗಳ ವಿರೋಧವನ್ನು ಪರಿಹಾರ ಮಾಡುವ ಮೂಲಕ ಸಮನ್ವಯಕ್ಕೆ ಈ ಅಧಿಕರಣವು ಪೂರಕವಾಗುತ್ತದೆಂದು ಭಾವಿಸುವುದಾದರೆ ಸಮನ್ವಯದಲ್ಲೇ ಅನೇಕ ಪ್ರಭೇದವಿದೆಯೆಂದು ನೀವೇ ಹೇಳುತ್ತೀರಿ. ಸ್ಪಷ್ಟ ಬ್ರಹ್ಮಲಿಂಗ ಸಮನ್ವಯವನ್ನು, ಅಸ್ಪಷ್ಟ

ಬ್ರಹ್ಮಲಿಂಗ ಸಮನ್ವಯವನ್ನು ಬೇರೆ ಬೇರೆ ಪಾದಗಳಲ್ಲಿ ಮಾಡಿದ್ದೀರಿ. ಅವುಗಳನ್ನೂ ಕೂಡ ಎರಡನೆಯ ಅಧ್ಯಾಯದಲ್ಲೋ, ಮೂರನೆಯ ಅಧ್ಯಾಯದಲ್ಲೋ ಹೇಳಬೇಕಾಗುತ್ತದೆ.

ಮತ್ತು ಎರಡನೆಯ ಅಧ್ಯಾಯದಲ್ಲಿ 'ನ ವಿಯದಶ್ರುತೇಃ' ಎಂಬ ಸೂತ್ರದಿಂದ ಪ್ರಾರಂಭವಾಗುವ ಎರಡು ಪಾದಗಳು ವೇದಾಂತಗಳಲ್ಲಿರುವ ಪರಸ್ಪರ ವಿರೋಧಗಳನ್ನು ಪರಿಹಾರ ಮಾಡಲು ಹೊರಟಿರುತ್ತದೆಂದು ಅದ್ವೈತಿಗಳೇ ಒಪ್ಪಿರುತ್ತಾರೆ.

ಎರಡನೆಯ ಅಧ್ಯಾಯದಲ್ಲಿ ಪ್ರಮಾಣಾಂತರದ ವಿರೋಧವನ್ನಷ್ಟೇ ಪರಿಹರಿಸಲಾಗಿದೆ. ಮೂರು ಮತ್ತು ನಾಲ್ಕನೆಯ ಪಾದಗಳಲ್ಲಿ ಮಾಡುವಂತಹ ಪರಸ್ಪರ ವಿರೋಧ ಪರಿಹಾರವು ಕೇವಲ ಪ್ರಾಸಂಗಿಕವಾಗಿ ಪ್ರಸಕ್ತವಾಗಿವೆ. ವಿಪ್ರತಿಷೇಧವಿರುವುದರಿಂದ ಅನ್ಯಪಕ್ಷಗಳು ಪ್ರಮಾಣವಾಗಿವೆಯೆಂದು ಎರಡು ಪಾದದಲ್ಲಿ ಸಮರ್ಥಿಸಿದ ಮೇಲೆ ಅಂತಹ ವಿಪ್ರತಿಷೇಧವು ಪರಸ್ಪರ ವಿರೋಧವು ವೇದಾಂತಗಳಲ್ಲಿಯೂ ಸಮಾನವಾಗಿದೆ. ಆದ್ದರಿಂದ ಸಮಯಗಳಂತೆ ವೇದಾಂತಗಳೂ ಕೂಡ ಅಪ್ರಮಾಣವಾಗಬೇಕಲ್ಲವೇ? ಎಂಬ ಶಂಕೆಯು ಪ್ರಾಪ್ತವಾದರೆ ಮುಂದಿನ ಮೂರು ಮತ್ತು ನಾಲ್ಕನೆಯ ಪಾದಗಳಲ್ಲಿ ಅದನ್ನು ಪರಿಹರಿಸಿದ್ದೇವೆ.

ಸಮಾಧಾನ - ಇದು ತಪ್ಪು. ಎರಡು ಪಾದಗಳಲ್ಲಿ ಶ್ರುತಿಗಳ ಪರಸ್ಪರ ವಿರೋಧವನ್ನು ಪರಿಹರಿಸುತ್ತಿದ್ದೀರಿ. ಮತ್ತು 'ಅವಿರೋಧತ್ವ' ಎಂಬ ಎರಡನೆಯ ಅಧ್ಯಾಯದ ಅವಚ್ಛೇದಕಧರ್ಮವು ಶ್ರುತಿಗಳ ಪರಸ್ಪರ ವಿರೋಧದಲ್ಲಿಯೂ ಇರುತ್ತದೆ. ಈ ಎರಡು ಕಾರಣಗಳಿಂದ ನೇರವಾಗಿಯೇ ಸಂಗತಿಯನ್ನು ಪಾದದ್ವಯಗಳಿಗೆ ಹೇಳಲು ಬರುವಾಗ ಪ್ರಾಸಂಗಿಕವೆಂದು ಹೇಳುವುದು ಅಯುಕ್ತವಾಗಿದೆ. ಹೀಗೊಪ್ಪದಿದ್ದರೆ ಶ್ರುತಿಗಳ ಪರಸ್ಪರ ವಿರೋಧವೇ ಎರಡನೆಯ ಅಧ್ಯಾಯದ ಮುಖ್ಯಉದ್ದೇಶ; ಸಮಯವಿರೋಧವು ಪ್ರಾಸಂಗಿಕವಾಗಿದೆಯೆಂದು ವಿಪರೀತವಾಗಿ ನಾವು ಆಕ್ಷೇಪ ಮಾಡಿದರೆ ನಿಮ್ಮಿಂದ ಉತ್ತರಿಸಲಾಗದು. ಏಕೆಂದರೆ ಮಾನಾಂತರವಿರೋಧವು ಹೇಗೆ ಅಪ್ರಾಮಾಣ್ಯದಲ್ಲೇ ಪರ್ಯವಸಾನವಾಗುತ್ತದೋ, ಅದರಂತೆ ಶ್ರುತಿಗಳ ಪರಸ್ಪರ ವಿರೋಧವೂ ಕೂಡ ಅಪ್ರಾಮಾಣ್ಯದಲ್ಲೇ ಪರ್ಯವಸಾನವಾಗುತ್ತದೆ. ಹೀಗೆ ಅಪ್ರಮಾಣ್ಯಪರ್ಯವಸಾಯಿತ್ವವು ಎರಡೂ ಕಡೆ ಸಮಾನವಾದ್ದರಿಂದ ಪರಸ್ಪರ ವಿರೋಧವನ್ನು ಪ್ರಾಸಂಗಿಕವೆಂದು ಹೇಳಲಾಗದು.

ಅಷ್ಟೇ ಅಲ್ಲದೇ ಈ ಅಧಿಕರಣದಲ್ಲಿ ಪ್ರಾಸಂಗಿಕವಾಗಿ ಯಾವ ಪರಸ್ಪರವಿರೋಧವನ್ನು ಪರಿಹರಿಸುತ್ತಿದ್ದೀರೋ ಇದನ್ನೂ ಕೂಡ ಪ್ರಾಸಂಗಿಕವಾಗಿ ಮೂರು ಅಥವಾ ನಾಲ್ಕನೆಯ

ಪಾದದಲ್ಲಿಯೇ ಹೇಳಬಹುದಲ್ಲವೇ? ಆದ್ದರಿಂದ ಯಾವುದೇ ಕಾರಣದಿಂದಲೂ ಈ ಆಕಾಶಾಧಿಕರಣಕ್ಕೆ ಅದ್ವೈತಿಗಳ ಪ್ರಕಾರ ಅಧ್ಯಾಯಸಂಗತಿಯು ಇರುವುದಿಲ್ಲ.

ಅದ್ವೈತ ಸಿದ್ಧಾಂತದಲ್ಲಿ ಈ ಆಕಾಶಾಧಿಕರಣಕ್ಕೆ ಪಾದಸಂಗತಿಯೂ ಸಹ ಕೂಡುವುದಿಲ್ಲ. ಏಕೆಂದರೆ ಅದ್ವೈತಿಗಳ ಪ್ರಕಾರ ಈ ಪಾದವು ಪ್ರಧಾನಕ್ಕೆ ಶಬ್ದಪ್ರತಿಪಾದ್ಯತ್ವದ ನಿರಾಕರಣೆ ಮಾಡಲು ಹೊರಟಿದೆ. ಆದರೆ ಈ ಅಧಿಕರಣದಲ್ಲಿ ಕಾರ್ಯಭೂತವಾದ ಜಗದ್ವಿಷಯಕವಾದ ವಾಕ್ಯಗಳಲ್ಲಿ ಬರುವ ವಿರೋಧವನ್ನು ಪರಿಹರಿಸಲಾಗಿದೆ. ಪ್ರಧಾನವು ಶಬ್ದಪ್ರತಿಪಾದ್ಯವಲ್ಲ ಎಂಬುದಕ್ಕೂ ಇದಕ್ಕೂ ಏನೂ ಸಂಬಂಧವಿಲ್ಲ. ಆದ್ದರಿಂದ ಈ ಅಧಿಕರಣಕ್ಕೆ ಅಧ್ಯಾಯಸಂಗತಿಯು ಹೇಗೆ ಇಲ್ಲವೋ, ಅದರಂತೆ ಪಾದಸಂಗತಿಯೂ ಕೂಡ ಇರುವುದಿಲ್ಲ.

ಅಧ್ಯಾಯಸಂಗತಿ, ಪಾದಸಂಗತಿಗಳು ಇರುವುದಿಲ್ಲ ಎಂದಷ್ಟೇ ಅಲ್ಲ. ಪೂರ್ವಪಕ್ಷವೇ ಹುಟ್ಟಲು ಸಾಧ್ಯವಿಲ್ಲ. 'ತತ್ತೇಜೋऽಸೃಜತ' ಎಂಬಲ್ಲಿ ತೇಜಸ್ಸಿನ ಸೃಷ್ಟಿಯನ್ನಷ್ಟೇ ಹೇಳಲಾಗಿದೆ ಹೊರತು, ಆಕಾಶದ ಸೃಷ್ಟಿಯನ್ನು ಇಲ್ಲಿ ಹೇಳಿಲ್ಲ.

ಆಕಾಶಕ್ಕಿಂತಲೂ ತೇಜಸ್ಸು ಮೊದಲು ಹುಟ್ಟಿದೆಯೆಂದು ಶ್ರುತಿವಾಕ್ಯದಲ್ಲಿ ಹೇಳಿಯೇ ಇಲ್ಲ. ಹಾಗೇನಾದರೂ ಹೇಳಿದ್ದಲ್ಲಿ, 'ಆತ್ಮನ ಆಕಾಶಃ ಸಂಭೂತಃ' ಎಂಬುದರಿಂದ ವಿರೋಧ ಬರುತ್ತಿತ್ತು. ಏಕೆಂದರೆ ಒಂದು ಶ್ರುತಿಯಲ್ಲಿ ಆತ್ಮನಿಂದ ತೇಜಸ್ಸು, ತೇಜಸ್ಸಿನಿಂದ ವಾಯು ಇತ್ಯಾದಿಯಾಗಿ ಹೇಳಿ, ಮತ್ತೊಂದು ಕಡೆ ಆತ್ಮನಿಂದ ಆಕಾಶ, ಆಕಾಶದಿಂದ ವಾಯು, ವಾಯುವಿನಿಂದ ತೇಜಸ್ಸು ಹುಟ್ಟುತ್ತದೆ ಎಂದು ಹೇಳಿದರೆ ಸ್ಪಷ್ಟವಾಗಿ ವಿರೋಧ ಬರುತ್ತಿತ್ತು. ಆದರೆ ಶ್ರುತಿಯಲ್ಲಿ ನೇರವಾಗಿ ತೇಜಸ್ಸಿನ ಸೃಷ್ಟಿಯನ್ನು ಹೇಳಲಾಗಿದೆ. ಆಕಾಶದ ಸೃಷ್ಟಿಯ ಬಗ್ಗೆ ಹೇಳಿಯೇ ಇಲ್ಲ. ಇಷ್ಟುಮಾತ್ರದಿಂದ ವಿರೋಧವನ್ನು ತೋರಿಸಲಾಗದು.

ಪ್ರಶ್ನೆ - 'ತತ್ತೇಜೋऽಸೃಜತ' ಎಂಬ ವಾಕ್ಯದಲ್ಲಿ ಪರಮಾತ್ಮನಿಂದ ತೇಜಸ್ಸು ಹುಟ್ಟಿತೆಂದು ಹೇಳಲಾಗಿದೆ. ಆದರೆ 'ಆಕಾಶಾದ್‌ವಾಯುಃ ವಾಯೋರಗ್ನಿಃ' ಎಂಬ ವಾಕ್ಯದಲ್ಲಿ ಪರಮಾತ್ಮನಿಂದ ಮೊದಲು ಆಕಾಶವು ಹುಟ್ಟಿ, ಆಕಾಶದಿಂದ ವಾಯು, ವಾಯುವಿನಿಂದ ತೇಜಸ್ಸು ಹುಟ್ಟಿದೆಯೆಂದು ಹೇಳಲಾಗಿದೆ. ಈ ಎರಡು ವಾಕ್ಯಗಳಿಗೆ ಪರಸ್ಪರ ವಿರೋಧ ಬರುತ್ತದಲ್ಲವೇ?

ಉತ್ತರ - ಹೌದು, ಆದರೆ ಈ ವಿರೋಧವನ್ನು ಈ ಅಧಿಕರಣದ ಸಿದ್ಧಾಂತದಲ್ಲಿ ಪರಿಹರಿಸಬೇಕಾಗಿಲ್ಲ.

ವಿಯತ್ಪಾದದ 'ತೇಜೋತಸ್ತಥಾ ಹ್ಯಾಹ' ಎಂಬ ಸೂತ್ರದ ಸಿದ್ಧಾಂತದಲ್ಲಿ ಈ ಎರಡು ವಾಕ್ಯಗಳ ವಿರೋಧವನ್ನು ಪರಿಹರಿಸಲಾಗಿದೆ. ಆದ್ದರಿಂದ ವಿಯತ್ಪಾದದಲ್ಲಿಯೇ ಈ ವಿರೋಧವನ್ನು ಪರಿಹರಿಸುತ್ತಾರೆಂದು ನೀವೇ ಒಪ್ಪಿರುವಾಗ, ಪುನಃ ಅದೇ ವಿರೋಧವನ್ನು ಇಲ್ಲಿಯೂ ಪರಿಹರಿಸುವುದು ವ್ಯರ್ಥವಾಗುತ್ತದೆ.

ಸಿದ್ಧಾಂತವೂ ಸಹ ಅಯುಕ್ತವಾಗಿದೆ. ಏಕೆಂದರೆ 'ಸತ್ಯಂ ಜ್ಞಾನಮನಂತಂ ಬ್ರಹ್ಮ, ಏಕೇಮೇವಾದ್ವಿತೀಯಂ' ಇತ್ಯಾದಿ ವಾಕ್ಯಗಳಿಂದ ಶುದ್ಧಬ್ರಹ್ಮನೇ ಪ್ರಕೃತನಾಗಿದ್ದಾನೆ. ಇಂತಹ ಶುದ್ಧಬ್ರಹ್ಮನಲ್ಲಿ 'ಸೋऽಕಾಮಯತ' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಕಾಮಯಿತೃತ್ವಾದಿಗಳು ವಿರುದ್ಧವಾಗುತ್ತವೆ. ಆದ್ದರಿಂದ ಶುದ್ಧಬ್ರಹ್ಮನ ಬಗ್ಗೆ ಸಿದ್ಧಾಂತ ಮಾಡಲು ಹೊರಟ ನೀವು ಕಾಮಯಿತೃತ್ವಾದಿ ಧರ್ಮಗಳನ್ನು ಆಧರಿಸುವುದು ತಪ್ಪಾಗುತ್ತದೆ.

ಮತ್ತು ಕಾರಣವಿಷಯಕವಾದ ವಾಕ್ಯಗಳಲ್ಲಿ ವಿರೋಧವಿಲ್ಲವೆಂದು ಹೇಳಿದಿರಿ. ಆದರೆ 'ಸದೇವ ಸೌಮ್ಯೇದಮಗ್ರ ಆಸೀತ್' ಎಂಬ ವಾಕ್ಯದಲ್ಲಿ ಜಗತ್ತಿಗೆ ಸತ್‌ಸ್ವರೂಪವು ಕಾರಣವಾಗಿದೆಯೆಂದು ಹೇಳಲಾಗಿದೆ. 'ಅಸದ್ವಾ ಇದಮಗ್ರ ಆಸೀತ್' ಎಂಬ ವಾಕ್ಯದಲ್ಲಿ ಅಸತ್ ವಾಕ್ಯವು ಕಾರಣವೆಂದು ಹೇಳಲಾಗಿದೆ. ಆದ್ದರಿಂದ ಕಾರಣವಿಷಯಕವಾದ ವಾಕ್ಯಗಳಲ್ಲಿಯೂ ವಿರೋಧವು ಶ್ರುತಿಯಲ್ಲಿ ಕಾಣಿಸುತ್ತಿರುವಾಗ ಇದರ ಪರಿಹಾರವನ್ನೇಕೆ ನೀವು ಮಾಡಿಲ್ಲ. ಅಷ್ಟೇ ಅಲ್ಲದೇ ಕಾರ್ಯವಿಷಯಕವಾದ ವಾಕ್ಯಗಳಲ್ಲಿ ವಿರೋಧವಿದೆಯೆಂದು ಪೂರ್ವಪಕ್ಷ ಮಾಡಿದಿರಿ. ಅದರ ಪರಿಹಾರವನ್ನೇ ಸಿದ್ಧಾಂತದಲ್ಲಿ ನೀವು ಮಾಡಿರುವುದಿಲ್ಲ.

ಒಂದುವೇಳೆ ಕಾರ್ಯವು ಕಲ್ಪಿತವಾದ್ದರಿಂದ ಅದರಲ್ಲಿ ಶ್ರುತಿಗೆ ತಾತ್ಪರ್ಯವಿಲ್ಲದ ಕಾರಣ ಅಂತಹ ವಾಕ್ಯಗಳನ್ನು ನಾವು ಉದ್ಧಾರ ಮಾಡಿರುವುದಿಲ್ಲ ಎನ್ನುವುದಾದರೆ ವಿಯತ್ಪಾದದಲ್ಲಿಯೂ ಕಾರ್ಯವಿಷಯಕವಾದ ವಾಕ್ಯಗಳ ವಿರೋಧ ಪರಿಹಾರ ಮಾಡಿದ್ದೂ ತಪ್ಪಾಗಬೇಕಾದೀತು. ಮತ್ತು ಕಾಮಯಿತೃತ್ವಾದಿ ವಿಶಿಷ್ಟಬ್ರಹ್ಮನು ಕಲ್ಪಿತನಾದ್ದರಿಂದ ಅದರ ವಿರೋಧದ ಪರಿಹಾರವನ್ನೇಕೆ ಇಲ್ಲಿ ಮಾಡಿದ್ದೀರಿ. ಅದೂ ಕೂಡ ತಪ್ಪಲ್ಲವೇ?

ಆದ್ದರಿಂದ ಅದ್ವೈತ ಸಿದ್ಧಾಂತದಲ್ಲಿ ಈ ಅಧಿಕರಣಕ್ಕೆ ಅಧ್ಯಾಯಸಂಗತಿ ಮತ್ತು ಪಾದಸಂಗತಿಗಳು ಇರುವುದಿಲ್ಲ. ಪೂರ್ವಪಕ್ಷ ಹಾಗೂ ಸಿದ್ಧಾಂತಗಳೂ ಕೂಡ ಹುಟ್ಟುವುದಿಲ್ಲ.

ರಾಮಾನುಜ ಭಾಷ್ಯದ ಅಧಿಕರಣ ಶರೀರ ಹೀಗಿದೆ - 'ತದ್ಧೇದಂ ತರ್ಹ್ಯವ್ಯಾಕೃತಮಾಸೀತ್ ಅಸದ್ವಾ ಇದಮಗ್ರ ಆಸೀತ್' ಎಂಬ ವಾಕ್ಯವು ಈ ಅಧಿಕರಣದ ವಿಷಯವಾಗಿದೆ. ಇದು

ಪ್ರಕೃತಿಪರವಾಗಿದೆಯೋ, ಅಥವಾ ಬ್ರಹ್ಮಪರವಾಗಿದೆಯೋ ? ಎಂಬುದು ಸಂಶಯ. ಪ್ರಕೃತಿಪರವಾಗಿದೆಯೆಂದು ಪೂರ್ವಪಕ್ಷ. ಬ್ರಹ್ಮಪರವಾಗಿದೆಯೆಂದು ಸಿದ್ಧಾಂತ. ಇಷ್ಟು ರಾಮಾನುಜರ ಅಧಿಕರಣ ಶರೀರ.

ಇವರ ಅಧಿಕರಣ ಶರೀರವು ಅಸಾಧುವಾಗಿದೆ. ಏಕೆಂದರೆ ಪ್ರಕೃತಿಯು 'ತದ್ಧೇದಂ' ಎಂಬ ಶ್ರುತಿವಾಕ್ಯದಿಂದ ಪ್ರತಿಪಾದ್ಯವಾಗಿದೆ ಎಂಬ ಪೂರ್ವಪಕ್ಷವೇ ಹುಟ್ಟುವುದಿಲ್ಲ. ಏಕೆಂದರೆ 'ಅವ್ಯಾಕೃತ' 'ಅಸತ್' ಮೊದಲಾದ ಶಬ್ದಗಳಿಗೆ ಪ್ರಕೃತಿಯಲ್ಲಿ ರೂಢಿವೃತ್ತಿಯು ಇರುವುದಿಲ್ಲ. ಯೋಗವೃತ್ತಿಯನ್ನಾಗಲೀ, ಗೌಣೀವೃತ್ತಿಯನ್ನಾಗಲೀ, ಪ್ರಕೃತಿಯಲ್ಲಿ ನೀವು ಹೇಳಬಹುದು. ಅದು ಬ್ರಹ್ಮನಲ್ಲಿಯೂ ಕೂಡ ಸಮಾನವಾಗಿರುವಾಗ ಪ್ರಕೃತಿಯು ಶ್ರುತಿಪ್ರತಿಪಾದ್ಯವೆಂದು ಪೂರ್ವಪಕ್ಷ ಮಾಡಲು ಸಾಧ್ಯವಿಲ್ಲ.

ಮತ್ತು ನಿರವಕಾಶವಾದ ಪ್ರಕೃತಿಯ ಯಾವುದೇ ಲಿಂಗಗಳೂ ಕೂಡ ಇಲ್ಲಿ ಕಾಣಿಸುತ್ತಿಲ್ಲ. ಹೊರತಾಗಿ ಈಕ್ಷತ್ಯಧಿಕರಣದಲ್ಲಿ ಹೇಳಿದ ನ್ಯಾಯದಂತೆ ಚೇತನಕ್ಕೆ ಕಾರಣತ್ವವು ನಿರ್ಣೀತವಾಗಿದೆ ಆದ್ದರಿಂದ ಅಸದಾದಿಶಬ್ದಗಳಿಗೂ ಚೇತನಪರತ್ವವನ್ನೇ ಹೇಳುವುದು ನ್ಯಾಯವಾಗಿದೆ.

ರಾಮಾನುಜರ ಮತದಲ್ಲಿಯೂ ಈ ಅಧಿಕರಣಕ್ಕೆ ಪಾದಸಂಗತಿಯು ಇರುವುದಿಲ್ಲ-ವೆಂಬುದು ಸ್ಫುಟವಾಗಿದೆ. ಏಕೆಂದರೆ 'ತದ್ಧೇದಂ ತರ್ಹ್ಯವ್ಯಾಕೃತಮಾಸೀತ್' ಎಂಬ ವಾಕ್ಯವಾಗಲೀ 'ಮಹತಃ ಪರಮವ್ಯಕ್ತಮ್' ಎಂಬ ವಾಕ್ಯವಾಗಲೀ ಪ್ರಕೃತಿಪ್ರತಿಪಾದಕವಾಗಿದೆಯೆನ್ನಲು ಯಾವುದೇ ಸ್ಪಷ್ಟಲಿಂಗಗಳ ಛಾಯೆಯು ಕಾಣಿಸುತ್ತಿಲ್ಲ. ಈ ಪಾದದಲ್ಲಿ ಆಪಾತತಃ ಸ್ಪಷ್ಟಲಿಂಗವು ಪ್ರಕೃತ್ಯಾದಿಗಳಲ್ಲಿ ತೋರಿದರೆ ಅದನ್ನು ನಿರಾಕರಿಸಲಾಗುತ್ತಿದೆಯೆಂದು ನೀವು ಹೇಳುತ್ತೀರಿ. ಆದರೆ ಈ ಅಧಿಕರಣದಲ್ಲಿ ಅಂತಹ ಸ್ಪಷ್ಟಲಿಂಗಗಳೂ ಸಹ ಕಾಣಿಸುತ್ತಿಲ್ಲ.

ಇಲ್ಲಿಗೆ ಆಕಾಶಾಧಿಕರಣದಲ್ಲಿ ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ ಇವುಗಳ ಅನುವಾದವು ಮತ್ತು ತಂತ್ರದೀಪಿಕೆ ಹಾಗೂ ಮತತ್ರಯ ವಿಮರ್ಶೆಯು ಸಮಾಪ್ತವಾಯಿತು

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥

ಸಮಾಕರ್ಷಾಧಿಕರಣ

ಬ್ರಹ್ಮಸೂತ್ರ, ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ತ್ವಪ್ರದೀಪ, ತತ್ತ್ವಪ್ರಕಾಶಿಕಾ, ಭಾವದೀಪ

ವಿಶೇಷವಿಚಾರದೊಂದಿಗೆ ಕನ್ನಡಭಾಷೆಯಲ್ಲಿ ಅನುವಾದ

ಮತ್ತು

ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆ

॥ ಹರಿಃ ಓಂ ॥

॥ ಶ್ರೀವೇದವ್ಯಾಸಾಯ ನಮಃ ॥

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಗುರುಭ್ಯೋ ನಮಃ ॥

॥ ಶ್ರೀಮದ್‌ರಾಘವೇಂದ್ರತೀರ್ಥಗುರುಭ್ಯೋ ನಮಃ ॥

॥ ಶ್ರೀಗುರುಭ್ಯೋ ನಮಃ ॥

ಸಮಾಕರ್ಷಾಧಿಕರಣ

ಬ್ರಹ್ಮಸೂತ್ರ

'ಸಮಾಕರ್ಷಾತ್' ಎಂಬ ಸೂತ್ರ ವ್ಯಾಖ್ಯಾನ

ಬ್ರಹ್ಮಸೂತ್ರಮ್ – ।। ಸಮಾಕರ್ಷಾತ್ ।। ೧ ।।

ಸೂತ್ರಾರ್ಥ - ಪರಮಮುಖ್ಯವೃತ್ತಿಯಿಂದ ಪರಮಾತ್ಮನನ್ನು ಪ್ರತಿಪಾದಿಸುವ ಶಬ್ದಗಳೇ ಲೌಕಿಕ ವಸ್ತುಗಳನ್ನು ಮುಖ್ಯವೃತ್ತಿಯಿಂದ ಪ್ರತಿಪಾದನೆ ಮಾಡುತ್ತವೆ. ಆದ್ದರಿಂದ ಲೋಕವ್ಯವಹಾರವು ಲೋಪವಾಗಲಿ ಎಂಬ ಆಕ್ಷೇಪಕ್ಕೆ ಅವಕಾಶವಿಲ್ಲ.

ಅರ್ಥ -- ಸ್ವಾಭಾವಿಕವಾಗಿ ಪರಮಮುಖ್ಯವೃತ್ತಿಯಿಂದ ಪರಮಾತ್ಮನನ್ನು ಪ್ರತಿಪಾದನೆ ಮಾಡುವ ಶಬ್ದಗಳನ್ನೇ ಎಳೆದು ಜಗತ್ತಿನಲ್ಲಿರುವ ವಸ್ತುಗಳಲ್ಲಿ ಶಕ್ತಿವೃತ್ತಿಯನ್ನು ಅಂಗೀಕರಿಸಲಾಗಿದೆ. ಆದ್ದರಿಂದ ಲೋಕವ್ಯವಹಾರವೇ ಲೋಪವಾಗಲಿ ಎಂಬ ಶಂಕೆಗೆ ಅಸ್ಪದವಿಲ್ಲ.

ಜಗದ್ಗುರು ಶ್ರೀಮಧ್ವಾಚಾರ್ಯರಿಂದ ವಿರಚಿತವಾದ

ಬ್ರಹ್ಮಸೂತ್ರಭಾಷ್ಯ

ಪರಮಾತ್ಮ ಪ್ರತಿಪಾದಕ ಶಬ್ದಗಳಿಂದಲೇ ಲೋಕವ್ಯವಹಾರ ಮಾಡಬಹುದು

ब्रह्मसूत्रभाष्यम् – सर्वशब्दानां परमात्मवाचकत्वे कथमन्यत्र व्यवहारः ? इति । अतोऽब्रवीत् ।। समाकर्षात् ।।

ಅನುವಾದ - ಸಕಲ ಶಬ್ದಗಳು ಪರಮಮುಖ್ಯವೃತ್ತಿಯಿಂದ ಪರಮಾತ್ಮನನ್ನೇ ಹೇಳುವುದಾದರೆ ಲೋಕವ್ಯವಹಾರವು ಹೇಗೆ ಕೂಡುತ್ತದೆ? ಈ ಪ್ರಶ್ನೆಗೆ 'ಸಮಾಕರ್ಷಾತ್' ಎಂಬುದಾಗಿ ಉತ್ತರಿಸುತ್ತಿದ್ದಾರೆ.

ಪ್ರತಿಪದಾರ್ಥ -- ಈ ಅಧಿಕರಣದಲ್ಲಿ ಮತ್ತೊಂದು ಪ್ರಕಾರದಿಂದ ವಿಷ್ಣುವಿನಲ್ಲಿ ಸರ್ವಶಬ್ದಸಮನ್ವಯವು ಅಸಂಭಾವಿತವಾಗಿದೆ ಎಂದು ಆಕ್ಷೇಪ ಮಾಡಿ ಪರಿಹರಿಸುತ್ತಿದ್ದಾರೆ. ವಾಸ್ತವಿಕವಾಗಿ ಈ ಅಧಿಕರಣದ ಎಂಟು ಸೂತ್ರಗಳು ಹಿಂದಿನ ಅಧಿಕರಣಕ್ಕೆ ಗುಣಭೂತವಾಗಿವೆ ಎಂದು ವ್ಯಾಖ್ಯಾನ ಮಾಡಬೇಕು. ಮತ್ತು ತತ್ವಪ್ರದೀಪದಲ್ಲಿ ಹಾಗೆಯೇ ಹೇಳಿದ್ದಾರೆ. ಭಾಷ್ಯದಲ್ಲಿಯೂ ಕೂಡ ಸಮನ್ವೇತವ್ಯ ಶಬ್ದವನ್ನು ಉಲ್ಲೇಖಿಸಿಲ್ಲ. ಆದರೂ ಕೂಡ ಪ್ರತ್ಯೇಕ ನ್ಯಾಯ ಸ್ವೀಕೃತವಾದ್ದರಿಂದ ಟೀಕೆಯಲ್ಲಿ ಅಧಿಕರಣಾಂತರವೆಂದು ವ್ಯಾಖ್ಯಾನ ಮಾಡಿದ್ದಾರೆ. ಪೂರ್ವಮೀಮಾಂಸೆಯಲ್ಲಿ 'ಹೇತುದರ್ಶನಾಚ್ಚ' ಎಂಬ ಸೂತ್ರವು ಹಿಂದಿನ ವಿರೋಧಾಧಿಕರಣಕ್ಕೆ ಅಂಗಭೂತವಾಗಿದ್ದರೂ ಪ್ರತ್ಯೇಕ ನ್ಯಾಯಕ್ಕೆ ಸೂಚಕವಾದ್ದರಿಂದ ಮತ್ತೊಂದು ಅಧಿಕರಣವೆಂದು ಪರಿಗಣಿಸಿದ್ದಾರೆ. ಪ್ರಕೃತ ಶ್ರುತ್ಯಾದಿಸಂಗತಿಯನ್ನು ತೋರಿಸುತ್ತಾ, ಸೂತ್ರಕ್ಕೆ ಅವತಾರಿಕೆಯನ್ನು ನೀಡಲು ಹೊರಟಿದ್ದಾರೆ –

ಸರ್ವಶಬ್ದಾನಾಂ = ಸಕಲವಿಧ ಶಬ್ದಗಳು, ಪರಮಾತ್ಮ ವಾಚಕತ್ವೇ = ಭಗವದ್ವಾಚಕವಾದರೆ, ಅನ್ಯತ್ರ = ಭಗವದತಿರಿಕ್ತವಾದ ಜಗತ್ತಿನಲ್ಲಿ, ಕಥಂ = ಹೇಗೆ, ವ್ಯವಹಾರಃ = ಶಬ್ದಪ್ರಯೋಗವು ಆಗುತ್ತದೆ. ಇತಿ = ಹೀಗೆ, ಅತಃ = ಆಕ್ಷೇಪವು ಬಂದರೆ, ಬ್ರವೀತಿ = ಸೂತ್ರಕಾರರು

ಉತ್ತರಿಸುತ್ತಿದ್ದಾರೆ. ಸಮಾಕರ್ಷಾತ್= ಭಗವದ್ವಾಚಕ ಶಬ್ದಗಳನ್ನೇ ಲೋಕದಲ್ಲಿ ಎಳೆದು ಮುಖ್ಯವೃತ್ತಿಯಿಂದ ವ್ಯವಹಾರ ಮಾಡಲಾಗುತ್ತದೆ.

ಲೋಕವ್ಯವಹಾರಕ್ಕೆ ಚ್ಯುತಿಯಿಲ್ಲ

ಬ್ರಹ್ಮಸೂತ್ರಭಾಷ್ಯಮ್ – परमात्मवाचिनः शब्दा अन्यत्र समाकृष्य व्यवह्रियन्ते ।

ಅನುವಾದ - ಪರಮಾತ್ಮನನ್ನು ಪರಮಮುಖ್ಯವೃತ್ತಿಯಿಂದ ಯಾವ ಶಬ್ದಗಳು ಪ್ರತಿಪಾದನೆ ಮಾಡುತ್ತವೋ, ಆ ಶಬ್ದಗಳನ್ನೇ ಲೌಕಿಕ ವಸ್ತುಗಳಲ್ಲಿ ಎಳೆದು ಮುಖ್ಯವೃತ್ತಿಯಿಂದ ಪ್ರಯೋಗಿಸಲಾಗುತ್ತದೆ. ಆದ್ದರಿಂದ ಲೋಕವ್ಯವಹಾರವು ನಿಂತು ಹೋಗುವ ಪರಿಸ್ಥಿತಿ ಇಲ್ಲ.

ಪ್ರತಿಪದಾರ್ಥ -- ಲೌಕಿಕ ವ್ಯವಹಾರಕ್ಕೋಸ್ಕರ ಸಮಾಕರ್ಷ ಮಾಡಬೇಕು. ಆವಾಗ ಪರಮಾತ್ಮ ವಾಚಕಶಬ್ದಗಳೇ ಲೌಕಿಕವಸ್ತು ಪ್ರತಿಪಾದಕಗಳೂ ಆಗುತ್ತವೆ. ಹೀಗೆ 'ಜಗದ್ವಾಚಿತ್ವಾತ್' ಎಂಬ ಮುಂದಿನ ಸೂತ್ರದಲ್ಲಿರುವ ಪದವನ್ನು ಅನ್ವಯ ಮಾಡಿಕೊಂಡು ಸೂತ್ರವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ –

ಪರಮಾತ್ಮವಾಚಿನಃ = ಭಗವಂತನನ್ನೇ ಪ್ರತಿಪಾದನೆ ಮಾಡುವ, ಶಬ್ದಾಃ = ಶಬ್ದಗಳು, ಅನ್ಯತ್ರ = ಭಗವಂತನಿಗಿಂತ ಅತಿರಿಕ್ತವಾದ ಜಗತ್ತಿನಲ್ಲಿ, ಸಮಾಕೃಷ್ಯ = ಸಮಾಕರ್ಷ ಮಾಡಿ, ವ್ಯವಹ್ರೀಯಂತೇ = ಪ್ರಯೋಗಿಸಲ್ಪಡುತ್ತವೆ.

ಪರಮಾತ್ಮ ಪ್ರತಿಪಾದಕವಾದ ಶಬ್ದಗಳಿಂದಲೇ ವ್ಯವಹಾರ

ಬ್ರಹ್ಮಸೂತ್ರಭಾಷ್ಯಮ್ – 'परस्य वाचकाश्शब्दा समाकृष्येतरेष्वपि ।
व्यवह्रियन्ते सततं लोकवेदानुसारतः ।। इति पाद्मे ।।१।।

ಅನುವಾದ - ಪರಮಾತ್ಮ ವಾಚಕವಾದ ಶಬ್ದಗಳನ್ನೇ ಸಮಾಕರ್ಷ ಮಾಡಿ, ಇತರ ವಸ್ತುಗಳಲ್ಲಿ ವ್ಯವಹರಿಸಲಾಗುತ್ತದೆ. ಇದು ಲೋಕವ್ಯವಹಾರಕ್ಕೆ ಅನುಕೂಲವಾಗಿದೆ. ವೇದಾರ್ಥವಾದ ಪರಮಾತ್ಮನ ಜ್ಞಾನಕ್ಕೂ ಅನುಗುಣವಾಗಿದೆ. ಹೀಗೆ ಪದ್ಮಪುರಾಣವು ಹೇಳಿದೆ.

ಪ್ರತಿಪದಾರ್ಥ -- ಅಕ್ಷ ಮೊದಲಾದ ಶಬ್ದಗಳಂತೆ ಪರಸ್ಪರ ಅಪೇಕ್ಷೆ ಪಡದೇ ಸಕಲಶಬ್ದಗಳು ಏಕೆ ಅನೇಕಾರ್ಥಗಳಾಗಬಾರದು? ಈ ಪ್ರಶ್ನೆಗೆ ಶ್ರುತಿಪ್ರಮಾಣವನ್ನು ಉದಾಹರಿಸಿದ್ದಾರೆ. –

ಪರಸ್ಯ = ಪರಮಾತ್ಮನ, ವಾಚಕಾಃ = ಪ್ರತಿಪಾದಕವಾದ, ಶಬ್ದಾಃ = ಶಬ್ದಗಳು, ಅನ್ಯತ್ರ = ಬೇರೆಡೆ, ಸಮಾಕೃಷ್ಯ = ಸಮಾಕರ್ಷ ಮಾಡಲ್ಪಟ್ಟವುಗಳಾಗಿ, ಸತತಂ = ನಿರಂತರವಾಗಿ, ಲೋಕವೇದಾನುಸಾರತಃ = ಲೋಕವೇದಗಳಿಗೆ ಅನುಗುಣವಾಗಿ, ವ್ಯವಹ್ರೀಯಂತೇ = ವ್ಯವಹರಿಸಲ್ಪಟ್ಟಿವೆ. ಇತಿ = ಹೀಗೆ, ಪಾದ್ಮೇ = ಪದ್ಮಪುರಾಣದಲ್ಲಿ ಹೇಳಲಾಗಿದೆ.

ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ

ಸತ್ತರ್ಕದೀಪಾವಳಿ

ಮಹಾಸಮನ್ವಯದ ದಡ ತಲುಪಿದ್ದಾಯಿತು

सत्तर्कदीपावलिः – अथैवं प्रायः पारंगते महासमन्वये त्रये सर्वाधिकरणसाधारणाः शङ्काः नैकाधिकरणे विशेषतः सङ्गताः ताः निराकरोत्यष्टभिः सूत्रैः ।

ಪ್ರಾಯಃ ಮಹಾಸಮನ್ವಯದ ಸಮುದ್ರದ ದಡವನ್ನು ದಾಟಿದ್ದಾಗಿದೆ. ಇನ್ನು ಮೂರು ಅಧಿಕರಣಗಳು ಉಳಿದಿವೆ. ಈ ಮೂರರಲ್ಲಿ ಈ ಹಿಂದಿನ ಎಲ್ಲಾ ಅಧಿಕರಣಗಳಿಗೆ ಸಂಬಂಧಪಟ್ಟ ಆಶಂಕೆಗೆ ಉತ್ತರಿಸಲಾಗಿದೆ. ಆದ್ದರಿಂದ ಯಾವುದಾದರೂ ಒಂದು ಅಧಿಕರಣಕ್ಕೆ ಮಾತ್ರ ಈ ಮುಂದಿನ ಸೂತ್ರಗಳು ಸಂಬಂಧಪಟ್ಟಿದ್ದಲ್ಲ. ಇಂಥ ಎಂಟು ಸೂತ್ರಗಳಿಂದ ಸಕಲ ಅಧಿಕರಣ-ಗಳಲ್ಲಿ ಸಾಧಾರಣವಾದ ಆಶಂಕೆಯನ್ನು ಸೂತ್ರಕಾರರು ನಿರಾಕರಿಸುತ್ತಿದ್ದಾರೆ.

ಅನ್ಯಥಾನುಪಪತ್ತಿ ಪ್ರಮಾಣದಿಂದ ಲೌಕಿಕಾರ್ಥಪ್ರತಿಪಾದ್ಯತ್ವವನ್ನು ಒಪ್ಪಬೇಕಲ್ಲವೇ?

सत्तर्कदीपावलिः – ननु भवत्सूक्तैर्विशषहेतुभिः भगवत्यपि प्रवृत्तिः सर्वशब्दानां, न तु भगवत्येव । तेषामेव केषाञ्चिदर्थान्तरेष्वपि व्यवहारान्यथानुपपत्त्या तद्वाचकत्वस्याप्यवगतेरित्याशङ्क्य व्यवहारस्य अन्यथैवोपपतिं सप्रमाणं दर्शयत्सूत्रमुपन्यस्य व्याचष्टे – सर्वेत्यादिना ।

ಆಗಲೀ, ನೀವು ಹೇಳುವ ವಿಶೇಷ ಹೇತುವಿರುವ ಕಾರಣ ಭಗವಂತನಲ್ಲೂ ಕೂಡ ಶಬ್ದಗಳ ಪ್ರವೃತ್ತಿಯನ್ನು ಒಪ್ಪೋಣ. ಆದರೆ ಭಗವಂತನಲ್ಲಿ ಮಾತ್ರ ಶಬ್ದಗಳ ಪ್ರವೃತ್ತಿಯನ್ನು ಒಪ್ಪುವುದು ತಪ್ಪಾಗುತ್ತದೆ. ಏಕೆಂದರೆ ಅದೇ ಭಗವತ್‌ಪ್ರತಿಪಾದಕವಾದ ಶಬ್ದಗಳು ಲೌಕಿಕವಾದ ಅರ್ಥಗಳನ್ನೂ ಕೂಡ ಪ್ರತಿಪಾದನೆ ಮಾಡುತ್ತಿವೆ. ಲೋಕವ್ಯವಹಾರ ಅನ್ಯಥಾನುಪಪತ್ತಿಯಿಂದ ಲೌಕಿಕಾರ್ಥ-ವಾಚಕತ್ವವನ್ನು ನಾವು ತಿಳಿಯಬಹುದು. ಈ ಆಶಂಕೆಗೆ ಉತ್ತರಿಸಲು ಈ ಅಧಿಕರಣ ಹೊರಟಿದೆ. ಅನ್ಯಥಾನುಪಪತ್ತಿ ಪ್ರಮಾಣದಿಂದ ಲೌಕಿಕಾರ್ಥವಾಚಕತ್ವವು ಯುಕ್ತವಾಗುವುದಿಲ್ಲ. ಏಕೆಂದರೆ ಲೋಕವ್ಯವಹಾರವು ಅನ್ಯಥೈವೋಪಪನ್ನವಾಗುತ್ತದೆ ಎಂಬುದನ್ನು ಪ್ರಮಾಣಬದ್ಧವಾಗಿ ಸೂತ್ರಕಾರರು ತೋರಿಸಿದ್ದಾರೆ. ಅದನ್ನೇ ಭಾಷ್ಯದಲ್ಲಿ 'ಸರ್ವಶಬ್ದಾನಾಂ' ಇತ್ಯಾದಿಯಾಗಿ ವ್ಯಾಖ್ಯಾನ ಮಾಡಲು ಹೊರಟಿದ್ದಾರೆ.

'ಲೋಕವೇದಾನುಸಾರತಃ' ಎಂಬ ವಿಶೇಷಣದ ಬಗ್ಗೆ ಚಿಂತನೆ

सत्तर्कदीपावलिः – न च परशब्दत्वविशेषण अग्न्यादिशब्दानाम् उदकादौ प्रयोगापत्तिरिति भावेनाह – लोकवेदानुसान्त इति ।

'ಪರ' ಎಂಬ ಶಬ್ದವು ಸಾಧಾರಣವಾಗಿರುವುದರಿಂದ ಅಗ್ನಿ ಶಬ್ದವನ್ನು ನೀರಿನಲ್ಲೂ ಕೂಡ ಪ್ರಯೋಗ ಮಾಡಬೇಕಾದೀತು ಎಂಬ ಆಪತ್ತಿಗೆ ಉತ್ತರವನ್ನು ನೀಡಲು 'ಲೋಕವೇದಾನುಸಾರತಃ' ಎಂಬ ವಿಶೇಷಣವನ್ನು ನೀಡಲಾಗಿದೆ. ಲೌಕಿಕ ರೂಢಿಯನ್ನೂ ಕೂಡ ಅಪೇಕ್ಷಿಸಿ ಭಗವದ್ವಾಚಕಶಬ್ದಗಳನ್ನು ಲೋಕದಲ್ಲಿ ಪ್ರಯೋಗಿಸಬೇಕು. ಇಲ್ಲದಿದ್ದರೆ ಹರಿಪರವಾದ ಅಗ್ನಿಶಬ್ದವನ್ನು ನೀರಿನಲ್ಲಿಯೂ ಪ್ರಯೋಗ ಮಾಡುವ ಪರಿಸ್ಥಿತಿ ಬಂದೀತು.

ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ

ತತ್ತ್ವಪ್ರದೀಪ

ಜಗತ್ತಿನಲ್ಲಿ ವಿಷ್ಣುವಿನ ಶಬ್ದಗಳ ಸಮಾಕರ್ಷ

तत्वप्रदीपः – ब्रह्मण एव वाचकैः सर्वशब्दैः कथमन्यत्रावाच्येषु व्यवहरन्ति । अवाचकैरेव व्यवहारे कुम्भादावपि स्तम्भादिशब्द व्यहारयोगाद व्यवस्था स्यात् । अतो न वाचकत्वमन्तरेण जगति व्यवहारः सार्वजनीनः सम्बोभवीतीत्यत आह – समाकर्षात् ।।

ಬ್ರಹ್ಮನನ್ನೇ ಮುಖ್ಯವಾಗಿ ಪ್ರತಿಪಾದನೆ ಮಾಡುವ ಸಕಲಶಬ್ದಗಳು ಅವಾಚ್ಯವಾದ ಬೇರೆ ಪದಾರ್ಥಗಳಲ್ಲಿ ಇರಲು ಹೇಗೆ ಸಾಧ್ಯ ? ಒಂದು ವೇಳೆ ಅವಾಚಕವಾದ ಆ ಶಬ್ದಗಳಿಂದ ವ್ಯವಹರಿಸುವುದಾದರೆ, ಘಟದಲ್ಲಿ ಸ್ತಂಭ ಎಂಬ ಶಬ್ದವನ್ನು ವ್ಯವಹರಿಸಬೇಕಾಗುತ್ತದೆ. ಹೀಗೆ ಲೋಕದಲ್ಲಿ ಅವ್ಯವಸ್ಥಾ ಪ್ರಸಂಗವು ಉಂಟಾಗುತ್ತದೆ. ಆದ್ದರಿಂದ ವಾಚಕತ್ವವಿದ್ದರೆ ವ್ಯವಹಾರ ಮಾಡಬೇಕು. ವಾಚಕತ್ವ ಇಲ್ಲದಿದ್ದರೆ ವ್ಯವಹಾರವನ್ನು ಮಾಡಬಾರದು. ಈ ನಿಯಮವು ಸಕಲಜನರಿಂದ ಸಿದ್ಧವಾಗಿದೆ. ಈ ಪ್ರಶ್ನೆಗೆ 'ಸಮಾಕರ್ಷಾತ್' ಎಂಬ ಸೂತ್ರದಿಂದ ಉತ್ತರಿಸುತ್ತಿದ್ದಾರೆ.

ಅವ್ಯವಸ್ಥೆಯ ಪರಿಹಾರ

तत्वप्रदीपः – अनादिकालत एवाविच्छेदेन परमात्मवाचकत्वेन स्थितास्ततः समाकृष्येतरेष्वपि व्यवहियन्ते । नचाव्यवस्था । समाकर्षकृसेर्विधमानत्वात् ।।७।।

ಅನಾದಿಕಾಲದಿಂದ ಯಾವುದೇ ವಿಚ್ಛೇದವಿಲ್ಲದೇ ಸಕಲಶಬ್ದಗಳು ಪರಮಾತ್ಮನನ್ನು ಪ್ರತಿಪಾದನೆ ಮಾಡುತ್ತಿವೆ. ಅಂಥ ಶಬ್ದಗಳನ್ನು ಸಮಾಕರ್ಷಣ ಮಾಡಿ, ಬೇರೆ ಪದಾರ್ಥಗಳಲ್ಲಿ ವ್ಯವಹರಿಸಲಾಗಿದೆ. ಅಂದ ಮಾತ್ರಕ್ಕೆ ಅವ್ಯವಸ್ಥಾಪ್ರಸಂಗದೋಷವು ಬರುವುದಿಲ್ಲ. ಏಕೆಂದರೆ ಸಮಾಕರ್ಷಣೆ ಮಾಡಬೇಕೆಂಬುದು ಕ್ಲೃಪ್ತವಾಗಿದೆ.

ಆಗಲೀ, ನೀವು ಹೇಳುವ ವಿಶೇಷ ಹೇತುವಿರುವ ಕಾರಣ ಭಗವಂತನಲ್ಲೂ ಕೂಡ ಶಬ್ದಗಳ ಪ್ರವೃತ್ತಿಯನ್ನು ಒಪ್ಪೋಣ. ಆದರೆ ಭಗವಂತನಲ್ಲಿ ಮಾತ್ರ ಶಬ್ದಗಳ ಪ್ರವೃತ್ತಿಯನ್ನು ಒಪ್ಪುವುದು ತಪ್ಪಾಗುತ್ತದೆ. ಏಕೆಂದರೆ ಅದೇ ಭಗವತ್‌ಪ್ರತಿಪಾದಕವಾದ ಶಬ್ದಗಳು ಲೌಕಿಕವಾದ ಅರ್ಥಗಳನ್ನೂ ಕೂಡ ಪ್ರತಿಪಾದನೆ ಮಾಡುತ್ತಿವೆ. ಲೋಕವ್ಯವಹಾರ ಅನ್ಯಥಾನುಪಪತ್ತಿಯಿಂದ ಲೌಕಿಕಾರ್ಥ-ವಾಚಕತ್ವವನ್ನು ನಾವು ತಿಳಿಯಬಹುದು. ಈ ಆಶಂಕೆಗೆ ಉತ್ತರಿಸಲು ಈ ಅಧಿಕರಣ ಹೊರಟಿದೆ. ಅನ್ಯಥಾನುಪಪತ್ತಿ ಪ್ರಮಾಣದಿಂದ ಲೌಕಿಕಾರ್ಥವಾಚಕತ್ವವು ಯುಕ್ತವಾಗುವುದಿಲ್ಲ. ಏಕೆಂದರೆ ಲೋಕವ್ಯವಹಾರವು ಅನ್ಯಥೈವೋಪಪನ್ನವಾಗುತ್ತದೆ ಎಂಬುದನ್ನು ಪ್ರಮಾಣಬದ್ಧವಾಗಿ ಸೂತ್ರಕಾರರು ತೋರಿಸಿದ್ದಾರೆ. ಅದನ್ನೇ ಭಾಷ್ಯದಲ್ಲಿ 'ಸರ್ವಶಬ್ದಾನಾಂ' ಇತ್ಯಾದಿಯಾಗಿ ವ್ಯಾಖ್ಯಾನ ಮಾಡಲು ಹೊರಟಿದ್ದಾರೆ.

'ಲೋಕವೇದಾನುಸಾರತಃ' ಎಂಬ ವಿಶೇಷಣದ ಬಗ್ಗೆ ಚಿಂತನೆ

सत्तर्कदीपावलिः – न च परशब्दत्वविशेषण अग्न्यादिशब्दानाम् उदकादौ प्रयोगापत्तिरिति भावेनाह – लोकवेदानुसान्त इति ।

'ಪರ' ಎಂಬ ಶಬ್ದವು ಸಾಧಾರಣವಾಗಿರುವುದರಿಂದ ಅಗ್ನಿ ಶಬ್ದವನ್ನು ನೀರಿನಲ್ಲೂ ಕೂಡ ಪ್ರಯೋಗ ಮಾಡಬೇಕಾದೀತು ಎಂಬ ಆಪತ್ತಿಗೆ ಉತ್ತರವನ್ನು ನೀಡಲು 'ಲೋಕವೇದಾನುಸಾರತಃ' ಎಂಬ ವಿಶೇಷಣವನ್ನು ನೀಡಲಾಗಿದೆ. ಲೌಕಿಕ ರೂಢಿಯನ್ನೂ ಕೂಡ ಅಪೇಕ್ಷಿಸಿ ಭಗವದ್ವಾಚಕಶಬ್ದಗಳನ್ನು ಲೋಕದಲ್ಲಿ ಪ್ರಯೋಗಿಸಬೇಕು. ಇಲ್ಲದಿದ್ದರೆ ಹರಿಪರವಾದ ಅಗ್ನಿಶಬ್ದವನ್ನು ನೀರಿನಲ್ಲಿಯೂ ಪ್ರಯೋಗ ಮಾಡುವ ಪರಿಸ್ಥಿತಿ ಬಂದೀತು.

ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ

ತತ್ತ್ವಪ್ರದೀಪ

ಜಗತ್ತಿನಲ್ಲಿ ವಿಷ್ಣುವಿನ ಶಬ್ದಗಳ ಸಮಾಕರ್ಷ

तत्वप्रदीपः – ब्रह्मण एव वाचकैः सर्वशब्दैः कथमन्यत्रावाच्येषु व्यवहरन्ति । अवाचकैरेव व्यवहारे कुम्भादावपि स्तम्भादिशब्द व्यहारयोगाद व्यवस्था स्यात् । अतो न वाचकत्वमन्तरेण जगति व्यवहारः सार्वजनीनः सम्बोभवीतीत्यत आह – समाकर्षात् ।।

ಬ್ರಹ್ಮನನ್ನೇ ಮುಖ್ಯವಾಗಿ ಪ್ರತಿಪಾದನೆ ಮಾಡುವ ಸಕಲಶಬ್ದಗಳು ಅವಾಚ್ಯವಾದ ಬೇರೆ ಪದಾರ್ಥಗಳಲ್ಲಿ ಇರಲು ಹೇಗೆ ಸಾಧ್ಯ ? ಒಂದು ವೇಳೆ ಅವಾಚಕವಾದ ಆ ಶಬ್ದಗಳಿಂದ ವ್ಯವಹರಿಸುವುದಾದರೆ, ಘಟದಲ್ಲಿ ಸ್ತಂಭ ಎಂಬ ಶಬ್ದವನ್ನು ವ್ಯವಹರಿಸಬೇಕಾಗುತ್ತದೆ. ಹೀಗೆ ಲೋಕದಲ್ಲಿ ಅವ್ಯವಸ್ಥಾ ಪ್ರಸಂಗವು ಉಂಟಾಗುತ್ತದೆ. ಆದ್ದರಿಂದ ವಾಚಕತ್ವವಿದ್ದರೆ ವ್ಯವಹಾರ ಮಾಡಬೇಕು. ವಾಚಕತ್ವ ಇಲ್ಲದಿದ್ದರೆ ವ್ಯವಹಾರವನ್ನು ಮಾಡಬಾರದು. ಈ ನಿಯಮವು ಸಕಲಜನರಿಂದ ಸಿದ್ಧವಾಗಿದೆ. ಈ ಪ್ರಶ್ನೆಗೆ 'ಸಮಾಕರ್ಷಾತ್' ಎಂಬ ಸೂತ್ರದಿಂದ ಉತ್ತರಿಸುತ್ತಿದ್ದಾರೆ.

ಅವ್ಯವಸ್ಥೆಯ ಪರಿಹಾರ

तत्वप्रदीपः – अनादिकालत एवाविच्छेदेन परमात्मवाचकत्वेन स्थितास्ततः समाकृष्येतरेष्वपि व्यवह्रियन्ते । नचाव्यवस्था । समाकर्षकृसेर्विधमानत्वात् ।।७।।

ಅನಾದಿಕಾಲದಿಂದ ಯಾವುದೇ ವಿಚ್ಛೇದವಿಲ್ಲದೇ ಸಕಲಶಬ್ದಗಳು ಪರಮಾತ್ಮನನ್ನು ಪ್ರತಿಪಾದನೆ ಮಾಡುತ್ತಿವೆ. ಅಂಥ ಶಬ್ದಗಳನ್ನು ಸಮಾಕರ್ಷಣ ಮಾಡಿ, ಬೇರೆ ಪದಾರ್ಥಗಳಲ್ಲಿ ವ್ಯವಹರಿಸಲಾಗಿದೆ. ಅಂದ ಮಾತ್ರಕ್ಕೆ ಅವ್ಯವಸ್ಥಾಪ್ರಸಂಗದೋಷವು ಬರುವುದಿಲ್ಲ. ಏಕೆಂದರೆ ಸಮಾಕರ್ಷಣೆ ಮಾಡಬೇಕೆಂಬುದು ಕ್ಲೃಪ್ತವಾಗಿದೆ.

ಶ್ರೀಮಜ್ಜಯತೀರ್ಥಭಿಕ್ಷುಗಳಿಂದ ವಿರಚಿತವಾದ

ತತ್ವಪ್ರಕಾಶಿಕಾ

ಎಲ್ಲ ಶಬ್ದಗಳೂ ಹರಿಪರವಾದರೆ ವ್ಯವಹಾರ ಹೇಗೆ ?

अत्र व्यवहारविलोपप्रसङ्गेनाऽयत्रैव प्रसिद्धानां सर्वशब्दानां परमात्मैकवाचित्वसमर्थनादस्ति शास्त्रादिसङ्गतिः ।

ಸಕಲಶಬ್ದಗಳು ಪರಮಾತ್ಮನನ್ನೇ ಪ್ರತಿಪಾದನೆ ಮಾಡುವುದಾದರೆ ಲೋಕದಲ್ಲಿ ಸಕಲ ವ್ಯವಹಾರಗಳೇ ನಿಂತುಹೋಗುವ ಪರಿಸ್ಥಿತಿ ಬರುತ್ತದಲ್ಲವೇ? ಈ ಪ್ರಶ್ನೆಗೆ ಉತ್ತರಿಸಲು ಸಮಾಕರ್ಷಾಧಿಕರಣ ಹೊರಡುತ್ತಿದೆ. ಮತ್ತು ಅನ್ಯತ್ರೈವಪ್ರಸಿದ್ಧವಾದ ಸಕಲ ಶಬ್ದಗಳು ಪರಮಾತ್ಮನನ್ನೇ ಪ್ರತಿಪಾದನೆ ಮಾಡುತ್ತಿವೆ ಎಂದು ಇಲ್ಲಿ ಸಮರ್ಥಿಸುತ್ತಿರುವುದರಿಂದ ಶಾಸ್ತ್ರಸಂಗತಿ, ಅಧ್ಯಾಯಸಂಗತಿ ಹಾಗೂ ಪಾದಸಂಗತಿಗಳನ್ನು ತಿಳಿಯಬೇಕು.

ಅನುಪಪತ್ತಿ ಇದ್ದಾಗ ನಿಯಮವನ್ನು ಕೈ ಬಿಡಬೇಕು

तत्वप्रकाशिका – समन्वयसूत्रे सर्वेषां शब्दानां भगवद्वाचित्वमुक्तम् । तच्चानुपपत्तिग्रस्तत्वेऽसत्स्यात्, इत्यारम्भणीयमेतत् ।

ಸಮನ್ವಯಸೂತ್ರದಲ್ಲಿ ಸಕಲಶಬ್ದಗಳು ಭಗವಂತನಲ್ಲಿಯೇ ಸಮನ್ವಯವಾಗುತ್ತವೆಂದು ಪ್ರತಿಜ್ಞೆ ಮಾಡಿದರು. ಆ ಪ್ರತಿಜ್ಞೆಯು ಅನುಪಪನ್ನವಾದರೆ, ಯಾವುದೇ ಶಬ್ದಗಳ ಸಮನ್ವಯವೇ ಸಿದ್ಧವಾಗುವುದಿಲ್ಲ. ಪ್ರಕೃತ ಲೋಕವ್ಯವಹಾರ ವಿಲೋಪಪ್ರಸಂಗವೆಂಬ ಅನುಪಪತ್ತಿಯು ಬಂದಿರುವುದರಿಂದ ಅದನ್ನು ಪರಿಹರಿಸಲು ಈ ಅಧಿಕರಣವು ಆರಂಭಣೀಯವಾಗಿದೆ.

ಅಧಿಕರಣದ ಸಂದೇಹ

तत्वप्रकाशिका – लौकिका वैदिकाच शब्दा विषयाः । भगवदेकवाचिनो न वेति सन्देहः । पूर्वोक्तमेव सन्देहबीजम् । पूर्वपक्षयति – सर्वेति ।।

ಲೌಕಿಕವಾದ ಮತ್ತು ವೈದಿಕವಾದ ಶಬ್ದಗಳೆಲ್ಲವೂ ಈ ಅಧಿಕರಣದ ವಿಷಯಗಳು. ಭಗವಂತನನ್ನು ಮಾತ್ರ ಪ್ರತಿಪಾದನೆ ಮಾಡುತ್ತವೋ, ಇಲ್ಲವೋ ? ಎಂಬುದೇ ಸಂದೇಹ. ಹಿಂದೆ ಹೇಳಿದ ಅನನ್ವಯ ಮತ್ತು ವ್ಯವಹಾರ ವಿಲೋಪ ಪ್ರಸಂಗ ಇವುಗಳು ಸಂದೇಹಬೀಜ. ಪೂರ್ವಪಕ್ಷವನ್ನು ಭಾಷ್ಯದಲ್ಲಿ 'ಸರ್ವಶಬ್ದಾನಾಮ್' ಎಂಬುದರಿಂದ ಹೇಳಿದ್ದಾರೆ.

ಲೌಕಿಕ ವ್ಯವಹಾರಕ್ಕೆ ಶಬ್ದಗಳೇ ಇಲ್ಲ

तत्वप्रकाशिका – यदुक्तं सर्वशब्दानां परमात्मैकवाचित्वं, तदयुक्तम् । तथात्वेऽन्यत्र व्यवहाराभावापातात् ।

ಸಕಲಶಬ್ದಗಳು ಪರಮಾತ್ಮನೊಬ್ಬನನ್ನೇ ಪ್ರತಿಪಾದನೆ ಮಾಡುತ್ತವೆಂದು ಹಿಂದಿನ ಅಧಿ ಕರಣದಲ್ಲಿ ಸಮರ್ಥಿಸಿದ್ದು ಸರಿಯಲ್ಲ. ಹಾಗಾದರೆ ಲೋಕದಲ್ಲಿ ಶಬ್ದಗಳ ಪ್ರಯೋಗವೇ ತಪ್ಪಾಗಬೇಕಾದೀತು. ಎಲ್ಲಾ ಶಬ್ದಗಳು ಪರಮಾತ್ಮನನ್ನಷ್ಟೇ ಹೇಳುವುದರಿಂದ ಲೌಕಿಕ ಗುಣಾರ್ಥಗಳನ್ನು ಹೇಳುವ ಶಬ್ದಗಳೇ ಇಲ್ಲದೇ ವ್ಯವಹಾರವೇ ನಿಂತುಹೋಗಬೇಕಾದೀತು.

ಸ್ತಂಭಶಬ್ದವನ್ನು ಘಟದಲ್ಲೇಕೆ ಪ್ರಯೋಗಿಸಬಾರದು ?

तत्वप्रकाशिका – यदपि 'साक्षादप्यविरोधम्' इत्युक्तमस्य समाधानं, तदयुक्तम् । अवाचकैर्व्यवहारेऽव्यवस्थापातात् ।

'ಸಾಕ್ಷಾದಪ್ಯವಿರೋಧಂ ಜೈಮಿನಿಃ' ಎಂಬ ಸೂತ್ರದಲ್ಲಿ ಇದಕ್ಕೆ ಉತ್ತರವನ್ನು ಈಗಾಗಲೇ ನೀಡಲಾಗಿದೆ. ಆದರೆ ಅದು ಸರಿಯಿಲ್ಲ. ಏಕೆಂದರೆ ಎಲ್ಲಾ ಶಬ್ದಗಳು ಪರಮಾತ್ಮನನ್ನೇ ಪ್ರತಿಪಾದನೆ ಮಾಡುತ್ತವೆ. ಅಂತಹ ಶಬ್ದಗಳನ್ನು ಲೌಕಿಕ ಪದಾರ್ಥಗಳಲ್ಲಿ ಪ್ರಯೋಗಿಸಲಾಗಿದೆ ಎಂದು ವಿವಕ್ಷಿಸಿದರೆ ಅಲೌಕಿಕ ಶಬ್ದಗಳಿಂದ ವ್ಯವಹರಿಸಿದಂತಾಯಿತು. ಆವಾಗ ಸ್ತಂಭ ಎಂಬ ಶಬ್ದವನ್ನು ಘಟದಲ್ಲಿಯೂ ಪ್ರಯೋಗಿಸಬೇಕಾಗುತ್ತದೆ. ಆದ್ದರಿಂದ ಲೋಕದಲ್ಲಿ ಅವ್ಯವಸ್ಥೆಯು ಉಂಟಾಗುತ್ತದೆ.

ಶಕ್ತಿವೃತ್ತಿಯೇ ಇಲ್ಲವೆಂದಾಗಬೇಕಾಗುತ್ತದೆ

तत्वप्रकाशिका – यदप्यत्रोक्तं 'शरीररूपकविन्यस्तगृहीतेः' इतीश्वर-

सम्बन्धादन्यत्र शब्दप्रवृत्तिरिति, तदपि न साधु । तथा सति लोके लक्षणेतरवृत्त्यभावापत्तेः ।

ಇನ್ನು 'ಆನುಮಾನಿಕಮಪ್ಯೇಕೇಷಾಮ್' ಎಂಬ ಇದೇ ಪಾದದ ಮೊದಲನೆಯ ಸೂತ್ರದಲ್ಲಿ 'ಶರೀರರೂಪಕವಿನ್ಯಸ್ತಗೃಹಿತೇಃ' ಎಂದು ವಿಷ್ಣುವಿನ ಸಂಬಂಧದಿಂದ ಶಬ್ದಗಳು ಅನ್ಯತ್ರಪ್ರವೃತ್ತವಾಗುತ್ತವೆ ಎಂದು ಉತ್ತರಿಸಲಾಗಿತ್ತು. ಇದೂ ಕೂಡ ಸರಿಯಲ್ಲ. ಆ ಉತ್ತರವನ್ನು ವಿವಕ್ಷಿಸಿದರೆ ನಾವು ಮಾಡುವ ಎಲ್ಲಾ ವ್ಯವಹಾರಗಳು ಲಕ್ಷಣಾವೃತ್ತಿಯಿಂದಲೇ ಹೊರತು, ಶಕ್ತಿವೃತ್ತಿಯಿಂದಲ್ಲ ಎಂದಾಗಬೇಕಾದೀತು. ಅಂದರೆ ಲಕ್ಷಣಾವೃತ್ತಿಯನ್ನು ಬಿಟ್ಟು ಬೇರೆ ವೃತ್ತಿಯೇ ಇಲ್ಲ ಎಂದಾಗಬೇಕಾದೀತು.

ಲೌಕಿಕ ಪದಾರ್ಥಗಳಲ್ಲಿ ಮುಖ್ಯವೃತ್ತಿಯನ್ನು ಒಪ್ಪಿದಂತಾಗುತ್ತದೆ

तत्वप्रकाशिका – यत्तु 'कल्पनोपदेशात्' इत्यत्र रूढ्याद्यभ्युपेत्य समाधानं, तदपि न शोभां बिभर्ति । तथा सत्यन्यस्यापि मुख्यवाच्यत्वप्रसङ्गेन परमात्मन एव मुख्यवाच्यत्वम्' इति प्रतिज्ञाव्याघातात् ।

ಮತ್ತು 'ಕಲ್ಪನೋಪದೇಶಾಚ್ಚ ಮಧ್ವಾದಿವದವಿರೋಧಃ' ಎಂಬ ಸೂತ್ರದಲ್ಲಿ ಶಕ್ತಿವೃತ್ತಿಯಿಂದ ಪರಮಾತ್ಮನನ್ನು ಪ್ರತಿಪಾದನೆ ಮಾಡಿದರೂ, ಆಯಾ ಶಬ್ದಗಳ ರೂಢ್ಯರ್ಥವನ್ನು ಸ್ವೀಕರಿಸಿ ಲೌಕಿಕ ಪದಾರ್ಥಗಳಲ್ಲಿ ಪ್ರಯೋಗಿಸುತ್ತಾರೆಂಬ ಸಮಾಧಾನವನ್ನು ನೀಡಿದ್ದರು. ಇದೂ ಕೂಡ ಸರಿಯಲ್ಲ. ಹಾಗಾದರೆ ಯಾವುದೇ ಯೋಗಾರ್ಥವು ಅದರ ಮುಖ್ಯಾರ್ಥವೇ ಆಗಿರುತ್ತದೆಂಬ ನಿಯಮವಿದೆ. ಆದ್ದರಿಂದ ಲೌಕಿಕಪದಾರ್ಥಗಳಲ್ಲಿನ ಶಬ್ದಗಳಿಗೆ ಮುಖ್ಯವೃತ್ತಿಯನ್ನು ಒಪ್ಪಿದಂತಾಗುತ್ತದೆ. ಆವಾಗ 'ಪರಮಾತ್ಮನೇ ಮುಖ್ಯವೃತ್ತಿಯಿಂದ ಪ್ರತಿಪಾದ್ಯನಾಗಿದ್ದಾನೆ' ಎಂಬ ಪ್ರತಿಜ್ಞೆಗೆ ವಿರೋಧ ಬರುತ್ತದೆ.

ಅನೇಕಾರ್ಥಗಳಲ್ಲಿ ಮುಖ್ಯವೃತ್ತಿಯು ಕೂಡುವುದಿಲ್ಲ

तत्वप्रकाशिका – योगरूढ्योरेव मुख्यवृत्तित्वात् । नहि 'अक्षादिशब्दानां रूढ्यादिनैवानेकवाचिनां क्वचित् मुख्यता, क्वचिन्न' इत्यस्ति ।

ಯೋಗ ಮತ್ತು ರೂಢಿಗಳೇ ಮುಖ್ಯವೃತ್ತಿಯೆನಿಸುತ್ತವೆ. 'ಅಕ್ಷ' ಮೊದಲಾದ ಶಬ್ದಗಳು ಯೋಗ ಮತ್ತು ರೂಢಿಯಿಂದಲೇ ಅನೇಕಾರ್ಥಗಳಲ್ಲಿ ಮುಖ್ಯವೃತ್ತಿಯಿಂದ ಇರುವುದು

ಕಂಡಿದೆ. ಹೊರತು, ಕೆಲವು ಅರ್ಥಗಳಲ್ಲಿ ಮುಖ್ಯವೃತ್ತಿಯಿಂದ, ಇನ್ನೂ ಕೆಲವು ಅರ್ಥಗಳಲ್ಲಿ ಅಮುಖ್ಯವೃತ್ತಿಯಿಂದ ಇರುವುದು ಕಂಡಿಲ್ಲವಷ್ಟೇ.

ಪರಮಾತ್ಮನು ಸಕಲಶಬ್ದವಾಚ್ಯನಾಗಲಾರ

तत्वप्रकाशिका – अतः सर्वशब्दानां मुख्यवृत्त्या परमात्मैकवाचित्वेऽन्यत्र व्यवहारलोपापातात्; तस्य चानिष्टत्वात्, 'न परमात्मैव मुख्यतः सर्वशब्दवाच्यः' इति (शङ्कार्यः) ।

ಆದ್ದರಿಂದ ಸಕಲಶಬ್ದಗಳು ಮುಖ್ಯವೃತ್ತಿಯಿಂದ ಪರಮಾತ್ಮನೊಬ್ಬನನ್ನೇ ಪ್ರತಿಪಾದನೆ ಮಾಡುವುದಾದರೆ ಲೋಕದಲ್ಲಿ ಶಬ್ದವ್ಯವಹಾರಗಳೇ ಲೋಪವಾಗುವ ಪ್ರಸಂಗ ಬರುತ್ತದೆ. ಇದು ಸಿದ್ಧಾಂತಿಗಳಿಗೂ ಅನಿಷ್ಟ. ಆದ್ದರಿಂದ ಎಲ್ಲಾ ಶಬ್ದಗಳಿಂದ ಪರಮಾತ್ಮನೊಬ್ಬನೇ ಮುಖ್ಯವೃತ್ತಿಯಿಂದ ಪ್ರತಿಪಾದ್ಯನಾಗಿದ್ದಾನೆಂದಾಗಲೀ, ಸಕಲಶಬ್ದವಾಚ್ಯನಾಗಿದ್ದಾನೆಂದಾಗಲೀ ಹೇಳಲು ಸಾಧ್ಯವಿಲ್ಲ. ಇಷ್ಟು ಪೂರ್ವಪಕ್ಷ.

ಸಿದ್ಧಾಂತ ಸ್ಥಾಪನೆ

तत्वप्रकाशिका – सिद्धान्तयत् सूत्रमवतार्य व्याचष्टे – अत इति ।।

ಮೇಲಿನ ಪೂರ್ವಪಕ್ಷವನ್ನು ನಿರಾಕರಿಸಿ ಸಿದ್ಧಾಂತವನ್ನು ಸ್ಥಾಪನೆ ಮಾಡಲು ಹೊರಟಿರುವ ಸೂತ್ರಕ್ಕೆ ಅವತಾರಿಕೆ ನೀಡಿ ವ್ಯಾಖ್ಯಾನ ಮಾಡುತ್ತಿದ್ದಾರೆ 'ಅತಃ' ಇತ್ಯಾದಿಯಾಗಿ.

'ಸಮಾಕರ್ಷಾತ್' ಎಂಬ ಸೂತ್ರ ವ್ಯಾಖ್ಯಾನ

तत्वप्रकाशिका – सूत्रं व्याचष्टे – परमात्मेति ।।

ಭಾಷ್ಯಕಾರರು ಸೂತ್ರವನ್ನು 'ಪರಮಾತ್ಮವಾಚಿನಃ' ಎಂಬುದರಿಂದ ವ್ಯಾಖ್ಯಾನ ಮಾಡಿದ್ದಾರೆ.

ರೂಢಿವೃತ್ತಿಯಿಂದ ಲೌಕಿಕ ವ್ಯವಹಾರ

तत्वप्रकाशिका – न परमात्मनो मुख्यतः सर्वशब्दवाच्यत्वेऽन्यत्र व्यवहारलोपः । तत्र रूढ्यादेरभ्युपगमात् । तथा सत्युभयोर्मुख्यवाच्यत्वं प्राप्तम् ? इति चेत् । मैवम् ।

'ಪರಮಾತ್ಮನು ಮುಖ್ಯವೃತ್ತಿಯಿಂದಲೇ ಸಕಲಶಬ್ದವಾಚ್ಯನಾಗಿದ್ದಾನೆ' ಎಂಬುದೇ ನಮ್ಮ ಸಿದ್ಧಾಂತ. ಹೀಗೆ ಒಪ್ಪುವುದರಿಂದ ಅನ್ಯತ್ರ ವ್ಯವಹಾರವೇ ನಿಂತು ಹೋಗುವ ಪರಿಸ್ಥಿತಿ ಬರುವುದಿಲ್ಲ. ಲೌಕಿಕ ಪದಾರ್ಥಗಳಲ್ಲಿ ಆಯಾ ಶಬ್ದಗಳ ರೂಢಿವೃತ್ತಿಯನ್ನು ಒಪ್ಪಿರುತ್ತೇವೆ.

ಪ್ರಶ್ನೆ - ಹಾಗಾದರೆ ಒಂದೇ ಶಬ್ದಕ್ಕೆ ಎರಡು ಅರ್ಥದಲ್ಲಿ ಮುಖ್ಯವೃತ್ತಿಯನ್ನು ಒಪ್ಪಿದಂತಾಯಿತಲ್ಲವೇ?

ಮುಖ್ಯವೃತ್ತಿ ಬೇರೆಡೆ ಇಲ್ಲ

तत्वप्रकाशिका – भवेदेतत् अक्षादिशब्दवदुभयत्रान्योन्यनिरपेक्षा शब्दप्रवृत्तिः । न चैवम्, किन्तु; स्वतो मुख्यवृत्त्या परमात्मैकवाचिनां शब्दानां व्यवहारसिध्यर्थं ततः समाकृष्याऽन्यत्र रूढत्वेन सङ्केतितत्वात् ।

ಉತ್ತರ - ಇದು ತಪ್ಪು. ಒಂದು ವೇಳೆ 'ಅಕ್ಷ' ಮೊದಲಾದ ಅನೇಕಾರ್ಥದ ಶಬ್ದಗಳಂತೆ ಬೇರೆ ಬೇರೆ ಅರ್ಥಗಳಲ್ಲಿ ಪರಸ್ಪರ ಅಪೇಕ್ಷೆ ಪಡದ ಶಬ್ದಗಳಿಗೆ ಎರಡು ಅರ್ಥಗಳಲ್ಲಿ ಮುಖ್ಯಾರ್ಥತ್ವವನ್ನು ಒಪ್ಪಿದ್ದರೆ ನೀವು ಹೇಳಿದ ಆಕ್ಷೇಪಕ್ಕೆ ಅವಕಾಶವಿರುತ್ತಿತ್ತು. ಆದರೆ ಅಕ್ಷಾದಿ ಶಬ್ದಗಳಂತೆ ನಾವು ಅನೇಕಾರ್ಥತ್ವನ್ನು ಸಮಾನವಾಗಿ ಹೇಳುತ್ತಿಲ್ಲ. ಹೊರತಾಗಿ ಪರಮಾತ್ಮನೊಬ್ಬನೇ ಪ್ರತಿಯೊಂದು ಶಬ್ದಗಳಿಂದ ಮುಖ್ಯವೃತ್ತಿಯಿಂದ ಪ್ರತಿಪಾದ್ಯನಾಗಿದ್ದಾನೆ. ಕೇವಲ ವ್ಯವಹಾರದ ಸಿದ್ಧಿಗೋಸ್ಕರ ಆಯಾ ಶಬ್ದಗಳನ್ನು ಸಮಾಕರ್ಷ ಮಾಡಿ, ಬೇರೆ ಪದಾರ್ಥಗಳಲ್ಲಿ ರೂಢಿವೃತ್ತಿಯನ್ನು ಒಪ್ಪಿ ಸಂಕೋಚ ಮಾಡುತ್ತೇವೆ. ಹೊರತು ಮುಖ್ಯವೃತ್ತಿಯನ್ನು ಒಪ್ಪುವುದಿಲ್ಲ.

ಪರಮಾತ್ಮನಲ್ಲಿರುವ ಮುಖ್ಯವೃತ್ತಿ ಅತ್ಯಧಿಕ

तत्वप्रकाशिका – अल्पप्रवृत्तिनिमित्तानां च तदधीनत्वादिति भावः ।

ಯಾವ ಶಬ್ದಗಳು ಲೌಕಿಕಪದಾರ್ಥಗಳಲ್ಲಿ ಯೌಗಿಕವಾಗಿರುತ್ತವೋ, ಅವುಗಳ ಪ್ರವೃತ್ತಿನಿಮಿತ್ತ ಪರಮಾತ್ಮನಲ್ಲಿಯೇ ಅಧಿಕವಾಗಿರುತ್ತದೆ. ಲೌಕಿಕ ಪದಾರ್ಥಗಳಲ್ಲಿರುವ ಪ್ರವೃತ್ತಿನಿಮಿತ್ತವು ಪರಮಾತ್ಮನ ಅಧೀನವಾಗಿರುತ್ತದೆ. ಮತ್ತು ಅಲ್ಪವಾಗಿರುತ್ತದೆ. ಆದ್ದರಿಂದ ಪರಮಾತ್ಮನಲ್ಲಿ ಎಷ್ಟು ಮುಖ್ಯವೃತ್ತಿಯಿಂದ ಶಬ್ದಗಳಿರುತ್ತವೋ ಅಷ್ಟೇ ಮುಖ್ಯವೃತ್ತಿಯಿಂದ ಲೌಕಿಕಪದಾರ್ಥ-ಗಳಲ್ಲಿರುವುದಿಲ್ಲ.

ಅಕ್ಷಾದಿ ಶಬ್ದಗಳು ಉದಾಹರಣೆ ಅಲ್ಲ

तत्वप्रकाशिका – अन्योन्यनिरपेक्षतयैव कुतो न शब्दवृत्तिरित्यतः स्मृतेरेवेत्याह – परस्येति ।।

ಪರಮಾತ್ಮ ಹಾಗೂ ಲೌಕಿಕಪದಾರ್ಥಗಳಲ್ಲಿ ಶಬ್ದಗಳು ಅನ್ಯೋನ್ಯನಿರಪೇಕ್ಷವಾಗಿ ಅಕ್ಷಾದಿಶಬ್ದಗಳಂತೆ ಮುಖ್ಯವೃತ್ತಿಯಿಂದಲೇ ಏಕೆ ಕೂಡಬಾರದು ? ಎಂಬ ಪ್ರಶ್ನೆಗೆ ಉತ್ತರಿಸಲು ಸ್ಮೃತಿವಾಕ್ಯವನ್ನೇ ಆಧಾರವನ್ನಾಗಿ ಹೇಳುತ್ತಿದ್ದಾರೆ 'ಪರಸ್ಯ' ಇತ್ಯಾದಿಯಾಗಿ.

ಅಜ್ಞರೂಢಿಯಿಂದ ಲೋಕವ್ಯವಹಾರ

तत्वप्रकाशिका – लोकवेदानुसारत इति ।। लौकिकवैदिकव्यवहारसिद्ध्यनुसारतः। नच प्राचीनसूत्रविरोधः । प्रथमसूत्रे स्वातन्त्र्येण वाच्यत्वाभावस्याभिप्रेतत्वात्।

'ಲೋಕವೇದಾನುಸಾರತಃ' ಎಂದರೆ ಲೌಕಿಕ ಹಾಗೂ ವೈದಿಕ ವ್ಯವಹಾರಗಳ ಸಿದ್ಧಿಗೆ ಅನುಸಾರಿಯಾಗಿ ಎಂದರ್ಥ. ಹಾಗಾದರೆ ಅಜ್ಞರೂಢಿಯಿಂದ ಲೋಕವ್ಯವಹಾರ. ಮುಖ್ಯಾರ್ಥನಾದ ಪರಮಾತ್ಮನ ಸಂಬಂಧದಿಂದ ಲೋಕದಲ್ಲಿ ಅಮುಖ್ಯವ್ಯವಹಾರ, ಇತ್ಯಾದಿಯಾಗಿ ಹಿಂದಿನ ಸೂತ್ರಗಳಲ್ಲಿ ಹೇಳಲಾಗಿದೆ. ಈ ಸೂತ್ರಗಳ ವಿರೋಧ ಬರುತ್ತದಲ್ಲವೇ? ಎಂದು ಆಶಂಕಿಸಬಾರದು. 'ಸಾಕ್ಷಾದಪ್ಯವಿರೋಧಂ ಜೈಮಿನಿಃ' ಎಂಬ ಮೊದಲನೆಯ ಸೂತ್ರದಲ್ಲಿ ಸ್ವತಂತ್ರವಾಗಿ ಪರಮಾತ್ಮನನ್ನು ಪ್ರತಿಪಾದನೆ ಮಾಡುವ ಶಬ್ದಗಳನ್ನೇ ಲೋಕದಲ್ಲಿ ಬಳಕೆ ಮಾಡಲಾಗುತ್ತದೆ.

ವಿಶೇಷವಿಚಾರಕ್ಕಾಗಿ ಈ ಸೂತ್ರ

तत्वप्रकाशिका – द्वितीये परमात्मसम्बन्धोक्त्याऽत्रोक्तस्यैवाभिसंहितत्वात्। तृतीये चाऽविवेचितरूढ्यादिमात्राभ्युपगतेः । अत्र पुनस्तस्यैव विवेचनादिति।।

'ಆನುಮಾನಿಕಮಪ್ಯೇಕೇಷಾಂ' ಎಂಬ ಎರಡನೆಯ ಸೂತ್ರದಲ್ಲಿ, ಪರಮಾತ್ಮ ಸಂಬಂಧವು ಲೌಕಿಕ ಪದಾರ್ಥಗಳಲ್ಲಿ ಸಮಾಕರ್ಷ ಮಾಡಲು ನಿಮಿತ್ತವಾಗಿದೆಯೆಂದು ಈ 'ಸಮಾಕರ್ಷಾತ್' ಎಂಬ ಸೂತ್ರದಲ್ಲಿ ಹೇಳಿರುವುದು ಅನುಸಂಧಾನ ಮಾಡಿಕೊಳ್ಳಬೇಕು. 'ಕಲ್ಪನೋಪದೇಶಾಚ್ಚ'

ಎಂಬ ಮೂರನೆಯ ಸೂತ್ರದಲ್ಲಿ ರೂಢಿ ಮೊದಲಾದ ವೃತ್ತಿಗಳ ಬಗ್ಗೆ ವಿವೇಚನೆ ಮಾಡದೇ ಸಾಮಾನ್ಯವಾಗಿ ಸಮನ್ವಯ ಮಾಡಿರುತ್ತಾರೆ. ಅದನ್ನೇ ಈ ಸೂತ್ರವೂ ಹೇಳಿದೆ - ಎಲ್ಲಾ ಶಬ್ದಗಳು ಮಹಾಯೋಗ ಹಾಗೂ ವಿದ್ವದ್ರೂಢಿಗಳಿಂದ ಪರಮಾತ್ಮನನ್ನು ಪ್ರತಿಪಾದನೆ ಮಾಡುತ್ತವೆ. ಲೋಕದಲ್ಲಿ ರೂಢಿ ಹಾಗೂ ಯೋಗವೃತ್ತಿಗಳಿಂದ ಪ್ರತಿಪಾದನೆ ಮಾಡುತ್ತವೆ. ಹೀಗೆ 'ಕಲ್ಪನೋಪದೇಶಾತ್' ಎಂಬ ಸೂತ್ರದಲ್ಲಿ ಸಾಮಾನ್ಯವಾಗಿ ಪ್ರಾಪ್ತವಾದ ವಿಚಾರವನ್ನು ಈ ಸೂತ್ರದಲ್ಲಿ ವಿಶೇಷ ವಿಶ್ಲೇಷಣೆ ಮಾಡಿದ್ದರಿಂದ ವಿರೋಧವಿಲ್ಲ.

ಮಂತ್ರಾಲಯ ಪ್ರಭುಗಳಾದ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ

ಭಾವದೀಪ

ಸಮಾಕರ್ಷಾಧಿಕರಣವು ಪ್ರತ್ಯೇಕವೇ?

अत्रानुव्याख्याने 'विरोधिसर्वबाहुल्यकारणस्त्रीनिषेधिनाम्' इत्यादिना एतत्पादीयाधिकरणोपाध्युक्त्यनुरोधेन प्राचीनैः समाकर्षादित्यादिसूत्राष्टकस्य पूर्वशेषत्वोक्तावपीह पृथगधिकरणान्तरत्वेन योजनं तु पृथक् न्यायसूचकत्वं दर्शयितुमित्युक्तं चन्द्रिकायाम्।

ಅನುವ್ಯಾಖ್ಯಾನದಲ್ಲಿ 'ವಿರೋಧಿಸರ್ವಬಾಹುಲ್ಯಕಾರಣಸ್ತ್ರೀನಿಷೇಧಿನಾಂ' ಎಂಬ ಈ ಪಾದದ ಪ್ರತಿಯೊಂದು ಅಧಿಕರಣಗಳ ಉಪಾಧಿಯನ್ನು ಹೇಳುವಾಗ ಹಿಂದಿನ 'ಸಮಾಕರ್ಷಾತ್' ಎಂಟು ಸೂತ್ರಗಳನ್ನು ಸೇರಿಸಿಯೇ ಉಪಾಧಿಯನ್ನು ಹೇಳಿರುತ್ತಾರೆ. ಹೊರತು ಪ್ರತ್ಯೇಕವಾದ ಉಪಾಧಿಯನ್ನು ಈ ಅಧಿಕರಣಕ್ಕೆ ಹೇಳಿರುವುದಿಲ್ಲ. ಆದರೆ ಟೀಕೆಯಲ್ಲಿ ಸಮಾಕರ್ಷಾಧಿಕರಣವನ್ನು ಪ್ರತ್ಯೇಕವಾಗಿ ಪರಿಗಣಿಸಿದ್ದಾರೆ. ಇದಕ್ಕೆ ಕಾರಣವನ್ನು ತಾತ್ಪರ್ಯಚಂದ್ರಿಕೆಯಲ್ಲಿ ಪ್ರತ್ಯೇಕ ನ್ಯಾಯ ಸೂಚಕವಾದ್ದರಿಂದ ಎಂದು ಸಮರ್ಥಿಸಿದ್ದಾರೆ.

ಈ ಅಧಿಕರಣಕ್ಕೆ ಅವಸರ ಸಂಗತಿ

ಭಾವದೀಪಃ – ಏವಂ ಹರಾವನ್ಯತ್ರ ಚ ಮುಖ್ಯವೃತ್ತೌ ಸಿದ್ಧಾಯಾಮಸ್ಯ ವಿಚಾರಸ್ಯಾವಸರ-ಪ್ರಾಪ್ತಿಮಾಹ – ಅಥೇತಿ ।।

ಶ್ರೀಹರಿಯಲ್ಲಿ ಮತ್ತು ಲೋಕದಲ್ಲಿ ಮುಖ್ಯವೃತ್ತಿಯಿಂದಲೇ ಶಬ್ದಗಳು ಪ್ರವೃತ್ತವಾದಾಗ ಈ ಅಧಿಕರಣದ ವಿಚಾರವು ಅವಸರ ಸಂಗತಿಯಿಂದ ಪ್ರಾಪ್ತವಾಗುತ್ತದೆ. ಆದನ್ನೇ 'ಅಥ' ಇತ್ಯಾದಿ ಗ್ರಂಥದಿಂದ ವ್ಯಾಖ್ಯಾನ ಮಾಡಿದ್ದಾರೆ.

ಈ ಅಧಿಕರಣಕ್ಕೆ ಪ್ರತ್ಯೇಕ ಉಪಾಧಿಯಿದೆ

ಭಾವದೀಪಃ – ಪ್ರಕಾರಾನ್ತರೇಣೇತಿ । ಸರ್ವಮಾನವಿರೋಧಕರ್ಮಕ್ರಮಾದಿವಿರೋಧಬಹುತ್ವಸಙ್ಖ್ಯಾದಿ-ವಿರೋಧೋತ್ಪತ್ತಿಮತ್ತ್ವಾದಿ ವಿರೋಧರೂಪಪ್ರಾಗುಕ್ತಪ್ರಕಾರಾಪೇಕ್ಷಯಾ ಮುಖ್ಯವೃತ್ತೇರ್ಹರೌ ತದನ್ಯತ್ರ ಚ ತುಲ್ಯತಾಪತ್ತಿರೂಪಾನ್ಯಪ್ರಕಾರೇಣೇತ್ಯರ್ಥಃ ।।

'ಪ್ರಕಾರಾಂತರೇಣ' ಇತ್ಯಾದಿ ಟೀಕಾವಾಕ್ಯದ ಅಭಿಪ್ರಾಯ ಹೀಗಿದೆ - ಸರ್ವಮಾನವಿರೋಧ, ಕರ್ಮಕ್ರಮಾದಿವಿರೋಧ, ಬಹುತ್ವಸಂಖ್ಯಾದಿವಿರೋಧ, ಉತ್ಪತ್ತಿಮತ್ವಾದಿವಿರೋಧ, ಎಂಬ ಹಿಂದಿನ ಅಧಿಕರಣಗಳ ಉಪಾಧಿಗಳಿಗಿಂತಲೂ ವಿಭಿನ್ನವಾದ ಉಪಾಧಿಯು ಈ ಅಧಿಕರಣಕ್ಕೆ ಇರುತ್ತದೆ. 'ತುಲ್ಯತಾಪತ್ತಿ' ಎಂಬ ಉಪಾಧಿನಿಮಿತ್ತಕವಾಗಿ ಶಬ್ದಗಳು ಶ್ರೀಹರಿಯಲ್ಲಿ ಮತ್ತು ಲೋಕದಲ್ಲಿ ಮುಖ್ಯವೃತ್ತಿಯಿಂದಲೇ ಬರುತ್ತವೆ. ಆದ್ದರಿಂದ ಈ ಅಧಿಕರಣವನ್ನು ಪ್ರತ್ಯೇಕವಾಗಿ ಪರಿಗಣಿಸುವುದು ತಪ್ಪಾಗುವುದಿಲ್ಲ.

ಜ್ಯೋತಿರಧಿಕರಣದ ಉಪಾಧಿಯೇ ಇದಕ್ಕೂ ಉಪಾಧಿ

ಭಾವದೀಪಃ – ಸರ್ವಶಬ್ದೇತಿ ।। ಜ್ಯೋತಿರಧಿಕರಣವಿಷಯೋಪಾಧಿರೇವಾಸ್ಯಾಪಿ ವಿಷಯ ಇತಿ ಸೂಚಿತಮ್ । ತೇನೈವ ಗತಾರ್ಥಮಿದಮಿತ್ಯತಃ ಪ್ರಕಾರಾನ್ತರೇಣೇತ್ಯಾದ್ಯುಕ್ತಮ್ । ಅತ್ರ ಶಾಸ್ತ್ರಸಙ್ಗತ್ಯಾದಿಕಮೂಹ್ಯಮ್ ।

ಜ್ಯೋತಿರಧಿಕರಣದ ವಿಷಯೋಪಾಧಿಯೇ ಈ ಅಧಿಕರಣದ ಉಪಾಧಿಯು ಆಗುತ್ತದೆಂದು ಸೂಚಿಸಿದ್ದಾರೆ. ಜ್ಯೋತಿರುಕ್ರಮಾಧಿಕರಣದಿಂದಲೇ ಈ ಅಧಿಕರಣವು ಗತಾರ್ಥವಾಗುತ್ತದಲ್ಲವೆ ? ಎಂಬ

ಆಶಂಕೆಗೆ 'ಪ್ರಕಾರಾಂತರೇಣ'. ಇತ್ಯಾದಿಯಾಗಿ ಹೇಳಿರುತ್ತಾರೆ. ಈ ಅಧಿಕರಣದಲ್ಲಿ ಶಾಸ್ತ್ರಸಂಗತಿ ಅಧಿಕರಣ ಸಂಗತಿ ಮೊದಲಾದವನ್ನು ಸ್ವತಃ ಊಹಿಸಿಕೊಳ್ಳಬೇಕು.

ಪಾಠ ಪ್ರಕ್ಷೇಪದ ಬಗ್ಗೆ

भावदीपः – यदा तु अत्र व्यवहारविलोपप्रसङ्गेन अन्यत्रैव प्रसिद्धानां सर्वशब्दानां परमात्मैकवाचित्वसमर्थनादित्यादिना पूर्वोत्तराधिकरणेष्विव शास्त्रादिसङ्गत्याद्युपपदानपरग्रन्थपाठोऽऽप्यत्र नये क्वचित्कोशेषूपलभ्यते तदा तु व्यक्तमेव ।

'अत्र व्यवहार.... ಎಂಬ ಟೀಕಾ ಪಂಕ್ತಿಯಿಂದ ಪ್ರಾರಂಭಿಸಿ, ... पूर्वपक्षयति' ಎಂಬಲ್ಲಿಯ ತನಕ ಇರುವ ಟೀಕಾವಾಕ್ಯಗಳು ಕೆಲವು ಪುಸ್ತಕಗಳಲ್ಲಿ ಕಾಣಿಸುವುದಿಲ್ಲ. ಅದರ ಬದಲು 'अत पुनः प्रकाराान्तरेण परमात्मनि सर्वशब्दसमन्वयासंभवमाशंक्य, तत्परिहारर्त्वेन सूत्रम् अवधारयति सर्वेति' ಎಂಬ ಪಾಠವಿದೆ. ಈ ವಾಕ್ಯವನ್ನು ಅವಲಂಬಿಸಿ ಮೇಲೆ ವ್ಯಾಖ್ಯಾನ ಮಾಡಲಾಯಿತು. ಒಂದುವೇಳೆ 'अत्र व्यवहारलोपप्रसंगेन अन्यत्रैव प्रसिद्धानाम् सर्वशब्दानाम् परमात्मैकवाचित्व समर्थनात् अस्ति शास्त्रादि संगतिः' ಇತ್ಯಾದಿಯಾದ ವಾಕ್ಯಗಳಿದ್ದಾಗ ಹಿಂದಿನ - ಮುಂದಿನ ಅಧಿಕರಣಗಳಂತೆ ಈ ಅಧಿಕರಣದಲ್ಲಿಯೂ ಶಾಸ್ತ್ರಸಂಗತಿ ಮೊದಲಾದವನ್ನು ತಿಳಿಯಬೇಕು. ಈ ಪಾಠವು ಕೆಲವು ಪುಸ್ತಕಗಳಲ್ಲಿ ಕಾಣಿಸುತ್ತಿದೆ. ಅತ್ಯಂತ ಸ್ಪಷ್ಟವಾಗಿಯೇ ಸಂಗತ್ಯಾದಿಗಳನ್ನು ಹೇಳಿರುವುದರಿಂದ ಪುನಃ ಇದಕ್ಕೆ ವ್ಯಾಖ್ಯಾನ ಮಾಡುವ ಅವಶ್ಯಕತೆಯಿಲ್ಲ.

ಆಪಾದದಕ್ಕೆ ಅಸಿದ್ಧಿ ಪರಿಹಾರ

भावदीपः – भाष्योक्तापादकस्यासिद्धिनिरासाय प्राक्तनं स्मारयन् व्याचष्टे – यदुक्तमिति ।। पूर्वनयैरित्यर्थः ।

ಭಾಷ್ಯದಲ್ಲಿ ಹೇಳಿದ ಆಪಾದಕಕ್ಕೆ ಅಸಿದ್ಧಿಯನ್ನು ಪರಿಹರಿಸಲು ಹಿಂದೆ ಹೇಳಿದ್ದನ್ನು ಸ್ಮರಣೆಗೆ ತಂದುಕೊಡುವ ಮೂಲಕ 'यदुक्तम्' ಇತ್ಯಾದಿ ಟೀಕೆಯು ಹೊರಟಿದೆ. 'यदुक्तम्' ಎಂದರೆ ಹಿಂದಿನ ಅಧಿಕರಣದಲ್ಲಿ ಹೇಳಿದಂತೆ ಎಂದರ್ಥ.

'ಸಾಕ್ಷಾದಪಿ' ಎಂಬ ಸೂತ್ರದಿಂದ ಗತಾರ್ಥವಲ್ಲ

भावदीपः – ननु भाष्ये कथमन्यत्र व्यवहार इति चोद्यमयुक्तम् । 'साक्षादपि' इत्यादि सूत्रैरेवास्य निरस्तत्वादित्यत आह – यदपीति ।।

ಭಾಷ್ಯದಲ್ಲಿ 'कथं अन्यत्र व्यवहारः' ಎಂಬ ಆಕ್ಷೇಪವಿದೆ ಇದು ಅಯುಕ್ತ. ಏಕೆಂದರೆ 'ಸಾಕ್ಷಾದಪಿ' ಇತ್ಯಾದಿ ಸೂತ್ರಗಳಿಂದಲೇ ಈ ಆಶಂಕೆಯನ್ನು ನಿರಾಕರಣೆ ಮಾಡಿದ್ದಾಗಿದೆಯಲ್ಲವೆ? ಎಂಬ ಪ್ರಶ್ನೆಗೆ 'ಯದಪಿ' ಇತ್ಯಾದಿ ಟೀಕೆಯು ಹೊರಟಿದೆ.

'ಸಾಕ್ಷಾದಪ್ಯವಿರೋಧಂ ಜೈಮಿನಿಃ' ಎಂಬ ಸೂತ್ರದಲ್ಲಿ ಸಮನ್ವಯ ಮಾಡಿದ್ದೇನು?

भावदीपः – विष्णुवाचकैरेव अनन्यगत्या हानाद्यर्थमन्यत्र व्यवहार इति यदुक्तं लिङ्गपादान्त्यनय इत्यर्थः ।।

ವಿಷ್ಣುವನ್ನು ಪ್ರತಿಪಾದನೆ ಮಾಡುವ ಶಬ್ದಗಳನ್ನೇ ಬೇರೆ ಗತಿಯಿಲ್ಲದೆ ಲೋಕದಲ್ಲಿ ಪ್ರಯೋಗ ಮಾಡುತ್ತೇವೆ. ಹೀಗೆ ಲಿಂಗಪಾದದ ಕೊನೆಯ ಅಧಿಕರಣದಲ್ಲಿ 'ಸಾಕ್ಷಾದಪ್ಯವಿರೋಧಂ ಜೈಮಿನಿಃ' ಎಂಬ ಸೂತ್ರದಲ್ಲಿ ಸಮರ್ಥಿಸಲಾಯಿತು ಎಂದು 'ಯದಪಿ' ಇತ್ಯಾದಿ ವಾಕ್ಯದ ಅಭಿಪ್ರಾಯ.

ಅವ್ಯವಸ್ಥಾ ಪದಕ್ಕೆ ಅರ್ಥ

भावदीपः – अव्यवस्थेति ।। वह्निपदेन जलादिव्यवहारस्याप्यापातादित्यर्थः।।

ಟೀಕೆಯಲ್ಲಿರುವ ಅವ್ಯವಸ್ಥಾ ಪದಕ್ಕೆ ಹೀಗರ್ಥ - ಯಾವುದೋ ಪದವನ್ನು ಮತ್ತೆಲ್ಲೊ ವ್ಯವಹರಿಸುವುದಾದರೆ ವಹ್ನಿಪದವನ್ನು ಜಲಾದಿಗಳಲ್ಲಿಯೂ ವ್ಯವಹರಿಸಬೇಕಾದೀತು ಎಂದು.

ಅನುಮಾನಿಕಸೂತ್ರದಲ್ಲಿ ಸಮನ್ವಯ ಮಾಡಿದ್ದೇನು ?

भावदीपः – यदप्यत्रेति ।। आनुमानिकसूत्रे तत्तच्छब्दवाच्येश्वरसम्बन्धात्तत्र तत्र तच्छब्दव्यवहारो गङ्गासम्बन्धाद् गङ्गापदस्य तीर इवेति यदुक्तमत्र चोद्ये समाधानमित्यर्थः ।।

'ಯದಪ್ಯತ್ರ' ಇತ್ಯಾದಿ ಟೀಕಾವಾಕ್ಯದ ಅಭಿಪ್ರಾಯ ಹೀಗಿದೆ - "ಆನುಮಾನಿಕ ಸೂತ್ರದಲ್ಲಿ ಆಯಾಶಬ್ದಗಳಿಂದ ವಾಚ್ಯನಾದ ಈಶ್ವರನ ಸಂಬಂಧವಿರುವ ಪ್ರಯುಕ್ತ ಬೇರೆ ಪದಾರ್ಥಗಳು

ಆಯಾಶಬ್ದಗಳಿಂದ ಪ್ರತಿಪಾದ್ಯವಾಗುತ್ತವೆ. ಗಂಗಾಸಂಬಂಧದಿಂದ ತೀರದಲ್ಲಿ ಗಂಗಾಪದವನ್ನು ಪ್ರಯೋಗಿಸಿದಂತೆ ಹೀಗೆ ಸಮರ್ಥಿಸಿದ್ದಾರೆ. ಅದನ್ನು ಇಲ್ಲಿಯೂ ಆಕ್ಷೇಪಿಸಿ ಸಮಾಧಾನವನ್ನು ತಿಳಿಯಬೇಕು''.

ಪುನರುಕ್ತಿಯ ಪರಿಹಾರ

भावदीपः – रूढ्याद्युपेत्येति ।। अन्यत्रेत्यनुषङ्गः । एतेन प्रसङ्गात् सूत्राणामपौनरुक्त्यं दर्शितम् ।। प्रतिज्ञेति ।। समन्वयसूत्रोक्तप्रतिज्ञेयर्त्थः ।।

'ರೂಢ್ಯಾದ್ಯುಪೇತ್ಯತಿ' ಎಂಬಲ್ಲಿ ಅನ್ಯತ್ರಪದವನ್ನು ಅನುಷಂಗ ಮಾಡಿಕೊಳ್ಳಬೇಕು. ಇದರಿಂದ ಪ್ರಾಸಂಗಿಕವಾಗಿ ಪುನರುಕ್ತಿದೋಷವನ್ನು ಪರಿಹರಿಸಿದಂತಾಗುತ್ತದೆ. 'ಪ್ರತಿಜ್ಞಾವ್ಯಾಘಾತಾತ್' ಎಂದರೆ ಸಮನ್ವಯ ಸೂತ್ರದಲ್ಲಿ ಮಾಡಿದ ಪ್ರತಿಜ್ಞಾ ವ್ಯಾಘಾತದ ದೋಷ ಬರುತ್ತದೆ ಎಂದರ್ಥ.

'ಯೋಗರೂಢ್ಯೋರೇವ' ಎಂಬ ಟೀಕಾವಾಕ್ಯಕ್ಕೆ ಪೀಠಿಕೆ

भावदीपः – तत्रोक्तसप्तवृत्तीनामपि मुख्यत्वाभावात् कथमेवमित्यतो व्यनक्ति – योगरूढ्योरेवेति ।।

ಏಳು ಬಗೆಯ ಶಬ್ದವೃತ್ತಿಗಳಲ್ಲಿ ಯಾವುದೂ ಕೂಡ ಮುಖ್ಯವಾಗದ ಕಾರಣ ಮುಖ್ಯವೃತ್ತಿಯಿಂದ ಶಬ್ದಗಳ ಸಮನ್ವಯವನ್ನು ಹೇಗೆ ಮಾಡುತ್ತೀರಿ ? ಎಂಬ ಪ್ರಶ್ನೆಗೆ 'ಯೋಗರೂಢ್ಯೋರೇವ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಯೋಗರೂಢಿಗಳೆಂದರೆ ಯಾವುದು ?

भावदीपः – योगरूढ्योरत्रोपलक्षणया महायोगविद्वद्रूढ्योरीशे सिद्धान्तभिमतयोर्व्यवच्छेदायैवकारः एवमभिप्रायं वर्णयित्वोपसंहाररूपेण भाष्यं योजयति – अत इति ।।

ಯೋಗರೂಢಿಗಳನ್ನು ಇಲ್ಲಿ ಉಪಲಕ್ಷಣಯಾ ಸ್ವೀಕರಿಸಬೇಕು. ಮಹಾಯೋಗ ಮತ್ತು ವಿದ್ವದ್ ರೂಢಿಗಳಿಂದ ಶಬ್ದಗಳು ಈಶ್ವರನಲ್ಲಿ ಬಂದಿರುತ್ತವೆಂದು ಸಿದ್ಧಾಂತಿಗಳಿಗೆ ಅಭಿಮತವಾಗಿದೆ. ಅದನ್ನು

ವ್ಯವಚ್ಛೇದ ಮಾಡಲು 'ಏವ'ಕಾರವನ್ನು ಟೀಕೆಯಲ್ಲಿ ಹೇಳಿರುತ್ತಾರೆ. ಹೀಗೆ ಭಾಷ್ಯದ ಅಭಿಪ್ರಾಯವನ್ನು ವ್ಯಾಖ್ಯಾನ ಮಾಡಿ ಪೂರ್ವಪಕ್ಷದ ಉಪಸಂಹಾರರೂಪದಿಂದ ಭಾಷ್ಯವನ್ನು ಯೋಜನೆ ಮಾಡಲು 'ಅಥ' ಇತ್ಯಾದಿ ವಾಕ್ಯವು ಹೊರಟಿದೆ.

ಮುಖ್ಯವೃತ್ತಿ ಎಂದರೆ ಯಾವುದು ?

भावदीपः – योगरूढिव्यतिरिक्तमुख्यवृत्तेरभावादित्यर्थः । मुख्यवृत्त्येति शेषोक्तिः । योगरूढिरूपयेत्यर्थः ।

'अतः' ಎಂದರೆ ಯೋಗ ಹಾಗೂ ರೂಢಿಗಳಿಂದ ಅತಿರಿಕ್ತವಾದ ಮುಖ್ಯವೃತ್ತಿಯು ಇಲ್ಲದ್ದರಿಂದ ಎಂದರ್ಥ. 'ಮುಖ್ಯವೃತ್ಯಾ' ಎಂಬುದನ್ನು ಶೇಷಪೂರಣ ಮಾಡಿಕೊಳ್ಳಬೇಕು. ಯೋಗರೂಢಿಯ ರೂಪವಾದ ಮುಖ್ಯವೃತ್ತಿಯಿಂದ ಎಂದು ಇದರರ್ಥ.

ಸ್ವಾತಂತ್ರ್ಯ ಹಾಗೂ ತದ್ಗತತ್ವ ಇವೆರಡು ಪ್ರವೃತ್ತಿನಿಮಿತ್ತ

भावदीपः – ''स्वातन्त्र्यं तद्गतत्वं च शब्दवृत्तेर्हि कारणम् । स्वातन्त्र्यं तत्र मुख्यं स्यात्'' इति तदधीनत्वसूत्रानुव्याख्यानोक्त स्वातन्त्र्य-निमित्तकमुख्यवृत्त्या शब्दानामीश्वरवाचित्वे बाधकाभावेऽपि तद्गतत्व-निमित्तकमुख्यवृत्त्येश्वरवाचित्वेऽन्यत्र व्यवहारलोपः स्यादेव । लोके योगरूढिरूपमुख्यवृत्तेरभावस्य प्राप्तत्वादिति भावः ।

''ಸ್ವಾತಂತ್ರ್ಯಂ ತದ್ಗತತ್ವಂ ಚ ಶಬ್ದವೃತ್ತೇರ್ಹಿ ಕಾರಣಮ್ । ಸ್ವಾತಂತ್ರ್ಯಂ ತತ್ರ ಮುಖ್ಯಂ ಸ್ಯಾತ್ ।'' ಎಂಬುದಾಗಿ 'ತದಧೀನತ್ವಾತ್' ಎಂಬ ಅನುವ್ಯಾಖ್ಯಾನದಲ್ಲಿ ಹೇಳಿದಂತೆ ಸ್ವಾತಂತ್ರ್ಯವೆಂಬ ಪ್ರವೃತ್ತಿ ನಿವೃತ್ತಿನಿಮಿತ್ತದಿಂದ ಶಬ್ದಗಳು ಮುಖ್ಯವಾಗಿ ಈಶ್ವರನನ್ನೇ ಪ್ರತಿಪಾದನೆ ಮಾಡುತ್ತವೆ. ಈ ವಿಷಯದಲ್ಲಿ ಯಾವುದೇ ಬಾಧಕಗಳು ಇರುವುದಿಲ್ಲ. ಆದರೆ 'ತದ್‌ಗತತ್ವ' ಎಂಬ ಪ್ರವೃತ್ತಿನಿಮಿತ್ತವನ್ನು ಉದ್ದೇಶಿಸಿ ಮುಖ್ಯವೃತ್ತಿಯಿಂದ ಈಶ್ವರನೇ ಪ್ರತಿಪಾದ್ಯನೆಂದು ಹೇಳುವುದಾದರೆ ಬೇರೆಡೆ ಇರುವ ವ್ಯವಹಾರವು ಲೋಪವಾಗಬೇಕಾಗುತ್ತದೆ. ಏಕೆಂದರೆ ಲೋಕದಲ್ಲಿ ಯೋಗ ಹಾಗು ರೂಢಿಗಳೆಂಬ ಮುಖ್ಯವೃತ್ತಿಯು ಇಲ್ಲವೆಂದು ಹೇಳಿದಂತಾಗುತ್ತದೆ.

ಭಾಷ್ಯಕ್ಕೆ ವ್ಯಾಖ್ಯಾನ

भावदीपः – उक्ताशङ्कां निषेधन् तत्र परम्पराहेतुत्वेन भाष्यं व्याचष्टे – न परमात्मन इति ।। मुख्यतः योगादिवृत्त्या । तत्र लोके ।।

ಹಿಂದೆ ಹೇಳಿದ ಆಶಂಕೆಯನ್ನು ನಿರಾಕರಣೆ ಮಾಡುತ್ತಾ ಪರಂಪರಾರೂಪವಾದ ಹೇತುವಿನಿಂದ ಭಾಷ್ಯವನ್ನು ವ್ಯಾಖ್ಯಾನ ಮಾಡಲು 'ನ ಪರಮಾತ್ಮನಃ' ಇತ್ಯಾದಿ ಟೀಕೆಯು ಹೊರಟಿದೆ. 'ಮುಖ್ಯತಃ' ಎಂದರೆ ಯೋಗಾದಿವೃತ್ತಿಯಿಂದ ಮುಖ್ಯವಾಗಿ ಎಂದರ್ಥ. 'ತತ್ರ' ಎಂಬ ಪದಕ್ಕೆ 'ಲೋಕೇ' ಎಂದರ್ಥ.

'ನಾಮಾನಿ ವಿಶ್ವಾನಿ' ಇತ್ಯಾದಿ ಶ್ರುತಿಗಳ ಆಧಾರ

भावदीपः – उभयोरिति ।। ब्रह्मतदन्ययोरित्यर्थः । तथा च तत्त्वित्यवधारणायोगो 'नामानि विश्वानि न सन्ति लोके' 'यो देवानां नामधा एक एव' इत्याद्ययोगश्चेति भावः ।।

'ಉಭಯೋಃ' ಎಂಬ ಪದಕ್ಕೆ ಬ್ರಹ್ಮ ಹಾಗು ಇತರ ಪದಾರ್ಥಗಳಿಗೆ ಎಂದರ್ಥ. ಆದ್ದರಿಂದ 'ತತ್ತು ಸಮನ್ವಯಾತ್' ಎಂಬ ಸೂತ್ರದಲ್ಲಿ 'ತು' ಶಬ್ದದಿಂದ ಅವಧಾರಣವನ್ನು ಹೇಳಿದ್ದು ಅಯುಕ್ತವಾಗುತ್ತದೆ. 'ನಾಮಾನಿ ವಿಶ್ವಾನಿ ನ ಸಂತಿ ಲೋಕೇ' 'ಯೋ ದೇವಾನಾಂ ನಾಮಾಧಾ ಏಕ ಏವ' ಇತ್ಯಾದಿ ಶ್ರುತಿಗಳ ಮುಖ್ಯ ತಾತ್ಪರ್ಯವೂ ಕೂಡ ಅಯುಕ್ತವಾಗಬೇಕಾದೀತು ಎಂದು ಅಭಿಪ್ರಾಯ.

ಬೇರೆಡೆ ಇರುವ ಪ್ರವೃತ್ತಿನಿಮಿತ್ತವು ಅತ್ಯಲ್ಪ

भावदीपः – स्वत इति ।। अनन्यापेक्षयेत्यर्थः । मुख्यवृत्त्या महायोग-विद्वद्रूढिवृत्त्येत्यर्थः ।। व्यवहारेति ।। हानादिव्यवहारेत्यर्थः ।। अल्पेति ।। अन्यत्रेत्यनुषङ्गः । भाष्योक्तिरुपलक्षणमिति भावः ।।

'ಸ್ವತಃ' ಎಂಬ ಪದಕ್ಕೆ ಮತ್ತೊಂದರ ಅಪೇಕ್ಷೆ ಇಲ್ಲದೆ ಎಂದರ್ಥ. 'ಮುಖ್ಯವೃತ್ತ್ಯಾ' ಎಂಬ ಪದಕ್ಕೆ ಮಹಾಯೋಗ ಮತ್ತು ವಿದ್ವದ್‌ರೂಢಿಯಿಂದ ಎಂದರ್ಥ. ವ್ಯವಹಾರಪದಕ್ಕೆ ಹಾನಾದಿವ್ಯವಹಾರ ಎಂದರ್ಥ. ಪರಮಾತ್ಮನನ್ನು ಪ್ರತಿಪಾದನೆ ಮಾಡುವ ಶಬ್ದಗಳ ಗುಣಧರ್ಮಗಳು ಪರಮಾತ್ಮನಲ್ಲಿವೆ. ಅದೇ ರೀತಿಯಾಗಿ ಲೌಕಿಕಪದಾರ್ಥಗಳನ್ನು ಪ್ರತಿಪಾದನೆ ಮಾಡುವ ಶಬ್ದಗಳ ಗುಣಧರ್ಮಗಳೂ ಕೂಡ ಲೌಕಿಕ ವಸ್ತುಗಳಲ್ಲೇ ಇರುತ್ತವೆ. ಹೀಗೆ ಉಭಯವಿಧವಾದ ಶಬ್ದಗಳಲ್ಲಿ ಸಾಮ್ಯವಿರುತ್ತದೆ. ಆದ್ದರಿಂದ ಪರಮಾತ್ಮ

ವಾಚಕವಾದ ಶಬ್ದಗಳನ್ನು ಲೋಕದಲ್ಲಿ ಸಮಾಕರ್ಷಣೆ ಮಾಡಿ ವ್ಯವಹರಿಸುತ್ತೇವೆಂದು ಹೇಳಿರುವುದು ಹೇಗೆ ಯುಕ್ತವಾಗುತ್ತದೆ? ಎಂಬ ಪ್ರಶ್ನೆಗೆ ಉತ್ತರಿಸಲು 'ಅಲ್ಪ' ಇತ್ಯಾದಿ ಟೀಕಾವಾಕ್ಯವು ಹೊರಟಿದೆ.

ಅಲ್ಪವಾದ ಪ್ರವೃತ್ತಿನಿಮಿತ್ತಗಳು ಲೌಕಿಕಪದಾರ್ಥಗಳಲ್ಲಿವೆ. ಅದು ಪರಮಾತ್ಮನ ಅಧೀನವಾದ್ದರಿಂದ ಪರಮಾತ್ಮನೇ ಮುಖ್ಯವಾಗಿ ಶಬ್ದಪ್ರತಿಪಾದ್ಯನಾಗುತ್ತಾನೆಂದು ಅಭಿಪ್ರಾಯ. ಪ್ರವೃತ್ತಿನಿಮಿತ್ತಗಳು ಪರಮಾತ್ಮನ ಅಪೇಕ್ಷೆಯಿಲ್ಲದೇ ಲೌಕಿಕ ಪದಾರ್ಥಗಳಲ್ಲಿ ಇರಲು ಸಾಧ್ಯವಿಲ್ಲ. ಆದ್ದರಿಂದ ಎರಡೂ ಕಡೆ ಮುಖ್ಯಾರ್ಥವು ಸಮಾನವಾಗುವುದಿಲ್ಲವೆಂದು ತಿಳಿಯಬೇಕು. 'ಅಲ್ಪಪ್ರವೃತ್ತಿನಿಮಿತ್ತಾನಾಮ್' ಎಂಬಲ್ಲಿ 'ಅನ್ಯತ್ರ' ಎಂಬ ಪದವನ್ನು ಅನುಷಂಗ ಮಾಡಿಕೊಳ್ಳಬೇಕು. ಭಾಷ್ಯದಲ್ಲಿ 'ಪರಮಾತ್ಮವಾಚಿನ' ಇತ್ಯಾದಿಯಾಗಿ ಹೇಳಿರುವುದು ಉಪಲಕ್ಷಣವಾಗಿದೆಯೆಂದು ಇದರಿಂದ ತಿಳಿಯುತ್ತದೆ.

ಹಿಂದಿನ ಸೂತ್ರಗಳಿಂದ ವಿರೋಧವಿಲ್ಲ

भावदीपः – प्राचीनेति ।। पूर्वोदाहृतैः साक्षादपीत्यादिसूत्रैर्विरोध इत्यर्थः। द्वितीये आनुमानिकसूत्रे अत्रोक्तस्य मुख्यत्वमात्रस्य । तृतीये कल्पनेतिसूत्रे।।

'ಪ್ರಾಚೀನಸೂತ್ರವಿರೋಧಃ' ಎಂದರೆ ಹಿಂದೆ ಉದಾಹರಿಸಲ್ಪಟ್ಟ 'ಸಾಕ್ಷಾದಪಿ' ಇತ್ಯಾದಿ ಸೂತ್ರಗಳ ವಿರೋಧ ಬರುತ್ತದೆ ಎಂದರ್ಥ. 'ದ್ವಿತೀಯೇ' ಎಂದರೆ ಅನುಮಾನಿಕ ಸೂತ್ರದಲ್ಲಿ ಎಂದರ್ಥ. 'ಅತ್ರೋಕ್ತಸ್ಯ' ಎಂದರೆ ಲೋಕದ ಪದಾರ್ಥಗಳಲ್ಲಿರುವ ಮುಖ್ಯತ್ವಕ್ಕೆ ಎಂದರ್ಥ. 'ತೃತೀಯೇ' ಎಂದರೆ 'ಕಲ್ಪನೋಪದೇಶಾಚ್ಚ' ಎಂಬ ಸೂತ್ರದಲ್ಲಿ ಎಂದರ್ಥ.

ಮಹಾಯೋಗ ವಿದ್ವದ್ರೂಢಿಗಳಿಂದ ಪರಮಾತ್ಮನು ಪ್ರತಿಪಾದ್ಯ

भावदीपः – अविवेचितेति ।। भगवति महायोगविद्वद्रूढी । अन्यत्र तु रूढ्यादिमात्रमित्येवंरूपेणेत्यर्थः । एतेन पूर्वाधिकरणेषु तत्र तत्र विष्णौ शब्दानां महायोगविद्वद्रूढिभ्यां मुख्यत्वकीर्तनं त्वत्रत्यन्यायानुसन्धानेनेति दर्शितम् । इति शब्दः समाप्तौ ।।१।।

'ಅವಿವೇಚಿತ' ಇತ್ಯಾದಿ ಟೀಕೆಯ ಅಭಿಪ್ರಾಯ ಹೀಗಿದೆ - ಭಗವಂತನು 'ಮಹಾಯೋಗ' ಹಾಗೂ 'ವಿದ್ವದ್‌ರೂಢಿ'ಗಳಿಂದ ಪ್ರತಿಪಾದ್ಯನಾಗುತ್ತಾನೆ. ಬೇರೆ ಪದಾರ್ಥಗಳು ರೂಢಿ, ಯೋಗ ಮೊದಲಾದ ವೃತ್ತಿಗಳಿಂದ ಪ್ರತಿಪಾದ್ಯವಾಗುತ್ತವೆ. ಇದನ್ನು ತಿಳಿಯದೆ ಎಂದರ್ಥ.

ಹೀಗೆ ಹೇಳಿದ್ದರಿಂದ ಹಿಂದಿನ ಅಧಿಕರಣಗಳಲ್ಲಿ ಆಯಾ ಶಬ್ದಗಳನ್ನು ವಿಷ್ಣುವಿನಲ್ಲಿ ಮಹಾಯೋಗ ಹಾಗೂ ವಿದ್ವದ್‌ರೂಢಿಗಳಿಂದ ಮುಖ್ಯವಾಗಿ ಸಮರ್ಥನೆ ಮಾಡಿದ್ದು ಈ ಅಧಿಕರಣದ ಸಿದ್ಧಾಂತನ್ಯಾಯವನ್ನು ಅನುಸರಿಸಿ ಎಂದು ತಿಳಿಯಬೇಕು. ಕೊನೆಯಲ್ಲಿರುವ 'ಇತಿ' ಶಬ್ದವು ಸಮಾಪ್ತ್ಯರ್ಥದಲ್ಲಿದೆ.

ಬ್ರಹ್ಮಸೂತ್ರ

'ಜಗದ್ವಾಚಿತ್ವಾತ್' ಎಂಬ ಸೂತ್ರದ ವ್ಯಾಖ್ಯಾನ

ಬ್ರಹ್ಮಸೂತ್ರಮ್ – ।। ಜಗದ್ವಾಚಿತ್ವಾತ್ ।। ೨ ।।

ಸೂತ್ರಾರ್ಥ - ಲೌಕಿಕವಸ್ತುಗಳಲ್ಲೇ ಎಲ್ಲರೂ ಶಬ್ದಗಳನ್ನು ಪ್ರಯೋಗಿಸುತ್ತಾರೆ. ಪರಮಾತ್ಮನಲ್ಲಿ ಪ್ರಯೋಗಿಸುವುದಿಲ್ಲ. ಹೀಗೆ ಅಜ್ಞರೂಢಿಯಿಂದ ಶಬ್ದಗಳು ಲೌಕಿಕವಸ್ತುಗಳಲ್ಲಿ ಪ್ರಸಿದ್ಧವಾಗಿವೆ.

ಅರ್ಥ -- ಲೋಕವ್ಯವಹಾರವಿರುವುದರಿಂದ ಶಬ್ದಗಳು 'ಜಗದ್ವಾಚಿತ್ವಾತ್' ಆಯಾ ವಸ್ತುಗಳನ್ನು ಪ್ರತಿಪಾದನೆ ಮಾಡುತ್ತವೆ ಎಂದು ಪ್ರಸಿದ್ಧಿಯಿರುವುದರಿಂದ, ವಿಷ್ಣು ಮುಖ್ಯಾರ್ಥನಾಗಿದ್ದರೂ ಬೇರೆ ವಸ್ತುಗಳನ್ನೂ ಕೂಡ ಶಬ್ದಗಳು ಪ್ರತಿಪಾದನೆ ಮಾಡುತ್ತವೆ.

ಬ್ರಹ್ಮಸೂತ್ರಭಾಷ್ಯ

ಎಲ್ಲಾ ಶಬ್ದಗಳು ಜಗತ್ತಿನಲ್ಲಿ ಹೇಗೆ ಪ್ರಸಿದ್ಧವಾದವು?

ಬ್ರಹ್ಮಸೂತ್ರಭಾಷ್ಯಮ್ – तर्हि कथं तेषां शब्दानां जगति प्रसिद्धिः ?

ಅನುವಾದ - ಎಲ್ಲಾ ಶಬ್ದಗಳು ಭಗವದ್ವಾಚಕಗಳಾದರೆ, ಜಗತ್ತಿನಲ್ಲಿ ಹೇಗೆ ಪ್ರಸಿದ್ಧವಾಗಿವೆ ?

ಪ್ರತಿಪದಾರ್ಥ -- ಆಶಂಕಿಸುತ್ತಿದ್ದಾರೆ –

ತರ್ಹಿ = ಶಬ್ದಗಳು ಮುಖ್ಯವಾಗಿ ಪರಮಾತ್ಮನ ಪ್ರತಿಪಾದಕಗಳೇ ಆದರೆ, ತೇಷಾಂ = ಆ ಶಬ್ದಗಳಿಗೆ, ಜಗತಿ = ಜಗತ್ತಿನಲ್ಲಿ, ಪ್ರಸಿದ್ಧಿಃ = ಪ್ರಸಿದ್ಧಿಯು, ಕಥಂ = ಹೇಗೆ ತಾನೆ ಬರುತ್ತದೆ?

ಅಜ್ಞರೂಢಿಯಿಂದ ವ್ಯವಹಾರ

ಬ್ರಹ್ಮಸೂತ್ರಭಾಷ್ಯಮ್ – ಜಗತಿಹಿ ವ್ಯವಹಾರೊ ಲೊಕಸ್ಯ, ನ ತು ಪರಮಾತ್ಮನಿ ತಥಾ । ಅತೊ ಜಗತಿ ಪ್ರಸಿದ್ಧಿಃ ಶಬ್ದಾನಾಮ್ ।।೨।।

ಅನುವಾದ - ಸಕಲಶಬ್ದಗಳ ಪ್ರಯೋಗವನ್ನು ಮಂದಜನರು ಜಗತ್ತಿನಲ್ಲೇ ಮಾಡುತ್ತಾರೆ. ಹೊರತು, ಪರಮಾತ್ಮನಲ್ಲಿ ಮಾಡುವುದಿಲ್ಲ. ಹೀಗೆ ಅಜ್ಞರೂಢಿಯಿಂದ ಶಬ್ದಗಳು ಜಗತ್ತಿನಲ್ಲಿ ಪ್ರಸಿದ್ಧವಾಗಿವೆ.

ಪ್ರತಿಪದಾರ್ಥ -- ಹಿಂದಿನ ಆಶಂಕೆಯನ್ನು ಪರಿಹರಿಸಲು ಸೂತ್ರವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ –

ಲೋಕಸ್ಯ = ಮಂದ ಜನರ, ವ್ಯವಹಾರಃ = ವ್ಯವಹಾರವು, ಜಗತಿ = ಜಗತ್ತಿನಲ್ಲಿ, ಯಥಾ = ಹೇಗೆ ಮುಖ್ಯವಾಗಿದೆಯೋ, ತಥಾ = ಅದರಂತೆ, ಪರಮಾತ್ಮನಿ = ಪರಮಾತ್ಮನಲ್ಲಿ, ನತು = ಇರುವುದಿಲ್ಲ. ಅತ = ಆದ್ದರಿಂದ, ಶಬ್ದಾನಾಮ್ = ಶಬ್ದಗಳಿಗೆ, ಜಗತಿ = ಲೋಕದಲ್ಲಿ, ಪ್ರಸಿದ್ಧಿಃ = ಪ್ರಯೋಗ ಪ್ರಸಿದ್ಧಿಯು ಇರುತ್ತದೆ.

ಸತ್ತರ್ಕದೀಪಾವಳಿ

ಪ್ರಸಿದ್ಧಿಯ ಅನ್ಯಥಾನುಪಪತ್ತಿಯಿಂದ ಜಗದ್ವಾಚಕತ್ವವನ್ನು ಒಪ್ಪಬೇಕಲ್ಲವೇ?

ಸತ್ತರ್ಕದೀಪಾವಲಿಃ – ನನು ಯದಿ ಪರಮಾತ್ಮವಚಿನಾಂ ಶಬ್ದಾನಾಂ ಸಮಾಕ್ಷಾದೇವ ಜಗತಿ ವ್ಯವಹಾರಃ । ನ ತು ತದ್ವಾಚಕತ್ವಮ್ । ತರ್ಹಿ ತೇಷಾಂ ಜಗತಿ ಪ್ರಸಿದ್ಧಿಃ ನ ಸ್ಯಾತ್। ಅನ್ಯಥಾನುಪಪತ್ತ್ಯಾ ಜಗತೋऽಪಿ ವಾಚಕಾಸ್ತ ಇತ್ಯಾಶಙ್ಕ್ಯಾಹ । ತರ್ಹೀತಿ ।

ಒಂದು ವೇಳೆ ಪರಮಾತ್ಮವಾಚಕವಾದ ಶಬ್ದಗಳನ್ನು ಸಮಾಕರ್ಷಣ ಮಾಡಿ, ಜಗತ್ತಿನಲ್ಲಿ ವ್ಯವಹರಿಸಬೇಕು. ಆ ಶಬ್ದಗಳು ಜಗತ್ತಿನಲ್ಲಿರುವ ಪದಾರ್ಥಗಳನ್ನು ಪ್ರತಿಪಾದನೆ ಮಾಡುತ್ತವೆ ಎಂಬುದಾಗಿ ಒಪ್ಪಬಾರದು ಎನ್ನುತ್ತಿರುವಿರಿ. ಹಾಗಾದಲ್ಲಿ ಶಬ್ದಗಳು ಜಗತ್ತಿನಲ್ಲಿ ಪ್ರಸಿದ್ಧವೇ ಇಲ್ಲದೇ ಇರಬೇಕಾಗುತ್ತದೆ. ಪ್ರಸಿದ್ಧಿಯಿರುವುದರಿಂದ ಅನ್ಯಥಾನುಪಪತ್ತಿ ಪ್ರಮಾಣವನ್ನು

ಅವಲಂಬಿಸಿ ಶಬ್ದಗಳು ಜಗದ್ವಾಚಕವೂ ಆಗುತ್ತವೆ ಎಂದು ಹೇಳಬೇಕಲ್ಲವೇ ? ಈ ಆಶಂಕೆಗೆ ಉತ್ತರಿಸಲು 'ತರ್ಹಿ' ಇತ್ಯಾದಿ ಭಾಷ್ಯವು ಹೊರಟಿದೆ.

ಜಗತ್ತಿನಲ್ಲಿ ಶಬ್ದಗಳು ಹೇಗೆ ಪ್ರಸಿದ್ಧವಾದವು ?

सत्तर्कदीपावलिः – यः सर्वस्यान्तर्नियामकः तत्तच्छब्दवाच्यमुख्यार्थः । यतश्च समाकृष्टाः शब्दाः तस्य स्वव्यवहारागोचरत्वात् । तदनभिज्ञोऽयं जनः तत्तच्छब्दैर्जगद्वाचकैरपि स्वव्यवहारगोचरजगदुक्ति । अतस्तेषां जगति प्रसिद्धिरित्यर्थः ।

ಯಾವ ಪರಮಾತ್ಮನು ಪ್ರತಿಯೊಂದು ಪದಾರ್ಥಗಳ ಅಂತರ್ಯಾಮಿಯಾಗಿದ್ದು ನಿಯಾಮಕನಾಗಿದ್ದಾನೋ, ಅವನೇ ಆಯಾ ಶಬ್ದಗಳ ಮುಖ್ಯಾರ್ಥನಾಗಿದ್ದಾನೆ. ಅವನಲ್ಲಿರುವ ಶಬ್ದಗಳನ್ನೇ ಸಮಾಕರ್ಷಣ ಮಾಡಿ, ಜನರುಗಳು ತಮ್ಮ ವ್ಯವಹಾರಕ್ಕೋಸ್ಕರ ಶಬ್ದಗಳನ್ನು ಉಪಯೋಗಿಸುತ್ತಿದ್ದಾರೆ. ಈ ಪ್ರಮೇಯವನ್ನು ಅರಿಯದ ಅಜ್ಞಾನಿಗಳು ಈ ಘಟ-ಪಟಾದಿ ಶಬ್ದಗಳಿಂದ ಪರಮಾತ್ಮನು ಪ್ರತಿಪಾದ್ಯನಾಗಿರುವುದಿಲ್ಲ. ಈ ಪದಾರ್ಥಗಳೇ ಪ್ರತಿಪಾದ್ಯ-ವಾಗಿವೆಯೆಂದು ತಿಳಿದುಬಿಟ್ಟಿದ್ದಾರೆ. ಆದ್ದರಿಂದಲೇ ಶಬ್ದಗಳು ಜಗತ್ತಿನಲ್ಲಿ ಪ್ರಸಿದ್ಧವಾಗಿವೆ.

ತತ್ವಪ್ರದೀಪ

ಅಜ್ಞರೂಢಿಯಿಂದ ಲೋಕವ್ಯವಹಾರ

तत्वप्रदीपः – कथं तर्हि तेषां जगति वाचकत्वप्रसिद्धिः इत्यत आह - जगत्वाचित्वात् ।।७।।

ಎಲ್ಲಾ ಶಬ್ದಗಳು ವಿಷ್ಣುವನ್ನೇ ಪ್ರತಿಪಾದನೆ ಮಾಡುವುದಾದರೆ, ಜಗತ್ತಿನಲ್ಲಿ ಆ ಶಬ್ದಗಳಿಂದ ವ್ಯವಹಾರ ಮಾಡುವುದು ಹೇಗೆ ? ಎಂಬ ಪ್ರಶ್ನೆಗೆ ಉತ್ತರವನ್ನು ನೀಡಲು 'ಜಗದ್ವಾಚಿತ್ವಾತ್' ಎಂಬ ಸೂತ್ರ ಹೊರಟಿದೆ.

ತತ್ವಪ್ರಕಾಶಿಕಾ

ಹರಿಪರವಾದ ಶಬ್ದಗಳಿಗೆ ಲೋಕದಲ್ಲಿ ಸಂಕೇತ ಮಾತ್ರ

यदि शब्दाः परमात्मन्येव मुख्याः; अन्यत्र तु ततः समाकृष्य सङ्केतितत्वेनाऽमुख्याः, तर्हि तेषां मुख्यार्थे परमात्मन्येव प्रसिद्धिः स्यात्, न त्वमुख्यार्थे जगति । अग्निशब्दस्य माणवके प्रसिद्ध्यदर्शनात् । अस्ति चासौ जगति। अतस्तदन्यथानुपपत्त्याऽन्यस्यैव मुख्यवाच्यत्वमिति भावेनाऽऽशङ्कते – तर्हीति।।

ಸಕಲಶಬ್ದಗಳು ಪರಮಾತ್ಮನಲ್ಲಿಯೇ ಮುಖ್ಯವೃತ್ತಿಯಿಂದ ಇರುತ್ತವೆ. ಬೇರೆ ಪದಾರ್ಥಗಳಲ್ಲಿ ಅಮುಖ್ಯವೃತ್ತಿಯಿಂದ ಇರುತ್ತವೆ. ಪರಮಾತ್ಮನಲ್ಲಿರುವ ಶಬ್ದಗಳನ್ನೇ ಸಮಾಕರ್ಷ ಮಾಡಿ, ಲೌಕಿಕಪದಾರ್ಥಗಳಲ್ಲಿ ಸಂಕೇತವನ್ನು ಒಪ್ಪಬೇಕು. ಆದ್ದರಿಂದ ಲೌಕಿಕ ಪದಾರ್ಥಗಳಲ್ಲಿ ಅಮುಖ್ಯವೃತ್ತಿಯಿಂದಲೇ ಶಬ್ದಗಳು ಇರುತ್ತವೆಂದು ಇಲ್ಲಿಯ ತನಕ ಸಮರ್ಥನೆ ಮಾಡಿದಿರಿ. ಹಾಗಾದರೆ ಆ ಎಲ್ಲಾ ಶಬ್ದಗಳಿಗೂ ಮುಖ್ಯಾರ್ಥನಾದ ಪರಮಾತ್ಮನಲ್ಲಿಯೇ ಪ್ರಸಿದ್ಧಿಯಿದೆ. ಉಳಿದ ಪದಾರ್ಥಗಳಲ್ಲಿ ಪ್ರಸಿದ್ಧಿಯಿರುವುದಿಲ್ಲ ಎಂದಂತಾಯಿತು. ಹೇಗೆಂದರೆ ಅಗ್ನಿಶಬ್ದಕ್ಕೆ ಮುಖ್ಯಾರ್ಥ 'ಬೆಂಕಿ' ಎಂದು. ಅಮುಖ್ಯಾರ್ಥ 'ಬ್ರಹ್ಮಚಾರಿ' ಎಂದು. ಅಗ್ನಿಶಬ್ದವನ್ನು ಕೇಳಿದಾಗ 'ಬ್ರಹ್ಮಚಾರಿ' ಎಂಬ ಅರಿವು ಯಾರಿಗೂ ಬರುವುದಿಲ್ಲ. ಅದರಂತೆ ಜಗತ್ತಿನ ವಿಷಯದಲ್ಲಿ ಹೇಳಬೇಕು. ಆದರೆ ಯಾವುದೇ ಶಬ್ದಗಳನ್ನು ಪ್ರಯೋಗ ಮಾಡಿದಾಗ ಜಗತ್ತಿನಲ್ಲಿಯೇ ಪ್ರಸಿದ್ಧಿಯಿರುವುದು ಕಂಡಿದೆ. ಶಬ್ದದ ಮುಖ್ಯಾರ್ಥವನ್ನು ಒಪ್ಪದೇ ಲೋಕಪ್ರಸಿದ್ಧಿಯು ಉಪಪನ್ನವಾಗುವುದಿಲ್ಲ. ಹೀಗೆ ಅನ್ಯಥಾನುಪಪತ್ತಿ ಪ್ರಮಾಣದಿಂದ ಶಬ್ದಗಳು ಲೋಕದ ವಸ್ತುಗಳನ್ನು ಮುಖ್ಯವಾಗಿ ಪ್ರತಿಪಾದನೆ ಮಾಡುತ್ತವೆ. ಈ ಅಭಿಪ್ರಾಯದಿಂದ ಭಾಷ್ಯದಲ್ಲಿ 'ತರ್ಹಿ' ಎಂಬ ವಾಕ್ಯದಿಂದ ಆಕ್ಷೇಪ ಮಾಡಿದ್ದಾರೆ.

ಲೌಕಿಕಾರ್ಥಗಳಲ್ಲಿಯೂ ಮುಖ್ಯಾರ್ಥತ್ವವಿದೆ

तत्वप्रकाशिका – तत्परिहारत्वेन सूत्रं पठित्वा व्याचष्टे – जगदिति ।। न प्रसिद्ध्यन्यथानुपपत्त्याऽन्यस्यैव मुख्यवाच्यत्वं कल्प्यम् । लोकस्य जगत्येव शब्दव्यवहारेण तत्रैव तच्छ्रोतॄणां व्युत्पत्तेः ।

ಈ ಆಶಂಕೆಯನ್ನು ಪರಿಹರಿಸಲು ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ - 'ಜಗತ್' ಇತ್ಯಾದಿಯಾಗಿ. ಪ್ರಸಿದ್ಧಿಯ ಅನ್ಯಥಾನುಪಪತ್ತಿಯಿಂದ ಬೇರೆ ಪದಾರ್ಥವೇ ಮುಖ್ಯಾರ್ಥವಾಗುತ್ತದೆಂದು ಕಲ್ಪನೆ ಮಾಡಬಾರದು. ಏಕೆಂದರೆ ಎಲ್ಲಾ ಶಬ್ದಗಳ ವ್ಯವಹಾರವು ಜಗತ್ತಿನಲ್ಲೇ ಇರುತ್ತದೆ. ಆದ್ದರಿಂದ ಶ್ರೋತೃಗಳಿಗೆ ಆಯಾ ಶಬ್ದಗಳನ್ನು ಕೇಳಿದಾಗ ಲೌಕಿಕ ಪದಾರ್ಥದಲ್ಲಿಯೇ ವ್ಯುತ್ಪತ್ತಿಯು ಬರುತ್ತದೆ.

'ಅಗ್ನಿರ್ಮಾಣವಕಃ' ಎಂಬ ದೃಷ್ಟಾಂತವು ಸರಿಯಿಲ್ಲ

तत्वप्रकाशिका – परमात्मनि तथा बहुलव्यवहाराभावेन व्युत्पत्त्यभावाच्च जगति प्रसिद्धेरन्यथोपपत्तेः । 'अग्निर्माणवकः' इति व्यवहारादनवगताग्निशब्द-मुख्यार्थस्य माणवकेऽग्निशब्दव्युत्पत्तिसम्भवादिति भावः ।। २ ।।

ಪರಮಾತ್ಮನಲ್ಲಿ ಶಬ್ದಗಳ ವ್ಯವಹಾರವು ಬಹಳವಾಗಿ ಇರುವುದಿಲ್ಲ. ಆದ್ದರಿಂದ ಪರಮಾತ್ಮ ತದ್ವಾಚಕವಾದ ಶಬ್ದಗಳಿಗೆ ವಾಚ್ಯ-ವಾಚಕಸಂಬಂಧಜ್ಞಾನವು ಉಂಟಾಗುವುದಿಲ್ಲ. ಜಗತ್ತಿನಲ್ಲಿ ಪ್ರಸಿದ್ಧಿಯನ್ನು ಬೇರೆ ರೀತಿಯಲ್ಲಿಯೇ ಕೂಡಿಸಬೇಕು. 'ಅಗ್ನಿಶಬ್ದದ ಮುಖ್ಯಾರ್ಥವನ್ನು ತಿಳಿಯದ ವ್ಯಕ್ತಿಗೆ 'ಅಗ್ನಿರ್ಮಾಣವಕಃ' ಎಂಬ ಪ್ರಯೋಗವನ್ನು ಕೇಳಿದಾಗ ಮಾಣವಕನಲ್ಲಿಯೇ ಅಗ್ನಿಶಬ್ದದ ವ್ಯುತ್ಪತ್ತಿ ಬರುವುದು ಕಂಡಿರುತ್ತದೆ. ಆದ್ದರಿಂದ ಅಗ್ನಿಶಬ್ದವನ್ನು ಕೇಳಿದಾಗ ಮಾಣವಕನಲ್ಲಿ ವ್ಯುತ್ಪತ್ತಿ ಬರುವುದಿಲ್ಲವೆಂಬ ದೃಷ್ಟಾಂತವನ್ನು ನೀಡಿದ್ದೂ ಕೂಡ ಅಸಾಧುವಾಗಿದೆ.

ಭಾವದೀಪ

ಮುಖ್ಯಶಬ್ದಕ್ಕೆ ಪರಮಮುಖ್ಯವೃತ್ತಿ ಎಂದರ್ಥ

मुख्या इति ।। परममुख्या इत्यर्थः ।। अमुख्या इति ।। अपरममुख्या इत्यर्थः । एवमग्रेऽपि ।।

ಟೀಕೆಯಲ್ಲಿರುವ 'ಮುಖ್ಯಾಃ' ಎಂಬ ಪದಕ್ಕೆ ಪರಮಮುಖ್ಯವೃತ್ತಿಯುಳ್ಳ ಶಬ್ದಗಳು ಎಂದರ್ಥ. 'ಅಮುಖ್ಯಾಃ' ಎಂಬ ಪದಕ್ಕೆ ಅಪರಮಮುಖ್ಯವೃತ್ತಿಯಿಂದ ಲೋಕದಲ್ಲಿ ಪ್ರಸಿದ್ಧವಾಗಿರುವ ಎಂದರ್ಥ. ಇದರಂತೆ ಮುಂದೆಯೂ ಕೂಡ ಮುಖ್ಯ ಹಾಗೂ ಅಮುಖ್ಯಪದಗಳ ಅರ್ಥವನ್ನು ತಿಳಿಯಬೇಕು.

ಹೀನವೃತ್ತಿ ವಿಷಯದಲ್ಲಿ ಮಾಣವಕನ ದೃಷ್ಟಾಂತ

ಭಾವದೀಪಃ – ಅಗ್ನೀತಿ ।। ಹೀನವೃತ್ತಿಮಾತ್ರೇ ದೃಷ್ಟಾನ್ತಃ । ಅಸೌ ಪ್ರಸಿದ್ಧಿರಿತ್ಯರ್ಥಃ। ಪೂರ್ವಶಙ್ಕಾಂ ನಿಷೇಧಂಸ್ತತ್ರ ಹೇತುತ್ವೇನ ಭಾಷ್ಯಂ ಯೋಜಯತಿ – ನ ಪ್ರಸಿದ್ಧೀತಿ ।।

ಅಗ್ನಿ ಶಬ್ದದ ಪ್ರಸಿದ್ಧಿಯು ಮಾಣವಕನಲ್ಲಿರುತ್ತದೆ. ಹೀಗೆ ದೃಷ್ಟಾಂತ ನೀಡಿದ್ದು ಕೇವಲ ಹೀನವೃತ್ತಿ ವಿಷಯದಲ್ಲಿ ಎಂದು ತಿಳಿಯಬೇಕು. 'ಅಸೌ' ಎಂಬ ಪದಕ್ಕೆ 'ಪ್ರಸಿದ್ಧಿಃ' ಎಂದರ್ಥ. ಹಿಂದೆ ಮಾಡಿದ ಆಶಂಕೆಯನ್ನು ಪರಿಹರಿಸುತ್ತಾ ಆಶಂಕೆಯ ಪರಿಹಾರದ ವಿಷಯದಲ್ಲಿ ಹೇತುವನ್ನು ಹೇಳುವ ಮೂಲಕ ಭಾಷ್ಯಕ್ಕೆ ವ್ಯಾಖ್ಯಾನ ಮಾಡಲು 'ನ ಪ್ರಸಿದ್ಧಿ' ಇತ್ಯಾದಿ ಟೀಕಾವಾಕ್ಯವು ಹೊರಟಿದೆ.

'ಜಗದ್ವಾಚಿತ್ವಾತ್' ಎಂಬ ಸೂತ್ರಕ್ಕೆ ಅರ್ಥ

ಭಾವದೀಪಃ – ಭಾಷ್ಯಸ್ಥವ್ಯವಹಾರಪದಸ್ಯಾವೃತ್ತಿಮಭ್ಯುಪೇತ್ಯ ದ್ವಿತೀಯಸ್ಯ ವಾಚ್ಯ-ವಾಚಕಭಾವಜ್ಞಾನರೂಪವ್ಯುತ್ಪತ್ತಿಪರತ್ವಂ ಚಾಭ್ಯುಪೇತ್ಯಾರ್ಥಮಾಹ – ಲೋಕಸ್ಯೇತಿ ।। ಏತೇನ ಸೂತ್ರಮಪ್ಯಾವೃತ್ಯಾ ಯೋಜ್ಯಮಿತಿ ದರ್ಶಿತಮ್ । ತಥಾಪದಸ್ಯ ಪ್ರಾಗುಕ್ತವ್ಯವಹಾರ-ಪರಾಮರ್ಶಿತ್ವಮುಪೇತ್ಯ ತದನೂದ್ಯ ವ್ಯಾಚಷ್ಟೇ – ಪರಮಾತ್ಮನಿ ತಥೇತಿ ।।

ಹೀಗೆ ಭಾಷ್ಯವನ್ನು ವ್ಯಾಖ್ಯಾನ ಮಾಡಿದ್ದರಿಂದ 'ಜಗದ್ವಾಚಿತ್ವಾತ್' ಎಂಬ ಸೂತ್ರವನ್ನು ಎರಡು ಬಾರಿ ಆವೃತ್ತಿ ಮಾಡಿಕೊಂಡು ಅರ್ಥವನ್ನು ತಿಳಿಯಬೇಕೆಂದು ವ್ಯಾಖ್ಯಾನ ಮಾಡಿದಂತಾಯಿತು. ಭಾಷ್ಯದಲ್ಲಿರುವ 'ತಥಾ' ಎಂಬ ಪದದಿಂದ ಹಿಂದೆ ಪ್ರಸಕ್ತವಾದ ವ್ಯವಹಾರವನ್ನು ಪರಾಮರ್ಶ ಮಾಡಿಕೊಳ್ಳಬೇಕೆಂದು ಒಪ್ಪಿ 'ತಥಾ' ಪದವನ್ನು ಅನುವಾದ ಮಾಡಿಕೊಂಡು 'ಪರಮಾತ್ಮನಿ ತಥಾ' ಎಂಬ ಟೀಕಾವಾಕ್ಯವು ವ್ಯಾಖ್ಯಾನ ಮಾಡುತ್ತಿದೆ.

ಈ ಶಬ್ದವು ಪ್ರಸಿದ್ಧಾರ್ಥಕ

ಭಾವದೀಪಃ – ಅತ ಇತ್ಯಸ್ಯಾರ್ಥಃ ಪಞ್ಚಮ್ಯನ್ತೈರ್ದರ್ಶಿತಃ ।। ಅನ್ಯಥೇತಿ ।। ಹರೌ ಮುಖ್ಯತ್ವಾಜ್ಞಾನಮೂಲಕತ್ವೇನೇತ್ಯರ್ಥಃ । ತತ್ರ ಪ್ರಸಿಧ್ಯರ್ಥಕಹಿಶಬ್ದಸೂಚಿತಂ ದೃಷ್ಟಾನ್ತಮಾಹ – ಅಗ್ನಿರಿತಿ ।।೨।।

'ಅತಃ' ಎಂಬ ಭಾಷ್ಯದಲ್ಲಿರುವ ಪದದ ಅರ್ಥವನ್ನು ಪಂಚಮ್ಯಂತವಾದ 'ವ್ಯತ್ಪತ್ಯಭಾವಾತ್' ಇತ್ಯಾದಿ ಪದಗಳಿಂದ ಹೇಳಿದ್ದಾರೆ. 'ಅನ್ಯಥಾ' ಎಂಬ ಪದಕ್ಕೆ ಶ್ರೀಹರಿಯಲ್ಲಿ ಶಬ್ದಗಳು ಮುಖ್ಯವಾಗಿವೆಯೆಂದು ತಿಳಿಯದಿದ್ದರೂ ಎಂದರ್ಥ. ಭಾಷ್ಯದ 'ಹಿ' ಶಬ್ದವು ಪ್ರಸಿದ್ಧಾರ್ಥದಲ್ಲಿದೆ. ಇದರಿಂದ ಸೂಚಿತವಾದ ದೃಷ್ಟಾಂತವನ್ನು 'ಅಗ್ನಿಃ' ಇತ್ಯಾದಿ ಟೀಕಾವಾಕ್ಯದಿಂದ ತಿಳಿಸಿದ್ದಾರೆ.

ಬ್ರಹ್ಮಸೂತ್ರ

'ಜೀವಮುಖ್ಯಪ್ರಾಣಲಿಂಗಾದಿತಿ ಚೇತ್ ತದ್ ವ್ಯಾಖ್ಯಾತಮ್' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – ।। जीवमुख्यप्राणलिङ्गादिति चेत् तद् व्याख्यातम् ।।

ಸೂತ್ರಾರ್ಥ - ಸಮಸ್ತ ಜಗತ್ತು ಭಗವದಧೀನವಾದ್ದರಿಂದ ಸಕಲ ಶಬ್ದಗಳೂ ಭಗವಂತನನ್ನೇ ಪ್ರತಿಪಾದನೆ ಮಾಡುತ್ತವೆಂದು ಹೇಳಿದ್ದು ಸರಿಯಲ್ಲ. ಏಕೆಂದರೆ ಉಪನಿಷತ್ತಿನಲ್ಲಿ ಕೆಲವೆಡೆ ಜೀವನ ಅಧೀನವೆಂದು ಇನ್ನು ಕೆಲವೆಡೆ ಮುಖ್ಯಪ್ರಾಣದೇವರ ಅಧೀನವೆಂದು ಹೇಳಲಾಗಿದೆ. ಇಂತಹ ಜೀವ ಹಾಗೂ ಮುಖ್ಯಪ್ರಾಣರೂ ಕೂಡ ಸರ್ವಶಬ್ದವಾಚ್ಯರಾಗಲಿ ಎಂದು ಪ್ರಶ್ನಿಸಬಾರದು. ಮುಖ್ಯಪ್ರಾಣದೇವರ ಧರ್ಮಗಳೂ ಕೂಡ ವಿಷ್ಣುಪರವೆಂದು ಈ ಹಿಂದೆ 'ಉಪಾಸಾತ್ರೈವಿಧ್ಯಾತ್' ಎಂಬ ಸೂತ್ರದಲ್ಲಿ ಸ್ಪಷ್ಟಪಡಿಸಲಾಗಿದೆ.

ಅರ್ಥ -- 'ಅಸ್ಯ ಯದೇಕಾಂ ಶಾಖಾಂ ಜೀವೋ ಜಹಾತಿ' ಎಂಬ ಸೂತ್ರದಲ್ಲಿ 'ವಾಯುನಾ ಹಿ ಲೋಕಾ ನೇನೀಯಂತೇ' ಎಂಬ ಶ್ರುತಿವಾಕ್ಯದಲ್ಲಿಯೂ ಸಮಸ್ತ ಜಗತ್ತು ಜೀವನ ಅಧೀನವೆಂದು ಮತ್ತು ಮುಖ್ಯಪ್ರಾಣದೇವರ ಅಧೀನವೆಂದು ಹೇಳಲಾಗಿದೆ. ಹೀಗೆ ಜೀವಮುಖ್ಯಪ್ರಾಣಲಿಂಗಾತ್ = ಜೀವ ಹಾಗೂ ಮುಖ್ಯಪ್ರಾಣದೇವರ ಲಿಂಗವೆಂದು ಶ್ರುತವಾದ್ದರಿಂದ ಅವರೂ ಸಹ ಆಯಾ ಶಬ್ದಗಳಿಂದ ಮುಖ್ಯವಾಗಿ ಪ್ರತಿಪಾದ್ಯರಾಗಲಿ. ಇತಿ ಚೇತ್ ನ = ಹೀಗೆ ಪ್ರಶ್ನಿಸಬಾರದು. ಏಕೆಂದರೆ ತತ್ = ಆ ಶ್ರುತಿವಾಕ್ಯಗಳನ್ನು , ವ್ಯಾಖ್ಯಾತಂ = ಅಂತರ್ಯಾಮಿ ಪರವಾಗಿ ಈ ಹಿಂದೆ 'ಉಪಾಸಾ ತ್ರೈವಿಧ್ಯಾತ್' ಎಂಬಲ್ಲೇ ವ್ಯಾಖ್ಯಾನ ಮಾಡಿದ್ದೇವೆ.

ಬ್ರಹ್ಮಸೂತ್ರಭಾಷ್ಯ

ಪರಮಾತ್ಮನು ಮಾತ್ರ ಸರ್ವಶಬ್ದವಾಚ್ಯ

ब्रह्मसूत्रभाष्यम् – 'तदधीनत्वात् तच्छशब्दवाच्यत्वम्' इत्युक्तम् । तद् जीवमुख्यप्राणयोर्लिङ्गम्। 'अथ यां शाखां जीवो जहाति सा शुष्यति' (छां. उ. ६-११-२) 'वायुना हि सर्वे लोका नेनीयन्ते' इत्यादिश्रुतिभ्य इति चेत्

ಅನುವಾದ - ಯಾವುದೇ ಶಬ್ದದ ಪ್ರವೃತ್ತಿನಿಮಿತ್ತವು ವಿಷ್ಣುವಿನ ಅಧೀನವಾಗಿರುವುದರಿಂದ, ಸಕಲಶಬ್ದಗಳಿಂದ ವಿಷ್ಣುವೇ ಪ್ರತಿಪಾದ್ಯನಾಗುತ್ತಾನೆಂದು 'ತದಧೀನತ್ವಾದರ್ಥವತ್' ಎಂಬ ಸೂತ್ರದಲ್ಲಿ ಹೇಳಿದ್ದಾಗಿದೆ. ಆದರೆ ಶಬ್ದಪ್ರವೃತ್ತಿನಿಮಿತ್ತವಾದ ತದಧೀನತ್ವವು ಜೀವ ಮತ್ತು ಮುಖ್ಯಪ್ರಾಣರ ಲಿಂಗವಾಗಿದೆ. ಏಕೆಂದರೆ ''ಜೀವನು ಯಾವಾಗ ಜಗತ್ತೆಂಬ ವೃಕ್ಷದ ಒಂದು ಶಾಖೆಯನ್ನು ಬಿಡುತ್ತಾನೋ, ಆವಾಗ ಆ ಶಾಖೆಯು ಒಣಗುತ್ತದೆ.'' ಹೀಗೆ ಶ್ರುತಿಯು ವೃಕ್ಷಾದಿಗಳು ವೃಕ್ಷದಲ್ಲಿರುವ ಜೀವರ ಅಧೀನವೆಂದು ಹೇಳಿದೆ. ಅದರಂತೆ 'ಮುಖ್ಯಪ್ರಾಣನಿಂದಲೇ ಸಮಸ್ತ ಲೋಕವು ತಮ್ಮ ತಮ್ಮ ಕರ್ಮಗಳಲ್ಲಿ ಪ್ರೇರೇಪಿಸಲ್ಪಡುತ್ತದೆ'. ಇವೇ ಮೊದಲಾದ ಶ್ರುತಿಗಳ ಆಧಾರದಿಂದ ಜೀವ ಹಾಗೂ ಮುಖ್ಯಪ್ರಾಣನೂ ಕೂಡ ಪರಮಾತ್ಮನಂತೆ ಸರ್ವಶಬ್ದವಾಚ್ಯರಾಗಲಿ. ಇಷ್ಟು ಆಕ್ಷೇಪ.

ಪ್ರತಿಪದಾರ್ಥ -- ವಿಷ್ಣುವೇ ಮುಖ್ಯವಾಗಿ ಪ್ರತಿಪಾದ್ಯ-ನಾಗಿದ್ದಾನೆಂಬುದನ್ನು ಆಕ್ಷೇಪ ಮಾಡಿ, ಸಮಾಧಾನವನ್ನು ನೀಡಲು, ಮೊದಲು ಆಕ್ಷೇಪಾಂಶವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ. –

ತದಧೀನತ್ವಾತ್ = ಸಮಸ್ತ ಜಗತ್ತು ಭಗವದಧೀನವಾಗಿರುವುದರಿಂದ, ತತ್‌ಶಬ್ದವಾಚ್ಯತ್ವಮ್ = ಭಗವತ್‌ಪ್ರತಿಪಾದಕವಾದ ಶಬ್ದವಾಚ್ಯತ್ವವು ಜಗತ್ತಿನಲ್ಲಿರುತ್ತದೆ. ಇತ್ಯುಕ್ತಂ = ಹೀಗೆ 'ತದಧೀನತ್ವಾತ್ ಅರ್ಥವತ್' ಎಂಬ ಸೂತ್ರದಲ್ಲಿ ಹೇಳಲಾಗಿದೆ. ತತ್ = ಈ ಸರ್ವಶಬ್ದವಾಚ್ಯತ್ವವು, ಜೀವಮುಖ್ಯಪ್ರಾಣಯೋಃ = ಜೀವ ಹಾಗೂ ಮುಖ್ಯಪ್ರಾಣರ, ಲಿಂಗಂ = ಲಿಂಗವಾಗಿದೆ. ಜೀವಃ = ಜೀವನು, ಯಾಂ = ಜಗತ್ತೆಂಬ ವೃಕ್ಷದ ಒಂದು ಶಾಖೆಯನ್ನು, ಜಹಾತಿ = ಬಿಡುತ್ತಾನೋ, ಅಥ = ಆವಾಗ, ಸಾ = ಆ ಶಾಖೆಯು, ಶುಷ್ಯತಿ = ಒಣಗುತ್ತದೆ. ಮತ್ತು ವಾಯುನಾ ಹಿ =

ಮುಖ್ಯಪ್ರಾಣನಿಂದ, ಸರ್ವೇ ಲೋಕಾಃ = ಸಮಸ್ತ ಜನರು, ನೇನಿಯಂತೇ = ತಮ್ಮ ತಮ್ಮ ಕರ್ಮಗಳಲ್ಲಿ ಅತಿಶಯವಾಗಿ ಪ್ರಯೋಗಿಸಲ್ಪಡುತ್ತಾರೆ. ಇತ್ಯಾದಿಶ್ರುತಿಭ್ಯಃ = ಇವೇ ಮೊದಲಾದ ಶ್ರುತಿಗಳಿಂದ ಜೀವ ಹಾಗೂ ಮುಖ್ಯಪ್ರಾಣರೂ ಕೂಡ ಪ್ರತಿಪಾದ್ಯರಾಗಬೇಕಲ್ಲವೇ? ಇತಿ ಚೇತ್ = ಇಷ್ಟು ಆಕ್ಷೇಪ.

ಮೂರು ಬಗೆಯ ಉಪಾಸನೆ

ब्रह्मसूत्रभाष्यम् – न 'उपासात्रैविध्यात्' इति व्याख्यातत्वात् ।।३।।

ಅನುವಾದ - ಇದು ಸರಿಯಲ್ಲ. ಏಕೆಂದರೆ ಒಳಗಡೆ ಇರುವವನು, ಹೊರಗಡೆ ಇರುವವನು, ಮತ್ತು ಸರ್ವಗತನು. ಹೀಗೆ ಮೂರು ವಿಧವಾದ ಉಪಾಸನೆಗಳನ್ನು ತಿಳಿಸಲು ಐತರೇಯದಲ್ಲಿ ಹಾಗೇ ಹೇಳಿದ್ದಾರೆ. ಜೀವ, ಮುಖ್ಯಪ್ರಾಣ ಶಬ್ದದಿಂದಲೂ ವಿಷ್ಣುವೇ ವಾಚ್ಯನಾಗಿದ್ದಾನೆಂದು ಪ್ರಥಮಪಾದದ ಕೊನೆಯಲ್ಲಿ ವ್ಯಾಖ್ಯಾನ ಮಾಡಲಾಗಿದೆ.

ಪ್ರತಿಪದಾರ್ಥ -- ನಞ್ ಎಂಬುದನ್ನು ಅಧ್ಯಾಹಾರ ಮಾಡುವ ಮೂಲಕ ಪರಿಹಾರಾಂಶವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ –

ನ = ಸರಿಯಲ್ಲ. ಉಪಸಾತ್ರೈವಿಧ್ಯಾತ್ = ಅಂತಃ ಬಹಿಃ, ಸರ್ವಗತನೆಂಬ ಮೂರುವಿಧವಾದ ಉಪಾಸನೆಯನ್ನು ತಿಳಿಸಲು ಐತರೇಯದಲ್ಲಿ ಹಾಗೇ ಹೇಳಲಾಗಿದೆ, ಇತಿ = ಎಂಬುದಾಗಿ, ವ್ಯಾಖ್ಯಾತತ್ವಾತ್ = ಪ್ರಥಮಪಾದದ ಕೊನೆಯಲ್ಲಿ ವ್ಯಾಖ್ಯಾನ ಮಾಡಿದ್ದಾಗಿದೆ.

ಸತ್ತರ್ಕದೀಪಾವಳಿ

ಜೀವ ಹಾಗೂ ವಾಯುಶಬ್ದಗಳಿಂದಲೂ ವಿಷ್ಣುವೇ ಪ್ರತಿಪಾದ್ಯ

सत्तर्कदीपावलिः – ननु भवतु यदधीनमिदं सर्वं तत्रैव शब्दजातं मुख्यं तच्छब्दसमाकर्षश्चास्मिन् । ते तु पृथव्याद्यभिमानिजीवाः तन्मुख्यप्राणो वा । तदधीनत्वश्रुतेः अस्य सर्वत्येत्याशङ्क्य परिहन्तीत्याह – जीवेत्यादिना ।

ಯಾವುದು ಯಾರ ಅಧೀನವಾಗಿದೆಯೋ, ಶಬ್ದಗಳು ಅಂಥ ಸ್ವತಂತ್ರನಾದವನಲ್ಲಿಯೇ ಮುಖ್ಯವಾಗಿ ಅವನಲ್ಲಿಯೇ ಸಮನ್ವಯವಾಗುತ್ತದೆ. ಅವನಲ್ಲಿರುವ ಶಬ್ದವನ್ನೇ ಜಗತ್ತಿನಲ್ಲಿ ಸಮಾಕರ್ಷಣ ಮಾಡಬೇಕು ಎಂಬ ಪ್ರಮೇಯವನ್ನು ಹಿಂದಿನ ಸೂತ್ರದಲ್ಲಿ ಸಮರ್ಥನೆ ಮಾಡಿದಿರಿ. ಇದನ್ನು ಅಂಗೀಕಾರ ಮಾಡೋಣ. ಆದರೆ. ಆ ಸ್ವತಂತ್ರವಾದ ವ್ಯಕ್ತಿ ಪರಮಾತ್ಮನೆಂದು ಒಪ್ಪುವ ಅವಶ್ಯಕತೆಯಿಲ್ಲ. ಪೃಥಿವ್ಯಾದ್ಯಭಿಮಾನಿಚೇತನರು ಅಥವಾ ಮುಖ್ಯಪ್ರಾಣನು ಆ ಸ್ವತಂತ್ರವ್ಯಕ್ತಿಯಾಗಿದ್ದಾನೆಂದು ಒಪ್ಪಬಹುದಲ್ಲವೇ? ಏಕೆಂದರೆ ಸಕಲಪದಾರ್ಥಗಳು ಜೀವರ ಅಧೀನವಾಗಿವೆ ಎಂದು ಶ್ರುತಿ ಹೇಳುತ್ತಿದೆ. ಅದರಂತೆ ಮುಖ್ಯಪ್ರಾಣನ ಅಧೀನವಾಗಿದೆ ಎಂಬುದಾಗಿಯೂ ಕೂಡ ಶ್ರುತಿಯೇ ಹೇಳುತ್ತಿದೆ. ಈ ಆಶಂಕೆಯ ಪರಿಹಾರಕ್ಕೋಸ್ಕರ 'ಜೀವ' ಇತ್ಯಾದಿ ಭಾಷ್ಯವಾಕ್ಯವು ಹೊರಟಿದೆ.

'ಯ ಆತ್ಮಾನಂ ಅಂತರೋ ಯಮಯತಿ' ಇತ್ಯಾದಿ ಶ್ರುತಿಯ ಅಭಿಪ್ರಾಯವನ್ನು ಗಮನಿಸಿದಾಗ ಜೀವಶಬ್ದದಿಂದ ಹಾಗೂ ವಾಯುಶಬ್ದದಿಂದ ಪ್ರತಿಪಾದ್ಯನಾದವನು ಅಂತರ್ಗತನಾದ ಭಗವಂತನೇ ಆಗಿದ್ದಾನೆಂದು ಸ್ಪಷ್ಟವಾಗುತ್ತದೆ. ಆದ್ದರಿಂದ ಸಕಲ ಪದಾರ್ಥಗಳ ನಿಯಾಮಕನಾದ ಸ್ವತಂತ್ರನಾದ ವ್ಯಕ್ತಿಯೆಂದರೆ ಭಗವಂತನೇ ಆಗಬೇಕು. ಜೀವ ಹಾಗೂ ಮುಖ್ಯಪ್ರಾಣಾದಿಗಳು ಆಗಲು ಸಾಧ್ಯವೇ ಇಲ್ಲ.

ಕರ್ಮಾದಿಗಳ ಜ್ಞಾನ ಮೋಕ್ಷಕ್ಕೋಸ್ಕರವಲ್ಲ

सत्तर्कदीपावलिः – न वयं फलान्तराय मुक्तये वा ज्योतिष्टोमादिकर्मज्ञान-मादिशब्दात् अजशङ्करादिलोकेशज्ञानं च मत्वा भगवद्वाचकवेदशब्दसमाकर्षं ब्रूमो योनोक्तदोषः स्यात् । किं तु परमार्थज्ञानार्थं कृतः विज्ञायमानमेव सर्वमिदं कर्मादिकं यस्मिन् विज्ञाते विज्ञातं भवति अन्यथा न स क इति ।

ನಾವು ಬೇರೆ ಪ್ರಯೋಜನಕ್ಕೋಸ್ಕರ ಅಥವಾ ಮೋಕ್ಷವೆಂಬ ಪ್ರಯೋಜನಕ್ಕೋಸ್ಕರ ಜ್ಯೋತಿಷ್ಟೋಮಾದಿ ಕರ್ಮಗಳ ಜ್ಞಾನವು ಬೇಕು ಎಂದು ಹೇಳುವುದಿಲ್ಲ. ಅಥವಾ ಆದಿಶಬ್ದದಿಂದ ಚತುರ್ಮುಖಬ್ರಹ್ಮ, ಶಂಕರ ಮೊದಲಾದವರ ಜ್ಞಾನವು ಬೇಕು ಎಂದು ಹೇಳುವುದಿಲ್ಲ. ಭಗವದ್ವಾಚಕವಾದ ವೇದದಲ್ಲಿರುವ ಶಬ್ದಗಳನ್ನು ಈ ಕರ್ಮ ಹಾಗೂ ರುದ್ರಾದಿಗಳಲ್ಲಿ ಸಮಾಕರ್ಷಣವನ್ನು ಮೋಕ್ಷಕ್ಕೋಸ್ಕರ ಮಾಡಬೇಕೆಂದು ಹೇಳಿದ್ದರೆ ನಿಮ್ಮ

ಆಕ್ಷೇಪವು ಸಮಂಜಸವಾಗುತ್ತಿತ್ತು. ಆದರೆ ಪರಮಾತ್ಮನ ಜ್ಞಾನಕ್ಕೋಸ್ಕರ ಈ ಕರ್ಮದ ಹಾಗೂ ದೇವತೆಗಳ ಜ್ಞಾನವು ಬೇಕು ಎಂದು ಹೇಳುತ್ತಿದ್ದೇವೆ. ಏಕೆಂದರೆ ಶ್ರುತಿಯು ಹೀಗೆಯೇ ಉಪಪಾದನೆ ಮಾಡುತ್ತಿದೆ. ಯಾವ ಪರಮಾತ್ಮನ ಜ್ಞಾನವನ್ನು ಪಡೆಯುವುದರಿಂದ ಈ ಎಲ್ಲಾ ಕರ್ಮಾದಿಗಳೂ ಕೂಡ ವಿಜ್ಞಾತವಾಗುತ್ತವೋ, ಯಾವ ಪರಮಾತ್ಮನನ್ನು ತಿಳಿಯದೇ ಇರುವುದರಿಂದ ಈ ಕರ್ಮಾದಿಗಳೂ ಕೂಡ ತಿಳಿಯುವುದಿಲ್ಲವೋ, ಅಂಥ ಪರಮಾತ್ಮನ ಜ್ಞಾನವನ್ನು ಮೋಕ್ಷಕ್ಕೋಸ್ಕರ ಹೊಂದಬೇಕು ಎನ್ನುತ್ತಿದೆ.

ಯಾವುದನ್ನು ಮುಖ್ಯವಾಗಿ ತಿಳಿಯಬೇಕು ?

सत्तर्कदीपावलिः – महाशालपदोक्तसर्वकर्मप्रवीणशौनकप्रश्नोत्तरत्वेन ऋगादिसर्ववेदप्रतिपाद्य कर्मादिकं परमतः परमाक्षरे नारायणे विज्ञात एव ज्ञातं भवति । अत एव अपरमपि इदं वेदितव्यमित्यङ्गीकारो व्याख्यानात् । अनेन यदविज्ञाने विज्ञातमप्यविज्ञातं भवति । फलाभावादिति भावेनोक्तं यद्विज्ञानेऽविज्ञातमपि विज्ञातं भवति । तत्फलावाप्तिरिति भावेनाह – कथं त्विति।

ಮಹಾಶಾಲ ಎಂಬ ಪದದಿಂದ ಪ್ರತಿಪಾದ್ಯರಾದ ಸರ್ವಕರ್ಮಗಳಲ್ಲಿ ಪ್ರವೀಣರಾದ ಶೌನಕರ ಪ್ರಶ್ನೆಗೆ ಉತ್ತರ ರೂಪದಲ್ಲಿ ಪರಾಪರ ವಿದ್ಯೆಗಳ ಬಗ್ಗೆ ಮುಂಡಕೋಪನಿಷತ್ತು ಪರಿಚಯಿಸಿದೆ. ಋಗಾದಿ ಸರ್ವವೇದಗಳಿಂದ ಪ್ರತಿಪಾದ್ಯವಾದ ಪರತತ್ವನೆನಿಸಿದ ಪರಮಾಕ್ಷರನಾದ ನಾರಾಯಣನನ್ನೇ ತಿಳಿಯಬೇಕು. ಇದೇ ಪರವಿದ್ಯೆ ಎನಿಸುತ್ತದೆ. ಇದರಿಂದ ಅಪರವಿದ್ಯೆಯೂ ಕೂಡ ತಿಳಿದಂತಾಗುತ್ತದೆ ಎಂಬುದಾಗಿ 'ಕಸ್ಮಿನ್ನು ಭಗವಃ' ಇತ್ಯಾದಿ ಉಪನಿಷತ್ತಿಗೆ ವ್ಯಾಖ್ಯಾನ ಮಾಡಲಾಗಿದೆ. ಹೀಗೆ ಹೇಳಿದ್ದರಿಂದ ಯಾವುದನ್ನು ತಿಳಿಯದೇ ಇರುವುದರಿಂದ ತಿಳಿದಿದ್ದೂ ಕೂಡ ತಿಳಿಯದಂತಾಗುತ್ತದೋ, ಏಕೆಂದರೆ ಅದಕ್ಕೆ ಪ್ರಯೋಜನವೇ ಇರುವುದಿಲ್ಲ. ಅಂಥ ತತ್ವವನ್ನೇ ಮೊದಲು ತಿಳಿಯಬೇಕು ಎಂಬ ಅಭಿಪ್ರಾಯದಿಂದ ಯಾವುದನ್ನು ತಿಳಿಯುವುದರಿಂದ ತಿಳಿಯದೇ ಇರುವುದೂ ಕೂಡ ತಿಳಿದಂತಾಗುತ್ತದೆ ಎಂಬುದಾಗಿ ಫಲದ ಅವಾಪ್ತಿಯನ್ನು ಹೇಳಿರುವ ಶ್ರುತಿಯನ್ನು 'ಕಥನ್ನು ಭಗವಃ' ಎಂಬುದಾಗಿ ಉಲ್ಲೇಖ ಮಾಡುತ್ತಿದ್ದಾರೆ.

ಮಗನಾದ ಶ್ವೇತಕೇತುವಿಗೆ ಭಗವತ್ತತ್ವದ ಉಪದೇಶ

सत्तर्कदीपावलिः – सर्वान्वेदानधीतवानेव केवलं न तु तन्मुख्योद्देश्यं सकलकल्याणगुण करं पृष्टवान्प्रायः । यतः स्तब्धोऽसि । यस्मिन् श्रुते मते विज्ञाते अन्यदश्रुतमस्तमविज्ञातमपि तदधीनत्वेन श्रुतं मतं विज्ञातम् अतिनीचत्वेन विवज्ञायमानं त्वदादिकमित्युक्तः श्वेतकेतुः पितरं पृच्छति । कर्मादिष्वपि वेदैकदेशैरुच्यमानेष्वासमन्तात्स एव सर्ववेदादेशो भवतीति कथं केन प्रकारेण जानीयामिति । तदुत्तरत्वेन यथा घटादिव्युत्पन्न मृदादिशब्दैः पंभिः दृश्यमानमृत्पिण्डादौ मृदादिशब्दार्थत्वेन विज्ञाते पुनर्घटादि-सर्वमृण्मयादिमृत्पिण्डादिसदृशत्वेनेशाविशेषेण ज्ञातं स्यात् । एवं जडजीवव्युत्पन्नसच्चिदादिशब्दैः पुम्भिः ब्रह्मणि सच्चिदादिशब्दार्थत्वेन ज्ञाते पुनर्जडजीवात्मकं जगद् ब्रह्मात्यल्पसदृशत्वेन विशेषेण ज्ञायते । नत्वतिसदृशत्वेन ।

ಶ್ವೇತಕೇತುವನ್ನು ಕುರಿತು ಉದ್ದಾಲಕರು ಹೀಗೆ ಹೇಳುತ್ತಾರೆ - ಎಲ್ಲ ವೇದವನ್ನು ನೀನು ಅಧ್ಯಯನ ಮಾಡಿರುವಿ. ಆದರೆ ವೇದದ ಮುಖ್ಯ ಪ್ರತಿಪಾದ್ಯನಾದ ಸಕಲ ಕಲ್ಯಾಣಗುಣಾಕರನಾದ ವನ ಬಗ್ಗೆ ತಿಳಿದೇ ಇಲ್ಲ. ಆದ್ದರಿಂದ ಸ್ತಬ್ಧನಾಗಿ ನಿಂತಿರುವಿ. ಯಾವ ವ್ಯಕ್ತಿಯನ್ನು ಶ್ರವಣ ಮಾಡುವುದರಿಂದ, ಮನನ ಮಾಡುವುದರಿಂದ, ತಿಳಿಯುವುದರಿಂದ ಉಳಿದ ಅಶ್ರುತವಾದದ್ದು, ಅಮತವಾದದ್ದು, ಅವಿಜ್ಞಾತವಾದದ್ದೂ ಕೂಡ ಶ್ರುತವಾಗಿ ಮನನ ಮಾಡಲ್ಪಟ್ಟದ್ದಾಗಿ ತಿಳಿಯಲ್ಪಟ್ಟದ್ದಾಗಿ ಆಗುತ್ತದೋ, ಆ ತತ್ವದ ಬಗ್ಗೆ ನೀನು ತಿಳಿದಿರುವಿಯಾ ? ಏಕೆಂದರೆ ಮುಖ್ಯವಾದ ತತ್ವದ ಮುಂದೆ ಉಳಿದದ್ದೆಲ್ಲವೂ ಅತಿನೀಚವಾಗಿದೆ. ನೀನೂ ಕೂಡ ಅವನ ಮುಂದೆ ಅತ್ಯಂತ ನೀಚನಾಗಿರುವಿ. ಹೀಗೆ ಉದ್ದಾಲಕರು ಶ್ವೇತಕೇತುವಿಗೆ ಹೇಳುತ್ತಾರೆ. ಆಗ ಶ್ವೇತಕೇತು ತಂದೆಯನ್ನು ಪ್ರಶ್ನಿಸುತ್ತಾನೆ.

ವೇದದ ಏಕದೇಶದಿಂದ ಕರ್ಮಾದಿಗಳೂ ಕೂಡ ಪ್ರತಿಪಾದ್ಯವಾಗಿವೆ. ಹೀಗಿರುವಾಗ ಸಕಲ ಕಲ್ಯಾಣಗುಣಾಕರನೊಬ್ಬನೇ ಸಕಲವೇದಗಳಿಂದ ಪ್ರತಿಪಾದ್ಯನಾಗಿದ್ದಾನೆಂದು ಹೇಗೆ ಹೇಳುವಿರಿ? ಹಾಗೇ ನಾನು ತಿಳಿಯುವುದಾದರೂ ಹೇಗೆ ಸಾಧ್ಯ ? ಎಂದು ಇದಕ್ಕೆ ಉತ್ತರವನ್ನು ನೀಡುವಾಗ

ಉದ್ದಾಲಕರು ಹೀಗೆ ಹೇಳುತ್ತಾರೆ - ಯಾವ ರೀತಿಯಾಗಿ ಘಟಾದಿಗಳಲ್ಲಿ ವ್ಯುತ್ಪನ್ನವಾದ ಮೃದಾದಿಶಬ್ದಗಳಿಂದ ಪುರುಷನಿಂದ ದೃಶ್ಯಮಾನವಾದ ಮೃತ್‌ಪಿಂಡಾದಿಗಳಲ್ಲಿ ಮೃದಾದಿ-ಶಬ್ದಾರ್ಥತ್ವವನ್ನು ತಿಳಿದಾಗ ಪುನಃ ಘಟ ಮೊದಲಾದ ಸರ್ವಮೃಣ್ಮಯಾದಿಗಳಲ್ಲಿ ಮೃತ್ಪಿಂಡಾದಿ ಸಾದೃಶ್ಯವಿರುವುದರಿಂದ ಇದೂ ಕೂಡ ಮೃಣ್ಮಯವಾಗಿದೆ ಎಂದು ತಿಳಿಯುತ್ತಾನೋ, ಅದೇ ರೀತಿಯಾಗಿ ಜಡಜೀವಗಳಲ್ಲಿ ವ್ಯುತ್ಪನ್ನನಾದ ಸಚ್ಚಿದಾದಿ ಶಬ್ದಗಳಿಂದ ಬ್ರಹ್ಮನನ್ನು ತಿಳಿಯಲ್ಪಟ್ಟನೋ, ಅದೇ ಸಚ್ಚಿದಾದಿ ಶಬ್ದಾರ್ಥತ್ವೇನ ಬ್ರಹ್ಮನನ್ನು ತಿಳಿದಾಗ ಪುನಃ ಜಡಜೀವಾತ್ಮಕವಾದ ಜಗತ್ತನ್ನು ನೋಡಿ, ಬ್ರಹ್ಮನ ಅಲ್ಪಸಾದೃಶ್ಯವಿರುವುದರಿಂದ ಇವುಗಳನ್ನೂ ಕೂಡ ಸಚ್ಚಿದಾದಿ ಶಬ್ದಗಳಿಂದ ತಿಳಿಯುತ್ತಾರೆ. ಇಲ್ಲಿ ಅತಿಸಾದೃಶ್ಯವನ್ನು ವಿವಕ್ಷಿಸಬಾರದು.

ಯೇನ ವಿಜ್ಞಾತೇನ ಸರ್ವಂ ವಿಜ್ಞಾತಂ ಭವತಿ

सत्तर्कदीपावलिः – यतो यथा विज्ञाते तथा विशेषैः पुम्भिस्तदन्याधिकम्। तयोर्ज्ञातवद्भिः । विज्ञायमानसुवर्णामरभाषयोः तत्प्रधानत्वेन विज्ञायमानयोः सर्वं लोहमयं प्राकृतवाङ्मयं वाऽप्रधानत्वेन विशेषेण ज्ञातं स्यात् । एवं विज्ञात जडजीवैः पुम्भिः तेषु विचित्रानेकगुणान् ज्ञातवद्भिः विज्ञायमाने स्वतन्त्रशक्ति सकलकल्याणगुणाकरे ब्रह्मणयतिप्रधानत्वेन विज्ञाते पुनरिदं जीवजडात्मकं विश्वं विज्ञातमविज्ञातं च केवलं तदायत्तत्वेन विशेषेण ज्ञायते ।

ಯಾವ ವಸ್ತುವನ್ನು ಯಾವ ಧರ್ಮವಿಶಿಷ್ಟವಾಗಿ ಪುರುಷನು ತಿಳಿಯುತ್ತಾನೋ, ಅದರಂತೆ ಇರುವ ಬೇರೆ ವಸ್ತುಗಳನ್ನು ಅದೇ ಧರ್ಮಪುರಸ್ಸರವಾಗಿ ತಿಳಿಯುತ್ತಾನೆ. ಬಂಗಾರವೆಂಬ ಪ್ರಧಾನಲೋಹವನ್ನು ತಿಳಿದ ಮೇಲೆ ಇತರ ಲೋಹಗಳನ್ನೂ ಕೂಡ ಲೋಹವೆಂದೇ ತಿಳಿಯುತ್ತಾನೆ. ಮತ್ತು ಸಂಸ್ಕೃತಭಾಷೆಯನ್ನು ತಿಳಿಯುವುದರಿಂದ ಇತರ ಭಾಷೆಗಳನ್ನೂ ಕೂಡ ತಿಳಿಯುತ್ತಾನೆ ಎಂದು ಹೇಳಿದಾಗ ಇಲ್ಲಿ ಸುವರ್ಣ ಹಾಗೂ ಸಂಸ್ಕೃತಭಾಷೆಗಳು ಪ್ರಧಾನವಾಗಿವೆ. ಉಳಿದ ಲೋಹಗಳು ಹಾಗೂ ಉಳಿದ ಭಾಷೆಗಳು ಅಪ್ರಧಾನವಾಗಿವೆ ಎಂದು ತಿಳಿಯಬೇಕು.

ಇದರಂತೆ ಪರಮಾತ್ಮನನ್ನು ಜ್ಞಾನಾನಂದಮಯ ಮೊದಲಾದ ಅನೇಕ ಗುಣಗಳುಳ್ಳವನಾಗಿದ್ದಾನೆಂದು ತಿಳಿಯುತ್ತಾನೆ, ಮತ್ತು ತಾನು ತಿಳಿಯಲ್ಪಟ್ಟ ಜಡಜೀವರುಗಳಿಗಿಂತ ವಿಚಿತ್ರವಾದ ಅನೇಕ ಗುಣಗಳುಳ್ಳವನಾಗಿದ್ದಾನೆಂದು ತಿಳಿಯುತ್ತಾನೆ, ಹಾಗೂ ಸ್ವತಂತ್ರ ಶಕ್ತಿಯುಳ್ಳವನಾಗಿ

ಸಕಲಕಲ್ಯಾಣಗುಣಾಕರನಾಗಿದ್ದಾನೆ ಎಂದು ಬ್ರಹ್ಮನನ್ನೇ ಅತ್ಯಂತ ಪ್ರಧಾನವಾಗಿ ತಿಳಿಯುತ್ತಾನೆ. ಹೀಗೆ ತಿಳಿದಾಗ ಈ ಜೀವಜಡಾತ್ಮಕವಾದ ಜಗತ್ತೂ ಕೂಡ ತಿಳಿದಂತಾಗುತ್ತದೆ. ಅವಿಜ್ಞಾತವಾದ ಈ ಪದಾರ್ಥಗಳೆಲ್ಲವೂ ಈಶ್ವರಾಧೀನವೆಂಬ ವಿಶೇಷಣಜ್ಞಾನದಿಂದಲೇ ಎಲ್ಲವನ್ನೂ ತಿಳಿದಂತಾಗುತ್ತದೆ.

ಸರ್ವವಿಜ್ಞಾನವು ಏಕವಿಜ್ಞಾನ ಹೇತುವಾದರೂ ಕೂಡ ವಿರೋಧವಿಲ್ಲ

सत्तर्कदीपावलिः – एवमुक्तप्रकारेण सोम्य(मासोर्ह)मोहार्ह लोकतो वेदतश्च विज्ञायमानस्यैव सर्वस्यापि तज्ज्ञानार्थत्वात् वेदैरादिश्यत इत्यादेशो भवतीत्यर्थः । एवं सर्वविज्ञानस्य एकविज्ञानहेतुत्वेऽपि एकविज्ञानेन सर्वं विशेषतो विज्ञायन्त इति अविरोधश्च ।

ಹೀಗೆ ಇಲ್ಲಿಯ ತನಕ ಹೇಳಿದಂತೆ ಲೋಕದಿಂದ ಹಾಗೂ ವೇದದಿಂದ ತಿಳಿಯಲ್ಪಡುವ ಎಲ್ಲ ಪದಾರ್ಥಗಳ ಜ್ಞಾನವು ಪರಮಾತ್ಮನ ಜ್ಞಾನಕ್ಕೋಸ್ಕರ ಉಪಯುಕ್ತವಾಗುತ್ತದೆ. ಹೀಗೆ ವೇದವೇ ಆದೇಶ ಮಾಡಿದೆ. ಅದರಂತೆ ಸಕಲ ಪದಾರ್ಥಗಳ ಜ್ಞಾನವು ಪರಮಾತ್ಮನೆಂಬ ಒಂದೇ ಪದಾರ್ಥದ ಜ್ಞಾನಕ್ಕೆ ಹೇತುವಾಗಿದ್ದರೂ ಕೂಡ ಏಕವಿಜ್ಞಾನದಿಂದ ಸಕಲಪದಾರ್ಥಗಳು ವಿಶೇಷತಃ ತಿಳಿಯಲ್ಪಡುತ್ತದೆ ಎಂಬುದಾಗಿ ವಿರೋಧವನ್ನೂ ಕೂಡ ಪರಿಹರಿಸಿದಂತಾಯಿತು. ಅಭಿಪ್ರಾಯವನ್ನು ಹೀಗೆ ತಿಳಿಯಬೇಕು - ಪರಮಾತ್ಮನನ್ನು ತಿಳಿಯದವರಿಗೂ ಕೂಡ ಜಗತ್ತಿನಲ್ಲಿರುವ ಪದಾರ್ಥದ ಜ್ಞಾನ ಇರುತ್ತದೆ. ಆದರೆ ಪರಮಾತ್ಮನನ್ನು ತಿಳಿದಾಗ ಉಳಿದ ಪದಾರ್ಥಗಳು ಅವನ ಅಧೀನವಾಗಿವೆ ಎಂಬ ಎಚ್ಚರ ಬರುತ್ತದೆ. ಇದಕ್ಕಾಗಿ ಪರಮಾತ್ಮನನ್ನು ತಿಳಿಯಬೇಕು. ಪರಮಾತ್ಮನ ಜ್ಞಾನವೇ ಪ್ರಧಾನವಾಗಿವೆ. ಉಳಿದೆಲ್ಲದರ ಜ್ಞಾನವು ಅಪ್ರಧಾನವಾಗಿವೆ ಎಂಬ ಅರಿವೇ ನಿಜವಾದ ತತ್ವಜ್ಞಾನ. ಆದ್ದರಿಂದ ಸಕಲ ಪದಾರ್ಥಗಳ ಜ್ಞಾನವು ಬ್ರಹ್ಮನ ಜ್ಞಾನಕ್ಕೆ ಹೇತುವಾಗಿದೆ. ಹಾಗೂ ಬ್ರಹ್ಮಜ್ಞಾನದ ಕಾರ್ಯವೂ ಆಗಿದೆ. ಏಕೆಂದರೆ ಮೊದಲು ವಿಶೇಷಜ್ಞಾನವಿರಲಿಲ್ಲ. ಅನಂತರ ವಿಶೇಷಜ್ಞಾನ ಬಂತು ಆದ್ದರಿಂದ ಕಾರ್ಯವೆನಿಸುತ್ತದೆ.

ವಿವರಣೆ - ಛಾಂದೋಗ್ಯದ ಆರನೆಯ ಅಧ್ಯಾಯದಲ್ಲಿ ಬರುವ ಉದ್ದಾಲಕರ ಉಪದೇಶ ಪ್ರಕರಣವನ್ನು ಯಥಾವತ್ತಾಗಿ ಇಲ್ಲಿ ಹೀಗೆ ಸಂಗ್ರಹಿಸಲಾಗಿದೆ. (ಸಂಗ್ರಹ)

ಶ್ವೇತಕೇತುರ್ಹಾರುಣೇಯ ಆಸ । ತಂ ಹ ಪಿತೋವಾಚ 'ಶ್ವೇತಕೇತೋ ವಸ ಬ್ರಹ್ಮಚರ್ಯಮ್ । ನ ವೈ ಸೋಮ್ಯಾಸ್ಮತ್‌ಕುಲೀನೋऽನನೂಚ್ಯ ಬ್ರಹ್ಮಬಂಧುರಿವ ಭವತಿ' ಇತಿ ॥

ಅರುಣನ ಮೊಮ್ಮಗ ಶ್ವೇತಕೇತು ಎಂಬುವನಿದ್ದ. ಅವನ ತಂದೆಯು ಅವನಿಗೆ ಶ್ವೇತಕೇತುವೇ ! ನಮ್ಮ ಕುಲದಲ್ಲಿ ಬಂದವರಾರೂ ವೇದಾಧ್ಯಯನ ಮಾಡದೇ ನಿಂದಿತ ಬ್ರಾಹ್ಮಣರಂತಾದುದಕ್ಕೆ ನಿದರ್ಶನವಿಲ್ಲ. ಆದುದರಿಂದ ವೇದಾಧ್ಯಯನಕ್ಕೋಸ್ಕರ ಗುರುಕುಲವಾಸವನ್ನು ಕೈಗೊಳ್ಳು' ಎಂದರು.

ಸ ಹ ದ್ವಾದಶವರ್ಷ ಉಪೇತ್ಯ ಚತುರ್ವಿಂಶತಿವರ್ಷಃ ಸರ್ವಾನ್ ವೇದಾನಧೀತ್ಯ-ಮಹಾಮನಾಃ ಅನೂಚಾನಮಾನೀ ಸ್ತಬ್ಧ ಏಯಾಯ । ತಂ ಹ ಪಿತೋವಾಚ 'ಶ್ವೇತಕೇತೋ ಯನ್ನು ಖಲು ಸೋಮ್ಯೇದಂ ಮಹಾಮನಾ ಅನೂಚಾನಮಾನೀಸ್ತಬ್ಧೋऽಸಿ । ಉತ ತಮಾದೇಶಮಪ್ರಾಕ್ಷ್ಯಃ ಯೇನಾಶ್ರುತಂ ಶ್ರುತಂ ಭವತ್ಯಮತಂ ಮತಮವಿಜ್ಞಾತಂ ವಿಜ್ಞಾತಮ್' ಇತಿ ॥

ಹನ್ನೆರಡು ವರ್ಷ ವಯಸ್ಸಿನ ಆ ಶ್ವೇತಕೇತುವು ಗುರುಕುಲಕ್ಕೆ ಹೋಗಿ ತನ್ನ ಇಪ್ಪತ್ನಾಲ್ಕು ವಯಸ್ಸಿನ ತನಕ ಎಲ್ಲಾ ವೇದಗಳನ್ನು ಅಧ್ಯಯನ ಮಾಡಿ, ತಾನು ಷಡಂಗ ವೇದಾಧ್ಯಯನ ಮಾಡಿದವನೆಂದೂ, ಬಹಳ ಶ್ರೇಷ್ಠನೆಂದೂ ಅಹಂಕಾರವುಳ್ಳವನಾಗಿ ಅವಿನೀತನಾಗಿ ಮನೆಗೆ ಮರಳಿದನು.

ಆ ಶ್ವೇತಕೇತುವನ್ನು ನೋಡಿ ವಿಷಣ್ಣನಾದ ತಂದೆಯು, ಸರ್ವನಿಯಾಮಕನಾಗಿ ಸರ್ವೋತ್ತಮನಾಗಿರುವ ಪರಮಾತ್ಮನ ಅರಿವಿಲ್ಲದಿರುವುದರಿಂದಲೇ ಮಗನ ಈ ಅಹಂಕಾರ ಎಂದರಿತು 'ಶ್ವೇತಕೇತುವೇ! ಈ ರೀತಿಯಲ್ಲಿ ಸಾಂಗವೇದಾಧ್ಯಯನ ಮಾಡಿರುವನೆಂದು ಅಭಿಮಾನದಿಂದ ತಾನೇ ಶ್ರೇಷ್ಠನೆಂದು ತಿಳಿದುಕೊಂಡವನಾಗಿ ಅವಿನೀತನಾಗಿರುವೆಯಷ್ಟೆ. ಯಾವ ಪರಮ ಪ್ರಮೇಯವನ್ನು ಉಪದೇಶ ಪಡೆದರೆ ಎಲ್ಲವನ್ನೂ ಉಪದೇಶ ಪಡೆದಂತಾಗುತ್ತದೋ, ಯಾವುದನ್ನು ಮನನ ಮಾಡಿದರೆ ಎಲ್ಲವನ್ನೂ ಮನನ ಮಾಡಿದಂತಾಗುವುದೋ, ಯಾವುದನ್ನು ವಿಶೇಷವಾಗಿ ಅರಿತರೆ ಬೇರೆಲ್ಲವನ್ನೂ ವಿಶೇಷವಾಗಿ ಅರಿತಂತಾಗುವುದೋ ಅಂತಹ ವೇದಾಧ್ಯಯನದ ಮುಖ್ಯ ಉದ್ದೇಶವಾಗಿರುವ ಪರಮಾತ್ಮತತ್ತ್ವವನ್ನು ಕೇಳಿ ತಿಳಿದುಕೊಂಡಿರುವಿಯೇನು?' ಎಂದು ಕೇಳಿದನು.

ಅಧೀತ್ಯಬ್ದದ್ವಾದಶತ್ವಾತ್ ದ್ವಾದಶಾಬ್ದ ಇತೀರಿತಃ । ಶ್ವೇತಕೇತುರ್ಹಾರತೇ ತು ನೋತ್ತಿದ್ವಾದಶತ್ವತಃ ॥ ಇತಿ ವಾಕ್ಯನಿರ್ಣಯೇ ॥

'ಶ್ವೇತಕೇತುವಿನ ಗುರುಕುಲಾಧ್ಯಯನದ ಅವಧಿಯು ಹನ್ನೆರಡು ವರ್ಷಗಳಾದುದರಿಂದ,

ಮನೆಗೆ ಮರಳಿದ ಶ್ವೇತಕೇತುವು ಅಧ್ಯಯನಾವಧಿ ವಿವಕ್ಷೆಯಿಂದ ಹನ್ನೆರಡು ವರ್ಷದವನೆಂದು ಮಹಾಭಾರತದಲ್ಲಿ ಹೇಳಲ್ಪಟ್ಟಿದ್ದಾನೆ. ಹುಟ್ಟಿದಂದಿನಿಂದ ಹನ್ನೆರಡು ವರ್ಷದವನೆಂದು ಆದರ ಅಭಿಪ್ರಾಯವಲ್ಲ' ಎಂದು ವಾಕ್ಯನಿರ್ಣಯ ಎಂಬ ಗ್ರಂಥದಲ್ಲಿದೆ.

'ಕಥಂ ನು ಭಗವಃ ಸ ಆದೇಶೋ ಭವತ' ಇತಿ ॥

'ಪೂಜ್ಯರೇ! ಒಂದು ವಸ್ತುವನ್ನು ಶ್ರವಣ ಮನನ ಹಾಗೂ ಧ್ಯಾನದಿಂದ ಅರಿತುಕೊಂಡಾಗ ಬೇರೆ ಎಲ್ಲಾ ವಸ್ತುಗಳ ಶ್ರವಣ ಮನನ ಧ್ಯಾನಗಳನ್ನು ಮಾಡಿದಂತಾಗುತ್ತದೆ ಎಂಬ ಈ ಉಪದೇಶವು ಹೇಗೆ ಯುಕ್ತವಾದೀತು?' ಎಂದು ಶ್ವೇತಕೇತುವು ತಂದೆಯನ್ನು ಕೇಳಿದನು.

'ಯಥಾ ಸೋಮ್ಯೈಕೇನ ಮೃತ್ ಪಿಂಡೇನ ಸರ್ವಂ ಮೃಣ್ಮಯಂ ವಿಜ್ಞಾತಂ ಸ್ಯಾತ್ । ವಾಚಾರಂಭಣಂ ವಿಕಾರೋ, ನಾಮಧೇಯಂ ಮೃತ್ತಿಕೇತ್ಯೇವ ಸತ್ಯಮ್ ॥

ಮಗನ ಪ್ರಶ್ನೆಗೆ ಉತ್ತರವಾಗಿ ಉದ್ದಾಲಕರು 'ಎಲೋ ಮಂಗಳ ಸ್ವರೂಪನೇ, ಒಂದು ಮಣ್ಣಿನ ಮುದ್ದೆಯನ್ನು ತಿಳಿದುಕೊಂಡರೆ, ಮಣ್ಣಿನಿಂದಾದ ಇತರ ಎಲ್ಲಾ ವಸ್ತುಗಳೂ ಮಣ್ಣೇ ಎಂದು ಹೇಗೆ ತಿಳಿಯಲ್ಪಡುತ್ತದೆಯೋ ಹಾಗೆಯೇ, ಪರಮಾತ್ಮನನ್ನು ಸತ್ಯ ಎಂದರಿತುಕೊಂಡರೆ, ಅವನಂತಯೇ ಪ್ರಾಮಾಣಿಕವಾದ ಜಗತ್ತು ಸತ್ಯ ಎಂದು ತಿಳಿಯಲ್ಪಡುತ್ತವೆ.

ಸಂಸ್ಕೃತಭಾಷೆಗಿಂತ ಇತರವಾದ ಎಲ್ಲಾ ಭಾಷೆಗಳಲ್ಲಿ ಮಣ್ಣು ಮೊದಲಾದ ಶಬ್ದಗಳನ್ನು ವಾಗಿಂದ್ರಿಯದಿಂದ ನಾನಾ ಪ್ರಕಾರವಾಗಿ ಉಚ್ಚಾರಣೆ ಮಾಡುವುದು. ಆ ಶಬ್ದಗಳ ಉತ್ಪತ್ತಿಯೇ ಆಗಿದೆ. ಮೃತ್ತಿಕಾ ಮೊದಲಾದ ಸಂಸ್ಕೃತ ಶಬ್ದಗಳಂತೆ ಮೊದಲೇ ಇರುವವುಗಳ ಅಭಿವ್ಯಕ್ತಿಯಲ್ಲ. ಆದುದರಿಂದ ಆ ಶಬ್ದಗಳೆಲ್ಲಾ ಅನಿತ್ಯ. ಮೃತ್ತಿಕಾ ಮೊದಲಾದ ಸಂಸ್ಕೃತ ನಾಮಧೇಯಗಳು ನಿತ್ಯ. ಹೀಗೆ ಸಂಸ್ಕೃತಪದಗಳು ಪ್ರಧಾನ. ಸಂಸ್ಕೃತೇತರ ಭಾಷೆಗಳಲ್ಲಿರುವ ಪದಗಳು ಅಪ್ರಧಾನ. ಹೇಗೆ ಪ್ರಧಾನವಾದ ಸಂಸ್ಕೃತಪದಗಳನ್ನು ಅರಿತುಕೊಂಡ ಮಾತ್ರದಿಂದ ಇತರ ಭಾಷೆಗಳನ್ನು ಅರಿತುಕೊಂಡಿದ್ದರಿಂದ ಸಿಗಬಹುದಾದ ಕೀರ್ತಿ, ಪ್ರತಿಷ್ಠೆ ಮೊದಲಾದ ಪ್ರಯೋಜನವು ಸಿದ್ಧಿಸುತ್ತದೋ, ಹಾಗೆಯೇ ಪ್ರಧಾನವಾದ ಪರಮಾತ್ಮನನ್ನು ಅರಿತುಕೊಂಡರೆ ಕರ್ಮ, ದೇವತೆ ಇವೇ ಮೊದಲಾದ ಜಗತ್ತನ್ನು ಅರಿತುಕೊಂಡದ್ದರಿಂದ ಸಿಗುವ ಸ್ವರ್ಗಾದಿ ಫಲವೆಲ್ಲವೂ ಲಭಿಸುತ್ತವೆ.

ಯಥಾ ಸೋಮ್ಯೈಕೇನ ಲೋಹಮಣಿನಾ ಸರ್ವಂ ಲೋಹಮಯಂ ವಿಜ್ಞಾತಂ ಸ್ಯಾತ್ । ವಾಚಾರಂಭಣಂ ವಿಕಾರೋ, ನಾಮಧೇಯಂ । ಲೋಹಮಣಿರಿತ್ಯೇವ ಸತ್ಯಮ್ ।

ಲೋಹಗಳಲ್ಲೆಲ್ಲಾ ಪ್ರಧಾನವಾಗಿದ್ದು ಲೋಹಮಣಿ(ಲೋಹಶ್ರೇಷ್ಠ) ಎನಿಸಿಕೊಂಡಿರುವ ಸುವರ್ಣವನ್ನು ಲೋಹವೆಂದು ಅರಿತರೆ. ಇತರ ಎಲ್ಲಾ ಲೋಹಮಯವಾದ ವಸ್ತುಗಳು

ಲೋಹವೆಂದು ಸುಲಭವಾಗಿ ತಿಳಿಯಬಹುದು. ಹಾಗೆಯೇ ಪರಮಾತ್ಮನನ್ನು ಜ್ಞಾನಾನಂದ ರೂಪನೆಂದು ಅರಿತರೆ, ಅವನಂತೆ ಚೇತನರಾದ ಜೀವರನ್ನೂ ಹಾಗೇ ತಿಳಿಯಬಹುದು.

ವಾಗಿಂದ್ರಿಯದಿಂದ ಸಂಸ್ಕೃತೇತರ ಭಾಷಾಶಬ್ದಗಳ ಉಚ್ಚಾರಣೆಯು ನಾನಾ ಪ್ರಕಾರವಾಗಿ ಮಾಡಲ್ಪಡುತ್ತಿರುವ ಕಾರಣ ಅಂತಹ ಶಬ್ದಗಳು ಅನಿತ್ಯ. ಲೋಹಮಣಿ ಎಂದು ಮುಂತಾದ ಸಂಸ್ಕೃತ ನಾಮಧೇಯಗಳು ನಿತ್ಯ. ಹೀಗೆ ನಿತ್ಯವಾಗಿದ್ದು ಪ್ರಧಾನವಾಗಿರುವ ಸಂಸ್ಕೃತ ಭಾಷೆಯನ್ನರಿತುಕೊಂಡ ಮಾತ್ರದಿಂದ, ಅನಿತ್ಯವಾಗಿದ್ದು ಅಪ್ರಧಾನವಾಗಿರುವ ಎಲ್ಲಾ ಭಾಷಾ ಪರಿಜ್ಞಾನದಿಂದ ದೊರಕಬಹುದಾದ ಸಂಪತ್ತು ಮನ್ನಣೆಯೇ ಮೊದಲಾದ ಫಲಗಳು ದೊರೆಯುತ್ತವೆ. ಹಾಗೆಯೇ ಪರಮಾತ್ಮನು ಇತರ ಪ್ರಪಂಚಕ್ಕಿಂತ ಪ್ರಧಾನನಾದ ಕಾರಣ ಅವನನ್ನು ಅರಿತುಕೊಂಡರೆ ಅಷ್ಟರಿಂದಲೇ ಅಪ್ರಧಾನವಾದ ಕರ್ಮ, ದೇವತೆಗಳೇ ಮೊದಲಾದ ಜಗತ್ತಿನ ಪರಿಜ್ಞಾನದಿಂದ ಸಿಗಬಹುದಾದ ಸ್ವರ್ಗಾದಿ ಪ್ರಯೋಜನವು ಕೈಗೂಡುತ್ತದೆ.

'ಯಥಾ ಸೋಮ್ಯೈಕೇನ ನಖನಿಕೃಂತನೇನ ಸರ್ವಂ ಕಾರ್ಷ್ಣಾಯಸಂ ವಿಜ್ಞಾತಂ ಸ್ಯಾತ್। ವಾಚಾರಂಭಣಂ ವಿಕಾರೋ, ನಾಮಧೇಯಂ ಕಾರ್ಷ್ಣಾಯಸಮಿತ್ಯೇವ ಸತ್ಯಮ್ । ಏವಂ ಸೋಮ್ಯ ಸ ಆದೇಶೋ ಭವತಿ' ಇತಿ ॥

ಅಲ್ಪವಾದ ಕಬ್ಬಿಣದಿಂದ ನಿರ್ಮಿತವಾದ ಒಂದು ಉಗುರುಕತ್ತಿಯನ್ನು, ಇದು ಕಬ್ಬಿಣ ಎಂದು ಪರಿಚಯ ಮಾಡಿಕೊಂಡರೆ, ಅದಕ್ಕೆ ಸದೃಶವಾಗಿರುವುದರಿಂದಾಗಿ ಕಬ್ಬಿಣದಿಂದ ನಿರ್ಮಿತವಾದ ವಸ್ತುಗಳನ್ನೆಲ್ಲಾ ಕಬ್ಬಿಣವೆಂದು ತಿಳಿದುಕೊಂಡಂತಾಗುತ್ತದೆ ಎಂದ ಮೇಲೆ ಶ್ರೇಷ್ಠನಾದ ಪರಮಾತ್ಮನನ್ನು ಸತ್ಯ ಎಂದು ಅರಿತುಕೊಂಡರೆ, ಅವನಂತೆ ಪ್ರಾಮಾಣಿಕವಾಗಿದ್ದು ಅವನಿಗೆ ಸದೃಶವಾದ ಅಲ್ಪವಾದ ಜಗತ್ತನ್ನು ಸತ್ಯವೆಂದು ಅರಿತಂತಾಗುತ್ತದೆ ಎಂದು ಬೇರೆ ಹೇಳಬೇಕಾಗಿಲ್ಲ.

ವಾಗಿಂದ್ರಿಯದಿಂದ ಕಬ್ಬಿಣ ಎಂದು ಮೊದಲಾದ ಸಂಸ್ಕೃತೇತರ ಶಬ್ದಗಳ ಅನಿತ್ಯ ಉಚ್ಚಾರಣೆಯು ನಾನಾ ವಿಧವಾಗಿ ಮಾಡಲ್ಪಡುತ್ತಿರುವ ಕಾರಣ ಆ ಶಬ್ದಗಳು ಅನಿತ್ಯ ಕಾರ್ಷ್ಣಾಯಸ ಮೊದಲಾದ ಸಂಸ್ಕೃತ ಪದಗಳ ಉಚ್ಚಾರಣೆಯು ಅವುಗಳ ಉತ್ಪತ್ತಿಯಾಗಿರದೆ ಅಭಿವ್ಯಕ್ತಿ ಮಾತ್ರವೇ ಆಗಿರುವುದರಿಂದ ಅವು ನಿತ್ಯ. ಹೀಗೆ ನಿತ್ಯವಾಗಿದ್ದು ಪ್ರಧಾನವಾಗಿರುವ ಸಂಸ್ಕೃತ ಭಾಷೆಯನ್ನರಿತುಕೊಂಡ ಮಾತ್ರದಿಂದಲೇ ಅಪ್ರಧಾನವಾದ ಇತರ ಭಾಷೆಗಳ ಅರಿವಿನಿಂದ ದೊರಕಬಹುದಾದ ಪ್ರಯೋಜನವೆಲ್ಲಾ ಸಿದ್ಧಿಸುತ್ತದೆ. ಹಾಗೆಯೇ ಜಗತ್ತಿಗಿಂತ ಪರಮಾತ್ಮ ಪ್ರಧಾನವಾಗಿರುವ ಕಾರಣ ಪರಮಾತ್ಮನನ್ನು ಅರಿತುಕೊಂಡರೆ ಅಪ್ರಧಾನವಾದ ಜಗತ್ತನ್ನು ಅರಿತುಕೊಳ್ಳಲು ಪ್ರಯಾಸ ಪಡದಿದ್ದರೂ ಅದರ ಅರಿವಿನಿಂದ ಲಭಿಸಬಹುದಾದ ಪ್ರಯೋಜನವು ಲಭಿಸುತ್ತದೆ.

ಯಥಾ ಮೃತ್ಪಿಂಡ ವಿಜ್ಞಾನಾತ್ ಸಾದೃಶ್ಯಾದೇವ ಮೃಣ್ಮಯಾಃ।
ವಿಜ್ಞಾಯಂತೇ ತಥಾ ವಿಷ್ಣೋಃಸಾದೃಶ್ಯಾತ್ ಜಗದೇವ ಚ।
ಯಥಾ ಸ್ವರ್ಣಸ್ಯ ವಿಜ್ಞಾನಾತ್ ಸರ್ವೇ ಲೋಹಮಯಾಸ್ತಥಾ।

ಪ್ರಾಧಾನ್ಯಾದ್ ವಿಷ್ಣುವಿಜ್ಞಾನಾತ್ ವಿಜ್ಞಾತಂಸ್ಯಾಜ್ಜಗತ್ ಸದಾ।
ಅತ್ಯಲ್ಪೇऽಪಿ ಹಿ ವಿಜ್ಞಾತೇ ಸದೃಶೇ ತಾದೃಶಂ ಬಹು।
ಜ್ಞಾಯತೇ ನಖನಿಕೃಂತನ್ಯಾ ಯಥಾ ಸರ್ವಮಯೋಮಯಂ!
ಕಿಮು ವಿಷ್ಣೋರ್ಬಹೋರ್ಜ್ಞಾನಾತ್ ಅತ್ಯಲ್ಪಂ ಜಗದೀದೃಶಂ।

ಅನನ್ಯಾಧೀನ ವಿಜ್ಞಾನಾತ್ ಅನ್ಯಾಧೀನಂ ತಥೈವ ಚ।
ಮೃದಯೋಲೋಹನಾಮ್ನಾಂ ಹಿ ಜ್ಞಾನಾತ್ ಸಾಂಕೇತಿಕಂ ಯಥಾ ಇತ್ಯಾದಿ
ಸಾಮಸಂಹಿತಾಯಾಂ॥
ಸ್ವರ್ಣಂಲೋಹಮಣಿಶ್ಚೈವ ಪುರಟಂ ಚಾಭಿಧೀಯತೇ॥ ಇತಿ ಶಬ್ದನಿರ್ಣಯೇ।

ಮಣ್ಣಿನ ಮುದ್ದೆಯ ಪರಿಚಯದಿಂದ ಅದಕ್ಕೆ ಕೇವಲ ಸದೃಶವಾದ ಮಣ್ಣಿನ ಮಡಿಕೆ ಮೊದಲಾದವುಗಳೂ ಹೇಗೆ ಪರಿಚಿತವಾಗುವವೋ, ಹಾಗೆಯೇ ಸತ್ಯನೆಂದು ಪರಮಾತ್ಮನನ್ನು ಅರಿತುಕೊಂಡಾಗ ಪರಮಾತ್ಮನಂತೆಯೇ ಪ್ರಾಮಾಣಿಕವಾಗಿರುವುದರಿಂದ, ಪರಮಾತ್ಮನಿಗೆ ಕೇವಲ ಸದೃಶವಾದ ಜಗತ್ತು ಸತ್ಯ ಎಂದುದರ ಅರಿವುಂಟಾಗುತ್ತದೆ. ಲೋಹಗಳಲ್ಲಿ ಪ್ರಧಾನವಾದ ಚಿನ್ನವನ್ನು ಲೋಹವೆಂದರಿತುಕೊಂಡರೆ ಅಪ್ರಧಾನವಾದ ಇತರ ಲೋಹಗಳನ್ನೂ ಲೋಹವೆಂದು ಅರಿಯಲು ಸಾಧ್ಯವಾಗುತ್ತದೆ. ಹಾಗೆಯೇ ಪ್ರಧಾನವಾದ ವಿಷ್ಣುವನ್ನು ಜ್ಞಾನಾನಂದಸ್ವರೂಪನೆಂದು ಅರಿತುಕೊಂಡರೆ ಅವನಂತೆ ಚೇತನರಾದ ಜೀವರೂ ಜ್ಞಾನಾನಂದಸ್ವರೂಪರೆಂದು ಅನುಮಾನದಿಂದ ತಿಳಿಯಲು ಸಾಧ್ಯ. ಒಂದು ಚಿಕ್ಕದಾದ ಉಗುರುಕತ್ತಿಯ ಪರಿಚಯವಾದಾಗಲೂ, ಅದರಂತೆಯೇ ಕಬ್ಬಿಣದ ನಿರ್ಮಿತವಾದ ಇತರ ಎಲ್ಲಾ ದೊಡ್ಡ ವಸ್ತುಗಳ ಪರಿಚಯ ಅನಾಯಾಸವಾಗಿ ಉಂಟಾಗುತ್ತದೆ. ಪರಮಾತ್ಮನು ಜಗತ್ತಿಗೆ ಸದೃಶನಷ್ಟೇ ಆಗಿರದೆ, ಜಗತ್ತಿಗಿಂತ ಎಲ್ಲಾ ದೃಷ್ಟಿಯಿಂದಲೂ ಶ್ರೇಷ್ಠನಾಗಿರುವನು. ಅಲ್ಪವಾದ ವಸ್ತುವಿನ ಜ್ಞಾನದಿಂದ ಅದಕ್ಕೆ ಸದೃಶವಾದ ಇತರ ದೊಡ್ಡ ವಸ್ತುಗಳ ಜ್ಞಾನವುಂಟಾಗುವುದಾದರೆ, ಶ್ರೇಷ್ಠನಾದ ವಿಷ್ಣುವಿನ ಜ್ಞಾನದಿಂದ ಅವನಿಗೆ ಸದೃಶವಾದ ಅಲ್ಪವಾದ ಜಗತ್ತಿನ ಜ್ಞಾನ ಉಂಟಾಗಲಾರದೆ? ಮೃತ್ತಿಕಾ ಲೋಹಮಣಿ ಕೃಷ್ಣಾಯಸ ಮೊದಲಾದ ಸಂಸ್ಕೃತ ಶಬ್ದಗಳೆಲ್ಲಾ ನಿತ್ಯವಾಗಿದ್ದು ಅನ್ಯಭಾಷಾಧೀನವಲ್ಲ. ಇತರ ಭಾಷೆಗಳಲ್ಲಿರುವ ಇದೇ ಅರ್ಥ ಬರುವ ಶಬ್ದಗಳೆಲ್ಲಾ ಸಂಸ್ಕೃತ ಭಾಷೆಯನ್ನವಲಂಬಿಸಿಕೊಂಡಿವೆ. ಹೀಗೆ ಅನ್ಯ ಭಾಷಾಧೀನವಾಗದೆ ಇರುವ ಸಂಸ್ಕೃತ ಭಾಷಾ ಪದಗಳು ಪ್ರಧಾನ. ಅವನ್ನವಲಂಬಿಸಿಕೊಂಡಿರುವ ಇತರ ಭಾಷಾ ಪದಗಳು

ಅಪ್ರಧಾನ. ಪ್ರಧಾನವಾಗಿರುವ ಸಂಸ್ಕೃತ ಪದಗಳನ್ನರಿತುಕೊಂಡರೆ, ಅಪ್ರಧಾನವಾದ ಇತರ ಭಾಷಾ ಶಬ್ದಗಳ ಅರಿವಿನ ಪ್ರಯೋಜನ ಸ್ವತಃ ಸಿದ್ಧಿಸುತ್ತದೆ. ಹೀಗೆಯೇ ಅನನ್ಯಾಧೀನನಾಗಿದ್ದು ಪ್ರಧಾನನಾಗಿರುವ ವಿಷ್ಣುವಿನ ಅರಿವಿನಿಂದ ಅವನನ್ನು ಆಶ್ರಯಿಸಿಕೊಂಡಿರುವ ಅಪ್ರಧಾನವಾದ ಜಗತ್ತಿನ ಅರಿವಿನ ಪ್ರಯೋಜನ ಉಂಟಾಗುತ್ತದೆ ಎಂದು ಸಾಮಸಂಹಿತೆಯಲ್ಲಿದೆ.

ಬಂಗಾರವೇ ಲೋಹಮಣಿ ಎಂದೂ ಪುರಟ ಎಂದೂ ಪ್ರಸಿದ್ಧವಾಗಿದೆ ಎಂದು ಶಬ್ದನಿರ್ಣಯ ಹೇಳುತ್ತಿದೆ..

ವಿಕಾರತ್ವವಿವಕ್ಷಾಯಾಂ ಏಕಪಿಂಡಮಣಿಶಬ್ದಾಃ ವ್ಯರ್ಥಾಃ ಸ್ಯುಃ।

'ಯಥಾ ಸೋಮ್ಯ' ಎಂದು ಮುಂತಾದ ಮೂರು ದೃಷ್ಟಾಂತ ವಾಕ್ಯಗಳಲ್ಲಿ ಮೃತ್ ಮೃಣ್ಮಯಗಳಿಗೂ, ಲೋಹಲೋಹಮಯಗಳಿಗೂ, ಕೃಷ್ಣಾಯಸಹಾಗೂಕಾರ್ಷ್ಣಾಯಸಗಳಿಗೂ ಉಪಾದಾನ ಉಪಾದೇಯಭಾವವನ್ನು ಹೇಳುವುದು ಉದ್ದೇಶವಾಗಿದ್ದಲ್ಲಿ, ಇಲ್ಲಿ ಹೇಳಿರುವ ಪಿಂಡ ಮಣಿ ನಖನಿಕೃಂತನ ಸರ್ವ ಶಬ್ದಗಳು ನಿರರ್ಥಕವಾಗುವವು. ಏಕ, ಸರ್ವ ಶಬ್ದಗಳು ಪರಸ್ಪರ ವಿರುದ್ಧಾರ್ಥವುಳ್ಳವುಗಳೂ ಆಗುವುವು.

'ಮೃತ್ತಿಕೇತಿ' 'ಲೋಹಮಣಿರಿತಿ' 'ಕಾರ್ಷ್ಣಾಯಸಮಿತಿ' ಅತ್ರ 'ಇತಿ' ಶಬ್ದಾಃ ನಾಮಧೇಯಶಬ್ದಾಶ್ಚವ್ಯರ್ಥಾಸ್ಯುಃ। ವಿಕಾರಮಿಥ್ಯಾತ್ವವಿವಕ್ಷಯಾಂ ಮೃತ್ತಿಕೈವ ಸತ್ಯಂ, ಲೋಹ ಏವ ಸತ್ಯಂ, ಕಾರ್ಷ್ಣಾಯಸಮೇವ ಸತ್ಯಮಿ'ತ್ಯೇವ ಸ್ಯಾತ್ । ನ ತು ನಾಮಧೇಯಾದಿಶಬ್ದಾಃ।

'ವಾಚಾರಂಭಣಂ ವಿಕಾರೋ ನಾಮಧೇಯಂ' ಎಂದು ಆರಂಭಗೊಳ್ಳುವ ಮೂರು ದೃಷ್ಟಾಂತವಾಕ್ಯಗಳ ಉದ್ದೇಶ. ವಿಕಾರಗಳ ಅಸತ್ಯತೆಯನ್ನು ತಿಳಿಸುವುದೇ ಆಗಿದೆ ಎಂದಿಟ್ಟುಕೊಂಡಲ್ಲಿ ಮೃತ್ತಿಕೇತಿ, ಮಣಿರಿತಿ, ಕಾರ್ಷ್ಣಾಯಸಮಿತಿ ಎಂದು ಹೇಳಿರುವ ಮೂರು'ಇತಿ' ಶಬ್ದಗಳೂ, ಈ ವಾಕ್ಯಗಳಲ್ಲಿ ಹೇಳಿರುವ 'ನಾಮಧೇಯ' ಮುಂತಾದ ಶಬ್ದಗಳೂ ವ್ಯರ್ಥವೆನಿಸುತ್ತವೆ. ಮೃತ್ತಿಕೈವ ಸತ್ಯಂ, ಲೋಹಮೇವ ಸತ್ಯಂ, ಕಾರ್ಷ್ಣಾಯಸಮೇವ ಸತ್ಯಂ ಎಂದೇ ಹೇಳಬೇಕಾಗಿತ್ತು. 'ಇತಿ' ಶಬ್ದ, 'ನಾಮಧೇಯ' ಶಬ್ದಗಳನ್ನು ಸೇರಿಸಬಾರದಿತ್ತು.

'ನ ಚ ವಾಚಾರಂಭಣಮಾತ್ರಮ್' ಇತಿ ಮಾತ್ರಶಬ್ದೋऽಸ್ತಿ । ನ ಚಾರಭ್ಯಸ್ಯಾರಂಭಣಮಿತಿ ಯುಜ್ಯತೇ ಶಬ್ದಃ ಕ್ರಿಯಾ ಹ್ಯಾರಂಭಣಮ್ ।

'ವಾಚಾರಂಭಣಮಾತ್ರಂ' ಎಂಬುದಾಗಿ ಉಪನಿಷತ್ತಿನಲ್ಲಿ ಮಾತ್ರ ಶಬ್ದವೇನೂ ಇಲ್ಲ. ಆರಂಭಣ ಎಂಬುದೊಂದು ಕ್ರಿಯೆ. ಅದರ ಕರ್ಮವಾದ ಆರಂಭಿಸಲ್ಪಡತಕ್ಕ ವಸ್ತುವನ್ನು ಹೇಳಲು ಆರಂಭಣ ಎಂಬ ಶಬ್ದದ ಪ್ರಯೋಗವೂ ಅನುಚಿತವಾಗಿದೆ.

ಅತೋ 'ವಾಚಾ ನಾಮ್ನಾಂ ಆರಂಭಣಂ ವಿಕಾರೋ ವಿವಿಧಾಕಾರೋ ವಿಕ್ರಿಯಮಾಣಃ । ಸತ್ಯಂ ನಾಮಧೇಯಂ, ಸರ್ವದಾ ವಿದ್ಯಮಾನಂ ನಾಮಧೇಯಂ ಮೃತ್ತಿಕೇತ್ಯಾದಯ' ಇತ್ಯರ್ಥಃ । ಸತ್ತ್ವೇನ ಕಾಲತಃತತಂ ಜ್ಞಾಯತೇ ವಿದ್ವದ್ಭಿರಿತಿ ನಿತ್ಯತ್ವೇನ ಪ್ರಸಿದ್ಧಮೇವ ಸತ್ಯಮಿತ್ಯತ್ರ ವಿವಕ್ಷಿತಮ್ ।

ಮಾಯಾವಾದಿಗಳ ವ್ಯಾಖ್ಯಾನವು ಹೀಗೆ ಅಯುಕ್ತವಾದುದರಿಂದ 'ವಾಚಾರಂಭಣಂ' ಎಂಬ ವಾಕ್ಯವನ್ನು ಹೀಗೆ ಅರ್ಥೈಸಬೇಕು - ವಾಗಿಂದ್ರಿಯದಿಂದ ಸಂಸ್ಕೃತೇತರ ಭಾಷಾಪದಗಳ ಉಚ್ಚಾರಣವು, ವಿಕಾರಃ = ವಿವಿಧಾಕಾರ ಅಂದರೆ ನಾನಾ ರೀತಿಯಲ್ಲಿ ಮಾಡಲ್ಪಡುವಂತಹುದು. ಆದುದರಿಂದ ಅಂತಹ ಶಬ್ದಗಳು ಶಾಶ್ವತವಲ್ಲ. ಸತ್ಯಂ = ಯಾವತ್ತೂ ಶಾಶ್ವತವಾಗಿರುವ, ನಾಮಧೇಯಂ = ಶಬ್ದವೆಂದರೆ, ಮೃತ್ತಿಕೇತಿ = ಮೃತ್ತಿಕಾ ಮೊದಲಾದ ಸಂಸ್ಕೃತಶಬ್ದಗಳೇ, ಸದ್ರೂಪದಿಂದ ಕಾಲವನ್ನು ವ್ಯಾಪಿಸಿದೆ ಎಂದು ಜ್ಞಾನಿಗಳಿಂದ ತಿಳಿಯಲ್ಪಡುವಂಥಹುದು ಎಂಬ ವ್ಯುತ್ಪತ್ತಿಯಿಂದ ನಿತ್ಯವೆಂದು ಪ್ರಸಿದ್ಧವಾದ ವಸ್ತುವೇ ಉಪನಿಷತ್ತಿನಲ್ಲಿ ಸತ್ಯಶಬ್ದದಿಂದ ವಿವಕ್ಷಿತವಾಗಿದೆ.

ಸಂಕೇತೇನ ಕ್ರಿಯಾಮಾಣಾನಿ ಹ್ಯನ್ಯಾನಿ ನಾಮಾನಿ । ಅತೋ ವಿಕಾರ ರೂಪಾಣಿ । ವಿಕಾರ ಶಬ್ದಸ್ಯ ನಿಯತ ಪುಲ್ಲಿಂಗತ್ವಾತ್ 'ಆರಂಭಣಂ ವಿಕಾರಃ' ಇತಿ 'ವೇದಾಃ ಪ್ರಮಾಣಂ' ಇತಿವತ್ ಯುಜ್ಯತೇ ।

ಸಂಸ್ಕೃತೇತರವಾದ ಮಣ್ಣು ಮೊದಲಾದ ಶಬ್ದಗಳು ಆಯಾಯ ಭಾಷೆಯನ್ನು ಮಾತನಾಡುವ ಜನರ ಇಚ್ಛಾನುಸಾರ ಪ್ರಯುಕ್ತವಾಗಿವೆ. ಆದುದರಿಂದಲೇ ಜನರ ಇಚ್ಛೆಯಲ್ಲಿ ವಿಭಿನ್ನತೆ ಇರುವ ಕಾರಣ ಈ ಶಬ್ದಗಳ ಪ್ರಯೋಜನವೂ ನಾನಾ ರೀತಿಯಾಗಿದೆ. ಹೀಗೆ ಜನರಿಂದ ಇಚ್ಛಾನುಸಾರ ಪ್ರಯುಕ್ತವಾಗಿರುವ ಕಾರಣ ಅವು ಅನಿತ್ಯ. 'ವಾಚಾರಂಭಣಂ ವಿಕಾರಃ' ಎಂಬಲ್ಲಿ ವಾಚಾರಂಭಣಶಬ್ದವು ವಿಶೇಷ್ಯವಾಗಿದ್ದು ನಪುಂಸಕಲಿಂಗದಲ್ಲಿದ್ದರೂ, ವಿಕಾರಶಬ್ದವು ನಿತ್ಯಪುಲ್ಲಿಂಗ ಶಬ್ದವಾದ ಕಾರಣ 'ವೇದಾಃಪ್ರಮಾಣಂ' ಎಂಬ ಪ್ರಯೋಗದಂತೆ, 'ವಾಚಾರಂಭಣಂ ವಿಕಾರಃ' ಎಂದು ವಿಶೇಷಣ-ವಿಶೇಷ್ಯಭಾವ ಯುಕ್ತವೇ ಆಗಿದೆ. ಅನಿಯತ ಲಿಂಗಶಬ್ದಗಳಿಗೆ ಸಮಾನಲಿಂಗತ್ವವಿದ್ದರೆ ಮಾತ್ರ ವಿಶೇಷಣ - ವಿಶೇಷ್ಯಭಾವವೆಂದು ನಿಯಮ. ನಿಯತಲಿಂಗವಾದ ವಿಕಾರಶಬ್ದಕ್ಕೆ ಈ ನಿಯಮ ಅನ್ವಯಿಸುವುದಿಲ್ಲ.

ನ ಚ ಮೃತ್ತಿಕಾದಿನಾಮವಿಕಾರಃ ಸಾಂಕೇತಿಕಂ ನಾಮ । ಪ್ರಧಾನ್ಯಮೇವಾತ್ರ ಮೃತ್ತಿಕಾದಿ ನಾಮವತ್ ಭಗವತೋ ವಿವಕ್ಷಿತಂ. ಸೃಷ್ಟಿಶ್ಚ ಪ್ರಾಧಾನ್ಯಾರ್ಥಮೇವಾತ್ರೋಚ್ಯತೇ ।

'ಮೃತ್ತಿಕಾ' ಎಂದು ಮುಂತಾಗಿ ಸಂಸ್ಕೃತಶಬ್ದಗಳ ಪರಿಣಾಮವೇ 'ಮಣ್ಣು' ಮುಂತಾದ ಪ್ರಾಕೃತಶಬ್ದಗಳಲ್ಲ. 'ವಾಚಾರಂಭಣಂ' ಇತ್ಯಾದಿ ದೃಷ್ಟಾಂತ ವಾಕ್ಯದಿಂದ ಇತರ

ಅಪ್ರಧಾನ. ಪ್ರಧಾನವಾಗಿರುವ ಸಂಸ್ಕೃತ ಪದಗಳನ್ನರಿತುಕೊಂಡರೆ, ಅಪ್ರಧಾನವಾದ ಇತರ ಭಾಷಾ ಶಬ್ದಗಳ ಅರಿವಿನ ಪ್ರಯೋಜನ ಸ್ವತಃ ಸಿದ್ಧಿಸುತ್ತದೆ. ಹೀಗೆಯೇ ಅನನ್ಯಾಧೀನನಾಗಿದ್ದು ಪ್ರಧಾನನಾಗಿರುವ ವಿಷ್ಣುವಿನ ಅರಿವಿನಿಂದ ಅವನನ್ನು ಆಶ್ರಯಿಸಿಕೊಂಡಿರುವ ಅಪ್ರಧಾನವಾದ ಜಗತ್ತಿನ ಅರಿವಿನ ಪ್ರಯೋಜನ ಉಂಟಾಗುತ್ತದೆ ಎಂದು ಸಾಮಸಂಹಿತೆಯಲ್ಲಿದೆ.

ಬಂಗಾರವೇ ಲೋಹಮಣಿ ಎಂದೂ ಪುರಟ ಎಂದೂ ಪ್ರಸಿದ್ಧವಾಗಿದೆ ಎಂದು ಶಬ್ದನಿರ್ಣಯ ಹೇಳುತ್ತಿದೆ..

ವಿಕಾರತ್ವವಿವಕ್ಷಾಯಾಂ ಏಕಪಿಂಡಮಣಿಶಬ್ದಾಃ ವ್ಯರ್ಥಾಃ ಸ್ಯುಃ।

'ಯಥಾ ಸೋಮ್ಯ' ಎಂದು ಮುಂತಾದ ಮೂರು ದೃಷ್ಟಾಂತ ವಾಕ್ಯಗಳಲ್ಲಿ ಮೃತ್ ಮೃಣ್ಮಯಗಳಿಗೂ, ಲೋಹಲೋಹಮಯಗಳಿಗೂ, ಕೃಷ್ಣಾಯಸಹಾಗೂ ಕಾರ್ಷ್ಣಾಯಸಗಳಿಗೂ ಉಪಾದಾನ ಉಪಾದೇಯಭಾವವನ್ನು ಹೇಳುವುದು ಉದ್ದೇಶವಾಗಿದ್ದಲ್ಲಿ, ಇಲ್ಲಿ ಹೇಳಿರುವ ಪಿಂಡ ಮಣಿ ನಖನಿಕೃಂತನ ಸರ್ವ ಶಬ್ದಗಳು ನಿರರ್ಥಕವಾಗುವವು. ಏಕ, ಸರ್ವ ಶಬ್ದಗಳು ಪರಸ್ಪರ ವಿರುದ್ಧಾರ್ಥವುಳ್ಳವುಗಳೂ ಆಗುವುವು.

'ಮೃತ್ತಿಕೇತಿ' 'ಲೋಹಮಣಿರಿತಿ' 'ಕಾರ್ಷ್ಣಾಯಸಮಿತಿ' ಅತ್ರ 'ಇತಿ' ಶಬ್ದಾಃ ನಾಮಧೇಯಶಬ್ದಾಶ್ಚವ್ಯರ್ಥಾಸ್ಯುಃ। ವಿಕಾರಮಿಥ್ಯಾತ್ವವಿವಕ್ಷಯಾಂ ಮೃತ್ತಿಕೈವ ಸತ್ಯಂ, ಲೋಹ ಏವ ಸತ್ಯಂ, ಕಾರ್ಷ್ಣಾಯಸಮೇವ ಸತ್ಯಮಿ'ತ್ಯೇವ ಸ್ಯಾತ್ । ನ ತು ನಾಮಧೇಯಾದಿಶಬ್ದಾಃ।

'ವಾಚಾರಂಭಣಂ ವಿಕಾರೋ ನಾಮಧೇಯಂ' ಎಂದು ಆರಂಭಗೊಳ್ಳುವ ಮೂರು ದೃಷ್ಟಾಂತವಾಕ್ಯಗಳ ಉದ್ದೇಶ. ವಿಕಾರಗಳ ಅಸತ್ಯತೆಯನ್ನು ತಿಳಿಸುವುದೇ ಆಗಿದೆ ಎಂದಿಟ್ಟುಕೊಂಡಲ್ಲಿ ಮೃತ್ತಿಕೇತಿ, ಮಣಿರಿತಿ, ಕಾರ್ಷ್ಣಾಯಸಮಿತಿ ಎಂದು ಹೇಳಿರುವ ಮೂರು'ಇತಿ' ಶಬ್ದಗಳೂ, ಈ ವಾಕ್ಯಗಳಲ್ಲಿ ಹೇಳಿರುವ 'ನಾಮಧೇಯ' ಮುಂತಾದ ಶಬ್ದಗಳೂ ವ್ಯರ್ಥವೆನಿಸುತ್ತವೆ. ಮೃತ್ತಿಕೈವ ಸತ್ಯಂ, ಲೋಹಮೇವ ಸತ್ಯಂ, ಕಾರ್ಷ್ಣಾಯಸಮೇವ ಸತ್ಯಂ ಎಂದೇ ಹೇಳಬೇಕಾಗಿತ್ತು. 'ಇತಿ' ಶಬ್ದ, 'ನಾಮಧೇಯ' ಶಬ್ದಗಳನ್ನು ಸೇರಿಸಬಾರದಿತ್ತು.

'ನ ಚ ವಾಚಾರಂಭಣಮಾತ್ರಮ್' ಇತಿ ಮಾತ್ರಶಬ್ದೋऽಸ್ತಿ । ನ ಚಾರಭ್ಯಸ್ಯಾರಂಭಣಮಿತಿ ಯುಜ್ಯತೇ ಶಬ್ದಃ ಕ್ರಿಯಾ ಹ್ಯಾರಂಭಣಮ್ ।

'ವಾಚಾರಂಭಣಮಾತ್ರಂ' ಎಂಬುದಾಗಿ ಉಪನಿಷತ್ತಿನಲ್ಲಿ ಮಾತ್ರ ಶಬ್ದವೇನೂ ಇಲ್ಲ. ಆರಂಭಣ ಎಂಬುದೊಂದು ಕ್ರಿಯೆ. ಅದರ ಕರ್ಮವಾದ ಆರಂಭಿಸಲ್ಪಡತಕ್ಕ ವಸ್ತುವನ್ನು ಹೇಳಲು ಆರಂಭಣ ಎಂಬ ಶಬ್ದದ ಪ್ರಯೋಗವೂ ಅನುಚಿತವಾಗಿದೆ.

ಅತೋ 'ವಾಚಾ ನಾಮ್ನಾಂ ಆರಂಭಣಂ ವಿಕಾರೋ ವಿವಿಧಾಕಾರೋ ವಿಕ್ರಿಯಮಾಣಃ । ಸತ್ಯಂ ನಾಮಧೇಯಂ, ಸರ್ವದಾ ವಿದ್ಯಮಾನಂ ನಾಮಧೇಯಂ ಮೃತ್ತಿಕೇತ್ಯಾದಯ' ಇತ್ಯರ್ಥಃ । ಸತ್ತ್ವೇನ ಕಾಲತಃತಂ ಜ್ಞಾಯತೇ ವಿದ್ವದ್ಭಿರಿತಿ ನಿತ್ಯತ್ವೇನ ಪ್ರಸಿದ್ಧಮೇವ ಸತ್ಯಮಿತ್ಯತ್ರ ವಿವಕ್ಷಿತಮ್ ।

ಮಾಯಾವಾದಿಗಳ ವ್ಯಾಖ್ಯಾನವು ಹೀಗೆ ಅಯುಕ್ತವಾದುದರಿಂದ 'ವಾಚಾರಂಭಣಂ' ಎಂಬ ವಾಕ್ಯವನ್ನು ಹೀಗೆ ಅರ್ಥೈಸಬೇಕು - ವಾಗಿಂದ್ರಿಯದಿಂದ ಸಂಸ್ಕೃತೇತರ ಭಾಷಾಪದಗಳ ಉಚ್ಚಾರಣವು, ವಿಕಾರಃ = ವಿವಿಧಾಕಾರ ಅಂದರೆ ನಾನಾ ರೀತಿಯಲ್ಲಿ ಮಾಡಲ್ಪಡುವಂತಹುದು. ಆದುದರಿಂದ ಅಂತಹ ಶಬ್ದಗಳು ಶಾಶ್ವತವಲ್ಲ. ಸತ್ಯಂ = ಯಾವತ್ತೂ ಶಾಶ್ವತವಾಗಿರುವ, ನಾಮಧೇಯಂ = ಶಬ್ದವೆಂದರೆ, ಮೃತ್ತಿಕೇತಿ = ಮೃತ್ತಿಕಾ ಮೊದಲಾದ ಸಂಸ್ಕೃತಶಬ್ದಗಳೇ, ಸದ್ರೂಪದಿಂದ ಕಾಲವನ್ನು ವ್ಯಾಪಿಸಿದೆ ಎಂದು ಜ್ಞಾನಿಗಳಿಂದ ತಿಳಿಯಲ್ಪಡುವಂಥಹುದು ಎಂಬ ವ್ಯುತ್ಪತ್ತಿಯಿಂದ ನಿತ್ಯವೆಂದು ಪ್ರಸಿದ್ಧವಾದ ವಸ್ತುವೇ ಉಪನಿಷತ್ತಿನಲ್ಲಿ ಸತ್ಯಶಬ್ದದಿಂದ ವಿವಕ್ಷಿತವಾಗಿದೆ.

ಸಂಕೇತೇನ ಕ್ರಿಯಾಮಾಣಾನಿ ಹ್ಯನ್ಯಾನಿ ನಾಮಾನಿ । ಅತೋ ವಿಕಾರ ರೂಪಾಣಿ । ವಿಕಾರ ಶಬ್ದಸ್ಯ ನಿಯತ ಪುಲ್ಲಿಂಗತ್ವಾತ್ 'ಆರಂಭಣಂ ವಿಕಾರಃ' ಇತಿ 'ವೇದಾಃ ಪ್ರಮಾಣಂ' ಇತಿವತ್ ಯುಜ್ಯತೇ।

ಸಂಸ್ಕೃತೇತರವಾದ ಮಣ್ಣು ಮೊದಲಾದ ಶಬ್ದಗಳು ಆಯಾಯ ಭಾಷೆಯನ್ನು ಮಾತನಾಡುವ ಜನರ ಇಚ್ಛಾನುಸಾರ ಪ್ರಯುಕ್ತವಾಗಿವೆ. ಆದುದರಿಂದಲೇ ಜನರ ಇಚ್ಛೆಯಲ್ಲಿ ವಿಭಿನ್ನತೆ ಇರುವ ಕಾರಣ ಈ ಶಬ್ದಗಳ ಪ್ರಯೋಜನವೂ ನಾನಾ ರೀತಿಯಾಗಿದೆ. ಹೀಗೆ ಜನರಿಂದ ಇಚ್ಛಾನುಸಾರ ಪ್ರಯುಕ್ತವಾಗಿರುವ ಕಾರಣ ಅವು ಅನಿತ್ಯ. 'ವಾಚಾರಂಭಣಂ ವಿಕಾರಃ' ಎಂಬಲ್ಲಿ ವಾಚಾರಂಭಣಶಬ್ದವು ವಿಶೇಷ್ಯವಾಗಿದ್ದು ನಪುಂಸಕಲಿಂಗದಲ್ಲಿದ್ದರೂ, ವಿಕಾರಶಬ್ದವು ನಿತ್ಯಪುಲ್ಲಿಂಗ ಶಬ್ದವಾದ ಕಾರಣ 'ವೇದಾಃಪ್ರಮಾಣಂ' ಎಂಬ ಪ್ರಯೋಗದಂತೆ, 'ವಾಚಾರಂಭಣಂ ವಿಕಾರಃ' ಎಂದು ವಿಶೇಷಣ-ವಿಶೇಷ್ಯಭಾವ ಯುಕ್ತವೇ ಆಗಿದೆ. ಅನಿಯತ ಲಿಂಗಶಬ್ದಗಳಿಗೆ ಸಮಾನಲಿಂಗತ್ವವಿದ್ದರೆ ಮಾತ್ರ ವಿಶೇಷಣ - ವಿಶೇಷ್ಯಭಾವವೆಂದು ನಿಯಮ. ನಿಯತಲಿಂಗವಾದ ವಿಕಾರಶಬ್ದಕ್ಕೆ ಈ ನಿಯಮ ಅನ್ವಯಿಸುವುದಿಲ್ಲ.

ನ ಚ ಮೃತ್ತಿಕಾದಿನಾಮವಿಕಾರಃ ಸಾಂಕೇತಿಕಂ ನಾಮ। ಪ್ರಧಾನ್ಯಮೇವಾತ್ರ ಮೃತ್ತಿಕಾದಿ ನಾಮವತ್ ಭಗವತೋ ವಿವಕ್ಷಿತಂ. ಸೃಷ್ಟಿಶ್ಚ ಪ್ರಾಧಾನ್ಯಾರ್ಥಮೇವಾತ್ರೋಚ್ಯತೇ।

'ಮೃತ್ತಿಕಾ' ಎಂದು ಮುಂತಾಗಿ ಸಂಸ್ಕೃತಶಬ್ದಗಳ ಪರಿಣಾಮವೇ 'ಮಣ್ಣು' ಮುಂತಾದ ಪ್ರಾಕೃತಶಬ್ದಗಳಲ್ಲ. 'ವಾಚಾರಂಭಣಂ' ಇತ್ಯಾದಿ ದೃಷ್ಟಾಂತ ವಾಕ್ಯದಿಂದ ಇತರ

ಭಾಷಾಶಬ್ದಗಳಿಗಿಂತ ಸಂಸ್ಕೃತಶಬ್ದಗಳಿಗೆ ಪ್ರಾಧಾನ್ಯವಿರುವಂತೆ ಜಗತ್ತಿಗಿಂತ ಪರಮಾತ್ಮನಿಗೆ ಪ್ರಾಧಾನ್ಯವಿದೆ ಎಂದು ಹೇಳುವುದೇ ವಿವಕ್ಷಿತ. ಪರಮಾತ್ಮನಿಗಿರುವ ಈ ಪ್ರಾಧಾನ್ಯವನ್ನು ಸಮರ್ಥಿಸುವುದಕ್ಕಾಗಿಯೇ ಮುಂದೆ ಜಗತ್‌ಸೃಷ್ಟಿಯೂ ಹೇಳಲ್ಪಡುತ್ತಿದೆ.

'ನ ವೈ ನೂನಂ ಭಗವಂತಸ್ತೇ ಏತದವೇದಿಷುಃ । ಯದ್ಧೇತದವೇದಿಷ್ಯನ್ ಕಥಂ ಮೇ ನಾವಕ್ಷ್ಯನ್' ಇತಿ । ಭಗವಾಂಸ್ತ್ವೇವ ಮೇ ತದ್ಬ್ರವೀತು' ಇತಿ । 'ತಥಾ ಸೋಮ್ಯ' ಇತಿಹೋವಾಚ ॥

ಪರಮಾತ್ಮನ ಜ್ಞಾನದಿಂದ ಇತರ ಎಲ್ಲಾ ಜಗತ್ತಿನ ಜ್ಞಾನವುಂಟಾಗುತ್ತದೆ ಎಂಬೀ ಪ್ರಮೇಯವನ್ನು ಪೂಜ್ಯರಾದ ಗುರುಗಳು ನಿಶ್ಚಯವಾಗಿ ತಿಳಿದಿರಲಾರರು. ಒಂದು ವೇಳೆ ತಿಳಿದಿದ್ದರೆ ಏಕೆ ಹೇಳದೆ ಇರುತ್ತಿದ್ದರು? ಪೂಜ್ಯರಾದ ತಾವೇ ಈ ಪ್ರಮೇಯವನ್ನು ನನಗೆ ವಿಶದವಾಗಿ ತಿಳಿಸಿಕೊಡಿ' ಎಂದು ಶ್ವೇತಕೇತುವು ತನ್ನ ತಂದೆಯನ್ನು ಪ್ರಾರ್ಥಿಸಿದನು. ಅದಕ್ಕೆ ಉತ್ತರವಾಗಿ ತಂದೆಯು 'ಹಾಗೆಯೇ ಆಗಲಿ' ಎಂದರು.

ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಮ್ । ತದ್ಧೈಕ ಆಹುಃ 'ಅಸದೇವೇದಮಗ್ರ ಆಸೀದೇಕಮೇವಾದ್ವಿತೀಯಮ್ । ತಸ್ಮಾದಸತಃ ಸಜ್ಜಾಯತ' ಇತಿ । 'ಕುತಸ್ತು ಖಲು ಸೋಮ್ಯೈವಂ ಸ್ಯಾತ್?' ಇತಿ ಹೋವಾಚ 'ಕಥಂ ಅಸತಃ ಸಜ್ಜಾಯೇತ? ಇತಿ। ಸತ್ ತ್ವೇವಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಂ।

ಸೃಷ್ಟಿಯ ಮೊದಲು ಪ್ರಳಯಕಾಲದಲ್ಲಿ ಸರ್ವೋತ್ತಮನಾದುದರಿಂದ 'ಸತ್' ಎಂಬ ಹೆಸರುಳ್ಳ ಪರಮಾತ್ಮನು ಮಾತ್ರ ಇದ್ದನು. ಈ ಪರಮಾತ್ಮನು ತನ್ನ ಅವಯವ ಗುಣಕ್ರಿಯೆ ಇವುಗಳಿಂದ ಅತ್ಯಂತ ಅಭಿನ್ನನಾಗಿರುವನು. ಅವನಿಗೆ ಸಮಾನರು ಯಾರೂ ಇಲ್ಲ. ಅಧಿಕರು ಇನ್ನೆಲ್ಲಿ?

ಜಗತ್ತಿನ ಸೃಷ್ಟಿ ಕಾರಣದ ವಿಷಯದಲ್ಲಿ ಶೂನ್ಯವಾದಿಗಳಾದ ಬೌದ್ಧರು 'ಜಗತ್ತಿನ ಸೃಷ್ಟಿಗಿಂತ ಮೊದಲು ಪ್ರಳಯಕಾಲದಲ್ಲಿ ಶೂನ್ಯ ಒಂದೇ ಇತ್ತು. ಕಾರ್ಯ ಪ್ರಪಂಚವೂ ಇರಲಿಲ್ಲ. ಸಹಕಾರಿ ಕಾರಣವಾಗಬಲ್ಲ ಇನ್ನೊಂದು ವಸ್ತುವೂ ಇರಲಿಲ್ಲ. ಆ ಶೂನ್ಯದಿಂದ ಪ್ರಪಂಚ ಹುಟ್ಟಿತು' ಎಂದು ಅನ್ನುತ್ತಾರೆ.

ಪ್ರಳಯಕಾಲದಲ್ಲಿ ಅಸತ್ ಆಗಿರುವ ಶೂನ್ಯವಿತ್ತು ಎಂಬುದು ಹೇಗೆ ತಾನೆ ಯುಕ್ತವಾದೀತು? ಅಸತ್ತು ಇರುವುದೆಂದರೆ ಸ್ವವ್ಯಾಹತ ಮತ್ತು ಅಪ್ರಾಮಾಣಿಕ. ಅಸತ್ ಆದ ಶೂನ್ಯದಿಂದ ಜಗತ್ತು ಹುಟ್ಟುವುದು ಹೇಗೆ ತಾನೆ ಸಾಧ್ಯ ? ಅಸತ್ತು ಕಾರಣವಾಗುವುದು ಎಲ್ಲಿಯೂ ದೃಷ್ಟವಾಗಿಲ್ಲ. ಆದುದರಿಂದ ಪ್ರಳಯಕಾಲದಲ್ಲಿ ತನ್ನ ಅವಯವಾದಿಗಳಿಗಿಂತ

ಅತ್ಯಂತ ಅಭಿನ್ನನೂ, ತನಗೆ ಸಮಾನವಾದ ಹಾಗೂ ತನಗಿಂತ ಅಧಿಕವಾದ ಬೇರೆ ವಸ್ತು ಇಲ್ಲದವನೂ ಆದ ಸದ್ರೂಪನಾದ ಪರಮಾತ್ಮನೇ ಇದ್ದನು ಎಂಬುದು ಸಿದ್ಧವಾಗುತ್ತದೆ.

ಏಕಮೇವಾದ್ವಿತೀಯಂ ಸ್ವಗತಭೇದವರ್ಜಿತಂ ಸಮಾನವರ್ಜಿತಂ ಚ । ಏಕಮೇವಾದ್ವಿತೀಯಂ ಸತ್ ಸಮಾಭ್ಯಧಿಕ ವರ್ಜನಾತ್ । ಸ್ವಗತಾನಾಂ ಚ ಭೇದಾನಾಮಭಾವಾತ್ ಬ್ರಹ್ಮಶಾಶ್ವತಂ। ಇತಿ ಪ್ರವೃತ್ತೇ।

ಭೇದಾಭೇದನಿವೃತ್ಯರ್ಥಮೇವಶಬ್ದೋ೭ವಧಾರಕಃ । ಸಮಾಧಿಕನಿವೃತ್ತ್ಯರ್ಥಮದ್ವಿತೀಯ-ಪದಂ ತಥಾ ॥

ಭೇದಾಭೇದೇ೭ಪ್ಯೇಕಶಬ್ದೋ ಯತೋ೭ವಯವಿನಿಷ್ಠಿತಃ । ಏಕಮೇವೇತ್ಯತಃ ಪ್ರಾಹ ನಾರಾಯಣಮಿಯಂ ಶ್ರುತಿಃ । ಸಮೋ ದ್ವಿತೀಯಶಬ್ದಃ ಸ್ಯಾದದ್ವಿತೀಯೋ೭ಸಮತ್ವತಃ । ಸಾಧಿಕಃ ಕುತ ಏವ ಸ್ಯಾದಿತ್ಯಾಹ ಪರಮಾ ಶ್ರುತಿಃ । ಇತಿ ಸಾಮಸಂಹಿತಾಯಾಮ್॥

'ಏಕಮೇವಾದ್ವಿತೀಯಂ' ಎಂಬ ವಾಕ್ಯದಲ್ಲಿರುವ 'ಏಕಮೇವ' ಎಂಬ ಪದದಿಂದ ಪರಮಾತ್ಮನು ತನ್ನ ಅವಯವ ಗುಣ ಕರ್ಮಗಳಿಂದ ಭೇದರಹಿತನೆಂದೂ, ಅದ್ವಿತೀಯ ಎಂಬ ಶಬ್ದದಿಂದ ತನಗೆ ಸಮಾನವಾದ ಎರಡನೆಯ ವಸ್ತು ಇಲ್ಲದವನೆಂದೂ ಹೇಳಲ್ಪಡುತ್ತಿದ್ದಾನೆ.

ಪ್ರವೃತ್ತ ಎಂಬ ಗ್ರಂಥದಲ್ಲಿ 'ತನ್ನಲ್ಲಿರುವ ಗುಣಾದಿಗಳಿಂದ ಭೇದ ಇಲ್ಲದೇ ಇರುವುದರಿಂದ ಶಾಶ್ವತನಾದ ಪರಮಾತ್ಮನು ಏಕಮೇವ ಎಂದೂ, ತನ್ನ ಸಮಾನರು ಹಾಗೂ ತನಗಿಂತ ಉತ್ತಮರು ಇಲ್ಲದಿರುವುದರಿಂದ ಅದ್ವಿತೀಯ ಎಂದೂ ನಿರೂಪಿತನಾಗಿದ್ದಾನೆ' ಎಂದು ವಿವರಣೆ ಇದೆ.

ಪರಮಾತ್ಮ ಮತ್ತು ಅವನ ಅವಯವಾದಿಗಳಿಗೆ ಭೇದಾಭೇದವು ಇಲ್ಲ. ಅತ್ಯಂತ ಅಭೇದವೇ ಇದೆ ಎಂಬ ಅಭಿಪ್ರಾಯದಿಂದ ಏಕಮೇವ ಎಂಬಲ್ಲಿ ಅವಧಾರಣಾರ್ಥದಲ್ಲಿ ಏವ ಶಬ್ದ ಪ್ರಯೋಗ. ಅವನಿಗೆ ಸಮನೂ, ಅವನಿಗಿಂತ ಅಧಿಕನೂ ಇಲ್ಲ ಎಂಬ ಅಭಿಪ್ರಾಯದಿಂದ ಅದ್ವಿತೀಯ ಎಂಬ ಪದವೂ ಪ್ರಯೋಗಿಸಲ್ಪಟ್ಟಿದೆ. ತನ್ನ ಅವಯವಗಳಾದ ನೂಲುಗಳಿಂದ ಭೇದಾಭೇದ ಉಳ್ಳ ಪಟವನ್ನೂ ಏಕಃ ಪಟಃ ಎಂದು ವ್ಯವಹರಿಸುವ ರೂಢಿ ಇದೆ. ಆದ್ದರಿಂದ ಏಕಶಬ್ದ ಅಭೇದವನ್ನು ಹೇಳುತ್ತದೆ ಹೊರತು ಭೇದನಿಷೇಧ ಮಾಡಲಾರದು. ಪ್ರಕೃತ ಪರಮಾತ್ಮನ ವಿಷಯದಲ್ಲಿ ಏಕಂ ಎಂದಿಷ್ಟೇ ಹೇಳುತ್ತಿದ್ದರೆ, ಅವನಿಗೂ ತನ್ನ ಅವಯವಗಳಿಂದ ಭೇದಾಭೇದವೇನೋ ಎಂದು ಸಂಶಯ ಬಂದೀತು. ಹಾಗಾಗದಿರಲಿ ಎಂದು ಅಭೇದ ಒಂದೇ ಇದೆ. ಭೇದವಿಲ್ಲ ಎಂದು ಭೇದ ನಿಷೇಧ ಮಾಡುವುದಕ್ಕಾಗಿ ಉಪನಿಷತ್ತು ಪರಮಾತ್ಮನನ್ನು ಏಕಂ ಎಂದಷ್ಟೇ ಅನ್ನದೆ, ಏಕಮೇವ ಅನ್ನುತ್ತಿದೆ. ಸಮನಾದ ಎರಡನೆಯ ವಸ್ತುವನ್ನೇ 'ಅಸ್ಯಗೋಃ

ದ್ವಿತೀಯಃ ಅನ್ವೇಷ್ಟವ್ಯಃ ' ಎಂಬಿತ್ಯಾದಿ ಪ್ರಯೋಗಗಳಲ್ಲಿ ದ್ವಿತೀಯ ಶಬ್ದದಿಂದ ಹೇಳುವುದು ಕಂಡಿದೆ. ಆದುದರಿಂದ ಪರಮಾತ್ಮನನ್ನು ಉಪನಿಷತ್ತು ಅದ್ವಿತೀಯಂ ಅನ್ನುವುದು. ತನಗೆ ಸಮವಾದ ಎರಡನೆ ವಸ್ತು ಇಲ್ಲದವನು ಎಂದಭಿಪ್ರಾಯದಿಂದಲೇ ಎಂಬುದು ಸಿದ್ಧವಾಗುತ್ತದೆ. ಸಮವಾದುದು ಇಲ್ಲವೆಂದ ಮೇಲೆ, ಅಧಿಕವಾದ ವಸ್ತು ಹೇಗೆ ತಾನೇ ಇದ್ದೀತು? ಹೀಗೆ ಅದ್ವಿತೀಯ ಶಬ್ದದಿಂದ ಸಮ ಹಾಗೂ ಅಧಿಕ ಇವುಗಳಿಂದ ರಹಿತನು ಎಂದು ಶ್ರುತಿಯು ತಿಳಿಸಿಕೊಡುತಿದೆ ಎಂದು ಸಾಮಸಂಹಿತಾದಲ್ಲಿದೆ.

ನ ಚ ವಿಜಾತೀಯ ಭೇದವರ್ಜನಂ ನಾಮ ಕುತ್ರಚಿತ್ ಪ್ರಸಿದ್ಧಮ್ । ತತ್ಪ್ರಮಾಣಾಭಾವಾಚ್ಚ।'ಏಕ ಏವಾದ್ವಿತೀಯೋ ಭಗವಾನ್ ತತ್ಸದೃಶಃಪರೋ ನಾಸ್ತಿ' ಇತಿ ಚ ಶ್ರುತಿಃ। ಏಕೋ ಭಗವಾನ್ ತತ್ಸದೃಶಪರೌ ನ ಸ್ತಃ। ಇತಿ ಚ ॥

ವಿಜಾತೀಯ ಭೇದರಾಹಿತ್ಯ ಎಂಬ ವಸ್ತುವೇ ಅಪ್ರಾಮಾಣಿಕವಾದ ಕಾರಣ ಅದನ್ನು ಅದ್ವಿತೀಯ ಶಬ್ದಕ್ಕೆ ಅರ್ಥವೆಂದು ಇಟ್ಟುಕೊಳ್ಳಲು ಬರುವುದಿಲ್ಲ. ಅದ್ವಿತೀಯ ಶಬ್ದದಿಂದ ಆ ಅರ್ಥ ಪ್ರತೀತಿ ಇಲ್ಲದಿರುವುದರಿಂದ ಆ ಶಬ್ದಕ್ಕೆ ಅದು ಅರ್ಥ ಎಂಬ ವಿಷಯದಲ್ಲಿ ಪ್ರಮಾಣವೂ ಇಲ್ಲ. 'ಪರಮಾತ್ಮನು ಒಬ್ಬನೇ ಅದ್ವಿತೀಯನು. ಅವನಿಗೆ ಸದೃಶವಾದ ಬೇರೆ ವಸ್ತುವಿಲ್ಲ' ಎಂದೂ ಪರಮಾತ್ಮ ಒಬ್ಬನೇ. ಅವನಿಗೆ ಸದೃಶವಾದುದೂ, ಅವನಿಗಿಂತ ಉತ್ತಮವಾದರೂ ಇಲ್ಲ ಎಂದೂ ಶ್ರುತಿಯು ಸಾರುತ್ತಿರುವುದರಿಂದ ಅದ್ವಿತೀಯ ಶಬ್ದಕ್ಕೆ ವಿಜಾತೀಯ ಭೇದರಹಿತ ಎಂದರ್ಥವಿಟ್ಟುಕೊಳ್ಳುವುದು ಉಚಿತವಲ್ಲ.

ವಿಜಾತೀಯಾಭಾವೇ 'ಯೇನಾಶ್ರುತಂ ಶ್ರುತಂ ಭವತಿ' ಇತ್ಯಾದಿ ವಿಶೇಷಣಂ ಚ ವ್ಯರ್ಥಂ। ಯಸ್ಯ ಕಸ್ಯಚಿತ್ ಜ್ಞಾನಂ ತಜ್ಜ್ಞಾನಮೇವ ಭವತೀತಿ। ಅಜ್ಞಾನಮಪಿ ಜ್ಞಾನಮೇವ ಭವತಿ। ಭೇದಾಭಾವಾತ್।

ಬ್ರಹ್ಮನಿಗಿಂತ ವಿಜಾತೀಯವಾದ ವಸ್ತುವೇ ಇಲ್ಲ. ಆದುದರಿಂದ ಬ್ರಹ್ಮನಲ್ಲಿ ವಿಜಾತೀಯ ಭೇದವಿಲ್ಲ ಎಂದು ಅಭಿಪ್ರಾಯವಾದರೆ, 'ಯೇನಾಶ್ರುತಂ ಶ್ರುತಂ ಭವತಿ' ಎಂಬಲ್ಲಿ 'ಅಶ್ರುತಂ' ಎಂದು ವಿಶೇಷಣವೇ ವ್ಯರ್ಥವಾದೀತು ವಿಜಾತೀಯವಿದೆ. ಆದರೆ ಅದರ ಭೇದ ಬ್ರಹ್ಮನಲ್ಲಿಲ್ಲ ಎಂದ ಅಭಿಪ್ರಾಯವಾದಲ್ಲಿ ವಿಜಾತೀಯವೆಲ್ಲವೂ ಬ್ರಹ್ಮಾಭಿನ್ನವೆಂದಾಯಿತು. ಯಾವುದೇ ಒಂದು ವಿಜಾತೀಯವಸ್ತುವನ್ನಿಟ್ಟುಕೊಂಡರೂ, ಅದು ಬ್ರಹ್ಮನೇ ಎಂದಂತಾಗಿ ಘಟಾದಿಗಳ ಜ್ಞಾನವು ಪರಬ್ರಹ್ಮಜ್ಞಾನವೇ ಎಂದಾದೀತು. ವಿಜಾತೀಯ ಭೇದವೇ ಇಲ್ಲ ಎಂಬುದು ಅದ್ವೀತೀಯಪದದ ಅರ್ಥವೆಂದಾದರೆ, ಜ್ಞಾನಾಜ್ಞಾನಗಳಿಗೆ, ಭೇದವಿಲ್ಲೆಂದಾದೀತು. ಆಗ ಅಜ್ಞಾನವೂ ಜ್ಞಾನವೆನಿಸೀತು.

ತತ್ತ್ವಪ್ರದೀಪ

ಶಬ್ದವಾಚ್ಯತ್ವಕ್ಕೆ ಸ್ವಾತಂತ್ರ್ಯವೇ ಲಿಂಗ

तत्वप्रदीपः – जीवमुख्यप्राणलिङ्गादिति चेत्तद्व्याख्यात् । तदधीनत्वाद-व्यक्तादीनामव्यक्तत्वादेः स्वभावस्याव्यक्तादिशब्दवाच्यत्वं मुख्यतस्तस्यैव विष्णोरित्युक्तम् । एवं च तत्तत्स्वातन्त्र्यं तत् शब्दवाच्यत्वे लिङ्गं भवति । तल्लिङ्गं जीवमुख्यप्राणयोरस्ति । "अथ यां जीवो जहाति सा शुष्यति", "वायुना हि" इत्यादि श्रुतिभ्य इति चेन्न । तल्लिङ्गस्य तद्भगवदधीनत्वेन व्याख्यातत्वात् ।।೫।।

'ಜೀವಮುಖ್ಯಪ್ರಾಣಲಿಂಗಾತ್ ಇತಿ ಚೇತ್ ತದ್ವ್ಯಾಖ್ಯಾತಂ' ಎಂಬ ಸೂತ್ರದ ಅರ್ಥ ಹೀಗಿದೆ - 'ತದಧೀನತ್ವಾದರ್ಥವತ್' ಎಂಬ ಸೂತ್ರದಲ್ಲಿ ಹೇಳಿದಂತೆ ಅವ್ಯಕ್ತಾದಿ ಶಬ್ದಗಳ ಪ್ರವೃತ್ತಿನಿಮಿತ್ತವೆನಿಸಿದ ಅವ್ಯಕ್ತತ್ವಾದಿಗಳು ಯಾವ ಪದಾರ್ಥದಲ್ಲಿ ಇರುತ್ತದೋ, ಅದೇ ಆ ಶಬ್ದದಿಂದ ಮುಖ್ಯವಾಗಿ ಪ್ರತಿಪಾದ್ಯವಾಗುತ್ತದೆ. ಈ ಪ್ರವೃತ್ತಿನಿಮಿತ್ತವು ಮುಖ್ಯವಾಗಿ ವಿಷ್ಣುವಿನಲ್ಲೇ ಇರುತ್ತದೆ. ಆದ್ದರಿಂದ ತತ್‌ಸ್ವಾತಂತ್ರ್ಯವು ಆ ಶಬ್ದದ ಪ್ರವೃತ್ತಿನಿಮಿತ್ತ ಎನಿಸುತ್ತದೆ. ಎಲ್ಲಿ ಪ್ರವೃತ್ತಿನಿಮಿತ್ತದ ಸ್ವಾತಂತ್ರ್ಯವು ಮುಖ್ಯವಾಗಿರುತ್ತದೋ, ಅಲ್ಲಿಯೇ ಆ ಶಬ್ದವು ಮುಖ್ಯಾರ್ಥವುಳ್ಳದ್ದಾಗುತ್ತದೆ. ಆದ್ದರಿಂದ ತತ್‌ಶಬ್ದವಾಚ್ಯತ್ವದಲ್ಲಿ ತತ್‌ಸ್ವಾತಂತ್ರ್ಯವು ಲಿಂಗವಾಯಿತು.

ಈ ತದಧೀನತ್ವವು ಜೀವ ಹಾಗೂ ಮುಖ್ಯಪ್ರಾಣರ ಲಿಂಗವಾಗಿದೆ. ಏಕೆಂದರೆ 'ಅಸ್ಯ ಯದೇಕಾಂ' ಎಂಬ ಛಾಂದೋಗ್ಯಶ್ರುತಿಯು ವೃಕ್ಷಾದಿಗಳೆಲ್ಲವೂ ಜೀವನ ಅಧೀನ ಎನ್ನುತ್ತಿದೆ. 'ವಾಯುನಾ ಹ' ಎಂಬ ಶ್ರುತಿಯು ಮುಖ್ಯಪ್ರಾಣನ ಅಧೀನವೆನ್ನುತ್ತಿದೆ. ಆದ್ದರಿಂದ ತದಧೀನತ್ವ ಎಂಬ ಪ್ರವೃತ್ತಿನಿಮಿತ್ತವು ಜೀವ ಹಾಗೂ ಮುಖ್ಯಪ್ರಾಣರಲ್ಲೂ ಕೂಡ ಬರುವುದರಿಂದ ಇವರೂ ಕೂಡ ತತ್ ಶಬ್ದವಾಚ್ಯರಾಗಬೇಕು.

ಈ ಆಕ್ಷೇಪ ತಪ್ಪು. ಜೀವ ಹಾಗೂ ಮುಖ್ಯಪ್ರಾಣರಲ್ಲಿರುವ ಲಿಂಗವು ಭಗವದಧೀನವೇ ಆಗಿದೆ ಎಂಬುದನ್ನು 'ಉಪಾಸಾತ್ತ್ರೈವಿಧ್ಯಾತ್' ಎಂಬಲ್ಲಿ ಹಿಂದೆ ವಿವರಿಸಲಾಗಿದೆ.

ವಿವರಣೆ - ತದಧೀನತ್ವವನ್ನು ಅಥವಾ ಸ್ವಾತಂತ್ರ್ಯವನ್ನು ಶಬ್ದವಾಚ್ಯತ್ವಕ್ಕೆ ಕಾರಣವೆಂದು ಹೇಳಿದರೆ ಜೀವ ಹಾಗೂ ಮುಖ್ಯಪ್ರಾಣರೂ ಕೂಡ ಸರ್ವಶಬ್ದವಾಚ್ಯರಾಗಬೇಕಾಗುತ್ತದೆ. ಗಿಡ-ಮರ ಮೊದಲಾದ ಸಸ್ಯಗಳಿಗೆ ಜೀವನೇ ನಿಯಾಮಕನಾಗಿರುವುದು ಶ್ರುತಿಸಿದ್ಧವಾಗಿದೆ. ಏಕೆಂದರೆ 'ಅಥ ಯಾಂ ಜೀವೋ ಜಹಾತಿ ಸಾ ಶುಷ್ಯತಿ' ಜೀವನು ಯಾವ ಮರವನ್ನು, ಅಥವಾ ಗಿಡವನ್ನು ತ್ಯಜಿಸುತ್ತಾನೋ, ಅದು ಒಣಗುತ್ತದೆ. ಈ ವಾಕ್ಯದಿಂದ ಜೀವನೇ ಗಿಡಮರಗಳಲ್ಲಿದ್ದು ಸ್ವತಂತ್ರನಾಗಿದ್ದಾನೆಂದು ತಿಳಿಯುತ್ತದೆ. ಮತ್ತು 'ವಾಯುನಾ ಹಿ ಸರ್ವೇ ಲೋಕಾ ನೇನೀಯಂತೇ' ಎಂಬ ಶ್ರುತಿಯು ಮುಖ್ಯಪ್ರಾಣನಿಂದಲೇ ಈ ಲೋಕವು ನಡೆಯುತ್ತಿದೆ ಸಕಲವೂ ವಾಯುವಿನ ಅಧೀನ ಎನ್ನುತ್ತಿದೆ. ಆದ್ದರಿಂದ ತತ್ ಸ್ವಾತಂತ್ರ್ಯವನ್ನು ಶಬ್ದವಾಚ್ಯಕತ್ವಕ್ಕೆ ನಿಮಿತ್ತ ಎಂದು ಹೇಗೆ ಹೇಳುವಿರಿ ? ಇಷ್ಟು ಆಕ್ಷೇಪ.

'ಜೀವೋ ಜಹಾತಿ' ಎಂಬಲ್ಲಿರುವ ಜೀವ ಶಬ್ದಕ್ಕೆ ಅನಿರುದ್ಧರೂಪಿಯಾದ ಪರಮಾತ್ಮ ಎಂದೇ ಅರ್ಥ. ಈ ಅನಿರುದ್ಧನ ಅಧೀನವಾಗಿ ಜೀವಾತ್ಮನು ಗಿಡಮರಗಳಲ್ಲಿ ನೆಲೆಸಿದ್ದಾನೆಂದು ತಿಳಿಯಬೇಕು. ಅದರಂತೆ ವಾಯುವಿನಲ್ಲಿ ಅಂತರ್ಯಾಮಿಯಾದ ಭಗವಂತನು ಅವನ ಮೂಲಕ ಜಗದ್ವ್ಯಾಪಾರವನ್ನು ಮಾಡಿಸುತ್ತಾನೆಂದು ತಿಳಿಯಬೇಕು. ಹೀಗೆ ಜೀವ ಮತ್ತು ಮುಖ್ಯಪ್ರಾಣರ ಲಿಂಗಗಳು ಭಗವದಧೀನವಾಗಿರುವುದರಿಂದ ಮುಖ್ಯವಾದ ಸ್ವಾತಂತ್ರ್ಯವು ವಿಷ್ಣುವಿನಲ್ಲೇ ಬರುತ್ತದೆ. ಜೀವ ಹಾಗೂ ಮುಖ್ಯಪ್ರಾಣರಲ್ಲಿ ಬರುವುದಿಲ್ಲ.

ತತ್ತ್ವಪ್ರಕಾಶಿಕಾ

ಸೂತ್ರದ ಆಕ್ಷೇಪ ಭಾಗಕ್ಕೆ ವ್ಯಾಖ್ಯಾನ

विष्णोरेव मुख्यतः शब्दार्थत्वमाक्षिप्य, समाधत् सूत्रमुपन्यस्य आक्षेपांशं तावद् व्याचष्टे – जीवेति ।।

'ವಿಷ್ಣುವೇ ಸಕಲಶಬ್ದಗಳ ಮುಖ್ಯಾರ್ಥನು' ಎಂಬುದನ್ನು ಇಲ್ಲಿಯತನಕ ಸಮರ್ಥಿಸಿದ್ದಾಯಿತು. ಈ ವಿಷಯವನ್ನು ಆಕ್ಷೇಪ ಮಾಡಿ, ಸಮಾಧಾನ ಹೇಳುವ ಸೂತ್ರವನ್ನು ಹೇಳಿ, ಮೊದಲು ಆಕ್ಷೇಪಭಾಗವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ 'ಜೀವ' ಇತ್ಯಾದಿ ಭಾಷ್ಯದಿಂದ.

ಸಕಲಶಬ್ದ ಮುಖ್ಯಾರ್ಥ ವಿಷ್ಣುವಲ್ಲ

तत्वप्रकाशिका – 'यदुक्तं विष्णोरेव सर्वशब्दमुख्यार्थत्वम्' इति तदयुक्तम्। सर्वपदार्थानां परमात्माधीनत्वादेव हि सर्वशब्दमुख्यार्थत्वं तस्योक्तं ।

ವಿಷ್ಣುವೇ ಸಕಲಶಬ್ದಗಳ ಮುಖ್ಯಾರ್ಥನೆಂದು ಹೇಳಿದ್ದು ಸರಿಯಲ್ಲ. ಸಕಲಶಬ್ದಗಳು ಪರಮಾತ್ಮಾಧೀನವಾಗಿರುವುದರಿಂದ ಸಕಲಶಬ್ದಗಳ ಮುಖ್ಯಾರ್ಥನು ಪರಮಾತ್ಮನೇ ಆಗಿದ್ದಾನೆಂದು ಹೇಳಿರುವಿರಿ.

ಜೀವ ಹಾಗೂ ಮುಖ್ಯಪ್ರಾಣರೂ ಕೂಡ ಸಕಲಶಬ್ದವಾಚ್ಯರು

तत्वप्रकाशिका – तच्च सर्वस्य तदधीनत्वाख्यं लिङ्गं जीवमुख्यप्राणयोरप्यस्ति। 'अस्य यदैकां शाखाम्' इति श्रुतौ वृक्षादीनां जीवाधीनत्वावगमात् । 'वायुना' इति श्रुतौ च सर्वस्य मुख्यप्राणाधीनत्वावगतेः, अतस्तयोरपि मुख्यवाच्यत्वम् ।

ಈ ತದಧೀನತ್ವಲಿಂಗವು ಜೀವ ಹಾಗೂ ಮುಖ್ಯಪ್ರಾಣನಲ್ಲಿಯೂ ಕೂಡ ಇರುತ್ತದೆ. 'ಅಸ್ಯ ಯದೇಕಾಂ ಶಾಖಾಮ್' ಎಂಬ ಶ್ರುತಿಯಲ್ಲಿ ವೃಕ್ಷಾದಿಗಳೆಲ್ಲವೂ ಜೀವನ ಅಧೀನವಾಗಿವೆಯೆಂದು ಹೇಳಲಾಗಿದೆ. 'ವಾಯುನಾ' ಇತ್ಯಾದಿ ಶ್ರುತಿಯಲ್ಲಿ ಸಕಲವೂ ಕೂಡ ಮುಖ್ಯಪ್ರಾಣದೇವರ ಅಧೀನವೆಂದು ಹೇಳಲಾಗಿದೆ. ಆದ್ದರಿಂದ ತದಧೀನತ್ವವು ವಿಷ್ಣುವಿನಲ್ಲಿ ಬಂದಂತೆ ಜೀವ ಹಾಗೂ ಮುಖ್ಯಪ್ರಾಣನಲ್ಲಿಯೂ ಬರುತ್ತದೆ. ಆದ್ದರಿಂದ ಇವರೂ ಕೂಡ ಸಕಲಶಬ್ದದಿಂದ ಮುಖ್ಯವಾಗಿಯೇ ಪ್ರತಿಪಾದ್ಯರಾಗಬೇಕಾದೀತು.

ನಿಮಿತ್ತವಿದ್ದರೆ ನೈಮಿತ್ತಿಕವ್ಯವಹಾರವೂ ಬರುತ್ತದೆ

तत्वप्रकाशिका – न च वक्तव्यं 'प्रयोगे सत्येव निमित्तानुसरणं, न तु निमित्तमात्रेण वाच्यत्वकल्पनम्' इति । निमित्तसद्भावेन व्यवहारापादनस्यैव न्यायत्वेन वाच्यत्वकल्पने बाधकाभावादिति भावः ।

ಪ್ರಯೋಗವಿದ್ದರೆ ನಿಮಿತ್ತವನ್ನು ಹುಡುಕಬೇಕು. ನಿಮಿತ್ತವಿದ್ದ ಮಾತ್ರಕ್ಕೆ ವಾಚ್ಯತ್ವವನ್ನು ಒಪ್ಪಬೇಕಾಗಿಲ್ಲ. ಆದ್ದರಿಂದ ಲೋಕದಲ್ಲಿ ಪ್ರಯೋಗವಿರುವುದರಿಂದ ಅದಕ್ಕನುಸಾರಿಯಾಗಿ ನಿಮಿತ್ತವನ್ನು ಹುಡುಕಬೇಕು. ಪರಮಾತ್ಮನಲ್ಲಿ ನಿಮಿತ್ತವಿದೆ ಎಂಬ ಮಾತ್ರಕ್ಕೆ ಶಬ್ದವಾಚ್ಯತ್ವವನ್ನು ಕಲ್ಪಿಸುವುದು ತಪ್ಪಲ್ಲವೇ?

ಏಕೆಂದರೆ ನಿಮಿತ್ತವಿದ್ದರೆ ನೈಮಿತ್ತಿಕವಾದ ವ್ಯವಹಾರವನ್ನು ಆಪಾದನೆ ಮಾಡುವುದು ನ್ಯಾಯವೇ ಆಗಿದೆ. ಆದ್ದರಿಂದ ವಾಯು ಹಾಗೂ ಜೀವರು ಸಕಲಶಬ್ದವಾಚ್ಯರೆಂದು ಹೇಳಿದರೆ ಯಾವ ಬಾಧಕವೂ ಇಲ್ಲ. ಇಷ್ಟು ಆಕ್ಷೇಪ.

ಸೂತ್ರದ ಪರಿಹಾರಭಾಗಕ್ಕೆ ವ್ಯಾಖ್ಯಾನ

तत्वप्रकाशिका – परिहारांशं व्याचष्टे – नेति ।। न सर्वस्य जीवमुख्यप्राणाधीनत्वलिङ्गेन तयोर्मुख्यवाच्यत्वं कल्प्यम् । तल्लिङ्गाभिधायकश्रुतीनां तदन्तर्यामिभगवत् सम्बन्धितया व्याख्यातत्वात् ।

ಈ ಪ್ರಶ್ನೆಗೆ ಸೂತ್ರದಲ್ಲಿಯೇ ಉತ್ತರವನ್ನು ನೀಡಿದ್ದಾರೆ. ಉತ್ತರ ನೀಡುವ ಸೂತ್ರಾಂಶವನ್ನು ಭಾಷ್ಯದಲ್ಲಿ 'ನ ಉಪಾಸಾತ್ರೈವಿಧ್ಯಾತ್' ಎಂಬುದರಿಂದ ವ್ಯಾಖ್ಯಾನ ಮಾಡಿದ್ದಾರೆ. ಸಕಲ ಪದಾರ್ಥಗಳು ಜೀವ ಹಾಗೂ ಮುಖ್ಯಪ್ರಾಣರ ಅಧೀನವಾಗಿದ್ದರಿಂದ ಅವರೂ ಕೂಡ ಮುಖ್ಯವಾಗಿ ಶಬ್ದಪ್ರತಿಪಾದ್ಯರಾಗುತ್ತಾರೆಂದು ಕಲ್ಪಿಸುವುದು ತಪ್ಪು. ಏಕೆಂದರೆ ಹಾಗೇ ಹೇಳುವ ಲಿಂಗ ಮತ್ತು ಶ್ರುತಿಗಳಿಗೆ ಅವರ ಅಂತರ್ಯಾಮಿಯಾದ ಭಗವಂತನ ಸಂಬಂಧವನ್ನು ತಿಳಿಯಬೇಕು.

ಜೀವ ಹಾಗೂ ಮುಖ್ಯಪ್ರಾಣರಲ್ಲಿರುವ ಸಾಮರ್ಥ್ಯ ಭಗವಂತನದ್ದೇ

तत्वप्रकाशिका – 'यद्यद् विभूतिमत् सत्त्वं श्रीमदूर्जितमेव वा । तत्तदेवावगच्छ त्वं मम तेजोऽशसम्भवम्' इत्यादेश्च । तथा च तल्लिङ्गवतोऽन्तर्यामिण एव मुख्यवाच्यत्वं भवेदिति भावः ।।३।।

ಗೀತೆಯಲ್ಲಿ 'ಯದ್ಯದ್ವಿಭೂತಿಮತ್ ಸತ್ವಂ ಶ್ರೀಮದೂರ್ಜಿತಮೇವ ವಾ । ತತ್ತದೇವಾವಗಚ್ಛ ತ್ವಂ ಮಮ ತೇಜೋ೨ಂಶಸಂಭವಮ್' 'ಯಾವುದು ವಿಶೇಷಸಾಮರ್ಥ್ಯ ಹೊಂದಿದೆಯೋ,

ಶ್ರೇಷ್ಠವಾದ ಕಾಂತಿಯುಕ್ತವಾಗಿದೆಯೋ, ಅಭಿವೃದ್ಧವಾಗಿದೆಯೋ, ಅದೆಲ್ಲವೂ ನನ್ನ ತೇಜೋರೂಪವಾದ ಅಂಶದಿಂದ ಯುಕ್ತವಾಗಿದೆ' ಎಂದು ಹೇಳಲಾಗಿದೆ. ಆದ್ದರಿಂದ ಜೀವನಲ್ಲಿ ಹಾಗೂ ವಾಯುವಿನಲ್ಲಿ ಹೇಳಲ್ಪಟ್ಟ ಸಾಮರ್ಥ್ಯವು ಅಂತರ್ಯಾಮಿಯಾದ ಭಗವಂತನ ವಿವಕ್ಷೆಯಿಂದ ಹೊರತು, ಜೀವ ಹಾಗೂ ಮುಖ್ಯಪ್ರಾಣರು ಮುಖ್ಯವಾಗಿ ಪ್ರತಿಪಾದ್ಯ-ರಾಗಿದ್ದಾರೆಂಬ ಕಾರಣದಿಂದಲ್ಲ.

ಭಾವದೀಪ

ಪೂರ್ವಪಕ್ಷದ ಫಲ

आक्षेपस्य फलं दर्शयन् भाष्यं व्याचष्टे – यदुक्तमिति ।।

ಪೂರ್ವಪಕ್ಷದ ಫಲವನ್ನು ತೋರಿಸುತ್ತಾ ಭಾಷ್ಯವನ್ನು ವ್ಯಾಖ್ಯಾನ ಮಾಡಲು 'ಯದುಕ್ತಮ್' ಇತ್ಯಾದಿ ಟೀಕಾವಾಕ್ಯವು ಹೊರಟಿದೆ.

ಅನುವ್ಯಾಖ್ಯಾನದಲ್ಲಿ ವಿವಕ್ಷಿಸಿದ ಪ್ರವೃತ್ತಿನಿಮಿತ್ತ

भावदीपः – परमात्माधीनत्वादेवेति।। यद्यपि तद्गतत्वादपि मुख्यार्थत्वमुक्तम्। तथापि ''स्वातन्त्र्यं तद्गतत्वं च शब्दवृत्तेर्हि कारणम्। स्वातन्त्र्यं तत्र मुख्यं स्यात्'' इत्यनुभाष्योक्तमुख्यत्वमुपेत्याऽवधारण प्रयोगः।

ಟೀಕೆಯಲ್ಲಿ 'ಪರಮಾತ್ಮಾಧೀನತ್ವಾದೇವ' ಎಂಬುದಾಗಿ ಏವಕಾರವನ್ನು ಪ್ರಯೋಗಿಸಿದ್ದಾರೆ. ವಸ್ತುತಃ ತದ್ಗತತ್ವದಿಂದಲೂ ಕೂಡ ಮುಖ್ಯಾರ್ಥತ್ವವನ್ನು ಪರಮಾತ್ಮನಲ್ಲಿ ಹೇಳಬಹುದು. ಆದರೂ ಅನುವ್ಯಾಖ್ಯಾನದಲ್ಲಿ ''ಸ್ವಾತಂತ್ರ್ಯಂ ತದ್ಗತತ್ವಂ ಚ ಶಬ್ದವೃತ್ತೇರ್ಹಿ ಕಾರಣಮ್ । ಸ್ವಾತಂತ್ರ್ಯಂ ತತ್ರ ಮುಖ್ಯಂ ಸ್ಯಾತ್'' ಎಂಬುದಾಗಿ ಸ್ವಾತಂತ್ರ್ಯವನ್ನೇ ಮುಖ್ಯವಾದ ಪ್ರವೃತ್ತಿನಿಮಿತ್ತವಾಗಿ ಪರಿಗಣಿಸಿದ್ದಾರೆ. ಈ ವಿವಕ್ಷೆಯಿಂದ ಟೀಕೆಯಲ್ಲಿ ಏವಕಾರವನ್ನು ಪ್ರಯೋಗಿಸಿದ್ದಾರೆ.

'ತಜ್ಜೀವ' ಇತ್ಯಾದಿ ವಾಕ್ಯಕ್ಕೆ ವ್ಯಾಖ್ಯಾನ

ಭಾವದೀಪಃ – ತಜ್ಜೀವೇತ್ಯಾದಿ ವ್ಯಾಚಷ್ಟೇ – ತಚ್ಚೇತ್ಯಾದಿನಾ ।। ಲಿಙ್ಗಂ ಪ್ರವೃತ್ತಿ-ನಿಮಿತ್ತಮಿತ್ಯರ್ಥಃ ।

'ತಜ್ಜೀವ' ಇತ್ಯಾದಿ ಭಾಷ್ಯವನ್ನು 'ತಚ್ಚ' ಇತ್ಯಾದಿ ಟೀಕಾವಾಕ್ಯದಿಂದ ವ್ಯಾಖ್ಯಾನ ಮಾಡಿದ್ದಾರೆ. 'ಲಿಂಗಂ' ಎಂಬ ಪದಕ್ಕೆ 'ಪ್ರವೃತ್ತಿನಿಮಿತ್ತವು' ಎಂದರ್ಥ.

ಸರ್ವಪದಕ್ಕೆ ವ್ಯಾಖ್ಯಾನ

ಭಾವದೀಪಃ – ಸರ್ವಸ್ಯ ತದಧೀನತ್ವಾಖ್ಯಮಿತ್ಯತ್ರ ಪ್ರಯುಕ್ತಸರ್ವಪದಂ ಜೀವೇ ಸಮ್ಭಾವಿತಸರ್ವಪರಮ್ । ವಾಯೌ ತ್ವಸಙ್ಕುಚಿತಸರ್ವಪರಮಿತಿ ಭಾವೇನ ವ್ಯನಕ್ತಿ – ವೃಕ್ಷಾದೀನಾಮಿತಿ । ಸರ್ವಸ್ಯೇತಿ ಚ ।। ಅತ ಇತಿ ।। ಸ್ವಾತನ್ತ್ರ್ಯರೂಪನಿಮಿತ್ತ-ಸದ್ಭಾವಾದಿತ್ಯರ್ಥಃ ।

'ಸರ್ವಸ್ಯ ತದಧೀನತ್ವಾಖ್ಯಮ್' ಎಂಬ ಟೀಕಾ ಮಾತಿನಲ್ಲಿರುವ 'ಸರ್ವಪದಕ್ಕೆ' ಜೀವವಿಷಯದಲ್ಲಿ ಸಂಭಾವಿತವಾದ ಸಕಲವನ್ನು ವಿವಕ್ಷಿಸಬೇಕು. ವಾಯುವಿನ ವಿಷಯದಲ್ಲಿ ಅಸಕುಂಚಿತವಾಗಿ ಸಕಲವನ್ನು ವಿವಕ್ಷಿಸಬೇಕು. ಈ ದೃಷ್ಟಿಯಿಂದ 'ವೃಕ್ಷಾದೀನಾಂ' ಇತ್ಯಾದಿ ಟೀಕಾವಾಕ್ಯವು ಹೊರಟಿವೆ. 'ಅತಃ' ಎಂಬ ಪದಕ್ಕೆ ಸ್ವಾತಂತ್ರ್ಯವೆಂಬ ಪ್ರವೃತ್ತಿನಿವೃತ್ತಿ ಇರುವುದರಿಂದ ಎಂದರ್ಥ.

ರಾಜಭೃತ್ಯರ ಉದಾಹರಣೆ

ಭಾವದೀಪಃ – ನನು ಭೃತ್ಯಬನ್ಧಾದಿಕಂ ರಾಜ್ಞಿ ರಾಜ್ಞೋ ಬನ್ಧಾದಿಯೋಗ್ಯತಃ । ಕಾರಣಂ ಸಂಶಯಸ್ಯ ಸ್ಯಾದಿತಿ ನೈವ ಪ್ರಯುಜ್ಯತೇ । ಅಮಙ್ಗಲತ್ವಾಚ್ಛಬ್ದಾನಾಂ ರಾಜ್ಞೋ ಯೋಗಾದಮಙ್ಗಲೇ। ಅಪ್ರಿಯತ್ವಾತ್ತು ಶಬ್ದಸ್ಯ ಸ್ಯಾತ್ಪ್ರಯೋಗನಿವರ್ತನಮಿತ್ಯನುಭಾಷ್ಯೋಕ್ತದಿಶಾ ಸತ್ಯಪಿ ನಿಮಿತ್ತೇ ರಾಜ್ಞಿ ನಿಗಡಬದ್ಧಾದಿಪದಾವಾಚ್ಯತ್ವಮಿವ ಜೀವಾದಾವಪ್ಯಸ್ತು ಸರ್ವಶಬ್ದಮುಖ್ಯಾ ವಾಚ್ಯತ್ವಮಿತಿ ಭಾವೇನೋಕ್ತಹೇತೋರಪ್ರಯೋಜಕತ್ವಮಾಶಙ್ಕ್ಯ ಲಿಙ್ಗಪದಭಾವೋಕ್ತ್ಯಾ ನಿರಾಹ – ನ ಚ ವಕ್ತವ್ಯಮಿತಿ ।।

ಪ್ರಶ್ನೆ -

ಭೃತ್ಯಬಂಧಾದಿಕಂ ರಾಜ್ಞಿ ರಾಜ್ಞೋ ಬಂಧಾದಿಯೋಗ್ಯತಃ।
ಕಾರಣಂ ಸಂಶಯಸ್ಯ ಸ್ಯಾದಿತಿ ನೈವ ಪ್ರಯುಜ್ಯತೇ।
ಅಮಂಗಲತ್ವಾಚ್ಛಬ್ದಾನಾಂ ರಾಜ್ಞೋ ಯೋಗಾದಮಂಗಲೇ।
ಅಪ್ರಿಯತ್ವಾತ್ತು ಶಬ್ದಸ್ಯ ಸ್ಯಾತ್ಪ್ರಯೋಗನಿವರ್ತನಮ್।

''ಭೃತ್ಯನು ಬಂಧಿತನಾದರೆ ರಾಜನಲ್ಲಿ 'ಬದ್ಧಃ' ಎಂಬ ಪ್ರಯೋಗವನ್ನು ಮಾಡಬಾರದು. ಏಕೆಂದರೆ ಬಂಧನ ಯೋಗ್ಯತ್ವವು ರಾಜನಲ್ಲಿ ಇರುವದರಿಂದ ಸಂಶಯಕ್ಕೆ ಆಸ್ಪದವಿದೆ. ರಾಜನಲ್ಲಿ ಅಮಂಗಲದ ಯೋಗವಿರುವುದರಿಂದ ಅಮಂಗಳಶಬ್ದವನ್ನು ಪ್ರಯೋಗ ಮಾಡಬಾರದು. ಹಾಗೆ ಪ್ರಯೋಗ ಮಾಡುವುದು ರಾಜನಿಗೆ ಅಪ್ರಿಯವಾಗುತ್ತದೆ'' ಹೀಗೆ ಅಣುಭಾಷ್ಯದಲ್ಲಿ ಹೇಳಿದ ಪ್ರಕಾರ ಪ್ರವೃತ್ತಿನಿಮಿತ್ತವಿದ್ದರೂ ರಾಜನಲ್ಲಿ ಬದ್ಧಾದಿಶಬ್ದವಾಚ್ಯತ್ವವು ಇರುವುದಿಲ್ಲ. ಅದರಂತೆ ಜೀವನಲ್ಲಿಯೂ ಕೂಡ ಪ್ರವೃತ್ತಿನಿಮಿತ್ತವಿದ್ದರೂ ಸರ್ವಶಬ್ದ ಮುಖ್ಯವಾಚತ್ವವನ್ನು ಏಕೆ ಒಪ್ಪಬೇಕು? ಈ ಅಭಿಪ್ರಾಯದಿಂದ ಹಿಂದೆ ಆಕ್ಷೇಪ ಮಾಡಿದ ಹೇತುವಿಗೆ ಅಪ್ರಯೋಜಕತ್ವವನ್ನು ಆಕ್ಷೇಪಿಸಿ ಸೂತ್ರದಲ್ಲಿರುವ ಲಿಂಗಪದದ ಅಭಿಪ್ರಾಯವನ್ನು ಹೇಳುವ ಮೂಲಕ ನಿರಾಕರಣೆ ಮಾಡಲು 'ನಚ ವಕ್ತವ್ಯಮ್' ಇತ್ಯಾದಿ ಟೀಕಾವಾಕ್ಯವು ಹೊರಟಿದೆ.

ರಾಜನಲ್ಲಿ ವ್ಯಭಿಚಾರ

भावदीपः – न त्विति ।। बद्धादिपदानां राज्ञि व्यभिचारादिति भावः ।

ಬದ್ಧಾದಿಶಬ್ದಗಳ ಪ್ರವೃತ್ತಿನಿಮಿತ್ತಗಳು ರಾಜನಲ್ಲಿ ಇದ್ದರೂ ಬದ್ಧಾದಿಶಬ್ದಗಳ ವಾಚಕತ್ವವು ಇರುವುದಿಲ್ಲ. ಆದ್ದರಿಂದ ವ್ಯಭಿಚಾರ ಬರುತ್ತದೆಂಬುದು 'ನತು' ಎಂಬ ವಾಕ್ಯದ ಅಭಿಪ್ರಾಯ.

ವ್ಯವಹಾರಕ್ಕೆ ಪ್ರವೃತ್ತಿನಿಮಿತ್ತವೇ ಕಾರಣ

भावदीपः – न्यायत्वेनेति ।। मुख्यप्रयोगे तु निमित्तमेव सामग्रीत्यानुमानिक नयसुधोक्त्या तस्य व्यवहारेषु पुष्कलकारणत्वादिति भावः ।। बाधकेति ।।

'ನ್ಯಾಯತ್ವೇನ' ಎಂಬ ಪದದ ಅಭಿಪ್ರಾಯ ಹೀಗಿದೆ - ಮುಖ್ಯವಾದ ಶಬ್ದಪ್ರಯೋಗಕ್ಕೆ ಪ್ರವೃತ್ತಿನಿಮಿತ್ತವೇ ಸಾಮಗ್ರಿ ಎಂಬುದಾಗಿ ಅನುಮಾನಿಕಾಧಿರಣದ ನ್ಯಾಯಸುಧೆಯಲ್ಲಿ ಹೇಳಿರುತ್ತಾರೆ. ಆದ್ದರಿಂದ ವ್ಯವಹಾರದಲ್ಲಿ ಪ್ರವೃತ್ತಿನಿಮಿತ್ತವೇ ಮುಖ್ಯವಾದ ಕಾರಣವಾಗಿದೆ.

ತದಧೀನತ್ವವು ಹೇಗೆ ಪ್ರವೃತ್ತಿನಿಮಿತ್ತವಾಗುತ್ತದೆ ?

भावदीपः – उत्सर्गतः प्राप्तस्य बाधकैकापोद्यत्वादिह चामङ्गलत्वादिरूपस्य वाच्यत्वकल्पनबाधकस्याभावात् स्यादेव वाच्यत्वे तदधीनत्वहेतुः प्रयोजक इत्यर्थः ।

'ಬಾಧಕಾಭಾವಾತ್' ಎಂಬ ಟೀಕಾವಾಕ್ಯದ ಅಭಿಪ್ರಾಯ ಹೀಗಿದೆ - 'ಉತ್ಸರ್ಗತಃ' ಪ್ರಾಪ್ತವಾದದ್ದು ಬಾಧಕದಿಂದಷ್ಟೇ ನಿರಾಕರಿಸಲು ಅರ್ಹವಾಗುತ್ತದೆ. ಪ್ರಕೃತ ವಾಚ್ಯತ್ವಕ್ಕೆ ಕಲ್ಪಕವಾದ ಅಮಂಗಲತ್ವಾದಿ ಬಾಧಕಗಳು ಇಲ್ಲದ ಕಾರಣ 'ತದಧೀನತ್ವ' ಎಂಬ ಹೇತು ವಾಚಕತ್ವದ ವಿಷಯದಲ್ಲಿ ಪ್ರಯೋಜಕವಾಗುತ್ತದೆ ಎಂದು.

ಪ್ರಯೋಗವಿದ್ದರೆ ನಿಮಿತ್ತ ಹುಡುಕಬೇಕು

भावदीपः – प्रयोगे सतीति न्यायस्तु अमुख्यविषयः । तथैवानुमानिकनय सुधोक्तेरिति भावः ।

'ಪ್ರಯೋಗವಿದ್ದರೆ ಅದಕ್ಕೆ ಅನುಗುಣವಾಗಿ ನಿಮಿತ್ತವನ್ನು ಹುಡುಕಬೇಕು. ನಿಮಿತ್ತವಿದೆ ಎಂಬ ಮಾತ್ರಕ್ಕೆ ಪ್ರಯೋಗವನ್ನು ಕಲ್ಪಿಸಬಾರದು' ಎಂಬ ನ್ಯಾಯವನ್ನು ಅಮುಖ್ಯ ವಿಷಯದಲ್ಲಿ ಮಾತ್ರ ವಿವಕ್ಷಿಸಬೇಕು. ಅನುಮಾನಿಕಾಧಿಕರಣದ ನ್ಯಾಯಸುಧೆಯಲ್ಲಿ ಹಾಗೆ ಪ್ರತಿಪಾದನೆ ಮಾಡಿರುತ್ತಾರೆ.

ಜೀವ ಶಬ್ದವು ಶ್ರೀಹರಿಯನ್ನೇ ಪ್ರತಿಪಾದಿಸುತ್ತದೆ

भावदीपः – यद्यपि जीवशब्दस्यानुमानिकसूत्रे श्रौतस्मार्तप्रयोगेण प्राणधारकत्वरूपप्रवृत्तिनिमित्तेन च हरौ मुख्यत्वमुक्तम् । वायुशब्दस्यान्तर्नयन्यायेन वैष्णवत्वं सिद्धम् ।

ಪ್ರಶ್ನೆ - ಜೀವಶಬ್ದವು ಶೌತಪ್ರಯೋಗ ಹಾಗೂ ಸ್ಮಾರ್ತಪ್ರಯೋಗಕ್ಕೆ ಅನುಸಾರಿಯಾಗಿ ಶ್ರೀಹರಿಯನ್ನೇ ಮುಖ್ಯವಾಗಿ ಪ್ರತಿಪಾದನೆ ಮಾಡುತ್ತದೆ 'ಪ್ರಾಣಧಾರಕತ್ವ' ಎಂಬ ಪ್ರವೃತ್ತಿನಿಮಿತ್ತ ಶ್ರೀಹರಿಯಲ್ಲಿಯೇ

ಮುಖ್ಯವಾಗಿದೆ ಎಂದು ಆನುಮಾನಿಕಾಧಿಕರಣದ ಸೂತ್ರದಲ್ಲಿ ಪ್ರತಿಪಾದನೆ ಮಾಡಿದ್ದಾರೆ. ವಾಯುಶಬ್ದವೂ ಕೂಡ ಅಂತರಧಿಕರಣದ ನ್ಯಾಯದಿಂದ ವಿಷ್ಣುಪರವಾಗಿದೆ ಎಂದು ಸಿದ್ಧವಾಗಿದೆಯಲ್ಲವೆ? ಹೀಗಿರುವಾಗ ಇಲ್ಲೇಕೆ ಪುನಃ ಅದರ ಆಕ್ಷೇಪ?

ಈ ಅಧಿಕರಣದ ಆಕ್ಷೇಪ ತಪ್ಪಲ್ಲ

भावदीपः – तथापि शरीररूपकविन्यस्तगृहीतेरिति न्यायेन 'जीवो जहाति' इत्याद्युदाहृतश्रुतिष्वन्यपरत्वस्यापि सत्त्वेनेयमाशङ्का युक्ता । अत एव तयोरपीत्युक्तिः। अत एव च द्युभ्वादिनये वायुसमाख्यातत्वेनेयं श्रुतिरुदाहृतेति भावः ।

ಉತ್ತರ - ಹೌದು; ಆದರೂ ಸಹ 'ಶರೀರರೂಪಕವಿನ್ಯಸ್ತಗೃಹೀತೇಃ' ಎಂಬ ಸೂತ್ರದಲ್ಲಿ ಹೇಳಿದ ನ್ಯಾಯದಂತೆ 'ಜೀವೋ ಜಹಾತಿ' ಇತ್ಯಾದಿ ಶ್ರುತಿಗಳಲ್ಲಿ ಪ್ರಯೋಗಿಸಿದ ಜೀವಶಬ್ದವು ಪರಮಾತ್ಮನನ್ನು ಬಿಟ್ಟು ಬೇರೆ ಚೇತನರನ್ನು ಕೂಡ ಪ್ರತಿಪಾದನೆ ಮಾಡುತ್ತದೆ. ಆದ್ದರಿಂದ ಇಲ್ಲಿ ಆಕ್ಷೇಪ ಮಾಡಿದ್ದು ತಪ್ಪಲ್ಲ. ಆದ್ದರಿಂದಲೇ 'ತಯೋರಪಿ' ಎಂಬ ಪದವನ್ನು ಪ್ರಯೋಗಿಸಿದ್ದಾರೆ. ಮತ್ತು ದ್ಯುಭ್ವಾದ್ಯಧಿಕರಣದ ನ್ಯಾಯದಂತೆ ಶ್ರುತಿಯನ್ನು ವಾಯು ಸಮಾಖ್ಯಾನ ಶ್ರುತಿಯ ಜೊತೆಗೆ ವ್ಯಾಖ್ಯಾನಿಸಿದ್ದಾರೆ.

'ಲಿಂಗೇನೈವ' ಎಂಬುದಕ್ಕೆ ವ್ಯಾಖ್ಯಾನ

भावदीपः – वक्ष्यति च द्वितीये भाष्यकारोऽन्यस्यापि वाच्यत्वादसतः प्राप्तिरिति लिङ्गेनैव नञोऽन्वयभ्रान्तिनिरासयाय लिङ्गसाध्येनाऽन्वयमाह – न सर्वस्येति ।।

ಎರಡನೆಯ ಅಧ್ಯಾಯದಲ್ಲಿ ಭಾಷ್ಯಕಾರರೂ ಕೂಡ ಜೀವ ಶಬ್ದವು ಬೇರೆ ಪದಾರ್ಥವನ್ನು ಪ್ರತಿಪಾದನೆ ಮಾಡುವುದರಿಂದ 'ಅಸತಃ ಪ್ರಾಪ್ತಿಃ' ಎಂದು ಹೇಳಿರುತ್ತಾರೆ. 'ಲಿಂಗೇನೈವ' ಎಂಬ ಪದದಲ್ಲಿ 'ನೈವ' ಎಂಬ 'ನಞ್'ಗೆ ಎಲ್ಲಿ ಅನ್ವಯವೆಂದು ತಿಳಿಯುವುದಿಲ್ಲ. ಅದಕ್ಕಾಗಿ ಸಾಧ್ಯದ ಜೊತೆಗೆ ಅನ್ವಯವನ್ನು 'ನ ಸರ್ವಸ್ಯ' ಎಂಬ ವಾಕ್ಯದಿಂದ ತೋರಿಸಿದ್ದಾರೆ.

'ಉಪಾಸಾತ್ರೈವಿಧ್ಯಾತ್' ಎಂಬುದಕ್ಕೆ ವ್ಯಾಖ್ಯಾನ

भावदीपः – उपासात्रैविध्यादिति भाष्योपात्तसूत्रखण्डाभिमतयुक्तिमाह – तल्लिङ्गेति ।। तथा व्याख्यानं निर्बीजमित्यत आह – यद्यदिति ।।

'ಉಪಾಸಾತ್ಸೈವಿಧ್ಯಾತ್' ಎಂಬ ಭಾಷ್ಯದಲ್ಲಿ ಉದಾಹರಿಸಿದ ಸೂತ್ರಖಂಡಕ್ಕೆ ಅಭೀಪ್ಸಿತವಾದ ಯುಕ್ತಿಯನ್ನು 'ತಲ್ಲಿಂಗ' ಇತ್ಯಾದಿ ವಾಕ್ಯದಿಂದ ಹೇಳಿರುತ್ತಾರೆ. ಹಾಗೆ ವ್ಯಾಖ್ಯಾನ ಮಾಡುವುದು ನಿರ್ಬೀಜವಲ್ಲವೆ ? ಎಂಬ ಪ್ರಶ್ನೆಗೆ 'ಯದ್ಯತ್' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ.

'ಯದ್ಯದ್‌ವಿಭೂತಿಮತ್ಸತ್ತ್ವಂ' ಎಂಬ ಗೀತೆಗೆ ವ್ಯಾಖ್ಯಾನ

भावदीपः – गीतायां दशमे यद्यपि भाष्ये 'यद्यद्विभूतिमत्' इति विस्तारः विष्ण्वादीनि स्वरूपाण्येवेत्युक्त्या यद्यद्विभूत्यादिमत्सत्त्वं विष्णुकपिलराम-कृष्णादिकं तत्तन्मम तेजोंऽशसम्भवं प्रादुर्भावात्मकमित्यर्थ उक्तः ।

ಪ್ರಶ್ನೆ - ಭಗವದ್‌ಗೀತೆಯ ಹತ್ತನೆಯ ಅಧ್ಯಾಯದ ಭಾಷ್ಯದಲ್ಲಿ 'ಯದ್ಯದ್‌ವಿಭೂತಿ' ಎಂಬ ಶ್ಲೋಕಕ್ಕೆ ವ್ಯಾಖ್ಯಾನ ಮಾಡುವಾಗ 'ವಿಷ್ಣ್ವಾದೀನಿ ಸ್ವರೂಪಾಣ್ಯೇವ' ಎಂದು ಹೇಳಿರುತ್ತಾರೆ. ಆದ್ದರಿಂದ 'ಯದ್ಯದ್‌ವಿಭೂತಿಮತ್ಸತ್ತ್ವಂ' ಎಂಬ ಗೀತಾಶ್ಲೋಕಕ್ಕೆ ವಿಷ್ಣು, ಕಪಿಲ, ರಾಮ, ಕೃಷ್ಣ ಮೊದಲಾದ ರೂಪಗಳು ಮೂಲರೂಪದ ತೇಜಸ್ಸಿನ ಅಂಶಗಳು; ಇವುಗಳು ಪ್ರಾರ್ದುಭೂತವಾಗಿವೆ ಎಂಬ ಅರ್ಥವನ್ನು ಹೇಳಿರುತ್ತಾರೆ ಹೊರತು ಜೀವ, ಮುಖ್ಯಪ್ರಾಣರ ಸಾಮರ್ಥ್ಯವು ಭಗವಂತನ ತೇಜಸ್ಸಿನ ಅಂಶವೆಂದು ಹೇಳಿರುವುದಿಲ್ಲ.

ಗೀತಾತಾತ್ಪರ್ಯ ಆಧಾರದಲ್ಲಿ ಟೀಕೆಗೆ ವ್ಯಾಖ್ಯಾನ

भावदीपः – तथापि तत्रैव 'अन्यानि तु तेजोयुक्तानि' इत्यप्युक्त्या 'मम तेजोंऽशेन संयुक्तं भवति' इति गीतातात्पर्योक्त्या चार्थान्तरमुपेत्यात्रै-तदुक्तिः ।।३।।

ಉತ್ತರ - ಹೌದು, ಆದರೆ ಅದೇ ಸಂದರ್ಭದಲ್ಲಿ 'ಅನ್ಯಾನಿ ತು ತೇಜೋಯುಕ್ತಾನಿ' ಬೇರೆ ಜೀವ-ಮುಖ್ಯಪ್ರಾಣಾದಿಗಳೂ ಕೂಡ ನನ್ನ ತೇಜೋರೂಪವಾದ ಅಂಶದಿಂದ ಯುಕ್ತವಾಗಿವೆ ಎಂಬ ಮಾತು ಕಾಣಿಸುವುದರಿಂದ ಗೀತಾತಾತ್ಪರ್ಯದ ಆಧಾರದಂತೆ ಟೀಕೆಯ ಮಾತನ್ನು ಇಲ್ಲಿ ಅರ್ಥಮಾಡಿಕೊಳ್ಳಬೇಕು.

ಬ್ರಹ್ಮಸೂತ್ರ

'ಅನ್ಯಾರ್ಥಂ ತು ಜೈಮಿನಿಃ' ಎಂಬ ಸೂತ್ರಕ್ಕೆ ವ್ಯಾಖ್ಯಾನ

ब्रह्मसूत्रम् – ।। अन्यार्थं तु जैमिनिः प्रश्नव्याख्यानाभ्यामपि चैवमेके ।।

ಸೂತ್ರಾರ್ಥ - ಜ್ಞಾನಕ್ಕೋಸ್ಕರ ಕರ್ಮಗಳನ್ನು ಆಚರಿಸಬೇಕೆಂದು ವೇದಗಳು ಹೇಳುತ್ತಿವೆ. ಹೀಗೆ ಜೈಮಿನ್ಯಾಚಾರ್ಯರ ಅಭಿಪ್ರಾಯ. ಮುಂಡಕದಲ್ಲಿರುವ ಶೌನಕ - ಆಂಗೀರಸರ ಸಂವಾದದಿಂದ, ಛಾಂದೋಗ್ಯದಲ್ಲಿರುವ ಉದ್ದಾಲಕ - ಶ್ವೇತಕೇತುಗಳ ಸಂವಾದದಿಂದಲೂ ಇದು ಸ್ಪಷ್ಟವಾಗುತ್ತದೆ. ಇನ್ನು ಕೆಲವು ಶಾಖಿಗಳು ವಿಷ್ಣುವನ್ನು ತಿಳಿಯದವನು ವೇದವನ್ನು ಎಷ್ಟು ಓದಿದರೂ ವ್ಯರ್ಥ ಎಂದು ತಿಳಿದಿದ್ದಾರೆ.

ಅರ್ಥ -- 'ತು' ಶಬ್ದವು ಅವಧಾರಣಾರ್ಥದಲ್ಲಿದೆ. ಹೀಗೆ ಹೇಳಿದ್ದರಿಂದ ವಿಷ್ಣುವನ್ನು ಬಿಟ್ಟು ಬೇರೆಡೆ ಶಬ್ದಗಳನ್ನು ಸಮಾಕರ್ಷ ಮಾಡಿ ಯಾಗಾದಿ ಕರ್ಮ ಪ್ರತಿಪಾದನೆಯನ್ನು ಮಾಡುವುದು ಯುಕ್ತವೇ ಆಗಿದೆ. ಏಕೆಂದರೆ ಪರಮಾತ್ಮಜ್ಞಾನಕ್ಕೋಸ್ಕರ ಕರ್ಮಪರವಾದ ವಾಕ್ಯಗಳು ಹೊರಟಿವೆ. ಇದು ಹೇಗೆ ಸ್ಪಷ್ಟವಾಗುತ್ತದೆ ಎಂದರೆ ಪ್ರಶ್ನವ್ಯಾಖ್ಯಾನಾಭ್ಯಾಂ = ಶೌನಕರು 'ಕಸ್ಮಿನ್' ಇತ್ಯಾದಿಯಾಗಿ ಪ್ರಶ್ನಿಸಿದಾಗ, ಆಂಗೀರಸರು 'ದ್ವೇ ವಿದ್ಯೇ' ಇತ್ಯಾದಿಯಾಗಿ ಉತ್ತರಿಸಿದ್ದಾರೆ. ಅದರಂತೆ 'ಕಸ್ಮಿನ್ ನು' ಇತ್ಯಾದಿಯಾಗಿ ಶೌನಕರ ಪ್ರಶ್ನೆಯಿಂದ ಮತ್ತು 'ಕಥಂ ನು' ಇತ್ಯಾದಿಯಾಗಿ ಶ್ವೇತಕೇತುವಿನ ಪ್ರಶ್ನೆಗೆ, 'ಯಥಾ ಸೌಮ್ಯ' ಇತ್ಯಾದಿಯಾಗಿ ಉದ್ದಾಲಕರ ಉತ್ತರವಾಕ್ಯದಿಂದಲೂ ಕರ್ಮಪ್ರತಿಪಾದಕ ಸಕಲ ವಾಕ್ಯಗಳು ವಿಷ್ಣುವಿನ ಜ್ಞಾನಕ್ಕೋಸ್ಕರವೆಂದು ಸ್ಪಷ್ಟವಾಗುತ್ತದೆ. ಇತಿ ಜೈಮಿನಿಃ = ಹೀಗೆ ಜೈಮಿನ್ಯಾಚಾರ್ಯರ ಅಭಿಪ್ರಾಯ. ಕಿಂಚ = ಮತ್ತು ಏಕೇ = ಇನ್ನೂ ಕೆಲವು ಶಾಖಿಗಳು, ಸ್ಪಷ್ಟವಾಗಿ ಯಸ್ತಂ ನ ವೇದ = ಉಳಿದ ವಸ್ತುವಿನ ಜ್ಞಾನವು ಪರಮಾತ್ಮನ ಜ್ಞಾನಕ್ಕೋಸ್ಕರ ಸಾರ್ಥಕವೆಂದು ಅಧ್ಯಯನ ಮಾಡುತ್ತಾರೆ. ಈ ಕಾರಣದಿಂದಲೂ ಪರಮಾತ್ಮನನ್ನೇ ಪ್ರತಿಪಾದಿಸುವ ಸಕಲ ಶಬ್ದಗಳನ್ನು ಬೇರೆ ಕಡೆ ಸಮಾಕರ್ಷ ಮಾಡಬಹುದು.

ಬ್ರಹ್ಮಸೂತ್ರಭಾಷ್ಯ

ಪರಮಾತ್ಮನ ಜ್ಞಾನಕ್ಕೋಸ್ಕರವೇ ಕರ್ಮಾದಿಗಳೆಂದು ಜೈಮಿನಿಗಳ ಮತ

ब्रह्मसूत्रभाष्यम् – ।। अन्यार्थं तु जैमिनिः प्रश्नव्याख्यानाभ्यामपि चैवमेके ।।

परमात्मज्ञानार्थं कर्मादिकमपि वदतीति जैमिनिः ।

ಅನುವಾದ - ಪರಮಾತ್ಮನಿಗಿಂತ ಬೇರೆಯಾದ ದೇವತೆಗಳು ಮತ್ತು ಕರ್ಮಗಳ ಜ್ಞಾನಕ್ಕೋಸ್ಕರ ವೈದಿಕಶಬ್ದಗಳನ್ನು ಸಮಾಕರ್ಷ ಮಾಡಲಾಗಿದೆ ಎಂದು ಜೈಮಿನ್ಯಾಚಾರ್ಯರು ಹೇಳುತ್ತಾರೆ. ಏಕೆಂದರೆ ಶೌನಕ ಶ್ವೇತಕೇತುಗಳ ಪ್ರಶ್ನೆಯಿಂದ ಆಂಗೀರಸ ಉದ್ದಾಲಕರ ಉತ್ತರರೂಪವಾದ ವ್ಯಾಖ್ಯಾನಗಳಿಂದ, ಅಷ್ಟೇ ಅಲ್ಲದೇ ಕೆಲವು ಶಾಖಿಗಳ ಹೇಳುವಿಕೆಯಿಂದಲೂ ಇದು ಸಿದ್ಧವಾಗುತ್ತದೆ. ಪರಮಾತ್ಮನ ಜ್ಞಾನಕ್ಕೋಸ್ಕರ ವೇದಗಳು ಕರ್ಮಗಳನ್ನು, ದೇವತೆಗಳನ್ನು ಹೇಳುತ್ತವೆಂದು ಜೈಮಿನ್ಯಾಚಾರ್ಯರು ಹೇಳುತ್ತಾರೆ.

ಪ್ರತಿಪದಾರ್ಥ -- ಹಿಂದೆ ಸರ್ವಶಬ್ದಗಳನ್ನು ಬೇರೆಡೆ ಸಮಾಕರ್ಷ ಮಾಡಿ, ಪ್ರಯೋಗಿಸಲಾಗುತ್ತದೆಂದು ಸಮರ್ಥಿಸಿದಿರಿ. ಇದು ಸರಿಯಲ್ಲ. ಲೌಕಿಕವಾದ ಶಬ್ದಗಳಿಗೆ ಬೇರೆಡೆ ಮಾಡುವ ವ್ಯವಹಾರಕ್ಕೆ ಸಮಾಕರ್ಷ ಮಾಡಬಹುದಾದರೂ, ವೈದಿಕವಾದ ಕರ್ಮಾದಿ ಪ್ರತಿಪಾದಕವಾದ ಶಬ್ದಗಳಿಗೆ ಅನ್ಯತ್ರ ಸಮಾಕರ್ಷ ಮಾಡಲು ಯಾವುದೇ ಪ್ರಯೋಜನ ಇರುವುದಿಲ್ಲ. ಕರ್ಮ ದೇವತೆಗಳ ಸಿದ್ಧಿಯನ್ನೇ ಪ್ರಯೋಜನವೆನ್ನಬೇಕು. ಆದರೆ ವೇದಗಳು ಜೀವನಿಗೆ ಮೋಕ್ಷ ನೀಡಲು ಪ್ರವೃತ್ತವಾಗಿರುವುದರಿಂದ, ಕಾಮ್ಯಫಲದ ಉದ್ದೇಶದಲ್ಲಿ ಅದು ಹೊರಟಿಲ್ಲ. ಮೋಕ್ಷವಾದರೂ ಕೂಡ ವೇದದಲ್ಲಿ ಹೇಳಲ್ಪಟ್ಟ ಅನಂತಗುಣಗಳುಳ್ಳ ಭಗವಂತನ ಸರ್ವೋತ್ತಮ-ಜ್ಞಾನದಿಂದಲೇ ಸಿದ್ಧವಾಗುತ್ತದೆ. ಉಳಿದ ಜ್ಞಾನಗಳ ಅನಿವಾರ್ಯತೆ ಇರುವುದಿಲ್ಲ. ಆದ್ದರಿಂದ ವೈದಿಕವಾದ ಶಬ್ದಗಳನ್ನು ಲೋಕದಲ್ಲಿ ಸಮಾಕರ್ಷ ಮಾಡುವುದು ಮುಕ್ತನಾದವನಿಗೆ ನಿಷ್ಫಲವಾಗಿದೆ. ಆದ್ದರಿಂದ ಮುಖ್ಯವಾಗಿಯೇ ಅನ್ಯವಾಚಕತ್ವವನ್ನು ಒಪ್ಪಬೇಕು. ಹೀಗೆ ಆಶಂಕೆಯನ್ನು ಪರಿಹರಿಸುತ್ತಾ, ಸೂತ್ರವನ್ನು ಉಪನ್ಯಾಸ ಮಾಡಿ, ವ್ಯಾಖ್ಯಾನ ಮಾಡುತ್ತಿದ್ದಾರೆ. –

ಅನ್ಯಾರ್ಥಂ ತು = ಪರಮಾತ್ಮನಿಗಿಂತ ಬೇರೆಯಾದ ದೇವತೆಗಳ ಮತ್ತು ಕರ್ಮಗಳ ಜ್ಞಾನಕ್ಕೋಸ್ಕರ ವೈದಿಕಶಬ್ದಗಳ ಸಮಾಕರ್ಷವೆಂದು, ಜೈಮಿನಿಃ = ಜೈಮಿನ್ಯಾಚಾರ್ಯರು ಹೇಳುತ್ತಾರೆ. ಪ್ರಶ್ನ = ಶೌನಕ ಶ್ವೇತಕೇತುಗಳ ಪ್ರಶ್ನೆಯಿಂದ, ವ್ಯಾಖ್ಯಾನಾಭ್ಯಾಮ್ = ಆಂಗೀರಸ ಉದ್ದಾಲಕರ ಉತ್ತರರೂಪವಾದ ವ್ಯಾಖ್ಯಾನಗಳಿಂದ, ಅಪಿ ಚ = ಮತ್ತು, ಏಕೇ = ಕೆಲವು ಶಾಖಿಗಳು, ಏವಂ = 'ಯಸ್ತನ್ನ ವೇದ ಕಿಮೃಚಾ

ಕರಿಷ್ಯತಿ' ಎಂದು ಹೇಳುವುದರಿಂದಲೂ ಕೂಡ.

ಪರಮಾತ್ಮ ಎಂದು ಹೇಳಿದ್ದರಿಂದ ಸೂತ್ರದಲ್ಲಿರುವ ಅನ್ಯಪದವು ಜಗತ್ತಿಗಿಂತ ಭಿನ್ನನಾದ ಈಶ್ವರಾತ್ ಎಂಬ ಅರ್ಥದಲ್ಲಿ ಇರುತ್ತದೆಂದು ತಿಳಿಸಿದ್ದಾರೆ. ಹಿಂದಿನ 'ಜಗದ್ವಾಚಿತ್ವಾತ್' ಎಂಬ ಸೂತ್ರವನ್ನು 'ಜಗದ್ವಾಚಿತ್ವಮ್' ಎಂಬುದಾಗಿ ವಿಪರಿಣಾಮ ಮಾಡಿಕೊಂಡು, ಅದರ ತಾತ್ಪರ್ಯವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ.–

ಕರ್ಮಾದಿಕಮಪಿ = ಜ್ಯೋತಿಷ್ಟೋಮಾದಿ ಕರ್ಮಗಳು, ರಮೆ, ಚತುರ್ಮುಖ, ರುದ್ರ ಮೊದಲಾದವರನ್ನು, ಪರಮಾತ್ಮ ಜ್ಞಾನಾರ್ಥಂ = ಪರಮಾತ್ಮನನ್ನು ತಿಳಿಸಲು, ವದತಿ = ವೇದವು ಹೇಳುತ್ತಿದೆ. ಇತಿ = ಹೀಗೆ, ಜೈಮಿನಿಃ = ಜೈಮಿನ್ಯಾಚಾರ್ಯರು ಹೇಳುತ್ತಾರೆ.

ಕರ್ಮಾದಿಗಳು ಭಗವಂತನ ಜ್ಞಾನಕ್ಕೋಸ್ಕರ

ಬ್ರಹ್ಮಸೂತ್ರಭಾಷ್ಯಮ್ –'ಕಸ್ಮಿನ್ನು ಭಗವೋ ವಿಜ್ಞಾತೇ ಸರ್ವಮಿದಂ ವಿಜ್ಞಾತಂ ಭವತೀತಿ । ತಸ್ಮೈ ಸ ಹೋವಾಚ ದ್ವೇ ವಿದ್ಯೇ ವೇದಿತವ್ಯೇ' (ಮು.ತ. ೧-೧೩-೪)

ಅನುವಾದ - ಮುಂಡಕೋಪನಿಷತ್ತಿನಲ್ಲಿ ಹೀಗೆ ಹೇಳಲಾಗಿದೆ - ಶೌನಕರು ಪ್ರಶ್ನಿಸುತ್ತಾರೆ. 'ಎಲೈ ಸ್ವಾಮಿಯಾದ ಅಂಗೀರಸರೇ ಯಾವುದನ್ನು ತಿಳಿದಾಗ, ಇದೆಲ್ಲವನ್ನು ತಿಳಿದಂತಾಗುತ್ತದೆ?' ಈ ಪ್ರಶ್ನೆಗೆ ಅಂಗೀರಸರು ಉತ್ತರಿಸುತ್ತಾರೆ. 'ಪರ, ಅಪರ ಎಂಬ ಎರಡು ವಿದ್ಯೆಗಳು ತಿಳಿಯಲು ಯೋಗ್ಯವಾಗಿವೆ.' ಹೀಗೆ ಪ್ರಶ್ನೋತ್ತರಗಳು ಆರಂಭವಾಗಿವೆ.

ಪ್ರತಿಪದಾರ್ಥ -- ವೇದದಲ್ಲಿ ಹೇಳಲ್ಪಟ್ಟ ಕರ್ಮಾದಿಗಳ ಜ್ಞಾನವು ಪರಮಾತ್ಮನ ಜ್ಞಾನಕ್ಕೋಸರ ಎಂಬುದು ಹೇಗೆ ಸಿದ್ಧವಾಗುತ್ತದೆ ? ಎಂಬ ಪ್ರಶ್ನೆಗೆ ಸೂತ್ರದಲ್ಲಿರುವ ಪ್ರಶ್ನ ಎಂಬ ಪದದಿಂದ ಮತ್ತು ದ್ವಿವಚನದಿಂದ ಕೂಡಿರುವ ದ್ವಂದ್ವ ಸಮಾಸದಿಂದ ಅನೇಕ ಪ್ರಶ್ನೆ ಹಾಗೂ ಅನೇಕ ಉತ್ತರಗಳಿವೆ ಎಂದು ಸೂಚಿಸುತ್ತಾ ಅದನ್ನೇ ಉದಾಹರಿಸುತ್ತಿದ್ದಾರೆ. –

ಹೇ ಭಗವಃ = ಸ್ವಾಮಿಯಾದ ಅಂಗೀರಸರೇ! ಕಸ್ಮಿನ್ = ಯಾವುದನ್ನು, ವಿಜ್ಞಾತೇ = ತಿಳಿದಾಗ, ಇದಂ ಸರ್ವಂ = ಇದೆಲ್ಲವನ್ನು, ಜ್ಞಾತಂ ಭವತಿ =

ಹೇಳಿದಂತಾಗುತ್ತದೆ. ತಸ್ಮೈ = ಶೌನಕರಿಗೆ, ಸಃ = ಅಂಗೀರಸರು, ಉವಾಚ = ಉತ್ತರಿಸುತ್ತಾರೆ. ದ್ವೇ ವಿದ್ಯೇ = ಪರ, ಅಪರ ಎಂಬ ಎರಡು ವಿದ್ಯೆಗಳು, ವೇದಿತವ್ಯೇ = ತಿಳಿಯಲು ಅರ್ಹವಾಗಿವೆ.

ಛಾಂದೋಗ್ಯದಲ್ಲಿ ಶ್ವೇತಕೇತು ಉದ್ದಾಲಕರ ಸಂವಾದ

ब्रह्मसूत्रभाष्यम् – 'कथं नु भगवः स आदेशो भवति' इति । यथा सोम्येकेन मृत्पिण्डेन' (छां. उ. ६-१-३-४) इत्यादिप्रश्नव्याख्यानाभ्याम् ।

ಅನುವಾದ - ಮತ್ತು ಛಾಂದೋಗ್ಯದಲ್ಲಿ ಹೀಗೆ ಹೇಳಲಾಗಿದೆ. ಶ್ವೇತಕೇತು ಉದ್ದಾಲಕರನ್ನು ಪ್ರಶ್ನಿಸುತ್ತಾರೆ. ಸ್ವಾಮಿಯಾದ ಉದ್ದಾಲಕರೇ ಹೇಗೆ ತಿಳಿಯುವುದರಿಂದ ಭಗವದ್ ವಿಷಯಕವಾದ ಉಪದೇಶವು ಯುಕ್ತವಾಗುತ್ತದೆ ? ಈ ಪ್ರಶ್ನೆಗೆ ಉದ್ದಾಲಕರು ಉತ್ತರಿಸುತ್ತಾರೆ. ''ಸೋಮಪಾನಾರ್ಹನಾದ ಶ್ವೇತಕೇತುವೇ! ಹೇಗೆ ಒಂದು ಮೃತ್ಪಿಂಡದ ಜ್ಞಾನದಿಂದ ಸಕಲ ಮೃಣ್ಮಯ ಪಾತ್ರಗಳ ಜ್ಞಾತವಾಗುತ್ತವೋ'' ಇವೇ ಮೊದಲಾದ ಪ್ರಶ್ನೋತ್ತರ ರೂಪವಾದ ಶ್ರುತಿಭಾಗಗಳಿಂದ ಭಗವಂತನ ಜ್ಞಾನ ಬರಬೇಕಾದರೆ, ದೇವತಾಕರ್ಮಗಳ ಜ್ಞಾನವೂ ಕೂಡ ಬರಬೇಕು ಎಂದು ತಿಳಿಯುತ್ತದೆ. ಆದ್ದರಿಂದ ಲೌಕಿಕ ಶಬ್ದಗಳಂತೆ ವೈದಿಕಶಬ್ದಗಳೂ ಕೂಡ ಸಮಾಕರ್ಷದಿಂದಾಗಿ ಅನ್ಯತ್ರಪ್ರಸಿದ್ಧವಾಗುತ್ತದೆ.

ಪ್ರತಿಪದಾರ್ಥ -- ಛಾಂದೋಗ್ಯೋಪನಿಷತ್ತಿನಲ್ಲಿ 'ಯೇನಾಶ್ರುತಂ ಶ್ರುತಂ ಭವತ್ಯಮತಂ ಮತಮವಿಜ್ಞಾತಂ ವಿಜ್ಞಾತಂ ಭವತಿ' ಎಂಬ ವಾಕ್ಯದಿಂದ ಪರಮಾತ್ಮನನ್ನು ತಿಳಿದರೆ ಉಳಿದ ಪದಾರ್ಥಗಳೆಲ್ಲವೂ ತಿಳಿದಂತಾಗುತ್ತವೆ ಎಂದು ಹೇಳಲಾಗಿದೆ. ಉದ್ದಾಲಕರ ಪ್ರಶ್ನೆಗೆ ಶ್ವೇತಕೇತು ಉತ್ತರಿಸುತ್ತಿದ್ದಾರೆ. –

ಹೇ ಭಗವಃ = ಪೂಜ್ಯರಾದ ಉದ್ದಾಲಕರೇ ! ಯಾವ ಪರಮಾತ್ಮನನ್ನು ತಿಳಿಯುವುದರಿಂದ ಕರ್ಮಾದಿಗಳೆಲ್ಲವೂ ತಿಳಿದಂತಾಗುತ್ತದೆ. ಇಲ್ಲದಿದ್ದರೆ ತಿಳಿದಂತಾಗುವುದಿಲ್ಲ, ಆದೇಶಃ = ಅಂತಹ ಭಗವದ್ವಿಷಯಕವಾದ ಉಪದೇಶವು, ಕಥಂ = ಯಾವ ಪ್ರಕಾರದಿಂದ, ಭವತಿ = ಯುಕ್ತವಾಗುತ್ತದೆ. ಆ ಪ್ರಕರಣವನ್ನು ನಾನು ಇನ್ನೂ ಹೇಗೆ ತಿಳಿಯಬೇಕು? ಈ ಪ್ರಶ್ನೆಗೆ ಉದ್ದಾಲಕರು ಉತ್ತರಿಸಿದ್ದಾರೆ. ಹೇ ಸೋಮ್ಯ = ಸೋಮಪಾನಾರ್ಹನಾದ ಶ್ವೇತಕೇತುವೇ! ಯಥಾ = ಹೇಗೆ, ಏಕೇನ

ಮೃತ್ಪಿಂಡೇನ = ಒಂದು ಮೃತ್ಪಿಂಡದ ಜ್ಞಾನದಿಂದ ಸಕಲ ಮೃಣ್ಮಯ ಪದಾರ್ಥಗಳು ತಿಳಿಯುತ್ತವೋ, ಹೀಗೆ ಪ್ರಶ್ನವ್ಯಾಖ್ಯಾನಾಭ್ಯಾಮ್ = ಪ್ರಶ್ನೋತ್ತರರೂಪವಾದ ಶ್ರುತಿಭಾಗಗಳಿಂದ ಭಗವಂತನ ಜ್ಞಾನ ಬರಬೇಕಾದರೆ, ದೇವತಾಕರ್ಮಗಳ ಜ್ಞಾನವೂ ಕೂಡ ಬರಬೇಕೆಂದು ತಿಳಿಯುತ್ತದೆ.

ವಿಷ್ಣುವನ್ನು ತಿಳಿಯದಿದ್ದರೆ ಏನು ಪ್ರಯೋಜನ ?

ಬ್ರಹ್ಮಸೂತ್ರಭಾಷ್ಯಮ್ – ಏವಮಪಿ ಚೈಕೇ ಪಠನ್ತಿ 'ಯಸ್ತನ್ನ ವೇದ ಕಿಮೃಚಾ ಕರಿಷ್ಯತಿ' ಇತಿ (ಋ.ಸ.೧-೧೬೪-೩೯) ॥೪॥

ಅನುವಾದ - ಕೆಲವು ಶಾಖಿಗಳು ಹೀಗೆ ಹೇಳುತ್ತಾರೆ - ವಿಷ್ಣುವನ್ನು ತಿಳಿಯದೇ ಕೇವಲ ವೇದವನ್ನು ಓದಿ ಏನು ಪ್ರಯೋಜನ ? ಎಂದು.

ಪ್ರತಿಪದಾರ್ಥ -- 'ಪ್ರಶ್ನವ್ಯಾಖ್ಯಾನ' ಎಂಬ ಲಿಂಗದಿಂದ ಜಗತ್ತಿನ ಜ್ಞಾನವು ಪರಮಾತ್ಮನ ಜ್ಞಾನಕ್ಕೋಸ್ಕರ ಇರುತ್ತದೆಂಬುದು ಕೇವಲ ಅರ್ಥಾತ್ ಸಿದ್ಧವಾಗುವುದಿಲ್ಲ. ಸ್ಪಷ್ಟವಾಗಿಯೇ ಋಗ್ವೇದದಲ್ಲಿ ಹೇಳಲಾಗಿದೆ. ಇದನ್ನು ಪ್ರತಿಪಾದನೆ ಮಾಡುತ್ತಾ 'ಅಪಿ ಚೈವಮೇಕೇ' ಎಂಬ ಸೂತ್ರಖಂಡವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ. –

ಏವಮಪಿ = ಮುಂದೆ ಹೇಳುವಂತೆ, ಏಕೇ = ಕೆಲವು ಶಾಖೆಯವರು, ಪಠಂತಿ = ಹೇಳುತ್ತಾರೆ. ಯಃ = ಯಾವಾತನು, ತನ್ನ ವೇದ = ಪ್ರಸಿದ್ಧನಾದ ಪರಮಾತ್ಮನನ್ನು ತಿಳಿಯುವುದಿಲ್ಲವೋ, ಸಃ = ಅವನು, ಋಚಾ = ವೇದದಿಂದ, ಕಂ ಕರಿಷ್ಯತಿ = ಯಾವ ಫಲವನ್ನು ಪಡೆಯುತ್ತಾನೆ.

ಸತ್ತರ್ಕದೀಪಾವಳಿ

'ಅಸ್ಯ ವಾಮೀಯ' ಸೂಕ್ತಕ್ಕೆ ಅಪೂರ್ವವ್ಯಾಖ್ಯಾನ

(೧)सत्तर्कदीपावलिः – न केवलमेतत्प्रभव्याख्यानार्थिकार्थोऽयं किन्तु साक्षादेव एके पठन्तीत्याह – अपि चेति । ब्रह्मयज्ञफलं महदुक्त्वोच्यते । ऋच इत्यादि परमे व्योम्नि अव्याकृताकाशे। यद्वा परमे परेण नीयमाने शोभने च व्योम्नि विविधविद्याश्रये प्रकृतौ ब्रह्माधिहृदये च यत्परमं देशतः कालतो गुणतः

(೧) ಗಮನಿಸಿ : 'ಯಸ್ತನ್ನ ವೇದ ಕಿಮೃಚಾ ಕರಿಷ್ಯತಿ' ಎಂಬ ಭಾಷ್ಯದಲ್ಲಿ ಉಲ್ಲೇಖ ಮಾಡಿದ ಶ್ರುತಿಗೆ 'ನ ಕೇವಲಮ್' ಇತ್ಯಾದಿಯಾಗಿ ಶ್ರೀಪದ್ಮನಾಭತೀರ್ಥರು ವ್ಯಾಖ್ಯಾನ ಮಾಡಿದ್ದಾರೆ. ಈ ವ್ಯಾಖ್ಯಾನದಲ್ಲಿ ಅತ್ಯಂತ ಅಪೂರ್ವ ವಿಚಾರ ಇರುತ್ತದೆ. ಹಾಗೂ ಸ್ವರಸವಾದ ವ್ಯಾಖ್ಯಾನವೂ ಕೂಡ ಆಗಿರುತ್ತದೆ. ಋಗ್ವೇದದ ಮೊದಲನೆಯ ಅಷ್ಟಕದಲ್ಲಿ ಬರುವ ಮಂತ್ರವಿದು. 'ಅಸ್ಯ ವಾಮೀಯ ಸೂಕ್ತ'ವೆಂದು ಇದನ್ನು ಕರೆಯುತ್ತಾರೆ. ಅತ್ಯಪೂರ್ವ ಪ್ರಮೇಯಗಳಿಂದ ಕೂಡಿರುವ ಈ ಸೂಕ್ತವನ್ನು ಪ್ರತಿನಿತ್ಯ ಪಾರಾಯಣ ಮಾಡುವ ಕ್ರಮವೂ ಕೂಡ ಇದೆ.

ಆದರೆ ಈ ಭಾಗದ ಅನುವಾದವನ್ನು ಮಾಡಲು ಸಾಧ್ಯವಾಗಿಲ್ಲ. ಕೆಲವು ವಿದ್ವಾಂಸರ ಬಳಿ ವಿಚಾರ ಮಾಡಿದಾಗಲೂ, ನಿಜವಾದ ಪಾಠಶೋಧನೆಯಾಗದೇ ಅನುವಾದ ಕಷ್ಟ ಎಂಬ ನಿಲುವನ್ನು ಅಂತಿಮವಾಗಿ ತಾಳಬೇಕಾಯಿತು. ಆದ್ದರಿಂದ ವಿದ್ಯಾರ್ಥಿಗಳು, ವಿದ್ವಾಂಸರು, ವಿಮರ್ಶಕರು ಇದರ ನಿಜವಾದ ಪಾಠವನ್ನು ಅರಿತು ಅದರಲ್ಲಿರುವ ಹೊಸ ವಿಚಾರವನ್ನು ತಿಳಿದುಕೊಳ್ಳಬೇಕು. ಸತ್ತರ್ಕದೀಪಾವಳಿಗೆ ಸಂಬಂಧಪಟ್ಟ ಪ್ರಾಚೀನ ಹಸ್ತಪ್ರತಿಯನ್ನು ಗಮನಿಸಿ ನಿಜವಾದ ಪಾಠಶೋಧನೆ ಅತ್ಯವಶ್ಯವಾಗಿ ಆಗಬೇಕಾಗಿದೆ. ಈ ಭಾಗದಲ್ಲಿ ಮಾತ್ರವಲ್ಲ; ಅನೇಕ ಕಡೆ ಅನುವಾದ ಮಾಡುವಾಗ ಈ ಥರದ ಸಮಸ್ಯೆಗಳು ಎದುರಾಗುತ್ತಿದೆ.

ಅಸ್ಯ ವಾಮೀಯ ಸೂಕ್ತಕ್ಕೆ ಈಗಿನ ಕಾಲದ ಪ್ರಸಿದ್ಧ ವಿದ್ವಾಂಸರಾದ ವಿದ್ವಾನ್ ಬನ್ನಂಜೆ ಗೋವಿಂದಾಚಾರ್ಯರು ಸಂಸ್ಕೃತದ ವ್ಯಾಖ್ಯಾನವನ್ನು ಮಾಡಿದ್ದಾರೆ. ಆದರೆ ಪದ್ಮನಾಭತೀರ್ಥರ ವ್ಯಾಖ್ಯಾನದಲ್ಲಿ ಹೇಳಿರುವ ಪ್ರಮೇಯಗಳು ಅದರಲ್ಲಿ ಇಲ್ಲದ ಕಾರಣ ಅದರ ಸಹಾಯವನ್ನು ಇಲ್ಲಿ ಹೊಂದಲು ಸಾಧ್ಯವಾಗಿಲ್ಲ.

सर्वतः परमत्वेन नीयमानं शोभनं च महाप्रलयेऽप्यक्षयकल्याणगुणशक्तिक्रियादेहम् 'अक्षयो भगवान्विष्णुः लक्ष्म्यावासो लये स्थितः । मुक्तैः सदा चिन्त्यमानो ब्रह्मादैः तारतम्यगैः' इत्यादेः ततः उपलक्षणमेतत् । यदृचोधीत इत्यादिप्रकृताः चत्वारो वेदाः ब्राह्मणेतिहासादिसहिताश्च तद्विषयाः । नन्वेषामपि देवा नतत्सूक्तप्रतिपाद्यत्वात् कथमक्षरैकविषया सर्ववेदा इत्यत उच्यते । यस्मिन्निति यस्मिन्नन्येभ्य अधिक्येन निषण्णाः सर्वे देवाः अतस्ते ईषत् श्रूयन्ते । न तु तन्निषण्णमात्रम् । यतस्तद्विष्ण्वाख्यमक्षरदेहमिदमतो गुणतः सर्वाभ्यधिकमित्येवमपि न वेद किं त्वितरामरसाधारणं मन्यते । स तैः युक्तं कर्म कुर्वन्नपि न त्रैविध्यो भवतीति किं त्रिवेदादिभिरधिगतैः ब्रह्मयज्ञादिरूपेणाधीतैश्च करिष्यति । न किमपि वेदोक्तफलं लभते । यस्त्वक्षरः विष्ण्वाख्यं स्वत एव अक्षरदेहमिदमतः सर्वोत्तममिति जानन्नपि सर्ववेदार्थभूतं तन्न वेद स तु त्रैविध्यो भवति । तथापि क्षयिष्णुफलत्वेन पुनः कर्तृत्वापरिहारात् ब्रह्मयज्ञादिरूपऋगध्ययनादिकर्मभिरक्षराख्यभगवदन्यार्थज्ञानेन किं करिष्यतीत्युच्यते । ये तु तेन ज्ञानेन तैः कर्मभिश्च इत्थमुक्तप्रकारेण तदक्षरं मनआद्यक्षरेषु रममाणं प्रलयेऽप्यक्षयशक्तिक्रियादेहं सर्ववेदार्थभूतं तं न वेद स त्रैविद्यो भवति । तथापि इमे प्रकृत देवादयः कर्तृत्वं हित्वा सङ्कल्पमात्रसिद्धये यथेष्टभोगाय अक्षराख्यहरिणा सहोपविशन्ति सम्यगुपविशन्तीत्यर्थः ।

ತತ್ವಪ್ರದೀಪ

ಪರಮಾತ್ಮನ ಜ್ಞಾನಕ್ಕೋಸ್ಕರ ಜ್ಯೋತಿಷ್ಟೋಮಾದಿ ಕರ್ಮಗಳು

ತತ್ವಪ್ರದೀಪಃ – अन्यार्थं तु जैमिनिः प्रश्नव्याख्यानाभ्यामपि चैवमेके । परमात्मज्ञानार्थमेव कर्मसृष्ट्यादिकमपि वदति श्रुतिरिति जैमिनिर्वक्ति । यस्य

ज्ञानादन्यज्ज्ञातं भवति तत्किमिति शौनकप्रश्नार्थ एकविज्ञास्य प्राधान्यावगमात्तदर्थमन्यदुच्यत इति गम्यते ।

'अन्यार्थं० तु जैमिनिः प्रश्नव्याख्यानाभ्यामपि चैवमेके' ಎಂಬ ಸೂತ್ರದ ವ್ಯಾಖ್ಯಾನವನ್ನು ಭಾಷ್ಯದಲ್ಲಿ ಹೀಗೆ ಮಾಡಿದ್ದಾರೆ - ಪರಮಾತ್ಮನ ಜ್ಞಾನಕ್ಕೋಸ್ಕರವೇ ಜ್ಯೋತಿಷ್ಟೋಮಾದಿ ಕರ್ಮಗಳನ್ನು ಶ್ರುತಿಯು ಪ್ರತಿಪಾದನೆ ಮಾಡುತ್ತವೆಯೆಂದು ಜೈಮಿನಿಋಷಿಗಳು ಅಭಿಪ್ರಾಯ ಪಡುತ್ತಾರೆ.

ಒಂದರ ಜ್ಞಾನದಿಂದ ಮತ್ತೊಂದು ಹೇಗೆ ಹೇಳಿದಂತಾಗುತ್ತದೆ ? ಎಂಬುದಾಗಿ ಶೌನಕರು ಪ್ರಶ್ನೆ ಮಾಡಿದಾಗ ಏಕವಿಜ್ಞಾನವು ಪ್ರಧಾನವಾದ್ದರಿಂದ ಅದಕ್ಕಾಗಿ ಉಳಿದದ್ದನ್ನು ಶ್ರುತಿಯು ಹೇಳಿದೆ ಎಂದು ತಿಳಿಯಬೇಕು.

ಶೌನಕ ಮತ್ತು ಅಂಗೀರಸರ ಪ್ರಶ್ನೋತ್ತರವೇ ಇದಕ್ಕೆ ಆಧಾರ

तत्वप्रदीपः – अङ्गिरसो व्याख्यानेऽपि ''द्वे विद्ये वेदितव्ये इति ह स्म यद् ब्रह्मविदो वदन्ति परा चैवापरा च' इत्यादौ ब्रह्मज्ञानस्य परविद्यात्वोक्तेस्तस्य च परत्वोपपादनार्थमन्यदुच्यत इति गम्यते ।

ಅಂಗೀರಸರ ಉತ್ತರದಲ್ಲೂ ಕೂಡ 'द्वे विद्ये वेदितव्ये इति ह स्म यद् ब्रह्मविदो वदंति परा चैवापरा च' ಎರಡು ವಿದ್ಯೆಯನ್ನು ತಿಳಿಯಬೇಕು ಎಂಬುದಾಗಿ ಯಾವ ಬ್ರಹ್ಮಜ್ಞಾನಿಗಳು ಹೇಳುತ್ತಾರೋ, ಅದೇ ಪರವಿದ್ಯೆ ಹಾಗೂ ಅಪರವಿದ್ಯೆ ಎಂದು ಹೇಳಲಾಗಿದೆ. ಇಲ್ಲಿ ಬ್ರಹ್ಮಜ್ಞಾನಕ್ಕೆ ಪರವಿದ್ಯಾತ್ವವನ್ನು ಹೇಳಿರುವುದರಿಂದ ಆ ಬ್ರಹ್ಮವಿದ್ಯೆಗೆ ಪರತ್ವವನ್ನು ಉಪಪಾದನೆ ಮಾಡುವುದಕ್ಕಾಗಿ ಉಳಿದದ್ದನ್ನು ಪ್ರತಿಪಾದ್ಯವೆಂದು ಹೇಳಲಾಗಿದೆ.

ವಿವರಣೆ - ಮಾಂಡೂಕೋಪನಿಷತ್ತಿನಲ್ಲಿ ಶೌನಕರಿಗೂ, ಅಂಗೀರಸರಿಗೂ ಪ್ರಶ್ನೋತ್ತರಗಳು ನಡೆದಿವೆ. ಶೌನಕರು ಯಾವ ಮುಖ್ಯತತ್ವವನ್ನು ತಿಳಿದರೆ ಈ ಕರ್ಮಜ್ಞಾನವು ಫಲಪ್ರದವಾಗುತ್ತದೆ ? ಎಂದು ಪ್ರಶ್ನಿಸುತ್ತಾರೆ. ಅದಕ್ಕೆ ಉತ್ತರವನ್ನು ಅಂಗೀರಸರು ಹೀಗೆ ಹೇಳುತ್ತಾರೆ - द्वे विद्ये वेदितव्ये' 'परा चैवापरा च' ಎಂದು. ಪರವಿದ್ಯೆ ಹಾಗೂ ಅಪರವಿದ್ಯೆ ಎಂದು ಎರಡು ಬಗೆಯ ವಿದ್ಯೆಗಳಿವೆ. ಬ್ರಹ್ಮಜ್ಞಾನವೇ ಪರವಿದ್ಯೆಯೆನಿಸುತ್ತದೆ. ಕರ್ಮಜ್ಞಾನವು ಅಪರವಿದ್ಯೆಯೆನಿಸುತ್ತದೆ. ಬ್ರಹ್ಮವಿದ್ಯೆಗೆ ಪರವಿದ್ಯಾತ್ವವನ್ನು ಸಮರ್ಥನೆ

ಮಾಡುವುದಕ್ಕಾಗಿಯೇ ಕರ್ಮಕಾಂಡವು ಅಪರವಿದ್ಯೆಯ ಬಗ್ಗೆ ನಿರೂಪಣೆ ಮಾಡುತ್ತಿವೆ. ಆದ್ದರಿಂದ ಕರ್ಮಗಳ ಆಚರಣೆಯಿಂದ ಬ್ರಹ್ಮಜ್ಞಾನವು ದೊರೆಯುತ್ತದೆ ಎಂಬುದು ಅಂಗೀರಸರ ಅಭಿಪ್ರಾಯ. ಈ ಒಂದು ಸಂವಾದ ಪ್ರಕರಣದಿಂದ ಬ್ರಹ್ಮಜ್ಞಾನವೇ ಶ್ರೇಷ್ಠವೆಂದು ಸ್ಪಷ್ಟವಾಯಿತು.

ಆದೇಶ ಎಂದರೆ ಪರಮಾತ್ಮ

तत्वप्रदीपः – ''कथं नु भगवः स आदेशो भवति'' इति श्वेतकेत्तुप्रश्नेऽपि ''उत तमादेशमप्राक्ष्यो येनाश्रुतं श्रुतं भवति'' इति प्राधान्येनोक्त आदेशः परामृश्यते । आदिश्यत इत्यादेशः परमात्मा ।

'कथं नु भगवः स आदेशो भवति' ಎಂಬುದಾಗಿ ಶ್ವೇತಕೇತು ಪ್ರಶ್ನಿಸುತ್ತಾನೆ. ಆಗ 'उत तमादेशमप्राक्ष्यो येनाश्रुतं श्रुतं भवति' ಎಂಬುದಾಗಿ ಉದ್ದಾಲಕನು ಉತ್ತರಿಸುತ್ತಾನೆ. ಇಲ್ಲಿ 'ಆದೇಶಃ' ಪದಕ್ಕೆ 'ಆದಿಶ್ಯತೇ ಇತಿ ಆದೇಶಃ' ಎಂಬ ನಿಷ್ಪತ್ತಿಯಿಂದ ಪರಮಾತ್ಮ ಎಂಬರ್ಥವನ್ನು ತಿಳಿಯತಕ್ಕದ್ದು.

ವಿವರಣೆ - ಛಾಂದೋಗ್ಯೋಪನಿಷತ್ತಿನಲ್ಲಿ ಉದ್ದಾಲಕ ಹಾಗೂ ಶ್ವೇತಕೇತುಗಳ ಸಂಭಾಷಣೆಯಿಂದಲೂ ಇದು ಸ್ಪಷ್ಟವಾಗುತ್ತದೆ. ಗುರುಕುಲಾಧ್ಯಯನವನ್ನು ಮುಗಿದು ಬಂದ ಶ್ವೇತಕೇತುವಿಗೆ ಉದ್ದಾಲಕರು ಹೀಗೆ ಪ್ರಶ್ನಿಸುತ್ತಾರೆ - ಯಾವುದನ್ನು ತಿಳಿದರೆ ಎಲ್ಲವನ್ನು ತಿಳಿದಂತಾಗುತ್ತದೋ, ಅಂಥ ಭಗವಂತನಾದ ಆದೇಶವನ್ನು ತಿಳಿದಿರುವೆಯೇನು ? ಎಂದು. ಈ ಪ್ರಶ್ನೆಗೆ ಶ್ವೇತಕೇತುವು - ಇದು ಹೇಗೆ ಸಾಧ್ಯ ? ಎಂದು ಕೇಳುತ್ತಾನೆ. ಯಾರೊಬ್ಬನನ್ನು ತಿಳಿಯುವುದರಿಂದ ಎಲ್ಲವನ್ನು ತಿಳಿದಂತಾಗುತ್ತದೋ, ಅವನೇ ಪರಮಾತ್ಮನಾಗಿದ್ದಾನೆ. ಎಲ್ಲರನ್ನು ಆದೇಶ ಮಾಡುವುದರಿಂದ ಇವನನ್ನು ಆದೇಶ ಎಂದೇ ಕರೆಯಲಾಗುತ್ತದೆ.

ಛಾಂದೋಗ್ಯದಲ್ಲಿ ವಿಷ್ಣುಪಾರಮ್ಯ

तत्वप्रदीपः – ''यथा सोम्यैकेन मृत्पिण्डेन सर्वं मृण्मयं विज्ञातं स्याद्वाचारम्भणं विकारो नामधेयं मृत्तिकेत्येव सत्यम्'' इत्यादावुद्दालक-व्याख्यानेऽपि सादृश्यात्प्रधान्यच्चैकविज्ञानेन सर्वविज्ञानं निर्दिश्य ''एवं सोम्य

स आदेश'' इति तस्यैव सर्वतः प्राधान्यावधारणात् तद्बोधनार्थमन्यद्वुपन्यस्यत इति गम्यते ।

'ಯಥಾ ಸೋಮ್ಯೈಕೇನ ಮೃತ್ಪಿಂಡೇನ ಸರ್ವಂ ಮೃಣ್ಮಯಂ ವಿಜ್ಞಾತಂ ಸ್ಯಾದ್ವಾಚಾರಂಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಮ್' ಹೇಗೆ ಒಂದು ಮಣ್ಣಿನ ಮುದ್ದೆಯನ್ನು ತಿಳಿದಿರುವುದರಿಂದ ಎಲ್ಲ ಮಣ್ಣಿನ ವಿಕಾರಗಳನ್ನು ತಿಳಿದಂತಾಗುತ್ತದೋ, ಅದರಂತೆ ಪರಮಾತ್ಮನ ಜ್ಞಾನದಿಂದ ಎಲ್ಲ ಕರ್ಮಾದಿಗಳನ್ನು ತಿಳಿದಂತಾಗುತ್ತದೆ. ಸಂಸ್ಕೃತ ಭಾಷೆಯೇ ಮಿಥ್ಯವಾಗಿದೆ. ಅದರ ಉಳಿದ ಭಾಷ್ಯಗಳೆಲ್ಲವೂ ಅದರ ವಿಕಾರವಾಗಿದೆ. ಸಂಸ್ಕೃತಭಾಷೆಯೊಂದೇ ಸತ್ಯವಾಗಿದೆ. ಅದರಂತೆ ವಿಷ್ಣುವೊಬ್ಬನೇ ನಿತ್ಯನಾಗಿದ್ದಾನೆ ಎಂಬುದಾಗಿ ಉದ್ದಾಲಕರು ಉತ್ತರವನ್ನು ನೀಡುತ್ತಾರೆ. ಸಾದೃಶ್ಯ ಹಾಗೂ ಪ್ರಾಧಾನ್ಯದಿಂದ ಏಕವಿಜ್ಞಾನದಿಂದ ಸರ್ವವಿಜ್ಞಾನವನ್ನು ನಿರ್ದೇಶ ಮಾಡಿ, 'ಏವಂ ಸೌಮ್ಯ ಸ ಆದೇಶಃ' ಎಂಬುದಾಗಿ ಎಲ್ಲದಕ್ಕಿಂತಲೂ ಪ್ರಧಾನನಾದ ವಿಷ್ಣುವನ್ನು ತಿಳಿಸುವುದಕ್ಕಾಗಿಯೇ ಉಳಿದದ್ದನ್ನು ಉಲ್ಲೇಖ ಮಾಡಿರುತ್ತಾರೆ ಎಂದು ಸ್ಪಷ್ಟವಾಗುತ್ತದೆ.

ವಿವರಣೆ - ಛಾಂದೋಗ್ಯೋಪನಿಷತ್ತಿನ ಆರನೆಯ ಅಧ್ಯಾಯದಲ್ಲಿ ಬರುವ ಈ ಪ್ರಕರಣ ಹೀಗಿದೆ - (ಸಂಗ್ರಹ)

> ಶ್ವೇತಕೇತುರ್ಹಾರುಣೇಯ ಆಸ । ತಂ ಹ ಪಿತೋವಾಚ 'ಶ್ವೇತಕೇತೋ ವಸ ಬ್ರಹ್ಮಚರ್ಯಂ। ನ ವೈ ಸೋಮ್ಯಾಸ್ಮತ್‌ಕುಲೀನೋऽನನೂಚ್ಯ ಬ್ರಹ್ಮಬಂಧುರಿವ ಭವತಿ' ಇತಿ ॥

ಹನ್ನೆರಡು ವರ್ಷ ವಯಸ್ಸಿನ ಆ ಶ್ವೇತಕೇತುವು ಗುರುಕುಲಕ್ಕೆ ಹೋಗಿ ತನ್ನ ಇಪ್ಪತ್ನಾಲ್ಕು ವಯಸ್ಸಿನ ತನಕ ಎಲ್ಲಾ ವೇದಗಳನ್ನು ಅಧ್ಯಯನ ಮಾಡಿ, ತಾನು ಷಡಂಗ ವೇದಾಧ್ಯಯನ ಮಾಡಿದವನೆಂದೂ, ಬಹಳ ಶ್ರೇಷ್ಠನೆಂದೂ ಅಹಂಕಾರ ಉಳ್ಳವನಾಗಿ ಅವಿನೀತನಾಗಿ ಮನೆಗೆ ಮರಳಿದನು.

ಆ ಶ್ವೇತಕೇತುವನ್ನು ನೋಡಿ ವಿಷಣ್ಣನಾದ ತಂದೆಯು, ಸರ್ವನಿಯಾಮಕನಾಗಿ ಸರ್ವೋತ್ತಮನಾಗಿರುವ ಪರಮಾತ್ಮನ ಅರಿವಿಲ್ಲದಿರುವುದರಿಂಲೇ ಮಗನ ಈ ಅಹಂಕಾರ ಎಂದರಿತು 'ಶ್ವೇತಕೇತುವೇ ! ಈ ರೀತಿಯಲ್ಲಿ ಸಾಂಗವೇದಾಧ್ಯಯನ ಮಾಡಿರುವನೆಂದು ಅಭಿಮಾನದಿಂದತಾನೇಶ್ರೇಷ್ಠನೆಂದುತಿಳಿದುಕೊಂಡವನಾಗಿಅವಿನೀತನಾಗಿರುವೆಯಷ್ಟೆ. ಯಾವ ಪರಮ ಪ್ರಮೇಯವನ್ನು ಉಪದೇಶ ಪಡದೆ ಎಲ್ಲವನ್ನೂ ಉಪದೇಶ ಪಡೆದಂತಾಗುತ್ತದೋ, ಯಾವುದನ್ನು ಮನನ ಮಾಡಿದರೆ ಎಲ್ಲವನ್ನು ಮನನ ಮಾಡಿದಂತಾಗುವುದೋ,

ಯಾವುದನ್ನು ವಿಶೇಷವಾಗಿ ಅರಿತರೆ ಬೇರೆಲ್ಲವನ್ನೂ ವಿಶೇಷವಾಗಿ ಅರಿತಂತಾಗುವುದೋ, ಅಂಥ ವೇದಾಧ್ಯಯನದ ಮುಖ್ಯ ಉದ್ದೇಶವಾಗಿರುವ ಪರಮಾತ್ಮತತ್ತ್ವವನ್ನು ಕೇಳಿ ತಿಳಿದುಕೊಂಡಿರುವಿಯೇನು ? ಎಂದು ಕೇಳಿದನು.

'ಕಥಂ ನು ಭಗವಃ ಸ ಆದೇಶೋ ಭವತಿ' ಇತಿ ॥

'ಪೂಜ್ಯರೇ ಆ ಒಂದು ವಸ್ತುವನ್ನು ಶ್ರವಣ ಮನನ ಹಾಗೂ ಧ್ಯಾನದಿಂದ ಅರಿತುಕೊಂಡಾಗ ಬೇರೆ ಎಲ್ಲಾ ವಸ್ತುಗಳ ಶ್ರವಣ ಮನನ ಧ್ಯಾನಗಳನ್ನು ಮಾಡಿದಂತಾಗುತ್ತದೆ ಎಂಬ ಈ ಉಪದೇಶವು ಹೇಗೆ ಯುಕ್ತವಾದೀತು ?' ಎಂದು ಶ್ವೇತಕೇತುವು ತಂದೆಯನ್ನು ಕೇಳಿದನು.

'ಯಥಾ ಸೋಮ್ಯೈಕೇನ ಮೃತ್ ಪಿಂಡೇನ ಸರ್ವಂ ಮೃಣ್ಮಯಂ ವಿಜ್ಞಾತಂ ಸ್ಯಾತ್ ವಾಚಾರಂಭಣಂ ವಿಕಾರೋ, ನಾಮಧೇಯಂ ಮೃತ್ತಿಕೇತ್ಯೇವ ಸತ್ಯಮ್ ॥

ಮಗನ ಪ್ರಶ್ನೆಗೆ ಉತ್ತರವಾಗಿ ಉದ್ದಾಲಕರು 'ಎಲೋ ಮಂಗಳ ಸ್ವರೂಪನೇ, ಒಂದು ಮಣ್ಣಿನ ಮುದ್ದೆಯನ್ನು ತಿಳಿದುಕೊಂಡರೆ, ಮಣ್ಣಿನಿಂದಾದ ಇತರ ಎಲ್ಲಾ ವಸ್ತುಗಳೂ ಮಣ್ಣೇ ಎಂದು ಹೇಗೆ ತಿಳಿಯಲ್ಪಡುತ್ತವೋ ಹಾಗೆಯೇ, ಪರಮಾತ್ಮನನ್ನು ಸತ್ಯ ಎಂದರಿತುಕೊಂಡರೆ, ಅವನಂತೆಯೇ ಪ್ರಾಮಾಣಿಕವಾದ ಜಗತ್ತು ಸತ್ಯ ಎಂದು ತಿಳಿಯಲ್ಪಡುತ್ತವೆ.

ಸಂಸ್ಕೃತಭಾಷೆಗಿಂತ ಇತರವಾದ ಎಲ್ಲಾ ಭಾಷೆಗಳಲ್ಲಿ ಮಣ್ಣು ಮೊದಲಾದ ಶಬ್ದಗಳನ್ನು ವಾಗಿಂದ್ರಿಯದಿಂದ ನಾನಾ ಪ್ರಕಾರವಾಗಿ ಉಚ್ಚಾರಣೆ ಮಾಡುವುದು, ಆ ಶಬ್ದಗಳ ಉತ್ಪತ್ತಿಯೇ ಆಗಿದೆ. ಮೃತ್ತಿಕಾ ಮೊದಲಾದ ಸಂಸ್ಕೃತ ಶಬ್ದಗಳಂತೆ ಮೊದಲೇ ಇರುವವುಗಳ ಅಭಿವ್ಯಕ್ತಿಯಲ್ಲ. ಆದುದರಿಂದ ಆ ಶಬ್ದಗಳೆಲ್ಲಾ ಅನಿತ್ಯ. ಮೃತ್ತಿಕಾ ಮೊದಲಾದ ಸಂಸ್ಕೃತ ನಾಮಧೇಯಗಳು ನಿತ್ಯ. ಹೀಗೆ ಸಂಸ್ಕೃತಪದಗಳು ಪ್ರಧಾನ. ಸಂಸ್ಕೃತೇತರ ಭಾಷೆಗಳಲ್ಲಿರುವ ಪದಗಳು ಅಪ್ರಧಾನ. ಹೇಗೆ ಪ್ರಧಾನವಾದ ಸಂಸ್ಕೃತಪದಗಳನ್ನು ಅರಿತುಕೊಂಡ ಮಾತ್ರದಿಂದ ಇತರ ಭಾಷೆಗಳನ್ನು ಅರಿತುಕೊಂಡಿದ್ದರಿಂದ ಸಿಗಬಹುದಾದ ಕೀರ್ತಿ, ಪ್ರತಿಷ್ಠೆ ಮೊದಲಾದ ಪ್ರಯೋಜನವು ಸಿದ್ಧಿಸುತ್ತದೋ, ಹಾಗೆಯೇ ಪ್ರಧಾನವಾದ ಪರಮಾತ್ಮನನ್ನು ಅರಿತುಕೊಂಡರೆ ಕರ್ಮ, ದೇವತೆ ಇವೇ ಮೊದಲಾದ ಜಗತ್ತನ್ನು ಅರಿತುಕೊಂಡದ್ದರಿಂದ ಸಿಗುವ ಸ್ವರ್ಗಾದಿ ಫಲವೆಲ್ಲವೂ ಲಭಿಸುತ್ತವೆ.

ಯಥಾ ಸೋಮ್ಯೈಕೇನ ಲೋಹಮಣಿನಾ ಸರ್ವಂ ಲೋಹಮಯಂ ವಿಜ್ಞಾತಂ ಸ್ಯಾತ್।
ವಾಚಾರಂಭಣಂ ವಿಕಾರೋ, ನಾಮಧೇಯಂ। ಲೋಹಮಣಿರಿತ್ಯೇವ ಸತ್ಯಮ್ ।

ಲೋಹಗಳಲ್ಲೆಲ್ಲಾ ಪ್ರಧಾನವಾಗಿದ್ದು ಲೋಹಮಣಿ (ಲೋಹಶ್ರೇಷ್ಠ) ಎನಿಸಿಕೊಂಡಿರುವ ಸುವರ್ಣವನ್ನು ಲೋಹವೆಂದು ಅರಿತರೆ, ಇತರ ಎಲ್ಲಾ ಲೋಹಮಯವಾದ ವಸ್ತುಗಳು ಲೋಹವೆಂದು ಸುಲಭವಾಗಿ ತಿಳಿಯಬಹುದು. ಹಾಗೆಯೇ ಪರಮಾತ್ಮನನ್ನು ಜ್ಞಾನಾನಂದ ರೂಪನೆಂದು ಅರಿತರೆ, ಅವನಂತೆ ಚೇತನರಾದ ಜೀವರನ್ನೂ ಹಾಗೇ ತಿಳಿಯಬಹುದು.

ವಾಗಿಂದ್ರಿಯದಿಂದ ಸಂಸ್ಕೃತೇತರ ಭಾಷಾಶಬ್ದಗಳ ಉಚ್ಚಾರಣೆಯು ನಾನಾ ಪ್ರಕಾರವಾಗಿ ಮಾಡಲ್ಪಡುತ್ತಿರುವ ಕಾರಣ ಅಂಥ ಶಬ್ದಗಳು ಅನಿತ್ಯ ಲೋಹಮಣಿ ಎಂದು ಮುಂತಾದ ಸಂಸ್ಕೃತ ನಾಮಧೇಯಗಳು ನಿತ್ಯ. ಹೀಗೆ ನಿತ್ಯವಾಗಿದ್ದು ಪ್ರಧಾನವಾಗಿರುವ ಸಂಸ್ಕೃತ ಭಾಷೆಯನ್ನರಿತುಕೊಂಡ ಮಾತ್ರದಿಂದ, ಅನಿತ್ಯವಾಗಿದ್ದು ಅಪ್ರಧಾನವಾಗಿರುವ ಇತರ ಭಾಷಾ ಪರಿಜ್ಞಾನದಿಂದ ದೊರಕಬಹುದಾದ ಸಂಪತ್ತು ಮನ್ನಣೆಯೇ ಮೊದಲಾದ ಫಲಗಳು ದೊರೆಯುತ್ತವೆ. ಹಾಗೆಯೇ ಪರಮಾತ್ಮನು ಇತರ ಪ್ರಪಂಚಕ್ಕಿಂತ ಪ್ರಧಾನನಾದ ಕಾರಣ ಅವನನ್ನು ಅರಿತುಕೊಂಡರೆ ಅಷ್ಟರಿಂದಲೇ ಅಪ್ರಧಾನವಾದ ಕರ್ಮ, ದೇವತೆಗಳೇ ಮೊದಲಾದ ಜಗತ್ತಿನ ಪರಿಜ್ಞಾನದಿಂದ ಸಿಗಬಹುದಾದ ಸ್ವರ್ಗಾದಿ ಪ್ರಯೋಜನವು ಕೈಗೂಡುತ್ತದೆ.

> ಯಥಾ ಸೋಮ್ಯೈಕೇನ ನಖನಿಕೃಂತನೇನ ಸರ್ವಂ ಕಾರ್ಷ್ಣಾಯಸಂ ವಿಜ್ಞಾತಂ ಸ್ಯಾತ್।
> ವಾಚಾರಂಭಣಂ ವಿಕಾರೋ, ನಾಮಧೇಯಂ ಕಾರ್ಷ್ಣಾಯಸಮಿತ್ಯೇವ ಸತ್ಯಮ್ ।
> ಏವಂ ಸೋಮ್ಯ ಸ ಆದೇಶೋ ಭವತಿ' ಇತಿ ॥

ಅಲ್ಪವಾದ ಕಬ್ಬಿಣದಿಂದ ನಿರ್ಮಿತವಾದ ಒಂದು ಉಗುರುಕತ್ತಿಯನ್ನು, ಇದು ಕಬ್ಬಿಣ ಎಂದು ಪರಿಚಯ ಮಾಡಿಕೊಂಡರೆ, ಅದಕ್ಕೆ ಸದೃಶವಾಗಿರುವುದರಿಂದಾಗಿ ಕಬ್ಬಿಣದಿಂದ ನಿರ್ಮಿತವಾದ ವಸ್ತುಗಳನ್ನೆಲ್ಲಾ ಕಬ್ಬಿಣವೆಂದು ತಿಳಿದುಕೊಂಡಂತಾಗುತ್ತದೆ ಎಂದ ಮೇಲೆ ಶ್ರೇಷ್ಠನಾದ ಪರಮಾತ್ಮನನ್ನು ಸತ್ಯ ಎಂದು ಅರಿತುಕೊಂಡರೆ, ಅವನಂತೆ ಪ್ರಾಮಾಣಿಕವಾಗಿದ್ದು ಅವನಿಗೆ ಸದೃಶವಾದ ಅಲ್ಪವಾದ ಜಗತ್ತನ್ನು ಸತ್ಯವೆಂದು ಅರಿತಂತಾಗುತ್ತದೆ ಎಂದು ಬೇರೆ ಹೇಳಬೇಕಾಗಿಲ್ಲ.

ವಾಗಿಂದ್ರಿಯದಿಂದ ಕಬ್ಬಿಣ ಎಂದು ಮೊದಲಾದ ಸಂಸ್ಕೃತೇತರ ಶಬ್ದಗಳ ಅನಿತ್ಯ ಉಚ್ಚಾರಣೆಯು ನಾನಾವಿಧವಾಗಿ ಮಾಡಲ್ಪಡುತ್ತಿರುವ ಕಾರಣ ಆ ಶಬ್ದಗಳು ಅನಿತ್ಯ ಕಾರ್ಷ್ಣಾಯಸ ಮೊದಲಾದ ಸಂಸ್ಕೃತ ಪದಗಳ ಉಚ್ಚಾರಣೆಯು ಅವುಗಳ ಉತ್ಪತ್ತಿಯಾಗಿರದೆ ಅಭಿವ್ಯಕ್ತಿ ಮಾತ್ರವೇ ಆಗಿರುವುದರಿಂದ ಅವು ನಿತ್ಯ. ಹೀಗೆ ನಿತ್ಯವಾಗಿದ್ದು ಪ್ರಧಾನವಾಗಿರುವ ಸಂಸ್ಕೃತ ಭಾಷೆಯನ್ನರಿತುಕೊಂಡ ಮಾತ್ರದಿಂದಲೇ ಅಪ್ರಧಾನವಾದ ಇತರ ಭಾಷೆಗಳ ಅರಿವಿನಿಂದ ದೊರಕಬಹುದಾದ ಪ್ರಯೋಜನವೆಲ್ಲಾ ಸಿದ್ಧಿಸುತ್ತದೆ. ಹಾಗೆಯೇ ಜಗತ್ತಿಗಿಂತ ಪರಮಾತ್ಮ ಪ್ರಧಾನನಾಗಿರುವ ಕಾರಣ ಪರಮಾತ್ಮನನ್ನು ಅರಿತುಕೊಂಡರೆ ಅಪ್ರಧಾನವಾದ

ಜಗತ್ತನ್ನು ಅರಿತುಕೊಳ್ಳಲು ಪ್ರಯಾಸ ಪಡದಿದ್ದರೂ ಅದರ ಅರಿವಿನಿಂದ ಲಭಿಸಬಹುದಾದ ಪ್ರಯೋಜನವು ಲಭಿಸುತ್ತದೆ.

'ಯಸ್ತನ್ನ ವೇದ ಕಿಮೃಚಾ ಕರಿಷ್ಯತಿ' ಎಂಬ ಶ್ರುತ್ಯರ್ಥ

तत्वप्रदीपः – न केवलं प्रश्नव्याख्यानाभ्यां लिङ्गाभ्योमेतदवगम्यते । एवं मुखतोऽप्येके शाखिनः पठन्ति - ''यस्तन्न वेद किमृचा करिष्यति'' इति । यस्यद्विष्णवाख्यमक्षरं न वेद स ऋचाऽधीतयाऽध्यापितयाऽधिगमितार्थयाऽनुष्ठितार्थयाऽनुष्ठापितार्थया वा किं करिष्यति । तद्वेदनेनैव हि तत्प्रयोजनं, उत्कृष्टफलत्वादित्यर्थः । चकारादेतदुपसंहर्तव्यं, एतदर्थं सृष्ट्यादिकमप्यधीयते ''सप्तार्द्धगर्भा'' इत्यादीति ।।छ।।

ಕೇವಲ ಪ್ರಶ್ನೆ ಹಾಗೂ ಉತ್ತರಗಳೆಂಬ ಲಿಂಗಗಳಿಂದ ಪರಮಾತ್ಮನ ಜ್ಞಾನವೇ ಮುಖ್ಯವೆಂದು ತಿಳಿಯುವುದಲ್ಲ. ಸ್ವತಃ ಕಂಠತಃ ಕೆಲವು ಶಾಖಿಗಳು ಇದನ್ನು ಹೀಗೆ ಅಧ್ಯಯನ ಮಾಡುತ್ತಾರೆ - 'ಯಸ್ತನ್ನ ವೇದ ಕಿಮೃಚಾ ಕರಿಷ್ಯತಿ' ಎಂದು. ಯಃ = ಯಾವ ವಿಷ್ಣುವೆಂಬ ನಾಶವಿಲ್ಲದವನನ್ನು 'ನ ವೇದ' = ತಿಳಿಯಲಾರನೋ, ಅವನು ಋಚಾ = ಅಧ್ಯಯನ ಮಾಡಿದ್ದರಿಂದ ಮತ್ತು ಅಧ್ಯಯನ ಮಾಡಿಸಿದ್ದರಿಂದ, ಅಥವಾ ವೇದಾರ್ಥವನ್ನು ತಿಳಿದಿದ್ದರಿಂದ, ಅಥವಾ ಅದರಂತೆ ಅನುಷ್ಠಾನ ಮಾಡಿದ್ದರಿಂದ, ಅಥವಾ ಅನುಷ್ಠಾನ ಮಾಡಿಸಿದ್ದರಿಂದ, ಕಿಂ ಕರಿಷ್ಯತಿ = ಏನು ಪ್ರಯೋಜನವನ್ನು ಹೊಂದಿದಂತಾಗುತ್ತದೆ ? ಆದ್ದರಿಂದ ವಿಷ್ಣುವನ್ನು ತಿಳಿಯುವುದರಿಂದಲೇ ಉತ್ಕೃಷ್ಟಫಲವೆಂಬ ಪ್ರಯೋಜನವು ದೊರೆಯಲು ಸಾಧ್ಯ ಎಂಬುದು 'ಯಸ್ತನ್ನ ವೇದ' ಎಂಬ ಶ್ರುತಿಯ ಅರ್ಥವಾಗಿದೆ. ಚಕಾರದಿಂದ ಈ ವಿಷಯವನ್ನು ಉಪಸಂಹಾರ ಮಾಡಬೇಕು - ಅಂದರೆ ಪರಮಾತ್ಮನ ಜ್ಞಾನಕ್ಕೋಸ್ಕರ ಅವನ ಸೃಷ್ಟಿ ಮೊದಲಾದವುಗಳನ್ನೂ ಕೂಡ ಅಧ್ಯಯನ ಮಾಡುತ್ತಾರೆ 'ಸಪ್ತಾರ್ಧಗರ್ಭಾ' ಇತ್ಯಾದಿ ಶ್ರುತಿಯಿಂದ ಎಂದು.

ತತ್ತ್ವಪ್ರಕಾಶಿಕಾ

ವೈದಿಕಶಬ್ದಗಳನ್ನೇಕೆ ಸಮಾಕರ್ಷಣ ಮಾಡಬೇಕು ?

तत्वप्रकाशिका –

यदुक्तं 'सर्वशब्दा अन्यत्र समाकृष्य व्यवह्रियन्ते' इति, न तद्युक्तम् । वैदिकानां शब्दानां कर्मादौ समाकर्षे प्रयोजनाभावात् ।

'ಸಕಲ ಶಬ್ದಗಳು ಪರಮಾತ್ಮನನ್ನೇ ಪ್ರತಿಪಾದನೆ ಮಾಡುತ್ತವೆ. ಅಂತಹ ಶಬ್ದಗಳನ್ನು ಸಮಾಕರ್ಷ ಮಾಡಿ, ಲೌಕಿಕ ವ್ಯಹಾರವನ್ನು ಮಾಡಲಾಗಿದೆ' ಎಂದು ಹೇಳಿದ್ದು ಅಯುಕ್ತ. ವೈದಿಕವಾದ ಶಬ್ದಗಳನ್ನು ಲೌಕಿಕವಾದ ಕರ್ಮಾದಿಗಳಲ್ಲಿ ಸಮಾಕರ್ಷ ಮಾಡುವುದರಿಂದ ಏನೂ ಪ್ರಯೋಜನವಿಲ್ಲ.

ಭಗವಂತನ ಜ್ಞಾನವಷ್ಟೇ ಸಾಕಲ್ಲವೇ?

तत्वप्रकाशिका – न च कर्मसिद्धिरेव प्रयोजनम् । भगवज्ज्ञानमात्रेणैव ('एव' इति नास्ति-क.ख)पुरुषार्थसिद्धौ तद्वैयर्थ्यात् । वेदानाञ्च काम्यफलार्थमप्रवृत्तेः ।

ಕರ್ಮಸಿದ್ಧಿಯನ್ನೇ ಪ್ರಯೋಜನವೆನ್ನಬೇಕು. ಆದರೆ ಭಗವಂತನ ಜ್ಞಾನದಿಂದಲೇ ಪುರುಷಾರ್ಥವು ಸಿದ್ಧವಾಗುತ್ತಿರುವಾಗ, ಕರ್ಮಸಿದ್ಧಿಯು ವ್ಯರ್ಥ. ಏಕೆಂದರೆ ವೇದಗಳು ಕಾಮ್ಯಫಲಕ್ಕೋಸ್ಕರ ಹೊರಟಿರುವುದೇ ಇಲ್ಲ.

ಸಮಾಕರ್ಷದಿಂದ ಏನು ಪ್ರಯೋಜನ ?

तत्वप्रकाशिका – अतो वैदिकानां शब्दानामन्यत्र समाकर्षे प्रयोजनाभावात्, मुख्यत एवाऽन्यवाचकत्वम्, इत्याशङ्कां परिहरत्सूत्रमुपन्यस्य व्याचष्टे – अन्यार्थमिति ।।

ಆದ್ದರಿಂದ ವೈದಿಕಶಬ್ದಗಳನ್ನು ಲೌಕಿಕವಾದ ಕರ್ಮಾದಿವಿಷಯದಲ್ಲಿ ಸಮಾಕರ್ಷ ಮಾಡುವುದರಿಂದ ಏನೂ ಪ್ರಯೋಜನವಿಲ್ಲದ ಕಾರಣ ಕರ್ಮಾದಿಲೌಕಿಕಪದಾರ್ಥಗಳನ್ನೇ ಮುಖ್ಯವಾಗಿ ಪ್ರತಿಪಾದನೆ ಮಾಡುತ್ತವೆಂದು ಹೇಳಬೇಕು. ಇಷ್ಟು ಪೂರ್ವಪಕ್ಷ.

ಇದನ್ನು ನಿರಾಕರಿಸಲು ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ 'ಅನ್ಯಾರ್ಥಮ್' ಇತ್ಯಾದಿಯಾಗಿ.

ಅನ್ಯಪದಾರ್ಥದ ಜ್ಞಾನ ಪರಮಾತ್ಮನ ಜ್ಞಾನಕೋಸ್ಕರ

तत्वप्रकाशिका – 'समाकर्षेण वेदः कर्मदेवतादिकमपि वदति' इति युक्तमेव। कर्मादिज्ञानस्यापि परमात्मज्ञानार्थत्वादिति जैमिनिराचार्यो मन्यत इत्यर्थः । अन्यज्ञानस्य परमात्मज्ञानार्थत्वं कुतः? इत्यत आह – कस्मिन्निति ।।

ಸಮಾಕರ್ಷದಿಂದ ವೇದವು ಕರ್ಮ ಹಾಗೂ ದೇವತೆಗಳನ್ನು ಪ್ರತಿಪಾದನೆ ಮಾಡುತ್ತದೆಂದು ಹೇಳಿದ್ದು ಯುಕ್ತವೇ ಆಗಿದೆ. ಏಕೆಂದರೆ ಕರ್ಮ ಹಾಗೂ ದೇವತೆಗಳ ಜ್ಞಾನವು ಪರಮಾತ್ಮನ ಜ್ಞಾನಕ್ಕೋಸ್ಕರ ಸಾರ್ಥಕವೆನ್ನುತ್ತಾರೆ ಜೈಮಿನ್ಯಾಚಾರ್ಯರು. ಅನ್ಯಪದಾರ್ಥದ ಜ್ಞಾನವು ಪರಮಾತ್ಮನ ಜ್ಞಾನಕ್ಕೋಸ್ಕರವೇ ಇರುತ್ತದೆಂದು ಹೇಗೆ ತಿಳಿಯುವುದು ? ಎಂಬ ಪ್ರಶ್ನೆಗೆ 'ಕಸ್ಮಿನ್' ಎಂಬ ಭಾಷ್ಯದಿಂದ ಉತ್ತರಿಸಿದ್ದಾರೆ.

ಶೌನಕರ ಪ್ರಶ್ನೆಗೆ ಉದ್ದಾಲಕರ ಉತ್ತರ

तत्वप्रकाशिका – सर्वमिदं कर्मादिकं कस्मिन् विज्ञाते विज्ञातं भवति? विज्ञातस्याप्यस्य फलं कस्मिन् ज्ञाते भवति ? एतज्ज्ञानमात्रस्याऽफलत्वात्, इति शौनकप्रश्ने, सर्वमपरविद्यया विज्ञातं भवति, विज्ञातं च परविद्याविषयप रमात्मज्ञानेन सफलं भवति, अतो 'द्वे विद्ये वेदितव्ये' इत्यङ्गिरसो व्याख्यानात्।

ಕರ್ಮಾದಿ ಸಕಲ ಲೌಕಿಕಪದಾರ್ಥಗಳ ಜ್ಞಾನವು ಯಾವಾತನನ್ನು ತಿಳಿಯುವುದರಿಂದ ತಿಳಿದಂತಾಗುತ್ತದೆ ? ಏಕೆಂದರೆ ಕೇವಲ ಕರ್ಮಾದಿಗಳ ಜ್ಞಾನಕ್ಕೆ ಯಾವುದೇ

ಪ್ರಯೋಜನವಿರುವುದಿಲ್ಲ. ಹೀಗೆ ಶೌನಕರು ಪ್ರಶ್ನಿಸುತ್ತಾರೆ. ಆದಕ್ಕೆ ಉದ್ದಾಲಕರು ಹೀಗೆ ಉತ್ತರಿಸಿದ್ದಾರೆ - ಸಕಲ ಪದಾರ್ಥಗಳೂ ಕೂಡ ಅಪರವಿದ್ಯೆಯಿಂದ ವಿಜ್ಞಾತವಾಗುತ್ತದೆ. ಈ ಜ್ಞಾನವು ಪರವಿದ್ಯೆಗೆ ವಿಷಯನಾದ ಪರಮಾತ್ಮನ ಜ್ಞಾನದಿಂದಲೇ ಸಫಲವಾಗುತ್ತದೆ. ಹೀಗೆ ಎರಡೂ ವಿದ್ಯೆಯ ಜ್ಞಾನ ಅತ್ಯಂತ ಆವಶ್ಯಕವೆಂದು ಆಂಗೀರಸರು ವ್ಯಾಖ್ಯಾನಿಸಿದ್ದಾರೆ.

ಪರಮಾತ್ಮನ ತಿಳಿದರೆ ಉಳಿದೆಲ್ಲವೂ ತಿಳಿದಂತೆ

तत्वप्रकाशिका – तथा 'यस्मिन् परमात्मनि ज्ञाते सर्वं कर्मादिकं ज्ञातमपि सफलं स्यात्, तद्विषय उपदेशः कथं स्यात् ? तं प्रकारं कथमहं जानीयाम्? इति श्वेतकेतुप्रश्ने 'यथैकेन मत्पिण्डेन ज्ञातेन ज्ञातमपि घटादिकं ज्ञातफलं भवति, विशेषज्ञानात् । एवं परमात्मनि ज्ञाते सर्वं ज्ञातफलं भवति', इत्युद्दालकव्याख्यानात्, अन्यज्ञानस्य परमात्मज्ञानार्थत्वं ज्ञायत इति भावः।

ಇದರಂತೆ ಯಾವ ಪರಮಾತ್ಮನ ಜ್ಞಾನವನ್ನು ಹೊಂದುವುದರಿಂದ ಕರ್ಮಾದಿ ಸಕಲ ಪದಾರ್ಥಗಳು ಜ್ಞಾತವಾಗುವ ಮೂಲಕ ಸಫಲವಾಗುತ್ತವೋ, ಅಂತಹ ಪರಮಾತ್ಮನ ಉಪದೇಶವನ್ನು ಮಾಡಿರಿ. ಆ ಉಪದೇಶ ಪ್ರಕಾರ ನನಗೆ ಹೇಗೆ ತಿಳಿಯುತ್ತದೆ ? ಹೀಗೆ ಶ್ವೇತಕೇತು ಪ್ರಶ್ನಿಸಿದಾಗ - ಉದ್ದಾಲಕರು ಉತ್ತರಿಸಿದ್ದಾರೆ. ಯಾವರೀತಿಯಾಗಿ ಒಂದು ಮಣ್ಣಿನ ಮುದ್ದೆಯನ್ನು ತಿಳಿಯುವುದರಿಂದ ಅಜ್ಞಾತವಾದ ಘಟಾದಿಗಳೂ ಕೂಡ ಜ್ಞಾತವಾಗುವುದು ಕಂಡಿದೆಯೋ, ಇದೇ ರೀತಿಯಾಗಿ ಪರಮಾತ್ಮನನ್ನು ತಿಳಿಯುವುದರಿಂದ ಉಳಿದೆಲ್ಲ ಲೌಕಿಕ-ಪದಾರ್ಥಗಳ ಜ್ಞಾನವು ಸಫಲವಾಗುತ್ತದೆ. ಹೀಗೆ ಉದ್ದಾಲಕರು ಉತ್ತರಿಸಿದ್ದಾರೆ. ಇದರಿಂದ ಕರ್ಮಾದಿಜ್ಞಾನಗಳು ಪರಮಾತ್ಮನ ಜ್ಞಾನಕ್ಕೋಸ್ಕರ ಸಾರ್ಥಕವೆಂದು ಸಿದ್ಧವಾಗುತ್ತದೆ.

ಕೆಲವು ಶಾಖಿಗಳ ಸ್ಪಷ್ಟವಾದ ಅಧ್ಯಯನ

तत्वप्रकाशिका – अपिच न केवलमर्थादेवमन्यज्ञानस्य परमात्म ज्ञानार्थत्वसिद्धिः, किं तु स्पष्टं चैवमेके शाखिनः पठन्ति, इत्याह – एवमिति।।

ಹೀಗೆ ಅರ್ಥಾತ್ ಅನ್ಯಜ್ಞಾನವು ಪರಮಾತ್ಮಜ್ಞಾನಕ್ಕೋಸ್ಕರ ಸಾರ್ಥಕವೆಂದಷ್ಟೇ ಸಿದ್ಧವಾಗುವುದಲ್ಲ; ಕೆಲವು ಶಾಖಿಗಳು ಸ್ಪಷ್ಟವಾಗಿ ಇದನ್ನು ಹಾಗೇ ಹೇಳಿದ್ದಾರೆಂದು 'ಏವಂ' ಎಂಬ ಭಾಷ್ಯದ ವಾಕ್ಯವು ಸ್ಪಷ್ಟಪಡಿಸುತ್ತಿದೆ.

ಸಕಲ ವೇದಾಧ್ಯಯನವು ಪರಮಾತ್ಮನ ಜ್ಞಾನಕ್ಕೋಸ್ಕರ

तत्वप्रकाशिका – तदक्षरं यो न वेद स कर्मादिविषयचर्चा किं करिष्यति? यतः सर्वा ऋचः परमे व्याप्ते अक्षरे तज्ज्ञानार्थमेव कर्मादिकं वदन्ति । तस्यैव सर्वदेवाधारत्वात् । ये पुनः तदक्षरं विदुः ते सम्यगासत इत्यर्थः ।।

ಅಕ್ಷರನಾದ ಪರಮಾತ್ಮನನ್ನು ಯಾರು ತಿಳಿಯುವುದಿಲ್ಲವೋ, ಅವನು ಕರ್ಮಪ್ರತಿಪಾದಕವಾದ ಋಗ್ವೇದವನ್ನು ಓದಿ ಏನು ಮಾಡುತ್ತಾನೆ? ಏಕೆಂದರೆ ಸಕಲ ವೇದವು ಅತ್ಯಂತ ಶ್ರೇಷ್ಠನಾದ ಎಲ್ಲೆಡೆ ವ್ಯಾಪ್ತನಾದ ಅಕ್ಷರ ಪುರುಷನಾದ ಪರಮ್ಮಾನ ಜ್ಞಾನಕ್ಕೋಸ್ಕರವಾಗಿಯೇ ಕರ್ಮಗಳನ್ನು ಪ್ರತಿಪಾದನೆ ಮಾಡುತ್ತಿವೆ. ಏಕೆಂದರೆ ಆ ಪರಮಾತ್ಮನೇ ಸಕಲ ದೇವತೆಗಳಿಗೂ ಆಧಾರನಾಗಿದ್ದಾನೆ. 'ಯಾವ ಜ್ಞಾನಿಗಳು ಆ ಅಕ್ಷರನನ್ನು ತಿಳಿಯುತ್ತಾರೋ, ಅವರು ಎಲ್ಲಾ ರೀತಿಯಿಂದಲೂ ಉಪಭೋಗ ಮಾಡುತ್ತಾ ಪರಮಾತ್ಮನಲ್ಲಿಯೇ ರತರಾಗಿರುತ್ತಾರೆ ಎಂಬುದು ಮಂತ್ರದ ಅರ್ಥ.

ಭಾವದೀಪ

ಸಮಾಕರ್ಷದಿಂದ ಮುಮುಕ್ಷುಗಳಿಗೆ ಪ್ರಯೋಜನವಿದೆಯೇ ?

लौकिकानामन्यत्र व्यवहारार्थं समाकर्षमुपेत्याह – वैदिकानामिति ।। मुमुक्षुं प्रतीतिशेषः ।

ಲೌಕಿಕವಾದ ಶಬ್ದಗಳನ್ನು ವ್ಯವಹಾರಕ್ಕೋಸ್ಕರ ಸಮಾಕರ್ಷ ಮಾಡುವುದನ್ನು ತಪ್ಪಲ್ಲವೆಂದು ಅಂಗೀಕರಿಸಿ 'ವೈದಿಕಾನಾಂ' ಎಂಬ ವಾಕ್ಯವು ಹೊರಟಿದೆ. 'ಮುಮುಕ್ಷುಗಳನ್ನು ಕುರಿತು' ಎಂಬುದನ್ನು ಇಲ್ಲಿ ಅಧ್ಯಾಹಾರ ಮಾಡಿಕೊಳ್ಳಬೇಕು. ವೈದಿಕವಾದ ಶಬ್ದಗಳನ್ನು ಲೌಕಿಕವಾದ ಕರ್ಮಾದಿಗಳಲ್ಲಿ ಸಮಾಕರ್ಷ ಮಾಡುವುದರಿಂದ ಮುಮುಕ್ಷುಗಳಿಗೆ ಯಾವುದೇ ಪ್ರಯೋಜನವಿಲ್ಲವೆಂದು ಅಭಿಪ್ರಾಯ.

ಕರ್ಮಜ್ಞಾನವನ್ನು ಅವಶ್ಯ ಪಡೆಯಬೇಕು

भावदीपः – ननु 'तमेवं विद्वानमृत' इत्यादेः ज्ञानात्, मोक्षसिद्धावपि पशुपुत्रस्वर्गादिफलप्राप्त्यर्थं कर्मसिद्धिर्न स्यादित्यत आह – वेदानां चेति।। मुमुक्षुं प्रतीतिशेषः ।

ಪ್ರಶ್ನೆ - 'ತಮೇವಂ ವಿದ್ವಾನ್ ಅಮೃತ' ಎಂಬ ಶ್ರುತಿಯಲ್ಲಿ ಜ್ಞಾನದಿಂದಲೇ ಮೋಕ್ಷವು ದೊರೆಯುತ್ತದೆ ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಆದರೂ ಕೂಡ ಪಶು, ಪುತ್ರ, ಸ್ವರ್ಗ ಮೊದಲಾದ ಫಲಗಳನ್ನು ಪಡೆಯಲು ಕರ್ಮಾಚರಣೆಯನ್ನು ಮುಮುಕ್ಷುಗಳು ಕೂಡ ಆಚರಿಸಲೇ ಬೇಕು. ಅದಕ್ಕಾಗಿ ಕರ್ಮಾದಿಗಳಲ್ಲಿ ಶಬ್ದಗಳನ್ನು ಸಮಾಕರ್ಷ ಮಾಡಬೇಕಲ್ಲವೆ?

ಈ ಪ್ರಶ್ನೆಗೆ 'ವೇದಾನಾಂ ಚ' ಎಂಬ ಟೀಕಾವಾಕ್ಯವು ಉತ್ತರಿಸುತ್ತದೆ. ಇಲ್ಲಿಯೂ ಸಹ ಮುಮುಕ್ಷುವನ್ನು ಕುರಿತು ಎಂಬುದನ್ನು ಶೇಷಪೂರಣ ಮಾಡಿಕೊಳ್ಳಬೇಕು.

'ರೋಚನಾರ್ಥಂ ಫಲಶ್ರುತಿಃ'

ಭಾವದೀಪಃ – 'रोचनार्थं फलश्रुतिः' इत्येकादशस्कन्धोक्तेः । ''न तादृशी प्रीतिरीड्यस्य विष्णोर्गुणोत्कर्षज्ञातरि यादृशी स्यात् । तत्प्रीणनान्मोक्षमाप्नोति सर्वस्ततो वेदास्तत्परास्सर्व एव'' इत्यादि श्रुतेश्चेति भावः ।

'ರೋಚನಾರ್ಥಂ ಫಲಶ್ರುತಿಃ' ಸಾಧಾನಾನುಷ್ಠಾನದಲ್ಲಿ ರುಚಿ ಹುಟ್ಟಿಸಲು ವೇದದಲ್ಲಿ ಅನೇಕ ಐಹಿಕಫಲಗಳನ್ನು ಹೇಳಲಾಗಿದೆ ಎಂಬುದಾಗಿ ಭಾಗವತದ ಏಕಾದಶಸ್ಕಂಧದಲ್ಲಿ ಹೇಳಿದ್ದಾರೆ. ಮತ್ತು ''ನ ತಾದೃಶೀ ಪ್ರೀತಿರೀಡ್ಯಸ್ಯ ವಿಷ್ಣೋರ್ಗುಣೋತ್ಕರ್ಷಜ್ಞಾತರಿ ಯಾದೃಶೀ ಸ್ಯಾತ್ । ತತ್ಪ್ರೀಣನಾನ್ಮೋಕ್ಷಮಾಪ್ನೋತಿ ಸರ್ವಸ್ತತೋ ವೇದಾಸ್ತತ್ಪರಾಃ ಸರ್ವ ಏವ'' ತನ್ನ ಗುಣಪರಿಪೂರ್ಣತ್ವದ ಜ್ಞಾನವನ್ನು ಹೊಂದಿದವನ ಮೇಲೆ ಆಗುವಷ್ಟು ಸಂತೋಷ ವಿಷ್ಣುವಿಗೆ ಬೇರೆ ಯಾರಲ್ಲಿಯೂ ಇರುವುದಿಲ್ಲ. ಹೀಗೆ ವಿಷ್ಣುವಿನ ಪ್ರೀತಿಯನ್ನು ಸಂಪಾದಿಸಿದವನು ಮೋಕ್ಷವನ್ನು ಹೊಂದುತ್ತಾನೆ. ಆದ್ದರಿಂದ ಸಕಲವೇದಗಳು ವಿಷ್ಣುವಿನ ಗುಣಪರಿಪೂರ್ಣತ್ವಕ್ಕಾಗಿಯೇ ಹೊರಟಿರುತ್ತವೆ.

ಇವೇ ಮೊದಲಾದ ಶ್ರುತಿಗಳ ಆಧಾರದಿಂದ ವೇದಗಳು ಕಾಮ್ಯಫಲಕ್ಕೊಸ್ಕರ ಹೊರಟಿರುವುದೇ ಇಲ್ಲವೆಂದು ಸ್ಪಷ್ಟವಾಗುತ್ತದೆ.

ಉತ್ತಮಾಧಿಕಾರಿಗಳಿಗೂ ಕರ್ಮದ ಅಪೇಕ್ಷೆ ಇದೆ

ಭಾವದೀಪಃ – यद्यपि सर्वपुरुषार्थनये ज्ञानादेवाऽशेषपुरुषार्थप्राप्तिर्वक्ष्यते। तथाप्यभ्युपेत्यवादेन वाऽनुत्तमाधिकारिणामुत्तमानामपि प्रबलप्रतिबन्धकवतां कर्मसापेक्षत्वाद्वा एवमुक्तमिति ध्येयम् ।।

ವಾಸ್ತವಿಕವಾಗಿ ಸರ್ವಪುರುಷಾರ್ಥಾಧಿಕರಣದಲ್ಲಿ ಜ್ಞಾನದಿಂದಲೇ ಸಕಲ ಪುರುಷಾರ್ಥಗಳ ಪ್ರಾಪ್ತಿಯಾಗುತ್ತದೆ ಎಂದು ಹೇಳಿರುತ್ತಾರೆ. ಆದರೂ ಪ್ರಕೃತ ಟೀಕೆಯಲ್ಲಿ ಅಂಗೀಕಾರವಾದದಿಂದ ಅಧಮಾಧಿಕಾರಿಗಳ ವಿಷಯದಲ್ಲಿ ವಾಕ್ಯಗಳು ಹೊರಟಿರುತ್ತವೆ ಅಥವಾ ಉತ್ತಮಾಧಿಕಾರಿಗಳಾಗಿದ್ದರೂ ಪ್ರಬಲವಾದ ಪ್ರತಿಬಂಧಕವಿದ್ದಾಗ ಅವರೂ ಕೂಡ ಕರ್ಮವನ್ನು ಅಪೇಕ್ಷಿಸಬೇಕೆಂಬ ದೃಷ್ಟಿಯಿಂದಲೂ ಈ ಟೀಕಾವಾಕ್ಯಗಳು ಹೊರಟಿರುತ್ತವೆ ಎಂದು ತಿಳಿಯಬೇಕು.

ಟೀಕೆಯಲ್ಲಿರುವ 'ಅತಃ' ಎಂಬ ಪದಕ್ಕೆ ವ್ಯಾಖ್ಯಾನ

भावदीपः – अत इति ।। ज्ञानमात्रेण पुरुषार्थासिद्धेरित्यर्थः । कर्मादिकमपि वदतीति भाष्यमादिपदार्थं वदन् शेषपूर्त्या व्याचष्टे – समाकर्षेणेति ।।

ಟೀಕೆಯಲ್ಲಿರುವ 'ಅತಃ' ಎಂಬ ಪದಕ್ಕೆ ಕೇವಲಜ್ಞಾನದಿಂದ ಪುರುಷಾರ್ಥವು ಸಿದ್ಧವಾಗದ ಕಾರಣ ಎಂದರ್ಥ. 'ಕರ್ಮಾದಿಕಮಪಿ ವದತಿ' ಎಂಬ ಭಾಷ್ಯದ ಮಾತಿನಲ್ಲಿರುವ ಆದಿಪದದ ಅರ್ಥವನ್ನು ಹೇಳುವ ಮೂಲಕ ಪದವನ್ನು ಶೇಷಪೂರಣ ಮಾಡಿಕೊಳ್ಳುವ ಮೂಲಕ 'ಸಮಾಕರ್ಷೇಣ' ಎಂಬ ಟೀಕಾವಾಕ್ಯವು ವ್ಯಾಖ್ಯಾನ ಮಾಡಲು ಹೊರಟಿದೆ.

ಸೂತ್ರದಲ್ಲಿರುವ ಅನ್ಯಪದಕ್ಕೆ ವ್ಯಾಖ್ಯಾನ

भावदीपः – सूत्रेऽन्यपदेन प्रस्तुतजीवाद्यन्यपरमात्मवाचिना तज्ज्ञानं लक्ष्यत इति भावेन भाष्ये परमात्मज्ञानार्थमित्युक्तं हेतुगर्भं मत्त्वा व्याचष्टे – कर्मादीति ।।

ಸೂತ್ರದಲ್ಲಿರುವ 'ಅನ್ಯ' ಎಂಬ ಪದದಿಂದ ಪ್ರಸಕ್ತನಾದ ಜೀವನಿಗಿಂತ ಭಿನ್ನನಾದ ಪರಮಾತ್ಮನನ್ನು ವಿವಕ್ಷಿಸಲಾಗಿದೆ. ಈ 'ಅನ್ಯ' ಎಂಬ ಪದಕ್ಕೆ ಪರಮಾತ್ಮನ ಜ್ಞಾನದಲ್ಲಿ ಲಕ್ಷಣಾವೃತ್ತಿಯನ್ನು ಅಂಗೀಕರಿಸಬೇಕು. ಈ ಅಭಿಪ್ರಾಯದಿಂದ ಭಾಷ್ಯದಲ್ಲಿ 'ಪರಮಾತ್ಮಜ್ಞಾನಾರ್ಥಮ್' ಎಂಬುದಾಗಿ ಅನ್ಯಪದದ ಅರ್ಥವನ್ನು ಹೇಳಿರುತ್ತಾರೆ. 'ಪರಮಾತ್ಮಜ್ಞಾನಾರ್ಥಂ' ಎಂಬ ಪದವು ಹೀಗೆ ಹೇತುಗರ್ಭಿತವಾಗಿದೆ ಎಂದು ವಿವಕ್ಷಿಸಿ 'ಕರ್ಮಾದಿ' ಎಂಬ ವಾಕ್ಯದಿಂದ ವ್ಯಾಖ್ಯಾನ ಮಾಡಿದ್ದಾರೆ.

ಭಾಷ್ಯದಲ್ಲಿ 'ವದತಿ' ಪದಕ್ಕೆ ವ್ಯಾಖ್ಯಾನ

भावदीपः – भाष्ये 'वदति' इत्युक्तावपि ज्ञानस्येत्युक्तिः दृष्टान्तानुसारात्।

ಭಾಷ್ಯದಲ್ಲಿ 'ವದತಿ' ಎಂದು ಹೇಳಿದ್ದರೂ ಕೂಡ ಟೀಕೆಯಲ್ಲಿ 'ಕರ್ಮಾದಿಜ್ಞಾನಸ್ಯ' ಎಂದು ಹೇಳಿದ್ದು ದೃಷ್ಟಾಂತಕ್ಕೆ ಅನುಸಾರಿಯಾಗಿ ಎಂದು ತಿಳಿಯಬೇಕು.

ಕರ್ಮಜ್ಞಾನಕ್ಕೆ ಪ್ರಕೃತೋಪಯೋಗ

भावदीपः – अन्यज्ञानेनान्यज्ञानाऽयोगात् फललक्षणमुपेत्य प्रकृतोपयोगितया तात्पर्यमाह – विज्ञातस्यापीति ।।

ಒಂದರ ಜ್ಞಾನದಿಂದ ಮತ್ತೊಂದರ ಜ್ಞಾನ ಬರುವುದು ಅಯುಕ್ತವಾಗುತ್ತದೆ. ಆದ್ದರಿಂದ ಕರ್ಮಾದಿಗಳ ಪ್ರಯೋಜನವನ್ನು ಅಂಗೀಕರಿಸಿ ಪ್ರಕೃತಕ್ಕೆ ಉಪಯೋಗವಾಗುವಂತೆ ತಾತ್ಪರ್ಯವನ್ನು ಹೇಳಲು 'ವಿಜ್ಞಾತಸ್ಯಾಪಿ' ಎಂಬ ವಾಕ್ಯವು ಹೊರಟಿವೆ.

ಕರ್ಮಜ್ಞಾನದ ಫಲ

भावदीपः – फलप्रश्ने बीजमाह – एतदिति ।। शौनको ह वै महाशालोऽङ्गिरसं विधिवदुपसन्नः पप्रच्छेति पूर्वत्र श्रवणादाह – शौनकेति।।

ಕರ್ಮದ ಜ್ಞಾನಕ್ಕೆ ಏನು ಪ್ರಯೋಜನ ? ಎಂಬ ಪ್ರಶ್ನೆಗೆ ಕಾರಣವನ್ನು 'ಏತತ್' ಎಂಬ ವಾಕ್ಯವು ಉತ್ತರಿಸುತ್ತಿದೆ. "ಶೌನಕೋ ಹ ವೈ ಮಹಾಶಾಲೋಂಽಗಿರಸಂ ವಿಧಿವದುಪಸನ್ನಃ ಪಪ್ರಚ್ಛ" ಶೌನಕರು ಅಂಗೀರಸ ಋಷಿಗಳನ್ನು ವಿಧಿಪ್ರಕಾರ ಉಪಸತ್ತಿ ಮಾಡಿ ಪ್ರಶ್ನೆ ಮಾಡಿದರು ಎಂಬುದಾಗಿ ಹಿಂದಿನ ವಾಕ್ಯದಲ್ಲಿ ಶ್ರುತವಾಗಿದೆ. ಅದಕ್ಕನುಸಾರಿಯಾಗಿ ಟೀಕೆಯಲ್ಲಿ ಶೌನಕ ಪ್ರಶ್ನೆಯೆಂದು ಹೇಳುತ್ತಿದ್ದಾರೆ.

ಯಾವುದು ಪರವಿದ್ಯೆ ?

भावदीपः – द्वे विद्ये वेदितव्ये इति ह स्म यद्ब्रह्मविदो वदन्ति । परा चैवापरा च । तत्रापरा । ऋग्वेदो यजुर्वेदः सामवेदोऽथर्ववेदः शिक्षा कल्पो व्याकरणं निरुक्तं छन्दो ज्योतिषमिति । अथ परा यया तदक्षरमधिगम्यत इत्यस्य वाक्यस्य भावमाह – सर्वमिति ।।

"द्वे विद्ये वेदितव्ये इति ह स्म यद्ब्रह्मविदो वदंति । परा चैवापरा च । तत्रापरा । ऋग्वेदो यजुर्वेदः सामवेदोऽथर्ववेदः शिक्षा कल्पो व्याकरणं

ನಿರುಕ್ತಂ ಛಂದೋ ಜ್ಯೋತಿಷಮಿತಿ ।'' ಎರಡು ಬಗೆಯ ವಿದ್ಯೆಯನ್ನು ತಿಳಿದವನು ಬ್ರಹ್ಮಜ್ಞಾನಿ ಎಂದು ಜ್ಞಾನಿಗಳು ಕರೆಯುತ್ತಾರೆ. ಪರವಿದ್ಯೆ ಹಾಗೂ ಅಪರವಿದ್ಯೆ ಎಂಬುದಾಗಿ ವಿದ್ಯೆಯು ಎರಡು ಬಗೆಯಲ್ಲಿದೆ. ಋಗ್ವೇದ ಯಜುರ್ವೇದ ಸಾಮವೇದ, ಅಥರ್ವವೇದ, ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು ಇವೆಲ್ಲವೂ ಅಪರವಿದ್ಯೆ ಆಗುತ್ತವೆ. ಈ ವಿದ್ಯೆಗಳೇ ಪರಮಾತ್ಮನನ್ನು ತಿಳಿಸಿದಾಗ ಪರವಿದ್ಯೆ ಎನಿಸಿಕೊಳ್ಳುತ್ತವೆ. ಈ ವಾಕ್ಯದ ಅಭಿಪ್ರಾಯವನ್ನು ಟೀಕೆಯಲ್ಲಿ 'ಸರ್ವಂ' ಇತ್ಯಾದಿಯಾಗಿ ವಿವರಿಸುತ್ತಿದ್ದಾರೆ.

ಅಂತಃಕರಣದ ಶುದ್ಧಿಗಾಗಿ ಕರ್ಮ ಬೇಕು

भावदीपः – सफलमिति ।। परीक्ष्य लोकानिति श्रुत्युक्तदिशा परमात्म-ज्ञानाङ्ग वैराग्योत्पादनेन विविदिषन्ति यज्ञेन दानेनेत्युक्तदिशाऽन्तःकरणशु द्धयुत्पादनेन वा 'एष सेतुः' इत्याद्युक्तदिशा ब्रह्मज्ञाने प्रकाररूपविषयार्पणेन वा सफलमित्यर्थः । एवमग्रेऽपि ।

'ಸಫಲಂ' ಎಂಬ ಟೀಕಾವಾಕ್ಯದ ಅಭಿಪ್ರಾಯ ಹೀಗಿದೆ - 'ಪರೀಕ್ಷ್ಯ ಲೋಕಾನ್' ಎಂಬ ಶ್ರುತಿ ಹೇಳುವಂತೆ ವೈರಾಗ್ಯವು ಪರಮಾತ್ಮನ ಜ್ಞಾನಕ್ಕೆ ಅಂಗವಾಗಿದೆ. ಇಂಥ ವೈರಾಗ್ಯವನ್ನು ಹುಟ್ಟಿಸುವ ಮೂಲಕ 'ವಿವಿದಿಷಂತಿ ಯಜ್ಞೇನ ದಾನೇನ' ಎಂಬ ಮಾತಿನಂತೆ ಕರ್ಮಾದಿಗಳು ಅಂತಃಕರಣದ ಶುದ್ಧಿಯನ್ನು ಉಂಟುಮಾಡುತ್ತವೆ. ಅಥವಾ 'ಏಷ ಸೇತುಃ' ಎಂಬ ಶ್ರುತಿ ಹೇಳುವಂತೆ ಬ್ರಹ್ಮಜ್ಞಾನದಲ್ಲಿ ಪ್ರಕಾರರೂಪವಾದ ವಿಷಯವನ್ನು ಅರ್ಪಣೆ ಮಾಡುತ್ತವೆ. ಹೀಗೆ ಕರ್ಮವಾಚಕವಾದ ಶ್ರುತಿಗಳು ಸಾರ್ಥಕವಾಗುತ್ತವೆ. ಮುಂದೆಯೂ ಸಹ ಇದರಂತೆ ತಿಳಿಯಬೇಕು.

'ಯೇನಾಶ್ರುತಂ' ಎಂಬ ವಾಕ್ಯಕ್ಕೆ ವ್ಯಾಖ್ಯಾನ

भावदीपः – स आदेश इति । तच्छब्दपरामर्शं विवृण्वन् 'येनाश्रुतं श्रुतं भवत्यमतं मतमविज्ञातं विज्ञातं भवति' इति छान्दोग्यषष्ठस्थपूर्ववाक्यैकदेशं व्याकुर्वन्नेव भाष्योपात्तवाक्यार्थमाह – तथा यस्मिन्निति ।।

'ಸ ಆದೇಶಃ' ಎಂಬಲ್ಲಿರುವ 'ತದ್'ಶಬ್ದದಿಂದ ಪರಾಮರ್ಶ ಮಾಡಿಕೊಳ್ಳಬೇಕೆಂದು ವಿವರಿಸುವವರಾಗಿ ''ಯೇನಾಶ್ರುತಂ ಶ್ರುತಂ ಭವತ್ಯಮತಂ ಮತಮವಿಜ್ಞಾತಂ ವಿಜ್ಞಾತಂ ಭವತಿ'' ಛಾಂದೋಗ್ಯ ಉಪನಿಷತ್ತಿನ ಅಧ್ಯಾಯದ ಪೂರ್ವವಾಕ್ಯದ ಏಕದೇಶವನ್ನು ವ್ಯಾಖ್ಯಾನ ಮಾಡುತ್ತಾ

ಭಾಷ್ಯದಲ್ಲಿ ಉದಾಹರಿಸಿದ ವಾಕ್ಯದ ಅರ್ಥವನ್ನು 'ತಥಾ ಯಸ್ಮಿನ್' ಇತ್ಯಾದಿ ಟೀಕೆಯಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ.

ಮೃತ್ಪಿಂಡದ ಉದಾಹರಣೆ

ಭಾವದೀಪಃ – ज्ञातफलमिति ।। घटादिकारणत्वेन मृत्पिण्डज्ञाने एतावन्मृण्मयं भवतीति विशेषज्ञानादपेक्षितमृण्मयसम्पादनसम्भवादित्यर्थः।।

'ಜ್ಞಾತಫಲಮ್' ಎಂಬುದರ ಅಭಿಪ್ರಾಯ ಹೀಗಿದೆ - ಘಟಕ್ಕೆ ಕಾರಣವಾದ ಮೃತ್‌ಪಿಂಡದ ಜ್ಞಾನದಿಂದ ಮೃಣ್ಮಯವಾದ ಸಕಲವನ್ನು ಹೇಳಿದಂತಾಗುತ್ತದೆ. ಹೀಗೆ ಜ್ಞಾತವಾದ ಘಟಾದಿಗಳೂ ಕೂಡ ಜ್ಞಾನಫಲಕವಾಗುವುದು ಕಂಡಿರುತ್ತದೆ.

ಪರಂಪರೆಯಿಂದ ಕರ್ಮಾದಿಜ್ಞಾನವು ಅವಶ್ಯಕ

ಭಾವದೀಪಃ – एवमिति ।। वैराग्याद्युत्पादनद्वारा सर्वकारणत्वसर्वाधारत्व सर्वसंहर्तृत्वसर्वनियन्तृत्वादिना परमात्मज्ञाने तज्जन्यत्वपरतन्त्रत्वादिविशेष ज्ञानादीश्वरप्रीत्या पुरुषार्थप्राप्तेरिति भावः ।

'ಏವಂ' ಇತ್ಯಾದಿ ಟೀಕಾವಾಕ್ಯದ ಅಭಿಪ್ರಾಯ ಹೀಗಿದೆ - ವೈರಾಗ್ಯವನ್ನು ಹೊಂದುವ ಮೂಲಕ ಪರಮಾತ್ಮನ ಜ್ಞಾನವನ್ನು ಪಡೆಯಬೇಕು. ಸರ್ವಕಾರಣತ್ವ, ಸರ್ವಾಧಾರತ್ವ, ಸರ್ವಸಂಹರ್ತೃತ್ವ, ಸರ್ವನಿಯಂತೃತ್ವ ಇತ್ಯಾದಿ ಗುಣಗಳನ್ನು ಪರಮಾತ್ಮನಲ್ಲಿ ತಿಳಿಯುವುದೇ ಪರಮಾತ್ಮನ ಜ್ಞಾನ. ಇಂಥ ಜ್ಞಾನದಿಂದ ಅವನಿಂದ ಹುಟ್ಟಿರುವ ಪ್ರತಿಯೊಂದು ಪದಾರ್ಥಗಳು ಅವನ ಅಧೀನವಾಗಿವೆ ಎಂಬ ವಿಶೇಷಜ್ಞಾನ ಬರುತ್ತದೆ ಇದರಿಂದ ಈಶ್ವರನಿಗೆ ಪ್ರೀತಿಯಾಗುತ್ತದೆ. ಇಂಥ ಈಶ್ವರನ ಪ್ರೀತಿಯಿಂದ ಪುರುಷಾರ್ಥವು ಪ್ರಾಪ್ತವಾಗುತ್ತದೆ. ಹೀಗೆ ಪರಂಪರೆಯಿಂದ ಕರ್ಮಾದಿಗಳ ಅರಿವು ಬಹಳ ಮುಖ್ಯವಾಗುತ್ತದೆ ಎಂದು ತಿಳಿಯಬೇಕು.

'ಅಪಿಚ' ಎಂಬುದು ಅಖಂಡವಾದ ನಿಪಾತ

ಭಾವದೀಪಃ – सूत्रभाष्ययोः 'अपिच' इत्यखण्डनिपात इति भावेनानूद्यार्थं वदन्नेवावतारयति – अपिचेति ।। एवमित्यनुवादः । अन्येत्यादिव्याख्या ।।

स्पष्टं चेति ।। तथा च प्रश्नाद्युक्त्यैव पूर्तेरेतदुक्तिर्व्यर्थेति न शङ्क्यमिति भावः ।

ಸೂತ್ರ ಹಾಗೂ ಭಾಷ್ಯಗಳಲ್ಲಿರುವ 'ಅಪಿಚ' ಎಂಬುದು ಅಖಂಡವಾದ ನಿಪಾತ. ಬೇರೆ ಬೇರೆ ಅವ್ಯಯಗಳಲ್ಲ. ಈ ಅಭಿಪ್ರಾಯದಿಂದ 'ಅಪಿಚ' ಎಂಬುದನ್ನು ಅನುವಾದ ಮಾಡಿ ಅದರ ಅರ್ಥವನ್ನು ಹೇಳುತ್ತಾ ಅವತಾರಿಕೆ ನೀಡುತ್ತಿದ್ದಾರೆ. 'ಅಪಿಚ' ಇತ್ಯಾದಿ ಟೀಕಾವಾಕ್ಯದಿಂದ. 'ಏವಂ' ಎಂಬುದು ಸೂತ್ರದಲ್ಲಿರುವ ಪದದ ಅನುವಾದ. 'ಅನ್ಯ' ಇತ್ಯಾದಿಯಾಗಿ ಅದರ ಅರ್ಥವನ್ನು ಹೇಳಿದ್ದಾರೆ. 'ಸ್ಪಷ್ಟಂ ಚ' ಎಂದು ಹೇಳಿದ್ದರಿಂದ ಪ್ರಶ್ನೆಯನ್ನು ಮಾಡಿದ್ದರಿಂದಲೇ ಪೂರ್ಣವಾಗುತ್ತಿರುವಾಗ ಪುನಃ ಮುಂದಿನದ್ದು ವ್ಯರ್ಥವಲ್ಲವೆ ? ಎಂಬ ಆಶಂಕೆಗೆ ಆಸ್ಪದವಿಲ್ಲವೆಂದು ಹೇಳಿದಂತಾಯಿತು.

'ಋಚೋ ಅಕ್ಷರೇ' ಎಂಬ ಸಮಗ್ರ ಶ್ರುತಿಯ ವಿಚಾರ

भावदीपः – ऋचो अक्षरे परमे व्योमन् यस्मिन् देवा अधि विश्वे निषेदुः । यस्तन्नवेद किमृचा करिष्यति य इत्तद्विदुस्त इमे समासते इति समग्रमन्त्रार्थमाह – तदक्षरमिति ।।

''ಋಚೋ ಅಕ್ಷರೇ ಪರಮೇ ವ್ಯೋಮನ್ ಯಸ್ಮಿನ್ ದೇವಾ ಅಧಿ ವಿಶ್ವೇ ನಿಷೇದುಃ । ಯಸ್ತನ್ನ ವೇದ ಕಿಮೃಚಾ ಕರಿಷ್ಯತಿ ಯ ಇತ್ತದ್ವಿದುಸ್ತ ಇಮೇ ಸಮಾಸತೇ ॥'' ಎಂಬ ಸಮಗ್ರ ಮಂತ್ರದ ಅರ್ಥವನ್ನು 'ತದಕ್ಷರಂ' ಇತ್ಯಾದಿ ಟೀಕಾವಾಕ್ಯದಿಂದ ಹೇಳುತ್ತಿದ್ದಾರೆ.

'ಅಕ್ಷರ' ಎಂಬುದು ನಿಮಿತ್ತ ಸಪ್ತಮಿ

भावदीपः – विषयचेति ।। समासान्तोऽनित्यत्वान्नाश्रितः । व्योमन्नित्यस्य व्याप्त इत्यर्थः ।। अक्षर इति ।। ज्ञानलक्षणया निमित्तसप्तमीति मत्त्वा फलितमाह – तज्ज्ञानार्थमेवेति ।।

'ವಿಷಯಚ್ಚ' ಎಂಬ ಪದವು ''ವಿಷಯಚ್ಚೇತಿ । ಸಮಾಸಾಂತೋऽನಿತ್ಯತ್ವಾನ್ನಾಶ್ರಿತಃ । ವ್ಯೋಮನ್'' ಎಂಬುದರ ಅರ್ಥವನ್ನು 'ವ್ಯಾಪ್ತಃ' ಎಂಬುದರಿಂದ ಹೇಳಿದ್ದಾರೆ. 'ಅಕ್ಷರೇ' ಎಂಬುದು ನಿಮಿತ್ತಾರ್ಥದಲ್ಲಿರುವ ಸಪ್ತಮ್ಯಂತಪದವಾಗಿದೆ. ಹೀಗೆ ತಿಳಿದು ಇದರಿಂದ ದೊರೆಯುವ ಫಲವನ್ನು 'ತಜ್ಞಾನಾರ್ಥಮೇವ' ಎಂಬುದರಿಂದ ಸ್ಪಷ್ಟಮಾಡಿದ್ದಾರೆ.

'ಕರ್ಮಾದಿಕಮ್' ಇತ್ಯಾದಿ ಟೀಕೆಗೆ ವ್ಯಾಖ್ಯಾನ

ಭಾವದೀಪಃ – यस्मिन् देवा इति वाक्यशेषानुरोधादाह – कर्मादिकमिति।। तत्र हेतुत्वेन वाक्यशेषार्थमाह – तस्यैवेति ।।४।।

'ಯಸ್ಮಿನ್ ದೇವ' ಎಂಬ ವಾಕ್ಯಶೇಷಕ್ಕೆ ಅನುಸಾರಿಯಾಗಿ 'ಕರ್ಮಾದಿಕಂ' ಎಂಬ ಟೀಕೆಯಿಂದ ಅರ್ಥವನ್ನು ಹೇಳುತ್ತಿದ್ದಾರೆ. ಈ ವಿಷಯದಲ್ಲಿ ಕಾರಣವನ್ನು ನೀಡುತ್ತಾ ವಾಕ್ಯಶೇಷದ ಅರ್ಥವನ್ನು 'ತಸ್ಯೈವ' ಎಂಬ ಮುಂದಿನ ವಾಕ್ಯದಿಂದ ಹೇಳುತ್ತಿದ್ದಾರೆ.

ಬ್ರಹ್ಮಸೂತ್ರ

'ವಾಕ್ಯಾನ್ವಯಾತ್' ಎಂಬ ಸೂತ್ರಕ್ಕೆ ವ್ಯಾಖ್ಯಾನ

ಬ್ರಹ್ಮಸೂತ್ರಮ್ – ।। वाक्यान्वयात् ।।೫।।

ಸೂತ್ರಾರ್ಥ - ವೇದದಲ್ಲಿರುವ ಪ್ರತ್ಯೇಕ ಪದಗಳೂ ಬೇರೆ ವಸ್ತುವನ್ನು ಪ್ರತಿಪಾದನೆ ಮಾಡಿದರೂ ಸಮಗ್ರ ವಾಕ್ಯವು ಪರಮಾತ್ಮನನ್ನೇ ಪ್ರತಿಪಾದನೆ ಮಾಡುತ್ತದೆ.

ಅರ್ಥ -- ಬ್ರಹ್ಮನಲ್ಲಿ ವಾಕ್ಯಸಮನ್ವಯವನ್ನು ಮಾಡುವುದಕ್ಕಾಗಿ ವಾಕ್ಯದಲ್ಲಿರುವ ಪ್ರತ್ಯೇಕ ಪದಗಳು ಕರ್ಮಾದಿಗಳನ್ನು ಪ್ರತಿಪಾದನೆ ಮಾಡುತ್ತವೆಂದು ಹೇಳಲೇ ಬೇಕು.

ಬ್ರಹ್ಮಸೂತ್ರಭಾಷ್ಯ

ವೇದದಲ್ಲಿರುವ ವಾಕ್ಯಗಳ ಸಮನ್ವಯ

ಬ್ರಹ್ಮಸೂತ್ರಭಾಷ್ಯಮ್ – वाक्यस्याप्येवमन्वयो युज्यते, पृथक्पृथक् स्थितस्यापि परमात्मना ।।೫।।

ಅನುವಾದ - ಪ್ರತ್ಯೇಕ ಪ್ರತ್ಯೇಕವಾಗಿ ಕರ್ಮದೇವತಾ ವಾಚಕಗಳಾಗಿ ಇರುವವುಗಳೇ ಆಗಿದ್ದರೂ ವೇದವಾಕ್ಯ ಸಮೂಹಕ್ಕೆ ಪರಮಾತ್ಮನಿಂದ ಸಂಬಂಧವು ಕೂಡುತ್ತದೆ. ಮತ್ತು ಹಿಂದೆ ತಿಳಿಸಿದಂತೆ ದೇವತಾಕರ್ಮಬೋಧಕತ್ವವು ಯುಕ್ತವಾಗುತ್ತದೆ.

ಪ್ರತಿಪದಾರ್ಥ -- ಪರಮಾತ್ಮನ ಜ್ಞಾನಕ್ಕೋಸ್ಕರ ವೇದವು ಕರ್ಮಾದಿಗಳನ್ನು ಹೇಳಬೇಕಾಗಿಲ್ಲ. ಕೇವಲ ಪರಮಾತ್ಮನನ್ನು ಹೇಳಿದರೆ ಸಾಕು. ಕರ್ಮಾದಿಗಳ ಜ್ಞಾನವೂ ಕೂಡ ಬಂದಂತಾಗುತ್ತದೆ. ವ್ಯುತ್ಪತ್ತಿಯೇ ಕೂಡುವುದಿಲ್ಲವೆಂಬ ದೋಷಕ್ಕೆ ಅವಕಾಶವಿಲ್ಲ. ಜ್ಯೋತಿಷ್ಟೋಮಾದಿ ಶಬ್ದಗಳು ವಿಷ್ಣುವಿನಲ್ಲಿ ರೂಢವೇ ಆಗಿಲ್ಲ. ಪದದ ಅವಯವಗಳಿಗೆ ಅನ್ಯಪರತ್ವವನ್ನು ಒಪ್ಪದ ಕಾರಣ ಯೋಗಾರ್ಥವನ್ನು ಹೇಳಲು ಬರುವುದಿಲ್ಲ. ಆದ್ದರಿಂದ ಬೇರೆ ಪದಾರ್ಥವನ್ನು ಪ್ರತಿಪಾದನೆ ಮಾಡಲು ಯಾವುದೇ ಪ್ರಯೋಜನವಿಲ್ಲದ ಕಾರಣ, ಸಮಾಕರ್ಷ ಮಾಡುವ ಅವಶ್ಯಕತೆಯಿಲ್ಲ. ಈ ಆಶಂಕೆಯನ್ನು ಪರಿಹರಿಸಲು ಸೂತ್ರವನ್ನು ಪಠಿಸುತ್ತಿದ್ದಾರೆ. –

ಪೃಥಕ್ ಪೃಥಕ್ = ಪ್ರತ್ಯೇಕ ಪ್ರತ್ಯೇಕವಾಗಿ ಕರ್ಮದೇವತಾವಾಚಕಗಳಾಗಿ, ಸ್ಥಿತಸ್ಯಾಪಿ = ಇರುವವುಗಳೇ ಆಗಿದ್ದರೂ, ವಾಕ್ಯಸ್ಯ = ವೇದವಾಕ್ಯ ಸಮೂಹಕ್ಕೆ, ಪರಮಾತ್ಮನಾ = ಪರಮಾತ್ಮನಿಂದ, ಅನ್ವಯಃ = ಸಂಬಂಧವು, ಅಪಿ = ಮತ್ತು, ಏವಂ = ಹಿಂದೆ ತಿಳಿಸಿದಂತೆ ದೇವತಾ ಕರ್ಮ ಬೋಧಕತ್ವವೂ ಕೂಡ, ಯುಜ್ಯತೇ = ಯುಕ್ತವಾಗುತ್ತದೆ.

ಸತ್ತರ್ಕದೀಪಾವಳಿ

ಪರಮಾತ್ಮನಲ್ಲಿ ವಾಕ್ಯದ ಅನ್ವಯವಿದೆ

सत्तर्कदीपावलिः – एवं परमात्मन्येव परममुख्यया वृत्त्या स्वरवर्णपदात्मना सर्ववेदान्वयेऽप्यंशतः ततः समाकृष्य चित्प्रकृतिप्राकृतेषु मुख्यमात्रवृत्तौ साधितायां परमात्मनि मुख्यरूपेणाप्यन्वयो युज्यते वेदस्य । अन्यथा केवलैरर्थवाचिनः पदकदम्बकस्य अक्षरसमूहस्य वाक्यरूपेणाप्यन्वयो युज्यत इति भावेन उत्तरसूत्रार्थमाह – वाक्यान्वयादित्यादिना ।

ಈ ಹಿಂದಿನ ಸೂತ್ರಗಳಲ್ಲಿ ಪರಮಾತ್ಮನೇ ಪರಮಮುಖ್ಯವೃತ್ತಿಯಿಂದ ಸ್ವರ, ವರ್ಣ, ಪದಾತ್ಮಕವಾದ ಸಕಲವೇದ ಪ್ರತಿಪಾದ್ಯನಾಗಿದ್ದಾನೆ ಎಂದು ಸಮರ್ಥನೆ ಮಾಡಲಾಯಿತು. ಮತ್ತು ಇಂಥ ಸಕಲ ವೇದಪ್ರತಿಪಾದ್ಯನಾದ ಪರಮಾತ್ಮನಲ್ಲಿರುವ ಶಬ್ದಗಳನ್ನೇ ಸಮಾಕರ್ಷಣ

ಮಾಡಿ, ಲಕ್ಷ್ಮೀದೇವಿ ಹಾಗೂ ಪ್ರಾಕೃತಪದಾರ್ಥಗಳಲ್ಲಿ ಮುಖ್ಯವೃತ್ತಿಯಿಂದ ಜನರು ಪ್ರಯೋಗ ಮಾಡುತ್ತಾರೆ ಎಂದೂ ಕೂಡ ಸಾಧನೆ ಮಾಡಲಾಯಿತು. ಆದ್ದರಿಂದ ಕರ್ಮಕಾಂಡದಿಂದಲೂ ಕೂಡ ಪರಮಾತ್ಮನೇ ಮುಖ್ಯವಾಗಿ ಪರಮಮುಖ್ಯವೃತ್ತಿಯಿಂದ ಪ್ರತಿಪಾದ್ಯನಾಗುತ್ತಾನೆ ಎಂದು ಸಿದ್ಧವಾಯಿತು. ಹೀಗೊಪ್ಪದಿದ್ದರೆ ಕೇವಲ ಪದಾರ್ಥನಾಶಕವಾದ ಪದಸಮೂಹಗಳಾಗಲೀ, ಅಕ್ಷರಸಮೂಹಗಳಾಗಲೀ, ವಾಕ್ಯರೂಪದಿಂದ ಅನ್ವಯವನ್ನು ಹೊಂದಲು ಸಾಧ್ಯವಾಗುವುದಿಲ್ಲ. ಈ ಅಭಿಪ್ರಾಯದಿಂದ 'ವಾಕ್ಯಾನ್ವಯಾತ್' ಎಂಬ ಮುಂದಿನ ಸೂತ್ರವು ಹೊರಟಿದೆ.

'ಪೃಥಕ್‌ಪೃಥಕ್‌ಸ್ಥಿತಸ್ಯಾಪಿ' ಎಂಬುದರ ವ್ಯಾಖ್ಯಾನ

सत्तर्कदीपावलिः – ईळे आयाहीत्यादीनां अर्थान्तरत्वेऽपि अग्निवाय्वादि-शब्दानां यदा भगवद्वाचित्वं तदा अग्निमीळे वायवायाहीत्यादिवाक्यन्यपृथक् स्थितान्येव । यदा त्वग्निवाय्वादिवाचित्वं तदा पृथक् स्थितानीत्यर्थः।

ಭಾಷ್ಯದಲ್ಲಿ 'ಪೃಥಕ್‌ಪೃಥಕ್‌ಸ್ಥಿತಸ್ಯಾಪಿ' ಎಂಬ ಪದದ ಅಭಿಪ್ರಾಯ ಹೀಗಿದೆ - 'ಅಗ್ನಿಮೀಳೇ' ಎಂಬ ಶ್ರುತಿಯಲ್ಲಿ ಹಾಗೂ 'ವಾಯವಾಯಾಹಿ' ಎಂಬ ಶ್ರುತಿಯಲ್ಲಿ 'ಈಳೆ' ಎಂಬ ಪದ ಹಾಗೂ 'ಆಯಾಹಿ' ಎಂಬ ಪದವು ಬೇರೆ ಅರ್ಥವನ್ನು ಪ್ರತಿಪಾದನೆ ಮಾಡುತ್ತದೆ. ಆದರೆ ಅಗ್ನಿ ಪದ ಹಾಗೂ ವಾಯುಪದವು ಭಗವಂತನನ್ನು ಪ್ರತಿಪಾದನೆ ಮಾಡುತ್ತವೆ ಎಂದು ಹೇಳಿದರೆ ಆಗ ಅಗ್ನಿಮೀಳೇ ವಾಯವಾಯಾಹಿ ಮೊದಲಾದ ವಾಕ್ಯಗಳು 'ಪೃಥಕ್‌ಪೃಥಕ್‌ಸ್ಥಿತಸ್ಯಾಪಿ' ಎನಿಸುವುದಿಲ್ಲ. ಯಾವಾಗ ಅಗ್ನಿ ಪದವೂ ಕೂಡ ಅನ್ಯಪರವಾಗಿದೆ, ವಾಯು ಪದವು ಅನ್ಯಪರವಾಗಿದೆ ಎಂದು ಒಪ್ಪುತ್ತೇವೋ, ಆಗ 'ಪೃಥಕ್‌ಸ್ಥಿತಾ' ಎನಿಸುತ್ತದೆ. ಹೀಗೆ ವಾಕ್ಯದಲ್ಲಿರುವ ಪದಗಳು ಅನ್ಯಪರವಾದರೂ ಕೂಡ ಸಮಗ್ರವಾಕ್ಯದ ತಾತ್ಪರ್ಯ ಪರಮಾತ್ಮನಲ್ಲಿದೆ ಎಂದು ಭಾವಿಸಬೇಕು.

ತತ್ವಪ್ರದೀಪ

ವಿಷ್ಣುವಿನಲ್ಲಿ ವಾಕ್ಯದ ಸಮನ್ವಯ

तत्वप्रदीपः – वाक्यान्वयात् ।। एवमङ्गीकारे यद्यपि पदानामेकैकशो नान्वयः परमात्मना । तथाऽपि वाक्यस्यान्वयो युज्यते स्वं स्वमवान्तरार्थमुक्त्वा स्थितस्यापि ।

'ವಾಕ್ಯಾನ್ವಯಾತ್' ಎಂಬ ಸೂತ್ರದ ವ್ಯಾಖ್ಯಾನವನ್ನು ಭಾಷ್ಯದಲ್ಲಿ ಹೀಗೆ ಹೇಳಿದ್ದಾರೆ - ವೇದದಲ್ಲಿ ಅನೇಕ ವಾಕ್ಯಗಳಿವೆ. ಇವುಗಳಲ್ಲಿರುವ ಒಂದೊಂದು ಪದಗಳು ಬ್ರಹ್ಮನನ್ನು ಪ್ರತಿಪಾದನೆ ಮಾಡಿರುವುದಿಲ್ಲ. ಆದರೆ ಸಮಗ್ರವಾದ ವಾಕ್ಯವು ಬ್ರಹ್ಮನನ್ನು ಪ್ರತಿಪಾದನೆ ಮಾಡುತ್ತದೆ. ಆದ್ದರಿಂದ ಅವಾಂತರವಾದ ಅರ್ಥವನ್ನು ಹೇಳಿದರೂ ಕೂಡ ಸಮಗ್ರವಾಕ್ಯದ ಸಮನ್ವಯವು ಬ್ರಹ್ಮನಲ್ಲಿ ಆಗುತ್ತದೆಂದು ತಿಳಿಯಬೇಕು.

ಬೇರೆ ಋಷಿಗಳ ಪ್ರಕಾರ ವಾಕ್ಯಗಳ ಕ್ರಮ

तत्वप्रदीपः – यस्मादपूर्णफलत्वान्मिश्रफलत्वाच्च अवरं कर्म, उत्पत्त्यादिना पारतन्त्र्याद्देवादिकः प्रपञ्चोऽप्यप्रधानः, तस्मात्सर्वतः परमत्वेनाऽत्मनि ज्ञानं कर्तव्यमिति वाक्यान्वयः तत्तत्प्रकारेण वक्ष्यमाणेष्वपि मतेषु योजनीयः ।

ಯಾವ ಕಾರಣದಿಂದ ಕರ್ಮವು ಅಪೂರ್ಣಫಲಪ್ರದವಾಗುತ್ತದೋ, ಮಿಶ್ರಫಲಪ್ರದವಾಗುತ್ತದೋ, ಆದ್ದರಿಂದಲೇ ಅವರ ಎನಿಸುತ್ತದೆ. ಇದರಂತೆ ದೇವತೆಗಳೂ ಕೂಡ ಉತ್ಪತ್ತಿಯನ್ನು ಹೊಂದುವುದರಿಂದ ಪರತಂತ್ರರಾಗಿರುವುದರಿಂದ ವಿಷ್ಣುವಿಗಿಂತ ಅವರರಾಗಿದ್ದಾರೆ. ಪ್ರಪಂಚವೂ ಕೂಡ ಉತ್ಪನ್ನವಾಗುವುದರಿಂದ ಪರತಂತ್ರವಾಗುವುದರಿಂದ ಅಪ್ರಧಾನವಾಗುತ್ತದೆ. ಹಾಗಾಗಿ ಈ ಎಲ್ಲಾ ವಸ್ತುಗಳಿಗಿಂತ ಶ್ರೇಷ್ಠನಾದವನು ಪರಮಾತ್ಮನೇ ಆಗಿದ್ದಾನೆ. ಅವನ ಜ್ಞಾನವನ್ನೇ ಹೊಂದಬೇಕು. ಈ ರೀತಿಯಲ್ಲಿ ವಾಕ್ಯಾನ್ವಯವನ್ನು ತಿಳಿಯತಕ್ಕದ್ದು. ಸೂತ್ರಕಾರರು ಉಲ್ಲೇಖ ಮಾಡುವ ಬೇರೆ ಬೇರೆ ಋಷಿಗಳ ಅಭಿಪ್ರಾಯದಲ್ಲಿ ಇದರಂತೆಯೇ ವಾಕ್ಯಯೋಜನೆಯನ್ನು ತಿಳಿಯಬೇಕು.

ಇತರ ಮುನಿಗಳ ಅಭಿಪ್ರಾಯವು ವೇದವ್ಯಾಸರಿಗೆ ಸಮ್ಮತ

तत्वप्रदीपः – प्रधानाधिकारिविवक्षया सकलपदस्वरादिसमन्वयं समभिवदन्वेदपतिरन्याधिकारिविशेषाविवक्षया स्वमतान्यपि जैमिन्यादिभिरिदमादीन्यावदयत् ।

तदेव चाऽवेदयिष्यति -

''कृष्णद्वैपायनमतादेकदेशविदः परः'' इत्यादि ।। छ।।

ಮುಖ್ಯನಾದ ಅಧಿಕಾರಿವಿವಕ್ಷೆಯಿಂದ ವೇದದಲ್ಲಿರುವ ಪದ, ಸ್ವರ ಎಲ್ಲವನ್ನೂ ಕೂಡ ವಿಷ್ಣುವಿನಲ್ಲಿ ಸಮನ್ವಯವನ್ನು ವೇದವ್ಯಾಸದೇವರು ಹೇಳಿರುವರು. ಅಧಿಕಾರಿ ವಿಶೇಷ ವಿವಕ್ಷೆಯಿಂದ ತಮ್ಮ ಮತವೇ ಆಗಿದ್ದರು ಜೈಮಿನ್ಯಾದಿ ಋಷಿಗಳ ಮುಖದಿಂದ ಅಭಿಪ್ರಾಯಭೇದವನ್ನು ತಿಳಿಸಿರುತ್ತಾರೆ. ಅದನ್ನೇ 'कृष्णद्वैपायनमतः एकदेशविदः परः' ಎಂಬುದಾಗಿ ಭಾಷ್ಯಕಾರರು ಮುಂದೆ ಸ್ಪಷ್ಟಪಡಿಸುತ್ತಾರೆ.

ತತ್ತ್ವಪ್ರಕಾಶಿಕಾ

ಪರಮಾತ್ಮನ ಜ್ಞಾನ ನೇರವಾಗಿ ಬರುವುದಿಲ್ಲವೇ ?

न परमात्मज्ञानार्थं कर्मादिकं वेदेन वक्तव्यम् । अन्यदनुक्त्वा परमात्ममात्रकथनेऽपि तज्ज्ञानसम्भवात् ।

ಪರಮಾತ್ಮನ ಜ್ಞಾನಕ್ಕೋಸ್ಕರ ಕರ್ಮಾದಿಗಳನ್ನು ವೇದವು ಪ್ರತಿಪಾದನೆ ಮಾಡುವ ಅವಶ್ಯಕತೆಯಿಲ್ಲ. ಏಕೆಂದರೆ ಕರ್ಮಾದಿಗಳನ್ನು ಪ್ರತಿಪಾದನೆ ಮಾಡದಿದ್ದರೂ, ನೇರವಾಗಿ ಪರಮಾತ್ಮನನ್ನು ಪ್ರತಿಪಾದನೆ ಮಾಡಿದರೂ ಸಾಕು. ಪರಮಾತ್ಮನ ಜ್ಞಾನವನ್ನು ತಂದುಕೊಟ್ಟಂತಾಗುತ್ತದೆ.

ವ್ಯುತ್ಪತ್ತಿಗೆ ಅವಯವಾರ್ಥ ಬೇಕೇ ಬೇಕು

तत्त्वप्रकाशिका – न च व्युत्पत्त्यनुपपत्तिः । खण्डपदानामन्यवाचकत्वेन तदुपपत्तेः ।

ಲೌಕಿಕಾರ್ಥಗಳನ್ನು ಪ್ರತಿಪಾದನೆ ಮಾಡದಿದ್ದರೆ ಶಬ್ದಗಳಿಗೆ ವ್ಯುತ್ಪತ್ತಿಯೇ ಕೂಡುವುದಿಲ್ಲ ಎಂದು ಶಂಕಿಸಬಾರದು. ಪದಗಳ ಅವಯವಗಳಿಗೆ ಲೌಕಿಕಾರ್ಥವನ್ನು ಒಪ್ಪಬೇಕು.

'ವಾಕ್ಯಾನ್ವಯಾತ್' ಎಂಬ ಸೂತ್ರ ಏಕೆ ಹೊರಟಿತು ?

तत्त्वप्रकाशिका – ततोऽन्यकथने प्रयोजनाभावान्नतत्र समाकर्षः, इत्याशङ्कां परिहरत्सूत्रमुपन्यस्य व्याचष्टे – वाक्येति ।।

ಆದ್ದರಿಂದ ವೇದಗಳು ಪರಮಾತ್ಮನನ್ನು ಬಿಟ್ಟು ಕರ್ಮಾದಿಗಳನ್ನು ಪ್ರತಿಪಾದನೆ ಮಾಡುವುದಾದರೆ, ಯಾವುದೇ ಪ್ರಯೋಜನವಿರುವುದಿಲ್ಲ. ಆದ್ದರಿಂದ ಪರಮಾತ್ಮ ಪ್ರತಿಪಾದಕವಾದ ಶಬ್ದಗಳನ್ನು ಲೌಕಿಕಾರ್ಥಗಳಲ್ಲಿ ಸಮಾಕರ್ಷ ಮಾಡುವುದು ತಪ್ಪಾಗುತ್ತದಲ್ಲವೇ?

ಈ ಆಶಂಕೆಯನ್ನು ಪರಿಹರಿಸಲು ಮುಂದಿನ ಸೂತ್ರ ಹೊರಟಿದೆ. ಆ ಸೂತ್ರವನ್ನು ಶ್ರೀಮದಾಚಾರ್ಯರು 'ವಾಕ್ಯಾನ್ವಯಾತ್' ಎಂಬುದಾಗಿ ವ್ಯಾಖ್ಯಾನ ಮಾಡುತ್ತಿದ್ದಾರೆ.

ವಾಕ್ಯಗಳ ಸಮನ್ವಯವೂ ಏವಕ್ಷಿತ

तत्वप्रकाशिका – 'सत्यमन्यावचनेऽपि भगवज्ज्ञानं भवति' इति । तथाप्यन्यावचने पदान्वय एव युज्यते, न वाक्यान्वयः ।

ಹೌದು. ಲೌಕಿಕಪದಾರ್ಥಗಳನ್ನು ಪ್ರತಿಪಾದನೆ ಮಾಡದಿದ್ದರೂ ಭಗವಂತನ ಜ್ಞಾನವನ್ನು ಪಡೆಯಬಹುದು. ಆದರೆ ಲೌಕಿಕಾರ್ಥಗಳನ್ನು ಪ್ರತಿಪಾದನೆ ಮಾಡದಿದ್ದರೆ, ಪರಮಾತ್ಮನಲ್ಲಿ ಪದಗಳ ಸಮನ್ವಯವನ್ನಷ್ಟೇ ಮಾಡಿದಂತಾಗುತ್ತದೆ. ವಾಕ್ಯಗಳ ಸಮನ್ವಯವನ್ನು ಮಾಡಿದಂತಾಗುವುದಿಲ್ಲ.

ವಾಕ್ಯಗಳ ಸಮನ್ವಯಗಳ ಹಂತ

तत्वप्रकाशिका – एवमन्यस्यापि वाच्यस्याभ्युपगमे तु वाक्यस्यापि परमात्मनाऽन्वयो युज्यते ।

ಅದೇ ರೀತಿಯಾಗಿ ಪದಗಳಿಂದ ಬೇರೆ ಲೌಕಿಕ ಪದಾರ್ಥಗಳು ಪ್ರತಿಪಾದ್ಯವಾಗುತ್ತವೆಂದು ಒಪ್ಪಿದಾಗ, ವಾಕ್ಯಗಳ ಸಮನ್ವಯವು ಪರಮಾತ್ಮನಲ್ಲಿ ಸಿದ್ಧವಾಗುತ್ತದೆ. (ಪದಸಮನ್ವಯ ಮಾಡಲು ಪದಗಳ ಅವಯವಗಳು ಅನ್ಯಾರ್ಥಗಳೆಂದು ಒಪ್ಪಬೇಕು. ವಾಕ್ಯಸಮನ್ವಯ ಮಾಡಲು ವಾಕ್ಯದ ಅವಯವಗಳಾದ ಪದಗಳು ಅನ್ಯಪರವೆಂದು ಒಪ್ಪಬೇಕು.)

ವಾಕ್ಯಸಮನ್ವಯ ಎಂದರೇನು ?

तत्वप्रकाशिका – वाक्यान्वयो नाम पृथक् पृथगर्थेषु वाचकतया

स्थितवाक्यस्याऽन्ततो भगवत्परत्वम् । अतो वाक्यान्वयसिद्ध्यर्थमन्यवचनं युक्तमेव।

'ವಾಕ್ಯದ ಸಮನ್ವಯ' ಎಂದರೆ ಬೇರೆ ಬೇರೆ ಅರ್ಥಗಳಲ್ಲಿ ವಾಚಕತ್ವೇನ ಸಿದ್ಧವಾಗಿರುವ ವಾಕ್ಯಕ್ಕೆ ಅಂತಿಮವಾಗಿ ಭಗವಂತನಲ್ಲಿ ಪ್ರತಿಪಾದನೆ ಮಾಡುವುದು ಎಂದರ್ಥ. ಆದ್ದರಿಂದ ವಾಕ್ಯಾನ್ವಯದ ಸಿದ್ಧಿಗೋಸ್ಕರ ಅನ್ಯಪ್ರತಿಪಾದಕತ್ವವನ್ನು ಒಪ್ಪಲೇ ಬೇಕು.

ವಾಕ್ಯಾನ್ವಯದ ಪ್ರಯೋಜನ

तत्वप्रकाशिका – न च वाच्यं परमात्मज्ञानस्यैव प्रयोजनत्वात्, किं वाक्यान्वयेनापि ? इति ।

ಪರಮಾತ್ಮನ ಜ್ಞಾನವೇ ಮುಖ್ಯಪ್ರಯೋಜನವಾಗುವುದಾದರೆ ವಾಕ್ಯಾನ್ವಯದಿಂದ ಏನು ಪ್ರಯೋಜನ? ಎಂದು ಪ್ರಶ್ನಿಸಬಾರದು.

ಮಧ್ಯಮಾಧಿಕಾರಿಗಳಿಗೆ ವಾಕ್ಯಸಮನ್ವಯ

तत्वप्रकाशिका – विना वाक्यान्वयमुत्तमाधिकारिव्यतिरिक्तानां ज्ञानस्यैवासम्भवेन जिज्ञासायां वैमुख्यप्रसङ्गात् । 'कश्छन्दसां योगमावेद धीरः' इति श्रुतेरिति भावः ।।

ಉತ್ತಮಾಧಿಕಾರಿಗಳಿಗಿಂತ ಭಿನ್ನರಾದ ಮಧ್ಯಮಾಧಿಕಾರಿಗಳಿಗೆ ಪರಮಾತ್ಮನ ಜ್ಞಾನವು ಸುಲಭವಾಗಿ ಬರುವುದಿಲ್ಲ. ಯಾವಾಗ ವಾಕ್ಯವು ಭಗವಂತನನ್ನೇ ಪ್ರತಿಪಾದನೆ ಮಾಡುತ್ತದೆಂದು ಮಧ್ಯಮಾಧಿ- ಕಾರಿಗಳಿಗೆ ತಿಳಿಯುತ್ತದೋ, ಆವಾಗ ಮಾತ್ರ ಜಿಜ್ಞಾಸೆಯಲ್ಲಿ ತೊಡಗುತ್ತಾನೆ. ಇಲ್ಲದಿದ್ದರೆ ಬ್ರಹ್ಮಜಿಜ್ಞಾಸೆಯಿಂದ ವಿಮುಖರಾಗುವ ಪ್ರಸಂಗವಿದೆ. ಏಕೆಂದರೆ 'ಕಶ್ಛಂದಸಾಂ ಯೋಗಮಾವೇದ ಧೀರ' ಚತುರ್ಮುಖನನ್ನು ಬಿಟ್ಟು ಯಾರು ತಾನೆ ಪದಗಳ ಯೋಗವೃತ್ತಿಯನ್ನು ಪರಬ್ರಹ್ಮನಲ್ಲಿ ತಿಳಿಯುತ್ತಾರೆ ? ಎಂದು ಪ್ರಶ್ನಿಸಿ, 'ಕಶ್ಛಂದಸಾಂ ಯೋಗಮಾವೇದ ಧೀರ' ಚತುರ್ಮುಖನೊಬ್ಬನೇ ಪದಗಳ ವೃತ್ತಿಯನ್ನು ಶ್ರೀಹರಿಯಲ್ಲಿ ತಿಳಿಯುತ್ತಾನೆ ಎಂದು ಉತ್ತರಿಸಿದೆ.

ಭಾವದೀಪ

ಪದಸಮನ್ವಯವಷ್ಟೇ ಸಾಕಲ್ಲವೇ?

परमात्ममात्रेति ।। पदसमन्वयविधयेत्यर्थः ।। खण्डेति ।। समुदायावयवपदाना-मित्यर्थः ।। परिष्कारपूर्वं वाक्यस्येति भाष्यं व्याचष्टे – सत्यमिति ।। एवमित्यनुवादः। अन्यस्यापीत्यादिव्याख्या ।।

ಟೀಕೆಯಲ್ಲಿ 'ಪರಮಾತ್ಮಮಾತ್ರ ಕಥನೇऽಪಿ' ಎಂದು ಹೇಳಿದ್ದಾರೆ. ಶಬ್ದಗಳು ಕರ್ಮಾದಿಗಳನ್ನು ಪ್ರತಿಪಾದನೆ ಮಾಡದಿದ್ದರೂ ನೇರವಾಗಿ ಪರಮಾತ್ಮನನ್ನಷ್ಟೇ ಪ್ರತಿಪಾದನೆ ಮಾಡಿದರೂ ಸಾಕು. ಪದಸಮನ್ವಯದಿಂದಲೇ ಪರಮಾತ್ಮನ ಜ್ಞಾನವು ಸಿದ್ಧವಾಗುತ್ತದೆ. ಎಂದರ್ಥ 'ಖಂಡಪದಾನಾಮ್' ಎಂಬುದಕ್ಕೆ ಸಮುದಾಯದ ಅವಯವರೂಪವಾದ ಪದಗಳು ಎಂದರ್ಥ. ಪರಿಷ್ಕಾರಪೂರ್ವಕವಾಗಿ 'ವಾಕ್ಯಸ್ಯ' ಇತ್ಯಾದಿ ಭಾಷ್ಯವನ್ನು 'ಸತ್ಯಮಿತ್ಯಾದಿ' ಟೀಕೆಯಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ. 'ಏವಂ' ಎಂಬುದು ಭಾಷ್ಯದ ಅನುವಾದ. 'ಅನ್ಯಸ್ಯಾಪಿ' ಇತ್ಯಾದಿಯಾಗಿ ಅದನ್ನು ವ್ಯಾಖ್ಯಾನಿಸಿದ್ದಾರೆ.

ತತ್ವನಿರ್ಣಯದಲ್ಲಿ ವಿಶೇಷವಿಚಾರ

भावदीपः – पृथक् पृथगिति ।। विस्तृतश्चाऽयं तत्त्वनिर्णयटीकायां 'कार्यान्विते व्युत्पत्तिः' इति प्राभाकरमतखण्डनप्रस्तावे 'इयं माता' 'अयं पिता' 'सुरूपोऽसि' इत्येतद्वाक्यव्याख्यावसरे ।

ಟೀಕೆಯಲ್ಲಿ 'ಪೃಥಕ್‌ಪೃಥಕ್' ಇತ್ಯಾದಿಯಾದ ವಾಕ್ಯದಲ್ಲಿ ಹೇಳಿದ ವಿಷಯವು ತತ್ವನಿರ್ಣಯದ ವ್ಯಾಖ್ಯಾನ ಸಂದರ್ಭದಲ್ಲಿ ವಿಸ್ತಾರವಾಗಿ ನಿರೂಪಣೆ ಮಾಡಿದ್ದಾರೆ. ಕಾರ್ಯಾನ್ವಿತವಾದ ಅರ್ಥದಲ್ಲಿ ಶಬ್ದಗಳಿಗೆ ವ್ಯುತ್ಪತ್ತಿ ಇದೆ ಎಂಬುದಾಗಿ ಪ್ರಾಭಾಕರಮತವನ್ನು ಖಂಡನೆ ಮಾಡುವಾಗ 'ಇಯಂ ಮಾತಾ' 'ಅಯಂ ಪಿತಾ' 'ಸುರೂಪೋऽಸಿ' ಇತ್ಯಾದಿ ವಾಕ್ಯಗಳಿಗೂ ಕೂಡ ಪ್ರಾಮಾಣ್ಯವಿರುತ್ತದೆ ಎಂದು ವ್ಯಾಖ್ಯಾನ ಮಾಡುವಾಗ ಈ ವಿಷಯವನ್ನು ಸ್ಪಷ್ಟಪಡಿಸಿದ್ದಾರೆ.

ಸೂತ್ರದಲ್ಲಿರುವ ಪಂಚಮಿಯು ನಿಮಿತ್ತಾರ್ಥಕ

ಭಾವದೀಪಃ – 'वाक्यान्वयात्' इति सूत्रे निमित्तपञ्चमी जगद्वाचित्वेऽपीति वर्तते इति मत्वा सूत्रार्थं निगमयति – अत इति ।।

'ವಾಕ್ಯಾನ್ವಯಾತ್' ಎಂಬ ಸೂತ್ರದಲ್ಲಿರುವ ಪಂಚಮೀವಿಭಕ್ತಿಯು ನಿಮಿತ್ತಾರ್ಥದಲ್ಲಿದೆ. 'ಜಗದ್ವಾಚಿತ್ವೇऽಪಿ' ಎಂಬುದನ್ನು ಇಲ್ಲಿ ಅನುವೃತ್ತಿ ಮಾಡಿಕೊಳ್ಳಬೇಕು. ಈ ವಿವಕ್ಷೆಯಿಂದ ಸೂತ್ರದ ಅರ್ಥವನ್ನು 'ಅತಃ' ಇತ್ಯಾದಿ ವಾಕ್ಯದಿಂದ ನಿರೂಪಣೆ ಮಾಡಿದ್ದಾರೆ.

ಅನುವ್ಯಾಖ್ಯಾನದ ಯೋಜನೆ

ಭಾವದೀಪಃ – अन्यवचन एव वाक्यान्वयसम्भवादित्यर्थः । ज्योतिर्नये अत्र चोक्तयोः पदवाक्यसमन्वययोरधिकारिभेदेन सार्थक्यं विवक्षुः । अन्वयः सर्वशब्दानामशक्यो ज्ञातुमञ्जसा । इति यल्लोकवैमुख्यं जैमिन्यादिमतं वदन्। विद्याधिराजो भगवानपाचक्रे स्वयं प्रभुरित्यनुभाष्योक्तमत्र संयोजयितुं शङ्कामाह – नचेति ।।

'ಅತಃ' ಎಂಬ ಪದಕ್ಕೆ ಬೇರೆ ಪದಾರ್ಥಗಳಲ್ಲಿ ಶಬ್ದವೃತ್ತಿಯನ್ನು ಒಪ್ಪಿದರೆ ಮಾತ್ರ ವಾಕ್ಯಾನ್ವಯವು ಸಿದ್ಧವಾಗುವುದರಿಂದ ಎಂದರ್ಥ. ಜ್ಯೋತಿರಧಿಕರಣದಲ್ಲಿ ಇಲ್ಲಿ ಹೇಳಲ್ಪಟ್ಟ ಪದಸಮನ್ವಯ ಮತ್ತು ವಾಕ್ಯಾನ್ವಯಗಳು ಅಧಿಕಾರಿಭೇದದಿಂದ ಸಾರ್ಥಕವಾಗುತ್ತವೆ ಎಂದು ಪ್ರತಿಪಾದನೆ ಮಾಡಿದ್ದಾರೆ.

ಅನ್ವಯಃ ಸರ್ವಶಬ್ದಾನಾಮಶಕ್ಯೋ ಜ್ಞಾತುಮಂಜಸಾ ।
ಇತಿ ಯಲ್ಲೋಕವೈಮುಖ್ಯಂ ಜೈಮಿನ್ಯಾದಿಮತಂ ವದನ್ ।
ವಿದ್ಯಾಧಿರಾಜೋ ಭಗವಾನಪಾಚಕ್ರೇ ಸ್ವಯಂ ಪ್ರಭುಃ ।।

ಹೀಗೆ ಅನುವ್ಯಾಖ್ಯಾನದಲ್ಲಿ ಹೇಳಿದ ವಿಷಯವನ್ನು ಪ್ರಕೃತ ಯೋಜನೆ ಮಾಡಲು ಆಶಂಕಿಸುತ್ತಿದ್ದಾರೆ. 'ನಚ' ಇತ್ಯಾದಿ ವಾಕ್ಯದಿಂದ.

ಪದಸಮನ್ವಯಕ್ಕೆ ಎಲ್ಲರೂ ಅಧಿಕಾರಿಗಳಲ್ಲ

ಭಾವದೀಪಃ – हरेर्जगद्धेतुत्वसर्वशब्दवाच्यत्वादेः तथा श्रवणादिविधेरुत्तमाधिकारि

स्वरूपादेश्च असिद्धिप्रसङ्गादित्यपि ध्येयम् । पदसमन्वयोऽसर्वाधिकारिक इत्यत्र श्रुतिमाह – क इति ।।

ಶ್ರೀಹರಿಗೆ ಜಗತ್ಕಾರಣತ್ವ ಸರ್ವಶಬ್ದವಾಚ್ಯತ್ವಗಳು ಅದರಂತೆ ಶ್ರವಣಾದಿ ವಿಧಿಗಳಿಗೆ ಉತ್ತಮಾಧಿಕಾರಿ ಸ್ವರೂಪವೂ ಅಸಿದ್ಧವಾಗಬೇಕಾದೀತು ಎಂಬುದನ್ನು ಇಲ್ಲಿ ವಿವಕ್ಷಿಸಬೇಕು. ಪದಸಮನ್ವಯವು ಸರ್ವಾಧಿಕಾರಕವಲ್ಲ ಎಂಬ ವಿಷಯದಲ್ಲಿ ಶ್ರುತಿಯನ್ನು 'ಕಃ' ಎಂಬುದಾಗಿ ಉಲ್ಲೇಖ ಮಾಡುತ್ತಿದ್ದಾರೆ.

ವಾಕ್ಯಸಮನ್ವಯವು ಅನಿರ್ವಾಯ

भावदीपः – 'अङ्गीकृतेऽपि नैवास्ति दोषो वाक्यसमन्वये । तदर्थत्वेन कर्मादेः सम्भवादल्पबुद्धये कश्छन्दसां योगमिति श्रुतेर्योगार्थत्ववित् । ब्रह्मैको नैव चान्योऽस्ति क इत्यस्योभयार्थता' इत्यनुभाष्योक्तेरिति भावः।।

ಅಂಗೀಕೃತೇಽಪಿ ನೈವಾಸ್ತಿ ದೋಷೋ ವಾಕ್ಯಸಮನ್ವಯೇ।
ತದರ್ಥತ್ವೇನ ಕರ್ಮಾದೇಃ ಸಂಭವಾದಲ್ಪಬುದ್ಧಯೇ
ಕಶ್ಛಂದಸಾಂ ಯೋಗಮಿತಿ ಶ್ರುತೇರ್ಯೋಗಾರ್ಥತ್ವವಿತ್।
ಬ್ರಹ್ಮೈಕೋ ನೈವ ಚಾನ್ಯೋಽಸ್ತಿ ಕ ಇತ್ಯಸ್ಯೋಭಯಾರ್ಥತಾ ॥

ವಾಕ್ಯಸಮನ್ವಯವನ್ನು ಅಂಗೀಕಾರ ಮಾಡಿದರೆ ಯಾವುದೇ ದೋಷವಿರುವುದಿಲ್ಲ. ಕರ್ಮಾದಿಗಳು ವಾಕ್ಯದ ಅರ್ಥವಾಗಿವೆಂದು ಅಲ್ಪಬುದ್ಧಿಗಳು ತಿಳಿಯುತ್ತಾರೆ. 'ಕಶ್ಛಂದಸಾಂ ಯೋಗಂ' ಎಂಬ ಶ್ರುತಿಯ ಆಧಾರದಿಂದ ಪ್ರತಿಯೊಂದು ಪದಗಳ ಯೋಗಾರ್ಥವನ್ನು ತಿಳಿಯಲು ಬ್ರಹ್ಮದೇವರು ಮಾತ್ರ ಸಮರ್ಥರು. ಉಳಿದವರಿಗೆ ಸಾಮರ್ಥ್ಯವಿಲ್ಲ. ಈ ಶ್ರುತಿಯಲ್ಲಿರುವ 'ಕಃ' ಎಂಬ ಪದಕ್ಕೆ ಎರಡು ಅರ್ಥವನ್ನು ಹೇಳಬೇಕು.

ಹೀಗೆ ಅನುವ್ಯಾಖ್ಯಾನದಲ್ಲಿ ಹೇಳಿದ್ದನ್ನು ವಿವಕ್ಷಿಸಿ ಪ್ರಕೃತ ಟೀಕಾವಾಕ್ಯವು ಹೊರಟಿದೆ ಎಂದು ಭಾವಿಸ ಬೇಕು.

ಬ್ರಹ್ಮಸೂತ್ರ

'ಪ್ರತಿಜ್ಞಾಸಿದ್ಧೇರ್ಲಿಂಗಮಾಶ್ಮರಥ್ಯಃ' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – ।। प्रतिज्ञासिद्धेर्लिङ्गमाश्मरथ्यः ।।६।।

ಸೂತ್ರಾರ್ಥ - 'ಪ್ರತಿಜ್ಞಾಸಿದ್ಧೇರ್ಲಿಂಗಮಾಶ್ಮರಥ್ಯಃ' ಜ್ಞಾನದಿಂದಲೇ ಮೋಕ್ಷವಾಗುತ್ತದೆಂದು ತೈತ್ತಿರೀಯೋಪನಿಷತ್ತು ಹೇಳುತ್ತಿದೆ. ಈ ಪ್ರತಿಜ್ಞೆಯ ಸಿದ್ಧಿಗೋಸ್ಕರ ಕರ್ಮಾದಿಗಳನ್ನು ಪ್ರತಿಪಾದಿಸುವ ಪದಗಳಿಗೆ ಅನ್ಯಾರ್ಥವನ್ನು ಹೇಳಬೇಕೆನ್ನುತ್ತಾರೆ ಆಶ್ಮರಥ್ಯರು.

ಅರ್ಥ -- ವೇದದಿಂದ ಕರ್ಮಾದಿಗಳನ್ನು ಪ್ರತಿಪಾದನೆ ಮಾಡಲಾಗಿದೆ. ಏಕೆಂದರೆ ಪ್ರತಿಜ್ಞಾಸಿದ್ಧೇಃ = ಜ್ಞಾನವೇ ಮೋಕ್ಷಕ್ಕೆ ಕಾರಣ ಹೊರತು, ಬೇರೆಯದಲ್ಲ ಎಂಬುದಾಗಿ 'ನಾನ್ಯಃಪಂಥಾ' ಎಂಬ ತೈತ್ತಿರೀಯೋಪನಿಷತ್ತು ಪ್ರತಿಜ್ಞೆ ಮಾಡುತ್ತಿದೆ. ಈ ಪ್ರತಿಜ್ಞಾರ್ಥದ ಸಿದ್ಧಿಗೋಸ್ಕರ ಕರ್ಮಾದಿಗಳನ್ನು ಪದಗಳು ಪ್ರತಿಪಾದನೆ ಮಾಡಬೇಕು. ಆದ್ದರಿಂದ 'ನಾನ್ಯಃಪಂಥಾ' ಎಂಬ ಪ್ರತಿಜ್ಞೆಯ ಉಪಯೋಗಕ್ಕಾಗಿ ಕರ್ಮಾದಿಗಳನ್ನು ಪ್ರತಿಪಾದನೆ ಮಾಡುವುದು ಯುಕ್ತವೇ ಆಗುತ್ತದೆ. ಇತಿ = ಹೀಗೆ, ಆಶ್ಮರಥ್ಯಃ = ಆಶ್ಮರಥ್ಯಾಚಾರ್ಯರು ತಿಳಿಯುತ್ತಾರೆ.

ಬ್ರಹ್ಮಸೂತ್ರಭಾಷ್ಯ

ಆಶ್ಮರಥ್ಯರ ಪ್ರಕಾರ ವೇದ ಸಮನ್ವಯ

ब्रह्मसूत्रभाष्यम् – 'नान्यः पन्था अयनाय विद्यते' (तै. आ. ३-१२-७) इति प्रतिज्ञासिद्धेर्लिङ्गत्वेन कर्मादिकमुच्यत इत्याश्मरथ्यः । यस्मादेवमनित्यफलमन्यत् तस्मान्नान्यः पन्था इति ।।६।।

ಅನುವಾದ - ಮೋಕ್ಷಕ್ಕೆ ಬ್ರಹ್ಮಜ್ಞಾನದ ಹೊರತು ಬೇರೆ ಜ್ಞಾನವಿಲ್ಲ ಎಂಬ ಪ್ರತಿಜ್ಞಾವಾಕ್ಯದ ಸಾರ್ಥಕತೆಗಾಗಿ ವೇದದಲ್ಲಿ ಕರ್ಮಾದಿಗಳನ್ನು ಹೇಳಿದ್ದಾರೆ. ಇದು ಆಶ್ಮರಥ್ಯಾಚಾರ್ಯರ ಮತ. ಯಾವ ಕಾರಣದಿಂದ ಜ್ಞಾನಾತಿರಿಕ್ತವಾದ ಕರ್ಮಾದಿಗಳು ಹಿಂದೆ ಹೇಳಿದಂತೆ ಅಶಾಶ್ವತ ಫಲವುಳ್ಳವುಗಳೋ, ಆ ಕಾರಣದಿಂದ ಮೋಕ್ಷಕ್ಕೆ ಬೇರೆ ದಾರಿ ಇಲ್ಲವೆಂದು ಅಭಿಪ್ರಾಯ. (ವೇದಗಳು ದೇವತಾಕರ್ಮಗಳನ್ನು ಹೇಳಿ, ಅವುಗಳ ಜ್ಞಾನದಿಂದ ದೊರೆಯುವ ಫಲವು ಅನಿತ್ಯ. ಬ್ರಹ್ಮಜ್ಞಾನದಿಂದ

ದೊರೆಯುವ ಫಲವು ನಿತ್ಯ. ಹೀಗೆ ಪ್ರತಿಜ್ಞಾವಾಕ್ಯದಿಂದ ತಿಳಿಯುತ್ತದೆ. ಈ ಅರ್ಥದಲ್ಲಿ ವೇದಗಳು ಮುಖ್ಯಾಮುಖ್ಯವೆಂಬ ದ್ವಂದ್ವಾರ್ಥವುಳ್ಳವುಗಳು ಎಂದು ಆಶ್ಮರಥ್ಯರ ಅಭಿಪ್ರಾಯ.)

ಪ್ರತಿಪದಾರ್ಥ -- ಕರ್ಮಾದಿಗಳನ್ನು ವೇದದಲ್ಲಿ ಹೇಳಿರುವುದು ಪರಮಾತ್ಮಜ್ಞಾನಕ್ಕೋಸ್ಕರ ಎಂದು ಸಮರ್ಥಿಸಿದಿರಿ. ಇದನ್ನು ಯಾವ ಪ್ರಕಾರದಿಂದ ತಿಳಿಯಬೇಕು ಎಂಬ ಆಕಾಂಕ್ಷೆಗೆ ಉತ್ತರಿಸಲು ಸೂತ್ರವನ್ನು ಉಪನ್ಯಾಸ ಮಾಡಿ, ವ್ಯಾಖ್ಯಾನ ಮಾಡುತ್ತಿದ್ದಾರೆ. –

ಅಯನಾಯ = ಮೋಕ್ಷಕ್ಕೆ, ಅನ್ಯಃ ಪಂಥಾ = ಬ್ರಹ್ಮಜ್ಞಾನವನ್ನು ಬಿಟ್ಟು ಬೇರೆ ಮಾರ್ಗವು, ನ ವಿದ್ಯತೇ = ಇರುವುದಿಲ್ಲ. ಇತಿ = ಹೀಗೆ, ಪ್ರತಿಜ್ಞಾಸಿದ್ಧೇಃ = ಪ್ರತಿಜ್ಞಾವಾಕ್ಯದ ಸಾರ್ಥಕತೆಗಾಗಿ, ಲಿಂಗತ್ವೇನ = ಜ್ಞಾಪಕಗಳಾಗಿ, ಕರ್ಮಾದಿಕಂ = ಕರ್ಮದೇವತಾದಿಗಳು, ಉಚ್ಯತೇ = ಹೇಳಲ್ಪಟ್ಟಿವೆ, ಇತಿ = ಹೀಗೆ, ಆಶ್ಮರಥ್ಯಃ = ಆಶ್ಮರಥ್ಯರು ಹೇಳುತ್ತಾರೆ. ಯಸ್ಮಾತ್ = ಯಾವ ಕಾರಣದಿಂದ, ಅನ್ಯತ್ = ಜ್ಞಾನಾತಿರಿಕ್ತವಾದ ಕರ್ಮಗಳು, ಏವಂ = ಹಿಂದೆ ಹೇಳಿದಂತೆ, ಅನಿತ್ಯ ಫಲಂ = ಅಶಾಶ್ವತ ಫಲದಾಯಕವೋ, ತಸ್ಮಾತ್ = ಆ ಕಾರಣದಿಂದ, ನಾನ್ಯಃ ಪಂಥಾ = ಮೋಕ್ಷಕ್ಕೆ ಬೇರೆ ದಾರಿ ಇರುವುದಿಲ್ಲ. ಇತಿ = ಹೀಗೆ ಸಿದ್ಧವಾಗುತ್ತದೆ.

ಸತ್ತರ್ಕದೀಪಾವಳಿ

ಶಿಷ್ಯತ್ರಯರಿಂದ ಮೂರು ಉತ್ತರಗಳು

सत्तर्कदीपावलिः – ननु कथं कर्मदेवतादिवचनस्य परमात्मार्थता । येन पृथक् स्थितानामपि वाक्यानां परमात्मनान्वय इत्याकाङ्क्षायाः त्रिधोत्तरं शिष्यत्रयमतेन दर्शयतीत्याह – प्रतिज्ञेत्यादिना ।

ಕರ್ಮವನ್ನು ಅಥವಾ ದೇವತೆಗಳನ್ನು ಪ್ರತಿಪಾದನೆ ಮಾಡುವ ವೇದವಾಕ್ಯಗಳಿಗೆ ಪರಮಾತ್ಮಪರತ್ವವನ್ನು ಹೇಗೆ ಸಾಧಿಸುತ್ತೀರಿ ? ಒಂದುವೇಳೆ ಪರಮಾತ್ಮ ಪರತ್ವವು ಸಾಧಿತವಾಗಿದ್ದಲ್ಲಿ, ಆಗ ವಾಕ್ಯದಲ್ಲಿರುವ ಪದಗಳು ಅನ್ಯಪರವಾದರೂ ಪರಮಾತ್ಮನಲ್ಲಿ

ತಾತ್ಪರ್ಯವುಳ್ಳವುಗಳಾಗುತ್ತವೆ ಎಂದು ಸಿದ್ಧವಾಗುತ್ತಿತ್ತು ? ಈ ಆಕಾಂಕ್ಷೆಗೆ ಮೂರು ಬಗೆಯ ಉತ್ತರವನ್ನು ಮೂರು ಮಂದಿ ಶಿಷ್ಯಂದಿರ ಮುಖದಿಂದ ತೋರಿಸುತ್ತಿದ್ದಾರೆ 'ಪ್ರತಿಜ್ಞಾ' ಇತ್ಯಾದಿ ಸೂತ್ರದಿಂದ.

'ನಾನ್ಯಃ ಪಂಥಾ ಅಯನಾಯ ವಿದ್ಯತೇ' ಎಂಬುದಕ್ಕೆ ಸುಂದರ ವ್ಯಾಖ್ಯಾನ

सत्तर्कदीपावलिः – यद्यमृतत्वावाप्तये परमपुरुषज्ञानतोऽन्यः पन्था न विद्यत इति प्रतिज्ञा सिध्येत् तर्हि तदज्ञानाय प्रयतेत पुमान् । अतस्तत्सिध्यर्थं लिङ्गत्वेन मायामहदादिशब्दैः श्रीब्रह्मादिशब्दैश्च वेदतन्त्रोक्तमार्गतो रमाम् अजशङ्करादिलोकेशादीन् यजन्तो विजानन्तश्च पुत्रवित्ताद्यैहिकं पातालाद्यामुष्मिकं च अनित्यमेव फलं लभन्त इति कर्मदेवतादिकमुच्यत इति आश्मरथ्यो मन्यत इत्यर्थः ।

ಒಂದುವೇಳೆ ಮೋಕ್ಷವನ್ನು ಪಡೆಯುವುದಕ್ಕಾಗಿ ಪರಮಪುರುಷನೆನಿಸಿದ ಭಗವಂತನನ್ನು ಬಿಟ್ಟು, ಬೇರೆ ಪದಾರ್ಥದ ತಿಳಿಯುವಿಕೆ ಮೊದಲಾದ ಮಾರ್ಗವು ಇದ್ದಿದ್ದರೆ ಪರಮಾತ್ಮ ಪರತ್ವವನ್ನೇ ಒಪ್ಪುವ ಅವಶ್ಯಕತೆಯಿರಲಿಲ್ಲ. ಆದರೆ ಪರಮಪುರುಷನನ್ನು ತಿಳಿಯುವುದು ಬಿಟ್ಟು ಬೇರೆ ಮಾರ್ಗವೇ ಇರುವುದಿಲ್ಲ. ಈ ಪ್ರತಿಜ್ಞೆಯು ಸಿದ್ಧವಾಗಿದ್ದರೆ, ಆಗ ಭಗವಂತನ ಜ್ಞಾನಕ್ಕೋಸ್ಕರ ಪುರುಷನು ಪ್ರಯತ್ನ ಪಡುತ್ತಿದ್ದನು. ಆದ್ದರಿಂದ ಪರಮಪುರುಷನ ಜ್ಞಾನದಿಂದಲೇ ಮೋಕ್ಷವಾಗುತ್ತದೆ ಎಂಬುದನ್ನು ತಿಳಿಸುವುದಕ್ಕೋಸ್ಕರ ಲಿಂಗಭೂತವಾಗಿ ಮಾಯಾಶಬ್ದದಿಂದ ಹಾಗೂ ಶ್ರೀ ಮೊದಲಾದ ಶಬ್ದಗಳಿಂದ ರಮೆಯು ಪ್ರತಿಪಾದ್ಯಳಾಗುತ್ತಾಳೆ. ಮಹತ್ ಮೊದಲಾದ ಶಬ್ದಗಳಿಂದ ಹಾಗೂ ಬ್ರಹ್ಮ ಮೊದಲಾದ ಶಬ್ದಗಳಿಂದ ಚತುರ್ಮುಖನು ಪ್ರತಿಪಾದ್ಯನಾಗುತ್ತಾನೆ. ಹೀಗೆ ವೇದತಂತ್ರದಲ್ಲಿ ಹೇಳಲ್ಪಟ್ಟ ಮಾರ್ಗದಿಂದ ಲಕ್ಷ್ಮೀ, ಚತುರ್ಮುಖಬ್ರಹ್ಮ, ರುದ್ರ ಮೊದಲಾದವರೇ ಈ ಲೋಕಗಳಿಗೆ ಒಡೆಯರಾಗಿದ್ದಾರೆ ಎಂಬುದಾಗಿ ಯಾವ ಅಧಿಕಾರಿಯು ತಿಳಿದು ಯಾಗವನ್ನು ಆಚರಣೆ ಮಾಡುತ್ತಾನೋ, ಅವನಿಗೆ ಪುತ್ರಪ್ರಾಪ್ತಿಯಾಗುತ್ತದೆ. ಯಥೇಚ್ಛವಾದ ಲೌಕಿಕಸಂಪತ್ತುಗಳು ದೊರೆಯುತ್ತವೆ. ಪಾತಾಳಲೋಕ ಮೊದಲಾದ ಆಮುಷ್ಮಿಕ ಫಲಗಳೂ ಕೂಡ ದೊರೆಯುತ್ತವೆ. ಆದರೆ ಇವೆಲ್ಲವೂ ಕೂಡ ಅನಿತ್ಯವೇ ಆಗಿವೆ. ಆದ್ದರಿಂದ ಪರಮಾತ್ಮನನ್ನು ಹೊರತಾಗಿ, ಇತರ ದೇವತೆಗಳ ಆರಾಧನೆಯನ್ನು ಅನುಷ್ಠಾನ ಮಾಡುವುದರಿಂದ

ಅನಿತ್ಯಫಲವೇ ದೊರೆಯುತ್ತದೆ ಹೊರತು, ಮೋಕ್ಷಫಲವು ದೊರೆಯುವುದಿಲ್ಲ. ಹಾಗಾಗಿ ಮೋಕ್ಷಮಾರ್ಗಕ್ಕೆ ಪರಮಾತ್ಮಜ್ಞಾನ ಬಿಟ್ಟು ಬೇರೆ ಮಾರ್ಗವಿಲ್ಲ ಎಂಬುದಾಗಿ ಆಶ್ಮರಥ್ಯಾಚಾರ್ಯರು ಅಭಿಪ್ರಾಯ ಪಡುತ್ತಾರೆ.

ತತ್ತ್ವಪ್ರದೀಪ

तत्वप्रदीपः – प्रतिज्ञासिद्धेर्लिङ्गमाश्मरथ्यः ।। ''एतत् श्रेयो येऽभिनन्दन्ति मूढा जरामृत्युं ते पुनरेवापियन्ति । इष्टापूर्तं मन्यमाना वरिष्ठं नान्यच्छ्रेयो वेदयन्ते प्रमूढाः । नाकस्य पृष्ठे सुकृते तेऽनुभूत्वा इमं लोकं हीनतरं वा विशन्ति'' ''परीक्ष्य लोकान् कर्मचितान्ब्राह्मणो निर्वेदमायात्'' इत्याद्युक्त प्रकारेणान्यदनित्यफलमिति यत् तस्मान्नान्य उपायो भगवत्प्राप्ति रूपायामृतत्वायेतति ।।छ।।

'ಪ್ರತಿಜ್ಞಾಸಿದ್ಧೇಃ ಲಿಂಗಮಾಶ್ಮರಥ್ಯಃ' ಎಂಬ ಸೂತ್ರದ ಅರ್ಥವನ್ನು ಭಾಷ್ಯದಲ್ಲಿ ಹೀಗೆ ತಿಳಿಸಿದ್ದಾರೆ - 'ಏತತ್ ಶ್ರೇಯೋ ಯೇऽಭಿನಂದಂತಿ ಮೂಢಾ ಜರಾಮೃತ್ಯುಂ ತೇ ಪುನರೇವಾಪಿಯಂತಿ । ಇಷ್ಟಾಪೂರ್ತಂ ಮನ್ಯಮಾನಾ ವರಿಷ್ಠಂ ನಾನ್ಯತ್ ಶ್ರೇಯೋ ವೇದಯಂತೇ ಪ್ರಮೂಢಾಃ । ನಾಕಸ್ಯ ಪೃಷ್ಠೇ ಸುಕೃತೇ ತೇऽನುಭೂತ್ವಾ ಇಮಂ ಲೋಕಂ ಹೀನತರಂ ವಾ ವಿಶಂತಿ' ಭಗವಂತನನ್ನು ಬಿಟ್ಟು, ಉಳಿದದ್ದರ ತಿಳುವಳಿಕೆಯೇ ಶ್ರೇಯೋಸಾಧನವೆಂದು ಮೂಢರು ಅರಿಯುತ್ತಾರೆ. ಇಷ್ಟಾಪೂರ್ತವನ್ನೇ ಅತ್ಯಂತ ಶ್ರೇಷ್ಠವೆಂದು ಪ್ರಮೂಢರು ಭಾವಿಸುತ್ತಾರೆ. ಇಂಥವರು ಸ್ವರ್ಗಕ್ಕೆ ತೆರಳಿ ತಮ್ಮ ಸುಕೃತಫಲವನ್ನು ಅನುಭವಿಸಿ, ಪುನಃ ಹೀನತರವಾದ ಈ ಲೋಕವನ್ನು ಪ್ರವೇಶಿಸುತ್ತಾರೆ. 'ಪರೀಕ್ಷ್ಯ ಲೋಕಾನ್‌ಕರ್ಮಚಿತಾನ್ ಬ್ರಾಹ್ಮಣೋ ನಿರ್ವೇದಮಾಯಾತ್' ಕರ್ಮಸಂಪಾದ್ಯವಾದ ಫಲವನ್ನು ಐಹಿಕವೆಂದು ತಿಳಿದು ವಿರಕ್ತನಾಗಿ ಬ್ರಹ್ಮಜ್ಞಾನವನ್ನು ಪಡೆಯಬೇಕು. ಇತ್ಯಾದಿಯಾಗಿ ಹೇಳಿದಂತೆ ಬ್ರಹ್ಮಜ್ಞಾನವನ್ನು ಬಿಟ್ಟು, ಉಳಿದರ ಜ್ಞಾನವು ಅನಿತ್ಯಫಲಕವಾಗಿದೆ. ಆದ್ದರಿಂದ ಭಗವತ್‌ಪ್ರಾಪ್ತಿ ಎಂಬ ಅಮೃತತ್ವಕ್ಕೋಸ್ಕರ ಈ ಕರ್ಮಾದಿಗಳ ಜ್ಞಾನವು ಉಪಯುಕ್ತವಾಗುತ್ತದೆ.

ತಾತ್ಪರ್ಯವುಳ್ಳವುಗಳಾಗುತ್ತವೆ ಎಂದು ಸಿದ್ಧವಾಗುತ್ತಿತ್ತು ? ಈ ಆಕಾಂಕ್ಷೆಗೆ ಮೂರು ಬಗೆಯ ಉತ್ತರವನ್ನು ಮೂರು ಮಂದಿ ಶಿಷ್ಯಂದಿರ ಮುಖದಿಂದ ತೋರಿಸುತ್ತಿದ್ದಾರೆ 'ಪ್ರತಿಜ್ಞಾ' ಇತ್ಯಾದಿ ಸೂತ್ರದಿಂದ.

'ನಾನ್ಯಃ ಪಂಥಾ ಅಯನಾಯ ವಿದ್ಯತೇ' ಎಂಬುದಕ್ಕೆ ಸುಂದರ ವ್ಯಾಖ್ಯಾನ

सत्तर्कदीपावलिः – यद्यमृतत्वावाप्तये परमपुरुषज्ञानतोऽन्यः पन्था न विद्यत इति प्रतिज्ञा सिध्येत् तर्हि तदज्ञानाय प्रयतेत पुमान् । अतस्तत्सिध्यर्थं लिङ्गत्वेन मायामहदादिशब्दैः श्रीब्रह्मादिशब्दैश्च वेदतन्त्रोक्तमार्गतो रमाम् अजशङ्करादिलोकेशादीन् यजन्तो विजानन्तश्च पुत्रवित्तायैहिकं पातालाद्यामुष्मिकं च अनित्यमेव फलं लभन्त इति कर्मदेवतादिकमुच्यत इति आश्मरथ्यो मन्यत इत्यर्थः ।

ಒಂದುವೇಳೆ ಮೋಕ್ಷವನ್ನು ಪಡೆಯುವುದಕ್ಕಾಗಿ ಪರಮಪುರುಷನೆನಿಸಿದ ಭಗವಂತನನ್ನು ಬಿಟ್ಟು, ಬೇರೆ ಪದಾರ್ಥದ ತಿಳಿಯುವಿಕೆ ಮೊದಲಾದ ಮಾರ್ಗವು ಇದ್ದಿದ್ದರೆ ಪರಮಾತ್ಮ ಪರತ್ವವನ್ನೇ ಒಪ್ಪುವ ಅವಶ್ಯಕತೆಯಿರಲಿಲ್ಲ. ಆದರೆ ಪರಮಪುರುಷನನ್ನು ತಿಳಿಯುವುದು ಬಿಟ್ಟು ಬೇರೆ ಮಾರ್ಗವೇ ಇರುವುದಿಲ್ಲ. ಈ ಪ್ರತಿಜ್ಞೆಯು ಸಿದ್ಧವಾಗಿದ್ದರೆ, ಆಗ ಭಗವಂತನ ಜ್ಞಾನಕ್ಕೋಸ್ಕರ ಪುರುಷನು ಪ್ರಯತ್ನ ಪಡುತ್ತಿದ್ದನು. ಆದ್ದರಿಂದ ಪರಮಪುರುಷನ ಜ್ಞಾನದಿಂದಲೇ ಮೋಕ್ಷವಾಗುತ್ತದೆ ಎಂಬುದನ್ನು ತಿಳಿಸುವುದಕ್ಕೋಸ್ಕರ ಲಿಂಗಭೂತವಾಗಿ ಮಾಯಾಶಬ್ದದಿಂದ ಹಾಗೂ ಶ್ರೀ ಮೊದಲಾದ ಶಬ್ದಗಳಿಂದ ರಮೆಯು ಪ್ರತಿಪಾದ್ಯಳಾಗುತ್ತಾಳೆ. ಮಹತ್ ಮೊದಲಾದ ಶಬ್ದಗಳಿಂದ ಹಾಗೂ ಬ್ರಹ್ಮ ಮೊದಲಾದ ಶಬ್ದಗಳಿಂದ ಚತುರ್ಮುಖನು ಪ್ರತಿಪಾದ್ಯನಾಗುತ್ತಾನೆ. ಹೀಗೆ ವೇದತಂತ್ರದಲ್ಲಿ ಹೇಳಲ್ಪಟ್ಟ ಮಾರ್ಗದಿಂದ ಲಕ್ಷ್ಮೀ, ಚತುರ್ಮುಖಬ್ರಹ್ಮ, ರುದ್ರ ಮೊದಲಾದವರೇ ಈ ಲೋಕಗಳಿಗೆ ಒಡೆಯರಾಗಿದ್ದಾರೆ ಎಂಬುದಾಗಿ ಯಾವ ಅಧಿಕಾರಿಯು ತಿಳಿದು ಯಾಗವನ್ನು ಆಚರಣೆ ಮಾಡುತ್ತಾನೋ, ಅವನಿಗೆ ಪುತ್ರಪ್ರಾಪ್ತಿಯಾಗುತ್ತದೆ. ಯಥೇಚ್ಛವಾದ ಲೌಕಿಕಸಂಪತ್ತುಗಳು ದೊರೆಯುತ್ತವೆ. ಪಾತಾಳಲೋಕ ಮೊದಲಾದ ಆಮುಷ್ಮಿಕ ಫಲಗಳೂ ಕೂಡ ದೊರೆಯುತ್ತವೆ. ಆದರೆ ಇವೆಲ್ಲವೂ ಕೂಡ ಅನಿತ್ಯವೇ ಆಗಿವೆ. ಆದ್ದರಿಂದ ಪರಮಾತ್ಮನನ್ನು ಹೊರತಾಗಿ, ಇತರ ದೇವತೆಗಳ ಆರಾಧನೆಯನ್ನು ಅನುಷ್ಠಾನ ಮಾಡುವುದರಿಂದ

ಅನಿತ್ಯಫಲವೇ ದೊರೆಯುತ್ತದೆ ಹೊರತು, ಮೋಕ್ಷಫಲವು ದೊರೆಯುವುದಿಲ್ಲ. ಹಾಗಾಗಿ ಮೋಕ್ಷಮಾರ್ಗಕ್ಕೆ ಪರಮಾತ್ಮಜ್ಞಾನ ಬಿಟ್ಟು ಬೇರೆ ಮಾರ್ಗವಿಲ್ಲ ಎಂಬುದಾಗಿ ಆಶ್ಮರಥ್ಯಾಚಾರ್ಯರು ಅಭಿಪ್ರಾಯ ಪಡುತ್ತಾರೆ.

ತತ್ತ್ವಪ್ರದೀಪ

तत्वप्रदीपः – प्रतिज्ञासिद्धेर्लिङ्गमाश्मरथ्यः ।। ''एतत् श्रेयो येऽभिनन्दन्ति मूढा जरामृत्युं ते पुनरेवापियन्ति । इष्टापूर्तं मन्यमाना वरिष्ठं नान्यच्छ्रेयो वेदयन्ते प्रमूढाः । नाकस्य पृष्ठे सुकृते तेऽनुभूत्वा इमं लोकं हीनतरं वा विशन्ति'' ''परीक्ष्य लोकान् कर्मचितान्ब्राह्मणो निर्वेदमायात्'' इत्याद्युक्त प्रकारेणान्यदनित्यफलमिति यत् तस्मान्नान्य उपायो भगवत्प्राप्ति रूपायामृतत्वायेतति ।।छ।।

'प्रतिज्ञासिद्धेः लिंगमाश्मरथ्यः' ಎಂಬ ಸೂತ್ರದ ಅರ್ಥವನ್ನು ಭಾಷ್ಯದಲ್ಲಿ ಹೀಗೆ ತಿಳಿಸಿದ್ದಾರೆ - 'ಏತತ್ ಶ್ರೇಯೋ ಯೇऽಭಿನಂದಂತಿ ಮೂಢಾ ಜರಾಮೃತ್ಯುಂ ತೇ ಪುನರೇವಾಪಿಯಂತಿ। ಇಷ್ಟಾಪೂರ್ತಂ ಮನ್ಯಮಾನಾ ವರಿಷ್ಠಂ ನಾನ್ಯತ್ ಶ್ರೇಯೋ ವೇದಯಂತೇ ಪ್ರಮೂಢಾಃ । ನಾಕಸ್ಯ ಪೃಷ್ಠೇ ಸುಕೃತೇ ತೇऽನುಭೂತ್ವಾ ಇಮಂ ಲೋಕಂ ಹೀನತರಂ ವಾ ವಿಶಂತಿ' ಭಗವಂತನನ್ನು ಬಿಟ್ಟು, ಉಳಿದದ್ದರ ತಿಳುವಳಿಕೆಯೇ ಶ್ರೇಯೋಸಾಧನವೆಂದು ಮೂಢರು ಅರಿಯುತ್ತಾರೆ. ಇಷ್ಟಾಪೂರ್ತವನ್ನೇ ಅತ್ಯಂತ ಶ್ರೇಷ್ಠವೆಂದು ಪ್ರಮೂಢರು ಭಾವಿಸುತ್ತಾರೆ. ಇಂಥವರು ಸ್ವರ್ಗಕ್ಕೆ ತೆರಳಿ ತಮ್ಮ ಸುಕೃತಫಲವನ್ನು ಅನುಭವಿಸಿ, ಪುನಃ ಹೀನತರವಾದ ಈ ಲೋಕವನ್ನು ಪ್ರವೇಶಿಸುತ್ತಾರೆ. 'ಪರೀಕ್ಷ್ಯ ಲೋಕಾನ್‌ಕರ್ಮಚಿತಾನ್ ಬ್ರಾಹ್ಮಣೋ ನಿರ್ವೇದಮಾಯಾತ್' ಕರ್ಮಸಂಪಾದ್ಯವಾದ ಫಲವನ್ನು ಐಹಿಕವೆಂದು ತಿಳಿದು ವಿರಕ್ತನಾಗಿ ಬ್ರಹ್ಮಜ್ಞಾನವನ್ನು ಪಡೆಯಬೇಕು. ಇತ್ಯಾದಿಯಾಗಿ ಹೇಳಿದಂತೆ ಬ್ರಹ್ಮಜ್ಞಾನವನ್ನು ಬಿಟ್ಟು, ಉಳಿದರ ಜ್ಞಾನವು ಅನಿತ್ಯಫಲಕವಾಗಿದೆ. ಆದ್ದರಿಂದ ಭಗವತ್‌ಪ್ರಾಪ್ತಿ ಎಂಬ ಅಮೃತತ್ವಕ್ಕೋಸ್ಕರ ಈ ಕರ್ಮಾದಿಗಳ ಜ್ಞಾನವು ಉಪಯುಕ್ತವಾಗುತ್ತದೆ.

ತತ್ವಪ್ರಕಾಶಿಕಾ

ಪರಮಾತ್ಮನ ಜ್ಞಾನಕ್ಕೋಸ್ಕರ ಲೌಕಿಕ ಜ್ಞಾನ

यदन्यवचनस्यापि परमात्मज्ञानार्थत्वमुक्तं तत् केन प्रकारेण? इत्याकांक्षायां तत्प्रदर्शनाय सूत्रमुपन्यस्य व्याचष्टे – प्रतिज्ञेति ।।

ಪರಮಾತ್ಮನ ಜ್ಞಾನಕ್ಕೋಸ್ಕರ ಶಬ್ದಗಳು ಲೌಕಿಕಾರ್ಥವನ್ನು ಪ್ರತಿಪಾದನೆ ಮಾಡಲೇ ಬೇಕು ಎಂದು ಈ ಹಿಂದೆ ಸಮರ್ಥಿಸಲಾಯಿತು. ಇದನ್ನು ಯಾವ ಪ್ರಕಾರದಿಂದ ತಿಳಿಯಬೇಕು ? ಎಂಬ ಆಕಾಂಕ್ಷೆಯು ಪ್ರಾಪ್ತವಾದರೆ, ಆ ಪ್ರಕಾರವನ್ನು ಸ್ಪಷ್ಟಪಡಿಸಲು ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ 'ಪ್ರತಿಜ್ಞಾ' ಇತ್ಯಾದಿಯಾಗಿ.

ಜ್ಞಾನವೇ ಮೋಕ್ಷಕ್ಕೆ ಸಾಧನ

तत्वप्रकाशिका – 'ज्ञानमेव मोक्षसाधनं नान्यत्' इति प्रतिज्ञाते, कुतो ज्ञानमेव मुक्तिहेतुः? इत्याकांक्षायां तत् प्रतिज्ञासिद्धयर्थं हेतुत्वेन सविस्तरं श्रुत्या सपरिकरं कर्माद्युच्यते ।

ಜ್ಞಾನವೇ ಮೋಕ್ಷಕ್ಕೆ ಸಾಧನವಾಗಿದೆ ಹೊರತು, ಬೇರೆ ಯಾವುದೂ ಅಲ್ಲ. ಹೀಗೆ ಪ್ರತಿಜ್ಞೆಯನ್ನು ಮಾಡಲಾಯಿತು. ಇದರ ಮೇಲೆ ಜ್ಞಾನವೇ ಏಕೆ ಮೋಕ್ಷಕ್ಕೆ ಕಾರಣವಾಗಬೇಕು? ಎಂಬ ಆಕಾಂಕ್ಷೆಯು ಪ್ರಾಪ್ತವಾದರೆ ಪ್ರತಿಜ್ಞೆಯ ಸಿದ್ಧಿಗೋಸ್ಕರ ಕರ್ಮಾದಿಗಳನ್ನು ಕಾರಣವನ್ನಾಗಿ ಸಮರ್ಥಿಸುತ್ತಾರೆ. ಮತ್ತು ವಿಸ್ತಾರವಾದ ಶ್ರುತಿಯಿಂದ ಫಲ ಮತ್ತು ಇತಿಕರ್ತವ್ಯತಾಗಳಿಂದ ಕೂಡಿದ ಫಲಗಳನ್ನು ಸಮರ್ಥಿಸುತ್ತಾರೆ.

ಕರ್ಮಾದಿಗಳು ಜ್ಞಾನಕ್ಕೆ ಪೂರಕ

तत्वप्रकाशिका – 'अतो ज्ञानमवश्यमापाद्यम्' इत्येवमाकारेण कर्मादिवचनस्य ज्ञानोपयोगित्वम्, इत्याश्मरथ्याचार्यो मन्यत इति भावः ।

ಆದ್ದರಿಂದ ಕರ್ಮವು ಮೋಕ್ಷಜ್ಞಾನಕ್ಕೆ ಅತ್ಯಂತ ಆವಶ್ಯಕವಾಗಿರುತ್ತದೆ. ಹೀಗೆ ಜ್ಞಾನವು ಮೋಕ್ಷಕ್ಕೆ ಸಾಧನವಾಗಿರುವುದರಿಂದ, ಕರ್ಮಾದಿಗಳನ್ನು ಹೇಳಿರುವುದು ಜ್ಞಾನಕ್ಕೆ

ಉಪಯೋಗವಾಗಿರುತ್ತದೆ ಎಂದು ಆಶ್ಮರಥ್ಯಾಚಾರ್ಯರ ಅಭಿಪ್ರಾಯವಾಗಿದೆ ಎಂದು ತಿಳಿಯಬೇಕು.

'ನಾನ್ಯಾಃಪಂಥಾ' ಎಂಬ ಶ್ರುತಿಯ ವ್ಯಾಖ್ಯಾನ

तत्वप्रकाशिका – कर्मादिवचनं कथमुक्तप्रतिज्ञायां हेतुः ? इत्यत आह – यस्मादिति ।।

ಕರ್ಮಾದಿಗಳನ್ನು ಪ್ರತಿಪಾದನೆ ಮಾಡುವುದರಿಂದ 'ನಾನ್ಯಾಃಪಂಥಾ' ಎಂಬ ಪ್ರತಿಜ್ಞೆಯು ಹೇಗೆ ಸಿದ್ಧವಾಗುತ್ತದೆ ? ಎಂಬ ಪ್ರಶ್ನೆಯು ಪ್ರಾಪ್ತವಾದರೆ 'ಯಸ್ಮಾತ್' ಎಂಬುದರಿಂದ ಉತ್ತರಿಸುತ್ತಿದ್ದಾರೆ.

'ಅಮೃತೋ ವಾವ' ಎಂಬ ಶ್ರುತ್ಯರ್ಥ

तत्वप्रकाशिका – विस्तरेण सपरिकरं कर्माद्युक्त्वा 'अमृतो वाव सोमपो भवति, यावदिन्द्रः' इत्यादिना तस्य दुःखसम्भिन्नं विनाशिफलमुच्यते,

ಕರ್ಮಾದಿಗಳನ್ನು ಸಾಂಗೋಪಾಂಗವಾಗಿ ವಿಸ್ತಾರವಾಗಿ ನಿರೂಪಣೆ ಮಾಡುವುದರಿಂದ 'ಅಮೃತೋ ವಾವ ಸೋಮಪೋ ಭವತಿ ಯಾವದಿಂದ್ರಃ' 'ಯಾರು ಸೋಮಪಾನವನ್ನು ಮಾಡುತ್ತಾನೋ, ಅವನು ಇಂದ್ರನಿರುವ ತನಕ ಸ್ವರ್ಗದಲ್ಲಿರುತ್ತಾನೆ' ಇತ್ಯಾದಿ ವಾಕ್ಯದಿಂದ ದುಃಖ ಮಿಶ್ರಿತವಾದ ಸುಖವನ್ನು ಅಂದರೆ ನಾಶವಾಗುವಂತಹ ಸುಖವನ್ನೇ ಫಲವನ್ನಾಗಿ ಶ್ರುತಿಯು ಹೇಳುತ್ತಿದೆ.

ಕರ್ಮದ ಫಲವು ದುಃಖಮಿಶ್ರಿತ

तत्वप्रकाशिका – तत् परामृश्य 'यस्मादेवं कर्मादि अनित्यफलं तस्मान्न तन्मोक्षसाधनम् । तस्य दुःखासम्भिन्ननित्यसुखरूपत्वात् ।

ಆದ್ದರಿಂದ ಮೊದಲು ಕರ್ಮಫಲವನ್ನು ಚೆನ್ನಾಗಿ ವಿಮರ್ಶೆ ಮಾಡಿದಾಗ, ಕರ್ಮಾದಿ ಅನುಷ್ಠಾನದಿಂದ ದೊರೆಯುವ ಫಲವು ಅನಿತ್ಯವಾಗಿದೆ ಎಂಬ ಜ್ಞಾನೋದಯವಾಗುತ್ತದೆ. ಆದ್ದರಿಂದ ಕರ್ಮಾದಿಗಳ ಜ್ಞಾನವು ಮೋಕ್ಷಕ್ಕೆ ಕಾರಣವಾಗುವುದಿಲ್ಲ. ಏಕೆಂದರೆ ಮೋಕ್ಷವು

ದುಃಖದಿಂದ ಮಿಶ್ರಣವಾಗದ ವ್ಯಕ್ತಿಯ ಸುಖಸ್ವರೂಪವಾಗಿದೆ. ಆದರೆ ಕರ್ಮದಿಂದ ದೊರೆಯುವ ಫಲವು ದುಃಖ-ಮಿಶ್ರಿತವಾದ ಸುಖಸ್ವರೂಪವಾಗಿರುತ್ತದೆ.

'ಪರೀಕ್ಷ್ಯ ಲೋಕಾನ್' ಎಂಬುದರ ವ್ಯಾಖ್ಯಾನ

तत्वप्रकाशिका – अतो 'ज्ञानान्नान्यः पन्था मोक्षाय' इति प्रतिज्ञा युक्तैवेत्येवं रूपेण कर्मादिवचनस्य हेतुत्वम्, इति भावः । तथा च श्रुतिः – 'परीक्ष्य लोकान् कर्मचितान् ब्राह्मणः' इत्यादि ।।

ಆದ್ದರಿಂದ ಜ್ಞಾನವನ್ನು ಬಿಟ್ಟು ಮೋಕ್ಷಕ್ಕೆ ಬೇರೆ ಮಾರ್ಗವಿಲ್ಲ ಎಂಬುದಾಗಿ ಹೇಳುವ 'ನಾನ್ಯಃಪಂಥಾ' ಎಂಬ ಪ್ರತಿಜ್ಞೆಯು ಅತ್ಯಂತ ಯುಕ್ತವಾಗುತ್ತದೆ. ಈ ರೀತಿಯಾಗಿ ಕರ್ಮಾದಿಗಳ ಕಥನವು ಪ್ರತಿಜ್ಞಾರ್ಥಸಿದ್ಧಿಗೆ ಕಾರಣವಾಗಿದೆ ಎಂದು ತಾತ್ಪರ್ಯ. ಆದ್ದರಿಂದ 'ಪರೀಕ್ಷ್ಯಲೋಕಾನ್ ಕರ್ಮಚಿತಾನ್ ಬ್ರಾಹ್ಮಣಃ' ಕರ್ಮದಿಂದ ದೊರೆಯುವ ಲೋಕಗಳನ್ನು ವಿವೇಚನೆ ಮಾಡಿ, ಬ್ರಹ್ಮಜ್ಞಾನಿಯು ವೈರಾಗ್ಯವನ್ನು ತಾಳಬೇಕು ಇತ್ಯಾದಿಯಾದ ಶ್ರುತಿಯು ಹೊರಟಿರುತ್ತದೆ.

ಭಾವದೀಪ

ಟೀಕೆಯ ಕೆಲವು ಕಠಿಣಪದಾರ್ಥಗಳು

सपरिकरमिति ।। फलेतिकर्तव्यतासहितमित्यर्थः । कर्मादिवचनस्य ज्ञानमेव मुक्तिहेतुरित्यस्य च हेतुहेतुमद्भावं सामान्यतो व्यनक्ति – अत इति ।। एतच्चाग्रे व्यक्तम् ।। इत्यादिनेति ।। 'भाक्तं वाऽनात्मवित्त्वात्' इत्यत्र तृतीयाद्यपादे भाष्योक्तवचनेनेत्यर्थः । आदिपदेन एतत् श्रेयो येऽभिनन्दन्ति मूढा जरामृत्युं पुनरेवापियन्ति । इष्टापूर्तं मन्यमाना वरिष्ठमित्यादिग्रहः । तत्परामृश्य तदालोच्य इत्यर्थः ।

'ಸಪರಿಕರಂ' ಎಂದರೆ ಯಜ್ಞಾದಿಕರ್ಮಗಳಿಗೆ ಪರಿಕರಗಳೆನಿಸಿದ ಫಲ. ಇತಿಕರ್ತವ್ಯತಾಗಳಿಂದ ಸಹಿತವಾದ ಎಂದರ್ಥ. ಕರ್ಮದಿಂದ ಮೋಕ್ಷವೆನ್ನುವ ವಾಕ್ಯಕ್ಕೂ ಜ್ಞಾನದಿಂದ ಮೋಕ್ಷವೆನ್ನುವ ವಾಕ್ಯಕ್ಕೂ

ಕಾರ್ಯಕಾರಣಭಾವವನ್ನು ಸಾಮಾನ್ಯವಾಗಿ ಹೇಳಲು 'ಅತಃ' ಇತ್ಯಾದಿ ಟೀಕಾವಾಕ್ಯ ಹೊರಟಿದೆ. ಮುಂದೆ ಈ ವಿಷಯ ಸ್ಪಷ್ಟವಾಗುತ್ತದೆ. 'ಇತ್ಯಾದಿನಾ' ಎಂಬ ಟೀಕೆಯ ಅಭಿಪ್ರಾಯ ಹೀಗಿದೆ - 'ಭಾಕ್ತಮ್ ವಾ ಅನಾತ್ಮವಿತ್ವಾತ್' ಎಂಬ ಸೂತ್ರದ ಮೂರನೇ ಅಧ್ಯಾಯದ ಮೊದಲನೆಯ ಪಾದದ ಭಾಷ್ಯದ ಮಾತಿನಿಂದ ಎಂದು ತಿಳಿಯಬೇಕು. ಆದಿಪದದಿಂದ 'ಏತತ್ ಶ್ರೇಯೋ ಯೇऽಭಿನಂದಂತಿ ಮೂಢಾಃ ಜರಾಮೃತ್ಯುಂ ಪುನರೇವ ಅಪಿಯಂತಿಂ ಇಷ್ಟಾಪೂರ್ತಂ ಮನ್ಯಮಾನಾ ವರಿಷ್ಠಂ' ಇತ್ಯಾದಿ ವಾಕ್ಯವನ್ನು ಸ್ವೀಕರಿಸಬೇಕು. 'ತತ್ಪರಾಮೃಷ್ಯ' ಎಂಬುದಕ್ಕೆ 'ಅದನ್ನು ಆಲೋಚನೆ ಮಾಡಿ' ಎಂದರ್ಥ.

ವೈರಾಗ್ಯವನ್ನು ಹುಟ್ಟಿಸುವ ಮೂಲಕ ಬ್ರಹ್ಮಜ್ಞಾನಕ್ಕೆ ಕಾರಣವಾಗುತ್ತದೆ

ಭಾವದೀಪಃ – एवं परिष्कृत्य यस्मादित्यादिभाष्यं योजयति – यस्मादिति।। एवमित्यनुवादः कर्मादीति व्याख्या ।। अत इति ।। कर्मणोऽनित्यफलकत्वा दित्यर्थः। युक्त्यैवैतीत्यनन्तरं प्रत्येतीति शेषः । तेन परामृश्येति साधु । उक्तं वैराग्यजननद्वारा ब्रह्मज्ञार्थत्वं श्रुत्या संवादयति – तथा चेति ।। व्याख्यातैषा श्रुतिराद्यनये ।।६।।

ಹೀಗೆ ಸ್ಪಷ್ಟವಾಗಿ ವ್ಯಾಖ್ಯಾನಮಾಡಿ 'ಯಸ್ಮಾತ್' ಇತ್ಯಾದಿ ಭಾಷ್ಯದ ಮಾತನ್ನು ಯೋಜನೆ ಮಾಡಲು 'ಯಸ್ಮಾದ್' ಇತ್ಯಾದಿ ಟೀಕಾವಾಕ್ಯವು ಹೊರಟಿದೆ. 'ಏವಂ' ಎಂಬ ಪದವು ಭಾಷ್ಯದಲ್ಲಿರುವ ಪದದ ಅನುವಾದವಾಗಿದೆ. 'ಕರ್ಮಾದಿ' ಇತ್ಯಾದಿ ವಾಕ್ಯವು ಅದರ ವ್ಯಾಖ್ಯಾನವಾಗಿದೆ. 'ಅತಃ' ಎಂಬ ಪದಕ್ಕೆ ಕರ್ಮವು ಅನಿತ್ಯಫಲಕವಾದ್ದರಿಂದ ಎಂದರ್ಥ. 'ಯುಕ್ತ್ಯೈವ' ಎಂಬುದರ ಅನಂತರ 'ಪ್ರತ್ಯೇತಿ' ಎಂಬ ಪದವನ್ನು ಶೇಷಪೂರಣ ಮಾಡಿಕೊಳ್ಳಬೇಕು. ಆದ್ದರಿಂದ 'ಪರಾಮೃಷ್ಯ' ಎಂಬ ಪದಕ್ಕೆ ಸಾರ್ಥಕವಾದ ಅರ್ಥವನ್ನು ಹೇಳಿದಂತಾಗುತ್ತದೆ. ಹಿಂದೆ ಹೇಳಿದಂತೆ ವೈರಾಗ್ಯವನ್ನು ಹುಟ್ಟಿಸುವ ಮೂಲಕ ಬ್ರಹ್ಮಜ್ಞಾನಕ್ಕೆ ಕರ್ಮಪ್ರತಿಪಾದಕವಾಕ್ಯವು ಪೂರಕವಾಗಿದೆ ಎಂಬುದನ್ನು ಶ್ರುತಿಸಂವಾದದಿಂದ ಸಮರ್ಥನೆ ಮಾಡಲು 'ತಥಾ ಚ' ಇತ್ಯಾದಿ ವಾಕ್ಯವು ಹೊರಟಿದೆ. ಇಲ್ಲಿ 'ಪರೀಕ್ಷ್ಯ ಲೋಕಾನ್' ಎಂಬ ಶ್ರುತಿಯನ್ನು ಜಿಜ್ಞಾಸಾಧಿಕರಣದಲ್ಲಿ ವ್ಯಾಖ್ಯಾನ ಮಾಡಲಾಗಿದೆ.

ಬ್ರಹ್ಮಸೂತ್ರ

'ಉತ್ಕ್ರಮಿಷ್ಯತೇ ಏವಂಭಾವಾದಿತ್ಯೌಡುಲೋಮಿಃ' ಎಂಬ ಸೂತ್ರ ವ್ಯಾಖ್ಯಾನ

ಬ್ರಹ್ಮಸೂತ್ರಮ್ – ।। उत्क्रमिष्यत एवम्भावादित्यौडुलोमिः।। ७ ।।

ಸೂತ್ರಾರ್ಥ - ಮೋಕ್ಷವನ್ನು ಅಪೇಕ್ಷಿಸುವ ಸಾಧಕನು ಸಂಸಾರದ ಬಿಡುಗಡೆಯನ್ನು ಬಯಸುತ್ತಾನೆ. ಅದಕ್ಕಾಗಿ ಮೋಕ್ಷಸಾಧನವಾದ ಜ್ಞಾನಕ್ಕೆ ಪೂರಕವಾಗಿ ಕರ್ಮವನ್ನು ಆಚರಿಸುತ್ತಾನೆ. ಹೀಗೆ ವೇದಗಳು ಜ್ಞಾನಸಾಧನೆಗಾಗಿ ಕರ್ಮವನ್ನು ವಿಧಿಸುತ್ತಿವೆ ಎಂದು ಔಡುಲೋಮಿ ಆಚಾರ್ಯರು ತಿಳಿಯುತ್ತಾರೆ.

ಅರ್ಥ -- ಉತ್ಕ್ರಮಿಷ್ಯತಃ = ಜ್ಞಾನದಿಂದ ಮೋಕ್ಷವನ್ನು ಅಪೇಕ್ಷಿಸುವ ಅಧಿಕಾರಿಗೆ, ಏವಂ = ಜ್ಞಾನಸಾಧನೆಗಾಗಿ, ಭಾವಾತ್ = ಕರ್ಮಾದಿಗಳ ಅನುಷ್ಠಾನವಿರುವುದರಿಂದ, ಮೋಕ್ಷಪ್ರಯೋಜನಕವಾದ ಜ್ಞಾನಕ್ಕೆ ಸಾಧನವಾಗಿ ವೇದಗಳಿಂದ ಕರ್ಮಾದಿ ಪ್ರತಿಪಾದನೆ ಮಾಡುವುದು ಯುಕ್ತವೇ ಆಗುತ್ತದೆಂದು, ಔಡುಲೋಮಿಃ = ಔಡುಲೋಮಿ ಆಚಾರ್ಯರು ಹೇಳುತ್ತಾರೆ.

ಬ್ರಹ್ಮಸೂತ್ರಭಾಷ್ಯ

ಔಡುಲೋಮಿಗಳ ಪ್ರಕಾರ ವೇದಸಮನ್ವಯ

ಬ್ರಹ್ಮಸೂತ್ರಭಾಷ್ಯಮ್ – 'उत्क्रमिष्यतो मुमुक्षोः कर्मादिना भाव्यं साधनसाधनत्वेन । अतस्तद् वक्ति' इत्यौडुलोमिर्मन्यते ।।७।।

ಅನುವಾದ - ಸಂಸಾರದಿಂದ ಬಿಡುಗಡೆಯನ್ನು ಯಾರು ಅಪೇಕ್ಷಿಸುತ್ತಾನೋ, ಅಂತಹ ಮುಮುಕ್ಷುವು ಮೋಕ್ಷಸಾಧನವಾದ ಜ್ಞಾನಕ್ಕೆ ಸಾಧನವಾದ ಕರ್ಮವನ್ನು ಅವಶ್ಯ ಆಚರಿಸಬೇಕು. ಆದ್ದರಿಂದ ವೇದಗಳು ಕರ್ಮಗಳನ್ನು ಪ್ರತಿಪಾದಿಸುತ್ತವೆ. ಹೀಗೆ ಔಡುಲೋಮಿ ಆಚಾರ್ಯರು ಹೇಳುತ್ತಾರೆ.

ಪ್ರತಿಪದಾರ್ಥ -- ಮತ್ತೊಂದು ಪ್ರಕಾರದಿಂದ ಕರ್ಮಾದಿಗಳ ವಚನವು ಭಗವಂತನ ಜ್ಞಾನಕ್ಕೆ ಉಪಯೋಗವಾಗಿದೆಯೆಂಬುದನ್ನು ತೋರಿಸುತ್ತಾ, ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ. –

ಮುಮುಕ್ಷೋಃ = ಮೋಕ್ಷವನ್ನು ಬಯಸಿ, ಉತ್ಕ್ರಮಿಷ್ಯತಃ = ಸಂಸಾರವನ್ನು ದಾಟಲು ಇಚ್ಛಿಸುವ ಸಾಧಕನಿಗೆ, ಕರ್ಮಾದಿನಾ = ಕರ್ಮ ಹಾಗೂ ದೇವತೆಗಳಿಂದ, ಭಾವ್ಯಂ = ದೊರೆಯುವ ಫಲವು, ಸಾಧನತ್ವೇನ = ಮೋಕ್ಷಸಾಧನವಾದ ಜ್ಞಾನಸಾಧನರೂಪವಾದ್ದರಿಂದ, ಅತಃ = ಈ ಕಾರಣಕ್ಕಾಗಿ, ತತ್ = ಕರ್ಮಾದಿಗಳನ್ನೂ, ವಕ್ತಿ = ವೇದವು ಹೇಳುತ್ತದೆ. ಇತಿ = ಹೀಗೆ, ಔಡುಲೋಮಿಃ = ಔಡುಲೋಮಿ ಆಚಾರ್ಯರು, ಮನ್ಯತೇ = ತಿಳಿಯುತ್ತಾರೆ.

ಸತ್ತರ್ಕದೀಪಾವಳಿ

ಮುಮುಕ್ಷುವಿಗೇಕೆ ಕರ್ಮಜ್ಞಾನ ?

सत्तर्कदीपावलिः – एवं तर्हि मुमुक्षुणानुष्ठेयं कर्म न विज्ञातव्यं भगवतोऽन्यदित्यत आह – उत्क्रमिष्यत इत्यादिना ।

ಭಗವಂತನ ಜ್ಞಾನವೊಂದೇ ಮೋಕ್ಷಕ್ಕೆ ಮಾರ್ಗ ಎಂದು ಹಿಂದಿನ ಸೂತ್ರದಲ್ಲಿ ಉಪಪಾದನೆ ಮಾಡಿದಿರಿ. ಹಾಗಾದರೆ ಮುಮುಕ್ಷುವಾದವನು ಕರ್ಮದ ಬಗ್ಗೆ ಏಕೆ ತಿಳಿಯಬೇಕು? ಏಕೆಂದರೆ ಈ ಕರ್ಮವು ಭಗವಂತನಿಗಿಂತ ಅತಿರಿಕ್ತವಾಗಿದೆ. ಈ ಪ್ರಶ್ನೆಗೆ ಔಡುಲೋಮಿ ಆಚಾರ್ಯರು ಉತ್ತರವನ್ನು ನೀಡುತ್ತಿದ್ದಾರೆ 'ಉತ್ಕ್ರಮಿಷ್ಯತ ಏವಂಭಾವಾತ್' ಎಂಬುದಾಗಿ.

ತತ್ತ್ವಪ್ರದೀಪ

ಕರ್ಮಕ್ಕೆ ಬ್ರಹ್ಮಜ್ಞಾನ ಸಾಧನದ ಸಮರ್ಥನೆ.

तत्वप्रदीपः – उत्क्रमिष्यत एवम्भावादित्यौडुलोमिः ।। संसारादुत्क्रमणेच्छोस्तत्साधन भूतज्ञानसाधनत्वेन कर्मादिना भाव्यम् । ''तमेतं वेदानुवचनेन ब्राह्मणा विविदिषन्ति यज्ञेन दानेन तपसाऽनाशकेन'' इति श्रुतेः ।।छ।।

'ಉತ್ಕ್ರಮಿಷ್ಯತ ಏವಂಭಾವಾದಿತ್ಯೌಡುಲೋಮಿಃ' ಎಂಬ ಸೂತ್ರದ ಅರ್ಥವನ್ನು ಭಾಷ್ಯದಲ್ಲಿ ಹೀಗೆ ತಿಳಿಸಿದ್ದಾರೆ - ಸಂಸಾರವನ್ನು ದಾಟಲು ಬಯಸಿದ ಸಾಧಕನು ಮೋಕ್ಷಸಾಧನಭೂತವಾದ ಬ್ರಹ್ಮಜ್ಞಾನ ಸಾಧನವೆನಿಸಿದ ಕರ್ಮದಲ್ಲಿ ತೊಡಗಬೇಕು. ಆದ್ದರಿಂದಲೇ ಕರ್ಮವನ್ನು ವಿಧಿಸುತ್ತಿದೆ. 'ತಮೇತಂ ವೇದಾನುವಚನೇನ ಬ್ರಾಹ್ಮಣಾ ವಿವಿದಿಷಂತಿ ಯಜ್ಞೇನ ದಾನೇನ ತಪಸಾऽನಾಶಕೇನ' ಯಜ್ಞ, ದಾನ, ತಪಸ್ಸು ಮೊದಲಾದವುಗಳಿಂದ ಆ ಬ್ರಹ್ಮನನ್ನೇ ತಿಳಿಯಲು ಸಾಧಕನು ಅಪೇಕ್ಷಿಸುತ್ತಾನೆ ಎಂಬ ಶ್ರುತಿಯೂ ಕೂಡ ಈ ವಿಷಯದಲ್ಲಿ ಆಧಾರವಾಗಿದೆ.

ತತ್ತ್ವಪ್ರಕಾಶಿಕಾ

ಮತ್ತೊಂದು ಪ್ರಕಾರದಿಂದ ಕರ್ಮಾದಿಜ್ಞಾನಕ್ಕೆ ಸಾರ್ಥಕ್ಯ

प्रकारान्तरेणाऽन्यवचनस्य ज्ञानोपयोगित्वं दर्शयत् सूत्रमुपन्यस्य व्याचष्टे – उत्क्रमिष्यत इति ।।

ವೇದದಲ್ಲಿ ಹೇಳಲ್ಪಟ್ಟ ಕರ್ಮಾದಿಗಳಿಗೆ ಒಂದು ಬಗೆಯ ಪ್ರಯೋಜನವನ್ನು ನಿರೂಪಣೆ ಮಾಡಿದ್ದಾಯಿತು. ಪ್ರಕೃತ 'ಕರ್ಮಾದಿಗಳು ಜ್ಞಾನಕ್ಕೆ ಸಾಧನವಾಗುತ್ತವೆ' ಎಂಬ ಮತ್ತೊಂದು ಪ್ರಕಾರದಿಂದ ಸಾರ್ಥಕ್ಯವನ್ನು ಹೇಳಲು ಹೊರಟಿದ್ದಾರೆ. ವೇದದಲ್ಲಿ ನಿರೂಪಿತವಾದ ಕರ್ಮಾದಿಗಳು ಜ್ಞಾನಕ್ಕೆ ಹೇಗೆ ಉಪಯೋಗಿ ಆಗುತ್ತವೆ ? ಎಂಬುದನ್ನು ತೋರಿಸುವುವವರಾಗಿ ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ 'ಉತ್ಕ್ರಮಿಷ್ಯತಃ' ಇತ್ಯಾದಿಯಾಗಿ.

ಕರ್ಮಾದಿಗಳನ್ನು ಬಿಡುವಂತಿಲ್ಲ

तत्त्वप्रकाशिका – 'मोक्षार्थं ज्ञानमेवावश्यमपेक्षितम्' इति सिद्धे, तत्केन साधनेन सिद्ध्यति? इत्यपेक्षायां कर्मादिकमुच्यते । ज्ञानेन मोक्षमिच्छतो ज्ञानसाधनतया कर्मादिरपि भाव्यत्वात् ।

ಮೋಕ್ಷಕ್ಕೆ ಜ್ಞಾನವೇ ಮುಖ್ಯಸಾಧನ. ಈ ವಿಷಯವು ಸಿದ್ಧವಾದ ಮೇಲೆ ಅಂತಹ ಜ್ಞಾನವನ್ನು ಹೇಗೆ ಪಡೆಯಬೇಕು? ಎಂಬ ಆಕಾಂಕ್ಷೆ ಬರುತ್ತದೆ. ಅದಕ್ಕಾಗಿ ವೇದದಲ್ಲಿ ಕರ್ಮಾದಿಗಳನ್ನು

ನಿರೂಪಣೆ ಮಾಡಲಾಗಿದೆ. ಜ್ಞಾನದಿಂದ ಮೋಕ್ಷವನ್ನು ಪಡೆಯಲು ಯಾವ ಸಾಧಕನು ಇಚ್ಛಿಸುತ್ತಾನೋ, ಅವನು ಜ್ಞಾನಕ್ಕೆ ಸಾಧನವಾದ ಕರ್ಮಾದಿಗಳನ್ನೂ ಕೂಡ ಅನುಷ್ಠಾನ ಮಾಡಲೇಬೇಕು.

ಜ್ಞಾನವೇ ಮುಖ್ಯ

तत्वप्रकाशिका – नच फलोक्तिविरोधः । तस्या रुचिमात्रार्थत्वात् । 'रोचनार्थं फलश्रुतिः' इत्यादेः ।

ಪ್ರಶ್ನೆ - ಯಜ್ಞಯಾಗಾದಿ ಕರ್ಮಗಳಿಂದ ಪುತ್ರೋತ್ಪತ್ತಿ, ವೃಷ್ಟಿ ಮೊದಲಾದ ಬೇರೆ ಫಲವನ್ನು ಹೇಳಿರುವಾಗ ಜ್ಞಾನವನ್ನೇ ಮುಖ್ಯಪ್ರಯೋಜನವೆಂದು ಹೇಗೆ ಹೇಳುತ್ತೀರಿ?

ಉತ್ತರ - ಇಂತಹ ಫಲವನ್ನು ಹೇಳುವ ಶ್ರುತಿಯ ವಿರೋಧಕ್ಕೆ ಅವಕಾಶವಿಲ್ಲ. ಏಕೆಂದರೆ 'ರೋಚನಾರ್ಥಂ ಫಲಶ್ರುತಿಃ' ಎಂಬ ಮಾತಿನಂತೆ ಸ್ವರ್ಗ, ಪುತ್ರ ಮೊದಲಾದ ಫಲವನ್ನು ಹೇಳಿರುವುದು ಸಾಧನೆಯಲ್ಲಿ ರುಚಿಯನ್ನು ಹುಟ್ಟಿಸಲು ಹೊರತು, ಜ್ಞಾನೋತ್ಪತ್ತಿಗೆ ಕರ್ಮವು ಸಾಧನವಲ್ಲ ಎಂದಭಿಪ್ರಾಯವಲ್ಲ.

ಔಡುಲೋಮಿ ಆಚಾರ್ಯರ ಅಭಿಪ್ರಾಯ

तत्वप्रकाशिका – अत एवं ज्ञानोत्पत्तौ कर्मादेः उपयोगित्वेन वेदः तद्वक्तीऽत्यौडुलोमिराचार्यो मन्यत इति भावः ।। ७ ।।

ಆದ್ದರಿಂದಲೇ ಜ್ಞಾನವನ್ನು ಪಡೆಯಬೇಕೆಂದರೆ ಕರ್ಮಾದಿಗಳ ಅನುಷ್ಠಾನವನ್ನು ಮಾಡಬೇಕು ಎಂಬುದಾಗಿ ಔಡುಲೋಮಿ ಆಚಾರ್ಯರು ಅಭಿಪ್ರಾಯ ಪಡುತ್ತಾರೆ

ಭಾವದೀಪ

ಔಡುಲೋಮಿ ಆಚಾರ್ಯರು ಮತ್ತೊಂದು ಕ್ರಮದಲ್ಲಿ ಇದನ್ನೇ ಸಮರ್ಥಿಸಿದ್ದಾರೆ

प्रकारान्तरेणेति ।। कर्मादेर्ज्ञानसाधनत्वेन प्रकारेणेत्यर्थः । मुमुक्षोरित्यादिभाष्यं शेषपूर्त्या व्याचष्टे – ज्ञानेनेति ।।

'ಉತ್ಕ್ರಮಿಷ್ಯತಃ' ಇತ್ಯಾದಿ ಸೂತ್ರದಲ್ಲಿ ಔಡುಲೋಮಿ ಆಚಾರ್ಯರ ಅಭಿಪ್ರಾಯವನ್ನು ಸೂತ್ರಕಾರರು ನಿರೂಪಣೆ ಮಾಡಿದ್ದಾರೆ. ಟೀಕೆಯಲ್ಲಿರುವ 'ಪ್ರಕಾರಾಂತರೇಣ' ಎಂಬ ಪದಕ್ಕೆ ಕರ್ಮಾದಿಗಳು ಜ್ಞಾನಸಾಧನವಾಗುತ್ತವೆ ಎಂಬ ಮತ್ತೊಂದು ಬಗೆಯಿಂದ ಎಂದರ್ಥ. 'ಮುಮುಕ್ಷೋಃ' ಇತ್ಯಾದಿ ಭಾಷ್ಯವನ್ನು ಕೆಲವು ಪದಗಳಿಂದ ಶೇಷಪೂರಣ ಮಾಡಿಕೊಳ್ಳುವ ಮೂಲಕ ಅರ್ಥಮಾಡಿಕೊಳ್ಳಬೇಕೆಂದು ಟೀಕೆಯಲ್ಲಿ ವ್ಯಾಖ್ಯಾನ ಮಾಡುತ್ತಿದ್ದಾರೆ 'ಜ್ಞಾನೇನ' ಇತ್ಯಾದಿ ವಾಕ್ಯದಿಂದ.

ಕರ್ಮಾನುಷ್ಠಾನದಿಂದ ಮನಸ್ಸು ನಿರ್ಮಲವಾಗುತ್ತದೆ

भावदीपः – अत इति भाष्यस्यानुवादः । एवमित्यादिव्याख्यानम् । कर्मणो ज्ञानोपयोगित्वं च भाक्तं वेत्यत्र सर्वापेक्षा च यज्ञादिश्रुतेरश्ववदित्यत्र जिज्ञासासूत्रे च भाष्योक्तदिशा, अन्तःकरणशुद्धिद्वारेति व्यक्तमिति भावः।।

'ಅತಃ ಏವಂ' ಎಂಬ ಟೀಕೆಯ ವಾಕ್ಯದಲ್ಲಿರುವ 'ಅತಃ' ಎಂಬ ಪದವು ಭಾಷ್ಯದ ಪದದ ಅನುವಾದವಾಗಿದೆ. ಇದಕ್ಕೆ 'ಏವಂ' ಇತ್ಯಾದಿ ಮಾತಿನಿಂದ ವ್ಯಾಖ್ಯಾನ ಮಾಡಿದ್ದಾರೆ ಎಂದು ತಿಳಿಯಬೇಕು.

ಕರ್ಮವು ಜ್ಞಾನಸಂಪಾದನೆಗೆ ಹೇಗೆ ಉಪಯೋಗವಾಗುತ್ತದೆಂಬ ವಿಚಾರವನ್ನು 'ಆಪ್ತಂ ವಾ' 'ಸರ್ವಾಪೇಕ್ಷಾ ಚ ಯಜ್ಞಾದಿಶ್ರುತೇಃ ಅಶ್ವವತ್' ಎಂಬ ಸೂತ್ರದ ಜಿಜ್ಞಾಸಾ ಸೂತ್ರದಲ್ಲಿಯೂ ಸ್ಪಷ್ಟಪಡಿಸಿದ್ದಾರೆ. ಕರ್ಮಾದಿಗಳನ್ನು ಚೆನ್ನಾಗಿ ಅನುಷ್ಠಾನ ಮಾಡುವುದರಿಂದ ಮನಸ್ಸು ನಿರ್ಮಲವಾಗುತ್ತದೆ. ನಿರ್ಮಲವಾದ ಮನಸ್ಸಿನಲ್ಲಿ ತತ್ವಜ್ಞಾನವನ್ನು ತುಂಬಿಕೊಂಡಾಗ ಮೋಕ್ಷವು ದೊರೆಯುತ್ತದೆ. ಇದು ಔಡುಲೋಮಿ ಆಚಾರ್ಯರ ಸಿದ್ಧಾಂತ.

ಬ್ರಹ್ಮಸೂತ್ರ

'ಅವಸ್ಥಿತೇರಿತಿ ಕಾಶಕೃತ್ಸ್ನಃ' ಎಂಬ ಸೂತ್ರವ್ಯಾಖ್ಯಾನ

ब्रह्मसूत्रम् – ।। अवस्थितेरिति काशकृत्स्नः ।। ೮ ।।

ಸೂತ್ರಾರ್ಥ - ಎಲ್ಲವೂ ಭಗವದಧೀನವೆಂದು ತಿಳಿಸಲು ವೇದವು ಕರ್ಮಾದಿಗಳನ್ನು ಪ್ರತಿಪಾದನೆ ಮಾಡುತ್ತದೆ. ಹೀಗೆ ಕಾಶಕೃತ್ಸ್ನರು ಅಭಿಪ್ರಾಯ ಪಡುತ್ತಾರೆ.

ಅರ್ಥ -- ಸರ್ವಾಧಾರನಾದ ಭಗವಂತನಲ್ಲಿ ಕರ್ಮಾದಿಗಳ ಅವಸ್ಥಿತೇಃ = ಇರುವಿಕೆಯು ಯುಕ್ತವಾಗುವುದರಿಂದ, ಕರ್ಮಕ್ಕೆ ಆಧಾರವಾದ ಜ್ಞಾನಕ್ಕೋಸ್ಕರ ಆಧೇಯಭೂತವಾದ ಕರ್ಮಾದಿ ಸ್ವರೂಪವನ್ನು ವೇದವು ಪ್ರತಿಪಾದನೆ ಮಾಡುತ್ತದೆ. ಇತಿ = ಹೀಗೆ, ಕಾಶಕೃತ್ಸ್ನಃ = ಕಾಶಕೃತ್ಸ್ನ ಎಂಬ ಆಚಾರ್ಯರು ಅಭಿಪ್ರಾಯ ಪಡುತ್ತಾರೆ. ಈ ಎಲ್ಲ ಮತದವರ ಅಭಿಪ್ರಾಯಗಳಿಗೆ ಅಧಿಕಾರಿಗಳು ಬೇರೆ ಬೇರೆಯವರಾದ್ದರಿಂದ ಪರಸ್ಪರ ವಿರೋಧವಿರುವುದಿಲ್ಲ.

॥ ಶ್ರೀವೇದವ್ಯಾಸದೇವರಿಂದ ರಚಿಸಲ್ಪಟ್ಟ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ
ಸಮಾಕರ್ಷಾಧಿಕರಣವು ಸಮಾಪ್ತವಾಯಿತು ॥

ಬ್ರಹ್ಮಸೂತ್ರಭಾಷ್ಯ

ಕರ್ಮಪ್ರತಿಪಾದಕ ವಾಕ್ಯಗಳ ವಿಷಯದಲ್ಲಿ ಕಾಶಕೃತ್ಸ್ನರ ಅಭಿಪ್ರಾಯ

ब्रह्मसूत्रभाष्यम् – सर्वं परमात्मन्यवस्थितमिति वक्तुं तद्वचनमिति काशकृत्स्नः। 'कृष्णद्वैपायनमतादेकदेशविदः परे ।
वदन्ति ते यथाप्रज्ञं न विरोधः कथञ्चन ।। इति पाद्मे ।।

।। इति श्रीमदानन्दतीर्थभगवत्पादाचार्यविरचिते
ब्रह्मसूत्रभाष्ये समाकर्षाधिकरणम् ।। ५ ।।

ಅನುವಾದ - ಕರ್ಮಾದಿ ಸಕಲ ಪ್ರಪಂಚವು ಪರಮಾತ್ಮನಲ್ಲಿ ನೆಲೆಗೊಂಡಿದೆ ಎಂದು ತಿಳಿಸಲು ಕರ್ಮಾದಿವಾಚಕತ್ವವನ್ನು ವೇದದಲ್ಲಿ ಒಪ್ಪಬೇಕೆಂದು ಕಾಶಕೃತ್ಸ್ನರು ಹೇಳುತ್ತಾರೆ. ಮೇಲಿನ ವಿಚಾರಗಳು ಸೂತ್ರಕಾರರಿಗೂ ಸಮ್ಮತ. ಏಕೆಂದರೆ ಪದ್ಮಪುರಾಣದಲ್ಲಿ ಸೂತ್ರಕಾರರೇ ಹೀಗೆ ಹೇಳಿದ್ದಾರೆ - ''ವೇದವ್ಯಾಸರ ಮನಸ್ಸಿನಲ್ಲಿರುವ ಅನೇಕ ಅಭಿಪ್ರಾಯಗಳಲ್ಲಿ ಒಂದೊಂದನ್ನು ಮಾತ್ರ ಅವರ ಶಿಷ್ಯರು ತಮ್ಮ ಬುದ್ಧಿಶಕ್ತಿಗನುಗುಣವಾಗಿ ತಿಳಿಯುತ್ತಾರೆ. ಮತ್ತು ಅದನ್ನು ತಮ್ಮ ಮತವೆಂದು ಹೇಳುತ್ತಾರೆ. ಆದ್ದರಿಂದ ಅವುಗಳಿಗೆ ಪರಸ್ಪರ ವಿರೋಧವಿರುವುದಿಲ್ಲ.

ಪ್ರತಿಪದಾರ್ಥ -- ಮತ್ತೊಂದು ಪ್ರಕಾರದಿಂದ ಕರ್ಮಾದಿಜ್ಞಾನವು ಬ್ರಹ್ಮಜ್ಞಾನಕ್ಕೆ ಉಪಯೋಗಿಯಾಗಿದೆ ಎಂದು ತೋರಿಸುತ್ತಾ, ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ. –

ಸರ್ವಂ = ಕರ್ಮಾದಿ ಸಕಲ ಪ್ರಪಂಚವು, ಪರಮಾತ್ಮನಿ = ಪರಮಾತ್ಮನಲ್ಲಿ, ಅವಸ್ಥಿತಂ = ಆಶ್ರಿತವಾಗಿದೆ. ಇತಿ = ಹೀಗೆ, ವಕ್ತುಂ = ತಿಳಿಸಲು, ತದ್ವಚನಮ್ = ಕರ್ಮಾದಿಬೋಧಕವಾದ ಮಾತುಗಳಿರುತ್ತವೆ. ಇತಿ = ಹೀಗೆ, ಕಾಶಕೃತ್ಸ್ನಃ = ಕಾಶಕೃತ್ಸ್ನಾಚಾರ್ಯರು ಹೇಳುತ್ತಾರೆ. (ಕರ್ಮಾದಿ ಜಗತ್ತು ಭಗವಂತನ ಅಧೀನ. ಇದನ್ನು ತಿಳಿಯಲು ಕರ್ಮಾದಿಗಳನ್ನು ತಿಳಿಯಲೇಬೇಕು)

ಕೃಷ್ಣದ್ವೈಪಾಯನಮತಾತ್ = ವೇದವ್ಯಾಸರ ಅಭಿಪ್ರಾಯದಿಂದ ಏಕದೇಶವಿದಃ = ಒಂದೊಂದು ಅಂಶವನ್ನು ತಿಳಿದವರಲ್ಲಿ ನಿಪುಣರಾದ, ತೇ = ಅವರು, ಯಥಾ ಪ್ರಜ್ಞಂ = ತಮ್ಮ ತಮ್ಮ ಬುದ್ಧಿಶಕ್ತಿ, ಯೋಗ್ಯತೆಗೆ ಅನುಗುಣವಾದ ಅಂಶವನ್ನು, ವದಂತಿ = ಹೇಳುತ್ತಾರೆ. ಅತಃ = ಆದ್ದರಿಂದ, ವಿರೋಧಃ = ಋಷಿಗಳ ಮತದಲ್ಲಿ ಭಿನ್ನಾಭಿಪ್ರಾಯವು, ಕಥಂಚನ = ಯಾವುದೇ ರೀತಿಯಲ್ಲಿಯೂ, ನ = ಇರುವುದಿಲ್ಲ. ಇತಿ = ಹೀಗೆ, ಪಾದ್ಮೇ = ಪದ್ಮಪುರಾಣದಲ್ಲಿ ಹೇಳಲಾಗಿದೆ.

॥ ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ವಿರಚಿತವಾದ ಬ್ರಹ್ಮಸೂತ್ರಭಾಷ್ಯದ ಕನ್ನಡಾನುವಾದದಲ್ಲಿ ಸಮಾಕರ್ಷಾಧಿಕರಣವು ಸಮಾಪ್ತವಾಯಿತು ॥

ಸತ್ತರ್ಕದೀಪಾವಳಿ

ಸಕಲ ಕರ್ಮಗಳು ಸಕಲ ದೇವತೆಗಳು ಬ್ರಹ್ಮನಲ್ಲೇ ನೆಲೆಗೊಂಡಿವೆ

सत्तर्कदीपावलिः – न केवलमधिकारिणां ब्रह्मज्ञानप्रवृत्तये तदपेक्षया अत्यल्पफलत्वेन अतिनीचत्वेन कर्म तदाराध्यादि रामश्. श्रुच्यते । नापि केवलान्तःकरणशुद्धिद्वारा तत् ज्ञानोपपत्तये च किन्तु सर्वस्य यथायोग्यं ब्रह्मण उत्पत्तिस्थितिसंहारनियमनज्ञानाज्ञानबन्धमोक्षवत्त्वेन तच्छक्यंशावस्थितत्वेन सर्वाश्रयत्वेन ब्रह्मविज्ञानार्थं चेति भावेनाह । अवस्थितेरित्यादिना ।

ಅಧಿಕಾರಿಯಾದವನು ಬ್ರಹ್ಮಜ್ಞಾನದಲ್ಲಿಯೇ ಪ್ರವೃತ್ತಿಯನ್ನು ಮಾಡಬೇಕು. ಅದಕ್ಕಿಂತ ಅತ್ಯಲ್ಪಫಲಕವಾದ ಅತಿ ನೀಚವಾದ ಕರ್ಮವನ್ನು, ಅಥವಾ ಈ ಕರ್ಮಾಚರಣೆಯಿಂದ ಲಕ್ಷ್ಮೀ, ರುದ್ರ ಮೊದಲಾದ ಇತರ ದೇವತೆಗಳನ್ನು ಆರಾಧನೆ ಮಾಡುವಿಕೆಯು ಯುಕ್ತವಾಗುವುದಿಲ್ಲ ಎಂದಷ್ಟೇ ಅಲ್ಲ. ಕೇವಲ ಅಂತಃಕರಣ ಶುದ್ಧಿಗೋಸ್ಕರ ಬ್ರಹ್ಮಜ್ಞಾನಕ್ಕೆ ಈ ಕರ್ಮ ಹಾಗೂ ಇತರ ದೇವತೆಗಳ ಜ್ಞಾನವು ಉಪಯೋಗಿಯಾಗಿದೆ ಎಂದಷ್ಟೇ ಅಲ್ಲ. ಯಥಾಯೋಗ್ಯವಾಗಿ ಬ್ರಹ್ಮನಜ್ಞಾನಕ್ಕೆ ಇವೆಲ್ಲವೂ ಉಪಯೋಗವಾಗಿವೆ. ಬ್ರಹ್ಮನು ಉತ್ಪತ್ತಿ, ಸ್ಥಿತಿ, ಸಂಹಾರ, ನಿಯಮನ, ಜ್ಞಾನ, ಅಜ್ಞಾನ, ಬಂಧ, ಮೋಕ್ಷಗಳಿಗೆ ಕಾರಣನಾಗಿದ್ದಾನೆ. ಈ ಕರ್ಮ ಹಾಗೂ ದೇವತೆಗಳೆಲ್ಲರೂ ಅವನ ಶಕ್ತಿಯ ಒಂದಂಶದಲ್ಲಿ ಅವಸ್ಥಿತರಾಗಿದ್ದಾರೆ. ಇವರೆಲ್ಲರಿಗೂ ಬ್ರಹ್ಮನು ಆಶ್ರಯನಾಗಿದ್ದಾನೆ ಎಂಬ ಜ್ಞಾನವೇ ಮೋಕ್ಷಕ್ಕೆ ಉಪಾಯವಾಗಿದೆ. ಈ ಕಾರಣಕ್ಕೋಸ್ಕರ ಕರ್ಮಜ್ಞಾನ ಹಾಗೂ ಇತರದೇವತೆಗಳ ಜ್ಞಾನವು ಅವಶ್ಯಕವಾಗಿದೆ ಎಂಬುದಾಗಿ ಕಾಶಕೃತ್ಸ್ನಾಚಾರ್ಯರು 'ಅವಸ್ಥಿತೇಃ' ಎಂಬುದಾಗಿ ಹೇಳುತ್ತಿದ್ದಾರೆ.

सत्तर्कदीपावलिः – न चैवम् ऋषीणां परस्परं विरोध इत्याह – कृष्णद्वैपायनेति ।

ಈ ಮೂರು ವ್ಯಾಸರ ಶಿಷ್ಯರ ಅಭಿಪ್ರಾಯದಲ್ಲಿ ಯಾವುದೇ ವಿರೋಧವಿಲ್ಲ ಎಂಬುದನ್ನು 'ಕೃಷ್ಣದ್ವೈಪಾಯನಮತಾತ್' ಎಂಬ ಶ್ಲೋಕದಿಂದ ಭಾಷ್ಯಕಾರರು ಉಪಪಾದನೆ ಮಾಡಿದ್ದಾರೆ.

॥ ಇಲ್ಲಿಗೆ ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ ಸತ್ತರ್ಕದೀಪಾವಳಿಯಲ್ಲಿ
ಸಮಾಕರ್ಷಾಧಿಕರಣದ ಕನ್ನಡಾನುವಾದವು ಸಮಾಪ್ತವಾಯಿತು ॥

ತತ್ವಪ್ರದೀಪ

ಅವಸ್ಥಿತಿ ಎಂದರೆ ಐಕ್ಯವಲ್ಲ

तत्वप्रदीपः – अवस्थितेरिति नैक्यमुच्यते । नह्यवस्थितिशब्दस्तद्वाचकः।।

इमि समाकर्षाधिकरणम् ।।

'ಅವಸ್ಥಿತೇರಿತಿ ಕಾಶಕೃತ್ಸ್ನಃ' ಎಂಬ ಸೂತ್ರಕ್ಕೆ ಹೀಗೆ ಅರ್ಥ - ಎಲ್ಲವೂ ವಿಷ್ಣುವಿನ ಅಧೀನವಾಗಿದೆ ಎಂದು ತಿಳಿಯಬೇಕು. ಹೊರತು ಐಕ್ಯವನ್ನು ಸರ್ವಥಾ ತಿಳಿಯಬಾರದು. ಏಕೆಂದರೆ ಅವಸ್ಥಿತಿ ಎಂಬ ಶಬ್ದಕ್ಕೆ ಐಕ್ಯ ಎಂಬರ್ಥವನ್ನು ಹೇಳಲು ಸಾಧ್ಯವಿಲ್ಲ.

॥ ಇಲ್ಲಿಗೆ ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ ತತ್ವಪ್ರದೀಪದಲ್ಲಿ
ಸಮಾಕರ್ಷಾಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

ತತ್ವಪ್ರಕಾಶಿಕಾ

ಮತ್ತೊಂದು ಪ್ರಕಾರದಲ್ಲಿ ಕರ್ಮಾದಿಗಳಿಗೆ ಸಾರ್ಥಕ್ಯ ಚಿಂತನೆ

रीत्यन्तरेण कर्मादिवचनस्य भगवज्ज्ञानोपयोगं प्रदर्शयत् सूत्रमुपन्यस्य व्याचष्टे – अवस्थितेरिति ।।

ಮತ್ತೊಂದು ರೀತಿಯಿಂದ ವೇದದಲ್ಲಿ ಹೇಳಲ್ಪಟ್ಟ ಕರ್ಮಾದಿಮಾತುಗಳು ಹೇಗೆ ಭಗವಂತನ ಜ್ಞಾನಕ್ಕೆ ಉಪಯೋಗವಾಗುತ್ತದೆ ಎಂಬುದನ್ನು ತೋರಿಸುವವರಾಗಿ ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ 'ಅವಸ್ಥಿತೇಃ' ಇತ್ಯಾದಿ ಭಾಷ್ಯದಲ್ಲಿ.

ಅಂತಃಕರಣಶುದ್ಧಿಗಾಗಿ ಕರ್ಮವು ಬೇಕು

तत्वप्रकाशिका – 'मोक्षार्थं सर्वथा ज्ञानमपेक्षितं, तच्च कर्मादिना अन्तःकरणशुद्ध्या भवति' इति सिद्धे, कथं ज्ञातव्यो हरिः? इत्याकाङ्क्षायां, 'सर्वं कर्मादिकं तस्मिन् परमात्मनि स्थितं, स सर्वाधारत्वादिरूपेण ज्ञातव्यः'

इति 'एष सेतुर्विध(धा)रणः' इत्यादौ वक्तुमाधेयादिरूपं कर्मादि वेदेनोच्यत इति वा साक्षात् परमात्मज्ञानोपयोगित्वमन्यवचनस्य' इति काशकृत्स्नाचार्यो मन्यत इति भावः ।

ಮೋಕ್ಷವನ್ನು ಪಡೆಯಬೇಕೆಂದರೆ ತತ್ವಜ್ಞಾನವನ್ನು ಹೊಂದಲೇಬೇಕು. ತತ್ವಜ್ಞಾನವಾದರೂ ಅಂತಃಕರಣದ ಶುದ್ಧಿ ಆಗದೆ ಮೋಕ್ಷಕ್ಕೆ ಸಾಧನವಾಗುವುದಿಲ್ಲ. ಆದ್ದರಿಂದ ಅಂತಃಕರಣದ ಶುದ್ಧಿಯ ಮೂಲಕ ಜ್ಞಾನವು ಮೋಕ್ಷಸಾಧನವಾಗುತ್ತದೆಂಬ ವಿಷಯವು ಹಿಂದಿನ ಸೂತ್ರದಲ್ಲಿ ಸಿದ್ಧವಾಯಿತು.

ಹಾಗಾದರೆ ಶ್ರೀಹರಿಯನ್ನು ಹೇಗೆ ತಿಳಿಯಬೇಕು ?

ಈ ಆಕಾಂಕ್ಷೆಯು ಸಹಜವಾಗಿ ಬರುತ್ತದೆ. ಶ್ರೀಹರಿಯಲ್ಲಿ ಸಕಲ ಪದಾರ್ಥಗಳು ಆಧೇಯವಾಗಿ ಇರುತ್ತವೆ. ಆಧೇಯವಾದ ಸಕಲಪದಾರ್ಥಗಳ ನಡುವೆ ಸಕಲಬಗೆಯ ಕರ್ಮಗಳೂ ಕೂಡ ಸೇರಿವೆ. ಈ ಎಲ್ಲಾ ಪದಾರ್ಥಗಳಿಗೂ ಪರಮಾತ್ಮನೊಬ್ಬನೇ ಆಧಾರನು. ಹೀಗೆ ಪರಮಾತ್ಮನನ್ನು ತಿಳಿದಾಗ ನಿಜವಾದ ತತ್ವಜ್ಞಾನವನ್ನು ಪಡೆದಂತಾಗುತ್ತದೆ.

'ಏಷ ಸೇತುರ್ವಿಧರಣಃ' 'ಪರಮಾತ್ಮನು ಸಕಲಪದಾರ್ಥಗಳಿಗೆ ಆಶ್ರಯನು' ಈ ಶ್ರುತಿಯು ಮೇಲಿನ ವಿಷಯವನ್ನು ಸ್ಪಷ್ಟಪಡಿಸುತ್ತಿದೆ. ಆಶ್ರಯನಾದ ಪರಮಾತ್ಮನಲ್ಲಿ ಆಧೇಯವಾಗಿರುವ ಕರ್ಮ ಮೊದಲಾದ ಸಕಲಪದಾರ್ಥಗಳನ್ನು ವೇದವು ಪ್ರತಿಪಾದನೆ ಮಾಡುತ್ತಿದೆ.

ಹೀಗೆ ವಿಚಾರ ಮಾಡಿದಾಗ ಕರ್ಮವು ಪರಮಾತ್ಮ ಜ್ಞಾನಕ್ಕೆ ನೇರವಾಗಿಯೇ ಸಾಧನವೆಂದು ತಿಳಿಯುತ್ತದೆ. ಇಷ್ಟು ಕಾಶಕೃತ್ಸ್ನಾಚಾರ್ಯರ ಸಿದ್ಧಾಂತ.

ಎಲ್ಲಾ ಋಷಿಗಳ ಅಭಿಪ್ರಾಯ ವೇದವ್ಯಾಸರಿಗೆ ಸಮ್ಮತ

तत्वप्रकाशिका – एवं जैमिन्यादिमतानि उपन्यस्य स्वमतं किं नोच्यते सूत्रकारेण ? एतेषामेव स्वमतत्वे जैमिन्यादिग्रहणवैयर्थ्यम् । विरुद्धानां च नैकमतत्वम् । एकस्यैव वेदस्यानेकाभिप्रायताऽयोगात् इत्यत आह – कृष्णेति ।।

ಇಲ್ಲಿಯ ತನಕ ಸೂತ್ರಕಾರರು ಜೈಮಿನಿ, ಔಡುಲೋಮಿ, ಕಾಶಕೃತ್ಸ್ನರ ಅಭಿಪ್ರಾಯಗಳನ್ನು ಮಂಡನೆ ಮಾಡಿದರು.

ಹಾಗಾದರೆ ತಮ್ಮ ಅಭಿಪ್ರಾಯವನ್ನೇ ಸೂತ್ರಕಾರರು ಹೇಳಿಲ್ಲವಲ್ಲ?

ಈ ಎಲ್ಲಾ ಆಚಾರ್ಯರ ಅಭಿಪ್ರಾಯವು ಸೂತ್ರಕಾರರಿಗೆ ಸಮ್ಮತವೇ ಆಗಿದೆಯೆಂದು ಉತ್ತರಿಸಿದರೆ ಜೈಮಿನಿ ಮೊದಲಾದ ಋಷಿಗಳ ಹೆಸರನ್ನೇಕೆ ಉಲ್ಲೇಖಿಸಿದ್ದಾರೆ ? ಮತ್ತು ಪರಸ್ಪರ ವಿರುದ್ಧ ಅಭಿಪ್ರಾಯ ಹೊಂದಿರುವ ಈ ಎಲ್ಲ ಸಿದ್ಧಾಂತಗಳು ಒಬ್ಬರೇ ಸೂತ್ರಕಾರರಿಗೆ ಸಮ್ಮತವಾಗಲು ಸಾಧ್ಯವಿಲ್ಲ. ಏಕೆಂದರೆ ಒಂದೇ ವೇದಕ್ಕೆ ವಿರುದ್ಧವಾದ ಅನೇಕ ಅಭಿಪ್ರಾಯವು ಅಯುಕ್ತವಾಗುತ್ತದಲ್ಲವೇ?

ಈ ಆಶಂಕೆಗೆ 'ಕೃಷ್ಣದ್ವೈಪಾಯನ' ಎಂಬ ಶ್ಲೋಕದಿಂದ ಭಾಷ್ಯಕಾರರು ಉತ್ತರಿಸುತ್ತಿದ್ದಾರೆ.

ಮುನಿಗಳಲ್ಲಿ ಅಭಿಪ್ರಾಯ ಭೇದವಿಲ್ಲ

तत्वप्रकाशिका – मुनिमतानां भगवन्मतत्वमेव । तथापि तत्तद्विदितात्ममतैक देशाभिप्रायेण शिष्यप्रसिध्यर्थं जैमिन्यादिग्रहणं युज्यते । अनेकाधिकारिविषयत्वान्न विरोधोऽपि, इति भावः ।

ಸೂತ್ರಕಾರರಾದ ವೇದವ್ಯಾಸದೇವರ ಮತವೇ ಸಕಲಮುನಿಗಳ ಮತವು. ಇವರಲ್ಲಿ ಪರಸ್ಪರ ವಿರೋಧಕ್ಕೆ ಅವಕಾಶವೇ ಇಲ್ಲ. ಸೂತ್ರಕಾರರು ತಮ್ಮ ಅನೇಕ ಬಗೆಯ ಅಭಿಪ್ರಾಯಗಳಲ್ಲಿ ಒಂದೊಂದು ಅಭಿಪ್ರಾಯವನ್ನು ಒಬ್ಬೊಬ್ಬ ಶಿಷ್ಯರ ಹೆಸರಿನಲ್ಲಿ ಉಲ್ಲೇಖ ಮಾಡಿದ್ದಾರೆ. ಹೀಗೆ ಉಲ್ಲೇಖಿಸಲು ಒಂದು ಮಹತ್‌ಪ್ರಯೋಜನವಿದೆ. ಜೈಮಿನಿ ಮೊದಲಾದ ಶಿಷ್ಯಂದಿರನ್ನು ಲೋಕದಲ್ಲಿ ಪ್ರಸಿದ್ಧಿ ತರಬೇಕಾಗಿದೆ. ಈ ಕಾರಣಕ್ಕಾಗಿ ಸೂತ್ರಕಾರರು ಆಯಾ ಮುನಿಗಳ ಹೆಸರುಗಳನ್ನು ಉಲ್ಲೇಖಿಸಿದ್ದಾರೆ ಹೊರತು, ಪರಸ್ಪರ ಅಭಿಪ್ರಾಯದಲ್ಲಿ ಬೇಧವಿದೆಯೆಂದು ತಿಳಿಯಬಾರದು. ಮತ್ತು ಅನೇಕ ಬಗೆಯ ಅಧಿಕಾರಿಗಳು ಈ ಗ್ರಂಥವನ್ನು ಅಧ್ಯಯನ ಮಾಡುತ್ತಾರೆ. ಬೇರೆ ಬೇರೆ ಅಧಿಕಾರಿಗಳ ವಿವಕ್ಷೆಯಿಂದ ಬೇರೆ ಬೇರೆ ಮತಗಳನ್ನು ಉಲ್ಲೇಖಿಸಿದ್ದಾರೆ. ಈ ಕಾರಣದಿಂದ ವಿರೋಧವು ಇರುವುದಿಲ್ಲ ಎಂದು ತಿಳಿಯಬೇಕು.

ಪರಮಮುಖ್ಯವೃತ್ತಿಯಂದ ಪರಮಾತ್ಮನೇ ಪ್ರತಿಪಾದ್ಯನೆಂಬುದು ಸಿದ್ಧವಾಯಿತು

तत्वप्रकाशिका – अतो भगवज्ज्ञानार्थं वैदिकादिशब्दानामन्यत्र समाकर्षेण व्यवहारोपपत्तेः, युक्तं हरेः सकलशब्दपरममुख्यार्थत्वम् इति सिद्धम् ।।

।। इति श्रीमज्जयतीर्थभिक्षुविरचितायां तत्वप्रकाशिकायाम् समाकर्षाधिकरणम् ।।

ಆದ್ದರಿಂದ ಸಕಲಶಬ್ದಗಳು ಮುಖ್ಯವಾಗಿ ಪರಮಾತ್ಮನನ್ನೇ ಪ್ರತಿಪಾದನೆ ಮಾಡುತ್ತವೆ. ಈ ವಿಷಯದಲ್ಲಿ ಯಾವ ವಿರೋಧವೂ ಇರುವುದಿಲ್ಲ. ಭಗವಂತನ ಜ್ಞಾನಕ್ಕೋಸ್ಕರ ಅಂತಹ ವೈದಿಕಶಬ್ದಗಳನ್ನು ಬೇರೆ ಅರ್ಥದಲ್ಲಿ ಸಮಾಕರ್ಷ ಮಾಡಿ, ವ್ಯವಹಾರ ಮಾಡಲಾಗುತ್ತದೆ. ಸಕಲಶಬ್ದಗಳು ಪರಮಮುಖ್ಯವೃತ್ತಿಯಿಂದ ಪರಮಾತ್ಮನನ್ನೇ ಪ್ರತಿಪಾದನೆ ಮಾಡುತ್ತವೆ ಎಂಬ ಸಿದ್ಧಾಂತವು ಸ್ಥಾಪಿತವಾಯಿತು.

॥ ಇಲ್ಲಿಗೆ ಶ್ರೀಮಜ್ಜಯತೀರ್ಥಮುನಿಗಳಿಂದ ವಿರಚಿತವಾದ ತತ್ವಪ್ರಕಾಶಿಕಾಟೀಕೆಯಲ್ಲಿ ಸಮಾಕರ್ಷಾಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

ಭಾವದೀಪ

ಕಾಶಕೃತ್ಸ್ನಾಚಾರ್ಯರ ಅಭಿಪ್ರಾಯ

रीत्यन्तरेणेति ।। भगवज्ज्ञाने विशेषणरूपविषयार्पकतयेत्यर्थः । इति सिद्धौ पूर्वसूत्रेणेत्यर्थः ।

'अवस्थितेरिति काशकृत्स्नः' ಎಂಬ ಸೂತ್ರದಿಂದ ಕಾಶಕೃತ್ಸ್ನಾಚಾರ್ಯರ ಅಭಿಪ್ರಾಯವನ್ನು ಮಂಡನೆ ಮಾಡುತ್ತಿದ್ದಾರೆ. ಟೀಕೆಯಲ್ಲಿರುವ 'ರೀತ್ಯಂತರೇಣ' ಎಂಬ ಪದಕ್ಕೆ ಭಗವದ್ಜ್ಞಾನದಲ್ಲಿ ವಿಶೇಷಣರೂಪವಾದ ವಿಷಯವನ್ನು ಅರ್ಪಣೆ ಮಾಡುವ ಮೂಲಕ ಎಂದರ್ಥ. 'ಇತಿ ಸಿದ್ಧೌ' ಎಂದರೆ ಹಿಂದಿನ ಸೂತ್ರದಿಂದ ಅಂತಃಕರಣದ ಶುದ್ಧಿಗೋಸ್ಕರ ಕರ್ಮಾಚರಣೆಯು ಸಾರ್ಥಕ ಎಂಬ ವಿಷಯವು ಸಿದ್ಧವಾಗುತ್ತಿರಲು ಎಂದರ್ಥ.

ಜೈಮಿನ್ಯಾದಿಗ್ರಹಣವು ಸಾವಕಾಶ

भावदीपः – सर्वमित्यादिभाष्यानुवादः स सर्वेत्यादिव्याख्या । एष इत्यादि शेषोऽक्तिः । जैमिन्यादिग्रहणस्य प्रसिध्यर्थत्वेन सावकाशत्वं मन्वान आह – विरुद्धानां चेति ।।

ಟೀಕೆಯಲ್ಲಿರುವ 'ಸರ್ವಂ ಕರ್ಮಾದಿಕಂ ತಸ್ಮಿನ್ ಪರಮಾತ್ಮನಿ ಸ್ಥಿತಂ' ಎಂಬ ವಾಕ್ಯವು ಭಾಷ್ಯದ ಅನುವಾದವೆಂದು 'ಸಃ ಸರ್ವಾಧಾರತ್ವಾದಿರೂಪೇಣ' ಇತ್ಯಾದಿ ವಾಕ್ಯವು ಅದರ ವ್ಯಾಖ್ಯಾನ

ರೂಪವೆಂದು ಸ್ಪಷ್ಟವಾಗಿ ತಿಳಿಯಬೇಕು. 'ಏಷ ಸೇತುಃ ವಿಧರಣಃ' ಇತ್ಯಾದಿ ವಾಕ್ಯವನ್ನು ಭಾಷ್ಯದಲ್ಲಿ ಶೇಷಪೂರಣ ಮಾಡಿಕೊಳ್ಳಬೇಕು. ಹೀಗೆ ಭಾಷ್ಯವನ್ನು ವ್ಯಾಖ್ಯಾನ ಮಾಡಿದ್ದಾರೆ.

ಜೈಮಿನಿ, ಔಡುಲೋಮಿ ಮತ್ತು ಕಾಶಕೃತ್ಸ್ನ ಈ ಮುನಿಗಳ ಹೆಸರನ್ನು ಉಲ್ಲೇಖ ಮಾಡಿರುವುದಕ್ಕೆ ಶಿಷ್ಯರು ಜಗತ್ತಿನಲ್ಲಿ ಪ್ರಸಿದ್ಧರಾಗಬೇಕೆಂಬ ಉದ್ದೇಶ ಹೊರತು, ಬೇರೆ ಕಾರಣವಿಲ್ಲ. ಆದ್ದರಿಂದ ಸೂತ್ರದಲ್ಲಿರುವ ಜೈಮಿನ್ಯಾದಿಗ್ರಹಣವು ಸಾವಕಾಶವಾಗಿದೆ ಎಂಬುದಾಗಿ 'ವಿರುದ್ಧಾನಾಂ ಚ' ಎಂಬ ಟೀಕೆಯಿಂದ ಸಮರ್ಥಿಸಿದ್ದಾರೆ.

ಸೂತ್ರಕಾರರಿಗೆ ಅಭಿಪ್ರೇತವೇ ಆಗಿದೆ

ಭಾವದೀಪಃ –

स्वशिष्याणां प्रसिध्यर्थं मतमात्मीयमंशतः ।
विज्ञातं तैर्जगादात्र तारतम्यं नृणां वदन् ।।

इत्यनुभाष्यदिशा स्मृतितात्पर्यमाह – मुनिमतानामिति ।।

स्वशिष्याणाम प्रसिद्ध्यर्थम मतमात्मीयमंशतः।
विज्ञातं तैर्जगादात्र तारतम्यं नृणाम वदन् ॥

ಮೋಕ್ಷಾಧಿಕಾರಿಗಳಲ್ಲಿ ಸಹಜವಾದ ತಾರತಮ್ಯವನ್ನು ವಿವಕ್ಷಿಸಿ, ತಮ್ಮ ಅಭಿಪ್ರಾಯದ ಏಕದೇಶವನ್ನು ಆಯಾ ಶಿಷ್ಯರ ಹೆಸರಿನಲ್ಲಿ ಸೂತ್ರಕಾರರೇ ಹೇಳಿದ್ದಾರೆ ಎಂಬ ಅನುವ್ಯಾಖ್ಯಾನದ ಪ್ರಕಾರ ಪಾದಸ್ಮೃತಿಯ ಅಭಿಪ್ರಾಯವನ್ನು 'ಮುನಿಮತಾನಾಮ್' ಎಂಬ ವ್ಯಾಕ್ಯದಿಂದ ಸ್ಪಷ್ಟಪಡಿಸಿದ್ದಾರೆ.

ಜ್ಞಾನಸಂಪಾದನೆ ಮೊದಲು ಕರ್ಮದಲ್ಲಿ ತೊಡಗಬೇಕು

ಭಾವದೀಪಃ – अनेकेति ।। जैमिनिमतस्य पदसमन्वयायोग्यमन्दाधिकारिक वाक्यसमन्वयार्थत्वात् । तत्राप्याश्मरथ्यमतस्य वैराग्यसम्पत्ति प्रागवस्थापिशिष्टाधिकारिकत्वात्। औडुलोमिमतस्य ज्ञानसम्पत्तिप्रागवस्था विशिष्टाधिकारिकत्वादित्यर्थः ।

ಅಯೋಗ್ಯರಾದ ಮಂದಾಧಿಕಾರಿಗಳಿಗೆ ಪದಸಮನ್ವಯವನ್ನು ತಿಳಿಯಲು ಸಾಧ್ಯವಿಲ್ಲ. ಅವರಿಗಾಗಿ ವ್ಯಾಕ್ಯಸಮನ್ವಯವನ್ನು ತಿಳಿಸಲಾಗಿದೆ. ಇದು ಜೈಮಿನ್ಯಾಚಾರ್ಯರ ಮತ.

ವೈರಾಗ್ಯವನ್ನು ಸಂಪಾದನೆ ಮಾಡುವ ಮೊದಲು ಯಾವ ಅವಸ್ಥೆಯಲ್ಲಿ ಅಧಿಕಾರಿಯು ಇರುತ್ತಾನೋ, ಅವನನ್ನು ಉದ್ದೇಶಿಸಿ ಕರ್ಮಾದಿಗಳ ಸಂಪಾದನೆಯನ್ನು ವೇದವು ಪ್ರತಿಪಾದನೆ ಮಾಡುತ್ತದೆ ಇದು ಆಶ್ಮರಥ್ಯಾಚಾರ್ಯರ ಮತ.

ಜ್ಞಾನಸಂಪಾದನೆಗಿಂತ ಮೊದಲು ಕರ್ಮಾನುಷ್ಠಾನದಲ್ಲಿ ತೊಡಗಬೇಕು. ಇಂತಹ ಅಧಿಕಾರಿಗಳನ್ನು ಕುರಿತು ವೇದವು ಕರ್ಮವನ್ನು ನಿರೂಪಣೆ ಮಾಡುತ್ತದೆ. ಇದು ಔಡುಲೋಮ್ಯಾಚಾರ್ಯರರ ಅಭಿಪ್ರಾಯ.

ಇದಕ್ಕೆ ನ್ಯಾಯಸುಧೆಯ ಆಧಾರ

भावदीपः – उक्तं च सुधायाम् । नृणामल्पाधिकारिणामवस्थातारतम्यं वदन्निति ।। अत इति ।। भगवतः सर्वशब्दमुख्यार्थत्वे बाधकाभावादित्यर्थः ।।५।।

।। इति श्रीराघवेन्द्रयतिकृते भावदीपे समाकर्षाधिकरणम् ।।

ಇದನ್ನೇ ನ್ಯಾಯಸುಧಾಯದಲ್ಲಿ 'नृणामल्पाधिकारिणामवस्थातारतम्यं वदन्' ಎಂಬುದಾಗಿ ಹೇಳಿರುತ್ತಾರೆ. 'ಅತಃ' ಎಂದರೆ ಭಗವಂತನು ಸಕಲಶಬ್ದಗಳಿಂದ ಮುಖ್ಯಾರ್ಥನಾಗಿದ್ದಾನೆಂಬ ವಿಷಯದಲ್ಲಿ ಯಾವುದೇ ಬಾಧಕಗಳಿಲ್ಲದಿರುವುದರಿಂದ ಎಂದರ್ಥ.

॥ ಇಲ್ಲಿಗೆ ಶ್ರೀಮದ್‌ರಾಘವೇಂದ್ರತೀರ್ಥರಿಂದ ವಿರಚಿತವಾದ ಭಾವದೀಪದ
ಸಮಾಕರ್ಷಾಧಿಕರಣದ ಕನ್ನಡ ಅನುವಾದವು ಮುಗಿಯಿತು ॥

।। श्रीजानकीवदनाम्भोजराजहंसाय रामचन्द्राय नमः ।।

।। श्री गुरुभ्यो नमः ।।

श्री राघवेन्द्रतीर्थविरचिता

तन्त्रदीपिका

समाकर्षाधिकरणम् (१।४।५)

'ಸಮಾಕರ್ಷಾತ್' ಎಂಬ ಸೂತ್ರದ ಪ್ರತಿಪದಾರ್ಥ

।। समाकर्षात् ।। १-४-१६ ।।

अत्र नये ज्योतिर्नय इव सर्वशब्दा न्यायभेदेन समन्वीयन्ते । तत्त्विति प्रकृतं ब्रह्म तत इत्यन्वेति । न विरोध इत्यस्ति । वक्ष्यमाणं जगत्पदमाकृष्यते । सर्वशब्दसनामिति शेषः । पूर्वोक्तहेतुभिः ब्रह्मवाचित्वेऽन्यत्र रूढ्यादिना व्यवहारे च सिद्धे बाधकनिरासार्थमिदं सूत्रम् । सर्वशब्दानां ततो ब्रह्मणः सकाशाज्जगति सम्यगाकर्षान्न वृत्तिसाम्यापत्त्या तत्त्वित्वधारणविरोध इत्यर्थः ।

ಹಿಂದಿನ ಜ್ಯೋತಿರಧಿಕರಣದಲ್ಲಿ ಹೇಗೆ ಸಕಲಶಬ್ದ ಪ್ರತಿಪಾದ್ಯತ್ವವನ್ನು ಸಮರ್ಥಿಸಲಾಯಿತೋ, ಅದೇ ವಿಷಯವನ್ನೇ ಪುನಃ ಈ ಅಧಿಕರಣದಲ್ಲಿಯೂ ಬೇರೆ ನ್ಯಾಯದಿಂದ ಸಮನ್ವಯ ಮಾಡುತ್ತಿದ್ದಾರೆ. 'ತತ್ತು ಸಮನ್ವಯಾತ್' ಎಂಬ ಸೂತ್ರದಲ್ಲಿ 'ತತ್ತು' ಎಂಬ ಪದದಿಂದ ಪ್ರಕೃತನಾದ ಬ್ರಹ್ಮನನ್ನು 'ತತಃ' ಎಂಬ ಪದದಿಂದ ಅನ್ವಯ ಮಾಡಿಕೊಳ್ಳಬೇಕು. 'ನ ವಿರೋಧಃ' ಎಂಬ ಪದಗಳನ್ನು ಅನುವೃತ್ತಿ ಮಾಡಿಕೊಳ್ಳಬೇಕು. ಮುಂದಿನ ಸೂತ್ರದಲ್ಲಿರುವ 'ಜಗತ್' ಎಂಬ ಪದವನ್ನು ಇಲ್ಲಿಯೂ ಅನ್ವಯ ಮಾಡಿಕೊಳ್ಳಬೇಕು. 'ಸರ್ವಶಬ್ದಾನಾಮ್' ಎಂಬುದನ್ನು ಶೇಷಪೂರಣ ಮಾಡಿಕೊಳ್ಳಬೇಕು.

ಹಿಂದೆ ಹೇಳಿರುವ ಯುಕ್ತಿಗಳಿಂದ ಸಕಲ ಶಬ್ದಗಳು ಬ್ರಹ್ಮನನ್ನು ಪ್ರತಿಪಾದನೆ ಮಾಡುತ್ತವೆ. ಕೇವಲ ರೂಢಿಯಿಂದ ಅನ್ಯತ್ರ ವ್ಯವಹರಿಸಲ್ಪಡುತ್ತವೆಂದು ಸಿದ್ಧವಾದ ಮೇಲೆ ಬರುವಂತಹ ಬಾಧಕದ ಪರಿಹಾರಕ್ಕಾಗಿ ಈ ಸೂತ್ರ ಹೊರಟಿದೆ.

ಸೂತ್ರದಲ್ಲಿಲ್ಲದ ಪದಗಳೆನ್ನೆಲ್ಲ ಸೇರಿಸಿಕೊಂಡಾಗ ಸೂತ್ರಾರ್ಥವನ್ನು ಸ್ಪಷ್ಟವಾಗಿ ಹೀಗೆ ಹೇಳಿದಂತಾಗುತ್ತದೆ. ಬ್ರಹ್ಮನಲ್ಲಿರುವ ಸಕಲ ಶಬ್ದಗಳನ್ನು ಜಗತ್ತಿನಲ್ಲಿ ಸಮೀಚೀನವಾಗಿ ಆಕರ್ಷಣೆ ಮಾಡಿ, ಪ್ರಯೋಗಿಸಲಾಗುತ್ತದೆ ಎಂದರೆ ಪರಮಮುಖ್ಯವೃತ್ತಿಯಿಂದ ಬ್ರಹ್ಮನೇ ಪ್ರತಿಪಾದ್ಯನಾದರೂ, ಮುಖ್ಯವೃತ್ತಿಯಿಂದ ಲೌಕಿಕಪದಾರ್ಥಗಳನ್ನು ಪ್ರತಿಪಾದಿಸುತ್ತದೆ. ಆದ್ದರಿಂದ ಎರಡೂ ಕಡೆ ಶಬ್ದಗಳ ವೃತ್ತಿ ಸಮಾನವಾಗಿ ಬರುವುದಿಲ್ಲ. ಆದ್ದರಿಂದಲೇ 'ತತ್ತು' ಎಂಬ ಅವಧಾರಣದ ವಿರೋಧವೂ ಕೂಡ ಬರುವುದಿಲ್ಲ. (ಸರ್ವಶಬ್ದಾನಾಂ = ಎಲ್ಲಾ ಬಗೆಯ ಶಬ್ದಗಳನ್ನು, ತತಃ = ಬ್ರಹ್ಮನ ದೆಸೆಯಿಂದ, ಜಗತಿ = ಜಗತ್ತಿನಲ್ಲಿ, ಸಮಾಕರ್ಷಾತ್ = ಚೆನ್ನಾಗಿ ಆಕರ್ಷಣೆ ಮಾಡಿದ್ದರಿಂದ, ನ ವಿರೋಧಃ = ತತ್ತು ಎಂಬ ಅವಧಾರಣದ ವಿರೋಧ ಬರುವುದಿಲ್ಲ.ಇಷ್ಟು ಪದಗಳ ಅರ್ಥ.)

'ತತ್ತು' ಎಂಬುದು ವಿವಕ್ಷಿತ

समाकर्षोक्त्या विष्णौ परममुख्यवृत्तिरन्यत्र मुख्यवृत्तिरिति मुख्यतारतम्यसूचनात् तत्त्वित्यवधारणोपपत्तिरिति भावः ।

ಸಮಾಕರ್ಷವನ್ನು ಹೇಳಿದ್ದರಿಂದ ವಿಷ್ಣುವಿನಲ್ಲಿ ಶಬ್ದಗಳೆಲ್ಲವೂ ಪರಮಮುಖ್ಯವೃತ್ತಿಯಿಂದ ಇರುತ್ತವೆ. ಬೇರೆ ಪದಾರ್ಥಗಳಲ್ಲಿ ಮುಖ್ಯವೃತ್ತಿಯಿಂದ ಇರುತ್ತವೆಂದು ತಿಳಿಸಿದಂತಾಯಿತು. ಆದ್ದರಿಂದ ಮುಖ್ಯವೃತ್ತಿ- ಯಲ್ಲಿಯೇ ತಾರತಮ್ಯವಿರುತ್ತದೆಂದು ಸೂಚನೆ ಮಾಡಿದ್ದರಿಂದ 'ತತ್ತು' ಎಂಬ ಅವಧಾರಣವು ಉಪಪನ್ನವಾಗುತ್ತದೆ. ಬ್ರಹ್ಮನೊಬ್ಬನೇ ಎಲ್ಲಾ ಶಬ್ದಗಳಿಂದ ಪ್ರತಿಪಾದ್ಯನೆಂಬುದು ಯುಕ್ತವಾಗುತ್ತದೆಂದು ಅಭಿಪ್ರಾಯ.

'ಸಮ್' ಎಂಬ ಉಪಸರ್ಗದ ಅರ್ಥ

समित्युक्तिरन्यत्र मुख्यत्वमेव न लक्षणादिरिति सूचनाय ।

'ಸಮಾಕರ್ಷಾತ್' ಎಂಬಲ್ಲಿ 'ಸಮ್' ಎಂಬ ಉಪಸರ್ಗವನ್ನು ಏಕೆ ಪ್ರಯೋಗಿಸಿದ್ದಾರೆಂದರೆ ಪರಮಾತ್ಮನಲ್ಲಿರುವ ಶಬ್ದಗಳನ್ನು ಬೇರೆ ಕಡೆ ಪ್ರಯೋಗ ಮಾಡಿದರೂ, ಅಮುಖ್ಯವೃತ್ತಿಯೆನಿಸಿದ

ಗೌಣೀವೃತ್ತಿಯಿಂದ, ಲಕ್ಷಣಾವೃತ್ತಿಯಿಂದ ಇರುವುದಿಲ್ಲ. ಮುಖ್ಯವೃತ್ತಿಯಿಂದಲೇ ಆಯಾ ಪದಾರ್ಥಗಳನ್ನು ಶಬ್ದಗಳು ಪ್ರತಿಪಾದಿಸುತ್ತವೆಂದು ಸೂಚನೆ ಮಾಡಿದ್ದಾರೆ.

ಮುಖ್ಯವೃತ್ತಿಯಲ್ಲಿಯೂ ತಾರತಮ್ಯವಿದೆ

साक्षादित्यत्र विष्णुवाचिनां जगति प्रयोगे हानादिव्यवहारः फलमिति, शरीरेत्यत्र तत्तच्छब्दवाच्यब्रह्मसम्बन्धस्तत्र निमित्तमिति, कल्पनेत्यत्र रूढ्यादिरस्तीति, अत्र तु मुख्यवृत्तितारतम्यमस्तीत्युक्तमिति ध्येयम् ।

'ಸಾಕ್ಷಾದಪ್ಯವಿರೋಧಂ ಜೈಮಿನಿಃ' ಎಂಬ ಸೂತ್ರದಲ್ಲಿ ವಿಷ್ಣುವಾಚಕವಾದ ಶಬ್ದಗಳನ್ನು, ಜಗತ್ತಿನ ವಿಷಯದಲ್ಲಿ ಪ್ರಯೋಗ ಮಾಡುವುದರಿಂದ ಹಾನ, ಉಪಾದಾನ ಮೊದಲಾದ ವ್ಯವಹಾರಗಳು ಸಿದ್ಧವಾಗುತ್ತವೆಂಬುದು ಫಲ. 'ಶರೀರರೂಪಕವಿನ್ಯಸ್ತ ಗೃಹೀತೇರ್ದರ್ಶಯತಿ ಚ' ಎಂಬ ಸೂತ್ರದಲ್ಲಿ ಆಯಾ ಶಬ್ದಗಳಿಂದ ಲೌಕಿಕಪದಾರ್ಥಗಳು ಪ್ರತಿಪಾದ್ಯವಾಗಲು, ಎಲ್ಲಾ ಶಬ್ದಗಳಿಂದಲೂ ಮುಖ್ಯವಾಗಿ ಪ್ರತಿಪಾದ್ಯನಾದ ಬ್ರಹ್ಮನ ಸಂಬಂಧವಿರುವುದೇ ಕಾರಣವೆಂದು ಹೇಳಲಾಗಿದೆ. 'ಕಲ್ಪನೋಪದೇಶಾಚ್ಚ' ಎಂಬ ಸೂತ್ರದಲ್ಲಿ ಶಬ್ದಗಳಿಗೆ ಬೇರೆ ವಸ್ತುಗಳಲ್ಲಿ ರೂಢಿಯು ಇರುತ್ತದೆಂದು ನಿರೂಪಣೆ ಮಾಡಲಾಗಿದೆ. ಪ್ರಕೃತ ಈ ಅಧಿಕರಣದಲ್ಲಿ ಮುಖ್ಯವೃತ್ತಿಯಲ್ಲಿಯೂ ಕೂಡ ತಾರತಮ್ಯವಿದೆಯೆಂದು ಹೇಳಲಾಗಿದೆ. ಆದ್ದರಿಂದ ಒಂದೇ ವಿಷಯವನ್ನು ಅನೇಕ ಬಾರಿ ಹೇಳಿದಂತಾಗುವುದಿಲ್ಲ. ಸೂತ್ರಗಳಲ್ಲಿರುವ ಅಭಿಪ್ರಾಯ ವ್ಯತ್ಯಾಸವನ್ನು ಗಮನಿಸಬೇಕು.

'ಜಗದ್ವಾಚಿತ್ವಾತ್' ಎಂಬ ಸೂತ್ರಕ್ಕೆ ಪೀಠಿಕೆ

विष्णावुत्कृष्टवृत्तौ कथं जगति प्रसिद्धिरित्यत आह -

।। जगद्वाचित्वात् ।। १-४-१७ ।।

ವಿಷ್ಣುವಿನಲ್ಲಿ ಎಲ್ಲಾ ಶಬ್ದಗಳ ಪ್ರವೃತ್ತಿನಿಮಿತ್ತವು ಉತ್ಕೃಷ್ಟವಾಗಿ ಇರುವುದಾದರೆ, ಜಗತ್ತಿನಲ್ಲಿ ಹೇಗೆ ಲೌಕಿಕ ಪ್ರಸಿದ್ಧಿ ಬರುತ್ತದೆ ? ಎಂಬ ಪ್ರಶ್ನೆಗೆ ಉತ್ತರಿಸಲು ಮುಂದಿನ ಸೂತ್ರ ಹೊರಟಿದೆ - 'ಜಗದ್ವಾಚಿತ್ವಾತ್'.

ಸೂತ್ರದ ಪ್ರತಿಪದಾರ್ಥ

शब्दानामित्यस्ति । जगद्वाचित्वादित्यावर्तते । द्वितीयं ज्ञानपरम् । शब्दानां जगद्वाचित्वाल्लोकानां जगति व्यवहाराद्धेतोर्जगद्वाचित्वात् जगद्वाचित्वज्ञानात्तत्र प्रसिद्धिरिति शेषः । लोकानां जगत्येव शब्दव्यवहारेण तत्रैव व्युत्पत्तिबलात्तत्र प्रासिद्धिर्ब्रह्मणि मुख्यत्वाज्ञानमूलेति भावः ।

'ಶಬ್ದಾನಾಮ್' ಎಂಬ ಪದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. 'ಜಗದ್ವಾಚಿತ್ವಾತ್' ಎಂಬ ಪದವನ್ನು ಆವೃತ್ತಿ ಮಾಡಿಕೊಳ್ಳಬೇಕು. ಎರಡನೆಯ 'ಜಗದ್ವಾಚಿತ್ವಾತ್' ಎಂಬ ಪದವು ಜ್ಞಾನಾರ್ಥದಲ್ಲಿದೆ.

ಸೂತ್ರಾರ್ಥ ಹೀಗಿದೆ - ಶಬ್ದಾನಾಮ್ = ಶಬ್ದಗಳಿಗೆ, ಜಗದ್ವಾಚಿತ್ವಾತ್ = ಜಗತ್ತಿನ ವಿಷಯದಲ್ಲಿ ಲೌಕಿಕರ ವ್ಯವಹಾರವಿರುವುದರಿಂದ, ಜಗದ್ವಾಚಿತ್ವಾತ್ = ಶಬ್ದಗಳು ಜಗದ್ವಾಚಕವೆಂಬ ಜ್ಞಾನವೂ ಹುಟ್ಟುವುದರಿಂದ, ತತ್ರ ಪ್ರಸಿದ್ಧಿಃ = ಜಗತ್ತಿನ ವಿಷಯದಲ್ಲಿ ಶಬ್ದಗಳ ಪ್ರಸಿದ್ಧಿಯಿರುತ್ತದೆ. ('ತತ್ರ ಪ್ರಸಿದ್ಧಿಃ' ಎಂಬುದನ್ನು ಶೇಷಪೂರಣ ಮಾಡಿಕೊಳ್ಳಬೇಕು.)

ಲೌಕಿಕರು ಎಲ್ಲಾ ಶಬ್ದಗಳನ್ನು ಜಗತ್ತಿನಲ್ಲಿಯೇ ವ್ಯವಹರಿಸುತ್ತಾರೆ. ಆದ್ದರಿಂದ ಜಗತ್ತಿನ ವಿಷಯದಲ್ಲಿ ಶಬ್ದಗಳ ವೃತ್ತತ್ತಿವುಂಟಾಗುತ್ತದೆ. ಈ ಕಾರಣದಿಂದಲೇ ಬ್ರಹ್ಮವಾಚಕವಾದ ಶಬ್ದಗಳಿಗೆ ಜಗತ್ತಿನಲ್ಲಿಯೇ ಪ್ರಸಿದ್ಧಿಯಿರುತ್ತದೆ. ಬ್ರಹ್ಮನಲ್ಲಿ ಶಬ್ದಗಳೆಲ್ಲವೂ ಪರಮಮುಖ್ಯವೃತ್ತಿಯಿಂದ ಇರುತ್ತವೆಂಬ ತಿಳುವಳಿಕೆ ಇಲ್ಲದಿರುವುದೇ ಈ ಪ್ರಸಿದ್ಧಿಗೆಲ್ಲ ಮೂಲ ಕಾರಣ.

उक्तमाक्षिप्याह -

।। जीवमुख्यप्राणलिङ्गादिति चेत्तद्व्याख्यातम् ।। १-४-१८ ।।

ಹಿಂದೆ ಹೇಳಿದ್ದನ್ನು ಆಕ್ಷೇಪ ಮಾಡಿ ಸಮಾಧಾನ ನೀಡುತ್ತಿದ್ದಾರೆ - 'ಜೀವಮುಖ್ಯಪ್ರಾಣಲಿಂಗಾದಿತಿ ಚೇತ್ ತದ್ವ್ಯಾಖ್ಯಾತಮ್' ಎಂಬ ಸೂತ್ರದಿಂದ.

'ಜೀವಮುಖ್ಯಪ್ರಾಣಲಿಂಗಾದಿತಿ ಚೇತ್ ತದ್ವ್ಯಾಖ್ಯಾತಮ್' ಎಂಬ ಸೂತ್ರದ ಪ್ರತಿಪದಾರ್ಥ

तदधीनत्वादर्थवदिति नेति च मण्डूकप्लुत्याऽनुवर्तते । शब्दजातं सर्वस्य तदधीनत्वात्तत्रार्थवदिति न युक्तम् । ''अस्य यदेकां शाखां जीवो जहात्यथ सा शुष्यति'' इति जीवे क्वचित्, ''वायुनैव हि लोका नेनीयन्ते'' इति

वायौ सर्वत्र तदधीनत्वरूपलिङ्गं श्रूयते । तस्माल्लिङ्गात्तयोरपि शब्दजातमर्थवत् । मुख्यतस्तयोरपि वाचकमिति चेन्न यतस्तल्लिङ्गं व्याख्यातं तदन्तर्यामिसम्बन्धितयेत्यर्थः ।

'ತದಧೀನತ್ವಾದರ್ಥವತ್' ಎಂಬ ಪದಗಳು ಮತ್ತು 'ನ' ಎಂಬ ಪದವು ಮಂಡೂಕಪ್ಲುತಿಯಿಂದ ಅನುವೃತ್ತವಾಗುತ್ತವೆ. ಎಲ್ಲವೂ ಭಗವದಧೀನವಾದ್ದರಿಂದ, ಸಕಲವಿಧವಾದ ಶಬ್ದಗಳು ಭಗವಂತನನ್ನು ಪ್ರತಿಪಾದನೆ ಮಾಡುತ್ತವೆಂದು ಹೇಳುವುದು ಯುಕ್ತವಲ್ಲ. ಏಕೆಂದರೆ 'ಅಸ್ಯ ಯದೇಕಾಂ ಶಾಖಾಂ ಜೀವೋ ಜಹಾತ್ಯಥ ಸಾ ಶುಷ್ಯತಿ' 'ವೃಕ್ಷಾದಿಗಳು ಜೀವನ ಅಧೀನವೆಂದು 'ವಾಯುನೈವ ಹಿ ಲೋಕಾ ನೇನೀಯಂತೇ' ಮುಖ್ಯಪ್ರಾಣನಿಂದಲೇ ಎಲ್ಲಾ ಲೋಕವು ಪ್ರೇರಿತವಾಗಿದೆ ಎಂಬ ಶ್ರುತಿಯಲ್ಲಿ ಸಮಗ್ರ ಲೋಕವು ಮುಖ್ಯಪ್ರಾಣನ ಅಧೀನವಾಗಿದೆ ಎಂದು ಹೇಳಿರುವುದರಿಂದ 'ತದಧೀನತ್ವ' ಎಂಬ ಲಿಂಗವು ಜೀವ ಹಾಗೂ ಮುಖ್ಯಪ್ರಾಣರಲ್ಲಿಯೂ ಬರುತ್ತಿದೆ. ಆದ್ದರಿಂದ 'ತದಧೀನತ್ವ' ಎಂಬ ಲಿಂಗದಿಂದ ಸಕಲಶಬ್ದಗಳು ಜೀವ ಹಾಗೂ ಮುಖ್ಯಪ್ರಾಣರನ್ನೂ ಕೂಡ ಮುಖ್ಯವಾಗಿಯೇ ಪ್ರತಿಪಾದನೆ ಮಾಡುತ್ತವೆ.

ಹೀಗೆ ಆಶಂಕಿಸಬಾರದು. ಏಕೆಂದರೆ ಅಂತರ್ಯಾಮಿಗೆ ಸಂಬಂಧಪಟ್ಟ ಲಿಂಗವನ್ನು ಆ ಶ್ರುತಿಗಳಲ್ಲಿ ಪ್ರತಿಪಾದನೆ ಮಾಡಲಾಗಿದೆ. (ತದಧೀನತ್ವಾತ್ = ಸಕಲವೂ ಶ್ರೀಹರಿಯ ಅಧೀನವಾದ್ದರಿಂದ, ಅವನನ್ನೇ ಪ್ರತಿಪಾದನೆ ಮಾಡುತ್ತದೆಂದು ಹೇಳುವುದು, ನ = ಯುಕ್ತವಲ್ಲ. ಜೀವಮುಖ್ಯಪ್ರಾಣಲಿಂಗಾತ್ = ಜೀವ ಹಾಗೂ ಮುಖ್ಯಪ್ರಾಣರಲ್ಲಿಯೂ 'ತದಧೀನತ್ವ' ಎಂಬ ಲಿಂಗವು ಇರುವುದರಿಂದ, ಅವರೂ ಕೂಡ ಮುಖ್ಯವಾಗಿ ಪ್ರತಿಪಾದ್ಯರಾಗುತ್ತಾರೆ. ಹೀಗೆ ಆಕ್ಷೇಪ ಮಾಡಿದರೆ, ವ್ಯಾಖ್ಯಾತಂ = ಅಂತರ್ಯಾಮಿ ವಿವಕ್ಷೆಯಿಂದ ಶ್ರುತಿಗಳಲ್ಲಿರುವ ಜೀವ ಹಾಗೂ ಮುಖ್ಯಪ್ರಾಣರಲ್ಲಿ ಹೇಳಿರುವ ಲಿಂಗವನ್ನು ಅಂತರ್ಯಾಮಿ ವಿವಕ್ಷೆಯಿಂದ ವ್ಯಾಖ್ಯಾನ ಮಾಡಬೇಕು.)

'ಅನ್ಯಾರ್ಥಂ ತು ಜೈಮಿನಿಃ' ಎಂಬ ಸೂತ್ರಕ್ಕೆ ಪೀಠಿಕೆ

ननु न वैदिकशब्दानां मुमुक्षुं प्रति कर्मदेवतादौ समाकर्षेण फलं तस्य फलान्तरानिच्छुत्वात् मोक्षस्य ब्रह्मज्ञानादेव सिद्धेरत आह -

।। अन्यार्थं तु जैमिनिः प्रश्नव्याख्यानाभ्यापि चैवमेके ।। १-४-१९ ।।

ವೈದಿಕವಾದ ಶಬ್ದಗಳೆಲ್ಲವೂ ಮುಮುಕ್ಷುವನ್ನು ಕುರಿತು ಹೊರಟಿರುತ್ತವೆ. ಎಲ್ಲಾ ಶಬ್ದಗಳು ಬ್ರಹ್ಮನನ್ನೇ ಪ್ರತಿಪಾದನೆ ಮಾಡುವುದಾದರೆ, ಅವನಿಗೆ ಬ್ರಹ್ಮಜ್ಞಾನದಿಂದ ಮೋಕ್ಷವು ಸಿದ್ಧವಾಗುತ್ತದೆ. ಹೀಗಿರುವಾಗ ಕೆಲವೆಡೆ ವೇದದಲ್ಲಿ ಕರ್ಮ ಹಾಗೂ ದೇವತೆಗಳನ್ನೇಕೆ ಪ್ರತಿಪಾದನೆ ಮಾಡಬೇಕು. ಅಂದರೆ ಅಲ್ಲಿರುವ ಕರ್ಮ ಹಾಗೂ ದೇವತಾವಾಚಕ ಪದಗಳೂ ಕೂಡ, ಪರಮಾತ್ಮನನ್ನೇ ಮುಖ್ಯವಾಗಿ ಪ್ರತಿಪಾದನೆ ಮಾಡುತ್ತವೆ. ಅದನ್ನು ಸಮಾಕರ್ಷ ಮಾಡಿ, ಕರ್ಮಾದಿಗಳನ್ನು ಮುಮುಕ್ಷು ಆದವನು ತಿಳಿಯಬೇಕೆಂದು ಹೇಳಿದಂತಾಯಿತು. ಆದರೆ ಹೀಗೆ ಸಮಾಕರ್ಷ ಮಾಡಿ ತಿಳಿಯುವುದರಿಂದ ಮುಮುಕ್ಷುವಿಗೆ ಯಾವುದೇ ಬಗೆಯ ಪ್ರಯೋಜನವಿರುವುದಿಲ್ಲ. ಬ್ರಹ್ಮಜ್ಞಾನದಿಂದಲೇ ಅವನಿಗೆ ಮೋಕ್ಷವು ಸಿದ್ಧವಾಗುತ್ತಿದೆ. ಈ ಆಶಂಕೆಗೆ ಉತ್ತರಿಸಲು 'ಅನ್ಯಾರ್ಥಂ ತು ಜೈಮಿನಿಃ ಪ್ರಶ್ನವ್ಯಾಖ್ಯಾನಾಭ್ಯಾಮಪಿ ಚೈವಮೇಕೇ' ಎಂಬ ಸೂತ್ರವು ಹೊರಟಿದೆ.

'ಅನ್ಯಾರ್ಥಂ ತು' ಇತ್ಯಾದಿ ಸೂತ್ರದ ಪ್ರತಿಪದಾರ್ಥ

जगद्वाचित्वमित्यस्ति । शब्दानामिति च । अन्येति प्रकृतजीवाद्यन्यब्रह्मवाची सन् तज्ज्ञानपरः । तुरेव । शब्दानां जगद्वाचित्वं वैदिकशब्दानां मुमुक्षुं प्रति कर्मदेतादिजगद्वाचित्वं अन्यार्थं तु ब्रह्मज्ञानार्थमेव। कुतः ? ''कस्मिन्नु भगवो विज्ञाते सर्वमिदं विज्ञातं भवति'' इति शौनकप्रश्नात् । ''तस्मै स होवाच द्वे विद्ये वेदितव्ये'' इत्यङ्गिरसो व्याख्यानात्ताभ्यां हेतुभ्यामित्यर्थः ।

'ಜಗದ್ವಾಚಿತ್ವಮ್' ಎಂಬ ಪದವನ್ನು ಅನುವೃತ್ತಿ ಮಾಡಿಕೊಳ್ಳಬೇಕು. 'ಶಬ್ದಾನಾಮ್' ಎಂಬ ಪದವನ್ನೂ ಕೂಡ ಸೇರಿಸಿಕೊಳ್ಳಬೇಕು. ಅನ್ಯಶಬ್ದವು ಪ್ರಕೃತವಾದ ಜೀವ ಮೊದಲಾದವರಿಗಿಂತ ಭಿನ್ನನಾದ ಪರಮಾತ್ಮನನ್ನು ಹೇಳುವುದಾದರೂ ಬ್ರಹ್ಮಜ್ಞಾನವೆಂಬರ್ಥವನ್ನೇ ಹೇಳುತ್ತದೆ. 'ತು' ಶಬ್ದವು ಏವಾರ್ಥದಲ್ಲಿದೆ. 'ಶಬ್ದಾನಾಮ್ ಜಗದ್ವಾಚಿತ್ವಮ್' ಎಂದರೆ ಮುಮುಕ್ಷುವನ್ನು ಕುರಿತು ವೈದಿಕಶಬ್ದಗಳು ಕರ್ಮ, ದೇವತೆ ಮೊದಲಾದವನ್ನು ಹೇಳುತ್ತವೆ. 'ಅನ್ಯಾರ್ಥಂ ತು' ಎಂದರೆ ಬ್ರಹ್ಮಜ್ಞಾನಕ್ಕಾಗಿಯೇ ಎಂದರ್ಥ. ಏಕೆಂದರೆ 'ಕಸ್ಮಿನ್ನು ಭಗವೋ ವಿಜ್ಞಾತೇ ಸರ್ವಮಿದಂ ವಿಜ್ಞಾತಂ ಭವತಿ' (ಎಲೈ ಭಗವನ್ ! ಯಾವುದನ್ನು ತಿಳಿದರೆ

ಕರ್ಮಾದಿಗಳ ಜ್ಞಾನವು ಸಫಲವಾಗುತ್ತದೆ ಎಂಬ ಶೌನಕರ ಪ್ರಶ್ನೆಗೆ) ಮತ್ತು 'ತಸ್ಮೈ ಸ ಹೋವಾಚ ದ್ವೇ ವಿದ್ಯೇ ವೇದಿತವ್ಯೇ' ಎಂಬ ಅಂಗೀರಸರ ಉತ್ತರದಿಂದ, (ಅಪರ ವಿದ್ಯೆಯಿಂದ ಕರ್ಮಾದಿಗಳೆಲ್ಲವೂ ತಿಳಿದುಬರುತ್ತವೆ. ಈ ಜ್ಞಾನವು ಪರವಿದ್ಯಾವಿಷಯನಾದ ಬ್ರಹ್ಮನ ಜ್ಞಾನದಿಂದ ಸಫಲವಾಗುತ್ತದೆ.) ಈ ಎಲ್ಲಾ ಹೇತುಗಳಿಂದ ಎಂದರ್ಥ. (ಸೂತ್ರಾರ್ಥ - ಶಬ್ದಾನಾಮ್ ಜಗದ್ವಾಚಿತ್ವಮ್ = ವೈದಿಕಶಬ್ದಗಳು ಮುಮುಕ್ಷುವಿಗೆ ಕರ್ಮಾದಿಗಳನ್ನು ಪ್ರತಿಪಾದನೆ ಮಾಡುವುದು, ಅನ್ಯಾರ್ಥಂ ತು = ಬ್ರಹ್ಮಜ್ಞಾನಕ್ಕೋಸ್ಕರ ಮಾತ್ರ. ಏಕೆಂದರೆ ಪ್ರಶ್ನವ್ಯಾಖ್ಯಾನಾಭ್ಯಾಮಪಿ = ಶೌನಕರ ಪ್ರಶ್ನೆ, ಅಂಗೀರಸರ ಉತ್ತರ ಎಂಬ ಹೇತುವಿನಿಂದ. ಹೀಗೆ ಕರ್ಮದೇವತಾದಿಗಳು ಬ್ರಹ್ಮಜ್ಞಾನಕ್ಕೋಸ್ಕರವೆಂದು ಸಿದ್ಧವಾಗುವುದಷ್ಟೇ ಅಲ್ಲದೇ, ಅಪಿಚೈವಮೇಕೇ = ಕೆಲವು ಶಾಖಿಗಳು 'ಯಸ್ತನ್ನ ವೇದ' ಎಂಬುದಾಗಿ ಪಠಿಸುತ್ತಾರೆ.)

ಶ್ವೇತಕೇತು ಉದ್ದಾಲಕರ ಸಂವಾದದಿಂದಲೂ ತಿಳಿಯುತ್ತದೆ

तथा ''कथं नु भगवस्स आदेशः'' इति, ''यथा सोम्यैकेन'' इति श्वेतकेतूद्दालकप्रश्नव्याख्यानाभ्यामित्यर्थः ।

ಅದರಂತೆ 'कथं नु भगवः स आदेशः भवति' ಎಂಬುದಾಗಿ ಶ್ವೇತಕೇತುವಿನ ಪ್ರಶ್ನೆಗೆ 'यथा सोम्यैकेन' ಎಂಬ ಉದ್ದಾಲಕರ ಉತ್ತರದಿಂದಲೂ ಮೇಲಿನ ವಿಷಯವು ಸಿದ್ಧವಾಗುತ್ತದೆ ಎಂದರ್ಥ.

ಬ್ರಹ್ಮಜ್ಞಾನವೇ ಮುಖ್ಯ

कस्मिन् ज्ञाते सर्वज्ञानं सफलं भवतीति प्रश्ने परविद्याविषयब्रह्मज्ञानेन भवतीति व्याख्यानतात्पर्यादिति भावः । अपि च न केवलमर्थादेतत्सिद्ध्यति। किन्तु स्पष्टं चैवमेके शाखिनो ''यस्तन्न वेद किमृचा करिष्यति'' इति पठन्तीत्यर्थः ।

ಯಾವುದನ್ನು ತಿಳಿದರೆ ಎಲ್ಲವನ್ನೂ ತಿಳಿದಂತಾಗುತ್ತದೆ? ಎಂಬ ಪ್ರಶ್ನೆಗೆ ಪರವಿದ್ಯಾ ವಿಷಯನಾದ ಬ್ರಹ್ಮಜ್ಞಾನದಿಂದಲೇ ಎಲ್ಲವನ್ನೂ ತಿಳಿದಂತಾಗುತ್ತದೆಂಬ ಉತ್ತರದಲ್ಲಿಯೇ ತಾತ್ಪರ್ಯವಿರುವುದರಿಂದ ಎಂದಭಿಪ್ರಾಯ.

ಮತ್ತು ಮುಮುಕ್ಷುವನ್ನು ಕುರಿತು ವೈದಿಕಶಬ್ದಗಳು ಕರ್ಮಾದಿ ದೇವತೆಗಳನ್ನು ಬ್ರಹ್ಮಜ್ಞಾನಕ್ಕೋಸ್ಕರ- ವಾಗಿಯೇ ಹೇಳುತ್ತಿವೆ ಎಂಬುದು ಅರ್ಥಾತ್ ಸಿದ್ಧವಾಗುವುದಷ್ಟೇ ಅಲ್ಲ. ಕೆಲವು ಶಾಖೆಯವರು ಸ್ಪಷ್ಟವಾಗಿಯೇ 'ಯಸ್ತನ್ ವೇದ ಕಿಮೃಚಾ ಕರಿಷ್ಯತಿ' ಎಂದು ಪರಬ್ರಹ್ಮನೇ ಸಕಲವೇದಗಳ ಮುಖ್ಯಾರ್ಥನಾಗಿದ್ದಾನೆಂದು ಅಧ್ಯಯನ ಮಾಡುತ್ತಾರೆ. ಇಷ್ಟು ಸೂತ್ರಾರ್ಥ.

'ವಾಕ್ಯಾನ್ವಯಾತ್' ಎಂಬ ಸೂತ್ರಕ್ಕೆ ಪೀಠಿಕೆ

वैदिकशब्दानां जगद्वाचित्वमन्यार्थमिति न युक्तम् । प्रतिपदं ब्रह्मपरत्वोक्त्याऽपि ब्रह्मज्ञानसिद्धेरत आह -

।। वाक्यान्वयात् ।। १-४-२० ।।

ವೇದದಲ್ಲಿರುವ ಬ್ರಹ್ಮಜ್ಞಾನಕ್ಕಾಗಿ ಜಗತ್ತಿನಲ್ಲಿರುವ ಪದಾರ್ಥಗಳನ್ನು ಪ್ರತಿಪಾದನೆ ಮಾಡುತ್ತದೆ ಎಂಬುದು ಯುಕ್ತವಲ್ಲ. ಏಕೆಂದರೆ ಪ್ರತಿಯೊಂದು ವೈದಿಕಪದಗಳು ಬ್ರಹ್ಮಪರವಾಗಿವೆ ಎಂದು ಹೇಳುವುದರಿಂದಲೇ ಬ್ರಹ್ಮಜ್ಞಾನವು ಸಿದ್ಧವಾಗುತ್ತದೆ. ಹೀಗಿರುವಾಗ ಉಳಿದ ಲೌಕಿಕಪದಾರ್ಥಗಳನ್ನೇಕೆ ಪ್ರತಿಪಾದನೆ ಮಾಡಬೇಕು? ಎಂಬ ಪ್ರಶ್ನೆಗೆ ಉತ್ತರಿಸಲು 'ವಾಕ್ಯಾನ್ವಯಾತ್' ಎಂಬ ಸೂತ್ರ ಹೊರಟಿದೆ.

'ಜಗದ್ವಾಚಿತ್ವಾತ್' ಎಂಬ ಸೂತ್ರದ ಪ್ರತಿಪದಾರ್ಥ

निमित्तपञ्चमीयम् । वैदिकशब्दानामन्यार्थं जगद्वाचित्वमित्यस्ति । कुतः ? वाक्यान्वयान्निमित्तादित्यर्थः ।

ಸೂತ್ರದಲ್ಲಿರುವ ಪಂಚಮೀ ವಿಭಕ್ತಿಯು 'ನಿಮಿತ್ತ' ಎಂಬರ್ಥದಲ್ಲಿದೆ. ಸೂತ್ರದಲ್ಲಿ 'ವೈದಿಕಶಬ್ದಾನಾಮ್' 'ಅನ್ಯಾರ್ಥ೦' 'ಜಗದ್ವಾಚಿತ್ವಮ್' ಎಂಬ ಮೂರು ಪದಗಳನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ಏಕೆಂದರೆ ವಾಕ್ಯಾನ್ವಯವೆಂಬ ನಿಮಿತ್ತವಿರುವುದರಿಂದ. (ಸೂತ್ರಾರ್ಥ - ವೈದಿಕಶಬ್ದಾನಾಮ್ = ವೈದಿಕ ಶಬ್ದಗಳು, ಅನ್ಯಾರ್ಥ೦ = ಬ್ರಹ್ಮಜ್ಞಾನಕ್ಕೋಸ್ಕರ, ಜಗದ್ವಾಚಿತ್ವಮ್ = ಜಗತ್ತಿನಲ್ಲಿರುವ ಪದಾರ್ಥಗಳನ್ನು ಪ್ರತಿಪಾದನೆ ಮಾಡುತ್ತವೆ. ಏಕೆಂದರೆ ವಾಕ್ಯಾನ್ವಯಾತ್ = ವಾಕ್ಯಾನ್ವಯದ ನಿಮಿತ್ತದಿಂದ ಎಂದು.)

'ವಾಕ್ಯಾನ್ವಯ' ಎಂದರೆ ?

कर्मदेवतादिवाचितया स्थितवाक्यानामन्ततो ब्रह्मपरत्वमित्येवंरूपवाक्यान्वया-भावे मन्दानां प्रतिपदान्वयायोग्यतया तत्र वैमुख्यमित्यादिदोषः स्यादिति भावः ।।

ವಾಕ್ಯಾನ್ವಯವೆಂದರೆ ಕರ್ಮ, ದೇವತೆ ಮೊದಲಾದವುಗಳನ್ನು ಪ್ರತಿಪಾದಿಸುತ್ತವೆಂದು ನಿರ್ಣಯವಾಗಿರುವ ವಾಕ್ಯಗಳಿಗೆ ಅಂತಿಮವಾಗಿ ಬ್ರಹ್ಮನಲ್ಲಿಯೇ ಮಹಾತಾತ್ಪರ್ಯವನ್ನು ಹೇಳುವುದು. ಹೀಗೆ ವಾಕ್ಯಾನ್ವಯವನ್ನು ಮಾಡದಿದ್ದರೆ, ಯಾವ ಮಂದಾಧಿಕಾರಿಗಳಿಗೆ ವೇದದಲ್ಲಿರುವ ಪ್ರತಿಯೊಂದು ಪದಗಳ ಸಮನ್ವಯವನ್ನು ಮಾಡುವ ಯೋಗ್ಯತೆ ಇರುವುದಿಲ್ಲವೋ, ಅಂತಹವರಿಗೆ ವೇದಾಧ್ಯಯನದಲ್ಲಿ ವೈಮುಖ್ಯವು ಉಂಟಾಗುತ್ತದೆ. ಇವೇ ಮೊದಲಾದ ದೋಷಗಳು ಬರಬೇಕಾದೀತು ಎಂದಭಿಪ್ರಾಯ.

'प्रतिज्ञासिद्धेः' ಎಂಬ ಸೂತ್ರಕ್ಕೆ ಪೀಠಿಕೆ

अन्यार्थं जगद्वाचित्वमित्युक्तम् । तत्कथमित्यत आह -

।। प्रतिज्ञासिद्धेर्लिङ्गमाश्मरथ्यः ।। १-४-२१ ।।

ವೇದದಲ್ಲಿರುವ ಶಬ್ದಗಳೆಲ್ಲವೂ ಬ್ರಹ್ಮಜ್ಞಾನಕ್ಕಾಗಿಯೇ ಲೌಕಿಕಪದಾರ್ಥಗಳನ್ನು ಪ್ರತಿಪಾದನೆ ಮಾಡುತ್ತಿವೆ ಎಂಬುದು ಹೇಗೆ ಸಿದ್ಧವಾಗುತ್ತದೆ? ಎಂಬ ಪ್ರಶ್ನೆಗೆ ಉತ್ತರಿಸಲು ಮುಂದಿನ ಸೂತ್ರ ಹೊರಟಿದೆ - 'ಪ್ರತಿಜ್ಞಾಸಿದ್ಧೇರ್ಲಿಂಗಮಾಶ್ಮರಥ್ಯಃ'

'प्रतिज्ञासिद्धेः' ಇತ್ಯಾದಿ ಸೂತ್ರದ ಪ್ರತಿಪದಾರ್ಥ

जगद्वाचित्वमन्यार्थमित्यस्ति । प्रतिज्ञासिद्धेः ''नान्यः पन्था अयनाय'' इति ज्ञाति ज्ञानमेव मुक्तिहेतुरिति प्रतिज्ञातार्थनिश्चयस्य लिङ्गं शब्दानां जगद्वाचित्वं लिङ्गं जनकं सत् अन्यार्थं भवतीत्याश्मरथ्यो मन्यत इत्यर्थः ।

'ಜಗದ್ವಾಚಿತ್ವಮ್' ಮತ್ತು 'ಅನ್ಯಾರ್ಥಮ್' ಎಂಬ ಎರಡು ಪದಗಳನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ಸೂತ್ರಾರ್ಥ - ಪ್ರತಿಜ್ಞಾಸಿದ್ಧೇಃ = 'ನಾನ್ಯಃ ಪಂಥಾ ಅಯನಾಯ ವಿದ್ಯತೇ'

ಇತ್ಯಾದಿಯಾಗಿ ಜ್ಞಾನವೇ ಮೋಕ್ಷಕ್ಕೆ ಕಾರಣವಾದುದೆಂದು ಮಾಡಿರುವ ಪ್ರತಿಜ್ಞಾರ್ಥದ ನಿಶ್ಚಯಕ್ಕಾಗಿ ಲಿಂಗಮ್ = ಕಾರಣವಾಗಿರುವ, ಶಬ್ದಾನಾಮ್ = ವೈದಿಕಶಬ್ದಗಳು, ಜಗದ್ವಾಚಿತ್ವಮ್ = ಜಗತ್ತಿನಲ್ಲಿರುವ ಪದಾರ್ಥಗಳನ್ನು ಬ್ರಹ್ಮಜ್ಞಾನಕ್ಕಾಗಿ ಪ್ರತಿಪಾದಿಸುತ್ತವೆ. ಆಶ್ಮರಥ್ಯಃ = ಹೀಗೆ ಆಶ್ಮರಥ್ಯಾಚಾರ್ಯರು ಹೇಳುತ್ತಾರೆ.

ಎಲ್ಲಾ ಶಬ್ದಗಳೂ ಬ್ರಹ್ಮಜ್ಞಾನಕ್ಕೆ ಪೂರಕ

सविस्तरं कर्मादिस्वरूपे प्रतिपादिते सति कर्मणां क्षुद्रफलकत्वज्ञानात् तज्ज्ञानेनाक्षुद्रफलकं ज्ञानमेवोपादेयमिति वैराग्यजननद्वारा ब्रह्मज्ञानार्थं भवतीति भावः ।।

ಬ್ರಹ್ಮಜ್ಞಾನಕ್ಕೆ ಕರ್ಮಾದಿಗಳು ಜ್ಞಾನವು ಉಪಯೋಗವಾಗುವ ಕ್ರಮವನ್ನು ಹೀಗೆ ತಿಳಿಯಬೇಕು - ವೇದವು ವಿಸ್ತಾರವಾಗಿ ಕರ್ಮ, ದೇವತೆ ಮೊದಲಾದವುಗಳ ಸ್ವರೂಪವನ್ನು ಪ್ರತಿಪಾದನೆ ಮಾಡಿದಾಗ, ಕರ್ಮಗಳ ಫಲವು ಕ್ಷುದ್ರವೆಂಬ ಅರಿವು ಉಂಟಾಗುತ್ತದೆ. ಮತ್ತು ಬ್ರಹ್ಮಜ್ಞಾನವೇ ಶಾಶ್ವತಫಲದಾಯಕವೆಂದು ಮತ್ತು ಉಪಾದೇಯವೆಂದು ಅರಿವು ಉಂಟಾಗುತ್ತದೆ. ಆದ್ದರಿಂದ ಕ್ಷುದ್ರಫಲಕವಾದ ಕರ್ಮಾದಿಗಳಲ್ಲಿ ವೈರಾಗ್ಯವನ್ನು ತಾಳಿ, ಬ್ರಹ್ಮಜ್ಞಾನವನ್ನೇ ಸಂಪಾದನೆ ಮಾಡಬೇಕು. ಹೀಗೆ ವೈರಾಗ್ಯವನ್ನು ಹುಟ್ಟಿಸುವ ಮೂಲಕ ಬ್ರಹ್ಮಜ್ಞಾನಕ್ಕೆ ಎಲ್ಲಾ ಶಬ್ದಗಳು ಸಾಧನವಾಗುತ್ತವೆ.

'ಉತ್ಕ್ರಮಿಷ್ಯತೇ' ಇತ್ಯಾದಿ ಸೂತ್ರದ ಪ್ರತಿಪದಾರ್ಥ

जगद्वाचित्वमन्यार्थमित्येतत् प्रकारान्तरेणाप्याह -

।। उत्क्रमिष्यत एवं भावादित्यौडुलोमिः ।। १-४-२२ ।।

शब्दानां जगद्वाचित्वमन्यार्थं ब्रह्मज्ञानार्थम् । कथम् ? उत्क्रमिष्यतः बन्धात् ज्ञानेनोत्क्रमणमिच्छतः पुंसः मुमुक्षोरेवं ज्ञानहेतुतया कर्मादेर्भावादवश्यम्भावात् । आवश्यकत्वादिति यावत् । इत्यौडुलोमिर्मन्यत इत्यर्थः ।

ವೇದದಲ್ಲಿರುವ ಶಬ್ದಗಳು ಬ್ರಹ್ಮಜ್ಞಾನಕ್ಕಾಗಿಯೇ ಲೌಕಿಕಪದಾರ್ಥಗಳನ್ನು ಪ್ರತಿಪಾದನೆ ಮಾಡುತ್ತವೆಂಬುದನ್ನು ಮತ್ತೊಬ್ಬ ಮುನಿಗಳು ಹೀಗೆ ಸಮರ್ಥಿಸುತ್ತಾರೆ 'ಉತ್ಕ್ರಮಿಷ್ಯತೇ ಏವಂ ಭಾವಾದಿತ್ಯೌಡುಲೋಮಿಃ' ಎಂಬುದಾಗಿ. ಶಬ್ದಗಳು ಬ್ರಹ್ಮಜ್ಞಾನಕ್ಕಾಗಿ ಜಗತ್ತಿನಲ್ಲಿರುವ ಪದಾರ್ಥಗಳನ್ನು ಪ್ರತಿಪಾದನೆ ಮಾಡುತ್ತಿವೆ ಎಂಬುದನ್ನು ಹೀಗೆ ತಿಳಿಯಬೇಕು. ಉತ್ಕ್ರಮಿಷ್ಯತಃ = ಸಂಸಾರ ಬಂಧನದಿಂದ, ಬಿಡುಗಡೆಯನ್ನು ಪಡೆದು, ಬ್ರಹ್ಮಜ್ಞಾನದಿಂದ ಮೋಕ್ಷವನ್ನು ಪಡೆಯಲು ಇಚ್ಛಿಸುವ ಮುಮುಕ್ಷುವಾದ ಪುರುಷನಿಗೆ, ಏವಂ = ಕರ್ಮಾದಿಗಳು ಜ್ಞಾನಕ್ಕೆ ಹೇತುವಾಗಿ, ಭಾವಾತ್ = ಆವಶ್ಯಕವಾಗಿರುವುದರಿಂದ ಎಂದು, ಇತಿ = ಈ ರೀತಿಯಾಗಿ, ಔಡುಲೋಮಿಃ = ಔಡುಲೋಮಿ ಆಚಾರ್ಯರು ಅಭಿಪ್ರಾಯ ಪಡುತ್ತಾರೆ.

'ವಿವಿದಿಷಂತಿ ಯಜ್ಞೇನ' ಎಂಬ ಶ್ರುತಿಯ ಆಧಾರ

''विविदिषन्ति यज्ञेन'' इत्यादेर्मनश्शुद्ध्यर्थतयोपादेयत्वात् कर्मणस्तद्वाचित्वम्। मनश्शुद्धिद्वारा ज्ञानार्थमिति भावः ।।

'ವಿವಿದಿಷಂತಿ ಯಜ್ಞೇನ' ಇತ್ಯಾದಿ ಶ್ರುತಿಗಳು ಹೇಳುವಂತೆ ಕರ್ಮಗಳ ಅನುಷ್ಠಾನವನ್ನು ಮಾಡುವುದರಿಂದ ಮನಸ್ಸು ಸಿದ್ಧವಾಗುತ್ತದೆ. ಶುದ್ಧವಾದ ಮನಸ್ಸಿನಲ್ಲಿ ಬ್ರಹ್ಮಜ್ಞಾನವನ್ನು ಸಂಪಾದನೆ ಮಾಡುವುದು ಅರ್ಥಪೂರ್ಣವಾಗುತ್ತದೆ. ಹೀಗೆ ಮನಶ್ಶುದ್ಧಿಯ ಮೂಲಕ ಬ್ರಹ್ಮಜ್ಞಾನಕ್ಕಾಗಿ ಕರ್ಮಾದಿ ಪ್ರತಿಪಾದಕ ವಾಕ್ಯಗಳು ಸಾರ್ಥಕವಾಗಿವೆ.

'ಅವಸ್ಥಿತೇರಿತಿ' ಎಂಬ ಸೂತ್ರಕ್ಕೆ ಪೀಠಿಕೆ

अन्यार्थं जगद्वाचित्वमित्येतदन्यथाप्याह -

।। अवस्थितेरिति काशकृत्स्नः ।। १-४-२३ ।।

ವೇದದಲ್ಲಿರುವ ಶಬ್ದಗಳು ಬ್ರಹ್ಮಜ್ಞಾನಕ್ಕಾಗಿ ಕರ್ಮಾದಿ ಪದಾರ್ಥಗಳನ್ನು ಪ್ರತಿಪಾದನೆ ಮಾಡುತ್ತಿವೆ ಎಂಬುದನ್ನು ಮತ್ತೊಬ್ಬ ಮುನಿಗಳು ಹೀಗೆ ಸಮರ್ಥಿಸುತ್ತಾರೆ - 'ಅವಸ್ಥಿತೇರಿತಿ ಕಾಶಕೃತ್ಸ್ನಃ' ಎಂಬುದಾಗಿ.

'ಅವಸ್ಥಿತೇರಿತಿ' ಎಂಬ ಸೂತ್ರದ ಪ್ರತಿಪದಾರ್ಥ

ಬ್ರಹ್ಮಣೀತಿ ಪ್ರಕೃತಂ ಬ್ರಹ್ಮಾನ್ವೇತಿ । ಕರ್ಮದೇವತಾದಿಜಗತೋ ಬ್ರಹ್ಮಣ್ಯವಸ್ಥಿತೇಃ, ಅನ್ಯಾರ್ಥಮ್ ''ಏಷ ಸೇತುರ್ವಿಧಾರಣಃ'' ಇತ್ಯಾದಿನಾ ಸರ್ವಾಧಾರತ್ವಪ್ರಕಾರಕಬ್ರಹ್ಮಜ್ಞಾನೋತ್ಪ ಾತ್ಯರ್ಥಮ್ ಆಧೇಯರೂಪಕರ್ಮಾದಿಜಗದ್ಬಾಚಿತ್ವಮಿತಿ ಕಾಶಕೃತ್ಸ್ನೋ ಮನ್ಯತ ಇತ್ಯರ್ಥಃ ।

ಪ್ರಕೃತನಾದ ಬ್ರಹ್ಮನು 'ಬ್ರಹ್ಮಣಿ' ಎಂಬ ಪದದಿಂದ ಅನ್ವಿತನಾಗುತ್ತಾನೆ. ಕರ್ಮ, ದೇವತೆ ಮೊದಲಾದ ಜಗತ್ತು ಬ್ರಹ್ಮನಲ್ಲಿ ಆಶ್ರಯ ಪಡೆದಿದೆ. ಆದ್ದರಿಂದ ಅನ್ಯಾರ್ಥಮ್ = 'ಏಷ ಸೇತುರ್ವಿಧಾರಣಃ' ಇತ್ಯಾದಿ ಶ್ರುತಿಯಿಂದ ಬ್ರಹ್ಮನು ಸಕಲಕ್ಕೂ ಆಧಾರನಾಗಿದ್ದಾನೆಂಬ ಜ್ಞಾನವು ಹುಟ್ಟಲು ವೈದಿಕಶಬ್ದಗಳು ಬ್ರಹ್ಮನಲ್ಲಿ ಆಶ್ರಿತವಾದ ಆಧೇಯರೂಪವಾದ ಕರ್ಮಾದಿಜಗತ್ತನ್ನು ಪ್ರತಿಪಾದನೆ ಮಾಡುತ್ತದೆ. ಹೀಗೆ ಕಾಶಕೃತ್ಸ್ನಾಚಾರ್ಯರು ತಿಳಿಯುತ್ತಾರೆ.

ಶಿಷ್ಯಪ್ರಸಿದ್ಧಿಗೋಸ್ಕರ ಋಷಿಗಳ ನಾಮಗ್ರಹಣ

ಶಿಷ್ಯಪ್ರಸಿದ್ಧ್ಯರ್ಥೆ ಜೈಮಿನ್ಯಾದ್ಯುಕ್ತಿಃ ।। ೫ ।।

ಈ ಸೂತ್ರಗಳಲ್ಲಿ ಹೇಳಿರುವ ವಿಚಾರಗಳೆಲ್ಲವೂ ಸೂತ್ರಕಾರರಿಗೂ ಸಮ್ಮತವೇ ಆಗಿವೆ. ಆದರೂ ಶಿಷ್ಯರ ಪ್ರಸಿದ್ಧಿಗೋಸ್ಕರ ಮಾತ್ರ ಆಯಾ ಋಷಿಗಳ ಹೆಸರುಗಳನ್ನು ಉಲ್ಲೇಖಿಸಿದ್ದಾರೆ.

॥ ಇಲ್ಲಿಗೆ ತಂತ್ರದೀಪಿಕಾ ಕನ್ನಡಾನುವಾದದಲ್ಲಿ ಸಮಾಕರ್ಷಾಧಿಕರಣವು ಮುಗಿಯಿತು ॥

* * * * * *

ಅದ್ವೈತ-ವಿಶಿಷ್ಟಾದ್ವೈತಮತದಲ್ಲಿ ಸಮಾಕರ್ಷಾಧಿಕರಣ ಮತ್ತು ವಿಮರ್ಶೆ

ಶಾಂಕರಭಾಷ್ಯದ ಅಧಿಕರಣ ಶರೀರ ಹೀಗಿದೆ - 'ಅಸದ್ವಾ ಇದಮಗ್ರ ಆಸೀತ್' ಎಂಬ ಶ್ರುತಿಯಲ್ಲಿ ಅಸತ್‌ಪದಾರ್ಥವು ಜಗತ್ತಿಗೆ ಕಾರಣವಾಗಿವೆ ಎಂದು ಹೇಳಲಾಗಿದೆ. ಆದ್ದರಿಂದ 'ಸದೇವ ಸೌಮ್ಯ ಇದಮಗ್ರ ಆಸೀತ್' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಅಸತ್ ಪದಾರ್ಥವು ಜಗತ್ತಿಗೆ ಕಾರಣವೆಂದು ಹೇಳಬಾರದು. ಇಷ್ಟು ಪೂರ್ವಪಕ್ಷ.

'ಅಸ್ತಿ ಬ್ರಹ್ಮೇತಿ ಚೇದ್ವೇದ' ಎಂಬುದಾಗಿ ಹಿಂದೆ ಬ್ರಹ್ಮನೇ ಪ್ರಕೃತನಾಗಿದ್ದಾನೆ. ಅಂತಹ ಬ್ರಹ್ಮನನ್ನು 'ಅಸದ್ವಾ ಇದಮಗ್ರ ಆಸೀತ್' ಎಂಬಲ್ಲಿಯೂ ಸಮಾಕರ್ಷ ಮಾಡಬೇಕು. ಇದನ್ನು 'ಸಮಾಕರ್ಷಾತ್' ಎಂಬ ಸೂತ್ರವು ನಿರೂಪಣೆ ಮಾಡುತ್ತಿದೆ. ಆದ್ದರಿಂದ 'ಸತ್' ಶಬ್ದದಿಂದ ಯಾವ ಬ್ರಹ್ಮನು ಪ್ರತಿಪಾದ್ಯನೋ, ಅಂತಹ ಬ್ರಹ್ಮನೇ ಅಸತ್‌ಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆ. ಆದ್ದರಿಂದ ಕಾರಣವಾಕ್ಯಗಳಲ್ಲಿ ಪರಸ್ಪರ ವಿರೋಧ ಬರಲು ಸಾಧ್ಯವಿಲ್ಲ. ಇಷ್ಟು ಸಿದ್ಧಾಂತ.

'ಸಮಾಕರ್ಷಾತ್' ಎಂಬ ಈ ಸೂತ್ರವನ್ನು ಹಿಂದಿನ 'ಕಾರಣತ್ವೇನ ಚ ಆಕಾಶಾದಿಷು' ಎಂಬ ಅಧಿಕರಣದಲ್ಲಿಯೇ ಸೇರಿಸಬೇಕು. ಇಷ್ಟು ಅದ್ವೈತಿಗಳ ಸಿದ್ಧಾಂತ.

ಈ ಅಧಿಕರಣಶರೀರವು ಅಸಾಧುವಾಗಿದೆ. ಹೀಗೆ ಸಿದ್ಧಾಂತ ಸ್ಥಾಪನೆ ಮಾಡುವುದಾದರೆ 'ಸಮಾಕರ್ಷಾತ್' ಎಂಬ ಸೂತ್ರವು ಬ್ರಹ್ಮನಲ್ಲಿ 'ಅಸತ್' ಎಂಬ ಶಬ್ದವನ್ನು ಸಮನ್ವಯ ಮಾಡುತ್ತಿದೆ ಎಂದು ಹೇಳಿದಂತಾಗುತ್ತದೆ. ಆದರೆ ನಾಲ್ಕನೆಯ ಈ ಪಾದದಲ್ಲಿ ಪ್ರಧಾನವು ಶಬ್ದಪ್ರತಿಪಾದ್ಯವಲ್ಲ ಎಂದಷ್ಟೇ ಸಮರ್ಥನೆ ಮಾಡಲು ಹೊರಟಿದೆ ಎಂದು ನೀವು ಹೇಳುತ್ತೀರಿ. ಆದ್ದರಿಂದ ಈ ಸೂತ್ರವು ಸಮನ್ವಯವನ್ನು ಮಾಡಲು ಹೊರಟಿರುವ ಹಿಂದಿನ ಮೂರು ಪಾದಗಳಲ್ಲಿ ಸೇರಬೇಕು ಹೊರತು, ಈ ಪಾದದಲ್ಲಿ ಸಂಗತವಾಗುವುದಿಲ್ಲ. ಅಷ್ಟೇ ಅಲ್ಲದೇ ಈ ಅಧಿಕರಣದಲ್ಲಿಯೂ ಕೂಡ ಸಂಗತವಾಗುವುದಿಲ್ಲ. ಏಕೆಂದರೆ ಕಾರಣವಾಕ್ಯಗಳಲ್ಲಿರುವ ಪರಸ್ಪರ ವಿರೋಧವನ್ನು ಪರಿಹರಿಸಲು ಈ ಅಧಿಕರಣ ಹೊರಟಿರುತ್ತದೆ. ಈಗ 'ಅಸತ್' ಎಂಬ ಶಬ್ದಸಮನ್ವಯವನ್ನು ನೀವು ಮಾಡಿದರೆ ಅಧಿಕರಣದಿಂದಲೂ ಅಸಂಗತವಾಗುತ್ತದೆ.

'ಅಸತ್' ಎಂಬ ಶಬ್ದವನ್ನು ಬ್ರಹ್ಮನಲ್ಲಿ ಸಮನ್ವಯ ಮಾಡುವುದರಿಂದ 'ಸದೇವ ಸೌಮ್ಯ' ಎಂಬ ವಾಕ್ಯದಿಂದ ವಿರೋಧವನ್ನೂ ಕೂಡ ಪರಿಹರಿಸಿದಂತಾಗುತ್ತದೆ. ಅರ್ಥಾತ್ ಸಿದ್ಧವಾದ ಕಾರಣವಾಕ್ಯದ ವಿರೋಧದ ದೃಷ್ಟಿಯಿಂದ ಅಧಿಕರಣ ಸಂಗತಿಯನ್ನು ಹೇಳಬಹುದಲ್ಲವೇ?

ಈ ಶಂಕೆಯೂ ಕೂಡ ಅಸಾಧುವಾಗಿದೆ. ಒಂದು ವೇಳೆ ಸಮನ್ವಯವು ಮುಖ್ಯಉದ್ದೇಶವಾಗಿ ಕಾರಣವಾಕ್ಯದ ವಿಧಾನವು ಅರ್ಥಾತ್ ಸಿದ್ಧವಾಗುತ್ತದೆಂದು ಹೇಳುವುದಾದರೆ, ಪ್ರಥಮಪಾದದಲ್ಲಿರುವ ಆಕಾಶಾಧಿಕರಣದಲ್ಲಿಯೂ ಆಕಾಶಶಬ್ದದ ಸಮನ್ವಯವು ಸಿದ್ಧವಾಗದಿರಬೇಕಾದೀತು. ಅಲ್ಲಿಯೂ ಕೂಡ 'ಆಕಾಶಾದೇವ ಸಮುತ್ಪದ್ಯಂತೇ' ಇತ್ಯಾದಿ ವಾಕ್ಯಗಳಿಗೆ 'ಯತೋ ವಾ ಇಮಾನಿ ಭೂತಾನಿ ಜಾಯಂತೇ' ಇತ್ಯಾದಿ ವಾಕ್ಯಗಳಿಂದ ವಿರೋಧವನ್ನು ಅರ್ಥಾತ್ ಪರಿಹರಿಸಲಾಗಿದೆ. ಆದ್ದರಿಂದ ಪ್ರಥಮಪಾದದ ಆ ಅಧಿಕರಣವೂ ಕೂಡ ಸಮನ್ವಯಪರವಾಗದಿರಬೇಕಾದೀತು. ಆದ್ದರಿಂದ ಅದ್ವೈತಿಗಳ ಅಧಿಕರಣಶರೀರವು ಅಸಾಧುವಾಗಿದೆ.

ಶಂಕರರು ಹಾಗೂ ರಾಮಾನುಜರು ಇಬ್ಬರೂ ಕೂಡ 'ಜಗದ್ವಾಚಿತ್ವಾತ್' ಎಂಬಲ್ಲಿಂದ ಪ್ರಾರಂಭಿಸಿ, ಮೂರು ಸೂತ್ರಗಳನ್ನು ಒಂದು ಅಧಿಕರಣವೆಂದು ಪರಿಗಣನೆ ಮಾಡುತ್ತಾರೆ- 'ಯೋ ವೈ ಬಾಲಾಕ ಏತೇಷಾಂ ಪುರುಷಾಣಾಂ ಕರ್ತಾ ಯಸ್ಯ ಚ ಏತತ್‌ಕರ್ಮ ಸ ವೇದಿತವ್ಯಃ' ಎಂಬುದಾಗಿ ಕೌಷೀತಕೀಬ್ರಾಹ್ಮಣದಲ್ಲಿ ವೇದಿತವ್ಯತ್ವೇನ ಹೇಳಲ್ಪಟ್ಟವನು ಯಾರು? ಎಂಬುದನ್ನು ಈ ಅಧಿಕರಣದಲ್ಲಿ ವಿಚಾರ ಮಾಡಲಾಗುತ್ತಿದೆ. ಜೀವನೋ, ಮುಖ್ಯಪ್ರಾಣನೋ ಅಥವಾ ಪರಮಾತ್ಮನೋ? ಎಂದು ಸಂದೇಹ.

'ಯಸ್ಯ ಚ ಏತತ್ ಕರ್ಮ' ಎಂಬುದಾಗಿ ಧರ್ಮಾಧರ್ಮಗಳೆಂಬ ಜೀವನ ಅಸಾಧಾರಣ-ಲಿಂಗಗಳನ್ನು ಶ್ರುತಿಯು ಹೇಳುತ್ತಿರುವುದರಿಂದ, ಈ ಶ್ರುತಿಯಲ್ಲಿ ವೇದಿತವ್ಯತ್ವೇನ ಪ್ರತಿಪಾದ್ಯನಾದವನು ಜೀವನೇ ಆಗಿರುತ್ತಾನೆ ಎಂಬುದು ಮೊದಲನೆಯ ಪೂರ್ವಪಕ್ಷ.

ಅಥವಾ ಮುಖ್ಯಪ್ರಾಣನೂ ಕೂಡ ಈ ಶ್ರುತಿಯಲ್ಲಿ ವೇದಿತವ್ಯತ್ವೇನ ಪ್ರತಿಪಾದ್ಯನಾಗಿದ್ದಾನೆ. ಏಕೆಂದರೆ ಇದೇ ವಾಕ್ಯದ ಮುಂದೆ 'ಪ್ರಾಣ ಏವೈಕಧಾ ಭವತಿ' ಎಂಬುದಾಗಿ ಮುಖ್ಯಪ್ರಾಣನಲ್ಲಿ ಅಸಾಧಾರಣವಾದ ಪ್ರಾಣಶಬ್ದವು ಶ್ರುತವಾಗುತ್ತಿದೆ. ಇದು ಎರಡನೆಯ ಪೂರ್ವಪಕ್ಷ.

ವೇದಿತವ್ಯತ್ವೇನ ಪ್ರತಿಪಾದ್ಯನಾದವನು ಬ್ರಹ್ಮನೇ ಆಗಿರುತ್ತಾನೆಂದು ಸಿದ್ಧಾಂತ. ಏಕೆಂದರೆ 'ಏತತ್‌ಕರ್ಮ' ಎಂಬಲ್ಲಿರುವ 'ಏತತ್' ಎಂಬ ಶಬ್ದವು ಪ್ರತ್ಯಕ್ಷಾದಿಸಿದ್ಧವಾದ ಜಗತ್ತನ್ನು ಪ್ರತಿಪಾದನೆ ಮಾಡುತ್ತಿದೆ ಹೊರತು, ಜೀವನನ್ನಲ್ಲ. ಕರ್ಮಶಬ್ದವೂ ಕೂಡ 'ಕ್ರಿಯತೇ ಅನೇನ ಇತಿ ಕರ್ಮ'

ಎಂಬ ವ್ಯುತ್ಪತ್ತಿಯಿಂದ ಯಾವನಿಂದ ಸೃಜ್ಯವಾದ ಜಗತ್ತು ಹೇಳಲ್ಪಟ್ಟಿದೆಯೋ, ಅವನು ಕರ್ಮ ಎನಿಸಿಕೊಳ್ಳುತ್ತಾನೆ. ಆದ್ದರಿಂದ ಕರ್ಮಶಬ್ದದಿಂದ ಜಗತ್‌ಕರ್ತೃವಾದ ಬ್ರಹ್ಮನೇ ಪ್ರತಿಪಾದ್ಯನಾಗಿದ್ದಾನೆ ಹೊರತು, ಜೀವನಲ್ಲ. ಇಷ್ಟು ಸಿದ್ಧಾಂತ.

ಈ ಅಧಿಕರಣ ಶರೀರವು ಅಸಾಧುವಾಗಿದೆ. ಏಕೆಂದರೆ ಹಿಂದಿನ ಮೂರು ಪಾದಗಳಲ್ಲಿ ಅನೇಕ ಶಬ್ದಗಳನ್ನು ಬ್ರಹ್ಮನಲ್ಲಿ ಸಮನ್ವಯ ಮಾಡಿದಿರಿ. ಇದೇ ಪಾದದ ಹಿಂದಿನ ಮೂರು ಅಧಿಕರಣಗಳಲ್ಲಿ ಪ್ರಧಾನಕ್ಕೆ ಶಬ್ದಪ್ರತಿಪಾದ್ಯತ್ವವನ್ನು ನಿರಾಕರಣೆ ಮಾಡಿರುವಿರಿ. ಅನಂತರ 'ಕಾರಣತ್ವೇನ ಚ ಆಕಾಶಾದಿಷು' ಎಂಬ ಅಧಿಕರಣದಲ್ಲಿ ಶ್ರುತಿಗಳಿಗೆ ಪರಸ್ಪರವಿರೋಧವನ್ನು ಪರಿಹರಿಸಿದಿರಿ. ಪುನಃ 'ಜಗದ್ವಾಚಿತ್ವಾತ್' ಮೊದಲಾದ ಅಧಿಕರಣದಲ್ಲಿ ಸಮನ್ವಯವನ್ನು ಸಾಧಿಸುತ್ತಿದ್ದೀರಿ. ಇವೆಲ್ಲವೂ ಪರಸ್ಪರ ಅಸಂಗತವಾಗಿವೆ.

ಆದ್ದರಿಂದ ನಾವು ಹೇಳುವಂತೆ 'ಸಮಾಕರ್ಷಾತ್' ಎಂಬ ಸೂತ್ರದಿಂದ ಅನ್ವಿತವಾದ ಸಕಲಶಬ್ದಗಳನ್ನು ಈ ಸೂತ್ರದಲ್ಲಿಯೂ ಅನ್ವಯ ಮಾಡಿಕೊಳ್ಳಲು ಬರುತ್ತಿರುವಾಗ 'ಏತತ್' ಎಂಬ ಶಬ್ದವನ್ನು ಅಧ್ಯಾಹಾರ ಮಾಡುವುದು ಅಯುಕ್ತವಾಗುತ್ತದೆ.

ಒಂದಿಬ್ಬರು ಹೀಗನ್ನುತ್ತಾರೆ - ವೇದದ ಕೆಲವೆಡೆ ಜೀವನ ಬಗ್ಗೆ ಹೇಳಿರುವುದುಂಟು. ಅದೆಲ್ಲವೂ ಬ್ರಹ್ಮನ ಜ್ಞಾನಕ್ಕಾಗಿ. ಹೀಗೆ 'ಅನ್ಯಾರ್ಥಂ ತು ಜೈಮಿನಿಃ' ಎಂಬ ಸೂತ್ರ ಹೇಳುತ್ತಿದೆ. 'ಜಗದ್ವಾಚಿತ್ವಾತ್' ಎಂಬ ಸೂತ್ರದಿಂದ ಪ್ರಾರಂಭಿಸಿ 'ಅನ್ಯಾರ್ಥಂ ತು ಜೈಮಿನಿಃ' ಎಂಬ ಸೂತ್ರದ ತನಕ ಒಟ್ಟು ಮೂರು ಸೂತ್ರಗಳು ಪ್ರತ್ಯೇಕ ಅಧಿಕರಣವೆಂಬುದು ಇವರ ವಾದ. ಇದು ತಪ್ಪು. 'ಯಸ್ಯ ಚ ಏತತ್ ಕರ್ಮ' ಎಂಬ ಶ್ರುತಿಯಲ್ಲಿ ಜೀವನ ಬಗ್ಗೆ ಪ್ರಸಕ್ತಿಯೇ ಇರುವುದಿಲ್ಲ. ಸಿದ್ಧಾಂತದಲ್ಲಿಯೂ ಕೂಡ ಹಾಗೇ ನೀವೂ ಹೇಳಿದ್ದೀರಿ. ಹೀಗಿರುವಾಗ ಜೀವದ ಬಗ್ಗೆ ಹೇಳಿರುವುದು ಬ್ರಹ್ಮನಜ್ಞಾನಕ್ಕೋಸ್ಕರ ಎಂಬ ಮಾತೇ ತಪ್ಪಾಗುತ್ತದೆ. ಮತ್ತು ಜೈಮಿನಿಪದವನ್ನು ಸೂತ್ರದಲ್ಲಿ ಉಲ್ಲೇಖ ಮಾಡಿದ್ದೂ ಕೂಡ ವ್ಯರ್ಥ. ಒಂದು ವೇಳೆ ಮತ್ತೊಂದು ಪಕ್ಷವು ಪ್ರಸಕ್ತವಾಗಿದ್ದರೆ ಜೈಮಿನಿ ಪದವು ಸಾರ್ಥಕವಾಗುತ್ತಿತ್ತು.

ಮತ್ತು ಆಶ್ಮರಥ್ಯ, ಔಡುಲೋಮಿ, ಕಾಶಕೃತ್ಸ್ನ ಈ ಮೂವರ ಅಭಿಪ್ರಾಯದಲ್ಲಿ ವ್ಯತ್ಯಾಸವಿದೆ. ಹೇಗೆ ವೈಶ್ವಾನರಾಧಿಕರಣದಲ್ಲಿರುವ 'ಅಭಿವ್ಯಕ್ತೇಃ' ಇತ್ಯಾದಿ ನಾಲ್ಕು ಸೂತ್ರಗಳು ಅಭಿಪ್ರಾಯವನ್ನು ಪ್ರತಿಪಾದನೆ ಮಾಡುವ ಸೂತ್ರಗಳು ಒಂದೇ ಅಧಿಕರಣದಲ್ಲಿ ಸೇರಿವೆಯೋ, ಅದರಂತೆ ಇಲ್ಲಿಯೂ ಬೇರೆ ಬೇರೆ ಋಷಿಗಳ ಅಭಿಪ್ರಾಯವನ್ನು ಸಂಗ್ರಹಿಸುವ ಎಲ್ಲಾ ಸೂತ್ರಗಳು ಒಂದೇ ಅಧಿ ಕರಣದಲ್ಲಿಯೇ ಸೇರಬೇಕು.

ಅದ್ವೈತಿಗಳು ಹಾಗೂ ವಿಶಿಷ್ಟಾದ್ವೈತಿಗಳು 'ವಾಕ್ಯಾನ್ವಯಾತ್' ಎಂಬ ಸೂತ್ರದಿಂದ ಆರಂಭಿಸಿ ನಾಲ್ಕು ಸೂತ್ರಗಳನ್ನು ಬೇರೆ ಅಧಿಕರಣವೆಂದು ಪರಿಗಣಿಸಿದ್ದಾರೆ. 'ಆತ್ಮಾ ವಾ ಅರೇ ದ್ರಷ್ಟವ್ಯಃ' ಎಂಬ ಶ್ರುತಿಯೇ ಈ ಅಧಿಕರಣದ ವಿಷಯವಾಕ್ಯ. ಈ ವಾಕ್ಯವು ಜೀವನನ್ನು ಪ್ರತಿಪಾದನೆ ಮಾಡುತ್ತಿದೆ. ಏಕೆಂದರೆ 'ನ ವಾ ಅರೇ ಪತ್ಯುಃ ಕಾಮಾಯ ಪತಿಃ ಪ್ರಿಯೋ ಭವತಿ ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ' ಇತ್ಯಾದಿಯಾಗಿ ಇದರ ಹಿಂದಿನ ವಾಕ್ಯದಲ್ಲಿ ಪ್ರಿಯಸಹಿತನಾದ ಭೋಕ್ತೃವಾದ ಜೀವನೇ ಉಪಕ್ರಮದಿಂದ ಪ್ರಸಕ್ತನಾಗಿದ್ದಾನೆ. ಉಪಕ್ರಮದಲ್ಲಿ ಪ್ರಸಕ್ತನಾದ ಜೀವನ ಬಗ್ಗೆಯೇ ಮುಂದಿನ ವಾಕ್ಯವೂ ಕೂಡ ಪ್ರತಿಪಾದಿಸುತ್ತದೆ. ಇಷ್ಟು ಪೂರ್ವಪಕ್ಷ.

'ಆತ್ಮಾ ವಾ ಅರೇ ದ್ರಷ್ಟವ್ಯ' ಎಂಬ ವಾಕ್ಯವು ಬ್ರಹ್ಮನನ್ನೇ ಪ್ರತಿಪಾದನೆ ಮಾಡುತ್ತದೆ ಹೊರತು, ಜೀವನನ್ನಲ್ಲ. ಏಕೆಂದರೆ 'ವಾಕ್ಯಾನ್ವಯಾತ್' = 'ಆತ್ಮನೋ ವಾ ಅರೇ ದರ್ಶನೇನ ಶ್ರವಣೇನ ಮತ್ಯಾ ವಿಜ್ಞಾನೇನೇದಂ ಸರ್ವಂ ವಿದಿತಮ್' ಎಂಬ ವಾಕ್ಯದಲ್ಲಿ ಒಬ್ಬನ ತಿಳುವಳಿಕೆಯಿಂದ ಎಲ್ಲವನ್ನೂ ತಿಳಿದಂತಾಗುತ್ತದೆ ಎಂಬುದಾಗಿ ಹೇಳಲಾಗಿದೆ. ಸಕಲಕ್ಕೂ ಕಾರಣನಾದ ಬ್ರಹ್ಮನ ತಿಳುವಳಿಕೆಯಿಂದಷ್ಟೇ ಎಲ್ಲವನ್ನೂ ತಿಳಿದಂತಾಗುತ್ತದೆ ಹೊರತು, ಜೀವನ ತಿಳುವಳಿಕೆಯಿಂದ ಎಲ್ಲವನ್ನೂ ತಿಳಿದಂತಾಗುವುದಿಲ್ಲ. ಆದ್ದರಿಂದ ಜೀವನನ್ನು 'ಆತ್ಮಾ ವಾ ಅರೇ' ಎಂಬ ಶ್ರುತಿಯಿಂದ ಪ್ರತಿಪಾದ್ಯನೆಂದು ಪರಿಗಣಿಸಬಾರದು.ಇಷ್ಟು ಸಿದ್ಧಾಂತ.

ಇವರ ಈ ಅಧಿಕರಣ ಶರೀರವು ಅಸಾಧುವಾಗಿದೆ. ಏಕೆಂದರೆ ಈ ನಾಲ್ಕು ಸೂತ್ರಗಳಲ್ಲಿ ಸಮನ್ವಯ ಮಾಡಬೇಕಾದ ಯಾವುದೇ ಶಬ್ದವಿಶೇಷಗಳನ್ನು ಸೂತ್ರಕಾರರು ಉಲ್ಲೇಖಿಸಿಲ್ಲ. ಹಾಗಾಗಿ ಹಿಂದಿನ ಸಮಾಕರ್ಷಾಧಿಕರಣಕ್ಕೆ ಈ ನಾಲ್ಕು ಸೂತ್ರಗಳು ಅಂಗಗಳಾಗಿವೆ ಎಂದೇ ಹೇಳುವುದು ಸ್ವರಸ.

ಅದ್ವೈತಿಗಳು 'ವಾಕ್ಯಾನ್ವಯಾತ್' ಎಂಬ ಸೂತ್ರದ ಮುಂದಿನ ಮೂರು ಸೂತ್ರಗಳ ವ್ಯಾಖ್ಯಾನವನ್ನು ಹೀಗೆ ಮಾಡಿದ್ದಾರೆ. 'ಆತ್ಮಾ ವಾ ಅರೇ ದ್ರಷ್ಟವ್ಯಃ' ಎಂಬ ವಾಕ್ಯವು ಬ್ರಹ್ಮನನ್ನೇ ಪ್ರತಿಪಾದನೆ ಮಾಡುತ್ತಿದೆ. ಹಾಗಾದರೆ ಉಪಕ್ರಮದಲ್ಲಿ ಜೀವನನ್ನು ಶ್ರುತಿ ಹೇಳುತ್ತಿದೆಯಲ್ಲವೇ? ಎಂಬ ಪ್ರಶ್ನೆ ಬಂದರೆ ಜೀವ ಹಾಗೂ ಬ್ರಹ್ಮರಿಗೆ ಅಭೇದವಿರುವುದರಿಂದ ಹಾಗೇ ಶ್ರುತಿಯು ಉಪಕ್ರಮದಲ್ಲಿ ಜೀವನನ್ನು ಪ್ರತಿಪಾದನೆ ಮಾಡಿ, ಮುಂದೆ ಬ್ರಹ್ಮನ ಬಗ್ಗೆ ನಿರೂಪಣೆ ಮಾಡಿದೆ.

ಈ ವಿಷಯದಲ್ಲಿ ಮೂರು ಮತಗಳಿವೆ. ಮೊದಲನೆಯ ಮತ ಹೀಗಿದೆ - ಜೀವನು ಬ್ರಹ್ಮನ ವಿಕಾರವಾಗಿರುವುದರಿಂದ ಬ್ರಹ್ಮನಿಗಿಂತ ಭಿನ್ನಾಭಿನ್ನನಾಗಿದ್ದಾನೆ. ಅಭಿನ್ನನಾಗಿದ್ದಾನೆಂಬ ವಿವಕ್ಷೆಯಿಂದ ಶ್ರುತಿಯು ಏಕವಿಜ್ಞಾನದಿಂದ ಸಕಲವಿಜ್ಞಾನವನ್ನು ಪ್ರತಿಜ್ಞೆ ಮಾಡಿರುತ್ತದೆ. ಜೀವನು ಬ್ರಹ್ಮನಿಗಿಂತ

ಅತ್ಯಂತ ಭಿನ್ನನಾಗಿದ್ದಾನೆಂದು ಒಪ್ಪಿದರೆ ಬ್ರಹ್ಮಜ್ಞಾನದಿಂದ, ಜೀವನ ಜ್ಞಾನವನ್ನು ಪಡೆದಂತಾಗುತ್ತದೆಂದು ಹೇಳಲು ಸಾಧ್ಯವಿಲ್ಲ. ಆದ್ದರಿಂದ ಜೀವಬ್ರಹ್ಮರಿಗೆ ಭೇದಾಭೇದವನ್ನು ಒಪ್ಪಬೇಕೆಂಬುದು ಆಶ್ಮರಥ್ಯಾಚಾರ್ಯರ ಅಭಿಪ್ರಾಯ. ಇದನ್ನು 'ಪ್ರತಿಜ್ಞಾಸಿದ್ಧೇಃ' ಎಂಬ ಸೂತ್ರವು ಪ್ರತಿಪಾದನೆ ಮಾಡುತ್ತಿದೆ.

ಸಂಸಾರಾವಸ್ಥೆಯಲ್ಲಿ ಜೀವನು ಬ್ರಹ್ಮನಿಗಿಂತ ಭಿನ್ನನಾಗಿರುತ್ತಾನೆ. ಆದರೆ ಮೋಕ್ಷಾವಸ್ಥೆಯಲ್ಲಿ ಬ್ರಹ್ಮಸ್ವರೂಪವನ್ನು ತಾಳುತ್ತಾನೆ. ಹಾಗಾಗಿ ಕಾಲಭೇದದಿಂದಷ್ಟೇ ಜೀವಬ್ರಹ್ಮರಿಗೆ ಭೇದಾಭೇದ-ವಿರುತ್ತದೆಂಬುದು ಔಡುಲೋಮಿ ಆಚಾರ್ಯರ ಅಭಿಪ್ರಾಯ.

ಬ್ರಹ್ಮನು ಬಿಂಬನಾಗಿರುತ್ತಾನೆ. ಜೀವನು ಪ್ರತಿಬಿಂಬನಾಗಿರುತ್ತಾನೆ. ಅಂದರೆ ಬಿಂಬಭೂತನಾದ ಬ್ರಹ್ಮನೇ ಪ್ರತಿಬಿಂಬನಾದ ಜೀವಸ್ವರೂಪದಿಂದ ಎಲ್ಲೆಡೆ ನೆಲೆಸಿದ್ದಾನೆ. ಹಾಗಾಗಿ ಜೀವಬ್ರಹ್ಮರ ಭೇದವು ಕಾಲ್ಪನಿಕವಾಗಿದೆ. ಅಭೇದವಷ್ಟೇ ಪಾರಮಾರ್ಥಿಕವಾಗಿದೆ. ಇದು ಕಾಶಕೃತ್ಸ್ನಾಚಾರ್ಯರ ಅಭಿಪ್ರಾಯ.

ಹೀಗೆ 'ಪ್ರತಿಜ್ಞಾಸಿದ್ಧೇಃ' ಇತ್ಯಾದಿ ಮೂರು ಸೂತ್ರಗಳ ಅರ್ಥ. ಈ ಮೂರು ಮತಗಳಲ್ಲಿ ಮೊದಲೆರಡು ಮತಗಳು ಸೂತ್ರಕಾರರಿಗೆ ಸಮ್ಮತವಲ್ಲ. ಹಾಗೇನಾದರೂ ಜೀವಬ್ರಹ್ಮರಿಗೆ ಭೇದಾಭೇದವನ್ನು ಒಪ್ಪಿದರೆ ಕೇವಲ ಅಭೇದವನ್ನು ಪ್ರತಿಪಾದನೆ ಮಾಡುವ ಶ್ರುತ್ಯಾದಿಗಳ ವಿರೋಧವು ಪ್ರಾಪ್ತವಾಗುತ್ತದೆ. ಹಾಗಾಗಿ ಕಾಶಕೃತ್ಸ್ನಾಚಾರ್ಯರು ಹೇಳುವಂತೆ ಅಭೇದವಷ್ಟೇ ಪಾರಮಾರ್ಥಿಕವೆಂಬ ಮೂರನೆಯ ಮತವು ಸೂತ್ರಕಾರರಿಗೆ ಅಭಿಪ್ರೇತವಾಗಿದೆ.

ಆದ್ವೈತಿಗಳ ಈ ಸೂತ್ರವ್ಯಾಖ್ಯಾನವು ಅಸಾಧುವಾಗಿದೆ. ಮೊಟ್ಟಮೊದಲು ಜೀವನು ಉಪಕ್ರಮದಲ್ಲಿ ಪ್ರಾಪ್ತನಾಗಿದ್ದಾನೆಂದು ವ್ಯಾಖ್ಯಾನ ಮಾಡಿದ್ದೇ ತಪ್ಪು. ಶ್ರುತಿಯಲ್ಲಿ 'ಕಾಮಾಯ' ಎಂಬ ಚತುರ್ಥ್ಯಂತವಾದ ಪದವು ತೃತೀಯಾರ್ಥದಲ್ಲಿ ಪ್ರಯುಕ್ತವಾಗಿದೆ. ಕಾರಣವೇನೆಂದರೆ ಅದೇ ಶ್ರುತಿಪ್ರಕರಣದಲ್ಲಿ 'ಜಾಯಾಯೈ' ಎಂಬ ಚತುರ್ಥ್ಯಂತವಾದ ಪದವನ್ನು 'ಜಾಯಯಾ' (ಹೆಂಡತಿಯಿಂದ ಕೂಡಿಕೊಂಡು) ಎಂಬರ್ಥದಲ್ಲಿ ಪ್ರಯೋಗಿಸಲಾಗಿದೆ.

ಆದ್ದರಿಂದ ಉಪಕ್ರಮದಲ್ಲಿ ಪ್ರಾಪ್ತವಾದ ಶ್ರುತಿಯ ಅಭಿಪ್ರಾಯವನ್ನು ಹೀಗೆ ಸ್ಪಷ್ಟವಾಗಿ ತಿಳಿಯಬೇಕು. 'ಗಂಡಂದಿರು, ಹೆಂಡಂತಿಯಂದಿರಿಗೆ ಏಕೆ ಪ್ರಿಯರಾಗಿರುತ್ತಾರೆ ಎಂದರೆ, 'ನಾನು ಹೆಂಡತಿಗೆ ಪ್ರಿಯನಾಗಬೇಕು' ಎಂಬ ಗಂಡನ ಇಚ್ಛೆಯಿಂದಲ್ಲ. 'ಗಂಡನು ಹೆಂಡತಿಗೆ ಪ್ರಿಯನಾಗಿರಲಿ' ಎಂಬ ಪರಮಾತ್ಮನ ಇಚ್ಛೆಯಂದಷ್ಟೇ ಪ್ರಿಯನಾಗಿರುತ್ತಾನೆ.

ಶ್ರುತಿಯಲ್ಲಿರುವ ಆತ್ಮಶಬ್ದಕ್ಕೆ ಪರಮಾತ್ಮನೆಂದೇ ಅರ್ಥ ಹೊರತು, ಜೀವನೆಂದು ಅರ್ಥವಲ್ಲ. ಈ ವಿಷಯವನ್ನು ಈಗಾಗಲೇ ದ್ಯುಭ್ವಾದ್ಯಧಿಕರಣದ ನ್ಯಾಯದಿಂದ ಸಮರ್ಥಿಸಿದ್ದಾಗಿದೆ. ಆದ್ದರಿಂದ ಆತ್ಮಶಬ್ದವು ಪರಮಾತ್ಮನಲ್ಲಿ ಮುಖ್ಯವಾಗಿರುವುದರಿಂದ ಪರಮಾತ್ಮಪರವಾದ ಉಪಸಂಹಾರವಾಕ್ಯಕ್ಕೆ ಅನುಗುಣವಾಗಿ ಉಪಕ್ರಮವಾಕ್ಯವನ್ನು ವ್ಯಾಖ್ಯಾನ ಮಾಡಬೇಕು.

ತನ್ನ ಇಚ್ಛೆಯಿಂದ ಗಂಡನು ಹೆಂಡತಿಗೆ ಪ್ರಿಯನಾಗಲು ಸಾಧ್ಯವೇ ಇಲ್ಲ. ಭಗವಂತನ ಇಚ್ಛೆಯಿಂದಷ್ಟೇ ಹೆಂಡತಿಗೆ ಪ್ರಿಯನಾಗುತ್ತಾನೆ. ತನಗೆ ತಾನು ಪ್ರಿಯನಾಗಬೇಕಾದರೂ ಹರಿಯ ಇಚ್ಛೆಯು ಆವಶ್ಯಕ.

ತನಗೆ ತಾನು ಪ್ರಿಯನಾಗಬೇಕಾದರೂ ಹರಿಯ ಇಚ್ಛೆಯೇ ಬೇಕು. ಹರಿಯ ಇಚ್ಛೆ ತಪ್ಪಿದರೆ ತನಗೆ ತಾನೇ ಶತ್ರುವಾಗುತ್ತಾನೆ. ಆತ್ಮಹತ್ಯೆ ಮೂಲಕ ಕುಕೃತ್ಯಗಳಲ್ಲಿ ತೊಡಗುತ್ತಾನೆ. ಅಷ್ಟೇ ಅಲ್ಲದೇ, ಅಧರ್ಮಾಚರಣೆ ಮೊದಲಾದವುಗಳನ್ನು ಮಾಡುತ್ತಾ ಪಾಪಿಷ್ಟನಾಗಿ ತನ್ನನ್ನು ತಾನು ನರಕದಲ್ಲಿ ಬೀಳಿಸಿಕೊಳ್ಳುತ್ತಾನೆ. ಶ್ರೀಹರಿಯ ಇಚ್ಛೆಯಿಂದಷ್ಟೇ ಸುಖವನ್ನು ಅಥವಾ ದುಃಖವನ್ನು ಹೊಂದಲು ಸಾಧ್ಯ.

ಇವೇ ಮೊದಲಾದ ಪ್ರಮಾಣವಚನಗಳಿಂದ ಪರಮಾತ್ಮನ ಇಚ್ಛೆಯು ಇಲ್ಲದಿದ್ದರೆ ಅತ್ಯಂತ ಶ್ರೀಮಂತನಾದ, ರೂಪವಂತನಾದ ಗಂಡನು ಹೆಂಡತಿಗೆ ಪ್ರಿಯನಾಗಲು ಸಾಧ್ಯವಿಲ್ಲ. ಈ ವಿಷಯದಲ್ಲಿ ಅನೇಕ ಉದಾಹರಣೆಗಳು ಕಣ್ಣೆದುರಿನಲ್ಲಿ ಇರುತ್ತವೆ.

ಹೀಗೊಪ್ಪದಿದ್ದರೆ ಪತ್ಯಾದಿಗಳು ಸ್ವತಃ ಪ್ರಿಯರಾಗಿರುವುದರಿಂದ ಸ್ವತಃ ತಾವೇ ನಿರುಪಾಧಿಕ-ಪ್ರಿಯರೆಂದು ಹೇಳಿದಂತಾಗುತ್ತದೆ. ಹಾಗಾದರೆ ದುಃಖಾದಿಗಳೂ ಕೂಡ ಸ್ವತಃ ಅಪ್ರಿಯ-ವಾಗಿರುವುದರಿಂದ ನಿರುಪಾಧಿಕ ಅಪ್ರಿಯವೆಂದು ಒಪ್ಪಬೇಕಾದೀತು.

'ಆತ್ಮನಸ್ತು ಕಾಮಾಯ' ಇತ್ಯಾದಿ ಶ್ರುತಿಯಲ್ಲಿರುವ ಆತ್ಮಶಬ್ದಕ್ಕೆ ಪರಮಾತ್ಮ ಎಂಬರ್ಥವನ್ನು ಹೇಳಬೇಕೆಂದು ಸಮರ್ಥನೆ ಮಾಡಿದ್ದಾಯಿತು. ಪ್ರಕೃತ ಆದ್ವೈತಿಗಳು ಆತ್ಮಶಬ್ದಕ್ಕೆ ಸ್ವಾರ್ಥ ಎಂಬರ್ಥವನ್ನು ಹೇಳುತ್ತಾರೆ ಹೊರತು ಪರಮಾತ್ಮ ಎಂಬರ್ಥವನ್ನು ಹೇಳುವುದಿಲ್ಲ. ಹೀಗೆ ಹೇಳಿದಾಗ ಬರುವ ದೋಷವನ್ನು ಪ್ರಕೃತ ನಿರೂಪಣೆ ಮಾಡುತ್ತಿದ್ದಾರೆ -

'ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ' ಎಂಬ ವಾಕ್ಯದಲ್ಲಿ ಎಲ್ಲವೂ ಸ್ವಾರ್ಥಕ್ಕಾಗಿ ಪ್ರಿಯವಾಗುತ್ತದೆ. ಆದರೆ ನನಗೆ ನಾನೇ ಸ್ವತಃ ಅಪ್ರಿಯನಾಗಿರುವ ಕಾರಣ ನಿರುಪಾಧಿಕಪ್ರಿಯನೆಂದು

ತಿಳಿಯಬೇಕು. ಹೀಗೆ ವ್ಯಾಖ್ಯಾನಿಸುವ ಅದ್ವೈತಿಗಳು ಇದರ ಹಿಂದೆ ಇರುವ 'ನ ವಾ ಅರೇ ಪತ್ಯುಃ ಕಾಮಾಯ ಪತಿಃ ಪ್ರಿಯೋ ಭವತಿ' ಎಂಬ ವಾಕ್ಯದಲ್ಲಿ, 'ಪತ್ಯುಃ' ಎಂಬ ಪದಕ್ಕೆ ಪತ್ಯರ್ಥಂ = ಪತಿಗೋಸ್ಕರ ಎಂದೇ ವ್ಯಾಖ್ಯಾನಿಸಬೇಕು. ಆವಾಗ ಪತಿಗೋಸ್ಕರ ಪ್ರಿಯನಾಗಿರುವುದಿಲ್ಲ. ಬೇರೆ ಇನ್ನೊಬ್ಬನಿಗೋಸ್ಕರ ಪ್ರಿಯನಾಗಿದ್ದೇನೆ ಎಂದು ಹೇಳಬೇಕು. ಹಾಗಾಗಿ ಸ್ವಾರ್ಥಕ್ಕಾಗಿ ಸ್ವತಃ ಪ್ರಿಯನಾಗಿರುವುದಿಲ್ಲ. ಇನ್ನೊಬ್ಬರಿಗೋಸ್ಕರ ಪ್ರಿಯನಾಗಿದ್ದೇನೆ ಎಂಬರ್ಥವನ್ನು ಹೇಳಿದಂತಾಗುತ್ತದೆ.

ಅಭಿಪ್ರಾಯ ಹೀಗಿದೆ - ಪತಿಯು ಹೆಂಡತಿಗೋಸ್ಕರ ಪ್ರಿಯನಾಗಿಲ್ಲ. ಹೊರತು ತನಗಾಗಿ ಹೆಂಡತಿಗೆ ಪ್ರಿಯನಾಗಿದ್ದಾನೆ. ಆದ್ದರಿಂದಲೇ ನಮಗೆ ನಾವು ನಿರುಪಾಧಿಕಪ್ರಿಯರಾಗಿದ್ದೇವೆ ಎಂಬುದು ಅದ್ವೈತಿಗಳ ವ್ಯಾಖ್ಯಾನ. ಪ್ರೀತಿಕರ್ತೃತ್ವವು ಹೆಂಡತಿಯಲ್ಲಿದೆ, ಪ್ರೀತಿ ವಿಷಯತ್ವವು ಪತಿಯಲ್ಲಿದೆ ಎಂದು ಹೇಳುತ್ತಾರೆ. 'ಆತ್ಮನಸ್ತು ಕಾಮಾಯ' ಎಂಬಲ್ಲಿ 'ಸತ್ಯಂ ಪ್ರಿಯಂ ಭವತಿ' ಎಂಬ ಆಕಾಂಕ್ಷೆಯು ಹುಟ್ಟುವುದೇ ಇಲ್ಲ. ಏಕೆಂದರೆ 'ಆತ್ಮನಸ್ತು' ನನಗೋಸ್ಕರ ಎಂದು ಶ್ರುತಿಯಲ್ಲೇ ಹೇಳಲಾಗಿದೆ. ಆದರೆ 'ನ ವಾ ಅರೇ ಪತ್ಯುಃ' ಎಂಬ ಶ್ರುತಿಯಲ್ಲಿ 'ಪತಿಃ ಜಾಯಾಪ್ರಿಯೋ ಭವತಿ, ಕಿಂತು ಆತ್ಮನಸ್ತು ಕಾಮಾಯ ಪತಿಃ ಜಾಯಾಯಾಃ ಪ್ರಿಯೋ ಭವತಿ' ಎಂಬುದಾಗಿ ಆಕಾಂಕ್ಷೆಯು ಪೂರ್ತಿಯಾದರೂ ಅಧ್ಯಾಹಾರ ಮಾಡಿಕೊಳ್ಳಬೇಕು. ಹೀಗೆ ಅಧ್ಯಾಹಾರ ಮಾಡದಿದ್ದರೆ ಪೂರ್ವೋತ್ತರ ವಾಕ್ಯಗಳಿಗೆ ಪರಸ್ಪರ ವಿರೋಧ ಬರುತ್ತದೆ. ಮುಂದಿನ ವಾಕ್ಯದಲ್ಲಿ ಎಲ್ಲವೂ ಸ್ವಾರ್ಥಕ್ಕಾಗಿ ಪ್ರಿಯವಾಗುತ್ತದೆಂದು ಹೇಳಿ, ಹಿಂದಿನ ವಾಕ್ಯದಲ್ಲಿ ಪತಿಯು ಹೆಂಡತಿಗೋಸ್ಕರ ಪ್ರಿಯನಾಗಿಲ್ಲ ಎಂದು ಹೇಳಿದರೆ ವ್ಯಾಹತಿಯು ಸ್ಪಷ್ಟ. ಒಂದು ವೇಳೆ ಅಧ್ಯಾಹಾರ ಮಾಡಿದರೆ ಪ್ರಾಯಪಾಠ ವಿರೋಧ ಬರುತ್ತದೆ. ಏಕೆಂದರೆ ಮುಂದಿನ ವಾಕ್ಯದಲ್ಲಿ ಅಧ್ಯಾಹಾರವನ್ನು ಮಾಡಿದರೆ, ಹಿಂದಿನ ವಾಕ್ಯದಲ್ಲಿ ಅಧ್ಯಾಹಾರ ಮಾಡುವುದು ಅಸಾಧುವಾಗುತ್ತದೆ.

ಏಕೆಂದರೆ ಆತ್ಮಶಬ್ದವು ನಿಮ್ಮ ಸಿದ್ಧಾಂತದಲ್ಲಿ ಸ್ವಾತ್ಮಶಬ್ದಕ್ಕೆ ಪರ್ಯಾಯವಾಗಿದೆ. ಹಾಗಾಗಿ ಪ್ರತಿಸಂಬಂಧಿವಾಚಕವಾದ ಶಬ್ದವಾಯಿತು. ಸ್ವಾತ್ಮ ಎಂಬರ್ಥವನ್ನು ತಿಳಿಸುವ ಈ ಶಬ್ದಕ್ಕೆ ಪ್ರತಿಸಂಬಂಧಿಯ ಆಕಾಂಕ್ಷೆಯೂ ಇರುತ್ತದೆ. ಪ್ರತಿಸಂಬಂಧಿ ಎಂದರೆ ಪತ್ಯಾದಿಗಳೆಂದು ವಿವಕ್ಷಿಸಬೇಕು. ಆದ್ದರಿಂದ ಪತಿಯು ತನಗೆ ಪ್ರಿಯನಾಗುತ್ತಾನೆ. ಏಕೆಂದರೆ ಹೆಂಡತಿಗೋಸ್ಕರ.

ಹೀಗೆ ಹೇಳಿದಾಗ ಸ್ವತಃ ತನಗೆ ನಿರುಪಾಧಿಕಪ್ರಿಯತ್ವವನ್ನು ನಿಷೇಧ ಮಾಡಿದಂತಾಯಿತು. ಅಂದರೆ 'ಆತ್ಮನಸ್ತು ಕಾಮಾಯ' ಎಂಬ ವಾಕ್ಯದಲ್ಲಿ ಯಾವ ನಿರುಪಾಧಿಕಪ್ರಿಯತ್ವವನ್ನು ಹೇಳಲಾಗಿದೆಯೋ, ಅದನ್ನು ಈಗ ಅಲ್ಲಗಳೆದಂತಾಯಿತು. 'ಆತ್ಮನಸ್ತು ಕಾಮಾಯ' ಎಂಬ ವಾಕ್ಯದಿಂದ 'ನ ವಾ ಅರೇ ಪತ್ಯುಃ' ಎಂಬ ವಾಕ್ಯಕ್ಕೆ ಪರಸ್ಪರ ವಿರೋಧವನ್ನು ಹೇಳಿದಂತಾಗುತ್ತದೆ.

(ನಿರುಪಾಧಿಕಪ್ರಿಯತ್ವಂ = ಅನನ್ಯಾರ್ಥಪ್ರಿಯತ್ವಂ. ಸೋಪಾಧಿಕಪ್ರಿಯತ್ವಂ = ಅನ್ಯಾರ್ಥಂ ಪ್ರಿಯತ್ವಂ. ಪ್ರಕೃತ ಪತಿಯು ತನಗೆ ಪ್ರಿಯನಾಗುತ್ತಾನೆ. ಏಕೆಂದರೆ ಹೆಂಡತಿಗೋಸ್ಕರ ಎಂದು ಹೇಳಿದರೆ, ನಿರುಪಾಧಿಕಪ್ರಿಯತ್ವವನ್ನು ಬಿಟ್ಟಂತಾಗುತ್ತದೆ.)

ಸ್ವಾರ್ಥಕ್ಕಾಗಿ ಎಲ್ಲಾ ವಸ್ತುವು ತನಗೆ ಪ್ರಿಯವಾಗುತ್ತದೆ ಎಂದು ಉಪನಿಷತ್ತಿನ ತಾತ್ಪರ್ಯವೆಂದು ನೀವು ಹೇಳುತ್ತಿದ್ದೀರಿ. ಈ ಅರ್ಥವು ಎಲ್ಲರ ಅನುಭವದಿಂದಲೇ ಸಿದ್ಧವಾಗಿರುವಾಗ ಉಪನಿಷತ್ತು ಇದನ್ನು ಏಕೆ ಹೇಳಬೇಕು? ಬೇರೆ ಪ್ರಮಾಣದಿಂದ ತಿಳಿಯದ ವಿಚಾರವನ್ನಷ್ಟೇ ಉಪನಿಷತ್ತು ಹೇಳಬೇಕು. ಎಲ್ಲರಿಗೂ ಅನುಭೂತವಾದ ವಿಷಯವನ್ನು ಉಪನಿಷತ್ತು ಹೇಳುವುದರಲ್ಲಿ ಅರ್ಥವಿಲ್ಲ.

ಮತ್ತೊಂದು ದೋಷ - 'ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯಃ' ಎಂಬ ವಿಧಿವಾಕ್ಯವು ಜೀವನನ್ನು ಪ್ರತಿಪಾದನೆ ಮಾಡುತ್ತಿದೆ ಎಂದು ನೀವೂ ಕೂಡ ಹೇಳಲು ಇಚ್ಛಿಸುವುದಿಲ್ಲ. ಇದೇ ವಿಷಯವನ್ನು ಪ್ರತಿಪಾದನೆ ಮಾಡುವ 'ಆತ್ಮನಸ್ತು ಕಾಮಯ' ಎಂಬ ಅರ್ಥವಾದ ವಾಕ್ಯವೂ ಕೂಡ ಜೀವನನ್ನು ಹೇಳಲು ನೀವು ಇಚ್ಛಿಸಬಾರದು. ಏಕೆಂದರೆ ವಿಧಿವಾಕ್ಯ ಹಾಗೂ ಅರ್ಥವಾದ ವಾಕ್ಯಗಳೆರಡೂ ಒಂದೇ ವಿಷಯವನ್ನು ಪ್ರತಿಪಾದನೆ ಮಾಡುತ್ತವೆ. ವಿಧಿವಾಕ್ಯವು ಬ್ರಹ್ಮನನ್ನು ಪ್ರತಿಪಾದನೆ ಮಾಡಿ, ಅರ್ಥವಾದ ವಾಕ್ಯವು ಜೀವನನ್ನು ಪ್ರತಿಪಾದನೆ ಮಾಡುತ್ತದೆ ಎಂದು ನೀವು ವ್ಯಾಖ್ಯಾನ ಮಾಡುತ್ತಿದ್ದೀರಿ. ಇದು ಪೂರ್ವಮೀಮಾಂಸೆಗೆ ವಿರುದ್ಧವಾಗಿದೆ.

ಪೂರ್ವಮೀಮಾಂಸೆಯ 'ವಿಧಿಸ್ತುತ್ಯೋಃ ಸದಾ ವೃತ್ತಿಃ ಸಮಾನವಿಷಯೇಷ್ಯತೇ' ಎಂಬ ಅಧಿಕರಣದಲ್ಲಿ ವಿಧಿ ಹಾಗೂ ಅರ್ಥವಾದ ವಾಕ್ಯಗಳು ಸಮಾನವಿಷಯಕವಾಗಿರಬೇಕೆಂದು ಸಿದ್ಧಾಂತ ಮಾಡಲಾಗಿದೆ. ಅದಕ್ಕೆ ವಿರುದ್ಧವಾಗಿ ನೀವು ಅರ್ಥವಾದ ವಾಕ್ಯವು ಜೀವವಿಷಯಕವೆಂದು ಸಮರ್ಥನೆ ಮಾಡಿದರೆ ಪೂರ್ವಮೀಮಾಂಸೆಯ ವಿರೋಧವು ಪ್ರಾಪ್ತವಾಗುತ್ತದೆ.

ಮತ್ತೊಂದು ದೋಷ - ಅಹಮರ್ಥವು ನಿರುಪಾಧಿಕಪ್ರಿಯವೆಂದು ವ್ಯಾಖ್ಯಾನ ಮಾಡುವುದೂ ಕೂಡ ತಪ್ಪು. ಅಹಮರ್ಥವು ಚಿದಚಿತ್‌ಸಂವಲನಾತ್ಮಕವಾಗಿರುವುದರಿಂದ ಪರಚೈತನ್ಯಕ್ಕಿಂತ ವ್ಯಾವೃತ್ತವಾಗಿದೆ. ಇಂತಹ ಅಹಮರ್ಥಕ್ಕೆ ನಿರುಪಾಧಿಕಪ್ರಿಯತ್ವವನ್ನು 'ಆತ್ಮನಸ್ತು ಕಾಮಾಯ' ಎಂಬ ಶ್ರುತಿಯು ಪ್ರತಿಪಾದನೆ ಮಾಡುತ್ತಿದೆ ಎಂದು ನೀವು ವ್ಯಾಖ್ಯಾನ ಮಾಡುತ್ತೀರಿ. ಹಾಗಾದಲ್ಲಿ ಮೋಕ್ಷದಲ್ಲಿ ಅಹಮರ್ಥವೇ ಇಲ್ಲದ ಕಾರಣ ಮೋಕ್ಷವು ಪುರುಷಾರ್ಥರೂಪವಾಗಬೇಕಾದೀತು. ಆದ್ದರಿಂದ ನಿಮ್ಮ ಈ ಶ್ರುತಿವ್ಯಾಖ್ಯಾನವು ಅಸಾಧುವಾಗಿದೆ.

'ಉತ್ಕ್ರಮಿಷತೇ ಏವಂಭಾವಾದಿತ್ಯೌಡುಲೋಮಿಃ' ಎಂಬ ಎರಡನೆಯ ಸೂತ್ರ ವ್ಯಾಖ್ಯಾನವು ಅದ್ವೈತಿಗಳ ಪ್ರಕಾರ ಅಸಾಧುವಾಗಿದೆ. ಅವರು ವ್ಯಾಖ್ಯಾನ ಮಾಡುವಂತೆ 'ಉತ್ಕ್ರಾಂತಸ್ಯ' ಎಂದೇ

ಹೇಳಬೇಕು. ಹೊರತು, 'ಉತ್ಕ್ರಮಿಷ್ಯತೇ' ಎಂಬುದು ಅಸಾಧುವಾಗುತ್ತದೆ. ಉತ್ಕ್ರಾಂತನಾದ ಎಂದರೆ ಮುಕ್ತನಾದ ಜೀವನು ಬ್ರಹ್ಮನಿಂದ ಅಭಿನ್ನನಾಗಿದ್ದಾನೆಂದೇ ಅದ್ವೈತಿಗಳು ಹೇಳಬೇಕು. 'ಉತ್ಕ್ರಮಿಷ್ಯತಃ' ಎಂದು ಹೇಳಿದರೆ ಸಂಸಾರಾವಸ್ಥೆಯಲ್ಲಿರುವ ಜೀವನೇ ಅಭಿನ್ನನಾಗಿದ್ದಾನೆಂದು ಹೇಳಿದಂತಾಗುತ್ತದೆ.

'ಅವಸ್ಥಿತೇರಿತಿ ಕಾಶಕೃತ್ಸ್ನಃ' ಎಂಬ ಮೂರನೆಯ ಸೂತ್ರವ್ಯಾಖ್ಯಾನವೂ ಕೂಡ ಅದ್ವೈತಿಗಳ ಪ್ರಕಾರ ಅಸಾಧುವಾಗಿದೆ. 'ಅವಸ್ಥಿತೇಃ' ಎಂದು ಹೇಳಿದಾಗ 'ಬ್ರಹ್ಮಣಿ' ಎಂಬುದಾಗಿ ಧರ್ಮಿವಾಚಕವಾದ ಸಪ್ತಮ್ಯಂತಪದವನ್ನು ನಾವು ಯೋಜನೆ ಮಾಡುತ್ತೇವೆ. ಬ್ರಹ್ಮನಲ್ಲಿ ಸಮಸ್ತ ಜಗತ್ತು ಅವಸ್ಥಿತವಾಗಿದೆ ಎಂದರ್ಥ. ಆದರೆ ಅದ್ವೈತಿಗಳಾದ ನೀವು 'ಬ್ರಹ್ಮನು ಜೀವಸ್ವರೂಪದಿಂದ ಇರುವ ಕಾರಣ' ಎಂಬರ್ಥವನ್ನು ಹೇಳುತ್ತೀರಿ. 'ಅವಸ್ಥಿತೇಃ' ಎಂದು ಹೇಳಿದಾಗ ಕುತ್ರ ಎಂಬುದಾಗಿ ಆಧಾರದ ಆಕಾಂಕ್ಷೆಯು ಸಹಜವಾಗಿ ಬರುತ್ತದೆ. 'ಕಥಂ' ಎಂಬ ಪ್ರಕಾರದ ಆಕಾಂಕ್ಷೆಯು ಸಹಜವಾಗಿ ಬರುವುದಿಲ್ಲ. ಹೊರತು ಉತ್ಥಾಪಿತವಾಗಿ ಬರುತ್ತದೆ.

ಸಹಜವಾದ ಉತ್ಥಿತಾಕಾಂಕ್ಷೆಯಿಂದಲೇ ಅಧ್ಯಾಹಾರವನ್ನು ಮಾಡಿಕೊಳ್ಳಲು ಬರುವಾಗ ಅಸಹಜವಾದ ಉತ್ಥಾಪಿತ ಆಕಾಂಕ್ಷೆಯಿಂದ ಜೀವಭಾವೇನ ಎಂಬುದಾಗಿ ಪ್ರಕಾರದ ಅಧ್ಯಾಹಾರವನ್ನು ಮಾಡಿಕೊಳ್ಳುವುದು ಅಯುಕ್ತವಾಗುತ್ತದೆ. ಹಾಗಾಗಿ ನಾವು ಹೇಳುವಂತೆ 'ಬ್ರಹ್ಮಣಿ' ಎಂಬುದಾಗಿ ಧರ್ಮಿವಾಚಕಪದವನ್ನು ಅಧ್ಯಾಹಾರ ಮಾಡಿಕೊಳ್ಳುವುದೇ ಸಾಧುವಾಗಿದೆ.

ಈ ಮೂರು ಸೂತ್ರಗಳಲ್ಲಿ ಮೊದಲೆರಡು ಸೂತ್ರಗಳ ಪ್ರಮೇಯವು ಅಸ್ವರಸವಾಗಿದೆಯೆಂದು ಸ್ವತಃ ಅದ್ವೈತಿಗಳೇ ಅಂಗೀಕರಿಸಿದ್ದಾರೆ. ಮೂರನೆಯ ಸೂತ್ರವು ಪಾರಮಾರ್ಥಿಕವಾದ ಭೇದವನ್ನು ಪ್ರತಿಪಾದನೆ ಮಾಡುತ್ತಿರುವುದರಿಂದ ಸ್ವರಸವಾಗಿದೆಯೆಂದು ಹೇಳುತ್ತಾರೆ. ಆದರೆ ಪೃಥಗುಪದೇಶಾಧಿಕರಣದಲ್ಲಿ ನಾವು ಅಭೇದವನ್ನು ನಿರಾಕರಣೆ ಮಾಡುತ್ತೇವೆ. ಆ ಅಧಿಕರಣದಿಂದಲೇ ಮೂರನೆಯ ಸೂತ್ರದ ಪ್ರಮೇಯದಲ್ಲಿಯೂ ಅಸ್ವಾರಸ್ಯವಿದೆ ಎಂದು ಸ್ಪಷ್ಟವಾಗುವುದರಿಂದ ಪುನಃ ಇಲ್ಲಿ ಪ್ರತ್ಯೇಕವಾಗಿ ನಿರಾಕರಣೆ ಮಾಡಿರುವುದಿಲ್ಲ.

ಇಲ್ಲಿಗೆ ಸಮಾಕರ್ಷಾಧಿಕರಣದಲ್ಲಿ ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ ಇವುಗಳ ಅನುವಾದವು ಮತ್ತು ತಂತ್ರದೀಪಿಕೆ ಹಾಗೂ ಮತತ್ರಯ ವಿಮರ್ಶೆಯು ಸಮಾಪ್ತವಾಯಿತು.

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥

ಪ್ರಕೃತ್ಯಧಿಕರಣ

ಬ್ರಹ್ಮಸೂತ್ರ, ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ,
ತತ್ತ್ವಪ್ರದೀಪ, ತತ್ತ್ವಪ್ರಕಾಶಿಕಾ, ಭಾವದೀಪ

ವಿಶೇಷವಿಚಾರದೊಂದಿಗೆ ಕನ್ನಡಭಾಷೆಯಲ್ಲಿ ಅನುವಾದ

ಮತ್ತು

ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆ

॥ ಹರಿಃ ಓಂ ॥

॥ ಶ್ರೀವೇದವ್ಯಾಸಾಯ ನಮಃ ॥

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಗುರುಭ್ಯೋ ನಮಃ ॥

॥ ಶ್ರೀಮದ್ರಾಘವೇಂದ್ರತೀರ್ಥಗುರುಭ್ಯೋ ನಮಃ ॥

॥ ಶ್ರೀಗುರುಭ್ಯೋ ನಮಃ ॥

ಪ್ರಕೃತ್ಯಧಿಕರಣ

ಬ್ರಹ್ಮಸೂತ್ರ

'ಪ್ರಕೃತಿಶ್ಚ ಪ್ರತಿಜ್ಞಾದೃಷ್ಟಾಂತಾನುಪರೋಧಾತ್' ಎಂಬ ಸೂತ್ರಕ್ಕೆ ವ್ಯಾಖ್ಯಾನ

ಬ್ರಹ್ಮಸೂತ್ರಮ್ – ।। ಪ್ರಕೃತಿಶ್ಚ ಪ್ರತಿಜ್ಞಾದೃಷ್ಟಾನ್ತಾನುಪರೋಧಾತ್ ।।

ಸೂತ್ರಾರ್ಥ - ಈಶ್ವರನು ಪುಲ್ಲಿಂಗಶಬ್ದಗಳಿಂದಷ್ಟೇ ಅಲ್ಲದೇ ಸ್ತ್ರೀಲಿಂಗ ಶಬ್ದಗಳಿಂದಲೂ ಪ್ರತಿಪಾದ್ಯನಾಗಿದ್ದಾನೆ. ''ಎಲ್ಲಾ ನಾಮಗಳು ವಿಷ್ಣುವಿನಲ್ಲಿ ಇವೆ'' ಎಂಬ ಪ್ರತಿಜ್ಞೆ ಹಾಗೂ ನದಿಗಳು ಸಮುದ್ರವನ್ನು ಸೇರುವ ದೃಷ್ಟಾಂತ ವಾಕ್ಯಗಳಿಗೆ ಅನುಗುಣವಾಗಿ ಪ್ರಕೃತಿಶಬ್ದದಿಂದ ವಾಚ್ಯನಾದವನು ವಿಷ್ಣುವೇ ಆಗಿದ್ದಾನೆಂದು ನಿರ್ಣಯವಾಗುತ್ತದೆ.

ಅರ್ಥ -- ಈಶ್ವರನು ಕೇವಲ ಪುಲ್ಲಿಂಗಶಬ್ದಗಳಿಂದಷ್ಟೇ ಪ್ರತಿಪಾದ್ಯನಲ್ಲ. ಪ್ರಕೃತಿಃ = ಸೈಷಾ ಪ್ರಕೃತಿಃ ಇತ್ಯಾದಿ ಶ್ರುತಿಗಳಲ್ಲಿ ಹೇಳಲ್ಪಟ್ಟ ಪ್ರಕೃತಿ ಮೊದಲಾದ ಸ್ತ್ರೀಲಿಂಗ ಶಬ್ದಗಳಿಂದಲೂ ಪ್ರತಿಪಾದ್ಯನಾಗಿದ್ದಾನೆ. ಏಕೆಂದರೆ ಹೀಗೆಯೇ ಸ್ತ್ರೀಲಿಂಗಶಬ್ದದಿಂದ ಪ್ರತಿಪಾದನೆಯನ್ನು ಹೇಳಿದರೆ ಮಾತ್ರ ಪ್ರತಿಜ್ಞಾದೃಷ್ಟಾಂತಾನುಪರೋಧಾತ್ = 'ಏತಮೇವ ಪುರುಷಂ ಸರ್ವಾಣಿ ನಾಮಾನಿ ಅಭವದಂತಿ' ಎಂಬ ಪ್ರತಿಜ್ಞಾವಾಕ್ಯವು ಮತ್ತು 'ಯಥಾ ನದ್ಯಃ ಸ್ಯಂದಮಾನಾಃ' ಇತ್ಯಾದಿ ನದೀ, ಸಮುದ್ರ ದೃಷ್ಟಾಂತವಾಕ್ಯವು ಅವಿರುದ್ಧವಾಗುತ್ತದೆ. ಹೀಗೊಪ್ಪದಿದ್ದರೆ ಪ್ರತಿಜ್ಞೆ ಹಾಗೂ ದೃಷ್ಟಾಂತವಾಕ್ಯಗಳ ವಿರೋಧ ಬರಬೇಕಾದೀತು.

ಜಗದ್ಗುರು ಶ್ರೀಮಧ್ವಾಚಾರ್ಯರಿಂದ ವಿರಚಿತವಾದ

ಬ್ರಹ್ಮಸೂತ್ರಭಾಷ್ಯ

ಸ್ತ್ರೀಶಬ್ದಗಳೂ ಕೂಡ ಪರಮಾತ್ಮನಲ್ಲೇ ಇದೆ

ब्रह्मसूत्रभाष्यम् – स्त्रीशब्दा अपि तस्मिन्नेवेत्याह –

।। प्रकृतिश्च प्रतिज्ञादृष्टान्तानुपरोधात् ।।

ಅನುವಾದ - ಸ್ತ್ರೀಲಿಂಗ ಶಬ್ದಗಳೂ ಕೂಡ ಪರಮಾತ್ಮನನ್ನೇ ಪ್ರತಿಪಾದನೆ ಮಾಡುತ್ತಿವೆ ಎಂದು ಸಮರ್ಥಿಸುತ್ತಿದ್ದಾರೆ. 'ಪ್ರಕೃತಿಶ್ಚ ಪ್ರತಿಜ್ಞಾದೃಷ್ಟಾಂತಾನುಪರೋಧಾತ್' 'ಶ್ರುತಿಯಲ್ಲಿರುವ ಪ್ರತಿಜ್ಞಾವಾಕ್ಯ ದೃಷ್ಟಾಂತವಾಕ್ಯಗಳ ಅನುಗುಣ್ಯದಿಂದ ಪ್ರಕೃತಿಶಬ್ದ ವಾಚ್ಯನಾದವನು ಪರಮಾತ್ಮನೆಂದು ತಿಳಿಯುತ್ತದೆ.'

ಪ್ರತಿಪದಾರ್ಥ -- ಈ ಅಧಿಕರಣದಲ್ಲಿ ಸ್ತ್ರೀಶಬ್ದಗಳನ್ನು ಸಮನ್ವಯ ಮಾಡುತ್ತಿದ್ದಾರೆ. ಸಿದ್ಧಾಂತವನ್ನು ಮಾಡಲು ಸೂತ್ರಕ್ಕೆ ಅವತಾರಿಕೆ ನೀಡುತ್ತಿದ್ದಾರೆ. –

ತಸ್ಮಿನ್ನೇವ = ಆ ಪರಮಾತ್ಮನಲ್ಲಿಯೇ, ಸ್ತ್ರೀಶಬ್ದಾ ಅಪಿ = ಸ್ತ್ರೀಲಿಂಗಾದಿ ಶಬ್ದಗಳೂ ಕೂಡ ಸಮನ್ವಯವಾಗುತ್ತವೆ. ಇತ್ಯಾಹ = ಹೀಗೆ ಸೂತ್ರಕಾರರು ಹೇಳುತ್ತಿದ್ದಾರೆ. ಪ್ರಕೃತಿಶ್ಚ = ಪ್ರಕೃತಿ ಶಬ್ದವು ಪರಮಾತ್ಮನಲ್ಲಿಯೇ ಸಮನ್ವಯವಾಗುತ್ತದೆ. ಏಕೆಂದರೆ ಪ್ರತಿಜ್ಞಾದೃಷ್ಟಾಂತಾನುಪರೋಧಾತ್ = ಪ್ರತಿಜ್ಞಾವಾಕ್ಯ ದೃಷ್ಟಾಂತವಾಕ್ಯಗಳ ಅನುಗುಣ್ಯದಿಂದ

'ಪ್ರತಿಜ್ಞಾದೃಷ್ಟಾಂತಾನುಪರೋಧಾತ್' ಎಂಬ ಹೇತುವಿನ ವಿವರಣೆ

ब्रह्मसूत्रभाष्यम् –'हन्तैतमेव पुरुषं सर्वाणि नामान्यभिवदन्ति यथा नद्यः स्यान्दमानाः समुद्रायणाः समुद्रमभिविशन्त्येवमेवैतानि नामानि सर्वाणि पुरुषमभिविशन्ति' इति प्रतिज्ञादृष्टान्तानुपरोधात् प्रकृतिशब्दवाच्योऽपि स एव ।।१।।

ಅನುವಾದ - ಪುರುಷಶಬ್ದವಾಚ್ಯನಾದ ವಿಷ್ಣುವನ್ನೇ ಸಕಲ ನಾಮಾತ್ಮಕ ಶಬ್ದಗಳೂ ಮುಖ್ಯವೃತ್ತಿಯಿಂದ ಪ್ರತಿಪಾದನೆ ಮಾಡುತ್ತಿವೆ. ಇದು ಪ್ರತಿಜ್ಞಾವಾಕ್ಯ. ಸಮುದ್ರವನ್ನೇ ಆಶ್ರಯಿಸುವ ನದಿಗಳು ಸಮುದ್ರವನ್ನು ಪ್ರವೇಶಿಸುವಂತೆ ಸಕಲವಿಧವಾದ ನಾಮಾತ್ಮಕಶಬ್ದಗಳು ಪುರುಷನಾಮಕನಾದ ಪರಮಾತ್ಮನನ್ನೇ ಪ್ರವೇಶಿಸುತ್ತವೆ. ಇದು ದೃಷ್ಟಾಂತವಾಕ್ಯ. ಹೀಗೆ ಪ್ರತಿಜ್ಞಾಹಾಗೂ ದೃಷ್ಟಾಂತ ವಾಕ್ಯಗಳ ಅನುಗುಣ್ಯದಿಂದ ಪ್ರಕೃತಿಶಬ್ದವಾಚ್ಯನಾದವನು ಪರಮಾತ್ಮನೆಂದು ನಿರ್ಣಯವಾಗುತ್ತದೆ.

ಪ್ರತಿಪದಾರ್ಥ -- ಸೂತ್ರದಲ್ಲಿ ಸ್ತ್ರೀಲಿಂಗಶಬ್ದಗಳ ಸಮನ್ವಯಕ್ಕಾಗಿ ಪ್ರತಿಜ್ಞಾ- ದೃಷ್ಟಾಂತಾನುಪರೋಧಾತ್ ಎಂಬ ಹೇತುವನ್ನು ಪ್ರಯೋಗಿಸಿದ್ದಾರೆ. ಈ ಹೇತು ಅಪ್ರಯೋಜಕವಾಗಿದೆಯಲ್ಲವೇ? ಎಂಬ ಆಶಂಕೆಯನ್ನು ಪರಿಹರಿಸಲು ವಿಪಕ್ಷದಲ್ಲಿ ಬಾಧಕತರ್ಕವನ್ನು ಹೇಳುತ್ತಾ ವ್ಯಾಖ್ಯಾನಿಸುತ್ತಿದ್ದಾರೆ. –

ಪುರುಷಂ = ಪುರುಷಶಬ್ದವಾಚ್ಯನಾದ, ಏತಮೇವ = ಪೂರ್ವಪ್ರಕೃತನಾದ ಪರಮಾತ್ಮನನ್ನೇ, ಸರ್ವಾಣಿ ನಾಮಾನಿ = ಸಕಲ ವಿಧವಾದ ನಾಮಾತ್ಮಕ ಶಬ್ದಗಳು, ಅಭಿವದಂತಿ = ಪರಮಮುಖ್ಯವೃತ್ತಿಯಿಂದ ಪ್ರತಿಪಾದಿಸುತ್ತವೆ, ಇಷ್ಟು ಪ್ರತಿಜ್ಞಾವಾಕ್ಯ. ಈ ವಿಷಯದಲ್ಲಿ ದೃಷ್ಟಾಂತ ಹೀಗಿದೆ - ಯಥಾ = ಯಾವರೀತಿಯಾಗಿ, ಸಮುದ್ರಾಯಣಾಃ = ಸಮುದ್ರವನ್ನೇ ಆಶ್ರಯಿಸುವ, ನದ್ಯಃ = ನದಿಗಳು, ಸಮುದ್ರಂ = ಸಮುದ್ರಕ್ಕೆ ಅಭಿಮುಖವಾಗಿ, ಅಭಿವಿಶಂತಿ = ಪ್ರವೇಶಿಸುತ್ತವೆ. ಏವ ಮೇವ = ಇದೇ ರೀತಿಯಾಗಿ, ಏತಾನಿ = ಪ್ರಮಿತವಾದ ಸಕಲ ನಾಮಾತ್ಮಕ ಶಬ್ದಗಳು, ಪುರುಷಂ = ಪರಮಾತ್ಮನನ್ನು, ಅಭಿವಿಶಂತಿ = ಎಲ್ಲರೀತಿಯಿಂದ ಅಭಿಮುಖವಾಗಿ ಪ್ರವೇಶಿಸುತ್ತವೆ. ಇತಿ = ಹೀಗೆ, ದೃಷ್ಟಾಂತಾನುಪರೋಧಾತ್ = ದೃಷ್ಟಾಂತವಾಕ್ಯಗಳ ಅನುಗುಣ್ಯದಿಂದ, ಪ್ರಕೃತಿ ಶಬ್ದವಾಚ್ಯೋಽಪಿ = ಪ್ರಕೃತಿಶಬ್ದವಾಚ್ಯನಾದವನೂ ಕೂಡ, ಸ ಏವ = ಮಹಾವಿಷ್ಣುವೇ ಆಗುತ್ತಾನೆ.

ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ

ಸತ್ತರ್ಕದೀಪಾವಳಿ

ಸ್ತ್ರೀವಾಚಕಶಬ್ದಗಳ ಸಮಾಕರ್ಷಣ ಸಾಧ್ಯವಿಲ್ಲವೆಂದು ಆಕ್ಷೇಪ

सत्तर्कदीपावलिः – ननु परमपुरुषे स्त्रीवाचकशब्दासम्भवात् । न ततः समाकर्षः स्त्रीषु तेषां किन्तु तास्वेव मुख्यास्ते इति पूर्वपक्षं प्रतिक्षिपतीत्याह – स्त्रीत्यादिना ।

ಪುರುಷೋತ್ತಮನಾದ ಶ್ರೀಹರಿಯಲ್ಲಿ ಸ್ತ್ರೀಲಿಂಗಶಬ್ದಗಳ ಸಮನ್ವಯವು ಅಸಂಭಾವಿತವಾಗಿದೆ. ಪರಮಾತ್ಮನಲ್ಲೇ ಪ್ರಸಿದ್ಧವಾದ ಸ್ತ್ರೀವಾಚಕಶಬ್ದಗಳನ್ನು ಸಮಾಕರ್ಷಣ ಮಾಡಿ ಸ್ತ್ರೀಯರಲ್ಲಿ ಪ್ರಯೋಗಿಸುತ್ತೇವೆ ಎಂದು ಹೇಳಲು ಸಾಧ್ಯವಿಲ್ಲ. ಸ್ತ್ರೀಯರಲ್ಲಿಯೇ ಈ ಶಬ್ದಗಳು ಮುಖ್ಯವಾದ ತಾತ್ಪರ್ಯವುಳ್ಳವುಗಳಾಗಿವೆ. ಈ ಪೂರ್ವಪಕ್ಷವನ್ನು ಪ್ರತಿಕ್ಷೇಪ ಮಾಡಲು 'ಸ್ತ್ರೀಶಬ್ದಾ' ಇತ್ಯಾದಿ ಭಾಷ್ಯವಾಕ್ಯವು ಹೊರಟಿದೆ.

ಶ್ರುತಿಯಲ್ಲಿ ನೀಡಿದ ನದಿಯ ದೃಷ್ಟಾಂತ ಅತ್ಯಂತ ಅರ್ಥಗರ್ಭಿತ

सत्तर्कदीपावलिः – प्रकृतं परमपुरुषमेव सर्वाणि नामानि सर्वतो मुख्यतश्च वदन्तीति प्रतिज्ञाय नदीवन्मध्ये स्थिरचरव्यवहारान् घटयन्त्यपि परमपुरुषैकायनस्वप्रवृत्तिनिमित्तधर्माण्यतः तमेव सर्वतो मुख्यतश्च वदन्तीति दृष्टान्ताभिधानात् । प्रकृतिशब्दमुख्यार्थोऽपि स एव । एवं सति तयोरनुपरोधात्। अन्यथोपरोधादित्यर्थः ।

'हन्त इतमेव' ಎಂಬ ಶ್ರುತಿವಾಕ್ಯವು ಸಕಲ ನಾಮಗಳಿಂದ ಪರಮ ಪುರುಷನೇ ಮುಖ್ಯವಾಗಿ ಪ್ರತಿಪಾದ್ಯನಾಗಿದ್ದಾನೆ ಎಂದು ಮೊದಲು ಪ್ರತಿಜ್ಞೆ ಮಾಡಿದೆ. ಅನಂತರ ನದಿಯ ದೃಷ್ಟಾಂತವನ್ನು ಹೇಳಿ, ಪುನಃ ಸಕಲ ನಾಮಗಳು ಅವನಲ್ಲಿಯೇ ಸಮನ್ವಯಗೊಂಡಿವೆ ಎಂದು ಹೇಳಿದೆ. ಇದರಿಂದ ಏನು ತಿಳಿಯುತ್ತದೆ ಎಂದರೆ ನದಿಯು ಮಧ್ಯದಲ್ಲಿರುವ ಸ್ಥಿರ-ಚರ ವಸ್ತುಗಳಿಗೆ ಆಶ್ರಯವಾಗಿದೆ. ಇವುಗಳಿಗೆ ಆಶ್ರಯವನ್ನು ನೀಡಿ, ಕೊನೆಯಲ್ಲಿ ಸಮುದ್ರವನ್ನು

ಅನುವಾದ - ಪುರುಷಶಬ್ದವಾಚ್ಯನಾದ ವಿಷ್ಣುವನ್ನೇ ಸಕಲ ನಾಮಾತ್ಮಕ ಶಬ್ದಗಳೂ ಮುಖ್ಯವೃತ್ತಿಯಿಂದ ಪ್ರತಿಪಾದನೆ ಮಾಡುತ್ತಿವೆ. ಇದು ಪ್ರತಿಜ್ಞಾವಾಕ್ಯ. ಸಮುದ್ರವನ್ನೇ ಆಶ್ರಯಿಸುವ ನದಿಗಳು ಸಮುದ್ರವನ್ನು ಪ್ರವೇಶಿಸುವಂತೆ ಸಕಲವಿಧವಾದ ನಾಮಾತ್ಮಕಶಬ್ದಗಳು ಪುರುಷನಾಮಕನಾದ ಪರಮಾತ್ಮನನ್ನೇ ಪ್ರವೇಶಿಸುತ್ತವೆ. ಇದು ದೃಷ್ಟಾಂತವಾಕ್ಯ. ಹೀಗೆ ಪ್ರತಿಜ್ಞಾಹಾಗೂ ದೃಷ್ಟಾಂತ ವಾಕ್ಯಗಳ ಅನುಗುಣ್ಯದಿಂದ ಪ್ರಕೃತಿಶಬ್ದವಾಚ್ಯನಾದವನು ಪರಮಾತ್ಮನೆಂದು ನಿರ್ಣಯವಾಗುತ್ತದೆ.

ಪ್ರತಿಪದಾರ್ಥ -- ಸೂತ್ರದಲ್ಲಿ ಸ್ತ್ರೀಲಿಂಗಶಬ್ದಗಳ ಸಮನ್ವಯಕ್ಕಾಗಿ ಪ್ರತಿಜ್ಞಾ- ದೃಷ್ಟಾಂತಾನುಪರೋಧಾತ್ ಎಂಬ ಹೇತುವನ್ನು ಪ್ರಯೋಗಿಸಿದ್ದಾರೆ. ಈ ಹೇತು ಅಪ್ರಯೋಜಕವಾಗಿದೆಯಲ್ಲವೇ? ಎಂಬ ಆಶಂಕೆಯನ್ನು ಪರಿಹರಿಸಲು ವಿಪಕ್ಷದಲ್ಲಿ ಬಾಧಕತರ್ಕವನ್ನು ಹೇಳುತ್ತಾ ವ್ಯಾಖ್ಯಾನಿಸುತ್ತಿದ್ದಾರೆ. –

ಪುರುಷಂ = ಪುರುಷಶಬ್ದವಾಚ್ಯನಾದ, ಏತಮೇವ = ಪೂರ್ವಪ್ರಕೃತನಾದ ಪರಮಾತ್ಮನನ್ನೇ, ಸರ್ವಾಣಿ ನಾಮಾನಿ = ಸಕಲ ವಿಧವಾದ ನಾಮಾತ್ಮಕ ಶಬ್ದಗಳು, ಅಭಿವದಂತಿ = ಪರಮಮುಖ್ಯವೃತ್ತಿಯಿಂದ ಪ್ರತಿಪಾದಿಸುತ್ತವೆ, ಇಷ್ಟು ಪ್ರತಿಜ್ಞಾವಾಕ್ಯ. ಈ ವಿಷಯದಲ್ಲಿ ದೃಷ್ಟಾಂತ ಹೀಗಿದೆ - ಯಥಾ = ಯಾವರೀತಿಯಾಗಿ, ಸಮುದ್ರಾಯಣಾಃ = ಸಮುದ್ರವನ್ನೇ ಆಶ್ರಯಿಸುವ, ನದ್ಯಃ = ನದಿಗಳು, ಸಮುದ್ರಂ = ಸಮುದ್ರಕ್ಕೆ ಅಭಿಮುಖವಾಗಿ, ಅಭಿವಿಶಂತಿ = ಪ್ರವೇಶಿಸುತ್ತವೆ. ಏವ ಮೇವ = ಇದೇ ರೀತಿಯಾಗಿ, ಏತಾನಿ = ಪ್ರಮಿತವಾದ ಸಕಲ ನಾಮಾತ್ಮಕ ಶಬ್ದಗಳು, ಪುರುಷಂ = ಪರಮಾತ್ಮನನ್ನು, ಅಭಿವಿಶಂತಿ = ಎಲ್ಲರೀತಿಯಿಂದ ಅಭಿಮುಖವಾಗಿ ಪ್ರವೇಶಿಸುತ್ತವೆ. ಇತಿ = ಹೀಗೆ, ದೃಷ್ಟಾಂತಾನುಪರೋಧಾತ್ = ದೃಷ್ಟಾಂತವಾಕ್ಯಗಳ ಅನುಗುಣ್ಯದಿಂದ, ಪ್ರಕೃತಿ ಶಬ್ದವಾಚ್ಯೋऽಪಿ = ಪ್ರಕೃತಿಶಬ್ದವಾಚ್ಯನಾದವನೂ ಕೂಡ, ಸ ಏವ = ಮಹಾವಿಷ್ಣುವೇ ಆಗುತ್ತಾನೆ.

ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ

ಸತ್ತರ್ಕದೀಪಾವಳಿ

ಸ್ತ್ರೀವಾಚಕಶಬ್ದಗಳ ಸಮಾಕರ್ಷಣ ಸಾಧ್ಯವಿಲ್ಲವೆಂದು ಆಕ್ಷೇಪ

सत्तर्कदीपावलिः – ननु परमपुरुषे स्त्रीवाचकशब्दासम्भवात् । न ततः समाकर्षः स्त्रीषु तेषां किन्तु तास्वेव मुख्यास्ते इति पूर्वपक्षं प्रतिक्षिपतीत्याह – स्त्रीत्यादिना ।

ಪುರುಷೋತ್ತಮನಾದ ಶ್ರೀಹರಿಯಲ್ಲಿ ಸ್ತ್ರೀಲಿಂಗಶಬ್ದಗಳ ಸಮನ್ವಯವು ಅಸಂಭಾವಿತವಾಗಿದೆ. ಪರಮಾತ್ಮನಲ್ಲೇ ಪ್ರಸಿದ್ಧವಾದ ಸ್ತ್ರೀವಾಚಕಶಬ್ದಗಳನ್ನು ಸಮಾಕರ್ಷಣ ಮಾಡಿ ಸ್ತ್ರೀಯರಲ್ಲಿ ಪ್ರಯೋಗಿಸುತ್ತೇವೆ ಎಂದು ಹೇಳಲು ಸಾಧ್ಯವಿಲ್ಲ. ಸ್ತ್ರೀಯರಲ್ಲಿಯೇ ಈ ಶಬ್ದಗಳು ಮುಖ್ಯವಾದ ತಾತ್ಪರ್ಯವುಳ್ಳವುಗಳಾಗಿವೆ. ಈ ಪೂರ್ವಪಕ್ಷವನ್ನು ಪ್ರತಿಕ್ಷೇಪ ಮಾಡಲು 'ಸ್ತ್ರೀಶಬ್ದಾ' ಇತ್ಯಾದಿ ಭಾಷ್ಯವಾಕ್ಯವು ಹೊರಟಿದೆ.

ಶ್ರುತಿಯಲ್ಲಿ ನೀಡಿದ ನದಿಯ ದೃಷ್ಟಾಂತ ಅತ್ಯಂತ ಅರ್ಥಗರ್ಭಿತ

सत्तर्कदीपावलिः – प्रकृतं परमपुरुषमेव सर्वाणि नामानि सर्वतो मुख्यतश्च वदन्तीति प्रतिज्ञाय नदीवन्मध्ये स्थिरचरव्यवहारान् घटयन्त्यपि परमपुरुषैकायनस्वप्रवृत्तिनिमित्तधर्माण्यतः तमेव सर्वतो मुख्यतश्च वदन्तीति दृष्टान्ताभिधानात् । प्रकृतिशब्दमुख्यार्थोऽपि स एव । एवं सति तयोरनुपरोधात्। अन्यथोपरोधादित्यर्थः ।

'हन्त इतमेव' ಎಂಬ ಶ್ರುತಿವಾಕ್ಯವು ಸಕಲ ನಾಮಗಳಿಂದ ಪರಮ ಪುರುಷನೇ ಮುಖ್ಯವಾಗಿ ಪ್ರತಿಪಾದ್ಯನಾಗಿದ್ದಾನೆ ಎಂದು ಮೊದಲು ಪ್ರತಿಜ್ಞೆ ಮಾಡಿದೆ. ಅನಂತರ ನದಿಯ ದೃಷ್ಟಾಂತವನ್ನು ಹೇಳಿ, ಪುನಃ ಸಕಲ ನಾಮಗಳು ಅವನಲ್ಲಿಯೇ ಸಮನ್ವಯಗೊಂಡಿವೆ ಎಂದು ಹೇಳಿದೆ. ಇದರಿಂದ ಏನು ತಿಳಿಯುತ್ತದೆ ಎಂದರೆ ನದಿಯು ಮಧ್ಯದಲ್ಲಿರುವ ಸ್ಥಿರ-ಚರ ವಸ್ತುಗಳಿಗೆ ಆಶ್ರಯವಾಗಿದೆ. ಇವುಗಳಿಗೆ ಆಶ್ರಯವನ್ನು ನೀಡಿ, ಕೊನೆಯಲ್ಲಿ ಸಮುದ್ರವನ್ನು

ಸೇರುತ್ತದೆ. ಅದರಂತೆ ಈ ಎಲ್ಲಾ ಶಬ್ದ ಪ್ರವಾಹವೂ ಕೂಡ ಲೋಕದಲ್ಲಿರುವ ಸ್ಥಿರ-ಚರ ವಸ್ತುಗಳ ವ್ಯವಹಾರಕ್ಕೆ ಆಶ್ರಯವಾಗಿದ್ದು, ಅನಂತರ ತನ್ನಲ್ಲಿರುವ ಮುಖ್ಯಪ್ರವೃತ್ತಿನಿಮಿತ್ತ-ಧರ್ಮವನ್ನು ಭಗವಂತನಲ್ಲಿ ಕೊಂಡೊಯ್ಯುತ್ತವೆ. ಆದ್ದರಿಂದ ಪರಮಾತ್ಮನನ್ನೇ ಸಕಲ ಶಬ್ದಗಳ ಮುಖ್ಯಪ್ರತಿಪಾದ್ಯನೆಂದು ಈ ದೃಷ್ಟಾಂತದ ಬಲದಿಂದ ತಿಳಿಯಬೇಕು. ಹಾಗಾಗಿ ಪ್ರಕೃತ ಪ್ರಕೃತಿ ಶಬ್ದದ ಮುಖ್ಯಾರ್ಥನೂ ಕೂಡ ಆ ಮಹಾವಿಷ್ಣುವೇ ಆಗಿದ್ದಾನೆ. ಹೀಗೆ ಹೇಳಿದಾಗ ಪ್ರತಿಜ್ಞಾ ಹಾಗೂ ದೃಷ್ಟಾಂತಗಳಿಗೆ ಅನುಗುಣ್ಯವು ಉಪಪಾದಿತವಾಗುತ್ತದೆ. ಇಲ್ಲದಿದ್ದರೆ ವೈಗುಣ್ಯವು ಪ್ರಾಪ್ತವಾಗುತ್ತದೆ.

ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ

ತತ್ತ್ವಪ್ರದೀಪ

ಸ್ತ್ರೀತ್ವ ಹಾಗೂ ಪುಂಸ್ತ್ವಗಳಿಗೆ ಸಾಮಾನಾಧಿಕರಣ್ಯ ಹೇಗೆ ?

तत्वप्रदीपः – यद्यपि परत्वावरत्वादिकमपेक्षाभेदादेकत्र युगपदुपलभ्यते । एकबहुभावः कार्यकारणभावश्च कथञ्चिद्युज्यते । न तथा स्त्रीपुम्भावो युगपदेकत्र दृष्टः । तस्मान्न स्त्रीशब्दाभिधेयः परमपुमानित्यत आह - प्रकृतिश्च प्रतिज्ञादृष्टान्तानुपरोधात् ।

ವಾಸ್ತವಿಕವಾಗಿ ಪರತ್ವ ಅವರತ್ವಗಳು ವಿವಕ್ಷಾಭೇದದಿಂದ ಒಂದೇ ಕಡೆ ಉಪಲಬ್ಧವಾಗುತ್ತವೆ. ಏಕತ್ವ ಬಹುತ್ವಗಳು ಕಾರ್ಯತ್ವ, ಕಾರಣತ್ವಗಳೂ ಕೂಡ ಒಂದೇ ಪದಾರ್ಥದಲ್ಲಿ ವಿವಕ್ಷಾಭೇದದಿಂದ ಕಥಂಚಿತ್ ಉಪಪನ್ನವಾಗುತ್ತವೆ. ಆದರೆ ಸ್ತ್ರೀತ್ವ ಹಾಗೂ ಪುಂಸ್ತ್ವಗಳು ಯಾವುದೇ ಕಾರಣದಿಂದಲೂ ಒಂದೇ ವಸ್ತುವಿನಲ್ಲಿ ಬರುವುದು ಎಲ್ಲಿಯೂ ಕಂಡಿಲ್ಲ. ಆದ್ದರಿಂದ ಪರಮಪುರುಷನೆನಿಸಿದ ವಿಷ್ಣುವಿನಲ್ಲಿ ಸ್ತ್ರೀಶಬ್ದಪ್ರತಿಪಾದ್ಯತ್ವವನ್ನು ಹೇಳಲು ಹೇಗೆ ಸಾಧ್ಯ ? ಈ ಪ್ರಶ್ನೆಗೆ ಉತ್ತರವನ್ನು ನೀಡುವುದಕ್ಕಾಗಿ 'ಪ್ರಕೃತಿಶ್ಚ ಪ್ರತಿಜ್ಞಾದೃಷ್ಟಾಂತಾನುಪರೋಧಾತ್' ಎಂಬ ಸೂತ್ರವು ಹೊರಟಿದೆ.

ಸೂತ್ರದಲ್ಲಿರುವ ಚಕಾರದಿಂದ ಸಕಲ ಸ್ತ್ರೀಲಿಂಗ ಶಬ್ದಗಳು ವಿವಕ್ಷಿತ

तत्वप्रदीपः – स्त्रीशब्दा अपीत्यादिभाष्योदितः प्रकृतिश्चेति चकारार्थः । न केवलं प्रकृतिशब्देनैव वाच्य इत्युच्यते । स्त्रीशब्दानां सर्वेषामपि वाच्य एवेति । ''पुरुषमभिविशन्ति' इति । मुख्यवाचकत्वेन विशन्तीत्यर्थः । अभिवदन्तीति प्रतिज्ञातत्वात् ।।छ।।

'ಸ್ತ್ರೀಶಬ್ದಾ ಅಪಿ' ಎಂಬ ಭಾಷ್ಯದ ವಾಕ್ಯದಲ್ಲಿರುವ ಅಪಿ ಪದವು ಪ್ರಕೃತಿಶ್ಚ ಎಂಬ ಸೂತ್ರದಲ್ಲಿರುವ ಚಕಾರದ ಅರ್ಥವಾಗಿದೆ. ಪ್ರಕೃತಿಯೆಂಬ ಶಬ್ದದಿಂದಷ್ಟೇ ವಿಷ್ಣುವಾಚ್ಯನಲ್ಲ. ಸ್ತ್ರೀಲಿಂಗದಲ್ಲಿ ಎಲ್ಲಾ ಶಬ್ದಗಳಿಂದಲೂ ಕೂಡ ವಾಚ್ಯನೇ ಆಗುತ್ತಾನೆ ಎಂಬುದು ಇದರ ಅಭಿಪ್ರಾಯ. 'ಪುರುಷಮಭಿವಿಶಂತಿ' ಎಂಬ ಶ್ರುತಿಯಲ್ಲಿರುವ 'ಅಭಿವಿಶಂತಿ' ಶಬ್ದಕ್ಕೆ ಮುಖ್ಯವಾಚಕತ್ವೇನ ಪ್ರತಿಪಾದ್ಯನಾಗುತ್ತಾನೆ ಎಂದರ್ಥ. ಏಕೆಂದರೆ ನಾಮಾನಿ ಅಭಿವದಂತಿ ಎಂಬುದಾಗಿ ಎಲ್ಲಾ ಶಬ್ದಗಳು ಅವನನ್ನೇ ಮುಖ್ಯವಾಗಿ ಪ್ರತಿಪಾದನೆ ಮಾಡುತ್ತವೆ ಎಂಬ ಪ್ರತಿಜ್ಞೆಯನ್ನು ಮಾಡಲಾಗಿದೆ.

ಶ್ರೀಮಜ್ಜಯತೀರ್ಥಭಿಕ್ಷುಗಳಿಂದ ವಿರಚಿತವಾದ

ತತ್ವಪ್ರಕಾಶಿಕಾ

ಸ್ತ್ರೀಲಿಂಗತ್ವ ಎಂಬುದು ಪೂರ್ವಪಕ್ಷ ಯುಕ್ತಿ

अत्र स्त्रीलिङ्गत्वलिङ्गेनान्यत्रैव प्रसिद्धानां स्त्रीशब्दानां परमात्मनि समन्वयप्रतिपादनादस्ति शास्त्रादिसङ्गतिः ।

ಪ್ರಕೃತ್ಯಧಿಕರಣವು ಪ್ರಾರಂಭವಾಗುತ್ತಿದೆ. ಈ ಅಧಿಕರಣದಲ್ಲಿ ಸ್ತ್ರೀಲಿಂಗತ್ವ ಎಂಬುದು ಪೂರ್ವಪಕ್ಷ ಯುಕ್ತಿ. ಈ ಲಿಂಗದಿಂದ ಎಲ್ಲ ಬಗೆಯ ಸ್ತ್ರೀಲಿಂಗ ಶಬ್ದಗಳು ಅನ್ಯತ್ರೈವಪ್ರಸಿದ್ಧವಾಗಿವೆ. ಇಂತಹ ಶಬ್ದಗಳನ್ನೆಲ್ಲಾ ಪರಮಾತ್ಮನಲ್ಲಿ ಸಮನ್ವಯ ಮಾಡುವುದಕ್ಕಾಗಿ ಈ ಅಧಿಕರಣ ಹೊರಟಿದೆ. ಆದ್ದರಿಂದ ಪ್ರಕೃತ್ಯಧಿಕರಣಕ್ಕೆ ಶಾಸ್ತ್ರಸಂಗತಿ, ಅಧ್ಯಾಯಸಂಗತಿ ಹಾಗೂ ಪಾದಸಂಗತಿಗಳಿರುತ್ತವೆ.

ಸೇರುತ್ತದೆ. ಅದರಂತೆ ಈ ಎಲ್ಲಾ ಶಬ್ದ ಪ್ರವಾಹವೂ ಕೂಡ ಲೋಕದಲ್ಲಿರುವ ಸ್ಥಿರ-ಚರ ವಸ್ತುಗಳ ವ್ಯವಹಾರಕ್ಕೆ ಆಶ್ರಯವಾಗಿದ್ದು, ಅನಂತರ ತನ್ನಲ್ಲಿರುವ ಮುಖ್ಯಪ್ರವೃತ್ತಿನಿಮಿತ್ತ-ಧರ್ಮವನ್ನು ಭಗವಂತನಲ್ಲಿ ಕೊಂಡೊಯ್ಯುತ್ತವೆ. ಆದ್ದರಿಂದ ಪರಮಾತ್ಮನನ್ನೇ ಸಕಲ ಶಬ್ದಗಳ ಮುಖ್ಯಪ್ರತಿಪಾದ್ಯನೆಂದು ಈ ದೃಷ್ಟಾಂತದ ಬಲದಿಂದ ತಿಳಿಯಬೇಕು. ಹಾಗಾಗಿ ಪ್ರಕೃತ ಪ್ರಕೃತಿ ಶಬ್ದದ ಮುಖ್ಯಾರ್ಥನೂ ಕೂಡ ಆ ಮಹಾವಿಷ್ಣುವೇ ಆಗಿದ್ದಾನೆ. ಹೀಗೆ ಹೇಳಿದಾಗ ಪ್ರತಿಜ್ಞಾ ಹಾಗೂ ದೃಷ್ಟಾಂತಗಳಿಗೆ ಅನುಗುಣ್ಯವು ಉಪಪಾದಿತವಾಗುತ್ತದೆ. ಇಲ್ಲದಿದ್ದರೆ ವೈಗುಣ್ಯವು ಪ್ರಾಪ್ತವಾಗುತ್ತದೆ.

ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ

ತತ್ತ್ವಪ್ರದೀಪ

ಸ್ತ್ರೀತ್ವ ಹಾಗೂ ಪುಂಸ್ತ್ವಗಳಿಗೆ ಸಾಮಾನಾಧಿಕರಣ್ಯ ಹೇಗೆ ?

तत्वप्रदीपः – यद्यपि परत्वावरत्वादिकमपेक्षाभेदादेकत्र युगपदुपलभ्यते । एकबहुभावः कार्यकारणभावश्च कथञ्चिद्युज्यते । न तथा स्त्रीपुम्भावो युगपदेकत्र दृष्टः । तस्मान्न स्त्रीशब्दाभिधेयः परमपुमानित्यत आह - प्रकृतिश्च प्रतिज्ञादृष्टान्तानुपरोधात् ।

ವಾಸ್ತವಿಕವಾಗಿ ಪರತ್ವ ಅವರತ್ವಗಳು ವಿವಕ್ಷಾಭೇದದಿಂದ ಒಂದೇ ಕಡೆ ಉಪಲಬ್ಧವಾಗುತ್ತವೆ. ಏಕತ್ವ ಬಹುತ್ವಗಳು ಕಾರ್ಯತ್ವ, ಕಾರಣತ್ವಗಳೂ ಕೂಡ ಒಂದೇ ಪದಾರ್ಥದಲ್ಲಿ ವಿವಕ್ಷಾಭೇದದಿಂದ ಕಥಂಚಿತ್ ಉಪಪನ್ನವಾಗುತ್ತವೆ. ಆದರೆ ಸ್ತ್ರೀತ್ವ ಹಾಗೂ ಪುಂಸ್ತ್ವಗಳು ಯಾವುದೇ ಕಾರಣದಿಂದಲೂ ಒಂದೇ ವಸ್ತುವಿನಲ್ಲಿ ಬರುವುದು ಎಲ್ಲಿಯೂ ಕಂಡಿಲ್ಲ. ಆದ್ದರಿಂದ ಪರಮಪುರುಷನೆನಿಸಿದ ವಿಷ್ಣುವಿನಲ್ಲಿ ಸ್ತ್ರೀಶಬ್ದಪ್ರತಿಪಾದ್ಯತ್ವವನ್ನು ಹೇಳಲು ಹೇಗೆ ಸಾಧ್ಯ ? ಈ ಪ್ರಶ್ನೆಗೆ ಉತ್ತರವನ್ನು ನೀಡುವುದಕ್ಕಾಗಿ 'प्रकृतिश्च प्रतिज्ञादृष्टान्तानुपरोधात्' ಎಂಬ ಸೂತ್ರವು ಹೊರಟಿದೆ.

ಸೂತ್ರದಲ್ಲಿರುವ ಚಕಾರದಿಂದ ಸಕಲ ಸ್ತ್ರೀಲಿಂಗ ಶಬ್ದಗಳು ವಿವಕ್ಷಿತ

तत्वप्रदीपः – स्त्रीशब्दा अपीत्यादिभाष्योदितः प्रकृतिश्चेति चकारार्थः । न केवलं प्रकृतिशब्देनैव वाच्य इत्युच्यते । स्त्रीशब्दानां सर्वेषामपि वाच्य एवेति । ''पुरुषमभिविशन्ति' इति । मुख्यवाचकत्वेन विशन्तीत्यर्थः । अभिवदन्तीति प्रतिज्ञातत्वात् ।।छ।।

'स्त्रीशब्दा अपि' ಎಂಬ ಭಾಷ್ಯದ ವಾಕ್ಯದಲ್ಲಿರುವ ಅಪಿ ಪದವು ಪ್ರಕೃತಿಶ್ಚ ಎಂಬ ಸೂತ್ರದಲ್ಲಿರುವ ಚಕಾರದ ಅರ್ಥವಾಗಿದೆ. ಪ್ರಕೃತಿಯೆಂಬ ಶಬ್ದದಿಂದಷ್ಟೇ ವಿಷ್ಣುವಾಚ್ಯನಲ್ಲ. ಸ್ತ್ರೀಲಿಂಗದಲ್ಲಿ ಎಲ್ಲಾ ಶಬ್ದಗಳಿಂದಲೂ ಕೂಡ ವಾಚ್ಯನೇ ಆಗುತ್ತಾನೆ ಎಂಬುದು ಇದರ ಅಭಿಪ್ರಾಯ. 'ಪುರುಷಮಭಿವಿಶಂತಿ' ಎಂಬ ಶ್ರುತಿಯಲ್ಲಿರುವ 'ಅಭಿವಿಶಂತಿ' ಶಬ್ದಕ್ಕೆ ಮುಖ್ಯವಾಚಕತ್ವೇನ ಪ್ರತಿಪಾದ್ಯನಾಗುತ್ತಾನೆ ಎಂದರ್ಥ. ಏಕೆಂದರೆ ನಾಮಾನಿ ಅಭಿವದಂತಿ ಎಂಬುದಾಗಿ ಎಲ್ಲಾ ಶಬ್ದಗಳು ಅವನನ್ನೇ ಮುಖ್ಯವಾಗಿ ಪ್ರತಿಪಾದನೆ ಮಾಡುತ್ತವೆ ಎಂಬ ಪ್ರತಿಜ್ಞೆಯನ್ನು ಮಾಡಲಾಗಿದೆ.

ಶ್ರೀಮಜ್ಜಯತೀರ್ಥಭಿಕ್ಷುಗಳಿಂದ ವಿರಚಿತವಾದ

ತತ್ವಪ್ರಕಾಶಿಕಾ

ಸ್ತ್ರೀಲಿಂಗತ್ವ ಎಂಬುದು ಪೂರ್ವಪಕ್ಷ ಯುಕ್ತಿ

अत्र स्त्रीलिङ्गत्वलिङ्गेनान्यत्रैव प्रसिद्धानां स्त्रीशब्दानां परमात्मनि समन्वयप्रतिपादनादस्ति शास्त्रादिसङ्गतिः ।

ಪ್ರಕೃತ್ಯಧಿಕರಣವು ಪ್ರಾರಂಭವಾಗುತ್ತಿದೆ. ಈ ಅಧಿಕರಣದಲ್ಲಿ ಸ್ತ್ರೀಲಿಂಗತ್ವ ಎಂಬುದು ಪೂರ್ವಪಕ್ಷ ಯುಕ್ತಿ. ಈ ಲಿಂಗದಿಂದ ಎಲ್ಲ ಬಗೆಯ ಸ್ತ್ರೀಲಿಂಗ ಶಬ್ದಗಳು ಅನ್ಯತ್ರೈವಪ್ರಸಿದ್ಧವಾಗಿವೆ. ಇಂತಹ ಶಬ್ದಗಳನ್ನೆಲ್ಲಾ ಪರಮಾತ್ಮನಲ್ಲಿ ಸಮನ್ವಯ ಮಾಡುವುದಕ್ಕಾಗಿ ಈ ಅಧಿಕರಣ ಹೊರಟಿದೆ. ಆದ್ದರಿಂದ ಪ್ರಕೃತ್ಯಧಿಕರಣಕ್ಕೆ ಶಾಸ್ತ್ರಸಂಗತಿ, ಅಧ್ಯಾಯಸಂಗತಿ ಹಾಗೂ ಪಾದಸಂಗತಿಗಳಿರುತ್ತವೆ.

'ಏಷಾ ಹ್ಯೇವ ಪ್ರಕೃತಿಃ' ಎಂಬುದು ಅಧಿಕರಣದ ವಿಷಯವಾಕ್ಯ

तत्वप्रकाशिका – समन्वयसूत्रे सर्वशब्दानां भगवत्परत्वमुक्तम् । सर्वान्तर्गताः प्रकृत्यादिशब्दाः श्रूयन्ते 'एषा ह्येव प्रकृतिरविकृतिः' 'या प्राणेन संविशत्यदितिर्देवतामयी' इत्यादौ । तेषां चान्यपरत्वे, न सर्वशब्दाभिधेयत्वं परमात्मनः सिध्यतीत्यवश्यं निर्णेयता ।

'ತತ್ತು ಸಮನ್ವಯಾತ್' ಎಂಬ ಸೂತ್ರದಲ್ಲಿ ವೈದಿಕವಾದ ಸಕಲಶಬ್ದಗಳು ಭಗವಂತನನ್ನೇ ಪ್ರತಿಪಾದನೆ ಮಾಡುತ್ತದೆಂದು ಪ್ರತಿಜ್ಞೆ ಮಾಡಲಾಗಿದೆ. ಸಕಲಶಬ್ದಗಳಲ್ಲಿ ಪ್ರಕೃತಿ ಮೊದಲಾದ ಸ್ತ್ರೀಲಿಂಗ ಶಬ್ದಗಳೂ ಕೂಡ ಶ್ರುತವಾಗಿವೆ - 'ಏಷಾ ಹ್ಯೇವ ಪ್ರಕೃತಿರವಿಕೃತಿಃ' 'ಯಾ ಪ್ರಾಣೇನ ಸಂವಿಶತ್ಯದಿತಿರ್ದೇವತಾಮಯೀ' 'ಎಲ್ಲಾ ಕಾರ್ಯಗಳನ್ನು ಸೃಷ್ಟಿಸುವುದರಿಂದ ಪ್ರಕೃತಿ, ತಾನು ವಿಕಾರರಹಿತವಾಗಿರುವುದರಿಂದ ವಿಕೃತಿ', 'ಸರ್ವಭಕ್ಷಣ ಮಾಡುವುದರಿಂದ ಅದಿತಿ, ಪ್ರಾಣನಿಂದ ದೇಹದಲ್ಲಿ ಇದು ಪ್ರವೇಶ ಮಾಡುತ್ತದೆ' ಇತ್ಯಾದಿ ಶ್ರುತಿಯಲ್ಲಿ ಪ್ರಕೃತಿ, ವಿಕೃತಿ, ಅದಿತಿ ಇತ್ಯಾದಿ ಸ್ತ್ರೀಲಿಂಗಶಬ್ದಗಳು ಉಪಲಬ್ಧವಾಗಿವೆ.

ಈ ಎಲ್ಲಾ ಶಬ್ದಗಳು ಭಗವಂತನನ್ನು ಬಿಟ್ಟು, ಬೇರೆ ಪದಾರ್ಥವನ್ನು ಪ್ರತಿಪಾದನೆ ಮಾಡುವುದೆಂದು ಸಿದ್ಧವಾದರೆ ಸಕಲಶಬ್ದವಾಚ್ಯತ್ವವು ಪರಮಾತ್ಮನಲ್ಲಿ ಸಿದ್ಧವಾಗುವುದಿಲ್ಲ. ಅವಶ್ಯವಾಗಿ ಸ್ತ್ರೀಲಿಂಗಶಬ್ದವನ್ನು ಪರಮಾತ್ಮನಲ್ಲಿ ಸಮನ್ವಯ ಮಾಡಬೇಕು.

ಅಧಿಕರಣದ ವಿಷಯಾದಿಗಳು

तत्वप्रकाशिका – तत्प्रकृत्यादिशब्दवाच्यं विषयः । किं विष्णुरन्यद्वेति सन्देहः । समन्वयसूत्रमन्यत्रैव प्रसिद्धिश्च सन्देहबीजम् ।

ಪ್ರಕೃತಿ, ವಿಕೃತಿ ಮೊದಲಾದ ಶಬ್ದಗಳಿಂದ ವಾಚ್ಯವಾದುದು ವಿಷಯ. ಆ ವಿಷಯವು ವಿಷ್ಣುವೋ ಅಥವಾ ಬೇರೆ ಪದಾರ್ಥವೋ ? ಎಂದು ಸಂದೇಹ. ಸಮನ್ವಯ ಸೂತ್ರವು ವಿಷ್ಣುವೇ ವಾಚ್ಯವೆಂದು ಹೇಳಿದರೆ ಲೋಕದಲ್ಲಿ ಅನ್ಯತ್ರೈವಪ್ರಸಿದ್ಧಿಯು ಬೇರೆ ಪದಾರ್ಥವು ವಾಚ್ಯವೆನ್ನುತ್ತಿದೆ. ಇವೆರಡು ಸಂದೇಹಕ್ಕೆ ಬೀಜ.

ಪುರುಷನಲ್ಲಿ ಸ್ತ್ರೀಲಿಂಗಶಬ್ದಗಳು ಹೇಗೆ ?

तत्वप्रकाशिका – न प्रकृत्यादिब्द्वाच्यो हरिरिति पूर्वः पक्षः । प्रकृत्यादिशब्दानां स्त्रीलिङ्गत्वात् । परमपुरुषे तदयोगात् ।

ಪ್ರಕೃತ್ಯಾದಿಶಬ್ದಗಳಿಂದ ಶ್ರೀಹರಿಯು ವಾಚ್ಯನಾಗಲು ಸಾಧ್ಯವಿಲ್ಲ ಎಂಬುದೇ ಪೂರ್ವಪಕ್ಷ. ಏಕೆಂದರೆ ಪ್ರಕೃತಿ ಮೊದಲಾದ ಶಬ್ದಗಳು ಸ್ತ್ರೀಲಿಂಗಗಳಾಗಿವೆ. (ಸ್ತ್ರೀಲಿಂಗತ್ವವು ಪೂರ್ವಪಕ್ಷ ಯುಕ್ತಿ ಎಂಬುದನ್ನು ಗಮನಿಸಬೇಕು). ಪುರುಷಾಗ್ರಣಿಯಾದ ಶ್ರೀಹರಿಯಲ್ಲಿ ಸ್ತ್ರೀಲಿಂಗಶಬ್ದಗಳು ಸರ್ವಥಾ ಕೂಡುವುದಿಲ್ಲ.

'ನೈನಂ ವಾಚಾ ಸ್ತ್ರಿಯಂ ಬ್ರುವನ್'

तत्वप्रकाशिका – न च रूपविशेषापेक्षयोपपत्तिः । 'नैनं वाचा स्त्रियं ब्रुवन्' इति स्त्रीत्वनिषेधात्।

ಪ್ರಶ್ನೆ - ಪರಮಾತ್ಮನ ಸ್ತ್ರೀರೂಪದ ವಿವಕ್ಷೆಯಿಂದ ಸ್ತ್ರೀಲಿಂಗಶಬ್ದಗಳನ್ನು ಹೇಳಬಹುದಲ್ಲವೇ?

ಉತ್ತರ - ಇದುಸಾಧ್ಯವಿಲ್ಲ. 'ನೈನಂ ವಾಚಾ ಸ್ತ್ರಿಯಂ ಬ್ರುವನ್' 'ಪರಮಾತ್ಮನನ್ನು ಯಾರೂ ಕೂಡ ಸ್ತ್ರೀ' ಎಂದು ಹೇಳುವುದಿಲ್ಲ' ಎಂಬುದಾಗಿ ಸ್ತ್ರೀತ್ವವನ್ನು ಅವನಲ್ಲಿ ನಿಷೇಧ ಮಾಡಲಾಗಿದೆ.

ನಪುಂಸಕಲಿಂಗಶಬ್ದದಂತೆ ಸ್ತ್ರೀಲಿಂಗಶಬ್ದವೇಕೆ ಇಲ್ಲ ?

तत्वप्रकाशिका – न च नपुंसकशब्दप्रवृत्तिवत् परमात्मनि स्त्रीशब्दप्रवृत्तिः। नियामकविशेषाभावेन कल्पनाऽयोगात् ।

ಪ್ರಶ್ನೆ - ಬ್ರಹ್ಮ ಎಂಬ ಶಬ್ದವು ನಪುಂಸಕಲಿಂಗದಲ್ಲಿದೆ. ಈ ಶಬ್ದದಿಂದ ಪರಮಾತ್ಮನು ಪುಲ್ಲಿಂಗನಾಗಿದ್ದರೂ ಕೂಡ ಹೇಗೆ ಪ್ರತಿಪಾದ್ಯನಾಗಿದ್ದಾನೋ, ಅದರಂತೆ ಪುಲ್ಲಿಂಗನಾಗಿದ್ದರೂ ಸ್ತ್ರೀಲಿಂಗಶಬ್ದದಿಂದ ಪ್ರತಿಪಾದ್ಯನಾಗಬಹುದಲ್ಲವೇ?

ಉತ್ತರ - ಹೀಗೆ ಪ್ರಶ್ನಿಸಬಾರದು. ಏಕೆಂದರೆ ನಪುಂಸಕಲಿಂಗಶಬ್ದದಿಂದ ಪರಮಾತ್ಮನು ಪ್ರತಿಪಾದ್ಯನಾಗಿದ್ದಾನೆನ್ನಲು, 'ಅಥ ಕಸ್ಮಾತ್ ಉಚ್ಯತೇ ಬ್ರಹ್ಮೇತಿ' ಎಂಬ ನಿಯಾಮಕ ಪ್ರಮಾಣವಿದೆ. ಆದರೆ ಸ್ತ್ರೀಲಿಂಗಶಬ್ದಗಳಿಂದ ಪ್ರತಿಪಾದ್ಯನಾಗಿದ್ದಾನೆನ್ನಲು ನಿಯಾಮಕಪ್ರಮಾಣಗಳು ಇರುವುದಿಲ್ಲ.

ತದಧೀನತ್ವನ್ಯಾಯವು ಅಪ್ರಯೋಜಕ

ತತ್ವಪ್ರಕಾಶಿಕಾ – ನ ಚಾऽಸ್ತ್ಯಸ್ತ್ರೀಭೂತಸ್ಯಾಪಿ ಸ್ತ್ರೀನಿಯಾಮಕತ್ವೇನ ತಚ್ಛಬ್ದವಾಚ್ಯತ್ವೋಪಪತ್ತಿಃ । ವಶೀಕೃತಭಾರ್ಯೇऽಪಿ ಭರ್ತರಿ ತತ್ಪ್ರಯೋಗಾದರ್ಶನಾತ್ ।

ಪ್ರಶ್ನೆ - ಪರಮಾತ್ಮನು ಸ್ತ್ರೀ ಆಗಬೇಕಾಗಿಲ್ಲ. ಆದರೂ ಸಕಲ ಸ್ತ್ರೀಯರಿಗೆ ನಿಯಾಮಕನಾಗಿದ್ದಾನೆ. ಆದ್ದರಿಂದ ತದಧೀನತ್ವನ್ಯಾಯವನ್ನು ವಿವಕ್ಷಿಸಿ ಸ್ತ್ರೀಲಿಂಗಶಬ್ದಗಳ ಪ್ರತಿಪಾದ್ಯತ್ವವನ್ನು ಹೇಳಬಹುದಲ್ಲವೇ?

ಉತ್ತರ - ಹಾಗಾದರೆ ಯಾವ ಗಂಡನು ತನ್ನ ಹೆಂಡತಿಯನ್ನು ವಶ ಮಾಡಿಕೊಂಡಿದ್ದಾನೋ, ಅವನಲ್ಲಿಯೂ ಸ್ತ್ರೀಶಬ್ದಪ್ರತಿಪಾದ್ಯತ್ವವು ಬರಬೇಕಾದೀತು. ಆದರೆ ಹೆಂಡತಿಯನ್ನು ಅಧೀನ ಮಾಡಿಕೊಂಡಿದ್ದರೂ ಕೂಡ ಗಂಡನನ್ನು ಯಾರೂ ಕೂಡ ಸ್ತ್ರೀಶಬ್ದದಿಂದ ಕರೆಯುವುದಿಲ್ಲ. ಅದರಂತೆ ಸ್ತ್ರೀಯರು ಪರಮಾತ್ಮನ ಅಧೀನವಾಗಿದ್ದರೂ, ಪರಮಾತ್ಮನು ಸ್ತ್ರೀಲಿಂಗಶಬ್ದಗಳಿಂದ ಪ್ರತಿಪಾದ್ಯನಾಗುವುದಿಲ್ಲ.

'ನಾಮಾನಿ ಸರ್ವಾಣಿ' ಎಂಬ ಶ್ರುತಿಯು ಸಾವಕಾಶ

ತತ್ವಪ್ರಕಾಶಿಕಾ – ನ ಚ 'ನಾಮಾನಿ ಸರ್ವಾಣಿ' ಇತ್ಯಾದಿವಿರೋಧಃ । ಉಕ್ತನ್ಯಾಯವಿರೋಧೇನ ತತ್ಸಂಕೋಚೋಪಪತ್ತೇಃ ।

ಪ್ರಶ್ನೆ - 'ನಾಮಾನಿ ಸರ್ವಾಣಿ ಯಮಾವಿಶಂತಿ' ಎಂಬ ಶ್ರುತಿಯು ಸಕಲನಾಮಗಳು ಪರಮಾತ್ಮನ ಹೆಸರು ಎಂದು ಶ್ರುತಿ ಹೇಳುತ್ತಿದೆ. ಹೀಗಿರುವಾಗ ಸ್ತ್ರೀಶಬ್ದಗಳೂ ಕೂಡ ಅವನನ್ನೇ ಪ್ರತಿಪಾದನೆ ಮಾಡಬೇಕಲ್ಲವೇ?

ಉತ್ತರ - ಮೇಲೆ ಹೇಳಿದ ಕಾರಣಗಳಿಂದ ಪರಮಾತ್ಮನಲ್ಲಿ ಸ್ತ್ರೀಲಿಂಗಶಬ್ದಪ್ರತಿಪಾದ್ಯತ್ವವನ್ನು ಹೇಳಿದರೆ ವಿರೋಧ ಬರುತ್ತದೆ. ಆದ್ದರಿಂದ 'ನಾಮಾನಿ ಸರ್ವಾಣಿ' ಎಂಬ ಶ್ರುತಿಗೆ ಸ್ತ್ರೀಲಿಂಗಶಬ್ದಗಳನ್ನು ಬಿಟ್ಟು ಉಳಿದ ಶಬ್ದಗಳಷ್ಟೇ ಅವನ ಹೆಸರುಗಳಾಗಿದೆ ಎಂದು ಅರ್ಥೈಸಬೇಕು.

ಪೂರ್ವಪಕ್ಷದ ಉಪಸಂಹಾರ

ತತ್ವಪ್ರಕಾಶಿಕಾ – ಅತಃ ಪ್ರಕೃತ್ಯಾದಿಶಬ್ದಾನಾಂ ಪರಮಾತ್ಮವಾಚಿತ್ವಾಭಾವಾತ್ ನ ಸಮನ್ವಯಸೂತ್ರಮುಪಪನ್ನಮಿತಿ ।

ಈ ಎಲ್ಲಾ ಕಾರಣಗಳಿಂದ ಪ್ರಕೃತಿ ಮೊದಲಾದ ಸ್ತ್ರೀಲಿಂಗಶಬ್ದಗಳು ಪರಮಾತ್ಮನನ್ನು ಪ್ರತಿಪಾದನೆ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಎಲ್ಲಾ ಶಬ್ದಗಳೂ ಕೂಡ ಪರಮಾತ್ಮನನ್ನೇ ಪ್ರತಿಪಾದನೆ ಮಾಡುತ್ತವೆ ಎಂಬ ಸಮನ್ವಯಸೂತ್ರವು ಯುಕ್ತವಾಗುವುದಿಲ್ಲ. ಇಷ್ಟು ಪೂರ್ವಪಕ್ಷ.

ಪರಮಾತ್ಮನು ಸ್ತ್ರೀ ಕೂಡ ಹೌದು

ಸಿದ್ಧಾಂತ

तत्वप्रकाशिका – सिद्धान्तयत्सूत्रमवतारयति – स्त्रीशब्दा इति ।। एवं प्राप्तं पूर्वपक्षं प्रतिक्षेप्तुं स्त्रीशब्दा अपि परमात्मनि प्रवर्तन्त इति साधयत्यत्र सूत्रकारः इत्यर्थः ।

ಪೂರ್ವಪಕ್ಷವನ್ನು ನಿರಾಕರಣೆ ಮಾಡುವ ಸಿದ್ಧಾಂತ ಸ್ಥಾಪಕವಾದ ಸೂತ್ರಕ್ಕೆ ಭಾಷ್ಯದಲ್ಲಿ 'ಸ್ತ್ರೀಶಬ್ದಾಃ' ಇತ್ಯಾದಿಯಾಗಿ ಅವತಾರಿಕೆ ನೀಡುತ್ತಿದ್ದಾರೆ.

ಹೀಗೆ ಪ್ರಾಪ್ತವಾದ ಪೂರ್ವಪಕ್ಷವನ್ನು ನಿರಾಕರಣೆ ಮಾಡುವುದಕ್ಕಾಗಿ ಸ್ತ್ರೀಶಬ್ದಗಳೂ ಕೂಡ ಪರಮಾತ್ಮನನ್ನು ಪ್ರತಿಪಾದನೆ ಮಾಡುತ್ತವೆ ಎಂಬ ಸಿದ್ಧಾಂತವನ್ನು ಸೂತ್ರಕಾರರು ಪ್ರತಿಪಾದನೆ ಮಾಡುತ್ತಿದ್ದಾರೆ. 'ಸ್ತ್ರೀಶಬ್ದಾ ಅಪಿ ತಸ್ಮಿನ್ನೇವ' ಎಂಬ ಭಾಷ್ಯಕ್ಕೆ ಈ ಅರ್ಥವನ್ನು ತಿಳಿಯಬೇಕು.

'ಹಂತೈತಮೇವ' ಎಂಬ ಭಾಷ್ಯದ ವ್ಯಾಖ್ಯಾನ

तत्वप्रकाशिका – सूत्रं व्याचष्टे – हन्तेति ।। प्रकृत्यादिस्त्रीशब्दवाच्यश्चेश्वरो भवति । 'हन्तैतमेव पुरुषम्' इति श्रुतौ (परम) पुरुषस्याशेषनामवाच्यतां प्रतिज्ञाय तत्रैव नदीसमुद्रदृष्टान्तस्योक्तत्वात् ।

ಸೂತ್ರವನ್ನು ಭಾಷ್ಯದಲ್ಲಿ 'ಹಂತ' ಇತ್ಯಾದಿಯಾಗಿ ವ್ಯಾಖ್ಯಾನ ಮಾಡುತ್ತಿದ್ದಾರೆ. ಪ್ರಕೃತಿ ಮೊದಲಾದ ಸ್ತ್ರೀಶಬ್ದಗಳಿಂದ ಈಶ್ವರನೇ ಪ್ರತಿಪಾದ್ಯನು. ಅದು ಹೀಗೆ - 'ಹಂತೈತಮೇವ ಪುರುಷಮ್' ಈ ಶ್ರುತಿಯು ಪರಮಪುರುಷನಾದ ನಾರಾಯಣನು ಎಲ್ಲಾ ಶಬ್ದಗಳಿಂದಲೂ ಪ್ರತಿಪಾದ್ಯನಾಗಿದ್ದಾನೆ ಎಂದು ಪ್ರತಿಜ್ಞೆ ಮಾಡಿದೆ. ಮುಂದೆ ನದೀಸಮುದ್ರದೃಷ್ಟಾಂತದಿಂದ ವಿಮರ್ಶೆಮಾಡಿದೆ.

ದೃಷ್ಟಾಂತ ದಾರ್ಷ್ಟಾಂತಿಕಗಳಲ್ಲಿ ವೈಲಕ್ಷಣ್ಯವಿಲ್ಲ

तत्वप्रकाशिका – प्रकृत्यादिस्त्रीशब्दाच्यताभ्युपगमे प्रतिज्ञादृष्टान्तानुपरोधाद् अन्यथा तदुपरोधादिति भावः ।

ಪ್ರಕೃತಿ ಮೊದಲಾದ ಸ್ತ್ರೀಲಿಂಗಶಬ್ದಗಳಿಂದ ಪರಮಾತ್ಮನು ಪ್ರತಿಪಾದ್ಯನಾಗಿದ್ದಾನೆಂದು ಒಪ್ಪಿದರೆ ಮಾತ್ರ ಶ್ರುತಿ ಹೇಳಿರುವ ಪ್ರತಿಜ್ಞೆ ಹಾಗೂ ದೃಷ್ಟಾಂತಗಳಲ್ಲಿ ಹೊಂದಾಣಿಕೆ ಉಂಟಾಗುತ್ತದೆ. ಒಂದು ವೇಳೆ ಪರಮಾತ್ಮನು ಸ್ತ್ರೀಲಿಂಗಶಬ್ದಗಳಿಂದ ಪ್ರತಿಪಾದ್ಯನಾಗದಿದ್ದರೆ, ಪ್ರತಿಜ್ಞೆ ಹೇಳುವುದೇ ಬೇರೆ, ದೃಷ್ಟಾಂತವಿರುವುದೇ ಬೇರೆ ಎಂದು ವೈಲಕ್ಷಣ್ಯವು ಪ್ರಾಪ್ತವಾಗುತ್ತದೆ.

ಲಕ್ಷ್ಮೀವಾಚಕ ಶಬ್ದವನ್ನು ಸಮನ್ವಯ ಮಾಡಿದ ಮೇಲೆ ಉಳಿದ ಸ್ತ್ರೀಲಿಂಗ ಶಬ್ದಗಳೂ ಕೂಡ ಅರ್ಥಾತ್ ಸಿದ್ಧ

तत्वप्रकाशिका – हन्तेत्यास्वादने । प्रकृतिपदमन्योपलक्षकम् । प्रधानस्त्रीनामत्वातत् तद्ग्रहणम् ।।२४।।

ಶ್ರುತಿಯಲ್ಲಿರುವ 'ಹಂತ' ಎಂಬ ಪದವು ಆಸ್ವಾದನಾರ್ಥದಲ್ಲಿದೆ. ಪರಮಾತ್ಮನಲ್ಲಿ ಪ್ರಕೃತಿ ಮೊದಲಾದ ಸ್ತ್ರೀಲಿಂಗ ಶಬ್ದಗಳೂ ಕೂಡ ಸಮನ್ವಯಗೊಳ್ಳುತ್ತವೆ ಎಂಬುದು ಅತ್ಯಂತ ಅರ್ಥಪೂರ್ಣವಾಗಿದೆ ಎಂಬ ಅಭಿಪ್ರಾಯವನ್ನು ನೀಡುತ್ತಿದೆ. ಈ ಅಧಿಕರಣದಲ್ಲಿ ಪ್ರಕೃತಿ ಶಬ್ದವನ್ನು ಸಮನ್ವಯ ಮಾಡುತ್ತಿದ್ದಾರೆ. ಇದರಿಂದ ಇದೊಂದೇ ಶಬ್ದದ ಸಮನ್ವಯವೆಂದು ತಿಳಿಯಬಾರದು. ಪ್ರಕೃತಿ ಪದವು ಬೇರೆ ಪದಗಳಿಗೂ ಉಪಲಕ್ಷಕವಾಗಿದೆ. ಸ್ತ್ರೀಲಿಂಗದಲ್ಲಿರುವ ಎಲ್ಲಾ ಶಬ್ದಗಳಿಂದಲೂ ಪರಮಾತ್ಮನು ಪ್ರತಿಪಾದ್ಯನಾಗಿದ್ದಾನೆಂದು ತಿಳಿಯಬೇಕು. ಪ್ರಕೃತಿ ಶಬ್ದವನ್ನೇ ಏಕೆ ಸ್ವೀಕರಿಸಿದ್ದಾರೆ ಎಂದರೆ ಅತ್ಯಂತ ಪ್ರಧಾನವಾದ ಲಕ್ಷ್ಮೀದೇವಿಯನ್ನು ಇದು ಪ್ರತಿಪಾದನೆ ಮಾಡುತ್ತಿದೆ. ಪ್ರಧಾನಶಬ್ದದ ಸಮನ್ವಯದಿಂದ ಅಪ್ರಧಾನಶಬ್ದದ ಸಮನ್ವಯವು ಅರ್ಥಾತ್ ಸಿದ್ಧವಾಗುತ್ತದೆ ಎಂಬುದು ಸೂತ್ರಕಾರರ ಅಭಿಪ್ರಾಯ.

ಮಂತ್ರಾಲಯ ಪ್ರಭುಗಳಾದ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ

ಭಾವದೀಪ

ಎಲ್ಲಾ ಬಗೆಯ ಸ್ತ್ರೀಲಿಂಗಶಬ್ದಗಳ ಸಮನ್ವಯಕ್ಕಾಗಿ ಪ್ರಕೃತ್ಯಧಿಕರಣ

स्त्रीलिङ्गत्वमित्यनुभाष्यसूचितलिङ्गेनाऽन्यत्रैव प्रसिद्धिमाह – स्त्रीलिङ्गत्वेति।।

'प्रकृतिश्च प्रतिज्ञादृष्टान्तानुपरोधात्' ಎಂಬ ಸೂತ್ರದಿಂದ ಪ್ರಕೃತ್ಯಧಿಕರಣವು ಪ್ರಾರಂಭವಾಗುತ್ತಿದೆ. ಈ ಅಧಿಕರಣದಲ್ಲಿ ಎಲ್ಲಾ ಬಗೆಯ ಸ್ತ್ರೀಲಿಂಗ ಶಬ್ದಗಳನ್ನು ಪರಮಾತ್ಮನಲ್ಲಿ ಸಮನ್ವಯ ಮಾಡುತ್ತಿದ್ದಾರೆ.

'ಸ್ತ್ರೀಲಿಂಗತ್ವಮ್' ಎಂಬುದು ಈ ಅಧಿಕರಣದ ಪೂರ್ವಪಕ್ಷಲಿಂಗವೆಂದು ಅನುವ್ಯಾಖ್ಯಾನದಲ್ಲಿ ಹೇಳಿರುತ್ತಾರೆ. ಈ ಲಿಂಗದಿಂದ 'ಪ್ರಕೃತಿ' ಮೊದಲಾದ ಸ್ತ್ರೀಲಿಂಗಶಬ್ದಗಳು ಅನ್ಯತ್ರೈವಪ್ರಸಿದ್ಧವಾಗಿವೆ ಎಂಬುದಾಗಿ 'ಸ್ತ್ರೀಲಿಂಗತ್ವ' ಇತ್ಯಾದಿ ಟೀಕಾವಾಕ್ಯದಿಂದ ಸಮರ್ಥಿಸುತ್ತಿದ್ದಾರೆ.

ಸ್ತ್ರೀ ಶಬ್ದವೆಂದಷ್ಟೇ ವಿವಕ್ಷಿಸಬಾರದು

भावदीपः – अत्र अधिकरणे । स्त्रीशब्दानां स्त्रीलिङ्गशब्दानामित्यर्थः ।

'ಅತ್ರ' ಎಂಬ ಪದಕ್ಕೆ ಈ ಪ್ರಕೃತ್ಯಧಿಕರಣದಲ್ಲಿ ಎಂದರ್ಥ. 'ಸ್ತ್ರೀಶಬ್ದಾನಾಂ' ಎಂಬುದರಿಂದ ಸ್ತ್ರೀಶಬ್ದಗಳು ಎಂದಷ್ಟೇ ವಿವಕ್ಷಿಸಬಾರದು. ಸ್ತ್ರೀಲಿಂಗದಲ್ಲಿರುವ ಎಲ್ಲಾ ಶಬ್ದಗಳನ್ನು ವಿವಕ್ಷಿಸಬೇಕು.

ಈ ಅಧಿಕರಣಕ್ಕೇಕೆ ಪ್ರತ್ಯೇಕ ಸಂಗತಿಯಿಲ್ಲ

भावदीपः – तत्तु समन्वयादिति सर्वाब्दानां परमेश्वरे समन्वय उक्त इत्यानुमानिकसूत्रभाष्येणोक्तप्रायत्वादत्र भाष्येऽनुक्तां पूर्वसङ्गतिं स्वयमाह – समन्वयसूत्र इति ।।

'ತತ್ತು ಸಮನ್ವಯಾದಿತಿ ಸರ್ವಶಬ್ದಾನಾಂ ಪರಮೇಶ್ವರೇ ಸಮನ್ವಯ ಉಕ್ತಃ' 'ತತ್ತು ಸಮನ್ವಯಾತ್' ಎಂಬ ಸೂತ್ರದಲ್ಲಿ ಸಕಲಶಬ್ದಗಳು ಪರಮೇಶ್ವರನಲ್ಲಿ ಸಮನ್ವಯಗೊಳ್ಳುತ್ತವೆ' ಇತ್ಯಾದಿಯಾಗಿ ಆನುಮಾನಿಕಾಧಿಕರಣದ ಭಾಷ್ಯದಲ್ಲಿ ಸಮನ್ವಯಾಧಿಕರಣದಿಂದ ಸಂಗತಿಯನ್ನು ತೋರಿಸಲಾಗಿದೆ. ಅಲ್ಲಿ ಹೇಳಲ್ಪಟ್ಟ ಸಂಗತಿಯು ಈ ಅಧಿಕರಣದಲ್ಲಿಯೂ ಕೂಡ ವಿವಕ್ಷಿತವಾಗಿದೆ ಎಂಬ ಅಭಿಪ್ರಾಯದಿಂದ

ಭಾಷ್ಯದಲ್ಲಿ ಪ್ರತ್ಯೇಕವಾದ ಸಂಗತಿಯನ್ನು ತೋರಿಸಿರುವುದಿಲ್ಲ. ಆದ್ದರಿಂದ ಭಾಷ್ಯದಲ್ಲಿ ಹೇಳದ ಸಂಗತಿಯನ್ನು ಟೀಕಾಕಾರರು ಸ್ವತಃ 'ಸಮನ್ವಯಸೂತ್ರೇ' ಇತ್ಯಾದಿ ವಾಕ್ಯದಿಂದ ಸ್ಪಷ್ಟವಾಗಿ ತೋರಿಸುತ್ತಿದ್ದಾರೆ.

ಹಿಂದಿನ ಪಾದದಲ್ಲಿ ಉದಾಹರಿಸಿದ್ದನ್ನೇ ಪುನಃ ಇಲ್ಲೇಕೆ ಹೇಳುತ್ತೀರಿ ?

ಭಾವದೀಪಃ – **श्रूयते श्रुतौ प्रतीयते ।। एषेति ।। यद्यपीयं श्रुतिः तृतीये कामादितरत्र तत्र चायतनादिभ्य इत्यत्र भाष्ये श्रीतत्वपरत्वेनोदाहृता तथा प्येतत्पादीयोदाहरणानां मुख्यवृत्त्याऽन्यपराणामपि सतां परममुख्यवृत्त्या ब्रह्मपरत्वस्याभिमतत्वादियमत्रोदाहृता ।**

'श्रूयतेः' ಎಂಬ ಪದಕ್ಕೆ ಶ್ರುತಿಯಲ್ಲಿ ಪ್ರತೀತವಾಗಿದೆ ಎಂದರ್ಥ. ಶ್ರುತಿ ಹೀಗಿದೆ -

ಪ್ರಶ್ನೆ - 'ಏಷಾ ಹ್ಯೇವ ಪ್ರಕೃತಿರವಿಕೃತಿಃ' ಎಂಬ ಶ್ರುತಿಯು ೩ನೆಯ ಪಾದದ 'ಕಾಮಾದಿತರತ್ರ ತತ್ರ ಚಾಯತನಾದಿಭ್ಯಃ' ಎಂಬ ಸೂತ್ರದ ಭಾಷ್ಯದಲ್ಲಿ ಶ್ರೀತತ್ವಪರವಾಗಿ ಉದಾಹರಿಸಲಾಗಿದೆ. ಆದ್ದರಿಂದ ಒಮ್ಮೆ ಸಮನ್ವಯ ಮಾಡಿದ ಶ್ರುತಿಯನ್ನು ಪುನಃ ಇಲ್ಲಿ ವಿಚಾರ ಮಾಡುವ ಅವಶ್ಯಕತೆ ಏನಿದೆ?

ಉತ್ತರ - ಹೌದು. ಆದರೆ ಈ ಪಾದದಲ್ಲಿ ಯಾವ ಶ್ರುತಿಗಳನ್ನು ಉಲ್ಲೇಖಿಸುತ್ತಿದ್ದಾರೋ ಅವುಗಳು ಮುಖ್ಯವೃತ್ತಿಯಿಂದ ಅನ್ಯಪರವಾಗಿದ್ದರೂ ಪರಮಮುಖ್ಯವೃತ್ತಿಯಿಂದ ಬ್ರಹ್ಮಪರವಾಗುತ್ತವೆ. ಇದನ್ನು ತಿಳಿಸುವುದಕ್ಕಾಗಿ ಹಿಂದಿನ ಪಾದದಲ್ಲಿ ಉದಾಹರಿಸಿದ ಶ್ರುತಿಗಳನ್ನು ಪುನಃ ಉದಾಹರಿಸುತ್ತಾರೆ.

ಪರಮಮುಖ್ಯವೃತ್ತಿಯಿಂದ ಪರಮಾತ್ಮನೇ ಸ್ತ್ರೀಯೆನಿಸಿದ್ದಾನೆ

ಭಾವದೀಪಃ – अत एव द्वितीये तेजोऽतस्तथाह्याहेत्यादौ भूतपरत्वेनोदाहृतैव कारणत्वेन च इत्यत्राप्युदाहृतेति ध्येयम् ।

ಆದ್ದರಿಂದಲೇ ಎರಡನೆಯ ಪಾದದಲ್ಲಿರುವ 'ತೇಜೋऽತಸ್ತಥಾಹ್ಯಾಹ' ಎಂಬ ಸೂತ್ರದಲ್ಲಿ ಭೂತಪರತ್ವೇನ ಉದಾಹರಿಸಲ್ಪಟ್ಟ ಶ್ರುತಿಯನ್ನೇ ಪುನಃ ಈ ಪಾದದಲ್ಲಿ 'ಕಾರಣತ್ವೇನ ಚ ಆಕಾಶಾದಿಷು' ಎಂಬ ಸೂತ್ರದಲ್ಲಿ ಉದಾಹರಿಸಿದ್ದಾರೆ. ಇದರಿಂದ ಪರಮಮುಖ್ಯವೃತ್ತಿಯಿಂದ ಎಲ್ಲಾ ಶಬ್ದಗಳು ಪರಮಾತ್ಮನನ್ನು ಮಾತ್ರ ಪ್ರತಿಪಾದನೆ ಮಾಡುತ್ತವೆ ಎಂಬ ಪ್ರಮೇಯವು ಸಿದ್ಧವಾಗುತ್ತದೆ.

'ಯಾ ಪ್ರಾಣೇನ' ಎಂಬ ಶ್ರುತಿಯ ಉಲ್ಲೇಖಕ್ಕೆ ಬೀಜ

भावदीपः – या प्राणेनेति काठके अदितिशब्दः । न केवलं सिद्धान्तेऽप्यन्यपरा एवाऽत्रोदाहरणं किन्तु अन्यपरत्वरहिता उपनिषदादिगता भगवन्मात्रपराऽपि स्त्रीलिङ्गशब्दयुक्ताः श्रुतय इति सूचयितुमेतत् श्रुत्युक्तिः।

'ಯಾ ಪ್ರಾಣೇನ ಸಂಭವಶ್ಯದಿತಿರ್ದೇವತಾಮಯೀ' ಎಂಬುದು ಕಾಠಕೋಪನಿಷತ್ತಿನ ವಾಕ್ಯ. ಇದರಲ್ಲಿ ಶ್ರುತವಾದ 'ಅದಿತಿ' ಶಬ್ದವು ಸ್ತ್ರೀಲಿಂಗವಾಗಿದೆ.

ಸಿದ್ಧಾಂತದಲ್ಲಿಯೂ ಕೂಡ ಕೇವಲ ಅನ್ಯಪರವಾದ ಶ್ರುತಿಗಳನ್ನಷ್ಟೇ ಇಲ್ಲಿ ಉದಾಹರಿಸುತ್ತಿಲ್ಲ ಹೊರತಾಗಿ ಉಪನಿಷತ್ತುಗಳಲ್ಲಿರುವ ಅನ್ಯಪರವಲ್ಲದ ಕೇವಲ ಭಗವನ್ಮಾತ್ರಪರವಾದ ಎಲ್ಲಾ ಬಗೆಯ ಸ್ತ್ರೀಲಿಂಗಶಬ್ದಗಳೂ ಕೂಡ ಈ ಅಧಿಕರಣದ ವಿಷಯವಾಗಿವೆ. ಇದನ್ನು ತಿಳಿಸುವುದಕ್ಕಾಗಿ 'ಯಾ ಪ್ರಾಣೇನ' ಎಂಬ ಶ್ರುತಿಯನ್ನು ಟೀಕೆಯಲ್ಲಿ ಉಲ್ಲೇಖಿಸಿದ್ದಾರೆ.

ಗಾಯತ್ರೀ ಶ್ರುತಿಯೂ ಕೂಡ ಈ ಅಧಿಕರಣದ ವಿಷಯವಾಕ್ಯ

भावदीपः – तेन छन्दोनयाद्युक्तगायत्र्यादिश्रुतिरप्यनेन रूपेणात्रोदाहणमिति सूचितम् । अन्यपरत्वे अन्यमात्रपरत्वे । औपनिषदशब्दाभिप्राये तु यथा श्रुतमेव योज्यम् ।

ಹೀಗೆ ಹೇಳಿದ್ದರಿಂದ ಪ್ರಥಮಪಾದದ ಗಾಯತ್ರ್ಯಧಿಕರಣದಲ್ಲಿ ಉಲ್ಲೇಖಿಸಲ್ಪಟ್ಟ ಗಾಯತ್ರ್ಯಾದಿ ಶ್ರುತಿಯೂ ಕೂಡ ಈ ಅಧಿಕರಣದಲ್ಲಿ ವಿಷಯವಾಗುತ್ತದೆಂಬುದನ್ನು ಸೂಚನೆ ಮಾಡಿದಂತಾಯಿತು.

'ಅನ್ಯಪರತ್ವೇ' ಎಂಬ ಪದಕ್ಕೆ 'ಬೇರೆ ಪದಾರ್ಥವನ್ನಷ್ಟೇ ಪ್ರತಿಪಾದನೆ ಮಾಡುವುದಾದರೆ' ಎಂದರ್ಥ. ಉಪನಿಷತ್ತಿನಲ್ಲಿರುವ ಶಬ್ದವನ್ನು ವಿವಕ್ಷಿಸುವುದಾದರೆ ಯಥಾಶ್ರುತವಾದುದ್ದನ್ನೇ ಇಟ್ಟುಕೊಳ್ಳಬೇಕು.

'ಅನ್ಯಪರತ್ವೇ' ಎಂಬುದಕ್ಕೆ ಮತ್ತೊಂದು ವ್ಯಾಖ್ಯಾನ

भावदीपः – यद्वाऽन्यपरत्वेऽपि विष्णुपरत्वाभाव इत्येवार्थः । विष्णुरन्यद्वेति संशयेऽपि विष्णुर्भवति न वेत्येवार्थः ।

ಅಥವಾ 'ಅನ್ಯಪರತ್ವೇ' ಎಂಬ ಪದಕ್ಕೆ ಅನ್ಯಪರವಾದರೂ ಕೂಡ ವಿಷ್ಣುಪರವಾಗದಿದ್ದರೆ ಎಂಬರ್ಥವನ್ನು ವಿವಕ್ಷಿಸಬಹುದು. ಇದರಂತೆ 'ವಿಷ್ಣುಃ ಅನ್ಯದ್ವಾ' ಎಂಬ ಸಂಶಯವಾಕ್ಯದಲ್ಲಿಯೂ ವಿಷ್ಣುವು ಪ್ರಕೃತ್ಯಾದಿಶಬ್ದಗಳಿಂದ ಪ್ರತಿಪಾದ್ಯನಾಗುತ್ತಾನೋ ಇಲ್ಲವೋ? ಎಂಬರ್ಥವನ್ನೇ ವಿವಕ್ಷಿಸಬಹುದು.

ಅಧಿಕರಣದ ಪೂರ್ವಪಕ್ಷವೇನು ?

ಭಾವದೀಪಃ – अत एव न प्रकृत्यादिशब्दवाच्यो हरिरित्येव पूर्वपक्षकोटिरग्रे वक्ष्यते । तथाऽन्यपरभगवन्मात्रपरद्विविधवाक्यसाधारणमेतदिति ध्येयम् ।

ಆದ್ದರಿಂದಲೇ ಪ್ರಕೃತ್ಯಾದಿಶಬ್ದಗಳಿಂದ ಶ್ರೀಹರಿಯು ಪ್ರತಿಪಾದ್ಯನಾಗುವುದಿಲ್ಲ ಎಂದಷ್ಟೇ ಪೂರ್ವಪಕ್ಷ ಕೋಟಿಯನ್ನು ಟೀಕೆಯಲ್ಲಿ ಮುಂದೆ ತೋರಿಸುತ್ತಾರೆ. ಅದರಂತೆ ಅನ್ಯಪರವಾದ ಮತ್ತು ಭಗವನ್ಮಾತ್ರಪರವಾದ ಎರಡು ಬಗೆಯ ವಾಕ್ಯಗಳ ವಿವಕ್ಷೆಯಿಂದ ಹೀಗೆ ವ್ಯಾಖ್ಯಾನವನ್ನು ತಿಳಿಯಬೇಕು.

'ನಾರಾಯಣೇ' ಇತ್ಯಾದಿ ಸ್ತ್ರೀರೂಪಗಳಿವೆಯಲ್ಲವೇ ?

ಭಾವದೀಪಃ – अनुभाष्योक्तां युक्तिमाह – स्त्रीलिङ्गत्वादिति ।। स्त्रीलिङ्गवाचित्वादित्यर्थः । नारायण्यादिरूपविशेषे स्त्रीलिङ्गत्वं युज्यत इत्याशङ्क्य तत्र श्रुतिविरोधमाह – नच रूपेति ।।

ಅನುವ್ಯಾಖ್ಯಾನದಲ್ಲಿ ಹೇಳಿದ ಯುಕ್ತಿಯನ್ನು ಟೀಕೆಯಲ್ಲಿ 'ಸ್ತ್ರೀಲಿಂಗತ್ವಾತ್' ಎಂದು ಉಲ್ಲೇಖಿಸಿದ್ದಾರೆ. 'ಸ್ತ್ರೀಲಿಂಗತ್ವಾತ್' ಎಂಬ ಲಿಂಗಕ್ಕೆ ಸ್ತ್ರೀಲಿಂಗವಾಚಿಯಾದ್ದರಿಂದ ಎಂದರ್ಥ.

'ನಾರಾಯಣೇ' ಮೊದಲಾದವು ಭಗವಂತನ ಹೆಣ್ಣಿನ ರೂಪಗಳಾಗಿವೆ. ಇವುಗಳಲ್ಲಿ ಸ್ತ್ರೀಲಿಂಗತ್ವವು ಯುಕ್ತವಾಗುತ್ತದಲ್ಲವೇ? ಎಂದು ಆಶಂಕಿಸಿ ಶ್ರುತಿವಿರೋಧವನ್ನು 'ನಚ ರೂಪ' ಎಂಬ ಟೀಕಾ ಮಾತಿನಿಂದ ಹೇಳುತ್ತಿದ್ದಾರೆ.

'ನೈನಂ ವಾಚಾ ಸ್ತ್ರಿಯಂ ಬ್ರುವನ್' ಎಂಬುದಕ್ಕೆ ವ್ಯಾಖ್ಯಾನ

ಭಾವದೀಪಃ – ननु नैनं वाचा स्त्रियं ब्रुवन्नेतमस्त्री पुमान्ब्रुवन् । पुमांसं न ब्रुवन्नेनं वदन् वदति कश्चनेति मन्त्रे पुमांसं स्त्रियं च वदन्नेव न वदीत्युक्तत्वादुभयात्मकं स्वरूपं प्रतीयते । अस्त्रीपुमानिति ब्रुवन्नपि न वदतीत्युक्तत्वात् स्त्रीत्वं पुंस्त्वं च प्रतीयते । विष्णेर्लौकिकस्त्रीपुंबिलक्षणत्व ादस्त्रीपुमानित्यपि वदन्नपि वदतीत्याद्यैतरेय भाष्योक्त्या केवलस्य लौकिकस्य वाऽस्त्रीत्वस्य निषेधपरं तद्वाक्यम् । अन्यथा नैनमस्त्री पुमान् ब्रुवन्नित्युत्तर वाक्यविरोधात् ।

ಪ್ರಶ್ನೆ -

ನೈನಂ ವಾಚಾ ಸ್ತ್ರಿಯಂ ಬ್ರುವನ್ನೇತಮಸ್ತ್ರೀ ಪುಮಾನ್ ಬ್ರುವನ್ ।
ಪುಮಾಂಸಂ ನ ಬ್ರುವನ್ನೇನಂ ವದನ್ ವದತಿ ಕಶ್ಚನ ॥

ಭಗವಂತನು ಸ್ತ್ರೀರೂಪ, ಹಾಗೂ ಪುರುಷರೂಪವನ್ನು ಹೊಂದಿದ್ದಾನೆ. ಇವನನ್ನು ಯಾವುದೇ ಪ್ರಮಾಣದ ಆಧಾರವಿಲ್ಲದೇ ಕೇವಲ ಮಾತಿನಿಂದ, ಕೇವಲ ಸ್ತ್ರೀಯನ್ನಾಗಿ ಬಣ್ಣಿಸುವವನು ಸರಿಯಾಗಿ ವರ್ಣಿಸುತ್ತಿಲ್ಲ. ಸ್ತ್ರೀಯೂ ಅಲ್ಲದ, ಪುರುಷನೂ ಅಲ್ಲದ ಒಬ್ಬನನ್ನಾಗಿ ವರ್ಣಿಸುವವನು ಸರಿಯಾಗಿ ವರ್ಣಿಸುತ್ತಿಲ್ಲ. ಕೇವಲ ಪುರುಷನನ್ನಾಗಿ ವರ್ಣಿಸುವವನೂ ಸರಿಯಾಗಿ ವರ್ಣಿಸುವುದಿಲ್ಲ. ಸ್ತ್ರೀಯನ್ನಾಗಿಯೂ, ಪುರುಷನನ್ನಾಗಿಯೂ ವರ್ಣಿಸುವ ಜ್ಞಾನಿಯೇ ಸರಿಯಾಗಿ ವರ್ಣಿಸುತ್ತಾನೆ.

ಈ ಮಂತ್ರದಲ್ಲಿ 'ಪುಮಾಂಸಂ ನ ಬ್ರುವನ್ನೇನಂ ವದಂ ವದತಿ' ಎಂದು ಹೇಳಿರುವುದರಿಂದ ಸ್ತ್ರೀರೂಪ ಹಾಗೂ ಪುರುಷರೂಪ ಎರಡನ್ನೂ ಹೊಂದಿರುತ್ತಾನೆಂದು ತಿಳಿಸಿದಂತಾಗುತ್ತದೆ. 'ಅಸ್ತ್ರೀ ಪುಮಾನ್ ಬ್ರುವನ್' ಎಂದು ಹೇಳಿದ್ದರೂ ಕೂಡ 'ನ ವದತಿ' ಎಂದು ಹೇಳಿರುವುದರಿಂದ ಸ್ತ್ರೀತ್ವ ಹಾಗೂ ಪುಂಸ್ತ್ವಗಳೆರಡೂ ಪ್ರತೀತವಾಗುತ್ತವೆ. ವಿಷ್ಣುವಿನಲ್ಲಿ ಲೌಕಿಕರಾದ ಸ್ತ್ರೀ-ಪುರುಷರಿಗಿಂತ ವೈಲಕ್ಷಣ್ಯವಿದೆ. ಆದ್ದರಿಂದ 'ಅಸ್ತ್ರೀ ಪುಮಾನ್' ಎಂದು ಶ್ರುತಿ ಕರೆದಿದೆ. ಹೀಗೊಪ್ಪದಿದ್ದರೆ 'ನೈನಮಸ್ತ್ರೀ ಪುಮಾನ್ ಬ್ರುವನ್' ಎಂಬ ಉತ್ತರವಾಕ್ಯದ ವಿರೋಧ ಬರುತ್ತದೆ.

(ಸ್ಪಷ್ಟವಾಗಿ ಹೀಗೆ ತಿಳಿಯಬೇಕು - 'ಅಸ್ತ್ರೀ ಪುಮಾನ್ ಬ್ರುವನ್' ಎಂದರೆ ಭಗವಂತನನ್ನು ಸ್ತ್ರೀರೂಪನಲ್ಲದ, ಪುರುಷರೂಪನಲ್ಲದವನನ್ನಾಗಿ ವರ್ಣಿಸುವವನು ಎಂದರ್ಥ. ಏಳು ವಿಭಕ್ತಿಗಳ ಅರ್ಥದಲ್ಲಿಯೂ ಪ್ರಥಮಾವಿಭಕ್ತಿಯ ಪ್ರಯೋಗವಿದೆ. ಆದ್ದರಿಂದ 'ಅಸ್ತ್ರೀ ಪುಮಾನ್' ಎಂಬ ಪ್ರಥಮಾವಿಭಕ್ತಿಯು ದ್ವಿತೀಯಾವಿಭಕ್ತಿಯ ಅರ್ಥದಲ್ಲಿದೆ. ಸ್ವಾತಂತ್ರ್ಯವನ್ನು ತಿಳಿಸುವ ಅಭಿಪ್ರಾಯವಿರುವಾಗ ವಿಭಕ್ತಿ ವ್ಯತ್ಯಾಸ ಮಾಡಬಹುದೆಂದು ಸೂತ್ರ ಹೇಳುತ್ತದೆ. ಭಗವಂತನು ಸ್ವತಂತ್ರನೆಂಬುದು ಪ್ರಸಿದ್ಧ. ಅವನ ಪ್ರೇರಣೆಗೊಳಗಾಗಿಯೇ ಅವನನ್ನು ವರ್ಣಿಸುತ್ತಾನೆ ಎಂಬುದು ಈ ವಿಭಕ್ತಿವ್ಯತ್ಯಾಸದ ಅಭಿಪ್ರಾಯ. 'ವದತಿ' ಎಂಬುದನ್ನು ಮೂರು ನಕಾರಗಳೊಂದಿಗೆ ಮಾತ್ರವಲ್ಲದೇ 'ವದನ್ ವದತಿ' ಎಂದು 'ವದನ್' ಎಂಬುದರೊಡನೆಯೂ ಅನ್ವಯ ಮಾಡಬೇಕು. ಹಾಗೇ ಒಂದು ನಕಾರವನ್ನು ಅನುವೃತ್ತಿಮಾಡಿ 'ವದನ್ನೇವ ನ ವದತಿ' ಎಂದು ಅನ್ವಯ ಮಾಡಬೇಕು. ಭಗವಂತನು ಸ್ತ್ರೀರೂಪನೂ, ಪುರುಷರೂಪನೂ ಆಗಿರುತ್ತಾನೆ. ಆದ್ದರಿಂದ ಹಾಗೇ ವರ್ಣಿಸುವವನು ಸರಿಯಾಗಿಯೇ ವರ್ಣಿಸುತ್ತಾನೆ. ವಸ್ತುತಃ ಭಗವಂತನು ಲೋಕವಿಲಕ್ಷಣನಾದ್ದರಿಂದ ಸ್ತ್ರೀಯೂ ಅಲ್ಲ, ಪುರುಷನೂ ಅಲ್ಲ

ಎನ್ನುವವನೂ ಸರಿಯಾಗಿಯೇ ವರ್ಣಿಸುತ್ತಾನೆ. ಮತ್ತು ಲೋಕವಿಲಕ್ಷಣನಾದ್ದರಿಂದಲೇ ಸ್ತ್ರೀಯೂ, ಪುರುಷನೂ ಆಗಿದ್ದಾನೆ ಎನ್ನುವವನೂ ಸರಿಯಾಗಿ ವರ್ಣಿಸಿದ್ದಾನೆ.

ನಾರಾಯಣನು ಸ್ತ್ರೀರೂಪನೂ, ಪುರುಷರೂಪನೂ ಆಗಿರುವುದರಿಂದ ಅವನನ್ನು ಪುರುಷನೆಂದೂ, 'ಸ್ತ್ರೀ' ಎಂದೂ ಹೇಳಬಹುದು. ಲೋಕವೈಲಕ್ಷಣವಿರುವುದರಿಂದ ಲೌಕಿಕ ಸ್ತ್ರೀಯೂ ಅಲ್ಲ. ಲೌಕಿಕ ಪುರುಷನೂ ಅಲ್ಲ ಎಂದೂ ಕೂಡ ಹೇಳಬಹುದು. ವಸ್ತುತಃ ಸರ್ವಶಕ್ತನಾದ ವಿಷ್ಣುವಿಗೆ ನಪುಂಸಕರೂಪವು ಎಲ್ಲಿಯೂ ಇರುವುದಿಲ್ಲ. ಆದರೂ ಲೌಕಿಕ ಸ್ತ್ರೀ-ಪುರುಷರಂತೆ ಅನುರಾಗಕ್ಕೆ ಪರವಶನಾಗದಿರುವುದರಿಂದ ನಪುಂಸಕ ಶಬ್ದಗಳಿಂದಲೂ ಕರೆಸಿಕೊಳ್ಳುತ್ತಾನೆ.)

ರೂಪವಿಶೇಷವನ್ನು ವಿವಕ್ಷಿಸಬಹುದೇ ?

भावदीपः – तथाच रूपविशेषस्य स्त्रीत्वे श्रुतिविरोधाभावात्तदपेक्षया प्रकृत्यादिशब्दोपपत्तिरिति चेन्न पुंरूपे स्त्रीशब्दाप्रयोजापातात् ।

ಪ್ರಶ್ನೆ - ಭಗವಂತನ ರೂಪವಿಶೇಷವು ಹೆಣ್ಣಾಗಿರುವುದರಿಂದ ಆ ರೂಪವನ್ನಷ್ಟೇ ಶ್ರುತಿಯು ವಿವಕ್ಷಿಸಿದೆಯೆಂದು ಹೇಳಿದಾಗ ವಿರೋಧ ಬರುವುದಿಲ್ಲ. ಮತ್ತು ಪ್ರಕೃತ್ಯಾದಿಶಬ್ದಗಳ ಸಮನ್ವಯವೂ ಕೂಡ ಸಿದ್ಧವಾಗುತ್ತದಲ್ಲವೇ?

ಉತ್ತರ - ಇದು ತಪ್ಪು. ಹಾಗಾದರೆ ಪುರುಷರೂಪದಲ್ಲಿ ಸ್ತ್ರೀಶಬ್ದದ ಪ್ರಯೋಗವೇ ಬಾರದಿರಬೇಕಾದೀತು.

ಗಾಯತ್ರ್ಯಧಿಕರಣದ ಪ್ರಮೇಯವೂ ಕೂಡ ಅಸಿದ್ಧವಾದೀತು

भावदीपः – तथा च त्रिपादस्यामृतं दिवीत्युक्तश्वेतद्वीपादिस्थनारायणादिपुंरूपे छन्दोनयोक्तगायत्र्यादिशब्दोक्तिर्न स्यादिति तात्पर्यात् ।

ಆದ್ದರಿಂದ 'ತ್ರಿಪಾದಸ್ಯಾಮೃತಂ ದಿವಿ' ಎಂಬ ಶ್ರುತಿಯಲ್ಲಿ ಯಾವ ಶ್ವೇತದ್ವೀಪದಲ್ಲಿ ನೆಲೆಸಿರುವ ನಾರಾಯಣನ ಪುರುಷರೂಪವು ವರ್ಣಿತವಾಗಿದೆಯೋ, ಅದರಲ್ಲಿ ಛಂದೋಧಿಕರಣದಲ್ಲಿ ಹೇಳಲ್ಪಟ್ಟ ಗಾಯತ್ರೀ ಮೊದಲಾದ ಶಬ್ದಗಳ ಸಮನ್ವಯವೂ ಸಿದ್ಧವಾಗದಿರಬೇಕಾದೀತು.

'ದೇವತಾ' 'ಖಟ್ವಾ' ಮೊದಲಾದ ಶಬ್ದಗಳ ಉದಾಹರಣೆ

भावदीपः – ननु देवताखट्वादिशब्दवाच्येषु स्त्रीलिङ्गाभावेऽपि स्त्रीलिङ्गशब्दवाच्यत्वं शब्दसाधुत्वमात्रेण युक्तं तद्वदिह स्यादिति चोद्यं

सदृष्टान्तमुक्त्वा प्रतिज्ञादृष्टान्तेत्यादिसूत्रत्रयोक्तहेतुव्यावर्त्यहेतुना निराह – नच नपुंसकेति ।।

ಪ್ರಶ್ನೆ - 'ದೇವತಾ ಖಟ್ವಾ' ಮೊದಲಾದ ಶಬ್ದ ಪ್ರತಿಪಾದ್ಯಗಳಲ್ಲಿ ಸ್ತ್ರೀಲಿಂಗವಿರುವುದಿಲ್ಲ. ಆದರೂ ಸ್ತ್ರೀಲಿಂಗಶಬ್ದವಾಚ್ಯತ್ವವು ಶಬ್ದಸಾಧುತ್ವ ಮಾತ್ರದಿಂದ ಯುಕ್ತವೆಂದು ಹೇಗೆ ಹೇಳುವಿರೋ, ಅದರಂತೆ ಪರಮಾತ್ಮನು ಪುಲ್ಲಿಂಗನಾಗಿದ್ದರೂ, ಸ್ತ್ರೀಲಿಂಗಶಬ್ದಗಳ ಸಮನ್ವಯವನ್ನು ಮಾಡಬಹುದಲ್ಲವೇ?

ಉತ್ತರ - ಇದು ತಪ್ಪು. ಈ ಪ್ರಶ್ನೆಗೆ 'ಪ್ರತಿಜ್ಞಾದೃಷ್ಟಾಂತ' ಇತ್ಯಾದಿ ಮೂರು ಸೂತ್ರಗಳಲ್ಲಿ ಹೇಳಲ್ಪಟ್ಟ ಹೇತುವಿನಿಂದ ಇದನ್ನು ನಿರಾಕರಣೆ ಮಾಡುತ್ತಿದ್ದಾರೆ 'ನಚ ನಪುಂಸಕ' ಇತ್ಯಾದಿ ಟೀಕೆಯಿಂದ.

'ನಾಮಾನಿ ಸರ್ವಾಣಿ' ಎಂಬ ಶ್ರುತಿಗೆ ಅರ್ಥಸಂಕೋಚ ಮಾಡಲು ಕಾರಣ

भावदीपः – ननु चमसवदविशेषादित्यादावुक्तस्य नामानि सर्वाणि इत्यादेरेव नियमाकत्वादित्यतो विशेषेत्युक्तम् । तत्तु सामान्यं वक्ष्यमाणदिशा सङ्कुचितसर्वनामपरमिति भावः ।

ಪ್ರಶ್ನೆ - 'ಚಮಸವದವಿಶೇಷಾತ್' ಎಂಬ ಸೂತ್ರದಲ್ಲಿ ಯಾವ 'ನಾಮಾನಿ ಸರ್ವಾಣಿ ಯಮಾವಿಶಂತಿ' ಎಂಬ ಶ್ರುತಿಯನ್ನು ಉಲ್ಲೇಖಮಾಡಿದ್ದಾರೋ, ಆ ಶ್ರುತಿಯ ಆಧಾರದಿಂದ ಪರಮಾತ್ಮನು ಸ್ತ್ರೀಲಿಂಗಾದಿ ಶಬ್ದಗಳಿಂದಲೂ ಪ್ರತಿಪಾದ್ಯನಾಗುತ್ತಾನೆಂಬ ನಿಯಾಮಕ ಪ್ರಮಾಣವಿದೆಯಲ್ಲವೇ?

ಉತ್ತರ - ಇದು ತಪ್ಪು. ಮೇಲೆ ಹೇಳಿದ ನ್ಯಾಯಗಳ ವಿರೋಧದಿಂದ, 'ನಾಮಾನಿ ಸರ್ವಾಣಿ' ಎಂಬ ಶ್ರುತಿಗೆ ಅರ್ಥಸಂಕೋಚವನ್ನು ಮಾಡಬೇಕಾಗುತ್ತದೆ. ಮುಂದೆ ಹೇಳುವಂತೆ ಸಂಕುಚಿತವಾದ ಸರ್ವಶಬ್ದಗಳ ಸಮನ್ವಯವನ್ನಷ್ಟೇ ಮಾಡಬೇಕು.

ಸ್ತ್ರೀಶಬ್ದದ ಪ್ರವೃತ್ತಿನಿಮಿತ್ತ ಪರಮಾತ್ಮನಲ್ಲಿಲ್ಲ

भावदीपः – यद्वा बृहन्तो ह्यस्मिन्गुणा इत्यादेर्गुणपूर्णत्वरूपब्रह्मपदवाच्यत्वनियामकस्येवेह प्रकृत्यादिस्त्रीलिङ्गशब्दप्रवृत्तिनिमित्तरूपनियामकविशेषस्याभावादित्यात्मकृतेरित्यादि सूत्रद्वयव्यावर्त्योक्तिः । तदधीनत्वसूत्रेण गतार्थत्वमाशङ्क्य निराह – न चाऽस्त्रीभूतस्यापीति ।।

ಅಥವಾ 'ಬೃಹಂತೋ ಹ್ಯಸ್ಮಿನ್‌ಗುಣಾಃ' ಎಂಬ ಶ್ರುತಿಯಲ್ಲಿ ಗುಣಪೂರ್ಣತ್ವವನ್ನು ಪ್ರತಿಪಾದನೆ ಮಾಡುವ ಬ್ರಹ್ಮಪದವಾಚ್ಯತ್ವವು ಪರಮಾತ್ಮನಲ್ಲಿ ಹೇಗೆ ಯುಕ್ತವಾಗುತ್ತದೋ, ಅದರಂತೆ ಇಲ್ಲಿ ಪ್ರಕೃತಿ

ಮೊದಲಾದ ಸ್ತ್ರೀಲಿಂಗಶಬ್ದಗಳ ಪ್ರವೃತ್ತಿನಿಮಿತ್ತವು ಪರಮಾತ್ಮನಲ್ಲಿ ಇರುತ್ತದೆ ಎನ್ನಲು ಯಾವುದೇ ನಿಯಾಮಕ ಪ್ರಮಾಣಗಳು ಇರುವುದಿಲ್ಲ. ಹೀಗೆ 'ಅತಕೃತೇಃ' ಇತ್ಯಾದಿ ಎರಡು ಸೂತ್ರಗಳಿಂದ ವ್ಯಾವರ್ತ್ಯವಾದ ಪೂರ್ವಪಕ್ಷವನ್ನು ಟೀಕೆಯಲ್ಲಿ ಹೇಳಿರುತ್ತಾರೆ.

'ತದಧೀನತ್ವ' ಸೂತ್ರದಿಂದ ಈ ಆಕ್ಷೇಪವು ಗತಾರ್ಥವಾಗಿದೆಯಲ್ಲವೇ? ಎಂಬ ಆಶಂಕೆಯನ್ನು 'ನಚಾऽಸ್ತ್ರೀಭೂತಸ್ಯಾಪಿ' ಎಂಬ ವಾಕ್ಯದಿಂದ ನಿರಾಕರಣೆ ಮಾಡಿದ್ದಾರೆ.

'ನಚಾऽಸ್ತ್ರೀಭೂತಸ್ಯಾಪಿ' ಎಂಬ ವಾಕ್ಯಕ್ಕೆ ಎರಡು ವ್ಯಾಖ್ಯಾನ

ಭಾವದೀಪಃ – ಏತದ್ವಾಕ್ಯಂ ಪೂರ್ವವದ್ದ್ವೇಧಾ ವ್ಯಾಖ್ಯೇಯಮ್ ।। ಉಕ್ತೇತಿ ।। ಸ್ತ್ರೀಲಿಙ್ಗಾ-ಯೋಗರೂಪನ್ಯಾಯೇನೇತ್ಯರ್ಥಃ ।। ಅತ ಇತಿ ಸಾಧಕಭಾವಾದಿತ್ಯರ್ಥಃ ।

'ನಚಾऽಸ್ತ್ರೀಭೂತಸ್ಯಾಪಿ' ಎಂಬ ವಾಕ್ಯವನ್ನು ಹಿಂದಿನಂತೆ ಎರಡು ಬಗೆಯಲ್ಲಿ ವ್ಯಾಖ್ಯಾನ ಮಾಡಿಕೊಳ್ಳಬೇಕು. 'ಉಕ್ತ' ಎಂದರೆ ಸ್ತ್ರೀಲಿಂಗವು ಅಯುಕ್ತವಾಗುತ್ತದೆಂಬ ನ್ಯಾಯದಿಂದ ಎಂದರ್ಥ. 'ಅತಃ' ಎಂದರೆ ಸಾಧಕಪ್ರಮಾಣ ಇಲ್ಲದಿರುವುದರಿಂದ ಎಂದರ್ಥ.

ಪೂರ್ವಪಕ್ಷದ ಫಲ

ಭಾವದೀಪಃ – ಪೂರ್ವಪಕ್ಷಫಲಮಾಹ – ನೇತಿ ।। ಹರೌ ಸ್ತ್ರೀಶಬ್ದಪ್ರವೃತ್ತ್ಯುಕ್ತೇರಸಾಙ್ಗತ್ಯ-ನಿರಾಸಾಯ ಭಾಷ್ಯಾರ್ಥಮಾಹ – ಏವಮಿತಿ ।। ಆಕಾಙ್ಕ್ಷಾಕ್ರಮೇಣ ಭಾಷ್ಯಂ ವ್ಯಾಚಷ್ಟೇ ।। ಪ್ರಕೃತ್ಯಾದೀತಿ।।

ಪೂರ್ವಪಕ್ಷದ ಫಲವನ್ನು 'ನ' ಇತ್ಯಾದಿಯಾಗಿ ಹೇಳಿರುತ್ತಾರೆ. ಶ್ರೀಹರಿಯಲ್ಲಿ ಸ್ತ್ರೀಶಬ್ದದ ಪ್ರವೃತ್ತಿನಿಮಿತ್ತವನ್ನು ಹೇಳುವುದರಿಂದ ಅಸಂಗತಿಯು ಬರುವುದಿಲ್ಲ ಎಂಬುದಾಗಿ ತಿಳಿಸಲು ಭಾಷ್ಯದ ಅರ್ಥವನ್ನು 'ಏವಂ' ಎಂಬುದರಿಂದ ನಿರೂಪಣೆ ಮಾಡಿದ್ದಾರೆ. ಆಕಾಂಕ್ಷಕ್ರಮದಿಂದ ಭಾಷ್ಯವನ್ನು 'ಪ್ರಕೃತ್ಯಾದಿ' ಎಂಬ ಟೀಕೆಯಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ.

ಪುಲ್ಲಿಂಗ ಶಬ್ದಗಳಿಂದಷ್ಟೇ ಪರಮಾತ್ಮನು ಪ್ರತಿಪಾದ್ಯನಲ್ಲ

ಭಾವದೀಪಃ – ಸೂತ್ರಭಾಷ್ಯಯೋಃ ಪ್ರಕೃತಿಶಬ್ದಸ್ತಸ್ತದಾದಿಸ್ತ್ರೀಲಿಙ್ಗಶಬ್ದಮಾತ್ರೋಪ-ಲಕ್ಷಣಮಿತ್ಯಗ್ರೇ ವ್ಯಕ್ತತ್ವಾದಾದಿಪದಮ್ ।। ವಾಚ್ಯಶ್ಚೇತಿ ।। ನ ಕೇವಲಂ ಪ್ರಾಗುಕ್ತಪುಲಿಙ್ಗ-ಶಬ್ದವಾಚ್ಯಶ್ಚೇತಿ ಸೌತ್ರಚಶಬ್ದಾರ್ಥೋಕ್ತಿಪರಭಾಷ್ಯಸ್ಥಾಪಿ ಶಬ್ದಾರ್ಥೋ ದರ್ಶಿತಃ ।

ಸೂತ್ರ ಹಾಗೂ ಭಾಷ್ಯಗಳಲ್ಲಿ ಉಲ್ಲೇಖ ಮಾಡಲ್ಪಟ್ಟ ಪ್ರಕೃತಿ ಶಬ್ದವು ಉಳಿದ ಸ್ತ್ರೀಲಿಂಗಶಬ್ದಗಳಿಗೆ ಉಪಲಕ್ಷಕವಾಗಿದೆ ಎಂಬುದಾಗಿ ಮುಂದೆ ಸ್ಪಷ್ಟಪಡಿಸುತ್ತಾರೆ. ಅದಕ್ಕಾಗಿ ಇಲ್ಲಿ 'ಪ್ರಕೃತ್ಯಾದಿ' ಎಂಬುದಾಗಿ 'ಆದಿ' ಪದವನ್ನು ಉಲ್ಲೇಖಿಸಿದ್ದಾರೆ.

'ವಾಚ್ಯಶ್ಚ' ಎಂಬಲ್ಲಿರುವ ಚ ಶಬ್ದವು ಭಾಷ್ಯದಲ್ಲಿರುವ 'ಅಪಿ' ಶಬ್ದದ ವ್ಯಾಖ್ಯಾನವಾಗಿದೆ. ಕೇವಲ ಹಿಂದೆ ಹೇಳಲ್ಪಟ್ಟ ಪುಲ್ಲಿಂಗ ಶಬ್ದಗಳಿಂದಷ್ಟೇ ಪರಮಾತ್ಮನು ಪ್ರತಿಪಾದ್ಯನಲ್ಲ. ಸ್ತ್ರೀಲಿಂಗ ಶಬ್ದಗಳಿಂದಲೂ ಕೂಡ ಪ್ರತಿಪಾದ್ಯನಾಗಿದ್ದಾನೆ. ಇದನ್ನು ಸೂತ್ರದಲ್ಲಿರುವ 'ಚ' ಶಬ್ದವು ನಿರೂಪಣೆ ಮಾಡುತ್ತಿದೆ.

ಎಲ್ಲಾ ಸ್ತ್ರೀಲಿಂಗಶಬ್ದಗಳೂ ಕೂಡ ಪರಮಾತ್ಮನಲ್ಲೇ ಮುಖ್ಯ

भावदीपः – ननु सर्वस्त्रीशब्दसमुच्चायकश्चशब्द इति तत्वप्रदीपोक्तेरत्र पुनः सर्वपुल्लिङ्गशब्दसमुच्चायकत्वोक्तौ कथं सर्वस्त्रीशब्दलाभ इत्यतोऽस्मिन् व्याख्याने तल्लाभप्रकारमाह – प्रकृतिपदमिति ।। एतेन स्त्रीशब्दा अपीति सम्बन्धभाष्यमुपपादितमिति ध्येयम् ।।१।।

ಪ್ರಶ್ನೆ - ಸಕಲ ಸ್ತ್ರೀಶಬ್ದಗಳ ಸಮುಚ್ಚಯಕ್ಕಾಗಿ 'ಚ' ಶಬ್ದವನ್ನು ಸೂತ್ರದಲ್ಲಿ ಹೇಳಲಾಗಿದೆ ಎಂಬುದಾಗಿ ತತ್ವಪ್ರದೀಪದಲ್ಲಿ ವ್ಯಾಖ್ಯಾನ ಮಾಡಿದ್ದಾರೆ. ಆದರೆ ನೀವು ಹಿಂದೆ ಹೇಳಲ್ಪಟ್ಟ ಪುಲ್ಲಿಂಗ ಶಬ್ದಗಳ ಸಮುಚ್ಚಯಕ್ಕಾಗಿ 'ಚ' ಶಬ್ದ ಹೇಳಲಾಗಿದೆಯೆಂದು ವ್ಯಾಖ್ಯಾನ ಮಾಡುತ್ತಿದ್ದೀರಿ. ಇದರಿಂದ ಸಕಲ ಸ್ತ್ರೀಶಬ್ದಗಳ ಸಂಗ್ರಹವನ್ನು ಹೇಗೆ ಮಾಡಿದಂತಾಗುತ್ತದೆ?

ಉತ್ತರ - ಈ ವ್ಯಾಖ್ಯಾನದಲ್ಲಿಯೂ ಸಕಲ ಸ್ತ್ರೀಲಿಂಗಶಬ್ದಗಳ ಸಂಗ್ರಹವೂ ಆಗುತ್ತದೆಂದು 'ಪ್ರಕೃತಿ ಪದಂ' ಎಂಬ ವಾಕ್ಯದಿಂದ ಪ್ರತಿಪಾದನೆ ಮಾಡಿದ್ದಾರೆ. ಇದರಿಂದ 'ಸ್ತ್ರೀಶಬ್ದಾ ಅಪಿ' ಎಂಬ ಸಂಬಂಧ ಭಾಷ್ಯವನ್ನೂ ಕೂಡ ವ್ಯಾಖ್ಯಾನ ಮಾಡಿದಂತಾಯಿತು.

ಬ್ರಹ್ಮಸೂತ್ರ

'ಅಭಿಧ್ಯೋಪದೇಶಾಚ್ಚ' ಎಂಬ ಸೂತ್ರಕ್ಕೆ ವ್ಯಾಖ್ಯಾನ

ಬ್ರಹ್ಮಸೂತ್ರಮ್ – ।। ಅಭಿಧ್ಯೋಪದೇಶಾಚ್ಚ ।। ೨ ।।

ಸೂತ್ರಾರ್ಥ - ಭಗವಂತನ ಇಚ್ಛೆಗೆ ಪ್ರಕೃತಿ, ವಾಸನಾ, ಮಾಯಾ ಇತ್ಯಾದಿ ಅನೇಕ ಹೆಸರುಗಳಿವೆ ಎಂದು ಪ್ರಮಾಣವಿರುವುದರಿಂದ, ವಿಷ್ಣುವಿನ ಇಚ್ಛೆಯೇ ಪ್ರಕೃತಿಶಬ್ದದಿಂದ ಪ್ರತಿಪಾದ್ಯವಾಗುತ್ತದೆ. ಅವನ ಇಚ್ಛೆಯೇ ಅವನ ಸ್ವರೂಪವಾದ್ದರಿಂದ, ಪ್ರಕೃತಿಶಬ್ದದಿಂದ ವಿಷ್ಣುವೇ ಪ್ರತಿಪಾದ್ಯನು.

ಅರ್ಥ -- ಅಭಿಧ್ಯಾಯಾಃ = ಈಶ್ವರನ ಇಚ್ಛೆಯನ್ನು, ಉಪದೇಶಾತ್ = 'ಮಾಯಾಂ ತು ಪ್ರಕೃತಿಂ ವಿದ್ಧಿ' ಇತ್ಯಾದಿ ಶ್ರುತಿಗಳಲ್ಲಿ ಪ್ರಕೃತಿ ಶಬ್ದವಾಚ್ಯವೆಂದು ಹೇಳಿದ್ದರಿಂದ, ಈಶ್ವರನ ಇಚ್ಛೆಯು ಈಶ್ವರನ ಸ್ವರೂಪವಾದ್ದರಿಂದ, ಪ್ರಕೃತಿ ಶಬ್ದದಿಂದ ಈಶ್ವರನೇ ಪ್ರತಿಪಾದ್ಯನಾಗುತ್ತಾನೆ.

ಬ್ರಹ್ಮಸೂತ್ರಭಾಷ್ಯ

ಮಾಯೆ, ಪ್ರಕೃತಿ, ವಾಸನಾ, ವಿಕೃತಿ ಇವೆಲ್ಲವೂ ಶ್ರೀಹರಿಯ ಹೆಸರುಗಳು

ಬ್ರಹ್ಮಸೂತ್ರಭಾಷ್ಯಮ್ – ।। ಅಭಿಧ್ಯೋಪದೇಶಾಚ್ಚ ।।

'ಮಾಯಾಂ ತು ಪ್ರಕೃತಿಂ ವಿದ್ಯಾನ್ಮಾಯಿನಂ ತು ಮಹೇಶ್ವರಮ್' (ಶ್ವೇ.ಉ. ೪-೧೦) ।

'ಮಹಾಮಾಯೇತ್ಯವಿದ್ಯೇತಿ ನಿಯತಿರ್ಮೋಹಿನೀತಿ ಚ ।
ಪ್ರಕೃತಿರ್ವಾಸನೇತ್ಯೇವಂ ತವೇಚ್ಛಾऽನನ್ತ ಕಥ್ಯತೇ' ।। ಇತಿ

ವಚನಾತ್ತದಭಿಧ್ಯೈವ ಪ್ರಕೃತಿಶಬ್ದೇನೋಚ್ಯತೇ ।

ಅನುವಾದ - ಪರಮಾತ್ಮನು ಮಾಯೆ ಎಂದು, ಪ್ರಕೃತಿಯು ಮಾಯಾ ಎಂದು ತಿಳಿ. ಹೀಗೆ ಶ್ವೇತಾಶ್ವೇತರೋಪನಿಷತ್ತು ಹೇಳುತ್ತಿದೆ.

ಮಹಾಮಾಯಾ, ಅವಿದ್ಯಾ, ನಿಯತಿ, ಮೋಹಿನೀ, ಪ್ರಕೃತಿ, ವಾಸನಾ ಇವುಗಳೆಲ್ಲವೂ ಅನಂತ ಎನಿಸಿಕೊಂಡ ಶ್ರೀಹರಿಯ ಇಚ್ಛೆಯ ಹೆಸರುಗಳು. ಹೀಗೆ ಪ್ರಮಾಣವಚನವಿರುವುದರಿಂದ ವಿಷ್ಣುವಿನ ಇಚ್ಛೆ ಪ್ರಕೃತಿಶಬ್ದದಿಂದ ಕರೆಸಿಕೊಳ್ಳುತ್ತದೆ.

ಪ್ರತಿಪದಾರ್ಥ -- ಹೀಗೆ ಸಾಮಾನ್ಯ ವಚನದಿಂದ ಪ್ರಕೃತ್ಯಾದಿ ಶಬ್ದಗಳಿಂದ ಪರಮಾತ್ಮನೇ ಪ್ರತಿಪಾದ್ಯನಾಗುತ್ತಾನೆಂದುಹೇಳಿದ್ದಾಯಿತು. ಈಗ ಸಕಲವಿಧವಾದ ಸ್ತ್ರೀಶಬ್ದಗಳಿಗೆ ಉಪಲಕ್ಷಕವಾದ ಪ್ರಕೃತಿಶಬ್ದ-ವಾಚ್ಯತ್ವವಿಷಯದಲ್ಲಿ ವಿಶೇಷವಾದ ಪ್ರಮಾಣವನ್ನು ಪ್ರತಿಪಾದನೆ ಮಾಡುತ್ತಾ ಸೂತ್ರವನ್ನು ಉಪನ್ಯಾಸ ಮಾಡಿ ವ್ಯಾಖ್ಯಾನ ಮಾಡುತ್ತಿದ್ದಾರೆ–

ಮಾಯಾಂತು = ಭಗವದಿಚ್ಛೆಯನ್ನೇ, ಪ್ರಕೃತಿಂ = ಪ್ರಕೃತಿ ಪದವಾಚ್ಯವನ್ನಾಗಿ, ವಿದ್ಯಾತ್ = ತಿಳಿ. ಮಾಯಿನಂ ತು = ಮಾಯಿಪದವಾಚ್ಯನನ್ನಾಗಿ, ಮಹೇಶ್ವರಂ = ಮಹೇಶ್ವರನನ್ನು ತಿಳಿ. ಹೀಗೆ ಶ್ವೇತಾಶ್ವೇತರೋಪನಿಷತ್ತು ಹೇಳಿದೆ.

ಹೇ ಅನಂತ = ಎಲೈ ಅನಂತನೇ, ತವೇಚ್ಛಾ = ನಿನ್ನ ಇಚ್ಛೆಯೇ, ಮಹಾಮಾಯೇತಿ = ಮಹಾಮಾಯೆ ಎಂದು, ಅವಿದ್ಯೇತಿ = ಅವಿದ್ಯೆಯೆಂದು, ನಿಯತಿಃ = ನಿಯತಿ ಎಂದೂ, ಮೋಹಿನಿತಿ ಚ = ಮೋಹಿನಿ ಎಂದು, ಪ್ರಕೃತಿಃ = ಪ್ರಕೃತಿಯೆಂದು, ವಾಸನೇತಿ ಚ = ವಾಸನಾ ಎಂದೂ ಕೂಡ, ಏವಂ = ಹೀಗೆ ಅನೇಕ ಶಬ್ದಗಳಿಂದ, ಕಥ್ಯತೇ = ಕರೆಯಲ್ಪಡುತ್ತದೆ, ಇತಿ ವಚನಾತ್ = ಹೀಗೆ ಶ್ರುತಿವಾಕ್ಯದ ಆಧಾರವಿರುವುದರಿಂದ, ಅಭಿಧ್ಯೈವ = ಭಗವದಿಚ್ಛೆಯೇ, ಪ್ರಕೃತಿಶಬ್ದೇನ = ಪ್ರಕೃತಿ ಎಂಬ ಶಬ್ದದಿಂದ, ಉಚ್ಯತೇ = ಕರೆಸಿಕೊಳ್ಳುತ್ತದೆ.

ಪರಮಾತ್ಮನ ಇಚ್ಛೆಗೆ ಪ್ರಕೃತಿ ಎನ್ನುವರು

ಬ್ರಹ್ಮಸೂತ್ರಭಾಷ್ಯಮ್ – 'ಸೋऽಭಿಧ್ಯಾ ಸ ಜೂತಿಃ ಸ ಪ್ರಜ್ಞಾ ಸ ಆನನ್ದಃ' ಇತಿ ಶ್ರುತೇರಭಿಧ್ಯಾ ಚ ಸ್ವರೂಪಮೇವ ।

'ಧ್ಯಾಯತಿ ಧ್ಯಾನರೂಪೋऽಸೌ ಸುಖೀ ಸುಖಮತೀವ ಚ ।
ಪರಮೈಶ್ವರ್ಯಯೋಗೇನ ವಿರುದ್ಧಾರ್ಥತಯೇಷ್ಯತೇ' ।। ಇತಿ ಬ್ರಹ್ಮಾಣ್ಡೇ ।।೨।।

ಅನುವಾದ - ಪರಮಾತ್ಮನೇ ಇಚ್ಛಾರೂಪನಾಗಿದ್ದಾನೆ. ಪ್ರೇರಣೆ ಎಂಬ ಕ್ರಿಯಾರೂಪನಾಗಿದ್ದಾನೆ. ಜ್ಞಾನರೂಪನಾಗಿದ್ದಾನೆ, ಆನಂದರೂಪನಾಗಿದ್ದಾನೆ ಹೀಗೆ ಶ್ರುತಿ ಪ್ರಮಾಣವಿರುವುದರಿಂದ ಅವನ ಇಚ್ಛೆಯು ಭಗವಂತನ ಸ್ವರೂಪವೇ ಆಗಿದೆ.

ಅವನು ಧ್ಯಾನರೂಪನಾದ್ದರಿಂದ ಧ್ಯಾನ ಮಾಡುತ್ತಾನೆ. ನಿರವಧಿಕ ಸುಖಸ್ವರೂಪನಾದ್ದರಿಂದ, ದುಃಖಿಯೆನಿಸುತ್ತಾನೆ. ಅತ್ಯಂತ ವಿಲಕ್ಷಣವಾದ ಸಾಮರ್ಥ್ಯವನ್ನು ಹೊಂದಿರುವುದರಿಂದ ವಿರುದ್ಧವಾದ ಧರ್ಮವುಳ್ಳವನಾಗಿ ಜ್ಞಾನಿಗಳಿಂದ ಕರೆಸಿಕೊಳ್ಳುತ್ತಾನೆ. ಹೀಗೆ ಬ್ರಹ್ಮಾಂಡ ಪುರಾಣದಲ್ಲಿ ಹೇಳಲ್ಪಟ್ಟಿದೆ.

ಪ್ರತಿಪದಾರ್ಥ -- ಇಚ್ಛೆಯು ಪ್ರಕೃತಿಶಬ್ದದಿಂದ ವಾಚ್ಯವಾದರೂ, ಪರಮಾತ್ಮನು ಹೇಗೆ ಸ್ತ್ರೀಲಿಂಗದಿಂದ ಪ್ರತಿಪಾದ್ಯನಾಗುತ್ತಾನೆ. ಈ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ

ಸಃ = ಪರಮಾತ್ಮನು, ಜೂತಿಃ = ಪ್ರೇರಣಾರೂಪನಾಗಿದ್ದಾನೆ. ಸಃ = ಪರಮಾತ್ಮನು, ಪ್ರಜ್ಞಾ = ಜ್ಞಾನರೂಪನು. ಸಃ = ಪರಮಾತ್ಮನು, ಆನಂದಃ = ಆನಂದರೂಪನು, ಇತಿ ಶ್ರುತೇಃ = ಹೀಗೆ ಶ್ರುತಿ ಪ್ರಮಾಣವಿರುವುದರಿಂದ, ಅಭಿಧ್ಯಾಚ = ಅವನ ಇಚ್ಛೆಯೂ ಕೂಡ, ಸ್ವರೂಪಮೇವ = ಭಗವಂತನ ಸ್ವರೂಪವೇ ಆಗಿದೆ. ಅಸೌ = ಈ ಶ್ರೀಹರಿಯು, ಧ್ಯಾನರೂಪಃ = ಧ್ಯಾನರೂಪನಾದ್ದರಿಂದ, ಧ್ಯಾಯತಿ = ಧ್ಯಾನ ಕರ್ತೃ ಎನಿಸುತ್ತಾನೆ. ಅತೀವ = ಅತ್ಯಂತವಾಗಿ, ಸುಖಂ = ಸುಖಸ್ವರೂಪನಾದ್ದರಿಂದ, ಸುಖೀ = ಸುಖವುಳ್ಳವನೆನಿಸುತ್ತಾನೆ. ಪರಮೈಶ್ವರ್ಯಯೋಗೇನ = ಅತ್ಯಂತ ಶ್ರೇಷ್ಠವಾದ ಐಶ್ವರ್ಯ ಸ್ವರೂಪನಾಗಿರುವುದರಿಂದ, ವಿರುದ್ಧಾರ್ಥತಯಾ = ಸುಖಸ್ವರೂಪನಾಗಿದ್ದರೂ, ಸುಖಕ್ಕೆ ಆಶ್ರಯನಾಗಿದ್ದಾನೆಂಬ ವಿರುದ್ಧ ಸ್ವಭಾವವು, ಇಷ್ಯತೇ = ವಿರುದ್ಧವಾದರೂ ಜ್ಞಾನಿಸಮ್ಮತವಾಗಿದೆ. ಇತಿ ಬ್ರಹ್ಮಾಂಡೇ = ಹೀಗೆ ಬ್ರಹ್ಮಾಂಡ ಪುರಾಣದಲ್ಲಿ ಹೇಳಲಾಗಿದೆ.

सत्तर्कदीपावली

स्वतः तानू प्रकृति

सत्तर्कदीपावलिः – न च केवलमिच्छाद्वारैव प्रकृतित्वमाहागमो भगवतः किं तर्हीत्यत आह – साक्षाच्चेति ।

स्त्रियादौ विश्वस्मिन् रूपाण्यस्येति स्त्रियादेः विश्वस्य रूपमिव रूपमस्यस्येति वा विश्वरूपः ।

ಕೇವಲ ಇಚ್ಛೆಯ ಮೂಲಕ ಪರಮಾತ್ಮನನ್ನು ಪ್ರಕೃತಿಯೆಂದು ಆಗಮವು ಹೇಳುತ್ತಿಲ್ಲ. ನೇರವಾಗಿಯೇ ಪ್ರಕೃತಿ ಎಂದು ಪರಮಾತ್ಮನನ್ನು ಕುರಿತು ಆಗಮವು ಹೇಳುತ್ತಿದೆ. ಇದನ್ನು ಉಪಪಾದನೆ ಮಾಡುವುದಕ್ಕಾಗಿ 'साक्षाच्चोभयम्नानात्' ಎಂಬ ಸೂತ್ರವು ಹೊರಟಿದೆ. 'ಏಷ ಸ್ತ್ರೀ' ಎಂಬ ಶ್ರುತಿಯಲ್ಲಿ 'ವಿಶ್ವರೂಪ' ಎಂಬ ಪದವಿದೆ. ಇದಕ್ಕೆ ಎರಡು ರೀತಿಯಲ್ಲಿ ನಿಷ್ಪತ್ತಿ ಮಾಡಬೇಕು - ೧. 'स्त्रियादौ विश्वस्मिन् रूपाणि अस्य इति विश्वरूपः' ೨. 'स्त्रीयादेः विश्वस्य रूपमिव रूपमस्येति वा विश्वरूपः' ಸ್ತ್ರೀ ಮೊದಲಾದ ಸಕಲ ರೂಪಗಳು ಇವನಿಗೆ ಇದೆ ಎಂದು, ಅಥವಾ ಜಗತ್ತಿನಲ್ಲಿ ಹೇಗೆ ಸ್ತ್ರೀಯರು ಹಾಗೂ ಪುರುಷರು ಇದ್ದಾರೋ, ಅದರಂತೆ ಪರಮಾತ್ಮನಿಗೂ ಕೂಡ ಎಲ್ಲಾ ಬಗೆಯ ರೂಪಗಳಿವೆ ಎಂಬುದು ಮತ್ತೊಂದು ಅರ್ಥ.

ತತ್ವಪ್ರದೀಪ

ಸೂತ್ರಕ್ಕೆ ಎರಡು ಅರ್ಥ

तत्वप्रदीपः – अभिध्योपदेशाच्च ।। अभिध्यायाः प्रकृतित्वोपदेशात्स्वरूपत्वोपदेशाच्च प्रकृतिशब्दवाच्यत्वं विष्णोर्युक्तम् । जूतिः प्रेरणा । युज्यते च सुखसुख्यादिभाव ईश्वरस्य, स्वरूपस्वरूपिभाववत्प्रदेशप्रदेशिभाववच्च ।

ಭಗವದಿಚ್ಛೆಯನ್ನು ಪ್ರಕೃತಿಯೆಂದು ಹೇಳಿರುವುದರಿಂದ ಅಥವಾ ಭಗವಂತನೇ ಇಚ್ಛಾರೂಪನೆಂದು ಹೇಳಿರುವುದರಿಂದ ಪ್ರಕೃತಿಶಬ್ದವಾಚ್ಯತ್ವವು ವಿಷ್ಣುವಿಗೆ ಯುಕ್ತವಾಗುತ್ತದೆ.

'ಸೋಭಿದ್ಯಾ ಸಜೂತಿಃ' ಎಂಬ ಶ್ರುತಿಯಲ್ಲಿರುವ 'ಜೂತಿ' ಎಂಬ ಪದಕ್ಕೆ 'ಪ್ರೇರಣೆ' ಎಂದರ್ಥ. ಈಶ್ವರನಿಗೆ ಇಚ್ಛೆಯು ಪರಮಾತ್ಮನ ಸ್ವರೂಪವಾದರೂ ಕೂಡ ಇಚ್ಛೆಯುಳ್ಳವನು ಎಂದು ಹೇಳಲು ಬಾಧಕವಿಲ್ಲ. ಅದರಂತೆ ಅವನು ಸುಖಸ್ವರೂಪನು ಆದರೂ ಕೂಡ

ಸುಖವುಳ್ಳವನು ಎಂದು ಹೇಳಲೂ ಕೂಡ ಬಾಧಕವಿಲ್ಲ. ಹೇಗೆಂದರೆ ಸ್ವರೂಪ-ಸ್ವರೂಪಿ-ಭಾವದಂತೆ ಅಥವಾ ಪ್ರದೇಶ-ಪ್ರದೇಶಭಾವದಂತೆ.

ವಿವರಣೆ - ಸೂತ್ರಕ್ಕೆ 'ಅಭಿಧ್ಯಾಯಾಃ ಪ್ರಕೃತಿತ್ವೋಪದೇಶಾತ್' ಎಂದರ್ಥ. ಭಗವದಿಚ್ಛೆಯನ್ನು ಪ್ರಕೃತಿಯೆಂದು ಕರೆಯಲಾಗಿದೆ. ಅಥವಾ 'ಅಭಿಧ್ಯಾತ್ವೋಪದೇಶಾತ್' ಎಂದು ವ್ಯಾಖ್ಯಾನ ಮಾಡಿದಾಗ ಭಗವಂತನೇ ಇಚ್ಛಾರೂಪನೆಂದು ಹೇಳಿದಂತಾಗುತ್ತದೆ. ಇಚ್ಛೆಯನ್ನೇ ಪ್ರಕೃತಿಯೆಂಬುದಾಗಿ ಶ್ರುತಿ ಹೇಳುತ್ತದೆ. ಆದ್ದರಿಂದ ಭಗವಂತನು ಪ್ರಕೃತಿಶಬ್ದದಿಂದ ವಾಚ್ಯನಾಗುತ್ತಾನೆ ಎಂಬುದು ಸೂತ್ರದ ಅಭಿಪ್ರಾಯ.

ಈಶ್ವರನು ಪ್ರದೇಶನೂ ಹೌದು, ಪ್ರದೇಶಿಯೂ ಹೌದು !

तत्वप्रदीपः – यथाहीश्वरः परमाणुना सम्बध्यमानस्तादृशेनैव प्रदेशेन सम्बध्यते, नभसा सम्बध्यमानस्तु तादृशेनैव स्वरूपेण । नच तयोः प्रदेशप्रदेशिनोः परस्परभेदः । तत्स्वरूपस्याव्याप्तिप्रसक्तेः । अत एकस्यैवोभयात्मकत्वमिति ।

ಒಬ್ಬನೇ ಈಶ್ವರನಲ್ಲಿ ಪ್ರದೇಶ-ಪ್ರದೇಶಿಭಾವವು ಯುಕ್ತವಾಗುತ್ತದೆ. ಅದು ಹೀಗೆ - ಪರಮಾಣುವಿನ ಜೊತೆ ಸಂಬಂಧವನ್ನು ಹೊಂದಿದಾಗ ಈಶ್ವರನು ಪರಮಾಣುವಿನಷ್ಟೇ ಪ್ರದೇಶದ ಸ್ವರೂಪವುಳ್ಳವನಾಗಿ ಸಂಬಂಧವನ್ನು ಹೊಂದುತ್ತಾನೆ. ಆಕಾಶದ ಜೊತೆ ಸಂಬಂಧವನ್ನು ಹೊಂದುವಾಗ ಅಷ್ಟೇ ಪ್ರದೇಶವುಳ್ಳ ಪ್ರದೇಶದಿಂದ ಸಂಬಂಧವನ್ನು ಹೊಂದುತ್ತಾನೆ. ಈಶ್ವರಾತ್ಮಕವಾದ ಪ್ರದೇಶ ಹಾಗೂ ಪ್ರದೇಶಿಗಳಿಗೆ ಪರಸ್ಪರ ಭೇದವನ್ನು ಸರ್ವಥಾ ಹೇಳಬಾರದು. ಹಾಗೇನಾದರು ಹೇಳಿದರೆ ಈಶ್ವರನ ಸ್ವರೂಪವು ಎಲ್ಲೆಡೆಯೂ ವ್ಯಾಪ್ತವಾಗಿಲ್ಲ ಎಂದು ಹೇಳಿದಂತಾಗುತ್ತದೆ. ಆದ್ದರಿಂದ ಒಬ್ಬನೇ ಈಶ್ವರನಿಗೆ ಪ್ರದೇಶ- ಪ್ರದೇಶಿಭಾವವು ಯುಕ್ತವಾಗುತ್ತದೆ.

ಅವಯವವಿರುವುದರಿಂದ ಅನಿತ್ಯನಾಗಿರಬೇಕೆಂಬ ಮತದ ನಿರಾಕರಣೆ

तत्वप्रदीपः – एतेनैतदपास्तम् । यदास्माकीनमीश्वरमनीश्वराः सेश्वराश्च समयिनः सावयवत्वादनित्यमव्यापिनमुपपादयन्ति । सप्रदेशस्येव सावयवस्यापि तस्य नित्यत्वव्यापित्वोपपत्तेः । कथं नु खल्विमे

प्रदेशविशेषाननन्तानात्मनस्संवदमाना नावयवान् संवदेरन् । नहि वयमपि भिन्नावयवानीश्वरस्य ब्रूमः । प्रदेशविशेषवत् स्वरूपभूतानेवेति ।।७।।

ಹೀಗೆ ಹೇಳಿದ್ದರಿಂದ ಕೆಲವರ ಅಭಿಪ್ರಾಯವನ್ನು ನಿರಾಕರಣೆ ಮಾಡಿದಂತಾಯಿತು. ನಮ್ಮ ಈಶ್ವರನ ಬಗ್ಗೆ ಅನೀಶ್ವರಸಮಯಿಗಳು ಹಾಗೂ ಸೇಶ್ವರಸಮಯಿಗಳು ಸಾವಯವತ್ವ-ವಿರುವುದರಿಂದ ಅನಿತ್ಯರೆಂದು ವ್ಯಾಪ್ತನಲ್ಲವೆಂದು ಉಪಪಾದನೆ ಮಾಡುತ್ತಾರೆ.

ಇದು ತಪ್ಪು. ಈಶ್ವರನು ಹೇಗೆ ಪ್ರದೇಶಗಳುಳ್ಳವನಾದರೂ ಕೂಡ ನಿತ್ಯನೇ ಆಗಿದ್ದಾನೋ, ಅದರಂತೆ ಅವಯವಗಳುಳ್ಳವನಾದರೂ ಕೂಡ ನಿತ್ಯನೇ ಆಗುತ್ತಾನೆ. ಪ್ರದೇಶದ ಇರುವಿಕೆಯು ನಿತ್ಯತ್ವವ್ಯಾಪಿಯಾಗುವಂತೆ ಅವಯವಗಳ ಇರುವಿಕೆಯೂ ಕೂಡ ನಿತ್ಯತ್ವವ್ಯಾಪಿಯಾಗುತ್ತದೆ. ಆದ್ದರಿಂದ ಅವಯವಗಳುಳ್ಳವನಾಗಿರುವುದರಿಂದ ಅನಿತ್ಯನಾಗಬೇಕಾಗುತ್ತದೆ ಎಂಬ ಉಪಪಾದನೆಯು ಅಯುಕ್ತವಾಯಿತು. ಹೀಗೆ ಹೇಳುವ ಪ್ರತಿವಾದಿಗಳು ಪ್ರದೇಶ-ವಿಶೇಷಗಳು ಅನಂತವಾಗಿವೆ ಎಂಬುದನ್ನು ಒಪ್ಪುತ್ತಾರೆ. ಆದರೆ ಅವಯವಗಳಿವೆಯೆಂಬುದನ್ನು ಒಪ್ಪುವುದಿಲ್ಲ. ಎರಡು ಸಮಾನವಾಗಿರುವಾಗ ಒಂದನ್ನು ಒಪ್ಪಿ, ಮತ್ತೊಂದನ್ನು ಒಪ್ಪದೇ ಇರಲು ಏನು ಕಾರಣ?

ನಾವೂ ಕೂಡ ಈಶ್ವರನಿಗೆ ಭಿನ್ನವಾದ ಅವಯವಗಳಿದೆ ಎಂದು ಒಪ್ಪುವುದಿಲ್ಲ. ಹೇಗೆ ಪ್ರದೇಶವಿಶೇಷವು ಈಶ್ವರನ ಸ್ವರೂಪಭೂತವೇ ಆಗಿದೆ ಎಂದು ಒಪ್ಪುತ್ತೇವೋ, ಹಾಗೇ ಅವಯವಗಳೂ ಕೂಡ ಈಶ್ವರನ ಸ್ವರೂಪಭೂತವೇ ಆಗಿವೆ. ಆದರೂ ಕೂಡ ವಿಶೇಷಬಲದಿಂದ ಅವಯವ-ಅವಯವಿಭಾವವು ಪ್ರದೇಶಪ್ರದೇಶಿಭಾವವು ಯುಕ್ತವಾಗುತ್ತದೆ.

ತತ್ತ್ವಪ್ರಕಾಶಿಕಾ

ಪರಮಾತ್ಮನು ಸ್ತ್ರೀ ಕೂಡ ಆಗಿದ್ದಾನೆನ್ನಲು ಮತ್ತೊಂದು ಹೇತು

युक्त्यन्तरेण हरेः प्रकृतिशब्दवाच्यतां प्रतिपादयत्सूत्रमुपन्यस्य व्याचष्टे ।। अभिधेति ।।

ಶ್ರೀಹರಿಯು ಪ್ರಕೃತಿ ಮೊದಲಾದ ಸ್ತ್ರೀಲಿಂಗಶಬ್ದಗಳಿಂದ ಪ್ರತಿಪಾದ್ಯನಾಗಿದ್ದಾನೆ ಎಂಬುದನ್ನು ಮತ್ತೊಂದು ಯುಕ್ತಿಯಿಂದ ಪ್ರತಿಪಾದನೆ ಮಾಡಲು ಹೊರಟಿರುವ ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ -'ಅಭಿಧ್ಯೋಪದೇಶಾಚ್ಚ' ಇತ್ಯಾದಿಯಾಗಿ.

ಇಚ್ಛೆಯು ಪ್ರಕೃತಿಯಾದ್ದರಿಂದ ತಾನೂ ಪ್ರಕೃತಿ

तत्वप्रकाशिका – 'मायां तु प्रकृतिं विद्यात्' इति श्रुतौ 'प्रकृतिर्वासनेत्येवं तवेच्छाऽनन्त कथ्यते' इति स्मृतौ च परमेश्वरेच्छायाः प्रकृतिशब्द वाच्यत्वोपदेशाच्चासौ प्रकृतिशब्दवाच्यो भवति ।

'ಮಾಯಾಂ ತು ಪ್ರಕೃತಿಂ ವಿದ್ಯಾತ್' ಎಂಬ ಶ್ರುತಿಯಲ್ಲಿ 'ಪ್ರಕೃತಿರ್ವಾಸನೇತ್ಯೇವಂ ತವೇಚ್ಛಾऽನಂತ ಕಥ್ಯತೇ' ಎಂಬ ಸ್ಮೃತಿಯಲ್ಲಿಯೂ ಕೂಡ ಪರಮಾತ್ಮನ ಇಚ್ಛೆಯನ್ನು ಪ್ರಕೃತಿಯೆಂದು ಕರೆಯಲಾಗಿದೆ. ಈ ಉಪದೇಶ ವಾಕ್ಯದ ಬಲದಿಂದ ಪರಮಾತ್ಮನೇ ಪ್ರಕೃತಿ ಎಂದು ಕರೆಸಿಕೊಳ್ಳುತ್ತಾನೆ.

ಮಾಯೆಯು ಪ್ರಕೃತಿಯಲ್ಲ

तत्वप्रकाशिका – न च वाच्यं 'श्रुतौ मायाया एव प्रकृतिशब्दवाच्यत्वं ज्ञायते नेच्छायाः' इति । महामायेति स्मृतौ मायाशब्दस्यापीच्छावाचकत्वोक्तेः।

ಪ್ರಶ್ನೆ - ಶ್ರುತಿಯಲ್ಲಿ ಮಾಯೆಯನ್ನು ಪ್ರಕೃತಿಯೆಂದು ಕರೆಯಲಾಗಿದೆ ಹೊರತು, ಪರಮಾತ್ಮನ ಇಚ್ಛೆಯನ್ನು ಪ್ರಕೃತಿಯೆಂದು ಕರೆದಿಲ್ಲವಲ್ಲ ?

ಉತ್ತರ - ಹೌದು ! ಆದರೆ 'ಮಹಾಮಾಯಾ' ಇತ್ಯಾದಿ ಸ್ಮೃತಿವಾಕ್ಯದಲ್ಲಿ ಈ ಮಾಯೆಯನ್ನೇ ಇಚ್ಛೆಯೆಂದು ಕರೆಯಲಾಗಿದೆ. ಆದ್ದರಿಂದ ಪರಮಾತ್ಮನ ಇಚ್ಛೆಯನ್ನು ಪ್ರಕೃತಿಯೆಂದು ಹೇಳಿದ್ದು ತಪ್ಪಲ್ಲ.

ಸ್ಮೃತಿ ವಾಕ್ಯವು ಔಪಚಾರಿಕವಲ್ಲ

तत्वप्रकाशिका – न चात्रोपचारः शङ्कनीयः । श्रुतिस्मृत्योरनुशानरूपत्वादिति भावः ।

ಪ್ರಶ್ನೆ - ಸ್ಮೃತಿಯ ವಾಕ್ಯವನ್ನು ಔಪಚಾರಿಕವೆಂದು ಏಕೆ ಪರಿಗಣಿಸಬಾರದು?

ಉತ್ತರ - ಶ್ರುತಿ-ಸ್ಮೃತಿಗಳು ಅನುಶಾಸನ ರೂಪವಾಗಿರುವುದರಿಂದ ಔಪಚಾರಿಕ ಪ್ರಯೋಗವೆಂದು ಪರಿಗಣಿಸಬಾರದು.

ಪರಮಾತ್ಮನೇಕೆ ಪ್ರಕೃತಿಯಾಗಬೇಕು ?

तत्वप्रकाशिका – इच्छायाः प्रकृतिशब्दवाच्यत्वेऽपि कुतः परमात्मनस्तदित्यत आह – स इति।।

ಪ್ರಶ್ನೆ - ಇಚ್ಛೆಯು ಪ್ರಕೃತಿಶಬ್ದವಾಚ್ಯವೆಂದು ಒಪ್ಪೋಣ. ಅಂದ ಮಾತ್ರಕ್ಕೆ ಪರಮಾತ್ಮನು ಏಕೆ ಪ್ರಕೃತಿಶಬ್ದ ವಾಚ್ಯನಾಗಬೇಕು ?

ಉತ್ತರ - ಈ ಪ್ರಶ್ನೆಗೆ 'ಸಃ' ಇತ್ಯಾದಿ ಪ್ರಮಾಣವಾಕ್ಯವನ್ನು ಉದಾಹರಿಸಿ ಉತ್ತರಿಸುತ್ತಿದ್ದಾರೆ.

ಇಚ್ಛೆಗೂ ಪರಮಾತ್ಮನಿಗೂ ಭೇದವಿಲ್ಲ

तत्वप्रकाशिका – जूतिः प्रेरणा ।। नेच्छा भगवत्स्वरूपम्, मायिनं तवेच्छेति तत्सम्बन्धोपदेशादित्यत आह – ध्यायतीति ।।२।।

ಈ 'सोऽभिध्या स जूतिः' ಎಂಬ ಪ್ರಮಾಣವಾಕ್ಯದಲ್ಲಿರುವ 'ಜೂತಿ' ಶಬ್ದಕ್ಕೆ ಪ್ರೇರಣೆ ಎಂದರ್ಥ.

ಪ್ರಶ್ನೆ - ಇಚ್ಛೆಯು ಭಗವತ್ ಸ್ವರೂಪವಲ್ಲ. ಏಕೆಂದರೆ 'ಮಾಯಿನಂ ತವೇಚ್ಛಾ' ಎಂಬುದಾಗಿ ಮಾಯೆವುಳ್ಳ ನಿನ್ನ ಇಚ್ಛೆ ಎಂದು ಎರಡರಲ್ಲಿಯೂ ಸಂಬಂಧವನ್ನು ಉಪದೇಶ ಮಾಡಲಾಗಿದೆ. ಇದನ್ನು ಕೂಡಿಸಬೇಕೆಂದರೆ ಇಚ್ಛೆಯೇ ಬೇರೆ. ಪರಮಾತ್ಮನೇ ಬೇರೆ ಎಂದು ಹೇಳಬೇಕಲ್ಲವೇ?

ಉತ್ತರ - ಈ ಆಶಂಕೆಗೆ 'ಧ್ಯಾಯತಿ' ಎಂಬ ಶ್ರುತಿವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಪರಮಾತ್ಮನು ಇಚ್ಛೆಯುಳ್ಳವನಾಗಿದ್ದರೂ ಇಚ್ಛಾಸ್ವರೂಪನೂ ಆಗಿರುತ್ತಾನೆ ಆದ್ದರಿಂದ ವಿರೋಧವಿಲ್ಲ ಎಂಬುದಾಗಿ ಬ್ರಹ್ಮಾಂಡ ಪುರಾಣದ ವಾಕ್ಯವು ಸ್ಪಷ್ಟಪಡಿಸುತ್ತಿದೆ.

ಭಾವದೀಪ

'ಪ್ರತಿಜ್ಞಾದೃಷ್ಟಾಂತಾನುಪರೋಧಮ್' ಎಂಬುದಷ್ಟೇ ಯುಕ್ತಿಯಲ್ಲ

युक्त्यन्तरेणेति ।। न केवलं प्रतिज्ञादृष्टान्तोक्तिरूपयुक्त्येत्यर्थः ।

ಹಿಂದಿನ ಸೂತ್ರದಲ್ಲಿ 'ನಾಮಾನಿ ಸರ್ವಾಣಿ ಯಮಾವಿಶಂತಿ' ಎಂಬ ಶ್ರುತಿಯಲ್ಲಿರುವ ಸರ್ವಶಬ್ದಕ್ಕೆ ಸಂಕೋಚಮಾಡಿ ಪರಮಾತ್ಮನು ಪ್ರಕೃತಿಶಬ್ದದಿಂದ ವಾಚ್ಯನಲ್ಲವೆಂದು ಹೇಳಿದರೆ ಶ್ರುತಿಯಲ್ಲಿರುವ ಪ್ರತಿಜ್ಞೆ ಹಾಗೂ ದೃಷ್ಟಾಂತಗಳ ವಿರೋಧ ಬರುತ್ತದೆ. ಸರ್ವಶಬ್ದಕ್ಕೆ ಸಂಕೋಚ ಮಾಡದೇ ಪ್ರಕೃತಿಶಬ್ದವಾಚ್ಯತ್ವವನ್ನು ಹೇಳಿದರೆ ಪ್ರಕೃತಿ ಹಾಗೂ ದೃಷ್ಟಾಂತಗಳಿಗೆ ವಿರೋಧ ಬರುವುದಿಲ್ಲ ಎಂಬ ಯುಕ್ತಿಯನ್ನು ಹೇಳಲಾಯಿತು. ಪ್ರಕೃತ ಈ ಸೂತ್ರದಲ್ಲಿ ಪರಮಾತ್ಮನ ಇಚ್ಛೆಯನ್ನು ಶ್ರುತಿ-ಸ್ಮೃತಿಗಳಲ್ಲಿ ಪ್ರಕೃತಿಶಬ್ದಪ್ರತಿಪಾದ್ಯವೆಂದು ಹೇಳಿರುವುದರಿಂದ 'ಅಭಿಧ್ಯೋಪದೇಶಾತ್' ಎಂಬ ಮತ್ತೊಂದು ಯುಕ್ತಿಯಿಂದ ಪರಮಾತ್ಮನಲ್ಲಿ ಸ್ತ್ರೀಲಿಂಗಶಬ್ದಗಳನ್ನು ಸಮನ್ವಯ ಮಾಡುತ್ತಿದ್ದಾರೆ.

ಹಿಂದಿನ ಆಕ್ಷೇಪಕ್ಕೆ ಪರಿಹಾರ

भावदीपः – तथाच नियामकविशेषाभावेनेति प्रागुक्तं प्रत्युक्तमिति भावः ।।

ಹಿಂದಿನ ಸೂತ್ರದಲ್ಲಿ ಪರಮಾತ್ಮನು ಸ್ತ್ರೀಶಬ್ದಗಳಿಂದ ಪ್ರತಿಪಾದ್ಯನಾಗುತ್ತಾನೆನ್ನಲು ಯಾವುದೇ ನಿಯಾಮಕಪ್ರಮಾಣಗಳಿರುವುದಿಲ್ಲವೆಂದು ಆಕ್ಷೇಪ ಮಾಡಲಾಗಿತ್ತು. 'ಮಾಯಾಂ ತು ಪ್ರಕೃತಿಂ ವಿದ್ಯಾತ್' ಇತ್ಯಾದಿ ಶ್ರುತಿಗಳು ಪ್ರಮಾಣವಾಗಿರುವುದರಿಂದ ಹಿಂದಿನ ಆಕ್ಷೇಪವನ್ನು ಈಗ ಪರಿಹರಿಸಿದಂತಾಗಿದೆ.

ಸಾಧಾರಣ ಶ್ರುತಿಯೂ ಕೂಡ ಪ್ರಮಾಣ

भावदीपः – प्रकृतिशब्देति ।। तदुपलक्षितस्त्रीशब्दमात्रवाचितायां तु प्रागुक्तं सामान्यरूपमेकं साक्षाच्चेत्यत्र वक्ष्यमाणसाधारणश्रुतिश्च नियामकप्रमाणमिति भावः।

ಪರಮಾತ್ಮನು ಪ್ರಕೃತಿಶಬ್ದದಿಂದ ವಾಚ್ಯನಾಗಿದ್ದಾನೆಂದು ಹಿಂದಿನ ಸೂತ್ರದಲ್ಲಿ ಹೇಳಿದ್ದು ಉಪಲಕ್ಷಣವಾಗಿದೆ. ಬೇರೆ ಸ್ತ್ರೀಶಬ್ದಗಳಿಂದಲೂ ಪ್ರತಿಪಾದ್ಯನಾಗಿದ್ದಾನೆಂದು ವಿವಕ್ಷಿಸಬೇಕು. ಈ

ವಿಷಯದಲ್ಲಿ 'ಪ್ರಕೃತಿಶ್ಚ' ಇತ್ಯಾದಿ ಸೂತ್ರದಲ್ಲಿ 'ಹಂತೈತಮೇವ' ಎಂಬುದಾಗಿ ಸಾಮಾನ್ಯರೂಪವಾದ ವಾಕ್ಯವನ್ನು ಪ್ರಮಾಣವನ್ನಾಗಿ ಹೇಳಿದರು. ಮುಂದಿನ 'ಸಾಕ್ಷಾಚ್ಚೋಭಯಾಮ್ನಾನಾತ್' ಎಂಬ ಸೂತ್ರದಲ್ಲಿ 'ಏಷ ಸ್ತ್ರೀಷಃ' ಇತ್ಯಾದಿಯಾಗಿ ಸಾಧಾರಣ ಶ್ರುತಿಯನ್ನೂ ಕೂಡ ಪ್ರಮಾಣವನ್ನಾಗಿ ಹೇಳುತ್ತಾರೆ. ಆದ್ದರಿಂದ ಸ್ತ್ರೀಲಿಂಗಶಬ್ದಗಳಿಂದ ಪರಮಾತ್ಮನು ಪ್ರತಿಪಾದ್ಯನಾಗಿದ್ದಾನೆನ್ನಲು ಈ ಶ್ರುತಿಗಳೆಲ್ಲವೂ ನಿಯಾಮಕಪ್ರಮಾಣಗಳಿವೆ ಎಂದು ತಿಳಿಯಬೇಕು.

'ಪ್ರಕೃತಿರ್ವಾಸನಾ' ಎಂಬ ಶ್ರುತಿಯ ಉಲ್ಲೇಖ

ಭಾವದೀಪಃ – ಭಾಷ್ಯೇ ಇತಿ ವಚನಾದಿತ್ಯುಕ್ತ್ಯಾ ಸರ್ವಮೇಕಮಿತಿ ಪ್ರತೀಯತೇ । ತದಪಿ ಕಿಂ ಶ್ರುತಿರೂಪಮುತಸ್ಮೃತಿರೂಪಮಿತಿ ನ ಜ್ಞಾಯತೇऽತಸ್ತದ್ವಿವೇಚಯನ್ನಭಿಧ್ಯೈವ ಚೇತ್ಯಾದಿಭಾಷ್ಯವಾಕ್ಯೇನ ಚ ಸೂತ್ರೇ ಅಭಿಧ್ಯಾಯಾಃ ಪ್ರಕೃತಿತ್ವೋಪದೇಶಾಚ್ಚೇತ್ಯರ್ಥೋ ವಿವೃತ ಇತಿ ಭಾವೇನ ಸೂತ್ರಾರ್ಥಮಾಹ – ಮಾಯಾಂ ತ್ವಿತಿ ।।

ಭಾಷ್ಯದಲ್ಲಿ 'ಇತಿ ವಚನಾತ್' ಎಂದು ಹೇಳಿದ್ದಾರೆ. ಹೀಗೆ ಹೇಳಿದ್ದರಿಂದ 'ಮಾಯಾಂತು' ಎಂಬಲ್ಲಿಂದ ಪ್ರಾರಂಭಿಸಿ 'ಕಥ್ಯತೇ' ಅಲ್ಲಿಯತನಕ ಒಂದೇ ವಾಕ್ಯವೆಂಬ ಭ್ರಾಂತಿ ಬರುತ್ತದೆ. ಮತ್ತೆ ಈ ಸಂಪೂರ್ಣವಾಕ್ಯವು ಶ್ರುತಿಯೋ ಅಥವಾ ಸ್ಮೃತಿಯೋ ಎಂದೂ ಕೂಡ ಸ್ಪಷ್ಟವಾಗಿ ತಿಳಿಯುವುದಿಲ್ಲ. ಆದ್ದರಿಂದ ಟೀಕೆಯಲ್ಲಿ 'ಮಾಯಾಂ ತು ಪ್ರಕೃತಿಂ ವಿದ್ಯಾತ್' ಎಂಬುದು ಶ್ರುತಿಯೆಂದು, 'ಪ್ರಕೃತಿರ್ವಾಸನಾ' ಇತ್ಯಾದಿಯು ಸ್ಮೃತಿಯೆಂದು ಸ್ಪಷ್ಟವಾಗಿ ವಿವೇಚನೆ ಮಾಡಿ ತಿಳಿಸಿದ್ದಾರೆ. ಮತ್ತು 'ಅಭಿಧ್ಯೋಪದೇಶಾಚ್ಚ' ಎಂಬ ಸೂತ್ರವನ್ನು ಭಾಷ್ಯದ ವಾಕ್ಯದಲ್ಲಿ ಹೇಗೆ ವ್ಯಾಖ್ಯಾನಿಸಿದ್ದಾರೆ ಎಂಬುದನ್ನೂ ಕೂಡ ಸ್ಪಷ್ಟಪಡಿಸಿದ್ದಾರೆ. 'ಅಭಿಧ್ಯಾಯಾಃ' ಎಂಬ ಪದಕ್ಕೆ ಪರಮೇಶ್ವರನ ಇಚ್ಛೆಗೆ 'ಉಪದೇಶಾತ್' ಎಂದರೆ ಪ್ರಕೃತಿಶಬ್ದವಾಚ್ಯತ್ವವನ್ನು ಉಪದೇಶಿಸಿರುವುದರಿಂದ ಎಂದು ವಿವರಿಸಿದಂತಾಯಿತು. ಈ ಎಲ್ಲಾ ಅಭಿಪ್ರಾಯದಿಂದ 'ಮಾಯಾಂ ತು' ಇತ್ಯಾದಿ ಟೀಕಾವಾಕ್ಯವು ಹೊರಟಿದೆ.

ಶ್ರುತಿಯಷ್ಟೇ ಅಲ್ಲ ಸ್ಮೃತಿಯೂ ಪ್ರಮಾಣ

ಭಾವದೀಪಃ – ಸ್ಮೃತೌ ಮಹಾಮಾಯೇತಿ ಪೂರ್ವಾರ್ಧೋಕ್ತೇರುಪಯೋಗಂ ಶಙ್ಕಾಪೂರ್ವಂ ವ್ಯನಕ್ತಿ ।। ನ ಚೇತಿ ।। ಸ್ಪಷ್ಟತ್ವಾಯ ಸ್ಮೃತೇರಪಿ ಭಾಷಣಮಿತಿ ಭಾವಃ ।

ಸ್ಮೃತಿಯಲ್ಲಿ 'ಮಹಾಮಾಯಾ' ಎಂಬ ಪೂರ್ವಾರ್ಧವನ್ನು ಏಕೆ ಉಲ್ಲೇಖಿಸಿದ್ದಾರೆ ಎಂಬ ಉಪಯೋಗವನ್ನು ತೋರಿಸುವುದಕ್ಕಾಗಿ ಟೀಕೆಯಲ್ಲಿ 'ನಚ' ಇತ್ಯಾದಿ ವಾಕ್ಯದಿಂದ ಆಶಂಕಿಸಿ ವ್ಯಾಖ್ಯಾನ

ಮಾಡುತ್ತಿದ್ದಾರೆ. ಶ್ರುತಿಯಲ್ಲಿ ಹೇಳಿದ್ದನ್ನು ಪುನಃ ಸ್ಮೃತಿಯಲ್ಲಿ ಉಲ್ಲೇಖಿಸಿದ್ದು ಸ್ಪಷ್ಟವಾಗುವುದಕ್ಕಾಗಿ ಎಂದು ತಿಳಿಯಬೇಕು.

ಪರಮಾತ್ಮನಲ್ಲಿ ಅಭಿಧ್ಯೋಪದೇಶ

ಭಾವದೀಪಃ – ತಚ್ಯತ ಇತ್ಯುಕ್ತೇರ್ಭಾವಮಾಹ – ನ ಚೇತ್ಯಾದಿನಾ ।। ಕುತಃ ಪರಮಾತ್ಮನಸ್ತದಿತಿ । ಏತೇನ ಪರಮಾತ್ಮನೋऽಭಿಧ್ಯಾತ್ವೋಪದೇಶಾತ್ ಪ್ರಕೃತಿಶಬ್ದವಾಚ್ಯತ್ವಮಿತ್ಯಪಿ ಸೂತ್ರಾರ್ಥೋ ದರ್ಶಿತಃ ।।

ಭಾಷ್ಯದಲ್ಲಿ 'ಉಚ್ಯತೇ' ಎಂಬ ಪದದ ಅಭಿಪ್ರಾಯವನ್ನು 'ನಚ' ಇತ್ಯಾದಿ ವಾಕ್ಯದಿಂದ ಹೇಳಿದ್ದಾರೆ. ಹೀಗೆ ಹೇಳಿದ್ದರಿಂದ ಪರಮಾತ್ಮನಿಗೆ ಅಭಿಧ್ಯಾತ್ವದ ಉಪದೇಶ ಇರುವುದರಿಂದ ಪ್ರಕೃತಿ ಶಬ್ದವಾಚ್ಯತ್ವವು ಯುಕ್ತವಾಗುತ್ತದೆ ಎಂಬ ಸೂತ್ರಾರ್ಥವನ್ನು ತೋರಿಸಿದಂತಾಯಿತು.

'ಮಾಯಿನಂ' ಎಂಬ ಶಬ್ದ ನಿಷ್ಪತ್ತಿ ಬಗ್ಗೆ

ಭಾವದೀಪಃ – ತತ್ಸಮ್ಬನ್ಧೇತಿ ।। ಮಾಯಿನಮಿತ್ಯತ್ರ ತದಸ್ಯಾಸ್ತ್ಯಸ್ಮಿನ್ನಿತಿ ಮತುಬರ್ಥೇ 'ಅತ ಇನಿಠನೌ' ವ್ರೀಹ್ಯಾದಿಭ್ಯಶ್ಚೇತಿ ಷಷ್ಠ್ಯಾದ್ಯರ್ಥಕೇನ್ಪ್ರತ್ಯಯಾನ್ತಸ್ಯ ಸಮ್ಬನ್ಧವಾಚಿತ್ವಾತ್ । ತವೇತಿ ಷಷ್ಠ್ಯಾಃ ಷಷ್ಠೀಶೇಷ ಇತಿ ಸಮ್ಬನ್ಧೇ ವಿಧಾನಾದಿತಿ ಭಾವಃ ।।

'ಮಾಯಿನಂ' ಎಂಬಲ್ಲಿ 'ತದಸ್ಯ ಅಸ್ತಿ ಅಸ್ಮಿನ್' ಎಂಬ ವ್ಯುತ್ಪತ್ತಿಯಿಂದ ಮತುಬರ್ಥದಲ್ಲಿ 'ಅತ ಇನಿಠನೌ ವ್ರೀಹ್ಯಾದಿಭ್ಯಶ್ಚ' ಎಂಬ ಸೂತ್ರದಿಂದ ಷಷ್ಠ್ಯರ್ಥದಲ್ಲಿ 'ಇನ್' ಪ್ರತ್ಯಯವು ಬಂದಿರುತ್ತದೆ. ಇದು ಸಂಬಂಧವಾಚಿ ಆಗಿರುತ್ತದೆ. ಏಕೆಂದರೆ 'ತವ' ಎಂಬ ಪದವು ಷಷ್ಠ್ಯಂತವಾಗಿ ಇರುವುದರಿಂದ 'ಷಷ್ಠೀ ಶೇಷೇ' ಎಂಬ ಸೂತ್ರವು ಸಂಬಂಧಾರ್ಥದಲ್ಲಿ ಈ ಪ್ರತ್ಯಯವನ್ನು ವಿಧಾನ ಮಾಡಿದೆ.

ಮೂರನೆಯ ಅಧ್ಯಾಯದಲ್ಲಿ ಇಚ್ಛೆಯು ಶ್ರೀಹರಿಯ ಸ್ವರೂಪವೆಂಬುದು ಸ್ಪಷ್ಟವಾಗುವುದು

ಭಾವದೀಪಃ – ಅತ ಆಹೇತಿ ।। ಏತಚ್ಚೋಭಯವ್ಯಪದೇಶಾತ್ತ್ವಹಿಕುಣ್ಡಲವದಿತ್ಯತ್ರ ತೃತೀಯೇ ಸ್ಪಷ್ಟಯಿಷ್ಯತ ಇತಿ ಭಾವಃ ।।೨।।

ಪರಮಾತ್ಮನು ಇಚ್ಛೆಯುಳ್ಳವನಾಗಿದ್ದರೂ, ಇಚ್ಛಾಸ್ವರೂಪನೂ ಆಗಿರುತ್ತಾನೆ ಎಂಬ ವಿಷಯವನ್ನು 'ಉಭಯವ್ಯಪದೇಶಾತ್ತ್ವಹಿಕುಂಡಲವತ್' ಎಂಬ ಮೂರನೆಯ ಅಧ್ಯಾಯದ ಸೂತ್ರದಲ್ಲಿ ಸ್ಪಷ್ಟಪಡಿಸುತ್ತಾರೆ.

ಬ್ರಹ್ಮಸೂತ್ರ

'ಸಾಕ್ಷಾಚ್ಚೋಭಯಾಮ್ನಾನಾತ್' ಎಂಬ ಸೂತ್ರಕ್ಕೆ ವ್ಯಾಖ್ಯಾನ

ಬ್ರಹ್ಮಸೂತ್ರಮ್ – ।। ಸಾಕ್ಷಾಚ್ಚೋಭಯಾಮ್ನಾನಾತ್ ।। ೩ ।।

ಸೂತ್ರಾರ್ಥ - ಇಚ್ಛೆಯ ವ್ಯವಧಾನವಿಲ್ಲದೇ ನೇರವಾಗಿ 'ನಾಮಾನಿ ಸರ್ವಾಣಿ' ಎಂಬ ಶ್ರುತಿಯು ಪ್ರಕೃತಿ ಮೊದಲಾದ ಶಬ್ದಗಳಿಂದೆಲ್ಲಾ ವಿಷ್ಣುವೇ ಪ್ರತಿಪಾದ್ಯನೆಂದು ಹೇಳುತ್ತಿದೆ. ಹೀಗೆ ಇಚ್ಛೆಯ ಅಪೇಕ್ಷೆಯಿಲ್ಲದೇ ನೇರವಾಗಿ ಪ್ರಕೃತ್ಯಾದಿ ಶಬ್ದಗಳಿಂದ ವಾಚ್ಯತ್ವವನ್ನು ಹೇಳಬಹುದು.

ಅರ್ಥ -- ಚ ಶಬ್ದವು ಅವಧಾರಣಾರ್ಥದಲ್ಲಿದೆ. 'ಸಾಕ್ಷಾತ್' = ಇಚ್ಛೆಯ ವ್ಯವಧಾನವಿಲ್ಲದೇ ಉಭಯಾಮ್ನಾನಾತ್ = 'ಏಷ ಸ್ತ್ರೈಷ ಪುರುಷಃ' ಎಂಬ ವಾಕ್ಯದಿಂದ ಪ್ರಕೃತಿ, ಪುರುಷ ಎಂಬೆರಡು ಶಬ್ದಗಳಿಂದ ವಾಚ್ಯನೆಂದು ಹೇಳಿದ್ದರಿಂದ, ಈಶ್ವರನಿಗೆ ಪ್ರಕೃತ್ಯಾದಿ ಶಬ್ದವಾಚ್ಯತ್ವವು ಅವಶ್ಯಕವಾಗಿದೆ.

ಬ್ರಹ್ಮಸೂತ್ರಭಾಷ್ಯ

ಪ್ರಕೃತಿ ಪುರುಷ ಶಬ್ದಗಳೆಲ್ಲವೂ ಶ್ರೀಹರಿಯದ್ದೇ

ಬ್ರಹ್ಮಸೂತ್ರಭಾಷ್ಯಮ್ – ।। ಸಾಕ್ಷಾಚ್ಚೋಭಯಾಮ್ನಾನಾತ್ ।।

'ಏಷ ಸ್ತ್ರ್ಯೇಷ ಪುರುಷ ಏಷ ಪ್ರಕೃತಿರೇಷ ಆತ್ಮೈಷ ಬ್ರಹ್ಮೈಷ ಲೋಕ ಏಷ ಆಲೋಕೋ ಯೋऽಸೌ ಹರಿರಾದಿರನಾದಿರನನ್ತೋऽನ್ತಃ ಪರಮಃ ಪರಾದ್ವಿಶ್ವರೂಪಃ' ಇತಿ ಪೈಙ್ಗಿಶ್ರುತೌ ಸಾಕ್ಷಾದೇವ ಪ್ರಕೃತಿಪುರುಷತ್ವಾಮ್ನಾನಾತ್ ।।೩।।

ಅನುವಾದ - ಇವನು ಸ್ತ್ರೀ, ಇವನು ಪುರುಷ, ಇವನು ಪ್ರಕೃತಿ, ಇವನು ಆತ್ಮ. ಮತ್ತು ಬ್ರಹ್ಮ, ಲೋಕಾಧಾರ, ಪ್ರಕಾಶರೂಪನೂ ಆಗಿರುತ್ತಾನೆ. ಅನಾದಿಯು ಅನಂತನೂ ಶ್ರೇಷ್ಠನೂ ಪ್ರಕೃತಿಗಿಂತಲೂ ಉತ್ತಮನೂ ಆಗಿರುತ್ತಾನೆ, ವಿಷ್ಣುರೂಪನೂ ಆಗಿರುತ್ತಾನೆ. ಹೀಗೆ ಪೈಂಗೀ ಶ್ರುತಿಯಲ್ಲಿ ನೇರವಾಗಿಯೇ ಅಂದರೆ ಇಚ್ಛೆಯ ಅಪೇಕ್ಷೆಯಿಲ್ಲದೇ ಪ್ರಕೃತಿ, ಪುರುಷ ಶಬ್ದಗಳಿಂದ ವಾಚ್ಯತ್ವವನ್ನು ಹೇಳಲಾಗಿದೆ.

ಪ್ರತಿಪದಾರ್ಥ -- ಹಿಂದೆ ಉಲ್ಲೇಖಿಸಿದ ಪ್ರಮಾಣಗಳಿಂದ ಇಚ್ಛಾ ಮೂಲಕವಾಗಿಯೇ ಭಗವಂತನು ಪ್ರಕೃತಿಶಬ್ದವಾಚ್ಯನಾಗಬಹುದು. ನೇರವಾಗಿ ಪ್ರಕೃತಿ ಶಬ್ದದಿಂದ ವಾಚ್ಯನಾಗಲು ಸಾಧ್ಯವಿಲ್ಲವೇ? ಈ

ಆಶಂಕೆಗೆ ವಿಶೇಷ ಪ್ರಮಾಣವನ್ನು ವಿವೇಚಿಸುತ್ತಾ, ಪರಿಹಾರ ಮಾಡುವ ಸೂತ್ರವನ್ನು ಉಪನ್ಯಾಸ ಮಾಡಿ ವ್ಯಾಖ್ಯಾನಿಸುತ್ತಿದ್ದಾರೆ. –

ಏಷಃ = ಪರಮಾತ್ಮನು, ಸ್ತ್ರೈಷಃ = ಸತತವಾಗಿ ಸುಖಪಡುವುದರಿಂದ ಸ್ತ್ರೀಶಬ್ದವಾಚ್ಯ- ನಾಗಿದ್ದಾನೆ, ಪುರುಷಃ = ಪುರುಷನೆನಿಸಿದ್ದಾನೆ, ಏಷ = ಇವನು, ಪ್ರಕೃತಿಃ = ಪ್ರಕೃತಿ ಎನಿಸಿದ್ದಾನೆ. ಏಷಃ = ಇವನು, ಆತ್ಮಾ = ಆತ್ಮನೆನಿಸಿದ್ದಾನೆ, ಏಷಃ = ಇವನು, ಬ್ರಹ್ಮ = ಗುಣಪೂರ್ಣನಾಗಿದ್ದಾನೆ, ಏಷಃ ಲೋಕ = ಇವನೇ ಲೋಕಾಧಾರಕನು, ಏಷಃ ಆಲೋಕಃ = ಇವನೇ ಲೋಕಪ್ರಕಾಶಕನು, ಯೋಽಸೌ = ಇಂತಹ ಪ್ರಸಿದ್ಧನಾದ, ಹರಿಃ = ಸಕಲ ಅನಿಷ್ಟ ಪರಿಹಾರಕನಾದ ವಿಷ್ಣುವೇ, ಆದಿಃ = ಪ್ರಪಂಚದ ಮೂಲಕಾರಣನು, ಅನಾದಿಃ = ತನಗಿಂತಲೂ ಆದಿಯಿಲ್ಲದವನು, ಅನಂತಃ = ನಾಶರಹಿತನು, ಅಂತಃ = ಪ್ರಳಯ ಸ್ವರೂಪನು, ಪರಾತ್ಪರಮಃ = ಪರಶಬ್ದವಾಚ್ಯಳಾದ ಲಕ್ಷ್ಮೀಗಿಂತಲೂ ಶ್ರೇಷ್ಠನು, ವಿಷ್ಣುರೂಪಃ = ಜಗತ್ತಿನಂತೆ ರೂಪವುಳ್ಳವನು, ಇತಿ = ಹೀಗೆ, ಪೈಂಗಿಶ್ರುತೌ = ಪೈಂಗಿಶ್ರುತಿಯಲ್ಲಿ, ಸಾಕ್ಷಾದೇವ = ನೇರವಾಗಿಯೇ, ಪ್ರಕೃತಿ ಪುರುಷತ್ವಾಮ್ನಾನಾತ್ = ಪ್ರಕೃತಿ ಪುರುಷಗಳ ಶಬ್ದವಾಚ್ಯತ್ವವನ್ನು ಹೇಳಿರುವುದರಿಂದ.

ಸತ್ತರ್ಕದೀಪಾವಳಿ

ಪ್ರಯೋಗ ಬಾಹುಲ್ಯವನ್ನು ತೋರಿಸಿದ್ದಾಯಿತು

सत्तर्कदीपावलिः – एवं प्रवृत्तिशब्दस्य प्रयोगबाहुल्यं दर्शयित्वा महायोगं च तत्र दर्शयतीत्याह – आत्मकृतेरित्यादिना ।

ಇಲ್ಲಿಯ ತನಕ ಪ್ರಕೃತಿ ಶಬ್ದಕ್ಕೆ ಪರಮಾತ್ಮನಲ್ಲಿ ಪ್ರಯೋಗ ಬಾಹುಲ್ಯವನ್ನು ತೋರಿಸಿದ್ದಾಯಿತು. ಈಗ ಮಹಾಯೋಗವೃತ್ತಿಯನ್ನು ಪರಮಾತ್ಮನಲ್ಲಿ ತೋರಿಸಲು 'ಆತ್ಮಕೃತೇಃ' ಎಂಬ ಸೂತ್ರವು ಹೊರಟಿದೆ.

ಪ್ರಕೃತಿಶಬ್ದಕ್ಕೆ ವಿದ್ವದ್ರೂಢಿಯೂ ಇದೆ

सत्तर्कदीपावलिः – प्रकृतावनुप्रविश्यतां महदादिबहुविकारिणीं कुर्वन् कृत्वा अर्थेष्वविकारेणैवात्मानं प्रकर्षेण बहुधा च कारयन् तस्मात्स प्रकृतिः तस्मात्तं प्रकृतिरित्याचक्षत इति पुनः विद्वद्रूढिरपि तत्र दर्शिता ।

ಪರಮಾತ್ಮನು ಪ್ರಕೃತಿಯಲ್ಲಿ ಪ್ರವೇಶ ಮಾಡುತ್ತಾನೆ. ಅನಂತರ ಅದನ್ನು ಮಹತ್ತತ್ವ ಮೊದಲಾದ ಅನೇಕ ವಿಧವಾದ ವಿಕಾರಗಳುಳ್ಳದ್ದಾಗಿ ಮಾಡುತ್ತಾನೆ. ಸೃಷ್ಟಿ ಮಾಡಲ್ಪಟ್ಟ ಆ ಎಲ್ಲಾ ಪದಾರ್ಥಗಳಲ್ಲಿ ತಾನು ವಿಕಾರವನ್ನು ಹೊಂದದೇ ಇದ್ದರೂ ಕೂಡ ಅನೇಕ ರೂಪಗಳನ್ನು ತಾಳಿ, ನೆಲಸುತ್ತಾನೆ. ಆದ್ದರಿಂದಲೇ ಇವನನ್ನು ಪ್ರಕೃತಿ ಎಂಬುದಾಗಿ ಜ್ಞಾನಿ ಜನರು ಕರೆಯುತ್ತಾರೆ. ಹೀಗೆ ಪುನಃ ವಿದ್ವದ್ರೂಢಿಯನ್ನೂ ಕೂಡ ತೋರಿಸಿದಂತಾಯಿತು.

ತತ್ವಪ್ರಕಾಶಿಕಾ

ಪ್ರಕೃತಿಶಬ್ದವಾಚ್ಯನೆನ್ನಲು ಯಾವ ಶ್ರುತಿ ಆಧಾರ ?

तथापि नेश्वरस्य प्रकृतिशब्दवाच्यत्वम् । 'सर्वाणि नामानि' इत्येवंरूपेण विना, साक्षात् प्रकृतिशब्दवाच्यत्वे श्रुत्याद्यभावात् । सर्वशब्दस्य तु सङ्कोचसम्भवात्।

ಆಕ್ಷೇಪ - ಈಶ್ವರನು ಅನೇಕ ಪ್ರಕೃತಿಶಬ್ದದಿಂದ ಪ್ರತಿಪಾದ್ಯನಾಗುತ್ತಾನೆಂದು ಅನೇಕ ಯುಕ್ತಿಗಳಿಂದ ಸಮರ್ಥನೆ ಮಾಡಿದಿರಿ. ಆದರೂ ಕೂಡ ಇದು ಸರಿಯಲ್ಲ. ಏಕೆಂದರೆ 'ಸರ್ವಾಣಿ ನಾಮಾನಿ' ಇತ್ಯಾದಿ ಸಾಮಾನ್ಯ ಪ್ರಮಾಣವಚನಗಳನ್ನು ಬಿಟ್ಟು, ನೇರವಾಗಿ ಪ್ರಕೃತಿಶಬ್ದವಾಚ್ಯನಾಗಿದ್ದಾನೆನ್ನಲು ಪ್ರಮಾಣ ವಚನಗಳಿರುವುದಿಲ್ಲ. 'ನಾಮಾನಿ ಸರ್ವಾಣಿ' ಎಂಬಲ್ಲಿರುವ ಸರ್ವಶಬ್ದಕ್ಕೆ ಸ್ತ್ರೀಲಿಂಗಶಬ್ದಗಳನ್ನು ಬಿಟ್ಟು ಎಂದು ಸಂಕೋಚ ಮಾಡಬಹುದು.

'ಮಾಯಾಂ ತು ಪ್ರಕೃತಿಂ ವಿದ್ಯಾತ್' ಎಂಬುದು ಆಧಾರವಾಗುವುದೇ ?

तत्वप्रकाशिका – न चातीतसूत्रे तदप्युक्तमिति वाच्यम् । इच्छाद्वारैव

प्रकृतिशब्दवाच्यतां विना साक्षादीश्वरस्यैव तदभावादित्याशङ्कां परिहरत्सूत्रं पठित्वा व्याचष्टे – साक्षाच्चेति।।

ಹಿಂದಿನ ಸೂತ್ರದಲ್ಲಿ 'ಮಾಯಾಂ ತು ಪ್ರಕೃತಿಂ ವಿದ್ಯಾತ್' ಇತ್ಯಾದಿಯಾಗಿ ವಿಶೇಷ ಪ್ರಮಾಣವನ್ನು ಹೇಳಲಾಗಿದೆಯಲ್ಲವೇ? ಎಂದು ಪ್ರಶ್ನಿಸಬಾರದು. ಅಲ್ಲಿಯೂ ಕೂಡ ಇಚ್ಛೆಯ ಮೂಲಕವಾಗಿಯೇ ಪರಮಾತ್ಮನು ಪ್ರಕೃತಿಶಬ್ದದಿಂದ ಪ್ರತಿಪಾದ್ಯನೆಂದು ಸಮರ್ಥಿಸಿದ್ದಾರೆ ಹೊರತು, ನೇರವಾಗಿ ಪ್ರಕೃತಿಶಬ್ದವಾಚ್ಯನಾಗಿದ್ದಾನೆಂದು ಸಮರ್ಥನೆ ಮಾಡಿಲ್ಲ. ಹೀಗಿರುವಾಗ ಪರಮಾತ್ಮನು ಸ್ತ್ರೀಲಿಂಗಶಬ್ದಗಳಿಂದ ಪ್ರತಿಪಾದ್ಯನೆನ್ನಲು ನಿಯಾಮಕಪ್ರಮಾಣವೇನು ?

ಪರಿಹಾರ - ಈ ಆಕ್ಷೇಪಕ್ಕೆ ಪರಿಹಾರವನ್ನು ಹೇಳಲು ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ - 'ಸಾಕ್ಷಾಚ್ಚ' ಇತ್ಯಾದಿಯಾಗಿ.

'ಏಷಃ ಸ್ತ್ರ್ಯೇಷ ಪುರುಷಃ' ಎಂಬ ಶ್ರುತಿಯು ಆಧಾರವಾಗುವುದು

तत्वप्रकाशिका – नेश्वरस्योक्तरीत्या प्रकृतिशब्दवाच्यताऽभावः शङ्कनीयः । 'एषः स्त्र्येष पुरुषः' इति श्रुतौ साधारण्येन विना साक्षादेवेच्छाद्वारमन्तराऽपि प्रकृतिपुरुषशब्दवाच्यतामानादिति भावः । लोक आधारः । आलोकः प्रकाशरूपः ।।३।।

ಪರಮಾತ್ಮನು ಪ್ರಕೃತಿಶಬ್ದವಾಚ್ಯನಲ್ಲವೆಂದು ಮೇಲೆ ಹೇಳಿದಂತೆ ಸಂಶಯ ಪಡಬಾರದು. ಏಕೆಂದರೆ 'ಏಷಃ ಸ್ತ್ರ್ಯೇಷ ಪುರುಷಃ' ಎಂಬ ಶ್ರುತಿಯಲ್ಲಿ ಸಾಮಾನ್ಯವಾಗಿ ಸ್ತ್ರೀಲಿಂಗಶಬ್ದದಿಂದ ಪ್ರತಿಪಾದ್ಯನೆಂದು ಹೇಳದೇ, ಮತ್ತು ಇಚ್ಛಾಮೂಲಕವಾಗಿಯೂ ಪರಮಾತ್ಮನಿಗೆ ಪ್ರಕೃತಿಪುರುಷ ಶಬ್ದ-ವಾಚ್ಯತ್ವವನ್ನು ಹೇಳದೇ ನೇರವಾಗಿ ಪ್ರಕೃತಿ, ಪುರುಷ ಮೊದಲಾದ ಶಬ್ದಗಳಿಂದ ಪ್ರತಿಪಾದ್ಯತ್ವವನ್ನು ಹೇಳಲಾಗಿದೆ. ಈ ಅಭಿಪ್ರಾಯದಿಂದ ಭಾಷ್ಯದ ಮಾತು ಹೊರಟಿದೆ.

'ಲೋಕ' ಶಬ್ದಕ್ಕೆ 'ಆಧಾರ' ಎಂದರ್ಥ. 'ಆಲೋಕ' ಶಬ್ದಕ್ಕೆ 'ಪ್ರಕಾಶ' ಎಂದರ್ಥ.

ಭಾವದೀಪ

ಸ್ತ್ರೀ ಶಬ್ದ ಪ್ರತಿಪಾದ್ಯತ್ವಕ್ಕೆ ವಿಶೇಷ ಪ್ರಮಾಣ

एवं रूपेणेति ।। प्रकृतिश्चेत्यत्रोक्तसामान्यरूपेण विना साक्षाद्विशिष्येत्यर्थः।।

'ಏವಂ ರೂಪೇಣ' ಎಂದರೆ 'ಪ್ರಕೃತಿಶ್ಚ' ಎಂಬ ಸೂತ್ರದಲ್ಲಿ ಸಾಮಾನ್ಯವಾಗಿ ಸ್ತ್ರೀಲಿಂಗಶಬ್ದಗಳಿಂದ ಪ್ರತಿಪಾದ್ಯತ್ವವನ್ನು ಹೇಳಲಾಗಿದೆ. ಅದಕ್ಕಿಂತ ವ್ಯತಿರಿಕ್ತವಾಗಿ ವಿಶೇಷರೂಪದಲ್ಲಿಯೇ ಪ್ರಮಾಣವನ್ನು ಹೇಳುತ್ತಿದ್ದಾರೆ ಎಂದರ್ಥ.

ಇಚ್ಛಾ ಮೂಲಕವಾಗಿ ಪ್ರಕೃತಿಯಷ್ಟೇ ಅಲ್ಲ

भावदीपः – इच्छाद्वारैवेति ।। प्रकृतिशब्दवाच्यैच्छास्वरूपत्वात् प्रकृतिशब्दवाच्य इत्येवंरूपेणेत्यर्थः ।

'ಪ್ರಕೃತಿ' ಶಬ್ದಕ್ಕೆ 'ಇಚ್ಛಾ' ಎಂದರ್ಥ. ಆ ಇಚ್ಛೆಯು ಭಗವಂತನ ಸ್ವರೂಪವೆಂದು ಹೇಳಿ, ಪ್ರಕೃತಿಶಬ್ದವಾಚ್ಯತ್ವವನ್ನು ಪರಂಪರಯಾ ಮುಂದಿನ ಸೂತ್ರದಲ್ಲಿ ಹೇಳಲಾಗಿದೆ ಎಂಬುದನ್ನು 'ಇಚ್ಛಾದ್ವಾರೈವ' ಎಂಬ ಮಾತಿನಿಂದ ಹೇಳುತ್ತಿದ್ದಾರೆ.

ನೇರವಾಗಿಯೇ ಪ್ರಕೃತಿ ಶಬ್ದವಾಚ್ಯ

भावदीपः – साक्षात्पदेन प्रागुक्तं सामान्यपारम्पर्यरूपद्वयमपि व्यावर्त्यमिति व्यनक्ति – साधारण्येन विनेति ।।

'ಸಾಕ್ಷಾತ್' ಎಂಬ ಪದದಿಂದ ಸಾಮಾನ್ಯಪ್ರಮಾಣ ಹಾಗೂ ಪರಂಪರಾರೂಪವಾದ ಪ್ರಮಾಣ ಇವೆರಡಕ್ಕಿಂತಲೂ ವ್ಯತಿರಿಕ್ತವಾಗಿ ನೇರವಾಗಿಯೇ ಪ್ರಕೃತಿ ಶಬ್ದವಾಚ್ಯತ್ವವನ್ನು ಹೇಳುತ್ತಿದ್ದಾರೆಂಬ ಅಭಿಪ್ರಾಯದಿಂದ 'ಸಾಧಾರಣ್ಯೇನ ವಿನಾ' ಎಂಬ ವಾಕ್ಯವು ಹೊರಟಿದೆ.

'ಚ'ಶಬ್ದವು ಅವಧಾರಣಾರ್ಥ

भावदीपः – चशब्द एवार्थ इति भावेन भाष्योक्तमनुवदति ।। साक्षादेवेति ।। प्रकृतीति ।। स्त्रीशब्दमात्रोपलक्षणमेतत् ।। पुरुषशब्देति ।। पुल्लिङ्गशब्देत्यर्थः ।।३।।

ಸೂತ್ರದಲ್ಲಿರುವ 'ಚ'ಶಬ್ದವು ಅವಧಾರಣಾರ್ಥದಲ್ಲಿದೆ ಎಂಬ ಅಭಿಪ್ರಾಯದಿಂದ ಭಾಷ್ಯದಲ್ಲಿ ಹೇಳಿದ್ದನ್ನು ಟೀಕೆಯಲ್ಲಿ 'ಸಾಕ್ಷಾದೇವ' ಎಂದು ಅನುವಾದ ಮಾಡಿದ್ದಾರೆ. 'ಪ್ರಕೃತಿ' ಶಬ್ದವು ಸಕಲ ಸ್ತ್ರೀಶಬ್ದಗಳಿಗೆ ಉಪಲಕ್ಷಣವಾಗಿದೆ ಪುರುಷಶಬ್ದವು ಸಕಲ ಪುಲ್ಲಿಂಗಶಬ್ದಗಳಿಗೆ ಉಪಲಕ್ಷಣವಾಗಿದೆ.

ಬ್ರಹ್ಮಸೂತ್ರ

'ಆತ್ಮಕೃತೇಃ ಪರಿಣಾಮಾತ್' ಎಂಬ ಸೂತ್ರ ವ್ಯಾಖ್ಯಾನ

ಬ್ರಹ್ಮಸೂತ್ರಮ್ – ।। आत्मकृतेः परिणामात् ।। ೪ ।।

ಸೂತ್ರಾರ್ಥ - ಪ್ರಕೃತಿಯು ಮಹತ್ತತ್ವಾದಿ ರೂಪವನ್ನು ಹೊಂದಿ, ಜಗದಾಕಾರದಲ್ಲಿ ಪರಿಣಾಮ ಹೊಂದುತ್ತದೆ. ಹಾಗೆಯೇ ಪರಿಣಾಮವನ್ನುಂಟುಮಾಡಲು ನಿಯಂತ್ರಣಕ್ಕಾಗಿ ಭಗವಂತನು ಅನೇಕ ರೂಪಗಳನ್ನು ತಾಳುತ್ತಾನೆ. ಆದ್ದರಿಂದಲೂ ಪ್ರಕೃತಿ ಶಬ್ದದಿಂದ ವಿಷ್ಣುವೇ ಪ್ರತಿಪಾದ್ಯನು.

ಅರ್ಥ -- ಪರಿಣಾಮಾತ್ = ಪ್ರಕೃತಿಯು ಅನೇಕ ಬಗೆಯಲ್ಲಿ ಪರಿಣಾಮ ಹೊಂದುವುದರಿಂದ, ಅದರ ಪ್ರೇರಣೆಗಾಗಿ, ಆತ್ಕೃತೇಃ = ತಾನು ಅನೇಕ ರೂಪಗಳನ್ನು ತಾಳುತ್ತಾನಾದ್ದರಿಂದ, ಪ್ರಕೃತಿಯಲ್ಲಿ ಅಂತರ್ಯಾಮಿಯಾಗಿರುವ ಕಾರಣ, ಪ್ರಕೃತಿ ಶಬ್ದದಿಂದ ವಾಚ್ಯನಾದವನು ವಿಷ್ಣುವೇ ಆಗುತ್ತಾನೆ.

ಬ್ರಹ್ಮಸೂತ್ರಭಾಷ್ಯ

ಪ್ರಕೃತಿಶಬ್ದದ ನಿರ್ವಚನ

ಬ್ರಹ್ಮಸೂತ್ರಭಾಷ್ಯಮ್ – ।। आत्मकृतेः परिणामात् ।।

प्रकर्षेण करोतीति प्रकृतिरिति योगाच्च ।

ಅನುವಾದ - ಪ್ರಕರ್ಷವಾದ ಶಕ್ತಿಯಿಂದ ಜಗಜ್ಜನ್ಮಾದಿಗಳನ್ನು ಮಾಡುತ್ತಾನೆಂಬ ಕಾರಣದಿಂದ ಪ್ರಕೃತಿಶಬ್ದವಾಚ್ಯನಾಗಿದ್ದಾನೆ.

ಪ್ರತಿಪದಾರ್ಥ -- ಪ್ರಕೃತಿಶಬ್ದವಾಚ್ಯತ್ವವನ್ನು ಶ್ರೀಹರಿಯಲ್ಲಿ ಹೇಳಿದ್ದರೂ ಅದು ಹೇಗೆ ಕೂಡುತ್ತದೆ? ಪ್ರಕೃತಿಶಬ್ದದ ಪ್ರವೃತ್ತಿನಿಮಿತ್ತವೇ ಅವನಲ್ಲಿ

ಬರುವುದಿಲ್ಲವಲ್ಲ? ಈ ಆಶಂಕೆಯನ್ನು ಪರಿಹರಿಸಲು ಮುಂದಿನ ಸೂತ್ರ ಹೊರಟಿದೆ. –

ಪ್ರಕರ್ಷೇಣ = ಹೆಚ್ಚಿನ ಶಕ್ತಿಯಿಂದ, ಕರೋತಿ = ಜಗಜ್ಜನ್ಮಾದಿಗಳನ್ನು ಮಾಡುತ್ತಾನೆ. ಇತಿ = ಈ ಕಾರಣದಿಂದ, ಪ್ರಕೃತಿಃ = ಪ್ರಕೃತಿಶಬ್ದವಾಚ್ಯನು (ಅತ್ಯುತ್ತಮ ಕರ್ತೃತ್ವವುಳ್ಳವನಾದ್ದರಿಂದ ಪ್ರಕೃತಿಯೆನಿಸಿದ್ದಾನೆ) ಇತಿ ಯೋಗಾಚ್ಚ = ಹೀಗೆ ಯೋಗಾರ್ಥವು ವಿಷ್ಣುವಿನಲ್ಲಿ ಬರುವುದರಿಂದ.

ಪ್ರವೃತ್ತಿನಿಮಿತ್ತಕ್ಕೆ ಕಾರಣ

ಬ್ರಹ್ಮಸೂತ್ರಭಾಷ್ಯಮ್ – प्रकृतावनुप्रविश्य तां परिणाम्य तत्परिणामेषु स्थित्वाऽऽत्मनो बहुधाकरणात् ।

ಅನುವಾದ - ಜಡವಾದ ಪ್ರಕೃತಿಯೊಳಗಡೆ ಪರಮಾತ್ಮನು ಪ್ರವೇಶ ಮಾಡಿ, ಅದನ್ನು ಮಹತ್ತತ್ತ್ವಾದಿರೂಪದಿಂದ ಪರಿಣಾಮವಾಗುವಂತೆ ಮಾಡಿ, ಆ ಪರಿಣತ ವಸ್ತುಗಳ ನಿಯಾಮಕನಾಗಿ ಅವುಗಳಲ್ಲಿದ್ದು, ತನ್ನನ್ನು ಅನೇಕ ರೂಪಗಳುಳ್ಳವನಾಗಿ ಮಾಡುತ್ತಾನೆ.

ಪ್ರತಿಪದಾರ್ಥ -- ಪ್ರವೃತ್ತಿನಿಮಿತ್ತವು ಪರಮಾತ್ಮನಲ್ಲಿ ಹೇಗೆ ಬರುತ್ತದೆ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ. –

ಪ್ರಕೃತ = ಜಡಪ್ರಕೃತಿಯಲ್ಲಿ, ಅನುಪ್ರವಿಶ್ಯ = ಪ್ರವೇಶ ಮಾಡಿ, ತಾಂ = ಅದನ್ನು, ಪರಿಣಾಮ್ಯ = ಮಹತ್ತತ್ತ್ವಾತ್ಮಕವಾಗಿ ಪರಿಣಾಮ ಮಾಡಿ, ಪರಿಣಾಮನಿಯಾಮಕತಯಾ = ಅದರ ಪರಿಣಾಮಕ್ಕೆ ನಿಯಾಮಕನಾಗಿ, ತತ್ರ = ಆ ಜಡಪ್ರಕೃತಿಯಲ್ಲಿ, ಸ್ಥಿತ್ವಾ = ನೆಲೆಸಿ, ಆತ್ಮನಃ = ತನ್ನನ್ನೇ, ಬಹುಧಾ = ಅನೇಕ ರೂಪಗಳನ್ನಾಗಿ, ಕರಣಾತ್ = ಮಾಡುವುದರಿಂದ.

ಶ್ರುತಿ-ಸ್ಮೃತಿಗಳ ಆಧಾರ

ಬ್ರಹ್ಮಸೂತ್ರಭಾಷ್ಯಮ್ – 'अथ हैष आत्मा प्रकृतिमनुप्रविश्याऽऽत्मानं बहुधा चकार । तस्मात् प्रकृतिस्तस्मात् प्रकृतिरित्याचक्षते' इति भाल्लवेयश्रुतिः ।

ಅನುವಾದ - ಆತ್ಮನು ಜಡಪ್ರಕೃತಿಯಲ್ಲಿ ಪ್ರವೇಶಿಸಿ, ತನ್ನನ್ನು ಅನೇಕ ರೂಪವುಳ್ಳವನನ್ನಾಗಿ ಮಾಡಿಕೊಳ್ಳುತ್ತಾನೆ. ಆದ್ದರಿಂದ ಅವನನ್ನು ಪ್ರಕೃತಿ ಎನ್ನುತ್ತಾರೆ. ಹೀಗೆ ಭಾಲ್ಲವೇಯ ಶ್ರುತಿ ಹೇಳುತ್ತಿದೆ.

ಪ್ರತಿಪದಾರ್ಥ -- ತಾವು ಹೇಳಿದ ಸೂತ್ರಾರ್ಥದಲ್ಲಿ ಅವಿಶ್ವಾಸ ಬರಬಾರದೆಂಬ ದೃಷ್ಟಿಯಿಂದ ಶ್ರುತಿ-ಸ್ಮೃತಿಗಳನ್ನು ಆಧಾರವನ್ನಾಗಿ ನೀಡುತ್ತಿದ್ದಾರೆ. –

ಅಥ = ಮತ್ತೊಂದು ಪ್ರಮೇಯವು, ಹ = ಪ್ರಸಿದ್ಧವಾಗಿದೆ. ಏಷಃ = ಪರಮಾತ್ಮನು, ಯಸ್ಮಾತ್ = ಯಾವ ಕಾರಣದಿಂದ, ಪ್ರಕೃತಿಂ = ಜಡಪ್ರಕೃತಿಯನ್ನು, ಅನುಪ್ರವಿಶ್ಯ = ಸ್ವಇಚ್ಛೆಯಿಂದ ಪ್ರವೇಶಮಾಡಿ, ಆತ್ಮಾನಂ = ತನ್ನನ್ನು, ಬಹುಧಾ = ಅನೇಕ ರೂಪವುಳ್ಳವನನ್ನಾಗಿ, ಚಕಾರ = ಮಾಡಿದನು, ತಸ್ಮಾತ್ = ಆ ಕಾರಣದಿಂದ, ಪ್ರಕೃತಿಃ = ಪ್ರಕೃತಿಶಬ್ದವಾಚ್ಯನು, ತಸ್ಮಾತ್ = ಆ ಕಾರಣದಿಂದ, ಪ್ರಕೃತ = ಪ್ರಕೃತಿ ಶಬ್ದದಿಂದ ವಾಚ್ಯನು, ಇತಿ = ಹೀಗೆ, ಆಚಕ್ಷತೇ = ಕರೆಯುತ್ತಾರೆ. ಇತಿ = ಹೀಗೆ, ಭಾಲ್ಲವೇಯಶ್ರುತಿಃ = ಭಾಲ್ಲವೇಯ ಶ್ರುತಿಯು ಹೇಳುತ್ತಿದೆ.

ಪ್ರಕೃತಿಯಲ್ಲಿಯೂ ಪರಮಾತ್ಮನು ಪ್ರವೇಶಿಸುವನು

ಬ್ರಹ್ಮಸೂತ್ರಭಾಷ್ಯಮ್ – 'अविकारोऽपि परमः प्रकृतिं तु विकारिणीम् ।
अनुप्रविश्य गोविन्दः प्रकृतिश्चाभिधीयते'' ।। इति नारदीये ।

ಅನುವಾದ - ತಾನು ವಿಕಾರ ಹೊಂದದಿದ್ದರೂ, ಪ್ರಕೃತಿಯನ್ನು ಪ್ರವೇಶಿಸಿ ಅದನ್ನು ವಿಕಾರಗೊಳಿಸುತ್ತಾನೆ. ಆದ್ದರಿಂದ ಅವನು ಪ್ರಕೃತಿ ಎಂದು ಕರೆಸಿಕೊಳ್ಳುತ್ತಾನೆ. ಹೀಗೆ ನಾರದೀಯ ಪುರಾಣವು ಹೇಳಿದೆ.

ಪ್ರತಿಪದಾರ್ಥ -- ಸ್ಮೃತಿಯಲ್ಲಿ 'ಯದ್ಯಪಿ' ಮತ್ತು 'ತಥಾಪಿ' ಎಂಬ ಪದಗಳ ಅರ್ಥದಲ್ಲಿ ಅಪಿಶಬ್ದವು ಪ್ರಯುಕ್ತವಾಗಿದೆ. 'ತು' ಶಬ್ದವು ವಿಶೇಷಾರ್ಥದಲ್ಲಿದೆ. ಆದ್ದರಿಂದ –

ಅಪಿ = ವಾಸ್ತವಿಕವಾಗಿ, ಗೋವಿಂದಃ = ಗೋವಿಂದನು, ಪರಮಃ ಅವಿಕಾರಃ = ಅತ್ಯಂತ ನಿರ್ವಿಕಾರನು ಆಗಿದ್ದರೂ, ಚ = ಯಾವ ಕಾರಣದಿಂದ, ವಿಕಾರಿಣಿ = ವಿಕಾರವುಳ್ಳ, ಪ್ರಕೃತಿಂ ತು = ಜಡ ಪ್ರಕೃತಿಯನ್ನು, ಅನುಪ್ರವಿಶ್ಯ = ಪ್ರವೇಶ ಮಾಡಿ, ಪ್ರಕೃತಿಶ್ಚ =

ಪ್ರಕೃತಿಯಂತೆ, ಅಭಿಧೀಯತೇ = ಕರೆಸಿಕೊಳ್ಳುತ್ತಾನೆ. ಇತಿ = ಹೀಗೆ, ನಾರದೀಯೇ = ನಾರದೀಯ ಪುರಾಣದಲ್ಲಿ ಹೇಳಲಾಗಿದೆ.

ಅಪವ್ಯಾಖ್ಯಾನದ ನಿರಾಕರಣೆ

ಬ್ರಹ್ಮಸೂತ್ರಭಾಷ್ಯಮ್ – ನ ಚಾನ್ಯತ್ ಕಲ್ಪ್ಯಮ್, ಅಪ್ರಮಾಣತ್ವಾತ್ ।।೪।।

ಅನುವಾದ - ನಾವು ಹೇಳಿದ ಅರ್ಥವನ್ನು ಬಿಟ್ಟು, ಬೇರೆ ಭಾಷ್ಯಕಾರರು ಹೇಳಿದ ಅರ್ಥವನ್ನು ಸೂತ್ರಕ್ಕೆ ತಿಳಿಯಬಾರದು. ಅವರ ಅರ್ಥದಲ್ಲಿ ಯಾವುದೇ ಪ್ರಮಾಣವಿಲ್ಲ. ಪ್ರಮಾಣಕ್ಕೆ ವಿರುದ್ಧವೂ ಆಗಿದೆ.

ಪ್ರತಿಪದಾರ್ಥ -- ಅಪವ್ಯಾಖ್ಯಾನವನ್ನು ದೂಷಣೆ ಮಾಡುತ್ತಿದ್ದಾರೆ. ಚ ಶಬ್ದವು 'ತು' ಎಂಬ ಪದದ ಅರ್ಥದಲ್ಲಿದೆ. –

ಅನ್ಯತ್ = ಹಿಂದೆ ಹೇಳಿದ ಅರ್ಥವನ್ನು ಬಿಟ್ಟು ಪ್ರಕೃತಿ ಶಬ್ದಕ್ಕೆ ಉಪಾದಾನ ಎಂಬರ್ಥವನ್ನು, ನ ಕಲ್ಪ್ಯಮ್ = ಕಲ್ಪಿಸಬಾರದು. ಅಪ್ರಮಾಣತ್ವಾತ್ = ಆ ಉಪಾದಾನಕಾರಣತ್ವಾದ್ಯರ್ಥಗಳು ಅಪ್ರಾಮಾಣಿಕವಾಗಿವೆ. ಮತ್ತು ಪ್ರಮಾಣವಿರುದ್ಧವೂ ಆಗಿವೆ.

ಸತ್ತರ್ಕದೀಪಾವಳಿ

ಪ್ರಕೃತಿ ಶಬ್ದದ ನಿರ್ವಚನ

ಸತ್ತರ್ಕದೀಪಾವಳಿಃ – ಅನೇನಾಭಿಧ್ಯೋಪದೇಶಾದಿತೀచ್ಛಯೈವ ಕಾಂಶ್ಚಿತ್ಪ್ರಕರ್ಷೇಣ ಕರೋತೀತಿ ಸೂಚಿತಮ್ । ಸಾಕ್ಷಾచ್ಚೇತೀచ್ಛಾಪೂರ್ವಕಂ ಸ್ವದೇಹಾದಿರಪಿ ಕಾಂಶ್ಚಿತ್ । ಏವಮವಿಕಾರಮೇವ ಬ್ರಹ್ಮ ಸ್ವೇచ್ಛಯಾ ಸ್ವಯಂ ಜಗತ್ಕರೋತೀತಿ ಶ್ರುತಿರುక್ತಾ । ಯತ್ತದೇವ ಪರಿಣಮತೇ ವಿಶ್ವಾತ್ಮನಾ ಮೃಷಾ ವಾ ಪ್ರತೀಯತ ಇತಿ ಕಲ್ಪನಂ ತದಯುక్తಮಿತ್ಯಾಹ – ನ ಚೇತಿ ।

ಹೀಗೆ ಹೇಳಿದ್ದರಿಂದ 'ಅಭಿಧ್ಯೋಪದೇಶಾತ್' ಎಂಬ ಸೂತ್ರದಲ್ಲಿ ಇಚ್ಛೆಯಿಂದಲೇ ಕೆಲವನ್ನು ಪ್ರಕರ್ಷೇಣ ಸೃಷ್ಟಿ ಮಾಡುತ್ತಾನೆಂದು ಸೂಚಿಸಿದಂತಾಯಿತು. 'ಸಾಕ್ಷಾತ್' ಎಂಬ ಸೂತ್ರದಲ್ಲಿ

ಪ್ರತಿಪದಾರ್ಥ -- ತಾವು ಹೇಳಿದ ಸೂತ್ರಾರ್ಥದಲ್ಲಿ ಅವಿಶ್ವಾಸ ಬರಬಾರದೆಂಬ ದೃಷ್ಟಿಯಿಂದ ಶ್ರುತಿ-ಸ್ಮೃತಿಗಳನ್ನು ಆಧಾರವನ್ನಾಗಿ ನೀಡುತ್ತಿದ್ದಾರೆ. –

ಅಥ = ಮತ್ತೊಂದು ಪ್ರಮೇಯವು, ಹ = ಪ್ರಸಿದ್ಧವಾಗಿದೆ. ಏಷಃ = ಪರಮಾತ್ಮನು, ಯಸ್ಮಾತ್ = ಯಾವ ಕಾರಣದಿಂದ, ಪ್ರಕೃತಿಂ = ಜಡಪ್ರಕೃತಿಯನ್ನು, ಅನುಪ್ರವಿಶ್ಯ = ಸ್ವಇಚ್ಛೆಯಿಂದ ಪ್ರವೇಶಮಾಡಿ, ಆತ್ಮಾನಂ = ತನ್ನನ್ನು, ಬಹುಧಾ = ಅನೇಕ ರೂಪವುಳ್ಳವನನ್ನಾಗಿ, ಚಕಾರ = ಮಾಡಿದನು, ತಸ್ಮಾತ್ = ಆ ಕಾರಣದಿಂದ, ಪ್ರಕೃತಿಃ = ಪ್ರಕೃತಿಶಬ್ದವಾಚ್ಯನು, ತಸ್ಮಾತ್ = ಆ ಕಾರಣದಿಂದ, ಪ್ರಕೃತ = ಪ್ರಕೃತಿ ಶಬ್ದದಿಂದ ವಾಚ್ಯನು, ಇತಿ = ಹೀಗೆ, ಆಚಕ್ಷತೇ = ಕರೆಯುತ್ತಾರೆ. ಇತಿ = ಹೀಗೆ, ಭಾಲ್ಲವೇಯಶ್ರುತಿಃ = ಭಾಲ್ಲವೇಯ ಶ್ರುತಿಯು ಹೇಳುತ್ತಿದೆ.

ಪ್ರಕೃತಿಯಲ್ಲಿಯೂ ಪರಮಾತ್ಮನು ಪ್ರವೇಶಿಸುವನು

ಬ್ರಹ್ಮಸೂತ್ರಭಾಷ್ಯಮ್ – 'अविकारोऽपि परमः प्रकृतिं तु विकारिणीम् ।
अनुप्रविश्य गोविन्दः प्रकृतिश्चाभिधीयते'' ।। इति नारदीये ।

ಅನುವಾದ - ತಾನು ವಿಕಾರ ಹೊಂದದಿದ್ದರೂ, ಪ್ರಕೃತಿಯನ್ನು ಪ್ರವೇಶಿಸಿ ಅದನ್ನು ವಿಕಾರಗೊಳಿಸುತ್ತಾನೆ. ಆದ್ದರಿಂದ ಅವನು ಪ್ರಕೃತಿ ಎಂದು ಕರೆಸಿಕೊಳ್ಳುತ್ತಾನೆ. ಹೀಗೆ ನಾರದೀಯ ಪುರಾಣವು ಹೇಳಿದೆ.

ಪ್ರತಿಪದಾರ್ಥ -- ಸ್ಮೃತಿಯಲ್ಲಿ 'ಯದ್ಯಪಿ' ಮತ್ತು 'ತಥಾಪಿ' ಎಂಬ ಪದಗಳ ಅರ್ಥದಲ್ಲಿ ಅಪಿಶಬ್ದವು ಪ್ರಯುಕ್ತವಾಗಿದೆ. 'ತು' ಶಬ್ದವು ವಿಶೇಷಾರ್ಥದಲ್ಲಿದೆ. ಆದ್ದರಿಂದ –

ಅಪಿ = ವಾಸ್ತವಿಕವಾಗಿ, ಗೋವಿಂದಃ = ಗೋವಿಂದನು, ಪರಮಃ ಅವಿಕಾರಃ = ಅತ್ಯಂತ ನಿರ್ವಿಕಾರನು ಆಗಿದ್ದರೂ, ಚ = ಯಾವ ಕಾರಣದಿಂದ, ವಿಕಾರಿಣಿ = ವಿಕಾರವುಳ್ಳ, ಪ್ರಕೃತಿಂ ತು = ಜಡ ಪ್ರಕೃತಿಯನ್ನು, ಅನುಪ್ರವಿಶ್ಯ = ಪ್ರವೇಶ ಮಾಡಿ, ಪ್ರಕೃತಿಶ್ಚ =

ಪ್ರಕೃತಿಯಂತೆ, ಅಭಿಧೀಯತೇ = ಕರೆಸಿಕೊಳ್ಳುತ್ತಾನೆ. ಇತಿ = ಹೀಗೆ, ನಾರದೀಯೇ = ನಾರದೀಯ ಪುರಾಣದಲ್ಲಿ ಹೇಳಲಾಗಿದೆ.

ಅಪವ್ಯಾಖ್ಯಾನದ ನಿರಾಕರಣೆ

ಬ್ರಹ್ಮಸೂತ್ರಭಾಷ್ಯಮ್ – ನ ಚಾನ್ಯತ್ ಕಲ್ಪ್ಯಮ್, ಅಪ್ರಮಾಣತ್ವಾತ್ ।।೪।।

ಅನುವಾದ - ನಾವು ಹೇಳಿದ ಅರ್ಥವನ್ನು ಬಿಟ್ಟು, ಬೇರೆ ಭಾಷ್ಯಕಾರರು ಹೇಳಿದ ಅರ್ಥವನ್ನು ಸೂತ್ರಕ್ಕೆ ತಿಳಿಯಬಾರದು. ಅವರ ಅರ್ಥದಲ್ಲಿ ಯಾವುದೇ ಪ್ರಮಾಣವಿಲ್ಲ. ಪ್ರಮಾಣಕ್ಕೆ ವಿರುದ್ಧವೂ ಆಗಿದೆ.

ಪ್ರತಿಪದಾರ್ಥ -- ಅಪವ್ಯಾಖ್ಯಾನವನ್ನು ದೂಷಣೆ ಮಾಡುತ್ತಿದ್ದಾರೆ. ಚ ಶಬ್ದವು 'ತು' ಎಂಬ ಪದದ ಅರ್ಥದಲ್ಲಿದೆ. –

ಅನ್ಯತ್ = ಹಿಂದೆ ಹೇಳಿದ ಅರ್ಥವನ್ನು ಬಿಟ್ಟು ಪ್ರಕೃತಿ ಶಬ್ದಕ್ಕೆ ಉಪಾದಾನ ಎಂಬರ್ಥವನ್ನು, ನ ಕಲ್ಪ್ಯಮ್ = ಕಲ್ಪಿಸಬಾರದು. ಅಪ್ರಮಾಣತ್ವಾತ್ = ಆ ಉಪಾದಾನಕಾರಣತ್ವಾದ್ಯರ್ಥಗಳು ಅಪ್ರಾಮಾಣಿಕವಾಗಿವೆ. ಮತ್ತು ಪ್ರಮಾಣವಿರುದ್ಧವೂ ಆಗಿವೆ.

ಸತ್ತರ್ಕದೀಪಾವಳಿ

ಪ್ರಕೃತಿ ಶಬ್ದದ ನಿರ್ವಚನ

ಸತ್ತರ್ಕದೀಪಾವಳಿಃ – ಅನೇನಾಭಿಧ್ಯೋಪದೇಶಾದಿತೀಚ್ಛಯೈವ ಕಾಂಶ್ಚಿತ್ಪ್ರಕರ್ಷೇಣ ಕರೋತೀತಿ ಸೂಚಿತಮ್ । ಸಾಕ್ಷಾಚ್ಚೇತೀಚ್ಛಾಪೂರ್ವಕಂ ಸ್ವದೇಹಾದಿರಪಿ ಕಾಂಶ್ಚಿತ್ । ಏವಮವಿಕಾರಮೇವ ಬ್ರಹ್ಮ ಸ್ವೇಚ್ಛಯಾ ಸ್ವಯಂ ಜಗತ್ಕರೋತೀತಿ ಶ್ರುತಿರುಕ್ತಾ । ಯತ್ತದೇವ ಪರಿಣಮತೇ ವಿಶ್ವಾತ್ಮನಾ ಮೃಷಾ ವಾ ಪ್ರತೀಯತ ಇತಿ ಕಲ್ಪನಂ ತದಯುಕ್ತಮಿತ್ಯಾಹ – ನ ಚೇತಿ ।

ಹೀಗೆ ಹೇಳಿದ್ದರಿಂದ 'ಅಭಿಧ್ಯೋಪದೇಶಾತ್' ಎಂಬ ಸೂತ್ರದಲ್ಲಿ ಇಚ್ಛೆಯಿಂದಲೇ ಕೆಲವನ್ನು ಪ್ರಕರ್ಷೇಣ ಸೃಷ್ಟಿ ಮಾಡುತ್ತಾನೆಂದು ಸೂಚಿಸಿದಂತಾಯಿತು. 'ಸಾಕ್ಷಾತ್' ಎಂಬ ಸೂತ್ರದಲ್ಲಿ

ಇಚ್ಛಾಪೂರ್ವಕವಾಗಿ ಸೃಷ್ಟಿ ಮಾಡುತ್ತಾನೆಂದು ಹೇಳಿದಂತಾಯಿತು. ಹೀಗೆ ಬ್ರಹ್ಮನು ಸ್ವತಃ ಅಧಿಕಾರನಾಗಿದ್ದರೂ ಕೂಡ ತನ್ನ ಇಚ್ಛೆಯಿಂದ ಜಗತ್ತನ್ನು ಸೃಷ್ಟಿ ಮಾಡುತ್ತಾನೆ. ಆದ್ದರಿಂದಲೇ ಪ್ರಕೃತಿ ಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆ ಎಂಬುದಾಗಿ ಶ್ರುತಿಯನ್ನು ವ್ಯಾಖ್ಯಾನ ಮಾಡಿದಂತಾಯಿತು. ಯಾವುದು ಪರಿಣಾಮವನ್ನು ಹೊಂದುತ್ತದೋ, ಅದು ಮಿಥ್ಯಾಭೂತವಾಗಿದೆ ಎಂಬ ಕಲ್ಪನೆಯೂ ಕೂಡ ಅಯುಕ್ತವಾಗಿದೆ ಎಂಬ ಅದ್ವೈತಮತದ ನಿರಾಕರಣೆಗೆ 'ನ ಚ ಅನ್ಯತ್ ಕಲ್ಪ್ಯಮ್' ಎಂಬ ವಾಕ್ಯವು ಹೊರಟಿದೆ. ಇದರ ಬಗ್ಗೆ ಹೆಚ್ಚಿನ ವಿಚಾರವನ್ನು ಭಾಷ್ಯಕಾರರೇ ಅನುವ್ಯಾಖ್ಯಾನದಲ್ಲಿ ತಿಳಿಸಿರುತ್ತಾರೆ.

ತತ್ವಪ್ರದೀಪ

'ಪ್ರಕೃತೌ ಅನುಪ್ರವಿಶ್ಯ' ಇತ್ಯಾದಿ ಭಾಷ್ಯದ ವ್ಯಾಖ್ಯಾನ

तत्वप्रदीपः – आत्मकृतेः परिणामात् ।। प्रकृतावनुप्रविश्येत्यादेरयमर्थः। आत्मीयायाः प्रकृतेः परिणामात् तत्परिणामेषु नियन्तृत्वेन स्थित्वाऽत्मनो, बहुधाकरणात्प्रकृतिरित्युच्यते । 'बहुधाकरणं' बहुधाव्यञ्जनम् । तस्माच्च विष्णुरेव प्रकृतिशब्दवाच्यः ।।

'ಆತ್ಮಕೃತೇಃ ಪರಿಣಾಮಾತ್' ಎಂಬ ಸೂತ್ರದ ವ್ಯಾಖ್ಯಾನವನ್ನು ಭಾಷ್ಯದಲ್ಲಿ ಹೀಗೆ ತಿಳಿಸಿದ್ದಾರೆ - 'ಪ್ರಕೃತೌ ಅನುಪ್ರವಿಶ್ಯ' ಎಂಬ ಭಾಷ್ಯಕ್ಕೆ ಹೀಗೆ ಅರ್ಥ - ಆತ್ಮೀಯವಾದ ಪ್ರಕೃತಿಯನ್ನು ಪರಿಣಾಮಗೊಳಿಸಿ, ಅದರಲ್ಲಿ ತಾನು ನಿಯಾಮಕನಾಗಿ ನೆಲೆಸುತ್ತಾನೆ. ಆ ಪರಿಣತವಾದ ಪದಾರ್ಥಗಳಲ್ಲಿ ತಾನು ಅನೇಕ ರೂಪಗಳನ್ನು ತಾಳಿ ಪ್ರವೇಶಿಸುತ್ತಾನೆ. ಆದ್ದರಿಂದ ಇವನನ್ನು ಶ್ರುತಿಯು ಪ್ರಕೃತಿ ಎಂದು ಕರೆಯುತ್ತದೆ. 'ಬಹುಧಾಕರಣ' ಎಂದರೆ ಅನೇಕ ರೂಪಗಳಿಂದ ಅಭಿವ್ಯಕ್ತನಾಗುತ್ತಾನೆ ಎಂದರ್ಥ. ಆದ್ದರಿಂದ ವಿಷ್ಣುವೇ ಪ್ರಕೃತಿಶಬ್ದವಾಚ್ಯನಾಗಿದ್ದಾನೆ ಎಂದು ನಿರ್ಣಯವಾಗುತ್ತದೆ.

ಪ್ರಕೃತಿಶಬ್ದಕ್ಕೆ ಉಪಾದಾನಕಾರಣ ಎಂದರ್ಥವೇ?

ತತ್ವಪ್ರದೀಪಃ – ಅತ್ರಾऽಹುಃ - ಪ್ರಕೃತಿಶಬ್ದೇನೋಪಾದಾನಕಾರಣಂ ಬ್ರಹ್ಮಾತ್ರ ಪ್ರತಿಪಾದ್ಯತೇ। ''ಉತ ತಮಾದೇಶಮಪ್ರಾಕ್ಷ್ಯೋ ಯೇನಾಶ್ರುತಂ ಶ್ರುತಂ ಭವತಿ'' ''ಯಥಾ ಸೋಮ್ಯೈಕೇನ ಮೃತ್ಪಿಂಡೇನ ಸರ್ವಂ ಮೃಣ್ಮಯಂ ವಿಜ್ಞಾತಂ ಸ್ಯಾದ್ವಾಚಾऽऽರಂಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಮ್'' ಇತಿ ಪ್ರತಿಜ್ಞಾದೃಷ್ಟಾನ್ತಾನುಪರೋಧಾದಿತಿ । ಅತ ಆಹ - ನಚಾನ್ಯತ್ಕಲ್ಪ್ಯಮ-ಪ್ರಮಾಣತ್ವಾತ್ ಇತಿ ।।

ಅದ್ವೈತಿಗಳು ಹೀಗೆ ಹೇಳುತ್ತಾರೆ - ಉಪಾದಾನಕಾರಣನಾದ ಬ್ರಹ್ಮನನ್ನು ಇಲ್ಲಿ ಪ್ರಕೃತಿಶಬ್ದದಿಂದ ಕರೆಯಲಾಗಿದೆ. 'ಉತ ತಮಾದೇಶಮಪ್ರಾಕ್ಷ್ಯೋ ಯೇನಾಶ್ರುತಂ ಶ್ರುತಂ ಭವತಿ'' ಎಂಬ ಪ್ರತಿಜ್ಞಾವಾಕ್ಯಕ್ಕೂ, ''ಯಥಾ ಸೋಮ್ಯೈಕೇನ ಮೃತ್ಪಿಂಡೇನ ಸರ್ವಂ ಮೃಣ್ಮಯಂ ವಿಜ್ಞಾತಂ ಸ್ಯಾತ್ ವಾಚಾऽऽರಂಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಮ್'' ದೃಷ್ಟಾಂತವಾಕ್ಯಕ್ಕೂ ಸಾಮಾನಾಧಿಕರಣ್ಯದ ಸಂಪಾದನೆಗೋಸ್ಕರ ಬ್ರಹ್ಮನಿಗೆ ಉಪಾದಾನ-ಕಾರಣತ್ವವನ್ನೇ ಹೇಳಬೇಕು ಎಂಬುದು ಇವರ ವಾದ. ಇವರನ್ನು ನಿರಾಕರಣೆ ಮಾಡುವುದಕ್ಕಾಗಿ ಭಾಷ್ಯದಲ್ಲಿ 'ನಚ ಅನ್ಯತ್‌ಕಲ್ಪ್ಯಮ್ ಅಪ್ರಮಾಣತ್ವಾತ್' ಎಂದು ಹೇಳಿದ್ದಾರೆ.

'ಬಹು ಸ್ಯಾಂ ಪ್ರಜಾಯೇಯ' ಎಂಬ ಶ್ರುತಿಯು ಉಪಾದಾನಕಾರಣಕ್ಕೆ ಪ್ರಮಾಣವಾಗುವುದಿಲ್ಲ

ತತ್ವಪ್ರದೀಪಃ – ನೋಪಾದಾನತ್ವಂ ಕಲ್ಪ್ಯಂ, ಬ್ರಹ್ಮಣೋ ಜಗದುಪಾದಾನತ್ವೇ ಪ್ರಮಾಣಾಭಾವಾತ್। ನಚ ''ಬಹು ಸ್ಯಾಂ ಪ್ರಜಾಯೇಯ'' ಇತಿ ಶ್ರುತೌ ಜಗದಾತ್ಮತಯಾ ಬಹುಭಾವಾ ಭಿಧ್ಯಾನಮಭಿಧೀಯತೇ । ''ತತ್ಸೃಷ್ಟ್ವಾ ತದೇವಾನುಪ್ರಾವಿಶತ್'' ಇತಿ ''ಇಮಾಸ್ತಿಸ್ರೋ ದೇವತಾ ಅನೇನ ಜೀವೇನಾऽತ್ಮನಾऽನುಪ್ರವಿಶ್ಯ'' ಇತಿ ಚ ವಕ್ಷ್ಯಮಾಣಸ್ಯ ತತ್ರ ತತ್ರ ಪ್ರವೇಶಸ್ಯೈವಾಭಿಧ್ಯಾತತ್ವಾತ್ । ''ಪ್ರಜಾಯೇಯ' ಇತಿ ಪ್ರಜನಯೇಯೇತ್ಯರ್ಥಃ । ಅಪರಥಾ ಪೌನರುಕ್ತ್ಯಪ್ರಸಙ್ಗಾತ್ ।

'ನಚ ಅನ್ಯತ್ ಕಲ್ಪ್ಯಮ್' ಎಂದರೆ ಬ್ರಹ್ಮನಿಗೆ ಉಪಾದಾನತ್ವವನ್ನು ಕಲ್ಪನೆ ಮಾಡಬಾರದು. ಏಕೆಂದರೆ ಬ್ರಹ್ಮನು ಜಗತ್ತಿಗೆ ಉಪಾದಾನಕಾರಣನಾಗಿದ್ದಾನೆ ಎಂಬ ವಿಷಯದಲ್ಲಿ ಯಾವುದೇ ಪ್ರಮಾಣವು ಇರುವುದಿಲ್ಲ.

ಪ್ರಶ್ನೆ - 'ಬಹು ಸ್ಯಾಂ ಪ್ರಜಾಯೇಯ' ಎಂಬ ಶ್ರುತಿಯು ಪರಮಾತ್ಮನು ಅನೇಕ ರೂಪಗಳಿಂದ ಜಗತ್ತಾಗಿ ಪರಿಣಾಮವನ್ನು ಹೊಂದುತ್ತಾನೆ ಎಂದು ಹೇಳುತ್ತಿದೆ. ಆದ್ದರಿಂದ ಜಗದುಪಾದಾನಕ್ಕೆ ಈ ಶ್ರುತಿಯು ಪ್ರಮಾಣವಾಗುತ್ತದಲ್ಲವೇ?

ಉತ್ತರ - ಇದು ತಪ್ಪು. 'ತತ್‌ಸೃಷ್ಟ್ವಾ ತದೇವಾನುಪ್ರಾವಿಶತ್' ಜಗತ್ತನ್ನು ಸೃಷ್ಟಿ ಮಾಡಿ, ಅದರೊಳಗಡೆ ಪ್ರವೇಶ ಮಾಡಿದನು ಎಂಬುದಾಗಿ ಈ ಶ್ರುತಿಯು ಉಪಾದಾನಕಾರಣನಾಗಿದ್ದಾನೆಂಬುದನ್ನು ನಿರಾಕರಿಸುತ್ತಿದೆ. ಮತ್ತು 'ಇಮಾಸ್ತಿಸ್ರೋ ದೇವತಾ ಅನೇನ ಜೀವೇನಾऽತ್ಮನಾऽನುಪ್ರವಿಶ್ಯ' ಈ ಜೀವನ ಜೊತೆ ಈ ಮೂರು ಮಂದಿ ದೇವತೆಗಳು ಪ್ರವೇಶ ಮಾಡಿದರು ಎಂಬುದಾಗಿ ಮುಂದೆ ಉಲ್ಲೇಖ ಮಾಡುವ ಪ್ರಮಾಣವೂ ಕೂಡ ಜಗತ್ತಿನಲ್ಲಿ ಪರಮಾತ್ಮನ ಪ್ರವೇಶವನ್ನು ಹೇಳುತ್ತಿದೆ ಹೊರತು, ತಾನೇ ಜಗತ್ತಾದ ಎಂದು ಹೇಳುತ್ತಿಲ್ಲ. ಆದ್ದರಿಂದ 'ಬಹುಸ್ಯಾಂ ಪ್ರಜಾಯೇಯ' ಎಂಬ ಶ್ರುತಿಯಲ್ಲಿರುವ 'ಪ್ರಜಾಯೇಯ' ಎಂಬ ಪದಕ್ಕೆ ಹುಟ್ಟಲು ಬಯಸಿದನು ಎಂಬರ್ಥವನ್ನು ವಿವಕ್ಷಿಸಬಾರದು. ಹುಟ್ಟಿಸಲು ಅಪೇಕ್ಷಿಸಿದನು ಎಂಬರ್ಥವನ್ನು ವಿವಕ್ಷಿಸಬೇಕು. ಈ ಅರ್ಥವನ್ನು ಒಪ್ಪದಿದ್ದರೆ 'ಸ್ಯಾಮ್' ಎಂಬ ಕ್ರಿಯಾಪದದಿಂದ ಪುನರುಕ್ತಿಯು ಬರುತ್ತದೆ.

ವಿವರಣೆ - 'ಪ್ರಜಾಯೇಯ' ಎಂಬುದು ಣಿಜಂತವಾದ ಶಬ್ದವಲ್ಲ. ಆದರೆ ಣಿಜಂತಾರ್ಥವನ್ನು ಹೇಳಬೇಕು ಎಂಬುದನ್ನು ಪ್ರಜನಯೇಯ ಎಂಬುದಾಗಿ ಟೀಕೆಯಲ್ಲಿ ಹೇಳಿದ್ದಾರೆ. ಹೀಗೆ ಅರ್ಥವನ್ನು ಹೇಳದಿದ್ದರೆ 'ಸ್ಯಾಮ್' ಎಂಬ ಪದದ ಅರ್ಥವನ್ನೇ ಪ್ರಜಾಯೇಯ ಎಂಬ ಪದಕ್ಕೂ ಕೂಡ ಹೇಳಿದಂತಾಗುತ್ತದೆ.

'ಸಚ್ಚ ತ್ಯಚ್ಚಾಭವತ್' ಎಂಬ ಶ್ರುತಿಯೂ ಕೂಡ ಉಪಾದಾನತ್ವ ವಿಷಯದಲ್ಲಿ ಪ್ರಮಾಣವಲ್ಲ

तत्वप्रदीपः – ''तदनुप्रविश्य सच्च त्यच्चाभवत्'' इत्यादि वाक्यादपि न ब्रह्मणो जगद्भाव आशङ्कनीयः । पूर्वसृष्टे पश्चात्प्रविष्टस्य तद्भावायोगात् । ''अविकारः सदा शुद्धो नित्य आत्मा सदा हरिः'' इति चाविकारित्वे श्रुतिः । ब्रह्मोपादानत्वे च जगतश्चेतनत्वप्रसङ्गः । मृदुपादानको हि घटो मृदात्मको लक्ष्यते । अतो नात्र प्रमाणम् ।

'ತದನುಪ್ರವಿಶ್ಯ ಸಚ್ಚ ತ್ಯಚ್ಚಾಭವತ್' ಎಂಬ ವಾಕ್ಯದಿಂದಲೂ ಕೂಡ ಬ್ರಹ್ಮನಿಗೆ ಜಗದುಪಾನದಾನತ್ವವನ್ನು ಆಶಂಕೆ ಮಾಡಬಾರದು. ಏಕೆಂದರೆ ವಸ್ತುಗಳು ಸೃಷ್ಟಿಯಾದ ಮೇಲೆ

ಅದರೊಳಗಡೆ ಪ್ರವೇಶವನ್ನು ಮಾಡಿ, ಮುಂದಿನ ವ್ಯಾಪಾರಗಳನ್ನು ಮಾಡಿದನೆಂದು ಈ ಶ್ರುತಿ ಹೇಳುತ್ತಿದೆ. ಅನಂತರ ಪ್ರವಿಷ್ಟವಾದದ್ದು ಅದೇ ವಸ್ತುವಿಗೆ ಉಪಾದಾನಕಾರಣವಾಗಲು ಸಾಧ್ಯವೇ ಇಲ್ಲ. ಮತ್ತು 'ಅವಿಕಾರಃ ಸದಾ ಶುದ್ಧೋ ನಿತ್ಯ ಆತ್ಮಾ ಸದಾ ಹರಿಃ' ಎಂಬ ಶ್ರುತಿಯು ಬ್ರಹ್ಮನನ್ನು ನಿರ್ವಿಕಾರನೆಂದು ಹೇಳುತ್ತಿದೆ. ಆದ್ದರಿಂದ ಸತ್-ತ್ಯದಾದಿ ರೂಪಗಳಿಂದ ವಿಕಾರವನ್ನು ಹೊಂದಿದನು ಎಂಬುದಾಗಿ ಶ್ರುತಿಗೆ ಅರ್ಥವನ್ನು ಕಲ್ಪನೆ ಮಾಡಬಾರದು. ಬ್ರಹ್ಮನು ಜಗತ್ತಿಗೆ ಉಪಾದಾನಕಾರಣನಾಗಿದ್ದಾನೆಂದು ಹೇಳಿದರೆ ಜಗತ್ತೂ ಕೂಡ ಬ್ರಹ್ಮನಂತೆ ಚೇತನ ಆಗುವ ಪ್ರಸಂಗ ಬರುತ್ತದೆ. ಜಗತ್ತು ಜಡವಾಗಿದೆ ಎಂಬುದೇ ಸುಳ್ಳು ಎಂದಾಗಬೇಕಾಗುತ್ತದೆ. ಏಕೆಂದರೆ ಯಾವುದು ಯದುಪಾದಾನಕವೋ, ಅದು ತದಾತ್ಮಕವೇ ಆಗಿರುವುದು ಕಂಡಿದೆ. ಮೃದುಪಾದಾನಕವಾದ ಘಟವು ಮೃದಾತ್ಮಕವಾಗಿರುವುದೇ ಕಂಡಿದೆ. ಆದ್ದರಿಂದ ಪರಮಾತ್ಮನು ಜಗದಾತ್ಮಕನಾಗಿದ್ದಾನೆನ್ನಲು ಯಾವುದೇ ಪ್ರಮಾಣವನ್ನು ಹೇಳಲು ಸಾಧ್ಯವಿಲ್ಲ.

ಉಪಾದಾನತ್ವವಿಷಯದಲ್ಲಿ ಸೂತ್ರವೂ ಕೂಡ ಪ್ರಮಾಣವಲ್ಲ

तत्त्वप्रदीपः – सूत्रमत्र प्रमाणमिति चेत्, नैतदुपादानत्वं सूत्रार्थतया कल्प्यम् । प्रमाणाभावात् । नह्यस्मिन्नध्याये सति सम्भवे समन्वयादन्यत्कल्प्यम्। समन्वयसूत्राणामन्यत्राप्रमाणत्वात् ।

'ಪರಿಣಾಮಾತ್' ಎಂಬ ಸೂತ್ರವೇ ಜಗದುಪಾದಾನತ್ವ ವಿಷಯದಲ್ಲಿ ಪ್ರಮಾಣವಾಗಿದೆಯಲ್ಲವೇ? ಎಂದು ಹೇಳಬಾರದು. ಈ ಸೂತ್ರಕ್ಕೆ ಉಪಾದಾನತ್ವಪರವಾಗಿ ಅರ್ಥವನ್ನು ಕಲ್ಪನೆ ಮಾಡಬಾರದು. ಹಾಗೇ ಕಲ್ಪಿಸಲು ಯಾವುದೇ ಪ್ರಮಾಣವಿರುವುದಿಲ್ಲ. ಮತ್ತು ಇದು ಸಮನ್ವಯಾಧ್ಯಾಯ. ಇದರಲ್ಲಿರುವ ಸೂತ್ರಗಳು ಸಮನ್ವಯವಿಷಯದಲ್ಲಷ್ಟೇ ಪ್ರಮಾಣವಾಗುತ್ತವೆ. ಇದನ್ನು ಬಿಟ್ಟು, ಉಪಾದಾನತ್ವವಿಷಯದಲ್ಲಿ ಪ್ರಮಾಣವಾಗುತ್ತದೆ ಎನ್ನುವುದು ಅಸಂಗತವಿಚಾರ.

ರಜತಾಕಾರವಾಗಿ ಪರಿಣಾಮವನ್ನು ಹೊಂದುವ ಶುಕ್ತಿಯಂತೆ ಬ್ರಹ್ಮನಲ್ಲ

तत्त्वप्रदीपः – अन्यस्तु मन्यते, न मृदादिवदुपादानत्वमिष्यते, किन्तु शुक्त्यादिवद्रजतादेरपरिणामेनैव । नच तावता तदुपादानभाषाभङ्गः प्रसङ्गी ।

यथा हि शुक्त्यविद्याविजृम्भितत्वाद्रजतस्य शुक्त्युपादानता कल्प्यते तथा ब्रह्मविद्याविजृम्भितत्वाज्जगतस्तदुपादानतेति । अत्रापि तदुत्तरं - नचान्यदुपादानं कल्प्यम् । प्रमाणरहितत्वात् ।

ಬೇರೆ ಕೆಲವು ವಾದಿಗಳು ಹೀಗೆ ಹೇಳುತ್ತಾರೆ - ಮಣ್ಣಿನಂತೆ ಬ್ರಹ್ಮನು ಉಪಾದಾನನೆಂದು ನಾವು ಒಪ್ಪುವುದಿಲ್ಲ. ಮತ್ತೇನೆಂದರೆ ಶುಕ್ತಿಯು ರಜತಾಕಾರವಾಗಿ ಪರಿಣಾಮವನ್ನು ಹೊಂದುತ್ತದೋ, ಅದರಂತೆ ಬ್ರಹ್ಮನು ಜಗದಾಕಾರದಲ್ಲಿ ಪರಿಣಾಮವನ್ನು ಹೊಂದಿದ್ದಾನೆ. ಹೀಗೆ ಹೇಳಿದ ಮಾತ್ರಕ್ಕೆ ಉಪಾದಾನನಾಗಿದ್ದಾನೆ ಎಂಬ ಮಾತಿಗೆ ಭಂಗ ಬಂದಿತು ಎಂಬ ಪ್ರಸಂಗಕ್ಕೆ ಅವಕಾಶವಿಲ್ಲ. ಹೇಗೆ ಶುಕ್ತಿಯ ಅಜ್ಞಾನದಿಂದ ವಿಜೃಂಭಿತವಾದ ರಜತವು ಶುಕ್ತಿಗೆ ಉಪಾದಾನವೆಂದು ಕಲ್ಪನೆ ಮಾಡಲಾಗುತ್ತದೋ, ಅದರಂತೆ ಬ್ರಹ್ಮನ ಅಜ್ಞಾನದಿಂದ ವಿಜೃಂಭಿತವಾದ ಜಗತ್ತು ಬ್ರಹ್ಮನೇ ಉಪಾದಾನಕಾರಣವಾಗಿ ಉಳ್ಳದ್ದು ಎಂಬುದಾಗಿ ಕಲ್ಪನೆ ಮಾಡುತ್ತೇವೆ ಎಂದು.

ಇವರ ಈ ವಾದಕ್ಕೂ ಕೂಡ 'ನಚಾನ್ಯದುಪಾದಾನಂ ಕಲ್ಪ್ಯಮ್' ಎಂಬ ಆಚಾರ್ಯರ ಮಾತೇ ಉತ್ತರವನ್ನು ನೀಡುತ್ತಿದೆ. ಪ್ರಮಾಣವಿಲ್ಲದ್ದರಿಂದ ಬ್ರಹ್ಮನನ್ನು ಪರಿಣಾಮರೂಪನಾದ ಉಪಾದಾನಕಾರಣನೆಂದು ಹೇಳಬಾರದು.

ವಿವರಣೆ - 'ತದುಪಾದಾನಭಾಷಾಭಂಗಃ ಪ್ರಸಂಗೀ' ಎಂಬುದು ಅಪೂರ್ವವಾದ ಶಬ್ದಪ್ರಯೋಗ. ಪ್ರಸಂಗವುಳ್ಳದ್ದು ಎಂಬರ್ಥದಲ್ಲಿ ಪ್ರಸಂಗೀ ಎಂಬರ್ಥವನ್ನು ಉಪಯೋಗಿಸಿದ್ದಾರೆ. ನಕಾರಾಂತವಾದ ಶಬ್ದವಿದು.

ರಜತಕ್ಕೆ ಶುಕ್ತಿಯು ಉಪಾದಾನಕಾರಣವಲ್ಲ

तत्वप्रदीपः – नहि शुक्ते रजतोपादानत्वम् । नहि रजतार्थी शुक्तिकां विदन्नुपादत्ते, मृदमिव मणिकार्थी । नैतावन्तं कालमपि रजतमिहाऽसीत्, असदेव सदिति प्रत्यभादिति चोत्तरकालीनः सार्वलौकिकः प्रत्ययस्तस्योत्पत्तिं निवारयति ।

ಮತ್ತು ಶುಕ್ತಿಯು ರಜತಕ್ಕೆ ಉಪಾದಾನವೇ ಅಲ್ಲ. ಏಕೆಂದರೆ ರಜತವನ್ನು ಅಪೇಕ್ಷೆ ಪಡುವವನು ಶುಕ್ತಿಯೆಂದು ತಿಳಿದು ಅದನ್ನು ಸ್ವೀಕರಿಸುವುದೇ ಇಲ್ಲ. ಹೇಗೆ ಮಣಿಕವನ್ನು (ಮಣ್ಣಿನಿಂದ ತಯಾರಿಸಿದ ಜಗ್ಗಿನಂತೆ ಇರುವ ವಸ್ತು ವಿಶೇಷ) ಅಪೇಕ್ಷೆ ಪಡುವವನು. ಮಣ್ಣನ್ನು ಸ್ವೀಕರಿಸಲು ಹೇಗೆ ಪ್ರವೃತ್ತನಾಗುತ್ತಾನೋ, ಅದರಂತೆ ಪ್ರವೃತ್ತಿ ಮಾಡುವುದಿಲ್ಲ. ಮತ್ತು ಇಲ್ಲಿಯ ತನಕ ರಜತವು ಇರಲಿಲ್ಲ. ಇಲ್ಲದೇ ಇರುವ ರಜತವೇ ನನಗೆ ಕಂಡಿತ್ತು ಎಂಬುದಾಗಿ ಲೋಕದಲ್ಲಿರುವ ಪ್ರತಿಯೊಬ್ಬರಿಗೂ ಉತ್ತರಕಾಲದಲ್ಲಿ ಜ್ಞಾನವು ಬರುತ್ತಿದೆ. ಇದರಿಂದ ಭ್ರಾಂತಿಕಾಲದಲ್ಲಿ ಶುಕ್ತಿಯು ರಜತಾಕಾರವಾಗಿ ಪರಿಣಾಮವು ಹೊಂದಿದೆ ಎಂಬುದನ್ನು ನಿವಾರಣೆ ಮಾಡಿದಂತಾಗುತ್ತದೆ.

ವಿವರಣೆ – ಪೂರ್ವಪಕ್ಷಿಯು ರಜತವು ಹುಟ್ಟುತ್ತದೆ ಎಂದು ಹೇಳುತ್ತಿದ್ದಾನೆ. ರಜತಜ್ಞಾನ ಹುಟ್ಟುತ್ತಿದೆ ಎಂದು ಹೇಳುತ್ತಿಲ್ಲ. ಅವನು ಎಡವಿದ್ದನ್ನು ಗಮನಿಸಬೇಕು.

ಜಗತ್ತಿನಂತೆ ಬ್ರಹ್ಮನು ಅನಿರ್ವಾಚ್ಯನಾದ

तत्वप्रदीपः – कथं च पुनस्तदनवबोधनं तज्जमभिनिविशसि । तस्य ततो भेदरहितत्वादिति चेत्तर्हि कथं तिष्ठति तस्मिन्नितरस्यापगमः ? अनिर्वाच्यत्वादिति चेन्मैवम् । ब्रह्मणोऽप्यनिर्वाच्यत्वप्रसङ्गात् । नहि स्वतो भेदविरहिणः स्वयं भेदि स्यात् । नाप्यभेदविरहितादभेदि स्यात् । परिशेषादनिर्वाच्यं ब्रह्म स्यात् ।

ಅದ್ವೈತಿಗಳು - ಬ್ರಹ್ಮನ ಅಜ್ಞಾನದಿಂದ ಜಗತ್ತು ಹುಟ್ಟಿದೆ ಎಂದು ಹೇಳಿದರೆ ಏನು ತಪ್ಪು ?

ತತ್ವವಾದಿಗಳು - ಧರ್ಮಿಯ ಜ್ಞಾನವು ಇಲ್ಲದೇ ಇರುವುದರಿಂದ ಧರ್ಮಿಯಿಂದ ಹುಟ್ಟಿದೆ ಎಂದು ಹೇಗೆ ಅಭಿನಿವೇಶ ಮಾಡುವಿ ? ಶುಕ್ತಿಯ ಅಜ್ಞಾನದಿಂದ ಹುಟ್ಟಿರುವ ರಜತವು ಶುಕ್ತಿಯಿಂದ ಹುಟ್ಟಿದೆ ಎಂಬುದಾಗಿ ಅಭಿನಿವೇಶ ಮಾಡಲು ಕಾರಣವೇ ಇಲ್ಲ.

ಅದ್ವೈತಿಗಳು - ಹುಟ್ಟಿದ ಪದಾರ್ಥಕ್ಕೆ ಧರ್ಮಿಯಿಂದ ಭೇದವು ಇರುವುದಿಲ್ಲ. ಆದ್ದರಿಂದ ಅದನ್ನು ಧರ್ಮಿಯಿಂದ ಹುಟ್ಟಿದೆ ಎಂದು ಹೇಳುತ್ತೇವೆ. ಪ್ರಕೃತ ಜಗತ್ತಿನಿಂದ ಬ್ರಹ್ಮನಿಗೆ ಭೇದವು ಇಲ್ಲದ ಕಾರಣ ಬ್ರಹ್ಮನ ಅಜ್ಞಾನದಿಂದ ಜಗತ್ತು ಹುಟ್ಟಿದೆ ಎಂದು ಹೇಳಬಹುದು.

यथा हि शुक्त्यविद्याविजृम्भितत्वाद्रजतस्य शुक्त्युपादानता कल्प्यते तथा ब्रह्मविद्याविजृम्भितत्वाज्जगतस्तदुपादानतेति । अत्रापि तदुत्तरं - नचान्यदुपादानं कल्प्यम् । प्रमाणरहितत्वात् ।

ಬೇರೆ ಕೆಲವು ವಾದಿಗಳು ಹೀಗೆ ಹೇಳುತ್ತಾರೆ - ಮಣ್ಣಿನಂತೆ ಬ್ರಹ್ಮನು ಉಪಾದಾನನೆಂದು ನಾವು ಒಪ್ಪುವುದಿಲ್ಲ. ಮತ್ತೇನೆಂದರೆ ಶುಕ್ತಿಯು ರಜತಾಕಾರವಾಗಿ ಪರಿಣಾಮವನ್ನು ಹೊಂದುತ್ತದೋ, ಅದರಂತೆ ಬ್ರಹ್ಮನು ಜಗದಾಕಾರದಲ್ಲಿ ಪರಿಣಾಮವನ್ನು ಹೊಂದಿದ್ದಾನೆ. ಹೀಗೆ ಹೇಳಿದ ಮಾತ್ರಕ್ಕೆ ಉಪಾದಾನನಾಗಿದ್ದಾನೆ ಎಂಬ ಮಾತಿಗೆ ಭಂಗ ಬಂದಿತು ಎಂಬ ಪ್ರಸಂಗಕ್ಕೆ ಅವಕಾಶವಿಲ್ಲ. ಹೇಗೆ ಶುಕ್ತಿಯ ಅಜ್ಞಾನದಿಂದ ವಿಜೃಂಭಿತವಾದ ರಜತವು ಶುಕ್ತಿಗೆ ಉಪಾದಾನವೆಂದು ಕಲ್ಪನೆ ಮಾಡಲಾಗುತ್ತದೋ, ಅದರಂತೆ ಬ್ರಹ್ಮನ ಅಜ್ಞಾನದಿಂದ ವಿಜೃಂಭಿತವಾದ ಜಗತ್ತು ಬ್ರಹ್ಮನೇ ಉಪಾದಾನಕಾರಣವಾಗಿ ಉಳ್ಳದ್ದು ಎಂಬುದಾಗಿ ಕಲ್ಪನೆ ಮಾಡುತ್ತೇವೆ ಎಂದು.

ಇವರ ಈ ವಾದಕ್ಕೂ ಕೂಡ 'ನಚಾನ್ಯದುಪಾದಾನಂ ಕಲ್ಪ್ಯಮ್' ಎಂಬ ಆಚಾರ್ಯರ ಮಾತೇ ಉತ್ತರವನ್ನು ನೀಡುತ್ತಿದೆ. ಪ್ರಮಾಣವಿಲ್ಲದ್ದರಿಂದ ಬ್ರಹ್ಮನನ್ನು ಪರಿಣಾಮರೂಪನಾದ ಉಪಾದಾನಕಾರಣನೆಂದು ಹೇಳಬಾರದು.

ವಿವರಣೆ - 'ತದುಪಾದಾನಭಾಷಾಭಂಗಃ ಪ್ರಸಂಗೀ' ಎಂಬುದು ಅಪೂರ್ವವಾದ ಶಬ್ದಪ್ರಯೋಗ. ಪ್ರಸಂಗವುಳ್ಳದ್ದು ಎಂಬರ್ಥದಲ್ಲಿ ಪ್ರಸಂಗೀ ಎಂಬರ್ಥವನ್ನು ಉಪಯೋಗಿಸಿದ್ದಾರೆ. ನಕಾರಾಂತವಾದ ಶಬ್ದವಿದು.

ರಜತಕ್ಕೆ ಶುಕ್ತಿಯು ಉಪಾದಾನಕಾರಣವಲ್ಲ

तत्वप्रदीपः – नहि शुक्ते रजतोपादानत्वम् । नहि रजतार्थी शुक्तिकां विदन्नुपादत्ते, मृदमिव मणिकार्थी । नैतावन्तं कालमपि रजतमिहाऽसीत्, असदेव सदिति प्रत्यभादिति चोत्तरकालीनः सार्वलौकिकः प्रत्ययस्तस्योत्पत्तिं निवारयति ।

ಮತ್ತು ಶುಕ್ತಿಯು ರಜತಕ್ಕೆ ಉಪಾದಾನವೇ ಅಲ್ಲ. ಏಕೆಂದರೆ ರಜತವನ್ನು ಅಪೇಕ್ಷೆ ಪಡುವವನು ಶುಕ್ತಿಯೆಂದು ತಿಳಿದು ಅದನ್ನು ಸ್ವೀಕರಿಸುವುದೇ ಇಲ್ಲ. ಹೇಗೆ ಮಣಿಕವನ್ನು (ಮಣ್ಣಿನಿಂದ ತಯಾರಿಸಿದ ಜಗ್ಗಿನಂತೆ ಇರುವ ವಸ್ತು ವಿಶೇಷ) ಅಪೇಕ್ಷೆ ಪಡುವವನು. ಮಣ್ಣನ್ನು ಸ್ವೀಕರಿಸಲು ಹೇಗೆ ಪ್ರವೃತ್ತನಾಗುತ್ತಾನೋ, ಅದರಂತೆ ಪ್ರವೃತ್ತಿ ಮಾಡುವುದಿಲ್ಲ. ಮತ್ತು ಇಲ್ಲಿಯ ತನಕ ರಜತವು ಇರಲಿಲ್ಲ. ಇಲ್ಲದೇ ಇರುವ ರಜತವೇ ನನಗೆ ಕಂಡಿತ್ತು ಎಂಬುದಾಗಿ ಲೋಕದಲ್ಲಿರುವ ಪ್ರತಿಯೊಬ್ಬರಿಗೂ ಉತ್ತರಕಾಲದಲ್ಲಿ ಜ್ಞಾನವು ಬರುತ್ತಿದೆ. ಇದರಿಂದ ಭ್ರಾಂತಿಕಾಲದಲ್ಲಿ ಶುಕ್ತಿಯು ರಜತಾಕಾರವಾಗಿ ಪರಿಣಾಮವು ಹೊಂದಿದೆ ಎಂಬುದನ್ನು ನಿವಾರಣೆ ಮಾಡಿದಂತಾಗುತ್ತದೆ.

ವಿವರಣೆ – ಪೂರ್ವಪಕ್ಷಿಯು ರಜತವು ಹುಟ್ಟುತ್ತದೆ ಎಂದು ಹೇಳುತ್ತಿದ್ದಾನೆ. ರಜತಜ್ಞಾನ ಹುಟ್ಟುತ್ತಿದೆ ಎಂದು ಹೇಳುತ್ತಿಲ್ಲ. ಅವನು ಎಡವಿದ್ದನ್ನು ಗಮನಿಸಬೇಕು.

ಜಗತ್ತಿನಂತೆ ಬ್ರಹ್ಮನು ಅನಿರ್ವಾಚ್ಯನಾದ

तत्वप्रदीपः – कथं च पुनस्तदनवबोधनं तज्जमभिनिविशसि । तस्य ततो भेदरहितत्वादिति चेत्तर्हि कथं तिष्ठति तस्मिन्नितरस्यापगमः ? अनिर्वाच्यत्वादिति चेन्मैवम् । ब्रह्मणोऽप्यनिर्वाच्यत्वप्रसङ्गात् । नहि स्वतो भेदविरहिणः स्वयं भेदि स्यात् । नाप्यभेदविरहितादभेदि स्यात् । परिशेषादनिर्वाच्यं ब्रह्म स्यात् ।

ಅದ್ವೈತಿಗಳು - ಬ್ರಹ್ಮನ ಅಜ್ಞಾನದಿಂದ ಜಗತ್ತು ಹುಟ್ಟಿದೆ ಎಂದು ಹೇಳಿದರೆ ಏನು ತಪ್ಪು ?

ತತ್ವವಾದಿಗಳು - ಧರ್ಮಿಯ ಜ್ಞಾನವು ಇಲ್ಲದೇ ಇರುವುದರಿಂದ ಧರ್ಮಿಯಿಂದ ಹುಟ್ಟಿದೆ ಎಂದು ಹೇಗೆ ಅಭಿನಿವೇಶ ಮಾಡುವಿ ? ಶುಕ್ತಿಯ ಅಜ್ಞಾನದಿಂದ ಹುಟ್ಟಿರುವ ರಜತವು ಶುಕ್ತಿಯಿಂದ ಹುಟ್ಟಿದೆ ಎಂಬುದಾಗಿ ಅಭಿನಿವೇಶ ಮಾಡಲು ಕಾರಣವೇ ಇಲ್ಲ.

ಅದ್ವೈತಿಗಳು - ಹುಟ್ಟಿದ ಪದಾರ್ಥಕ್ಕೆ ಧರ್ಮಿಯಿಂದ ಭೇದವು ಇರುವುದಿಲ್ಲ. ಆದ್ದರಿಂದ ಅದನ್ನು ಧರ್ಮಿಯಿಂದ ಹುಟ್ಟಿದೆ ಎಂದು ಹೇಳುತ್ತೇವೆ. ಪ್ರಕೃತ ಜಗತ್ತಿನಿಂದ ಬ್ರಹ್ಮನಿಗೆ ಭೇದವು ಇಲ್ಲದ ಕಾರಣ ಬ್ರಹ್ಮನ ಅಜ್ಞಾನದಿಂದ ಜಗತ್ತು ಹುಟ್ಟಿದೆ ಎಂದು ಹೇಳಬಹುದು.

ತತ್ವವಾದಿಗಳು - ಹಾಗಾದರೆ ಧರ್ಮಿಯು ಇರುವಾಗ ಅದರಿಂದ ಹುಟ್ಟಿದ್ದು ಹೇಗೆ ನಾಶವಾಗಲು ಸಾಧ್ಯ ? ಶುಕ್ತಿಗೂ, ರಜತಕ್ಕೂ ಭೇದವಿಲ್ಲವೆಂದು ಹೇಳುತ್ತಿರುವಿ ಹೀಗೆ ಹೇಳಿದರೆ ಶುಕ್ತಿಯು ಇರುವಾಗಲೇ ರಜತವು ಹೇಗೆ ನಾಶವಾಯಿತು ? ಅದರಂತೆ ಬ್ರಹ್ಮನಿರುವಾಗಲೇ, ಜಗತ್ತು ಹೇಗೆ ನಾಶವಾಗಲು ಸಾಧ್ಯ ?

ಅದ್ವೈತಿಗಳು - ಅನಿರ್ವಾಚ್ಯವಾಗಿರುವುದರಿಂದ ನಿವೃತ್ತಿಯಾಗಬಹುದು.

ತತ್ವವಾದಿಗಳು - ಇದೂ ಕೂಡ ತಪ್ಪು. ಹಾಗಾದರೆ ಜಗತ್ತಿನಂತೆ ಬ್ರಹ್ಮನಿಗೂ ಕೂಡ ಅನಿರ್ವಾಚ್ಯತ್ವವು ಬರಬೇಕಾಗುತ್ತದೆ.

ಅದ್ವೈತಿಗಳು - ಬ್ರಹ್ಮನಿಗೆ ಅನಿರ್ವಾಚ್ಯತ್ವವು ಬರಬಾರದು. ಜಗತ್ತಿಗೆ ಮಾತ್ರ ಅನಿರ್ವಾಚ್ಯತ್ವವನ್ನು ಹೇಳಬೇಕು.

ತತ್ವವಾದಿಗಳು - ಇದು ಸಾಧ್ಯವೇ ಇಲ್ಲ. ಬ್ರಹ್ಮನಿಂದ ಜಗತ್ತಿಗೆ ಭೇದವಿಲ್ಲದ್ದರಿಂದ ಬ್ರಹ್ಮನು ಸ್ವತಃ ಬೇರೆಯಾಗಲು ಸಾಧ್ಯವಿಲ್ಲ. ಆದ್ದರಿಂದ ಜಗತ್ತಿನಂತೆ ಬ್ರಹ್ಮನೂ ಕೂಡ ಅನಿರ್ವಾಚ್ಯ-ನಾಗುತ್ತಾನೆ. ಹಾಗೇ ಅಭೇದವಿಲ್ಲದಿದ್ದರೆ ಅಭೇದವುಳ್ಳವನೂ ಕೂಡ ಆಗಲು ಸಾಧ್ಯವಿಲ್ಲ. ಪರಿಶೇಷಾತ್ ಜಗತ್ತಿನಂತೆ ಬ್ರಹ್ಮನೂ ಕೂಡ ಅನಿರ್ವಾಚ್ಯನೇ ಆಗುತ್ತಾನೆ. ಇದು ನಿಮ್ಮ ಸಿದ್ಧಾಂತಕ್ಕೆ ವಿರುದ್ಧ.

ವಿವರಣೆ - ಅಶ್ವ ಮತ್ತು ಗಜಗಳಿಗೆ ಪರಸ್ಪರ ಭೇದವಿದೆ. 'ಅಶ್ವಪ್ರತಿಯೋಗಿಕ ಗಜಧರ್ಮಿಕಭೇದವಾನ್ ಗಜಃ' ಎಂದು ಹೇಳಿದಾಗ ಗಜವು ಭೇದಿ ಎನಿಸುತ್ತದೆ. 'ಗಜಪ್ರತಿಯೋಗಿಕ ಅಶ್ವಧರ್ಮಿಕಭೇದವಾನ್ ಅಶ್ವಃ' ಎಂದು ಹೇಳಿದಾಗ ಅಶ್ವವು ಭೇದಿ ಎನಿಸುತ್ತದೆ. ಪ್ರಕೃತ ಬ್ರಹ್ಮನಿಂದ ಜಗತ್ತಿಗೆ ಭೇದವಿಲ್ಲವೆಂದು ಅದ್ವೈತಿಗಳು ಹೇಳುತ್ತಿದ್ದಾರೆ. ಆದ್ದರಿಂದ ಬ್ರಹ್ಮನು 'ಜಗತ್‌ಪ್ರತಿಯೋಗಿಕಭೇದವತ್' ಆಗಲು ಸಾಧ್ಯವಿಲ್ಲ. ಆದ್ದರಿಂದಲೇ ಭೇದವುಳ್ಳವನೆಂದು ಹೇಳಲು ಸಾಧ್ಯವಿಲ್ಲ. ಜಗತ್ತು ಹೇಗೆ ಅನಿರ್ವಾಚ್ಯವಾಗುತ್ತದೋ, ಬ್ರಹ್ಮನೂ ಕೂಡ ಅನಿರ್ವಾಚ್ಯನೇ ಆಗುತ್ತಾನೆ ಎಂಬುದಾಗಿ 'ನಹಿ' ಸ್ವತಃ ಇತ್ಯಾದಿ ವಾಕ್ಯದ ಅರ್ಥವನ್ನು ತಿಳಿಯಬೇಕು.

ಅದ್ವೈತಿಗಳ ತಪ್ಪು ಕಲ್ಪನೆ

तत्वप्रदीपः – विद्यया च विपद्येत । प्रथमं ब्रह्मणः प्रकृतित्वं कल्पयित्वा ततस्तदज्ञानस्य कल्प्यत इति च क्लेश्यं कल्पना । नच तदपि कल्प्यं, अप्रमाणत्वात् ।।

ಮತ್ತು ಅನಿರ್ವಾಚ್ಯನಾದ ಬ್ರಹ್ಮನು ವಿದ್ಯೆಯಿಂದ ಬಾಧಿತನಾಗಬೇಕಾಗುತ್ತದೆ. ಯಾವುದು ಅನಿರ್ವಾಚ್ಯವೋ ಅದು ಯಥಾರ್ಥಜ್ಞಾನದಿಂದ ಬಾಧಿತವಾಗುತ್ತದೆಂದು ನೀವೇ ಹೇಳಿರುತ್ತೀರಿ.

ಅದ್ವೈತಿಗಳು - ಬ್ರಹ್ಮನಿಗೆ ಮೊದಲು ಉಪಾದಾನತ್ವವನ್ನು ಕಲ್ಪನೆ ಮಾಡಿ, ಅನಂತರ ಅಜ್ಞಾನಕ್ಕೆ ಉಪಾದಾನತ್ವವನ್ನು ಕಲ್ಪನೆ ಮಾಡುತ್ತೇವೆ. ಆದ್ದರಿಂದ ಹಿಂದಿನ ಯಾವುದೇ ದೋಷಗಳಿಗೆ ಅವಕಾಶವಿಲ್ಲ.

ತತ್ವವಾದಿಗಳು - ಅರ್ಥ ಆಗದೇ ಇರುವವರು ಹೇಳುವ ಮಾತುಗಳಿವು. ಇವೆಲ್ಲವು ಕಷ್ಟವಾದ ಕಲ್ಪನೆಗಳು.

ಅದ್ವೈತಿಗಳು - ಕಷ್ಟವಾದರೂ ಸರಿ ಅಂಗೀಕಾರ ಮಾಡುತ್ತೇವೆ ಏನು ತಪ್ಪು ?

ತತ್ವವಾದಿಗಳು - ನೀವು ಹೇಳುವ ವಿಷಯದಲ್ಲಿ ಯಾವುದೇ ಆಧಾರವಿಲ್ಲ. ಅಪ್ರಾಮಾಣಿಕವಾದದ್ದನ್ನು ಕಲ್ಪನೆ ಮಾಡಿದ ದೋಷ ನಿಮಗೆ ಬರುತ್ತದೆ.

ಪ್ರತಿಜ್ಞಾದೃಷ್ಟಾಂತಾನುಪರೋಧವೂ ಕೂಡ ಆಧಾರವಲ್ಲ

तत्वप्रदीपः – प्रतिज्ञादृष्टान्तानुपरोधादेवमाश्रीयत इति चेत्, तदप्ययुक्तम्। यदि हि श्रुतौ जगदुपादानत्वमभिप्रेष्यत दृष्यान्तोऽपि तर्हि तादृगुदाहरिष्यत । नहि निखिलमृण्मयं कार्यजातं घटकरकमणिकमल्लकशरावोदञ्चनादिकमेकमृत्पिण्डविकारो भवति । विकारविवक्षायां तु मृदा विज्ञातयेत्येवावक्ष्यत, एकशब्दः पिण्डशब्दश्च व्यर्थः स्यात् ।

ಅದ್ವೈತಿಗಳು - ಪ್ರತಿಜ್ಞಾದೃಷ್ಟಾಂತಾನುಪರೋಧದಿಂದ ಹೀಗೆ ಕಲ್ಪನೆ ಮಾಡುತ್ತೇವೆ - ಶ್ರುತಿಯಲ್ಲಿ 'ಯೇನಾಶ್ರುತಂ ಶ್ರುತಂ ಭವತಿ' ಎಂಬ ಪ್ರತಿಜ್ಞಾವಾಕ್ಯಕ್ಕೂ 'ಸರ್ವಂ ಮೃಣ್ಮಯಂ

ವಿಜ್ಞಾತಂ ಸ್ಯಾತ್' ಇತ್ಯಾದಿ ದೃಷ್ಟಾಂತವಾಕ್ಯಕ್ಕೂ ಅನುಗುಣ್ಯವನ್ನು ತೋರಿಸಬೇಕೆಂದರೆ ಬ್ರಹ್ಮನಿಗೆ ಜಗದುಪಾದಾನತ್ವವನ್ನು ಅಂಗೀಕಾರ ಮಾಡಲೇಬೇಕು.

ತತ್ವವಾದಿಗಳು - ಇದು ಅಯುಕ್ತ. ಒಂದು ವೇಳೆ ಶ್ರುತಿಯಲ್ಲಿ ಜಗದುಪಾದಾನತ್ವವು ಬ್ರಹ್ಮನಿಗೆ ಅಭಿಪ್ರೇತವಾಗಿದ್ದಲ್ಲಿ, ದೃಷ್ಟಾಂತವನ್ನೂ ಕೂಡ ಅದೇ ವಿಷಯಕ್ಕಾಗಿ ನೀಡಬೇಕಿತ್ತು. ಅದನ್ನು ಬಿಟ್ಟು ಘಟ, ಕರಕ, ಮಣಿಕ, ಮಲ್ಲಕ, ಶರಾವ, ಉದಂಚನ ಇದೇ ಮೊದಲಾದ ಸಕಲ ಮಣ್ಣಿನ ಕಾರ್ಯಗಳು ಒಂದೇ ಮೃತ್ಪಿಂಡದ ವಿಕಾರವಾಗಿರುವುದು ಕಂಡಿರುವುದೇ ಇಲ್ಲ. ಇಂಥ ದೃಷ್ಟಾಂತವನ್ನು ಶ್ರುತಿಯಲ್ಲಿ ನೀಡಬಾರದಿತ್ತು. ಬ್ರಹ್ಮನ ವಿಕಾರವೇ ಶ್ರುತಿಗೆ ವಿವಕ್ಷಿತವಾಗಿದ್ದಲ್ಲಿ 'ಮೃದಾ ವಿಜ್ಞಾತಯಾ' ಎಂದು ವಾಕ್ಯಪ್ರಯೋಗವಿರಬೇಕಿತ್ತು. ಅಷ್ಟೇ ಅಲ್ಲದೇ ಏಕ ಎಂಬ ಶಬ್ದ, ಪಿಂಡ ಎಂಬ ಶಬ್ದವನ್ನೂ ಕೂಡ ಹೇಳುವ ಅವಶ್ಯಕತೆಯಿರಲಿಲ್ಲ. ಈ ಎಲ್ಲದರಿಂದ ವಿಕಾರವು ವಿವಕ್ಷಿತವಲ್ಲ. ಪ್ರಾಧಾನ್ಯವೇ ವಿವಕ್ಷಿತವೆಂಬುದು ಸ್ಪಷ್ಟವಾಗುತ್ತದೆ.

ವಾಚಾರಂಭಣ ಶಬ್ದಕ್ಕೆ ಮಿಥ್ಯಾ ಎಂದರ್ಥವಲ್ಲ

तत्वप्रदीपः – ''वाचाऽऽरम्भणं विकारः'' इति विकारस्य मिथ्यात्वमुक्त्वा मृत्तिकायाः सत्यत्ववचनात्प्रकृतिविकारभाववविवक्षेति चेन्न । नहि वाचारम्भणशब्दो मिथ्यार्थे प्रसिद्धः । वाचाऽस्तीत्यारभ्यत एव केवलं न तथा युक्तितो वक्तुं शक्यते । अतो वाचारम्भणमिति चेन्न । परमार्थापेक्षया निर्वाच्यमित्यपि वक्तुमशक्यत्वात् । शक्यत्वे मोक्षे च तदनुवृत्तिप्रसक्तेः ।

ಅದ್ವೈತಿಗಳು - 'ವಾಚಾऽऽರಂಭಣಂ ವಿಕಾರಃ' ಎಂಬುದಾಗಿ ಶ್ರುತಿಯು ವಿಕಾರಕ್ಕೆ ಮಿಥ್ಯಾತ್ವವನ್ನು ಹೇಳುತ್ತಿದೆ. ವಿಕಾರಿಯಾದ ಮೃತ್ತಿಕೆಗೆ ಮಿಥ್ಯಾತ್ವವನ್ನು ಹೇಳುತ್ತಿದೆ. ಆದ್ದರಿಂದ ಪ್ರಕೃತಿಯು ವಿಕಾರವಾಗಿರುವುದರಿಂದ ಮಿಥ್ಯಾಭೂತವಾಗಿದೆ. ಇದಕ್ಕೆ ಕಾರಣನಾಗಿರುವಂಥ ಬ್ರಹ್ಮನು ಸತ್ಯನಾಗಿದ್ದಾನೆ. ಹೀಗೆ ಶ್ರುತಿಯಿಂದಲೇ ಜಗನ್ಮಿಥ್ಯಾತ್ವವು ಸಿದ್ಧವಾಗಿದೆ.

ತತ್ವವಾದಿಗಳು - ಇದು ತಪ್ಪು. 'ವಾಚಾऽऽರಂಭಣಂ' ಎಂಬ ಶಬ್ದವು 'ಮಿಥ್ಯಾ' ಎಂಬರ್ಥದಲ್ಲಿ ಪ್ರಸಿದ್ಧವೇ ಆಗಿರುವುದಿಲ್ಲ. ನೀವು ಶ್ರುತಿಗೆ ಕಪೋಲಕಲ್ಪಿತವಾದ ಅರ್ಥವನ್ನು ಹೇಳುತ್ತಿದ್ದೀರಿ.

ಅದ್ವೈತಿಗಳು - 'ವಾಚಾऽಸ್ತೀತ್ಯಾರಭ್ಯತೇ ಏವ ಕೇವಲಂ ನ ತಥಾ ಯುಕ್ತಿತೋ ವಕ್ತುಂ ಶಕ್ಯತೇ । ಅತೋ ವಾಚಾರಂಭಣಮ್' 'ಮಾತಿನಿಂದ ಕೇವಲ ಇದೆ ಎಂಬ ವ್ಯವಹಾರಕ್ಕೆ ವಿಷಯವಾಗಿದೆ. ಯುಕ್ತಿಯಿಂದ ಇದನ್ನು ಸಮರ್ಥನೆ ಮಾಡಲು ಬರುವುದಿಲ್ಲ. ಆದ್ದರಿಂದ 'ವಾಚಾರಂಭಣ' ಎನಿಸುತ್ತದೆ'. ಹೀಗೆ ನಿಷ್ಪತ್ತಿ ಮಾಡಿದಾಗ 'ವಾಚಾರಂಭಣ' ಎಂಬ ಶಬ್ದಕ್ಕೆ ಮಿಥ್ಯಾ ಎಂಬರ್ಥವು ತಿಳಿಯುತ್ತದಲ್ಲವೇ ?

ತತ್ವವಾದಿಗಳು - ಇದೂ ಕೂಡ ತಪ್ಪು. ವಾಸ್ತವಿಕವಾಗಿ ನಿಮಗೆ ಅನಿರ್ವಾಚ್ಯ ಎಂಬರ್ಥವನ್ನೂ ಕೂಡ ವಾಚಾರಂಭಣ ಶಬ್ದದಿಂದ ವಿವಕ್ಷಿಸಲು ಸಾಧ್ಯವಾಗುವುದಿಲ್ಲ. ಹಾಗೇನಾದರೂ ಅನಿರ್ವಾಚ್ಯ ಎಂಬರ್ಥವನ್ನು ವಿವಕ್ಷಿಸಿದರೆ ಮೋಕ್ಷದಲ್ಲೂ ಕೂಡ ಅನಿರ್ವಾಚ್ಯವಾದದ್ದು ಅನುವೃತ್ತಿ ಆಗುವ ಪ್ರಸಂಗ ಬರುತ್ತದೆ.

ವಿಶೇಷ ವಿಚಾರ - ಮುದ್ರಿತ ಪುಸ್ತಕಗಳಲ್ಲಿ 'ಪರಮಾರ್ಥಾಪೇಕ್ಷಯಾ ನಿರ್ವಾಚ್ಯಮಿತ್ಯಪಿ ವಕ್ತುಮಶಕ್ಯತ್ವಾತ್' ಎಂಬ ಪಾಠವಿದೆ. ಈ ಪಾಠವನ್ನು ವಿವಕ್ಷಿಸಿದರೆ ಈ ವಾಕ್ಯಕ್ಕೆ ಅರ್ಥ ಹೇಳುವುದು ಬಹಳ ಕಠಿಣ. ಅದಕ್ಕಾಗಿ 'ಪರಮಾರ್ಥಾಪೇಕ್ಷಯಾ ಅನಿರ್ವಾಚ್ಯಮ್ ಇತ್ಯಪಿ ವಕ್ತುಮಶಕ್ಯತ್ವಾತ್' ಎಂಬುದಾಗಿ ಪದವಿಭಾಗವನ್ನು ಮಾಡಿಕೊಳ್ಳಬೇಕು. ಆಗ ಮಾತ್ರ ಈ ವಾಕ್ಯಕ್ಕೆ ಹಾಗೂ 'ಶಕ್ಯತ್ವೇ ಮೋಕ್ಷೇ ಚ ತದನುವೃತ್ತಿಪ್ರಸಕ್ತೇಃ' ಎಂಬ ಮುಂದಿನ ವಾಕ್ಯಕ್ಕೆ ಅರ್ಥವನ್ನು ಹೇಳಲು ಸಾಧ್ಯ . ಇಲ್ಲಿರುವ 'ಪರಮಾರ್ಥಾಪೇಕ್ಷಯಾ' ಎಂಬ ಪದಕ್ಕೆ ಬ್ರಹ್ಮನನ್ನು ವಿವಕ್ಷಿಸಿ ಎಂಬರ್ಥವನ್ನು ಇಟ್ಟುಕೊಂಡರೂ ಕೂಡ ಸುಲಭವಾಗಿ ವಾಕ್ಯದ ಅರ್ಥವನ್ನು ಹೇಳಲು ಬರುವುದಿಲ್ಲ. ಆದ್ದರಿಂದ ವಾಸ್ತವಿಕವಾಗಿ ಎಂಬರ್ಥವನ್ನಷ್ಟೇ ವಿವಕ್ಷಿಸಬೇಕು. ಆಗ ಈ ವಾಕ್ಯದ ಅರ್ಥವನ್ನು ಹೀಗೆ ಹೇಳಿದಂತಾಗುತ್ತದೆ - ಮಾಯಾವಾದಿಗಳು ಜಗತ್ತನ್ನು ಅನಿರ್ವಾಚ್ಯ ಎನ್ನುತ್ತಾರೆ. ವಾಸ್ತವಿಕವಾಗಿ ಜಗತ್ತನ್ನು ಅನಿರ್ವಾಚ್ಯ ಎಂದೂ ಕೂಡ ಹೇಳಲು ಬರುವುದಿಲ್ಲ. ಒಂದು ವೇಳೆ ಜಗತ್ತನ್ನು ಅನಿರ್ವಾಚ್ಯ ಎಂದು ಹೇಳಲು ಸಾಧ್ಯವಿದೆ ಎಂಬುದಾಗಿ ಅದ್ವೈತಿಯು ಹೇಳಿದರೆ ಮೋಕ್ಷದಲ್ಲೂ ಕೂಡ ಇದು ಅನುವೃತ್ತವಾಗಬೇಕಾಗುತ್ತದೆ. ಏಕೆಂದರೆ ನಿರ್ವಾಚ್ಯಕ್ಕೆ ಅರ್ಹವಾದದ್ದು ಮೋಕ್ಷದಲ್ಲೂ ಇರುತ್ತದೆಂದು ಅದ್ವೈತಿಗಳು ಒಪ್ಪಿದ್ದಾರೆ.

ಶ್ರುತಿಗೆ ವ್ಯಾಖ್ಯಾನ ಮಾಡಲು ಬಾರದ ಅದ್ವೈತಿಗಳು

तत्वप्रदीपः – वाचारम्भणमात्रमिति चाश्रुतकल्पना । नामधेयमात्रमिति च पुनरुक्तिः । अस्मिन्पक्षे ''मृत्तिकैव सत्य'' इति वक्तव्य इतिशब्दो

लिङ्गव्यत्यासश्च व्यर्थः स्यात् । नच सत्यज्ञानान्मिथ्या ज्ञातं भवति । अधिष्ठानज्ञानादध्यस्तस्य निवृत्तेरेवेष्टत्वात् । कथं च विकारभावादेव मिथ्यात्वं सम्प्रतिपद्येत ? विनाशित्वेनेति चेत्

ಅದ್ವೈತಿಗಳಿಗೆ ಮತ್ತೊಂದು ದೋಷ. 'वाचारंभणमात्रम्' ಎಂಬುದಾಗಿ ಶ್ರುತಿಯಲ್ಲಿ ಇಲ್ಲದ 'मात्र' ಎಂಬ ಪದವನ್ನು ಕಲ್ಪನೆ ಮಾಡಬೇಕು. ಆದ್ದರಿಂದ ಅಶ್ರುತಕಲ್ಪನಾದೋಷವು ಪ್ರಾಪ್ತವಾಗುತ್ತದೆ. ಹಾಗೂ 'नामधेयमात्रम्' ಎಂಬುದು ಪುನರುಕ್ತವಾಗಿದೆ. 'वाचारंभणमात्रम्' ಎಂಬುದರಿಂದ ಮಿಥ್ಯಾತ್ವವು ಸಿದ್ಧವಾಗುವಾಗ ಪುನಃ 'नामधेयमात्रम्' ಎಂದು ಹೇಳಿದರೆ ಹೇಳಿದ್ದನ್ನೇ ಹೇಳಿದಂತಾಗುತ್ತದೆ. ಹಾಗೂ ಈ ಪಕ್ಷದಲ್ಲಿ 'मृत्तिकैव सत्या' ಎಂದಷ್ಟೇ ಹೇಳಿದರೆ ಸಾಕು. ಶ್ರುತಿಯಲ್ಲಿರುವ 'इति' ಶಬ್ದವು ವ್ಯರ್ಥವಾಗಿದೆ. ಹಾಗೂ 'सत्यं' ಎಂಬುದನ್ನು 'सत्या' ಎಂಬುದಾಗಿ ಲಿಂಗವ್ಯತ್ಯಾಸವನ್ನೂ ಕೂಡ ಮಾಡಬೇಕಾಗುತ್ತದೆ.

ಅದ್ವೈತಿಗಳು - ಸತ್ಯಜ್ಞಾನದಿಂದ ಮಿಥ್ಯಾಭೂತವಾದದ್ದು ಜ್ಞಾತವಾಗುತ್ತದೆ. ಆದ್ದರಿಂದ ಇತಿಶಬ್ದಾದಿಗಳಿಗೆ ವೈಯರ್ಥ್ಯವನ್ನು ಹೇಗೆ ಹೇಳುವಿರಿ ?

ತತ್ವವಾದಿಗಳು - ಸತ್ಯಜ್ಞಾನದಿಂದ ಮಿಥ್ಯಾಭೂತವಾದದ್ದು ನಿವೃತ್ತವಾಗುತ್ತದೆಂದು ಹೇಳಬೇಕು ಹೊರತು, ಮಿಥ್ಯಾಭೂತವಾದದ್ದು, ಜ್ಞಾತವಾಗುತ್ತದೆಂದು ಹೇಳಬಾರದು. ಅಧಿಷ್ಠಾನಜ್ಞಾನದಿಂದ ಅಧ್ಯಸ್ತಜ್ಞಾನಕ್ಕೆ ನಿವೃತ್ತಿಯೇ ಎಲ್ಲರಿಗೂ ಇಷ್ಟವಾಗಿದೆ. ಮತ್ತು ವಿಕಾರವಿದೆಯೆಂಬ ಕಾರಣದಿಂದ ಮಿಥ್ಯಾತ್ವವನ್ನು ಏಕೆ ಕಲ್ಪನೆ ಮಾಡುತ್ತಿರುವಿರಿ?

ಅದ್ವೈತಿಗಳು - ವಿನಾಶಿಯಾಗಿರುವುದರಿಂದ ಮಿಥ್ಯಾತ್ವವನ್ನು ಕಲ್ಪನೆ ಮಾಡುತ್ತೇವೆ.

ಅದ್ವೈತಿಗಳಿಗೆ ದೃಷ್ಟಾಂತವೇ ಕೂಡುವುದಿಲ್ಲ

तत्वप्रदीपः – मैवम् । बाधादेव मिथ्यात्वप्रतिपत्तेः । अत एव हि रजतादिदृष्टान्त उपादित्सितः । नच घटादेर्बाधः । तस्मान्नायं मिथ्यात्वे दृष्टान्तः।।

ತತ್ವವಾದಿಗಳು - ಇದೂ ಕೂಡ ತಪ್ಪು. ಬಾಧದಿಂದಲೇ ಮಿಥ್ಯಾತ್ವವು ತಿಳಿಯುತ್ತದೆ. ಹೊರತು, ವಿನಾಶತ್ವದಿಂದಲ್ಲ. ಆದ್ದರಿಂದ ರಜತದ ದೃಷ್ಟಾಂತವೇ ತೆಗೆದುಕೊಳ್ಳಲು ಇಷ್ಟವಾಗಿದೆ. ಮೃತ್ತಿಕೆಯ ದೃಷ್ಟಾಂತವನ್ನು ನೀಡಿದ್ದು ಅನಿಷ್ಟವಾಗಿದೆ. (ಉಪಾದಿತ್ಸಿತಃ= 'उप

ಇತ್ಯುಪಸರ್ಗಪೂರ್ವಕಾತ್ ಸನ್ನತಾಂತ್ ಕಃ ಪ್ರತ್ಯಯಾಂತಃ ಶಬ್ದಃ' 'ದೃಷ್ಟಾಂತವನ್ನು ತೆಗೆದುಕೊಳ್ಳಲು ಇಷ್ಟವಾಗಿದೆ') ಹಾಗೂ ಘಟಾದಿಗಳಿಗೆ ಬಾಧವೂ ಕೂಡ ಇರುವುದಿಲ್ಲ. ಆದ್ದರಿಂದ ಮಿಥ್ಯಾತ್ವವಿಷಯದಲ್ಲಿ ಘಟಾದಿಗಳ ದೃಷ್ಟಾಂತವೇ ಅಯುಕ್ತವಾಗಿದೆ.

ವಾಚಾರಂಭಣ ಶ್ರುತಿಗೆ ಹೇಗೆ ವ್ಯಾಖ್ಯಾನ ಮಾಡಬೇಕು ?

तत्वप्रदीपः – किन्तु ''यथा सोम्यैकेन'' इति सादृश्यादेकविज्ञानेन सर्वविज्ञानं निदर्शयति । ''वाचारम्भणम्'' इत्यादिना प्राधान्यात् । वाचारम्भणं विकारात्मकं तस्मादनित्यम् । सारम्भा वाच इत्यर्थः; धर्मधर्म्यभेदात्, साङ्केतिकनामानीत्युक्तं भवति, तान्यनित्यानि ।

ಆದ್ದರಿಂದ 'ವಾಚಾರಂಭಣ' ಶ್ರುತಿಗೆ ಹೀಗೆ ವ್ಯಾಖ್ಯಾನವನ್ನು ಮಾಡಬೇಕು - 'ಯಥಾ ಸೋಮ್ಯೈಕೇನ' ಎಂಬ ಶ್ರುತಿಯು ಸಾದೃಶ್ಯದ ವಿವಕ್ಷೆಯಿಂದ ಒಂದನ್ನು ತಿಳಿದರೆ ಎಲ್ಲವನ್ನೂ ಕೂಡ ತಿಳಿದಂತಾಗುತ್ತದೆ ಎಂಬುದನ್ನು ದೃಷ್ಟಾಂತಪುರಸ್ಸರವಾಗಿ ಉಪಪಾದನೆ ಮಾಡುತ್ತಿದೆ. 'ವಾಚಾರಂಭಣಮ್' ಇತ್ಯಾದಿ ಶ್ರುತಿಯು ಪ್ರಾಧಾನ್ಯವನ್ನೇ ವಿವಕ್ಷಿಸಿದೆ. ವಾಚಾರಂಭಣವಾದದ್ದು ವಿಕಾರರೂಪವಾಗಿರುವುದರಿಂದ ಅನಿತ್ಯವಾಗಿದೆ. ಮಾತುಗಳು ಉತ್ಪನ್ನವುಳ್ಳವುಗಳಾಗಿವೆ. ಧರ್ಮ ಹಾಗೂ ಧರ್ಮಿಗಳಿಗೆ ಅಭೇದವಿರುವುದರಿಂದ ವಿಕಾರವೆಂದು ಹೇಳಿರುತ್ತಾರೆ. ಒಟ್ಟು ಸಾಂಕೇತಿಕನಾಮಗಳೆಂದು ಹೇಳಿದಂತಾಯಿತು. ಇವುಗಳೆಲ್ಲವೂ ಅನಿತ್ಯವಾಗಿದೆ.

'ಮೃತ್ತಿಕೇತ್ಯೇವ ಸತ್ಯಂ' ಎಂಬುದಕ್ಕೆ ವ್ಯಾಖ್ಯಾನ

तत्वप्रदीपः – मृत्तिकेति नामधेयमेव सत्यं सततप्राप्तं सदातनं वा, नित्यमित्यर्थः । साधुगुणं प्रधानगुणं प्रधानमिति चोक्तं भवति । प्रधानाज्ञानदप्रधानमपि ज्ञातं भवतीति च लोकव्यवहारः ।। तस्मान्नात्र प्रकृतिविकारभावो विवक्षित इति न ब्रह्मणो जगदुपादानत्वम् । तत्सुष्ठूक्तं नचान्यत्कल्प्यप्रमाणत्वादिति ।।छ।।

सततरमणात्स्त्री ।।छ।।

इति प्रकृत्यधिकरणम्

ಮೃತ್ತಿಕಾ ಎಂಬ ನಾಮಧೇಯವು ಸತ್ಯವಾಗಿದೆ. ಸತತಪ್ರಾಪ್ತವಾಗಿರುವುದರಿಂದ ನಿತ್ಯವಾಗಿವೆ ಎಂಬುದಾಗಿಯು ವ್ಯಾಖ್ಯಾನ ಮಾಡಬಹುದು. 'ಸತ್ಯಂ' ಎಂದರೆ ಪ್ರಧಾನವಾದದ್ದು ಎಂಬುದು ಇದರ ಅರ್ಥ. ಪ್ರಧಾನಜ್ಞಾನದಿಂದ ಅಪ್ರಧಾನವಾದದ್ದೂ ಕೂಡ ಜ್ಞಾತವಾಗುತ್ತದೆಂಬುದು ಲೋಕದ ವ್ಯವಹಾರ. ಆದ್ದರಿಂದ ಪ್ರಕೃತಿವಿಕಾರಭಾವವನ್ನು ವಿವಕ್ಷಿಸಬಾರದು. ಹಾಗಾಗಿ ಬ್ರಹ್ಮನಿಗೆ ಜಗದುಪಾನದಾನತ್ವವು ಈ ಶ್ರುತಿಯಿಂದ ಸಿದ್ಧವಾಗುವುದಿಲ್ಲ. ಈ ಎಲ್ಲಾ ಅಭಿಪ್ರಾಯದಿಂದ ಶ್ರೀಮದಾಚಾರ್ಯರು - 'ನಚಾನ್ಯತ್ ಕಲ್ಪ್ಯಂ ಅಪ್ರಮಾಣತ್ವಾತ್' ಎಂಬುದಾಗಿ ಹೇಳಿದ್ದಾರೆ.

ನಿರಂತರ ರಮಣಶೀಲನಾಗಿರುವುದರಿಂದ ಸ್ತ್ರೀಶಬ್ದವಾಚ್ಯನಾಗಿದ್ದಾನೆ.

ವಿವರಣೆ - ಆದುದರಿಂದ ಈ ಶ್ರುತಿವಾಕ್ಯವನ್ನು ಹೀಗೆ ಯೋಜನೆ ಮಾಡಿಕೊಳ್ಳಬೇಕು. ವಾಚಾರಂಭಣ ಎಂದರೆ ಸಾಂಕೇತಿಕ ಹೆಸರುಗಳು; ವಿಕಾರ ಉತ್ಪತ್ತಿಯುಳ್ಳದ್ದು. ಆದುದರಿಂದಲೇ, ಅನಿತ್ಯ. ಅದು ಯಾಕೆ ಉತ್ಪತ್ತಿಯುಳ್ಳದ್ದು ? ಎಂಬೀ ಪ್ರಶ್ನೆಗೆ 'ಬಹುವಿಧವಾಗಿರುವುದರಿಂದ' ಎಂದು ಉತ್ತರ. ಬೇರೆಬೇರೆ ವ್ಯಕ್ತಿಗಳ ಇಚ್ಛಾನುಸಾರವಾಗಿ ಈ ಸಾಂಕೇತಿಕನಾಮಗಳು ಅನೇಕ ಪ್ರಕಾರವಾಗಿವೆ' ಎಂದಿದರ ಅಭಿಪ್ರಾಯ. 'ಮೃತ್ತಿಕಾ ಮೊದಲಾದ ಸಂಸ್ಕೃತನಾಮಗಳು ವೇದಕ್ಕೆ ಸಂಬಂಧಿಸಿರುವುದರಿಂದ ನಿತ್ಯಹಾಗೂ ಅನಾದಿ' ಎಂದು.

ನಾಮಧೇಯಶಬ್ದ ನಿತ್ಯ ನಪುಂಸಕ. ಲಿಂಗಾದಿಗಳ ವಿಷಯದಲ್ಲಿ ವಿಶೇಷಣವು ವಿಶೇಷ್ಯದ ಅಧೀನವಾಗಿರುವುದರಿಂದ, ನಾಮಧೇಯಕ್ಕೆ ವಿಶೇಷಣವಾದ ವಾಚಾರಂಭಣ ಶಬ್ದವೂ ನಪುಂಸಕಲಿಂಗದಲ್ಲಿದೆ. ವಿಕಾರ ಶಬ್ದವಾದರೋ ನಿತ್ಯ ಪುಲ್ಲಿಂಗ; ಆದುದರಿಂದ 'ವಾಚಾರಂಭಣಂ ವಿಕಾರಃ' ಎಂಬಲ್ಲಿ ಲಿಂಗವೈಷಮ್ಯವು ದೋಷವೆನಿಸದು. 'ವಾಚಾರಂಭಣಂ' ಎನ್ನುವುದು 'ನಾಮಧೇಯಂ' ಎಂಬುವುದಕ್ಕೆ ವಿಶೇಷಣವಾಗಿದೆ ಎಂದು ಸೂಚಿಸುವುದಕ್ಕಾಗಿಯೇ ವಾಚಾರಂಭಣಶಬ್ದಕ್ಕೆ ವ್ಯಾಖ್ಯಾನಿಸುವಾಗ ಆಚಾರ್ಯರು 'ಸಾಂಕೇತ್ಯಂ' ಎಂದಿಷ್ಟೇ ಹೇಳದೇ, 'ಸಾಂಕೇತ್ಯಂ ನಾಮ' ಎಂದಿರುವರು. ಒಂದು ವೇಳೆ ತತ್ವನಿರ್ಣಯ ಹಾಗೂ ಛಾಂದೋಗ್ಯಭಾಷ್ಯಗಳಲ್ಲಿ ಆಚಾರ್ಯರು ನಿರೂಪಿಸಿರುವಂತೆ, ವಾಚಾ ಆರಂಭಣಂ ಎಂದು ವ್ಯಸ್ತಪದಗಳನ್ನಾಗಿ ಇಟ್ಟುಕೊಂಡು ವಾಚಾ ಯಸ್ಯ ಆರಂಭಣಂ ತತ್ ನಾಮಧೇಯಂ ವಿಕಾರಃ ಉತ್ಪತ್ತಿಮತ್ ಎಂದೋ ವಾಚಾ ನಾಮ್ನಾಂ ಆರಂಭಣಂ ವಿಕಾರಃ ವಿವಿಧಪ್ರಕಾರಃ ಎಂದೋ ವಾಕ್ಯವನ್ನು ಯೋಜನೆ ಮಾಡಿಕೊಂಡರೆ, ಮೊದಲನೆಯ ಯೋಜನೆಯಲ್ಲಿ 'ಆರಂಭಣಂ' ಎಂದನ್ನುವುದು 'ವಿಕಾರಃ' ಎಂದನ್ನುವುದಕ್ಕೆ ವಿಶೇಷಣವಲ್ಲವಾದುದರಿಂದ, ಎರಡನೆಯ ಯೋಜನೆಯಲ್ಲಿ 'ಆರಂಭಣ'ಶಬ್ದವು ನಪುಂಸಕಲಿಂಗ ಹಾಗೂ ವಿಕಾರ ಶಬ್ದವು ನಿತ್ಯಪುಲ್ಲಿಂಗವಾದುದರಿಂದ, ಲಿಂಗವ್ಯತ್ಯಾಸ ಹೇಗೆ ? ಎಂಬ ಶಂಕೆಯೇ ಉಂಟಾಗುವುದಿಲ್ಲ.

ಇಲ್ಲಿ ಎರಡನೆಯ ಯೋಜನೆಯಂತೆ ನಾಮಗಳ ಆರಂಭಣವು ವಿವಿಧ ಆಕಾರವುಳ್ಳದ್ದು ಹೊರತು ವಿವಿಧ ಆಕಾರವೇ ಅಲ್ಲ. ಆದರೂ, ಆಕಾರ ಆಕಾರಿಗಳಿಗೆ ಅಭೇದ ವಿವಕ್ಷೆಯಿಂದ ನಾಮ್ನಾಂ ಆರಂಭಣಂ ವಿವಿಧಾಕಾರಃ ಎಂದೆನ್ನಲಾಗಿದೆ. ಹೀಗೆ ವಿವಿಧ ಆಕಾರವುಳ್ಳದ್ದು ಆಗಿರುವುದರಿಂದಲೇ 'ಉತ್ಪತ್ತಿಯುಳ್ಳದ್ದು' ಎಂದು ಅದರ ತಾತ್ಪರ್ಯಾರ್ಥವಾಗಿದೆ.

ಸಾಂಕೇತಿಕನಾಮಗಳಿಗೆ ಉತ್ಪತ್ತಿ ಹಾಗೂ ನಾಶವಿದೆ; ಸಂಸ್ಕೃತನಾಮಗಳು ಅನಾದಿನಿತ್ಯ ಎಂಬೀ ನಿರೂಪಣೆಯ ಆವಶ್ಯಕತೆ ಈಗ ಏನಿದೆ ? ಇಲ್ಲಿ ಮುಖ್ಯವಾಗಿ ಪ್ರಸ್ತುತವಾಗಿರುವ, 'ಪರಮಾತ್ಮನ ಜ್ಞಾನದಿಂದ ಸರ್ವವಿಜ್ಞಾನ'ದ ವಿಷಯದಲ್ಲಿ ಹಾಗೆಯೇ ಅಮುಖ್ಯವಾಗಿ ಪ್ರಸ್ತುತವೆನಿಸಿರುವ 'ಮೃತ್‌ಪಿಂಡ ಹಾಗೂ ಮೃಣ್ಮಯಾದಿ ದೃಷ್ಟಾಂತ'ದ ವಿಷಯದಲ್ಲಿ ಈ ನಿರೂಪಣೆಯು, ನಮ್ಮ (ಪರಿಣಾಮವಾದಿ ಹಾಗೂ ವಿವರ್ತವಾದಿಗಳ) ವ್ಯಾಖ್ಯಾನದಲ್ಲಿ ವಾಚಾರಂಭಣ ಶ್ರುತಿ ಹೇಗೆ ಉಪಯುಕ್ತವಾಗಿದೆಯೋ ಹಾಗೆ ಉಪಯುಕ್ತವಾಗಿಲ್ಲವಷ್ಟೆ. ಹೀಗೆ ಅಸಂಗತವಾಗಿರುವುದರಿಂದ ವಾಚಾರಂಭಣಶ್ರುತಿಗೆ ನೀವು (ತತ್ತ್ವವಾದಿಗಳು) ಹೇಳುತ್ತಿರುವ ಈ ಅರ್ಥವು ಯುಕ್ತವೆನಿಸದು ಎಂಬೀ ಆಕ್ಷೇಪ ಸರಿಯಲ್ಲ. ಏಕೆಂದರೆ, ಈ ನಿರೂಪಣೆಯು ಪರರ ವ್ಯಾಖ್ಯಾನದಂತೆ ಮೃತ್ಪಿಂಡಾದಿ ದೃಷ್ಟಾಂತಗಳಿಗೆ ಉಪಪಾದಕವಾಗದಿರುವುದರಿಂದ ಅದಕ್ಕೆ ಸಂಗತವಾಗಿಲ್ಲ ಎಂದೇನೋ ಸರಿ. ಆದರೆ ಬ್ರಹ್ಮವಿಜ್ಞಾನದಿಂದ ಸರ್ವವಿಜ್ಞಾನ ಎಂಬೀ ಮುಖ್ಯತಯಾ ಪ್ರಸ್ತುತವಾದ ಪ್ರತಿಜ್ಞಾರ್ಥದ ವಿಷಯದಲ್ಲಿ ಇನ್ನೊಂದು ದೃಷ್ಟಾಂತರೂಪದಿಂದ ಇದು ಉಪಯುಕ್ತವೆನಿಸಿದೆ. ಅದಕ್ಕಾಗಿ 'ಯಥಾ ಸಂಸ್ಕೃತೇನ ವಿಜ್ಞಾತೇನ ಸರ್ವಂ ಸಾಂಕೇತಿಕಂ ನಾಮ ವಿಜ್ಞಾತಂ ಸ್ಯಾತ್' ಎಂದು ಈ ವಾಚಾರಂಭಣಶ್ರುತಿಗೆ ಅನುವೃತ್ತಿ ಮಾಡಿಕೊಂಡರಾಯಿತಷ್ಟೇ ! ಎಂಬೀ ಅಭಿಪ್ರಾಯದಿಂದ 'ಪ್ರಾಧಾನ್ಯಾತ್ ತತ್‌ಪರಿಜ್ಞಾನಾತ್' ಎಂಬೀ ಅನುವ್ಯಾಖ್ಯಾನ ಶ್ಲೋಕವು ಪ್ರಸ್ತುತವಾಗಿದೆ.

ಸಾಂಕೇತಿಕನಾಮಗಳು ಕೃತಕವೂ, ಅನಿತ್ಯವೂ ಆಗಿದ್ದು ಕಾರಣವನ್ನು ಅಪೇಕ್ಷಿಸಿಕೊಂಡಿರುವುದರಿಂದ ಅಪ್ರಧಾನ; ಅನಾದಿನಿತ್ಯವಾಗಿದ್ದುಕೊಂಡು ಕಾರಣವನ್ನು ಅಪೇಕ್ಷಿಸದೇ ಇರುವುದರಿಂದ ಸಂಸ್ಕೃತವು ಪ್ರಧಾನ. ಹೀಗೆ ಅದು ಪ್ರಧಾನವಾಗಿರುವುದರಿಂದಲೇ ಸಂಸ್ಕೃತಜ್ಞಾನಿಗೆ, ಸಾಂಕೇತಿಕನಾಮಗಳ ಪರಿಜ್ಞಾನವಿಲ್ಲದಿದ್ದರೂ 'ವಿದ್ವಾಂಸನೆಂಬ ಮನ್ನಣೆಗೆ ಪಾತ್ರನಾಗಿರುವನು' ಎಂಬಿತ್ಯಾದಿ ಸಾಂಕೇತಿಕನಾಮಗಳ ಪರಿಜ್ಞಾನದ ಫಲವು ಸಿದ್ಧಿಸುತ್ತದೆ. ಆದುದರಿಂದ, 'ಹೇಗೆ ಪ್ರಧಾನವಾಗಿರುವುದರಿಂದ ಸಂಸ್ಕೃತದ ಪರಿಜ್ಞಾನವುಂಟಾದಾಗ ಅಪ್ರಧಾನವಾದ ಸಾಂಕೇತಿಕನಾಮವನ್ನು ಅರಿತಂತೆಯೇ ಆಗುತ್ತದೆಯೋ ಹಾಗೆಯೇ ಪ್ರಧಾನವಾಗಿರುವುದರಿಂದಲೇ, ಅಪ್ರಧಾನವಾದ ದೇವತೆಗಳು ಕರ್ಮಗಳು ಇವನ್ನೆಲ್ಲಾ ಒಳಗೊಂಡಿರುವ ಇತರ ಸಕಲ ವಸ್ತುವಿನ ಪರಿಜ್ಞಾನದಿಂದ ಯಾವ ಫಲ ದೊರಕಬಹುದೋ ಅದೆಲ್ಲವೂ ಅನಾದಿನಿತ್ಯವಾಗಿದ್ದು ಪ್ರಧಾನನೆನಿಸಿರುವ ಪರಮಾತ್ಮನ ಪರಿಜ್ಞಾನದಿಂದ

ಲಭಿಸುತ್ತವೆ- ಅಂದರೆ, ಜಗತ್ತಿನ ಜ್ಞಾನದಿಂದ ಲಭಿಸಬಹುದಾದ ಎಲ್ಲಾ ಫಲವೂ ಪರಮಾತ್ಮನ ಜ್ಞಾನದ ಫಲದಲ್ಲಿ ಅಂತರ್ಭೂತವಾಗಿದೆ ಎಂದು ಅಭಿಪ್ರಾಯ. ಇಲ್ಲಿ ಅನುವ್ಯಾಖ್ಯಾನದಲ್ಲಿ 'ಪ್ರಾಕೃತಾಜ್ಞೋऽಪಿ' ಪ್ರಾಕೃತಜ್ಞಾನವಿಲ್ಲದಿದ್ದರೂ, ಎಂದಿರುವುದರಿಂದ 'ಸಂಸ್ಕೃತಜ್ಞಾನದಿಂದ ಸಾಂಕೇತಿಕನಾಮಗಳ ಜ್ಞಾನವೇ ಉಂಟಾಗುತ್ತದೆ ಎಂದಿದರ ತಾತ್ಪರ್ಯವಲ್ಲ ; ಸಂಸ್ಕೃತಜ್ಞಾನವಿದ್ದರೆ ಸಾಂಕೇತಿಕ ನಾಮಗಳ ಜ್ಞಾನದಿಂದ ಯಾವ ಫಲವು ಲಭಿಸೀತೋ ಅದು ಲಭಿಸುತ್ತದೆ ಎಂದನ್ನುವುದರ ತಾತ್ಪರ್ಯ' ಎಂದು ಸೂಚಿಸಿದಂತೆ ಆಯಿತು.

॥ ಇಲ್ಲಿಗೆ ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ ತತ್ತ್ವಪ್ರದೀಪದಲ್ಲಿ
ಪ್ರಕೃತ್ಯಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

ತತ್ತ್ವಪ್ರಕಾಶಿಕಾ

ಸಂಕೇತ ಮಾತ್ರದಿಂದಷ್ಟೇ ಪ್ರಕೃತಿಯಲ್ಲ

नन्वेवं प्रकृतिशब्दवाच्यत्वे हरेः श्रुत्युक्तेऽपि कथं तद्युज्यते निमित्ताभावात् । न हि सङ्केतमात्रमभ्युपगम्यते, इत्याशङ्कां परिहरत्सूत्रं पठित्वा फलं तावदाह – आत्मेति ॥

ಆಕ್ಷೇಪ - ಹಿಂದೆ ಹೇಳಿದ ಪ್ರಕಾರ ಪರಮಾತ್ಮನು ಪ್ರಕೃತಿಶಬ್ದದಿಂದ ಪ್ರತಿಪಾದ್ಯನೆಂದು ಹೇಳಿದರೂ ಕೂಡ ಇದು ಅಯುಕ್ತವಾಗಿದೆ. ಏಕೆಂದರೆ ಪ್ರಕೃತಿಶಬ್ದದ ಪ್ರವೃತ್ತಿನಿಮಿತ್ತವೇ ಪರಮಾತ್ಮನಲ್ಲಿಲ್ಲದಿರುವಾಗ ಪರಮಾತ್ಮನನ್ನು ಪ್ರಕೃತಿಯೆಂದು ಹೇಳಲು ಹೇಗೆ ಸಾಧ್ಯ ? ಕೇವಲ ಸಂಕೇತ ಮಾತ್ರದಿಂದ ಪರಮಾತ್ಮನಲ್ಲಿ ಪ್ರಕೃತಿಶಬ್ದವು ರೂಢವಾಗಿದೆ ಎಂಬುದನ್ನು ಸಿದ್ಧಾಂತಿಗಳೇ ಒಪ್ಪಿರುವುದಿಲ್ಲ.

ಪರಿಹಾರ - ಈ ಆಕ್ಷೇಪಕ್ಕೆ 'ಆತ್ಮಕೃತೇಃ ಪರಿಣಾಮಾತ್' ಎಂಬ ಸೂತ್ರವು ಉತ್ತರಿಸುತ್ತಿದೆ. ಅದನ್ನು ಪಠಿಸಿ, ಅದರ ಫಲಿತಾರ್ಥವನ್ನು ಭಾಷ್ಯದಲ್ಲಿ 'ಆತ್ಮಾ' ಇತ್ಯಾದಿಯಾಗಿ ಹೇಳುತ್ತಿದ್ದಾರೆ.

ಪ್ರವೃತ್ತಿನಿಮಿತ್ತವಿಲ್ಲ ಎನ್ನಬಾರದು

तत्वप्रकाशिका – न परमात्मनि प्रकृतिशब्दवृत्तौ निमित्ताभावः । प्रकृष्टा कृतिर्यस्येति योगस्यैव भावादित्यर्थः ।

ಪರಮಾತ್ಮನಲ್ಲಿ ಪ್ರಕೃತಿಶಬ್ದದ ಪ್ರವೃತ್ತಿನಿಮಿತ್ತವೇ ಇರುವುದಿಲ್ಲವೆಂದು ಹೇಳಬಾರದು. ಏಕೆಂದರೆ 'ಪ್ರಕೃಷ್ಟಕೃತಿತ್ವ' ಎಂಬ ಪ್ರವೃತ್ತಿನಿಮಿತ್ತವು ಪರಮಾತ್ಮನಲ್ಲಿ ಪ್ರಸಿದ್ಧವಾಗಿದೆ. ಪ್ರಕೃಷ್ಟವಾದ ಕೃತಿಯು ಯಾರದ್ದೋ ಅವನೇ ಪ್ರಕೃತಿಯೆನಿಸುತ್ತಾನೆ ಎಂಬುದಾಗಿ 'ಪ್ರಕೃಷ್ಟಾ ಕೃತಿಃ ಯಸ್ಯಸಃ ಪ್ರಕೃತಿಃ' ಎಂಬ ನಿಷ್ಪತ್ತಿಯನ್ನು ಸುಲಭವಾಗಿ ಹೇಳಬಹುದು.

ಪರಮಾತ್ಮನ ಕೃತಿಯು ಅತ್ಯುತ್ತಮ

तत्वप्रकाशिका – कथं प्रकृष्टेश्वरस्य कृतिरित्यतः सूत्रं व्याचष्टे ।। प्रकृताविति ।। 'प्रकृतेः स्वतः परिणामसामर्थ्याभावात्तदनुकूलतया तां प्रविश्य, महदादिरुपेण परिणामयति' इति प्रकृतिपरिणामादनन्तरं आत्मानं च महदादिप्रेरणाय बहुधा करोतीति प्रकर्षेण कृतिर्विष्णोरित्यर्थः ।

ಪರಮಾತ್ಮನ ಕೃತಿಯು ಏಕೆ ಉತ್ತಮವಾಗಿದೆ? ಎಂಬ ಪ್ರಶ್ನೆಗೆ ಸೂತ್ರವನ್ನು ವ್ಯಾಖ್ಯಾನ ಮಾಡುವ ಮೂಲಕ 'ಪ್ರಕೃತೋ' ಇತ್ಯಾದಿಯಾಗಿ ಉತ್ತರಿಸುತ್ತಿದ್ದಾರೆ.

ಪ್ರಕೃತಿಯು ಸಹಜವಾಗಿ ಪರಿಣಾಮ ಹೊಂದಲು ಅಸಮರ್ಥವಾಗಿದೆ. ಆದ್ದರಿಂದ ಪ್ರಕೃತಿಗೆ ಪರಿಣಾಮ ಹೊಂದುವ ಸಾಮರ್ಥ್ಯವನ್ನು ನೀಡುವುದಕ್ಕಾಗಿ ಅದರೊಳಗೆ ಪ್ರವೇಶಿಸುತ್ತಾನೆ. ಅಂತೆಯೇ ಮಹತ್ತತ್ವ ಮೊದಲಾದ ರೂಪದಿಂದ ಅದನ್ನು ಪರಿಣಾಮ ಮಾಡುತ್ತಾನೆ. ಅನಂತರ ಮಹತ್ತತ್ವ ಮೊದಲಾದ ಪ್ರಕೃತಿಯ ಪರಿಣಾಮಗಳನ್ನು ಪ್ರೇರಣೆ ಮಾಡುವುದಕ್ಕಾಗಿ ತಾನೇ ಅನೇಕ ರೂಪಗಳನ್ನು ಧರಿಸಿ, ಅವುಗಳೊಳಗೆ ನಿಲ್ಲುತ್ತಾನೆ. ಇದನ್ನು ಗಮನಿಸಿದಾಗ ಪರಮಾತ್ಮನ ಕೃತಿಯು ಎಷ್ಟು ಅತ್ಯುತ್ಕೃಷ್ಟವಾಗಿದೆ ಎಂದು ಸ್ಪಷ್ಟವಾಗುತ್ತದೆ.

ಪ್ರಕೃತಿಯನ್ನು ಪ್ರವೇಶಿಸುವನು ಎನ್ನಲು ಶ್ರುತಿಯ ಆಧಾರ

तत्वप्रकाशिका – सूत्रार्थे श्रुतिस्मृती चाऽऽह – अथेति ।। 'प्रकृतिमनुप्रविश्य तां परिणाम्य, तत्परिणामप्रेरकत्वेन आत्मानं बहुधा चकार,

तस्मात् प्रकृतिशब्दवाच्यः। यस्मात् प्रकृतिशब्दवाच्यः तस्मात् प्रकतिरित्याचक्षते' इत्यर्थः । स्मृतिरप्येवं व्याख्येया ।

ಈ ಸೂತ್ರಾರ್ಥಕ್ಕೆ ಶ್ರುತಿ ಹಾಗೂ ಸ್ಮೃತಿಗಳ ಆಧಾರವಿದೆ ಎಂದು 'ಅಥ' ಇತ್ಯಾದಿ ಭಾಷ್ಯವಾಕ್ಯವು ಸ್ಪಷ್ಟಪಡಿಸುತ್ತಿದೆ. ಪರಮಾತ್ಮನು ಪ್ರಕೃತಿಯ ಒಳಗಡೆ ಪ್ರವೇಶ ಮಾಡಿ ಮಹತತ್ತ್ವ ಮೊದಲಾದ ವಿವಿಧ ರೂಪದಿಂದ ಅದನ್ನು ಪರಿಣಾಮಗೊಳಿಸಿ, ಅವುಗಳ ಪ್ರೇರಕನಾಗಿ ಸ್ವತಃ ತಾನು ಅನೇಕ ರೂಪಗಳನ್ನು ಯಾವ ಕಾರಣದಿಂದ ಧರಿಸುತ್ತಾನೋ, ಆ ಕಾರಣದಿಂದ ಅವನು ಪ್ರಕೃತಿಶಬ್ದವಾಚ್ಯನಾಗಿದ್ದಾನೆ. ಯಾವ ಕಾರಣದಿಂದ ಪರಮಾತ್ಮನು ಪ್ರಕೃತಿಶಬ್ದವಾಚ್ಯನಾಗಿದ್ದಾನೋ, ಆದ್ದರಿಂದಲೇ ಜ್ಞಾನಿಜನರು ಆ ಪರಮಾತ್ಮನನ್ನು 'ಪ್ರಕೃತಿಃ' ಎಂದು ಕರೆಯುತ್ತಾರೆ. 'ಅವಿಕಾರೋऽಪಿ ಪರಮಃ' ಎಂಬ ಸ್ಮೃತಿವಾಕ್ಯವನ್ನೂ ಕೂಡ ಹೀಗೆಯೇ ವ್ಯಾಖ್ಯಾನ ಮಾಡಬೇಕು.

ಬ್ರಹ್ಮನು ಜಗದುಪಾದಾನ ಎಂಬ ಅಪವ್ಯಾಖ್ಯಾನದ ನಿರಾಕರಣೆ

तत्वप्रकाशिका – अपव्याख्यां दूषयति – न चेति ।। ब्रह्मण एव जगदुपादानत्वं 'प्रकृतिश्च' इत्यादि सूत्रैरुच्यते' इति यद् ब्रह्मणः परिणामित्वं सूत्रार्थतया कल्प्यते, न तद्युक्तम् । ब्रह्मणो जगदुपादानत्वे प्रमाणाभावादित्यर्थः।

ಈ ವಿಷಯದಲ್ಲಿ ಪರರು ಮಾಡಿರುವ ಅಪವ್ಯಾಖ್ಯಾನವನ್ನು 'ನಚ' ಇತ್ಯಾದಿ ಭಾಷ್ಯದಿಂದ ನಿರಾಕರಣೆ ಮಾಡುತ್ತಿದ್ದಾರೆ.

ಸ್ವತಃ ಬ್ರಹ್ಮನೇ ಈ ಜಗತ್ತಿಗೆ ಉಪಾದಾನಕಾರಣನಾಗಿದ್ದಾನೆ ಎಂಬುದಾಗಿ 'ಪ್ರಕೃತಿಶ್ಚ' ಇತ್ಯಾದಿ ಸೂತ್ರವು ಹೇಳುತ್ತಿದೆ ಎಂಬುದು ಪರರ ಅಪವ್ಯಾಖ್ಯಾನ. ಇದು ಯುಕ್ತವಲ್ಲ. ಬ್ರಹ್ಮನು ಜಗತ್ತಿಗೆ ಉಪಾದಾನಕಾರಣನಾಗಿದ್ದಾನೆಂಬ ಕಾರಣದಲ್ಲಿ ಯಾವುದೇ ಪ್ರಮಾಣಗಳಿರುವುದಿಲ್ಲ.

ಉಪಾದಾನಕಾರಣವೆನ್ನಲು ಪ್ರಮಾಣವಿಲ್ಲ

तत्वप्रकाशिका – न च 'एकविज्ञानेन सर्वविज्ञानं प्रतिज्ञाय, मृत्पिण्डादिदृष्टान्तोक्त्यैव तत्सिद्धिः' तस्या 'अन्यार्थम्' इति सूत्रव्याख्याने

सम्यग् व्याख्यातत्वात् । किं चात्र ब्रह्मणः परिणामित्वोक्तिरसङ्गतेव भवति। एतदध्यायस्याशेषशास्त्रस्य ब्रह्मणि समन्वयप्रतिपादनाय प्रवृत्तत्वात् ।

ಆಕ್ಷೇಪ - ಬ್ರಹ್ಮನು ಉಪಾದಾನಕಾರಣನಾಗಿದ್ದಾನೆಂಬ ವಿಷಯದಲ್ಲಿ 'ಏಕವಿಜ್ಞಾನೇನ' ಎಂಬ ಶ್ರುತಿಯೇ ಪ್ರಮಾಣವಾಗಿದೆ. 'ಏಕವಿಜ್ಞಾನೇನ ಸರ್ವಂ ವಿಜ್ಞಾತಂ ಭವತಿ' ಎಂಬ ಶ್ರುತಿಯು ಒಂದರ ಜ್ಞಾನದಿಂದ ಎಲ್ಲವನ್ನೂ ತಿಳಿದಂತಾಗುತ್ತಿದೆ ಎಂದು ಪ್ರತಿಜ್ಞೆ ಮಾಡುತ್ತಿದೆ. ಮುಂದೆ ಉಪಾದಾನ ಉಪಾದೇಯಗಳಾದ ಮೃತ್ಪಿಂಡ ಹಾಗೂ ಘಟದ ದೃಷ್ಟಾಂತವನ್ನೇ ನೀಡಲಾಗಿದೆ. ಈ ದೃಷ್ಟಾಂತದ ಮಾತಿನಿಂದ ಪ್ರತಿಜ್ಞಾವಾಕ್ಯಕ್ಕೆ ಬ್ರಹ್ಮೋಪಾದಾನತ್ವ ಪರವಾಗಿಯೇ ಅರ್ಥೈಸಬೇಕು.

ಸಮಾಧಾನ - ಈ ವ್ಯಾಖ್ಯಾನ ತಪ್ಪು. 'ಅನ್ಯಾರ್ಥಂ ತು ಜೈಮಿನಿಃ' ಎಂಬ ಸೂತ್ರವನ್ನು ವ್ಯಾಖ್ಯಾನ ಮಾಡುವಾಗ ಈ ಶ್ರುತಿಯ ನಿಜವಾದ ಅಭಿಪ್ರಾಯವನ್ನು ಸ್ಪಷ್ಟಪಡಿಸಿದ್ದೇವೆ. ಆದ್ದರಿಂದ 'ಏಕವಿಜ್ಞಾನೇನ' ಎಂಬ ಶ್ರುತಿಯು ಬ್ರಹ್ಮನು ಉಪಾದಾನಕಾರಣನಾಗಿದ್ದಾನೆಂಬ ಪ್ರತಿಪಾದನೆಗೆ ಸರ್ವಥಾ ಹೊರಟಿರುವುದಿಲ್ಲ. ಮತ್ತು ಬ್ರಹ್ಮನು ಜಗತ್ತಿಗೆ ಉಪಾದಾನಕಾರಣನಾಗಿದ್ದಾನೆಂದು ಹೇಳುವುದು ಈ ಸೂತ್ರದಲ್ಲಿ ಅಸಂಗತವಾಗಿದೆ. ಏಕೆಂದರೆ ಸಮಗ್ರ ಈ ಅಧ್ಯಾಯವು ಕೇವಲ ವೈದಿಕಶಬ್ದಗಳ ಸಮನ್ವಯಕ್ಕೋಸ್ಕರ ಹೊರಟಿದೆ. ಹೀಗಿರುವಾಗ ಉಪಾದಾನಕಾರಣತ್ವದ ನಿರೂಪಣೆ ಮಾಡುವುದು ಅಪ್ರಸ್ತುತ.

ಸಾಂಖ್ಯಮತನಿರಾಕರಣೆಗಾಗಿ ಈ ಸೂತ್ರ ಹೊರಟಿದೆ ಎಂದು ಪೂರ್ವಪಕ್ಷ

तत्वप्रकाशिका – स्यादेतत् । श्रुतीनां प्रधानपरत्वं वदति सांख्ये निरस्ते कथं प्रधानाभावे जगदुत्पत्तिः ? इति शङ्का भवत्येव । तन्निरासाय ब्रह्मणो जगदुपादानत्वोक्तिः सङ्गतेति ।

ಆಕ್ಷೇಪ - ಸಮಸ್ತ ಶ್ರುತಿಗಳು ಪ್ರಕೃತಿಯೇ ಜಗತ್ತಿಗೆ ಕಾರಣವೆಂದು ಹೇಳುತ್ತಿವೆ. ಹೀಗೆ ಸಾಂಖ್ಯರು ಸಮರ್ಥಿಸುತ್ತಾರೆ. ಈ ಸಾಂಖ್ಯಮತವನ್ನು ಆದ್ವೈತಿಗಳು ನಿರಾಕರಣೆ ಮಾಡುತ್ತಾರೆ. ಜಗತ್ತಿಗೆ ಪ್ರಕೃತಿಯು ಉಪಾದಾನಕಾರಣವಲ್ಲ. ಬ್ರಹ್ಮನೇ ಜಗತ್ತಿಗೆ ಕಾರಣನಾಗಿದ್ದಾನೆಂದು ಹೇಳಿದರೆ ಪುನಃ ಸಾಂಖ್ಯರು ಪ್ರಶ್ನಿಸುತ್ತಾರೆ. ಪ್ರಕೃತಿಯಿಲ್ಲದೇ ಜಗತ್ತು ಹುಟ್ಟಲು ಹೇಗೆ ಸಾಧ್ಯ ? ಎಂದು.

ಈ ಆಶಂಕೆಯನ್ನು ನಿರಾಕರಣ ಮಾಡುವುದಕ್ಕಾಗಿ ಬ್ರಹ್ಮನಿಗೆ ಜಗದುಪಾದಾನಕಾರಣತ್ವನ್ನು ಸಮರ್ಥಿಸಲು ಪ್ರಕೃತಿ ಇತ್ಯಾದಿ ಸೂತ್ರಗಳು ಹೊರಟಿರುತ್ತವೆ. ಹೀಗಿರುವಾಗ ಪ್ರಕೃತಿಶ್ಚ ಇತ್ಯಾದಿ ಸೂತ್ರಕ್ಕೆ ಅಸಾಂಗತ್ಯ ಹೇಗೆ ಬರುತ್ತದೆ ?

ಅದ್ವೈತಮತದ ನಿರಾಕರಣೆ

तत्वप्रकाशिका – मैवम् । किं प्रधानस्य शास्त्रप्रतिपाद्यतामात्रं प्राङ् निषिद्धं तत्स्वरूपमेव वा ?

ಸಮಾಧಾನ - ಇದು ತಪ್ಪು. ಏಕೆಂದರೆ ಅದ್ವೈತಿಗಳನ್ನು ಕುರಿತು ನಾವು ಪ್ರಶ್ನಿಸುತ್ತೇವೆ - ಹಿಂದೆ ನೀವು ಪ್ರಧಾನಕ್ಕೆ ಶಾಸ್ತ್ರಪ್ರತಿಪಾದ್ಯವನ್ನಷ್ಟೇ ನಿರಾಕರಿಸಿದ್ದೀರೋ ಅಥವಾ 'ಪ್ರಧಾನ' ಎಂಬ ಪದಾರ್ಥವೇ ಇಲ್ಲವೆಂದು ನಿರಾಕರಣೆ ಮಾಡಿದ್ದೀರೋ?

ಅದ್ವೈತಿಗಳಿಗೆ ಈ ಅಧಿಕರಣವು ಅಪ್ರಸ್ತುತ

तत्वप्रकाशिका – आद्ये – 'का ब्रह्मणो जगदुपादानात्वोक्तेः सङ्गतिः ? न ह्याकाशादिशब्दानां औपनिषदानां ब्रह्मणि समन्वयेऽभिहिते, कथं तर्हि जगदवकाशः? इति शङ्कोत्पन्ना नापि सूत्रकृता पराकृता ।

ಮೊದಲನೆಯ ಪಕ್ಷದಲ್ಲಿ ಬ್ರಹ್ಮನು ಜಗತ್ತಿಗೆ ಉಪಾದಾನಕಾರಣವೆಂದು ಹೇಳಿದರೆ ಸಂಗತಿಯು ಹೇಗೆ ದೊರೆಯುತ್ತದೆ. ಏಕೆಂದರೆ ಉಪನಿಷತ್ತಿನಲ್ಲಿ ಪ್ರಸ್ತುತವಾಗಿರುವ ಆಕಾಶ ಮೊದಲಾದ ಶಬ್ದಗಳನ್ನು ಬ್ರಹ್ಮನಲ್ಲಿ ಸಮನ್ವಯ ಮಾಡಲಾಯಿತು. ಹಾಗಾದರೆ ಜಗತ್ತಿನಲ್ಲಿ ಹೇಗೆ ಅವಕಾಶವಿದೆ ? ಎಂಬ ಶಂಕೆ ಹುಟ್ಟುತ್ತದೆ. ಇದನ್ನು ಸೂತ್ರಕಾರರು ಪರಿಹರಿಸಿಯೇ ಇಲ್ಲ.

ಪ್ರಕೃತಿ ಪದಾರ್ಥದ ನಿರಾಕರಣೆ ಇಲ್ಲಿ ಅಸಂಗತ

तत्वप्रकाशिका – न द्वितीयः । तदुक्तेरेव अत्रासङ्गतत्वात्, ब्रह्मणो जगत्कारणत्वसिध्यर्थं तदुक्तिः, इति चेन्न, निमित्तत्वेन तदुपपत्तेः ।

ಎರಡನೆಯ ಪಕ್ಷವೂ ಕೂಡ ತಪ್ಪು. ಏಕೆಂದರೆ ಈ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ ಪ್ರಕೃತಿ ಎಂಬ ಪದಾರ್ಥವೇ ಇರುವುದಿಲ್ಲವೆಂದು ಸಮರ್ಥಿಸುವುದು ಅಸಂಗತವಾಗುತ್ತದೆ. ಇನ್ನು

ಬ್ರಹ್ಮನಿಗೆ ಜಗದುಪಾದಾನತ್ವವನ್ನು ಸಮರ್ಥಿಸಲು ಪ್ರಧಾನ ಎಂಬ ಪದಾರ್ಥದ ನಿರಾಕರಣೆ ಸಂಗತವಾಗುತ್ತದೆಂದು ವಾದಿಸುವುದೂ ಸರಿಯಲ್ಲ. ಏಕೆಂದರೆ ಪ್ರಧಾನವನ್ನು ನಿರಾಕರಣೆ ಮಾಡದಿದ್ದರೂ ಬ್ರಹ್ಮನು ಜಗತ್ತಿಗೆ ನಿಮಿತ್ತಕಾರಣನಾಗಿದ್ದಾನೆಂದು ಸಮರ್ಥಿಸಿ ಜಗತ್ಕಾರಣತ್ವವನ್ನು ಸಮರ್ಥಿಸಲು ಬರುತ್ತದೆ.

ಪ್ರಕೃತಿಯ ನಿರಾಕರಣೆಗೆ ಕಾರಣ

तत्वप्रकाशिका – अथापि स्यात् – 'प्रधानप्रतिपादकवाक्यस्य ब्रह्मणि समन्वयेऽभिहिते तत्प्रमाणाभावेनाऽभावः प्राप्तः' इति ।

ಆಕ್ಷೇಪ - ಪ್ರಧಾನವನ್ನು ಯಾವ ಶ್ರುತಿಯು ಹೇಳುತ್ತದೋ ಅದನ್ನು ಬ್ರಹ್ಮನಲ್ಲಿ ಸಮನ್ವಯ ಮಾಡಿದಾಗ, ಪ್ರಧಾನ ಎಂಬ ಪದಾರ್ಥ ಇಲ್ಲವೆಂದು ಅರ್ಥಾತ್ ಸಿದ್ಧವಾಗುತ್ತದೆ. ಹೀಗೆ ಹೇಳಿದರೆ ಏನು ತಪ್ಪು ?

ಅದ್ವೈತಿಗಳ ಸೂತ್ರ ವ್ಯಾಖ್ಯಾನ ಅಸಾಧು

तत्वप्रकाशिका – मैवम् । तथाऽऽकाशाद्यभावप्राप्तेरपि प्रसङ्गात् । प्रमाणान्तरेण तत्सिद्धिरिति चेत् सममत्रापीत्यलम् ।।४।।

ಪರಿಹಾರ - ಇದು ಸರಿಯಲ್ಲ. ಹೀಗೆ ಹೇಳುವುದಾದರೆ, ಆಕಾಶಾದಿಗಳೇ ಇಲ್ಲವೆಂದಾಗಬೇಕಾದೀತು. ಆಕಾಶ ಮೊದಲಾದ ಶಬ್ದಗಳನ್ನು ಬ್ರಹ್ಮನಲ್ಲಿ ಸಮನ್ವಯ ಮಾಡಿದಾಗ ಆಕಾಶ, ಪೃಥಿವೀ ಮೊದಲಾದ ಪದಾರ್ಥಗಳೂ ಕೂಡ ಇಲ್ಲವೆಂದು ನಿಮ್ಮ ಪ್ರಕಾರ ಹೇಳಿದಂತಾಗುತ್ತದೆ. ಬೇರೆ ಪ್ರಮಾಣದಿಂದ ಆಕಾಶಾದಿಗಳು ಇರುತ್ತವೆಂದು ವಾದಿಸಿದರೆ ಪ್ರಕೃತಿಯೂ ಕೂಡ ಇರುತ್ತದೆಂದು ಬೇರೆ ಪ್ರಮಾಣದಿಂದಲೇ ಸಿದ್ಧವಾಗುತ್ತದೆ. ಆದ್ದರಿಂದ ಅದ್ವೈತಿಗಳ ಸೂತ್ರವ್ಯಾಖ್ಯಾನ ಅತ್ಯಂತ ಅಸಾಧುವಾಗಿದೆ.

ಭಾವದೀಪ

ಗುಣಪೂರ್ಣತ್ವದ ಸಿದ್ಧಿಗಾಗಿ ಪ್ರಕೃತಿ ಶಬ್ದದ ಸಮನ್ವಯ

नहीति ।। गुणपूर्त्यर्थत्वात् समन्वयस्येति भावः । भाष्ये चशब्दोऽवधारण इति भावेन पञ्चम्या योग्यसाध्येनान्वयमाह – नेत्यादिना।।

ಪರಮಾತ್ಮನಲ್ಲಿ ಗುಣಪೂರ್ಣತ್ವದ ಸಿದ್ಧಿಗೋಸ್ಕರ ಶಬ್ದಗಳ ಸಮನ್ವಯವನ್ನು ಸಿದ್ಧಾಂತದಲ್ಲಿ ಮಾಡಲಾಗುತ್ತದೆ. ಪ್ರಕೃತಿಶಬ್ದವನ್ನು ಕೇವಲ ಸಂಕೇತವೆಂದು ವಿವಕ್ಷಿಸಿದರೆ, ಗುಣಪೂರ್ಣತ್ವವು ಸಿದ್ಧವಾಗುವುದಿಲ್ಲವೆಂಬುದು 'ನಹಿ' ಇತ್ಯಾದಿ ವಾಕ್ಯದ ಅಭಿಪ್ರಾಯ.

ಭಾಷ್ಯದಲ್ಲಿರುವ ಚಶಬ್ದವು ಅವಧಾರಣಾರ್ಥದಲ್ಲಿದೆ ಎಂಬ ಅಭಿಪ್ರಾಯದಿಂದ ಪಂಚಮೀ ವಿಭಕ್ತಿಯಿರುವುದರಿಂದ ಯೋಗ್ಯವಾದ ಸಾಧ್ಯದ ಜೊತೆಗೆ ಅನ್ವಯವನ್ನು 'ನ ಪರಮಾತ್ಮನಿ' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ.

'परिणामात्' ಎಂಬಲ್ಲಿರುವ ಪಂಚಮಿಯ ಬಗ್ಗೆ

भावदीपः – (प्रकृति) प्रवेशावैयर्थ्यं वदन् शब्दार्थमाह – प्रकृतेरिति ।। सूत्रे परिणामादिति पञ्चमी ल्यब्लोपनिमित्तेति भावेन भाष्ये परिणाम्येत्युक्तम्।

ಪರಮಾತ್ಮನು ಪ್ರಕೃತಿಯಲ್ಲಿ ಪ್ರವೇಶ ಮಾಡಿರುವುದು ವ್ಯರ್ಥವಲ್ಲ ಎಂಬುದನ್ನು ಸಮರ್ಥಿಸುವವರಾಗಿ, ಪ್ರಕೃತಿ ಶಬ್ದದ ಅರ್ಥವನ್ನು ಪ್ರಕೃತಿ ಇತ್ಯಾದಿ ಟೀಕೆಯಿಂದ ಹೇಳುತ್ತಿದ್ದಾರೆ.

ಸೂತ್ರದಲ್ಲಿರುವ 'ಪರಿಣಾಮಾತ್' ಎಂಬ ಪದದ ಪಂಚಮೀ ವಿಭಕ್ತಿಯು ಲ್ಯಬ್ಲೋಪನಿಮಿತ್ತಾರ್ಥದಲ್ಲಿ ಇರುತ್ತದೆ. ಈ ಅಭಿಪ್ರಾಯದಿಂದ ಭಾಷ್ಯದಲ್ಲಿ 'ಪರಿಣಾಮ್ಯ' ಎಂಬ ಪದವನ್ನು ಉಪಯೋಗಿಸಿದ್ದಾರೆ.

'क्त्वा' ಪ್ರತ್ಯಯದ ಅಭಿಪ್ರಾಯ

भावदीपः – तत्र ल्यबादेशस्थानिनः पूर्वकालार्थत्तवाप्रत्ययस्यार्थमाह – प्रकृतिपरिणामादनन्तरमिति ।।

ಲ್ಯಬಾದೇಶದ ಸ್ಥಾನಿಯು ಪೂರ್ವಕಾಲವನ್ನು ಹೇಳುವ ಕ್ತ್ವಾ ಪ್ರತ್ಯಯದ ಅರ್ಥದಲ್ಲಿರುತ್ತದೆಂಬುದನ್ನು 'ಪ್ರಕೃತಿಪರಿಣಾಮಾದನಂತರಮ್' ಎಂಬ ಟೀಕಾಮಾತಿನಿಂದ ಹೇಳಿರುತ್ತಾರೆ.

ಆತ್ಮಕೃತಿಯು ಸಾರ್ಥಕ

भावदीपः – आत्मकृतिर्व्यर्थेत्यतः तत्र परिणामेषु स्थित्वेति भाष्यम् । तदर्थमाह – महदादीति ।।

ಆತ್ಮಕೃತಿಯು ವ್ಯರ್ಥವಲ್ಲವೇ? ಎಂಬ ಪ್ರಶ್ನೆಗೆ 'तत्र परिणामेषु स्थित्वा' ಇತ್ಯಾದಿ ಭಾಷ್ಯವು ಹೊರಟಿದೆ. ಅದರ ಅರ್ಥವನ್ನೇ ಟೀಕೆಯಲ್ಲಿ 'महदादि' ಇತ್ಯಾದಿ ವಾಕ್ಯದಿಂದ ಹೇಳಿರುತ್ತಾರೆ. ಪರಮಾತ್ಮನು ಮಹತ್ತತ್ವಾದಿಗಳಲ್ಲಿ ನೆಲೆಸಿ ಅವುಗಳನ್ನು ಪ್ರೇರಣೆ ಮಾಡಲು ಅನೇಕ ರೂಪಗಳನ್ನು ತಾಳುತ್ತಾನೆ. ಆದ್ದರಿಂದ ಆತ್ಮಕೃತಿಯು ಸಾರ್ಥಕವೆಂದು ತಿಳಿಯಬೇಕು.

'अथ ह्येष आत्मा' ಎಂಬ ಶ್ರುತಿಯ ಬಗ್ಗೆ

भावदीपः – श्रुतौ शेषमाह – तामित्यादिना ।। द्विरुक्तेरपौनरुक्त्यायाऽऽभिदमाह – तस्मादिति ।। एवमिति ।। अनुप्रविश्येत्यनन्तरं तामित्यादिशेषो ध्येय इत्यर्थः ।

'अथ ह्येष आत्मा' ಇತ್ಯಾದಿ ಶ್ರುತಿಯಲ್ಲಿ ಶೇಷಪೂರಣ ಮಾಡಿಕೊಳ್ಳಬೇಕಾದುದನ್ನು 'ತಾಮ್' ಇತ್ಯಾದಿ ಟೀಕೆಯಲ್ಲಿ ಹೇಳಿರುತ್ತಾರೆ. ಶ್ರುತಿಯಲ್ಲಿ 'तस्मात् प्रकृतिः तस्मात् प्रकृतिः' ಎಂಬುದಾಗಿ ಎರಡು ಬಾರಿ ಪ್ರಕೃತಿ ಶಬ್ದವನ್ನು ಹೇಳಿರುತ್ತಾರೆ. ಆದರೂ ಕೂಡ ಪುನರುಕ್ತಿ ಬರುವುದಿಲ್ಲ. ಏಕೆಂದರೆ ಅರ್ಥವ್ಯತ್ಯಾಸವಿದೆ ಎಂಬುದನ್ನು ಟೀಕೆಯಲ್ಲಿ 'तस्मात्' ಇತ್ಯಾದಿಯಾಗಿ ನಿರೂಪಿಸಿದ್ದಾರೆ. 'अनुप्रविश्य' ಎಂಬುದರ ಅನಂತರ 'ತಾಮ್' ಇತ್ಯಾದಿ ವಾಕ್ಯವನ್ನು ಶೇಷಪೂರಣ ಮಾಡಿಕೊಳ್ಳಬೇಕೆಂದು ತಿಳಿಯಬೇಕು.

'नच अन्यत्कल्प्यम्' ಎಂಬ ಭಾಷ್ಯವಾಕ್ಯದ ಸ್ವಾರಸ್ಯ

भावदीपः – अप्रतीतेराह – अपव्याख्यामिति ।। अप्रामाणिकत्वमसङ्गतेरुपलक्षणमिति भावेनाह – किं चेति ।।

ಭಾಷ್ಯದಲ್ಲಿ 'नच अन्यत्कल्प्यम्' ಎಂಬ ವಾಕ್ಯವು ಏಕೆ ಹೊರಟಿದೆ ಎಂಬುದು ಸ್ಪಷ್ಟವಾಗಿ ತಿಳಿಯುವುದಿಲ್ಲ. ಅದಕ್ಕಾಗಿ ಟೀಕೆಯಲ್ಲಿ 'अपव्याख्यां दूषयति' ಎಂಬುದಾಗಿ ಪೀಠಿಕೆಯನ್ನು ನೀಡಿರುತ್ತಾರೆ. ಅಪ್ರಾಮಾಣಿಕತ್ವವು ಅಸಂಗತಿಗೆ ಉಪಲಕ್ಷಣವೆಂಬ ಅಭಿಪ್ರಾಯದಿಂದ 'किंच' ಇತ್ಯಾದಿ ಟೀಕಾವಾಕ್ಯವು ಹೊರಟಿದೆ.

ಪ್ರಕೃತಿಯ ಸಮರ್ಥನೆಯನ್ನು ಸೂತ್ರಕಾರರೇ ಮಾಡಿದ್ದಾರೆ

ಭಾವದೀಪಃ – न चाऽव्यक्तस्वरूपं भगवता निषिद्धम् । भारतादौ साधितत्वादिति द्वादशगीताभाष्योक्तमिह सङ्गमयितुं शङ्कामाह – स्यादेतदिति।।

'न चाऽव्यक्तस्वरूपं भगवता निषिद्धम् भारतादौ साधितत्वात्' ಅವ್ಯಕ್ತಸ್ವರೂಪವನ್ನು ಸೂತ್ರಕಾರರು ನಿಷೇಧ ಮಾಡಿರುವುದಿಲ್ಲ. ಮಹಾಭಾರತಾದಿಗಳಲ್ಲಿ ಪ್ರಕೃತಿಯನ್ನು ಸಾಧನೆ ಮಾಡಿದ್ದಾರೆ. ಹೀಗೆ ದ್ವಾದಶಾಧ್ಯಾಯದ ಗೀತಾಭಾಷ್ಯದಲ್ಲಿ ಶ್ರೀಮದಾಚಾರ್ಯರು ಹೇಳಿರುತ್ತಾರೆ. ಆ ವಾಕ್ಯದ ಸಂಗತಿಯನ್ನು ಪ್ರಕೃತ ತಿಳಿಸುವುದಕ್ಕಾಗಿ 'स्यादेतत्' ಇತ್ಯಾದಿಯಾಗಿ ಆಶಂಕಿಸುತ್ತಿದ್ದಾರೆ.

ಪರಕೀಯರ ಭಾಷ್ಯದಲ್ಲಿ ಏನಿದೆ?

ಭಾವದೀಪಃ – वदतीति सप्तम्यन्तम् ।। निरस्त इति ।। आनुमानिकाद्यधिकरणत्रयेण परभाष्योक्तदिशा निरस्त इत्यर्थः ।

'ವದತಿ' ಎಂಬುದು ಸಪ್ತಮ್ಯಂತವಾದ ಶಬ್ದವೆಂದು ತಿಳಿಯಬೇಕು. 'ನಿರಸ್ತೇ ಇತಿ' ಎಂದರೆ ಆನುಮಾನಿಕಾಧಿಕರಣ ಮೊದಲಾದ ಮೂರು ಅಧಿಕರಣಗಳಿಂದ ಪರಕೀಯರ ಭಾಷ್ಯದಲ್ಲಿ ಶ್ರುತಿಯ ಪ್ರಧಾನಪರತ್ವವನ್ನು ನಿರಾಕರಣೆ ಮಾಡಲಾಗಿದೆ ಎಂದರ್ಥ.

ಪ್ರಕೃತಿಯ ಸ್ವರೂಪವನ್ನೇ ನಿಷೇಧ ಮಾಡುವರು

ಭಾವದೀಪಃ – पराकृता अवकाशाभावशङ्केत्यनुकर्षः ।। तदुक्तेरेव ।। प्रधानस्वरूपनिषधोक्तेरेव इत्यर्थः ।।

'नापि सूत्रकृता पराकृता' ಎಂಬುದಾಗಿ ಟೀಕೆಯಲ್ಲಿ ಹೇಳಿರುತ್ತಾರೆ. ಅವಕಾಶಾಭಾವಶಂಕಾ' ಎಂಬುದನ್ನು ಇಲ್ಲಿ ಅನುಕರ್ಷ ಮಾಡಿಕೊಳ್ಳಬೇಕು. ಆವಾಗ ಆಕಾಶವೇ ಇರುವುದಿಲ್ಲ ಎಂಬ ಶಂಕೆಯನ್ನು ಸೂತ್ರಕಾರರು ನಿರಾಕರಣೆ ಮಾಡಿರುವುದಿಲ್ಲ ಎಂಬರ್ಥವನ್ನು ಹೇಳಿದಂತಾಗುತ್ತದೆ. 'ತದುಕ್ತೇರೇವ' ಎಂದು ಟೀಕೆಯಲ್ಲಿದೆ. ಪ್ರಧಾನಸ್ವರೂಪದ ನಿಷೇಧವನ್ನು ಹೇಳಿರುವುದರಿಂದಲೇ ಎಂದು ಇದರ ಅರ್ಥ.

ಜಗದುಪಾದಾನತ್ವವನ್ನು ಯೋಜನೆ ಮಾಡಬೇಕು

ಭಾವದೀಪಃ – जगत्काणत्वेति ।। जगदुपादानत्वेनेति योज्यम् ।। तदिति।। ब्रह्मणो जगत्कारणत्वोपपत्तेः इत्यर्थः ।

'ಜಗತ್ಕಾರಣತ್ವಸಿದ್ಧ್ಯರ್ಥ೦' ಎಂಬಲ್ಲಿ 'ಜಗದುಪಾದಾನತ್ವೇನ' ಎಂಬುದನ್ನು ಯೋಜನೆ ಮಾಡಿಕೊಳ್ಳಬೇಕು. 'ತತ್' ಎಂದರೆ ಬ್ರಹ್ಮನಿಗೆ ಜಗತ್ಕಾರಣತ್ವವು ಉಪಪನ್ನವಾಗುತ್ತದೆ ಎಂದರ್ಥ.

ಅದ್ವೈತಿಗಳ ವ್ಯಾಖ್ಯಾನ ಅಪ್ರಾಮಾಣಿಕ

भावदीपः – एतेन न चेत्यादिभाष्यं ब्रह्मणो जगत्कारणत्वसिद्ध्यर्थं प्रधानस्वरूपमेव प्राक्प्रकृतं सूत्रकृता निषिध्यत इति यत्कल्प्यते तन्न युक्तम् । जगत्कारणत्वस्य अन्यथोपपत्त्या प्रधानस्वरूपनिरासस्याऽप्रामाणिकत्वादित्यपि व्याख्यातं भवति ।

ಹೀಗೆ ಹೇಳಿದ್ದರಿಂದ 'ನಚ' ಇತ್ಯಾದಿ ಭಾಷ್ಯವನ್ನು ಹೀಗೂ ವ್ಯಾಖ್ಯಾನ ಮಾಡಿದಂತಾಗುತ್ತದೆ - ಬ್ರಹ್ಮನಿಗೆ ಜಗತ್ಕಾರಣತ್ವದ ಸಿದ್ಧಿಗೋಸ್ಕರ ಹಿಂದೆ ಪ್ರಕೃತವಾದ ಪ್ರಧಾನಸ್ವರೂಪವನ್ನೇ ಸೂತ್ರಕಾರರು ನಿಷೇಧ ಮಾಡುತ್ತಿದ್ದಾರೆ ಎಂಬ ಪರಕೀಯರ ಕಲ್ಪನೆಯು ಅಯುಕ್ತವಾಗಿದೆ. ಏಕೆಂದರೆ ಜಗತ್ಕಾರಣತ್ವವು ನಿಮಿತ್ತಕಾರಣದಿಂದಲೂ ಉಪಪನ್ನವಾಗುತ್ತದೆ. ಮತ್ತು ಪ್ರಧಾನಸ್ವರೂಪವನ್ನು ನಿರಾಕರಣೆ ಮಾಡುವುದು ಅಪ್ರಾಮಾಣಿಕವೂ ಆಗಿದೆ ಎಂದು.

'ಅಥಾಪಿ ಸ್ಯಾತ್' ಎಂಬ ಟೀಕೆಗೆ ವ್ಯಾಖ್ಯಾನ

भावदीपः – तथा प्रधानस्याऽप्रामाणिकत्वाद् ब्रह्मैवोपादानमित्येत्सूत्रार्थतया यत्कल्प्यते न तद्युक्तम् । प्रधानाभावस्याऽप्रमाणिकत्वादित्यपि भाष्यार्थं मत्त्वा शङ्कान्तरं निराह – **अथापि स्यादिति ।।**

ಇದರಂತೆ ಪ್ರಧಾನವು ಅಪ್ರಾಮಾಣಿಕವಾಗಿರುವುದರಿಂದ ಬ್ರಹ್ಮನೇ ಉಪಾದಾನಕಾರಣನಾಗಿದ್ದಾನೆ ಎಂಬ ಪರಕೀಯರ ವ್ಯಾಖ್ಯಾನವು ಅಯುಕ್ತವಾಗಿದೆ ಎಂದು ತಿಳಿಸಿದಂತಾಯಿತು. ಏಕೆಂದರೆ ಪ್ರಧಾನವು ಇರುವುದಿಲ್ಲ ಎಂಬುದೇ ಅಪ್ರಾಮಾಣಿಕ. ಇದೂ ಕೂಡ ಭಾಷ್ಯದ ಅಭಿಪ್ರಾಯವೇ ಆಗಿದೆ ಎಂಬ ವಿವಕ್ಷೆಯಿಂದ ಮತ್ತೊಂದು ಶಂಕೆಯನ್ನು ನಿರಾಕರಣೆ ಮಾಡಲು 'ಅಥಾಪಿ ಸ್ಯಾತ್' ಇತ್ಯಾದಿ ಟೀಕಾವಾಕ್ಯವು ಹೊರಟಿದೆ.

ಬ್ರಹ್ಮಸೂತ್ರ

'ಯೋನಿಶ್ಚ ಹಿ ಗೀಯತೇ' ಎಂಬ ಸೂತ್ರಕ್ಕೆ ವ್ಯಾಖ್ಯಾನ

ಬ್ರಹ್ಮಸೂತ್ರಮ್ – ।। योनिश्च हि गीयते ।।೯।।

ಸೂತ್ರಾರ್ಥ - 'ಯದ್ಭೂತಂ ಯೋನಿಂ' ಎಂಬ ಶ್ರುತಿಯಲ್ಲಿ ತನ್ನ ದೇಹದಲ್ಲಿ ಬ್ರಹ್ಮಾದಿ ಪುತ್ರರಿಗೆ ಉತ್ಪಾದಕನಾಗಿದ್ದಾನೆಂದು ಹೇಳಲಾಗಿದೆ. ಆದ್ದರಿಂದ ಮತ್ತೊಬ್ಬರ ವಿರೋಧವಿಲ್ಲದೇ ಸ್ವದೇಹದಿಂದ ಸಂತತಿ ಉತ್ಪತ್ತಿಗೆ ಕಾರಣನಾಗಿರುವುದರಿಂದ ಪ್ರಕೃತಿಶಬ್ದದಿಂದ ವಾಚ್ಯನಾಗಿದ್ದಾನೆ.

ಅರ್ಥ -- ಹಿ = ಯಾವ ಕಾರಣದಿಂದ, ಈಶ್ವರನು 'ಯದ್ಭೂತಂ ಯೋನಿಂ' ಇತ್ಯಾದಿ ಶ್ರುತಿಯಿಂದ ಯೋನಿಃ = ತನ್ನ ದೇಹದಿಂದಲೇ ಉತ್ಪಾದಕನೆಂದು. ಗೀಯತೇ = ಪ್ರಸಿದ್ಧನಾಗಿದ್ದಾನೋ, ಆ ಕಾರಣದಿಂದ ಪ್ರಕೃತಿ ಮೊದಲಾದ ಸ್ತ್ರೀಲಿಂಗಶಬ್ದಗಳಿಂದ ಪ್ರತಿಪಾದ್ಯನಾಗಿದ್ದಾನೆಂದು ಸಿದ್ಧವಾಯಿತು.

॥ ಶ್ರೀವೇದವ್ಯಾಸದೇವರಿಂದ ರಚಿಸಲ್ಪಟ್ಟ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ
ಪ್ರಕೃತ್ಯಧಿಕರಣವು ಸಮಾಪ್ತವಾಯಿತು ॥

ಬ್ರಹ್ಮಸೂತ್ರಭಾಷ್ಯ

ಪುರುಷನಲ್ಲಿ ಸ್ತ್ರೀಲಿಂಗಶಬ್ದವನ್ನು ಪ್ರಯೋಗಿಸಬಹುದೇ ?

ಬ್ರಹ್ಮಸೂತ್ರಭಾಷ್ಯಮ್ – ।। योनिश्च हि गीयते ।।೨೮।।

अव्यवधानेनोत्पत्तिद्वारत्वं (च) प्रकृतित्वम् । तच्चास्यैव हि गीयते 'यद्भूतयोनिं परिपश्यन्ति धीराः' (मुं उ. १-१-६) इति ।

ಅನುವಾದ - ಮತ್ತೊಬ್ಬರ ವ್ಯವಧಾನವಿಲ್ಲದೇ ತನ್ನ ದೇಹದಿಂದಲೇ ಉತ್ಪತ್ತಿಗೆ ಕಾರಣವಾಗುವುದೇ, ಸ್ತ್ರೀತ್ವ. ಇಂತಹ ಸ್ತ್ರೀತ್ವವಿಷ್ಣುವಿನಲ್ಲಿ ಹೇಳಿದೆ. ಪ್ರಳಯಕಾಲದಲ್ಲಿ ತನ್ನ ಉದರದಲ್ಲಿದ್ದ ಚತುರ್ಮುಖಾದಿ ಚೇತನ ವರ್ಗವನ್ನು ಹುಟ್ಟಿಸಿದ ಇವನನ್ನು ಜ್ಞಾನಿಗಳು ನೋಡುತ್ತಾರೆ. ಆದ್ದರಿಂದ ಅವ್ಯವಧಾನೇನ ಸಂತಾನಕರ್ತೃತ್ವಪರಮಾತ್ಮನಲ್ಲಿ ಇರುವುದರಿಂದ ಪ್ರಕೃತಿ ಎನಿಸುತ್ತಾನೆ.

ಪ್ರತಿಪದಾರ್ಥ -- ಪ್ರಕೃತಿಶಬ್ದದಿಂದ ಪರಮಾತ್ಮನು ವಾಚ್ಯನಾಗುವುದಿಲ್ಲ. ಏಕೆಂದರೆ ಪ್ರಕೃತಿಶಬ್ದವು ಸ್ತ್ರೀಲಿಂಗವಾಗಿದೆ. ಪರಮಾತ್ಮನಾದರೂ ಪುರುಷನಾಗಿದ್ದಾನೆ. ಪುರುಷನಲ್ಲಿ ಸ್ತ್ರೀಲಿಂಗ ಶಬ್ದವು ಹೇಗೆ ಬರುತ್ತದೆ? ಈ ಆಶಂಕೆಯನ್ನು ಪರಿಹರಿಸಲು ಮುಂದಿನ ಸೂತ್ರ ಹೊರಟಿದೆ. –

ಅವ್ಯವಧಾನೇನ = ವ್ಯವಧಾನವಿಲ್ಲದೇ ತನ್ನ ದೇಹದಿಂದ, ಉತ್ಪತ್ತಿ ದ್ವಾರತ್ವಂ = ಸಂತಾನದ ಉತ್ಪತ್ತಿಗೆ ಕಾರಣವಾಗುವುದೇ, ಪ್ರಕೃತಿತ್ವಂ = ಸ್ತ್ರೀತ್ವ ಎನಿಸುತ್ತದೆ. ತಚ್ಚ = ಇಂತಹ ಸ್ತ್ರೀತ್ವವು, ಅಸ್ಯೈವ = ಈ ಪರಮಾತ್ಮನಲ್ಲಿ, ಗೀಯತೇ ಹಿ = ಹೇಳಲ್ಪಟ್ಟಿದೆಯಷ್ಟೇ. ಧೀರಾ = ಜ್ಞಾನಿಗಳು, ಯದ್ಭೂತಯೋನಿಂ = ಯಾವ ಭೂತಗಳ ಜನನಕಾರಣವನ್ನಾಗಿ ಶ್ರೀಹರಿಯನ್ನು, ಪರಿಪಶ್ಯಂತಿ = ವಿಚಾರರೂಪವಾಗಿ ಸವಿಯುತ್ತಾರೋ, ಇತಿ = ಹೀಗೆ ಮುಂಡಕೋಪನಿಷತ್ತು ಹೇಳಿದೆ.

ಪರಮಾತ್ಮನು ನೇರವಾಗಿಯೇ ಸಂತಾನೋತ್ಪತ್ತಿಗೆ ಕಾರಣನು

ಬ್ರಹ್ಮಸೂತ್ರಭಾಷ್ಯಮ್ – 'ವ್ಯವಧಾನೇನ ಸೂತಿಸ್ತು ಪುಂಸ್ತ್ವಂ ವಿದ್ವದ್ಭಿರುಚ್ಯತೇ ।
ಸೂತಿಮವ್ಯವಧಾನೇನ ಸ್ತ್ರೀತ್ವಮಾಹುರ್ಮನೀಷಿಣಃ ।।
ಉಭಯಾತ್ಮಕಸೂತಿತ್ವಾತ್ ವಾಸುದೇವಃ ಪರಃ ಪುಮಾನ್ ।
ಪ್ರಕೃತಿಃ ಪುರುಷಶ್ಚೇತಿ ಶಬ್ದೈರೇಕೋऽಭಿಧೀಯತೇ' ।। ಇತಿ ಬ್ರಹ್ಮಾಣ್ಡೇ ।।೯।।

।। ಇತಿ ಶ್ರೀಮದಾನನ್ದತೀರ್ಥಭಗವತ್ಪಾದಾಚಾರ್ಯವಿರಚಿತೇ
ಬ್ರಹ್ಮಸೂತ್ರಭಾಷ್ಯೇ ಪ್ರಕೃತ್ಯಧಿಕರಣಮ್ ।। ೬ ।।

ಅನುವಾದ - ಸ್ತ್ರೀಯ ಮೂಲಕ ಸಂತಾನೋತ್ಪತ್ತಿಗೆ ಕಾರಣವಾಗುವುದೇ ಪುಂಸ್ತ್ವ ಎಂದು ಜ್ಞಾನಿಜನರು ಹೇಳುತ್ತಾರೆ. ನೇರವಾಗಿ ಸಂತಾನೋತ್ಪತ್ತಿಗೆ ಕಾರಣವಾಗುವುದೇ ಪ್ರಕೃತಿತ್ವ ಎಂಬುದು ಸಿದ್ಧವಾದ ವಿಚಾರ. ಪರಮಾತ್ಮನು ಎರಡೂ ರೀತಿಯ ಸಂತಾನೋತ್ಪತ್ತಿಗೆ ಕಾರಣವಾಗಿರುವುದರಿಂದ

ಪುರುಷೋತ್ತಮನಾದ ವಾಸುದೇವನು ಸ್ತ್ರೀಯೂ ಆಗುತ್ತಾನೆ, ಪುರುಷನೂ ಆಗುತ್ತಾನೆ. ಸ್ತ್ರೀಲಿಂಗ ಶಬ್ದಗಳಿಂದ ಮತ್ತು ಪುಲ್ಲಿಂಗ ಶಬ್ದಗಳಿಂದ ಪ್ರತಿಪಾದನ್ಯಾಗುತ್ತಾನೆ. ಹೀಗೆ ಬ್ರಹ್ಮಾಂಡ ಪುರಾಣ ಹೇಳಿದೆ.

ಪ್ರತಿಪದಾರ್ಥ -- ಅವ್ಯವಧಾನದಿಂದ ಉತ್ಪತ್ತಿಗೆ ಕಾರಣವಾಗಿರುವಿಕೆಯನ್ನು ಸ್ತ್ರೀ ಎಂದು ಏಕೆ ಹೇಳಬೇಕು. ಅದನ್ನೇ ಸ್ತ್ರೀಲಿಂಗಶಬ್ದ ಪ್ರವೃತ್ತಿನಿಮಿತ್ತವೆಂದು ತಿಳಿದು, ಅದು ವಿಷ್ಣುವಿನಲ್ಲಿದೆ ಎಂದು ಹೇಗೆ ಸಿದ್ಧವಾಗುತ್ತದೆ? ಈ ಆಶಂಕೆಗೆ ಉತ್ತರಿಸುತ್ತಿದ್ದಾರೆ. –

ವ್ಯವಧಾನೇನ = ವ್ಯವಧಾನದಿಂದ, ಸೂತಿಃ = ಸಂತಾನೋತ್ಪತ್ತಿಗೆ ಕಾರಣವಾಗಿರುವಿಕೆಯು ಪುಂಸ್ತ್ವಂ = ಪುರುಷತ್ವವೆಂದು, ವಿದ್ವದ್ಭಿಃ = ಜ್ಞಾನಿ ಜನರಿಂದ, ಉಚ್ಯತೇ = ಹೇಳಲ್ಪಟ್ಟಿದೆ. ಅವ್ಯವಧಾನೇನ = ವ್ಯವಧಾನವಿಲ್ಲದೇ, ಸೂತಿಂ = ಸಂತಾನೋತ್ಪತ್ತಿಗೆ ಕಾರಣವಾಗುವಿಕೆಯನ್ನು, ಸ್ತ್ರೀತ್ವಂ = ಸ್ತ್ರೀಲಿಂಗಶಬ್ದ ಪ್ರತಿಪಾದ್ಯವೆಂದು, ಮನೀಷಿಣಃ = ಜ್ಞಾನಿಗಳು, ಆಹುಃ = ಹೇಳುತ್ತಾರೆ. ಪರಃ = ಸರ್ವೋತ್ತಮನಾದ, ವಾಸುದೇವಃ = ವಾಸುದೇವನು, ಉಭಯಾತ್ಮಕಸೂತಿತ್ವಾತ್ = ನೇರವಾಗಿ ಮತ್ತು ಪರಂಪರೆಯಿಂದ ಸಂತಾನೋತ್ಪತ್ತಿಗೆ ಕಾರಣನಾಗುವುದರಿಂದ, ಪುಮಾನ್ = ಪುರುಷನೆಂದು, ಪ್ರಕೃತಿಃ = ಸ್ತ್ರೀಲಿಂಗಶಬ್ದದಿಂದ ಪ್ರತಿಪಾದ್ಯನೆಂದು, ಪುರುಷಶ್ಚ = ಪುರುಷನೆಂದೂ ಕೂಡ, ಏಕಃ = ಒಬ್ಬನೇ, ಶಬ್ದೈಃ = ಸ್ತ್ರೀಲಿಂಗ ಮತ್ತು ಪುರುಷಲಿಂಗ ಶಬ್ದಗಳಿಂದ, ಅಭಿಧೀಯತೇ = ಕರೆಸಿಕೊಳ್ಳುತ್ತಾನೆ, ಇತಿ = ಹೀಗೆ, ಬ್ರಹ್ಮಾಂಡೇ = ಬ್ರಹ್ಮಾಂಡ ಪುರಾಣದಲ್ಲಿ ಹೇಳಲಾಗಿದೆ.

॥ ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ವಿರಚಿತವಾದ ಬ್ರಹ್ಮಸೂತ್ರಭಾಷ್ಯದ ಕನ್ನಡಾನುವಾದದಲ್ಲಿ ಪ್ರಕೃತ್ಯಧಿಕರಣವು ಸಮಾಪ್ತವಾಯಿತು ॥

ಸತ್ತರ್ಕದೀಪಾವಳಿ

ಪರಮಾತ್ಮನು ಸಾಕ್ಷಾತ್ತಾಗಿಯೇ ಸ್ತ್ರೀಶಬ್ದ ಪ್ರತಿಪಾದ್ಯ

सत्तर्कदीपावलिः – प्रपञ्चितं चैतदनुव्याख्याने भाष्यकारैरेव । न केवलं रमावाण्यादि स्त्रीस्थत्वात् तदाकारत्वाद्वा तत्तन्नामनिरुक्तेर्वा स्त्रीशब्दवाच्यः । किं तर्हीत्यत आह – योनिश्चेत्यादिना ।

भूतानामकाशादीनां ब्रह्मादीनां च केषाञ्चित् स्त्र्यव्यवधानेन उत्पादानात् भूतयोनिरित्यर्थः ।

ಇಲ್ಲಿಯ ತನಕ ರಮಾ, ವಾಣೀ ಮೊದಲಾದ ಸ್ತ್ರೀಯರಲ್ಲಿ ನೆಲಸಿರುವ ಕಾರಣ, ಮತ್ತು ಅವರದ್ದೇ ಆದ ಆಕಾರದಲ್ಲಿ ಇರುವುದರಿಂದ ರಮಾ, ವಾಣೀ ಮೊದಲಾದ ಸ್ತ್ರೀಲಿಂಗಶಬ್ದಗಳ ನಿರ್ವಚನಕ್ಕೆ ಅರ್ಹನಾಗಿರುವುದರಿಂದ ಸ್ತ್ರೀಶಬ್ದವಾಚ್ಯನಾಗಿದ್ದಾನೆ ಎಂಬುದಾಗಿ ಇಲ್ಲಿಯತನಕ ಸಮರ್ಥನೆ ಮಾಡಿದ್ದಾಯಿತು. ಇಷ್ಟೇ ಅಲ್ಲ ಮತ್ತೊಂದು ಕಾರಣವೂ ಇದೆ ಎಂದು ತಿಳಿಸಲು 'ಯೋನಿಶ್ಚ ಹಿ ಗೀಯತೇ' ಎಂಬ ಸೂತ್ರವು ಹೊರಟಿದೆ. ಆಕಾಶಾದಿ ಭೂತಪದಾರ್ಥಗಳಿಗೆ ಚತುರ್ಮುಖಬ್ರಹ್ಮ ಮೊದಲಾದ ದೇವತೆಗಳಿಗೆ ಸ್ತ್ರೀಯರ ವ್ಯವಧಾನವಿಲ್ಲದೇ ಉತ್ಪಾದಕ-ನಾಗಿದ್ದಾನೆ. ಆದ್ದರಿಂದಲೂ ಕೂಡ ಇವನು ಸ್ತ್ರೀಶಬ್ದ ಪ್ರತಿಪಾದ್ಯನಾಗಿದ್ದಾನೆ.

ಶ್ರೀಹರಿಯು ಪ್ರಕೃತಿಯೆನಿಸಬಹುದು, ಶೂನ್ಯ ಎನಿಸಲಾರ ಎಂದು ಪೂರ್ವಪಕ್ಷ

सत्तर्कदीपावलिः – ननु युक्तं परात्परमस्य पुरुषस्यापि प्रकृत्यादिविश्वगतस्य तद्भिन्नस्यापि तदाकारत्वादिहेतुना तत्तन्नाममुख्यार्थत्वं तथा शून्यादिशब्दार्थत्वं न सच्चिदानन्दाद्याकारस्येतीमं पूर्वपक्षमपाकरोतीत्याह एतेनेत्यादिना ।

ಸಕಲ ಪದಾರ್ಥಗಳಿಂದ ಶ್ರೇಷ್ಠನಾದ ಪರಮಾತ್ಮನು ಪುರುಷರೂಪನೇ ಆಗಿದ್ದಾನೆ. ಆದರೂ ಕೂಡ ಪ್ರಕೃತಿ ಮೊದಲಾದ ಸ್ತ್ರೀಲಿಂಗಶಬ್ದ ಪ್ರತಿಪಾದ್ಯನೂ ಕೂಡ ಆಗುತ್ತಾನೆ. ಪ್ರಕೃತ್ಯಾದಿಗಳಿಂದ ಕೂಡಿರುವ ಈ ವಿಶ್ವದಲ್ಲಿ ನೆಲಸಿದ್ದಾನೆ. ಈ ವಿಶ್ವಕ್ಕಿಂತ ಭಿನ್ನನಾಗಿದ್ದರೂ ಕೂಡ

ತದಾಕಾರವುಳ್ಳವನಾಗಿದ್ದಾನೆ. ಇವೇ ಮೊದಲಾದ ಲಿಂಗಗಳಿಂದ ಪ್ರಕೃತ್ಯಾದಿ ಶಬ್ದಗಳ ಮುಖ್ಯಾರ್ಥತ್ವವನ್ನು ಸಮರ್ಥನೆ ಮಾಡಿದ್ದಾಯಿತು. ಆದರೆ ಸಚ್ಚಿದಾನಂದ್ಯಾಕಾರನಾದ ಪರಮಾತ್ಮನಿಗೆ ಶೂನ್ಯ ಮೊದಲಾದ ಶಬ್ದಪ್ರತಿಪಾದ್ಯತ್ವವು ಯುಕ್ತವಾಗುವುದಿಲ್ಲ ಎಂಬ ಪೂರ್ವಪಕ್ಷದ ನಿರಾಕರಣೆಗೋಸ್ಕರ 'ಏತೇನ' ಇತ್ಯಾದಿ ಸೂತ್ರವು ಪ್ರವೃತ್ತವಾಗಿದೆ.

ಪರಮಾತ್ಮನು ಶೂನ್ಯನೂ ಆಗಿದ್ದಾನೆ

सत्तर्कदीपावलिः – एतेन तदधीनत्वाद्युक्तिसमुदायेन एष ह्येवेति महोपनिषदि श्रूयमाणशून्यादिशब्दाः शमूनमित्यादिना महाकौर्मे व्याख्याताः । यथाभीष्टवस्तु नष्टमदृश्यं वा तद्धतः शमूनं करोति तुदते च तं शमनुभवन्तम्।

ಹೀಗೆ ಹೇಳಿದ್ದರಿಂದ 'ತದಧೀನತ್ವ' ಮೊದಲಾದ ಯುಕ್ತಿಗಳ ಸಮುದಾಯದಿಂದ 'ಏಷ ಹ್ಯೇವ' ಇತ್ಯಾದಿಯಾಗಿ ಮಹೋಪನಿಷತ್ತಿನಲ್ಲಿ ಯಾವ ಶ್ರುತಿಯು ಕೇಳಿಸುತ್ತಿದೆಯೋ, ಇದರಲ್ಲಿರುವ ಶೂನ್ಯ ಮೊದಲಾದ ಶಬ್ದಗಳಿಗೆ 'ಶಮೂನಮ್' ಇತ್ಯಾದಿ ನಿಷ್ಪತ್ತಿಯಿಂದ ಹರಿಪರತ್ವವನ್ನು ಸಮರ್ಥನೆ ಮಾಡಲಾಗಿದೆ. ಅಭೀಷ್ಟವಾದ ವಸ್ತುವನ್ನು ಯಾರು ಕಳೆದುಕೊಂಡಿದ್ದಾನೋ, ಅಥವಾ ಅವನಿಗೆ ಆ ವಸ್ತು ಕಾಣಿಸುತ್ತಿಲ್ಲವೋ, ಅಂಥ ಪುರುಷನ ಸುಖವನ್ನು ಕಸಿದುಕೊಳ್ಳುತ್ತಾನೆ. ಅಥವಾ ನಾಶ ಮಾಡುತ್ತಾನೆ. ಆದ್ದರಿಂದ ಇವನನ್ನು ಶೂನ್ಯ ಎಂದು ಕರೆಯಲಾಗುತ್ತದೆ.

ಅಭಾವಾದಿಶಬ್ದಗಳ ಸಮನ್ವಯ

सत्तर्कदीपावलिः – न च तद्भावयितुं योग्यं सुखाय नापि तेनोपभोग्यम्। भगवांस्तु सर्वदा सर्वत्र सर्वोत्तमत्वेन सन्नेव दुर्जनादृश्य एव न शमूनं करोतीति तुदते च तं भवितुमयोग्यश्च नैतेनानुभोग्यश्च । एवं सर्वस्य शब्दप्रवृत्तिनिमित्तस्य स्वगतस्य परगतस्य वा तदधीनत्वात् तस्यैव शून्यतुच्छाभावनाशादिशब्दानां परममुख्यार्थता । अन्येषां तदधीनेषत्प्रवृत्तिनिमित्तवत्त्वेन व्यवहारार्थं तत्तच्छब्दार्थतेष्यत इत्यर्थः । सूत्राल्पाक्षरत्वविरोधिनी द्विरुक्तिः किमर्थेत्यत आह – अवधारणार्थमिति । द्विरुक्तिरवधारणाय, विनिर्णयाय ।। श्रीप्रभञ्जनव रददिग्विजयरामार्पणमस्तु ।

ವಿಷ್ಣು ಯಾರಿಂದಲೂ ಕೂಡ ಪೂರ್ಣವಾಗಿ ತಿಳಿಯಲು ಸಾಧ್ಯವಿಲ್ಲದವನು. ಆದ್ದರಿಂದ ಅಭಾವ ಎಂದು ಕರೆಸಿಕೊಳ್ಳುತ್ತಾನೆ. 'ನ ಭಾವ ಯತೀತಿ ಅಭಾವಃ' ಭಾವಯಿತುಂ = ಉತ್ಪಾದಿತುಂ ಸಾಕಲ್ಯೇನ ಚಿಂತಯತುಂ ವಾ ನ ಶಕ್ಯಃ ಅಭಾವಃ' ವಿಷ್ಣುವನ್ನು ಉತ್ಪಾದನೆ ಮಾಡಲು ಯಾರಿಗೂ ಸಾಧ್ಯವಿಲ್ಲ. ಅವನನ್ನು ತಿಳಿಯಲೂ ಕೂಡ ಯಾರಿಗೂ ಸಾಧ್ಯವಿಲ್ಲ ಎಂಬುದು ಇದರ ಅಭಿಪ್ರಾಯ. ಇದರಂತೆ ವಿಷ್ಣುವಿನ ಸುಖಕ್ಕೆ ಬೇರೆಯವರು ಕಾರಣವಾಗಲು ಸಾಧ್ಯವಿಲ್ಲದ ಕಾರಣ 'ಶೂನ್ಯ' ಎಂದು ಕರೆಸಿಕೊಳ್ಳುತ್ತಾನೆ. ಮತ್ತೊಬ್ಬರಿಂದ ಉಪಭೋಗ್ಯನಾದ ಕಾರಣ 'ನಾಶ' ಎಂದು ಕರೆಸಿಕೊಳ್ಳುತ್ತಾನೆ. ಪರಮಾತ್ಮನು ಯಾವಾಗಲೂ ಎಲ್ಲೆಡೆಯೂ ಸರ್ವೋತ್ತಮನೇ ಆಗಿರುವುದರಿಂದ ಆಯಾ ಶಬ್ದಗಳಿಂದ ಪ್ರತಿಪಾದ್ಯನಾಗುತ್ತಾನೆ. ತಾನು ಅವ್ಯಕ್ತನಾಗಿದ್ದುಕೊಂಡು ದುರ್ಜನರಿಗೆ ದುಃಖವನ್ನು ನೀಡುವುದರಿಂದ 'ತುಚ್ಛ' ಎಂದು ಕರೆಸಿಕೊಳ್ಳುತ್ತಾನೆ. ಮತ್ತೊಬ್ಬರ ಸುಖವನ್ನು ತನ್ನ ಸುಖಕ್ಕಿಂತ ಕಡಿಮೆಯನ್ನಾಗಿ ನೋಡಿಕೊಳ್ಳುತ್ತಾನಾದ್ದರಿಂದ 'ಶೂನ್ಯ' ಎಂದು ಕರೆಸಿಕೊಳ್ಳುತ್ತಾನೆ.

ಹೀಗೆ ತನ್ನಲ್ಲಿರುವ ಮತ್ತು ಬೇರೆಯವರಲ್ಲಿರುವ ಎಲ್ಲಾ ಶಬ್ದಗಳ ಪ್ರವೃತ್ತಿನಿಮಿತ್ತವು ಶ್ರೀಹರಿಯ ಆಧೀನವೇ ಆಗಿದೆ. ಆದ್ದರಿಂದ ಇಂಥ ಶ್ರೀಹರಿಯೇ ಶೂನ್ಯ, ತುಚ್ಛ, ಅಭಾವ, ನಾಶ ಮೊದಲಾದ ಶಬ್ದಗಳಿಂದ ಪರಮಮುಖ್ಯವೃತ್ತಿಯಿಂದ ಪ್ರತಿಪಾದ್ಯನಾಗುತ್ತಾನೆ. ಬೇರೆ ಪದಾರ್ಥಗಳು ಇವನ ಅಧೀನವಾದ ಪ್ರವೃತ್ತಿನಿಮಿತ್ತವನ್ನು ಹೊಂದಿರುವ ಕಾರಣ ಲೋಕವ್ಯವಹಾರಕ್ಕೆ ವಿಷಯವಾಗುತ್ತವೆ.

ಸೂತ್ರವು ಅಲ್ಪಾಕ್ಷರವುಳ್ಳದ್ದಾಗಿರಬೇಕು. ಹೀಗಿರುವಾಗ 'ವ್ಯಾಖ್ಯಾತಾಃ' ಎಂಬ ಪದವನ್ನು ಎರಡು ಬಾರಿ ಸೂತ್ರಕಾರರು ಏಕೆ ಹೇಳಿದ್ದಾರೆ ? ಎಂಬ ಪ್ರಶ್ನೆಗೆ ಭಾಷ್ಯದಲ್ಲಿ ಅವಧಾರಣಾರ್ಥಂ ಎಂಬುದಾಗಿ ಉತ್ತರವನ್ನು ನೀಡಿದ್ದಾರೆ. ಅಧ್ಯಾಯದ ಪ್ರಾರಂಭದಿಂದ ಹೇಳಿದ ಎಲ್ಲ ವಿಷಯವು ಆತ್ಯಂತಿಕವಾಗಿ ನಿರ್ಣಯವಾಯಿತು ಎಂಬ ಅವಧಾರಣವು ಈ ದ್ವಿರುಕ್ತಿಯಿಂದ ಸಿದ್ಧವಾಗುತ್ತಿದೆ.

॥ ಇಲ್ಲಿಗೆ ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ ಸತ್ತರ್ಕದೀಪಾವಳಿಯಲ್ಲಿ
ಪ್ರಕೃತ್ಯಧಿಕರಣದ ಕನ್ನಡಾನುವಾದವು ಸಮಾಪ್ತವಾಯಿತು ॥

ಇಲ್ಲಿಗೆ ಪ್ರಥಮಾಧ್ಯಾಯವು ಪ್ರಭಂಜನ ವರದನಾದ ದಿಗ್ವಿಜಯ ಶ್ರೀರಾಮಚಂದ್ರನಿಗೆ
ಸಮರ್ಪಿತವಾಗಲಿ.

ತತ್ವಪ್ರಕಾಶಿಕಾ

ಪರಮಾತ್ಮನನ್ನು ಪ್ರಕೃತಿಯೆನ್ನಲು ಕಾರಣ

तथापि न प्रकृतिशब्दवाच्यत्वं परमात्मनो युज्यते । तस्य स्त्रीलिङ्गत्वादित्याशङ्कां परिहरत्सूत्रमुपन्यस्य व्याचष्टे – योनिश्चेति ।।

ಹಿಂದಿನ ಸೂತ್ರದಲ್ಲಿ ಹೇಳಿದ ಎಲ್ಲಾ ಕಾರಣಗಳನ್ನು ಒಪ್ಪಿಕೊಂಡರೂ ಕೂಡ ಪ್ರಕೃತಿಶಬ್ದದಿಂದ ಪರಮಾತ್ಮನು ಪ್ರತಿಪಾದ್ಯನಾಗುವುದಿಲ್ಲ. ಏಕೆಂದರೆ ಪ್ರಕೃತಿ ಎಂಬ ಶಬ್ದವು ಸ್ತ್ರೀಲಿಂಗದಲ್ಲಿದೆ. ಪುರುಷನಾದ ಪರಮಾತ್ಮನು ಸ್ತ್ರೀಲಿಂಗಶಬ್ದದಿಂದ ಹೇಗೆ ತಾನೇ ಪ್ರತಿಪಾದ್ಯನಾಗುತ್ತಾನೆ ? ಈ ಆಶಂಕೆಯನ್ನು ಪರಿಹರಿಸಲು ಸೂತ್ರವನ್ನು ಉಲ್ಲೇಖಿಸಿ, ವ್ಯಾಖ್ಯಾನ ಮಾಡುತಿದ್ದಾರೆ 'ಯೋನಿಶ್ಚ' ಇತ್ಯಾದಿಯಾಗಿ.

ತನ್ನ ದೇಹದಿಂದ ಪುತ್ರೋತ್ಪತ್ತಿ ಮಾಡುವನೇ ?

तत्वप्रकाशिका – स्वदेहादेवापत्योत्पादकत्वं हि प्रकृत्यादिस्त्रीलिङ्गप्रयोगे निमित्तम् ।

'ತನ್ನ ಶರೀರದಿಂದಲೇ ಪುತ್ರೋತ್ಪತ್ತಿಯಾಗುವುದು' ಪ್ರಕೃತಿ ಶಬ್ದದ ಪ್ರವೃತ್ತಿನಿಮಿತ್ತ. ಸ್ತ್ರೀಲಿಂಗ ಶಬ್ದವಾದ ಇದನ್ನು ಈ ಪ್ರವೃತ್ತಿನಿಮಿತ್ತ ಇದ್ದಲ್ಲಿ ಮಾತ್ರ ಲೋಕದಲ್ಲಿ ಪ್ರಯೋಗಿಸುತ್ತಾರೆ.

'ಯದ್ಭೂತಯೋನಿಮ್' ಎಂಬ ಶ್ರುತಿಯು ಅದನ್ನೇ ಹೇಳುವುದು

तत्वप्रकाशिका – स्वदेहादेवोत्पादकश्च परमात्मा 'यद्भूतयोनिम्' इति श्रुतौ गीयते । योनिशब्दस्य तदर्थत्वात् । अतः स्त्रीलिङ्गप्रयोगोऽपीश्वरे युज्यत इति भावः।

ಪರಮಾತ್ಮನು ತನ್ನ ದೇಹದಿಂದಲೇ ಅಪತ್ಯೋತ್ಪಾದಕನಾಗಿರುವುದರಿಂದ ಪ್ರಕೃತಿ ಶಬ್ದದ ಪ್ರವೃತ್ತಿನಿಮಿತ್ತವು ಅವನಲ್ಲಿ ಯುಕ್ತವಾಗುತ್ತದೆ. 'ಯದ್ಭೂತಯೋನಿಮ್' ಎಂಬ ಶ್ರುತಿಯು ಇದನ್ನೇ ಹೇಳುತ್ತಿದೆ. ಶ್ರುತಿಯಲ್ಲಿರುವ ಯೋನಿ ಶಬ್ದಕ್ಕೆ ತನ್ನ ದೇಹದಿಂದ ಉತ್ಪತ್ತಿ ಮಾಡುವಿಕೆ

ಎಂದರ್ಥ. ಇಂತಹ ಯೋನಿ ಶಬ್ದದಿಂದ ಪ್ರತಿಪಾದ್ಯನಾದ ಪರಮಾತ್ಮನಲ್ಲಿ ಪ್ರಕೃತಿಶಬ್ದದ ಪ್ರವೃತ್ತಿನಿಮಿತ್ತವು ಸುತರಾಂ ಉಪಪನ್ನವಾಗುತ್ತದೆ. ಆದ್ದರಿಂದ ಸ್ತ್ರೀಲಿಂಗಶಬ್ದಗಳ ಪ್ರಯೋಗವು ಬೇರೆ ಪುರುಷರಲ್ಲಿ ಅಯುಕ್ತವಾಗಿದ್ದರೂ ಈಶ್ವರನಲ್ಲಿ ಅತ್ಯಂತ ಸಮಂಜಸವಾಗಿ ಉಪಪನ್ನವಾಗುತ್ತದೆ.

ಪರಮಾತ್ಮನು ಮಾಡುವ ಪುತ್ರೋತ್ಪತ್ತಿಗೆ ಸ್ತ್ರೀ ಅಪೇಕ್ಷೆಯಿಲ್ಲ

तत्वप्रकाशिका – अव्यवधानेन उत्पत्तिकर्तृत्वं प्रकृत्यादिस्त्रीलिङ्ग-प्रयोगनिमित्तं कुतः? इत्याशङ्कां परिहर्तुं सूत्रार्थे स्मृतिं चाऽऽह – व्यवधानेनेति।।

ಪ್ರಕೃತಿಶಬ್ದಕ್ಕೆ ತನ್ನ ದೇಹದಿಂದ ಪುತ್ರೋತ್ಪತ್ತಿ ಮಾಡುವಿಕೆ ಎಂಬುದಷ್ಟೇ ಪ್ರವೃತ್ತಿನಿಮಿತ್ತವಲ್ಲ. ಮತ್ತೊಂದನ್ನು ಅಪೇಕ್ಷಿಸದೇ (ವ್ಯವಧಾನವಿಲ್ಲದೆ) ಪುತ್ರೋತ್ಪತ್ತಿ ಕರ್ತೃತ್ವವು ಪ್ರಕೃತಿಶಬ್ದದ ಪ್ರವೃತ್ತಿನಿಮಿತ್ತವಾಗಿದೆ. ಇಂತಹ ಸಂದರ್ಭದಲ್ಲಿ ಮಾತ್ರ ಸ್ತ್ರೀಲಿಂಗಶಬ್ದವನ್ನು ಲೋಕದಲ್ಲಿ ಪ್ರಯೋಗಿಸುತ್ತಾರೆ. ಇದನ್ನು ಪರಮಾತ್ಮನಲ್ಲಿ ಹೇಗೆ ಹೇಳುತ್ತೀರಿ? ಈ ಆಶಂಕೆಯನ್ನು ಪರಿಹರಿಸಲು ಸೂತ್ರದ ಅರ್ಥದಲ್ಲಿ ಸ್ಮೃತಿಪ್ರಮಾಣವನ್ನು 'ವ್ಯವಧಾನೇನ' ಇತ್ಯಾದಿಯಾಗಿ ಹೇಳುತ್ತಿದ್ದಾರೆ.

'ನೈನಂ ವಾಚಾ ಸ್ತ್ರೀಯಂ ಬ್ರುವನ್' ಎಂಬುದಕ್ಕೆ ವ್ಯಾಖ್ಯಾನ

तत्वप्रकाशिका – सूतिः सूतिकर्तृत्वं भगवतः । स्त्रीरूपत्वाच्च तच्छब्दोपपत्तिः । निषेधस्तु अज्ञेयतामात्रार्थः । तस्मात् विष्णुरेवाशेषस्त्री-शब्दवाच्य इति युक्तमेव तत्समन्वयसूत्रमिति सिद्धम् ।।६।।

।। इति श्रीमज्जयतीर्थभिक्षुविरचितायां तत्वप्रकाशिकायाम्

प्रकृत्यधिकरणम् ।।

'ಸೂತಿ' ಶಬ್ದಕ್ಕೆ ಭಗವಂತನಲ್ಲಿರುವ 'ಉತ್ಪಾದನಕರ್ತೃತ್ವ' ಎಂದರ್ಥ. ಭಗವಂತನು ಸ್ತ್ರೀರೂಪವನ್ನೂ ಕೂಡ ಹೊಂದಿರುವುದರಿಂದ ಸ್ತ್ರೀಲಿಂಗಶಬ್ದದಿಂದ ಪ್ರತಿಪಾದ್ಯನಾಗುತ್ತಾನೆ.

'ನೈನಂ ವಾಚಾ ಸ್ತ್ರಿಯಂ ಬ್ರುವನ್' ಎಂಬ ನಿಷೇಧವು ಪರಮಾತ್ಮನು ಕೇವಲ ಸ್ತ್ರೀರೂಪದಿಂದಷ್ಟೇ ಜ್ಞೇಯನಲ್ಲ ಎಂಬ ತಾತ್ಪರ್ಯದ್ಯೋತಕವಾಗಿದೆ. ಆದ್ದರಿಂದ ವಿಷ್ಣುವೇ ಸಕಲ ಶಬ್ದಗಳಿಂದ ಪ್ರತಿಪಾದ್ಯನಾಗಿದ್ದಾನೆಂಬ ಸಮನ್ವಯಸೂತ್ರದ ಪ್ರತೀತಿಯು ಸಿದ್ಧವಾಯಿತು.

॥ ಇಲ್ಲಿಗೆ ಶ್ರೀಮಜ್ಜಯತೀರ್ಥಮುನಿಗಳಿಂದ ವಿರಚಿತವಾದ ತತ್ತ್ವಪ್ರಕಾಶಿಕಾಟೀಕೆಯಲ್ಲಿ
ಪ್ರಕೃತ್ಯಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

॥ ಶ್ರೀಕೃಷ್ಣಾರ್ಪಣಮಸ್ತು ॥

ಭಾವದೀಪ

ಪ್ರಳಯಕಾಲದಲ್ಲಿ ಎಲ್ಲರೂ ಶ್ರೀಹರಿಯ ಉದರದಲ್ಲಿ

अव्यवधानेनेत्यादिभाष्यम् उत्पादनं स्वदेहाच्चेत्यनुभाष्यदिशा व्याचष्टे ।। स्वदेहादेवेति ।। प्रलये स्वोदरे निवेशितस्य ब्रह्मादिप्राणिजातस्य स्थूलदेहविशिष्टतया जनकत्वमित्यर्थः ।

'ಅವ್ಯವಧಾನೇನ' ಇತ್ಯಾದಿ ಭಾಷ್ಯವನ್ನು 'ಉತ್ಪಾದನಂ ಸ್ವದೇಹಾಚ್ಚ' ಇತ್ಯಾದಿ ಅನುವ್ಯಾಖ್ಯಾನಕ್ಕೆ ಅನುಸಾರಿಯಾಗಿ 'ಸ್ವದೇಹಾತ್' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ. ಬ್ರಹ್ಮಾದಿಜೀವರು ಪ್ರಳಯಕಾಲದಲ್ಲಿ ತನ್ನ ಉದರದಲ್ಲಿರುತ್ತಾರೆ. ಅವರಿಗೆ ಸ್ಥೂಲದೇಹವನ್ನು ನೀಡುವ ಮೂಲಕ ಸೃಷ್ಟಿ ಮಾಡುತ್ತಾನೆ ಎಂದು 'ಸ್ವದೇಹಾತ್' ಇತ್ಯಾದಿ ವಾಕ್ಯದ ಅಭಿಪ್ರಾಯ.

ಶ್ರುತಿವಿರೋಧ ಪರಿಹಾರ

भावदीपः – प्रकृतित्वमित्येतदुपलक्षणमिति भावेनाह – प्रकृत्यादीति ।। नैनं वाचेति श्रुतिविरोधं निराह – निषेधस्त्विति ।।

'ಪ್ರಕೃತಿತ್ವ' ಎಂಬುದು ಉಪಲಕ್ಷಣವಾಗಿದೆ ಎಂಬ ಅಭಿಪ್ರಾಯದಿಂದ 'ಪ್ರಕೃತ್ಯಾದಿ' ಎಂಬ ಟೀಕೆಯು ಹೊರಟಿದೆ. 'ನೈನಂ ವಾಚಾ' ಇತ್ಯಾದಿ ಶ್ರುತಿವಿರೋಧವನ್ನು 'ನಿಷೇಧಸ್ತು' ಇತ್ಯಾದಿ ವಾಕ್ಯದಿಂದ ಪರಿಹರಿಸುತ್ತಿದ್ದಾರೆ.

ಪ್ರಕೃತಿಯೆನ್ನಲು ಸಾಧಕವಿದೆ ಬಾಧಕವಿಲ್ಲ

भावदीपः – तस्मादिति ।। साधकभावाद्बाधकाभावाच्चेत्यर्थः । युक्तमेवेति फलोक्तिः ।।

।। इति श्रीराघवेन्द्रयतिकृते भावदीपे प्रकृत्यधिकरणम् ।।

'ತಸ್ಮಾತ್' ಎಂದರೆ ಸಾಧಕ ಪ್ರಮಾಣವಿರುವುದರಿಂದ ಬಾಧಕ ಪ್ರಮಾಣವಿಲ್ಲದ್ದರಿಂದ ಎಂದರ್ಥ. ಅಧಿಕರಣದ ಫಲವನ್ನು 'ಯುಕ್ತಮೇವ' ಎಂದು ಹೇಳಿದ್ದಾರೆ.

॥ ಇಲ್ಲಿಗೆ ಶ್ರೀಮದ್‌ರಾಘವೇಂದ್ರತೀರ್ಥರಿಂದ ವಿರಚಿತವಾದ ಭಾವದೀಪದ
ಪ್ರಕೃತ್ಯಧಿಕರಣದ ಕನ್ನಡ ಅನುವಾದವು ಮುಗಿಯಿತು ॥

॥ ಶ್ರೀ ಮಧ್ವೇಶಾರ್ಪಣಮಸ್ತು ॥

।। श्रीजानकीवदनाम्भोजराजहंसाय रामचन्द्राय नमः ।।

।। श्री गुरुभ्यो नमः ।।

श्री राघवेन्द्रतीर्थविरचिता

तन्त्रदीपिका

प्रकृत्यधिकरणम् (१।४।६)

ಎಲ್ಲಾ ಸ್ತ್ರೀಲಿಂಗಶಬ್ದಗಳನ್ನು ಉಪಲಕ್ಷಣಯಾ ವಿವಕ್ಷಿಸಬೇಕು

।। प्रकृतिश्च प्रतिज्ञादृष्टान्तानुपरोधात् ।। १-४-२४ ।।

अत्र स्त्रीलिङ्गाः शब्दाः समन्वीयन्ते । श्रीवाचितया प्रधान्यात् प्रकृतिपदस्यान्योपलक्षणत्वात् । तत्त्वित्यस्ति । ''सैषा प्रकृतिः'' इत्याद्युक्तप्रकृत्यादि मुख्यतो ब्रह्मैव । न तु श्रीतत्वादि । कुतः ? ''हन्तैतमेव पुरुषं सर्वाणि नामान्यभिवदन्ति'' इति प्रतिज्ञा, ''यथा नद्यः स्यन्दमानाः समुद्रायणाः समुद्रमभिविशन्ति एवमेवैतानि नामानि'' इति दृष्टान्तः । तयोरनुपरोधात्तदनुसारादित्यर्थः ।

'प्रकृतिश्च प्रतिज्ञादृष्टान्तानुपरोधात्' ಈ ಅಧಿಕರಣದಲ್ಲಿ ಸ್ತ್ರೀಲಿಂಗಶಬ್ದಗಳನ್ನು ಮಹಾವಿಷ್ಣುವಿನಲ್ಲಿ ಸಮನ್ವಯ ಮಾಡುತ್ತಿದ್ದಾರೆ. ಲಕ್ಷ್ಮೀದೇವಿಯನ್ನು ಪ್ರತಿಪಾದನೆ ಮಾಡುವ ಶಬ್ದಗಳಲ್ಲಿ ಪ್ರಕೃತಿ ಶಬ್ದವು ಪ್ರಧಾನವಾಗಿದೆ. ಆದ್ದರಿಂದ ಅದನ್ನೇ ಸೂತ್ರದಲ್ಲಿ ಉಲ್ಲೇಖ ಮಾಡಿ, ಉಳಿದ ಸ್ತ್ರೀಲಿಂಗಶಬ್ದಗಳನ್ನು ಉಪಲಕ್ಷಣಯಾ ವಿವಕ್ಷಿಸಿದ್ದಾರೆ. ಈ ಸೂತ್ರದಲ್ಲಿಯೂ 'ತತ್ತು' ಎಂಬ ಪದಗಳು ಅನುವೃತ್ತವಾಗುತ್ತವೆ.

ಸೂತ್ರಾರ್ಥ - ಪ್ರಕೃತಿಶ್ಚ = 'ಸೈಷಾ ಪ್ರಕೃತಿಃ' ಇತ್ಯಾದಿ ಶ್ರುತಿಗಳಲ್ಲಿ ಪ್ರತಿಪಾದಿಸಲ್ಪಟ್ಟ ಪ್ರಕೃತಿ ಮೊದಲಾದ ಶಬ್ದಗಳು ಮುಖ್ಯವಾಗಿ 'ತತ್ತು' ಬ್ರಹ್ಮನನ್ನೇ ಪ್ರತಿಪಾದಿಸುತ್ತವೆ ಹೊರತು,

ಸ್ತ್ರೀತತ್ವವನ್ನಲ್ಲ. ಏಕೆಂದರೆ ಪ್ರತಿಜ್ಞಾದೃಷ್ಟಾಂತಾನುಪರೋಧಾತ್ = 'ಹಂತೈತಮೇವ ಪುರುಷಂ ಸರ್ವಾಣಿ ನಾಮಾನ್ಯಭವದಂತಿ' ಎಲ್ಲಾ ಶಬ್ದಗಳು ಪುರುಷರೂಪಿಯಾದ ಪರಮಾತ್ಮನನ್ನೇ ಹೇಳುತ್ತವೆ ಎಂಬ ಪ್ರತಿಜ್ಞೆ, 'ಯಥಾ ನದ್ಯಃ, ಸ್ಯಂದಮಾನಾಃ ಸಮುದ್ರಾಯಾಣಾಃ ಸಮುದ್ರಮಭಿವಿಶಂತಿ ಏವಮೇವೈತಾನಿ' ಹರಿಯುವ ನದಿಗಳು ಸಮುದ್ರಾಭಿಮುಖವಾಗಿ ಹರಿದು, ಸಮುದ್ರವನ್ನು ಪ್ರವೇಶಿಸುವಂತೆ ಎಂಬ ದೃಷ್ಟಾಂತ ವಚನ. ಇವೆರಡರ ಅನುಸಾರವಾಗಿ ಎಂದು ಸೂತ್ರಾರ್ಥ.

ಪ್ರಸವ ಹೇತುತ್ವವಿರುವುದರಿಂದ ಪರಮಾತ್ಮನೇ ಪ್ರಕೃತಿ

अन्यथा तदुपरोधः स्यादिति भावः । सर्वस्त्रीशब्दसमुच्चायकः च इति तत्त्वप्रदीपे। न केवलं विष्णुरिति समुच्चिनोति । तेन स्त्रीत्वं चेत् पुंस्त्वं न स्यादिति न शङ्क्यमिति टीकाचन्द्रिकयोरुक्तम् ।

ಒಂದು ವೇಳೆ ಸ್ತ್ರೀಲಿಂಗಶಬ್ದಗಳು ಭಗವಂತನನ್ನು ಪ್ರತಿಪಾದನೆ ಮಾಡದಿದ್ದರೆ, ಈ ಪ್ರತಿಜ್ಞಾದೃಷ್ಟಾಂತಗಳ ವಿರೋಧವು ಬರುತ್ತದೆಂದು ಅಭಿಪ್ರಾಯ.

ಸೂತ್ರದಲ್ಲಿರುವ ಚಶಬ್ದವು ಎಲ್ಲಾ ಬಗೆಯ ಸ್ತ್ರೀ ವಾಚಕ ಶಬ್ದಗಳನ್ನು ಸಮುಚ್ಚಯ ಮಾಡುತ್ತಿದೆ. ಹೀಗೆ ತತ್ತ್ವಪ್ರದೀಪದಲ್ಲಿ ವ್ಯಾಖ್ಯಾನಿಸಲಾಗಿದೆ.

ಪರಮಾತ್ಮನು ಕೇವಲ ಪುರುಷನಷ್ಟೇ ಅಲ್ಲ. ವ್ಯವಧಾನವಿಲ್ಲದ ಪ್ರಸವಹೇತುತ್ವ ರೂಪವಾದ ಸ್ತ್ರೀತ್ವವನ್ನೂ ಕೂಡ ಪಡೆದಿರುತ್ತಾನೆ. ಆದ್ದರಿಂದಲೇ ಪ್ರಕೃತಿ ಮೊದಲಾದ ಶಬ್ದಗಳಿಂದೆಲ್ಲಾ ಮುಖ್ಯವಾಗಿ ಪ್ರತಿಪಾದ್ಯನಾಗಿದ್ದಾನೆ. ಇದನ್ನು ಸೂತ್ರದಲ್ಲಿರುವ ಚಶಬ್ದವು ಸಮುಚ್ಚಯ ಮಾಡುತ್ತಿದೆ ಆದ್ದರಿಂದಲೇ ಭಗವಂತನಲ್ಲಿ ಸ್ತ್ರೀತ್ವವನ್ನು ಒಪ್ಪಿದರೆ, ಪುಂಸ್ತ್ವವನ್ನು ಅಲ್ಲಗಳೆಯಬೇಕಾಗುತ್ತದೆ ಎಂಬ ಆಶಂಕೆಗೆ ಅವಕಾಶವಿಲ್ಲ. ಹೀಗೆ ಟೀಕೆಯಲ್ಲಿ ಮತ್ತು ಚಂದ್ರಿಕಾಗ್ರಂಥದಲ್ಲಿ ವ್ಯಾಖ್ಯಾನಿಸಲಾಗಿದೆ.

ಸರ್ವಶಬ್ದಕ್ಕೆ ಸಂಕೋಚ ಮಾಡಲಾಗದು

प्रागुक्तहेतुभिरेव पूर्वत्रैव प्रकृत्यादि ब्रह्मेति सिद्धावपि ''नामानि सर्वाणि'' इत्यत्र सर्वशब्दे सङ्कोचशङ्कानिरासाय पुनः साधकोक्तिः ।

ಹಿಂದೆ ಹೇಳಿರುವ ಯುಕ್ತಿಗಳಿಂದಲೇ ಪ್ರಕೃತ್ಯಾದಿಶಬ್ದಗಳಿಂದ ಪರಮಾತ್ಮನು ಪ್ರತಿಪಾದ್ಯನಾಗಿದ್ದಾನೆಂದು ಈ ಹಿಂದೆ ಸಿದ್ಧವಾಗಿದೆ. ಆದರೂ ಕೂಡ 'ನಾಮಾನಿ ಸರ್ವಾಣಿ'

ಎಂಬ ಶ್ರುತಿಯಲ್ಲಿರುವ ಸರ್ವಶಬ್ದಕ್ಕೆ ಸಂಕೋಚವನ್ನು ಮಾಡಬಹುದೆಂಬ ಆಶಂಕೆಯ ನಿರಾಸಕ್ಕಾಗಿ ಸರ್ವಶಬ್ದವಾಚ್ಯತ್ವದ ವಿಷಯದಲ್ಲಿ ಪುನಃ ಈ ಸೂತ್ರವು ಸಾಧಕಪ್ರಮಾಣವನ್ನು ಸಮರ್ಥಿಸುತ್ತಿದೆ.

'ಅಭಿಧ್ಯೋಪದೇಶಾಚ್ಚ' ಎಂಬ ಸೂತ್ರಕ್ಕೆ ಪೀಠಿಕೆ

इतश्चैवमित्याह -

।। अभिध्योपदेशाच्च ।। १-४-२५ ।।

ಮತ್ತೊಂದು ಕಾರಣದಿಂದಲೂ ಬ್ರಹ್ಮನು ಪ್ರಕೃತಿ ಮೊದಲಾದ ಸ್ತ್ರೀಲಿಂಗಶಬ್ದಗಳಿಂದ ಪ್ರತಿಪಾದ್ಯನಾಗಿದ್ದಾನೆಂದು ಸಮರ್ಥಿಸಲು ಮುಂದಿನ ಸೂತ್ರ ಹೊರಟಿದೆ - 'ಅಭಿಧ್ಯೋಪದೇಶಾಚ್ಚ'.

'ಅಭಿಧ್ಯಾ' ಎಂಬ ಪದವು ಎರಡು ಬಾರಿ ಆವೃತ್ತವಾಗುವುದು

प्रकृतिरित्यनुवर्तमानमावर्तते । द्वितीयं भावप्रधानम् । योग्यतयाऽभिध येत्यनेनान्वेति । अभिध्येत्यप्यावर्तते । द्वितीयं भावप्रधानम् । प्रकृतिर्ब्रह्मैव। कुतः ? प्रकृतित्वेन प्रकृतिशब्दवाच्यत्वेनाभिध्यायाः इच्छाया उपदेशात्। ''प्रकृतिर्वासनेत्येवं तवेच्छाऽनन्त'' इति स्मृतौ तथा ब्रह्मणोऽभिध्यात्वोपदेशादिच्छारूपत्वोपदेशात् । ''सोऽभिध्या स जूतिः'' इति श्रुताविति्यर्थः । प्रकृतिशब्दवाच्येच्छात्मकत्वाच्च प्रकृतिशब्दं ब्रह्मेति भावः।।

ಹಿಂದಿನ ಸೂತ್ರದಿಂದ 'ಪ್ರಕೃತಿಃ' ಎಂಬ ಪದವು ಇಲ್ಲಿ ಅನುವೃತ್ತವಾಗುತ್ತವೆ. ಅದೇ ಪ್ರಕೃತಿ ಶಬ್ದವನ್ನು ಎರಡು ಬಾರಿ ವಿವಕ್ಷಿಸಬೇಕು. ಆವೃತ್ತಿಗೊಂಡ ಎರಡನೆಯ ಪ್ರಕೃತಿ ಶಬ್ದವು ಭಾವಪ್ರಧಾನದಲ್ಲಿ ನಿರ್ದಿಷ್ಟವಾಗಿರುತ್ತದೆ. ಅನ್ವಯಯೋಗ್ಯವಾದ 'ಅಭಿಧ್ಯಾ' ಎಂಬ ಪದದ ಜೊತೆಗೆ ಅನ್ವಯವನ್ನು ಪಡೆಯುತ್ತದೆ. 'ಅಭಿಧ್ಯಾ' ಎಂಬ ಪದವೂ ಕೂಡ ಎರಡು ಬಾರಿ ಆವೃತ್ತವಾಗುತ್ತದೆ. ಎರಡನೆಯ 'ಅಭಿಧ್ಯಾ' ಎಂಬ ಪದವು ಭಾವಪ್ರಧಾನದಲ್ಲಿ ನಿರ್ದೇಶಿಸಲ್ಪಡುತ್ತದೆ.

ಸೂತ್ರಾರ್ಥ ಹೀಗಿದೆ - ಪ್ರಕೃತಿಃ = ಪ್ರಕೃತಿಶಬ್ದವಾಚ್ಯನಾದವನು, ತತ್ತು = ಬ್ರಹ್ಮನೇ ಆಗಿದ್ದಾನೆ. ಏಕೆಂದರೆ ಪ್ರಕೃತಿಃ = 'ಪ್ರಕೃತಿರ್ವಾಸನೇತ್ಯೇವಂ ತವೇಚ್ಛಾऽನಂತ (ಕ)ಪದ್ಯತೇ' ಎಂಬ ಸ್ಮೃತಿಯಲ್ಲಿ ಪ್ರಕೃತಿತ್ವೇನ ಪ್ರಕೃತಿಶಬ್ದವಾಚ್ಯವೆಂದು 'ಅಭಿಧ್ಯೇ' ಎಂದರೆ ಇಚ್ಛೆಯ ಉಪದೇಶವಿರುವುದರಿಂದ, ಮತ್ತು 'ಸೋऽಭಿಧ್ಯಾ ಸ ಜೂತಿಃ' ಎಂಬ ಶ್ರುತಿಯಲ್ಲಿ ಬ್ರಹ್ಮನಿಗೆ ಇಚ್ಛಾರೂಪತ್ವವನ್ನು ಹೇಳಿದ್ದರಿಂದ, ಅಂದರೆ ಪ್ರಕೃತಿಶಬ್ದವಾಚ್ಯವಾದ ಇಚ್ಛೆಯು ಭಗವದಾತ್ಮಕವಾದ್ದರಿಂದ ಬ್ರಹ್ಮನು ಪ್ರಕೃತಿಶಬ್ದವಾಚ್ಯನಾಗಿದ್ದಾನೆಂದು ಅಭಿಪ್ರಾಯ.

'ಸಾಕ್ಷಾಚ್ಚೋಭಯಾಮ್ನಾನಾತ್' ಎಂಬ ಸೂತ್ರಕ್ಕೆ ಪೀಠಿಕೆ

अद्योक्तं सामान्यरूपं द्वितीयोक्तं पारम्पर्यरूपं च मानं विना विशिष्य मानाभावात् कथं प्रकृत्यादिशब्दं ब्रह्मेत्यत आह -

।। साक्षाच्चोभयाम्नानात् ।। १-४-२६ ।।

ಪ್ರಥಮ ಸೂತ್ರದಲ್ಲಿ ಪರಮಾತ್ಮನು ನೇರವಾಗಿ ಪ್ರಕೃತಿ ಮೊದಲಾದ ಸ್ತ್ರೀಲಿಂಗಶಬ್ದಗಳಿಂದ ಪ್ರತಿಪಾದ್ಯನಾಗಿದ್ದಾನೆಂದು ಸಾಮಾನ್ಯವಾಗಿ ಹೇಳಲಾಯಿತು. 'ಅಭಿಧ್ಯೋಪದೇಶಾಚ್ಚ' ಎಂಬ ಎರಡನೆಯ ಸೂತ್ರದಲ್ಲಿ ಭಗವಂತನ ಇಚ್ಛೆಯು ಪ್ರಕೃತಿಯೆನಿಸುವುದರಿಂದ ಇಚ್ಛಾರೂಪನಾದ ಭಗವಂತನೂ ಕೂಡ ಪ್ರಕೃತಿಶಬ್ದವಾಚ್ಯನಾಗುತ್ತಾನೆಂದು ಪರಂಪರೆಯಿಂದ ಹೇಳಲಾಯಿತು. ಈ ಎರಡೂ ಸೂತ್ರಗಳಲ್ಲಿ ಹೇಳಿದ ವಿಚಾರ ಪ್ರಮಾಣವಿಲ್ಲದೇ ಸಿದ್ಧವಾಗುವುದಿಲ್ಲ. ಹೀಗಿರುವಾಗ ಭಗವಂತನು ಪ್ರಕೃತಿಶಬ್ದದಿಂದ ವಾಚ್ಯನಾಗುತ್ತಾನೆಂದು ಹೇಗೆ ಹೇಳುತ್ತೀರಿ? ಈ ಆಕ್ಷೇಪಕ್ಕೆ ಉತ್ತರಿಸಲು 'ಸಾಕ್ಷಾಚ್ಚೋಭಯಾಮ್ನಾನಾತ್' ಎಂಬ ಸೂತ್ರವು ಹೊರಟಿದೆ.

ಸೂತ್ರದ ಕಠಿಣ ಪದಾರ್ಥ

च एव । प्रकृत्यादिर्ब्रह्मैव । साक्षादेव सामान्यपारम्पर्ये विनोभयस्य प्रकृत्यादिशब्दत्वस्य पुरुषत्वस्य चाम्नानात् । ''एष स्त्री एष पुरुषः'' इति श्रुताविति्यर्थः ।

ಸೂತ್ರಾರ್ಥ - ಚಶಬ್ದವು 'ಏವ' ಎಂಬ ಅವಧಾರಣಾರ್ಥದಲ್ಲಿದೆ. ಪ್ರಕೃತ್ಯಾದಿಃ = ಪ್ರಕೃತಿ ಮೊದಲಾದ ಸ್ತ್ರೀಲಿಂಗಶಬ್ದಗಳಿಂದ ವಾಚ್ಯನಾದವನು ಬ್ರಹ್ಮನೇ ಆಗಿದ್ದಾನೆ. ಏಕೆಂದರೆ, ಸಾಕ್ಷಾಚ್ಚ

ಎಂಬ ಶ್ರುತಿಯಲ್ಲಿರುವ ಸರ್ವಶಬ್ದಕ್ಕೆ ಸಂಕೋಚವನ್ನು ಮಾಡಬಹುದೆಂಬ ಆಶಂಕೆಯ ನಿರಾಸಕ್ಕಾಗಿ ಸರ್ವಶಬ್ದವಾಚ್ಯತ್ವದ ವಿಷಯದಲ್ಲಿ ಪುನಃ ಈ ಸೂತ್ರವು ಸಾಧಕಪ್ರಮಾಣವನ್ನು ಸಮರ್ಥಿಸುತ್ತಿದೆ.

'ಅಭಿಧ್ಯೋಪದೇಶಾಚ್ಚ' ಎಂಬ ಸೂತ್ರಕ್ಕೆ ಪೀಠಿಕೆ

इतश्चैवमित्याह -

।। अभिध्योपदेशाच्च ।। १-४-२५ ।।

ಮತ್ತೊಂದು ಕಾರಣದಿಂದಲೂ ಬ್ರಹ್ಮನು ಪ್ರಕೃತಿ ಮೊದಲಾದ ಸ್ತ್ರೀಲಿಂಗಶಬ್ದಗಳಿಂದ ಪ್ರತಿಪಾದ್ಯನಾಗಿದ್ದಾನೆಂದು ಸಮರ್ಥಿಸಲು ಮುಂದಿನ ಸೂತ್ರ ಹೊರಟಿದೆ - 'ಅಭಿಧ್ಯೋಪದೇಶಾಚ್ಚ'.

'ಅಭಿಧ್ಯಾ' ಎಂಬ ಪದವು ಎರಡು ಬಾರಿ ಆವೃತ್ತವಾಗುವುದು

प्रकृतिरित्यनुवर्तमानमावर्तते । द्वितीयं भावप्रधानम् । योग्यतयाऽभिध येत्यनेनान्वेति । अभिध्येत्यप्यावर्तते । द्वितीयं भावप्रधानम् । प्रकृतिर्ब्रह्मैव। कुतः ? प्रकृतित्वेन प्रकृतिशब्दवाच्यत्वेनाभिध्यायाः इच्छाया उपदेशात्। ''प्रकृतिर्वासनेत्येवं तवेच्छाऽनन्त'' इति स्मृतौ तथा ब्रह्मणोऽभिध्यात्वोपदेशादिच्छारूपत्वोपदेशात् । ''सोऽभिध्या स जूतिः'' इति श्रुताविति्यर्थः । प्रकृतिशब्दवाच्येच्छात्मकत्वाच्च प्रकृतिशब्दं ब्रह्मेति भावः।।

ಹಿಂದಿನ ಸೂತ್ರದಿಂದ 'ಪ್ರಕೃತಿಃ' ಎಂಬ ಪದವು ಇಲ್ಲಿ ಅನುವೃತ್ತವಾಗುತ್ತವೆ. ಅದೇ ಪ್ರಕೃತಿ ಶಬ್ದವನ್ನು ಎರಡು ಬಾರಿ ವಿವಕ್ಷಿಸಬೇಕು. ಆವೃತ್ತಿಗೊಂಡ ಎರಡನೆಯ ಪ್ರಕೃತಿ ಶಬ್ದವು ಭಾವಪ್ರಧಾನದಲ್ಲಿ ನಿರ್ದಿಷ್ಟವಾಗಿರುತ್ತದೆ. ಅನ್ವಯಯೋಗ್ಯವಾದ 'ಅಭಿಧ್ಯಾ' ಎಂಬ ಪದದ ಜೊತೆಗೆ ಅನ್ವಯವನ್ನು ಪಡೆಯುತ್ತದೆ. 'ಅಭಿಧ್ಯಾ' ಎಂಬ ಪದವೂ ಕೂಡ ಎರಡು ಬಾರಿ ಆವೃತ್ತವಾಗುತ್ತದೆ. ಎರಡನೆಯ 'ಅಭಿಧ್ಯಾ' ಎಂಬ ಪದವು ಭಾವಪ್ರಧಾನದಲ್ಲಿ ನಿರ್ದೇಶಿಸಲ್ಪಡುತ್ತದೆ.

ಸೂತ್ರಾರ್ಥ ಹೀಗಿದೆ - ಪ್ರಕೃತಿಃ = ಪ್ರಕೃತಿಶಬ್ದವಾಚ್ಯನಾದವನು, ತತ್ತು = ಬ್ರಹ್ಮನೇ ಆಗಿದ್ದಾನೆ. ಏಕೆಂದರೆ ಪ್ರಕೃತಿಃ = 'ಪ್ರಕೃತಿರ್ವಾಸನೇತ್ಯೇವಂ ತವೇಚ್ಛಾऽನಂತ (ಕ)ಪದ್ಯತೇ' ಎಂಬ ಸ್ಮೃತಿಯಲ್ಲಿ ಪ್ರಕೃತಿತ್ವೇನ ಪ್ರಕೃತಿಶಬ್ದವಾಚ್ಯವೆಂದು 'ಅಭಿಧ್ಯೇ' ಎಂದರೆ ಇಚ್ಛೆಯ ಉಪದೇಶವಿರುವುದರಿಂದ, ಮತ್ತು 'ಸೋऽಭಿಧ್ಯಾ ಸ ಜೂತಿಃ' ಎಂಬ ಶ್ರುತಿಯಲ್ಲಿ ಬ್ರಹ್ಮನಿಗೆ ಇಚ್ಛಾರೂಪತ್ವವನ್ನು ಹೇಳಿದ್ದರಿಂದ, ಅಂದರೆ ಪ್ರಕೃತಿಶಬ್ದವಾಚ್ಯವಾದ ಇಚ್ಛೆಯು ಭಗವದಾತ್ಮಕವಾದ್ದರಿಂದ ಬ್ರಹ್ಮನು ಪ್ರಕೃತಿಶಬ್ದವಾಚ್ಯನಾಗಿದ್ದಾನೆಂದು ಅಭಿಪ್ರಾಯ.

'ಸಾಕ್ಷಾಚ್ಚೋಭಯಾಮ್ನಾನಾತ್' ಎಂಬ ಸೂತ್ರಕ್ಕೆ ಪೀಠಿಕೆ

अद्योक्तं सामान्यरूपं द्वितीयोक्तं पारम्पर्यरूपं च मानं विना विशिष्य मानाभावात् कथं प्रकृत्यादिशब्दं ब्रह्मेत्यत आह -

।। साक्षाच्चोभयाम्नानात् ।। १-४-२६ ।।

ಪ್ರಥಮ ಸೂತ್ರದಲ್ಲಿ ಪರಮಾತ್ಮನು ನೇರವಾಗಿ ಪ್ರಕೃತಿ ಮೊದಲಾದ ಸ್ತ್ರೀಲಿಂಗಶಬ್ದಗಳಿಂದ ಪ್ರತಿಪಾದ್ಯನಾಗಿದ್ದಾನೆಂದು ಸಾಮಾನ್ಯವಾಗಿ ಹೇಳಲಾಯಿತು. 'ಅಭಿಧ್ಯೋಪದೇಶಾಚ್ಚ' ಎಂಬ ಎರಡನೆಯ ಸೂತ್ರದಲ್ಲಿ ಭಗವಂತನ ಇಚ್ಛೆಯು ಪ್ರಕೃತಿಯೆನಿಸುವುದರಿಂದ ಇಚ್ಛಾರೂಪನಾದ ಭಗವಂತನೂ ಕೂಡ ಪ್ರಕೃತಿಶಬ್ದವಾಚ್ಯನಾಗುತ್ತಾನೆಂದು ಪರಂಪರೆಯಿಂದ ಹೇಳಲಾಯಿತು. ಈ ಎರಡೂ ಸೂತ್ರಗಳಲ್ಲಿ ಹೇಳಿದ ವಿಚಾರ ಪ್ರಮಾಣವಿಲ್ಲದೇ ಸಿದ್ಧವಾಗುವುದಿಲ್ಲ. ಹೀಗಿರುವಾಗ ಭಗವಂತನು ಪ್ರಕೃತಿಶಬ್ದದಿಂದ ವಾಚ್ಯನಾಗುತ್ತಾನೆಂದು ಹೇಗೆ ಹೇಳುತ್ತೀರಿ? ಈ ಆಕ್ಷೇಪಕ್ಕೆ ಉತ್ತರಿಸಲು 'ಸಾಕ್ಷಾಚ್ಚೋಭಯಾಮ್ನಾನಾತ್' ಎಂಬ ಸೂತ್ರವು ಹೊರಟಿದೆ.

ಸೂತ್ರದ ಕಠಿಣ ಪದಾರ್ಥ

च एव । प्रकृत्यादिर्ब्रह्मैव । साक्षादेव सामान्यपारम्पर्ये विनोभयस्य प्रकृत्यादिशब्दत्वस्य पुरुषत्वस्य चाम्नानात् । ''एष स्त्री एष पुरुषः'' इति श्रुताविति्यर्थः ।

ಸೂತ್ರಾರ್ಥ - ಚಶಬ್ದವು 'ಏವ' ಎಂಬ ಅವಧಾರಣಾರ್ಥದಲ್ಲಿದೆ. ಪ್ರಕೃತ್ಯಾದಿಃ = ಪ್ರಕೃತಿ ಮೊದಲಾದ ಸ್ತ್ರೀಲಿಂಗಶಬ್ದಗಳಿಂದ ವಾಚ್ಯನಾದವನು ಬ್ರಹ್ಮನೇ ಆಗಿದ್ದಾನೆ. ಏಕೆಂದರೆ, ಸಾಕ್ಷಾಚ್ಚ

= ನೇರವಾಗಿ ಮತ್ತು ಪರಂಪರೆಯಿಂದ ಸ್ತ್ರೀತ್ವವನ್ನು ಸಮರ್ಥಿಸುವ ಪ್ರಮಾಣಗಳನ್ನು ಬಿಟ್ಟು, ಉಭಯಾಮ್ನಾನಾತ್ = 'ಏಷ ಸ್ತ್ರೀ ಏಷ ಪುರುಷಃ' ಎಂಬಲ್ಲಿ ಪ್ರಕೃತ್ಯಾದಿ ಶಬ್ದವಾಚ್ಯತ್ವವನ್ನು ಪುರುಷತ್ವವನ್ನು ಎರಡೂ ಕೂಡ ಹೇಳಲಾಗಿದೆ ಎಂದು ಸೂತ್ರಾರ್ಥ.

'ಆತ್ಮಕೃತೇಃ ಪರಿಣಾಮಾತ್' ಎಂಬ ಸೂತ್ರಕ್ಕೆ ಪೀಠಿಕೆ

निमित्ताभावान्न प्रकृतिशब्दं ब्रह्मेत्यत आह -

।। आत्मकृतेः परिणामात् ।। १-४-२६ ।।

ಪ್ರಕೃತಿಶಬ್ದದ ಪ್ರವೃತಿನಿಮಿತ್ತವು ಬ್ರಹ್ಮನಲ್ಲಿ ಇಲ್ಲದ ಕಾರಣ ಹೇಗೆ ಪ್ರಕೃತಿಶಬ್ದವಾಚ್ಯನಾಗುತ್ತಾನೆ? ಎಂಬ ಪ್ರಶ್ನೆಗೆ ಉತ್ತರಿಸಲು 'ಆತ್ಕೃತೇಃ ಪರಿಣಾಮಾತ್' ಎಂಬ ಸೂತ್ರ ಹೊರಟಿದೆ.

ಸೂತ್ರದ ಪ್ರತಿಪದಾರ್ಥ

योग्यतया प्रकृतेरित्यन्वेति । परिणामादिति ल्यब्लोपे पञ्चमी । प्रकृतेः परिणामं विधाय तत्प्रेरणयाऽत्मनः प्रकृतेर्बहुधा करणात् प्रकृतिर्ब्रह्मेत्यर्थः । प्रकृष्टा कृतिर्यस्येति योगसम्भवात् । तदधीनत्वे सत्यपि तदनादरेण गुणपूर्त्यर्थं निमित्तान्तरोक्तिः । परिणामादित्युक्तिरात्म- प्रकृतेस् तत्प्रेरणरूपफलोक्त्यर्था ।।

ಅನ್ವಯಯೋಗ್ಯವಾದ್ದರಿಂದ 'ಪ್ರಕೃತೇಃ' ಎಂಬ ಪದವು ಅನ್ವಯ ಪಡೆದಿದೆ. 'ಪರಿಣಾಮಾತ್' ಎಂಬಲ್ಲಿ ಲ್ಯಬ್‌ಪ್ರತ್ಯಯದ ಲೋಪನಿಮಿತ್ತದಿಂದಾಗಿ ಪಂಚಮೀ ವಿಭಕ್ತಿಯು ಇರುತ್ತದೆ. ಪರಮಾತ್ಮನು ಪ್ರಕೃತಿಯನ್ನು ಪರಿಣಾಮ ಮಾಡಿ, ಅಂತಹ ಪ್ರಾಕೃತವಾದ ವಿಕಾರಗಳನ್ನು ಪ್ರೇರಣೆ ಮಾಡಲು ತನ್ನನ್ನು ಬಹುಸ್ವರೂಪವನ್ನಾಗಿ ಮಾಡಿಕೊಳ್ಳುತ್ತಾನೆ ಎಂದು ಸೂತ್ರಾರ್ಥ. ಪ್ರಕೃಷ್ಟವಾದ ಆಕೃತಿಯುಳ್ಳವನಾದ್ದರಿಂದ ಅನೇಕ ಸ್ವರೂಪವನ್ನು ತಾಳುತ್ತಾನಾದ್ದರಿಂದ ಪರಮಾತ್ಮನು ಪ್ರಕೃತಿ ಆಗಿದ್ದಾನೆಂದು ಸೂತ್ರವು ಯೋಗವೃತ್ತಿಯನ್ನು ಹೇಳುತ್ತಿದೆ. ಪ್ರಕೃತಿ ಶಬ್ದದ ಪ್ರವೃತ್ತಿನಿಮಿತ್ತವು ಭಗವದಧೀನವಾಗಿರುವುದರಿಂದಲೂ ಭಗವಂತನು ಪ್ರಕೃತಿಶಬ್ದವಾಚ್ಯ-ನಾಗಿದ್ದಾನೆಂದು ಹೇಳಬಹುದು. ಆದರೂ ಕೂಡ ಅದನ್ನು ಬಿಟ್ಟು, 'ಆತ್ಕೃತೇಃ' ಎಂಬ ಮತ್ತೊಂದು ನಿಮಿತ್ತವನ್ನು ಏಕೆ ಹೇಳಿದ್ದಾರೆಂದರೆ ಗುಣಪೂರ್ಣತ್ವವು ಸಿದ್ಧವಾಗಬೇಕೆಂಬ

ಉದ್ದೇಶದಿಂದ. ಪರಮಾತ್ಮನು ತನ್ನ ಸ್ವರೂಪವನ್ನು ಬಹುವಿಧವಾಗಿ ಮಾಡಿಕೊಳ್ಳುವುದರ ಪ್ರಯೋಜನವೇನೆಂದರೆ ಎಲ್ಲಾ ಬಗೆಯ ವಸ್ತುಗಳನ್ನು ಪ್ರೇರಣೆ ಮಾಡುವುದೇ ಆಗಿದೆ ಎಂದು 'ಪರಿಣಾಮಾತ್' ಎಂಬ ಪದವು ತಿಳಿಸುತ್ತಿದೆ.

'ಯೋನಿಶ್ಚ ಹಿ ಗೀಯತೇ' ಎಂಬ ಸೂತ್ರಕ್ಕೆ ಪೀಠಿಕೆ

कथं प्रकृत्यादिस्त्रीलिङ्गशब्दवाच्यत्वं विष्णोः स्त्रीत्वरूपनिमित्ताभावादत आह -

।। योनिश्च हि गीयते ।। १-४-२८ ।।

ಸ್ತ್ರೀತ್ವವೆಂಬ ನಿಮಿತ್ತವೇ ಇಲ್ಲದ್ದಿದಾಗ ಪ್ರಕೃತ್ಯಾದಿಸ್ತ್ರೀಲಿಂಗಶಬ್ದದಿಂದ ಪರಮಾತ್ಮನು ಹೇಗೆ ವಾಚ್ಯನಾಗುತ್ತಾನೆ ? ಎಂಬ ಆಶಂಕೆಗೆ ಉತ್ತರಿಸಲು ಮುಂದಿನ ಸೂತ್ರವು ಹೊರಟಿದೆ - 'ಯೋನಿಶ್ಚ ಹಿ ಗೀಯತೇ' ಎಂದು.

ಸೂತ್ರದ ಪ್ರತಿಪದಾರ್ಥ

हि यस्माद्योनिश्च स्वदेहादुत्पादकं ब्रह्म गीयते ''यद्भूतयोनिं परिपश्यन्ति'' इति श्रुतौ अतः प्रकृत्यादिशब्दं ब्रह्मेत्यर्थः ।

ಹಿ = ಯಾವ ಕಾರಣದಿಂದ, ಯೋನಿಶ್ಚ = ತನ್ನ ದೇಹದಿಂದಲೇ ನೇರವಾಗಿ ಅಪತ್ಯೋತ್ಪಾದಕನಾಗಿರುವ ಕಾರಣದಿಂದ, ಬ್ರಹ್ಮ ಗೀಯತೇ = ಬ್ರಹ್ಮನು 'ಯದ್ಭೂತಯೋನಿಂ ಪರಿಪಶ್ಯಂತಿ ಧೀರಾಃ' ಎಂಬ ಶ್ರುತಿಯಿಂದ ಪ್ರತಿಪಾದಿತನಾಗಿ ಪ್ರಕೃತಿಶಬ್ದವಾಚ್ಯನಾಗಿದ್ದಾನೆಂದು ತಿಳಿಯಬೇಕು.

ಸೂತ್ರಾರ್ಥಕ್ಕೆ ಸ್ಮೃತಿಯ ಆಧಾರ

''सूतिरव्यवधानेन'' इति स्मृतेरव्यवधानेन स्वदेहादेवोत्पादकत्व-रूपयोनिशब्दतः स्त्रीत्वसम्भवादिति भावः । प्रकृतिशब्दनिमित्तेन सह तदुपलक्षितस्त्रीशब्दमात्रनिमित्तसमुच्चये चः ।। ६ ।।

'ವ್ಯವಧಾನೇನ ಸೂತಿಸ್ತು ಪುಂಸ್ತ್ವಂ ವಿದ್ವದ್ಭಿರುಚ್ಯತೇ । ಸೂತಿರವ್ಯಧಾನೇನ ಪ್ರಕೃತಿತ್ವಮಿತಿ ಸ್ಥಿತಿಃ ।।' ಎಂಬ ಸ್ಮೃತಿ ಪ್ರಮಾಣದಿಂದ ತನ್ನ ದೇಹದಿಂದಲೇ ಪರಮಾತ್ಮನು

ಪುತ್ರೋತ್ಪಾದಕನಾಗಿರುವುದರಿಂದ ಯೋನಿ ಪದದ ಪ್ರವೃತ್ತಿನಿಮಿತ್ತವೆನಿಸಿದ ಸ್ತ್ರೀತ್ವವನ್ನು ಹೊಂದಿದ್ದಾನೆಂದು ತಿಳಿಯಬೇಕು. 'ಚ'ಶಬ್ದವು ಪ್ರಕೃತಿಶಬ್ದದ ನಿಮಿತ್ತದ ಜೊತೆಗೆ ಪ್ರಕೃತಿಶಬ್ದದಿಂದ ಉಪಲಕ್ಷಿತವಾಗುವ ಎಲ್ಲಾ ಸ್ತ್ರೀಲಿಂಗಶಬ್ದಗಳ ನಿಮಿತ್ತವನ್ನು ಸಮುಚ್ಚಯ ಮಾಡುತ್ತಿದೆ.

॥ ಇಲ್ಲಿಗೆ ತಂತ್ರದೀಪಿಕಾ ಕನ್ನಡಾನುವಾದದಲ್ಲಿ ಪ್ರಕೃತ್ಯಧಿಕರಣವು ಮುಗಿಯಿತು ॥

ಅದ್ವೈತ-ವಿಶಿಷ್ಟಾದ್ವೈತಮತದಲ್ಲಿ ಪ್ರಕೃತ್ಯಧಿಕರಣ
ಮತ್ತು
ವಿಮರ್ಶೆ

ಶಾಂಕರರು ಹಾಗೂ ರಾಮಾನುಜರು ಹೀಗೆ ವ್ಯಾಖ್ಯಾನ ಮಾಡುತ್ತಾರೆ. - 'ಪ್ರಕೃತಿಶ್ಚ ಪ್ರತಿಜ್ಞಾದೃಷ್ಟಾಂತಾನುಪರೋಧಾತ್' ಎಂಬ ಸೂತ್ರದ ಅರ್ಥ ಹೀಗಿದೆ - ಬ್ರಹ್ಮನು ಕೇವಲ ಜಗತ್ತಿಗೆ ನಿಮಿತ್ತಕಾರಣನಾಗಿಲ್ಲ. ಪ್ರಕೃತಿಶ್ಚ = ಉಪಾದಾನಕಾರಣನೂ ಆಗಿದ್ದಾನೆ. ಹೀಗೆ ಬ್ರಹ್ಮನು ಉಪಾದಾನಕಾರಣನೂ ಆಗಿದ್ದಾನೆಂದು ಒಪ್ಪಿದರೆ ಮಾತ್ರ 'ಯೇನಾಶ್ರುತಂ ಶ್ರುತಂ ಭವತಿ' ಎಂಬ ಶ್ರುತಿಯಲ್ಲಿ ಏಕವಿಜ್ಞಾನದಿಂದ ಸರ್ವವಿಜ್ಞಾನದ ಪ್ರತಿಜ್ಞಾವಾಕ್ಯವು 'ಯಥಾ ಸೋಮ್ಯೈಕೇನ ಮೃತ್ಪಿಂಡೇನ ಸರ್ವಂ ಮೃನ್ಮಯಂ ವಿಜ್ಞಾತಂ ಸ್ಯಾತ್' ಎಂಬ ದೃಷ್ಟಾಂತವಾಕ್ಯವು ಹೊಂದಾಣಿಕೆಯಾಗುತ್ತದೆ. ಪ್ರತಿಜ್ಞಾವಾಕ್ಯಕ್ಕೂ ಉದಾಹರಣವಾಕ್ಯಕ್ಕೂ ವಿರೋಧವು ಬರುವುದಿಲ್ಲ.

ಇವರ ಸೂತ್ರವ್ಯಾಖ್ಯಾನವು ಅಯುಕ್ತವಾಗಿದೆ. ಏಕೆಂದರೆ ಬ್ರಹ್ಮನಿಗೆ ನಿಮಿತ್ತಕಾರಣತ್ವದ ಜೊತೆಗೆ ಉಪಾದಾನಕಾರಣತ್ವವನ್ನು ಪ್ರತಿಪಾದನೆ ಮಾಡಲು ಈ ಅಧಿಕರಣವು ಹೊರಡುವುದಾದರೆ, ಸಮನ್ವಯಾಧ್ಯಾಯದಲ್ಲಿ ಅಸಂಗತವಾಗುತ್ತದೆ. ಏಕೆಂದರೆ ಯಾವುದೇ ಶಬ್ದದ ಸಮನ್ವಯವನ್ನು ಮಾಡುವ ಉದ್ದೇಶವೇ ಇರುವುದಿಲ್ಲ. ಅಷ್ಟೇ ಅಲ್ಲದೇ ಪಾದಸಂಗತಿಯೂ ಕೂಡ ಇರುವುದಿಲ್ಲ. ನಾಲ್ಕನೆಯ ಈ ಪಾದದಲ್ಲಿ ಪ್ರಧಾನಕ್ಕೆ ಶಾಬ್ದತ್ವವನ್ನು ನಿರಾಕರಣೆ ಮಾಡುವುದು ಉದ್ದೇಶವಾಗಿದೆಯೆಂದು ನೀವೇ ಹೇಳಿರುತ್ತೀರಿ. ಈಗ ಪ್ರಧಾನಕ್ಕೆ

ಶಾಬ್ದತ್ವವನ್ನು ನಿರಾಕರಣೆ ಮಾಡದೇ ಬ್ರಹ್ಮನಿಗೆ ಉಪಾದಾನಕಾರಣತ್ವವನ್ನು ಸಮರ್ಥಿಸಲು ಹೊರಟರೆ, ಪಾದದ ಜೊತೆಗೆ ಸಂಗತವೂ ಆಗುವುದಿಲ್ಲ.

ಅಷ್ಟೇ ಅಲ್ಲದೇ ಅವ್ಯವಹಿತವಾದ ಹಿಂದಿನ ಅಧಿಕರಣದಿಂದಲೂ ಈ ಅಧಿಕರಣವು ಸಂಗತವಾಗುವುದಿಲ್ಲ. ವಾಸ್ತವಿಕವಾಗಿ ಈ ಅಧಿಕರಣವು ಮೊದಲ ಮೂರು ಅಧಿಕರಣ ಆದ ಮೇಲೆ ಬರಬೇಕಾಗಿತ್ತು. ಏಕೆಂದರೆ ಸಾಂಖ್ಯರಿಗೆ ಅಭಿಮತವಾದ ಪ್ರಧಾನವು, ಶ್ರುತಿಪ್ರತಿಪಾದ್ಯವೇ ಅಲ್ಲದ ಕಾರಣ ಜಗತ್‌ಕಾರಣವಾಗುವುದಿಲ್ಲವೆಂದು ಮೊದಲ ಮೂರು ಅಧಿಕರಣದಲ್ಲಿ ನೀವು ಸಮರ್ಥಿಸಿರುತ್ತೀರಿ. ಹೀಗೆ ಪ್ರಧಾನಕ್ಕೆ ಜಗತ್‌ಕಾರಣತ್ವವನ್ನು ನಿರಾಕರಣೆ ಮಾಡಿದ ಮೇಲೆ ಜಗತ್ತು ನಿರುಪಾದಾನಕವಾಗುತ್ತದಲ್ಲವೇ? ಎಂಬ ಆಶಂಕೆಯು ಪ್ರಾಪ್ತವಾಗುತ್ತದೆ. ಅದರ ನಿರಾಕರಣೆಗಾಗಿ 'ಪ್ರಕೃತಿಶ್ಚ' ಎಂಬ ಸೂತ್ರವು ಹೊರಡಬೇಕು. ಬ್ರಹ್ಮನು ಕೇವಲ ನಿಮಿತ್ತಕಾರಣನಷ್ಟೇ ಅಲ್ಲ, ಉಪಾದಾನ ಕಾರಣನೂ ಆಗಿರುತ್ತಾನೆ ಎಂದು ಸಮರ್ಥನೆ ಮಾಡಿರುವುದರಿಂದ ಜಗತ್ತು ನಿರುಪಾದಾನಕ- ವಾಗುವುದಿಲ್ಲ ಎಂಬ ಆಶಂಕೆಯು ಪರಿಹಾರವಾಗುತ್ತದೆ. ಆದ್ದರಿಂದ ನಾಲ್ಕನೆಯ ಅಧಿಕರಣವನ್ನಾಗಿ ಇದನ್ನು ನಿವೇಶಿಸಬೇಕಿತ್ತು. ಮಧ್ಯದಲ್ಲಿ 'ಜಗದ್ವಾಚಿತ್ವಾತ್' ಮತ್ತು 'ವಾಕ್ಯಾನ್ವಯಾತ್' ಎಂಬ ಅಧಿಕರಣದಲ್ಲಿ ಬ್ರಹ್ಮನಲ್ಲಿ ಶಬ್ದಗಳನ್ನು ಸಮನ್ವಯ ಮಾಡಿದ್ದೀರಿ. ಈ ಎರಡು ಅಧಿಕರಣಗಳಿಗೆ ಸಂಗತಿಯಿರುವುದಿಲ್ಲ. ಆದ್ದರಿಂದ ಪ್ರಕೃತ್ಯಧಿಕರಣವನ್ನು ಇಲ್ಲಿ ನಿವೇಶಿಸಲು ಯಾವುದೇ ಪ್ರಬಲವಾದ ಕಾರಣಗಳಿರುವುದಿಲ್ಲ.

ಮತ್ತು ಹಿಂದಿನ ಎರಡು ಅಧಿಕರಣಗಳಲ್ಲಿ ಶಬ್ದವನ್ನು ಸಮನ್ವಯ ಮಾಡಿದ ಮೇಲೆ ಈ ಅಧಿಕರಣದಲ್ಲಿಯೂ ಅದನ್ನೇ ಮಾಡಬೇಕು. ಇದನ್ನು ಬಿಟ್ಟು ಬ್ರಹ್ಮನಿಗೆ ಉಪಾದಾನಕಾರಣತ್ವವನ್ನು ಸಮರ್ಥನೆ ಮಾಡಲು ಪ್ರಕೃತಿತ್ವವನ್ನು ಉಪಪಾದನೆ ಮಾಡುವುದು ಸರಿಯಲ್ಲ. ಹಾಗಾದಲ್ಲಿ 'ಆಕಾಶಸ್ತಲ್ಲಿಂಗಾತ್' ಇತ್ಯಾದಿ ಸೂತ್ರಗಳಲ್ಲಿಯೂ ಬ್ರಹ್ಮನಲ್ಲಿ 'ಆಕಾಶ' ಎಂಬ ಶಬ್ದವನ್ನು ಸಮನ್ವಯ ಮಾಡದೇ ಆಕಾಶಸ್ತತ್ವವನ್ನೇ ಸಮರ್ಥನೆ ಮಾಡಬೇಕಾದೀತು.

ಮತ್ತು ಏಕವಿಜ್ಞಾನೇನ ಸರ್ವವಿಜ್ಞಾನದ ಪ್ರತಿಜ್ಞೆಯನ್ನು ಉಪಾದಾನತ್ವ ಅಭಿಪ್ರಾಯದಲ್ಲಿ ಪರ್ಯವಸಾನ ಮಾಡುತ್ತೀರಿ. ಆದರೆ ಪ್ರಾಧಾನ್ಯ ಅಭಿಪ್ರಾಯದಿಂದ ಅಥವಾ ಸಾದೃಶ್ಯದ ಅಭಿಪ್ರಾಯದಿಂದ ಈ ಶ್ರುತಿಯು ಹೊರಟಿರುತ್ತದೆ ಎಂಬ ವಿಚಾರವನ್ನು ನಾವು ಆರಂಭಣಾಧಿಕರಣದಲ್ಲಿ ಸಮರ್ಥಿಸುತ್ತಾ ನಿಮ್ಮ ಮತವನ್ನು ಅಲ್ಲಿಯೇ ನಿರಾಕರಣೆ ಮಾಡುತ್ತೇವೆ.

ಬ್ರಹ್ಮನು ನಿಮಿತ್ತಕಾರಣನಾಗಿರುವುದಷ್ಟೇ ಅಲ್ಲ, ಉಪಾದಾನಕಾರಣನೂ ಆಗಿದ್ದಾನೆಂಬ ವಿಷಯದಲ್ಲಿ ಸೂತ್ರದಲ್ಲಿರುವ ಹೇತುವನ್ನು ಸಮರ್ಥಿಸಿದಿರಿ. ಇದು ಸರಿಯಲ್ಲ. ನೀವೇ ಹೇಳಿದಂತೆ ಪ್ರತಿಜ್ಞಾವಾಕ್ಯ ಹಾಗೂ ದೃಷ್ಟಾಂತ ವಾಕ್ಯಗಳು ಬ್ರಹ್ಮನು ಉಪಾದಾನ-ಕಾರಣನಾಗಿದ್ದಾನೆಂಬ ವಿಷಯದಲ್ಲಿ ಆಧಾರವಾಗುತ್ತವೆ ಹೊರತು, ನಿಮಿತ್ತಕಾರಣ-ನಾಗಿದ್ದಾನೆಂಬ ವಿಷಯದಲ್ಲಿ ಆಧಾರವಾಗುವುದಿಲ್ಲ. ಆದ್ದರಿಂದ ಬ್ರಹ್ಮನ ನಿಮಿತ್ತತ್ವದಲ್ಲಿ ನೀವು ಯಾವುದೇ ಸಮರ್ಥನೆಯನ್ನು ಸೂತ್ರದಿಂದ ತೋರಿಸಿದಂತಾಗಲಿಲ್ಲ.

ಪ್ರಶ್ನೆ - ಪ್ರತಿಜ್ಞಾವಾಕ್ಯ ಹಾಗೂ ದೃಷ್ಟಾಂತವಾಕ್ಯಗಳ ಅನುಪರೋಧದಿಂದ ಬ್ರಹ್ಮನಿಗೆ ಉಪಾದಾನಕಾರಣತ್ವವು ಸಿದ್ಧವಾಗುತ್ತದೆ. ಯುಕ್ತಿಯ ಬಲದಿಂದ ನಿಮಿತ್ತಕಾರಣತ್ವವು ಸಿದ್ಧವಾಗುತ್ತದೆ. ಒಂದುವೇಳೆ ಬ್ರಹ್ಮನು ಜಗತ್ತಿಗೆ ಕರ್ತೃವಾಗದಿದ್ದಲ್ಲಿ, ಬ್ರಹ್ಮನಿಗಿಂತ ಭಿನ್ನನಾದ ಮತ್ತೊಬ್ಬ ವ್ಯಕ್ತಿಯು ಜಗತ್ತಿಗೆ ಕರ್ತೃವೆಂದಾಗಬೇಕಾದೀತು. ಆವಾಗ ಬ್ರಹ್ಮಜ್ಞಾನದಿಂದ ಸರ್ವವೂ ವಿಜ್ಞಾತವಾಗುತ್ತದೆಂದು ಹೇಳಿದಾಗ ಮತ್ತೊಬ್ಬ ಕರ್ತೃವಿನ ಜ್ಞಾನವೂ ಬರುತ್ತದೆಂದು ಹೇಳಲು ಸಾಧ್ಯವಿಲ್ಲ. ಆದ್ದರಿಂದ ಪ್ರತಿಜ್ಞಾವಾಕ್ಯವೇ ನಿರರ್ಥಕವಾಗಬೇಕಾದೀತು. ಬ್ರಹ್ಮ ಜಗತ್ತಿಗೆ ನಿಮಿತ್ತಕಾರಣನಾಗಿದ್ದಾನೆಂದು ಒಪ್ಪಬೇಕು.

ಉತ್ತರ - ಜಗತ್ತಿಗೆ ಬ್ರಹ್ಮನಿಗಿಂತ ಮತ್ತೊಬ್ಬ ಕಾರಣನಿದ್ದಮಾತ್ರಕ್ಕೆ ಬ್ರಹ್ಮಜ್ಞಾನದಿಂದ ಅವನ ಜ್ಞಾನವು ಬರಬೇಕೆಂಬ ನಿಯಮವಿಲ್ಲ. ಏಕೆಂದರೆ ಮೃತ್ಪಿಂಡದ ದೃಷ್ಟಾಂತವನ್ನು ನೋಡಿದಾಗ, ಮೃತ್ಪಿಂಡದ ದೃಷ್ಟಾಂತದಿಂದ ಕಾರಣಜ್ಞಾನದಿಂದ ತನ್ನ ಕಾರ್ಯದ ಜ್ಞಾನವಷ್ಟೇ ತಿಳಿಯುತ್ತದೆ ಎಂದು ಶ್ರುತಿಯು ಹೇಳುತ್ತಿದೆ. ಆದ್ದರಿಂದ ಬ್ರಹ್ಮನ ಜ್ಞಾನದಿಂದ ಎಲ್ಲವೂ ತಿಳಿಯುತ್ತದೆ ಎಂದು ಹೇಳಿದಾಗ ಬ್ರಹ್ಮನ ಕಾರ್ಯಭೂತವಾದ ವಸ್ತುಗಳಷ್ಟೇ ತಿಳಿಯುತ್ತದೆಂಬ ಅಭಿಪ್ರಾಯ ಶ್ರುತಿಗೆ ಇದೆ ಹೊರತು, ಬ್ರಹ್ಮನ ಕಾರ್ಯವಲ್ಲದ ಮತ್ತೊಬ್ಬ ಜಗತ್‌ಕಾರಣನ ಜ್ಞಾನವು ಬರಬೇಕಾಗಿಲ್ಲ. ಆದ್ದರಿಂದ ಬ್ರಹ್ಮನಿಗಿಂತ ಭಿನ್ನನಾದ ಮತ್ತೊಬ್ಬನು ಜಗತ್ತಿಗೆ ಕಾರಣನಿದ್ದರೂ ಅವನ ಜ್ಞಾನವು ಬಾರದಿದ್ದರೂ. ಪ್ರತಿಜ್ಞೆಯು ಉಪಪನ್ನವಾಗುತ್ತದೆ.

ಮತ್ತು ಉಪಾದಾನಕಾರಣನಿಗಿಂತ ಭಿನ್ನನಾದ ಮತ್ತೊಬ್ಬ ನಿಮಿತ್ತಕಾರಣನ ಜ್ಞಾನವು ಬ್ರಹ್ಮಜ್ಞಾನದಿಂದಲೇ ಬರಬಹುದು. ಏಕೆಂದರೆ ಪ್ರಾಗಭಾವ, ಅವಿದ್ಯೆ ಮೊದಲಾದವುಗಳನ್ನು ನೀವು ಅನಾದಿಪದಾರ್ಥವಾದ್ದರಿಂದ ಬ್ರಹ್ಮನ ಕಾರ್ಯವಲ್ಲವೆಂದು ಹೇಳುತ್ತೀರಿ. ಇಂತಹ ಅನಾದಿ- ಪದಾರ್ಥಗಳು ಬ್ರಹ್ಮನಿಗಿಂತ ಭಿನ್ನಗಳೂ ಆಗಿಲ್ಲ. ಆದರೂ ಕೂಡ ಏಕವಿಜ್ಞಾನದಿಂದ

ಸರ್ವವೂ ವಿಜ್ಞಾತವಾಗುತ್ತದೆಂದು ಹೇಳಿದಾಗ ಇಂತಹ ಪ್ರಾಗಭಾವಾದಿಗಳ ಜ್ಞಾನವು ಆಗುತ್ತದೆ ಎಂದು ಒಪ್ಪುತ್ತೀರಿ. ಅದರಂತೆ ಉಪಾದಾನಕಾರಣನಿಗಿಂತ ಭಿನ್ನನಾದ ಮತ್ತೊಬ್ಬ ನಿಮಿತ್ತಕಾರಣನ ಜ್ಞಾನವು ಏಕೆ ಬರಬಾರದು ?

ಪ್ರಶ್ನೆ - ಅವಿದ್ಯೆಗೂ ಕೂಡ ಬ್ರಹ್ಮನು ಉಪಾದಾನಕಾರಣನಾಗಿದ್ದಾನೆ. ಅವಿದ್ಯೆ ಹಾಗೂ ಪ್ರಾಗಭಾವಗಳು ಅನಾದಿಯಾಗಿದ್ದರೂ, ಇವುಗಳ ಆರೋಪಕ್ಕೆ ಬ್ರಹ್ಮನು ಅಧಿಷ್ಠಾನನಾಗಿರುವುದರಿಂದ ವಿವರ್ತೋಪಾದಾನತ್ವವು ಬ್ರಹ್ಮನಲ್ಲಿ ಬರುತ್ತದೆ. ಆದ್ದರಿಂದ ಏಕವಿಜ್ಞಾನದಿಂದ ಸರ್ವವಿಜ್ಞಾನವು ಬರುತ್ತದೆಂದು ಹೇಳಿದಾಗ ಅವಿದ್ಯೆ ಹಾಗೂ ಪ್ರಾಗಭಾವಗಳ ಜ್ಞಾನವೂ ಕೂಡ ಬರುತ್ತದೆಂದು ಹೇಳಬಹುದಲ್ಲವೇ?

ಉತ್ತರ - ಹಾಗಾದರೆ ಕಲ್ಪಿತನಾದ ಮತ್ತೊಬ್ಬ ಕರ್ತೃವೂ ಕೂಡ ಕಾರ್ಯಕೋಟಿಯಲ್ಲಿಯೇ ಸೇರುತ್ತಾನೆ. ಏಕೆಂದರೆ ಯಾವುದು ಕಲ್ಪಿತವೋ, ಅದೆಲ್ಲವೂ ಬ್ರಹ್ಮನ ಕಾರ್ಯವೆಂದು ನೀವೇ ಹೇಳಿದ್ದೀರಿ. ಆದ್ದರಿಂದ ಜಗತ್ತಿಗೆ ಯಾರೊಬ್ಬನೂ ಕರ್ತೃವೇ ಇಲ್ಲದಂತಾಗುತ್ತದೆ ನಿಮಿತ್ತಕಾರಣನಾದ ಕರ್ತೃವೇ ಉಪಾದಾನಕಾರಣನಾಗುತ್ತಾನೆಂದು ಸಮರ್ಥಿಸಿದಂತಾಗಲಿಲ್ಲ.

ಪ್ರಶ್ನೆ - ಜಗತ್ತಿಗೆ ನಿರ್ಗುಣಬ್ರಹ್ಮನು ಉಪಾದಾನಕಾರಣನಾಗಿದ್ದಾನೆ. ಸಗುಣಬ್ರಹ್ಮನು ನಿಮಿತ್ತಕಾರಣನಾಗಿದ್ದಾನೆ. ಸಗುಣಬ್ರಹ್ಮನಿಂದ ನಿರ್ಗುಣಬ್ರಹ್ಮನಿಗೆ ಧರ್ಮಿಸತ್ತಾಸಮಾನ-ಸತ್ತಾಕವಾದ ವ್ಯಾವಹಾರಿಕಭೇದವು ಇರಬಹುದು. ಆದರೆ ಪಾರಮಾರ್ಥಿಕ ಭೇದವಿಲ್ಲದ ಕಾರಣ ಜಗತ್ತಿಗೆ ನಿಮಿತ್ತಕಾರಣ ಹಾಗೂ ಉಪಾದಾನಕಾರಣನು ಒಬ್ಬನೇ ಆಗುತ್ತಾನೆಂದು ಹೇಳಬಹುದಲ್ಲವೇ?

ಉತ್ತರ - ಹಾಗಾದರೆ ಜಗತ್ತಿನಲ್ಲಿ ಗಗನಾದಿಗಳಂತೆ ಘಟವೂ ಕೂಡ ಒಂದೇ ಉಪಾದಾನಕಾರಣ ನಿಮಿತ್ತಕಾರಣವನ್ನು ಹೊಂದಿದಂತಾಗುತ್ತದೆ. ಉಪಾದಾನಕಾರಣ ಮೃತ್ಪಿಂಡವಾಗಿದೆ. ಕುಲಾಲನು ನಿಮಿತ್ತಕಾರಣನಾಗಿದ್ದಾನೆಂದು ಭೇದವಿದೆಯಲ್ಲವೇ? ಎಂದು ಪ್ರಶ್ನಿಸಬಾರದು. ಮೃತ್ಪಿಂಡಕ್ಕೂ ಕುಲಾಲನಿಗೂ ಧರ್ಮಿಸತ್ತಾಸಮಾನಸತ್ತಾಕವಾದ ವ್ಯಾವಹಾರಿಕ-ಭೇದವಿರಬಹುದು. ಆದರೆ ಪಾರಮಾರ್ಥಿಕಭೇದವು ಇರುವುದಿಲ್ಲ. ಜಗತ್ತಿನಲ್ಲಿ ಎಲ್ಲಿಯೂ ಕೂಡ ನೀವು ಪಾರಮಾರ್ಥಿಕಭೇದವನ್ನು ಒಪ್ಪಿಲ್ಲ. ಆದ್ದರಿಂದ ಘಟಾದಿಗಳೂ ಕೂಡ ಅಭಿನ್ನನಿಮಿತ್ತೋಪಾದಾನಕವೇ ಆಗುತ್ತವೆ. ಹೀಗಿರುವಾಗ ನೀವು ಗಗನಾದಿಗಳಲ್ಲಿ ಮಾತ್ರ ನಿಮಿತ್ತಕಾರಣ ಉಪಾದಾನ ಕಾರಣ ಒಂದೇ ಆಗಿರುತ್ತದೆ. ಘಟಾದಿಗಳಲ್ಲಿ ಆಗಿರುವುದಿಲ್ಲವೆಂದು ಆಕ್ಷೇಪ ಮಾಡಿಕೊಂಡು ಈ ಅಧಿಕರಣವನ್ನು ಆರಂಭ ಮಾಡಿದ್ದು ತಪ್ಪಾಗುತ್ತದೆ.

ಆದ್ದರಿಂದ ಘಟಾದಿಗಳಲ್ಲಿ ಕರ್ತೃ ಹಾಗೂ ಉಪಾದಾನಗಳಿಗೆ ಭೇದವಿದೆಯೆಂದು ಸ್ವೀಕರಿಸಿ, ಗಗನಾದಿಗಳಲ್ಲಿ ಕರ್ತೃ ಹಾಗೂ ಉಪಾದಾನಗಳಿಗೆ ಭೇದವಿಲ್ಲವೆಂದು ಸಮರ್ಥಿಸಲು ಸೃಷ್ಟಿಯ ಮೊದಲು 'ಸದೇವ ಸೌಮ್ಯ ಇದಮಗ್ರ ಆಸೀತ್' ಇತ್ಯಾದಿ ಶ್ರುತಿಯ ಬಲದಿಂದ ಸತ್‌ಪದಾರ್ಥ ಮಾತ್ರ ಇತ್ತು ಎಂದು ಸಮರ್ಥಿಸುತ್ತಾ ಬ್ರಹ್ಮನಿಗಿಂತ ಭಿನ್ನವಾದ ಬೇರೆ ಯಾವುದೇ ಕಾರಣವು ಇರಲಿಲ್ಲವೆಂದು ಕಷ್ಟಪಟ್ಟು ಸಮರ್ಥಿಸುವುದು ವ್ಯರ್ಥವಲ್ಲವೇ? ಏಕೆಂದರೆ ಗಗನಾದಿಗಳಲ್ಲಿಯೂ ಕರ್ತೃ ಹಾಗೂ ಉಪಾದಾನಗಳಿಗೆ ವ್ಯಾವಹಾರಿಕ ಭೇದವು ಇದ್ದೇ ಇರುತ್ತದೆ. ಘಟಾದಿಗಳ ವಿಷಯದಲ್ಲಿಯೂ ಕರ್ತೃ ಹಾಗೂ ಉಪಾದಾನಗಳಿಗೆ ವ್ಯಾವಹಾರಿಕ ಭೇದವು ಇದ್ದೇ ಇರುತ್ತದೆ. ಗಗನಾದಿಗಳ ವಿಷಯದಲ್ಲಿ ಕರ್ತೃ ಹಾಗೂ ಉಪಾದಾನಗಳಿಗೆ ಪಾರಮಾರ್ಥಿಕ ಭೇದವಿಲ್ಲವೆಂದು ಹೇಳಿದರೆ, ಇಲ್ಲಿಯೂ ಘಟಾದಿಗಳ ವಿಷಯದಲ್ಲಿ ಕರ್ತೃ ಹಾಗೂ ಉಪಾದಾನಗಳಿಗೆ ಪಾರಮಾರ್ಥಿಕ ಭೇದವು ಇರುವುದಿಲ್ಲ. ಆದ್ದರಿಂದ ಜಗತ್ತಿನ ಸೃಷ್ಟಿಗಿಂತ ಪೂರ್ವದಲ್ಲಿ ಬ್ರಹ್ಮನೆಂಬ ಉಪಾದಾನಕಾರಣವು ಇರಬಹುದು. ಕಲ್ಪಿತನಾದ ಸಗುಣಬ್ರಹ್ಮ ಎಂಬ ಕರ್ತೃವೂ ಕೂಡ ಇರಬಹುದು. ಬ್ರಹ್ಮಾನ್ಯಹೇತು ಯಾವುದೂ ಇರುವುದಿಲ್ಲವೆಂಬ ವ್ಯುತ್ಪಾದನೆಯು ವ್ಯರ್ಥವಾಗಿದೆ.

ಮತ್ತು ಕರ್ತೃಕಾರಕವನ್ನು ಒಪ್ಪುವುದು ಹೇಗೆ ಅನಿವಾರ್ಯವೋ, ಅದರಂತೆ ಕಾಲ ಮೊದಲಾದ ಅಧಿಕರಣಕಾರಕಗಳನ್ನು ಒಪ್ಪುವುದೂ ಅನಿವಾರ್ಯ. ಕಾಲಾದಿ ಅಧಿಕರಣಕಾರಕಗಳನ್ನು ನೀವು ಬ್ರಹ್ಮನಿಗಿಂತ ಭಿನ್ನವೆಂದು ಹೇಳಿದರೆ ಏಕವಿಜ್ಞಾನದಿಂದ ಸರ್ವವಿಜ್ಞಾನ ಪ್ರತಿಜ್ಞೆಯು ಅಯುಕ್ತವಾಗುತ್ತದೆ. ಆದ್ದರಿಂದ 'ಸದೇವ ಸೋಮ್ಯ ಇದಮಗ್ರ ಆಸೀತ್' ಎಂಬ ಶ್ರುತಿ ಹೇಳುವಂತೆ ಕಾರ್ಯವು ಹುಟ್ಟುವ ಮೊದಲು ಬ್ರಹ್ಮನು ಹೇಗೆ ಇದ್ದಾನೋ, ತದರಂತೆ ಕರ್ತೃವಾದ ಶಬಲಬ್ರಹ್ಮನೂ ಇರುತ್ತಾನೆ. ಅದರಂತೆ ದೇಶ, ಕಾಲ ಮೊದಲಾದ ಅಧಿಕರಣಕಾರಕಗಳೂ ಕೂಡ ಸೃಷ್ಟಿಯ ಮೊದಲು ಇರುತ್ತವೆಂದು ಒಪ್ಪಬೇಕು. ಅವುಗಳೆಲ್ಲವೂ ಬ್ರಹ್ಮನಿಗಿಂತ ಅಭಿನ್ನವಾಗಿವೆ ಎಂದೂ ಕೂಡ ಒಪ್ಪಬೇಕಾಗುತ್ತದೆ. ಇದನ್ನು ಬಿಟ್ಟು ಕೇವಲ ಕರ್ತೃವಿನಿಂದ ಅಭೇದ ಹೇಳಲು ಈ ಅಧಿಕರಣ ಹೊರಟಿದೆ ಎಂದು ನೀವು ಹೇಳುವುದು ಸರಿಯಲ್ಲ.

ಏಕವಿಜ್ಞಾನದಿಂದ ಸರ್ವವೂ ವಿಜ್ಞಾತವಾಗುತ್ತದೆಂಬ ಶ್ರುತಿಯ ಪ್ರತಿಜ್ಞಾವಾಕ್ಯಕ್ಕೆ ಅನುಸಾರಿಯಾಗಿ ಬ್ರಹ್ಮನು ಉಪಾದಾನಕಾರಣನಾಗುತ್ತಾನೆಂದು ನೀವು ಹೇಳುತ್ತಿದ್ದೀರಿ. ಹಾಗಾದರೆ ಅದೇ ಪ್ರತಿಜ್ಞಾವಾಕ್ಯದ ಬಲದಿಂದ ಬ್ರಹ್ಮನು ನಿಮಿತ್ತಕಾರಣನಲ್ಲವೆಂದೂ ಕೂಡ ಆಗಬೇಕಾದೀತು.

'ಯತ್ರ ಯತ್ರ ನಿಮಿತ್ತತ್ವಂ ತತ್ರ ತತ್ರ ಭೇದಃ' ಎಂಬುದಾಗಿ ವ್ಯಾಪ್ತಿಯು ಲೋಕಸಿದ್ಧವಾಗಿದೆ. ಒಂದುವೇಳೆ ಬ್ರಹ್ಮನು ನಿಮಿತ್ತಕಾರಣನಾಗುವುದಾದರೆ ಪ್ರಪಂಚದ ಭೇದವು ಅವನಲ್ಲಿ ಬರಬೇಕಾದೀತು. ಆವಾಗ ಏಕವಿಜ್ಞಾನದಿಂದ ಸರ್ವವೂ ವಿಜ್ಞಾತವಾಗುತ್ತದೆ ಎಂಬುದೇ ಅಯುಕ್ತವಾಗುತ್ತದೆ. ವ್ಯಾಪ್ಯವಾದ ನಿಮಿತ್ತತ್ವವು ಬ್ರಹ್ಮನಲ್ಲಿದ್ದರೂ ಕೂಡ ವ್ಯಾಪಕವಾದ ಭೇದವು ಅವನಲ್ಲಿ ಬರುವುದಿಲ್ಲವೆಂದು ಹೇಳಲು ಸಾಧ್ಯವಿಲ್ಲವಷ್ಟೇ. ಎಲ್ಲಿ ವ್ಯಾಪ್ತಿಯು ಇರುತ್ತದೋ, ಅಲ್ಲಿ ವ್ಯಾಪಕವು ಇದ್ದೇ ಇರುತ್ತದೆ.

ಶಂಕೆ - ಭೇದವ್ಯಾಪ್ಯವಾದದ್ದು ನಿಮಿತ್ತತ್ವವಲ್ಲ. ಹೊರತು, ಉಪಾದಾನತ್ವಭಾವ. 'ಯತ್ರ ಯತ್ರೇತಿ ಉಪಾದಾನತ್ವಾಭಾವಃ ತತ್ರ ತಸ್ಮಾತ್ ಭೇದಃ' ಎಂಬ ವ್ಯಾಪ್ತಿಯನ್ನು ಹೇಳುತ್ತೇವೆ. ಪಟವು ಘಟಕ್ಕೆ ಉಪಾದಾನಕಾರಣವಲ್ಲ. ಅಂತಹ ಪಟವು ಘಟಕ್ಕಿಂತ ಭಿನ್ನವಾಗಿದೆ. ಪ್ರಕೃತ ಬ್ರಹ್ಮನಲ್ಲಿ ಉಪಾದಾನತ್ವಭಾವವು ಇರುವುದಿಲ್ಲ. ಆದ್ದರಿಂದ ಭೇದವೂ ಕೂಡ ಅವನಲ್ಲಿ ಬರುವುದಿಲ್ಲವೆಂದು ಹೇಳುತ್ತೇವೆ.

'ಯತ್ರೇತಿ ಉಪಾದಾನತ್ವಾಭಾವಃ ತತ್ರ ತತೋ ತಸ್ಮಾತ್ ಭೇದಃ' ಎಂಬ ನೀವು ಹೇಳಿದ ವ್ಯಾಪ್ತಿಗೆ ಮೃತ್‌ನಲ್ಲಿ ವ್ಯಭಿಚಾರ ಬರುತ್ತದೆ. ತನಗೆ ತಾನು ಉಪಾದಾನವಲ್ಲದ ಕಾರಣ ಮೃತ್ ಪ್ರತಿ ಉಪಾದಾನತ್ವವು ಮೃತ್‌ನಲ್ಲಿ ಇರುವುದಿಲ್ಲ. ಆದರೆ ಭೇದವು ಅಲ್ಲಿ ಕಾಣಿಸುತ್ತಿಲ್ಲ. ಆದ್ದರಿಂದ ಯತ್ರೇತಿ ಉಪಾದಾನತ್ವಾಭಾವಃ ಮೃತ್‌ನಲ್ಲಿ ಮೃದಂ ಪ್ರತಿ ಉಪಾದಾನ್ವತಾಭಾವವೂ ಇದೆ. ಆದರೆ ವ್ಯಾಪಕೀಭೂತವಾದ ಭೇದವು ಇರುವುದಿಲ್ಲ. ತನ್ನಲ್ಲಿ ತನ್ನ ಭೇದವು ಇರುವುದಿಲ್ಲವಷ್ಟೇ ? ಮತ್ತು ನಿಮಿತ್ತತ್ವವನ್ನೇ ಭೇದವ್ಯಾಪ್ತವೆಂದು ಸುಲಭವಾಗಿ ಹೇಳಲು ಬರುವಾಗ ಉಪಾದಾನತ್ವಾಭಾವವು ಭೇದವ್ಯಾಪ್ತವೆಂದು ಹೇಳುವುದು ಗೌರವವಾಗಿದೆ.

ಹೀಗೆ ಗೌರವದೋಷಗ್ರಸ್ತವಾದ್ದರಿಂದಲೇ ಮತ್ತೊಂದು ಆಶಂಕೆಯನ್ನು ನಿರಾಕರಿಸಿದಂತಾಯಿತು-

ಶಂಕೆ - 'ಯತ್ರ ಉಪಾದಾನತ್ವಾಭಾವಃ ತತ್ರ ಭೇದಃ' ಎಂಬುದಾಗಿ ವ್ಯಾಪ್ತಿಯನ್ನು ಹೇಳುವುದಿಲ್ಲ. ಹೊರತಾಗಿ 'ಎಲ್ಲಿ ಉಪಾದಾನತ್ವಾಭಾವವಿಶಿಷ್ಟವಾದ ನಿಮಿತ್ತತ್ವವು ಇರುತ್ತದೋ ಅಲ್ಲಿ ಭೇದವಿರುತ್ತದೆ' ಎಂಬುದಾಗಿ ವ್ಯಾಪ್ತಿಯನ್ನು ಹೇಳುತ್ತೇವೆ. ಮೃತ್‌ನಲ್ಲಿ ಉಪಾದಾನತ್ವಾಭಾವವೆಂಬ ವಿಶೇಷಣ- ವಿರಬಹುದು. ಆದರೆ ತಸಗೆ ತಾನು ನಿಮಿತ್ತವಲ್ಲದ ಕಾರಣ ನಿಮಿತ್ತತ್ವವೆಂಬ ವಿಶೇಷ್ಯವು ಬರುವುದಿಲ್ಲ. ಆದ್ದರಿಂದ ವಿಶಿಷ್ಟವೂ ಕೂಡ ಬರುವುದಿಲ್ಲವೆಂದು ವ್ಯಭಿಚಾರವನ್ನು ಪರಿಹರಿಸಿಕೊಳ್ಳುತ್ತೇವೆ.

ಸಮಾಧಾನ - ಈ ಪಕ್ಷದಲ್ಲಿಯೂ ಕೂಡ ಗೌರವದೋಷ ತಪ್ಪಿದ್ದಲ್ಲ. ಕೇವಲ ನಿಮಿತ್ತತ್ವವೇ ಭೇದವ್ಯಾಪ್ಯವೆಂಬ ವ್ಯಾಪ್ತಿಗೆ ಎಲ್ಲಿಯೂ ವ್ಯಭಿಚಾರ ಇಲ್ಲದಿರುವಾಗ ವಿಶೇಷಣಗಳನ್ನು ನೀಡಿ, ವ್ಯಾಪ್ತಿ ಹೇಳುವುದರಲ್ಲಿ ಅರ್ಥವಿಲ್ಲ.

ಅಷ್ಟೇ ಅಲ್ಲದೇ ಯಾವುದು ಉಪಾದಾನಕಾರಣವಾಗಿರುತ್ತದೋ, ಅದು ಅದರಿಂದ ಅಭಿನ್ನವಾಗಿರುತ್ತದೆಂಬ ವ್ಯಾಪ್ತಿಯೂ ಲೋಕದಲ್ಲಿ ಸಿದ್ಧವಾಗಿದೆ. ಆದ್ದರಿಂದ ನಿಮಿತ್ತತ್ವಾಭಾವವಿಶಿಷ್ಟವಾದ ಉಪಾದಾನತ್ವವು ಅಭೇದಕ್ಕೆ ಪ್ರಯೋಜಕವೆಂದು ನಾವು ಆಪತ್ತಿ ಮಾಡುತ್ತೇವೆ. ಬ್ರಹ್ಮನಲ್ಲಿ ನಿಮಿತ್ತತ್ವಾಭಾವವಿಶಿಷ್ಟವಾದ ಉಪಾದಾನತ್ವಭಾವವು ಇರುವುದಿಲ್ಲ. ಏಕೆಂದರೆ ನೀವು ಬ್ರಹ್ಮನು ನಿಮಿತ್ತಕಾರಣನೂ ಆಗಿದ್ದಾನೆಂದು ಹೇಳುತ್ತಿದ್ದೀರಿ. ಆದ್ದರಿಂದ ಜಗತ್ತಿಗೂ ಬ್ರಹ್ಮನಿಗೂ ಅಭೇದವಿಲ್ಲವೆಂದು ಆಗಬೇಕಾದೀತು.

ಅದ್ವೈತಿಗಳಾದ ನಿಮ್ಮ ಮತದಲ್ಲಿ ತಂತುವನ್ನು ಕುರಿತು ಊರ್ಣನಾಭಿಯು ನಿಮಿತ್ತಕಾರಣವೂ ಆಗಿದೆ, ಉಪಾದಾನಕಾರಣವೂ ಆಗಿದೆಯೆಂದು ಒಪ್ಪಿರುತ್ತೀರಿ. ಪ್ರಕೃತ ಉಪಾದಾನತ್ವವಷ್ಟೇ ಅಭೇದವ್ಯಾಪ್ಯವೆಂದು ಹೇಳಿದರೆ ಊರ್ಣನಾಭಿಯಲ್ಲಿ ಉಪಾದಾನತ್ವವಿದೆ. ಅದರೆ ಅಭೇದವು ಇರುವುದಿಲ್ಲ. ಆದ್ದರಿಂದ ಕೇವಲ 'ಯತ್ರ ಉಪಾದಾನತ್ವಂ ತತ್ರ ಅಭೇದಃ' ಎಂಬುದಾಗಿ ವ್ಯಾಪ್ತಿಯನ್ನು ಹೇಳಿದರೆ ಊರ್ಣನಾಭಿಯಲ್ಲಿ ಉಪಾದಾನತ್ವವು ಇದೆ, ಆದರೆ ಅಭೇದವು ಇರುವುದಿಲ್ಲ.ಮತ್ತು ಊರ್ಣನಾಭಿಯ ಜ್ಞಾನ ಬಂದರೂ ಕೂಡ ತಂತುವಿನ ಜ್ಞಾನವು ಬರುವುದಿಲ್ಲವೆಂದೂ ಕೂಡ ಕಂಡಿದೆ. ಇಲ್ಲಿ ವ್ಯಭಿಚಾರದೋಷವನ್ನು ಪರಿಹರಿಸಿಕೊಳ್ಳಲು ನಿಮಿತ್ತತ್ವಾಭಾವವಿಶಿಷ್ಟಾಭಾವವು ಎಲ್ಲಿ ಇರುತ್ತದೋ, ಅಲ್ಲಿ ಅಭೇದವಿರುತ್ತದೆ ಎಂಬುದಾಗಿ ನಾವು ಹೇಳಿದಂತೆ ಹೇಳಬೇಕು. ಊರ್ಣನಾಭಿಯಲ್ಲಿ ನಿಮ್ಮ ಪ್ರಕಾರ ನಿಮಿತ್ತತ್ವವೂ ಕೂಡ ಇರುವುದರಿಂದ ನಿಮಿತ್ತತ್ವಾಭಾವವಿಶಿಷ್ಟವಾದ ಉಪಾದಾನತ್ವವು ಇಲ್ಲದ ಕಾರಣ ವ್ಯಭಿಚಾರವು ಪರಿಹಾರವಾಗುತ್ತದೆ. ಆದ್ದರಿಂದ ನೀವು ಹೇಳಿದ ವ್ಯಾಪ್ತಿಗೆ ವ್ಯಭಿಚಾರ ಬರುತ್ತದೆ. ನಾವು ಹೇಳಿದ ವ್ಯಾಪ್ತಿಗೆ ಯಾವುದೇ ವ್ಯಭಿಚಾರಾದಿದೋಷಗಳು ಬರುವುದಿಲ್ಲ.

ಶಂಕೆ - ಲೋಕದೃಷ್ಟಿಯನ್ನು ಮೀರಿ ಶ್ರುತಿಬಲದಿಂದ ಬ್ರಹ್ಮನು ನಿಮಿತ್ತಕಾರಣನಾಗಿದ್ದಾನೆಂದು ಒಪ್ಪಬೇಕು. ಮತ್ತು ಏಕವಿಜ್ಞಾನದಿಂದ ಸರ್ವವಿಜ್ಞಾನವನ್ನು ಹೇಳಿರುವುದರಿಂದ ಉಪಾದಾನತ್ವವೂ ಕೂಡ ಒಪ್ಪಬೇಕು.

ಸಮಾಧಾನ - ಹಾಗಾದಲ್ಲಿ ಬ್ರಹ್ಮನು ಉಪಾದಾನಕಾರಣನಾಗದಿದ್ದರೂ ಶ್ರುತಿಬಲದಿಂದಲೇ ನಿಮಿತ್ತಕಾರಣನಾಗಿದ್ದಾನೆಂದೂ ಕೂಡ ಒಪ್ಪಬಹುದು. ಏಕವಿಜ್ಞಾನದಿಂದ ಸರ್ವವಿಜ್ಞಾನದ ಪ್ರತಿಜ್ಞೆಯನ್ನು ಪ್ರಾಧಾನಾದ್ಯಭಿಪ್ರಾಯಗಳಿಂದ ಕೂಡಿಸಬಹುದು. ಇಷ್ಟು ನಿರಾಕರಣೆ ಕೇವಲ ದಿಕ್‌ಪ್ರದರ್ಶನ.

ಭಾಮತಿಯಲ್ಲಿ ಸೂತ್ರಗಳ ವ್ಯಾಖ್ಯಾನ ಹೀಗಿದೆ - ಪ್ರಥಮಸೂತ್ರಕ್ಕೆ ವ್ಯಾಖ್ಯಾನ ಮಾಡುವಾಗ 'ಇಹೋಪಾದಾನತ್ವಂ ನಾಮ ಭ್ರಮಾಧಿಷ್ಠಾನತ್ವಮ್' ಪ್ರಕೃತಿ ಶಬ್ದದಿಂದ ಹೇಳಲ್ಪಟ್ಟ ಉಪಾದಾನತ್ವವು 'ಅಧಿಷ್ಠಾನ' ಎಂಬರ್ಥವನ್ನು ಹೇಳುತ್ತಿದೆ. ಸಮಗ್ರ ಪ್ರಪಂಚದ ಭ್ರಮೆಗೆ ಬ್ರಹ್ಮನು ಅಧಿಷ್ಠಾನನಾದ್ದರಿಂದ ಉಪಾದಾನವಾಗಿದ್ದಾನೆ ಎಂದು.

ಹೀಗೆ ಅಧಿಷ್ಠಾನವನ್ನೇ ಉಪಾದಾನವೆಂದು ಹೇಳುವುದಾದರೆ, ಪ್ರಥಮಸೂತ್ರದಲ್ಲಿ ಪ್ರಕೃತಿ ಎಂಬ ಪ್ರತಿಜ್ಞೆಯೇ ಯುಕ್ತವಾಗುವುದಿಲ್ಲ. ಏಕೆಂದರೆ ಸರ್ಪದ ಭ್ರಮೆಗೆ ಹಗ್ಗವು ಅಧಿಷ್ಠಾನವಾಗುವುದಿಲ್ಲ. ಆದರೆ ಯಾರೂ ಕೂಡ ಹಗ್ಗವನ್ನು ಸರ್ಪದ ಪ್ರಕೃತಿಯೆಂದು ಕರೆಯುವುದಿಲ್ಲ. ಆದ್ದರಿಂದ ಅಧಿಷ್ಠಾನವೇ ಬೇರೆ, ಉಪಾದಾನಕಾರಣವೇ ಬೇರೆ, ಉಪಾದಾನಕಾರಣವಾದದ್ದು ಅಧಿಷ್ಠಾನವಾಗಲು ಸಾಧ್ಯವೇ ಇಲ್ಲ.

'ಪ್ರತಿಜ್ಞಾದೃಷ್ಟಾಂತಾನುಪರೋಧಾತ್' ಎಂಬ ಹೇತುವೂ ಕೂಡ ಈ ಪಕ್ಷದಲ್ಲಿ ಅಯುಕ್ತವಾಗುತ್ತದೆ. ಏಕೆಂದರೆ ಸೂತ್ರದಲ್ಲಿ ಉಲ್ಲೇಖಿಸಿದ ಯಾವ ಶ್ರುತಿಯಿದೆಯೋ, ಅದರಲ್ಲಿ ಮೃತ್ಪಿಂಡದ ದೃಷ್ಟಾಂತವನ್ನು ನೀಡಲಾಗಿದೆ. ಮೃತ್ಪಿಂಡದಿಂದ ಮೃನ್ಮಯವಾದ ಘಟಾದಿಗಳು ಹುಟ್ಟುತ್ತವೆ ಎಂದು ಹೇಳಿದಾಗ, ಘಟಕ್ಕೆ ಮೃತ್ಪಿಂಡವು ಉಪಾದಾನಕಾರಣವಾಯಿತು. ಆದರೆ ಯಾರೂ ಕೂಡ ಘಟಪಟಾದಿಗಳಿಗೆ ಮೃತ್ಪಿಂಡವನ್ನು ಅಧಿಷ್ಠಾನವೆಂದು ಹೇಳುವುದಿಲ್ಲ. ಘಟಪಟಾದಿಗಳು ಮಣ್ಣಿನಲ್ಲಿ ಅಧ್ಯಸ್ತವೆಂದಾಗಲಿ, ಮಣ್ಣು ಘಟಾದಿಗಳಿಗೆ ಅಧಿಷ್ಠಾನವೆಂದಾಗಲೀ ಹೇಳಲು ಸಾಧ್ಯವೇ ಇಲ್ಲ. ಏಕೆಂದರೆ ಅಧಿಷ್ಠಾನದ ಜ್ಞಾನವು ಪ್ರಾಪ್ತವಾದಾಗ ಅಧ್ಯಸ್ತವು ನಿವೃತ್ತವಾಗುವುದು ಲೋಕಸಿದ್ಧವಾದ ವಿಷಯ. ಆದರೆ ಮಣ್ಣಿನ ಯಥಾರ್ಥಜ್ಞಾನ ಬಂದರೂ ಕೂಡ ನೀವು ಅಧ್ಯಸ್ತವೆಂದು ಹೇಳುವ ಘಟಾದಿಗಳು ನಿವೃತ್ತವಾಗದೇ ಹಾಗೆಯೇ ಇರುತ್ತದೆ.

'ಅಭಿಧ್ಯೋಪದೇಶಾಚ್ಚ' ಎಂಬ ಎರಡನೆಯ ಸೂತ್ರಕ್ಕೆ ಹೀಗೆ ವ್ಯಾಖ್ಯಾನಿಸಲಾಗಿದೆ. 'ಸೋऽಕಾಮಯತ ಬಹುಸ್ಯಾಮ್ ಪ್ರಜಾಯೇಯ' ಎಂಬ ಶ್ರುತಿಯಲ್ಲಿ ಬ್ರಹ್ಮನು

ಬಹುರೂಪವಾದ ಜಗತ್ತಿನ ರೂಪವನ್ನು ತಾಳಬೇಕೆಂದು ಇಚ್ಛಿಸುತ್ತಾನೆಂದು ಹೇಳಲಾಗಿದೆ. ಇಚ್ಛೆ ಮಾಡುವುದರಿಂದ ನಿಮಿತ್ತಕಾರಣನೆಂದು ಜಗತ್ತಾಗಿ ಪರಿಣಾಮವನ್ನು ಹೊಂದುವುದರಿಂದ ಉಪಾದಾನಕಾರಣನಾಗಿದ್ದಾನೆಂದು ಸಿದ್ಧವಾಗುತ್ತದೆ.

ಎರಡನೆಯ ಸೂತ್ರವ್ಯಾಖ್ಯಾನವು ಅಯುಕ್ತವಾಗಿದೆ. ಶ್ರುತಿಯಲ್ಲಿ ಬ್ರಹ್ಮನು ಅನೇಕರೂಪವನ್ನು ತಾಳುತ್ತೇನೆಂದು ಸಂಕಲ್ಪ ಮಾಡಿದ್ದಾನೆಂದು ಹೇಳಲಾಗಿದೆ ಹೊರತು, ನಿನಗೆ ಅಭಿಮತವಾದ ಅಧಿಷ್ಠಾನನಾಗುತ್ತೇನೆ ಎಂಬ ಸಂಕಲ್ಪವು ಕಾಣಿಸುತ್ತಿಲ್ಲ. ಸ್ಥಾಣುವಿನಲ್ಲಿ ಪುರುಷನು ಅಧ್ಯಸ್ತವಾದಾಗ ಮೊದಲು ಸ್ಥಾಣುವಾದ ಪದಾರ್ಥವು 'ನಾನು ಪುರುಷನಾಗುತ್ತೇನೆ' ಎಂಬ ಇಚ್ಛೆಯನ್ನು ಮಾಡುವುದಿಲ್ಲವಷ್ಟೇ ?

ಮೂರನೆಯ ಸೂತ್ರ ವ್ಯಾಖ್ಯಾನ ಹೀಗಿದೆ - 'ಸರ್ವಾಣಿ ಹವಾ ಇಮಾನಿ ಭೂತಾನಿ ಆಕಾಶಾದೇವ ಸಮುತ್ಪದ್ಯಂತೇ ಆಕಾಶಂ ಪ್ರತಿ ಅಸ್ತಂ ಯಂತಿ' ಎಂಬುದಾಗಿ ಛಾಂದೋಗ್ಯೋಪನಿಷತ್ತಿನಲ್ಲಿ ನೇರವಾಗಿ ಬ್ರಹ್ಮನಲ್ಲಿಯೇ ಪ್ರಪಂಚದ ಉತ್ಪತ್ತಿ ಹಾಗೂ ಲಯಗಳನ್ನು ಹೇಳಲಾಗಿದೆ. ಒಂದು ವೇಳೆ ಬ್ರಹ್ಮನು ಉಪಾದಾನಕಾರಣನಾಗದಿದ್ದಲ್ಲಿ ಸಮಸ್ತ ಪ್ರಪಂಚವು ಅವರಲ್ಲೇ ಲಯವಾಗುತ್ತದೆ ಎಂದು ಹೇಳುವುದು ಯುಕ್ತವಾಗುವುದಿಲ್ಲ.

ಈ ವ್ಯಾಖ್ಯಾನವೂ ಕೂಡ ಸರಿಯಲ್ಲ. ಏಕೆಂದರೆ ರಜತವು ಶುಕ್ತಿಯಲ್ಲಿ ಅಧ್ಯಸ್ತವಾಗಿದೆ. ಆದರೆ ಯಾರೂ ಕೂಡ ಶುಕ್ತಿಯಿಂದ ರಜತವು ಹುಟ್ಟಿತು ಮತ್ತು ಅದರಲ್ಲೇ ಲಯಹೊಂದಿತು ಎಂದು ಹೇಳುವುದಿಲ್ಲ. ಶ್ರುತಿಯು ಬ್ರಹ್ಮನಲ್ಲೇ ಜಗತ್ತು ಹುಟ್ಟಿತು, ಅವನಲ್ಲೇ ಲಯಹೊಂದಿತು ಎಂದು ಹೇಳುತ್ತಿರುವುದರಿಂದ ಶುಕ್ತಿರೂಪ್ಯದ ದೃಷ್ಟಾಂತದಂತೆ ಬ್ರಹ್ಮನಲ್ಲಿ ಪ್ರಪಂಚವು ಅಧ್ಯಸ್ತವೆಂದು ನಿಮಗೆ ಹೇಳಲು ಸಾಧ್ಯವೇ ಇಲ್ಲ. ಆದ್ದರಿಂದ ಈ ಮೂರನೆಯ ಸೂತ್ರವೂ ಕೂಡ ನಿಮ್ಮ ವಿವರ್ತವಾದಕ್ಕೆ ಪ್ರತಿಕೂಲವೇ ಆಗಿದೆ.

ಮತ್ತು ಇದೇ ಸೂತ್ರದಲ್ಲಿ ಉಭಯ ಎಂಬ ಸರ್ವನಾಮಶಬ್ದದಿಂದ ಪ್ರಥಮಸೂತ್ರದಲ್ಲಿ ಪ್ರಸಕ್ತವಾದ ನಿಮಿತ್ತತ್ವ ಹಾಗೂ ಉಪಾದಾನತ್ವಗಳೆರಡನ್ನೂ ಪರಾಮರ್ಶಿಸಬೇಕು. ಆದರೆ ನೀವು ಪೂರ್ವಪ್ರಸಕ್ತವಾದದ್ದನ್ನು ಪರಾಮರ್ಶ ಮಾಡದೇ ಅಪ್ರಕೃತವಾದ ಪ್ರಭವ ಮತ್ತು ಪ್ರಲಯ ಎಂಬರ್ಥವನ್ನು ಹೇಳಿದ್ದೀರಿ. ಇದು ಅಯುಕ್ತವಾಗಿದೆ.

ಸೂತ್ರವು ಕೇವಲ ಬ್ರಹ್ಮನಿಗೆ ಉಪಾದಾನತ್ವವನ್ನಷ್ಟೇ ಪ್ರತಿಪಾದನೆ ಮಾಡುವುದಾದರೆ, ಪ್ರಲಯವನ್ನು ಹೇಳಿದರೆ ಸಾಕು. ಉತ್ಪತ್ತಿಯನ್ನು ಹೇಳುವ ಅವಶ್ಯಕತೆಯಿಲ್ಲ. ಯಾವುದು ಉಪಾದಾನಕಾರಣವೋ, ಅದರಲ್ಲಿಯೇ ಕಾರ್ಯವು ಲಯವಾಗುತ್ತದೆಂದು ಲೋಕದಲ್ಲಿ ಕಂಡಿದೆ. ಆದ್ದರಿಂದ ಸೂತ್ರದಲ್ಲಿ ಉತ್ಪತ್ತಿಯನ್ನು ಉಲ್ಲೇಖಿಸಿದ್ದು ತಪ್ಪಾಗುತ್ತದೆ. ಒಂದು ವೇಳೆ ಬ್ರಹ್ಮನು ನಿಮಿತ್ತಕಾರಣನೂ ಆಗಿದ್ದಾನೆ ಉಪಾದಾನಕಾರಣನೂ ಆಗಿದ್ದಾನೆಂದು ವಿವಕ್ಷಿಸುವುದಾದರೆ ಉಭಯಪದವೇ ವ್ಯರ್ಥವಾಗುತ್ತದೆ. ಏಕೆಂದರೆ ತಂತು ಊರ್ಣನಾಭಿಯಲ್ಲಿ ನಿಯಮೇನ ಲಯ ಹೊಂದುತ್ತದೆಂದು ಲೋಕದಲ್ಲಿ ಕಂಡಿಲ್ಲ. ಆದ್ದರಿಂದ ಕೇವಲ ಉಪಾದಾನದಲ್ಲಷ್ಟೇ ಅಸಾಧಾರಣವಾದ ಪ್ರಭವಪ್ರಲಯಗಳಿಂದ ನಿಮಿತ್ತತ್ವೇ ಸತ್ಯುಪಾದಾನತ್ವವನ್ನು ಸಮರ್ಥಿಸಲಾಗದು. ಆದ್ದರಿಂದ ಉಭಯಪದಕ್ಕೆ ಸಾರ್ಥಕ್ಯವೇ ಇರುವುದಿಲ್ಲ. ಮತ್ತು ಸಾಕ್ಷಾತ್ ಶಬ್ದಕ್ಕೆ ಯಾವುದೇ ವಿಶೇಷಾರ್ಥವನ್ನು ಹೇಳದ ಕಾರಣ ಅಸ್ವಾರಸ್ಯವು ಬರುತ್ತದೆ.

ಒಂದು ವೇಳೆ ಹಿಂದಿನ ಸೂತ್ರದಲ್ಲಿ ಬ್ರಹ್ಮನು ನಿಮಿತ್ತಕಾರಣನೂ, ಉಪಾದಾನಕಾರಣನೂ ಆಗಿದ್ದಾನೆಂಬುದನ್ನು ಪರಂಪರೆಯಿಂದ ಸಾಧನೆ ಮಾಡಿದ್ದಲ್ಲಿ, ಈ ಸೂತ್ರದಲ್ಲಿರುವ ಸಾಕ್ಷಾತ್ ಪದದಿಂದ ನೇರವಾಗಿ ಅದನ್ನು ಸಾಧಿಸಲಾಗಿದೆಯೆಂದು ಹೇಳುವುದು ಸ್ವರಸವಾಗುತ್ತದೆ. ಆದರೆ ನೀವು ಪರಂಪರೆಯಿಂದ ನಿಮಿತ್ತತ್ವ ಹಾಗೂ ಉಪಾದಾನತ್ವಗಳನ್ನು ಹಿಂದೆ ಸಮರ್ಥನೆ ಮಾಡಿಯೇ ಇಲ್ಲ. ಹೀಗಿರುವಾಗ ಇಲ್ಲಿರುವ 'ಸಾಕ್ಷಾತ್' ಪದಕ್ಕೆ ಸಾರ್ಥಕ್ಯ ಹೇಳಲು ಹೇಗೆ ಸಾಧ್ಯ ?

'ಆತ್ಮಕೃತೇಃ' ಎಂಬ ಸೂತ್ರವೇ ಬೇರೆ, 'ಪರಿಣಾಮಾತ್' ಎಂಬ ಸೂತ್ರವೇ ಬೇರೆ. 'ಆತ್ಮಕೃತೇಃ' ಎಂದರೆ 'ತದಾತ್ಮಾನಂ ಸ್ವಯಮಕುರುತ' ಎಂಬ ಶ್ರುತಿಯಲ್ಲಿ ಪರಮಾತ್ಮನು ತನ್ನನ್ನೇ ಸೃಷ್ಟಿ ಮಾಡಿಕೊಳ್ಳುತ್ತಾನೆ ಎಂದು ಹೇಳಲಾಗಿದೆ. ಒಬ್ಬನಲ್ಲಿಯೇ ಕರ್ಮತ್ವ ಹಾಗೂ ಕರ್ತೃತ್ವಗಳು ಶ್ರುತವಾಗಿರುವುದರಿಂದ ನಿಮಿತ್ತತ್ವ ಉಪಾದಾನತ್ವಗಳೆರಡೂ ಸಿದ್ಧವಾಗುತ್ತವೆ. 'ಪರಿಣಾಮಾತ್' ಎಂಬ ಸೂತ್ರದಲ್ಲಿ 'ಸಚ್ಚ ತ್ಯಚ್ಚಾಭವತ್' ಎಂಬ ಶ್ರುತಿಯು ಬ್ರಹ್ಮನಿಗೆ ಪರಿಣಾಮವನ್ನು ಹೇಳುತ್ತಿದೆ. ಆದ್ದರಿಂದ ಉಪಾದಾನಕಾರಣತ್ವವು ಸಿದ್ಧವಾಗುತ್ತದೆ. 'ಯೋನಿಶ್ಚ ಹಿ ಗೀಯತೇ' ಎಂಬ ಸೂತ್ರದಲ್ಲಿ 'ಯದ್ಭೂತಯೋನಿಮ್' ಎಂಬ ಶ್ರುತಿಯಲ್ಲಿರುವ ಯೋನಿಶಬ್ದಕ್ಕೆ 'ಉಪಾದಾನ' ಎಂದರ್ಥ. ಹೀಗೆ ಬ್ರಹ್ಮನು ಜಗತ್ತಿಗೆ ನಿಮಿತ್ತಕಾರಣನಷ್ಟೇ ಅಲ್ಲ.

ಉಪಾದಾನಕಾರಣನೂ ಆಗಿದ್ದಾನೆ ಎಂಬ ವಿಷಯದಲ್ಲಿ ನಾಲ್ಕು, ಐದು, ಆರನೆಯ ಸೂತ್ರಗಳು ಆಧಾರವಾಗಿವೆ ಎಂದು ವ್ಯಾಖ್ಯಾನ ಮಾಡುತ್ತಾರೆ.

ಈ ಮೂರು ಸೂತ್ರಗಳ ವ್ಯಾಖ್ಯಾನವೂ ಕೂಡ ಅತ್ಯಂತ ಅಯುಕ್ತವಾಗಿದೆ. ಏಕೆಂದರೆ ವಿವರ್ತಮತದಲ್ಲಿ ಶ್ರುತಿಯಲ್ಲಿರುವ ಹಾಗೂ ಸೂತ್ರದಲ್ಲಿರುವ ಪ್ರಕೃತಿಶಬ್ದ, ಪರಿಣಾಮಶಬ್ದ, ಯೋನಿಶಬ್ದಗಳಿಗೆ ಅರ್ಥವನ್ನು ಹೇಳಲು ಸಾಧ್ಯವೇ ಇಲ್ಲ. ರಜ್ಜುವಿನಲ್ಲಿ ಸರ್ಪವು ಆರೋಪಿತವಾಗಿದೆ ಎಂದು ತಿಳಿದಾಗ, ರಜ್ಜುವು ಸರ್ಪವನ್ನು ಮಾಡುತ್ತದೆ ಎಂದು ಯಾರೂ ಹೇಳುವುದಿಲ್ಲ. ಆದ್ದರಿಂದ ಪ್ರಕೃತಿ ಶಬ್ದವು ಅಯುಕ್ತವಾಗಿದೆ. ಅಥವಾ ರಜ್ಜುವು ಸರ್ಪವಾಯಿತು ಎಂದು ಯಾರೂ ಹೇಳುವುದಿಲ್ಲ. ಆದ್ದರಿಂದ ಪರಿಣಾಮಶಬ್ದವು ಅಯುಕ್ತವಾಗುತ್ತದೆ. ಅಥವಾ ಸರ್ಪರೂಪದಲ್ಲಿ ರಜ್ಜುವು ಪರಿಣತವಾಯಿತು ಎಂದೂ ಕೂಡ ಯಾರೂ ಹೇಳುವುದಿಲ್ಲ. ಆದ್ದರಿಂದ ಯೋನಿ ಶಬ್ದವು ಅಯುಕ್ತವಾಗಿದೆ.

ಅದ್ವೈತಿಗಳಲ್ಲಿ ವಿವರ್ತಪರಿಣಾಮವಾದದ ಪ್ರಕ್ರಿಯೆಯು ಬಹಳ ಇದೆ. ಅದನ್ನೆಲ್ಲ ನ್ಯಾಯಾಮೃತಾದಿಗ್ರಂಥಗಳಲ್ಲಿ ನಿರಾಕರಣೆ ಮಾಡಿದ್ದೇವೆ.

ನಮ್ಮ ಪ್ರಕಾರ ಈ ಅಧಿಕರಣದಲ್ಲಿ ಒಟ್ಟು ಐದು ಸೂತ್ರಗಳಿವೆ. ನಾಲ್ಕನೆಯ ಸೂತ್ರವನ್ನು ವ್ಯಾಖ್ಯಾನ ಮಾಡುವಾಗ ಮಾತ್ರ, ಆಚಾರ್ಯರು ಭಾಷ್ಯದಲ್ಲಿ ಅದ್ವೈತಮತವನ್ನು ನಿರಾಕರಣೆ ಮಾಡಿದ್ದಾರೆ. ಏಕೆಂದರೆ ನಾಲ್ಕನೆಯ ಸೂತ್ರದಲ್ಲಿರುವ ಪರಿಣಾಮಶಬ್ದ ನೇರವಾಗಿ ಉಪಾದಾನತ್ವವನ್ನು ಹೇಳುತ್ತಿದೆ. ಆದ್ದರಿಂದ ನಾಲ್ಕನೆಯ ಸೂತ್ರವನ್ನು ವ್ಯಾಖ್ಯಾನ ಮಾಡುವಾಗಲೇ ಪರಮತವನ್ನು ನಿರಾಕರಣೆ ಮಾಡಿದ್ದಾರೆ. ಆದ್ದರಿಂದ ಮೊದಲೇ ಏಕೆ ನಿರಾಕರಿಸಿಲ್ಲ ? ಎಂಬ ಪ್ರಶ್ನೆಗೆ ಅವಕಾಶವಿಲ್ಲ.

ಇಲ್ಲಿಗೆ ಪ್ರಕೃತ್ಯಧಿಕರಣದಲ್ಲಿ ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ ಇವುಗಳ ಅನುವಾದವು ಮತ್ತು ತಂತ್ರದೀಪಿಕೆ ಹಾಗೂ ಮತತ್ರಯ ವಿಮರ್ಶೆಯು ಸಮಾಪ್ತವಾಯಿತು

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥

ಏತೇನಾಧಿಕರಣ

ಬ್ರಹ್ಮಸೂತ್ರ, ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ

ವಿಶೇಷವಿಚಾರದೊಂದಿಗೆ ಕನ್ನಡಭಾಷೆಯಲ್ಲಿ ಅನುವಾದ

ಮತ್ತು

ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆ

॥ ಹರಿಃ ಓಂ ॥

॥ ಶ್ರೀವೇದವ್ಯಾಸಾಯ ನಮಃ ॥

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಗುರುಭ್ಯೋ ನಮಃ ॥

॥ ಶ್ರೀಮದ್‌ರಾಘವೇಂದ್ರತೀರ್ಥಗುರುಭ್ಯೋ ನಮಃ ॥

॥ ಶ್ರೀಗುರುಭ್ಯೋ ನಮಃ ॥

ಏತೇನಾಧಿಕರಣ

ಬ್ರಹ್ಮಸೂತ್ರ

'ಏತೇನ ಸರ್ವೇ ವ್ಯಾಖ್ಯಾತಾ ವ್ಯಾಖ್ಯಾತಾಃ' ಎಂಬ ಸೂತ್ರದ ವ್ಯಾಖ್ಯಾನ

ಬ್ರಹ್ಮಸೂತ್ರಮ್ – ।। एतेन सर्वे व्याख्याता व्याख्याताः ।। १ ।।

ತದಧೀನತ್ವ, ವಿದ್ವದ್ಯೂಢಿ, ಮಹಾಯೋಗ ಮೊದಲಾದ ಯುಕ್ತಿಗಳಿಂದ ಶೂನ್ಯ, ತುಚ್ಛ, ಅಭಾವ, ಅದೃಶ್ಯ, ನಿರ್ಗುಣ ಮೊದಲಾದ ಶಬ್ದಗಳಿಂದಲೂ ಬ್ರಹ್ಮನೇ ಪ್ರತಿಪಾದ್ಯನೆಂದು ನಿರ್ಣೀತವಾಯಿತು.

ಅರ್ಥ -- ಏತೇನ = ಈ ಹಿಂದೆ ಹೇಳಿದ ತದಧೀನತ್ವ, ವಿದ್ವದ್ಯೂಢಿ ಮೊದಲಾದ ನ್ಯಾಯಗಳಿಂದ, ಸರ್ವೇ = ಶೂನ್ಯ, ತುಚ್ಛ ಮೊದಲಾದ ಶಬ್ದಗಳೆಲ್ಲವೂ, ವ್ಯಾಖ್ಯಾತಾಃ = ಮುಖ್ಯವಾಗಿ ಭಗವತ್ ಪ್ರತಿಪಾದಕಗಳೆಂದು ನಿರ್ಣೀತವಾದವು. ಅಧ್ಯಾಯದ ಆರಂಭದಿಂದ ಕೊನೆಯತನಕ ಸಮರ್ಥಿಸಿದ ವಿಚಾರಗಳೆಲ್ಲವೂ ಇದಮಿತ್ಥಂ ಎಂಬ ನಿರ್ಣಯಕ್ಕಾಗಿ ಅಧ್ಯಾಯದ ಕೊನೆಯಲ್ಲಿ ದ್ವಿರುಕ್ತಿಯಿರುತ್ತದೆ.

॥ ಶ್ರೀವೇದವ್ಯಾಸದೇವರಿಂದ ರಚಿಸಲ್ಪಟ್ಟ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ
ಏತೇನ ಸರ್ವವ್ಯಾಖ್ಯಾತಾಧಿಕರಣವು ಸಮಾಪ್ತವಾಯಿತು ॥

ಜಗದ್ಗುರು ಶ್ರೀಮಧ್ವಾಚಾರ್ಯರಿಂದ ವಿರಚಿತವಾದ

ಬ್ರಹ್ಮಸೂತ್ರಭಾಷ್ಯ

ನಿಷೇಧಾತ್ಮಕ ಶಬ್ದಗಳೂ ಕೂಡ ವಿಷ್ಣುನಾಮಗಳು

ब्रह्मसूत्रभाष्यम् – ।। एतेन सर्वे व्याख्याता व्याख्याताः ।।

एतेन सर्वे शून्यादिशब्दा अपि व्याख्याताः । 'एष ह्येव शून्य एष ह्येव तुच्छ एष ह्येवाभाव एष ह्येवाव्यक्तोऽदृश्योऽचिन्त्यो निर्गुणश्च' इति महोपनिषदि ।

ಅನುವಾದ - ಹಿಂದಿನ ಅಧಿಕರಣದಲ್ಲಿ ಸ್ತ್ರೀಲಿಂಗಶಬ್ದಗಳ ಸಮನ್ವಯವನ್ನು ಮಾಡಿದ ನ್ಯಾಯದಿಂದಲೇ ಅಭಾವವಾಚಕವಾದ ನಿಷೇಧಾತ್ಮಕವಾದ ಶಬ್ದಗಳನ್ನೆಲ್ಲಾ ವಿಷ್ಣುವಿನಲ್ಲಿ ಸಮನ್ವಯ ಮಾಡಿದಂತಾಯಿತು. ಮಹೋಪನಿಷತ್ತಿನಲ್ಲಿ ವಿಷ್ಣುವೇ ಶೂನ್ಯ, ತುಚ್ಛ, ಅಭಾವ, ಅವ್ಯಕ್ತ, ಅದೃಶ್ಯ, ಅಚಿಂತ್ಯ, ನಿರ್ಗುಣ ಎಂದು ಹೇಳಲಾಗಿದೆ.

ಪ್ರತಿಪದಾರ್ಥ -- ಈ ಅಧಿಕರಣದಲ್ಲಿ ನಿಷೇಧವಾಚಕವಾದ ಶಬ್ದಗಳನ್ನು ಸಮನ್ವಯ ಮಾಡುತ್ತಿದ್ದಾರೆ. ವಾಸ್ತವಿಕವಾಗಿ ಭಾಷ್ಯದಲ್ಲಿ ವಿಷಯ-ವಾಕ್ಯವನ್ನು ಉದಾಹರಿಸಿಲ್ಲ. ಆದರೂ ಅಸದಾದಿಶಬ್ದ ಘಟಿತವಾದ ವಾಕ್ಯಾಂತರಗಳನ್ನು ಉದಾಹರಿಸಬೇಕೆಂದು ಚಂದ್ರಿಕಾದಲ್ಲಿ ಹೇಳಿರುವುದರಿಂದ ಅಸದಾದಿ ವಾಕ್ಯಗಳೇ ವಿಷಯವೆಂದು ತಿಳಿಯಬೇಕು. ಒಂದು ವೇಳೆ ಅಸದಾದಿ ಶಬ್ದವಾಚ್ಯತ್ವವು ಪರಮಾತ್ಮನಲ್ಲಿ ಬಾರದಿದ್ದರೆ, ಸಮನ್ವಯ ಸೂತ್ರದ ಪ್ರತಿಜ್ಞೆಗೆ ಭಂಗ ಬರುತ್ತದೆ. ಆದ್ದರಿಂದ ಮೊದಲು ಸಂಗತಿ, ವಿಷಯ, ಪೂರ್ವಪಕ್ಷಗಳನ್ನು ಸ್ವತಃ ಶಿಷ್ಯಂದಿರೇ ತಿಳಿದುಕೊಳ್ಳುತ್ತಾರೆಂದು ವಿವಕ್ಷಿಸಿ, ಸಿದ್ಧಾಂತ ಸ್ಥಾಪಕವಾದ ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ. –

ಏತೇನ = ಹಿಂದೆ ಹೇಳಿದ ನ್ಯಾಯದಿಂದಲೇ, ಸರ್ವೇ = ಸಕಲವಿಧವಾದ, ಶೂನ್ಯಾದಿ ಶಬ್ದಾಃ = ಶೂನ್ಯ, ತುಚ್ಛ, ಅಸತ್ ಮೊದಲಾದ ಶಬ್ದಗಳೂ

ಕೂಡ, ವ್ಯಾಖ್ಯಾತಾಃ = ಭಗವತ್‌ವಾಚಕಗಳೆಂದು ಸಮರ್ಥಿಸಿದಂತಾಯಿತು. ಏಷಃ ಹ್ಯೇವ = ಈ ಪರಮಾತ್ಮನೇ, ಶೂನ್ಯಃ = ಶೂನ್ಯನು, ಏಷಃ ಹ್ಯೇವ = ಈ ಪರಮಾತ್ಮನೇ, ತುಚ್ಛಃ = ತುಚ್ಛಪದವಾಚ್ಯನು, ಏಷ ಹ್ಯೇವ = ಇವನೇ ಅಭಾವ ಪದವಾಚ್ಯನು, ಏಷ ಹ್ಯೇವ = ಇವನೇ, ಅವ್ಯಕ್ತಃ = ಅವ್ಯಕ್ತಪದವಾಚ್ಯನು, ಅದೃಶ್ಯಃ = ಅದೃಶ್ಯನು, ಅಚಿಂತ್ಯಃ = ಚಿಂತನೆಗೆ ಸಿಗದವನು, ನಿರ್ಗುಣಃ = ಸತ್ವಾದಿಗುಣ ರಹಿತನು, ಇತಿ = ಹೀಗೆ, ಮಹೋಪನಿಷದಿ = ಮಹೋಪನಿಷತ್ತಿನಲ್ಲಿ ಹೇಳಲಾಗಿದೆ.

ಶೂನ್ಯ ಹಾಗೂ ಅಭಾವ ಶಬ್ದಗಳ ಸಮನ್ವಯ

ब्रह्मसूत्रभाष्यम् — 'शमूनं कुरुते विष्णुरदृश्यः सन्परः स्वयम् ।
तस्माच्छून्यमिति प्रोक्तस्तोदानत्तुच्छ उच्यते ।।
नैष भावयितुं योग्यः केनचित् पुरुषोत्तमः ।
अतोऽभावं वदन्त्येनं नाश्यत्वान्नाश इत्यपि ।।

ಅನುವಾದ - ವಿಷ್ಣುವು ಸರ್ವೋತ್ತಮನಾದ್ದರಿಂದ ಮತ್ತೊಬ್ಬರ ಸುಖವನ್ನು ತನ್ನ ಸುಖಕ್ಕಿಂತ ಕಡಿಮೆಯನ್ನಾಗಿ ಮಾಡುತ್ತಾನೆ. ಆದ್ದರಿಂದ ಶೂನ್ಯ ಎನಿಸುತ್ತಾನೆ. ದುರ್ಜನರಿರ ದುಃಖಕ್ಕೆ ಕಾರಣನಾದ್ದರಿಂದ ತುಚ್ಛ ಎನಿಸುತ್ತಾನೆ. ಪುರುಷೋತ್ತಮನಾದ ವಿಷ್ಣುವು ಯಾರಿಂದಲೂ ಪೂರ್ಣವಾಗಿ ತಿಳಿಯಲು ಸಾಧ್ಯವಿಲ್ಲದವನು. ಆದ್ದರಿಂದ ಅಭಾವ ಎನಿಸುತ್ತಾನೆ. ಅವನು ಅಭಕ್ಷ್ಯನಾದ್ದರಿಂದ ನಾಶ ಎನಿಸುತ್ತಾನೆ.

ಪ್ರತಿಪದಾರ್ಥ -- ಯಸ್ಮಾತ್ = ಯಾವ ಕಾರಣದಿಂದ, ವಿಷ್ಣುಃ = ಪರಮಾತ್ಮನು, ಪರಃ ಸನ್ನೇವ = ಸರ್ವೋತ್ತಮತ್ವೇನ ಪೂರ್ಣಸುಖಸ್ವರೂಪನಾಗಿಯೇ, ಶಮ್ = ಮತ್ತೊಬ್ಬರ ಸುಖವನ್ನು, ಸ್ವಯಂ = ತಾನು, ಊನಂ = ತನ್ನ ಸುಖಕ್ಕಿಂತ ಅಲ್ಪವನ್ನಾಗಿ, ಕುರುತೇ = ಮಾಡುತ್ತಾನೆ. ತಸ್ಮಾತ್ = ಆದ್ದರಿಂದ, ಶೂನ್ಯಂ = ಶೂನ್ಯವೆಂದು, ಪ್ರೋಕ್ತಃ = ಕರೆಸಿಕೊಳ್ಳುತ್ತಾನೆ. ಅದೃಶ್ಯಃ ಸನ್ = ದುರ್ಜನರಿಗೆ ಅದೃಶ್ಯನಾಗಿ, ತೋದನಾತ್ = ದುಃಖವನ್ನು ಕೊಡುವುದರಿಂದ, ತುಚ್ಛಃ = ತುಚ್ಛನೆಂದು, ಉಚ್ಯತೇ = ಕರೆಸಿಕೊಳ್ಳುತ್ತಾನೆ. ಪುರುಷೋತ್ತಮಃ =

ಕ್ಷರಾಕ್ಷರ ಪುರುಷಶ್ರೇಷ್ಠನಾದ, ಏಷಃ = ಈ ಪರಮಾತ್ಮನು, ಕೇನಚಿತ್ = ಯಾರಿಂದಲೂ, ಭಾವಯಿತುಂ = ಸಂಪೂರ್ಣವಾಗಿ ತಿಳಿಯಲು, ನ ಯೋಗ್ಯಃ = ಶಕ್ತನಲ್ಲ. ಅತಃ = ಆದ್ದರಿಂದ, ಏನಂ = ಇವನನ್ನು, ಅಭಾವಂ = ಅಭಾವಪದ ವಾಚ್ಯನನ್ನಾಗಿ, ವದಂತಿ = ಹೇಳುತ್ತಾರೆ. ಅಭ = ಮತ್ತು , ನಾಶ್ಯತ್ವಾತ್ = ಪ್ರಳಯಕಾಲದಲ್ಲಿ ನಾಶವಾಗದ ಕಾರಣ, ನಾಶಃ = ನಾಶಪದವಾಚ್ಯನೆಂದು, ವದಂತಿ = ಜ್ಞಾನಿಗಳು ಹೇಳುತ್ತಾರೆ.

ನಿಷೇಧವಾಚಕ ಶಬ್ದಸಮನ್ವಯಕ್ಕೆ ಮಹಾಕೌರ್ಮದ ಆಧಾರ

ब्रह्मसूत्रभाष्यम् – सर्वस्य तदधीनत्वात् तच्छब्दाभिधेयता ।
अन्येषां व्यवहारार्थमिष्यते व्यवहर्तृभिः ।। इति कौर्मे ।

ಅನುವಾದ - ಸಕಲ ಪದಾರ್ಥಗಳು ವಿಷ್ಣುವಿನ ಅಧೀನವಾದ್ದರಿಂದ, ಆಯಾ ಶಬ್ದಗಳಿಂದ ವಿಷ್ಣುವು ಪ್ರತಿಪಾದ್ಯನಾಗುತ್ತಾನೆ. ಆದರೂ ಕೂಡ ಇತರ ವಸ್ತುಗಳಲ್ಲಿ ವ್ಯವಹಾರ ಸಿದ್ಧಿಗಾಗಿ ವಿಷ್ಣುವಾಚಕವಾದ ಶಬ್ದಗಳನ್ನೇ ಉಪಯೋಗಿಸಲಾಗುತ್ತದೆ. ಹೀಗೆ ಮಹಾಕೌರ್ಮ ಪುರಾಣವು ಹೇಳಿದೆ.

ಪ್ರತಿಪದಾರ್ಥ -- ನಿಷೇಧಮುಖದಿಂದ ವೇದ್ಯವಾದ ವಸ್ತುವಾಚಕ ಶಬ್ದಗಳನ್ನು ನಿಷೇಧ್ಯ, ಹಾಗೂ ನಿಷೇಧ ವಾಚಿತ್ವೇನ ಎರಡು ಬಗೆಯಲ್ಲಿ ವಿಂಗಡಿಸಬಹುದು. ಶ್ರುತಿಯಲ್ಲಿ ನಿಷೇಧ್ಯರೂಪವಾದ ಅಸತ್‌ವಾಚಕವಾದ ಶೂನ್ಯಾದಿಶಬ್ದಗಳ ಯೋಗವೃತ್ತಿಯನ್ನಷ್ಟೇ ಹೇಳಿದ್ದಾರೆ. ನಿಷೇಧ ರೂಪವಾದ ನಿರ್ಗುಣಾದಿ ಪದಗಳಲ್ಲಿ ಅಂತಹ ಯೋಗವೃತ್ತಿಯನ್ನು ಹೇಳಿರುವುದಿಲ್ಲ. ಇಂತಹ ನಿಷೇಧಸ್ವರೂಪವಾದ ಶಬ್ದಗಳು ಶ್ರೀಹರಿಯಲ್ಲಿ ಹೇಗೆ ಬರುತ್ತದೆ? ಈ ಆಶಂಕೆಗೆ ಉತ್ತರಿಸುತ್ತಿದ್ದಾರೆ. –

ಸರ್ವಸ್ಯ = ಅಸತ್, ಶೂನ್ಯ ಮೊದಲಾದ ಶಬ್ದಗಳ ಪ್ರವೃತ್ತಿನಿಮಿತ್ತವು ಸ್ವಗತವಾಗಲಿ, ಪರಗತವಾಗಲೀ, ತದಧೀನತ್ವಾತ್ = ಭಗವತ್ ಸಾಧಕವಾದ್ದರಿಂದ, ತತ್ತಚ್ಛಬ್ದಾಭಿಧೇಯತಾ = ಅಸತ್, ಶೂನ್ಯ ಮೊದಲಾದ ಶಬ್ದಗಳ ಪರಮಮುಖ್ಯಾರ್ಥನು ಭಗವಂತನೇ

ಆಗುತ್ತಾನೆ. ಅನ್ಯೇಷಾಂ = ಉಳಿದ ಪದಾರ್ಥಗಳು, ವ್ಯವಹಾರಾರ್ಥಂ = ಕೇವಲ ವ್ಯವಹಾರಕ್ಕೋಸ್ಕರ, ವ್ಯವಹರ್ತೃಭಿಃ = ವ್ಯವಹಾರ ಮಾಡುವವರಿಂದ, ಇಷ್ಯತೇ = ವ್ಯವಹರಿಸಲಾಗುತ್ತದೆ. ಇತಿ = ಹೀಗೆ, ಕೌರ್ಮೇ = ಕೂರ್ಮ ಪುರಾಣವು ಹೇಳಿದೆ. .

'ಏತೇನ' ಎಂಬುದರ ವ್ಯಾಖ್ಯಾನ

ब्रह्मसूत्रभाष्यम् – एतेन तदधीनत्वाद्युक्तयुक्तिसमुदायेन ।

ಅನುವಾದ - ಸೂತ್ರದಲ್ಲಿ 'ಏತೇನ' ಎಂಬ ಪದಕ್ಕೆ 'ತದಧೀನತ್ವ ' ಎಂದರ್ಥ. ವಿದ್ವದ್ಬೂಢಿ ಹಾಗೂ ಮಹಾಯೋಗರೂಪವಾದ ಯುಕ್ತಿಗಳ ಸಮುದಾಯದಿಂದ ಎಂಬರ್ಥವನ್ನು ತಿಳಿಯಬೇಕು.

ಪ್ರತಿಪದಾರ್ಥ -- ಸೂತ್ರದಲ್ಲಿರುವ 'ಏತೇನ' ಎಂಬ ಪದದಿಂದ ಪರಾಮೃಷ್ಟವಾದ ಹೇತುವನ್ನು ತೋರಿಸುತ್ತಿದ್ದಾರೆ. –

ಏತೇನ = ಸೂತ್ರದಲ್ಲಿರುವ 'ಏತೇನ' ಎಂಬ ಪದದಿಂದ, ತದಧೀನತ್ವಾತ್ = ತದಧೀನತ್ವಾತ್ ಅರ್ಥವತ್ ಎಂಬ ಸೂತ್ರದಲ್ಲಿ, ಉಕ್ತಃ = ಹೇಳಲ್ಪಟ್ಟ, ಯುಕ್ತಿ ಸಮುದಾಯೇನ = ಯುಕ್ತಿಗಳ ಸಮುದಾಯದಿಂದ,

ಸೂತ್ರದಲ್ಲಿರುವ ದ್ವಿರುಕ್ತಿಗೆ ವ್ಯಾಖ್ಯಾನ

ब्रह्मसूत्रभाष्यम् –

'अवधारणार्थं सर्वस्याऽप्युक्तस्याऽध्यायमूलतः ।
द्विरुक्तिं कुर्वते प्राज्ञा अध्यायान्ते विनिर्णये' ।। इति वाराहे ।।२९।।

एतेन सर्वेव्याख्यातेाधिकरणम्

।। इति समन्वयाध्यायः समाप्तः ।।७।।

।। इति श्रीमदानन्दतीर्थभगवत्पादाचार्यविरचिते
श्रीमद्ब्रह्मसूत्रभाष्ये प्रथमाध्यायस्य चतुर्थः पादः ।।

।। प्रथमाध्यायः समाप्तः ।।

ಅನುವಾದ - ಸಂಪೂರ್ಣವಾದ ಈ ಸಮನ್ವಯಾಧ್ಯಾಯದಲ್ಲಿ ಪ್ರಾರಂಭದಿಂದ ಇಲ್ಲಿಯತನಕ ಹೇಳಿದ ಎಲ್ಲಾ ಸಮನ್ವಯದ ನಿರ್ಣಯಕ್ಕಾಗಿ, ಅಧ್ಯಾಯದ ಕೊನೆಯಲ್ಲಿ ಪ್ರಾಜ್ಞರು ಒಂದೇ ಶಬ್ದವನ್ನು ಎರಡು ಬಾರಿ ಪ್ರಯೋಗಿಸುತ್ತಾರೆ. ಹೀಗೆ ವಾರಾಹ ಸಂಹಿತೆಯು ಹೇಳಿದೆ.

ಪ್ರತಿಪದಾರ್ಥ -- ಕೊನೆಯ ಸೂತ್ರದಲ್ಲಿ 'ವ್ಯಾಖ್ಯಾತಾಃ' ಎಂಬ ಶಬ್ದವನ್ನು ಎರಡು ಬಾರಿ ಪ್ರಯೋಗಿಸಿದ್ದಾರೆ. ಹೀಗೆ ಹೇಳಿದರೆ ಅಲ್ಪಾಕ್ಷರತ್ವಕ್ಕೆ ವಿರೋಧ ಬರುತ್ತದಲ್ಲವೇ? ಈ ಆಶಂಕೆಗೆ ಉತ್ತರಿಸುತ್ತಿದ್ದಾರೆ. –

ಪ್ರಾಜ್ಞಾಃ = ಜ್ಞಾನಿ ಜನರು, ಅಧ್ಯಾಯಮೂಲತಃ = ಅಧ್ಯಾಯದ ಪ್ರಾರಂಭದಿಂದ ಕೊನೆಯತನಕ, ಉಕ್ತಸ್ಯ = ಹೇಳಲ್ಪಟ್ಟ, ಸರ್ವಸ್ಯ = ಸಕಲ ವಿಷಯಗಳ, ಅವಧಾರಣಾರ್ಥಂ = ದಾರ್ಢ್ಯಕ್ಕೋಸ್ಕರ, ಅಧ್ಯಾಯಾಂತೇ = ಅಧ್ಯಾಯದ ಕೊನೆಯಲ್ಲಿ, ದ್ವಿರುಕ್ತಿಂ = ಒಂದೇ ಪದವನ್ನು ಎರಡು ಬಾರಿ, ಕುರ್ವತೇ = ಪ್ರಯೋಗ ಮಾಡುತ್ತಾರೆ. ಇತಿ = ಹೀಗೆ, ವಾರಾಹೇ = ವಾರಾಹದಲ್ಲಿ ಹೇಳಲ್ಪಟ್ಟಿದೆ.

ಇಲ್ಲಿಗೆ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ವಿರಚಿತವಾದ ಶ್ರೀಮದ್‌ಕೃಷ್ಣದ್ವೈಪಾಯನ ಕೃತ ಬ್ರಹ್ಮಸೂತ್ರದ ಭಾಷ್ಯದಲ್ಲಿ ಪ್ರಥಮಾಧ್ಯಾಯದ ನಾಕನೆಯ ಪಾದವು ಸಮಾಪ್ತವಾಯಿತು.

॥ ಶ್ರೀ ಕೃಷ್ಣಾರ್ಪಣಮಸ್ತು ॥

ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ

ತತ್ತ್ವಪ್ರದೀಪ

'ತುಚ್ಛ' ನಾಶಾದಿಶಬ್ದಗಳಿಗೆ ಅಪೂರ್ವವ್ಯಾಖ್ಯಾನ

तत्वप्रदीपः – एतेन सर्वे व्याख्याता व्याख्याताः ।। एतेनावशिष्टाः सर्वे शब्दा ब्रह्मवाचकत्वेन व्याख्याता वेदितव्याः । तुदति च्छन्न इति तुच्छः । न आश्यत इति नाशः । तदधीनत्वादीत्यादिशब्दात् ''महद्वच्च'' ''चमसवदविशेषात्'' ''ज्योतिरुपक्रमात्तु तथा ह्यधीयते एक'' इत्यादि द्रष्टव्यम् । तस्मादेवमुक्तन्यायैरनन्तवेदवाक्यपदवर्णस्वराभिधेयत्वादनन्त गुणगणपरिपूर्णो नारायण इति सिद्धम् । तथाच ब्रह्माण्डे -

''अनन्तनामकत्वाच्च सोऽनन्तगुण ईरितः ।
पृथङ्नामानि यस्मात्तद्गुणानेव प्रचक्षत'' इति ।। छ।।

।। इति सर्वव्याख्यानाधिकरणम् ।।

।। इति तत्त्वदीपे प्रथमोऽध्यायः ।।

'ಏತೇನ' = ಇಲ್ಲಿಯತನಕ ಮಾಡಿದ ಸಮನ್ವಯದಿಂದ ಉಳಿದೆಲ್ಲಾ, ಸರ್ವೇ = ಶಬ್ದಗಳೆಲ್ಲವೂ, ವ್ಯಾಖ್ಯಾತಾ = ಬ್ರಹ್ಮನನ್ನು ಪ್ರತಿಪಾದನೆ ಮಾಡುತ್ತವೆಂದು, ವ್ಯಾಖ್ಯಾತಾಃ = ಸ್ಪಷ್ಟವಾಗಿ ವ್ಯಾಖ್ಯಾನ ಮಾಡಿದಂತಾದವು. 'ಚ್ಛನ್ನ ಇತಿ ತುಚ್ಛಃ' ಎಂಬುದು ತುಚ್ಛ ಪದದ ನಿಷ್ಪತ್ತಿ, ನ ಆಶ್ಯತಿ ಇತಿ ನಾಶಃ = ನಾಶವಿಲ್ಲದವನನ್ನು ನಾಶ ಎನಿಸಿದ್ದಾನೆ. 'ತದಧೀನತ್ವಾದಿ' ಎಂಬಲ್ಲಿರುವ ಆದಿಶಬ್ದದಿಂದ 'ಮಹದ್ವಚ್ಚ' 'ಚಮಸವದವಿಶೇಷಾತ್' 'ಜ್ಯೋತಿರುಪಕ್ರಮಾತ್ತು ತಥಾ ಹ್ಯಧೀಯತೇ ಏಕೇ' ಇತ್ಯಾದಿ ಸೂತ್ರಗಳಲ್ಲಿ ಹೇಳಲ್ಪಟ್ಟ ನ್ಯಾಯಗಳನ್ನು ವಿವಕ್ಷಿಸಬೇಕು.

ಆದ್ದರಿಂದ ಇಲ್ಲಿಯತನಕ ಪ್ರತಿಪಾದನೆ ಮಾಡಲ್ಪಟ್ಟ ನ್ಯಾಯಗಳಿಂದ ಅನಂತ ವೇದಗಳಲ್ಲಿರುವ ಪ್ರತಿಯೊಂದು ವಾಕ್ಯಗಳು, ಪದಗಳು, ವರ್ಣಗಳು, ಸ್ವರಗಳಿಂದ ಅಭಿಧೇಯನಾದ ನಾರಾಯಣನು ಅನಂತಗುಣಪರಿಪೂರ್ಣನಾಗಿದ್ದಾನೆಂದು ಸಿದ್ಧವಾಯಿತು. ಆದ್ದರಿಂದ ಬ್ರಹ್ಮಾಂಡ ಪುರಾಣದಲ್ಲಿ ಹೀಗೆ ಹೇಳಿದ್ದಾರೆ -

''ಅನಂತನಾಮಕತ್ವಾಚ್ಚ ಸೋಽನಂತಗುಣ ಈರಿತಃ।
ಪೃಥಙ್ನಾಮಾನಿ ಯಸ್ಮಾತ್ ತದ್ಗುಣಾನೇವ ಪ್ರಚಕ್ಷತೇ ॥''

ಅನಂತ ಎಂಬ ಹೆಸರಿರುವುದರಿಂದ ಅನಂತಗುಣಪರಿಪೂರ್ಣನಾಗಿದ್ದಾನೆ. ಆ ಗುಣಗಳಲ್ಲಿ ಪ್ರತ್ಯೇಕವಾಗಿ ಒಂದೊಂದು ಹೆಸರುಗಳೂ ಕೂಡ ಪ್ರತಿಪಾದನೆ ಮಾಡುತ್ತಿವೆ.

॥ ಇಲ್ಲಿಗೆ ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ ತತ್ತ್ವಪ್ರದೀಪದಲ್ಲಿ
ಏತೇನಾಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

ಶ್ರೀಮಜ್ಜಯತೀರ್ಥಭಿಕ್ಷುಗಳಿಂದ ವಿರಚಿತವಾದ

ತತ್ತ್ವಪ್ರಕಾಶಿಕಾ

ಅನ್ಯತ್ರೈವ ಪ್ರಸಿದ್ಧವಾದ ಅಸದಾದಿ ಶಬ್ದಗಳ ಸಮನ್ವಯ

अत्र निषेधमुखवेद्यत्वादिनाऽन्यत्रैव प्रसिद्धानामसदादिशब्दानां भगवति समन्वयप्रतिपादनादस्ति शास्त्रादि सङ्गतिः ।

ಏತೇನ ಸರ್ವವ್ಯಾಖ್ಯಾತಾಧಿಕರಣದಲ್ಲಿ ನಿಷೇಧಮುಖದಿಂದ ಪ್ರತಿಪಾದ್ಯವಾದ ಅನ್ಯತ್ರೈವ ಪ್ರಸಿದ್ಧವಾದ ಅಸತ್, ಅಭಾವ ಮೊದಲಾದ ಶಬ್ದಗಳನ್ನು ಸಮನ್ವಯ ಮಾಡಲಾಗಿದೆ. ಆದ್ದರಿಂದ ಶಾಸ್ತ್ರಸಂಗತಿ, ಅಧ್ಯಾಯಸಂಗತಿ ಮತ್ತು ಪಾದಸಂಗತಿಗಳು ಇರುತ್ತವೆ.

ಅಭಾವವಾಚಕಶಬ್ದಗಳ ಸಮನ್ವಯವೂ ಅನಿವಾರ್ಯ

तत्वप्रकाशिका – समन्वयसूत्रे सर्वशब्दानां परमात्मवाचित्वमुक्तम् । सर्वमध्यपतिता असदादिशब्दाः श्रुतिषु श्रूयन्ते । 'असद्वा इदमग्र आसीत्' इत्यादौ ।

ಸಮನ್ವಯಸೂತ್ರದಲ್ಲಿ ಎಲ್ಲಾ ಬಗೆಯ ಶಬ್ದಗಳೂ ಪರಮಾತ್ಮನನ್ನು ಪ್ರತಿಪಾದನೆ ಮಾಡುತ್ತವೆಂದು ಪ್ರತಿಜ್ಞೆ ಮಾಡಲಾಯಿತು. ಆ ಎಲ್ಲಾ ಬಗೆಯ ಶಬ್ದಗಳ ಮಧ್ಯದಲ್ಲಿ ಅಸತ್, ಅಭಾವ ಮೊದಲಾದ ಶಬ್ದಗಳೂ ಕೂಡ 'ಅಸದ್ವಾ ಇದಮಗ್ರ ಆಸೀತ್' ಇತ್ಯಾದಿ ಶ್ರುತಿಗಳಲ್ಲಿ ಶ್ರುತವಾಗಿವೆ.

ಈ ಶಬ್ದಗಳೂ ಕೂಡ ಅನ್ಯಪರವಾಗಬಾರದು

तत्वप्रकाशिका – तेषां चान्यपरत्वे समन्वयसूत्रमयुक्तं स्यादित्यवश्य निर्णेयता । तदसदादिशब्दवाच्यं विषयः ।

ಇಂತಹ ಅಸತ್, ಅಭಾವ ಮೊದಲಾದ ಶಬ್ದಗಳು ಮಹಾವಿಷ್ಣುವನ್ನು ಸಮನ್ವಯ ಮಾಡದೇ ಬೇರೆ ಪದಾರ್ಥವನ್ನೇ ಪ್ರತಿಪಾದನೆ ಮಾಡುವುದಾದರೆ, ಸಮನ್ವಯ ಸೂತ್ರದಲ್ಲಿ ಮಾಡಿದ ಪ್ರತಿಜ್ಞೆಯು ಅಯುಕ್ತವಾದೀತು. ಅದಕ್ಕೋಸ್ಕರ ಇಂತಹ ಶಬ್ದಗಳ ಸಮನ್ವಯದ ನಿರ್ಣಯವನ್ನು ಅವಶ್ಯವಾಗಿ ಮಾಡಲೇಬೇಕು. ಆದ್ದರಿಂದ ಅಸತ್, ಅಭಾವ, ಶೂನ್ಯ ಮೊದಲಾದ ಶಬ್ದವಾಚ್ಯತ್ವವೇ ಈ ಅಧಿಕರಣದ ವಿಷಯ.

ಅಧಿಕರಣದ ಸಂಶಯ

तत्वप्रकाशिका – किं विष्णुरन्यद्वेति सन्देहः । समन्वयसूत्रमन्यत्रैव प्रसिद्धिश्च सन्देह बीजम् । 'न विष्णुरसदादिशब्दवाच्यः' इति पूर्वः पक्षः ।

ಅಸದಾದಿ ಶಬ್ದಗಳಿಂದ ವಿಷ್ಣುಪ್ರತಿಪಾದ್ಯನೋ, ಅಥವಾ ಬೇರೆ ಪಾದರ್ಥಗಳೋ ಎಂಬುದು ಸಂದೇಹಬೀಜ. ಸಮನ್ವಯಸೂತ್ರ ಹಾಗೂ ಅನ್ಯತ್ರೈವಪ್ರಸಿದ್ಧಿ ಇವೆರಡು ಸಂದೇಹಬೀಜ. ವಿಷ್ಣು 'ಅಸತ್' ಮೊದಲಾದ ಶಬ್ದಗಳಿಂದ ಪ್ರತಿಪಾದ್ಯನಾಗಲಾರ ಎಂಬುದು ಪೂರ್ವಪಕ್ಷ.

ಭಾವರೂಪನಾದ ಪರಮಾತ್ಮನು ಅಭಾವನಾಗುವುದು ಹೇಗೆ ?

तत्वप्रकाशिका – तेषां निषेधमुखवेद्यवस्तुवाचित्वात् । परमात्मनश्च भावरूपत्वेन तदयोगात् ।

ಅಸತ್, ಅಭಾವ ಮೊದಲಾದ ಶಬ್ದಗಳು ನಿಷೇಧಮುಖವೇದ್ಯವಾದ ಅಸದಾದಿ ಪದಾರ್ಥಗಳನ್ನು ಪ್ರತಿಪಾದನೆ ಮಾಡುತ್ತಿವೆ. ಪರಮಾತ್ಮನು ಭಾವರೂಪನಾಗಿರುವುದರಿಂದ ನಿಷೇಧಮುಖವೇದ್ಯನಾಗಿರುವುದಿಲ್ಲ.

ಶೂನ್ಯಾದಿಗಳು ಶ್ರೀಹರಿಯ ಅಧೀನವೇ ಅಲ್ಲ

तत्वप्रकाशिका – न च 'स्वयं निषेधमुखवेद्यता भावेऽपि, तद्धतोऽसतः परमात्माधीनत्वेन तस्य असदादिशब्दवाच्यता' इति वाच्यम् । स्वरूपशून्यस्य नियम्यताऽभावेन पराधीनताऽयोगात् ।

ಪ್ರಶ್ನೆ - ಪರಮಾತ್ಮನು ಸ್ವತಃ ನಿಷೇಧಮುಖವೇದ್ಯನಾಗದಿದ್ದರೂ ನಿಷೇಧಮುಖವೇದ್ಯ-ವಾಗಿರುವಂತಹ ಅಸತ್, ಅಭಾವ ಮೊದಲಾದವುಗಳು ಪರಮಾತ್ಮನ ಅಧೀನವಾದ್ದರಿಂದ ಸ್ವಾತಂತ್ರ್ಯವೆಂಬ ಪ್ರವೃತ್ತಿನಿಮಿತ್ತವನ್ನು ವಿವಕ್ಷಿಸಿ, ಅಸದಾದಿ ಶಬ್ದವಾಚ್ಯತ್ವವನ್ನು ಪರಮಾತ್ಮನಿಗೆ ಹೇಳಬಹುದಲ್ಲವೇ?

ಉತ್ತರ - ಯಾವ ಪದಾರ್ಥಗಳ ಸ್ವರೂಪವೇ ಇರುವುದಿಲ್ಲವೋ ಅವುಗಳಿಗೆ ಪರಮಾತ್ಮನು ನಿಯಾಮಕನೆಂದು ಸ್ವರೂಪಶೂನ್ಯವಾದ ಪದಾರ್ಥಗಳು ನಿಯಮ್ಯವೆಂದು ಹೇಳಲು ಸಾಧ್ಯವೇ ಇಲ್ಲ.

ಹರಿಯ ಅಧೀನವಾದರೂ ಹರಿಪರವಾಗುವುದಿಲ್ಲ

तत्वप्रकाशिका – अभावे तत्सम्भवेऽपि प्रयोगादर्शनात् । अतः शून्यादिशब्दानां परमात्मवाचित्वाभावात्समन्वयसूत्रं न युक्तम् इति ।

ಅಭಾವದಲ್ಲಿ ಅಂತಹ ಪರಾಧೀನತ್ವವನ್ನು ಹೇಳಬಹುದಾದರೂ, ಲೋಕದಲ್ಲ ಎಲ್ಲಿಯೂ ಕೂಡ ಪ್ರಯೋಗ ಕಂಡಿಲ್ಲ. ಆದ್ದರಿಂದ ಅಸತ್, ಶೂನ್ಯ, ಅಭಾವ ಮೊದಲಾದ ಶಬ್ದಗಳು ಪರಮಾತ್ಮವಾಚಕಗಳಾಗಲು ಸಾಧ್ಯವಿಲ್ಲ. ಈ ಕಾರಣದಿಂದಲೇ ಸಮನ್ವಯ ಸೂತ್ರದಲ್ಲಿ ಮಾಡಿದ ಪ್ರತಿಜ್ಞೆಯು ಅಯುಕ್ತವಾಗುತ್ತದೆ.

ಅಧಿಕರಣದ ಸಿದ್ಧಾಂತ

तत्वप्रकाशिका – सिद्धान्तयत्सूत्रमुपन्यस्य व्याचष्टे – एतेनेति ।। पूर्वोक्तहेतुनैव सर्वे शून्यादिशब्दा भगवद्विषया एवेति प्रतिपादिता इत्यर्थः ।

ಮೇಲಿನ ಪೂರ್ವಪಕ್ಷವನ್ನು ನಿರಾಕರಣೆ ಮಾಡುತ್ತಾ ಸಿದ್ಧಾಂತಸ್ಥಾಪಕವಾದ ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ 'ಏತೇನ' ಇತ್ಯಾದಿಯಾಗಿ. ಹಿಂದಿನ ಅಧಿಕರಣದಲ್ಲಿ ಹೇಳಿರುವ ಅಧಿಕರಣಗಳಿಂದಲೇ ಶೂನ್ಯ, ಅಭಾವ ಮೊದಲಾದ ಶಬ್ದಗಳೆಲ್ಲವೂ ಭಗವತ್ ಪ್ರತಿಪಾದಕವಾಗಿವೆ ಎಂದು ಸಿದ್ಧವಾಗಿದೆ ಎಂದರ್ಥ.

'ಏಷ ಹ್ಯೇವ' ಎಂಬ ಭಾಷ್ಯದಿಂದ ಸಿದ್ಧಾಂತ

तत्वप्रकाशिका – नन्वसदादिशब्दानां निषेधमुखवेद्यवस्तुवाचित्वात् । कथं परमात्मनस्तद्वाच्यत्वमित्यत आह – एष ह्येवेति ।।

ಅಸತ್, ಶೂನ್ಯ ಮೊದಲಾದ ಶಬ್ದಗಳು ನಿಷೇಧಮುಖವೇದ್ಯವಸ್ತುವಾಚಕಗಳಾದ್ದರಿಂದ ಭಾವಸ್ವರೂಪನಾದ ಪರಮಾತ್ಮನನ್ನು ಹೇಗೆ ಪ್ರತಿಪಾದಿಸಲು ಸಮರ್ಥವಾಗುತ್ತವೆ ಎಂಬ ಪ್ರಶ್ನೆಗೆ 'ಏಷ ಹ್ಯೇವ' ಎಂಬ ಭಾಷ್ಯದ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಅಸದಾದಿಶಬ್ದಗಳ ನಿರ್ವಚನ

तत्वप्रकाशिका – दुर्जनानामव्यक्तत्वादिना शमूनं कुरुत इत्यादि योगेन चेश्वरे निषेधमुखवेद्यवस्तुवाचिशब्दप्रवृत्त्युपपत्तिरिति भावः ।

ದುರ್ಜನರಿಗೆ ಪರಮಾತ್ಮನು ಅವ್ಯಕ್ತನಾಗಿರುವ ಕಾರಣ 'ಅಸತ್' ಎಂದು ಕರೆಸಿಕೊಳ್ಳುತ್ತಾನೆ. ತನ್ನನ್ನು ಹೊರತಾಗಿ ಉಳಿದವರೆಲ್ಲರ ಸುಖವನ್ನು ಮೊಟಕುಗೊಳಿಸುತ್ತಾನೆ ಎಂಬ

ಯೋಗವೃತ್ತಿಯಿಂದ 'ಶೂನ್ಯ' ಎಂದು ಕರೆಸಿಕೊಳುತ್ತಾನೆ. ಹೀಗೆ 'ಅಸತ್', 'ಶೂನ್ಯ' ಮೊದಲಾದ ಶಬ್ದಗಳು ಬೇರೆ ಬಗೆಯ ಪ್ರವೃತ್ತಿನಿಮಿತ್ತದಿಂದ ನಿಷೇಧಮುಖವೇದ್ಯವಸ್ತುವಾಚಕ-ಗಳಾಗಿದ್ದರೂ, ಭಗವಂತನಲ್ಲಿ ಸಮನ್ವಯಗೊಳ್ಳುತ್ತವೆ.

ಶೂನ್ಯ ಹಾಗೂ ಅದೃಶ್ಯಶಬ್ದಗಳ ನಿರ್ವಚನ

ತತ್ವಪ್ರಕಾಶಿಕಾ – ಶಮ್ನಂ ಕುರುತೇ ಸ್ವಸುಖಾದನ್ಯಸುಖಮಲ್ಪಂ ಕರೋತಿ । ತೋದನಾತ್ತುತ್ । ಅದೃಶ್ಯಃ ಭಃ ಭನತ್ವಾತ್ । ಭಾವಯಿತುಮುತ್ಪಾದಯಿತುಮ್ । ನಾಶ್ಯತ್ವಾದಭಕ್ಷ್ಯತ್ವಾತ್ ।

'ಶಂ ಊಸಂ ಕುರುತೇ' ಎಂದರೆ ತನ್ನ ಸುಖಕ್ಕಿಂತಲೂ ಬೇರೆಯವರ ಸುಖವನ್ನು ಅಲ್ಪವನ್ನಾಗಿ ಮಾಡುತ್ತಾನೆ ಎಂದರ್ಥ. 'ತುತ್' ಎಂದರೆ ದುರ್ಜನರಿಗೆ ದುಃಖವನ್ನು ಕೊಡುತ್ತಾನೆ ಎಂದರ್ಥ. ಅದೃಶ್ಯನಾಗಿರುವುದರಿಂದ 'ಭಃ' ಎನಿಸುತ್ತಾನೆ. ಆದ್ದರಿಂದ 'ತುಚ್ಛ' ಎಂದರೆ ದುರ್ಜನರಿಗೆ ದುಃಖಶನ್ನು ಕೊಟ್ಟು, ಅದೃಶ್ಯನಾಗಿರುತ್ತಾನೆ ಎಂಬರ್ಥವು ದೊರೆಯುತ್ತದೆ. 'ಭಾವಯಿತುಮ್' ಎಂದರೆ ಉತ್ಪತ್ತಿ ಮಾಡಲು ಎಂದರ್ಥ. 'ನಾಶತ್ವಾತ್' ಎಂದರೆ ಅಭಕ್ಷನಾಗಿರುವುದರಿಂದ ಎಂದರ್ಥ.

'ಏತೇನ' ಎಂಬ ಸೂತ್ರ ಭಾಗದ ವ್ಯಾಖ್ಯಾನ

ತತ್ವಪ್ರಕಾಶಿಕಾ – ಸರ್ವಸ್ಯ ತದಧೀನತ್ವಾದಿತ್ಯುಭಯತ್ರ ಸಮ್ಬಧ್ಯತೇ । ಏತೇನೇತಿ ಪರಾಮೃಷ್ಟಮೇವ ಹೇತುಂ ದರ್ಶಯತಿ – ಏತೇನೇತಿ ।।

'ಸರ್ವಸ್ಯ ತದಧೀನತ್ವಾತ್' ಎಂಬ ಹೇತುಬೋಧಕವಾದ ಪದವು ಅಸದ್ವಾಚಕ ಶಬ್ದಗಳಲ್ಲಿ ಮತ್ತು ಅಭಾವಾಚಕ ಶಬ್ದಗಳಲ್ಲಿ ಎರಡೂ ಕಡೆ ಸಂಬಂಧವನ್ನು ಹೊಂದುತ್ತದೆಂದು ತಿಳಿಯಬೇಕು. 'ಏತೇನ' ಎಂಬ ಸೂತ್ರದಲ್ಲಿರುವ ಪದದಿಂದ ಯಾವ ಹೇತುವನ್ನು ಪರಾಮರ್ಶಿಸಿದ್ದಾರೆ ಎಂಬುದನ್ನು ಭಾಷ್ಯದಲ್ಲಿ 'ಏತೇನ' ಎಂಬುದರಿಂದಲೇ ಹೇಳಿರುತ್ತಾರೆ.

ಹಿಂದಿನ ಅಧಿಕರಣದ ಹೇತುವೂ ಕೂಡ ವಿವಕ್ಷಿತ

ತತ್ವಪ್ರಕಾಶಿಕಾ – ಆದಿಪದೇನ 'ಜ್ಯೋತಿರುಪಕ್ರಮಾತ್ ತಥಾಹ್ಯಧೀಯತ ಏಕೇ' 'ಪ್ರತಿಜ್ಞಾದೃಷ್ಟಾನ್ತಾನುಪರೋಧಾತ್' ಇತ್ಯಾದೇಃ ಸಙ್ಗ್ರಹಃ ।

ಆದಿಪದದಿಂದ 'ಜ್ಯೋತಿರುಪಕ್ರಮಾತ್ ತಥಾಹ್ಯಧೀಯತೇ ಏಕೇ' ಎಂಬ ಸೂತ್ರದಲ್ಲಿರುವ ಹೇತುವನ್ನು ಮತ್ತು 'ಪ್ರತಿಜ್ಞಾದೃಷ್ಟಾಂತಾನುಪರೋಧಾತ್' ಎಂಬ ಸೂತ್ರದಲ್ಲಿರುವ ಹೇತುವನ್ನು ಸಂಗ್ರಹಿಸಬೇಕು.

'ಅಸತ್' ಪದಾರ್ಥವೂ ಕೂಡ ಶ್ರೀಹರಿಯ ಅಧೀನ

तत्वप्रकाशिका – न चासतोऽन्याधीनत्वायोगः । 'सर्वस्य तदधीनत्वात्' इति स्मृतेः । निषेधमुखवेद्यत्वादीनामपि भगवत्प्रेरणामन्तरेणानुपपत्तेः ।

ಸ್ವರೂಪಶೂನ್ಯವಾದ 'ಅಸತ್' ಪದಾರ್ಥವು ಮತ್ತೊಬ್ಬರ ಅಧೀನವಾಗಲು ಹೇಗೆ ಸಾಧ್ಯ ? ಎಂದು ಪ್ರಶ್ನಿಸಬಾರದು. ಎಲ್ಲವೂ ಕೂಡ ಈಶ್ವರನ ಅಧೀನವಾಗಿದೆಯೆಂದು ಶ್ರುತಿವಾಕ್ಯವೇ ಹೇಳುತ್ತಿದೆ. ಏಕೆಂದರೆ 'ಅಸತ್' ಪದಾರ್ಥವು ನಿಷೇಧಮುಖವೇದ್ಯವಾಗಲು ಭಗವಂತನ ಪ್ರೇರಣೆಯಿಲ್ಲದೇ ಸಾಧ್ಯವಾಗುವುದಿಲ್ಲ. ಅಂದರೆ ಅಸತ್ ಪದಾರ್ಥವು ಮೂರು ಕಾಲದಲ್ಲಿಯೂ ಅಸತ್ತಾಗಿಯೇ ಉಳಿಯಲು ಭಗವದಧೀನವಾಗಿರುವಿಕೆಯೇ ಕಾರಣ ಎಂದಭಿಪ್ರಾಯ.

ಸ್ವತಂತ್ರನಾದವನಲ್ಲಿ ದೋಷವಿಲ್ಲ

तत्वप्रकाशिका – न हि कारणमन्तरेण तत्रैव तदुपपद्यते । ईश्वरस्य स्वातन्त्र्याददोषः ।

ಯಾವ ಪ್ರದಾರ್ಥವು ಯಾವ ಕಾರಣವೂ ಇಲ್ಲದೇ ಒಂದೇ ರೀತಿಯಾಗಿ ಇರುತ್ತದೆಂಬುದು ಸಾಧ್ಯವಿಲ್ಲವಷ್ಟೇ. ಈಶ್ವರನಾದರೂ ಸ್ವತಂತ್ರನಾಗಿರುವುದರಿಂದ ಅಂತಹ ದೋಷಕ್ಕೆ ಆಸ್ಪದವಿಲ್ಲ.

ದಾರ್ಢ್ಯಕ್ಕಾಗಿ ದ್ವಿರುಕ್ತಿ

तत्वप्रकाशिका – ननु किमर्थेयं सूत्रपदस्य द्विरूक्तिः । अध्यायसमाप्तेरर्थभेदेनैव ज्ञातुं शक्यत्वात् । अन्यथा पादान्तेऽपि तत्प्रसङ्गादत्यत आह – अवधारणार्थमिति।।

ಪ್ರಶ್ನೆ - ಕೊನೆಯ ಈ ಸೂತ್ರದಲ್ಲಿ 'ವ್ಯಾಖ್ಯಾತಃ' ಎಂಬ ಪದವನ್ನು ಎರಡು ಬಾರಿ ಏಕೆ ಹೇಳಿದ್ದಾರೆ. ಅಧ್ಯಾಯವು ಸಮಾಪ್ತವಾಯಿತೆಂಬುದನ್ನು ಅರ್ಥಭೇದದಿಂದಲೇ ತಿಳಿಯಬಹುದು. ಅಂದರೆ ಈ ಅಧ್ಯಾಯದಲ್ಲಿ ಸಮನ್ವಯವನ್ನು ಮುಂದಿನ ಅಧ್ಯಾಯದಲ್ಲಿ ಅವಿರೋಧವನ್ನು ಸಮರ್ಥಿಸುತ್ತಿದ್ದಾರೆಂಬ ಅರ್ಥಭೇದವು ಅಧ್ಯಾಯವನ್ನು ಅಧ್ಯಯನ ಮಾಡುವುದರಿಂದಲೇ ತಿಳಿಯುತ್ತದೆ. ಹಾಗೆಯೇ ತಿಳಿಯುವುದಿಲ್ಲವೆನ್ನುವುದಾದರೆ ಪ್ರತಿಯೊಂದು ಪಾದಗಳ ಕೊನೆಯಲ್ಲಿಯೂ ಸೂತ್ರದ ಕೊನೆಯ ಪದವನ್ನು ಎರಡು ಬಾರಿ ಉಚ್ಚರಿಸುವ ಪ್ರಸಂಗ ಬರುತ್ತದಲ್ಲವೇ?

ಉತ್ತರ - ಈ ಪ್ರಶ್ನೆಗೆ ಶ್ರೀಮದಾಚಾರ್ಯರು 'ಅವಧಾರಣಾರ್ಥಮ್' ಎಂಬುದರಿಂದ ಉತ್ತರಿಸುತ್ತಿದ್ದಾರೆ. ಸಮನ್ವಯಾಧ್ಯಾಯದಲ್ಲಿ ಮಾಡಿದ ಸಮಗ್ರ ವಿಚಾರಗಳ ದಾರ್ಢ್ಯಕ್ಕೋಸ್ಕರ ಸೂತ್ರಕಾರರು ದ್ವಿರುಕ್ತಿಯನ್ನು ಮಾಡಿರುತ್ತಾರೆಂದು ತಿಳಿಯಬೇಕು.

ಪ್ರಥಮಾಧ್ಯಾಯದ ಉಪಸಂಹಾರ

तत्वप्रकाशिका – विनिर्णये निर्णयग्रन्थे । अतोऽसदादिशब्दवाच्यत्वस्य हरेरुपपन्नत्वाद्युक्तमशेषस्वरवर्णपदवाक्यात्मकशास्त्रयोनित्वम् । ततो जगज्जन्मादिकर्तृत्वप्रमुख्या(खा) नन्तगुणत्वं च सिद्धमिति ।।२९।।

इति श्रीमदानन्दतीर्थभगवत्पादाचार्यविरचितस्य श्रीमद्ब्रह्मसूत्रभाष्यस्य टीकायां श्रीमज्जयतीर्थमुनिविरचितायां तत्त्वप्रकाशिकायां प्रथमाध्यायस्य चतुर्थः पादः ।। श्रीरस्तु ।।

'ವಿನಿರ್ಣಯೇ' ಎಂದರೆ 'ನಿರ್ಣಾಯಕ ಗ್ರಂಥಗಳಲ್ಲಿ' ಎಂದರ್ಥ.

ಆದ್ದರಿಂದ 'ಅಸತ್', 'ಅಭಾವ', 'ಶೂನ್ಯ' ಮೊದಲಾದ ಶಬ್ದಗಳೆಲ್ಲವೂ ಶ್ರೀಹರಿಯಲ್ಲಿ ಸಮನ್ವಯಗೊಳ್ಳುತ್ತವೆ.

ಹೀಗೆ ಸಂಪೂರ್ಣ ಈ ಸಮನ್ವಯಾಧ್ಯಾಯದಲ್ಲಿ ಎಲ್ಲಾ ಬಗೆಯ ಸ್ವರ, ವರ್ಣ, ಪದ, ವಾಕ್ಯ, ಪ್ರಕರಣ, ಸಮಗ್ರ ಶಾಸ್ತ್ರ ಇವುಗಳಿಂದೆಲ್ಲಾ ಪ್ರತಿಪಾದ್ಯನಾದವನು ಮಹಾವಿಷ್ಣುವೊಬ್ಬನೇ ಆಗಿರುತ್ತಾನೆ ಎಂದು ಸಿದ್ಧವಾಯಿತು. ಆದ್ದರಿಂದಲೇ ಜಗಜ್ಜನ್ಮಾದಿಕರ್ತೃತ್ವ ಮೊದಲಾದ ಪ್ರಧಾನವಾದ ಅನಂತಗುಣಗಳೂ ಕೂಡ ಪರಮಾತ್ಮನಲ್ಲಿ ಅಂತಿಮವಾಗಿ ನಿರ್ಣಯವಾಯಿತು.

ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ವಿರಚಿತವಾದ ಬ್ರಹ್ಮಸೂತ್ರಭಾಷ್ಯದ
ಟೀಕೆಯಲ್ಲಿ ಶ್ರೀಮಜ್ಜಯತೀರ್ಥಭಿಕ್ಷುಗಳಿಂದ ವಿರಚಿತವಾದ ತತ್ವಪ್ರಕಾಶಿಕೆಯಲ್ಲಿ
ಸಮನ್ವಯಧ್ಯಾಯವೆಂಬ ಮೊದಲನೆಯ ಅಧ್ಯಾಯದ ನಾಲ್ಕನೆಯಪಾದವು ಸಂಪೂರ್ಣವಾಯಿತು.

॥ ಶ್ರೀ ಕೃಷ್ಣಾರ್ಪಣಮಸ್ತು ॥

ಮಂತ್ರಾಲಯ ಪ್ರಭುಗಳಾದ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ

ಭಾವದೀಪ

ಅನುವ್ಯಾಖ್ಯಾನದಲ್ಲಿ ಅಧಿಕರಣದ ಲಿಂಗ

स्त्रीनिषेधिनामित्यनुभाष्योक्तलिङ्गेन अन्यत्रैव प्रसिद्धिमाह – अत्र निषेधमुखेति ।। निः स्वरूपत्वमादिपदार्थः ।। श्रूयन्त इति ।। तैत्तिरीयादावित्यर्थः । निषेधश्चेत्यनुभाष्योक्तयुक्तिमाह – तेषामिति ।। प्रथमप्रतीताविति योज्यम् ।।

'स्त्रीनिषेधिना' ಎಂಬ ಅನುವ್ಯಾಖ್ಯಾನದಲ್ಲಿ ನಿಷೇಧಿ ಎಂಬ ಶಬ್ದದಿಂದ ಏತೇನಾಧಿಕರಣದ ಲಿಂಗವನ್ನು ಹೇಳಿರುತ್ತಾರೆ. ಇದೇ ಲಿಂಗದಿಂದ ಅನ್ಯತ್ರೈವಪ್ರಸಿದ್ಧಿಯನ್ನು 'ಅತ್ರ ನಿಷೇಧಮುಖ' ಇತ್ಯಾದಿ ಟೀಕಾವಾಕ್ಯದಿಂದ ಸ್ಪಷ್ಟಪಡಿಸುತ್ತಿದ್ದಾರೆ. ಟೀಕೆಯಲ್ಲಿರುವ ಆದಿಪದದಿಂದ ವಿಶ್ವರೂಪತ್ವವನ್ನು ವಿವಕ್ಷಿಸಬೇಕು.

'ಶ್ರೂಯಂತೇ' ಎಂಬುದಕ್ಕೆ ತೈತ್ತಿರೀಯಶ್ರುತಿ ಮೊದಲಾದವುಗಳಲ್ಲಿ ಎಂದರ್ಥ. ನಿಷೇಧಶ್ಚ ಎಂಬ ಅನುವ್ಯಾಖ್ಯಾನದಲ್ಲಿ ಹೇಳಲ್ಪಟ್ಟ ಯುಕ್ತಿಯನ್ನು 'ತೇಷಾಮ್' ಇತ್ಯಾದಿ ಟೀಕಾವಾಕ್ಯದಿಂದ ಸಮರ್ಥಿಸುತ್ತಿದ್ದಾರೆ. ಪ್ರಥಮ ಪ್ರತೀತಿಯಲ್ಲಿ ಅಸದಾದಿ ಶಬ್ದಗಳು ಇತರ ಪದಾರ್ಥವನ್ನು ಪ್ರತಿಪಾದನೆ ಮಾಡಿದರೆ ಎಂಬರ್ಥದಿಂದ ಆ ವಾಕ್ಯವನ್ನು ಯೋಜನೆ ಮಾಡಿಕೊಳ್ಳಬೇಕು.

ನಿಷೇಧಮುಖವೇದ್ಯನೇಕೆ ಆಗಬೇಕು ?

भावदीपः – तदयोगादिति ।। यद्यपि भावस्याऽप्यभावो नेत्यादिद्वितीयप्रतिपत्तौ निषेधमुखवेद्यवस्तुत्वमस्ति । तथापि प्रथमप्रतीतावयोगादिति भावः ।। स्वयमिति।। षष्ठ्यर्थेऽव्ययम् ।। अत इति हरेर्निषेधमुखवेद्यवस्तुत्वायोगात् तेषां च तादृशवस्तुवाचित्वादित्यर्थः ।

'ತದಯೋಗಾತ್' ಇತ್ಯಾದಿ ಟೀಕಾವಾಕ್ಯದ ಅಭಿಪ್ರಾಯ ಹೀಗಿದೆ - ಒಂದು ವೇಳೆ ಭಾವಪದಾರ್ಥವೂ ಕೂಡ 'ಅಭಾವೇನ' ಎಂಬುದಾಗಿ ದ್ವಿತೀಯ ಪ್ರತೀತಿಯಲ್ಲಿ ನಿಷೇಧಮುಖವೇದ್ಯವಾಗಿ ತೋರುತ್ತದೆ. ಆದರೂ ಕೂಡ ಪ್ರಥಮಪ್ರತೀತಿಯಲ್ಲಿ ಭಾವಪದಾರ್ಥವು ನಿಷೇಧಮುಖದಿಂದ ತೋರುವುದಿಲ್ಲ ಎಂದು.

'ಸ್ವಯಮ್' ಎಂಬುದು ಷಷ್ಠ್ಯರ್ಥದಲ್ಲಿರುವ ಅವ್ಯಯವಾಗಿದೆ. 'ಅತಃ' ಎಂಬ ಟೀಕಾವಾಕ್ಯದ ಅಭಿಪ್ರಾಯ ಹೀಗಿದೆ - ಶ್ರೀಹರಿಯು ನಿಷೇಧಮುಖವೇದ್ಯನಾಗಿದ್ದಾನೆಂದು ಹೇಳಲು ಸಾಧ್ಯವಿಲ್ಲ. ವಿಧಿಮುಖವಾದ ಶಬ್ದದಿಂದಲೇ ವಾಚಿಯಾಗಿದ್ದಾನೆ. ಆದ್ದರಿಂದ ಶೂನ್ಯಾದಿಶಬ್ದಗಳಿಂದ ಪ್ರತಿಪಾದ್ಯನಾಗುವುದಿಲ್ಲ ಎಂದು.

ಅಭಾವವಾಚಕ ಶಬ್ದಗಳೆಂದರೆ ಯಾವುದು ?

भावदीपः – प्रसिद्धयनुरोधेन असदादिशब्दा इत्युपक्रमेऽपि भाष्यानुरोधात् शून्यादिशब्दानामित्युपसंहारः । समन्वयेत्यादिफलोक्तिः ।। भाष्येऽनुदितसौत्रैतच्छब्दार्थं वदन् भाष्यसूत्रयोरर्थमाह – पूर्वोक्तेति ।।

ಜಗತ್ಪ್ರಸಿದ್ಧಿಗೆ ಅನುಗುಣವಾಗಿ ಟೀಕೆಯ ಪ್ರಾರಂಭದಲ್ಲಿ 'ಅಸದಾದಿ ಶಬ್ದಾಃ' ಎಂದು ಹೇಳಿದ್ದರೂ ಕೂಡ, ಭಾಷ್ಯಕ್ಕೆ ಅನುಸಾರಿಯಾಗಿ ಪೂರ್ವಪಕ್ಷದ ಉಪಸಂಹಾರದಲ್ಲಿ 'ಶೂನ್ಯಾದಿ ಶಬ್ದಾನಾಂ' ಎಂಬ

ಪದವನ್ನು ಪ್ರಯೋಗಿಸಿದ್ದಾರೆ. 'ಸಮನ್ವಯ ಸೂತ್ರಂ ನಯುಕ್ತಮ್' ಎಂಬುದು ಪೂರ್ವಪಕ್ಷದ ಫಲ ಎಂದು ತಿಳಿಯಬೇಕು.

ಭಾಷ್ಯದಲ್ಲಿ 'ಏತೇನ' ಎಂಬ ಪದದ ಅರ್ಥವನ್ನು ಸ್ಪಷ್ಟವಾಗಿ ಹೇಳಿರುವುದಿಲ್ಲ. ಆ ಅರ್ಥವನ್ನು ಟೀಕಾರಾಯರು ವಿವಕ್ಷಿಸುತ್ತಾ ಭಾಷ್ಯ ಹಾಗೂ ಸೂತ್ರಗಳ ಅಭಿಪ್ರಾಯವನ್ನು 'ಪೂರ್ವೋಕ್ತ' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನ ಮಾಡಿದ್ದಾರೆ.

ಟೀಕೆಯಲ್ಲಿ ಹೇಳಿದ ಪ್ರವೃತ್ತಿನಿಮಿತ್ತಗಳು ಕೇವಲ ಉಪಲಕ್ಷಣಾ

भावदीपः – भाष्यस्थस्मृत्युक्तो योगो दुर्जनाव्यक्तता तथेत्यनुभाष्योक्त-निमित्तस्याप्युपलक्षणमिति मत्त्वाऽऽह – दुर्जनेति ।।

ಭಾಷ್ಯದಲ್ಲಿ ಉದಾಹರಿಸಿದ ಸ್ಮೃತಿಯಲ್ಲಿ ಹೇಳಲ್ಪಟ್ಟ ಯೋಗಾರ್ಥಗಳ ಜೊತೆ 'ದುರ್ಜನಾವ್ಯಕ್ತತಾ ತಥಾ' ಎಂಬ ಅನುಭಾಷ್ಯದಲ್ಲಿ ಹೇಳಲ್ಪಟ್ಟ ಪ್ರವೃತ್ತಿನಿಮಿತ್ತವನ್ನೂ ಕೂಡ ಉಪಲಕ್ಷಣೆಯಾ ವಿವಕ್ಷಿಸಬೇಕು. ಎಂಬ ಅಭಿಪ್ರಾಯದಿಂದ 'ದುರ್ಜನನಾಮ್' ಇತ್ಯಾದಿ ಟೀಕಾವಾಕ್ಯವು ಹೊರಟಿದೆ.

ಶ್ರುತಿಯಲ್ಲಿ ಹೇಳಿದ್ದು ಸ್ಮೃತ್ಯುಕ್ತವಾಗಿದೆ

भावदीपः – प्रसिद्धनिमित्तस्य हरावयोगेऽपि स्मृत्यादिप्रसिद्धं लोकतोऽप्रसिद्धं तु निमित्तं हरौ युज्यत इति तच्छब्दवाच्यत्वं स्यादेवेत्याकूतम् । स्मृत्युक्तयोग एव श्रुतौ ग्राह्य इत्यस्य कम्पनादित्यत्र निर्णीतत्वादिति भावः ।

ಪ್ರಸಿದ್ಧವಾದ ಪ್ರವೃತ್ತಿನಿಮಿತ್ತವು ಶ್ರೀಹರಿಯಲ್ಲಿ ಅಯುಕ್ತವಾದರೂ ಕೂಡ ಸ್ಮೃತ್ಯಾದಿಗಳಲ್ಲಿ ಪ್ರಸಿದ್ಧವಾದ ಮತ್ತು ಲೋಕದಲ್ಲಿ ಅಪ್ರಸಿದ್ಧವಾದ ಪ್ರವೃತ್ತಿನಿಮಿತ್ತವು ಶ್ರೀಹರಿಯಲ್ಲಿ ಯುಕ್ತವಾಗುತ್ತದೆ. ಆದ್ದರಿಂದ ಶೂನ್ಯ ಮೊದಲಾದ ಶಬ್ದಗಳಿಂದ ಶ್ರೀಹರಿಯು ಪ್ರತಿಪಾದ್ಯನಾಗುತ್ತಾನೆ ಎಂಬುದು ಈ ವಾಕ್ಯದ ಅಭಿಪ್ರಾಯ.

ಸ್ಮೃತಿಯಲ್ಲಿ ಹೇಳಲ್ಪಟ್ಟ ಯೋಗಾರ್ಥವನ್ನೇ ಶ್ರುತಿಯಲ್ಲೂ ಕೂಡ ವಿವಕ್ಷಿಸಬೇಕು ಎಂಬುದಾಗಿ 'ಕಂಪನಾತ್' ಎಂಬ ಸೂತ್ರದಲ್ಲಿ ನಿರ್ಣಯಿಸಲಾಗಿದೆ. ಇದನ್ನು ಟೀಕೆಯಲ್ಲಿ ನೆನಪಿಸಿದ್ದಾರೆ.

ತುಚ್ಛಾದಿಶಬ್ದಗಳ ನಿಷ್ಪತ್ತಿ

भावदीपः – तुच्छशब्दे तुदित्यस्यार्थमाह – तोदनात्तुदिति ।। इत्यस्यार्थमाह – अदृश्यः छ इति ।। अश भोजन इत्यतोऽश्यत्वादिति रूपं तस्य नञाऽन्वय इति अभक्ष्यत्वादित्यर्थमाह – नाश्यत्वादिति ।। उभयत्रेति।। असद्वाचिशब्देषु अभाववाचिशब्देषु च इत्यर्थः ।

'ತುಚ್ಛ' ಶಬ್ದದಲ್ಲಿ 'ತುತ್' ಎಂಬ ಪದದ ಅರ್ಥವನ್ನು 'ತೋದನಾತ್' ಇತ್ಯಾದಿ ಟೀಕೆಯಿಂದ ಹೇಳಿರುತ್ತಾರೆ. 'ಸ' ಎಂಬ ಪದದ ಅರ್ಥವನ್ನು 'ಅದೃಶ್ಯಃ' ಎಂಬ ವಾಕ್ಯದಿಂದ ಹೇಳಿರುತ್ತಾರೆ. 'ಅಶ ಭೋಜನೇ' ಎಂಬ ಧಾತುವಿನಿಂದ ನಿಷ್ಪನ್ನವಾದ್ದರಿಂದ 'ಅಶ್ಯತ್ವಾತ್' ಎಂದು ಹೇಳಬೇಕು. 'ನಞ್'ನ ಜೊತೆಗೆ ಇದಕ್ಕೆ ಅನ್ವಯವನ್ನು ಮಾಡಿದಾಗ 'ಅಭಕ್ಷ್ಯತ್ವಾತ್' ಎಂಬರ್ಥವನ್ನು ಹೇಳಿದಂತಾಗುತ್ತದೆ. ಇದನ್ನೇ ಟೀಕೆಯಲ್ಲಿ 'ನಾಶ್ಯತ್ವಾತ್ ಅಭಕ್ಷ್ಯತ್ವಾತ್' ಎಂದು ಸ್ಪಷ್ಟಪಡಿಸಿದ್ದಾರೆ. ಉಭಯತ್ರ ಎಂದರೆ ಅಸದ್ವಾಚಕವಾದ ಶಬ್ದಗಳಲ್ಲಿ ಹಾಗೂ ಅಭಾವವಾಚಕ ಶಬ್ದಗಳಲ್ಲೂ ಕೂಡ ಎಂದರ್ಥ.

ಸರ್ವಶಬ್ದಸಮನ್ವಯಕ್ಕೆ ಸಾಧಕಪ್ರಮಾಣವಿದೆ, ಬಾಧಕಪ್ರಮಾಣವಿಲ್ಲ

भावदीपः – युक्तिं चाऽऽह – निषेधेति ।। ईश्वरो वा कथं तत्रैव तत्करोतीत्यत आह – ईश्वरस्येति ।। फलोक्त्या सूत्रार्थमुपसंहरति ।। अत इति ।। साधकाभावात् बाधकाभावाच्चेत्यर्थः ।

ಈ ವಿಷಯದಲ್ಲಿ ಯುಕ್ತಿಯನ್ನು 'ನಿಷೇಧ' ಇತ್ಯಾದಿ ಟೀಕೆಯಿಂದ ಹೇಳಿರುತ್ತಾರೆ. ಈಶ್ವರನಾದರೂ ಏನೂ ಇಲ್ಲದೇ ಅಲ್ಲಿಯೇ ಆ ವಸ್ತುವನ್ನು ಹೇಗೆ ಹುಟ್ಟಿಸುತ್ತಾನೆ? ಎಂಬ ಪ್ರಶ್ನೆಗೆ 'ಈಶ್ವರಸ್ಯ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. ಸಿದ್ಧಾಂತದ ಫಲವನ್ನು ಹೇಳುವ ಮೂಲಕ ಸೂತ್ರದ ಅರ್ಥವನ್ನು 'ಅತಃ' ಇತ್ಯಾದಿಯಾಗಿ ಉಪಸಂಹಾರ ಮಾಡುತ್ತಿದ್ದಾರೆ. 'ಅತ' ಎಂಬ ಪದಕ್ಕೆ ಸಾಧಕ ಇರುವುದರಿಂದ ಬಾಧಕಪ್ರಮಾಣವಿಲ್ಲದ್ದರಿಂದ ಎಂದರ್ಥ.

ಸಕಲಶಬ್ದಗಳ ಸಮನ್ವಯದಿಂದ ಸಕಲಗುಣಪರಿಪೂರ್ಣತ್ವವು ಸಿದ್ಧವಾಯಿತು

भावदीपः – समन्वयसूत्रे तत्तु शास्त्रयोनीति प्रतिज्ञांशं विवृण्वन्नेव तत्समर्थनमस्य फलमिति दर्शयति ।। युक्तमिति तस्याऽपि जन्मादिसूत्रार्थसिद्धिद्वारा जिज्ञासासूत्रस्थब्रह्मशब्दार्थसिद्धिः फलमित्युपेत्याह – तत इति ।। अनन्तगुणत्वं चेति ।। हरेरित्यनुकर्षः । एतच्च समन्वयाधिकरणान्त एव विवृतम् ।।२९।।

इति श्रीमद्भाष्यटीकाभावदीपे राघवेन्द्रयतिकृते प्रथमध्याये चतुर्थः पादः ।
प्रथमाध्यायः सम्पूर्णः ।।

ಸಮನ್ವಯಸೂತ್ರದಲ್ಲಿ ಪರಮಾತ್ಮನೊಬ್ಬನೇ ಶಾಸ್ತ್ರಪ್ರತಿಪಾದ್ಯನಾಗಿದ್ದಾನೆ ಎಂಬ ಪ್ರತಿಜ್ಞೆಯನ್ನು ಮಾಡಿರುತ್ತಾರೆ. ಇದನ್ನೇ ಈ ಅಧ್ಯಾಯದಲ್ಲಿ ಸಂಪೂರ್ಣವಾಗಿ ವಿವರಿಸಲಾಯಿತು. ಇದರ ಸಮರ್ಥನೆಯೇ ಅಧ್ಯಾಯದ ಫಲವೆಂದು ತಿಳಿಸಿದ್ದಾರೆ. ಪರಮಾತ್ಮನಲ್ಲಿ ಸಕಲಗುಣಪರಿಪೂರ್ಣತ್ವವನ್ನು ಸಮರ್ಥನೆ ಮಾಡಿದ್ದರಿಂದ ಜನ್ಮಾಧಿಕರಣದಲ್ಲಿ ಹೇಳಲ್ಪಟ್ಟ ಸೃಷ್ಟ್ಯಾದಿಪಂಚಕರ್ತೃತ್ವವು ಸಿದ್ಧವಾಗುತ್ತದೆ. ತನ್ಮೂಲಕವಾಗಿ ಜಿಜ್ಞಾಸಾಸೂತ್ರದಲ್ಲಿ ಹೇಳಲ್ಪಟ್ಟ ಬ್ರಹ್ಮಶಬ್ದದ ಅರ್ಥವು ಸಿದ್ಧವಾಗುತ್ತದೆ ಎಂಬ ಅಧ್ಯಾಯದ ಫಲವನ್ನು 'ತತಃ' ಎಂಬ ಮಾತಿನಿಂದ ಹೇಳಿರುತ್ತಾರೆ. ಶ್ರೀಹರಿಯು ಅನಂತಗುಣಪರಿಪೂರ್ಣನಾಗಿದ್ದಾನೆಂದು ಸಿದ್ಧವಾಯಿತು. 'ಹರೇಃ' ಎಂಬ ಪದವನ್ನು ಅನುಕರ್ಷ ಮಾಡಿಕೊಳ್ಳಬೇಕು. ಸಕಲಶಬ್ದಗಳ ಸಮನ್ವಯದಿಂದ ಅನಂತಗುಣಪರಿಪೂರ್ಣತ್ವವು ಹೇಗೆ ಸಿದ್ಧವಾಗುತ್ತದೆಂಬ ವಿಷಯವನ್ನು ಸಮನ್ವಯಾಧಿಕರಣದ ಕೊನೆಯಲ್ಲಿಯೇ ವಿವರಿಸಿದ್ದಾಗಿದೆ.

ಇಲ್ಲಿಗೆ ಬ್ರಹ್ಮಸೂತ್ರಭಾಷ್ಯದ ಟೀಕೆಯ ಭಾವದೀಪದಲ್ಲಿ ಶ್ರೀಮದ್ರಾಘವೇಂದ್ರತೀರ್ಥಯತಿಗಳಿಂದ
ವಿರಚಿತವಾದ ಪ್ರಥಮಾಧ್ಯಾಯದ ನಾಕನೆಯ ಪಾದವು ಸಮಾಪ್ತವಾಯಿತು.
ಪ್ರಥಮಾಧ್ಯಾಯವು ಸಂಪೂರ್ಣವಾಯಿತು.

ಶ್ರೀಕೃಷ್ಣಾರ್ಪಣಮಸ್ತು

।। श्रीजानकीवदनाम्भोजराजहंसाय रामचन्द्राय नमः ।।

।। श्री गुरुभ्यो नमः ।।

श्री राघवेन्द्रतीर्थविरचिता

तन्त्रदीपिका

एतेन सर्वव्याख्यातेत्यधिकरणम् (१।४।७)

ಸೂತ್ರದ ಪ್ರತಿಪದಾರ್ಥ

।। एतेन सर्वे व्याख्याता व्याख्याताः ।। १-४-२९ ।।

अत्र नये निषेधार्थाः शब्दा समन्वीयन्ते । एतेन तदधीनत्वादिप्रागुक्त हेतुजातेन सर्वे शून्यासदादिशब्दास्तत्तु मुख्यवृत्त्या ब्रह्मैवेति व्याख्याताः प्रतिपादिता इत्यर्थः । प्रगुक्तसर्वप्रमेयावधारणार्था द्विरुक्तिः । ''अवधारणार्थं सर्वस्य'' इत्यादेः ।। ७ ।।

ಈ ಸರ್ವವ್ಯಾಖ್ಯಾನಾಧಿಕರಣದಲ್ಲಿ ನಿಷೇಧಾತ್ಮಕವಾದ ಶಬ್ದಗಳ ಸಮನ್ವಯವನ್ನು ಪರಮಾತ್ಮನಲ್ಲಿ ಮಾಡಲಾಗಿದೆ. ಏತೇನ = ತದಧೀನತ್ವ ಮೊದಲಾದ ಹಿಂದೆ ಹೇಳಿರುವ ಹೇತುಗಳ ಸಮೂಹದಿಂದ, ಸರ್ವೇ = ಶೂನ್ಯ, ಅಸತ್, ಅಭಾವ ಮೊದಲಾದ ಶಬ್ದಗಳು, ತತ್ತು = ಮಹಾಮುಖ್ಯವೃತ್ತಿಯಿಂದ ಪರಮಾತ್ಮನನ್ನೇ ಪ್ರತಿಪಾದನೆ ಮಾಡುತ್ತಿವೆ ಎಂದು, ವ್ಯಾಖ್ಯಾತಾಃ = ವ್ಯಾಖ್ಯಾನಿಸಲ್ಪಟ್ಟಿವೆ. ಇಷ್ಟು ಸೂತ್ರಾರ್ಥ.

ಹಿಂದೆ ಹೇಳಿದ ಎಲ್ಲಾ ಪ್ರಮೇಯಗಳ ಅವಧಾರಣಕ್ಕಾಗಿ ಸೂತ್ರದಲ್ಲಿ 'ವ್ಯಾಖ್ಯಾತಾ ವ್ಯಾಖ್ಯಾತಾಃ' ಎಂದು ದ್ವಿರುಕ್ತಿ ಮಾಡಿರುತ್ತಾರೆ. 'ಅವಧಾರಣಾರ್ಥಂ ಸರ್ವಸ್ಯ' ಎಂಬ

ವರಾಹಪುರಾಣದ ಮಾತಿನಂತೆ ಸಂಪೂರ್ಣವಾಗಿ ಪ್ರಥಮಾಧ್ಯಾಯದಲ್ಲಿ ಸಮನ್ವಯವು ಸಿದ್ಧವಾಯಿತು ಎಂಬುದನ್ನು ತಿಳಿಸುವುದಕ್ಕಾಗಿ ದ್ವಿರುಕ್ತಿಯನ್ನು ಮಾಡಿರುತ್ತಾರೆ.

ಈ ಪಾದದ ಅಧಿಕರಣಗಳಲ್ಲಿ ಆನುಗುಣ್ಯ

अत्राद्यनये तत्तन्निष्ठेशसम्बन्धादन्यत्र व्यवहारः स्वातन्त्र्यस्य शब्दप्रवृत्तौ निमित्तत्वं मुख्यत्वं च । ज्योतिर्नये शब्दानां पदवर्णरूपेणेशे वृत्तिरन्यत्र रूढिश्च । नसङ्ख्येति नये ईशस्य रूपभेदेनाधाराधेयभावः । कारणत्वेनेति नये ईशस्य रूपभेदेन व्यङ्ग्यव्यञ्जकत्वरूपकार्यकारणत्वम् । समाकर्षनये वृत्तितारतम्यम् । प्रकृतिनये एकस्मिन्नपि रूपे स्त्रीत्वपुंस्त्वसमावेशः । अन्त्यनये तुच्छनियन्तृत्वमिति ध्येयम् ।।

ನಾಲ್ಕನೆಯ ಪಾದದ ಮೊದಲನೆಯ ಅಧಿಕರಣದಲ್ಲಿ ಭಗವಂತನ ಸಂಬಂಧದಿಂದಲೇ ಉಳಿದ ಪದಾರ್ಥಗಳು ಆಯಾ ಶಬ್ದಗಳಿಂದ ವ್ಯವಹರಿಸಲ್ಪಡುತ್ತವೆ. ಮತ್ತು ಸ್ವಾತಂತ್ರ್ಯವೇ ಶಬ್ದಗಳ ಮುಖ್ಯವಾದ ಪ್ರವೃತ್ತಿನಿಮಿತ್ತಗಳಾಗಿರುತ್ತವೆ ಎಂದು ಮತ್ತು ಅದೇ ಮುಖ್ಯವಾದದ್ದೆಂದು ಸಮರ್ಥಿಸಲಾಗಿದೆ. ಜ್ಯೋತಿರಧಿಕರಣದಲ್ಲಿ ಪದ, ವರ್ಣ, ರೂಪವಾದ ಶಬ್ದಗಳು ಭಗವದ್ವಾಚಕವೆಂದು ಆದರೂ ಕೂಡ ಇತರ ಪದಾರ್ಥಗಳಲ್ಲಿ ಶಬ್ದಗಳಿಗೆ ರೂಢಿಯು ಇರುವುದೆಂದು ನಿರೂಪಣೆ ಮಾಡಲಾಗಿದೆ. 'ನಸಂಖ್ಯೋಪಸಂಗ್ರಹಾಧಿಕರಣದಲ್ಲಿ ಭಗವಂತನು ರೂಪಭೇದದಿಂದ ಆಧಾರನು, ಆಧೇಯನೂ ಆಗಿರುತ್ತಾನೆಂದು ಹೇಳಲಾಗಿದೆ. 'ಕಾರಣತ್ವೇನಚ ಆಕಾಶಾದಿಷು' ಎಂಬ ಅಧಿಕರಣದಲ್ಲಿ ಈಶ್ವರನಿಗೆ ರೂಪಭೇದದಿಂದ ವ್ಯಂಗ್ಯವ್ಯಂಜಕ-ಭಾವರೂಪವಾದ ಕಾರ್ಯಕಾರಣಭಾವವನ್ನು ಹೇಳಲಾಗಿದೆ. ಸಮಾಕರ್ಷಾಧಿಕರಣದಲ್ಲಿ ವೃತ್ತಿಗಳ ತಾರತಮ್ಯವನ್ನು ಸಮರ್ಥಿಸಲಾಗಿದೆ. ಪ್ರಕೃತ್ಯಧಿಕರಣದಲ್ಲಿ ಒಂದೇ ಭಗವದ್ರೂಪದಲ್ಲಿ ಸ್ತ್ರೀತ್ವ ಮತ್ತು ಪುಂಸ್ತ್ವಗಳ ಸಮರ್ಥನೆಯನ್ನು ಮಾಡಲಾಗಿದೆ. ಕೊನೆಯ ಈ ಅಧಿಕರಣದಲ್ಲಿ 'ತುಚ್ಛ' 'ಅಸತ್' ಮೊದಲಾದವುಗಳನ್ನು ಪರಮಾತ್ಮನು ನಿಯಮನ ಮಾಡುತ್ತಾನೆಂದು ಸಮರ್ಥಿಸಲಾಗಿದೆ.

ಹೆಚ್ಚಿನ ವಿಚಾರಕ್ಕಾಗಿ ನ್ಯಾಯಸಂಗ್ರಹ ಓದಬೇಕು

शब्दा द्विधा गुणावद्यवाचित्वेन व्यवास्थिताः ।
अन्त्याः स्वातन्त्र्यतोऽन्ये तु तद्गतत्वाच्च विष्णुगाः ।।
अध्यायपादसङ्गत्यादि गुरुपादकृतन्यायसङ्ग्रहे बोध्यम् ।।

इति श्रीमद्राघवेन्द्रयतिकृतायां तन्त्रदीपिकायां प्रथमाध्यायः चतुर्थ पादः ।। श्रीकृष्णार्पणमस्तु ।।
इति श्रीमद्राघवेन्द्रयतिकृतायां तन्त्रदीपिकायां प्रथमाध्यायः समाप्तः

ಶಬ್ದಗಳು ಗುಣವಾಚಕ ಮತ್ತು ದೋಷವಾಚಕ ಎಂದು ಎರಡುವಿಧವಾಗಿ ವ್ಯವಸ್ಥೆ ಮಾಡಲ್ಪಟ್ಟಿವೆ. ಈ ರೀತಿಯ ಶಬ್ದಗಳು ತಮ್ಮ ಪ್ರವೃತ್ತಿನಿಮಿತ್ತವನ್ನು ಪರಮಾತ್ಮನಲ್ಲಿ ಸ್ವಾತಂತ್ರ್ಯ-ವಿರುವುದರಿಂದಲೂ ಸಮನ್ವಯಗೊಳ್ಳುತ್ತವೆ. ಉಳಿದ ಶಬ್ದಗಳು ತಮ್ಮ ಪ್ರವೃತ್ತಿನಿಮಿತ್ತಗಳು ಭಗವಂತನಲ್ಲಿ ಇರುವುದರಿಂದಲೇ ಭಗವಂತನನ್ನು ಪ್ರತಿಪಾದನೆ ಮಾಡುತ್ತವೆ.

ಅಧ್ಯಾಯಸಂಗತಿ, ಪಾದಸಂಗತಿ ಮೊದಲಾದವುಗಳನ್ನು ಗುರುಪಾದರಾದ ಶ್ರೀವಿಜಯೀಂದ್ರತೀರ್ಥ ಸ್ವಾಮಿಗಳು ಮಾಡಿರುವ ನ್ಯಾಯಸಂಗ್ರಹವನ್ನು ಓದಿ ತಿಳಿದುಕೊಳ್ಳಬೇಕು.

ಇಲ್ಲಿಗೆ ಶ್ರೀಮದ್‌ರಾಘವೇಂದ್ರತೀರ್ಥ ಯತಿಗಳಿಂದ ವಿರಚಿತವಾದ
ತಂತ್ರದೀಪಿಕೆಯಲ್ಲಿ ಪ್ರಥಮಾಧ್ಯಾಯದ ನಾಲ್ಕನೆಯ ಪಾದವು ಸಮಾಪ್ತವಾಯಿತು
ಸಮನ್ವಯಾಧ್ಯಾಯವು ಸಮಾಪ್ತವಾಯಿತು.

॥ ಶ್ರೀ ಕೃಷ್ಣಾರ್ಪಣಮಸ್ತು ॥

ಅದ್ವೈತ-ವಿಶಿಷ್ಟಾದ್ವೈತಮತದಲ್ಲಿ ಏತೇನಾಧಿಕರಣ
ಮತ್ತು
ವಿಮರ್ಶೆ

ಭಾಮತಿಯಲ್ಲಿ ಹೀಗೆ ಆಕ್ಷೇಪಿಸಲಾಗಿದೆ - ಆಕಾಶಾದಿಶಬ್ದಗಳೆಲ್ಲವೂ ಬ್ರಹ್ಮಪರವಾಗಿವೆ ಎಂದು ಸಮರ್ಥಿಸಿದರೆ ಸಾಕು. ಆಯಾ ವಾಕ್ಯಗಳಲ್ಲಿರುವ ಬ್ರಹ್ಮಲಿಂಗಗಳು ಬ್ರಹ್ಮನಲ್ಲಿ ಸಮನ್ವಯವಾಗುತ್ತವೆ. ಮತ್ತು 'ಜನ್ಮಾದ್ಯಸ್ಯ ಯತಃ' ಎಂಬ ಸೂತ್ರದಲ್ಲಿ ಹೇಳಲ್ಪಟ್ಟ ಜಗಜ್ಜನ್ಮಾದಿಕರ್ತೃತ್ವ ಎಂಬ ಲಕ್ಷಣಕ್ಕೆ ಅತಿವ್ಯಾಪ್ತಿಯನ್ನೂ ಕೂಡ ಪರಿಹರಿಸಿದಂತಾಗುತ್ತದೆ. ಹೀಗಿರುವಾಗ ನೀವು ಪ್ರತಿಯೊಂದು ಅಧಿಕರಣಗಳಲ್ಲಿಯೂ ಆಯಾ ಶಬ್ದಗಳ ವಾಚ್ಯತ್ವವನ್ನು ಬ್ರಹ್ಮನಲ್ಲಿ ಏಕೆ ಸಮರ್ಥಿಸುತ್ತಿದ್ದೀರಿ? ಪ್ರತಿಯೊಂದು ಶಬ್ದಗಳ ವಾಚ್ಯತ್ವವು ಬ್ರಹ್ಮನಲ್ಲಿ ಇದೆ ಎನ್ನಲು ಯಾವುದೇ ಪ್ರಮಾಣವಿಲ್ಲ. ಪ್ರಯೋಜನವೂ ಕೂಡ ಇರುವುದಿಲ್ಲ.

ಭಾಮತಿಯ ಆಕ್ಷೇಪ ತಪ್ಪು. ಸಕಲಶಬ್ದಗಳು ಬ್ರಹ್ಮನಲ್ಲಿ ಯೌಗಿಕವಾಗಿ ಇರುತ್ತವೆನ್ನಲು ಅನೇಕ ಪ್ರಮಾಣಗಳಿವೆ. 'ನಾಮಾನಿ ಸರ್ವಾಣಿ ಯಮಾವಿಶಂತಿ' ಎಂಬ ಶ್ರುತಿಯಲ್ಲಿ ಆಙ್ ಎಂಬ ಉಪಸರ್ಗದಿಂದ ಯೌಗಿಕವೃತ್ತಿಯಿಂದ ಶಬ್ದಗಳು ಪರಮಾತ್ಮನಲ್ಲಿ ಸಮನ್ವಯ-ಗೊಳ್ಳುತ್ತವೆಂದು ತಿಳಿಯುತ್ತದೆ. 'ಅದ್ಯತೇऽತ್ತಿ ಚ ಭೂತಾನಿ ತಸ್ಮಾದನ್ನಂ ತದುಚ್ಯತೇ' ಎಂಬ ಶ್ರುತಿಯು ಸ್ವತಃ ತಾನೇ ಅನ್ನಶಬ್ದದ ನಿರ್ವಚನವನ್ನು ಪರಮಾತ್ಮನಲ್ಲಿ ಮಾಡುತ್ತಿದೆ. 'ತದ್ವೈ ತ್ವಂ ಪ್ರಾಣೋ ಅಭವಃ। ಮಹಾನ್ ಭೋಗಃ ಪ್ರಜಾಪತೇಃ। ಭುಜಃ ಕರಿಷ್ಯಮಾಣಃ। ಯದ್ದೇವಾನ್ ಪ್ರಾಣಯೋ ನವ' ಎಂಬ ಶ್ರುತಿಯಲ್ಲಿ ಒಂಭತ್ತು ಇಂದ್ರಿಯಾಭಿಮಾನಿದೇವತೆಗಳಿಗೆ ಚೇಷ್ಟಾಪ್ರದನಾದ್ದರಿಂದ ಪರಮಾತ್ಮನು ಪ್ರಾಣನೆನಿಸುತ್ತಾನೆಂದು ನಿಷ್ಪತ್ತಿ ಮಾಡಲಾಗಿದೆ. 'ಗಾಯತ್ರೀ ವಾ ಇದಂ ಸರ್ವಂ, ಗಾಯತಿ ತ್ರಾಯತೇ ಚ' ಎಂಬ ಶ್ರುತಿಯಲ್ಲಿಯೂ ಗಾನ ಮಾಡುವವರನ್ನು ರಕ್ಷಿಸುವ ಕಾರಣ ಪರಮಾತ್ಮನು ಗಾಯತ್ರಿ ಎನಿಸುತ್ತಾನೆಂದು ಯೋಗವೃತ್ತಿಯಿಂದಲೇ ಗಾಯತ್ರಿಶಬ್ದಸಮನ್ವಯವನ್ನು ಸ್ವತಃ ಶ್ರುತಿಯೇ ಮಾಡುತ್ತಿದೆ. ಹೀಗೆ ಅನೇಕ ಶ್ರುತಿಗಳ ಆಧಾರದಿಂದ ಪರಮಾತ್ಮನಲ್ಲಿ ಶಬ್ದವೃತ್ತಿಯು ಸಿದ್ಧವಾಗುತ್ತದೆ. ಅಷ್ಟೇ ಅಲ್ಲದೇ 'ಆಸಮಂತಾತ್ ಕಾಶತೇ ಯದಾಕಾಶಃ' ಎಲ್ಲೆಡೆ ಪ್ರಕಾಶಿಸುತ್ತಾನಾದ್ದರಿಂದ ಆಕಾಶನೆನಿಸುತ್ತಾನೆ

ಇವೇ ಮೊದಲಾದ ಸ್ಮೃತಿವಾಕ್ಯಗಳಿಂದಲೂ ಅನ್ನ ಮೊದಲಾದ ಶಬ್ದಗಳು ಯೌಗಿಕವೆಂದು ಸಿದ್ಧವಾಗುತ್ತವೆ.

'ಸಾಕ್ಷಾದಪ್ಯವಿರೋಧಂ ಜೈಮಿನಿಃ' ಎಂಬ ಸೂತ್ರದ ಸಾಂಕರಭಾಷ್ಯದಲ್ಲಿ ಅಗ್ನಿ, ವೈಶ್ವಾನರ ಮೊದಲಾದ ಶಬ್ದಗಳಿಗೆ ಬ್ರಹ್ಮನಲ್ಲಿ ಯೋಗವೃತ್ತಿಯನ್ನು ಹೇಳಲಾಗಿದೆ.

ಅಂತರ್ಯಾಮಿ, ಭೂಮ ಮೊದಲಾದ ಶಬ್ದಗಳಿಗೂ ಬ್ರಹ್ಮನಲ್ಲಿ ಯೌಗಿಕಾರ್ಥವನ್ನು ನೀವು ಸಮರ್ಥಿಸಿದ್ದೀರಿ. ಮತ್ತು ಅಂತರ್ಯಾಮಿ, ಭೂಮ ಮೊದಲಾದ ಶಬ್ದಗಳಿಗೆ ಬ್ರಹ್ಮನನ್ನು ಬಿಟ್ಟು ಬೇರಡೆ ಮುಖ್ಯಾರ್ಥವನ್ನು ಹೇಳಲೂ ಕೂಡ ನಿಮ್ಮಿಂದ ಸಾಧ್ಯವಿಲ್ಲ. ಆದ್ದರಿಂದ ಶಬ್ದಗಳಿಗೆ ಯೌಗಿಕಾರ್ಥವಿಲ್ಲವೆಂದು ಹೇಳುವ ನಿಮಗೆ ಅಪಸಿದ್ಧಾಂತ ದೋಷ ಬರುತ್ತದೆ.

'ತಂ ಯಚ್ಛತಂ ವರ್ಷಾಣಿ' ಇತ್ಯಾದಿ ಶ್ರುತಿಯಲ್ಲಿ ಶತರ್ಚಿ ಮೊದಲಾದ ಶಬ್ದಗಳಿಗೆ ಯೋಗವನ್ನು ಮತ್ತು ವಿದ್ವದ್ರೂಢಿಯನ್ನು ಹೇಳಲಾಗಿದೆ. 'ತಾವಾ ಏತಾ ಸರ್ವಾ ಋಚಃ ಸರ್ವೇ ವೇದಾಃ' ಎಂಬುದಾಗಿ ಬೇರೆ ಶ್ರುತಿಯಲ್ಲಿಯೂ ಕೂಡ ಇಂತಹ ಯೋಗಾರ್ಥವನ್ನು ಮತ್ತು ವಿದ್ವದ್ರೂಢಿಯನ್ನು ಅತಿದೇಶ ಮಾಡಲಾಗಿದೆ.

ಮೀಮಾಂಸಕರೂ ಕೂಡ ಹೀಗೆ ಶಬ್ದಗಳಿಗೆ ಯೋಗಾರ್ಥವನ್ನೇ ಸ್ವೀಕರಿಸಿದ್ದಾರೆ -

'ಶ್ಯೇನೇನ ಅಭಿಚರನ್ ಯಜೇತ' ಎಂಬ ವಾಕ್ಯವು ಅಭಿಚಾರಯಾಗವನ್ನು ವಿಧಿಸುತ್ತಿದೆ. ಇಲ್ಲಿರುವ ಶ್ಯೇನಶಬ್ದಕ್ಕೆ ಮೀಮಾಂಸಕರು ಗೌಣಾರ್ಥವನ್ನು ಮಾಡುತ್ತಾರೆ. ಯಾಗವು ಶ್ಯೇನಪಕ್ಷಿಯಂತೆ ಶತ್ರುಸಂಹಾರಕ್ಕೆ ಸಾಧನವಾದ್ದರಿಂದ ಈ ಯಾಗವು 'ಶ್ಯೇನ' ಎಂಬ ಶಬ್ದದಿಂದ ಪ್ರತಿಪಾದ್ಯವಾಗಿದೆ. ಇಲ್ಲಿ ವಾಚಕತ್ವವನ್ನು ಹೇಳಲು ಬರುವಾಗ, ಗೌಣಾರ್ಥವನ್ನು ಮೀಮಾಂಸಕರು ಮಾಡಿದ್ದಾರಲ್ಲವೇ? ಎಂದರೆ ಹೀಗೆ ಉತ್ತರವನ್ನು ತಿಳಿಯಬೇಕು - 'ಶ್ಯೇನೇನ ಅಭಿಚರನ್ ಯಜೇತ' ಎಂಬಲ್ಲಿ ಶ್ಯೇನಶಬ್ದಕ್ಕೆ ಮುಖ್ಯಾರ್ಥವನ್ನು ಸ್ವೀಕರಿಸಲು ಪ್ರಮಾಣವಿಲ್ಲ. ಶ್ಯೇನಾದಿಶಬ್ದಗಳಿಗೆ ಯಾಗವೆಂಬ ಕರ್ಮದಲ್ಲಿ ಮುಖ್ಯಾರ್ಥವನ್ನು ಸ್ವೀಕರಿಸಲು ಆಧಾರವಿಲ್ಲದ ಕಾರಣ, ಯೋಗಾರ್ಥವನ್ನು ಸ್ವೀಕರಿಸಬಾರದು. ಅಷ್ಟೇ ಅಲ್ಲದೇ 'ಯಥಾ ವೈ ಶ್ಯೇನ' ಎಂಬ ವಾಕ್ಯಶೇಷದಿಂದ ಗೌಣಾರ್ಥವನ್ನೇ ಸ್ವೀಕರಿಸಬೇಕೆನ್ನಲು ಪ್ರಮಾಣವಿದೆ. ಆದ್ದರಿಂದ ಮೀಮಾಂಸಕರು ಇಲ್ಲಿ ಯೌಗಿಕಾರ್ಥವನ್ನು ಸ್ವೀಕರಿಸಿಲ್ಲ.

ಆದರೆ ಇದೇ ಮೀಮಾಂಸಕರು 'ಉದ್ಭಿದಾ ಯಜೇತ ಪಶುಕಾಮಃ' ಎಂಬಲ್ಲಿ 'ಉದ್ಭಿತ್' ಎಂಬ ಶಬ್ದವು ಯೌಗಿಕಾರ್ಥವಾದ್ದರಿಂದ ಯಾಗದ ನಾಮಧೇಯವೆಂದು ಸಮರ್ಥಿಸಿದ್ದಾರೆ.

ಮತ್ತು 'ಯದಾಜಿಮೀಯುಃ ತದಾಜ್ಯಾನಾಮಾಜ್ಯತ್ವಮ್' ಎಂಬ ಶ್ರುತಿಯಲ್ಲಿಯೂ ಯುದ್ಧಕ್ಕೆ ಹೋಗುವಾಗ ಪಠಿಸಬೇಕಾದ್ದರಿಂದ ಈ ಮಂತ್ರಗಳಿಗೆ ಆಜ್ಯ ಎಂದು ಹೆಸರು ಎಂಬುದಾಗಿಯೂ ಯೌಗಿಕಾರ್ಥವನ್ನು ಸ್ವೀಕರಿಸಿದ್ದಾರೆ. ಏಕೆಂದರೆ ಉದ್ಗಿತ್ ಮತ್ತು ಆಜ್ಯ ಮೊದಲಾದ ಶಬ್ದಗಳಲ್ಲಿ ಯೌಗಿಕಾರ್ಥವನ್ನು ಸ್ವೀಕರಿಸಲು ಆಧಾರವಿದೆ. ಮತ್ತು ವಿರೋಧವೂ ಕೂಡ ಇರುವುದಿಲ್ಲ. ಆದ್ದರಿಂದ ಎಲ್ಲಿ ಯೌಗಿಕಾರ್ಥವನ್ನು ಸ್ವೀಕರಿಸಲು ಸಾರ್ಥಕ್ಯವಿದೆಯೋ, ಆಲ್ಲಿ ಗೌಣಾರ್ಥವನ್ನು ಸ್ವೀಕರಿಸಬಾರದು.

ವೈಶ್ವದೇವ ಶಬ್ದದಲ್ಲಿಯೂ ಕೂಡ 'ಯದ್ವಿಶ್ವೇ ದೇವಾಃ ಸಮಯಜಂತ ತದ್ವೈಶ್ವದೇವಸ್ಯ ವೈಶ್ವದೇವತ್ವಮ್' ಎಂಬ ಶ್ರುತಿಯು ಎಂಟು ಯಾಗಗಳನ್ನು ಹೇಳುತ್ತಿದೆ. ಈ ಅರ್ಥವನ್ನು ಸ್ವೀಕರಿಸಬೇಕಾದರೆ ಶ್ರುತಿಗೆ ಯೌಗಿಕಾರ್ಥವನ್ನೇ ಸ್ವೀಕರಿಸಬೇಕೆಂದು ಹೇಳಬೇಕು. ಹೊರತು, ಮೀಮಾಂಸಕರು ಹೇಳುವಂತೆ 'ವೈಶ್ವದೇವೀಮಾಮಿಕ್ಷಾಮ್' ಎಂಬ ಶ್ರುತಿಯ ಆಧಾರದಿಂದ ಆಮಿಕ್ಷಾ ಯಾಗವು ವಿಶ್ವೇದೇವತೆಗಳನ್ನೇ ದೇವತೆಯನ್ನಾಗಿ ಒಳಗೊಂಡಿದೆ. ಆದ್ದರಿಂದ ವೈಶ್ವದೇವ ಹಾಗೂ ಅವೈಶ್ವದೇವ ಯಾಗಗಳ ಸಮುದಾಯದಲ್ಲಿ ಛತ್ರಿನ್ಯಾಯದಿಂದ ಲಕ್ಷಣಾವನ್ನು ಮಾಡಬಾರದು. ಆಮಿಕ್ಷಾಯಾಗದಲ್ಲಿ ವೈಶ್ವದೇವಶಬ್ದವು ಮುಖ್ಯವಾಗಿದೆಯೆಂದು ಸ್ವತಃ ಶ್ರುತಿಯೇ ಹೇಳುತ್ತಿದೆ. ಉಳಿದ ಯಾಗಗಳಲ್ಲಿ ವೈಶ್ವದೇವ ಶಬ್ದವು ಇರುವುದಿಲ್ಲ. ಆದ್ದರಿಂದ ಮೀಮಾಂಸಕರು ಇಲ್ಲಿ ವೈಶ್ವದೇವ ಹಾಗೂ ಅವೈಶ್ವದೇವಯಾಗಗಳ ಸಮುದಾಯದಲ್ಲಿ ವೈಶ್ವದೇವಶಬ್ದಕ್ಕೆ ಛತ್ರಿನ್ಯಾಯದಿಂದ ಲಕ್ಷಣಾ ಮಾಡಿರುವುದು ತಪ್ಪು.

ಶ್ರುತಿಯಲ್ಲಿ ಹೇಳಲ್ಪಟ್ಟ ಯೋಗಾರ್ಥವನ್ನು ಸ್ವೀಕರಿಸಲು ಬರುವಾಗ ಯೋಗಮುಖವಾದ ಲಕ್ಷಣಾವನ್ನು ಮಾಡುವುದು ತಪ್ಪಾಗುತ್ತದೆ.

ಭಾಷ್ಯಕಾರರೂ ಕೂಡ ಅನೇಕ ಶ್ರುತಿಗಳಿಂದ ಆಯಾ ಅಧಿಕರಣಗಳಲ್ಲಿ ಬ್ರಹ್ಮನಿಗೆ ಪ್ರತಿಯೊಂದು ಶಬ್ದಗಳ ವಾಚ್ಯತ್ವವು ಯೋಗಾರ್ಥದಿಂದಲೇ ಸಮಂಜಸವಾಗಿ ಉಪಪನ್ನವಾಗುತ್ತದೆಂಬುದನ್ನು ಸಮರ್ಥಿಸಿದ್ದಾರೆ.

ರಾಮಾನುಜರ ಆಕ್ಷೇಪ - ಬ್ರಹ್ಮನಲ್ಲಿ ಯಾವುದೇ ಶಬ್ದಗಳು ಶಕ್ತಿವೃತ್ತಿಯಿಂದಾಗಲೀ, ಲಕ್ಷಣಾವೃತ್ತಿಯಿಂದಾಗಲೀ ಸಮನ್ವಯವಾಗುವುದಿಲ್ಲ. ಅದು ಹೀಗೆ - ದೇವತಾವಾಚಕವಾದ, ಮನುಷ್ಯವಾಚಕವಾದ ಶಬ್ದಗಳೆಲ್ಲವೂ ಶರೀರವನ್ನಷ್ಟೇ ಹೇಳುತ್ತದೆ. ಆದರೂ ಶರೀರಿಯಲ್ಲಿ ಪ್ರಯೋಗಿಸುವುದು ಕಂಡಿದೆ. 'ಚೈತ್ರನು ಬಂದನು' ಇತ್ಯಾದಿ ವಾಕ್ಯಗಳಲ್ಲಿ 'ಚೈತ್ರ' ಎಂಬ ಶಬ್ದವು

ಅವನ ಶರೀರವನ್ನು ಹೇಳುತ್ತದೆ. ಆದರೆ ಗಮನಕ್ರಿಯಾದಿಗಳಿಗೆ ಆಶ್ರಯನಾದ ಆತ್ಮನನ್ನು ಶಬ್ದವು ತಿಳಿಸುತ್ತದೆ. ಇದರಂತೆ ಪ್ರತಿಯೊಂದು ಶಬ್ದಗಳು ಲೌಕಿಕಪದಾರ್ಥಗಳಲ್ಲೇ ಪ್ರತಿಪಾದನೆ ಮಾಡುತ್ತವೆ. 'ಯಸ್ಯಾವ್ಯಕ್ತಂ ಶರೀರಮ್' ಇತ್ಯಾದಿ ಶ್ರುತಿಯ ಆಧಾರದಿಂದ ಜಗತ್ತಿನಲ್ಲಿರುವ ಪ್ರತಿಯೊಂದು ಪದಾರ್ಥಗಳು ಬ್ರಹ್ಮನ ಶರೀರವೇ ಆಗಿವೆ. ಆದ್ದರಿಂದ ಶರೀರಪ್ರತಿಪಾದಕವಾದ ಸಕಲಶಬ್ದಗಳು ಶರೀರಿಯಾದ ಬ್ರಹ್ಮನನ್ನು ತಿಳಿಸುತ್ತವೆ.

ಇದು ತಪ್ಪು. ಭಾಟ್ಟರು ಜಾತಿಯನ್ನು ಶಬ್ದಾರ್ಥವೆನ್ನುತ್ತಾರೆ. ವ್ಯಕ್ತಿಯಲ್ಲಿ ಲಕ್ಷಣಾ ಮಾಡುತ್ತಾರೆ. ಅದರಂತೆ ನೀವೂ ಕೂಡ ಪ್ರತಿಯೊಂದು ಶಬ್ದಗಳು ಪ್ರತಿಪಾದನೆ ಮಾಡುತ್ತದೆ. ಶರೀರಿಯಲ್ಲಿ ಲಕ್ಷಣಾ ಮಾಡಬೇಕೆಂದು ಹೇಳುತ್ತಿದ್ದೀರಿ. ಹಾಗಾದರೆ ಹಿಂದೆ ಹೇಳಿದ 'ನಾಮಾನಿ ಸರ್ವಾಣಿ ಯಮಾವಿಶಂತಿ' ಇತ್ಯಾದಿ ಅನೇಕ ಶ್ರುತಿಗಳ ವಿರೋಧ ನಿಮಗೂ ಕೂಡ ತಪ್ಪಿದ್ದಲ್ಲ. ಮತ್ತು ಅಪಸಿದ್ಧಾಂತವು ಬರುತ್ತದೆ. ಏಕೆಂದರೆ ನೀವು ಬ್ರಹ್ಮನಲ್ಲಿ ಲಕ್ಷಣಾವೃತ್ತಿಯನ್ನು ಶಬ್ದಗಳಿಗೆ ಒಪ್ಪಿಲ್ಲ. ಈಗ ಲಕ್ಷಣಾವೃತ್ತಿಯನ್ನು ಒಪ್ಪಿದರೆ ನಿಮ್ಮ ಸಿದ್ಧಾಂತಕ್ಕೆ ವಿರುದ್ಧವಾಗಿ ಹೇಳಿದಂತಾಯಿತು.

ಆಕ್ಷೇಪ - ಪ್ರಾಭಾಕರರ ಮತದಲ್ಲಿ ಜಾತಿಯನ್ನು ಶಬ್ದಗಳು ಶಕ್ತಿವೃತ್ತಿಯನ್ನು ಪ್ರತಿಪಾದನೆ ಮಾಡುತ್ತವೆ. ಆದರೂ ಕೂಡ ವ್ಯಕ್ತಿಯ ಜ್ಞಾನ ಬರುತ್ತದೆಂದು ಒಪ್ಪಿದ್ದಾರೆ. ಅದು ಹೀಗೆ - ಜಾತಿಯು ವ್ಯಕ್ತಿಪರತಂತ್ರಸ್ವಭಾವವುಳ್ಳದ್ದು. (ಆಕೃತಿ = ಜಾತಿ) ಅಂದರೆ ವ್ಯಕ್ತಿಯ ಅಧೀನವಾಗಿ ಜಾತಿಯಿರುತ್ತದೆಂದು ಪ್ರತ್ಯಕ್ಷಸಿದ್ಧವಾಗಿದೆ. ಹೊರತಾಗಿ, ಮತ್ತೊಂದು ವ್ಯಕ್ತಿಯಂತೆ ಜಾತಿಯು ಸ್ವತಂತ್ರವಲ್ಲ. ಹೀಗೆ ಪರತಂತ್ರವಾದ ಜಾತಿಯು ವ್ಯಕ್ತಿಯನ್ನೊಳಗೊಂಡೇ ಇರುತ್ತದೆ. ಅಂದರೆ ವ್ಯಕ್ತ್ಯಂತರ್ಭಾವಘಟಿತಮೂರ್ತಿಕವಾಗಿದೆ. ಯಾವಾಗ ಶಬ್ದವು ಜಾತಿಯನ್ನು ಪ್ರತಿಪಾದನೆ ಮಾಡುತ್ತದೋ, ಆವಾಗ ಜಾತಿಯ ಜೊತೆಗೆ ಇರುವಾಗ ವ್ಯಕ್ತಿಯ ಜ್ಞಾನವೂ ಕೂಡ ಬರುತ್ತದೆ. ಹೀಗೆ ಜಾತಿ ಹಾಗೂ ವ್ಯಕ್ತಿಗಳು ಶಬ್ದದಿಂದ ಹುಟ್ಟುವ ಒಂದೇ ಜ್ಞಾನದಲ್ಲಿ ವಿಷಯವಾಗಿರುತ್ತವೆ. ಆದರೂ ಕೂಡ ಅನನ್ಯಲಭ್ಯವಾದ ಜಾತಿಯಲ್ಲೇ ಶಬ್ದಗಳಿಗೆ ಶಕ್ತಿ ಹೊರತು, ವ್ಯಕ್ತಿಯಲ್ಲಲ್ಲ. ಅಂದರೆ ಜಾತಿಯನ್ನು ತಿಳಿಯಲು ಶಬ್ದಶಕ್ತಿ ಬಿಟ್ಟರೆ, ಮತ್ತೊಂದು ಆಧಾರವಿಲ್ಲ. ಹೀಗೆ ಅನನ್ಯಲಭ್ಯವಾದ ಕಾರಣ, ಶಬ್ದಗಳಿಗೆ ಜಾತಿಯಲ್ಲಿಯೇ ಶಕ್ತಿಯನ್ನು ಒಪ್ಪಬೇಕು.

ಯಾವರೀತಿಯಾಗಿ ರೂಪಜ್ಞಾನವು ರೂಪಿದ್ರವ್ಯರಹಿತವಾಗಿ ಬರಲಾರದು. 'ನಹಿ ರೂಪಶೂನ್ಯ ರೂಪಧೀಃ' ಎಂಬ ನ್ಯಾಯವು ಪ್ರಸಿದ್ಧವಾಗಿದೆಯೋ, ಅದರಂತೆ ಪ್ರಕೃತ ಧರ್ಮವೂ ಕೂಡ ಧರ್ಮಿಯಿಂದ ಸಹಿತವಾಗಿಯೇ ಇರುತ್ತದೆ. ಆದ್ದರಿಂದ ಧರ್ಮಜ್ಞಾನ ಬರಬೇಕಾದರೆ, ಧರ್ಮಿಜ್ಞಾನವೂ ಕೂಡ ಬಂದೇ ಬರುತ್ತದೆಂಬ ನಿಯಮವಿದೆ. ಹೀಗೆ

ಅವ್ಯಭಿಚರಿತವಾಗಿ ವ್ಯಾಪ್ತಿಯನ್ನು ಹೊಂದಿರುವ ಕಾರಣ, ಜಾತ್ಯಂತರ್ಭಾವದಿಂದಲೇ ವ್ಯಕ್ತಿಜ್ಞಾನವು ಬರುತ್ತದೆಂದು ತಿಳಿಯಬೇಕು. ವ್ಯಕ್ತಿಯು ಜಾತಿಯಂತೆ ಅನನ್ಯಲಭ್ಯವಲ್ಲದ ಕಾರಣ ಅದರಲ್ಲಿ ಶಕ್ತಿಯನ್ನು ಒಪ್ಪಬೇಕಾಗಿಲ್ಲ. ಹಾಗಾದರೆ ಜಾತಿಯಲ್ಲಿ ಶಕ್ತಿಯನ್ನು ಒಪ್ಪಿ, ವ್ಯಕ್ತಿಯಲ್ಲಿ ಲಕ್ಷಣಾವನ್ನು ಒಪ್ಪಬಹುದಲ್ಲವೇ? ಎಂದು ಪ್ರಶ್ನಿಸಬಾರದು. ಒಂದೇ ಜ್ಞಾನದಲ್ಲಿ ಜಾತಿ ಹಾಗೂ ವ್ಯಕ್ತಿಗಳು ಎರಡೂ ವಿಷಯವಾಗಿರುವುದರಿಂದ ಲಕ್ಷಣಾ ಮಾಡಲು ಸಾಧ್ಯವಿಲ್ಲ. ಮೊದಲು ಶಕ್ತಿ ಜ್ಞಾನ ಬಂದು ಅದರಲ್ಲಿ ಅನುಪಪತ್ತಿ ಕಂಡಿದ್ದರೆ ಲಕ್ಷಣಾವನ್ನು ಮಾಡಬಹುದಿತ್ತು.

ಪ್ರಾಭಾಕರರ ಈ ಸಮರ್ಥನೆಯಂತೆ ನಾವೂ ಕೂಡ ಸಕಲಪದಾರ್ಥಗಳು ಬ್ರಹ್ಮನ ಅಧೀನವಾಗಿರುವುದರಿಂದ ಬ್ರಹ್ಮನಲ್ಲಿ ಶಕ್ತಿಯನ್ನಾಗಲೀ, ಲಕ್ಷಣಾವನ್ನಾಗಲೀ ಒಪ್ಪುವುದಿಲ್ಲ. ಆದರೂ ಕೂಡ ಬ್ರಹ್ಮನು ಎಲ್ಲಾ ಶಬ್ದಗಳಿಂದ ಹುಟ್ಟುವ ಜ್ಞಾನಕ್ಕೆ ವಿಷಯನಾಗುತ್ತಾನೆ. ಜಾತಿಯು ವ್ಯಕ್ತಿಯ ಅಧೀನವಾಗಿದೆ. ಅದರಂತೆ ಸಕಲಪದಾರ್ಥಗಳು ಬ್ರಹ್ಮನ ಅಧೀನವಾಗಿವೆ. ಅನನ್ಯಲಭ್ಯವಾದ ಜಾತಿಯಲ್ಲಿ ಶಕ್ತಿಯನ್ನು ಒಪ್ಪುವುದು ಅನಿವಾರ್ಯ. ಅದರಂತೆ ಅನನ್ಯಲಭ್ಯವಾದ ಇತರ ಪದಾರ್ಥಗಳಲ್ಲಿ ಶಕ್ತಿಯನ್ನು ಒಪ್ಪುವುದು ಅನಿವಾರ್ಯ. ಅಲ್ಲಿ ಜಾತಿಯು ವ್ಯಕ್ತಿಘಟಿತವಾಗಿಯೇ ಜ್ಞಾನದಲ್ಲಿ ವಿಷಯವಾಗುವಂತೆ, ಇಲ್ಲಿಯೂ ಕೂಡ ಸಕಲ ಪದಾರ್ಥಗಳು ಬ್ರಹ್ಮನಿಂದ ಘಟಿತವಾಗಿಯೇ ವಿಷಯವಾಗುತ್ತವೆ. ಆದ್ದರಿಂದ ವ್ಯಕ್ತಿಯಲ್ಲಿ ಹೇಗೆ ಶಕ್ತಿವೃತ್ತಿಯಾಗಲೀ, ಲಕ್ಷಣಾವೃತ್ತಿಯಾಗಲೀ ಇರುವುದಿಲ್ಲವೋ, ಅದರಂತೆ ಇಲ್ಲಿಯೂ ಕೂಡ ಬ್ರಹ್ಮನಲ್ಲಿ, ಶಕ್ತಿವೃತ್ತಿಯನ್ನಾಗಲೀ, ಲಕ್ಷಣಾವೃತ್ತಿಯನ್ನಾಗಲೀ ಒಪ್ಪಬೇಕಾಗಿಲ್ಲ.

ನಿರಾಕರಣೆ - ಆಕಾಶಾದಿ ಸಮಸ್ತ ಪದಾರ್ಥಗಳು ಬ್ರಹ್ಮಘಟಿತಮೂರ್ತಿಕವಾದ್ದರಿಂದ, ಆಕಾಶಾದಿ ಪದಾರ್ಥಗಳನ್ನು ತಿಳಿಸುವ ಶಬ್ದಗಳೇ ಒಳಗಿರುವ ಬ್ರಹ್ಮನನ್ನೂ ಕೂಡ ತಿಳಿಸುತ್ತವೆ. ಆದ್ದರಿಂದ ಶಕ್ತಿಯನ್ನಾಗಲೀ, ಲಕ್ಷಣಾವನ್ನಾಗಲೀ, ಬ್ರಹ್ಮನಲ್ಲಿ ಮಾಡಬೇಕಾಗಿಲ್ಲವೆಂದು ಆಕ್ಷೇಪ ಮಾಡಲಾಯಿತು. ಇದು ಸರಿಯಲ್ಲ. ಏಕೆಂದರೆ 'ಬ್ರಹ್ಮಪರತಂತ್ರಸ್ವಭಾವ' ಎಂಬ ಶಬ್ದಕ್ಕೆ ಹೀಗರ್ಥ - 'ತತ್‌ಸಂಘಟಿತತಯೈವ ಪ್ರತೀತಿಯೋಗ್ಯತ್ವಂ' ಯಾವುದರ ಜೊತೆಗೆ ಸೇರಿಕೊಂಡೇ ಪ್ರತೀತಿ ಬರಲು ಯೋಗ್ಯವಾಗಿರುತ್ತದೋ, ಅದು ತತ್‌ಪರತಂತ್ರಸ್ವಭಾವ ಎನಿಸಿಕೊಳ್ಳುತ್ತದೆ. ಉದಾಹರಣೆ - ಗೋತ್ವವು ಗೋ ಎಂಬ ವ್ಯಕ್ತಿಯಿಂದ ಸಂಘಟಿತಮೂರ್ತಿಕವಾಗಿಯೇ ತೋರುತ್ತದೆ. ಆದ್ದರಿಂದ ಗೋತ್ವವು 'ಗೋಪರತಂತ್ರಸ್ವಭಾವ' ಎನಿಸುತ್ತದೆ. ಆದರೆ ಆಕಾಶಾದಿ ಸಮಸ್ತ ಪದಾರ್ಥಗಳು ಬ್ರಹ್ಮಸಂಘಟಿತವಾಗಿಯೇ ತೋರುತ್ತಿವೆ ಎಂದು ಹೇಳಲು ಸಾಧ್ಯವೇ ಇಲ್ಲ. ಆದ್ದರಿಂದ ಬ್ರಹ್ಮಪರತಂತ್ರ ಸ್ವಭಾವವೆಂದು ಹೇಳಲಾಗದು. ಈ ಪರಿಷ್ಕಾರ ಬಿಟ್ಟು ನೀವು

ಹೇಳಿದಂತೆ 'ತದಧೀನಸತ್ತಾಕತ್ವಮ್' ಅಥವಾ 'ತದಧೀನ ಪ್ರವೃತ್ತಿನಿಮಿತ್ತತ್ವಮ್' ಎಂಬುದನ್ನು ಬ್ರಹ್ಮಪರತಂತ್ರಸ್ವಭಾವ ಎನ್ನಲಾಗದು. ಹಾಗೇ ಹೇಳುವುದು ಪ್ರಕೃತಕ್ಕೆ ಅನುಪಯುಕ್ತವಾಗಿದೆ.

ಯಾವುದು ಯಾವುದಕ್ಕೆ ಉಪಾದಾನಕಾರಣವೋ, ಅದು ಉಪಾದೇಯಜ್ಞಾನದಲ್ಲಿ ನಿಯಮೇನ ತೋರುತ್ತದೆ ಎಂಬ ಮತ್ತು ಯಾವುದು ಯಾವುದರಲ್ಲಿ ಆಶ್ರಿತವೋ, ಅದು ಆಶ್ರಯಜ್ಞಾನದಿಂದ ನಿಯಮೇನ ತೋರುತ್ತದೆ ಎಂಬ ನಿಮ್ಮ ಮಾತಿಗೆ ವ್ಯಭಿಚಾರವಿದೆ. ವಾಯುವಿಗೆ ಆಕಾಶವು ಉಪಾದಾನಕಾರಣವಾಗಿದೆ. ಅದರಂತೆ ಚೇಳಿಗೆ ಗೋಮಯವು ಉಪಾದಾನಕಾರಣವಾಗಿದೆ. ಇಲ್ಲಿ ಉಪಾದೇಯವಾದ ವಾಯುವಿನ ಜ್ಞಾನ ಬರಬೇಕಾದರೆ, ಉಪಾದಾನಭೂತವಾದ ಆಕಾಶದ ಜ್ಞಾನ ಬರುವುದು ಕಂಡಿಲ್ಲ. ಅದರಂತೆ ಉಪಾದೇಯವಾದ ಚೇಳಿನ ಜ್ಞಾನ ಬರಬೇಕಾದರೆ ಉಪಾದಾನಭೂತವಾದ ಗೋಮಯದ ಜ್ಞಾನ ಬರುವುದು ಕಂಡಿಲ್ಲ. ಮತ್ತು ಗಂಧಾದಿಗಳಿಗೆ ಪೃಥಿವ್ಯಾದಿಗಳು ಆಶ್ರಯವಾಗಿವೆ. ಇಲ್ಲಿ ಆಶ್ರಿತವಾದ ಗಂಧಾದಿಗಳ ಜ್ಞಾನದಿಂದ ಆಶ್ರಯಭೂತವಾದ ಪೃಥಿವ್ಯಾದಿಗಳು ತಿಳಿಯುತ್ತವೆಂದೂ ಕೂಡ ಹೇಳಲಾಗದು.

ಪರತಂತ್ರಸ್ವಭಾವವೆಂದರೆ ತತ್‌ಸಂಘಟಿತತಯೈವ ಪ್ರತೀತಿಯೋಗ್ಯತ್ವಂ' ಎಂದರ್ಥ. ಆದ್ದರಿಂದ ಪ್ರತೀತಿಯಿದ್ದರೆ ಯೋಗ್ಯತೆಯನ್ನು ಕಲ್ಪನೆ ಮಾಡಲೇಬೇಕು.

ಗೋವು ಮೊದಲಾದ ಶಬ್ದಗಳನ್ನು ಕೇಳಿದಾಗ, ಗೋ ಎಂಬ ವ್ಯಕ್ತಿಸಹಿತವಾದ ಗೋತ್ವವು ತೋರುವಂತೆ ಘಟ ಮೊದಲಾದ ಶಬ್ದಗಳಿಂದ ಬ್ರಹ್ಮಘಟಿತವಾದ ಘಟಜ್ಞಾನವು ಬರುವುದು ಲೋಕದಲ್ಲಿ ಕಂಡಿಲ್ಲ.

ವೇದದಲ್ಲಿಯೂ ಕೂಡ 'ಆಕಾಶಾದೇವ ಸಮುತ್ಪದ್ಯಂತೇ' ಇತ್ಯಾದಿ ವಾಕ್ಯಗಳನ್ನು ಕೇಳಿದಾಗ ಆಕಾಶಶಬ್ದದಿಂದ ಕೇವಲ ಬ್ರಹ್ಮಜ್ಞಾನವಷ್ಟೇ ಬರುತ್ತಿದೆ. ಹೊರತು, ಬ್ರಹ್ಮಘಟಿತಮೂರ್ತಿಕವಾದ ಆಕಾಶಾದಿಜ್ಞಾನ ಬರುತ್ತಿಲ್ಲ. ಹೀಗೊಪ್ಪದಿದ್ದರೆ, ಆಕಾಶಾದಿ ಶಬ್ದಗಳ ಸಮನ್ವಯವು ಬ್ರಹ್ಮನಲ್ಲಿ ಸಿದ್ಧವಾಗದೇ ಇರಬೇಕಾದೀತು.

'ಆಕಾಶಃ ಸಂಭೂತಃ' ಇತ್ಯಾದಿ ವಾಕ್ಯಗಳಲ್ಲಿ ಬ್ರಹ್ಮನ ಜ್ಞಾನ ಬರುತ್ತಿಲ್ಲ. ಆದ್ದರಿಂದ ವ್ಯುತ್ಪತ್ತಿಬಲದಿಂದ ಬ್ರಹ್ಮಘಟಿತ ಆಕಾಶಪ್ರತೀತಿಯನ್ನು ಕಲ್ಪನೆ ಮಾಡುತಿದ್ದಿರಿ. ಬ್ರಹ್ಮಸಹಿತನಾದ ಆಕಾಶದ ಪ್ರತೀತಿಯು ಅನುಭವದಿಂದ ಬರುವುದಿಲ್ಲ. ಒಂದು ವೇಳೆ ವ್ಯುತ್ಪತ್ತಿಬಲದಿಂದ ಇಲ್ಲಿಯೂ ಕೂಡ ಬ್ರಹ್ಮಘಟಿತಮೂರ್ತಿಕವಾದ ಆಕಾಶದ ಪ್ರತೀತಿ ಬರುತ್ತದೆಂದು ಕಲ್ಪನೆ

ಮಾಡಿದರೆ, ಅನ್ಯೋನ್ಯಾಶ್ರಯದೋಷ ಬರುತ್ತದೆ. ಆದರೆ ಪ್ರತೀತಿಬಲದಿಂದಲೇ ವ್ಯುತ್ಪತ್ತಿ ಹುಟ್ಟಬೇಕು. ಹಾಗಾಗಿ ವ್ಯುತ್ಪತ್ತಿಯು ಸಿದ್ಧವಾದರೆ ಅದರ ಬಲದಿಂದ ತತ್‌ಘಟಿತವಾದ ಪ್ರತೀತಿಯು ಸಿದ್ಧವಾಗುತ್ತದೆ. ಪ್ರತೀತಿಯು ಸಿದ್ಧವಾದ ಮೇಲೆ ಅದರ ಬಲದಿಂದ ವ್ಯುತ್ಪತ್ತಿಯು ಸಿದ್ಧವಾಗುತ್ತದೆ. ಹೀಗೆ ಅನ್ಯೋನ್ಯಾಶ್ರಯದೋಷ ಬರುತ್ತದೆ.

ಆದ್ದರಿಂದ ಎಲ್ಲಿಯೂ ಕೂಡ ಆಕಾಶಾದಿಶಬ್ದಗಳನ್ನು ಕೇಳಿದಾಗ ಬ್ರಹ್ಮಘಟಿತಮೂರ್ತಿಕವಾದ ಆಕಾಶಾದಿಗಳ ಪ್ರತೀತಿ ಬರುತ್ತಲೇ ಇಲ್ಲ. ಹೀಗಿರುವಾಗ ಆಕಾಶಾದಿಗಳು ಬ್ರಹ್ಮಪರತಂತ್ರ-ಸ್ವಭಾವವಾಗಿವೆ ಎಂದು ಹೇಗೆ ಹೇಳಿದಿರಿ?

ಹೀಗೆ ರಾಮಾನುಜರ ಒಂದು ವಿಚಾರವನ್ನು ನಿರಾಕರಣೆ ಮಾಡಿದ್ದರಿಂದ, ಮತ್ತೊಂದು ವಿಚಾರವೂ ಕೂಡ ನಿರಾಕೃತವಾಯಿತು - 'ದೇವ ಮೊದಲಾದ ಶಬ್ದಗಳು ಕೃಷ್ಣ, ರಾಮ ಮೊದಲಾದ ಶಬ್ದಗಳು ಶರೀರವಿಶಿಷ್ಟವಾದ ಶರೀರಿಯನ್ನೇ ಹೇಳುತ್ತವೆ. ಅದೇ ರೀತಿಯಾಗಿ ಆಕಾಶ ಮೊದಲಾದ ಶಬ್ದಗಳೂ ಕೂಡ ಬ್ರಹ್ಮನಿಗೆ ಶರೀರಭೂತವಾದ ಆಕಾಶಾದಿವಿಶಿಷ್ಟವಾಗಿ ಬ್ರಹ್ಮನನ್ನು ಪ್ರತಿಪಾದನೆ ಮಾಡುತ್ತವೆ' ಎಂದು.

ಇವರ ವಾದವು ಈಗ ನಿರಸ್ತವಾಯಿತು.

'ಶರೀರ', 'ಜಡ', 'ಕೃಶ', 'ಸ್ಥೂಲ' ಇವೇ ಮೊದಲಾದ ಶಬ್ದಗಳನ್ನು ಕೇವಲ ಶರೀರದಲ್ಲಷ್ಟೇ ಪ್ರಯೋಗಿಸುತ್ತಾರೆ. ಹೊರತು, ಶರೀರವಿಶಿಷ್ಟವಾದ ಶರೀರಿಯಲ್ಲಿ ಈ ಶಬ್ದಗಳನ್ನು ಯಾರೂ ಪ್ರಯೋಗ ಮಾಡುವುದಿಲ್ಲ. ಅದರಂತೆ ಲೋಕದಲ್ಲಿ ಆಕಾಶ ಮೊದಲಾದ ಶಬ್ದಗಳನ್ನು ಕೇವಲ ಆಕಾಶಾದಿಗಳಲ್ಲಷ್ಟೇ ಪ್ರಯೋಗ ಮಾಡುತ್ತಾರೆ. ಹೊರತು, ಆಕಾಶಾದಿವಿಶಿಷ್ಟವಾದ ಬ್ರಹ್ಮನನ್ನು ಪ್ರತಿಪಾದನೆ ಮಾಡುತ್ತವೆ ಎಂದು ಯಾರೂ ಹೇಳುತ್ತಿಲ್ಲ.

ಲೋಕದಲ್ಲಿ ಹೇಗೆ ಪ್ರಯೋಗ ಕಂಡಿಲ್ಲವೋ, ಅದೇ ರೀತಿಯಾಗಿ ವೇದದಲ್ಲಿಯೂ ಅಂತಹ ಪ್ರಯೋಗ ಕಂಡಿಲ್ಲ. 'ಆಕಾಶಾದೇವ ಸಮುತ್ಪದ್ಯಂತೇ' ಇತ್ಯಾದಿ ವಾಕ್ಯಗಳಲ್ಲಿ 'ಆಕಾಶ' ಎಂಬ ಶಬ್ದವು ವಿಶೇಷ್ಯಭೂತವಾದ ಆಕಾಶವನ್ನಷ್ಟೇ ಪ್ರತಿಪಾದನೆ ಮಾಡುತ್ತಿದೆ. ಇನ್ನು 'ಯಸ್ಯಾವ್ಯಕ್ತಂ ಶರೀರಂ ಯಸ್ಯ ಪೃಥಿವೀ ಶರೀರಂ ಯಸ್ಯಾಪಃ ಶರೀರಂ ಯಸ್ಯಾಗ್ನಿಃ ಶರೀರಂ ಯಸ್ಯಾತ್ಮಾ ಶರೀರಮ್' ಇತ್ಯಾದಿ ವಾಕ್ಯಗಳಲ್ಲಿ ವಿಶೇಷಣನಾದ ಬ್ರಹ್ಮನಲ್ಲಿಯೇ ಪ್ರಯೋಗ ಕಂಡಿದೆ. ಹೊರತು, ನೀವು ಹೇಳುವಂತೆ ಆಯಾ ಶರೀರವಿಶಿಷ್ಟನಾದ ಬ್ರಹ್ಮನು ಆಯಾ ಶಬ್ದಗಳಿಂದ ಪ್ರತಿಪಾದ್ಯನಾಗುತ್ತಾನೆಂಬುದು ಕಂಡಿಲ್ಲ.

'ಆತ್ಮನಃ ಆಕಾಶಃಸಂಭೂತಃ' ಇತ್ಯಾದಿ ವಾಕ್ಯದಲ್ಲಿ ಆಕಾಶಾದಿವಿಶಿಷ್ಟನಾದ ಬ್ರಹ್ಮನೇ ಪ್ರತಿಪಾದ್ಯನಾಗಿದ್ದಾನೆಂದು ಹೇಳಲಾಗದು. ಹಾಗೇ ಹೇಳಿದರೆ ಸಂಭೂತತ್ವವನ್ನು ಕೇವಲ ಆಕಾಶದಲ್ಲಿ ಅನ್ವಯ ಮಾಡಬೇಕು. ಅಂದರೆ ಕಾರ್ಯತ್ವವು ವಿಶೇಷಣದಲ್ಲಿ ಮಾತ್ರ ಅನ್ವಯವಾಗುತ್ತವೆ, ವಿಶೇಷ್ಯದಲ್ಲಿ ಅನ್ವಯವಾಗುವುದಿಲ್ಲವೆಂದು ಹೇಳಿದಂತಾಗುತ್ತದೆ. ಹೀಗೆ ಹೇಳಿದರೆ, ಕೇವಲ ಬ್ರಹ್ಮನಿಗೆ ಉಪಾದಾನಕಾರಣತ್ವವನ್ನು ನೀವು ಒಪ್ಪಿಲ್ಲ. ಆದ್ದರಿಂದ ಸೂಕ್ಷ್ಮಚಿದಚಿದ್‌ವಿಶಿಷ್ಟನಾದ ಬ್ರಹ್ಮನಿಗೆ ಉಪಾದಾನಕಾರಣತ್ವವನ್ನು ಹೇಳುತ್ತೀರಿ. ವಿಶಿಷ್ಟನಿಗೆ ಉಪಾದಾನಕಾರಣತ್ವವನ್ನು ಹೇಳುವಾದ ವಿಶೇಷ್ಯನಾದ ಬ್ರಹ್ಮನಿಗೆ ಹೇಗೆ ಉಪಾದಾನಕಾರಣತ್ವವು ಬರುತ್ತದೋ, ಅದೇ ರೀತಿಯಾಗಿ ವಿಶಿಷ್ಟಬ್ರಹ್ಮನಿಗೆ ಕಾರ್ಯತ್ವವನ್ನು ಹೇಳುವಾಗ, ವಿಶೇಷ್ಯನಾದ ಬ್ರಹ್ಮನಿಗೂ ಕಾರ್ಯತ್ವವು ಬರುತ್ತದೆ. ಹೀಗೆ ಬ್ರಹ್ಮನಿಗೆ ಕಾರ್ಯತ್ವ, ಕಾರಣತ್ವ ಎರಡೂ ಕೂಡ ಬರುತ್ತದೆಂದು ಹೇಳಬೇಕು. ಕೇವಲ ಕಾರಣತ್ವಮಾತ್ರ ಬರುತ್ತದೆಂದು ಹೇಳಲಾಗದು. ಇನ್ನು ಕಾರ್ಯತ್ವ ಹಾಗೂ ಕಾರಣತ್ವ ಎರಡನ್ನೂ ಕೂಡ ಗೌಣವಾಗಿ ಹೇಳುವುದಾದರೆ, ಶ್ರುತಿಗಳಲ್ಲಿ ಕಾರ್ಯತ್ವವನ್ನು ನಿಷೇಧ ಮಾಡಿ, ಕಾರಣತ್ವವನ್ನು ವಿಧಾನ ಮಾಡುವುದು ತಪ್ಪಾಗುತ್ತದೆ.

'ತತ್ ಸೃಷ್ಟ್ವಾ ತದೇವಾನುಪ್ರಾವಿಶತ್', 'ಬ್ರಹ್ಮನು ಜಗತ್ತನ್ನು ಸೃಷ್ಟಿಮಾಡಿ ಅನಂತರ ಪ್ರವೇಶಿಸಿದನು' ಎಂದು ಹೇಳಲಾಗಿದೆ. ಪ್ರಕೃತ ನೀವು ತೇಜಸ್ಸು, ಆಪ, ಅನ್ನ ಮೊದಲಾದ ಶಬ್ದಗಳಿಗೆ ವಿಶಿಷ್ಟನಾದ ಬ್ರಹ್ಮನೆಂದು ಅರ್ಥೈಸುವುದಾರೆ, ತೇಜಸ್ಸು ಮೊದಲಾದವುಗಳಿಂದ ವಿಶಿಷ್ಟನಾದ ಬ್ರಹ್ಮನಲ್ಲಿ ತಾನು ಪ್ರವೇಶಿಸಿದನು ಎಂದು ಹೇಳಬೇಕು. ಇದು ಹೇಗೆ ಸಾಧ್ಯ ? ಈಶ್ವರವಿಶಿಷ್ಟನಾದ ವಸ್ತುವಿನಲ್ಲಿ ಪುನಃ ಈಶ್ವರ ಪ್ರವೇಶವು ಅಯುಕ್ತವಾಗುತ್ತದಷ್ಟೇ. ಮತ್ತು ಸೃಷ್ಟಿವಾಕ್ಯದಲ್ಲಿ ಆಕಾಶಾದಿಶಬ್ದಗಳಿಗೆ ಕೇವಲ ಆಕಾಶಾದಿಪರತ್ವವನ್ನು ಹೇಳುವುದು ನ್ಯಾಯಸಮ್ಮತವಾಗಿದೆ.

ಒಂದು ವೇಳೆ ಆಕಾಶ ಮೊದಲಾದ ಶಬ್ದಗಳು ಆಕಾಶಾದಿವಿಶಿಷ್ಟನಾದ ಬ್ರಹ್ಮನಿಗೆ ವಾಚಕವಾಗಿದೆ. ಆಕಾಶಾದಿವಿಶೇಷಣಗಳಲ್ಲಿ ಲಕ್ಷಣಾವೃತ್ತಿಯಿಂದ ಬರುತ್ತವೆಂದು ಹೇಳಿದರೆ, ಸಮನ್ವಯಕ್ಕೆ ವಿಷಯನಾದ ವಿಶೇಷ್ಯಭೂತನಾದ ಬ್ರಹ್ಮನಲ್ಲಿಯೂ ಅಂತಹ ಶಬ್ದಗಳು ಬಾರದಿರಬೇಕಾದೀತು. ಆದ್ದರಿಂದ ಆಕಾಶಾದಿ ಶಬ್ದಗಳ ಸಮನ್ವಯವನ್ನೇ ಮಾಡಿದಂತಾಗುವುದಿಲ್ಲ.

ಮತ್ತು ಲೌಕಿಕಪ್ರಯೋಗ ಹಾಗೂ ವೈದಿಕಪ್ರಯೋಗಗಳಿಗೆ ಅನುಸಾರಿಯಾಗಿ ಶಬ್ದಗಳು ವಿಶೇಷಣವನ್ನೇ ಪ್ರತಿಪಾದನೆ ಮಾಡುತ್ತವೆಂದು ಹೇಳಬೇಕು. ವೇದದಲ್ಲಿ ಕೆಲವೊಮ್ಮೆ ವಿಶಿಷ್ಟದಲ್ಲಿ ಲಕ್ಷಣಾ ಮಾಡಲಾಗುತ್ತದೆ ಎಂದು ಏಕೆ ಹೇಳಬಾರದು ?

ಸಕಲ ಪದಾರ್ಥಗಳು ಬ್ರಹ್ಮಘಟಿತಮೂರ್ತಿಕವಾಗಿಯೇ ತೋರುವುದಾದರೆ ಶ್ರುತಿಗೆ ವ್ಯಾಖ್ಯಾನವನ್ನು ನಿಮಗೆ ಮಾಡಲು ಸಾಧ್ಯವಾಗುವುದಿಲ್ಲ. 'ಅಹಂ ಬ್ರಹ್ಮಾಸ್ಮಿ' 'ತತ್ತ್ವಮಸಿ' ಇವೇ ಮೊದಲಾದ ಶ್ರುತಿಗಳಲ್ಲಿ ಇರುವ 'ಅಹಂ' ಮೊದಲಾದ ಶಬ್ದಗಳು ಅಹಮರ್ಥವಿಶಿಷ್ಟನಾದ ಬ್ರಹ್ಮನಲ್ಲಿ ಮುಖ್ಯಾರ್ಥವನ್ನು ಹೇಳುತ್ತವೆಂದು ನೀವು ವ್ಯಾಖ್ಯಾನಿಸಬೇಕು. ಹಾಗಾದರೆ 'ತದಾತ್ಮಾನಮೇವಾವೇದಹಂ ಬ್ರಹ್ಮಾಸ್ಮಿ' ಎಂಬ ಶ್ರುತಿಯಲ್ಲಿ 'ತಾನ್ಯಹಂ ವೇದ ಸರ್ವಾಣಿ ನ ತ್ವಂ ವೇತ್ಥ ಪರಂತಪ' ಎಂಬ ಸ್ಮೃತಿಯಲ್ಲಿ, ಬ್ರಹ್ಮ, ಜೀವ ಮೊದಲಾದವರಲ್ಲಿ 'ಅಹಂ ತ್ವಂ' ಮೊದಲಾದ ಶಬ್ದಗಳಿಗೆ ಲಕ್ಷಣಾವನ್ನು ಮಾಡಬೇಕಾಗುತ್ತದೆ. ಏಕೆಂದರೆ 'ಅಹಂ ಬ್ರಹ್ಮಾಸ್ಮಿ' ಎಂಬಲ್ಲಿ 'ಅಹಂ' ಶಬ್ದಕ್ಕೆ ಅಹಮರ್ಥವಿಶಿಷ್ಟನಲ್ಲಿ ಮುಖ್ಯಾರ್ಥತ್ವವನ್ನು ಹೇಳುವುದಾದರೆ, ಈಶ್ವರನೇ ಸ್ವತಃ ತನ್ನನ್ನು ಬ್ರಹ್ಮನೆಂದು ತಿಳಿದುಕೊಳ್ಳುತ್ತಾನೆ ಎನ್ನುವ 'ತದಾತ್ಮಾನಾಂ' ಎಂಬ ಶ್ರುತಿಯಲ್ಲಿರುವ 'ಅಹಂ' ಶಬ್ದಕ್ಕೂ ಅಹಮರ್ಥವಿಶಿಷ್ಟನೇ ಮುಖ್ಯಾರ್ಥನಾಗುತ್ತಾನೆ. ಬ್ರಹ್ಮನು ಅಮುಖ್ಯಾರ್ಥನಾಗಬೇಕಾಗುತ್ತದೆ. ಅದೇ ರೀತಿಯಲ್ಲಿ ಗೀತಾವಾಕ್ಯದಲ್ಲಿರುವ 'ಅಹಂ' ಶಬ್ದಕ್ಕೂ ಕೂಡ ಕೃಷ್ಣನು ಲಕ್ಷಣಯಾ ಪ್ರತಿಪಾದ್ಯನಾಗಿ, ಅರ್ಜುನನೂ ಕೂಡ ಲಕ್ಷಣಾವೃತ್ತಿಯಿಂದ ಪ್ರತಿಪಾದ್ಯನೆಂದಾಗಬೇಕಾದೀತು. ಹೀಗೆ ಕಷ್ಟದಿಂದ ವ್ಯಾಖ್ಯಾನ ಮಾಡುವುದಕ್ಕಿಂತಲೂ ಲೋಕ ಹಾಗೂ ವೇದಗಳಿಗೆ ಅನುಸಾರಿಯಾಗಿ 'ಅಹಂ' ಮೊದಲಾದ ಶಬ್ದಗಳಿಗೆ ಅಹಮಾದ್ಯರ್ಥ-ದಲ್ಲಿಯೇ ಮುಖ್ಯತ್ವವನ್ನು ಹೇಳುವುದು ಸ್ವರಸವಾಗುತ್ತದೆ. ಅಂದರೆ 'ಅಹಂ ಬ್ರಹ್ಮಾಸ್ಮಿ' ಎಂಬಲ್ಲಿ ಒಂದು ಕಡೆ ನೀವು ಅಹಮರ್ಥಾದಿವಿಶಿಷ್ಟನಲ್ಲಿ ವಾಚ್ಯತ್ವವನ್ನು ಹೇಳಲು ಹೋಗಿ, ಉಳಿದೆಲ್ಲ ಲೌಕಿಕ ಹಾಗೂ ವೈದಿಕವ್ಯವಹಾರಗಳಲ್ಲಿರುವ 'ಅಹಂ' ಶಬ್ದಕ್ಕೆ ಲಕ್ಷಣಾ ಮಾಡುತ್ತಿದ್ದೀರಿ. ಅದಕ್ಕಿಂತಲೂ ಲೌಕಿಕ ಹಾಗೂ ವೈದಿಕಪ್ರಯೋಗಗಳಲ್ಲಿರುವಂತೆ ಅಹಮಾದ್ಯರ್ಥದಲ್ಲಿ ಮುಖ್ಯಾರ್ಥತ್ವವನ್ನು ಒಪ್ಪಿ, 'ಅಹಂ ಬ್ರಹ್ಮಾಸ್ಮಿ' ಎಂಬಲ್ಲಿರುವ 'ಅಹಂ' ಶಬ್ದಕ್ಕೆ ಅಹಮರ್ಥಾದಿ ವಿಶಿಷ್ಟನಲ್ಲಿ ಲಕ್ಷಣಾ ಮಾಡುವುದೇ ಸೂಕ್ತವಾಗುತ್ತದೆ.

ಅಹಮರ್ಥಾದಿ ವಿಶಿಷ್ಟನಾದ ಬ್ರಹ್ಮನಲ್ಲಿ ಲಕ್ಷಣಾ ಮಾಡಬೇಕಾದ ಪ್ರಸಂಗ ಒಂದೆರಡು ಸ್ಥಳಗಳಲ್ಲಿ ಮಾತ್ರ. ಉಳಿದೆಲ್ಲೆಡೆ ಶಕ್ತಿವೃತ್ತಿಯನ್ನೇ ಒಪ್ಪಬಹುದು. ಹೀಗೆ ನೀವು ವ್ಯಾಖ್ಯಾನಿಸುವುದು ಸೂಕ್ತವಾಗುತ್ತದೆ.

ಅಥವಾ ನಾವು ಹೇಳುವಂತೆ ಅಹಮಾದಿ ಶಬ್ದಗಳಿಗೆ ಪ್ರಸಿದ್ಧವಾದ ಯಾವ ಪ್ರವೃತ್ತಿನಿಮಿತ್ತ-ವಿರುತ್ತದೋ, ಅದು ಭಗವದಧೀನವಾಗಿರುತ್ತದೆಂದು ಶುದ್ಧಬ್ರಹ್ಮನಲ್ಲಿಯೇ ಮುಖ್ಯವಾದ

ವ್ಯವಹಾರವನ್ನು ಕೂಡಿಸಬಹುದು. ಅಥವಾ ಅಹೇಯನಾದ್ದರಿಂದ ಅಹಂಶಬ್ದಪ್ರತಿಪಾದ್ಯ-ನಾಗಿದ್ದಾನೆಂದೂ ಕೂಡ ಮುಖ್ಯವ್ಯವಹಾರವನ್ನು ಕೂಡಿಸಬಹುದು.

ದೇವ, ಮನುಷ್ಯ ಮೊದಲಾದ ಶಬ್ದಗಳಿಗೆ ವಿಶಿಷ್ಟವಾಚಕತ್ವವನ್ನು ಒಪ್ಪಬಹುದು. ಕೇವಲ ಆತ್ಮನಲ್ಲಾಗಲೀ, ಕೇವಲ ಶರೀರದಲ್ಲಾಗಲೀ, 'ದೇವಃ' 'ಮನುಷ್ಯಃ' ಇತ್ಯಾದಿ ಪ್ರಯೋಗಗಳು ಸರ್ವಥಾ ಇರುವುದಿಲ್ಲ. ಹೊರತಾಗಿ ದೇಹವಿಶಿಷ್ಟನಾದ ಆತ್ಮನಲ್ಲಿಯೇ ಪ್ರಯೋಗಗಳಿರುತ್ತವೆ. ಆದ್ದರಿಂದ ಈ ದೃಷ್ಟಾಂತವೇ ವಿಷಮವಾಗಿದೆ. ಆದರೆ ಪ್ರಕೃತ ಆಕಾಶ ಮೊದಲಾದ ಶಬ್ದಗಳನ್ನು ವಿಶಿಷ್ಟನಲ್ಲಿ ಪ್ರಯೋಗ ಮಾಡುವುದು ಕಂಡಿಯೇ ಇಲ್ಲ. ಲೋಕದಲ್ಲಾಗಲೀ, ವೇದದಲ್ಲಾಗಲೀ ಕೇವಲ ಆಕಾಶದಲ್ಲಷ್ಟೇ ಪ್ರಯೋಗಿಸುತ್ತಾರೆ. ಹೀಗಿರುವಾಗ ದೇವಾದಿಶಬ್ದಗಳ ದೃಷ್ಟಾಂತದಿಂದ ಆಕಾಶಾದಿ ಶಬ್ದಗಳಿಗೆ ವಿಶಿಷ್ಟವಾಚಕತ್ವವನ್ನು ಪ್ರತಿಪಾದನೆ ಮಾಡಲು ಬರುವುದೇ ಇಲ್ಲ.

ಮತ್ತು ಸಕಲ ಪದಾರ್ಥಗಳು ಈಶ್ವರನಿಗೆ ಮುಖ್ಯವಾಗಿ ಶರೀರವಾಗಲು ಸಾಧ್ಯವೇ ಇಲ್ಲ. ಏಕೆಂದರೆ -

'ಅಶರೀರಂ ಶರೀರೇಷ್ವನವಸ್ಥೇಷ್ವವಸ್ಥಿತಮ್ ।
ಮಹಾಂತಂ ವಿಭುಮಾತ್ಮಾನಂ ಮತ್ವಾ ಧೀರೋ ನ ಶೋಚತಿ ।'

ಪರಮಾತ್ಮನು ಶರೀರಿಯಾಗಿದ್ದಾನೆ. ಶರೀರಗಳಲ್ಲಿ ನೆಲೆಸದಿದ್ದರೂ, ನೆಲೆಸಿದಂತೆ ಇರುತ್ತಾನೆ. ಮಹಾತ್ಮನೂ, ವ್ಯಾಪ್ತನೂ, ನಿಯಾಮಕನೂ ಆದ ಇಂತಹ ಪರಮಾತ್ಮನನ್ನು ಯಾರು ತಿಳಿಯುತ್ತಾನೋ, ಅಂತಹ ಧೀರನಿಗೆ ದುಃಖವೇ ಆಗುವುದಿಲ್ಲ. 'ಸ ಯಶ್ಚಾಯಮಶರೀರಃ ಪ್ರಜ್ಞಾತ್ಮಾ' ಪ್ರಜ್ಞಾತ್ಮನಾದ ಪರಮಾತ್ಮನು ಅಶರೀರಿಯಾಗಿದ್ದಾನೆ. ಇವೇ ಮೊದಲಾದ ಶ್ರುತಿಗಳಿಂದ 'ನೈವ ಪ್ರಕೃತಿಜಾಃ ಕ್ವಚಿತ್' ಪ್ರಾಕೃತ ಪದಾರ್ಥಗಳ ಸಂಪರ್ಕವು ಎಂದೂ ಬರುವುದಿಲ್ಲ. ಇವೇ ಮೊದಲಾದ ಶ್ರುತಿಗಳಿಂದ ಭಗವಂತನಿಗೆ ಪ್ರಾಕೃತ ಶರೀರದ ನಿಷೇಧವು ತಿಳಿಯುತ್ತದೆ. ಆದ್ದರಿಂದ ಪ್ರಾಕೃತವಾದ ಪೃಥ್ವೀ ಮೊದಲಾದವುಗಳು ಈಶ್ವರನಿಗೆ ಶರೀರವಾಗಲು ಸಾಧ್ಯವಿಲ್ಲ.

ಪೃಥಿವ್ಯಾದಿಗಳು ಈಶ್ವರನ ಭೋಗಕ್ಕೆ ಆಶ್ರಯವಲ್ಲದ ಕಾರಣ, ಶ್ರುತಿ-ಸ್ಮೃತಿಗಳಲ್ಲಿ ಅವನನ್ನು ಅಶರೀರಿ ಎನ್ನಲಾಗಿದೆ. ಹೊರತು ಪೃಥಿವ್ಯಾದಿಗಳು ಶರೀರವೇ ಎಂದರ್ಥವಲ್ಲ ಎಂದು ವಿಶಿಷ್ಟಾದ್ವೈತಿಗಳು ವ್ಯಾಖ್ಯಾನ ಮಾಡಬಹುದು.

ಆದರೆ ಇದು ಸರಿಯಲ್ಲ. ಏಕೆಂದರೆ ಭೋಗಕ್ಕೆ ಆಶ್ರಯವಾದ ಪದಾರ್ಥವನ್ನು ಪ್ರತಿಪಾದಿಸುವ ದೇವ, ಮನುಷ್ಯ ಮೊದಲಾದ ಶಬ್ದಗಳಷ್ಟೇ ಶರೀರಿಯನ್ನು ಪ್ರತಿಪಾದನೆ ಮಾಡುತ್ತಿರುವುದು ಲೋಕದಲ್ಲಿ ಕಂಡಿದೆ. ಪ್ರಕೃತ ಪೃಥಿವ್ಯಾದಿಗಳು ಈಶ್ವರನ ಭೋಗಕ್ಕೆ ಆಶ್ರಯವಲ್ಲವೆಂದು ನೀವು ಹೇಳುವುದಾದರೆ, ಪೃಥಿವ್ಯಾದಿ ಶಬ್ದಗಳೂ ಕೂಡ ಶರೀರಿಯೆನಿಸಿದ ಈಶ್ವರನ ಪರ್ಯಂತವಾಗಿ ಹೋಗಲಾರವು.

ಪೃಥಿವ್ಯಾದ್ಯಾ ದೇವತಾಸ್ತು ದೇಹವತ್ತದ್ವಶತ್ವತಃ।
ಶರೀರಮಿತಿ ಚೋಚ್ಯಂತೇ ಯಸ್ಯ ವಿಷ್ಣೋರ್ಮಹಾತ್ಮನಃ॥

ಪೃಥಿವ್ಯಾದಿ ದೇವತೆಗಳು ಪರಮಾತ್ಮನ ಅಧೀನರಾದ್ದರಿಂದ ಅವನ ದೇಹದಂತೆ ಇರುತ್ತಾರೆ. ಆದ್ದರಿಂದಲೇ ಶ್ರುತಿ-ಸ್ಮೃತಿಗಳಲ್ಲಿ ಕೆಲವೊಮ್ಮೆ ಪೃಥಿವ್ಯಾದಿಗಳನ್ನು ಮಹಾತ್ಮನಾದ ಪರಮಾತ್ಮನ ಶರೀರವೆಂದು ಹೇಳಲಾಗುತ್ತದೆ ಎಂಬ ಸ್ಮೃತಿವಾಕ್ಯದಿಂದ ಪೃಥಿವ್ಯಾದಿ ಪ್ರಾಕೃತ ಪದಾರ್ಥಗಳು ಪರಮಾತ್ಮನಿಗೆ ಮುಖ್ಯವಾದ ಶರೀರವಲ್ಲ. ತದಭಿಮಾನಿದೇವತೆಗಳು ಅಧೀನರಾದ್ದರಿಂದ ಶರೀರವೆಂದು ಕರೆಸಿಕೊಳ್ಳುತ್ತಾರೆ ಎಂದು ತಿಳಿಯಬೇಕು.

ಮತ್ತು 'ಯಸ್ಯ ಪೃಥಿವೀ ಶರೀರಮ್' ಇತ್ಯಾದಿ ವಾಕ್ಯದಲ್ಲಿರುವ 'ಪೃಥಿವೀ' ಮೊದಲಾದ ಶಬ್ದಗಳು ಜಡವಾದ ಈಶ್ವರನ ಶರೀರವಾಗಲು ಸಾಧ್ಯವಿಲ್ಲ. ಏಕೆಂದರೆ 'ಯಂ ಪೃಥಿವೀ ನ ವೇದ' ಎಂಬ ವಾಕ್ಯಶೇಷದಲ್ಲಿ ಯಾರನ್ನು ಪೃಥಿವಿಯು ತಿಳಿಯವುದಿಲ್ಲವೋ ಎಂದು ಹೇಳಿರುವುದರಿಂದ ಪೃಥಿವಿಯು ಚೇತನವೆಂದು ತಿಳಿಯುತ್ತದೆ. ಆದ್ದರಿಂದ ಜಡವಾದ ಪೃಥಿವಿಯು 'ಪೃಥಿವೀ' ಶಬ್ದದಿಂದ ಪ್ರತಿಪಾದ್ಯವಾಗದೇ ತದಭಿಮಾನಿದೇವತೆಯಷ್ಟೇ ಪ್ರತಿಪಾದ್ಯರಾಗುತ್ತಾರೆ.

ಮತ್ತು 'ಅಶರೀರಮ್' ಎಂಬ ಶ್ರುತಿಯಿಂದ ಲೋಕತಃ ಪ್ರಾಪ್ತವಾದ ಪ್ರಾಕೃತ ಶರೀರವನ್ನಷ್ಟೇ ನಿಷೇಧ ಮಾಡಲಾಗಿದೆ. ಆದ್ದರಿಂದ ಅದಕ್ಕನುಸಾರಿಯಾಗಿ 'ಯಸ್ಯಾವ್ಯಕ್ತಂ ಶರೀರಮ್' ಇತ್ಯಾದಿ ವಾಕ್ಯಗಳಲ್ಲಿಯೂ ಲೋಕಸಿದ್ಧವಾದ ಶರೀರವನ್ನು ವಿವಕ್ಷಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ದೇವ, ಮನುಷ್ಯ ಮೊದಲಾದ ಶಬ್ದಗಳ ಸಾಮ್ಯವನ್ನು ಈ ಪೃಥಿವ್ಯಾದಿಶಬ್ದಗಳಲ್ಲಿ ಹೇಳಬಾರದು.

ಮತ್ತು ಯಾವ ಚೇತನನಿಗೆ ಯಾವ ದ್ರವ್ಯವು ಎಲ್ಲ ರೀತಿಯಿಂದ ಸ್ವಾರ್ಥದಲ್ಲಿ ನಿಯಮನ ಮಾಡಿಕೊಳ್ಳಲು ಮತ್ತು ಧಾರಣೆ ಮಾಡಿಕೊಳ್ಳಲು ಸಮರ್ಥವಾಗುತ್ತದೋ, ಅಂತಹ ಪದಾರ್ಥವಷ್ಟೇ ಅವನಿಗೆ 'ಶೇಷತೈಕಸ್ವರೂಪಂ' ಶರೀರ ಎನಿಸುತ್ತದೆ ಮತ್ತು ಅಂಗಭೂತ

ಅಪ್ರಧಾನವಾಗಿರುತ್ತದೆ. ಹೀಗೆ ನೀವು ಶರೀರ ಶಬ್ದವನ್ನು ನಿರ್ವಚನ ಮಾಡುತ್ತೀರಿ. ಈ ನಿರ್ವಚನವನ್ನು ನೋಡಿದಾಗ 'ತದಧೀನತ್ವವನ್ನೇ ಶರೀರತ್ವ' ಎಂದು ಹೇಳಿದಂತಾಗುತ್ತದೆ. ನಾವೂ ಕೂಡ ತದಧೀನತ್ವವನ್ನೇ ಶರೀರತ್ವ ಎಂದು ಹೇಳುತ್ತಿದ್ದೇವೆ. ಆದ್ದರಿಂದ ತದಧೀನತ್ವಕ್ಕಿಂತ ಅತಿರಿಕ್ತವಾದ ಶರೀರತ್ವವನ್ನೇನೂ ನೀವು ಹೇಳರುವುದಿಲ್ಲ.

ಹೀಗೆ ಹೇಳಿದ್ದರಿಂದ 'ಹಂತಾಹಮಿಮಾಸ್ತಿಸ್ರೋ ದೇವತಾ ಅನೇನ ಜೀವೇನಾತ್ಮನಾನುಪ್ರವಿಶ್ಯ ನಾಮರೂಪೇ ವ್ಯಾಕರವಾಣಿ ನಾಮರೂಪೇ ವ್ಯಾಕರೋತ್' ಮೂರುಬಗೆಯ ದೇವತೆಗಳು ಅನಿರುದ್ಧರೂಪಿಯಾದ ಪರಮಾತ್ಮನಿಂದ ಪ್ರವೇಶಿಸಲ್ಪಟ್ಟವು. ಅನಂತರ ಅವುಗಳ ನಾಮ ಹಾಗೂ ರೂಪಗಳ ಸೃಷ್ಟಿಯಾಯಿತು. ಹೀಗೆ ಶ್ರುತಿಯಲ್ಲಿ ಈಶ್ವರನ ಪ್ರವೇಶದ ಅನಂತರ ನಾಮ ಹಾಗೂ ರೂಪಗಳ ಸೃಷ್ಟಿಯನ್ನು ಹೇಳಲಾಗಿದೆ. ಆದ್ದರಿಂದ ಸಕಲಶಬ್ದಗಳು ಆಯಾ ಪದಾರ್ಥಗಳ ವಿಶಿಷ್ಟನಾದ ಈಶ್ವರನನ್ನೇ ಪ್ರತಿಪಾದನೆ ಮಾಡುತ್ತವೆ ಎಂಬ ವಾದವನ್ನು ನಿರಾಕರಿಸಿದಂತಾಯಿತು.

ಏಕೆಂದರೆ ವಿಶೇಷಣದಲ್ಲಷ್ಟೇ ಪ್ರಯೋಗವಿರುತ್ತದೆಂದು ಈಗಾಗಲೇ ನಾವು ಹೇಳಿದ್ದೇವೆ. ಜಡವಾಗಿದೆ, ಕೃಶವಾಗಿದೆ ಇತ್ಯಾದಿ ಶಬ್ದಗಳು ವಿಶೇಷಣವಾದ ಶರೀರದಲ್ಲಷ್ಟೇ ಪ್ರಯೋಗವಿರುತ್ತದೆ. ಅಷ್ಟೇ ಅಲ್ಲದೇ ಇದೇ ಶ್ರುತಿಯಲ್ಲಿಯೂ ದೇವತಾ ಪದವು ವಿಶೇಷಣದಲ್ಲಿ ಪ್ರಯೋಗ ಮಾಡಿರುವುದು ಕಂಡಿದೆ.

ಮತ್ತು 'ಜೀವೇನಾತ್ಮನಾ' ಎಂಬುದಾಗಿ ಶ್ರುತಿಯು ಜೀವಶಬ್ದವನ್ನು ಪ್ರಯೋಗಿಸಿದೆ. ನಿಮ್ಮ ಮತದಲ್ಲಿ ಜೀವಶಬ್ದವು ಜೀವಶರೀರಕನಾದ ಬ್ರಹ್ಮನನ್ನೇ ಪ್ರತಿಪಾದಿಸಬೇಕು. ಆದ್ದರಿಂದ ಜೀವಶಬ್ದದಿಂದ ಜೀವನೇ ಶರೀರವಾಗಿವುಳ್ಳ ಪರಮಾತ್ಮನ ಅನುಪ್ರವೇಶವನ್ನು ನೀವು ಹೇಳಬೇಕು. ಹೊರತು, ಘಟಾದಿಗಳಲ್ಲಿ ಅನುಪ್ರವಿಷ್ಟನಾದ ಪರಮಾತ್ಮನು ಪ್ರತಿಪಾದ್ಯನಾಗುತ್ತಾನೆಂದು ಹೇಳಲು ಸಾಧ್ಯವಾಗುವುದಿಲ್ಲ.

ಅಷ್ಟೇ ಅಲ್ಲದೇ ಜೀವಶರೀರಕನಾದ ಆತ್ಮನಿಗೆ ದೇವತಾದಿಗಳಲ್ಲಿ ಅನುಪ್ರವೇಶವು ಹೇಗೆ ತಾನೇ ಕೂಡುತ್ತದೆ? ಮತ್ತು ಅನುಪ್ರವೇಶದ ಅನಂತರ ನಾಮಕರಣ ಮಾಡಿರುವುದರಿಂದ ಅನುಪ್ರವಿಷ್ಟನಿಗೆ ಆಯಾ ಶಬ್ದಗಳ ಪ್ರತಿಪಾದ್ಯತ್ವ ಬರುವುದಾದರೆ, ಸಂಕಲ್ಪವನ್ನು ಮಾಡಿ ಸೃಷ್ಟಿ ಮಾಡಿರುವುದರಿಂದ ಸಂಕಲ್ಪಕ್ಕಾಗಲೀ, ಸಂಕಲ್ಪ ಮಾಡಿರುವ ವ್ಯಕ್ತಿಯಾಗಲೀ, ಸೃಜ್ಯಕೋಟಿಯಲ್ಲಿ ಸೇರಬೇಕಾಗುತ್ತದೆ. (ಒಂದು ಮನೆಗೆ 'ವೆಂಕಟಾದ್ರಿ' ಎಂದು ಹೆಸರನ್ನಿಟ್ಟು ಮನೆಯ ಒಳಗಡೆ

ಪ್ರವೇಶಿಸಿದಾಗ, ಮನೆಯ ಒಳಗಡೆಯಿರುವ ವ್ಯಕ್ತಿಗೆ 'ವೆಂಕಟಾದ್ರಿ' ಎಂಬ ಶಬ್ದವಾಚ್ಯತ್ವವು ಬರುವುದಿಲ್ಲವೆಂದು ಲೋಕದಲ್ಲಿ ಕಂಡಿದೆ.)

ಅಷ್ಟೇ ಅಲ್ಲದೇ ಹಿಂದಿನ ವಾಕ್ಯದಲ್ಲಿ ಪರಮಾತ್ಮನು ಅನುಪ್ರವೇಶ ಮಾಡುವುದರ ಮೊದಲೇ 'ತತ್ತೇಜೋ೭ಸೃಜತ ತದಪೋ೭ಸೃಜತ ತಾ ಅನ್ನಮಸೃಜಂತ' ಇತ್ಯಾದಿಯಾಗಿ 'ತೇಜ', 'ಅಪ್', 'ಅನ್ನ' ಮೊದಲಾದ ನಾಮಗಳ ಸಂಬಂಧವನ್ನು ಹೇಳಲಾಗಿದೆ.

ಆದ್ದರಿಂದ ಶ್ರುತಿಯಲ್ಲಿ ಛಾಂದೋಗ್ಯಭಾಷ್ಯ ಟೀಕೆಯಲ್ಲಿ ಹೇಳಿದ ಪ್ರಕಾರ 'ತೇಜಸ್ಸು', 'ಅಪು', 'ಅನ್ನ' ಮೊದಲಾದವುಗಳ ಅನುಪ್ರವೇಶದ ಅನಂತರ ಉಳಿದ ನಾಮ ಹಾಗೂ ರೂಪಗಳ ಶಕ್ತಿಯನ್ನು ಮಾಡಿದನು ಎಂಬರ್ಥವನ್ನು ವಿವಕ್ಷಿಸಬೇಕು.

ಇಲ್ಲಿಗೆ ಏತೇನಾಧಿಕರಣದಲ್ಲಿ ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ ಇವುಗಳ ಅನುವಾದವು, ಮತ್ತು ತಂತ್ರದೀಪಿಕೆ ಹಾಗೂ ಮತತ್ರಯ ವಿಮರ್ಶೆಯು ಸಮಾಪ್ತವಾಯಿತು

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥

ಸ್ಮೃತ್ಯಧಿಕರಣ

ಬ್ರಹ್ಮಸೂತ್ರ, ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ತ್ವಪ್ರದೀಪ, ತತ್ತ್ವಪ್ರಕಾಶಿಕಾ, ಭಾವದೀಪ

ವಿಶೇಷವಿಚಾರದೊಂದಿಗೆ ಕನ್ನಡಭಾಷೆಯಲ್ಲಿ ಅನುವಾದ

ಮತ್ತು

ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆ

॥ ಹರಿಃ ಓಂ ॥

॥ ಶ್ರೀವೇದವ್ಯಾಸಾಯ ನಮಃ ॥

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಗುರುಭ್ಯೋ ನಮಃ ॥

॥ ಶ್ರೀಮದ್ರಾಘವೇಂದ್ರತೀರ್ಥಗುರುಭ್ಯೋ ನಮಃ ॥

॥ ಶ್ರೀಗುರುಭ್ಯೋ ನಮಃ ॥

ಎರಡನೆಯ ಅಧ್ಯಾಯ ಪ್ರಥಮಪಾದ

ಸ್ಮೃತ್ಯಧಿಕರಣ

ಬ್ರಹ್ಮಸೂತ್ರ

'ಸ್ಮೃತ್ಯನವಕಾಶದೋಷಪ್ರಸಂಗಃ' ಇತ್ಯಾದಿ ಸೂತ್ರದ ವ್ಯಾಖ್ಯಾನ

ಬ್ರಹ್ಮಸೂತ್ರಮ್ – ಸ್ಮೃತ್ಯನವಕಾಶದೋಷಪ್ರಸಙ್ಗ ಇತಿ ಚೇನ್ನಾನ್ಯಸ್ಮೃತ್ಯನವಕಾಶದೋಷ-ಪ್ರಸಙ್ಗಾತ್ ।।

ಸೂತ್ರಾರ್ಥ - ರುದ್ರ, ಕಪಿಲ ಮೊದಲಾದವರು ಸರ್ವಜ್ಞರಾಗಿದ್ದಾರೆ ಮತ್ತು ಆಪ್ತರಾಗಿದ್ದಾರೆ. ಇವರಿಂದ ರಚಿತವಾದ್ದರಿಂದ ಶೈವಾದಿ ಸ್ಮೃತಿಗಳು ಪ್ರಮಾಣವಾಗಿವೆ ಮತ್ತು ನಿರವಕಾಶವಾಗಿವೆ. ಇವುಗಳಿಗೆ ವಿರುದ್ಧವಾದ ವಿಷ್ಣುಕರ್ತೃತ್ವವನ್ನು ಸಮರ್ಥಿಸುವ ವಿರೋಧವು ಪ್ರಾಪ್ತವಾಗುತ್ತದೆ. ವೇದಗಳಿಗೆ ಅಪ್ರಾಮಾಣ್ಯದೋಷವು ಬರುತ್ತದೆ. ಅಂಥ ವೇದಗಳಿಂದ ವಿಷ್ಣುವಿಗೆ ಜಗತ್‌ಕರ್ತೃತ್ವವು ಸಿದ್ಧವಾಗುವುದಿಲ್ಲ.

ಪಾಶುಪತಾದಿಸ್ಮೃತಿಗಳಿಗಿಂತ ಭಿನ್ನವಾದ ಪಂಚರಾತ್ರಾದಿಸ್ಮೃತಿಗಳು ಮಹಾವಿಷ್ಣುವಿನಿಂದಲೇ ರಚಿತವಾಗಿವೆ. ಮತ್ತು ಶ್ರುತಿಸಂವಾದಿಗಳಾಗಿವೆ. ರುದ್ರಾದಿಗಳಿಗಿಂತಲೂ ಸರ್ವಜ್ಞತಮನಾದ ವಿಷ್ಣುವಿನಿಂದ ಪ್ರಣೀತವಾದ್ದರಿಂದ ಪಾಶುಪತಾದಿಸ್ಮೃತಿಗಳಿಗಿಂತಲೂ ಅತ್ಯಂತ ಬಲಿಷ್ಠವಾಗಿವೆ. ಇಂಥ ಪಂಚರಾತ್ರಾದಿಸ್ಮೃತಿಗಳಿಂದ ಪಾಶುಪತಾದಿಸ್ಮೃತಿಗಳಿಗೆ ವಿರೋಧ ಬರುವುದರಿಂದ

ಅಪ್ರಾಮಾಣ್ಯವೆಂಬ ದೋಷವು ಪ್ರಾಪ್ತವಾಗುತ್ತದೆ. ಆದರಿಂದ ರುದ್ರಾದಿಗಳಿಗೆ ಜಗತ್‌ಕರ್ತೃತ್ವವೂ ಕೂಡ ಸಿದ್ಧವಾಗುವುದಿಲ್ಲ. ವಿಷ್ಣುವೇ ಜಗತ್‌ಕರ್ತೃವಾಗಿದ್ದಾನೆಂದು ಸಿದ್ಧವಾಗುತ್ತದೆ.

ಅರ್ಥ -- ಯಾವ ಕಾರಣದಿಂದ, ಸ್ಮೃತ್ಯನವಕಾಶದೋಷ ಪ್ರಸಂಗಃ, ಸ್ಮೃತಿ = ಪಾಶುಪತಾದಿ ಸ್ಮೃತಿಗಳಿಗೆ, ಅನವಕಾಶ = ಶ್ರುತಿಗಳು ವಿಷ್ಣುವಿನ ಜಗತ್‌ಕರ್ತೃತ್ವವಿಷಯದಲ್ಲಿ ಪ್ರಮಾಣವಾಗುವುದಾದರೆ ಅವುಗಳ ವಿರೋಧವು ಪಾಶುಪತಾದಿಸ್ಮೃತಿಗಳಿಗೆ ಬರುವುದರಿಂದ ದೋಷಪ್ರಸಂಗಃ = ಅಪ್ರಾಮಾಣ್ಯವೆಂಬ ದೋಷವು ಪ್ರಾಪ್ತವಾಗುತ್ತದೆ. ಆದ್ದರಿಂದ ಶ್ರುತಿಗಳಿಗೆ ವಿಷ್ಣುವಿನ ಜಗತ್‌ಕಾರಣತ್ವವಿಷಯದಲ್ಲಿ ತಾತ್ಪರ್ಯವನ್ನು ಹೇಳಬಾರದು. ಹೊರತಾಗಿ, ಶಿವಾದಿಗಳಲ್ಲಿ ಜಗತ್‌ಕರ್ತೃತ್ವವಿಷಯದಲ್ಲಿಯೇ ತಾತ್ಪರ್ಯವನ್ನು ಹೇಳಬೇಕು. ಇತಿ ಚೇನ್ನ = ಇದು ತಪ್ಪು. ಅನ್ಯಸ್ಮೃತ್ಯನವಕಾಶದೋಷಪ್ರಸಂಗಾತ್, ಅನ್ಯ ಸ್ಮೃತಿ = ಪಾಶುಪತಾದಿಗಳಿಗಿಂತ ಭಿನ್ನವಾದ ಶ್ರುತಿಸಂವಾದವಿರುವ ರುದ್ರಾದಿಗಳಿಗಿಂತಲೂ ಸರ್ವಜ್ಞತಮವಾದ ಮಹಾವಿಷ್ಣುವಿನಿಂದ ಪ್ರಣೀತವಾದ ಪಂಚರಾತ್ರಾದಿಸ್ಮೃತಿಗಳು, ಅನವಕಾಶ = ರುದ್ರಾದಿಗಳ ಜಗತ್‌ಕರ್ತೃತ್ವವಿಷಯದಲ್ಲಿ ಪಂಚರಾತ್ರಾದಿಸ್ಮೃತಿಗಳಿಗೆ ತಾತ್ಪರ್ಯವಿರುವುದಿಲ್ಲ. ಆದ್ದರಿಂದ ಪಂಚರಾತ್ರಾದಿ ಸ್ಮೃತಿಗಳಿಗೆ ವಿರುದ್ಧವಾದ, ಶೈವಾದಿಸ್ಮೃತಿಗಳಿಗೆ ದೋಷಪ್ರಸಂಗಾತ್ = ಅಪ್ರಾಮಾಣ್ಯವೆಂಬ ದೋಷದ ಅತ್ಯಂತವಾದ ಸಂಬಂಧವಿರುವುದರಿಂದ ಪಾಶುಪತಾದಿಸ್ಮೃತಿಗಳ ವಿರೋಧವು ಅಕಿಂಚಿತ್ಕರವಾಗಿದೆ.

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ವಿರಚಿತವಾದ

ಬ್ರಹ್ಮಸೂತ್ರಭಾಷ್ಯ

ಪ್ರಥಮಾಧ್ಯಾಯದ ಪ್ರಮೇಯದಲ್ಲಿ ವಿರೋಧ ಪರಿಹಾರ

ब्रह्मसूत्रभाष्यम् – ।। उक्तेऽर्थेऽविरोधं दर्शयत्यनेनाध्यायेन । प्रथमपादे युक्त्यविरोधम् । प्रथमतः स्मृत्यविरोधं दर्शयति -

ಅನುವಾದ - ಪ್ರಥಮಾಧ್ಯಾಯದಲ್ಲಿ ಜಗತ್ಕಾರಣನಾದ ವಿಷ್ಣುವೇ ಸಕಲಶಾಸ್ತ್ರಪ್ರತಿಪಾದ್ಯನೆಂದು ನಿರ್ಣಯಿಸಲಾಯಿತು. ಈ ವಿಷಯದಲ್ಲಿ ಆಪಾತತಃ ತೋರುವ ವಿರೋಧಗಳನ್ನು ಪರಿಹರಿಸಲು ಎರಡನೆಯ ಅಧ್ಯಾಯವು ಹೊರಡುತ್ತಿದೆ. ಪ್ರಥಮಪಾದದಲ್ಲಿ ಯುಕ್ತಿಗಳ ವಿರೋಧವನ್ನು ಪರಿಹರಿಸಿದ್ದಾರೆ. ಅದರಲ್ಲಿಯೂ ಮೊದಲನೆಯ ಅಧಿಕರಣದಲ್ಲಿ ಯುಕ್ತಿಗಳ ವಿರೋಧವನ್ನು ಪರಿಹರಿಸುತ್ತಿದ್ದಾರೆ.

ಪ್ರತಿಪದಾರ್ಥ -- ಸಮನ್ವಯಾಧ್ಯಾಯದಿಂದ ಅವಿರೋಧಾಧ್ಯಾಯವು ಸಂಗತವಾಗಿದೆ ಎಂದು ತಿಳಿಸಲು ಅವಿರೋಧಾಧ್ಯಾಯದ ಸಮಗ್ರ ತಾತ್ಪರ್ಯವನ್ನು ತೋರಿಸುತ್ತಿದ್ದಾರೆ - ಉಕ್ತೇऽರ್ಥೇ = ಜಗತ್ಕಾರಣನಾದ ಮಹಾವಿಷ್ಣುವಿನಲ್ಲಿ ಸಕಲ ಶಾಸ್ತ್ರಗಳು ಸಮನ್ವಯವಾಗುತ್ತವೆ ಎಂಬ ಹಿಂದಿನ ಅಧ್ಯಾಯದಲ್ಲಿ ನಿರೂಪಿತವಾದ ವಿಷಯದಲ್ಲಿ, ಅವಿರೋಧಂ = ಯುಕ್ತಿ, ಸಮಯ, ಶ್ರುತಿ , ಯುಕ್ತಿ ಸಹಿತ ಶ್ರುತಿ ಇವುಗಳ ಅವಿರೋಧವನ್ನು, ಅನೇನ = ಎರಡನೆಯ, ಅಧ್ಯಾಯೇನ = ಅವಿರೋಧಾಧ್ಯಾಯದಿಂದ, ದರ್ಶಯತಿ = ಸೂತ್ರಕಾರರು ತೋರಿಸುತ್ತಿದ್ದಾರೆ. ಪ್ರಥಮಪಾದೇ = ಮೊದಲನೆಯ ಪಾದದಲ್ಲಿ, ಯುಕ್ತ್ಯವಿರೋಧಂ = ಯುಕ್ತಿಯ ವಿರೋಧ ಪರಿಹಾರವನ್ನು ಮಾಡಿದ್ದಾರೆ. ಪ್ರಥಮತಃ = ಮೊದಲನೆಯ ಅಧಿಕರಣದಲ್ಲಿ, ಸ್ಮೃತ್ಯವಿರೋಧಂ = ಸ್ಮೃತಿಯ ವಿರೋಧಪರಿಹಾರವನ್ನು, ದರ್ಶಯತಿ = ತೋರಿಸುತ್ತಿದ್ದಾರೆ.

ಪ್ರಥಮಾಧ್ಯಾಯದ ಪ್ರಮೇಯಕ್ಕೆ ಪಾಶುಪತಾದಿ ಸ್ಮೃತಿಗಳ ವಿರೋಧ

ब्रह्मसूत्रभाष्यम्—स्मृत्यनवकाशदोषप्रसङ्गइतिचेन्नान्यस्मृत्यनवकाशदोषप्रसङ्गात् ॥१॥

सर्वज्ञा हि रुद्रादयः । अतस्तेषां वचनविरोधेऽप्रामाण्यमेव स्यादिति चेत् — न

ಅನುವಾದ - ರುದ್ರ, ಕಪಿಲ ಮೊದಲಾದವರು ಸರ್ವಜ್ಞರಾಗಿದ್ದಾರೆ. ಅಂಥ ಸರ್ವಜ್ಞರಿಂದ ರಚಿತವಾದ ಪಾಶುಪತಾದಿ ಸ್ಮೃತಿಗಳ ವಿರೋಧವು ಶ್ರುತಿಗಳಿಗೆ ಪ್ರಾಪ್ತವಾಗುತ್ತದೆ. ಆದ್ದರಿಂದ ವೇದಗಳಿಗೆ ಅಪ್ರಾಮಾಣ್ಯವನ್ನೇ ಹೇಳಬೇಕು.

ಪ್ರತಿಪದಾರ್ಥ -- ಪೂರ್ವಪಕ್ಷಾದಿಗಳನ್ನು ತೋರಿಸಲು ಸೂತ್ರವನ್ನು ಉಪನ್ಯಾಸ ಮಾಡುತ್ತಿದ್ದಾರೆ 'ಸ್ಮೃತಿ' ಇತ್ಯಾದಿಯಾಗಿ. ರುದ್ರಾದ್ಯಃ = ಶಿವ, ಕಪಿಲ ಮೊದಲಾದವರು ಸರ್ವಜ್ಞಾಃ = ಸರ್ವಜ್ಞರು, ಅತಃ = ಆದ್ದರಿಂದ, ತೇಷಾಂ = ಆ ರುದ್ರಾದಿಗಳ, ವಚನವಿರೋಧೇ = ಪಾಶುಪತಾದಿಸ್ಮೃತಿವಚನಗಳ ವಿರೋಧವು ಪ್ರಾಪ್ತವಾದರೆ,

ಅಪ್ರಾಮಾಣ್ಯಮೇವ = ವಿಷ್ಣುಸರ್ವೋತ್ತಮತ್ವವನ್ನು ಸಮರ್ಥಿಸುವ ಶ್ರುತಿಗಳಿಗೆ ಅಪ್ರಾಮಾಣ್ಯವೇ, ಸ್ಯಾತ್ = ಉಂಟಾಗುತ್ತದೆ. ಇತಿ ಚೇತ್ = ಹೀಗೆ ಆಕ್ಷೇಪ ಮಾಡಿದರೆ.

ಪ್ರಥಮಾಧ್ಯಾಯದ ಪ್ರಮೇಯಕ್ಕೆ ಪಂಚರಾತ್ರಾದಿ ಸ್ಮೃತಿಗಳ ಬೆಂಬಲ

ब्रह्मसूत्रभाष्यम्—अन्यस्मृतीनांविष्ण्वादिभिर्नितरांसर्वज्ञैरेवकृतत्वाच्छ्रुतेराधिक्यं च सिद्ध्यति ॥१॥

ಅನುವಾದ - ಇದು ಸರಿಯಲ್ಲ. ಏಕೆಂದರೆ ಪಂಚರಾತ್ರಾದಿಸ್ಮೃತಿಗಳು ರುದ್ರಾದಿಗಳಿಗಿಂತಲೂ ಸರ್ವಜ್ಞತಮನಾದ ಮಹಾವಿಷ್ಣುವಿನಿಂದ ರಚಿತವಾಗಿವೆ. ಅಂಥ ಪಂಚರಾತ್ರಾದಿ ಸ್ಮೃತಿಗಳಿಗೆ ಶ್ರುತಿಸಂವಾದವಿರುವುದರಿಂದ ಹೆಚ್ಚಿನ ಪ್ರಾಮಾಣ್ಯವಿದೆ.

ಪ್ರತಿಪದಾರ್ಥ -- ಸಿದ್ಧಾಂತಾಂಶವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ - ಅನ್ಯಸ್ಮೃತೀನಾಂ = ಪಾಶುಪತಾದಿ ಸ್ಮೃತಿಗಳಿಗಿಂತ ಭಿನ್ನವಾದ ಪಂಚರಾತ್ರಾದಿಸ್ಮೃತಿಗಳಿಗೆ, ನಿತರಾಂ ಸರ್ವಜ್ಞೈರೇವ = ರುದ್ರಾದಿಗಳಿಗಿಂತಲೂ ಸರ್ವಜ್ಞತಮನಾದ, ವಿಷ್ಣ್ವಾದಿಭಿಃ = ವಿಷ್ಣು ಮೊದಲಾದವರಿಂದ, ಕೃತತ್ವಾತ್ = ರಚಿತವಾಗಿರುವುದರಿಂದ ಇಂಥ ಪಂಚರಾತ್ರಾದಿಸ್ಮೃತಿಗಳ ಸಂವಾದವಿರುವ, ಶ್ರುತೇಃ = ಶ್ರುತಿಗಳಿಗೆ, ಆಧಿಕ್ಯಂ ಚ = ಪಾಶುಪತಾದಿಸ್ಮೃತಿಗಳಿಗಿಂತಲೂ ಪ್ರಾಬಲ್ಯವು, ಸಿದ್ಧ್ಯತಿ = ಸಿದ್ಧವಾಗುತ್ತದೆ.

ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ

ಸತ್ತರ್ಕದೀಪಾವಳಿ

ಸ್ಮೃತ್ಯಧಿಕರಣಕ್ಕೆ ಸಂಗತಿ

सत्तर्कदीपावलिः – सर्वज्ञाचार्येभ्यो नमः । जगत्कारणे नारायणे निखिलवेदसमन्वयो गताध्यायेऽहितः । तत्र विप्रतिपद्यमानवादिभिरुद्भावितान कविरोधोऽस्मिन्नध्याये परिहियते । तत्र प्रथमपादे विरोधेषु युक्तिविरोधः परिहियते । पशुपत्यादिप्रत्यक्षमूलत्वेन च पाशुपतादिस्मृतेः प्रबलत्वात् तद् विरोधोऽत्र प्रथमाधिकरणे परिहियते ।

'सर्वज्ञाचार्येभ्यो नमः' ಸರ್ವಜ್ಞಾಚಾರ್ಯರಿಗೆ ನಮಸ್ಕಾರಗಳು. ಜಗತ್ಕಾರಣನಾದ ನಾರಾಯಣನಲ್ಲಿ ಸಕಲವೇದಗಳ ಸಮನ್ವಯವನ್ನು ಹಿಂದಿನ ಅಧ್ಯಾಯದಲ್ಲಿ ಮಾಡಲಾಯಿತು. ಈ ವಿಷಯದಲ್ಲಿ ಯಾವ ವಾದಿಗಳು ವಿಪ್ರತಿಪತ್ತಿಯನ್ನು ತೋರಿಸುತ್ತಾರೋ, ಅವರು ಹೇಳುವ ಅನೇಕ ಬಗೆಯ ವಿರೋಧಗಳನ್ನು ಈ ಅಧ್ಯಾಯದಲ್ಲಿ ಪರಿಹಾರ ಮಾಡಲಾಗುತ್ತಿದೆ. ಮೊದಲ ಪಾದದಲ್ಲಿ ಅನೇಕ ಬಗೆಯ ವಿರೋಧಗಳ ನಡುವೆ ಯುಕ್ತಿವಿರೋಧವನ್ನು ಪರಿಹರಿಸಲಾಗಿದೆ. ರುದ್ರಾದಿಗಳ ಪ್ರತ್ಯಕ್ಷಮೂಲಕವಾಗಿರುವುದರಿಂದ ಪಾಶುಪತಾದಿಸ್ಮೃತಿಯು ಅತ್ಯಂತ ಪ್ರಬಲವಾಗಿದೆ. ಈ ಕಾರಣದಿಂದ ಮೊದಲು ಈ ವಿರೋಧವನ್ನೇ ಪ್ರಥಮಾಧಿಕರಣದಲ್ಲಿ ಪರಿಹರಿಸಲಾಗಿದೆ.

ಶ್ರುತಿಮೂಲಕವಾದ ಪಂಚರಾತ್ರಾದಿಸ್ಮೃತಿಗಳೇ ಪ್ರಮಾಣ

सत्तर्कदीपावलिः – तथा हि पाशुपतादिस्मृतिविरोधान्न विष्णुः जगत्कर्ता इत्युच्यते । तर्हि पञ्चरात्रादिस्मृतिविरोधाद् रुद्रोपि जगत्कारणं न स्यात् । न चैवं सति अनिर्णय इति वाच्यम् । श्रुतिमूलत्वेन पञ्चरात्रादिस्मृतेरेव प्रामाण्यमिति निर्णयोपपत्तेः । श्रुतीनां च जगत्कर्तरि विष्णौ समन्वयस्याभिहितत्वात् । तथाहि – 'उक्तेऽर्थे' इत्यादिना ।

ಪಾಶುಪತಾದಿಸ್ಮೃತಿಗಳ ವಿರೋಧದಿಂದ ವಿಷ್ಣು ಜಗತ್‌ಕರ್ತೃ ಆಗಲಾರ. ಹೀಗೆ ಹೇಳಿದರೆ ಪಂಚರಾತ್ರಾದಿಸ್ಮೃತಿವಿರೋಧವಿರುವುದರಿಂದ ರುದ್ರನೂ ಕೂಡ ಜಗತ್‌ಕಾರಣ ಆಗದೇ ಇರಬೇಕಾದೀತು. ಹಾಗಾದರೆ ನಿರ್ಣಯವೇ ಆಗುವುದಿಲ್ಲವಲ್ಲ ಎಂದು ಪ್ರಶ್ನಿಸಬಾರದು. ಶ್ರುತಿಮೂಲಕವಾಗಿರುವುದರಿಂದ ಪಂಚರಾತ್ರಾದಿಸ್ಮೃತಿಗಳೇ ಪ್ರಮಾಣವಾಗುತ್ತದೆ ಎಂದು ನಿರ್ಣಯ ಮಾಡಲು ಸಾಧ್ಯವಿದೆ. ಜಗತ್‌ಕರ್ತೃವಾದ ವಿಷ್ಣುವಿನ ವಿಷಯದಲ್ಲಿ ಶ್ರುತಿಗಳ ಸಮನ್ವಯವನ್ನು ಈಗಾಗಲೇ ಮಾಡಿದ್ದಾಗಿದೆ. ಈ ಎಲ್ಲ ವಿಷಯವನ್ನು ಭಾಷ್ಯದಲ್ಲಿ 'ಉಕ್ತೇऽರ್ಥೇ' ಇತ್ಯಾದಿಯಾಗಿ ನಿರೂಪಣೆ ಮಾಡುತ್ತಿದ್ದಾರೆ.

ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ

ತತ್ತ್ವಪ್ರದೀಪ

ಶಾಸ್ತ್ರಕ್ಕೆ ಪುಮರ್ಥಪರ್ಯವಸಾಯಿತ್ವಕೋಸ್ಕರ ಎರಡನೆಯ ಅಧ್ಯಾಯ

तत्वप्रदीपः – प्रथमाध्याये सर्वसृष्ट्यादिकर्तरि सर्वगुणपरिपूर्णे नारायणे सर्ववेदसमन्वय उक्तः । तत्र अविरोधं दर्शयति अनेनाध्यायेन । विदितेऽपि वेदार्थे विरोधस्फुरणे तत्वनिर्धारणानुपपत्तेः । अनिर्धारिते च निधिध्यासनायोगात् । अनाध्यातस्यच अनीक्षणीयत्वेनामोचकत्वात् । अतः 'यावन्न विरोधपरिहारः, तावन्न पुमर्थपर्यवसायित्वं शास्त्रस्य' इति तत्तद्विरोधमाशङ्क्य परिहरति । प्रथमपादे युक्त्यविरोधं दर्शयति । तदायत्तत्वात् सर्वविरोधाविरोधयोः ।

ಪ್ರಥಮಾಧ್ಯಾಯದಲ್ಲಿ ನಾರಾಯಣನು ಸಕಲ ಜಗಜ್ಜನ್ಮಾದಿಕಾರಣನಾಗಿದ್ದಾನೆ ಮತ್ತು ಸಕಲಗುಣಪರಿಪೂರ್ಣನಾಗಿದ್ದಾನೆ ಎಂಬುದನ್ನು ಸಮನ್ವಯ ಮಾಡುವುದಕ್ಕಾಗಿ, ಸಕಲ ವೇದಗಳ ಸಮನ್ವಯವನ್ನು ಸಾಧಿಸಿದ್ದಾಯಿತು. ಈ ವಿಷಯದಲ್ಲಿ ವಿರೋಧವನ್ನು ಪರಿಹಾರ ಮಾಡುವುದಕ್ಕಾಗಿ ಎರಡನೆಯ ಈ ಅಧ್ಯಾಯವು ಹೊರಟಿದೆ. ವಿರೋಧವನ್ನೇಕೆ ಪರಿಹರಿಸಬೇಕು? ಎಂಬುದರ ಬಗ್ಗೆ ಹೀಗೆ ತಿಳಿಯಬೇಕು. ಪರಮಾತ್ಮನು ಸಕಲವೇದ ಪ್ರತಿಪಾದ್ಯ

ಎಂಬುದಾಗಿ ತಿಳಿದರೂ ಕೂಡ ಅನೇಕ ವಿರೋಧಗಳು ಸ್ಫುರಣವಾಗುತ್ತವೆ. ಆಗ ತತ್ವನಿಶ್ಚಯವೇ ಉಂಟಾಗುವುದಿಲ್ಲ. ಯಾವ ಸ್ವರೂಪವು ನಿರ್ಧಾರ ಆಗಿರುವುದಿಲ್ಲವೋ, ಅದರ ವಿಷಯದಲ್ಲಿ ನಿಧಿಧ್ಯಾಸನವೂ ಕೂಡ ಯುಕ್ತವಾಗುವುದಿಲ್ಲ. ಯಾರು ನಿಧಿಧ್ಯಾಸನದಿಂದ ತಿಳಿಯಲ್ಪಟ್ಟಿಲ್ಲವೋ, (ಅಧ್ಯಯನದಿಂದ ತಿಳಿಯಲ್ಪಟ್ಟಿಲ್ಲವೋ) ಅವನು ಜ್ಞಾನಕ್ಕೆ ವಿಷಯನೂ ಕೂಡ ಆಗಲಾರ. ಆದ್ದರಿಂದಲೇ ಮೋಚಕನೂ ಕೂಡ ಆಗಲಾರ. ಆದ್ದರಿಂದ ಎಲ್ಲಿಯತನಕ ಪ್ರಥಮಾಧ್ಯಾಯದ ಪ್ರಮೇಯದಲ್ಲಿ ವಿರೋಧವನ್ನು ಪರಿಹಾರ ಮಾಡುವುದಿಲ್ಲವೋ, ಅಲ್ಲಿಯತನಕ ಶಾಸ್ತ್ರಕ್ಕೆ ಪುಮರ್ಥಪರ್ಯವಸಾಯಿತ್ವವು ಕೂಡುವುದಿಲ್ಲ. ಈ ಅಭಿಪ್ರಾಯದಿಂದ ಪ್ರಥಮಾಧ್ಯಾಯದ ಪ್ರಮೇಯದಲ್ಲಿ ಅನೇಕ ವಿರೋಧಗಳನ್ನು ಆಶಂಕಿಸಿ ಪರಿಹರಿಸಲು ಈ ಅಧ್ಯಾಯ ಹೊರಟಿದೆ ಎಂಬುದಾಗಿ ಭಾಷ್ಯದಲ್ಲಿ 'ಪ್ರಥಮಪಾದೇ ಯುಕ್ತ್ಯವಿರೋಧಂ ದರ್ಶಯತಿ' ಎಂಬುದಾಗಿ ಹೇಳುತ್ತಿದ್ದಾರೆ. ಸಕಲ ವಿರೋಧಗಳು ಇಲ್ಲವೆಂದು ತಿಳಿಯಬೇಕೆಂದರೆ ಮೊದಲು ಯುಕ್ತಿಯ ವಿರೋಧವಿಲ್ಲವೆಂಬುದನ್ನು ತಿಳಿಯಬೇಕು. ಆದ್ದರಿಂದ ಮೊದಲು ಯುಕ್ತಿವಿರೋಧವನ್ನೇ ಪರಿಹರಿಸಿದ್ದಾರೆ.

ವಿವರಣೆ – ಪ್ರಥಮಾಧ್ಯಾಯದಲ್ಲಿ ಸಕಲ ವೇದಗಳ ಸಮನ್ವಯವನ್ನು ಪರಮಾತ್ಮನಲ್ಲಿ ಮಾಡುವ ಮೂಲಕ ವಿಷ್ಣುವೇ ಜಗತ್ತಿಗೆ ಕಾರಣನಾಗಿದ್ದಾನೆ ಮತ್ತು ಗುಣಪರಿಪೂರ್ಣನಾಗಿದ್ದಾನೆ ಎಂದು ಸಮರ್ಥಿಸಿದ್ದಾಯಿತು. ಆದರೆ ಈ ವಿಷಯದಲ್ಲಿ ಬರುವ ವಿರೋಧವನ್ನು ಪರಿಹಾರ ಮಾಡದೇ ಇದ್ದರೆ ಪ್ರಥಮಾಧ್ಯಾಯದ ಪ್ರಮೇಯವು ಸಿದ್ಧವೇ ಆಗುವುದಿಲ್ಲ. ಅದಕ್ಕಾಗಿ ಎರಡನೆಯ ಅಧ್ಯಾಯವು ಪ್ರವೃತ್ತವಾಗಿದೆ. ಸಕಲ ವೇದಪ್ರತಿಪಾದ್ಯನಾದ್ದರಿಂದ ಪರಮಾತ್ಮನನ್ನು ಗುಣಪರಿಪೂರ್ಣನಾಗಿದ್ದಾನೆ ಎಂಬುದಾಗಿ ನಾವು ಉಪಾಸನೆ ಮಾಡಬೇಕು. ವಿರೋಧವು ಸ್ಫುರಣವಾದರೆ ತತ್ವನಿರ್ಧಾರವೇ ಆಗುವುದಿಲ್ಲ. ಆಗ ಧ್ಯಾನವೂ ಕೂಡ ಸಾಧ್ಯವಾಗುವುದಿಲ್ಲ. ಮನಸ್ಸಿನಲ್ಲಿ ಸಂಶಯವು ಉಂಟಾಗಿ ಆ ವಸ್ತುವಿನ ಬಗ್ಗೆ ಯಥಾರ್ಥಜ್ಞಾನದಿಂದ ಧ್ಯಾನ ಮಾಡುವುದೇ ಕಷ್ಟವಾಗುತ್ತದೆ. ಅದಕ್ಕಾಗಿ ಎರಡನೆಯ ಈ ಅಧ್ಯಾಯವು ಪ್ರವೃತ್ತವಾಗಿದೆ.

ಪಾಶುಪತಾದಿಸ್ಮೃತಿಗಳು ವೇದಕ್ಕೆ ಸಮಾನವೆಂದು ಆಕ್ಷೇಪ

तत्वप्रदीपः – प्रथमतो रुद्रादिस्मृत्यविरोधम् । तासां श्रुतिमूलत्वेन सर्वज्ञवक्तृकत्वेन वाऽभिमतानां कापि दृष्टफलानां वेदसमत्वबुद्ध्या जगत्कारणे समन्वयधर्मित्वेन समाशङ्कनीयत्वात् । स्मृत्यनवकाशदोषप्रसङ्ग इति चेन्न,

अन्यस्मृत्यनवकाशदोषप्रसङ्गात् । सर्वज्ञा हि रुद्रकपिलकणादादयः । ते च जगत्कारणम् अन्यदन्यन्मन्यन्ते ।

ಮೊದಲು ರುದ್ರಾದಿಗಳಿಂದ ಪ್ರಣೀತವಾದ ಪಾಶುಪತಾದಿ ಶ್ರುತಿಗಳ ವಿರೋಧವನ್ನು ಪರಿಹರಿಸುತ್ತಿದ್ದಾರೆ. ಏಕೆಂದರೆ ಸ್ಮೃತಿಗಳು ಶ್ರುತಿಮೂಲಕವಾಗಿವೆ. ಅಥವಾ ಸರ್ವಜ್ಞನಿಂದ ಪ್ರಣೀತವಾಗಿವೆ ಎಂಬುದಾಗಿ ಅಭಿಮತವಾಗಿವೆ. ಕೆಲವೆಡೆ ಹೇಳಲ್ಪಟ್ಟ ಫಲಗಳು ದೊರಕುವುದೂ ಕೂಡ ಇವುಗಳಿಂದ ಕಂಡಿದೆ. ಆದ್ದರಿಂದ ವೇದಗಳಿಗೆ ಸಮಾನವಾಗಿವೆ. ಹೀಗೆ ಜಗತ್ಕಾರಣ ವಿಷಯದಲ್ಲಿ ಸಮನ್ವಯಧರ್ಮಿ ಸಮರ್ಪಕವಾಗಿವೆ. ಹೀಗೆ ಚೆನ್ನಾಗಿ ಆಶಂಕಿಸಲು ಅರ್ಹವಾಗಿವೆ. ಈ ಎಲ್ಲ ಕಾರಣಗಳಿಂದ ಬಲಿಷ್ಠವಾದ ಪಾಶುಪತಾದಿಶ್ರುತಿಗಳ ವಿರೋಧವನ್ನು ಪರಿಹರಿಸುವುದು ಅತ್ಯಾವಶ್ಯಕ. ಈ ದೃಷ್ಟಿಯಿಂದ ಸೂತ್ರಕಾರರು 'ಸ್ಮೃತ್ಯನವಕಾಶದೋಷಪ್ರಸಂಗ ಇತಿ ಚೇತ್ ಅನ್ಯಸ್ಮೃತ್ಯನವಕಾಶದೋಷಪ್ರಸಂಗಾತ್' ಎಂಬ ಸೂತ್ರವನ್ನು ಉಲ್ಲೇಖಿಸಿದ್ದಾರೆ.

ರುದ್ರ, ಕಪಿಲ, ಕಣಾದ ಮೊದಲಾದವರೆಲ್ಲರೂ ಕೂಡ ಸರ್ವಜ್ಞರಾಗಿದ್ದಾರೆ. ಆದರೆ ಪ್ರತಿಯೊಬ್ಬರೂ ಕೂಡ ಬೇರೆ ಬೇರೆ ವ್ಯಕ್ತಿಯನ್ನೇ ಜಗತ್ಕಾರಣನೆಂದು ಅಂಗೀಕರಿಸುತ್ತಿದ್ದಾರೆ.

ವಿವರಣೆ - ಪ್ರಥಮಪಾದವು ಯುಕ್ತಿವಿರೋಧದ ಪರಿಹಾರಕ್ಕೋಸ್ಕರ ಹೊರಟಿದೆ ಎಂದು ಭಾಷ್ಯದಲ್ಲಿ ಹೇಳಿದ್ದಾರೆ. ಹಾಗಾದರೆ ಮೊದಲ ಅಧಿಕರಣದಲ್ಲಿ ಸ್ಮೃತಿವಿರೋಧವನ್ನು ಪರಿಹರಿಸುವದು ಅಸಂಗತವಲ್ಲವೇ? ಎಂಬ ಪ್ರಶ್ನೆ ಸಹಜವಾಗಿ ಬರುತ್ತದೆ. ಇದಕ್ಕೆ ಕಾರಣವೇನೆಂದರೆ ಪಾಶುಪತಸ್ಮೃತಿಯು ಯುಕ್ತಿರೂಪವಾಗಿದೆ. ಆದ್ದರಿಂದ ಈ ಪಾದದಲ್ಲಿ ಇದು ಅಸಂಗತವಾಗುವುದಿಲ್ಲ ಎಂಬುದು ಒಂದು ಉತ್ತರ. ಅಥವಾ ಶೈವಾಗಮವು ಶೈವದರ್ಶನದ ಮೂಲವುಳ್ಳದ್ದಾಗಿದೆ. ಸಮಯರೂಪವೂ ಆಗಿದೆ. ಈ ಯುಕ್ತಿ ಹಾಗೂ ಸಮಯರೂಪವಾದ್ದರಿಂದ ಅತ್ಯಂತ ಬಲಿಷ್ಠವಾಗಿದೆ. ಅಷ್ಟೇ ಅಲ್ಲದೇ ಕೆಲವೆಡೆ ಶ್ರುತಿಸಂವಾದಿಯೂ ಆಗಿದೆ. ಹೀಗೆ ಶ್ರುತಿ ಮೂಲಕವಾಗಿರುವುದರಿಂದ ಸರ್ವಜ್ಞನಿಂದ ಪ್ರಣೀತವಾದ್ದರಿಂದ ದೃಷ್ಟಫಲಕವಾಗಿರುವುದರಿಂದ ವೇದಕ್ಕೆ ಸಮಾನವಾಗಿದೆ ಎಂಬ ಬುದ್ಧಿಯು ನಮಗೆ ಬರುತ್ತದೆ. ಈ ದೃಷ್ಟಿಯಿಂದ ಅತ್ಯಂತ ಬಲಿಷ್ಠವಾಗಿರುವ ಕಾರಣ ಪಾಶುಪತಸ್ಮೃತಿ ವಿರೋಧವನ್ನು ಪರಿಹರಿಸಲು ಈ ಸ್ಮೃತ್ಯಧಿಕರಣವು ಹೊರಟಿದೆ.

ಪಾಶುಪತಸ್ಮೃತಿಯು ರುದ್ರದೇವರಿಂದ ರಚಿತವಾಗಿದೆ. ಇದರಲ್ಲಿ ರುದ್ರನೇ ಜಗತ್ತಿಗೆ ಕಾರಣನೆಂದು ಹೇಳಲಾಗಿದೆ. ಕಪಿಲ ಋಷಿಯಿಂದ ಸಾಂಖ್ಯಸ್ಮೃತಿಯು ರಚನೆಗೊಂಡಿದೆ.

ಎಂಬುದಾಗಿ ತಿಳಿದರೂ ಕೂಡ ಅನೇಕ ವಿರೋಧಗಳು ಸ್ಫುರಣವಾಗುತ್ತವೆ. ಆಗ ತತ್ವನಿಶ್ಚಯವೇ ಉಂಟಾಗುವುದಿಲ್ಲ. ಯಾವ ಸ್ವರೂಪವು ನಿರ್ಧಾರ ಆಗಿರುವುದಿಲ್ಲವೋ, ಅದರ ವಿಷಯದಲ್ಲಿ ನಿಧಿಧ್ಯಾಸನವೂ ಕೂಡ ಯುಕ್ತವಾಗುವುದಿಲ್ಲ. ಯಾರು ನಿಧಿಧ್ಯಾಸನದಿಂದ ತಿಳಿಯಲ್ಪಟ್ಟಿಲ್ಲವೋ, (ಅಧ್ಯಯನದಿಂದ ತಿಳಿಯಲ್ಪಟ್ಟಿಲ್ಲವೋ) ಅವನು ಜ್ಞಾನಕ್ಕೆ ವಿಷಯನೂ ಕೂಡ ಆಗಲಾರ. ಆದ್ದರಿಂದಲೇ ಮೋಚಕನೂ ಕೂಡ ಆಗಲಾರ. ಆದ್ದರಿಂದ ಎಲ್ಲಿಯತನಕ ಪ್ರಥಮಾಧ್ಯಾಯದ ಪ್ರಮೇಯದಲ್ಲಿ ವಿರೋಧವನ್ನು ಪರಿಹಾರ ಮಾಡುವುದಿಲ್ಲವೋ, ಅಲ್ಲಿಯತನಕ ಶಾಸ್ತ್ರಕ್ಕೆ ಪುಮರ್ಥಪರ್ಯವಸಾಯಿತ್ವವು ಕೂಡುವುದಿಲ್ಲ. ಈ ಅಭಿಪ್ರಾಯದಿಂದ ಪ್ರಥಮಾಧ್ಯಾಯದ ಪ್ರಮೇಯದಲ್ಲಿ ಅನೇಕ ವಿರೋಧಗಳನ್ನು ಆಶಂಕಿಸಿ ಪರಿಹರಿಸಲು ಈ ಅಧ್ಯಾಯ ಹೊರಟಿದೆ ಎಂಬುದಾಗಿ ಭಾಷ್ಯದಲ್ಲಿ 'ಪ್ರಥಮಪಾದೇ ಯುಕ್ತ್ಯವಿರೋಧಂ ದರ್ಶಯತಿ' ಎಂಬುದಾಗಿ ಹೇಳುತ್ತಿದ್ದಾರೆ. ಸಕಲ ವಿರೋಧಗಳು ಇಲ್ಲವೆಂದು ತಿಳಿಯಬೇಕೆಂದರೆ ಮೊದಲು ಯುಕ್ತಿಯ ವಿರೋಧವಿಲ್ಲವೆಂಬುದನ್ನು ತಿಳಿಯಬೇಕು. ಆದ್ದರಿಂದ ಮೊದಲು ಯುಕ್ತಿವಿರೋಧವನ್ನೇ ಪರಿಹರಿಸಿದ್ದಾರೆ.

ವಿವರಣೆ - ಪ್ರಥಮಾಧ್ಯಾಯದಲ್ಲಿ ಸಕಲ ವೇದಗಳ ಸಮನ್ವಯವನ್ನು ಪರಮಾತ್ಮನಲ್ಲಿ ಮಾಡುವ ಮೂಲಕ ವಿಷ್ಣುವೇ ಜಗತ್ತಿಗೆ ಕಾರಣನಾಗಿದ್ದಾನೆ ಮತ್ತು ಗುಣಪರಿಪೂರ್ಣನಾಗಿದ್ದಾನೆ ಎಂದು ಸಮರ್ಥಿಸಿದ್ದಾಯಿತು. ಆದರೆ ಈ ವಿಷಯದಲ್ಲಿ ಬರುವ ವಿರೋಧವನ್ನು ಪರಿಹಾರ ಮಾಡದೇ ಇದ್ದರೆ ಪ್ರಥಮಾಧ್ಯಾಯದ ಪ್ರಮೇಯವು ಸಿದ್ಧವೇ ಆಗುವುದಿಲ್ಲ. ಅದಕ್ಕಾಗಿ ಎರಡನೆಯ ಅಧ್ಯಾಯವು ಪ್ರವೃತ್ತವಾಗಿದೆ. ಸಕಲ ವೇದಪ್ರತಿಪಾದ್ಯನಾದ್ದರಿಂದ ಪರಮಾತ್ಮನನ್ನು ಗುಣಪರಿಪೂರ್ಣನಾಗಿದ್ದಾನೆ ಎಂಬುದಾಗಿ ನಾವು ಉಪಾಸನೆ ಮಾಡಬೇಕು. ವಿರೋಧವು ಸ್ಫುರಣವಾದರೆ ತತ್ವನಿರ್ಧಾರವೇ ಆಗುವುದಿಲ್ಲ. ಆಗ ಧ್ಯಾನವೂ ಕೂಡ ಸಾಧ್ಯವಾಗುವುದಿಲ್ಲ. ಮನಸ್ಸಿನಲ್ಲಿ ಸಂಶಯವು ಉಂಟಾಗಿ ಆ ವಸ್ತುವಿನ ಬಗ್ಗೆ ಯಥಾರ್ಥಜ್ಞಾನದಿಂದ ಧ್ಯಾನ ಮಾಡುವುದೇ ಕಷ್ಟವಾಗುತ್ತದೆ. ಅದಕ್ಕಾಗಿ ಎರಡನೆಯ ಈ ಅಧ್ಯಾಯವು ಪ್ರವೃತ್ತವಾಗಿದೆ.

ಪಾಶುಪತಾದಿಸ್ಮೃತಿಗಳು ವೇದಕ್ಕೆ ಸಮಾನವೆಂದು ಆಕ್ಷೇಪ

तत्वप्रदीपः – प्रथमतो रुद्रादिस्मृत्यविरोधम् । तासां श्रुतिमूलत्वेन सर्वज्ञवक्तृकत्वेन वाऽभिमतानां कापि दृष्टफलानां वेदसमत्वबुद्ध्या जगत्कारणे समन्वयधर्मित्वेन समाशङ्कनीयत्वात् । स्मृत्यनवकाशदोषप्रसङ्ग इति चेन्न,

अन्यस्मृत्यनवकाशदोषप्रसङ्गात् । सर्वज्ञा हि रुद्रकपिलकणादादयः । ते च जगत्कारणम् अन्यदन्यन्मन्यन्ते ।

ಮೊದಲು ರುದ್ರಾದಿಗಳಿಂದ ಪ್ರಣೀತವಾದ ಪಾಶುಪತಾದಿ ಶ್ರುತಿಗಳ ವಿರೋಧವನ್ನು ಪರಿಹರಿಸುತ್ತಿದ್ದಾರೆ. ಏಕೆಂದರೆ ಸ್ಮೃತಿಗಳು ಶ್ರುತಿಮೂಲಕವಾಗಿವೆ. ಅಥವಾ ಸರ್ವಜ್ಞನಿಂದ ಪ್ರಣೀತವಾಗಿವೆ ಎಂಬುದಾಗಿ ಅಭಿಮತವಾಗಿವೆ. ಕೆಲವೆಡೆ ಹೇಳಲ್ಪಟ್ಟ ಫಲಗಳು ದೊರಕುವುದೂ ಕೂಡ ಇವುಗಳಿಂದ ಕಂಡಿದೆ. ಆದ್ದರಿಂದ ವೇದಗಳಿಗೆ ಸಮಾನವಾಗಿವೆ. ಹೀಗೆ ಜಗತ್ಕಾರಣ ವಿಷಯದಲ್ಲಿ ಸಮನ್ವಯಧರ್ಮಿ ಸಮರ್ಪಕವಾಗಿವೆ. ಹೀಗೆ ಚೆನ್ನಾಗಿ ಆಶಂಕಿಸಲು ಅರ್ಹವಾಗಿವೆ. ಈ ಎಲ್ಲ ಕಾರಣಗಳಿಂದ ಬಲಿಷ್ಠವಾದ ಪಾಶುಪತಾದಿಶ್ರುತಿಗಳ ವಿರೋಧವನ್ನು ಪರಿಹರಿಸುವುದು ಅತ್ಯಾವಶ್ಯಕ. ಈ ದೃಷ್ಟಿಯಿಂದ ಸೂತ್ರಕಾರರು 'ಸ್ಮೃತ್ಯನವಕಾಶದೋಷಪ್ರಸಂಗ ಇತಿ ಚೇತ್ ಅನ್ಯಸ್ಮೃತ್ಯನವಕಾಶದೋಷಪ್ರಸಂಗಾತ್' ಎಂಬ ಸೂತ್ರವನ್ನು ಉಲ್ಲೇಖಿಸಿದ್ದಾರೆ.

ರುದ್ರ, ಕಪಿಲ, ಕಣಾದ ಮೊದಲಾದವರೆಲ್ಲರೂ ಕೂಡ ಸರ್ವಜ್ಞರಾಗಿದ್ದಾರೆ. ಆದರೆ ಪ್ರತಿಯೊಬ್ಬರೂ ಕೂಡ ಬೇರೆ ಬೇರೆ ವ್ಯಕ್ತಿಯನ್ನೇ ಜಗತ್ಕಾರಣನೆಂದು ಅಂಗೀಕರಿಸುತ್ತಿದ್ದಾರೆ.

ವಿವರಣೆ - ಪ್ರಥಮಪಾದವು ಯುಕ್ತಿವಿರೋಧದ ಪರಿಹಾರಕ್ಕೋಸ್ಕರ ಹೊರಟಿದೆ ಎಂದು ಭಾಷ್ಯದಲ್ಲಿ ಹೇಳಿದ್ದಾರೆ. ಹಾಗಾದರೆ ಮೊದಲ ಅಧಿಕರಣದಲ್ಲಿ ಸ್ಮೃತಿವಿರೋಧವನ್ನು ಪರಿಹರಿಸುವದು ಅಸಂಗತವಲ್ಲವೇ? ಎಂಬ ಪ್ರಶ್ನೆ ಸಹಜವಾಗಿ ಬರುತ್ತದೆ. ಇದಕ್ಕೆ ಕಾರಣವೇನೆಂದರೆ ಪಾಶುಪತಸ್ಮೃತಿಯು ಯುಕ್ತಿರೂಪವಾಗಿದೆ. ಆದ್ದರಿಂದ ಈ ಪಾದದಲ್ಲಿ ಇದು ಅಸಂಗತವಾಗುವುದಿಲ್ಲ ಎಂಬುದು ಒಂದು ಉತ್ತರ. ಅಥವಾ ಶೈವಾಗಮವು ಶೈವದರ್ಶನದ ಮೂಲವುಳ್ಳದ್ದಾಗಿದೆ. ಸಮಯರೂಪವೂ ಆಗಿದೆ. ಈ ಯುಕ್ತಿ ಹಾಗೂ ಸಮಯರೂಪವಾದ್ದರಿಂದ ಅತ್ಯಂತ ಬಲಿಷ್ಠವಾಗಿದೆ. ಅಷ್ಟೇ ಅಲ್ಲದೇ ಕೆಲವೆಡೆ ಶ್ರುತಿಸಂವಾದಿಯೂ ಆಗಿದೆ. ಹೀಗೆ ಶ್ರುತಿ ಮೂಲಕವಾಗಿರುವುದರಿಂದ ಸರ್ವಜ್ಞನಿಂದ ಪ್ರಣೀತವಾದ್ದರಿಂದ ದೃಷ್ಟಫಲಕವಾಗಿರುವುದರಿಂದ ವೇದಕ್ಕೆ ಸಮಾನವಾಗಿದೆ ಎಂಬ ಬುದ್ಧಿಯು ನಮಗೆ ಬರುತ್ತದೆ. ಈ ದೃಷ್ಟಿಯಿಂದ ಅತ್ಯಂತ ಬಲಿಷ್ಠವಾಗಿರುವ ಕಾರಣ ಪಾಶುಪತಸ್ಮೃತಿ ವಿರೋಧವನ್ನು ಪರಿಹರಿಸಲು ಈ ಸ್ಮೃತ್ಯಧಿಕರಣವು ಹೊರಟಿದೆ.

ಪಾಶುಪತಸ್ಮೃತಿಯು ರುದ್ರದೇವರಿಂದ ರಚಿತವಾಗಿದೆ. ಇದರಲ್ಲಿ ರುದ್ರನೇ ಜಗತ್ತಿಗೆ ಕಾರಣನೆಂದು ಹೇಳಲಾಗಿದೆ. ಕಪಿಲ ಋಷಿಯಿಂದ ಸಾಂಖ್ಯಸ್ಮೃತಿಯು ರಚನೆಗೊಂಡಿದೆ.

ಇದರಿಂದ ಪ್ರಕೃತಿಯಿಂದಲೇ ಜಗತ್ತು ಹುಟ್ಟಿದೆ ಎಂದು ಹೇಳಲಾಗಿದೆ. ರುದ್ರನಾಗಲೀ, ಕಪಿಲ ಋಷಿಯಾಗಲೀ ಪರಮಾಪ್ತರಾಗಿರುವುದರಿಂದ ಇವರಿಂದ ಪ್ರಣೀತವಾದ ವಾಕ್ಯವು ಪ್ರಮಾಣವಾಗಿದೆ. ಆದರೆ ವಿಷ್ಣುವೇ ಜಗತ್ತಿಗೆ ಕಾರಣವೆಂದು ಹೇಳುವ ವೇದಗಳು ಆಪ್ತಪ್ರಣೀತವಾಗಿರುವುದಿಲ್ಲ. ಆದ್ದರಿಂದ ಪ್ರಥಮಾಧ್ಯಾಯದಲ್ಲಿ ಸಾಧನೆ ಮಾಡಿದ ಪ್ರಮೇಯವು ಸಿದ್ಧವಾಗುವುದಿಲ್ಲ.

ಶ್ರುತಿಗೆ ಅಪ್ರಾಮಾಣ್ಯವನ್ನು ಹೇಳಬೇಕೆಂದು ಪೂರ್ವಪಕ್ಷ

तत्वप्रदीपः – न च तत्स्मृतीनामन्योऽवकाशः । उक्तार्थे श्रुतेः प्रामाण्याङ्गीकारे तासां तत्तदुत्कर्षप्रतिपादिकानाम् अन्यावकाशरहितानाम् अप्रामाण्यदोषः प्रसज्येत । न च तद्युक्तं सर्वज्ञप्रणीतानाम् । अतः श्रुतेस्तत्राप्रामाण्यमिति चेन्न ।

ಪಾಶುಪತಾದಿ ಸ್ಮೃತಿಗಳಿಗೆ ಅನ್ಯಾರ್ಥವನ್ನು ಕಲ್ಪನೆ ಮಾಡಲು ಸಾಧ್ಯವಿಲ್ಲ. ಏಕೆಂದರೆ ವಿಷ್ಣುವಿನ ಜಗತ್ಕಾರಣತ್ವವಿಷಯದಲ್ಲಿ ಶ್ರುತಿಗಳು ಪ್ರಮಾಣವಾಗಿವೆ ಎಂದು ಅಂಗೀಕಾರ ಮಾಡಿದರೆ ಪಾಶುಪತಾದಿಸ್ಮೃತಿಗಳಲ್ಲಿ ಹೇಳಲ್ಪಟ್ಟ ರುದ್ರಾದಿಗಳ ಜಗತ್ಕಾರಣತ್ವವು ಅಯುಕ್ತವಾಗಬೇಕಾಗುತ್ತದೆ. ರುದ್ರಾದಿಗಳ ಉತ್ಕರ್ಷ ಪ್ರತಿಪಾದನೆ ಮಾಡುವ ವಾಕ್ಯಗಳಿಗೆ ಬೇರೆ ಅರ್ಥವನ್ನು ಕಲ್ಪನೆ ಮಾಡಿದರೆ, ಅಪ್ರಾಮಾಣ್ಯದೋಷವೇ ಪ್ರಾಪ್ತವಾಗುತ್ತದೆ. ಇದು ಯುಕ್ತವಲ್ಲ. ಏಕೆಂದರೆ ರುದ್ರ, ಕಪಿಲ ಮೊದಲಾದವರೆಲ್ಲರೂ ಸರ್ವಜ್ಞರಾಗಿದ್ದಾರೆ. ಅವರಿಂದ ಹೇಳಲ್ಪಟ್ಟ ಈ ಸ್ಮೃತಿಗಳಿಗೆ ಅಪ್ರಾಮಾಣ್ಯವನ್ನು ಕಲ್ಪನೆ ಮಾಡಬಾರದು. ಆದ್ದರಿಂದ ಪ್ರಥಮಾಧ್ಯಾಯದ ಪ್ರಮೇಯದಲ್ಲಿಯೇ ಅಪ್ರಾಮಾಣ್ಯವನ್ನು ಶ್ರುತಿಗಳಿಗೆ ಒಪ್ಪಬೇಕು.

ಇತರ ಆಗಮಗಳಿಗಿಂತ ವೇದದಲ್ಲಿರುವ ಪ್ರಾಮಾಣ್ಯವು ಅತ್ಯಧಿಕವಾಗಿದೆ

तत्वप्रदीपः – तेभ्योऽधिकं निरतिशयं सर्वज्ञत्वं विष्णोः । मन्वादीनां च कपिलादिभ्योऽधिकम् । अतो विष्ण्वादिस्मृत्यनवकाशदोषोऽत्युल्बणस्तत्प्रामाण्याङ्गीकारे प्रसज्यते । अत एतद्विरोधे तासाम् अप्रामाण्यमेव स्यात् । अन्यसमयिभ्योऽस्माकं श्रुतिप्रामाण्यमधिकं निरपवादं सिद्ध्यति ।

ರುದ್ರಾದಿಗಳಿಗಿಂತ ನಿರತಿಶಯವಾಗಿ ಅಧಿಕವಾದ ಸಾರ್ವಜ್ಞ್ಯವು ವಿಷ್ಣುವಿನಲ್ಲಿದೆ. ಕಪಿಲಾದಿಗಳಿಗಿಂತ ಅಧಿಕವಾದ ಸಾರ್ವಜ್ಞ್ಯವು ಮನು ಮೊದಲಾದವರಲ್ಲಿದೆ. ಆದ್ದರಿಂದ ವಿಷ್ಣುಪ್ರತಿಪಾದಕವಾದ ಪಂಚರಾತ್ರಾದಿಸ್ಮೃತಿಗಳಲ್ಲಿರುವ ನಿರವಕಾಶದೋಷವು ಅತ್ಯುಲ್ಬಣವಾಗಿದೆ. ಆದ್ದರಿಂದ ಶೈವಸ್ಮೃತಿಗಳಿಗೆ ಪ್ರಾಮಾಣ್ಯವನ್ನು ಅಂಗೀಕಾರ ಮಾಡಬಾರದು. ಈ ಪಂಚರಾತ್ರಾದಿಸ್ಮೃತಿಗಳ ವಿರೋಧವು ಬರುವುದರಿಂದ, ಶೈವಸ್ಮೃತಿಗಳಿಗೆ ಅಪ್ರಾಮಾಣ್ಯವನ್ನೇ ಒಪ್ಪಬೇಕು. ಬೇರೆ ಸಮಯಿಗಳಿಗಿಂತ ನಾವು ಒಪ್ಪುವ ಶ್ರುತಿ-ಪ್ರಾಮಾಣ್ಯವು ಅತ್ಯಧಿಕವಾಗಿದೆ ಮತ್ತು ಅಪವಾದವಿಲ್ಲದ್ದಾಗಿದೆ ಎಂಬುದು ಸಿದ್ಧವಾಯಿತು.

ಶ್ರೀಮಜ್ಜಯತೀರ್ಥ ಭಿಕ್ಷುಗಳಿಂದ ವಿರಚಿತವಾದ

ತತ್ವಪ್ರಕಾಶಿಕಾ

ಎರಡನೆಯ ಅಧ್ಯಾಯದ ಪ್ರಮೇಯ

तत्वप्रकाशिका – पूर्वाध्यायसङ्गतत्वेन एतदध्यायार्थं दर्शयति – उक्तेऽर्थे इति।।

ಹಿಂದಿನ ಅಧ್ಯಾಯದಿಂದ ಈ ಅಧ್ಯಾಯಕ್ಕೆ ಸಂಗತಿಯನ್ನು ತೋರಿಸುವ ಮೂಲಕ ಈ ಎರಡನೆಯ ಅಧ್ಯಾಯದ ಅರ್ಥವನ್ನು 'ಉಕ್ತೇऽರ್ಥೇ' ಇತ್ಯಾದಿಯಾಗಿ ತೋರಿಸುತ್ತಿದ್ದಾರೆ.

ವಿವರಣೆ - ಹಿಂದಿನ ಸಮನ್ವಯಾಧ್ಯಾಯದಲ್ಲಿ ಪರಮಾತ್ಮನೇ ಸಕಲಶಾಸ್ತ್ರಗಳಿಂದ ಪ್ರತಿಪಾದ್ಯನಾಗಿದ್ದಾನೆ. ಆದ್ದರಿಂದ ಅವನೇ ಜಗತ್‌ಕಾರಣನು ಮತ್ತು ಗುಣಪರಿಪೂರ್ಣನು ಎಂದು ಸ್ಥಾಪನೆ ಮಾಡಲಾಯಿತು. ಈ ಪ್ರಮೇಯಕ್ಕೆ ಯುಕ್ತಿವಿರೋಧ, ಸಮಯವಿರೋಧ ಮೊದಲಾದವುಗಳು ಪ್ರಾಪ್ತವಾದರೆ ಸಿದ್ಧವಾಗುವುದಿಲ್ಲ. ಆದ್ದರಿಂದ ಎಲ್ಲಾ ಬಗೆಯ ವಿರೋಧಗಳನ್ನು ಅವಶ್ಯವಾಗಿ ಪರಿಹಾರ ಮಾಡಲೇಬೇಕು. ಅದಕ್ಕಾಗಿ ಎರಡನೆಯ ಈ ಅಧ್ಯಾಯವು ಹೊರಟಿದೆ. ಈ ವಿಷಯವನ್ನು ಭಾಷ್ಯದಲ್ಲಿ 'ಉಕ್ತೇऽರ್ಥೇ' ಎಂಬುದಾಗಿ ಹೇಳಿರುತ್ತಾರೆ. ಆದ್ದರಿಂದ ಸಮನ್ವಯಾಧ್ಯಾಯದಿಂದ ಅವಿರೋಧಾಧ್ಯಾಯಕ್ಕೆ ಸಂಗತಿಯನ್ನು ನಿರೂಪಣೆ ಮಾಡಿದಂತಾಯಿತು. ಹಾಗೂ ಈ ಅವಿರೋಧಾಧ್ಯಾಯದ ಮುಖ್ಯತಾತ್ಪರ್ಯ

ಏನೆಂದರೆ 'ಭಗವಂತನ ಜಗತ್‌ಕಾರಣತ್ವವಿಷಯದಲ್ಲಿ ಯುಕ್ತಿವಿರೋಧವನ್ನು ಪರಿಹರಿಸುವಿಕೆ' ಎಂದು.

ಜಗಜ್ಜನ್ಮಾದಿಕಾರಣತ್ವದಲ್ಲಿ ಯುಕ್ತಿವಿರೋಧ ಪರಿಹಾರ

तत्वप्रकाशिका – अशेषशास्त्रप्रामाण्येन हरिरेव जगज्जन्मादिकर्तेति योऽर्थः प्रथमाध्याये प्रतिपादितस्तस्य युक्त्यादिविरूद्धत्वे न प्रेक्षावदुपादित्सागोचरत्वं स्यात् । अतस्तस्मिन्नुक्तार्थे युक्त्यादिविरोधाभावं दशयत्यनेनाध्यायेन सूत्रकर इत्यर्थः । एतत्पादप्रतिपाद्यं दर्शयति ।। प्रथमेति।।

ಪ್ರಥಮಾಧ್ಯಾಯದಲ್ಲಿ ಸಕಲ ಶಾಸ್ತ್ರಗಳು ಪರಮಾತ್ಮನಲ್ಲಿಯೇ ಸಮನ್ವಯಗೊಳ್ಳುವುದರಿಂದ ಪ್ರಮಾಣವಾಗಿವೆ ಆದ್ದರಿಂದ ಪರಮಾತ್ಮನೇ ಜಗಜ್ಜನ್ಮಾದಿಕಾರಣನಾಗಿದ್ದಾನೆಂದು ಸಮರ್ಥಿಸ-ಲಾಯಿತು. ಈ ಪ್ರಮೇಯಕ್ಕೆ ಯುಕ್ತಿ ಮೊದಲಾದವುಗಳ ವಿರೋಧವು ಪ್ರಾಪ್ತವಾದರೆ ಪ್ರೇಕ್ಷಾವಂತರು ಪರಮಾತ್ಮನನ್ನು ಜಗಜ್ಜನ್ಮಾದಿಕಾರಣನೆಂಬ ಪ್ರಮೇಯವನ್ನು ಒಪ್ಪುವುದಿಲ್ಲ. ಆದ್ದರಿಂದ ಹಿಂದಿನ ಅಧ್ಯಾಯದಲ್ಲಿ ಸಮರ್ಥಿಸಿದ ಪ್ರಮೇಯಕ್ಕೆ ಯುಕ್ತಿ ಮೊದಲಾದವುಗಳ ವಿರೋಧವನ್ನು ಪರಿಹಾರ ಮಾಡಲೇಬೇಕು. ಅದನ್ನೇ ಈ ಅಧ್ಯಾಯದಲ್ಲಿ ಸೂತ್ರಕಾರರು ತೋರಿಸುತ್ತಿದ್ದಾರೆ. ಈ ಎರಡನೇ ಅಧ್ಯಾಯದ ಪ್ರಥಮಪಾದದಿಂದ ಪ್ರತಿಪಾದ್ಯವಾದ ವಿಷಯವನ್ನು ಪ್ರಥಮ ಇತ್ಯಾದಿ ಭಾಷ್ಯದಿಂದ ಹೇಳಿರುತ್ತಾರೆ.

ವಿವರಣೆ - ಪರಮಾತ್ಮನು ಸಕಲ ವೇದಗಳಿಂದ ಪ್ರತಿಪಾದ್ಯನಾಗಿದ್ದಾನೆ. ಪ್ರಕರಣ, ವಾಕ್ಯ , ಪದ, ವರ್ಣ, ಸ್ವರ ಇವುಗಳಿಂದೆಲ್ಲಾ ಪರಮಾತ್ಮನೊಬ್ಬನೇ ಪರಮಮುಖ್ಯವೃತ್ತಿಯಿಂದ ಪ್ರತಿಪಾದ್ಯನಾಗಿದ್ದಾನೆ ಹಾಗಾಗಿ ಸಕಲವೇದಶಾಸ್ತ್ರಗಳು ಅವನ ವಿಷಯದಲ್ಲಿ ಪ್ರಮಾಣ-ಭೂತವಾಗಿವೆ ಪ್ರತಿಯೊಂದು ಶಬ್ದಗಳಿಂದ ತಿಳಿಯಲ್ಪಡುವ ಗುಣಗಳಿಂದಲೂ ಕೂಡ ಪರಿಪೂರ್ಣನಾಗಿದ್ದಾನೆ. ಆದ್ದರಿಂದ ಪರಮಾತ್ಮನೊಬ್ಬನೇ ಜಗಜ್ಜನ್ಮಾದಿಕಾರಣನಾಗಿದ್ದಾನೆಂದು ಹಿಂದಿನ ಅಧ್ಯಾಯದಲ್ಲಿ ಸಮರ್ಥನೆ ಮಾಡಲಾಗಿದೆ. ಈ ಪ್ರಮೇಯವನ್ನು ಪ್ರೇಕ್ಷಾವಂತರು ಒಪ್ಪಬೇಕೆಂದರೆ ಇದಕ್ಕೆ ಯುಕ್ತ್ಯಾದಿವಿರೋಧಗಳು ಬರಬಾರದು. ಅದಕ್ಕಾಗಿ ಈ ಅಧ್ಯಾಯ ಹೊರಟಿದೆ.

ಪ್ರಥಮಾಧ್ಯಾಯದ ಪ್ರಮೇಯಕ್ಕೆ ನಾಕು ಬಗೆಯ ವಿರೋಧಗಳು

तत्वप्रकाशिका – उक्तेऽर्थे विरोधश्चतुर्विधः स्फुरति युक्तिसमय-श्रुतिन्यायोपेत श्रुतिविरोधभेदात् । तत्र सर्वविरेधानां युक्तिमूलत्वेन तदविरोधं प्रथमपादे दर्शयतीत्यर्थः । आद्याधिकरणार्थं दर्शयति – प्रथमत इति ।।

ಹಿಂದಿನ ಅಧ್ಯಾಯದಲ್ಲಿ ಸಮರ್ಥನೆ ಮಾಡಿದ ಪ್ರಮೇಯಕ್ಕೆ ನಾಕುಬಗೆಯ ವಿರೋಧವು ಸ್ಫುರಣವಾಗುತ್ತದೆ - ಯುಕ್ತಿವಿರೋಧ, ಸಮಯವಿರೋಧ, ಶ್ರುತಿವಿರೋಧ, ಯುಕ್ತಿಸಹಿತವಾದ ಶ್ರುತಿವಿರೋಧ ಎಂದು.

ಈ ನಾಕು ಬಗೆಯ ವಿರೋಧಗಳೂ ಕೂಡ ಯುಕ್ತಿಮೂಲಕವಾದ್ದರಿಂದ ಇದರ ವಿರೋಧವನ್ನು ಪ್ರಥಮಪಾದದಲ್ಲಿ ತೋರಿಸಿ ಪರಿಹರಿಸುತ್ತಿದ್ದಾರೆ. ಮೊದಲು 'ಪ್ರಥಮತಃ' ಇತ್ಯಾದಿ ಭಾಷ್ಯದಿಂದ ಮೊದಲನೇ ಈ ಅಧಿಕರಣದ ಪ್ರಮೇಯವನ್ನು ತೋರಿಸುತ್ತಿದ್ದಾರೆ.

ವಿವರಣೆ - ಜಗಜ್ಜನ್ಮಾದಿಕಾರಣತ್ವ ವಿಷಯದಲ್ಲಿ ಒಟ್ಟು ನಾಕು ವಿರೋಧಗಳು ಪ್ರಾಪ್ತವಾಗುತ್ತವೆ. ಈ ನಾಕು ಬಗೆಯ ವಿರೋಧಗಳೂ ಕೂಡ ಯುಕ್ತಿಮೂಲಕವೇ ಆಗಿದೆ. ಏಕೆಂದರೆ ಶ್ರುತಿಯು ಯುಕ್ತಿಮೂಲಕವಾಗಿದ್ದರೆ ಮಾತ್ರ ವಿರೋಧ ಮಾಡಲು ಸಾಧ್ಯ. ಸಮಯಗಳು ತಮ್ಮ ತಮ್ಮ ಮತದ ವಿಷಯವನ್ನು ಯುಕ್ತಿಯಿಂದಲೇ ಸಮರ್ಥನೆ ಮಾಡುತ್ತವೆ. ಆದ್ದರಿಂದ ಪ್ರತಿಯೊಂದು ವಿರೋಧಕ್ಕೂ ಯುಕ್ತಿಯು ಆವಶ್ಯಕವಾಗಿದೆ. ಆದ್ದರಿಂದ ಮೊದಲು ಯುಕ್ತಿವಿರೋಧವನ್ನು ಪರಿಹಾರ ಮಾಡಿದರೆ ಉಳಿದ ವಿರೋಧವನ್ನು ಪರಿಹರಿಸುವುದು ಸುಲಭವಾಗುತ್ತದೆ. ಈ ದೃಷ್ಟಿಯಿಂದ ಸೂತ್ರಕಾರರು ಮೊದಲನೆಯ ಈ ಪಾದದಲ್ಲಿ ಯುಕ್ತಿವಿರೋಧವನ್ನು ಪರಿಹರಿಸಿದ್ದಾರೆ. ಹಾಗಾದರೆ ಮೊದಲನೆಯ ಪಾದದ ಪ್ರಥಮಾಧಿಕರಣದಲ್ಲಿಯೂ ಯುಕ್ತಿವಿರೋಧವನ್ನು ಪರಿಹರಿಸಬೇಕಿತ್ತು. ಸ್ಮೃತಿಯ ವಿರೋಧವನ್ನು ಏಕೆ ಪರಿಹರಿಸಿದರು ? ಎಂಬ ಪ್ರಶ್ನೆಗೆ ಭಾಷ್ಯಕಾರರು 'ಪ್ರಥಮತಃ' ಇತ್ಯಾದಿಯಾಗಿ ಉತ್ತರಿಸಿದ್ದಾರೆ.

ಸ್ಮೃತ್ಯಧಿಕರಣಕ್ಕೆ ಸಂಗತಿ ನಿರೂಪಣೆ

तत्वप्रकाशिका – यद्यप्ययं पादः प्रागुक्तार्थे युक्तिविरोधं परिहर्तुमेव प्रवृत्तस्तथापि प्रथमाधिकरणे पाशुपतादिस्मृतिविरोधाभावं दर्शयति । स्मृतीनां

युक्तिसमयादिरूपत्वेन तद्विरोधपरिहारस्य समस्ताध्यायार्थभूतस्य प्राथम्योपपत्तेः पादार्थस्याऽप्यत्र सम्भवेन न कोऽपि दोष इति भावः ।

ವಾಸ್ತವಿಕವಾಗಿ ಎರಡನೆಯ ಅಧ್ಯಾಯದ ಈ ಪ್ರಥಮಪಾದವು ಹಿಂದಿನ ಅಧ್ಯಾಯದ ಪ್ರಮೇಯದಲ್ಲಿ ಯುಕ್ತಿವಿರೋಧವನ್ನು ಪರಿಹಾರ ಮಾಡುವುದಕ್ಕಾಗಿಯೇ ಪ್ರವೃತ್ತವಾಗಿದೆ. ಆದರೂ ಕೂಡ ಮೊದಲನೆಯ ಈ ಅಧಿಕರಣವು ಪಾಶುಪತ ಮೊದಲಾದ ಸ್ಮೃತಿಗಳ ವಿರೋಧವನ್ನು ಪರಿಹರಿಸುತ್ತಿದೆ. ಪಾಶುಪತಾದಿಸ್ಮೃತಿಗಳು ಯುಕ್ತಿರೂಪವೂ ಆಗಿವೆ. ಸಮಯರೂಪವೂ ಆಗಿವೆ. ಆದ್ದರಿಂದ ಇವುಗಳ ವಿರೋಧ ಪರಿಹಾರವು ಸಮಸ್ತ ಅಧ್ಯಾಯದ ಅರ್ಥವೇ ಆಗಿದೆ. ಪಾದದ ಅರ್ಥವೂ ಕೂಡ ಇದರಲ್ಲಿರುವುದರಿಂದ ಇಲ್ಲಿ ಸ್ಮೃತಿವಿರೋಧವನ್ನು ಪರಿಹರಿಸಿದರೆ ಯಾವುದೇ ದೋಷಕ್ಕೆ ಅವಕಾಶವಿಲ್ಲ.

ವಿವರಣೆ - ಇಲ್ಲಿಯ ತನಕ ಹಿಂದಿನ ಅಧ್ಯಾಯದಿಂದ ಎರಡನೆಯ ಅಧ್ಯಾಯಕ್ಕೆ ಹಾಗೂ ಪ್ರಥಮಪಾದಕ್ಕೆ ಸಂಗತಿಯನ್ನು ನಿರೂಪಣೆ ಮಾಡಿದ್ದಾಯಿತು. ಪ್ರಕೃತ ಈ ಪಾದದಲ್ಲಿರುವ ಸ್ಮೃತ್ಯಧಿಕರಣಕ್ಕೆ ಸಂಗತಿಯನ್ನು ನಿರೂಪಣೆ ಮಾಡುತ್ತಿದ್ದಾರೆ. ಈ ಪಾದವು ಸಂಪೂರ್ಣವಾಗಿ ಯುಕ್ತಿವಿರೋಧದ ಪರಿಹಾರಕ್ಕಾಗಿಯೇ ಹೊರಟಿದೆ. ಆದರೆ ಮೊದಲನೆಯ ಅಧಿಕರಣ ಮಾತ್ರ ಯುಕ್ತಿವಿರೋಧವನ್ನು ಪರಿಹಾರ ಮಾಡದೇ ಸ್ಮೃತಿವಿರೋಧವನ್ನು ಪರಿಹಾರ ಮಾಡುತ್ತಿದೆ. ಇದು ಹೇಗೆ ಸರಿ ? ಪಾಶುಪತಾದಿಸ್ಮೃತಿವಿರೋಧವನ್ನು ಪರಿಹಾರ ಮಾಡುತ್ತಿರುವುದರಿಂದ ಇದು ಸಮಯವಿರೋಧದಲ್ಲಿ ಸೇರುತ್ತದಾದ್ದರಿಂದ ಎರಡನೆಯ ಪಾದದಲ್ಲಿ ಸೇರಬೇಕು. ಅಥವಾ ಯುಕ್ತಿಸಂವಾದದಿಂದ ಕೂಡಿರುವ ಶ್ರುತಿ-ಸ್ಮೃತಿಗಳ ಆಧಾರವನ್ನು ಹೇಳುತ್ತಿರುವುದರಿಂದ ಮೂರನೆಯ ಅಥವಾ ನಾಕನೆಯ ಪಾದದಲ್ಲಿ ಈ ಅಧಿಕರಣವನ್ನು ಉಲ್ಲೇಖ ಮಾಡಬೇಕಿತ್ತು. ಯುಕ್ತಿವಿರೋಧವನ್ನು ಪರಿಹಾರ ಮಾಡುವುದಕ್ಕಾಗಿ ಹೊರಟಿರುವ ಎರಡನೆಯ ಪಾದದಲ್ಲೇಕೆ ಇದನ್ನು ಸೇರಿಸಿದ್ದಾರೆ. ಅದರಲ್ಲೂ ಕೂಡ ಮೊದಲೇ ಇದನ್ನು ಉಲ್ಲೇಖ ಮಾಡಲು ಏನು ಕಾರಣ?

ಈ ಆಶಂಕೆಯನ್ನು ಇಲ್ಲಿ ಪರಿಹರಿಸಿದ್ದಾರೆ. ಸ್ಮೃತಿವಿರೋಧ ಪರಿಹಾರವನ್ನು ಮೊದಲು ಮಾಡುತ್ತಿರುವುದೇ ಸಮಂಜಸವಾಗಿದೆ. ಏಕೆಂದರೆ ಪಾಶುಪತ ಮೊದಲಾದ ಸ್ಮೃತಿಗಳು ಯುಕ್ತಿಯಿಂದ ಕೂಡಿರುವುದರಿಂದ ಯುಕ್ತಿವಿರೋಧರೂಪವೂ ಆಗಿದೆ. ಆದ್ದರಿಂದ ಯುಕ್ತಿವಿರೋಧಪರಿಹಾರಕ್ಕಾಗಿ ಹೊರಟಿರುವ ಈ ಪಾದದಲ್ಲಿ ಈ ಅಧಿಕರಣವು ಅಸಂಗತವಾಗುವುದಿಲ್ಲ. ಇನ್ನು ಎರಡನೆಯ ಅಥವಾ ಮೂರನೆಯ ಪಾದದಲ್ಲಿಯೂ ಕೂಡ

ಈ ಅಧಿಕರಣವನ್ನು ಸೇರಿಸಬಹುದಲ್ಲವೇ? ಎಂದು ಪ್ರಶ್ನಿಸಬಹುದು. ಆದರೆ ಎರಡನೆಯ ಪಾದವು ಕೇವಲ ಸಮಯವಿರೋಧಪರಿಹಾರಕ್ಕಾಗಿ ಹೊರಟಿದೆ. ಮೂರನೆಯ ಪಾದವು ಶ್ರುತಿವಿರೋಧಪರಿಹಾರಕ್ಕಾಗಿ, ನಾಕನೆಯ ಪಾದವು ಶ್ರುತಿಸಹಿತಯುಕ್ತಿವಿರೋಧಪರಿಹಾರಕ್ಕಾಗಿ ಹೊರಟಿದೆ. ಪ್ರಕೃತ ಪಾಶುಪತಾದಿಸ್ಮೃತಿಗಳು ಕೇವಲ ಸಮಯರೂಪವೂ ಆಗಿಲ್ಲ, ಶ್ರುತಿರೂಪವೂ ಆಗಿಲ್ಲ. ಶ್ರುತಿ ಸಹಿತವಾದ ಯುಕ್ತಿರೂಪವೂ ಆಗಿರುವುದಿಲ್ಲ. ಆದ್ದರಿಂದ ಅವುಗಳಲ್ಲಿ ಉಲ್ಲೇಖ ಮಾಡಲು ಇದಕ್ಕೆ ಸಂಗತಿಯಿರುವುದಿಲ್ಲ.

ಹಾಗಾದರೆ ಕೇವಲ ಯುಕ್ತಿವಿರೋಧರೂಪವೂ ಅಲ್ಲದ ಕಾರಣ ಈ ಪಾದದಲ್ಲಿ ಹೇಗೆ ಸೇರುತ್ತದೆ?

ಹೌದು. ಆದ್ದರಿಂದಲೇ ಯುಕ್ತಿವಿರೋಧಪರಿಹಾರಕ್ಕೆ ಮುಂಚಿತವಾಗಿಯೇ ಈ ಅಧಿಕರಣವನ್ನು ಸೇರಿಸಿದ್ದಾರೆ. ಯುಕ್ತಿವಿರೋಧವನ್ನೂ ಕೂಡ ಪರಿಹಾರ ಮಾಡುತ್ತಿರುವುದರಿಂದ ಯುಕ್ತಿಪಾದದಲ್ಲಿ ಸಂಗತಿ ಇರುವುದಿಲ್ಲ. ಅಷ್ಟೇ ಅಲ್ಲದೇ ಎಲ್ಲಾ ಪಾದದಲ್ಲಿಯೂ ಕೂಡ ಈ ಅಧಿಕರಣವು ಸಂಗತವೇ ಆಗುತ್ತದೆ. ಆದರೆ ಯುಕ್ತಿಪಾದದಲ್ಲೂ ಸಂಗತವಾಗುವುದರಿಂದ 'ಪ್ರಥಮಾತಿಕ್ರಮಣೇ ಮಾನಾಭಾವಾತ್' ಮೊದಲೇ ಈ ಅಧಿಕರಣವನ್ನು ಉಲ್ಲೇಖ ಮಾಡಿದ್ದಾರೆ.

ಅಷ್ಟೇ ಅಲ್ಲದೇ ಯುಕ್ತಿ, ಸಮಯ, ಶ್ರುತಿ ಈ ಎಲ್ಲದರ ಸ್ವರೂಪವನ್ನು ತಾಳಿರುವುದರಿಂದ ಈ ಸ್ಮೃತಿವಿರೋಧವು ಅತ್ಯಂತ ಬಲಿಷ್ಠವಾಗಿದೆ. ಆದ್ದರಿಂದ ಮಹಾಮಲ್ಲಭಂಗನ್ಯಾಯವನ್ನು ಅನುಸರಿಸಿ ಮೊದಲೇ ಇದರ ವಿರೋಧವನ್ನು ಪರಿಹರಿಸುತ್ತಿದ್ದಾರೆ. ಆದ್ದರಿಂದ ಈ ಅಧಿಕರಣಕ್ಕೆ ಪ್ರಥಮಪಾದದ ಪ್ರಾರಂಭದಲ್ಲಿ ಸಂಗತಿಯಿರುತ್ತದೆ.

ಪಾಶುಪತಾದಿಸ್ಮೃತಿಗಳ ವಿರೋಧವೇ ಪ್ರಬಲ

तत्वप्रकाशिका – अनेनास्याधिकरणस्य शास्त्रादिसङ्गतिरुक्ता भवति । वेदप्रामाण्येन जगज्जन्मादिकर्तृत्वं विष्णोरूक्तं । तस्य च पाशुपतादिस्मृतिविरोधे नोक्तजिज्ञासासम्भवतीत्यविरुद्धतां नेतव्यम् ।

ಹೀಗೆ ಹೇಳಿದ್ದರಿಂದ ಈ ಸ್ಮೃತ್ಯಧಿಕರಣಕ್ಕೆ ಶಾಸ್ತ್ರಸಂಗತಿ, ಅಧ್ಯಾಯಸಂಗತಿ, ಪಾದಸಂಗತಿಗಳನ್ನು ಹೇಳಿದಂತಾಯಿತು.

ವೇದಪ್ರಾಮಾಣ್ಯದ ಮೂಲಕ ವಿಷ್ಣುವಿಗೆ ಜಗಜ್ಜನ್ಮಾದಿಕರ್ತೃತ್ವವನ್ನು ಹಿಂದಿನ ಅಧ್ಯಾಯದಲ್ಲಿ ಸಮರ್ಥಿಸಲಾಯಿತು. ಈ ಪ್ರಮೇಯಕ್ಕೆ ಪಾಶುಪತಾದಿಸ್ಮೃತಿಗಳ ವಿರೋಧವು ಪ್ರಾಪ್ತವಾದರೆ

ಪರಮಾತ್ಮನ ವಿಷಯದಲ್ಲಿ ಜಿಜ್ಞಾಸೆಯು ಯುಕ್ತವಾಗುವುದಿಲ್ಲ. ಆದ್ದರಿಂದ ಈ ಶ್ರುತಿಗಳ ವಿರೋಧವನ್ನು ಪರಿಹಾರ ಮಾಡಲೇಬೇಕು. ಅದಕ್ಕಾಗಿ ಈ ಅಧಿಕರಣವು ಹೊರಟಿದೆ.

ವಿವರಣೆ - ಈ ಅಧಿಕರಣವು ಜಗಜ್ಜನ್ಮಾದಿಕಾರಣತ್ವ ವಿಷಯದಲ್ಲಿ ಬರುವ ವಿರೋಧವನ್ನು ಪರಿಹಾರ ಮಾಡುತ್ತಿರುವುದರಿಂದ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ ಸಂಗತಿಯನ್ನು ಹೊಂದುತ್ತದೆ. ವಿರೋಧ ಪರಿಹಾರ ಮಾಡುತ್ತಿರುವುದರಿಂದ ಎರಡನೆಯ ಅಧ್ಯಾಯದಲ್ಲಿ ಸಂಗತವಾಗುತ್ತದೆ. ಯುಕ್ತಿವಿರೋಧ ಪರಿಹಾರ ಮಾಡುತ್ತಿರುವುದರಿಂದ ಪ್ರಥಮಪಾದದಲ್ಲಿ ಸಂಗತವಾಗುತ್ತದೆ. ಮತ್ತು 'ಯತೋ ವಾ ಇಮಾನಿ ಜಾಯಂತೇ' ಇತ್ಯಾದಿ ಶ್ರುತಿಗಳು ವಿಷ್ಣುವಿಗೆ ಜಗಜ್ಜನ್ಮಾದಿಕಾರಣತ್ವವನ್ನು ಹೇಳುತ್ತಿವೆ. ಈ ಲಕ್ಷಣಕ್ಕೆ ಪಾಶುಪತಾದಿಸ್ಮೃತಿಗಳಿಂದ ವಿರೋಧವು ಬರುತ್ತದೆಂದು ಹೇಳಿದ್ದರಿಂದ ಸ್ಮೃತಿಸಂಗತಿಯನ್ನು ಹಾಗೂ ಹಿಂದಿನ ಏತೇನಾಧಿಕರಣದಲ್ಲಿ ಜಗಜ್ಜನ್ಮಾದಿಕರ್ತೃತ್ವದ ಸ್ಥಾಪನೆಯನ್ನು ವಿಷ್ಣುವಿನಲ್ಲಿ ಮಾಡಿರುವುದರಿಂದ ಅದನ್ನು ಇಲ್ಲಿ ಆಕ್ಷೇಪ ಮಾಡುತ್ತಿರುವುದರಿಂದ ಹಿಂದಿನ ಅಧಿಕರಣದಿಂದಲೂ ಕೂಡ ಸಂಗತಿಯನ್ನು ಹೊಂದಿರುತ್ತದೆ. ಆದ್ದರಿಂದ ಶಾಸ್ತ್ರಸಂಗತಿ, ಅಧ್ಯಾಯಸಂಗತಿ, ಪಾದಸಂಗತಿ, ಶ್ರುತಿಸಂಗತಿ, ಅಧಿಕರಣಸಂಗತಿ ಎಂಬುದಾಗಿ ಐದು ಬಗೆಯ ಸಂಗತಿಗಳನ್ನು ಹೊಂದಿದೆಯೆಂದು ತಿಳಿಯಬೇಕು.

ಅಧಿಕರಣದ ಸಂದೇಹಾದಿಗಳು

तत्वप्रकाशिका – तद्विष्णोर्जगजन्मादि कर्तृत्वं विषयः ।। युक्तं न वेति सन्देहः । समयविगानं सन्देहबीजम् । पूर्वपक्षस्य सूत्र एवोक्तत्वात्तदुपन्यस्य पूर्वपक्षांशं तावद्व्याचष्टे – स्मृतीति ।।

ಈ ಅಧಿಕರಣಕ್ಕೆ ವಿಷ್ಣುವಿನ ಜಗಜ್ಜನ್ಮಾದಿಕರ್ತೃತ್ವವು ವಿಷಯವಾಗಿದೆ. ವಿಷ್ಣುವಿನಲ್ಲಿ ಜಗಜ್ಜನ್ಮಾದಿಕರ್ತೃತ್ವವು ಯುಕ್ತವಾಗುತ್ತದೋ, ಇಲ್ಲವೋ ? ಎಂಬುದು ಅಧಿಕರಣದ ಸಂದೇಹ. ಸಮಯದಲ್ಲಿರುವ ಪರಸ್ಪರ ವಿರೋಧವು ಸಂದೇಹಕ್ಕೆ ಕಾರಣ.

ಪೂರ್ವಪಕ್ಷವನ್ನು ಸೂತ್ರದಲ್ಲಿಯೇ ಹೇಳಿರುವುದರಿಂದ ಸೂತ್ರವನ್ನೇ ಉಲ್ಲೇಖ ಮಾಡಿ, ಅದರಲ್ಲಿರುವ ಪೂರ್ವಪಕ್ಷಾಂಶವನ್ನು ಭಾಷ್ಯಕಾರರು 'ಸ್ಮೃತಿ' ಇತ್ಯಾದಿಯಾಗಿ ವ್ಯಾಖ್ಯಾನ ಮಾಡುತ್ತಿದ್ದಾರೆ.

ಶ್ರುತಿಗೆ ಅನ್ಯಾರ್ಥವನ್ನೇ ಕಲ್ಪನೆ ಮಾಡಬೇಕೆಂದು ಪೂರ್ವಪಕ್ಷ

तत्वप्रकाशिका – न विष्णोर्जगत्कारणत्वं युक्तम् । तत्प्रमाणाभावात् । न च यतो वा इमानि भूतानि जायन्त इत्यादि श्रुतिः प्रमाणम् । श्रुतेर्विष्णोः जगत्कारणत्वप्रतिपादकत्वे पाशुपतसांख्ययोगादिस्मृतिविराधेना-प्रामाण्याख्यदोषप्रसङ्गादन्यार्थतोपपत्तेः ।।

ಅಧಿಕರಣದ ಪೂರ್ವಪಕ್ಷ - ವಿಷ್ಣುವಿಗೆ ಜಗತ್‌ಕಾರಣತ್ವವು ಯುಕ್ತವಾಗುವುದಿಲ್ಲ. ಈ ವಿಷಯದಲ್ಲಿ ಯಾವುದೇ ಪ್ರಮಾಣವೇ ಇಲ್ಲ.

ಪ್ರಶ್ನೆ - 'ಯತೋ ವಾ ಇಮಾನಿ ಭೂತಾನಿ ಜಾಯಂತೇ' 'ಯಾವ ಬ್ರಹ್ಮನಿಂದ ಈ ಸಮಸ್ತ ಪ್ರಾಣಿಗಳು ಹುಟ್ಟುತ್ತವೆಯೋ' ಎಂಬ ಶ್ರುತಿಯು ಪ್ರಮಾಣವಾಗಿದೆಯಲ್ಲವೇ?

ಉತ್ತರ - ಈ ಶ್ರುತಿಯು ವಿಷ್ಣುವಿನ ಜಗತ್‌ಕಾರಣತ್ವವನ್ನು ಪ್ರತಿಪಾದನೆ ಮಾಡುವುದಾದರೆ, ಪಾಶುಪತ ಸ್ಮೃತಿ, ಸಾಂಖ್ಯಸ್ಮೃತಿ, ಯೋಗಸ್ಮೃತಿಗಳ ವಿರೋಧವು ಪ್ರಾಪ್ತವಾಗುತ್ತದೆ. ಆದ್ದರಿಂದ ಶ್ರುತಿಯು ಅಪ್ರಮಾಣವಾಗಬೇಕಾಗುತ್ತದೆ. ಹಾಗಾಗಿ ಶ್ರುತಿಗೆ ಅನ್ಯಾರ್ಥವನ್ನೇ ಕಲ್ಪನೆ ಮಾಡಬೇಕು.

ವಿವರಣೆ - ಪಾಶುಪತ, ಸಾಂಖ್ಯ, ಕಾಣಾದ ಮೊದಲಾದ ಸ್ಮೃತಿಗಳು ಪಶುಪತಿ, ಪ್ರಕೃತಿ ಮೊದಲಾದವುಗಳನ್ನೇ ಪ್ರತಿಪಾದನೆ ಮಾಡುತ್ತಿವೆ. ವಿಷ್ಣು ಜಗತ್‌ಕಾರಣನಾಗಿದ್ದಾನೆಂಬ ವಿಷಯದಲ್ಲಿ ಅವುಗಳು ತಾತ್ಪರ್ಯವನ್ನು ಹೊಂದಿರುವುದಿಲ್ಲ. ಆದರೆ ನೀವು ವಿಷ್ಣುವೇ ಜಗತ್‌ಕಾರಣನಾಗಿದ್ದಾನೆಂದು ಶ್ರುತಿಗಳ ಆಧಾರದಿಂದ ಪ್ರತಿಪಾದನೆ ಮಾಡುತ್ತಿದ್ದೀರಿ. 'ಯತೋ ವಾ ಇಮಾನಿ ಭೂತಾನಿ ಜಾಯಂತೇ' ಇವೇ ಮೊದಲಾದ ಶ್ರುತಿಗಳಿಗೆ ಈ ಪಾಶುಪತಾದಿಸ್ಮೃತಿಗಳ ವಿರೋಧವು ಬರುವುದರಿಂದ ಅಪ್ರಾಮಾಣ್ಯದೋಷವು ಬರುವ ಪ್ರಸಂಗವಿದೆ. ಆದ್ದರಿಂದ ಆ ಸ್ಮೃತಿಗಳಿಗೆ ವಿಷ್ಣುಪರವಾಗಿ ಅರ್ಥವನ್ನು ಮಾಡದೇ, ರುದ್ರಾದಿಪರವಾಗಿಯೇ ಅರ್ಥವನ್ನು ಮಾಡಬೇಕು. ಆಗ ಶ್ರುತಿಪ್ರಾಮಾಣ್ಯವನ್ನು ರಕ್ಷಣೆ ಮಾಡಿದಂತಾಗುತ್ತದೆ. ಹಾಗಾಗಿ ಹಿಂದಿನ ಅಧ್ಯಾಯದಲ್ಲಿ ವಿಷ್ಣು ಜಗತ್‌ಕಾರಣನಾಗಿದ್ದಾನೆಂದು ಹೇಳಿದ್ದು ಅಯುಕ್ತವಾಗಿದೆ.

ವಸ್ತುವಿನಲ್ಲಿ ವಿಕಲ್ಪವಿಲ್ಲದ್ದರಿಂದ ಸ್ಮೃತಿ ಹೇಳಿದ್ದೇ ಸತ್ಯ

तत्वप्रकाशिका – पाशुपतादिस्मृतीनां रुद्रादेर्जगत्कारणत्वप्रतिपादकत्वात् ।। न च विरोधेऽप्यप्रामाण्याभावः । वस्तुनि विकल्पप्रसंङ्गात् । न च देशकालादिभेदेन

श्रुतिस्मृत्योरविरोधः । स्मृतिषु रुद्रादेः सकलजगज्जन्मादिकर्तृत्वाभिधानात् । न च वाच्यं श्रुतिविरोधेन स्मृतीनामेवान्यार्थत्वमप्रामाण्यं वा किं न स्यात् । विरोधे त्वनपेक्षं स्यादसति ह्यनुमानमिति न्यायादिति ।

ಪ್ರಶ್ನೆ - ಪಾಶುಪತಾದಿಸ್ಮೃತಿಗಳಿಂದ ವೇದಕ್ಕೆ ವಿರೋಧ ಬಂದ ಮಾತ್ರಕ್ಕೆ ಅಪ್ರಾಮಾಣ್ಯವನ್ನೇಕೆ ಒಪ್ಪಬೇಕು?

ಉತ್ತರ - ಹಾಗಾದಲ್ಲಿ ವಸ್ತುವಿನಲ್ಲಿ ವಿಕಲ್ಪವನ್ನು ಒಪ್ಪಿದಂತಾಗುತ್ತದೆ. ಒಂದೇ ವಸ್ತುವಿಗೆ ವಿರುದ್ಧವಾದ ಎರಡು ಸ್ವರೂಪವು ಬರಬೇಕಾದೀತು.

ಪ್ರಶ್ನೆ - ಒಂದು ದೇಶ, ಒಂದು ಕಾಲದಲ್ಲಿ ಶಿವನಿಗೆ ಜಗತ್‌ಕಾರಣತ್ವವನ್ನು ಮತ್ತೊಂದು ದೇಶ, ಮತ್ತೊಂದು ಕಾಲದಲ್ಲಿ ವಿಷ್ಣುವಿಗೆ ಜಗತ್‌ಕಾರಣತ್ವವನ್ನು ಒಪ್ಪಿದರೆ ವಿರೋಧವು ಬರುವುದಿಲ್ಲ. ಶ್ರುತಿ-ಸ್ಮೃತಿಗಳೂ ಕೂಡ ಅವಿರುದ್ಧವಾಗುತ್ತವೆ.

ಉತ್ತರ - ಈ ಪ್ರಶ್ನೆಯೂ ಕೂಡ ತಪ್ಪು. ರುದ್ರನು ಸಕಲ ದೇಶ, ಸಕಲ ಕಾಲಗಳಲ್ಲಿ ಜಗತ್ ಕಾರಣನಾಗಿದ್ದಾನೆಂದು ಹೇಳಲಾಗಿದೆ. ಶ್ರುತಿಯಲ್ಲಿ ವಿಷ್ಣುವೇ ಸಕಲವೇದ, ಸಕಲ ಕಾಲಗಳಲ್ಲಿ ಜಗತ್‌ಕಾರಣನಾಗಿದ್ದಾನೆಂದು ಹೇಳಲಾಗಿದೆ. ಆದ್ದರಿಂದ ವಿರೋಧ ತಪ್ಪಿದ್ದಲ್ಲ.

ಪ್ರಶ್ನೆ - ಶ್ರುತಿವಿರೋಧ ಬರುವುದರಿಂದ ಸ್ಮೃತಿಗಳಿಗೆ ಅನ್ಯಾರ್ಥವನ್ನು ಕಲ್ಪನೆ ಮಾಡಬಹುದು. ಅಥವಾ ಅಪ್ರಾಮಾಣ್ಯವನ್ನು ಹೇಳಬಹುದು. ಶ್ರುತಿಗಳಿಗೆ ಏಕೆ ಅನ್ಯಾರ್ಥವನ್ನು ಹಾಗೂ ಅಪ್ರಾಮಾಣ್ಯವನ್ನು ಕಲ್ಪನೆ ಮಾಡಬೇಕು ?

'ವಿರೋಧೇ ತ್ವನಪೇಕ್ಷಂ ಸ್ಯಾತ್ ಅಸತಿ ಹ್ಯನುಮಾನಮ್' ಎಂಬ ಜೈಮಿನಿಸೂತ್ರದಲ್ಲಿ ಇದನ್ನೇ ಸಮರ್ಥಿಸಲಾಗಿದೆ.

ವಿವರಣೆ - ಪೂರ್ವಪಕ್ಷಕಾರರು ಪಾಶುಪತಾದಿಸ್ಮೃತಿಗಳು ಪರಮ ಪ್ರಮಾಣವಾಗಿವೆ. ಇದಕ್ಕನುಗುಣವಾಗಿ ಶ್ರುತಿಗಳಿಗೆ ಅರ್ಥವನ್ನು ಮಾಡಿದಾಗ, ಸಕಲ ಶ್ರುತಿ-ಸ್ಮೃತಿಗಳು ರುದ್ರನ ಜಗತ್‌ಕಾರಣತ್ವವನ್ನೇ ಸಮರ್ಥನೆ ಮಾಡುತ್ತಿದೆ ಎಂದು ಹೇಳುತ್ತಿದ್ದಾರೆ. ಪೂರ್ವಪಕ್ಷಕಾರರ ಮೇಲೆ ಬರುವ ಅಧಿಕ ಆಕ್ಷೇಪವನ್ನು ಇಲ್ಲಿ ಪರಿಹರಿಸಲಾಗಿದೆ -

ಪಾಶುಪತಾದಿಸ್ಮೃತಿಗಳಿಂದ ಶ್ರುತಿಗಳಿಗೆ ವಿರೋಧ ಬರಬಹುದು. ಅಂದಮಾತ್ರಕ್ಕೆ ಅಪ್ರಾಮಾಣ್ಯವನ್ನು ಒಪ್ಪುವ ಅವಶ್ಯಕತೆಯಿಲ್ಲ. ಶ್ರುತಿ ಹೇಳುವ ಅರ್ಥ ಹಾಗೂ ಸ್ಮೃತಿ ಹೇಳುವ

ಅರ್ಥ ಎರಡನ್ನೂ ಸ್ವೀಕರಿಸಿದಾಗ ಏನೂ ಸಮಸ್ಯೆ ಬರುವುದಿಲ್ಲ. ಈ ಆಕ್ಷೇಪಕ್ಕೆ ವಿರುದ್ಧವಾದ ಎರಡು ಸ್ವರೂಪವನ್ನು ಹೇಳಿದಂತಾಗುತ್ತದೆಂಬ ದೋಷವನ್ನು ಹೇಳಿದ್ದಾರೆ.

ರುದ್ರನು ಯಾವ ದೇಶದಲ್ಲಿ ಕಾರಣಪುರುಷನಾಗಿದ್ದಾನೋ, ಆ ದೇಶವನ್ನು ಬಿಟ್ಟು, ಮತ್ತೊಂದು ದೇಶದಲ್ಲಿ ವಿಷ್ಣು ಕಾರಣಪುರುಷನಾಗಿದ್ದಾನೆ. ಅಥವಾ ಈ ಕಾಲದಲ್ಲಿ ರುದ್ರನು ಜಗತ್- ಕಾರಣನಾಗಿದ್ದರೂ ಕೂಡ ಮತ್ತೊಂದು ಕಾಲದಲ್ಲಿ ವಿಷ್ಣುವು ಜಗತ್ ಕಾರಣನಾಗಿದ್ದಾನೆಂದು ಹೇಳಬಹುದು. ಹೀಗೆ ದೇಶ-ಕಾಲಗಳೆಂಬ ಉಪಾಧಿಯ ಭೇದದಿಂದ ವಿರೋಧವನ್ನು ಪರಿಹಾರ ಮಾಡಬಹುದೆಂಬುದು ಅಧಿಕಾಕ್ಷೇಪ. ಆದರೆ ಇದೂ ಕೂಡ ಸರಿಯಲ್ಲ. ಪಾಶುಪತಾದಿಸ್ಮೃತಿಗಳು, ಸಕಲ ದೇಶ, ಸಕಲ ಕಾಲಗಳಲ್ಲಿ ಶಿವನೊಬ್ಬನನ್ನೇ ಜಗತ್‌ಕಾರಣನೆಂದು ಹೇಳುತ್ತಿರುವಾಗ, ಒಂದು ದೇಶ ಅಥವಾ ಒಂದು ಕಾಲದಲ್ಲಷ್ಟೇ ಶಿವನಿಗೆ ಜಗತ್‌ಕಾರಣತ್ವವನ್ನು ಒಪ್ಪುವುದು ಸ್ಮೃತಿ ಸಮ್ಮತವಾಗುವುದಿಲ್ಲ.

ಸ್ಮೃತಿ-ಶ್ರುತಿಗಳ ಪರಸ್ಪರ ವಿರೋಧ ಬಂದರೆ, ಸ್ಮೃತಿಯು ದುರ್ಬಲವಾದ್ದರಿಂದ ಅದಕ್ಕೆ ಅನ್ಯಾರ್ಥವನ್ನು ಕಲ್ಪನೆ ಮಾಡಬೇಕು ಹೊರತು, ಶ್ರುತಿಗೆ ಅನ್ಯಾರ್ಥವನ್ನು ಕಲ್ಪನೆ ಮಾಡಬಾರದು. 'ವಿರೋಧೇ ತ್ವನಪೇಕ್ಷಂ ಸ್ಯಾತ್ ಅಸತಿ ಹ್ಯನುಮಾನಮ್' ಎಂಬ ಜೈಮಿನಿಸೂತ್ರವು ಇದನ್ನೇ ಹೇಳುತ್ತಿದೆ. ಸ್ಮೃತಿಯಿಂದ ವಿರೋಧವು ಪ್ರಾಪ್ತವಾದರೆ, 'ಅನಪೇಕ್ಷಂ' ಶ್ರುತಿಯ ಪ್ರಾಮಾಣ್ಯವನ್ನು ಸ್ವೀಕಾರ ಮಾಡದೇ ಇರುವುದು ತಪ್ಪಾಗುತ್ತದೆ. ಏಕೆಂದರೆ 'ವಿರೋಧೇ ಅಸತಿ' ಸ್ಮೃತಿಗೆ ಶ್ರುತಿಯಿಂದ ವಿರೋಧವಿಲ್ಲದಿದ್ದರೆ ಮಾತ್ರ ಸ್ಮೃತಿಯು 'ಅನುಮಾನಂ' ಅನುಮಾನಪ್ರಮಾಣದ ಮೂಲಕ ಪ್ರಮಾಣವೆನಿಸುತ್ತವೆ ಎಂಬುದು ಈ ಸೂತ್ರದ ಅಭಿಪ್ರಾಯ. ಆದ್ದರಿಂದ ಶ್ರುತಿಯ ವಿರೋಧವು ಬರುವುದರಿಂದ ಸ್ಮೃತಿವಾಕ್ಯಗಳಿಗೆ ಅನ್ಯಾರ್ಥವನ್ನು ಕಲ್ಪನೆ ಮಾಡಬೇಕು ಎಂಬುದು ಪೂರ್ವಪಕ್ಷಕಾರರ ಮೇಲಿರುವ ಆಕ್ಷೇಪ. ಈ ಆಕ್ಷೇಪವನ್ನು ಮುಂದೆ ಪೂರ್ವಪಕ್ಷಕಾರರು ಪರಿಹರಿಸುತ್ತಾರೆ.

ಶ್ರುತಿಗಳಲ್ಲಿರುವ ಅಕ್ಷರಗಳು ಆಕಸ್ಮಿಕ

तत्वप्रकाशिका – प्रबलविरोधेनैव दुर्बलस्यान्यार्थतादेः कल्पनीयत्वात् । न हि स्मृतिभ्यः श्रुतेः प्राबल्यमस्ति । स्मृतीनां रुद्रकपिलकमलासनादिभिरासै-र्विरचितानां दोषाभावगुणयुक्तत्वात् । रुद्रादीनां सार्वज्ञस्य जगद्धितोपदेष्टृत्वस्य च प्रसिद्धत्वात् । श्रुतेश्च कर्तृगुणशून्यत्वेन पिपीलिकालिपिनिभत्वात् ।

ಉತ್ತರ - ಪ್ರಬಲವಾದ ವಿರೋಧ ಬಂದಾಗ ದುರ್ಬಲವಾದದ್ದಕ್ಕೆ ಅನ್ಯಾರ್ಥವನ್ನು ಕಲ್ಪನೆ ಮಾಡಬೇಕು. ಪ್ರಕೃತ ಪಾಶುಪತಾದಿಸ್ಮೃತಿಗಳಿಗಿಂತ ಶ್ರುತಿಗಳಿಗೆ ಪ್ರಾಬಲ್ಯವು ಇರುವುದಿಲ್ಲ. ಏಕೆಂದರೆ ರುದ್ರ, ಕಪಿಲ, ಚತುರ್ಮುಖಬ್ರಹ್ಮ ಮೊದಲಾದ ಆಪ್ತರಿಂದ ಸ್ಮೃತಿಗ್ರಂಥಗಳು ರಚಿತವಾಗಿವೆ. ಆಪ್ತರಾದವರಲ್ಲಿ ದೋಷವಿಲ್ಲದ ಕಾರಣ ಅವರಿಂದ ರಚಿತವಾದ ಸ್ಮೃತಿಗ್ರಂಥಗಳಲ್ಲಿಯೂ ಕೂಡ ದೋಷವು ಇರುವುದಿಲ್ಲ. ರುದ್ರಾದಿಗಳಲ್ಲಿ ಸಾರ್ವಜ್ಞ್ಯ, ಜಗತ್ತಿಗೆ ಹಿತವಾದದ್ದನ್ನು ಉಪದೇಶ ಮಾಡುವಿಕೆ ಇವೇ ಮೊದಲಾದ ಗುಣಗಳು ಪ್ರಸಿದ್ಧವಾಗಿವೆ. ಆದರೆ ಶ್ರುತಿಗಳು ಯಾರಿಂದಲೂ ರಚಿತವಾಗಿರುವುದಿಲ್ಲ. ಇರುವೆಯ ಸಾಲುಗಳಂತೆ ಅಕಸ್ಮಿಕವಾದ ಅಕ್ಷರಗಳ ಜೋಡಣೆಯಾಗಿವೆ. ಆದ್ದರಿಂದಲೇ ದುರ್ಬಲ ಎನಿಸುತ್ತವೆ.

ವಿವರಣೆ - ಪರಸ್ಪರ ವಿರೋಧ ಬಂದರೆ ಅವೆರಡರಲ್ಲಿ ಯಾವುದು ಪ್ರಬಲ ಎಂಬುದನ್ನು ವಿಚಾರ ಮಾಡಬೇಕು. ಪ್ರಬಲವಾದ್ದರಿಂದ ದುರ್ಬಲಕ್ಕೆ ಬಾಧ ಹೇಳಬೇಕೇ ಹೊರತು, ದುರ್ಬಲವಾದ್ದರಿಂದ ಪ್ರಬಲಕ್ಕೆ ಬಾಧವನ್ನು ಹೇಳಲೇಬಾರದು. ಪ್ರಕೃತ ಶ್ರುತಿಯು ವಿಷ್ಣುವಿನ ಜಗತ್ಕಾರಣತ್ವವನ್ನು ಹೇಳುತ್ತಿದೆ. ಸ್ಮೃತಿಯು ರುದ್ರನ ಜಗತ್ಕಾರಣತ್ವವನ್ನು ಹೇಳುತ್ತಿದೆ. ಹೀಗೆ ಶ್ರುತಿ-ಸ್ಮೃತಿಗಳಲ್ಲಿ ಪರಸ್ಪರ ವಿರೋಧವು ಬಂದಿರುವುದರಿಂದ ಯಾವುದಕ್ಕೆ ಬಾಧವನ್ನು ಹೇಳಬೇಕು ಎಂದರೆ ಶ್ರುತಿಗಳಿಗೆ ಬಾಧವನ್ನು ಹೇಳಬೇಕು ಹೊರತು, ಸ್ಮೃತಿಗಳಿಗೆ ಹೇಳಬಾರದು. ಶ್ರುತಿಗಳಿಗಿಂತಲೂ, ಸ್ಮೃತಿಗಳು ಬಲಿಷ್ಠವಾಗಿವೆ. ಜಗತ್ತಿಗೆ ಹಿತವಾದದ್ದಷ್ಟನ್ನೇ ಉಪದೇಶ ಮಾಡುವ ಗುಣಗಳನ್ನು ಹೊಂದಿರುವ ಯಥಾರ್ಥವಾದ ಸಾರ್ವಜ್ಞ್ಯವನ್ನು ಹೊಂದಿರುವ ರುದ್ರಾದಿ ಆಪ್ತರು ಈ ಪಾಶುಪತಾದಿಸ್ಮೃತಿಗಳನ್ನು ರಚನೆ ಮಾಡಿರುತ್ತಾರೆ. ಆದ್ದರಿಂದ ಇವುಗಳಿಗೆ ಅನ್ಯಾರ್ಥವನ್ನು ಕಲ್ಪನೆ ಮಾಡುವುದು ತಪ್ಪಾಗುತ್ತದೆ. ಆದರೆ ಶ್ರುತಿಗಳನ್ನು ಯಾರೊಬ್ಬರೂ ಕೂಡ ರಚನೆ ಮಾಡಿರುವುದಿಲ್ಲವಾದ್ದರಿಂದ ದುರ್ಬಲವಾಗಿವೆ ಎಂದು ಸಿದ್ಧವಾಗುತ್ತದೆ.

ಶ್ರುತಿಗೆ ಮೂಲ ಸ್ಮೃತಿ

तत्वप्रकाशिका – क्वचिच्छ्रुतिविरोधेन स्मृतेरर्थान्तरकल्पनादि तु स्मृतेः श्रुतिमूलत्व एव भवति । मूलमूलिनोर्मूलस्य प्रबलत्वात् ।

ಕೆಲವೆಡೆ ಸ್ಮೃತಿವಿರೋಧ ಬಂದಾಗ ಸ್ಮೃತಿಗೆ ಅನ್ಯಾರ್ಥವನ್ನು ಕಲ್ಪನೆ ಮಾಡುವುದು ಕಂಡಿದೆ. ಆದರೆ ಆ ಸ್ಮೃತಿಯು ಶ್ರುತಿಯನ್ನು ಉಪಜೀವಿಸಿಕೊಂಡಿದ್ದಾಗ ಮಾತ್ರ ಹೀಗೆ

ಅನ್ಯಾರ್ಥವನ್ನು ಕಲ್ಪನೆ ಮಾಡಲಾಗುತ್ತದೆ. ಏಕೆಂದರೆ ಮೂಲ ಹಾಗೂ ಮೂಲಿಗಳಲ್ಲಿ ಮೂಲವೇ ಪ್ರಬಲವಾಗಿರುತ್ತದೆಂಬುದು ನಿಯಮಸಿದ್ಧವಾಗಿದೆ.

ವಿವರಣೆ - ಶ್ರುತಿ-ಸ್ಮೃತಿಗಳಿಗೆ ವಿರೋಧ ಬಂದರೆ ಸ್ಮೃತಿಯೇ ಬಲಿಷ್ಠ ಎಂಬುದು ಸಾಮಾನ್ಯನಿಯಮ. ಕೆಲವೊಮ್ಮೆ ಈ ಸ್ಮೃತಿಯು ದುರ್ಬಲವಾಗುತ್ತದೆ. ಯಾವಾಗ ಸ್ಮೃತಿಯು ಶ್ರುತಿಯನ್ನು ಅವಲಂಬಿಸಿರುತ್ತದೋ, ಆಗ ಶ್ರುತಿಯು ಮೂಲವಾಯಿತು. ಸ್ಮೃತಿಯು ಮೂಲಿಯಾಯಿತು. ಮೂಲ ಹಾಗೂ ಮೂಲಿಗಳಲ್ಲಿ ಮೂಲವೇ ಪ್ರಬಲವೆಂಬುದು ನಿಯಮ. ಆದ್ದರಿಂದ ಸ್ಮೃತಿಯು ಎಲ್ಲಿ ಶ್ರುತಿಯನ್ನು ಅವಲಂಬಿಸಿರುವುದಿಲ್ಲವೋ, ಅಲ್ಲಿ ಮಾತ್ರ ಪ್ರಬಲವಾಗಿರುತ್ತದೆ. ಒಂದು ವೇಳೆ ಶ್ರುತಿಯನ್ನು ಅವಲಂಬಿಸಿದರೆ ಆಗ ಶ್ರುತಿಯನ್ನು ಅವಲಂಬಿಸಿದೆ ಎಂಬ ಕಾರಣದಿಂದಲೇ ಅದು ದುರ್ಬಲವಾಗುತ್ತದೆಂದು ತಿಳಿಯಬೇಕು.

ವಿಷ್ಣುವಿನ ಜಿಜ್ಞಾಸೆಯು ಅನಾವಶ್ಯಕವೆಂದು ಪೂರ್ವಪಕ್ಷ

तत्वप्रकाशिका – न च पाशुपतादिस्मृतीनां श्रुतिमूलत्वम् । रुद्रादिप्रत्यक्षस्यैव तन्मूलत्वात् । अतः पाशुपतादिस्मृतीनामाप्तप्रणीतानां प्रबलत्वेन निरवकाशत्वाच्छ्रुतेश्च तद्विरुद्धाभिधायकत्वेऽप्रामाण्यस्यैव प्रसङ्गान्न तया विष्णोर्जगत्कारणत्वं सिध्यति तस्मान्न तस्य जिज्ञास्यतेति भावः ।। सिद्धान्तांशं व्याचष्टे ।। नेति ।।

ಪಾಶುಪತಾದಿಸ್ಮೃತಿಗಳು ಶ್ರುತಿಮೂಲಕವಲ್ಲ, ರುದ್ರಾದಿಪ್ರತ್ಯಕ್ಷಗಳೇ ಅದಕ್ಕೆ ಮೂಲ ಎನಿಸಿವೆ. ಆದ್ದರಿಂದ ಪಾಶುಪತಾದಿಸ್ಮೃತಿಗಳು ಆಪ್ತಪ್ರಣೀತವಾದ್ದರಿಂಬ ಪ್ರಬಲವಾಗಿವೆ. ಆದ್ದರಿಂದಲೇ ನಿರವಕಾಶವಾಗಿವೆ. ಶ್ರುತಿಗಳು ಇಂಥ ಸ್ಮೃತಿಗಳಿಗೆ ವಿರುದ್ಧವಾದ ವಿಷಯವನ್ನು ಪ್ರತಿಪಾದನೆ ಮಾಡುವುದಾದರೆ ಅಪ್ರಾಮಾಣ್ಯವನ್ನೇ ಹೊಂದುತ್ತವೆ. ಇಂಥ ಅಪ್ರಮಾಣವಾದ ಶ್ರುತಿಗಳಿಂದ ವಿಷ್ಣುವಿಗೆ ಜಗತ್‌ಕಾರಣತ್ವವು ಸಿದ್ಧವಾಗುವುದಿಲ್ಲ. ಆದ್ದರಿಂದ ವಿಷ್ಣುವಿನ ಜಿಜ್ಞಾಸೆಯು ಮಾಡಬೇಕಾಗಿಲ್ಲ. ಇಷ್ಟು ಅಧಿಕರಣದ ಪೂರ್ವಪಕ್ಷ.

ವಿಷ್ಣುವಿನ ಜಿಜ್ಞಾಸೆ ಅತ್ಯವಶ್ಯವೆಂದು ಸಿದ್ಧಾಂತ

तत्वप्रकाशिका – युक्तमेव विष्णोर्जगत्कारणत्वं श्रुत्युदितत्वात् । न च श्रुतेर्विष्णोर्जगत्कारणत्वाभिप्राये पाशुपतादिस्मृतिविरोधेनाप्रामाण्यप्रसङ्गादर्थान्तरत्व-

मिति वाच्यम् । श्रुतिविरोधेन स्मृतीनामेवाप्रामाण्याख्यदोषप्रसङ्गात् ।

ವಿಷ್ಣುವಿಗೆ ಜಗತ್‌ಕಾರಣತ್ವವು ಯುಕ್ತವೇ ಆಗಿದೆ. ಈ ವಿಷಯದಲ್ಲಿ ಶ್ರುತಿಗಳು ಪ್ರಮಾಣವಾಗಿವೆ.

ಪ್ರಶ್ನೆ - ವಿಷ್ಣುವಿನ ಜಗತ್‌ಕಾರಣತ್ವ ವಿಷಯದಲ್ಲಿ ಶ್ರುತಿಪ್ರಮಾಣವನ್ನು ಹೇಳಲು ಸಾಧ್ಯವಿಲ್ಲ. ಈಗಾಗಲೇ ಪೂರ್ವಪಕ್ಷದಲ್ಲಿ ಹೇಳಿದಂತೆ ಪಾಶುಪತಾದಿಸ್ಮೃತಿಗಳ ವಿರೋಧ-ವಿರುವುದರಿಂದ ಶ್ರುತಿಗೆ ಅಪ್ರಾಮಾಣ್ಯಪ್ರಸಂಗವಿದೆ. ಹಾಗಾಗಿ ಅರ್ಥಾಂತರವನ್ನೇ ಹೇಳಬೇಕಲ್ಲವೇ?

ಉತ್ತರ - ಈ ಪ್ರಶ್ನೆ ತಪ್ಪು. ಶ್ರುತಿ ವಿರೋಧವಿರುವುದರಿಂದ ಪಾಶುಪತಾದಿಸ್ಮೃತಿಗಳಿಗೆ ಅಪ್ರಾಮಾಣ್ಯದೋಷ ಬರುತ್ತದೆ.

ಪಾಶುಪತಾದಿ ಸ್ಮೃತಿಗಳಿಗಿಂತಲೂ ಶ್ರುತಿಯಲ್ಲಿ ಆಧಿಕ್ಯವಿದೆ

तत्वप्रकाशिका – न च स्मृतिभ्यः श्रुतेराधिक्याभावेनाबाधकत्वम् । पञ्चरादिस्मृत्यनुकूलत्वेन पाशुपतादिस्मृतिभ्यः श्रुतेराधिक्यसिद्धेः । न च वक्तव्यं पञ्चरात्रादिस्मृत्यानुकूल्येऽपि कथं श्रुतेराधिक्यमिति । तासां विष्ण्वादिभिर्नितरां सर्वज्ञैर्जगद्धितोपदेष्टृभिः प्रणीतत्वात् ।

ಪ್ರಶ್ನೆ - ಸ್ಮೃತಿಗಳಿಗಿಂತ ಶ್ರುತಿಯಲ್ಲಿ ಯಾವುದೇ ಆಧಿಕ್ಯವಿಲ್ಲ. ಆದ್ದರಿಂದ ಸ್ಮೃತಿಗಳನ್ನು ಶ್ರುತಿಗಳು
ಬಾಧಿಸುವುದಿಲ್ಲ.

ಉತ್ತರ - ಪಂಚರಾತ್ರಾದಿಸ್ಮೃತಿಗಳ ಆನುಕೂಲ್ಯವು ಶ್ರುತಿಗಳಿಗಿರುವುದರಿಂದ ಪಾಶುಪತಾದಿ-ಸ್ಮೃತಿಗಳಿಗಿಂತಲೂ ಶ್ರುತಿಗೆ ಆಧಿಕ್ಯವಿರುತ್ತದೆ.

ಪ್ರಶ್ನೆ - ಪಂಚರಾತ್ರಾದಿಸ್ಮೃತಿಗಳಿಂದ ಆನುಕೂಲ್ಯವಿದ್ದ ಮಾತ್ರಕ್ಕೆ ಶ್ರುತಿಯಲ್ಲಿ ಆಧಿಕ್ಯವು ಹೇಗೆ ಸಿದ್ಧವಾಗುತ್ತವೆ ?

ಉತ್ತರ - ಆ ಪಂಚರಾತ್ರಾದಿಸ್ಮೃತಿಗಳು ಸರ್ವಜ್ಞತಮನಾದ ಮಹಾವಿಷ್ಣುವಿನಿಂದ ರಚಿತವಾಗಿವೆ. ಮತ್ತು ಆ ವಿಷ್ಣುವು ಜಗತ್ತಿಗೆ ಅತ್ಯಂತ ಹಿತವಾದದ್ದನ್ನೇ ಉಪದೇಶ ಮಾಡುತ್ತಾನೆ.

ವಿವರಣೆ - ಪೂರ್ವಪಕ್ಷದಲ್ಲಿ ವೇಗಗಳಿಗಿಂತ ಪಂಚರಾತ್ರಾದಿಸ್ಮೃತಿಗಳೇ ಪ್ರಬಲವಾಗಿವೆ ಎಂದು ಆಕ್ಷೇಪ ಮಾಡಲಾಗಿತ್ತು. ಅದಕ್ಕೆ ವಿರುದ್ಧವಾಗಿ ಇಲ್ಲಿ ಶ್ರುತಿಯೇ ಪ್ರಬಲವಾಗಿದೆಯೆಂದು ಸಮರ್ಥನೆ ಮಾಡುತ್ತಿದ್ದಾರೆ. ಪ್ರಬಲವಾದ ಶ್ರುತಿಗಳಿಂದ ವಿರೋಧವಿರುವ ಕಾರಣ ಪಾಶುಪತಾದಿಸ್ಮೃತಿಗಳೆಲ್ಲವೂ ಅಪ್ರಮಾಣವಾಗುತ್ತವೆ. ಪಂಚರಾತ್ರಾದಿಸ್ಮೃತಿಗಳ ಸಹಾಯವಿದ್ದ ಮಾತ್ರಕ್ಕೆ ಶ್ರುತಿಯು ಪಾಶುಪತಾದಿಸ್ಮೃತಿಗಳಿಗಿಂತ ಹೇಗೆ ಪ್ರಬಲವಾಗುತ್ತದೆಂದು ಪೂರ್ವಪಕ್ಷಕಾರರು ಇಲ್ಲಿ ಆಕ್ಷೇಪ ಮಾಡಬಹುದು ಆದರೆ ಪಾಶುಪತಾದಿಸ್ಮೃತಿಗಳನ್ನು ರಚನೆ ಮಾಡುವ ರುದ್ರನಲ್ಲಿ ಎಷ್ಟು ಆಪ್ತತ್ವವಿದೆಯೋ, ಅದಕ್ಕಿಂತಲೂ ಹೆಚ್ಚು ಆಪ್ತತ್ವ ಪಂಚರಾತ್ರಸ್ಮೃತಿಯನ್ನು ರಚನೆ ಮಾಡಿದ ಮಹಾವಿಷ್ಣುವಿನಲ್ಲಿದೆ. ಏಕೆಂದರೆ ರುದ್ರನಿಗಿಂತ ಹೆಚ್ಚಿನ ಸಾರ್ವಜ್ಞ್ಯ ವಿಷ್ಣುವಿನಲ್ಲಿದೆ. ರುದ್ರನಿಗಿಂತ ಹೆಚ್ಚು ಜಗತ್ತಿಗೆ ಹಿತೋಪದೇಶಕತ್ವವೂ ಕೂಡ ವಿಷ್ಣುವಿನಲ್ಲಿದೆ. ಹಾಗಾಗಿ ರುದ್ರಾದಿಗಳಿಗಿಂತ ವಿಷ್ಣು ಹೆಚ್ಚು ಆಪ್ತನಾದ ಕಾರಣ ಪಂಚರಾತ್ರಸ್ಮೃತಿಯು ಪಾಶುಪತಸ್ಮೃತಿಗಿಂತ ಶ್ರೇಷ್ಠವಾಗುತ್ತದೆ. ಇಂಥ ಸ್ಮೃತಿಸಂವಾದವಿರುವ ಪ್ರಯುಕ್ತ ಶ್ರುತಿಯು ಇನ್ನಷ್ಟು ಪ್ರಬಲವಾಗುತ್ತದೆ.

ಪಂಚರಾತ್ರಾದಿಸ್ಮೃತಿಗಳ ಬೆಂಬಲ ಶ್ರುತಿಗಳಿಗಿದೆ

तत्वप्रकाशिका – कुतो विष्ण्वादीनां रुद्रादिभ्योऽप्याप्ततमत्वम् । तदुक्तस्य श्रुतौ संवाददर्शनात्। रुद्राद्युक्तस्य संवादहीनत्वात् । अतो वैष्णवस्मृतीनां परमाप्तैः पुरषोत्तमादिभिः तत्साहाय्यवत्या श्रुत्या विरोधेऽप्रमाण्यप्रसङ्ग इति युक्तमेव विष्णोर्जगत्करणत्वं जिज्ञास्यात्वं चेति भावः ।।

ಪ್ರಶ್ನೆ - ವಿಷ್ಣುವಿಗೆ ರುದ್ರಾದಿಗಳಿಗಿಂತ ಹೆಚ್ಚು ಆಪ್ತತಮತ್ವವು ಹೇಗೆ ಬರುತ್ತದೆ ?

ಉತ್ತರ - ವಿಷ್ಣುವಿನಿಂದ ಹೇಳಲ್ಪಟ್ಟ ವಿಷಯವು ಶ್ರುತಿಸಂವಾದವುಳ್ಳದ್ದಾಗಿದೆ. ರುದ್ರಾದಿಗಳಿಗೆ ಹೇಳಲ್ಪಟ್ಟ ವಿಷಯವು ಶ್ರುತಿಸಂವಾದ ಹೀನವಾಗಿದೆ. ಆದ್ದರಿಂದ ವೈಷ್ಣವಸ್ಮೃತಿಗಳೆನಿಸಿದ ಪಂಚರಾತ್ರಾದಿಗಳೆಲ್ಲವೂ ಪರಮಾಪ್ತತಮನಾದ ಪುರುಷಾಗ್ರಣಿಯಾದ ಮಹಾವಿಷ್ಣುವಿನಿಂದ

ಪ್ರಣೀತವಾದ ಕಾರಣ ನಿರವಕಾಶ ಎನಿಸಿವೆ. ಪಾಶುಪತಾದಿಸ್ಮೃತಿಗಳಿಗೆ ಈ ಪಂಚರಾತ್ರಾದಿ-ಸ್ಮೃತಿಗಳ ವಿರೋಧವು ಬರುವುದರಿಂದ ಅಪ್ರಾಮಾಣ್ಯವೇ ಪ್ರಾಪ್ತವಾಗುತ್ತದೆ. ಹೀಗಿರುವಾಗ ಪಂಚರಾತ್ರಾದಿಸ್ಮೃತಿಗಳ ಸಹಾಯವುಳ್ಳ ಶ್ರುತಿಯಿಂದ ವಿರೋಧವು ಬಂದರೆ ಅಪ್ರಾಮಾಣ್ಯವು ಬಂದೇ ಬರುತ್ತದೆ. ಈ ವಿಷಯದಲ್ಲಿ ಸಂದೇಹವಿಲ್ಲ. ಹೀಗೆ ವಿಷ್ಣುವಿನ ಜಗತ್‌ಕಾರಣತ್ವವು ಯುಕ್ತವಾಗುತ್ತದೆ. ಅವನ ಜಿಜ್ಞಾಸ್ಯತ್ವವೂ ಯುಕ್ತವಾಗುತ್ತದೆ.

ಮಂತ್ರಾಲಯ ಪ್ರಭುಗಳಾದ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ

ಭಾವದೀಪ

भावदीपः –

श्रीमद्धनुमद्भीममध्वान्तर्गतरामकृष्णवेदव्यासात्मकक्ष्मीहबग्रीवाय नमः।

ಮಂಗಳಾಚರಣೆ

यत्पादपद्मे संस्मृत्य लोकोऽवद्यान्यवद्यति ।
तं वन्दे परमा(नन्द)त्मानमिन्दिरामन्दिरोरसम्॥ १ ॥

ಯಾರ ಪಾದಪದ್ಮಗಳನ್ನು ಸ್ಮರಣೆ ಮಾಡುವ ಮಾತ್ರದಿಂದ ಲೋಕವು ದೋಷದಿಂದ ಮುಕ್ತವಾಗುತ್ತದೋ, ಯಾರ ವಕ್ಷಃಸ್ಥಳದಲ್ಲಿ ಇಂದಿರೆಯು ಮನೆ ಮಾಡಿರುವಳೋ ಅಂತಹ ಪರಮಾನಂದರೂಪಿಯಾದ ಪರಮಾತ್ಮನನ್ನು ಭಕ್ತಿಯಿಂದ ನಮಿಸುವೆ.

'ಉಕ್ತೇ ಅರ್ಥೇ' ಇತ್ಯಾದಿ ಭಾಷ್ಯಕ್ಕೆ ವ್ಯಾಖ್ಯಾನ

भावदीपः – स्मृत्यनवकाशदोषप्रसङ्ग इति चेन्नान्यस्मृत्यनवकाश-दोषप्रसङ्गात् ।। १ ।। उक्तेऽर्थ इत्यादेरुपयोगस्यास्पष्टत्वादाह – **पूर्वाध्यायेति।।** अर्थेति ग्राह्यम्। उक्तेऽर्थे मानोक्तिं विना अविरोधोक्तिरसङ्गतेत्यतो व्याचष्टे – **अशेषेति।।**

'ಸ್ಮೃತ್ಯನವಕಾಶದೋಷಪ್ರಸಂಗಃ ಇತಿ ಚೇನ್ನಾನ್ಯಸ್ಮೃತ್ಯನವಕಾಶದೋಷಪ್ರಸಂಗಾತ್' ಎಂಬ ಸೂತ್ರದಿಂದ ಎರಡನೇ ಅಧ್ಯಾಯವು ಪ್ರಾರಂಭವಾಗುತ್ತಿದೆ. ಭಾಷ್ಯದಲ್ಲಿ 'ಉಕ್ತೇ ಅರ್ಥೇ' 'ಅವಿರೋಧಂ ದರ್ಶಯತಿ' ಎಂದು ಹೇಳಿದ್ದಾರೆ. ಹಿಂದೆ ಹೇಳಿದ ಯಾವ ಅರ್ಥವೆಂಬುದು ಇದರಿಂದ ಸ್ಪಷ್ಟವಾಗುವುದಿಲ್ಲ. ಆದ್ದರಿಂದ ಈ ಭಾಷ್ಯದ ಮಾತಿಗೆ ಸ್ಪಷ್ಟವಾದ ಅರ್ಥವನ್ನು ತಿಳಿಸುವುದಕ್ಕಾಗಿ ಟೀಕೆಯಲ್ಲಿ 'ಪೂರ್ವಾಧ್ಯಾಯಾರ್ಥಸಂಗತತ್ವೇನ' ಎಂದು ಹೇಳಿದ್ದಾರೆ. ಇಲ್ಲಿ 'ಪೂರ್ವಾಧ್ಯಾಯಾರ್ಥಸಂಗತತ್ವೇನ' ಎಂಬುದಾಗಿ ಅರ್ಥಪದವನ್ನು ಸೇರಿಸಿ ಪಠನ ಮಾಡಬೇಕು. ಹಿಂದಿನ ಅಧ್ಯಾಯದ ಯಾವ ಅರ್ಥವಿದೆಯೋ ಅದಕ್ಕೆ ಸಂಗತವಾಗುವಂತೆ ಎರಡನೇ ಅಧ್ಯಾಯದ ಅರ್ಥವನ್ನು 'ಉಕ್ತೇ ಅರ್ಥೇ' ಎಂಬ ಭಾಷ್ಯದ ಮಾತಿನಲ್ಲಿ ತೋರಿಸುತ್ತಿದ್ದಾರೆ. ಹಿಂದಿನ ಅಧ್ಯಾಯದಲ್ಲಿ ಯಾವ ಅರ್ಥವನ್ನು ಹೇಳಲಾಗಿದೆಯೋ ಅದಕ್ಕೆ ಪ್ರಮಾಣವನ್ನು ಹೇಳದೇ ಎರಡನೇ ಅಧ್ಯಾಯದಲ್ಲಿ ಅವಿರೋಧವನ್ನು ಹೇಳುವುದು ಅಸಂಗತವಾಗುತ್ತದಲ್ಲವೇ? ಎಂಬ ಪ್ರಶ್ನೆ ಸಹಜವಾಗಿ ಬರುತ್ತದೆ. ಆದಕ್ಕಾಗಿ ಭಾಷ್ಯದ ಮಾತನ್ನೇ ಮತ್ತಷ್ಟು ಸ್ಪಷ್ಟವಾಗಿ ವ್ಯಾಖ್ಯಾನ ಮಾಡಲು 'ಅಶೇಷಶಾಸ್ತ್ರ' ಇತ್ಯಾದಿ ಟೀಕಾಪಂಕ್ತಿಯು ಹೊರಟಿದೆ.

ಪ್ರಥಮಾಧ್ಯಾಯಾರ್ಥದಲ್ಲಿ ಅಶೇಷಶಾಸ್ತ್ರಗಳೇ ಆಧಾರ

ಭಾವದೀಪಃ – स्वरवर्णपदवाक्यात्मकाशेषशास्त्रस्य शक्तितात्पर्याभ्यां कारणत्वादिना भगवत्प्रमाजनकत्वेनेत्यर्थः॥ **कर्तेति**॥ उक्तदिशाऽनन्तगुणत्वं चोपलक्ष्यते । उक्तं च संक्षेपभाष्ये उक्ता गुणाश्चाविरुद्धास्तस्य वेदेन सर्वश इति॥ **प्रतिपादित इति**॥ न्यायैरुपपादित इत्यर्थः।

ಹಿಂದಿನ ಅಧ್ಯಾಯದಲ್ಲಿ ಯಾವ ಅರ್ಥವು ಹೇಳಲ್ಪಟ್ಟಿತೋ ಅದಕ್ಕೆ ಅಶೇಷಶಾಸ್ತ್ರಗಳೇ ಆಧಾರವಾಗಿವೆ. ಅಶೇಷ ಶಾಸ್ತ್ರದಲ್ಲಿರುವ ಪ್ರತಿಯೊಂದು ಸ್ವರಗಳು, ವರ್ಣಗಳು, ಪದಗಳು, ವಾಕ್ಯಗಳು ಶಕ್ತಿ ಹಾಗೂ ತಾತ್ಪರ್ಯಗಳಿಂದ ಕೂಡಿದವುಗಳಾಗಿ ಭಗವಂತನ ಜಗಜ್ಜನ್ಮಾದಿಕಾರಣತ್ವವನ್ನು ಪ್ರತಿಪಾದನೆ ಮಾಡುತ್ತಿವೆ. ಏತನ್ಮೂಲಕವಾಗಿಯೇ ಭಗವತ್‌ಪ್ರಮಾಜನಕವಾಗಿವೆ. ಹೀಗೆ ಪ್ರಥಮಾಧ್ಯಾಯದಲ್ಲಿ ಉಪಪಾದನೆ ಮಾಡಿದ್ದಾಗಿದೆ. ಆದ್ದರಿಂದ ಪ್ರಥಮಾಧ್ಯಾಯದಲ್ಲಿ ಯಾವುದೇ ಪ್ರಮಾಣವೇ ಇಲ್ಲ ಎಂಬ ಆಕ್ಷೇಪಕ್ಕೆ ಅವಕಾಶವಿಲ್ಲ.

ಜಗಜ್ಜನ್ಮಾದಿಕರ್ತಾ ಎಂಬುದರಿಂದ ಅನಂತಗುಣಪರಿಪೂರ್ಣತ್ವವನ್ನು ಉಪಲಕ್ಷಣಯಾ ವಿವಕ್ಷಿಸಬೇಕು. ಇದನ್ನೇ ಅನುಭಾಷ್ಯದಲ್ಲಿ 'ಉಕ್ತಾ ಗುಣಾಶ್ಚಾವಿರುದ್ಧಾಸ್ತಸ್ಯ ವೇದೇನ ಸರ್ವಶಃ' ಸಮಸ್ತ

ವೇದಗಳಿಂದ ತಿಳಿಯುವ ಗುಣಪರಿಪೂರ್ಣತ್ವವು ಪ್ರಥಮಾಧ್ಯಾಯದ ಅರ್ಥವೆಂದು ಹೇಳಿರುತ್ತಾರೆ. 'ಪ್ರತಿಪಾದಿತಃ' ಎಂಬುದಕ್ಕೆ ನ್ಯಾಯಗಳಿಂದ ಉಪಪಾದನೆ ಮಾಡಲಾಗಿದೆ ಎಂಬರ್ಥವನ್ನು ವಿವಕ್ಷಿಸಬೇಕು.

ಪ್ರಥಮಾಧ್ಯಾಯಕ್ಕೂ ದ್ವಿತೀಯಾಧ್ಯಾಯಕ್ಕೂ ಪರಸ್ಪರ ಸಂಗತಿ

ಭಾವದೀಪಃ – न प्रेक्षावदिति नञो न स्यादिति क्रियया अन्वयः॥ **अत इति ।।** अविरोध एवोक्तार्थस्योपादेयत्वसम्भवादित्यर्थः। अनेन पूर्वाध्यायः एतन्निरसनीयविरोधशङ्काविषयभूतार्थोपस्थापकतयाऽस्य हेतुः। अयं वोक्तार्थे विरोधनिरासेनोक्तार्थस्थैर्यसाधकत्वात्तस्य हेतुरित्यध्याययोर्हेतुहेतुमद्भावरूपा सङ्गतिरुक्तेति ध्येयम्।

'न प्रेक्षावत्' ಎಂಬ ಟೀಕಾವಾಕ್ಯದಲ್ಲಿರುವ ನಞ್ ಗೆ 'स्यात्' ಎಂಬ ಕ್ರಿಯೆಯ ಜೊತೆ ಅನ್ವಯವನ್ನು ಮಾಡಬೇಕು. ಆಗ ಪ್ರೇಕ್ಷಾವಂತರು ಸ್ವೀಕಾರ ಮಾಡಲಾರರು ಎಂಬರ್ಥವನ್ನು ಹೇಳಿದಂತಾಗುತ್ತದೆ. 'अतः' ಎಂಬ ಪದಕ್ಕೆ ವಿರೋಧ ಇಲ್ಲದಿದ್ದರೆ ಮಾತ್ರ ಪ್ರಥಮಾಧ್ಯಾಯದ ಅರ್ಥವು ಉಪಾದೇಯವಾಗುತದೆ ಎಂದರ್ಥ. 'अतः' ಇತ್ಯಾದಿ ವಾಕ್ಯದಿಂದ ಹಿಂದಿನ ಅಧ್ಯಾಯಕ್ಕೂ, ಈ ಅಧ್ಯಾಯಕ್ಕೂ ಸಂಗತಿಯನ್ನು ಹೇಳಿರುತ್ತಾರೆ. ಅದು ಹೀಗೆ – ಪ್ರಥಮಾಧ್ಯಾಯವು ಈ ಅಧ್ಯಾಯದಿಂದ ಪರಿಹಾರ ಮಾಡಲ್ಪಡುವ ಯಾವ ವಿರೋಧ ಶಂಕೆಗಳು ಇವೆಯೋ ಅದಕ್ಕೆ ವಿಷಯೀಭೂತವಾದ ಅರ್ಥವನ್ನು ಉಪಸ್ಥಾಪನೆ ಮಾಡುತ್ತಿದೆ. ಆದ್ದರಿಂದ ದ್ವಿತೀಯಾಧ್ಯಾಯಕ್ಕೆ ಪ್ರಥಮಾಧ್ಯಾಯವು ಹೇತುವಾಗಿದೆ. ಅಥವಾ ಪ್ರಥಮಾಧ್ಯಾಯದಲ್ಲಿ ಯಾವ ಜಗಜ್ಜನ್ಮಾದಿಕಾರಣತ್ವ ಮತ್ತು ಗುಣಪರಿಪೂರ್ಣತ್ವವನ್ನು ಸಮರ್ಥನೆ ಮಾಡಲಾಯಿತೋ ಈ ವಿಷಯದಲ್ಲಿ ಪ್ರಾಪ್ತವಾಗುವ ವಿರೋಧವನ್ನು ಎರಡನೇ ಅಧ್ಯಾಯವು ಪರಿಹಾರ ಮಾಡುತ್ತಿದೆ. ಆದ್ದರಿಂದಲೇ ಪ್ರಥಮಾಧ್ಯಾಯದ ಅರ್ಥವು ದೃಢವಾಗಿ ಸಾಧಿತವಾಗುತ್ತದೆ. ಆದ್ದರಿಂದ ದ್ವಿತೀಯಾಧ್ಯಾಯವು ಪ್ರಥಮಾಧ್ಯಾಯಕ್ಕೆ ಹೇತುವಾಗಿದೆ. ಹೀಗೆ ಪ್ರಥಮಾಧ್ಯಾಯಕ್ಕೆ ಹಾಗೂ ದ್ವಿತೀಯಾಧ್ಯಾಯಕ್ಕೆ ಪರಸ್ಪರ ಹೇತುಹೇತುಮದ್ಭಾವ-ರೂಪವಾದ ಸಂಗತಿಯನ್ನು ಹೇಳಿದಂತಾಯಿತು.

ನ್ಯಾಯಸುಧೆಗೂ ತತ್ತ್ವಪ್ರಕಾಶಿಕೆಗೂ ಸಂಗತಿ ವಿಷಯದಲ್ಲಿ ಒಂದು ಸಣ್ಣ ವ್ಯತ್ಯಾಸ

ಭಾವದೀಪಃ – विवृता चैवमेव सुधायां सङ्गतिः। परं तु उक्तः समन्वयः साक्षादविरोधोऽत्र साध्यत इत्यनुभाष्यसुधयोः समन्वयप्राधान्येन सङ्गतिरुक्ता। अत्र तु भाष्यटीकयोः समन्वयार्थप्राधान्येनेत्येव भेदः।

ಮೇಲೆ ಹೇಳಿದಂತೆ ಹೇತುಹೇತುಮದ್ಭಾವರೂಪವಾದ ಸಂಗತಿಯನ್ನೇ ನ್ಯಾಯಸುಧೆಯಲ್ಲಿ ವಿವರಣೆ ಮಾಡಿದ್ದಾರೆ. ಆದರೆ ಅನುವ್ಯಾಖ್ಯಾನ-ನ್ಯಾಯಸುಧೆಗಳಿಗೂ ಪ್ರಕೃತ ಭಾಷ್ಯ-ಟೀಕೆಗಳಿಗೂ ಒಂದು ವ್ಯತ್ಯಾಸವಿದೆ– ಹಿಂದಿನ ಅಧ್ಯಾಯದಲ್ಲಿ ಸಕಲ ಶಬ್ದಗಳ ಸಮನ್ವಯವು ಸಾಧಿತವಾಗಿದೆ. ಈ ವಿಷಯದಲ್ಲಿ ಪ್ರಾಪ್ತವಾಗುವ ವಿರೋಧವನ್ನು ಸಾಕ್ಷಾತ್ತಾಗಿ ಎರಡನೇ ಅಧ್ಯಾಯವು ಪರಿಹಾರ ಮಾಡುತ್ತಿದೆ ಎಂಬುದಾಗಿ ಸಮನ್ವಯಪ್ರಾಧಾನ್ಯದ ವಿವಕ್ಷೆಯಿಂದ ಸಂಗತಿಯನ್ನು ಹೇಳಿದ್ದಾರೆ. ಆದರೆ ಈ ಭಾಷ್ಯ ಹಾಗೂ ಟೀಕೆಯಲ್ಲಿ ಸಮನ್ವಯದಿಂದ ಸಿದ್ಧವಾಗುವ ಜಗತ್ಕಾರಣತ್ವ ಹಾಗೂ ಗುಣಪರಿಪೂರ್ಣತ್ವವನ್ನೇ ಪ್ರಧಾನವನ್ನಾಗಿ ವಿವಕ್ಷಿಸಿ ಸಂಗತಿಯನ್ನು ಹೇಳಿರುತ್ತಾರೆ. ಈ ಒಂದು ಸಣ್ಣ ವ್ಯತ್ಯಾಸವನ್ನು ಗಮನಿಸಬೇಕು.

ಪ್ರಥಮಾಧ್ಯಾಯದಲ್ಲೂ ಕೆಲವು ಸೂತ್ರಗಳು ವಿರೋಧವನ್ನು ಪರಿಹರಿಸುತ್ತವಲ್ಲವೇ?

ಭಾವದೀಪ: – यद्यपि विकारशब्दान्नेति चेन्न प्राचुर्यात् उपदेशभेदान्नेति चेन्नोभयस्मिन्नप्यविरोधात् साक्षादप्यविरोधं जैमिनिः कल्पनोपदेशाच्च मध्वादिवदविरोध इत्यादिभिर्विरोधाभावं पूर्वत्राप्यदर्शयत्सूत्रकारः।

ವಾಸ್ತವಿಕವಾಗಿ 'ವಿಕಾರಶಬ್ದಾನ್ನೇತಿ ಚೇನ್ನ ಪ್ರಾಚುರ್ಯಾತ್', 'ಉಪದೇಶಭೇದಾನ್ನೇತಿ ಚೇನ್ನೋಭಯಸ್ಮಿನ್ನಪ್ಯ ವಿರೋಧಾತ್', 'ಸಾಕ್ಷಾದಪ್ಯವಿರೋಧಂ ಜೈಮಿನಿಃ', 'ಕಲ್ಪನೋಪದೇಶಾಚ್ಚ ಮಧ್ವಾದಿವವಿರೋಧಃ' ಇವೇ ಮೊದಲಾದ ಪ್ರಥಮಾಧ್ಯಾಯದಲ್ಲಿ ಪ್ರಸಕ್ತವಾಗುವ ಸೂತ್ರಗಳಲ್ಲೂ ಕೂಡ ವಿರೋಧಗಳನ್ನು ಸೂತ್ರಕಾರರೇ ಪರಿಹರಿಸಿದ್ದಾರೆ. ಹೀಗಿರುವಾಗ ಕೇವಲ ಸಮನ್ವಯವನ್ನಷ್ಟೇ ಪ್ರಥಮಾಧ್ಯಾಯದಲ್ಲಿ ಮಾಡಲಾಗಿದೆ ಎಂದು ಹೇಳಲು ಸಾಧ್ಯವಿಲ್ಲ. ಮತ್ತು ಈ ಅಧ್ಯಾಯದಲ್ಲಿ ಮಾತ್ರ ವಿರೋಧವನ್ನು ಪರಿಹರಿಸಲಾಗಿದೆ ಎಂದು ಹೇಳಲು ಸಾಧ್ಯವಿಲ್ಲ, ಅಲ್ಲವೇ?

ಈ ಅಧ್ಯಾಯದಲ್ಲಿ ಎಲ್ಲಾ ಸೂತ್ರಗಳೂ ವಿರೋಧ ಪರಿಹಾರಕ

ಭಾವದೀಪ: – तथापि क्वचित्क्वचिदेवात्र तु सर्वथेति सुधायामेव व्यक्तम्। युक्तीत्युक्त्या सूचिश्रुतावान्तरभेदं वक्ष्यमाणद्वितीयादिपादाद्यभाष्यदिशा विभज्यात्र दर्शयन्नत्र बीजमाह – **उक्तेऽर्थे**इति।।

ಹೌದು. ಪ್ರಥಮಾಧ್ಯಾಯದಲ್ಲಿ ಕೆಲವು ಸೂತ್ರಗಳು ಮಾತ್ರ ವಿರೋಧವನ್ನು ಪರಿಹರಿಸಿವೆ. ಈ ದ್ವಿತೀಯಾಧ್ಯಾಯದಲ್ಲಿ ಎಲ್ಲಾ ಸೂತ್ರಗಳೂ ಕೂಡ ವಿರೋಧವನ್ನು ಪರಿಹರಿಸಿವೆ. ಆದ್ದರಿಂದ ಇವುಗಳಿಗೆ 'ಅವಿರೋದ' ಎಂಬ ಹೆಸರು ಸಾರ್ಥಕವಾಗಿವೆ. ಈ ವಿಷಯವನ್ನು ನ್ಯಾಯಸುಧಾದಲ್ಲೇ ಸ್ಪಷ್ಟಪಡಿಸಿದ್ದಾರೆ.

ಭಾಷ್ಯದಲ್ಲಿ 'ಯುಕ್ತ್ಯವಿರೋಧಂ' ಎಂದಿದ್ದಾರೆ. ಇದರಿಂದ ಎರಡನೇ ಅಧ್ಯಾಯದಲ್ಲಿರುವ ನಾಲ್ಕು ಪಾದಗಳಲ್ಲಿ ಅವಾಂತರಭೇದವು ಸೂಚಿತವಾಯಿತು. ಮುಂದೆ ಎರಡು, ಮೂರು ಹಾಗೂ ನಾಲ್ಕನೇ ಪಾದಗಳಲ್ಲಿ ಭಾಷ್ಯಕಾರರೇ ಈ ಅವಾಂತರ ಭೇದಕ್ಕೆ ಕಾರಣವನ್ನು ತೋರಿಸುತ್ತಾರೆ. ಅದರ ಆಧಾರದಲ್ಲಿ ಪ್ರಕೃತ ಟೀಕಾಕಾರರು ವಿರೋಧಗಳನ್ನು ವಿಭಾಗ ಮಾಡಿ . ಯುಕ್ತಿಯ ವಿರೋಧ ಪರಿಹಾರಕ್ಕೆ ಪ್ರಾಥಮ್ಯವನ್ನೂ ಕೂಡ 'ಉಕ್ತೇ ಅರ್ಥೇ' ಇತ್ಯಾದಿ ವಾಕ್ಯದಿಂದ ಸಮರ್ಥನೆ ಮಾಡುತ್ತಿದ್ದಾರೆ.

ಶೈವ ಸ್ಮೃತಿಗಳೂ ಕೂಡ ಯುಕ್ತಿ ಸಮಯಾದಿ ರೂಪ

ಭಾವದೀಪಃ – ದ್ವಿವಿಧೇತಿ ।। ಕೇವಲಶ್ರುತಿಯುಕ್ತಿಯುಕ್ತಶ್ರುತಿಭೇದಾದಿತ್ಯರ್ಥಃ । ಕ್ವಚಿತ್ತು ಶ್ರುತಿನ್ಯಾಯೋಪೇತಶ್ರುತಿವಿರೋಧೇತಿ ಪಾಠಃ। ಸ್ಮೃತ್ಯವಿರೋಧೋಕ್ತೇಃ ಅಸಾಙ್ಗತ್ಯಮಾಶಙ್ಕ್ಯ ವ್ಯಾಚಷ್ಟೇ – **ಯದ್ಯಪೀತ್ಯಾದಿನಾ ।। ಯುಕ್ತೀತಿ ।।** ಶೈವಾದಿಸ್ಮೃತಯಃ ಸ್ವಯಮಭಿಯುಕ್ತವಾಕ್ಯತಯಾ ಸ್ಮೃತಿ (ಸಮಯ) ರೂಪಾ ಅಪಿ ಸ್ವೋಕ್ತಾರ್ಥೇ ಯುಕ್ತೀಃ ಶ್ರುತೀಶ್ಚ ಸಂವಾದಯನ್ತೀತಿ ಯುಕ್ತಿಸಮಯಾದಿರೂಪತ್ವೇನೇತ್ಯುಕ್ತಮ್ ।।

ಟೀಕೆಯಲ್ಲಿ 'ದ್ವಿವಿಧಶ್ರುತಿವಿರೋಧಭೇದಾತ್' ಎಂದು ಹೇಳಿದ್ದಾರೆ. ಕೇವಲ ಶ್ರುತಿಯಿಂದ ಕೂಡಿದ ವಿರೋಧ, ಯುಕ್ತಿಯಿಂದ ಸಹಿತವಾದ ಶ್ರುತಿಗಳ ವಿರೋಧ ಎಂಬುದು ಇದರ ಅರ್ಥ. ಕೆಲವೊಂದು ಪುಸ್ತಕಗಳಲ್ಲಿ ಶ್ರುತಿ, ನ್ಯಾಯೋಪೇತಶ್ರುತಿವಿರೋಧ ಎಂಬ ಪಾಠವಿದೆ. ಈ ಪಾಠವೂ ಕೂಡ ಗ್ರಾಹ್ಯವೇ ಆಗಿದೆ.

ಈ ಅಧಿಕರಣದಲ್ಲಿ ಸ್ಮೃತಿವಿರೋಧವನ್ನು ಪರಿಹರಿಸುತ್ತಿರುವುದು ಅಸಂಗತವಾಗಿದೆ. ಏಕೆಂದರೆ ಯುಕ್ತಿ ವಿರೋಧವನ್ನಷ್ಟೇ ಈ ಪಾದದಲ್ಲಿ ಪರಿಹರಿಸಬೇಕಲ್ಲವೇ? ಈ ಆಶಂಕೆಗೆ 'ಯದ್ಯಪಿ' ಇತ್ಯಾದಿ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

'ಯುಕ್ತಿಸಮಯಾದಿರೂಪತ್ವೇನ' ಎಂಬುದರ ಅಭಿಪ್ರಾಯ ಹೀಗಿದೆ– ಶೈವಾದಿ ಸ್ಮೃತಿಗಳು ಸ್ವತಃ ಅಭಿಯುಕ್ತ ವಾಕ್ಯವಾಗಿರುವುದರಿಂದ ಸಮಯರೂಪವೇ ಆಗಿವೆ. ಆದರೆ ತಾವು ಹೇಳಿದ ಅರ್ಥದಲ್ಲಿ ಯುಕ್ತಿಯನ್ನು ಹಾಗೂ ಶ್ರುತಿಯನ್ನು ಸಂವಾದ ಪ್ರಮಾಣವನ್ನಾಗಿ ಉಲ್ಲೇಖ ಮಾಡುವುದರಿಂದ ಟೀಕೆಯಲ್ಲಿ ಶೈವಾದಿಸ್ಮೃತಿಗಳನ್ನು ಯುಕ್ತಿರೂಪ ಹಾಗೂ ಸಮಯರೂಪವೆಂದು ಉಲ್ಲೇಖ ಮಾಡಿದ್ದಾರೆ.

ಮಹಾಮಲ್ಲಭಂಗನ್ಯಾಯದಿಂದ ಸ್ಮೃತ್ಯಧಿಕರಣಕ್ಕೆ ಸಂಗತಿ

ಭಾವದೀಪಃ – ಪ್ರಾಥಮ್ಯೇತಿ ।। ಮಹಾಮಲ್ಲಭಙ್ಗನ್ಯಾಯೇನೈಕೈಕವಿರೋಧನಿರಾಸಕಾತ್ಪ್ರಾಥಮ್ಯೋಪಪತ್ತೇ–

रित्यर्थः॥ **न कोऽपीति**॥ अध्याये पादेऽनन्तर्भावदोषो वा अप्राथम्यदोषो वा नेत्यर्थः॥

'प्राथम्योपपत्तेः' ಎಂದು ಟೀಕೆಯಲ್ಲಿ ಹೇಳಿದ್ದಾರೆ. ಈ ಸ್ಮೃತ್ಯಧಿಕರಣವು ಯುಕ್ತಿ ಸಮಯಾದಿ ರೂಪವಾಗಿರುವುದರಿಂದ ಅತ್ಯಂತ ಬಲಿಷ್ಠವಾಗಿದೆ. ಮಹಾಮಲ್ಲಭಂಗನ್ಯಾಯವನ್ನು ಅನುಸರಿಸಿ ಬಲಿಷ್ಠವಾದ ಈ ವಿರೋಧವನ್ನು ಮೊದಲೇ ಪರಿಹರಿಸುವುದು ಯುಕ್ತವಾಗಿದೆ ಎಂಬ ಅಭಿಪ್ರಾಯದಿಂದ ಇದಕ್ಕೆ ಪ್ರಾಥಮ್ಯವು ಯುಕ್ತವಾಗುತ್ತದೆ ಎಂದರ್ಥ.

'न कोपि दोषः' ಎಂದು ಟೀಕೆಯಲ್ಲಿ ಹೇಳಿದ್ದಾರೆ. ಈ ಸ್ಮೃತ್ಯಧಿಕರಣಕ್ಕೆ ಪಾದಾರ್ಥತ್ವವು ಇರುವುದರಿಂದ ಪ್ರಥಮ ಪಾದದಲ್ಲಿ ಅಂತರ್ಭಾವ ಆಗುವುದಿಲ್ಲ ಎಂಬ ದೋಷವಾಗಲೀ, ಅಥವಾ ಪ್ರಥಮ ಪಾದದಲ್ಲಿ ಮೊದಲು ಅಂತರ್ಭಾವ ಹೊಂದುವುದಿಲ್ಲ ಎಂಬ ದೋಷವಾಗಲಿ ಬರುವುದಿಲ್ಲ ಎಂಬುದು ಇದರ ಅರ್ಥ.

ಈ ಅಧಿಕರಣಕ್ಕೆ ಎಲ್ಲಾ ಬಗೆಯ ಸಂಗತಿಗಳೂ ಇವೆ ಮತ್ತು ಫಲವೂ ಇದೆ

भावदीपः – अनेनेति॥ प्रथमत इति भाष्येण । शैवादिस्मृतिविरोधस्य युक्त्यादिविरोधरूपत्वात् हरेर्जगज्जन्मादिकर्तृत्वे युक्त्यादिविरोधात्मकस्मृतिविरोधपरिहारकथनाच्छास्त्राध्यायपादसङ्गतिरित्युक्तं भवतीत्यर्थः । श्रुत्यधिकरणसङ्गतौ आह – **वेदेति**॥ जन्मादिसूत्रे यतो वा इमानि भूतानीत्यादिवेदवाक्यानां कारणतया विष्णोरेव प्रमापकत्वेनेत्यर्थः। एतेनैतद्विचारस्य फलमपि दर्शितं भवति।

'ಅನೇನ' ಎಂಬುದಕ್ಕೆ 'ಪ್ರಥಮತಃ' ಭಾಷ್ಯದ ಮಾತಿನಿಂದ ಎಂದರ್ಥ. ಶೈವಾದಿ ಸ್ಮೃತಿಗಳ ವಿರೋಧವು ಯುಕ್ತಿ ಸಮಯಾದಿ ವಿರೋಧರೂಪವೂ ಆಗಿರುತ್ತದೆ. ಆದ್ದರಿಂದ ಶ್ರೀಹರಿಯು ಜಗಜ್ಜನ್ಮಾದಿಕಾರಣನಾಗಿದ್ದಾನೆ ಎಂಬ ವಿಷಯದಲ್ಲಿ ಯುಕ್ತಿಸಮಯಾದಿವಿರೋಧ ರೂಪವಾದ ಸ್ಮೃತಿವಿರೋಧ ಪರಿಹಾರವನ್ನು ಹೇಳಲು ಈ ಅಧಿಕರಣ ಹೊರಟಿದೆ. ಆದ್ದರಿಂದಲೇ ಶಾಸ್ತ್ರದಲ್ಲಿ, ಅಧ್ಯಾಯದಲ್ಲಿ ಪಾದದಲ್ಲಿ ಸ್ಮೃತ್ಯಧಿಕರಣವು ಸಂಗತವಾಗುತ್ತದೆ ಎಂಬುದನ್ನು 'शास्त्रादिसंगतिः उक्ता भवति' ಎಂಬ ಟೀಕಾ ಮಾತಿನಲ್ಲಿ ಹೇಳಿರುತ್ತಾರೆ.

ಈ ಅಧಿಕರಣಕ್ಕೆ ಶ್ರುತಿಸಂಗತಿ, ಅಧಿಕರಣಸಂಗತಿಗಳನ್ನು ಉಪಪಾದನೆ ಮಾಡಲು 'ವೇದಪ್ರಾಮಾಣ್ಯೇನ' ಇತ್ಯಾದಿ ಟೀಕಾ ವಾಕ್ಯವು ಹೊರಟಿದೆ. ಜನ್ಮಾದಿ ಸೂತ್ರದಲ್ಲಿ 'ಯತೋ ವಾ ಭೂತಾನಿ' ಇತ್ಯಾದಿ ವೇದವಾಕ್ಯಗಳು ವಿಷ್ಣುವೇ ಜಗತ್ಕಾರಣನಾಗಿದ್ದಾನೆ ಎಂದು ಹೇಳುತ್ತವೆ ಎಂಬುದಾಗಿ ಸಮರ್ಥನೆ ಮಾಡಲಾಯಿತು. ಈ ಅಧಿಕರಣದಿಂದ ವಿರೋಧ ಪರಿಹರಿಸಿದಾಗ ಈ ಪ್ರಮೇಯವು ಸಿದ್ಧವಾಗುತ್ತದೆ. ಆದ್ದರಿಂದ ಸ್ಮೃತಿವಿರೋಧಪರಿಹಾರಕ್ಕೆ ಫಲವನ್ನೂ ಕೂಡ ತೋರಿಸಿದಂತಾಯಿತು. ಹೀಗೆ ಎಲ್ಲಾ ಬಗೆಯ ಸಂಗತಿಗಳು ಹಾಗೂ ಅಧಿಕರಣದ ಫಲವು ಸ್ಮೃತ್ಯಧಿಕರಣಕ್ಕೆ ಇದೆ ಎಂದು ಟೀಕೆಯಲ್ಲಿ ನಿರೂಪಣೆ ಮಾಡಿದ್ದಾರೆ.

ಸೂತ್ರದಲ್ಲಿರುವ ಸ್ಮೃತಿ ಪದಕ್ಕೆ ವ್ಯಾಖ್ಯಾನ

ಭಾವದೀಪ: – अस्य शास्त्रयोनिसूत्रादगतार्थत्वं तत्रैव चन्द्रिकायां व्यक्तम्। भाष्यं व्याख्यातुं परिष्करोति ॥ **नेति**॥ तेषां वचनेत्येतत् सौत्रस्मृतिपदस्य व्याख्यानमिति भावेनार्थमाह – **पाशुपतेति**॥ विरोध इति निमित्तसप्तमीति भावेन विरोधेनेत्युक्तम्।

ಈ ಸ್ಮೃತ್ಯಧಿಕರಣವು ಶಾಸ್ತ್ರಯೋನಿತ್ವಾಧಿಕರಣದಿಂದ ಗತಾರ್ಥವಾಗಿದೆಯಲ್ಲವೇ? ಇತ್ಯಾದಿ ಆಶಂಕೆಯ ಬಗ್ಗೆ ಹಾಗೂ ಪರಿಹಾರದ ಬಗ್ಗೆ ತಾತ್ಪರ್ಯಚಂದಿಕಾ ಗ್ರಂಥದಲ್ಲಿಯೇ ಸ್ಪಷ್ಟಪಡಿಸಲಾಗಿದೆ.

ಭಾಷ್ಯವನ್ನು ವ್ಯಾಖ್ಯಾನ ಮಾಡಲು 'ನ ವಿಷ್ಣೋಃ' ಇತ್ಯಾದಿಯಾಗಿ ಪೀಠಿಕೆಯನ್ನು ಹೇಳುತ್ತಿದ್ದಾರೆ. ಭಾಷ್ಯದಲ್ಲಿ 'तेषाम वचनविरोधे' ಎಂದು ಹೇಳಿದ್ದಾರೆ. ಇದು ಸೂತ್ರದಲ್ಲಿರುವ 'ಸ್ಮೃತಿ' ಎಂಬ ಪದದ ವ್ಯಾಖ್ಯಾನವಾಗಿದೆ. ಇದನ್ನು ಟೀಕೆಯಲ್ಲಿ ಪಾಶುಪತ, ಸಾಂಖ್ಯ ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನ ಮಾಡಿದ್ದಾರೆ. ಭಾಷ್ಯದಲ್ಲಿ ವಿರೋಧೇ ಎಂಬುದು ನಿಮಿತ್ತಸಪ್ತಮ್ಯಂತವಾಗಿದೆ. ಇದನ್ನು ತೋರಿಸಲು 'ಯೋಗಾದಿಸ್ಮೃತಿವಿರೋಧೇನ' ಎಂದು ಟೀಕೆಯಲ್ಲಿ ಹೇಳಿದ್ದಾರೆ.

ಸೂತ್ರದಲ್ಲಿರುವ ದೋಷಪ್ರಸಂಗಾತ್ ಎಂಬುದರ ವ್ಯಾಖ್ಯಾನ

ಭಾವದೀಪ: – अप्रामाण्यमेव स्यादित्येतद्दोषप्रसङ्गादित्यस्य व्याख्येति मत्वाऽऽह – **अप्रामाण्याख्येति**॥ **अन्यार्थतेति**॥ श्रुतेरित्यनुषङ्गः। स्मृत्यनुरोधेन शिवादिकर्तृत्वार्थ कत्वोपपत्तेरित्यर्थः।

ಸೂತ್ರದಲ್ಲಿ 'ದೋಷಪ್ರಸಂಗಾತ್' ಎಂಬುದರ ವ್ಯಾಖ್ಯಾನವನ್ನು ಭಾಷ್ಯದಲ್ಲಿ 'ಅಪ್ರಾಮಾಣ್ಯಮೇವ ಸ್ಯಾತ್' ಎಂದು ಮಾಡಿದ್ದಾರೆ. ಇದನ್ನು ಟೀಕೆಯಲ್ಲಿ 'ಅಪ್ರಾಮಾಣ್ಯಾಖ್ಯದೋಷಪ್ರಸಂಗಾತ್' ಎಂಬುದರಿಂದ ತೋರಿಸಿದ್ದಾರೆ. 'ಅನ್ಯಾರ್ಥೋಪಪತ್ತೇಃ' ಎಂದು ಟೀಕೆಯಲ್ಲಿರುವ ಮಾತಿನ ಜೊತೆ 'ಶ್ರುತೇಃ' ಎಂಬುದನ್ನು ಅನುಷಂಗ ಮಾಡಬೇಕು. ಆಗ ಶ್ರುತಿಗೆ ಬೇರೆ ಅರ್ಥವನ್ನೇ ಮಾಡಬೇಕಾಗುತ್ತದೆ ಎಂಬರ್ಥವನ್ನು ಹೇಳಿದಂತಾಗುತ್ತದೆ. ಸ್ಮೃತಿಗೆ ಅನುಗುಣವಾಗಿ ಶಿವಾದಿಗಳೇ ಜಗತ್ತಿಗೆ ಕಾರಣರಾಗಿದ್ದಾರೆ ಎಂಬರ್ಥವನ್ನೇ ಶ್ರುತಿಗೆ ಹೇಳಬೇಕು ಎಂಬುದು ಇದರ ಅಭಿಪ್ರಾಯ.

ವಿರೋಧಕ್ಕೆ ಅಸಿದ್ಧಿ ಹಾಗೂ ಅಪ್ರಯೋಜಕತ್ವಗಳ ನಿರಾಸ

ಭಾವದೀಪಃ – ವಿರೋಧಂ ವ್ಯನಕ್ತಿ – **पाशुपतेति**।। ವಿರೋಧಸ್ಯಾಸಿದ್ಧಿಂ ನಿರಸ್ಯಾಪ್ರಯೋಜಕತ್ವಂ ನಿರಾಹ – **न चेति**।।

ವಿಷ್ಣುವಿನ ಜಗತ್ಕಾರಣತ್ವ ವಿಷಯದಲ್ಲಿ ಯಾವ ವಿರೋಧವು ಪ್ರಾಪ್ತವಾಗುತ್ತದೋ ಅದನ್ನು 'ಪಾಶುಪತಾದಿಸ್ಮೃತೀನಾಂ' ಎಂಬ ವಾಕ್ಯದಿಂದ ಸ್ಪಷ್ಟಪಡಿಸುತ್ತಿದ್ದಾರೆ. ಈ ಪಾಶುಪತಾದಿ ಸ್ಮೃತಿವಿರೋಧಕ್ಕೆ ಅಸಿದ್ಧಿಯು ಬರುವುದಿಲ್ಲ. ಏಕೆಂದರೆ ರುದ್ರಾದಿಗಳಿಗೆ ಜಗತ್ಕಾರಣತ್ವವನ್ನು ಇದು ಪ್ರತಿಪಾದನೆ ಮಾಡುತ್ತಿದೆ. ಹೀಗೆ ಅಸಿದ್ಧಿ ದೋಷವನ್ನು ಪರಿಹರಿಸಿ ಪಾಶುಪತಾದಿಗಳ ವಿರೋಧವಿದ್ದರೂ ಕೂಡ ವಿಷ್ಣುವಿನ ಜಗತ್ಕಾರಣತ್ವವು ಇರಲಿ ಎಂಬ ಅಪ್ರಯೋಜಕಾ ಶಂಕೆಯನ್ನು 'ನ ಚ ವಿರೋಧೇಪಿ' ಎಂಬ ವಾಕ್ಯದಿಂದ ಪರಿಹರಿಸುತ್ತಿದ್ದಾರೆ.

ವಸ್ತುವಿನಲ್ಲಿ ವಿಕಲ್ಪ ಕೂಡದು

ಭಾವದೀಪಃ – **वस्त्वनीति**।। पूर्वविकल्पः प्रकरणात् स्यात् क्रियामानसवदित्यादौ वक्ष्यमाणदिशा गुरूपादानत्यागादिरूपक्रियाया अव्यवस्थितविकल्पस्य विकल्पो विशिष्टफलत्वादित्यादौ वक्ष्यमाणादिशा फलविशेषकामनादिना नृसिंहध्यानादिक्रियाया व्यवस्थितविकल्पस्य सम्भवेऽपि विष्वादिरर्थः कर्ताऽकर्ता वेति वस्त्वनि विकल्पो न युक्त इत्यर्थः। वस्त्वन्यपि व्यवस्थितविकल्पमाशङ्क्य निराह – **न च देशेति**।।

'ವಸ್ತುನಿ ವಿಕಲ್ಪಪ್ರಸಂಗಾತ್' ಎಂದು ಟೀಕೆಯಲ್ಲಿ ಹೇಳಿದ್ದಾರೆ. ಇದರ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೀಗೆ ತಿಳಿಯಬೇಕು– 'ಪೂರ್ವವಿಕಲ್ಪಃ ಪ್ರಕರಣಾತ್ ಸ್ಯಾತ್ ಕ್ರಿಯಾಮಾನಸವತ್' (೩-೩-೪೬)

'ಸಮಾನ ಫಲವುಳ್ಳ ಮಾನಸ ಕ್ರಿಯಾ ರೂಪವಾದ ಧ್ಯಾನದಂತೆ ಪೂರ್ವದಲ್ಲಿ ಪ್ರಾಪ್ತನಾದ ಗುರುವಿಗೆ ಸಮಾನನಾದ ಮತ್ತೊಬ್ಬ ಗುರುವನ್ನು ಸ್ವೀಕರಿಸಬಹುದು ಅಥವಾ ಬಿಡಬಹುದು' ಎಂಬುದು ವಿಕಲ್ಪವೇ ಆಗಿದೆ ಹೊರತು ವಿಧಿಯಲ್ಲ. ಏಕೆಂದರೆ ಪ್ರಕೃಷ್ಟ ಅನುಗ್ರಹವನ್ನು ಅಪೇಕ್ಷಿಸಿ ಗುರುವು ಸ್ವೀಕಾರ್ಯನಾಗಿರುತ್ತಾನೆ ಎಂಬುದಾಗಿ ಈ ಸೂತ್ರದಲ್ಲಿ ಮುಂದೆ ಹೇಳುತ್ತಾರೆ. ಇಲ್ಲಿ ಗುರುವನ್ನು ಬಿಡುವಿಕೆ ಎಂಬ ಕ್ರಿಯೆಯಲ್ಲಿ ಅವ್ಯವಸ್ಥಿತವಾದ ವಿಕಲ್ಪವಿದೆ.

'ವಿಕಲ್ಪೋವ ವಿಶಿಷ್ಟಫಲತ್ವಾತ್' (೩-೩-೬೧) 'ಬಿಂಬವಲ್ಲದ ನರಸಿಂಹಾದಿ ರೂಪವನ್ನು ಉಪಾಸನೆ ಮಾಡಬಹುದು ಅಥವಾ ಮಾಡದೇ ಇರಬಹುದು, ಎರಡೂ ಪ್ರಕಾರಗಳಿದೆ. ಏಕೆಂದರೆ ದುರಿತನಿವೃತ್ತಿ ಎಂಬ ವಿಶೇಷ ಫಲ ಇರುವುದರಿಂದ' ಎಂಬ ಈ ಸೂತ್ರದಲ್ಲಿ ಮುಂದೆ ವ್ಯವಸ್ಥಿತ ವಿಕಲ್ಪವನ್ನು ಹೇಳುವವರಿದ್ದಾರೆ. ಫಲವಿಶೇಷ ಕಾಮನಾದಿಗಳಿಂದ ನರಸಿಂಹ ಧ್ಯಾನವೆಂಬ ಕ್ರಿಯೆಯಲ್ಲಿ ವ್ಯವಸ್ಥಿತವಾದ ವಿಕಲ್ಪವಿದೆ. ಹೀಗೆ ಅವ್ಯವಸ್ಥಿತ ವಿಕಲ್ಪವನ್ನು ಅಥವಾ ವ್ಯವಸ್ಥಿತವಿಕಲ್ಪವನ್ನು ಪ್ರಕೃತ ವಿಷ್ಣುವಿನ ಜಗತ್ಕರ್ತೃತ್ವ ವಿಷಯದಲ್ಲಿ ವಿವಕ್ಷಿಸಲು ಸಾಧ್ಯವಿಲ್ಲ. ವಿಷ್ಣುವು ಕರ್ತೃವೂ ಆಗಬಹುದು ಹಾಗೂ ಅಕರ್ತೃವೂ ಆಗಬಹುದು ಎಂಬುದಾಗಿ ವಸ್ತುವಿನಲ್ಲಿ ವಿಕಲ್ಪವು ಯುಕ್ತವಲ್ಲ ಎಂಬುದು ಇದರ ಅರ್ಥ. ವಸ್ತುವಿನಲ್ಲೂ ಕೂಡ ವ್ಯವಸ್ಥಿತವಿಕಲ್ಪವನ್ನು ಆಶಂಕಿಸಿ ನಿರಾಕರಣೆ ಮಾಡಲು 'ನ ಚ ದೇಶ' ಇತ್ಯಾದಿ ಟೀಕಾ ಪಂಕ್ತಿಯು ಹೊರಟಿದೆ.

ಶ್ರುತಿವಿರೋಧ ಬಂದಾಗ ಸ್ಮೃತಿಗೆ ಅಪ್ರಾಮಾಣ್ಯ ಹೇಳಬೇಕಲ್ಲವೇ?

ಭಾವದೀಪಃ – ಸೌತ್ರಾನವಕಾಶಪದವ್ಯಾಖ್ಯಾನಂ ಸರ್ವಜ್ಞಾ ಹೀತ್ಯಾದಿಭಾಷ್ಯಂ ತದ್ವ್ಯಾವರ್ತ್ಯೋಕ್ತಿಪೂರ್ವಂ ವ್ಯಾಚಷ್ಟೇ – **ನ ಚ ವಾಚ್ಯಮಿತಿ**।। ಪ್ರಾಮಾಣ್ಯಮುಪೇತ್ಯಾಹ – **ಅನ್ಯಾರ್ಥತ್ವಮಿತಿ**।। **ವಿರೋಧೇ ತ್ವಿತಿ**।। ಪೂರ್ವತನ್ತ್ರೇ ಪ್ರಥಮೇ ತೃತೀಯಪಾದೇ ಧರ್ಮಸ್ಯ ಶಬ್ದಮೂಲತ್ವಾದಶಬ್ದಮನಪೇಕ್ಷಂ ಸ್ಯಾದಿತಿ ಸ್ಮೃತಿನಯೇ ಸರ್ವಸ್ಮೃತೀನಾಂ ಮೂಲಶ್ರುತ್ಯನುಮಾಪಕತ್ವೇನ ಪ್ರಾಮಾಣ್ಯಮುಕ್ತ್ವಾ ವಿರುದ್ಧಾನಾಮಪ್ರಾಮಾಣ್ಯಂ ವಕ್ತುಮಿದಂ ಸೂತ್ರಮ್। ಸ್ಮೃತೇಃ ಶ್ರುತಿವಿರೋಧೇ ಸತಿ ಅನಪೇಕ್ಷಂ ಸ್ಮೃತಿಪ್ರಾಮಾಣ್ಯಮನಾದರಣೀಯಂ ಸ್ಯಾತ್। ನ ಚೈವಂ ತತ್ರತ್ಯಪೂರ್ವಾಧಿಕರಣವಿರೋಧಃ। ಅಸತಿ ಹ್ಯನುಮಾನಮ್। ಸ್ಮೃತೇಃ ಶ್ರುತಿವಿರೋಧೇ ಅಸತಿ ಅವಿದ್ಯಮಾನ ಏವ ಸ್ಮೃತಿರನುಮಾನಂ ಮೂಲಭೂತಶ್ರುತ್ಯನುಮಾಪಿಕಾ ಶ್ರುತೌ ಪ್ರಮಾಣಮಿತ್ಯುಕ್ತಂ ಸ್ಮೃತ್ಯಧಿಕರಣ ಇತ್ಯರ್ಥಃ।

ಸೂತ್ರದಲ್ಲಿರುವ 'ಅನವಕಾಶ' ಎಂಬ ಪದಕ್ಕೆ ಭಾಷ್ಯದಲ್ಲಿ 'ಸರ್ವಜ್ಞಾದಿ' ಇತ್ಯಾದಿಯಾಗಿ ವ್ಯಾಖ್ಯಾನ ಮಾಡಿದ್ದಾರೆ. ಭಾಷ್ಯದ ಈ ಮಾತಿನಿಂದ ಯಾವ ಶಂಕೆಯು ಪರಿಹಾರವಾಗುತ್ತದೋ ಆ ಶಂಕೆಯನ್ನು

ಉಲ್ಲೇಖ ಮಾಡುವ ಮೂಲಕ ಭಾಷ್ಯಕ್ಕೆ ವ್ಯಾಖ್ಯಾನ ಮಾಡುತ್ತಿದ್ದಾರೆ 'ನ ಚ ವಾಚ್ಯಂ' ಇತ್ಯಾದಿ ಟೀಕೆಯಿಂದ. ಶೈವಾದಿ ಸ್ಮೃತಿಗಳಿಗೆ ಪ್ರಾಮಾಣ್ಯವನ್ನು ಅಂಗೀಕಾರ ಮಾಡಿ 'ಅನ್ಯಾರ್ಥತ್ವಂ' ಎಂಬ ಪದವನ್ನು ಪ್ರಯೋಗ ಮಾಡಿದ್ದಾರೆ.

'ವಿರೋಧೇತ್ವನಪೇಕ್ಷಂ ಸ್ಯಾತ್ ಅಸತಿಹ್ಯನುಮಾನಂ' (೧-೩) ಪೂರ್ವಮೀಮಾಂಸೆಯ ಪ್ರಥಮಾಧ್ಯಾಯದ ತೃತೀಯ ಪಾದದಲ್ಲಿ 'ಧರ್ಮಸ್ಯ ಶಬ್ದಮೂಲತ್ವಾತ್ ಅಶಬ್ದಂ ಅನಪೇಕ್ಷಂ ಸ್ಯಾತ್' ಎಂಬ ಸ್ಮೃತ್ಯಧಿಕರಣದಲ್ಲಿ ಸಕಲ ಸ್ಮೃತಿಗಳು ಮೂಲಶ್ರುತಿಗೆ ಅನುಮಾಪಕವಾಗಿವೆ. ಆದ್ದರಿಂದ ಸ್ಮೃತಿಗಳು ಪ್ರಮಾಣವಾಗುತ್ತವೆ ಎಂದು ಸಮರ್ಥನೆ ಮಾಡಿ ವಿರುದ್ಧವಾದವುಗಳಿಗೆ ಅಪ್ರಾಮಾಣ್ಯವನ್ನು ಹೇಳಲು 'ವಿರೋಧೇತ್ವನಪೇಕ್ಷಂ ಸ್ಯಾತ್' ಎಂಬ ಸೂತ್ರವು ಹೊರಟಿದೆ. ವಿರೋಧೇ = ಸ್ಮೃತಿಗೆ ಶ್ರುತಿವಿರೋಧವು ಪ್ರಾಪ್ತವಾದರೆ, ಅನಪೇಕ್ಷಂ = ಸ್ಮೃತಿಗೆ ಪ್ರಾಮಾಣ್ಯವನ್ನು ಅಂಗೀಕಾರ ಮಾಡಬಾರದು. ಹೀಗೆ ಹೇಳಿದರೆ ಪೂರ್ವಾಧಿಕರಣದಿಂದ ವಿರೋಧ ಬರುತ್ತದಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ 'ವಿರೋಧೇ ಅಸತಿ ತು' = ಸ್ಮೃತಿಗೆ ಶ್ರುತಿಯಿಂದ ವಿರೋಧ ಇಲ್ಲದಿದ್ದರೆ ಮಾತ್ರ ಸ್ಮೃತಿಯು, ಅನುಮಾನಂ = ಮೂಲಭೂತವಾದ ಶ್ರುತಿಯನ್ನು ಅನುಮಾನ ಪ್ರಮಾಣದ ಮೂಲಕ ಸಾಧಿಸುತ್ತದೆ. ಹೀಗೆ ಸ್ಮೃತ್ಯಧಿಕರಣದಲ್ಲಿ ಹೇಳಲಾಗಿದೆ ಎಂದರ್ಥ.

भावदीपः – जैमिनीयन्यायवैषम्यं वक्तुकामः भाष्यस्थतेषामिति पदे प्रकृतिप्रत्ययार्थं वदन् तत्तात्पर्यमाह – **स्मृतीनामिति ।।**

ಜೈಮಿನೀಯನ್ಯಾಯದಿಂದ ವೈಷಮ್ಯವನ್ನು ತೋರಿಸಲು ಇಚ್ಛಿಸಿದರೆ ಹಾಗೂ ಭಾಷ್ಯದಲ್ಲಿರುವ 'ತೇಷಾಂ' ಎಂಬ ಪದದಲ್ಲಿ ಪ್ರಕೃತಿಪ್ರತ್ಯಯಾರ್ಥಗಳನ್ನು ಹೇಳಲು ಬಯಸಿದ್ದಾರೆ. ಹಾಗಾಗಿ ತಾತ್ಪರ್ಯವನ್ನಷ್ಟೆ ತೋರಿಸಲು 'ಸ್ಮೃತೀನಾಮ್' ಎಂದು ಹೇಳಿದ್ದಾರೆ.

ರುದ್ರಾದಿಗಳು ದೋಷರಹಿತರಷ್ಟೇ ಅಲ್ಲ, ಗುಣಭರಿತರೂ ಆಗಿದ್ದಾರೆ

भावदीपः – भ्रमप्रमादादिदोषाभावेन यथार्थज्ञानपूर्वकत्वरूपगुणेन च युक्तत्वादित्यर्थः। सर्वज्ञा हीत्यादि व्यनक्ति॥ **रुद्रादीनामिति ।।** हिशब्दार्थः प्रसिद्धत्वादिति। सार्वज्ञमुपलक्षणं मत्त्वोक्तं जगदिति – **श्रुतेश्चेति ।।**

'ಸ್ಮೃತೀನಾಂ' ಎಂದು ಟೀಕೆಯಲ್ಲಿ ಹೇಳಿದ್ದಾರೆ. ಈ ವಾಕ್ಯದಲ್ಲಿ ರುದ್ರ, ಕಪಿಲ ಮೊದಲಾದವರಿಗೆ ಯಾವುದೇ ದೋಷವಿಲ್ಲವೆಂದು ಹೇಳಿದ್ದಾರೆ. ದೋಷವೆಂದರೆ ಭ್ರಮ, ಪ್ರಮಾದ ಮೊದಲಾದವುಗಳು ಎಂದರ್ಥ. ಈ ದೋಷಗಳು ಇಲ್ಲ ಎಂದಷ್ಟೇ ಅಲ್ಲ. ರುದ್ರಾದಿಗಳು ಯಥಾರ್ಥಜ್ಞಾನವುಳ್ಳವರಾಗಿದ್ದಾರೆ. ಹೀಗೆ ಯಥಾರ್ಥಜ್ಞಾನ ಪೂರ್ವಕತ್ವವೆಂಬ ಗುಣದಿಂದಲೂ ಯುಕ್ತವಾಗಿರುವುದರಿಂದ ಆ ಸ್ಮೃತಿಗಳು ಪ್ರಮಾಣವಾಗುತ್ತವೆ ಎಂಬುದು ಈ ವಾಕ್ಯದ ಅರ್ಥ. 'ಸರ್ವಜ್ಞೋ ಹಿ' ಇತ್ಯಾದಿ ಭಾಷ್ಯವನ್ನು 'ರುದ್ರಾದೀನಾಂ' ಎಂಬ ವಾಕ್ಯದಿಂದ ವ್ಯಾಖ್ಯಾನ ಮಾಡಿದ್ದಾರೆ. ಭಾಷ್ಯದಲ್ಲಿರುವ 'ಹಿ' ಶಬ್ದಕ್ಕೆ 'ಪ್ರಸಿದ್ಧತ್ವಾತ್' ಎಂದು ವ್ಯಾಖ್ಯಾನ ಮಾಡಿದ್ದಾರೆ. ಸಾರ್ವಜ್ಞವು ಉಪಲಕ್ಷಣವಾಗಿದೆ ಎಂದು ತಿಳಿದು 'ಜಗದ್ಧಿತೋಪದೇಷ್ಟೃತ್ವಸ್ಯ' ಎಂದು ಟೀಕೆಯಲ್ಲಿ ಹೇಳಿದ್ದಾರೆ.

ಶ್ರುತಿಗೆ ಸ್ಮೃತಿಯನ್ನು ವಿರೋಧಿಸಲು ಸಾಧ್ಯವಿಲ್ಲ

ಭಾವದೀಪ: – 'ಆಪ್ತೈಃ ಪ್ರತ್ಯಕ್ಷತೋ ದೃಷ್ಟ್ವಾ ಪ್ರೋಕ್ತಮರ್ಥಂ ಕಥಂ ಶ್ರುತಿಃ। ಪಿಪೀಲಿಕಾಲಿಪಿನಿಭಾ ವಾರಯೇತ್ಸರ್ವಗಾಹಿತೇ' ಇತ್ಯನುಭಾಷ್ಯೋಕ್ತೇರಿತಿ ಭಾವಃ। ಜೈಮಿನೀಯನ್ಯಾಯಸ್ಯ ಗತಿಮಾಹ – **ಕ್ವಚಿದಿತಿ**।। ಭಟ್ಟಮತೇ ಅರ್ಥಾನ್ತರಕಲ್ಪನಂ ಪ್ರಾಭಾಕರಮತೇ ಅಪ್ರಾಮಾಣ್ಯಮಾದಿಪದಾರ್ಥಃ॥ ಛ ॥

'ಆಪ್ತೈಃ ಪ್ರತ್ಯಕ್ಷತೋ ದೃಷ್ಟ್ವಾ ಪ್ರೋಕ್ತಮರ್ಥಂ ಕಥಂ ಶ್ರುತಿಃ ಪಿಪೀಲಿಕಾಲಿಪಿನಿಭಾ ವಾರಯೇತ್ ಸರ್ವಗಾ ಹಿ ತೇ' ಆಪ್ತರು ಪ್ರತ್ಯಕ್ಷದಿಂದ ಕಂಡು ಯಾವುದನ್ನು ಹೇಳಿರುತ್ತಾರೋ ಇಂತಹ ಪರಮಪ್ರಮಾಣವಾದ ಅರ್ಥವನ್ನು ಇರುವೆಯ ಸಾಲಿಗೆ ಸಮಾನವಾದ ಶ್ರುತಿಯು ಹೇಗೆ ತಾನೇ ನಿವಾರಣೆ ಮಾಡೀತು? ಎಂಬ ಅನುವ್ಯಾಖ್ಯಾನದ ಮಾತಿನಂತೆ ಶ್ರುತಿಯು ಸ್ಮೃತಿಯನ್ನು ವಿರೋಧ ಮಾಡಲು ಸಾಧ್ಯವಿಲ್ಲ ಎಂಬುದನ್ನು 'ಶ್ರುತೇಶ್ಚ' ಇತ್ಯಾದಿ ವಾಕ್ಯದಿಂದ ನಿರೂಪಣೆ ಮಾಡಿದ್ದಾರೆ. ಜೈಮಿನೀಯ ನ್ಯಾಯದಿಂದ ಮಾಡಿದ ಪ್ರಶ್ನೆಗೆ ಉತ್ತರವನ್ನು 'ಕ್ವಚಿತ್' ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ. ಭಟ್ಟ ಮತದ ಪ್ರಕಾರ ಸ್ಮೃತಿಗೆ ಅರ್ಥಾಂತರವನ್ನು ಕಲ್ಪನೆ ಮಾಡಬೇಕು. ಪ್ರಾಭಾಕರರ ಮತದ ಪ್ರಕಾರ ಅಪ್ರಾಮಾಣ್ಯವನ್ನೇ ಹೇಳಬೇಕು. ಇದನ್ನು ಟೀಕೆಯಲ್ಲಿ 'ಅರ್ಥಾಂತರಕಲ್ಪನಾದಿ' ಎಂಬಲ್ಲಿರುವ ಆದಿ ಪದದಿಂದ ತಿಳಿಸಿದ್ದಾರೆ.

ಸಿದ್ಧಾಂತ ಭಾಷ್ಯಕ್ಕೆ ವ್ಯಾಖ್ಯಾನ

ಭಾವದೀಪ: – ಅಸ್ಯ ಪೂರ್ವೋಕ್ತವಿರೋಧನಿರಾಸಕತ್ವದ್ಯೋತನಾಯ ಪ್ರತಿಜ್ಞಾಹೇತೂ ಬಹಿರೇವಾಹ – **ಯುಕ್ತಮಿತಿ**।। ಭಾಷ್ಯೋಪಾತ್ತಸ್ಯ ಸೌತ್ರನಞಃ ಪೂರ್ವಕೃತಚೋದ್ಯೇನಾನ್ವಯ ಇತಿ ಭಾವೇನಾಹ – **ನ ಚ**

श्रुतेरिति ।। तत्र हेतुत्वेन दोषप्रसङ्गादिति सूत्रांशं आकाङ्क्षितपूर्त्या योजयति श्रुतिविरोधेनेति ॥

ಜಗತ್ಕಾರಣತ್ವ ವಿಷಯದಲ್ಲಿ ಹಿಂದೆ ಹೇಳಿದ ವಿರೋಧಕ್ಕೆ ಅವಕಾಶವಿಲ್ಲ ಎಂಬುದನ್ನು ಸ್ಪಷ್ಟಪಡಿಸುವುದಕ್ಕಾಗಿ ಪ್ರತಿಜ್ಞೆ ಮತ್ತು ಹೇತುಗಳನ್ನು ಹೊರಗಡೆಯೇ ಹೇಳಿದ್ದಾರೆ ಎಂಬುದನ್ನು 'ಯುಕ್ತಂ' ಎಂಬುದರಿಂದ ವ್ಯಾಖ್ಯಾನಿಸಿದ್ದಾರೆ. ಭಾಷ್ಯದಲ್ಲಿ ಸ್ವೀಕರಿಸಿದ ಸೂತ್ರದಲ್ಲಿರುವ 'ನಞ್' ಗೆ ಹಿಂದೆ ಮಾಡಿದ ಪೂರ್ವಪಕ್ಷದ ಜೊತೆ ಅನ್ವಯವನ್ನು ತಿಳಿಯಬೇಕು. ಈ ವಿಷಯವನ್ನು ಟೀಕೆಯಲ್ಲಿ 'ನ ಚ ಶ್ರುತೇಃ' ಎಂಬ ವಾಕ್ಯದಿಂದ ತಿಳಿಸಿದ್ದಾರೆ. ಸೂತ್ರದಲ್ಲಿರುವ 'ದೋಷಪ್ರಸಂಗಾತ್' ಎಂಬುದು ಈ ವಿಷಯದಲ್ಲಿ ಹೇತುವಾಗಿದೆ. ಹೀಗೆ ಸೂತ್ರಾಂಶವನ್ನು ಆಕಾಂಕ್ಷದ ಪೂರಣೆಯ ಮೂಲಕ ಯೋಜನೆ ಮಾಡಲು 'ಶ್ರುತಿವಿರೋಧೇನ' ಇತ್ಯಾದಿಯಾಗಿ ಹೇಳುತ್ತಿದ್ದಾರೆ.

ವಿಷ್ಣುವಿನಲ್ಲಿರುವ ಸಾರ್ವಜ್ಞವು ನಿರತಿಶಯ ಹಾಗೂ ನಿಸ್ಸಂಶಯ

भावदीपः – प्रसङ्गादिति ।। प्रकृष्टसंबन्धादित्यर्थः। इदानीं तु श्रुतेरित्यादिभाष्यं (शव्यावर्त्यपूर्वं)शं अवतार्य शेषपूर्त्या व्याचष्टे॥ **न चेति ।।** अन्येत्याद्यंशं व्यावर्त्यपूर्वं व्याचष्टे – **न च वक्तव्यमिति ।।** विष्णुमनुप्रभृतिभिरित्यर्थः। नितरां निरतिशयं निस्संशयं वा। भाष्यस्थैवकारभावमाह – **जगादिति ।।**

'ದೋಷಪ್ರಸಂಗಾತ್' ಎಂಬಲ್ಲಿರುವ ಪ್ರಸಂಗ ಶಬ್ದಕ್ಕೆ ದೋಷದ ಜೊತೆ ಪ್ರಕೃಷ್ಟವಾದ ಸಂಬಂಧ ಬರಬೇಕಾಗುತ್ತದೆ ಎಂದರ್ಥ.

'ಶ್ರುತೇಃ' ಇತ್ಯಾದಿ ಭಾಷ್ಯದ ಅಂಶಕ್ಕೆ ಅವತಾರಿಕೆ ನೀಡಿ ಭಾಷ್ಯದಲ್ಲಿ ಶೇಷಪೂರಣ ಮಾಡಿಕೊಳ್ಳಬೇಕಾದದ್ದನ್ನು ಉಲ್ಲೇಖ ಮಾಡುವ ಮೂಲಕ ವ್ಯಾಖ್ಯಾನ ಮಾಡಲು 'ನ ಚ' ಇತ್ಯಾದಿ ವಾಕ್ಯವು ಹೊರಟಿದೆ. 'ಅನ್ಯ' ಎಂಬ ಅಂಶದಿಂದ ವ್ಯಾವೃತ್ತವಾದ ಪೂರ್ವಪಕ್ಷವನ್ನು ಉಲ್ಲೇಖ ಮಾಡುವುದರ ಮೂಲಕ ಭಾಷ್ಯವನ್ನು 'ನ ಚ ವಕ್ತವ್ಯಂ' ಇತ್ಯಾದಿಯಾಗಿ ವ್ಯಾಖ್ಯಾನ ಮಾಡುತ್ತಿದ್ದಾರೆ. ವಿಷ್ಣು, ಮನು ಮೊದಲಾದ ಪರಮಾಪ್ತರಿಂದ ರಚಿತವಾದ ಪಂಚರಾತ್ರಾದಿಸ್ಮೃತಿ ಎಂದು ತಿಳಿಯಬೇಕು. ಇದು ಆದಿ ಪದದ ಅರ್ಥ. 'ನಿತರಾಂ' ಎಂಬ ಪದಕ್ಕೆ ನಿರತಿಶಯವಾದ ಎಂದರ್ಥ. ಅಥವಾ

ಸಂಶಯವಿಲ್ಲದ ಎಂದರ್ಥ. ವಿಷ್ವಕ್ಸೇನಾದಿಗಳಲ್ಲಿರುವ ಸಾರ್ವಜ್ಞ್ಯವು ನಿರತಿಶಯವಾಗಿದೆ ಮತ್ತು ಸಂಶಯರಹಿತವಾಗಿದೆ. ಆದರೆ ರುದ್ರಾದಿಗಳಲ್ಲಿರುವ ಸಾರ್ವಜ್ಞ್ಯದಲ್ಲಿ ನಿರತಿಶಯತ್ವವಿಲ್ಲ ಹಾಗೂ ಸಂಶಯವುಳ್ಳದ್ದೇ ಆಗಿದೆ ಎಂಬುದು ಧ್ವನಿತಾರ್ಥ. ಭಾಷ್ಯದಲ್ಲಿರುವ 'ಏವಕಾರ'ದ ಅಭಿಪ್ರಾಯವನ್ನು 'ಜಗದ್ಹಿತೋಪದೇಷ್ಟೃಭಿಃ' ಎಂದು ಹೇಳಿದ್ದಾರೆ.

ವಿಷ್ಣುವಿನಲ್ಲಿ ಆಪ್ತತಮತ್ವವಿದೆ

भावदीपः – श्रुत्यनुसारित्वादित्यन्यत्रोक्तं हेतुमत्र व्यावर्त्यशङ्कापूर्वं योजयति॥ **कुत इति॥** भाष्ये नितरां सर्वज्ञैरेवेत्येतद्रुद्रादीनां सकाशाद्विष्ण्वादीनामेवाप्तत्व-मित्यन्यत्रोक्ताप्तशब्दार्थविवरणमिति भावेनाप्ततमत्वमित्यनुवादः।

'ಶ್ರುತ್ಯನುಸಾರಿತ್ವಾತ್' ಎಂಬುದಾಗಿ ಬೇರೆಡೆ ಹೇಳಿದ ಹೇತುವನ್ನು ಪ್ರಕೃತ ಪೂರ್ವಪಕ್ಷಕ್ಕೆ ಪರಿಹಾರಕವಾಗಿ ಯೋಜನೆ ಮಾಡಲು 'ಕುತಃ' ಇತ್ಯಾದಿ ವಾಕ್ಯವು ಹೊರಟಿದೆ. ಭಾಷ್ಯದಲ್ಲಿ 'ನಿತರಾಂ ಸರ್ವಜ್ಞೈರೇವ' ಎಂದು ಹೇಳಿದ್ದಾರೆ. ಇದರ ವ್ಯಾಖ್ಯಾನವನ್ನು ಹೀಗೆ ತಿಳಿಯಬೇಕು. ರುದ್ರಾದಿಗಳಿಗಿಂತಲೂ ವಿಷ್ಣುವಿನಲ್ಲಿ ಸಾರ್ವಜ್ಞ್ಯವು ನಿರತಿಶಯವಾಗಿದೆ. ಆದ್ದರಿಂದಲೇ ರುದ್ರಾದಿಗಳಿಗಿಂತಲೂ ಹೆಚ್ಚಿನ ಆಪ್ತತ್ವವು ವಿಷ್ಣುವಿನಲ್ಲಿದೆ. ಈ ಹೇತುವನ್ನು ಬೇರೆ ಕಡೆ ಹೇಳಲಾಗಿದೆ. ಅದನ್ನು ಇಲ್ಲಿ ವಿವಕ್ಷಿಸುವ ಮೂಲಕ ಭಾಷ್ಯದಲ್ಲಿರುವ ಆಪ್ತಶಬ್ದಾರ್ಥದ ವಿವರಣೆಯನ್ನು ಟೀಕೆಯಲ್ಲಿ 'ಆಪ್ತತಮತ್ವಂ' ಎಂದು ಅನುವಾದ ಮಾಡಿದ್ದಾರೆ.

ಪಂಚರಾತ್ರದಲ್ಲಿ ಹೇಳಿದ್ದಕ್ಕೆ ಶ್ರುತಿಸಂವಾದ ಇದ್ದೇ ಇದೆ

भावदीपः – यत्तु श्रुतावनुक्तमेव जीवोत्पत्त्यादि पञ्चरात्रे कथ्यत इत्यादि तत्तु अनुव्याख्यानसुधाचन्द्रिकासु समयपादान्ते निरस्तं ध्येयम् । अन्यस्मृतीनां इत्यादिसूत्रांशस्य शेषपूर्त्या बाधातिबाधयोरुक्तिपरत्वेन द्वैधार्थं वदन् उपसंहरति॥ **अत इति॥**

ಶ್ರುತಿಯಲ್ಲಿ ಜೀವೋತ್ಪತ್ತ್ಯಾದಿ ವಿಷಯವು ಇರುವುದಿಲ್ಲ. ಪಂಚರಾತ್ರದಲ್ಲಿ ಇದರ ಬಗ್ಗೆ ಹೆಚ್ಚಿನ ಮಾಹಿತಿ ಸಿಗುತ್ತದೆ. ಆದ್ದರಿಂದ ಶ್ರುತಿಯಲ್ಲಿ ಹೇಳದ್ದನ್ನೂ ಕೂಡ ಪಂಚರಾತ್ರದಲ್ಲಿ ಹೇಳಿದ್ದಾರೆ ಇತ್ಯಾದಿ ವಿಷಯವನ್ನು ಅನುವ್ಯಾಖ್ಯಾನ, ನ್ಯಾಯಸುಧಾ ಹಾಗೂ ಚಂದ್ರಿಕಾ ಮೊದಲಾದ ಗ್ರಂಥಗಳಲ್ಲಿ ಸಮಯ ಪಾದದ ಕೊನೆಯಲ್ಲಿ ನಿರಾಕರಣೆ ಮಾಡಲಾಗಿದೆ.

ಸೂತ್ರದಲ್ಲಿರುವ 'ಅನ್ಯಸ್ಮೃತೀನಾಂ' ಎಂಬ ಅಂಶವನ್ನು ಶೇಷಪೂರಣ ಮಾಡಿಕೊಳ್ಳುವ ಮೂಲಕ ವ್ಯಾಖ್ಯಾನ ಮಾಡುತ್ತಿದ್ದಾರೆ. ಪಾಶುಪತಾದಿ ಇತರ ಸ್ಮೃತಿಗಳಿಗೆ ಬಾಧವನ್ನು ಅಥವಾ ಅತಿಬಾಧವನ್ನು ಹೇಳಬೇಕು ಎಂದು ಸಮರ್ಥನೆ ಮಾಡುವ ಮೂಲಕ ಎರಡು ಅರ್ಥಗಳನ್ನು ಹೇಳುವ ಮೂಲಕ 'ಅತಃ' ಎಂಬ ಗ್ರಂಥದಿಂದ ಉಪಸಂಹಾರ ಮಾಡುತ್ತಿದ್ದಾರೆ.

ಪಾಶುಪತಾದಿ ಸ್ಮೃತಿಗೆ ಬಾಧವಷ್ಟೇ ಅಲ್ಲ, ಅತಿಬಾಧವಿದೆ

ಭಾವದೀಪಃ – तदुक्तस्येत्यादिहेतुद्वयपरामर्शः। आप्तत्वे हेतुरयं निरवकाशत्वादिति। अप्रामाण्याख्यस्य वाऽर्थान्तरपरत्वरूपस्य वा अवकाशस्याभावादित्यर्थः। अत्रापि प्रसङ्गशब्दः प्रकृष्टसङ्ग(संबन्ध)वाची । एतेन श्रुतेरित्यतःपूर्वं भाष्यं बाधोक्तिपरं श्रुतेरित्यादित्वतिबाधोक्तिपरमिति भाष्याभिप्रायः उक्तो ध्येयः॥ १ ॥

'ಅತಃ' ಎಂಬ ಪದಕ್ಕೆ ಪಂಚರಾತ್ರಾದಿಗಳಲ್ಲಿ ಹೇಳಿದ್ದಕ್ಕೆ ಶ್ರುತಿಸಂವಾದ ಇರುವುದರಿಂದ ಮತ್ತು ಪಾಶುಪತಾದಿಗಳಲ್ಲಿ ಹೇಳಿದ್ದಕ್ಕೆ ಶ್ರುತಿಸಂವಾದ ಇಲ್ಲದೇ ಇರುವುದರಿಂದ ಎಂದು ಎರಡು ಅರ್ಥ. ವಿಷ್ಣುವಿಗೆ ಆಪ್ತತ್ವವನ್ನು ಸಮರ್ಥನೆ ಮಾಡುವುದಕ್ಕಾಗಿ ಈ ಹೇತುವೆಂದು ತಿಳಿಯಬೇಕು. 'ನಿರವಕಾಶತ್ವಾತ್' ಎಂಬುದರ ಅಭಿಪ್ರಾಯ ಹೀಗಿದೆ – ಪುರುಷೋತ್ತಮನಿಂದ ಪ್ರಣೀತವಾದ ಪಂಚರಾತ್ರಕ್ಕೆ ಅಪ್ರಾಮಾಣ್ಯವನ್ನು ಹೇಳಲು ಸಾಧ್ಯವೇ ಇಲ್ಲ ಮತ್ತು ಅರ್ಥಾಂತರವನ್ನು ಕಲ್ಪನೆ ಮಾಡಲೂ ಕೂಡ ಸಾಧ್ಯವೇ ಇಲ್ಲ ಎಂದು.

'ಅಪ್ರಾಮಾಣ್ಯಪ್ರಸಂಗಾತ್' ಎಂಬಲ್ಲಿರುವ ಪ್ರಸಂಗ ಶಬ್ದಕ್ಕೆ ಹಿಂದೆ ಹೇಳಿದಂತೆ ಅಪ್ರಾಮಾಣ್ಯವೆಂಬ ದೋಷದ ಪ್ರಕೃಷ್ಟವಾದ ಸಂಬಂಧವುಳ್ಳದ್ದಾಗಿದೆ ಎಂದರ್ಥ. ಹೀಗೆ ಹೇಳಿದ್ದರಿಂದ 'ಶ್ರುತೇಃ' ಎಂಬಲ್ಲಿರುವ ತನಕ ಇರುವ ಭಾಷ್ಯವು ಪಾಶುಪತಾದಿ ಸ್ಮೃತಿಗೆ ಬಾಧವನ್ನು ಹೇಳಲು ಹೊರಟಿದೆ. 'ಶ್ರುತೇಃ' ಇತ್ಯಾದಿ ಮುಂದಿನ ಭಾಷ್ಯವಾಕ್ಯವು ಅತಿಬಾಧವನ್ನು ಹೇಳಲು ಹೊರಟಿದೆ ಎಂಬುದಾಗಿ ವ್ಯಾಖ್ಯಾನ ಮಾಡಿದಂತಾಯಿತು.

ಬ್ರಹ್ಮಸೂತ್ರ

'ಇತರೇಷಾಂ ಚಾನುಪಲಬ್ಧೇಃ' ಎಂಬ ಸೂತ್ರಕ್ಕೆ ವ್ಯಾಖ್ಯಾನ

ब्रह्मसूत्रम् – ।। इतरेषां चानुपलब्धेः ।।२।।

ಸೂತ್ರಾರ್ಥ - ಪಾಶುಪತಾದಿ ಸ್ಮೃತಿಗಳಲ್ಲಿ ಕೆಲವೆಡೆ ದೃಷ್ಟ ಪ್ರಯೋಜನವು ದೊರೆಯುತ್ತದೆಂದು ಹೇಳಲಾಗಿದೆ. ಆದರೆ ಅಂತಹ ಪ್ರಯೋಜನಗಳು ದೊರೆಯುತ್ತಿಲ್ಲ. ಹಾಗಾಗಿ ಆ ಸ್ಮೃತಿಗಳು ಅಪ್ರಮಾಣವಾಗಿವೆ. ಕೆಲವು ಫಲಗಳು ದೊರೆಯಬಹುದೆಂಬುದನ್ನು ಚ ಶಬ್ದದಿಂದ ಸೂಚಿಸಿದ್ದಾರೆ.

ಅರ್ಥ -- ಸೂತ್ರದಲ್ಲಿ 'ಅನುಪಲಬ್ಧೇಃ' ಎಂಬುದನ್ನು ಆವೃತ್ತಿ ಮಾಡಿಕೊಳ್ಳಬೇಕು. ಆವಾಗ 'ಅನುಪಲಬ್ಧೇಃ ಇತರೇಷಾಂ ಅನುಪಲಬ್ಧೇಃ' ಎಂದು ಹೇಳಿದಂತಾಗುತ್ತದೆ. ಚಶಬ್ದವು ಕೆಲವು ದೃಷ್ಟಫಲಗಳು ದೊರೆಯುವುದನ್ನು ನಾವೂ ಕೂಡ ಅಂಗೀಕರಿಸಿದ್ದೇವೆ ಎಂಬುದನ್ನು ಸೂಚನೆ ಮಾಡುತ್ತಿದೆ. ಆದ್ದರಿಂದ ಅನುಪಲಬ್ಧೇಃ = ಅತೀಂದ್ರಿಯವಾದ ಜಗತ್‌ಕರ್ತೃತ್ವಾದಿಗಳಿಗಿಂತ, ಇತರೇಷಾಂ = ಭಿನ್ನವಾದ ಪ್ರತ್ಯಕ್ಷಯೋಗ್ಯವಾದ ಪಾಶುಪತಾದಿ ಶಾಸ್ತ್ರಗಳಲ್ಲಿ ಹೇಳಲ್ಪಟ್ಟ ಫಲಗಳು, ಅನುಪಲಬ್ಧೇಃ = ಪ್ರತ್ಯಕ್ಷವಾಗಿ ಕಾಣಿಸುತ್ತಿಲ್ಲ. ಅನಿಷ್ಟವಾದ ಆಚರಣೆಯಿಂದ ಕ್ರಿಯಾಪರಿಲೋಪವಾದರೂ ದುಷ್ಪರಿಣಾಮ ಕಾಣಿಸುತ್ತಿಲ್ಲ. ಮತ್ತು ವಿಧಾನ ಮಾಡಲ್ಪಟ್ಟ ಸತ್ಕರ್ಮಾಚರಣೆಯಿಂದ ಶುಭಫಲಗಳು ದೊರೆಯುತ್ತಿಲ್ಲ. ಆದ್ದರಿಂದ ಪಾಶುಪತಾದಿಸ್ಮೃತಿಗಳು ಅಪ್ರಮಾಣವಾಗಿವೆ ಎಂದರ್ಥ.

ಬ್ರಹ್ಮಸೂತ್ರಭಾಷ್ಯ

ಪಾಶುಪತಾದಿಸ್ಮೃತಿಗಳಲ್ಲಿ ಹೇಳಿದ ಫಲ ದೊರೆಯುತ್ತಿಲ್ಲ

ब्रह्मसूत्रभाष्यम् – ।। इतरेषां चानुपलब्धेः ।।२।।

इतरेषां तासु स्मृतिषूक्तानां फलानां प्रत्यक्षतोऽनुपलब्धेरप्रामाण्यं तासां युक्तम् ।

ಅನುವಾದ - ಪಾಶುಪತಾದಿಸ್ಮೃತಿಗಳಲ್ಲಿ ಹೇಳಲ್ಪಟ್ಟ ದೃಷ್ಟಫಲಕವಾದ ಕರ್ಮಗಳ ಫಲವು ಪ್ರತ್ಯಕ್ಷವಾಗಿ ಸಿದ್ಧವಾಗುತ್ತಿಲ್ಲ. ಆದ್ದರಿಂದ ಅವುಗಳಿಗೆ ಅಪ್ರಾಮಾಣ್ಯವನ್ನು ಹೇಳುವುದೇ ಯುಕ್ತ.

ಪ್ರತಿಪದಾರ್ಥ -- ವೈಷ್ಣವ ಸ್ಮೃತಿಗಳು ಪರಮಾತ್ಮನಾದ ಮಹಾವಿಷ್ಣುವಿನಿಂದ ಪ್ರಣೀತವಾದ ಕಾರಣ ಇವುಗಳ ಸಹಾಯ

ಹೊಂದಿದ ಶ್ರುತಿಗಳು ಪ್ರಬಲವಾಗಿವೆ. ಆದ್ದರಿಂದ ವಿಷ್ಣುವಿಗೆ ಜಗತ್ಕಾರಣತ್ವವು ಸಿದ್ಧವಾಗುತ್ತದೆ ಎಂದು ಹಿಂದಿನ ಸೂತ್ರದಲ್ಲಿ ಹೇಳಿದ್ದು ಸರಿಯಲ್ಲ. ಹಾಗಾದಲ್ಲಿ ಪಾಶುಪತಾದಿಸ್ಮೃತಿಗಳಿಗೆ ಅಪ್ರಾಮಾಣ್ಯದೋಷವು ಬರಬೇಕಾದೀತು. ಆಪ್ತೋಕ್ತವಾದ ಪಾಶುಪತಾದಿಸ್ಮೃತಿಗಳಿಗೆ ಅಪ್ರಾಮಾಣ್ಯವನ್ನು ಹೇಳುವುದು ತಪ್ಪಲ್ಲವೇ? ಈ ಆಶಂಕೆಯನ್ನು ಪರಿಹರಿಸಲು ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ. ಇತರೇಷಾಂ = ರುದ್ರಾದಿಗಳ, ತಾಪು = ಕೃತಿಯೆನಿಸಿದ, ಸ್ಮೃತಿಷು = ಪಾಶುಪತಾದಿ ಸ್ಮೃತಿಗಳಲ್ಲಿ, ಉಕ್ತಾನಾಂ = ಹೇಳಲ್ಪಟ್ಟ, ಫಲಾದೀನಾಂ = ಫಲಗಳು, ಪ್ರತ್ಯಕ್ಷತಃ = ಪ್ರತ್ಯಕ್ಷವಾಗಿ, ಅನುಪಲಬ್ಧೇಃ = ಉಂಟಾಗುವುದು ಕಾಣಿಸುತ್ತಿಲ್ಲ. ಆದ್ದರಿಂದ ತಾಸಾಂ = ಪಾಶುಪತಾದಿಸ್ಮೃತಿಗಳಿಗೆ, ಅಪ್ರಾಮಾಣ್ಯಂ = ಅಪ್ರಾಮಾಣ್ಯವನ್ನು ಹೇಳುವುದು, ಯುಕ್ತಂ = ಯುಕ್ತವಾಗುತ್ತದೆ

ಕೆಲವು ವಾಕ್ಯಗಳು ಪ್ರಮಾಣವಾದರೆ ಸಾಲದು

ब्रह्मसूत्रभाष्यम् – च शब्देन भागोपलब्धिरङ्गीकृता ॥२॥

ಅನುವಾದ - ಸೂತ್ರದಲ್ಲಿರುವ ಚಶಬ್ದದಿಂದ ಪಾಶುಪತಾದಿ ಸ್ಮೃತಿಗಳಲ್ಲಿ ಕೆಲವು ಭಾಗಗಳಲ್ಲಿ ಹೇಳಲ್ಪಟ್ಟ ಪ್ರತ್ಯಕ್ಷಫಲಗಳು ಕಾಣಿಸುತ್ತಿವೆ ಎಂಬುದನ್ನು ನಾವೂ ಕೂಡ ಅಂಗೀಕರಿಸಿದ್ದೇವೆ ಎಂಬುದನ್ನು ಸೂಚಿಸಿದ್ದಾರೆ.

ಪ್ರತಿಪದಾರ್ಥ -- ಪಾಶುಪತಾದಿ ಸ್ಮೃತಿಗಳಲ್ಲಿ ವಿಹಿತವಾದ ಅನುಷ್ಠಾನವನ್ನು ಮಾಡಿದಾಗ ಫಲವು ದೊರೆಯುವುದು ಕಂಡಿದೆ. ಅದರಲ್ಲಿ ನಿಷೇಧ ಮಾಡಿದ್ದನ್ನು ಅನುಷ್ಠಾನ ಮಾಡಿದಾಗ ಅನರ್ಥವುಂಟಾಗುವುದೂ ಕೂಡ ಕಂಡಿದೆ. ಹೀಗಿರುವಾಗ ಸೂತ್ರದಲ್ಲಿ ಅನುಪಲಬ್ಧಿಯನ್ನು ಹೇಗೆ ಹೇಳಿದರು ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ. ಚ ಶಬ್ದೇನ = ಸೂತ್ರದಲ್ಲಿರುವ ಚ ಶಬ್ದದಿಂದ, ಭಾಗೋಪಲಬ್ಧಿಃ = ಕೆಲವು ಭಾಗಗಳಲ್ಲಿ ಹೇಳಲ್ಪಟ್ಟ ಅನುಷ್ಠಾನಗಳಿಂದ ಫಲವು ದೊರೆಯುತ್ತದೆ ಎಂಬುದನ್ನು, ಅಂಗೀಕೃತಾ = ಅಂಗೀಕರಿಸಿದ್ದೇವೆ.

ಸತ್ತರ್ಕದೀಪಾವಳಿ

ಅನುಮಾನ ಅಸಾಧಕ

सत्तर्कदीपावलिः – क्वचिदर्थे प्रत्यक्षसंवादिपशुपतिवाक्यदृष्टान्तेन पशुपतिर्जगत्कारणम् इत्यागमोपि प्रामाण्यम् । पशुपतिवाक्यत्वात् इत्येतदनुमानुकूलत्वेन तदागमस्यापि प्रामाण्यं किं न स्यात्? इति न वाच्यम्। प्रत्यक्षविसंवादिपशुपतिवाक्यदृष्टान्तेन पाशुपतागमाप्रामाण्यस्यापि अनुमातुं शक्यत्वात् तदाह – इतरेषामित्यादिना ।।

"ಪಶುಪತಿಃ ಜಗತ್‌ಕಾರಣಮ್ ಇತ್ಯಾಗಮಃ, ಪ್ರಮಾಣಮ್, ಪಶುಪತಿವಾಕ್ಯತ್ವಾತ್, ಪ್ರತ್ಯಕ್ಷಸಂವಾದಿಪಶುಪತಿವಾಕ್ಯವತ್" ಕೆಲವು ಪಶುಪತಿವಾಕ್ಯಗಳು ಪ್ರತ್ಯಕ್ಷಸಂವಾದಿಯಾಗಿವೆ. ಆದ್ದರಿಂದ ಇವನ್ನು ಪ್ರಮಾಣವೆಂದು ಒಪ್ಪಲೇಬೇಕು. ಇದರಂತೆ ಉಳಿದ ಪಶುಪತಿವಾಕ್ಯಗಳೂ ಕೂಡ ಪಶುಪತಿವಾಕ್ಯವಾಗಿರುವುದರಿಂದಲೇ ಪ್ರಮಾಣ ಎಂಬುದಾಗಿ ಅನುಮಾನದಿಂದ ಸಾಧನೆ ಮಾಡುತ್ತೇವೆ. ಆದ್ದರಿಂದ ಪಶುಪತಿಯು ಜಗತ್‌ಕಾರಣನಾಗಿದ್ದಾನೆಂಬ ಆಗಮವನ್ನು ಪ್ರಮಾಣವೆಂದು ಏಕೆ ಹೇಳಬಾರದು ?

ಇದು ತಪ್ಪು. ಅನುಮಾನದಿಂದ ವಿಪರೀತವಾಗಿಯೂ ಕೂಡ ಸಾಧನೆ ಮಾಡಬಹುದು - 'ಪಶುಪತಿಃ ಜಗತ್ಕಾರಣ ಇತ್ಯಾಗಮಃ, ಅಪ್ರಮಾಣಮ್, ಪಶುಪತಿವಾಕ್ಯತ್ವಾತ್, ಪ್ರತ್ಯಕ್ಷವಿಸಂವಾದಿ ಪಶುಪತಿವಾಕ್ಯವತ್' ಪಶುಪತಿ ಹೇಳಿದ ಕೆಲವು ವಾಕ್ಯಗಳು ಪ್ರತ್ಯಕ್ಷಕ್ಕೆ ಸಂವಾದಿಯಾಗಿರುವುದಿಲ್ಲ. ಆದ್ದರಿಂದ ಅಪ್ರಾಮಾಣವಾಗಿವೆ. ಇದರ ಉದಾಹರಣೆಯಿಂದ ಉಳಿದೆಲ್ಲವೂ ಪಶುಪತಿವಾಕ್ಯ-ಗಳಾಗಿರುವುದರಿಂದ ಅಪ್ರಮಾಣವಾಗಿವೆ. ಪಶುಪತಿಯು ಜಗತ್‌ಕಾರಣನಾಗಿದ್ದಾನೆಂದು ಪ್ರತಿಪಾದನೆ ಮಾಡುವ ಆಗಮವೂ ಕೂಡ ಅಪ್ರಮಾಣವಾಗುತ್ತದೆ ಎಂದು ವಿಪರೀತವಾಗಿ ಅನುಮಾನವನ್ನು ಮಾಡುತ್ತೇವೆ. ಇದನ್ನೇ 'ಇತರೇಷಾಂ ಚಾನುಪಲಬ್ಧೇ' ಎಂಬ ಭಾಷ್ಯದಿಂದ ಉಪಪಾದನೆ ಮಾಡುತ್ತಿದ್ದಾರೆ.

ತತ್ತ್ವಪ್ರದೀಪ

तत्त्वप्रदीपः – इतरेषां चानुपलब्धेः ।। इतरेषां दृष्टोक्तानां फलानां प्रत्यक्षतोऽनुपलब्धेः अदृष्टोक्तानां चानुदयनिर्णयः स्यात् । यद्यपि तत्र कापि यथोदितं तदुपलभ्यते। तथापि नादृष्टप्रवृत्तिः स्यात् । व्यभिचारदर्शनात् ।

'ಇತರೇಷಾಂ' ಪ್ರತ್ಯಕ್ಷ ಯೋಗ್ಯವಾದ ಫಲಗಳು, ಪ್ರತ್ಯಕ್ಷದಿಂದ ದೊರೆಯುವುದು ಕಾಣಿಸುತ್ತಿಲ್ಲವಾದ್ದರಿಂದ ಅದೃಷ್ಟಫಲಗಳ ವಿಷಯದಲ್ಲಿ ಇವು ಪ್ರಮಾಣವಾಗಿದೆ ಎಂದು ನಿರ್ಣಯ ಮಾಡಲು ಸಾಧ್ಯವಿಲ್ಲ. ವಾಸ್ತವಿಕವಾಗಿ ಕೆಲವೆಡೆ ಹೇಳಲ್ಪಟ್ಟ ಫಲಗಳು ದೊರೆಯುತ್ತವೆ. ಆದರೂ ಕೂಡ ಇಷ್ಟರಿಂದಲೇ ಅದೃಷ್ಟಾರ್ಥದಲ್ಲಿ ಪ್ರವೃತ್ತಿ ಉಂಟಾಗುವುದಿಲ್ಲ. ಏಕೆಂದರೆ ಅನೇಕ ಕಡೆ ವ್ಯಭಿಚಾರವು ಕಂಡಿರುತ್ತದೆ.

ತತ್ತ್ವಪ್ರಕಾಶಿಕಾ

ಆಪ್ತವಾಕ್ಯಕ್ಕೆ ಅಪ್ರಾಮಾಣ್ಯವನ್ನು ಒಪ್ಪಬಹುದೇ ?

तत्त्वप्रकाशिका – यदुदितं(क्तं) वैष्णवस्मृतीनां परमाप्तप्रणीतत्वेन तत्साहय्ययुक्तश्रुत्या विष्णोर्जगत्कारणत्वसिद्धिरिति न तद्युक्तम् । तथा सति पाशुपतादिस्मृतीनामप्रामाण्यसङ्गात् । न चाप्तोक्तानां तासामप्रामाण्यं युज्यत इत्याशङ्कं परिहरत्सूत्रं पठित्वा व्याचष्टे – इतरेषां चेति ।।

ಹಿಂದಿನ ಸೂತ್ರದಲ್ಲಿ ವೈಷ್ಣವಸ್ಮೃತಿಗಳು ಪರಮಾತ್ಮನಾದ ವಿಷ್ಣುವಿನಿಂದ ಪ್ರಣೀತವಾಗಿದೆ. ಇಂಥ ಸ್ಮೃತಿಗಳ ಸಹಾಯವುಳ್ಳ ಶ್ರುತಿಗಳು ಅತ್ಯಂತ ಬಲಿಷ್ಠವಾಗಿವೆ. ಈ ಶ್ರುತಿಯಿಂದ ವಿಷ್ಣುವಿನ ಜಗತ್‌ಕಾರಣತ್ವವು ಸಿದ್ಧವಾಗುತ್ತದೆಂದು ಸಮರ್ಥಿಸಲಾಯಿತು. ಇದು ಅಯುಕ್ತ. ಹಾಗಾದಲ್ಲಿ ಪಾಶುಪತಾದಿಸ್ಮೃತಿಗಳಿಗೆ ಅಪ್ರಾಮಾಣ್ಯವನ್ನೇ ಹೇಳಬೇಕಾಗುತ್ತದೆ. ಆಪ್ತವಾಕ್ಯವೆನಿಸಿದ ಈ ಸ್ಮೃತಿಗಳಿಗೆ ಅಪ್ರಾಮಾಣ್ಯವನ್ನು ಒಪ್ಪುವುದು ಯುಕ್ತವಾಗುವುದಿಲ್ಲ. ಈ ಆಶಂಕೆಯನ್ನು ಪರಿಹಾರ ಮಾಡುವುದಕ್ಕಾಗಿ 'ಇತರೇಷಾಂ' ಎಂಬ ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ.

ವಿವರಣೆ - ವಿಷ್ಣುವು ಪರಮಾಪ್ತನಾಗಿದ್ದಾನೆ. ಅವನಿಂದ ರಚಿತವಾದ ಪಂಚರಾತ್ರಸ್ಮೃತಿಯು ಪ್ರಮಾಣವಾಗಲಿ, ಅಂದಮಾತ್ರಕ್ಕೆ ಪಾಶುಪತಸ್ಮೃತಿಯು ಏಕೆ ಅಪ್ರಮಾಣವಾಗಬೇಕು? ಎಂಬ ಪ್ರಶ್ನೆಗೆ ಉತ್ತರಿಸಲು ಈ ಸೂತ್ರ ಹೊರಟಿದೆ.

ರುದ್ರಾದಿಗಳು ಆಪ್ತರಾಗಿದ್ದಾರೆ

तत्वप्रकाशिका – यदुक्तं श्रुत्या विष्णोर्जगत्कारणत्वाभ्युपगमेऽन्यस्मृतीनाम-प्रामाण्यं प्रसज्जत इति तत्र यक्तमेव तासामप्रामाण्यमिति वक्तव्यम् । आप्तप्रणीतानां कथं तदिति चेत् ।

ಶ್ರುತಿಗೆ ಅನುಸಾರಿಯಾಗಿ ವಿಷ್ಣುವಿಗೆ ಜಗತ್ಕಾರಣತ್ವವನ್ನು ಅಂಗೀಕಾರ ಮಾಡಿದರೆ ಪಾಶುಪತಾದಿಸ್ಮೃತಿಗಳಿಗೆ ಅಪ್ರಾಮಾಣ್ಯವು ಬರುತ್ತದೆ ಎಂದು ಏನು ಆಕ್ಷೇಪ ಮಾಡಲಾಯಿತೋ, ಅದು ತಪ್ಪು. ಏಕೆಂದರೆ ಪಾಶುಪತಾದಿಸ್ಮೃತಿಗಳೆಲ್ಲವೂ ಅಪ್ರಮಾಣವಾಗಿವೆ ಎಂದು ಹೇಳಲೇಬೇಕು.

ಪ್ರಶ್ನೆ - ರುದ್ರಾದಿಗಳೂ ಕೂಡ ಆಪ್ತರಾಗಿದ್ದಾರೆ. ತತ್‌ಪ್ರಣೀತವಾದ ಪಾಶುಪತಾದಿಸ್ಮೃತಿಗಳಿಗೆ ಅಪ್ರಾಮಾಣ್ಯವನ್ನು ಹೇಳುವುದು ಹೇಗೆ ಸರಿ ?

ಪಾಶುಪತಾದಿಸ್ಮೃತಿಗಳು ಆಪ್ತೋಕ್ತವೇ ಅಲ್ಲ

तत्वप्रकाशिका – मैवम् । तासु स्मृतिषूक्तानामदृष्टादितरेषां फलानर्थाना-मुक्तानुष्ठानपरित्यागयोः कृतयोरपि प्रत्यक्षतोऽनुपलब्धेराप्तोक्तत्वानिश्चयादिति भावः । प्रत्यक्षयोग्यत्वमितरेषामित्यनेनोच्यते । ननु पाशुपतादिस्मृतिविहित-निषिद्धाचरणे फलानर्थयोरूपलम्भात्कथं तदनुपलब्धिमसूत्रयदित्यत आह – चशब्देनेति ।।

ಉತ್ತರ - ಮೇಲಿನ ಪ್ರಶ್ನೆ ಅಯುಕ್ತ. ಪಾಶುಪತಾದಿಸ್ಮೃತಿಗಳಲ್ಲಿ ಹೇಳಿದ ಪ್ರತ್ಯಕ್ಷಯೋಗ್ಯವಾದ ಕರ್ಮಗಳನ್ನು ಅನುಷ್ಠಾನ ಮಾಡಿದರೆ ಫಲವು ದೊರಕುತ್ತಿಲ್ಲ. ಮತ್ತು ಯಾವ ಕರ್ಮವನ್ನು ಪರಿತ್ಯಾಗ ಮಾಡಿದರೆ ಅನರ್ಥವಾಗುತ್ತದೆಂದು ಹೇಳಲಾಗಿದೆಯೋ, ಆ ಕರ್ಮವನ್ನು ಪರಿತ್ಯಾಗ ಮಾಡಿದರೂ ಕೂಡ ಅನರ್ಥವಾಗುವುದು ಕಾಣಿಸುತ್ತಿಲ್ಲ. ಆದ್ದರಿಂದ ಈ ಶಾಸ್ತ್ರವು ಆಪ್ತೋಕ್ತವಾಗಿದೆಯೆಂದು ನಿಶ್ಚಯವೇ ಆಗುವುದಿಲ್ಲ ಎಂಬುದು ಸಿದ್ಧಾಂತಿಗಳ ಅಭಿಪ್ರಾಯ.

ಸೂತ್ರದಲ್ಲಿರುವ 'ಇತರೇಷಾಂ' ಎಂಬ ಪದವು ಪ್ರತ್ಯಕ್ಷಯೋಗ್ಯವಾದ ವಸ್ತುವನ್ನು ಹೇಳುತ್ತದೆ.

ಪ್ರಶ್ನೆ - ಪಾಶುಪತಾದಿ ಸ್ಮೃತಿಗಳಲ್ಲಿ ಯಾವ ಕರ್ಮವನ್ನು ವಿಧಾನ ಮಾಡಲಾಗಿದೆಯೋ, ಅದನ್ನು ಆಚರಿಸಿದಾಗ ಫಲವು ದೊರಕುವುದು ಕಾಣಿಸುತ್ತಿದೆ. ನಿಷೇಧ ಮಾಡಿದ ಕರ್ಮವನ್ನು ಆಚರಣೆ ಮಾಡಿದಾಗ ಅನರ್ಥವಾಗುವುದೂ ಕೂಡ ಕಾಣಿಸುತ್ತಿದೆ. ಕೆಲವು ಕಡೆ ಹೀಗೆ ಕಾಣಿಸುತ್ತಿರುವುದರಿಂದ ಫಲಾನುಲಬ್ಧಿಯನ್ನು ಸೂತ್ರಕಾರರು ಹೇಗೆ ಹೇಳಿದರು ?

ಉತ್ತರ - ಈ ಪ್ರಶ್ನೆಗೆ ಉತ್ತರವನ್ನು 'ಚ'ಶಬ್ದೇನ ಎಂಬ ಭಾಷ್ಯದಿಂದ ಹೇಳಿರುತ್ತಾರೆ.

ವಿವರಣೆ - ಸೂತ್ರಕಾರರು ಪಾಶುಪತಾದಿ ಶಾಸ್ತ್ರಗಳಲ್ಲಿ ಹೇಳಲ್ಪಟ್ಟ ವಿಹಿತಕರ್ಮದ ಆಚರಣೆಯಿಂದ ಫಲ ದೊರಕುವುದು ನಿಷಿದ್ಧ ಧರ್ಮಾಚರಣೆಯಿಂದ ಅನರ್ಥವಾಗುವುದು ಕಾಣಿಸುತ್ತಿಲ್ಲವೆಂದು ಹೇಳಿದ್ದಾರೆ. ಫಲ ಹಾಗೂ ಅನರ್ಥಗಳು ಸರ್ವಥಾ ಆಗುವುದೇ ಇಲ್ಲ ಎಂದಭಿಪ್ರಾಯವಲ್ಲ. ಕೆಲವೊಮ್ಮೆ ಫಲ ಸಿಗುವುದಿಲ್ಲ ಮತ್ತು ಅನರ್ಥವಾಗುತ್ತಿಲ್ಲ ಎಂದಷ್ಟೇ ಅಭಿಪ್ರಾಯ. ಆದ್ದರಿಂದ ರುದ್ರಾದಿಗಳನ್ನು ಪರಮಾಪ್ತರೆಂದು ನಿಶ್ಚಯಿಸಲು ಸಾಧ್ಯವಿಲ್ಲ. ರುದ್ರಾದಿಗಳು ಹೇಳಲ್ಪಟ್ಟ ಯಾವುದೇ ವಿಷಯದಲ್ಲೂ ಫಲಾನುಪಲಬ್ಧಿಯು ಉಂಟಾಗಬಾರದು. ಕೆಲವು ವಿಷಯದಲ್ಲಿ ಉಂಟಾಗುತ್ತಿರುವುದರಿಂದ ಪರಮಾಪ್ತತ್ವವನ್ನು ನಿರ್ಣಯಿಸಲಾಗದು ಎಂಬುದಷ್ಟೇ ಸೂತ್ರಕಾರರ ಅಭಿಪ್ರಾಯ.

ಪಾಶುಪತಸ್ಮೃತಿಯು ಅಪ್ರಮಾಣ

तत्वप्रकाशिका – न सूत्रकृता सर्वात्मनाऽनुपलब्धिरभ्युपगता यया प्रत्यक्षविरोधः किन्तु भागेनोपलब्धिरप्यङ्गीकृता । चशब्देन तस्याः सूचनात् । न च तथा सत्युपलब्धार्थभागवत्सर्वस्याप्तोक्तत्वम् । भागान्तरवदनाप्तोक्तत्व-सम्भवादिति भावः ।।

ಸೂತ್ರಕಾರರು ಸರ್ವಾತ್ಮನಾ ಫಲದ ಅನುಪಲಬ್ಧಿಯನ್ನು ಅಂಗೀಕರಿಸುವುದಿಲ್ಲ. ಹಾಗಾದಲ್ಲಿ ಪ್ರತ್ಯಕ್ಷ ವಿರೋಧ ಬರುತ್ತಿತ್ತು. ಆದ್ದರಿಂದ ಭಾಗಶಃ ಉಪಲಬ್ಧಿಯನ್ನು ಸೂತ್ರಕಾರರು ಅಂಗೀಕರಿಸಿದ್ದಾರೆ. ಸೂತ್ರದಲ್ಲಿರುವ 'ಚ'ಶಬ್ದವು ಇದನ್ನು ಸೂಚನೆ ಮಾಡುತ್ತಿದೆ.

ಪ್ರಶ್ನೆ - ಹಾಗಾದರೆ ಫಲದ ಉಪಲಬ್ಧಿಯಿಂದ ಯಾವ ವಾಕ್ಯಗಳಿಗೆ ಆಪ್ತೋಕ್ತತ್ವವು

ಸಿದ್ಧವಾಗುತ್ತದೋ, ಅದರ ದೃಷ್ಟಾಂತದಿಂದ ಉಳಿದ ಭಾಗಗಳೂ ಕೂಡ ಆಪ್ತೋಕ್ತವೆಂದು ಸಮರ್ಥಿಸಬಹುದಲ್ಲವೇ?

ಉತ್ತರ - ಇದು ತಪ್ಪು. ಇದೇ ನ್ಯಾಯದಿಂದ ಯಾವ ಭಾಗವು ಫಲ ಅನುಪಲಬ್ಧಿಯಿಂದ ಆಪ್ತೋಕ್ತವಲ್ಲವೆಂದು ನಿರ್ಣಯವಾಗಿದೆಯೋ, ಇದರ ದೃಷ್ಟಾಂತದಿಂದ ಉಳಿದ ವಾಕ್ಯಗಳೂ ಕೂಡ ಅನಾಪ್ತೋಕ್ತವೆಂಗಿವೆ ಎಂದು ವಿಪರೀತವಾಗಿಯೂ ಸಾಧಿಸಬಹುದು. ಆದ್ದರಿಂದ ಪಾಶುಪತಾದಿಸ್ಮೃತಿಗಳಿಗೆ ಪ್ರಾಮಾಣ್ಯವು ಸಿದ್ಧವಾಗುವುದಿಲ್ಲ.

ಭಾವದೀಪ

ಭಾಷ್ಯದ ಪ್ರತಿಜ್ಞೆ ಹಾಗೂ ಹೇತುಗಳ ವ್ಯಾಖ್ಯಾನ

भावदीपः – इतरेषां चानुपलब्धेः ।। भाष्ये प्रतिज्ञांशं तावद् व्याचष्टे – **यदुदितमित्यादिना ।।** हेत्वंशं व्यनक्ति ।। तास्विति ।। अयोग्यानाम नुपलब्धिरदोषायेत्यतोऽदृष्टादितरेषामिति फलादीनामित्यस्यार्थः फलानर्थानामिति। पुमर्थापुमर्थानामित्यर्थः ।

ಭಾಷ್ಯದಲ್ಲಿ ಪ್ರತಿಜ್ಞಾಂಶವನ್ನು ವ್ಯಾಖ್ಯಾನ ಮಾಡಲು 'ಯದುದಿತಂ' ಇತ್ಯಾದಿ ಟೀಕಾವಾಕ್ಯವು ಹೊರಟಿದೆ. ಹೇತ್ವಂಶವನ್ನು ವ್ಯಾಖ್ಯಾನ ಮಾಡಲು 'ತಾಸು' ಇತ್ಯಾದಿ ಟೀಕಾವಾಕ್ಯವು ಹೊರಟಿದೆ.

ಕಣ್ಣಿಗೆ ಕಾಣಿಸದ ಪದಾರ್ಥವು ಅನುಪಲಬ್ಧವಾದರೆ ದೋಷವೇ ಆಗುವುದಿಲ್ಲ? ಎಂಬ ಪ್ರಶ್ನೆಗೆ 'ಅದೃಷ್ಟಾತ್ ಇತರೇಷಾಂ' ಎಂದು ಟೀಕೆಯಲ್ಲಿ ಹೇಳಿದ್ದಾರೆ. ಇದರ ಅರ್ಥವನ್ನೇ 'ಫಲಾನರ್ಥಾನಾಂ' ಎಂದು ವಿವರಿಸಿದ್ದಾರೆ. 'ಫಲಾನರ್ಥಾನಾಂ' ಎಂದರೆ ಪುರುಷಾರ್ಥ ಹಾಗೂ ಅಪುರುಷಾರ್ಥಗಳಿಗೆ ಎಂದರ್ಥ.

ಸೂತ್ರದಲ್ಲಿರುವ ಅನುಪಲಬ್ಧೇಃ ಎಂಬ ಪದಕ್ಕೆ ಎರಡು ಕಡೆ ಅನ್ವಯ

भावदीपः – ततश्च किमित्यतो भावमाह – **आप्तेति ।।** अनुपलब्धिमात्रेण कथमसत्वनिर्णय इत्यत आह – **प्रत्यक्षेति ।।** एतेन सूत्रे न विद्यते उपलब्धिर्यस्य

तदनुपलब्धि उपलब्ध्ययोग्यं तस्माददृष्टादितरेषां प्रत्यक्षयोग्यानां फलानामनुपलब्धेरनुपलम्भादित्येवमनुपलब्धिशब्दः काकाक्षिवदुभयत्रान्वेतीत्युक्तं भवति ॥२॥

ಏನು ಹೇಳಿದಂತಾಯಿತು? ಎಂಬುದರ ಅಭಿಪ್ರಾಯವನ್ನು 'ಆಪ್ತ' ಇತ್ಯಾದಿ ವಾಕ್ಯದಿಂದ ನಿರೂಪಣೆ ಮಾಡುತ್ತಿದ್ದಾರೆ. ಕಣ್ಣಿಗೆ ಕಾಣಿಸುವುದಿಲ್ಲ ಎಂಬ ಮಾತ್ರಕ್ಕೆ ಅಪ್ರಮಾಣವೆಂದು ಹೇಗೆ ನಿರ್ಣಯಿಸುತ್ತೀರಿ? ಎಂಬ ಪ್ರಶ್ನೆಗೆ 'ಪ್ರತ್ಯಕ್ಷಯೋಗ್ಯತ್ವಂ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. ಹೀಗೆ ಹೇಳಿದ್ದರಿಂದ ಸೂತ್ರದಲ್ಲಿರುವ 'ಅನುಪಲಬ್ಧೇಃ' ಎಂಬ ಪದವು ಕಾಕಾಕ್ಷಿನ್ಯಾಯದಿಂದ 'ಅನುಪಲಬ್ಧೇಃ' ಎಂಬ ಪದದ ಮೊದಲು ಮತ್ತು ಅನಂತರವೂ ಅನ್ವಯವನ್ನು ಹೊಂದುತ್ತದೆ. ಮೊದಲಿರುವ 'ಅನುಪಲಬ್ಧೇಃ' ಎಂಬ ಪದಕ್ಕೆ ಪ್ರತ್ಯಕ್ಷ ಅಯೋಗ್ಯವಾದ ಎಂದರ್ಥ. ಎರಡನೇ 'ಅನುಪಲಬ್ಧೇಃ' ಪದಕ್ಕೆ ಕಾಣಿಸುತ್ತಿಲ್ಲವಾದ್ದರಿಂದ ಎಂದರ್ಥ. ಆದ್ದರಿಂದ 'ನ ವಿದ್ಯತೇ ಉಪಲಬ್ಧಿರ್ಯಸ್ಯ ತದನುಪಲಬ್ಧಿಃ' ಎಂಬ ನಿಷ್ಪತ್ತಿಯನ್ನು ಮಾಡಿ ಪ್ರತ್ಯಕ್ಷಕ್ಕೆ ಅಯೋಗ್ಯವಾದ ಎಂದರ್ಥವನ್ನು ಮೊದಲ ಅನುಲಬ್ಧಿ ಶಬ್ದಕ್ಕೆ ತಿಳಿಯಬೇಕು.

ಬ್ರಹ್ಮಸೂತ್ರ

'ಏತೇನ ಯೋಗಃ ಪ್ರತ್ಯುಕ್ತಃ' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – एतेन योगः प्रत्युक्तः ॥

ಯೋಗ ಶಾಸ್ತ್ರದಲ್ಲಿ ಹೇಳಿದ ಫಲಗಳು ಪ್ರತ್ಯಕ್ಷವಾಗಿ ದೊರೆಯುತ್ತಿರುವುದರಿಂದ ಯೋಗ ಶಾಸ್ತ್ರವು ಪ್ರಮಾಣವಲ್ಲವೇ ಎಂದು ಪ್ರಶ್ನಿಸಬಾರದು. ಅದೇ ಯೋಗಶಾಸ್ತ್ರವು ಹೇಳುವಂತೆ ಕೆಲವೊಮ್ಮೆ ಯೋಗವನ್ನು ಅಭ್ಯಾಸ ಮಾಡಿದಾಗ ಯೋಗದ ಉತ್ಕರ್ಷಾವಸ್ಥೆಯಲ್ಲಿಯೂ ಫಲವು ದೊರೆಯುವುದಿಲ್ಲ. ಆದ್ದರಿಂದ ಯೋಗಶಾಸ್ತ್ರವೂ ಕೂಡ ಅಪ್ರಮಾಣವಾಗಿದೆ.

ಅರ್ಥ -- ಏತೇನ = ಫಲ ಅದರ್ಶನವೆಂಬ ಹಿಂದಿನ ಹೇತುವಿನಿಂದಲೇ ಯೋಗಃ = ಯೋಗಶಾಸ್ತ್ರವು, ಪ್ರತ್ಯುಕ್ತಃ = ನಿರಾಕೃತವಾಯಿತು.

॥ ಶ್ರೀವೇದವ್ಯಾಸದೇವರಿಂದ ರಚಿಸಲ್ಪಟ್ಟ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ
ಸ್ಮೃತ್ಯಧಿಕರಣವು ಸಮಾಪ್ತವಾಯಿತು ॥

ಬ್ರಹ್ಮಸೂತ್ರಭಾಷ್ಯ

ಪಾತಂಜಲಯೋಗದಲ್ಲಿ ಹೇಳಿದ್ದೂ ಕೂಡ ಸರಿಯಿಲ್ಲ

ब्रह्मसूत्रभाष्यम् – ।। एतेन योगः प्रत्युक्तः ।।३।।

योगफलं प्रत्यक्षोपलभ्यमिति न मन्तव्यम् ।
उक्ताभ्यासे तत्काल एव फलादृष्टेः ।।३।।

।। इति श्रीमदानन्दतीर्थभगवत्पादाचार्यविरचिते
ब्रह्मसूत्रभाष्ये स्मृत्यधिकरणम् ।। १ ।।

ಅನುವಾದ - ಯೋಗಶಾಸ್ತ್ರದಲ್ಲಿ ಯಾವ ಫಲವು ಹೇಳಲ್ಪಟ್ಟಿದೆಯೋ, ಅದು ಪ್ರತ್ಯಕ್ಷವಾಗಿ ಉಪಲಬ್ಧವಾಗುವುದು ಕಂಡಿದೆ. ಆದ್ದರಿಂದ ಯೋಗಶಾಸ್ತ್ರ ಪ್ರಮಾಣವಾಗುತ್ತದಲ್ಲವೇ? ಎಂದು ತಿಳಿಯಬಾರದು. ಏಕೆಂದರೆ ಯೋಗಶಾಸ್ತ್ರದಲ್ಲಿಯೇ ಹೇಳಿದಂತೆ ಯೋಗಾಭ್ಯಾಸ ಮಾಡಿದಾಗ ಅದರ ಉತ್ಕರ್ಷಕಾಲದಲ್ಲಿ ಅದೇ ಶಾಸ್ತ್ರದಲ್ಲಿ ಹೇಳಲ್ಪಟ್ಟ ಫಲವು ಕೆಲವೊಮ್ಮೆ ಉಂಟಾಗುವುದಿಲ್ಲ. ಆದ್ದರಿಂದ ಯೋಗಶಾಸ್ತ್ರವೂ ಕೂಡ ಅಪ್ರಮಾಣವಾಗಿವೆ.

ಪ್ರತಿಪದಾರ್ಥ -- ಪಾಶುಪತಾದಿಸ್ಮೃತಿಗಳು ಅಪ್ರಮಾಣವಾಗಬಹುದು. ಅಂದ ಮಾತ್ರಕ್ಕೆ ಎಲ್ಲಾ ಅವೈಷ್ಣವಶಾಸ್ತ್ರಗಳು ಅಪ್ರಮಾಣವಾಗುತ್ತವೆಂಬುದಕ್ಕೆ ಹಿಂದಿನ ಸೂತ್ರದಲ್ಲಿ ಹೇಳಿದ್ದು ಕಾರಣವಾಗುವುದಿಲ್ಲ. ಏಕೆಂದರೆ ಯೋಗಸ್ಮೃತಿಯಲ್ಲಿ ಹೇಳಿದ ಫಲಗಳು ನಿಯಮೇನ ಉಂಟಾಗುವುದು ಕಾಣಿಸುತ್ತಿದೆ. ಆದ್ದರಿಂದ ಯೋಗಶಾಸ್ತ್ರವು ಆಪ್ತಪ್ರಣೀತವಾದ್ದರಿಂದ ಪ್ರಮಾಣವೆಂದು ನಿಶ್ಚಯಿಸಬಹುದಲ್ಲವೇ? ಈ ಆಶಂಕೆಗೆ ಮುಂದಿನ ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ - ಯೋಗಫಲಂ = ಯೋಗಶಾಸ್ತ್ರದಲ್ಲಿ

ಹೇಳಿದ ಫಲವು, ಪ್ರತ್ಯಕ್ಷತಃ = ಪ್ರತ್ಯಕ್ಷಪ್ರಮಾಣದಿಂದ, ಉಪಲಭ್ಯತೇ = ದೊರೆಯುತ್ತಿದೆ. ಇತಿ = ಹೀಗೆ, ನ ಮಂತವ್ಯಮ್ = ತಿಳಿಯಬಾರದು. ಏಕೆಂದರೆ ಉಕ್ತಾಭ್ಯಾಸೇ = ಯೋಗಶಾಸ್ತ್ರದಲ್ಲಿ ಹೇಳಿದಂತೆ ಪರಿಶ್ರಮ ಪಟ್ಟರೂ, ತತ್ಕಾಲ ಏವ = ಅದೇ ಕಾಲದಲ್ಲಿ ನಿರ್ದೇಶಿಸಲ್ಪಟ್ಟ , ಫಲಾದೃಷ್ಟೇಃ = ಸ್ವೇದನ ಮೊದಲಾದ ಫಲಗಳು ಕಾಣಿಸುತ್ತಿಲ್ಲ. ಆದ್ದರಿಂದ ಅವೈಷ್ಣವಸ್ಮೃತಿಗಳೆಲ್ಲವೂ ಅಪ್ರಮಾಣವೆಂದು ನಿರ್ಧಾರವಾಯಿತು.

॥ ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ವಿರಚಿತವಾದ ಬ್ರಹ್ಮಸೂತ್ರಭಾಷ್ಯದ ಕನ್ನಡಾನುವಾದದಲ್ಲಿ ಸ್ಮೃತ್ಯಧಿಕರಣವು ಸಮಾಪ್ತವಾಯಿತು ॥

ಸತ್ತರ್ಕದೀಪಾವಳಿ

'ವಾಚಾ ವಿರೂಪ ನಿತ್ಯಯಾ' ಎಂಬುದರಿಂದ ವೇದವು ನಿತ್ಯವೆಂದು ಸಿದ್ಧವಾಗಿದೆ

सत्तर्कदीपावलिः – श्रुतिस्मृतिविहितैहिककर्मणोऽनुष्ठानेऽपि क्वचित् फलाभावदर्शनात् अन्यागमवत् श्रुत्यादेरप्रामाण्यं किं न स्यादिति न वाच्यम्। 'वाचा विरूप नित्यया' इत्यादिप्रमाणसिद्धत्वेन वेदानां नित्यत्वात् निर्दोषत्वेन तत्प्रामाण्यस्य अपरिहार्यत्वात् वेदमूलत्वेन पञ्चरात्रादेरपि प्रामाण्यसिद्धेः । यत् वेदाद्युक्तस्यैहिककाम्यकर्मणोऽनुष्ठानेऽपि फलादर्शनं तत्कर्तृवैगुण्यात् प्रतिबन्धककर्मवशाद् वा इति मन्तव्यम् ॥१॥

ಶ್ರುತಿ-ಸ್ಮೃತಿ ಇವುಗಳಲ್ಲಿ ಯಾವ ಕರ್ಮಗಳನ್ನು ವಿಧಾನ ಮಾಡಲಾಗಿದೆಯೋ, ಅವುಗಳನ್ನು ಅನುಷ್ಠಾನ ಮಾಡಿದರೂ ಕೂಡ ಕೆಲವೊಮ್ಮೆ ಫಲವು ದೊರಕುತ್ತಿಲ್ಲ. ಆದ್ದರಿಂದ ಪಾಶುಪತ್ಯಾದಗಮಗಳಂತೆ ಶ್ರುತ್ಯಾದಿಗಳಿಗೂ ಕೂಡ ಅಪ್ರಾಮಾಣ್ಯವನ್ನು ಏಕೆ ಹೇಳಬಾರದು?

ಈ ಆಶಂಕೆಯು ಅಸಾಧುವಾಗಿದೆ. ಏಕೆಂದರೆ 'ವಾಚಾ ವಿರೂಪ ನಿತ್ಯಯಾ' ಇತ್ಯಾದಿ ಪ್ರಮಾಣಗಳಿಂದ ವೇದವು ನಿತ್ಯವೆಂದು ಸಿದ್ಧವಾಗಿದೆ. ನಿತ್ಯವಾಗಿದ್ದರಿಂದಲೇ ನಿರ್ದುಷ್ಟವಾಗಿದೆ.

ಆದ್ದರಿಂದಲೇ ತತ್‌ಪ್ರಾಮಾಣ್ಯವನ್ನು ಒಪ್ಪಲೇ ಬೇಕು. ಇಂಥ ಸ್ವತಃಪ್ರಮಾಣವಾದ ಪಂಚರಾತ್ರಾದಿಗಳಿಗೂ ಕೂಡ ವೇದಮೂಲಕವಾದ್ದರಿಂದ ಪ್ರಾಮಾಣ್ಯವು ಸಿದ್ಧವಾಗುತ್ತದೆ. ಕೆಲವೊಮ್ಮೆ ಇಂಥ ನಿತ್ಯವಾದ ವೇದಗಳಲ್ಲಿ ಹೇಳಲ್ಪಟ್ಟ ಐಹಿಕವಾದ ಕಾಮ್ಯಕರ್ಮಗಳನ್ನು ಅನುಷ್ಠಾನ ಮಾಡಿದರೂ ಕೂಡ ಫಲ ದೊರಕದೆಯೇ ಇರುವುದು ಕಂಡಿದೆ. ಇದು ಕರ್ತೃವೈಗುಣ್ಯನಿಮಿತ್ತಕವಾಗಿ ಅಥವಾ ಪ್ರತಿಬಂಧಕವಾದ ಕರ್ಮದ ಅಧೀನವಾಗಿ ಫಲ ದೊರಕುತ್ತಿಲ್ಲ ಎಂಬುದಾಗಿ ತಿಳಿಯಬೇಕು.

॥ ಇಲ್ಲಿಗೆ ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ ಸತ್ತರ್ಕದೀಪಾವಳಿಯಲ್ಲಿ
ಸ್ಮೃತ್ಯಧಿಕರಣದ ಕನ್ನಡಾನುವಾದವು ಸಮಾಪ್ತವಾಯಿತು ॥

ತತ್ತ್ವಪ್ರದೀಪ

तत्वप्रदीपः – एवमपि योगशास्त्रोदितानां प्रस्वेदकम्पादिदृष्टफलानाम् उपलभ्यत्वात् तत् प्रमाणम् इत्यत आह – एतेन योगः प्रत्युक्तः ॥ योगशास्त्रोदितयोगाभ्यासफलं प्रत्यक्षोपलभ्यम् इति न मन्तव्यम् । यथोक्ताभ्यासे कृते यथोक्तकाल एव तत्तत्फलादृष्टेः ।

इति स्मृत्यधिकरणम् ॥

ಇದರಂತೆ ಯೋಗಶಾಸ್ತ್ರದಲ್ಲಿ ಹೇಳಲ್ಪಟ್ಟ ಬೆವರು ಬರುವಿಕೆ, ಶರೀರದ ಕಂಪನ ಮೊದಲಾದ ದೃಷ್ಟಫಲಗಳು ಕಾಣಿಸಿರುವುದರಿಂದ ಯೋಗಶಾಸ್ತ್ರಕ್ಕೂ ಕೂಡ ಪ್ರಾಮಾಣ್ಯವನ್ನು ಒಪ್ಪಬೇಕಲ್ಲವೇ? ಎಂಬ ಪ್ರಶ್ನೆಗೆ ಉತ್ತರವನ್ನು ನೀಡಲು 'ಏತೇನ ಯೋಗಃ ಪ್ರತ್ಯುಕ್ತಃ' ಎಂಬ ಭಾಷ್ಯವು ಹೊರಟಿದೆ. ಯೋಗಶಾಸ್ತ್ರದಲ್ಲಿ ಹೇಳಲ್ಪಟ್ಟ ಯಾವ ಯೋಗಾರ್ಥದ ಫಲವಿದೆಯೋ,

ಅದು ಪ್ರತ್ಯಕ್ಷತಃ ಉಪಲಬ್ಧವಾಗಿದೆಯೆಂದು ತಿಳಿಯಬಾರದು. ಏಕೆಂದರೆ ಯೋಗಶಾಸ್ತ್ರದಲ್ಲಿ ಹೇಳಿದಂತೆ ಕ್ರಮಪ್ರಕಾರವಾಗಿ ಆಚರಣೆ ಮಾಡಿದರೂ ಕೂಡ, ಆ ಶಾಸ್ತ್ರವು ಹೇಳುವ ಕಾಲದಲ್ಲಿಯೇ ಫಲವು ದೊರಕುವುದು ಕಾಣಿಸುತ್ತಿಲ್ಲ.

॥ ಇಲ್ಲಿಗೆ ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ ತತ್ವಪ್ರದೀಪದಲ್ಲಿ
ಸ್ಮೃತ್ಯಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

ತತ್ವಪ್ರಕಾಶಿಕಾ

ಯೋಗಸ್ಮೃತಿಗಳಲ್ಲಿ ಹೇಳಿದ್ದು ನಿಯಮೇನ ದೊರಕುತ್ತಿಲ್ಲ

तत्वप्रकाशिका – न तथापि सर्वासामवैष्णवस्मृतीनामप्रामाण्यं योगस्मृत्युक्तफलादीनामव्यभिचारेणोपलम्भादाप्तप्रणीतत्वनिश्चयोपपत्तेरित्याङ्क्षं परिहरत्सूत्रमुपन्यस्य व्याचष्टे – एतेनेति ।।

ಆದರೂ ಕೂಡ ಎಲ್ಲಾ ಅವೈಷ್ಣವ ಸ್ಮೃತಿಗಳಿಗೆ ಅಪ್ರಾಮಾಣ್ಯವನ್ನು ಹೇಳಲು ಸಾಧ್ಯವಿಲ್ಲ. ಯೋಗಸ್ಮೃತಿಗಳಲ್ಲಿ ಹೇಳಲ್ಪಟ್ಟ ವಾಕ್ಯಗಳಿಂದ ನಿಯಮೇನ ಫಲ ದೊರಕುವುದು ಪ್ರತ್ಯಕ್ಷಸಿದ್ಧವಾಗಿದೆ. ಆದ್ದರಿಂದ ಅದನ್ನು ಬರೆದ ಪತಂಜಲಿ ಮೊದಲಾದ ಋಷಿಗಳು ಆಪ್ತರೆಂದು ನಿರ್ಣಯ ಮಾಡಬಹುದಲ್ಲವೇ? ಈ ಪ್ರಶ್ನೆಗೆ ಉತ್ತರವನ್ನು ನೀಡಲು 'ಏತೇನ' ಇತ್ಯಾದಿ ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ.

ಯಾವುದೇ ಅವೈದಿಕ ಸ್ಮೃತಿಗಳು ಆಪ್ತೋಕ್ತವಲ್ಲ

तत्वप्रकाशिका – योगस्मृत्युक्तफलादीनामव्यभिचारेणोपलम्भादाप्तोक्तत्व-निश्चयोपपत्तेरप्रामाण्यायोग इति न मन्तव्यम् । तदुक्तफलानां स्वेदनगात्रभन्जनादीनां प्रत्यक्षोपलब्धावपि प्रथमं स्वेदनं द्वितीयं गात्रभन्जनमित्या-द्युक्ताभ्यासावस्थोत्कर्षसम्पत्तिकाल एव स्वेदनादीनामदृष्टेरा

ಸ್ಮೃತ್ಯುಕ್ತತ್ವಾನಿಶ್ಚಯಾದಿತಿ ಭಾವಃ । ಅತೋऽವೈದಿಕಸ್ಮೃತೀನಾಮಪ್ರಮಾಣತ್ವಾನ್ನ ಶ್ರುತ್ಯುಕ್ತಸ್ಯ ವಿಷ್ಣೋರ್ಜಗತ್ಕಾರಣತ್ವಸ್ಯ ತದ್ವಿರೋಧ ಇತಿ ಸಿದ್ಧಮ್ ।। ೩ ।।

।। ಇತಿ ಶ್ರೀಮಜ್ಜಯತೀರ್ಥಭಿಕ್ಷುವಿರಚಿತಾಯಾಂ ತತ್ವಪ್ರಕಾಶಿಕಾಯಾಮ್ ಸ್ಮೃತ್ಯಧಿಕರಣಮ್ ।।

ಯೋಗಸ್ಮೃತಿಯಲ್ಲಿ ಹೇಳಲ್ಪಟ್ಟ ಫಲವು ನಿಯಮೇನ ದೊರಕುತ್ತಿದೆ. ಆದ್ದರಿಂದ ಅದನ್ನು ರಚನೆ ಮಾಡಿದ ಪತಂಜಲಿ ಮೊದಲಾದವರು ಆಪ್ತರೇ ಆಗಿದ್ದಾರೆಂದು ನಿಶ್ಚಯ ಮಾಡಬಹುದು. ತದುಕ್ತವಾದ ಸ್ಮೃತಿಗಳಿಗೆ ಅಪ್ರಾಮಾಣ್ಯವನ್ನು ಹೇಳಬಾರದು ಎಂಬ ವಿಷಯವು ಅಯುಕ್ತವಾಗಿದೆ. ಏಕೆಂದರೆ ಅಲ್ಲಿಯೂ ಕೂಡ ಫಲನುಪಲಬ್ಧಿಯು ಇದ್ದೇ ಇದೆ. ದೇಹ ಬೆವರುವುದು, ಶರೀರ ಕುಗ್ಗುವುದು ಇವೇ ಮೊದಲಾದ ಯೋಗಶಾಸ್ತ್ರದಲ್ಲಿ ಹೇಳಿದ ಫಲಗಳು ಪ್ರತ್ಯಕ್ಷತಃ ಸಿದ್ಧವಾಗಿವೆ. ಆದರೂ ಕೂಡ ಮೊದಲು ಬೆವರುವುದು, ಅನಂತರ ದೇಹ ಕುಗ್ಗುವುದು ಇತ್ಯಾದಿಯಾಗಿ ಯೋಗಾಭ್ಯಾಸದ ಉತ್ಕರ್ಷಾವಸ್ಥೆಯನ್ನು ಹೊಂದಿದಾಗಲೇ ಕೆಲವೊಮ್ಮೆ ದೇಹ ಬೆವರುವುದಿಲ್ಲ. ಆದ್ದರಿಂದ ಇವರ ಮಾತು ಸುಳ್ಳಾಯಿತಲ್ಲವೇ? ಹೀಗಿರುವಾಗ ಪತಂಜಲಿ ಮೊದಲಾದವರನ್ನು ಆಪ್ತರೆಂದು ಹೇಳಲು ಹೇಗೆ ಸಾಧ್ಯ ? ಆದ್ದರಿಂದ ಅವೈದಿಕವಾದ ಎಲ್ಲಾ ಸ್ಮೃತಿಗ್ರಂಥಗಳು ಅನಾಪ್ತೋಕ್ತವಾಗಿವೆ ಎಂಬುದು ಸೂತ್ರಕಾರರ ಅಭಿಪ್ರಾಯ.

ಆದ್ದರಿಂದ ಅವೈದಿಕ ಸ್ಮೃತಿಗಳು ಅಪ್ರಮಾಣವಾಗಿವೆ ಎಂದು ಸಿದ್ಧವಾಯಿತು. ಶ್ರುತಿಯಿಂದ ಪ್ರತಿಪಾದ್ಯವಾದ ವಿಷ್ಣುವಿನ ಜಗತ್ಕಾರಣತ್ವಕ್ಕೆ ಯಾವುದೇ ವಿರೋಧವಿಲ್ಲ ಎಂಬ ಪ್ರಮೇಯವು ಸಿದ್ಧವಾಯಿತು.

।। ಇಲ್ಲಿಗೆ ಶ್ರೀಮಜ್ಜಯತೀರ್ಥಮುನಿಗಳಿಂದ ವಿರಚಿತವಾದ ತತ್ವಪ್ರಕಾಶಿಕಾಟೀಕೆಯಲ್ಲಿ
ಸ್ಮೃತ್ಯಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ।।

ಭಾವದೀಪ

ಈ ಸೂತ್ರ ಬೇರೆ ಅಧಿಕರಣಕ್ಕೆ ಸೇರಿದ್ದಲ್ಲ

भावदीपः – ।। एतेन योगः प्रत्युक्तः ।। परीत्याधिकरणान्तरत्वशङ्काव्युदासाय पूर्वसूत्रोक्तस्योपर्यभ्यधिकाशङ्का मेतेनेत्यतिदेशोपयुक्तामाह **– न तथापीति ।। अत इति ।।** प्रबलश्रुतिविरोधात् फलादृष्ट्या आप्तोक्तत्वानिश्चयाच्चेत्यर्थः। फलं त्वाद्यसूत्रार्थोपसंहार एवोक्तमिति भावः॥

।। इति राघवेन्द्रयतिकृते भावदीपे स्मृत्यधिकरणम् ।।

ಪರಮತದ ಪ್ರಕಾರ ಈ ಸೂತ್ರವು ಬೇರೆ ಅಧಿಕರಣವಾಗಿದೆಯಲ್ಲವೇ? ಎಂಬ ಆಶಂಕೆಯ ಪರಿಹಾರಕ್ಕೋಸ್ಕರ ಹಿಂದಿನ ಸೂತ್ರದಲ್ಲಿ ಹೇಳಲ್ಪಟ್ಟ ವಿಷಯದ ಮೇಲೆ ಅಭ್ಯಧಿಕಾಶಂಕೆಯನ್ನು 'ಏತೇನ' ಎಂಬುದರಿಂದ ಅತಿದೇಶ ಮಾಡಲು ಉಪಯುಕ್ತವಾದದ್ದನ್ನು 'ನ ತಥಾಪಿ' ಎಂಬುದರಿಂದ ನಿರೂಪಣೆ ಮಾಡಿದ್ದಾರೆ. 'ನ ತಥಾ' ಎಂಬ ಪದಕ್ಕೆ ಪ್ರಬಲಶ್ರುತಿವಿರೋಧವಿರುವುದರಿಂದ ಫಲವು ಕಾಣಿಸದ ಕಾರಣ ಆಪ್ತೋಕ್ತತ್ವವು ನಿಶ್ಚಯವಾಗಿಲ್ಲ ಎಂದರ್ಥ. ಅಧಿಕರಣದ ಫಲವನ್ನು ಪ್ರಥಮಸೂತ್ರಾರ್ಥದ ಉಪಸಂಹಾರದಲ್ಲಿಯೇ ಹೇಳಿದ್ದಾಗಿದೆ.

॥ ಇಲ್ಲಿಗೆ ಶ್ರೀಮದ್‌ರಾಘವೇಂದ್ರತೀರ್ಥರಿಂದ ವಿರಚಿತವಾದ ಭಾವದೀಪದ
ಸ್ಮೃತ್ಯಧಿಕರಣದ ಕನ್ನಡ ಅನುವಾದವು ಮುಗಿಯಿತು ॥

॥ ಶ್ರೀ ಮಧ್ವೇಶಾರ್ಪಣಮಸ್ತು ॥

।। श्रीजानकीवदनाम्भोजराजहंसाय रामचन्द्राय नमः ।।

।। श्री गुरुभ्यो नमः ।।

श्री राघवेन्द्रतीर्थविरचिता

तन्त्रदीपिका

स्मृत्यधिकरणम् (२।१।१)

ದ್ವಿತೀಯಾಧ್ಯಾಯ ಏಕೆ ಹೊರಟಿದೆ ?

पूर्वेणोक्तसमन्वयेऽनेनाध्यायेन विरोधो निरस्यते । युक्ति-समय-श्रुति-युक्त्युपेतश्रुतिविरोधाः पादेषु क्रमेण निरस्यन्ते । आद्यपादे प्रबलत्वाद्युक्तिविरोधः, स्मृतिविरोधश्चतूरूपत्वादाद्यनये निरस्यते ।।

ಹಿಂದಿನ ಅಧ್ಯಾಯದಲ್ಲಿ ಮಹಾವಿಷ್ಣುವಿನಲ್ಲಿ ಸಕಲಶಬ್ದಗಳ ಸಮನ್ವಯವನ್ನು ಸಾಧಿಸಿದ್ದಾಯಿತು. ಈ ವಿಷಯದಲ್ಲಿ ಯಾವ ವಿರೋಧವು ಪ್ರಾಪ್ತವಾಗುತ್ತದೋ, ಅದರ ಪರಿಹಾರಕ್ಕಾಗಿ ಎರಡನೆಯ ಅಧ್ಯಾಯವು ಹೊರಟಿದೆ. ಆ ವಿರೋಧವು ಒಟ್ಟು ನಾಕುವಿಧ - ೧. ಯುಕ್ತಿವಿರೋಧ, ೨. ಸಮಯವಿರೋಧ, ೩. ಶ್ರುತಿವಿರೋಧ, ೪. ಯುಕ್ತಿಸಹಿತವಾದ ಶ್ರುತಿವಿರೋಧ ಎಂದು. ಕ್ರಮವಾಗಿ ನಾಕು ಪಾದಗಳಲ್ಲಿ ಈ ನಾಕುಬಗೆಯ ವಿರೋಧಗಳನ್ನು ಪರಿಹರಿಸುವವರಿದ್ದಾರೆ. ಪ್ರಥಮಪಾದವು ಯುಕ್ತಿವಿರೋಧವನ್ನು ಪರಿಹರಿಸುತ್ತಿದೆ. ಏಕೆಂದರೆ ಮೇಲಿನ ನಾಕುಬಗೆಯ ವಿರೋಧಗಳಲ್ಲಿ ಯುಕ್ತಿವಿರೋಧವೇ ಪ್ರಬಲವಾಗಿದೆ. ಅದರಲ್ಲೂ ಸ್ಮೃತಿವಿರೋಧ ಪರಿಹಾರಕ್ಕಾಗಿ ಮೊದಲನೆಯ ಅಧಿಕರಣ ಹೊರಟಿದೆ. ಏಕೆಂದರೆ ಸ್ಮೃತಿವಿರೋಧವು ಮೇಲಿನ ನಾಕುಬಗೆಯ ವಿರೋಧರೂಪವನ್ನು ತಾಳಿದೆ.

ಸ್ಮೃತ್ಯಧಿಕರಣ ಏಕೆ ಹೊರಟಿದೆ ?

स्मृत्यनवकाशदोषप्रसङ्ग इति चेन्नान्यस्मृत्यवकाशदोषप्रसङ्गात् ।। २-१-१ ।।

अत्र स्मार्तस्तावत् वेदप्रामाण्यवादिनस्तदवादिन इति द्वेधा । आद्येऽपि तदपौरुषेयत्ववादिनस्तदवादिन इति द्वेधा । तत्सर्वस्मृत्यविरोधोऽत्रोच्यते।

ಸ್ಮೃತಿಯನ್ನು ಪ್ರಮಾಣವೆಂದು ಒಪ್ಪುವವರು ಎರಡುವಿಧ - ೧. ವೇದಪ್ರಾಮಾಣ್ಯವಾದಿಗಳು, ೨. ವೇದಪ್ರಾಮಾಣ್ಯವನ್ನು ಒಪ್ಪದವರು ಎಂದು. ಇವರಿಬ್ಬರಲ್ಲಿ ವೇದಪ್ರಾಮಾಣ್ಯವಾದಿಗಳು ಪುನಃ ಎರಡು ವಿಧ - ೧. ವೇದಕ್ಕೆ ಅಪೌರುಷೇಯತ್ವವನ್ನು ಒಪ್ಪುವವರು. ೨. ವೇದಕ್ಕೆ ಅಪೌರುಷೇಯತ್ವವನ್ನು ಒಪ್ಪದವರು. ಈ ಎಲ್ಲಾ ಬಗೆಯ ಸ್ಮಾರ್ತರು ಯಾವ ವಿರೋಧವನ್ನು ಆಕ್ಷೇಪ ಮಾಡುವರೋ, ಅದರ ಪರಿಹಾರಕ್ಕಾಗಿ ಈ ಮೊದಲನೇ ಅಧಿಕರಣವು ಪ್ರವೃತ್ತವಾಗಿವೆ.

ಸೂತ್ರದ ಪೂರ್ವಪಕ್ಷ ಭಾಗಕ್ಕೆ ಅರ್ಥ

स्मृतीनां शैवसाङ्ख्यकाणादादिस्मृतीनां अन्यपरत्वाभावरूपानवकाशेन विष्णुकर्तृत्वादिबोधकश्रुतेरप्रामाण्यदोषप्रसङ्ग इति तदनुरोधेन श्रुतिर्नेयेति चेन्न ।

ಸೂತ್ರದ 'स्मृत्यनवकाशदोषप्रसंगः इति चेत्' ಎಂಬ ಪೂರ್ವಪಕ್ಷ ಭಾಗದ ಅರ್ಥ ಹೀಗಿದೆ - स्मृतीनाम = ಶೈವ, ಸಾಂಖ್ಯ, ಕಾಣಾದ ಮೊದಲಾದ ಸ್ಮೃತಿಗಳಿಗೆ, ಅನವಕಾಶ = ಶಿವ, ಪ್ರಕೃತಿ ಮೊದಲಾದ ವಿಷಯಗಳನ್ನು ಬಿಟ್ಟು, ಬೇರೆ ವಿಷಯದಲ್ಲಿ ತಾತ್ಪರ್ಯ ಇಲ್ಲದಿರುವುದರಿಂದ ನಿರವಕಾಶಗಳಾಗಿವೆ. ಆದ್ದರಿಂದ ವಿಷ್ಣುವಿಗೆ ಕರ್ತೃತ್ವವನ್ನು ಪ್ರತಿಪಾದನೆ ಮಾಡುವ ಶ್ರುತಿಗೆ दोषप्रसंगः = ಅಪ್ರಾಮಾಣ್ಯ ಎಂಬ ದೋಷಪ್ರಸಂಗವಿದೆ. ಆದ್ದರಿಂದ ಶೈವಾದಿಸ್ಮೃತಿಗಳಿಗೆ ಅನುಗುಣವಾಗಿಯೇ ಶ್ರುತಿಗೆ ರುದ್ರಾದಿಜಗತ್‌ಕಾರಣತ್ವಪರವಾಗಿ ವ್ಯಾಖ್ಯಾನವನ್ನು ಮಾಡಬೇಕು.

ಇತಿ ಚೇನ್ನ = ಈ ಪೂರ್ವಪಕ್ಷವು ತಪ್ಪು.

ಸೂತ್ರದ ಸಿದ್ಧಾಂತ ಭಾಗಕ್ಕೆ ಅರ್ಥ

अन्यासां पञ्चरात्रस्मृतीनां विष्णुकर्तृत्वादर्थान्तरपरत्वाभावरूपानवकाशेन तद्विरुद्धत्वादितरस्मृतीनामेवाप्रामाण्यदोषप्रसङ्गात् । एवञ्च शैवादिस्मृतिषु श्रौतस्मृतिभिः प्रतिरुद्धास्वप्रतिबद्धश्रुतिभिरेव विष्णुकर्तृत्वादिसिद्धिरिति भावः ।

'ಅನ್ಯಸ್ಮೃತ್ಯನವಕಾಶದೋಷಪ್ರಸಂಗಾತ್' ಎಂಬ ಸೂತ್ರದ ಭಾಗಕ್ಕೆ ಹೀಗರ್ಥ - ಅನ್ಯಸ್ಮೃತಿ = ಪಾಶುಪತಾದಿಸ್ಮೃತಿಗಳಿಗಿಂತ ಬೇರೆಯಾದ ಪಂಚರಾತ್ರಾದಿಸ್ಮೃತಿಗಳಿಗೆ, ಅನವಕಾಶ = ವಿಷ್ಣುಕರ್ತೃತ್ವವನ್ನು ಬಿಟ್ಟು ಬೇರೆ ವಿಷಯದಲ್ಲಿ ತಾತ್ಪರ್ಯವನ್ನು ಹೊಂದದ ಕಾರಣ ನಿರವಕಾಶವಾಗಿವೆ. ಇಂಥ ನಿರವಕಾಶವಾದ ಪಂಚರಾತ್ರಸ್ಮೃತಿಗಳಿಗೆ ವಿರುದ್ಧವಾದ ಪಾಶುಪತಾದಿಸ್ಮೃತಿಗಳಿಗೆ, ದೋಷಪ್ರಸಂಗಾತ್ = ಅಪ್ರಾಮಾಣ್ಯ ಎಂಬ ದೋಷಪ್ರಸಂಗವಿದೆ.

ಯಾವಾಗ ಶ್ರುತಿಗೆ ಅನುಗುಣವಾದ ಸ್ಮೃತಿಗಳಿಂದ ಪಾಶುಪತಾದಿಸ್ಮೃತಿಗಳು ವಿರುದ್ಧವಾದ್ದರಿಂದ ಬಾಧಿತವಾಗಿವೆಯೋ, ಆ ಕಾರಣದಿಂದಲೇ ವಿಷ್ಣುವಿಗೆ ಜಗತ್‌ಕರ್ತೃತ್ವವನ್ನು ಪ್ರತಿಪಾದನೆ ಮಾಡುವ ಶ್ರುತಿಗಳಿಗೆ ಯಾವುದೇ ಸ್ಮೃತಿಗಳ ವಿರೋಧವಿಲ್ಲವೆಂದು ಸಿದ್ಧವಾಯಿತು. ಹೀಗೆ ಅಪ್ರತಿಬದ್ಧವಾದ ಶ್ರುತಿಗಳಿಂದ ವಿಷ್ಣುಕರ್ತೃತ್ವವು ಸಿದ್ಧವಾಗುತ್ತದೆ. ಇಷ್ಟು ಸೂತ್ರಾರ್ಥ.

ಸೂತ್ರದ ಸಿದ್ಧಾಂತ ಭಾಗಕ್ಕೆ ಮತ್ತೊಂದು ವ್ಯಾಖ್ಯಾನ

यद्वा अन्यासां श्रौतस्मृतीनां श्रुतिसंवादेन बलवत्त्वादनवकाशेन शैवादि स्मृतीनामप्रामाण्याख्यदोषस्य प्रकर्षेण सङ्गात् सम्बन्धादत्यन्ता-प्रामण्यादित्यर्थः । तत्त्वित्यत्रोपक्रमाद्यैरेव वेदार्थो निर्णेय इति सिद्धावपीहोपक्रमादयोऽपि स्मृत्यनुरोधेन नेया इति शङ्केति ध्येयम् ।

'ಅನ್ಯಸ್ಮೃತ್ಯನವಕಾಶದೋಷಪ್ರಸಂಗಾತ್' ಎಂಬ ಸಿದ್ಧಾಂತಭಾಗಕ್ಕೆ ಎರಡನೆಯ ವ್ಯಾಖ್ಯಾನ ಹೀಗಿದೆ - ಅನ್ಯಸ್ಮೃತಿ = ಶ್ರುತ್ಯನುಸಾರಿಯಾದ ಪಂಚರಾತ್ರಾದಿಸ್ಮೃತಿಗಳಿಗೆ ಶ್ರುತಿಸಂವಾದ-ವಿರುವುದರಿಂದ ಪ್ರಾಬಲ್ಯವಿದೆ. ಆದ್ದರಿಂದಲೇ ನಿರವಕಾಶಗಳಾಗಿವೆ. ದೋಷಪ್ರಸಂಗಾತ್ =

ಶ್ರುತಿಯ ಬೆಂಬಲವಿಲ್ಲದ ಶೈವಾದಿಸ್ಮೃತಿಗಳಿಗೆ ಅಪ್ರಾಮಾಣ್ಯವೆಂಬ ದೋಷಪ್ರಸಂಗವಿದೆ ಹೆಚ್ಚಿನ ದೋಷದ ಸಂಪರ್ಕವಿದೆ. ಹಾಗಾಗಿ ಅಪ್ರಾಮಾಣ್ಯವು ಪ್ರಾಪ್ತವಾಗುತ್ತದೆ ಎಂದರ್ಥ.

ವಾಸ್ತವಿಕವಾಗಿ 'ತತ್ತು ಸಮನ್ವಯಾತ್' ಎಂಬ ಸೂತ್ರದಲ್ಲಿ ಉಪಕ್ರಮೋಪಸಂಹಾರಾದಿ ಷಡ್ವಿಧ ತಾತ್ಪರ್ಯದಿಂದ ವೇದಾರ್ಥವನ್ನು ನಿರ್ಣಯ ಮಾಡಬೇಕೆಂದು ಸಾಧಿಸಿದ್ದಾಗಿದೆ. ಆದರೆ ಪ್ರಕೃತ ಪೂರ್ವಪಕ್ಷಿಯು ಅಂಥ ಉಪಕ್ರಮಾದಿಷಡ್ವಿಧತಾತ್ಪರ್ಯಲಿಂಗಗಳನ್ನೂ ಕೂಡ ಸ್ಮೃತಿಗೆ ಅನುಗುಣವಾಗಿಯೇ ವ್ಯಾಖ್ಯಾನ ಮಾಡಬೇಕೆಂದು ಆಕ್ಷೇಪ ಮಾಡುತ್ತಿದ್ದಾನೆ. ಹೀಗೆ ಪೂರ್ವಪಕ್ಷವು ಬಲಿಷ್ಠವಾಗಿರುವುದರಿಂದ ಈ ಅಧಿಕರಣವು ಆರಂಭಣೀಯವಾಗಿದೆ.

ಸಂಪೂರ್ಣ ಸೂತ್ರಕ್ಕೆ ಬೇರೆ ವ್ಯಾಖ್ಯಾನ

वृत्त्यन्तरं तु बौद्धार्हतादिस्मृतीनामन्यपरत्वाभावरूपानवकाशेन तासामेवाप्तोक्तानामप्रामाणदोषप्रसङ्ग इति तद्विरुद्धश्रुतिर्न मानमिति चेन्न । अन्यस्मृतीनां श्रौतस्मृतीनामनवकाशेन श्रौतस्मृतीनामेवाप्रामाण्यदोष प्रसङ्गादिति । तात्पर्यं तु पूर्ववत् ।

ಸೂತ್ರಕ್ಕೆ ಮತ್ತೊಂದು ವ್ಯಾಖ್ಯಾನ ಹೀಗಿದೆ - ಸ್ಮೃತಿ = ಬೌದ್ಧ, ಜೈನ ಮೊದಲಾದ ಸ್ಮೃತಿಗಳು, ಅನವಕಾಶ = ನಿರವಕಾಶವಾಗಿವೆ, ಬೇರೆಡೆ ತಾತ್ಪರ್ಯವನ್ನು ಪಡೆದಿಲ್ಲ. ದೋಷಪ್ರಸಂಗಾತ್ = ಅಪ್ಪೋಕ್ತವಾಗಿರುವುದರಿಂದ ಅಪ್ರಾಮಾಣ್ಯವೆಂಬ ದೋಷಪ್ರಸಂಗಕ್ಕೆ ಅವಕಾಶವಿಲ್ಲ. ಹಾಗಾಗಿ ಇವುಗಳಿಗೆ ವಿರುದ್ಧವಾಗಿ ಹೇಳುವ ಶ್ರುತಿಗಳು ಪ್ರಮಾಣವಲ್ಲ.

ಇತಿ ಚೇನ್ನ = ಈ ವ್ಯಾಖ್ಯಾನವು ತಪ್ಪು. ಅನ್ಯಸ್ಮೃತಿ = ಬೌದ್ಧಾದಿ ಸ್ಮೃತಿಗಳಿಗಿಂತ ಭಿನ್ನವಾದ ಪಂಚರಾತ್ರಾದಿಸ್ಮೃತಿಗಳು ಶ್ರುತಿಗೆ ಅನಸಾರಿಯಾಗಿವೆ. ಆದ್ದರಿಂದ ಇವುಗಳು ನಿರವಕಾಶವಾಗಿದೆ. ದೋಷಪ್ರಸಂಗಾತ್ = ಇಂಥ ಶ್ರುತ್ಯನುಸಾರಿಯಾದ ಸ್ಮೃತಿಗಳಿಗೇನೇ ಅಪ್ರಾಮಾಣ್ಯವೆಂಬ ದೋಷಪ್ರಸಂಗವಿರುವುದರಿಂದ ಬೌದ್ಧಾದಿ ಸ್ಮೃತಿಗಳು ಪ್ರಮಾಣವಲ್ಲ ಸೂತ್ರದ ತಾತ್ಪರ್ಯವನ್ನು ಮೊದಲನೆಯ ವ್ಯಾಖ್ಯಾನದಂತೆ ತಿಳಿಯಬೇಕು.

ವಿವರಣೆ - ಪ್ರಥಮ ವ್ಯಾಖ್ಯಾನದಲ್ಲಿ ಪಾಶುಪತಾದಿಸ್ಮೃತಿಗಳಿಗೆ ವಿರುದ್ಧವಾದ್ದರಿಂದ ಪಂಚರಾತ್ರಾದಿಸ್ಮೃತಿಗಳಿಗೆ ಅಪ್ರಾಮಾಣ್ಯವೆಂಬ ದೋಷಪ್ರಸಂಗವನ್ನು ಪೂರ್ವಪಕ್ಷದಲ್ಲಿ

ಹೇಳಲಾಗಿತ್ತು. ಸಿದ್ಧಾಂತದಲ್ಲಿ ಪಂಚರಾತ್ರಾದಿಸ್ಮೃತಿಗಳಿಗೆ ವಿರುದ್ಧವಾದ್ದರಿಂದ ಪಾಶುಪತಾದಿ-ಸ್ಮೃತಿಗಳಿಗೆ ಅಪ್ರಾಮಾಣ್ಯವೆಂಬ ದೋಷಪ್ರಸಂಗವನ್ನು ಹೇಳಲಾಯಿತು. ಆದರೆ ಎರಡನೆಯ ಈ ವ್ಯಾಖ್ಯಾನದಲ್ಲಿ ಬೌದ್ಧಾದಿ ಸ್ಮೃತಿಗಳು ನಿರವಕಾಶವಾಗಿವೆ. ಒಂದುವೇಳೆ ಪಂಚರಾತ್ರಾದಿಸ್ಮೃತಿಗಳು ಹೇಳಿದ್ದು ಸತ್ಯವಾದರೆ, ನಿರವಕಾಶವಾದ ಬೌದ್ಧಾದಿಸ್ಮೃತಿಗಳಿಗೆ ಅಪ್ರಾಮಾಣ್ಯವೆಂಬ ದೋಷಪ್ರಸಂಗದ ಭಯವಿದೆ. ಹಾಗಾಗಿ ಪಂಚರಾತ್ರಾದಿಸ್ಮೃತಿಗಳಿಗೆ ಅಪ್ರಾಮಾಣ್ಯವನ್ನು ಹೇಳಬೇಕೆಂಬುದು ಪೂರ್ವಪಕ್ಷ. ಶ್ರುತ್ಯನುಸಾರಿಯಾದ್ದರಿಂದ ಪಂಚರಾತ್ರಾದಿಸ್ಮೃತಿಗಳೇ ಬಲಿಷ್ಠವಾಗಿವೆ. ಇವುಗಳಿಗೆ ಅಪ್ರಾಮಾಣ್ಯವನ್ನು ಹೇಳಲೇಬಾರದು. ಇವು ಬೌದ್ಧಾದಿ ಸ್ಮೃತಿಗಳನ್ನು ಪ್ರಮಾಣವೆಂದರೆ ಪ್ರಬಲವಾದ ಪಂಚರಾತ್ರಾದಿ ಸ್ಮೃತಿಗಳಿಗೆ ಅಪ್ರಾಮಾಣ್ಯವನ್ನು ಹೇಳುವ ಪ್ರಸಂಗ ಬರುತ್ತದೆ. ಹಾಗಾಗಿ ಬೌದ್ಧಾದಿ ಸ್ಮೃತಿಗಳಿಗೆ ಅಪ್ರಾಮಾಣ್ಯವನ್ನು ಒಪ್ಪಬೇಕು ಎಂದು ವ್ಯಾಖ್ಯಾನಿಸಿದ್ದಾರೆ. ಎರಡೂ ವ್ಯಾಖ್ಯಾನದ ತಾತ್ಪರ್ಯ ಒಂದೇ ಆಗಿದ್ದರೂ ಪದಗಳಿಂದ ವಿವಕ್ಷಿಸಲ್ಪಟ್ಟ ಅರ್ಥಗಳು ಮಾತ್ರ ವಿಭಿನ್ನವಾಗಿವೆ.

ಆಪ್ತೋಕ್ತವಾದದ್ದಕ್ಕೆ ಅಪ್ರಾಮಾಣ್ಯ ಹೇಗೆ ?

श्रौतस्मृतिविरोधेऽप्याप्तोक्तानामवैदिकस्मृतीनां कथमप्रामाण्यमित्यत आह-

इतरेषां चानुपलब्धेः ।।२-१-२।।

ಶ್ರುತಿಯ ಬೆಂಬಲವಿರುವ ಪಂಚರಾತ್ರಾದಿಸ್ಮೃತಿಗಳ ವಿರೋಧ ಇರಬಹುದು. ಆದರೆ ಪಾಶುಪತಾದಿಸ್ಮೃತಿಗಳು ಆಪ್ತೋಕ್ತವಾಗಿವೆ. ಹೀಗಿರುವಾಗ ಅಪ್ರಾಮಾಣ್ಯವನ್ನು ಹೇಗೆ ತಾನೇ ಹೇಳುವಿರಿ ? ಈ ಪ್ರಶ್ನೆಗೆ ಉತ್ತರವನ್ನು ನೀಡಲು 'ಇತರೇಷಾಂ ಚಾನುಪಲಬ್ಧೇಃ' ಎಂಬ ಮುಂದಿನ ಸೂತ್ರ ಹೊರಟಿದೆ.

'ಅನುಪಲಬ್ಧೇಃ' ಎಂಬ ಶಬ್ದದ ಬಗ್ಗೆ

नास्त्युपलब्धिर्यस्य तदनुपलब्धिः उपलब्ध्ययोग्यं फलं तस्मादितरेषां उपलब्धियोग्यानां फलानां, तृतीयादिष्विति पुंवद्भावः, अनुपलब्धेरनुपलम्भादित्यावृत्त्या योज्यम् ।

ಸೂತ್ರದಲ್ಲಿ 'ಅನುಪಲಬ್ಧೇಃ' ಎಂಬುದನ್ನು ಆವೃತ್ತಿ ಮಾಡಿಕೊಳ್ಳಬೇಕು. ಆಗ 'ಉಪಲಬ್ಧೇಃ ಇತರೇಷಾಂ ಚಾನುಪಲಬ್ಧೇಃ' ಎಂದಾಗುತ್ತದೆ. ಸೂತ್ರಾರ್ಥವನ್ನು ಹೀಗೆ ತಿಳಿಯಬೇಕು -

'ಅನುಪಲಬ್ಧೇಃ' = ಹೊಂದಲು ಯೋಗ್ಯವಲ್ಲದ ಯಾವ ಫಲವಿದೆಯೋ, 'ಇತರೇಷಾಂ' = ಅದಕ್ಕಿಂತ ಭಿನ್ನವಾದ, 'ಅನುಪಲಬ್ಧೇಃ' = ಹೊಂದಲು ಯೋಗ್ಯವಾದ ಫಲಗಳನ್ನು (ಪಡೆಯುತ್ತಿಲ್ಲವಾದ್ದರಿಂದ ಪಾಶುಪತಾದಿಸ್ಮೃತಿಗಳು ಅಪ್ರಮಾಣವಾಗಿವೆ)

'ಅನುಪಲಬ್ಧೇಃ' ಎಂಬುದು ಪುಲ್ಲಿಂಗ ಶಬ್ದದ ಪಂಚಮೀವಿಭಕ್ತಿಯಾಗಿದೆ. 'ತೃತೀಯಾದಿಷು ಭಾಷಿತಪುಂಸ್ಕಂ ಪುಂವದ್ಗಾಲವಸ್ಯ' ಎಂಬ ಸೂತ್ರದ ಪ್ರಕಾರ ಅನುಪಲಬ್ಧಿ ಶಬ್ದಕ್ಕೆ ಪುಂವದ್ಭಾವವು ಬಂದಿದೆ. ಆದ್ದರಿಂದ 'ಅನುಪಲಬ್ಧಿನಃ' ಎಂದೇಕೆ ಪ್ರಯೋಗಿಸಿಲ್ಲ ಎಂಬ ಆಕ್ಷೇಪಕ್ಕೆ ಅವಕಾಶವಿಲ್ಲ. 'ಅನುಪಲಬ್ಧೇಃ' ಎಂಬ ಪದಕ್ಕೆ 'ಅನುಪಲಂಬಾತ್' ಎಂಬರ್ಥವನ್ನು ತಿಳಿಯಬೇಕು.

ಸೂತ್ರಕ್ಕೆ ಎರಡನೆಯ ವ್ಯಾಖ್ಯಾನ

यद्वा पूर्वसूत्रे यस्मिन् प्रत्यक्षायोग्ये विश्वकर्तृत्वादौ स्मृतिविरोधः शङ्कितः तदितरेषां प्रत्यक्षयोग्यानां फलानामनुलब्धेरित्यर्थः । प्रत्यक्षफल-विसंवादादाप्तोक्तत्वमेव नेत्यवैदिकस्मृतीनामप्रामाण्यमिति भावः । चशब्दः किञ्चित् फलोपलब्ध्यङ्गीकारार्थः ।।

ಅಥವಾ ಸೂತ್ರಕ್ಕೆ ಎರಡನೆಯ ವ್ಯಾಖ್ಯಾನ ಹೀಗಿದೆ - ಹಿಂದಿನ ಸೂತ್ರದಲ್ಲಿ ವಿಶ್ವಕರ್ತೃತ್ವವಿಷಯದಲ್ಲಿ ಸ್ಮೃತಿವಿರೋಧವನ್ನು ಆಂಶಕಿಸಿ ಉತ್ತರಿಸಲಾಯಿತು. ಈ ವಿಶ್ವಕರ್ತೃತ್ವವು ಪ್ರತ್ಯಕ್ಷ ಅಯೋಗ್ಯವಾಗಿದೆ. ಇತರೇಷಾಂ = ಹಿಂದಿನ ಸೂತ್ರದಲ್ಲಿ ಹೇಳಿದ ವಿಶ್ವತಕರ್ತೃತ್ವದಿಂದ ಪ್ರತ್ಯಕ್ಷ ಯೋಗ್ಯವಾದ ಫಲಗಳು, ಅನುಪಲಬ್ಧೇಃ = ಕಾಣಿಸುತ್ತಿಲ್ಲ. ಆದ್ದರಿಂದ ಪಾಶುಪತಾದಿಸ್ಮೃತಿಗಳು ಅಪ್ರಮಾಣವಾಗಿವೆ ಎಂದರ್ಥ.

ವಾಸ್ತವಿಕವಾಗಿ ಅವೈದಿಕಸ್ಮೃತಿಗಳೆಲ್ಲವೂ ಪ್ರತ್ಯಕ್ಷಫಲ ವಿಸಂವಾದಿಗಳಾಗಿವೆ. ಆ ಕಾರಣಗಳಿಂದ ಆಪ್ತೋಕ್ತವೇ ಅಲ್ಲ. ಹಾಗಾಗಿ ಅಪ್ರಮಾಣ್ಯವನ್ನೇ ಹೇಳಬೇಕು.

ಅವೈದಿಕ ಸ್ಮೃತಿಗಳಲ್ಲಿಯೂ ಕೆಲವೊಂದು ವಾಕ್ಯಗಳು ಹೇಳಿದ್ದನ್ನು ಆಚರಣೆ ಮಾಡಿದರೆ ಫಲವುಂಟಾಗುತ್ತದೆ. ಇದನ್ನು ನಾವು ಅಂಗೀಕರಿಸುತ್ತೇವೆ ಎಂಬುದನ್ನು ಸೂತ್ರದಲ್ಲಿರುವ 'ಚ'ಶಬ್ದವು ಸೂಚಿಸುತ್ತಿದೆ.

ಗಮನಿಸಿ - 'ಚ'ಶಬ್ದವು ಕೆಲವು ಫಲಗಳು ಉಂಟಾಗುವುದು ಅಂಗೀಕೃತವಾಗಿದೆ ಎಂಬುದನ್ನು ಸೂಚಿಸುತ್ತಿದೆ. ಆದರೆ ಇದು ಪ್ರಾಮಾಣ್ಯಕ್ಕೆ ಉಪಯುಕ್ತವಲ್ಲ. ಸಮಗ್ರ ಸ್ಮೃತಿವಾಕ್ಯದಲ್ಲಿ ಹೇಳಿದ ಫಲಕ್ಕೆ ಎಲ್ಲಿಯೂ ಕೂಡ ವ್ಯಭಿಚಾರ ಕಾಣಬಾರದು. ಆಗ ಮಾತ್ರ ಅದು ಪ್ರಮಾಣವಾಗುತ್ತದೆ. ಎಷ್ಟೋ ವಾಕ್ಯಗಳಲ್ಲಿ ಹೇಳಿದ ಅನುಷ್ಠಾನವನ್ನು ಮಾಡಿದರೆ ಫಲ ದೊರಕುತ್ತಲೇ ಇಲ್ಲ. ಆದ್ದರಿಂದ ಅಪ್ರಾಮಾಣ್ಯಬರುತ್ತದೆಂಬುದು ಸೂತ್ರಕಾರರ ಅಭಿಪ್ರಾಯ.

ಅವೈದಿಕ ಸ್ಮೃತಿಯಾದರೂ ಕೂಡ ಯೋಗಸ್ಮೃತಿಯಲ್ಲಿ ವ್ಯಭಿಚಾರ ಇಲ್ಲ ಅಲ್ಲವೇ?

नन्ववैदिकस्मृतीनां मध्ये योगस्मृत्युक्तफले विसंवादाभावान्नाप्रामाण्यमि त्यधिकाशङ्कायामाह -

।। एतेन योगः प्रत्युक्तः ।।२-१-३।।

ಅವೈದಿಕವಾದ ಸ್ಮೃತಿಗಳ ನಡುವೆ ಯಾವ ಯೋಗಸ್ಮೃತಿ ಇದೆಯೋ, ಅದರಲ್ಲಿ ಹೇಳಿದ ಫಲಗಳಿಗೆ ವ್ಯಭಿಚಾರ ಎಲ್ಲಿಯೂ ಕಾಣಿಸುತ್ತಿಲ್ಲ. ಆದ್ದರಿಂದ ಯೋಗಸ್ಮೃತಿಗೆ ಅಪ್ರಾಮಾಣ್ಯವು ಪ್ರಾಪ್ತವಾಗುವುದಿಲ್ಲ. ಈ ಅಭ್ಯಧಿಕಾಶಂಕೆಗೆ ಉತ್ತರಿಸಲು 'ಏತೇನ ಯೋಗಃ ಪ್ರತ್ಯುಕ್ತಃ' ಎಂಬ ಸೂತ್ರವು ಹೊರಟಿದೆ.

ಸೂತ್ರಾರ್ಥ

एतेन प्रागुक्तफलानुपलम्भेन योगशास्त्रमपि प्रत्युक्तं निरस्तमित्यर्थः । प्रथमं स्वेदनं द्वितीयं गात्रभञ्जनमित्याद्युक्ताभ्यासावस्थोत्कर्षकाल एव स्वेदनादीनामदृष्टेरित्यर्थः ।।१।।

ಸೂತ್ರದ ಅರ್ಥ - ಏತೇನ = ಹಿಂದೆ ಹೇಳಿದ ಫಲ ಅನುಪಲಂಭ ಎಂಬ ಹೇತುವಿನಿಂದ ಯೋಗಃ = ಪಾತಂಜಲ ಯೋಗಶಾಸ್ತ್ರವೂ ಕೂಡ, ಪ್ರತ್ಯುಕ್ತಃ = ನಿರಾಕೃತವಾಯಿತು. ಅದು ಹೀಗೆ - ಆ ಯೋಗಶಾಸ್ತ್ರದಲ್ಲಿ ಕೆಲವು ಯೋಗಾಭ್ಯಾಸವನ್ನು ಮಾಡಿದಾಗ ಮೊದಲು ಬೆವರುತ್ತದೆ. ಅನಂತರ ಶರೀರವು ಬಾಗುತ್ತದೆ ಇತ್ಯಾದಿ ಫಲವನ್ನು ಹೇಳಿದ್ದಾರೆ. ಆದರೆ ಅಂಥ ಯೋಗಾಭ್ಯಾಸವನ್ನು ಮಾಡಿದಾಗ, ಅನೇಕ ಸಂದರ್ಭದಲ್ಲಿ ಬೆವರುವಿಕೆ, ಗಾತ್ರಭಂಜನ ಆಗುವಿಕೆ ಮೊದಲಾದ ಫಲಗಳು ಕಾಣಿಸುತ್ತಿಲ್ಲ. ಆದ್ದರಿಂದ ಯೋಗಶಾಸ್ತ್ರದಲ್ಲೂ ಕೂಡ ಫಲವ್ಯಭಿಚಾರ

ಇದ್ದೇ ಇದೆ. ಪಾಶುಪತಾದಿಸ್ಮೃತಿಗಳಂತೆ ಪಾತಂಜಲಿ ಯೋಗಾದಿಶಾಸ್ತ್ರಗಳೂ ಕೂಡ ಅಪ್ರಮಾಣವಾಗುತ್ತದೆ.

॥ ಇಲ್ಲಿಗೆ ತಂತ್ರದೀಪಿಕಾ ಕನ್ನಡಾನುವಾದದಲ್ಲಿ ಸ್ಮೃತ್ಯಧಿಕರಣವು ಮುಗಿಯಿತು ॥

ಅದ್ವೈತ-ವಿಶಿಷ್ಟಾದ್ವೈತಮತದಲ್ಲಿ ಸ್ಮೃತ್ಯಧಿಕರಣ ಮತ್ತು ವಿಮರ್ಶೆ

ಅದ್ವೈತಿಗಳು ಎರಡನೆಯ ಅಧ್ಯಾಯದ ನಾಕುಪಾದಗಳ ಕ್ರಮವನ್ನು ತಮ್ಮ ಗ್ರಂಥಗಳಲ್ಲಿ ಹೀಗೆ ಮಂಡಿಸಿದ್ದಾರೆ - ತಮ್ಮ ಪಕ್ಷಕ್ಕೆ ಸಾಂಖ್ಯಾದಿಸ್ಮೃತಿಗಳ ವಿರೋಧವಾಗಲೀ, ಸಂಖ್ಯಾದಿಸ್ಮೃತಿಗಳಿಂದ ಹುಟ್ಟುವ ತರ್ಕಗಳಿಂದಾಗಲೀ, ವಿರೋಧವು ಬರುವುದಿಲ್ಲವೆಂದು ಪ್ರಥಮಪಾದದಲ್ಲಿ ಪರಿಹರಿಸಲಾಗಿದೆ.

ಎರಡನೆಯ ಪಾದದಲ್ಲಿ ಸಾಂಖ್ಯ, ಚಾರ್ವಾಕ ಮೊದಲಾದ ಮತಗಳೆಲ್ಲವೂ ದುಷ್ಟವಾಗಿವೆ ಎಂದು ನಿರೂಪಣೆ ಮಾಡಲಾಗಿದೆ.

ಮೂರನೆಯ ಪಾದದ ಪೂರ್ವಾರ್ಧದಲ್ಲಿ ಪಂಚಮಹಾಭೂತಶ್ರುತಿಗಳಿಗೆ ಪರಸ್ಪರ ವಿರೋಧವನ್ನು ಪರಿಹರಿಸಲಾಗಿದೆ. ಉತ್ತರಭಾಗದಲ್ಲಿ ಜೀವಶ್ರುತಿಗಳಿಗೆ ವಿರೋಧವನ್ನು ಪರಿಹರಿಸಲಾಗಿದೆ.

ನಾಕನೆಯ ಪಾದದಲ್ಲಿ ಲಿಂಗಶರೀರವನ್ನು ನಿರೂಪಣೆ ಮಾಡುವ ಶ್ರುತಿಗಳ ಪರಸ್ಪರ ವಿರೋಧವನ್ನು ಪರಿಹರಿಸಲಾಗಿದೆ. ಇಷ್ಟು ನಾಕುಪಾದಗಳ ಅರ್ಥ.

ಅದ್ವೈತಿಗಳ ಈ ಪಾದಾರ್ಥಚಿಂತನೆಯು ಅಯುಕ್ತವಾಗಿದೆ. ಏಕೆಂದರೆ ಮೊದಲನೆಯ ಪಾದದ ಅರ್ಥವನ್ನು ಹೇಳುವಾಗ ಸ್ಮೃತಿವಿರೋಧ ಹಾಗೂ ತದುನ್ನೀತವಾದ ತರ್ಕವಿರೋಧ ಎಂಬ ಎರಡು ಉಪಾಧಿಗಳನ್ನು ಹೇಳಿದಿರಿ. ಒಂದು ಪಾದದಲ್ಲಿ ಒಂದೇ ಉಪಾಧಿಯು

ಇರಬೇಕು. ತೃತೀಯಪಾದದಲ್ಲಿಯೂ ಪಂಚಮಹಾಭೂತಶ್ರುತಿವಿರೋಧ ಪರಿಹಾರ ಹಾಗೂ ಜೀವಶ್ರುತಿವಿರೋಧ ಪರಿಹಾರ ಎಂಬ ಎರಡು ಬಗೆಯ ಉಪಾಧಿಗಳನ್ನು ಹೇಳಿರುತ್ತೀರಿ. ಒಂದೇ ಉಪಾಧಿಯನ್ನು ಹೇಳಿರುವುದಿಲ್ಲ.

ಮತ್ತು ಎರಡನೆಯ ಪಾದದಲ್ಲಿ ಸಾಂಖ್ಯಾದಿ ಸಮಯಗಳಿಗೆ ದುಷ್ಟತ್ವವನ್ನು ಹೇಳಲಾಗಿದೆ ಎಂಬ ಉಪಾಧಿಯನ್ನು ಹೇಳಿದಿರಿ. ಆದರೆ ಪ್ರಥಮಪಾದದಲ್ಲಿಯೂ ಅನೇಕ ಕಡೆ ನೀವೇ ಇದನ್ನು ಹೇಳಿದ್ದೀರಿ. 'ಇತರೇಷಾಂ ಚಾನುಪಲಬ್ಧೇಃ' 'ಏತೇನ ಯೋಗಃ ಪ್ರತ್ಯುಕ್ತಃ' 'ಸ್ವಪಕ್ಷದೋಷಾಚ್ಚ' 'ಏತೇನ ಶಿಷ್ಟಾ ಅಪರಿಗ್ರಹಾ ಅಪಿ ವ್ಯಾಖ್ಯಾತಾಃ' ಇವೇ ಮೊದಲಾದ ಸೂತ್ರಗಳಲ್ಲಿ ಪರಮತವು ದುಷ್ಟವಾಗಿದೆ ಎಂದು ಸಮರ್ಥಿಸಿದ್ದೀರಿ.

ಪ್ರಶ್ನೆ - ಪರಮತವು ದುಷ್ಟವಾಗಿದೆಯೆಂದು ಪ್ರಥಮಪಾದದಲ್ಲಿ ಹೇಳಿದ್ದರೂ, ಪರಮತದ ವಿರೋಧಪರಿಹಾರದಲ್ಲಿಯೇ ಪರ್ಯವಸಾನವಾಗುತ್ತದೆ. ಆದರೆ ಎರಡನೆಯ ಪಾದದಲ್ಲಿ ಪರಮತದಲ್ಲಿ ದೋಷವನ್ನು ಹೇಳುವುದೇ ಉದ್ದೇಶವಾಗಿರುತ್ತದೆ. ಈ ವೈಲಕ್ಷಣ್ಯದಿಂದ ಪ್ರಥಮಪಾದಕ್ಕೆ ದ್ವಿತೀಯಪಾದದಿಂದ ಸಾಂಕರ್ಯದೋಷವನ್ನು ಹೇಳಲು ಬರುವುದಿಲ್ಲವಲ್ಲವೇ?

ಇದು ತಪ್ಪು. ಎರಡನೆಯ ಅಧ್ಯಾಯದಲ್ಲಿಯೂ ಕೂಡ ಪರಮತಕ್ಕೆ ದುಷ್ಟತ್ವವನ್ನು ಹೇಳಿದ್ದು, ಸ್ವಪಕ್ಷದಲ್ಲಿ ವಿರೋಧವಿರುವುದಿಲ್ಲವೆಂದು ತಿಳಿಸುವುದಕ್ಕಾಗಿಯೇ ಹೊರತು, ಬೇರೆ ಯಾವ ಉದ್ದೇಶವೂ ಇರುವುದಿಲ್ಲ. ಹೀಗೊಪ್ಪದಿದ್ದರೆ ಎರಡನೆಯ ಪಾದಕ್ಕೆ ಅವಿರೋಧಾಧ್ಯಾಯದಲ್ಲಿ ಸಂಗತಿಯೇ ಇಲ್ಲದಂತಾಗಬೇಕಾದೀತು. ಏಕೆಂದರೆ ಎರಡನೆಯ ಅಧ್ಯಾಯಕ್ಕೆ ಅವಿರೋಧಾಧ್ಯಾಯವೆಂದು ಹೆಸರು. ಎಲ್ಲಾ ಬಗೆಯ ವಿರೋಧವನ್ನು ಪರಿಹರಿಸುವುದೇ ಇದರ ಉದ್ದೇಶ. ಪ್ರಕೃತ ಎರಡನೆಯ ಪಾದದಲ್ಲಿ ಕೇವಲ ಅನ್ಯಮತವನ್ನು ದುಷ್ಟವೆಂದು ಹೇಳಿ, ಯಾವುದೇ ವಿರೋಧವನ್ನು ಪರಿಹಾರ ಮಾಡದಿದ್ದರೆ ಅದಕ್ಕೆ ಸಂಗತಿಯೇ ಇಲ್ಲದಂತಾಗುತ್ತದೆ.

ಮತ್ತು ಪ್ರಥಮಪಾದದಲ್ಲಿ ಸಾಂಖ್ಯಾದಿಸ್ಮೃತಿಗಳಿಂದ ನಿರ್ಮಿತವಾದ ತರ್ಕವಿರೋಧವನ್ನು ಪರಿಹರಿಸಿದ್ದೀರಿ - 'ದೃಶ್ಯತೇ ತು' ಎಂಬ ನವಿಲಕ್ಷಣತ್ವಾಧಿಕರಣದ ಸೂತ್ರದಲ್ಲಿ ಬ್ರಹ್ಮನು ಚೇತನನಾದ್ದರಿಂದ ಪ್ರಪಂಚಕ್ಕಿಂತ ವಿಲಕ್ಷಣನಾಗಿದ್ದಾನೆ. ಇವನು ಹೇಗೆ ಪ್ರಪಂಚಕ್ಕೆ ಕಾರಣನಾಗುತ್ತಾನೆ? ಎಂಬ ಪ್ರಶ್ನೆಯು ಬಂದರೆ ಗೋಮಯದಿಂದ ವೃಶ್ಚಿಕವು ಹುಟ್ಟಿದಾಗ

ವೃಶ್ಚಿಕವು ಚೇತನವಾಗದ ಕಾರಣ ವಿಲಕ್ಷಣವಾಗಿದ್ದರೂ ಗೋಮಯವು ಕಾರಣವೆಂದು ವೃಶ್ಚಿಕವು ಕಾರ್ಯವೆಂದು ಲೋಕದಲ್ಲಿ ಕಂಡಿದೆ. ಅದರಂತೆ ಬ್ರಹ್ಮನು ಚೇತನನಾಗಿದ್ದರೂ ಜಡವಾದ ಪ್ರಪಂಚಕ್ಕೆ ಕಾರಣನಾಗುತ್ತಾನೆ. ಹೀಗೆ ಸ್ವಪಕ್ಷದಲ್ಲಿ ಬರುವಂತಹ ತತ್ವದ ವಿರೋಧವನ್ನು ಪರಿಹರಿಸುತ್ತೀರಿ.

ಇದರಂತೆ ಎರಡನೆಯ ಪಾದದಲ್ಲಿರುವ 'ಮಹದ್ದೀರ್ಘವದ್ವಾ' ಇತ್ಯಾದಿ ಸೂತ್ರಕ್ಕೆ ವ್ಯಾಖ್ಯಾನ ಮಾಡುವಾಗ 'ಯಥಾ ದ್ವ್ಯಣುಕಾದಣೋರ್ಹ್ರಸ್ವಾಚ್ಚ ಸತೋ ಮಹದ್ದೀರ್ಘಂ ಚ ತ್ರ್ಯಣುಕಾದಿ ಜಾಯತೇ । ನಾಣು ನಾಪಿ ಹ್ರಸ್ವಮ್ । ಏವಂ ಚೇತನಾತ್ ಬ್ರಹ್ಮಣೋಽಚೇತನಂ ಜಗಜ್ಜನಿಷ್ಯತೇ' ಎಂದು ಹೇಳಿದ್ದೀರಿ. ಇದರ ಅಭಿಪ್ರಾಯ ಹೀಗಿದೆ - ಪರಮಾಣುವಿನಿಂದ ದ್ವ್ಯಣುಕದಲ್ಲಿ ಅಣುಪರಿಮಾಣ ಮತ್ತು ಹ್ರಸ್ವಪರಿಮಾಣವಿರುತ್ತದೆ. ಇದರಿಂದ ಮಹತ್ ಪರಿಮಾಣವಿರುವ ಮತ್ತು ದೀರ್ಘಪರಿಮಾಣವಿರುವ ದ್ವ್ಯಣುಕವು ಹುಟ್ಟುತ್ತದೆ ಹೊರತು, ಅಣುಪರಿಮಾಣವಿರುವ ಹ್ರಸ್ವಪರಿಮಾಣವಿರುವ ಮತ್ತೊಂದು ವಸ್ತು ಹುಟ್ಟುವುದಿಲ್ಲ. ಹೀಗೆ ವಿಲಕ್ಷಣವಾದದ್ದಕ್ಕೂ ಕೂಡ ಕಾರ್ಯಕಾರಣಭಾವವಿರುತ್ತದೆಂದು ತಾರ್ಕಿಕರು ಒಪ್ಪಿದ್ದಾರೆ. ಅದರಂತೆ ಚೇತನನಾದ ಬ್ರಹ್ಮನಿಂದ ವಿಲಕ್ಷಣವಾದ ಅಚೇತನವಾದ ಜಗತ್ತು ಹುಟ್ಟುತ್ತದೆ ಎಂದು ನೀವೇ ಹೇಳಿರುತ್ತೀರಿ. ಆದ್ದರಿಂದ ಪ್ರಥಮಪಾದದಲ್ಲಷ್ಟೇ ಅಲ್ಲದೇ ಎರಡನೆಯ ಪಾದದಲ್ಲಿಯೂ ಕೂಡ ತರ್ಕವಿರೋಧವನ್ನು ಪರಿಹರಿಸುವುದರಿಂದ ಸಾಂಕರ್ಯದೋಷವು ಬಂದೇ ಬರುತ್ತದೆ.

ಮತ್ತು ಮೂರನೆಯ ಅಧ್ಯಾಯದ ಪೂರ್ವಭಾಗದಲ್ಲಿ ಜೀವಶ್ರುತಿಗಳನ್ನು ವಿಚಾರ ಮಾಡಿಲ್ಲವೆಂದು ಹೇಳಿದಿರಿ. ಇದೂ ಕೂಡ ಸರಿಯಿಲ್ಲ. 'ಅಂತರಾ ವಿಜ್ಞಾನಮನಸೀ' ಎಂಬಲ್ಲಿ 'ಏತಸ್ಮಾಜ್ಜಾಯತೇ ಪ್ರಾಣಃ ಮನಃ ಸರ್ವೇಂದ್ರಿಯಾಣಿ ಚ' ಎಂಬ ಶ್ರುತಿಯನ್ನು ಉಲ್ಲೇಖ ಮಾಡುವ ಮೂಲಕ ಪ್ರಾಣ, ಮನಸ್ಸು ಮೊದಲಾದವುಗಳನ್ನು ವಿಷಯೀಕರಿಸುವ ಶ್ರುತಿಗಳ ವಿರೋಧ ಪರಿಹಾರವನ್ನು ಮಾಡಿರುತ್ತೀರಿ. ಹೀಗಿರುವಾಗ ಕೇವಲ ಭೂತಶ್ರುತಿಗಳ ವಿರೋಧವನ್ನಷ್ಟೇ ಪೂರ್ವಭಾಗದಲ್ಲಿ ಮಾಡಲಾಗಿದೆಯೆಂದು ನಿಯಮ ಮಾಡಲು ಸಾಧ್ಯವಿಲ್ಲ.

ಪ್ರಶ್ನೆ - 'ಅನ್ನಮಯಂ ಹಿ ಸೌಮ್ಯ ಮನ ಆಪೋಮಯಃ ಪ್ರಾಣಃ ತೇಜೋಮಯೀ ವಾಕ್' ಎಂಬ ಶ್ರುತಿಯಲ್ಲಿ ಮನಸ್ಸು, ಪ್ರಾಣ ಇವುಗಳೆಲ್ಲವೂ ಭೂತಾತ್ಮಕವೆಂದೇ ನಿಶ್ಚಯಿಸಲಾಗಿದೆ. ಆದ್ದರಿಂದ ತೃತೀಯಪಾದದ ಪೂರ್ವಭಾಗದಲ್ಲಿ ವಿಚಾರ ಮಾಡಿದ್ದು ಸಂಗತವಾಗುತ್ತದಲ್ಲವೇ?

ಉತ್ತರ - ಹಾಗಾದರೆ ನಾಕನೆಯ ಪಾದದಲ್ಲಿ 'ತಥಾ ಪ್ರಾಣಃ' 'ಸಪ್ತಗತೇರ್ವಿಶೇಷಿತತ್ವಾಚ್ಚ' 'ಅಣವಶ್ಚ' ಇವೇ ಮೊದಲಾದ ಅನೇಕ ಅಧಿಕರಣಗಳಲ್ಲಿ ಇಂದ್ರಿಯಾದಿಗಳ ಬಗ್ಗೆ ಏನು ವಿಚಾರ ಮಾಡಿದ್ದೀರೋ ಅದೆಲ್ಲವನ್ನು ಮೂರನೆಯ ಪಾದದ ಪೂರ್ವಭಾಗದಲ್ಲಿಯೇ ಮಾಡಬೇಕಿತ್ತು. ಏಕೆಂದರೆ ನೀವೇ ಹೇಳಿದಂತೆ , ಇಂದ್ರಿಯ, ಮನಸ್ಸು ಮೊದಲಾದವುಗಳೆಲ್ಲವು ಭೂತಾತ್ಮಕವಾದ್ದರಿಂದ ತೃತೀಯಪಾದದ ಪೂರ್ವಭಾಗದಲ್ಲಿ ಇದರ ಉಲ್ಲೇಖವು ಸಂಗತವಾಗುತ್ತದೆ.

ಲಿಂಗಶರೀರವಿಷಯಕವಾದ ಶ್ರುತಿಗಳ ಪರಸ್ಪರ ವಿರೋಧವನ್ನು ಪರಿಹರಿಸುವಿಕೆ ಎಂಬ ನಾಕನೆಯ ಪಾದದ ಉಪಾಧಿಯೂ ಕೂಡ ಅಸಾಧುವಾಗಿದೆ. 'ಸಂಜ್ಞಾಮೂರ್ತಿಕ್ಲೃಪ್ತಿಃ' ಎಂಬ ಸೂತ್ರಕ್ಕೆ ವ್ಯಾಖ್ಯಾನ ಮಾಡುವಾಗ 'ಅನೇನ ಜೀವೇನ' ಎಂಬ ವಿಷಯವಾಕ್ಯವನ್ನು ವಿವಕ್ಷಿಸಿ, ಜೀವನಿಗೆ ಕರ್ತೃತ್ವವನ್ನು ಹೇಳಬಾರದು, ಬ್ರಹ್ಮನಿಗೆ ಮಾತ್ರ ಹೇಳಬೇಕೆಂದು ಸಿದ್ಧಾಂತ ಮಾಡಿದ್ದೀರಿ. ಹೀಗೆ ಬ್ರಹ್ಮಕರ್ತೃತ್ವವನ್ನು ಸಮರ್ಥನೆ ಮಾಡಿದ್ದರಿಂದ, ಲಿಂಗಶರೀರದ ಬಗ್ಗೆ ವಿರೋಧವನ್ನು ಪರಿಹರಿಸಿದಂತಾಗಲಿಲ್ಲ. ಆದ್ದರಿಂದ ಎಲ್ಲಾ ಅಧಿಕರಣಗಳಲ್ಲಿಯೂ ಲಿಂಗಶರೀರವಿಷಯಕವಾದ ವಿಚಾರವೇ ಹೊರಟಿದೆ ಎಂಬ ನಿಯಮಕ್ಕೂ ಕೂಡ ಭಂಗ ಬರುತ್ತದೆ.

ಮತ್ತು ಮೊದಲು ಸ್ವಪಕ್ಷ ಸ್ಥಾಪನೆ ಮಾಡಿ, ಅನಂತರ ಪರಪಕ್ಷ ನಿರಾಕರಣೆ ಮಾಡಬೇಕು. ಮೂರು ಹಾಗೂ ನಾಕನೆಯ ಪಾದಗಳಲ್ಲಿ ನೀವೇ ಹೇಳಿದಂತೆ ಸ್ವಪಕ್ಷದಲ್ಲಿ ಬರುವ ವಿರೋಧಗಳನ್ನು ಪರಿಹರಿಸಿದ್ದೀರಿ. ಹಾಗಾದರೆ ಮೊದಲನೆಯ ಪಾದದ ಅನಂತರವೇ ಮೂರು ಹಾಗೂ ನಾಕನೆಯ ಪಾದಗಳು ಸಂಗತವಾಗುತ್ತವೆ. ಎರಡನೆಯ ಪಾದವು ಪರಪಕ್ಷದಲ್ಲಿ ದೋಷವನ್ನು ಹೇಳಿರುವುದರಿಂದ ಕೊನೆಯಲ್ಲಿ ಪ್ರಸಕ್ತವಾಗುತ್ತದೆ. ಆದ್ದರಿಂದ ಅದ್ವೈತಮತದಲ್ಲಿ ಪಾದದ ಪ್ರಮೇಯಗಳಾಗಲೀ, ಪಾದಕ್ರಮವಾಗಲೀ ದುಷ್ಟವಾಗಿರುತ್ತದೆ.

ರಾಮಾನುಜರ ಪ್ರಕಾರ ಅಧಿಕರಣಗಳ ಪ್ರಮೇಯ ಹೀಗಿದೆ - ಸ್ವಪಕ್ಷದಲ್ಲಿ ಕಾರಣವಿಷಯಕವಾದ ವಾಕ್ಯಗಳಲ್ಲಿ ದೋಷವನ್ನು ಪರಿಹರಿಸಲು ಪ್ರಥಮಪಾದ ಹೊರಟಿರುತ್ತದೆ.

ಪರಪಕ್ಷದವರೆಗೆ ಕಾರಣವಿಷಯಕವಾದ ವಾಕ್ಯಗಳಲ್ಲಿ ದೋಷವನ್ನು ತೋರಿಸಲು ಎರಡನೆಯ ಪಾದ ಹೊರಟಿರುತ್ತದೆ.

ಸ್ವಪಕ್ಷದಲ್ಲಿ ಕಾರ್ಯವಿಷಯಕವಾದ ವಾಕ್ಯಗಳಲ್ಲಿರುವ ದೋಷಪರಿಹಾರಕ್ಕಾಗಿ ಮೂರು ಮತ್ತು ನಾಕನೆಯ ಪಾದಗಳು ಹೊರಟಿರುತ್ತವೆ. ಇಷ್ಟು ರಾಮಾನುಜರು ನಿರೂಪಣೆ ಮಾಡುವ ಅಧಿಕರಣಗಳ ಪ್ರಮೇಯವಿಚಾರ.

ಇದು ತಪ್ಪು. ಅದ್ವೈತಿಗಳಂತೆ ನಿಮಗೂ ಕೂಡ ಸಾಂಕರ್ಯಾದಿ ದೋಷಗಳು ಬರುತ್ತವೆ. ಪ್ರಥಮಪಾದದಲ್ಲಿ ಸ್ವಪಕ್ಷದಲ್ಲಿ ದೋಷಪರಿಹಾರವನ್ನಷ್ಟೇ ಮಾಡಬೇಕಿತ್ತು. ಆದರೆ 'ಸ್ವಪಕ್ಷದೋಷಾತ್' ಎಂಬ ಸೂತ್ರದಿಂದ ಪರಪಕ್ಷದಲ್ಲಿರುವ ದೋಷವನ್ನೂ ಕೂಡ ಎತ್ತಿ ತೋರಿಸಿದ್ದೀರಿ.

ಎರಡನೆಯ ಪಾದದಲ್ಲಿ ಕಾರಣವಿಷಯಕವಾದ ವಾಕ್ಯಗಳಲ್ಲಿ ಪರಪಕ್ಷದವರೆಗೆ ದೋಷವನ್ನು ಮಾತ್ರ ತೋರಿಸಬೇಕಿತ್ತು. 'ಉತ್ಪತ್ಯಸಂಭವಾತ್' ಎಂಬ ಸೂತ್ರವನ್ನು ವ್ಯಾಖ್ಯಾನ ಮಾಡುವಾಗ ಪಂಚರಾತ್ರಾದಿಗಳಿಗೆ ಅಪ್ರಾಮಾಣ್ಯವೆಂಬ ಸ್ವಪಕ್ಷದಲ್ಲಿ ಭರುವ ದೋಷವನ್ನು ಪರಿಹರಿಸಿದ್ದೀರಿ.

ಮತ್ತು ಎರಡನೆಯ ಪಾದದಲ್ಲಿ 'ಸಮವಾಯಾಭ್ಯುಪಗಮಾಚ್ಚ' ಇತ್ಯಾದಿ ಅನೇಕ ಸೂತ್ರಗಳಿಂದ ಪರಪಕ್ಷದಲ್ಲಿ ಕಾರಣವಿಷಯದ ಬಗ್ಗೆ ಮಾತ್ರ ದೋಷವನ್ನು ಹೇಳದೇ ಸಮವಾಯ ಮೊದಲಾದವುಗಳ ಬಗ್ಗೆಯೂ ಕೂಡ ದೋಷವನ್ನು ಹೇಳಿರುತ್ತೀರಿ.

ಮೂರನೆಯ ಪಾದದಲ್ಲಿ 'ನಾತ್ಮಾ ಪ್ರಕರಣಾತ್' 'ಜ್ಞೋತ ಏವ' 'ಉತ್ಕ್ರಾಂತಿಗತ್ಯಾಗತೀನಾಮ್' ಇತ್ಯಾದಿ ಅನೇಕ ಸೂತ್ರಗಳಲ್ಲಿ ಕಾರ್ಯನಲ್ಲದ ಜೀವನ ಬಗ್ಗೆ ಬರುವಂತಹ ದೋಷಗಳನ್ನೆಲ್ಲಾ ಪರಿಹರಿಸಿದ್ದೀರಿ.

ಮತ್ತು ಮೂರು ಹಾಗೂ ನಾಕನೆಯ ಪಾದಗಳಿಗೆ ಒಂದೇ ಉಪಾಧಿಯನ್ನು ಹೇಳಿದ್ದೀರಿ. ಪಾದಭೇದಕ್ಕೆ ಕಾರಣವಾದ ಉಪಾಧಿಭೇದವನ್ನು ಹೇಳಿರುವುದಿಲ್ಲ. ಮತ್ತು ಕಾರಣವಿಷಯದಲ್ಲಿ ಪರಪಕ್ಷದವರಿಗೆ ದೋಷವನ್ನು ಹೇಳಲು ಎರಡನೆಯ ಪಾದ ಹೊರಡುವುದಾದರೆ ಕಾರ್ಯವಿಷಯದಲ್ಲಿ ದೋಷವನ್ನು ಹೇಳಲು ಮತ್ತೊಂದು ಪಾದ ಇರಬೇಕಿತ್ತಲ್ಲವೇ?

ಪಾದಕ್ರಮವೂ ಕೂಡ ಸರಿಯಿಲ್ಲ. ಏಕೆಂದರೆ ಪ್ರಥಮಪಾದವು ಸ್ವಪಕ್ಷಸ್ಥಾಪಕವಾದಂತೆ ಮೂರು ಹಾಗೂ ನಾಕನೆಯ ಪಾದಗಳೂ ಕೂಡ ಸ್ವಮತದಲ್ಲಿರುವ ದೋಷವನ್ನು ಪರಿಹರಿಸಿರುವುದರಿಂದ ಸ್ವಪಕ್ಷಸ್ಥಾಪಕವೇ ಆಗಿರುತ್ತವೆ. ಆದ್ದರಿಂದ ಪ್ರಥಮಪಾದದ ಅನಂತರ

ಮೂರು ಹಾಗೂ ನಾಕನೆಯ ಪಾದಗಳು ಸಂಗತವಾಗುತ್ತವೆ. ಎರಡನೆಯ ಪಾದವನ್ನು ಕೊನೆಯಲ್ಲಿಯೇ ಹೇಳಬೇಕಿತ್ತು. ಆದ್ದರಿಂದ ಪಾದಗಳ ವ್ಯವಸ್ಥೆಯು ಅಯುಕ್ತವಾಗಿವೆ.

ಮಾಯಾವಾದದಲ್ಲಿ ಮತ್ತು ರಾಮಾನುಜಮತದಲ್ಲಿ ಅಧಿಕರಣರಚನೆ ಹೀಗಿದೆ - ವೇದಾಂತಗಳು ಬಹುಮುಖವಾದ ಅರ್ಥಗಳನ್ನು ಹೊಂದಿರುತ್ತವೆ. ಶ್ರುತಿಗಳ ಅರ್ಥವು ಅತ್ಯಂತ ಕ್ಲಿಷ್ಟಕರ- ವಾಗಿರುವುದರಿಂದ ಮನುಷ್ಯ ಸಾಮಾನ್ಯರಿಗೆ ನೇರವಾಗಿ ಶ್ರುತಿಗಳ ಅರ್ಥವನ್ನು ತಿಳಿಯಲು ಸಾಧ್ಯವಾಗುವುದಿಲ್ಲ. ಪರತಂತ್ರಪ್ರಜ್ಞಾವಂತರಾದ್ದರಿಂದ ಶ್ರುತಿಗಳ ಅಪೇಕ್ಷೆ ಬೇಕಾಗುತ್ತದೆ. ಸ್ಮೃತಿಗಳಿಂದಲೇ ವೇದದ ಅರ್ಥವನ್ನು ನಿಶ್ಚಯ ಮಾಡಬೇಕು. ಈ ಸಂದರ್ಭದಲ್ಲಿ ಯಾವ ಸ್ಮೃತಿಗಳನ್ನು ಅವಲಂಬಿಸಬೇಕೆಂಬ ಗೊಂದಲವುಂಟಾಗುತ್ತದೆ. ಮನ್ವಾದಿಸ್ಮೃತಿಗಳು ಆಚರಣೆ ಮೊದಲಾದವುಗಳನ್ನು ನಿರೂಪಣೆ ಮಾಡುತ್ತಾ ಅನ್ಯತ್ರ ಸಾವಕಾಶವಾಗಿವೆ. ಕಾಪಿಲಸ್ಮೃತಿಯು ಪ್ರಕೃತಿಯಿಂದಲೇ ಜಗತ್ತಿನ ಸೃಷ್ಟ್ಯಾದಿಗಳು ಉಂಟಾಗುತ್ತವೆಂದು ತಿಳಿಸುವ ಮೂಲಕ ಸಿದ್ಧಾರ್ಥಬೋಧಕವಾಗಿದೆ. ಮೋಕ್ಷಸಾಧನವಾದ ಯಥಾರ್ಥಜ್ಞಾನವನ್ನು ತಂದುಕೊಡುವುದಕ್ಕಾಗಿಯೇ ಕಾಪಿಲಸ್ಮೃತಿಯು ಹೊರಟಿರುತ್ತದೆ. ಇಂತಹ ಸ್ಮೃತಿಗೆ ಬೇರೆ ಅರ್ಥವನ್ನು ಮಾಡಲು ಸಾಧ್ಯವಿಲ್ಲ. ಆದ್ದರಿಂದ ಅಪ್ರಮಾಣವಾಗುತ್ತದೆ. ಆದರೆ ಕಪಿಲಮಹರ್ಷಿ ಈ ಸ್ಮೃತಿಯನ್ನು ರಚನೆ ಮಾಡಿರುವುದರಿಂದ ಅಪ್ರಾಮಾಣ್ಯವನ್ನು ಸರ್ವಥಾ ಹೇಳಬಾರದು. ಆದ್ದರಿಂದ ಸ್ಮೃತಿಗಳಿಗೆ ವಿರೋಧ ಬರದಂತೆ ವೇದಾಂತವಾಕ್ಯಗಳಿಗೆ ವ್ಯಾಖ್ಯಾನ ಮಾಡಬೇಕು. ಹೊರತು ವಿರುದ್ಧವಾಗುವಂತೆ ಬ್ರಹ್ಮನೇ ಜಗತ್ತಿಗೆ ಕಾರಣ ಎಂಬುದಾಗಿ ವ್ಯಾಖ್ಯಾನ ಮಾಡಬಾರದು. ಇಷ್ಟು ಪೂರ್ವಪಕ್ಷ.

ಮನ್ವಾದಿಸ್ಮೃತಿಗಳಲ್ಲಿ ಮತ್ತು ಪುರಾಣಾದಿಗಳಲ್ಲಿ ಅನೇಕ ಕಡೆ ಬ್ರಹನೇ ಜಗತ್ತಿಗೆ ಕಾರಣನಾಗಿದ್ದಾನೆಂಬ ವಾಕ್ಯಗಳಿವೆ. ಒಂದು ವೇಳೆ ಕಾಪಿಲಸ್ಮೃತಿಯ ಪ್ರಾಮಾಣ್ಯವನ್ನು ಒಪ್ಪಿ, ಪ್ರಕೃತಿಗೆ ಕಾರಣತ್ವವನ್ನು ಹೇಳುವುದಾದರೆ, ಈ ಸ್ಮೃತಿಪುರಾಣವಾಕ್ಯಗಳ ಪ್ರಾಮಾಣ್ಯವನ್ನು ಕೈಬಿಡಬೇಕಾಗುತ್ತದೆ. ಇವೆರಡರಲ್ಲಿ ಯಾವುದಾದರು ಒಂದನ್ನು ಪರಿತ್ಯಾಗ ಮಾಡಲೇಬೇಕು. ಯಾವುದನ್ನು ಪರಿತ್ಯಾಗ ಮಾಡಬೇಕು ? ಎಂಬ ಪ್ರಶ್ನೆಯು ಬಂದರೆ ವೇದಗಳಿಗೆ ಅನುಸಾರಿಯಾದ ಸ್ಮೃತಿಗಳು ಹೇಳುವಂತೆ ಬ್ರಹ್ಮಕಾರಣತ್ವವಾದವನ್ನೇ ಒಪ್ಪಬೇಕು. ಅಂದರೆ ಸ್ಮೃತಿಗಳಿಗೆ ಅನುಸಾರಿಯಾಗಿ ವೇದಾಂತಗಳನ್ನು ವ್ಯಾಖ್ಯಾನ ಮಾಡಬೇಕು. ಸ್ಮೃತಿವಿರುದ್ಧವಾದ ಕಾಪಿಲಸ್ಮೃತಿಯ ಪ್ರಾಮಾಣ್ಯವನ್ನು ಪರಿತ್ಯಾಗ ಮಾಡಬೇಕು. ಇಷ್ಟು ಸಿದ್ಧಾಂತ.

ಈ ಅಧಿಕರಣಶರೀರ ಅಸಾಧು. ಏಕೆಂದರೆ ವೇದಾಂತಗಳು ಬ್ರಹ್ಮನೇ ಜಗತ್ತಿಗೆ ಕಾರಣನಾಗಿದ್ದಾನೆಂಬ ಒಂದೇ ಅಭಿಪ್ರಾಯವುಳ್ಳವುಗಳು. ಈ ವಿಷಯವನ್ನು 'ಗತಿಸಾಮಾನ್ಯಾತ್' ಎಂಬ ಸೂತ್ರದಲ್ಲಿ ಸಮರ್ಥಿಸಿದ್ದೇವೆ. ಮತ್ತು ಸಮನ್ವಯಾಧ್ಯಾಯದಲ್ಲಿ ಸಮಗ್ರ ವೇದವು ಬ್ರಹ್ಮನ ಜಗತ್ಕಾರಣತ್ವವನ್ನೇ ಪ್ರತಿಪಾದನೆ ಮಾಡುತ್ತಿದೆಯೆಂದು ಸಮರ್ಥನೆ ಮಾಡಿರುವುದರಿಂದ ಶ್ರುತಿಗಳು ಬಹುಮುಖವಾಗಿದೆಯೆಂಬ ಆಶಂಕೆಯೇ ಹುಟ್ಟುವುದಿಲ್ಲ.

ಮತ್ತು ರಾಮಾನುಜರು ಇಪ್ಪತ್ತು ಅಧ್ಯಾಯಗಳಿಂದ ಕೂಡಿರುವ ಪೂರ್ವಮೀಮಾಂಸಾ ಸಹಿತವಾದ ಬ್ರಹ್ಮಮೀಮಾಂಸವು ಒಂದೇ ಶಾಸ್ತ್ರವೆನ್ನುತ್ತಾರೆ. ಹೀಗಿರುವಾಗ ಪೂರ್ವಮೀಮಾಂಸೆಯಲ್ಲಿ ಸ್ಪರ್ಶನಶ್ರುತಿವಿರೋಧ ಬಂದಾಗ ಸರ್ವವೇಷ್ಟನಸ್ಮೃತಿಗೆ ಅಪ್ರಾಮಾಣ್ಯವನ್ನೇ ಹೇಳಬೇಕೆಂದು ನಿರ್ಣಯಿಸಲಾಗಿದೆ. ಪುನಃ ಉತ್ತರಮೀಮಾಂಸೆಯಲ್ಲಿ ಸ್ಮೃತಿವಿರೋಧ ಬರುವುದರಿಂದ ಶ್ರುತಿಗೆ ಅನ್ಯಾರ್ಥ ಮಾಡಬೇಕೆಂಬ ಆಶಂಕೆಯೇ ಹುಟ್ಟುವುದಿಲ್ಲ.

'ಸ್ಮೃತ್ಯನವಕಾಶದೋಷಪ್ರಸಂಗಾತ್' ಎಂಬ ಸೂತ್ರದಲ್ಲಿ ಸ್ಮೃತಿಯೆಂಬ ಶಬ್ದವಿದೆ. ಇದಕ್ಕೆ ಅವೈದಿಕಸ್ಮೃತಿಗಳು ಎಂಬುದಾಗಿ ಅಸಂಕುಚಿತವಾದ ಅರ್ಥವನ್ನೇ ಪೂರ್ವಪಕ್ಷದಲ್ಲಿ ವಿವಕ್ಷಿಸಲು ಬರುವಾಗ ಅವೈದಿಕಸ್ಮೃತಿಗಳಲ್ಲಿ ಕೇವಲ ಕಾಪಿಲಸ್ಮೃತಿಯನ್ನು ಮಾತ್ರ ವಿವಕ್ಷಿಸುವುದು ಅಯುಕ್ತವಾಗುತ್ತದೆ.

'ಮಹದ್ದೀರ್ಘವದ್ವಾ' ಎಂಬ ಸೂತ್ರದಲ್ಲಿ ಕಣಾದಮತವನ್ನು ನಿರಾಕರಣೆ ಮಾಡಿರುವಂತೆ 'ರಚನಾನುಪಪತ್ತೇಃ' ಎಂಬ ಅಧಿಕರಣದಲ್ಲಿ ಸಾಂಖ್ಯಮತವನ್ನೂ ಕೂಡ ಅಯುಕ್ತವೆಂದೇ ನಿರಾಕರಿಸಲಾಗಿದೆ. ಇಷ್ಟು ಪ್ರಥಮಸೂತ್ರವ್ಯಾಖ್ಯಾನದ ನಿರಾಕರಣೆ.

'ಇತರೇಷಾಂ ಚಾನುಪಲಬ್ಧೇಃ' ಎಂಬ ಎರಡನೆಯ ಸೂತ್ರಕ್ಕೆ ಪರರು ಹೀಗೆ ವ್ಯಾಖ್ಯಾನ ಮಾಡುತ್ತಾರೆ. ಸಾಂಖ್ಯಸಿದ್ಧಾಂತ ಹೇಳುವ ಪ್ರಕೃತಿಯಿಂದ ಹುಟ್ಟುವ ಮಹತ್ತತ್ವ ಅಹಂಕಾರತತ್ವಗಳು ಶ್ರುತಿಗಳಲ್ಲಿ ಉಲ್ಲೇಖಿತವಾಗಿಲ್ಲ. ಆದ್ದರಿಂದ ಅವುಗಳು ಸರ್ವಥಾ ಅಪ್ರಮಾಣವಾಗಿವೆ. ಈ ಕಾರಣದಿಂದಲೂ ಸಾಂಖ್ಯಮತವು ಅಯುಕ್ತ ಎಂಬುದು ಎರಡನೆಯ ಸೂತ್ರಾರ್ಥ.

ಇದೂ ಕೂಡ ಸರಿಯಲ್ಲ. ಏಕೆಂದರೆ 'ನ ಸಂಖ್ಯೋಪಸಂಗ್ರಹಾತ್' ಎಂಬ ಅಧಿಕರಣದಲ್ಲಿ 'ಮಹತಃ ಪರಮವ್ಯಕ್ತಮ್' ಇತ್ಯಾದಿ ಶ್ರುತಿಗಳನ್ನು ಉಲ್ಲೇಖಿಸುತ್ತಾ ಮಹತ್ತತ್ವಾದಿಗಳ

ಪ್ರಸ್ತಾವವಿರುವುದನ್ನು ನಾವು ಈ ಹಿಂದೆಯೇ ತೋರಿಸಿರುತ್ತೇವೆ. ಆದ್ದರಿಂದ ಶ್ರುತಿಗಳಲ್ಲಿ ಮಹತ್ತತ್ತ್ವಾದಿಗಳ ಉಲ್ಲೇಖವಿಲ್ಲವೆಂಬ ವ್ಯಾಖ್ಯಾನವು ಅಯುಕ್ತ.

ಪರರು 'ಏತೇನ ಯೋಗಃ ಪ್ರತ್ಯುಕ್ತಃ' ಎಂಬ ಮೂರನೆಯ ಸೂತ್ರಕ್ಕೆ ಹೀಗೆ ವ್ಯಾಖ್ಯಾನಿಸುತ್ತಾರೆ - ಇದು ಪ್ರತ್ಯೇಕ ಅಧಿಕರಣ. ಹಿಂದಿನ ಅಧಿಕರಣದಲ್ಲಿ ಈ ಸೂತ್ರವು ಇರುವುದಿಲ್ಲ. 'ವಿದ್ಯಾಮೇತಂ ಯೋಗವಿಧಿಂ ಚ ಕೃತ್ಸ್ನಮ್' ಇತ್ಯಾದಿ ಶ್ರುತಿಗಳಿಂದ ಯೋಗವನ್ನು ಪರಿಗ್ರಹಿಸಲಾಗಿದೆ. ಆದ್ದರಿಂದ ಸಾಂಖ್ಯಮತಕ್ಕಿಂತ ಯೋಗಸ್ಮೃತಿಯಲ್ಲಿ ವೈಲಕ್ಷಣ್ಯವಿದೆ. ಈ ಅಧಿಕಾಶಂಕೆಯನ್ನು 'ಏತೇನ ಯೋಗಃ' ಎಂಬ ಸೂತ್ರವು ಪರಿಹರಿಸುತ್ತಾ ಅತಿದೇಶ ಮಾಡುತ್ತಿದೆ.

ಇದು ತಪ್ಪು. ಯೋಗದರ್ಶನದ ನಿರಾಕರಣೆಗಾಗಿ ಇದನ್ನು ಪ್ರತ್ಯೇಕ ಅಧಿಕರಣವೆಂದು ಹೇಳಬೇಕಾಗಿಲ್ಲ. ಏಕೆಂದರೆ 'ತತ್ಕಾರಣಂ ಸಾಂಖ್ಯಯೋಗಾಧಿಗಮ್ಯಂ ಜ್ಞಾತ್ವಾ ದೇವಂ ಮುಚ್ಯತೇ ಸರ್ವಪಾಪೈಃ' ಎಂಬುದಾಗಿ ಸಾಂಖ್ಯಶಾಸ್ತ್ರವೂ ಕೂಡ ವೇದಾಂತದರ್ಶನವೆಂದು ಸ್ವೀಕರಿಸಲ್ಪಟ್ಟಿದೆ. ಆದ್ದರಿಂದ ಯೋಗಶಾಸ್ತ್ರವು ಮಾತ್ರ ವೇದಾಂತದರ್ಶನವಾಗುತ್ತದೆ. ಸಾಂಖ್ಯಶಾಸ್ತ್ರವು ಆಗುವುದಿಲ್ಲವೆಂಬ ಪರಿಕಲ್ಪನೆ ತಪ್ಪು.

ಸಾಂಖ್ಯಶಬ್ದಕ್ಕೆ ವೈದಿಕವಾದ ತತ್ವಜ್ಞಾನ ಎಂದರ್ಥ ಹೊರತು, ಸಾಂಖ್ಯದರ್ಶನ ಎಂದರ್ಥವಲ್ಲ ಎಂದು ಉತ್ತರಿಸುವುದಾದರೆ ಯೋಗಶಬ್ದಕ್ಕೂ ಕೂಡ ಜ್ಞಾನೋಪಾಯ ಎಂದೇ ಅರ್ಥ. ಹೊರತು ಯೋಗದರ್ಶನ ಎಂದರ್ಥವಲ್ಲ.

ಪೂರ್ವಪಕ್ಷಸಮುತ್ಥಾನಮಾದ್ಯೇ ಹೇತೋರಸಿದ್ಧತಾ ।
ದ್ವಿತೀಯೇऽಭ್ಯಧಿಕಾಶಂಕಾನುಪಪತ್ತಿಸ್ಮೃತೀಯಕೇ ॥

ಅದ್ವೈತಿಗಳ ಅಧಿಕರಣಶರೀರದಲ್ಲಿ ಮೊದಲನೇ ಸೂತ್ರದಲ್ಲಿ ಪೂರ್ವಪಕ್ಷವೇ ಹುಟ್ಟುವುದಿಲ್ಲ. ಎರಡನೆಯ ಸೂತ್ರವು ಹೇತು ಅಸಿದ್ಧವಾಗಿದೆ. ಅಭ್ಯಧಿಕಾಶಂಕೆಯೇ ಹುಟ್ಟದ ಕಾರಣ ಮೂರನೆಯ ಸೂತ್ರವ್ಯಾಖ್ಯಾನವೂ ಕೂಡ ಅಯುಕ್ತವಾಗಿದೆ.

ಇಲ್ಲಿಗೆ ಸ್ಮೃತ್ಯಧಿಕರಣದಲ್ಲಿ ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ ಇವುಗಳ ಅನುವಾದವು ಮತ್ತು ತಂತ್ರದೀಪಿಕೆ ಹಾಗೂ ಮತತ್ರಯ ವಿಮರ್ಶೆಯು ಸಮಾಪ್ತವಾಯಿತು.

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥

ನ ವಿಲಕ್ಷಣತ್ವಾಧಿಕರಣ

ಬ್ರಹ್ಮಸೂತ್ರ, ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ತ್ವಪ್ರದೀಪ, ತತ್ತ್ವಪ್ರಕಾಶಿಕಾ, ಭಾವದೀಪ

ವಿಶೇಷವಿಚಾರದೊಂದಿಗೆ ಕನ್ನಡಭಾಷೆಯಲ್ಲಿ ಅನುವಾದ

ಮತ್ತು

ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆ

॥ ಹರಿಃ ಓಂ ॥

॥ ಶ್ರೀವೇದವ್ಯಾಸಾಯ ನಮಃ ॥

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಗುರುಭ್ಯೋ ನಮಃ ॥

॥ ಶ್ರೀಮದ್‌ರಾಘವೇಂದ್ರತೀರ್ಥಗುರುಭ್ಯೋ ನಮಃ ॥

॥ ಶ್ರೀಗುರುಭ್ಯೋ ನಮಃ ॥

ನ ವಿಲಕ್ಷಣತ್ವಾಧಿಕರಣ

ಬ್ರಹ್ಮಸೂತ್ರ

'ನ ವಿಲಕ್ಷಣತ್ವಾದಸ್ಯ ತಥಾತ್ವಂ ಚ ಶಬ್ದಾತ್' ಎಂಬ ಸೂತ್ರಕ್ಕೆ ವ್ಯಾಖ್ಯಾನ

ब्रह्मसूत्रम् – न विलक्षणत्वादस्य तथात्वं च शब्दात्

ಸೂತ್ರಾರ್ಥ - ಪಾಶುಪತಾದಿಗಳಲ್ಲಿ ಹೇಳಿದ ಕರ್ಮಗಳಿಗೆ ಫಲವು ದೊರೆಯದ ಕಾರಣ ಅಪ್ರಮಾಣವಾಗುವಂತೆ ವೇದ ಹಾಗೂ ವೇದಾನುಸಾರಿಯಾದ ಪಂಚರಾತ್ರಾದಿ ಸ್ಮೃತಿಗಳು ಅಪ್ರಮಾಣವಾಗುವುದಿಲ್ಲ. ಏಕೆಂದರೆ ವೇದಗಳು ನಿತ್ಯವಾಗಿವೆ. ಪಂಚರಾತ್ರಾದಿಸ್ಮೃತಿಗಳು ವೇದಕ್ಕೆ ಅನುಸಾರಿಯಾಗಿವೆ. ಹೀಗೆ ಪಾಶುಪತಾದಿ ಸ್ಮೃತಿಗಳಿಗಿಂತ ಪಂಚರಾತ್ರಾದಿ ಸ್ಮೃತಿಗಳಲ್ಲಿ ವೈಲಕ್ಷಣ್ಯ ಇರುವುದರಿಂದ ಅಪ್ರಾಮಾಣ್ಯ ದೋಷವು ಬರುವುದಿಲ್ಲ.

ಅರ್ಥ -- ಅಸ್ಯ = ಪಂಚರಾತ್ರಾದಿ ಸ್ಮೃತಿಗಳಿಗೆ ಪಾಶುಪತಾದಿ ಸ್ಮೃತಿಗಳಂತೆ ಅಪ್ರಾಮಾಣ್ಯವನ್ನು ಹೇಳಬಾರದು. ಏಕೆಂದರೆ, ವಿಲಕ್ಷಣತ್ವಾತ್= ಸ್ವತಃ ಪ್ರಾಮಾಣ್ಯ ಎಂಬ ವೈಲಕ್ಷಣ್ಯವಿರುವುದರಿಂದ. ಅಥವಾ ಅಪೌರುಷೇಯತ್ವ ಮತ್ತು ಅಪೌರುಷೇಯವೇದ ವಾಕ್ಯಾನುಸಾರಿತ್ವ ಎಂಬ ವೈಲಕ್ಷಣ್ಯವಿರುವುದರಿಂದ ಅಪ್ರಾಮಾಣ್ಯವು ಇರುವುದಿಲ್ಲ. ತಥಾತ್ವಂ ಚ = ವೇದಗಳ ಅಪೌರುಷೇಯತ್ವ ಹಾಗೂ ಪಂಚರಾತ್ರಾದಿ ಸ್ಮೃತಿಗಳಿಗೆ ವೇದಾನುಸಾರಿತ್ವ ಎಂಬ ವೈಲಕ್ಷಣ್ಯವು, ಶಬ್ದಾತ್ = 'ವಾಚಾ ವಿರೂಪ ನಿತ್ಯಯಾ' ಮೊದಲಾದ ಪ್ರಮಾಣಗಳಿಂದ ನಿಶ್ಚಿತವಾಗಿದೆ.

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ವಿರಚಿತವಾದ

ಬ್ರಹ್ಮಸೂತ್ರಭಾಷ್ಯ

ಶ್ರುತಿ ಹಾಗೂ ತದನುಸಾರಿ ಸ್ಮೃತಿಗಳಿಗೆ ಅಪ್ರಾಮಾಣ್ಯವನ್ನು ಹೇಳಬಾರದು

ब्रह्मसूत्रभाष्यम् – ।। न विलक्षणत्वादस्य तथात्वं च शब्दात् ।।१।।

नैवं श्रुतेस्तदनुसारिस्मृतेश्च तदुक्तानुपलब्धेरप्रामाण्यं वाच्यम् । विलक्षणत्वात् नित्यत्वात् तदनुसारित्वाच्च ।

ಅನುವಾದ - ಪಾಶುಪತಸ್ಮೃತಿಯಲ್ಲಿ ವಿಧಿಸಿದ ಕರ್ಮಗಳನ್ನು ಆಚರಣೆ ಮಾಡಿದರೂ ಫಲವು ದೊರೆಯುತ್ತಿಲ್ಲ. ಆದ್ದರಿಂದ ಅದು ಅಪ್ರಮಾಣವಾಗಿದೆ. ಅದರಂತೆ ವೇದ ಹಾಗೂ ವೇದಾನುಸಾರಿಯಾದ ಸ್ಮೃತಿಗಳಲ್ಲಿಯೂ ವಿಧಿಸಿದ ಕರ್ಮಗಳನ್ನು ಆಚರಣೆ ಮಾಡಿದರೆ ಫಲವು ದೊರೆಯುತ್ತಿಲ್ಲ. ಆದ್ದರಿಂದ ವೇದ ಹಾಗು ವೇದಾನುಸಾರಿಯಾದ ಸ್ಮೃತಿಗಳಿಗೆ ಅಪ್ರಮಾಣ್ಯವನ್ನು ಹೇಳಬೇಕು.

ಹೀಗೆಆಶಂಕೆಮಾಡಬಾರದು. ಏಕೆಂದರೆವೇದಗಳುಅಪೌರುಷೆಯವಾಗಿವೆ. ಪಂಚರಾತ್ರಾಗಮಗಳು ಅಪೌರುಷೆಯವಾದ ವೇದಕ್ಕೆ ಅನುಸಾರಿಯಾಗಿವೆ. ಹೀಗೆ ಪಾಶುಪತಶಾಸ್ತ್ರಕ್ಕಿಂತಲೂ ವೇದ ಹಾಗೂ ಪಂಚರಾತ್ರಾಗಮಗಳಲ್ಲಿ ವೈಲಕ್ಷಣ್ಯವಿರುವುದರಿಂದ ಫಲವು ದೊರೆಯುತ್ತಿಲ್ಲವೆಂದು ಅಪ್ರಮಾಣ್ಯವನ್ನು ಹೇಳಬಾರದು.

ಪ್ರತಿಪದಾರ್ಥ -- ಈ ಅಧಿಕರಣದಲ್ಲಿ ವಿಷ್ಣುವಿನ ಜಗತ್ಕಾರಣತ್ವ-ವಿಷಯದಲ್ಲಿ ಪ್ರಮಾಣವನ್ನಾಗಿ ಹೇಳಿದ ವೇದಾದಿಗಳಿಗೆ ಯುಕ್ತಿ-ವಿರೋಧವನ್ನು ಆಕ್ಷೇಪ ಮಾಡಿ ಪರಿಹಾರ ಮಾಡಲಾಗಿದೆ. ಭಾಷ್ಯದಲ್ಲಿ ನೇರವಾಗಿ ಸಿದ್ಧಾಂತವನ್ನೇ ಸ್ಥಾಪನೆ ಮಾಡುತ್ತಿದ್ದಾರೆ. ಶ್ರುತೇಃ = ವೇದಗಳಿಗೆ, ಚ = ಮತ್ತು, ತದನುಸಾರಿಸ್ಮೃತೇಃ = ವೇದಗಳಿಗೆ ಅನುಸಾರಿಯಾದ ಪಂಚರಾತ್ರಾಮಗಳಿಗೆ, ತದುಪಲಬ್ಧಾರ್ಥ ಅನುಪಲಬ್ಧೇಃ = ಅವುಗಳಲ್ಲಿ ಹೇಳಲ್ಪಟ್ಟ ಫಲಗಳು ಕಾಣಿಸದಿರುವುದರಿಂದ, ಅಪ್ರಾಮಾಣ್ಯಮ್ = ಅಪ್ರಾಮಾಣ್ಯವನ್ನು, ಏವಂ = ಪಾಶುಪತಾದ್ಯಾಗಮಗಳಂತೆ, ನ = ಹೇಳಬಾರದು, ವಿಲಕ್ಷಣತ್ವಾತ್ = ಪಾಶುಪತಾಮಗಳಿಂತಲೂ ಇವುಗಳಲ್ಲಿ ವೈಲಕ್ಷಣ್ಯವಿದೆ, ಹಿ = ಏಕೆಂದರೆ, ನಿತ್ಯತ್ವಾತ್ = ವೇದಗಳು

ಅಪೌರುಷೇಯಗಳಾಗಿವೆ. ತದನುಸಾರಿತ್ವಾಚ್ಚ = ವೈಷ್ಣವಸ್ಮೃತಿಗಳು ವೇದಾನುಸಾರಿಗಳಾಗಿವೆ.

ಅಪೌರುಷೇಯ ವೇದದಲ್ಲಿ ದೋಷವಿಲ್ಲ

ब्रह्मसूत्रभाष्यम् – न हि नित्ये दोषाः कल्प्याः । स्वतश्च प्रामाण्यम् । अन्यथाऽनवस्थितेः।

ಅನುವಾದ - ಅಪೌರುಷೇಯವಾದ ವೇದಗಳಲ್ಲಿ ದೋಷಗಳನ್ನು ಎಂದೂ ಕೂಡ ಕಲ್ಪನೆ ಮಾಡಬಾರದು ಮತ್ತು ಪ್ರಾಮಾಣ್ಯವು ಫಲೋಪಲಬ್ಧಿಯ ಅಪೇಕ್ಷೆಯನ್ನು ಹೊಂದುವುದಿಲ್ಲ. ಹಾಗೆ ಅಪೇಕ್ಷೆ ಪಟ್ಟರೆ ಅನವಸ್ಥಾದೋಷವು ಬರುತ್ತದೆ.

ಪ್ರತಿಪದಾರ್ಥ -- ವೇದವು ಅಪೌರುಷೇಯವಾದರೂ ಅಪ್ರಾಮಾಣ್ಯವನ್ನು ಏಕೆ ಹೇಳಬಾರದು? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ. ನಿತ್ಯೇ = ಅಪೌರುಷೇಯವಾದ ವೇದದಲ್ಲಿ, ದೋಷಾಃ = ದೋಷಗಳನ್ನು ನ ಹಿ ಕಲ್ಪ್ಯಾಃ = ಕಲ್ಪನೆ ಮಾಡಬಾರದು. ಸ್ವತಶ್ಚ ಪ್ರಾಮಾಣ್ಯಮ್ = ಪ್ರಾಮಾಣ್ಯಸ್ವತಸ್ತ್ವವನ್ನು ಒಪ್ಪಿರುವುದರಿಂದ, ಅನ್ಯಥಾ = ಪ್ರಾಮಾಣ್ಯಸ್ವತ್ವವನ್ನು ಒಪ್ಪದಿದ್ದರೆ, ಅನವಸ್ಥಿತೇಃ = ಅನವಸ್ಥಾ ದೋಷವು ಬರುತ್ತದೆ.

ವೇದಗಳಿಂದ ಮಾತ್ರ ದೇವರನ್ನು ತಿಳಿಯಲು ಸಾಧ್ಯ

ब्रह्मसूत्रभाष्यम् – 'न चक्षुर्न श्रोत्रं न तर्को न स्मृतिर्वेदा ह्येवैनं वेदयन्ति' इति भाल्लवेयश्रुतेश्च ।

ಅನುವಾದ - ವೇದಪ್ರತಿಪಾದ್ಯನಾದ ಪರಮಾತ್ಮನನ್ನು ಕಣ್ಣು ನೋಡುವುದಿಲ್ಲ, ಕಿವಿ ಕೇಳುವುದಿಲ್ಲ. ತರ್ಕವು ಸಾಧನೆ ಮಾಡುವುದಿಲ್ಲ. ಸ್ಮೃತಿಗ್ರಂಥಗಳು ಮಾತನಾಡುವುದಿಲ್ಲ. ವೇದಗಳು ಮಾತ್ರ ಅವನನ್ನು ಪ್ರತಿಪಾದನೆ ಮಾಡುತ್ತವೆ. ಹೀಗೆ ಭಾಲ್ಲವೇಶ್ರುತಿಯು ಹೇಳುತ್ತಿದೆ.

ಪ್ರತಿಪದಾರ್ಥ -- ವೇದವು ಸ್ವತಃಪ್ರಮಾಣವಾಗಿದೆ. 'ಶಬ್ದಾತ್' ಎಂಬ ಸೂತ್ರದ ಭಾಗದಿಂದ ಉಲ್ಲೇಖ ಮಾಡಿದ ವೇದದ ಸ್ವತಃ ಪ್ರಾಮಾಣ್ಯ-ವಿಷಯದಲ್ಲಿ ಶ್ರುತಿಯನ್ನು ಉಲ್ಲೇಖ ಮಾಡುತ್ತಿದ್ದಾರೆ. ಚಕ್ಷುಃ = ಅಜ್ಞಾನಿಗಳ ಕಣ್ಣು ಏನಂ = ಈ ಪರಮಾತ್ಮನನ್ನು ನ = ನೋಡುವುದಿಲ್ಲ.

ಶ್ರೋತ್ರಂ = ಅಜ್ಞಾನಿಗಳ ಕಿವಿಯು, ಏನಂ = ಈ ಪರಮಾತ್ಮನನ್ನು, ನ = ಕೇಳುವುದಿಲ್ಲ. ತರ್ಕಃ = ಶುಷ್ಕವಾದ ಅನುಮಾನವು, ಏನಂ = ಈ ಪರಮಾತ್ಮನನ್ನು, ನ = ಸಾಧನೆ ಮಾಡುವುದಿಲ್ಲ. ಸ್ಮೃತಿಃ = ವೇದಕ್ಕೆ ಅನುಕೂಲವಾಗದ ಸ್ಮೃತಿಃ = ಸ್ಮೃತಿಯು, ಏನಂ = ಈ ಪರಮಾತ್ಮನನ್ನು, ನ = ಪ್ರತಿಪಾದನೆ ಮಾಡುವುದಿಲ್ಲ. ವೇದಾ ಹಿ = ವೇದಗಳು ಮಾತ್ರ, ಏನಂ = ಈ ಪರಮಾತ್ಮನನ್ನು, ವೇದಯಂತಿ = ಪ್ರತಿಪಾದನೆ ಮಾಡುತ್ತವೆ. ಇತಿ = ಹೀಗೆ, ಭಾಲ್ಲವೇಯಶ್ರುತೇಶ್ಚ = ಭಾಲ್ಲವೇಶ್ರುತಿಯು ಪ್ರಮಾಣವಾಗಿದೆ.

ವೇದನಿತ್ಯತ್ವ ವಿಷಯದಲ್ಲಿ ಆಧಾರಗಳು

ब्रह्मसूत्रभाष्यम् – नित्यत्वं च शब्दादेव प्रतीयते 'वाचा विरूप नित्यया' (ऋ.८.६४.६.) इत्यादेः । 'अनादिनिधना नित्या' इति च स्मृतिः ॥१॥

ಅನುವಾದ - ವೇದದ ಅಪೌರುಷೇಯತ್ವವೂ ಕೂಡ ವೇದದಿಂದಲೇ ತಿಳಿಯುತ್ತದೆ. 'ವಾಚಾ ವಿರೂಪನಿತ್ಯಯಾ' ಎಂಬ ವೇದವಾಕ್ಯವು 'ಅನಾದಿ ನಿಧನಾ ನಿತ್ಯಾ' ಎಂಬ ಸ್ಮೃತಿವಾಕ್ಯವು ವೇದಗಳಿಗೆ ಅಪೌರುಷೇಯತ್ವವನ್ನು 'ನಿತ್ಯಾ' ಎಂಬ ಶಬ್ದದಿಂದ ಪ್ರತಿಪಾದನೆ ಮಾಡುತ್ತಿದೆ.

ಪ್ರತಿಪಾದಾರ್ಥ -- ಅಪೌರುಷೇಯತ್ವವೆಂಬ ಯಾವ ವೈಲಕ್ಷಣ್ಯವನ್ನು ಸೂತ್ರದಲ್ಲಿ ಹೇಳಿದರೋ, ಅದು ಅಸಿದ್ಧವಾಗಿದೆ ಎಂದು ಆಶಂಕಿಸಿ ವೇದಪ್ರಮಾಣದಿಂದಲೇ ಅದನ್ನು ಪರಿಹರಿಸುತ್ತಿದ್ದಾರೆ. ನಿತ್ಯತ್ವಂ ಚ = ವೇದದ ಅಪೌರುಷೇಯತ್ವವಾದರೂ ಶಬ್ದಾದೇವ ಆಗಮಪ್ರಮಾಣದಿಂದಲೇ ಪ್ರತೀಯತೇ = ಸಿದ್ಧವಾಗುತ್ತಿದೆ. ವಾಚಾ ವಿರೂಪ ನಿತ್ಯಯಾ = ವಾಚಾ ವಿರೂಪ ನಿತ್ಯಯಾ ಇವೇ ಮೊದಲಾದ ವೇದಮಾತುಗಳಿಂದ ಅನಾದಿನಿಧನಾ ನಿತ್ಯಾ = 'ಅನಾದಿನಿಧನಾ ನಿತ್ಯಾ' ಇತ್ಯಾದಿ ಸ್ಮೃತಿವಾಕ್ಯಗಳಿಂದ ವೇದದ ಅಪೌರುಷೇಯತ್ವವು ಸಿದ್ಧವಾಗಿದೆ.

ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ

ಸತ್ತರ್ಕದೀಪಾವಳಿ

ವೇದದಂತೆ ಪಾಶುಪತಸ್ಮೃತಿಗೆ ಪ್ರಾಮಾಣ್ಯವಿಲ್ಲ

पशुपत्यादिकृतागमस्य तु विप्रलम्भादिकर्तृदोषसम्भवेनापि यथोक्तफलादर्शनोपपत्तेः । स प्रतिबन्धककर्मादिना एव इति निश्चेतुं शक्यत्वात् । तदाह – न विलक्षणत्वादित्यादिना ।। ननु जगज्जन्मादिकारणे नारायणे नित्यस्यापि निखिलवेदस्य प्रामाण्यं न युज्यते । प्रमाणान्तर-संवादाभावात् इत्यत आह – स्वतश्चेत्यादिना ।।

ಪಶುಪತಿ ಮೊದಲಾದವರಿಂದ ರಚಿತವಾದ ಆಗಮವು ಕರ್ತೃದೋಷಸಹಿತ-ವಾಗಿರುವುದರಿಂದ ಅಪ್ರಮಾಣವಾಗಿದೆ. ಆದ್ದರಿಂದ ಅದರಲ್ಲಿ ಹೇಳಿದಂತೆ ಅನುಷ್ಠಾನ ಮಾಡಿದರೂ ಕೂಡ ಫಲವು ದೊರಕುತ್ತಿಲ್ಲ. ಆದ್ದರಿಂದ ಪ್ರತಿಬಂಧಕವಾದ ಕರ್ಮಾದಿಗಳ ಅಧೀನವಾಗಿ ಫಲವು ದೊರಕುತ್ತಿಲ್ಲವೆಂದು ಪಾಶುಪತಾದ್ಯಾಗಮಗಳಲ್ಲಿ ನಿಶ್ಚಯ ಮಾಡಲು ಸಾಧ್ಯವಾಗುವುದಿಲ್ಲ. ಇದನ್ನೇ 'ನ ವಿಲಕ್ಷಣತ್ವಾದಿ' ಇತ್ಯಾದಿ ಭಾಷ್ಯದಿಂದ ಉಪಪಾದನೆ ಮಾಡುತ್ತಿದ್ದಾರೆ.

ಜಗಜ್ಜನ್ಮಾದಿಕಾರಣನಾದ ನಾರಾಯಣನಲ್ಲಿ ನಿತ್ಯವಾದ ಸಕಲ ವೇದಗಳಿಗೂ ಕೂಡ ಪ್ರಾಮಾಣ್ಯವು ಹೇಗೆ ಯುಕ್ತವಾಗುತ್ತದೆ ? ಏಕೆಂದರೆ ಅವುಗಳಿಗೂ ಕೂಡ ಪ್ರಮಾಣಾಂತರ ಸಂವಾದ ಇರುವುದಿಲ್ಲ ? ಈ ಪ್ರಶ್ನೆಗೆ 'ಸ್ವತಶ್ಚ' ಇತ್ಯಾದಿ ಭಾಷ್ಯವಾಕ್ಯದಿಂದ ಉತ್ತರವನ್ನು ನೀಡುತ್ತಿದ್ದಾರೆ.

ಪ್ರಾಮಾಣ್ಯಸ್ವತಸ್ತ್ವ ಒಪ್ಪದಿದ್ದರೆ ಅನವಸ್ಥಾ

सत्तर्कदीपावलिः – प्रमाणस्य प्रमाणान्तरसंवादेनैव प्रामाण्ये संवादकप्रामाण्यस्यापि प्रमाणान्तरसंवादेनैव प्रामाण्यम् । तस्यापि

प्रमाणान्तरसंवादेनैव प्रामाण्यम् इत्यनवस्था स्यात् । अतः 'प्रामाण्यं स्वत एव' इत्यङ्गीकर्तव्यमित्यर्थः । संवादनिरपेक्षाणामेव वेदानां विष्णुबोधकत्वं श्रुत्या साधयति – न चक्षुरिति ।।

ಒಂದು ಪ್ರಮಾಣಕ್ಕೆ ಮತ್ತೊಂದು ಪ್ರಮಾಣದ ಸಂವಾದದಿಂದ ಪ್ರಾಮಾಣ್ಯವನ್ನು ಹೇಳುತ್ತಿದ್ದೀರಿ. ಆ ಸಂವಾದಕ ಪ್ರಮಾಣಕ್ಕೂ ಕೂಡ ಮತ್ತೊಂದು ಪ್ರಮಾಣದ ಸಂವಾದದಿಂದಲೇ ಪ್ರಾಮಾಣ್ಯವನ್ನು ಹೇಳಬೇಕು. ಅದಕ್ಕೂ ಕೂಡ ಮತ್ತೊಂದು ಸಂವಾದದಿಂದ ಪ್ರಾಮಾಣ್ಯವನ್ನು ಹೇಳಬೇಕು. ಹೀಗೆ ಅನವಸ್ಥಾದೋಷವು ಬರಬೇಕಾಗುತ್ತದೆ. ಅದಕ್ಕೋಸ್ಕರ ಪ್ರಾಮಾಣ್ಯವನ್ನು ಸ್ವತಃ ಎಂದೇ ಅಂಗೀಕಾರ ಮಾಡಬೇಕು. ಯಾವುದೇ ಸಂವಾದದ ಅಪೇಕ್ಷೆ ಇಲ್ಲದೇ ವೇದಗಳೆಲ್ಲವೂ ವಿಷ್ಣುಬೋಧಕವಾಗುತ್ತವೆ. ಇದನ್ನು 'ನ ಚಕ್ಷುಃ' ಇತ್ಯಾದಿಯಾಗಿ ಶ್ರುತಿಯ ಮೂಲಕ ಸಾಧನೆ ಮಾಡುತ್ತಿದ್ದಾರೆ.

ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ

ತತ್ತ್ವಪ್ರದೀಪ

ಶ್ರುತಿನಿತ್ಯತ್ವಾಧಿಕರಣ

ಸ್ವಸಮಯವು ಪರಸಮಯ ಸಮಾನವಲ್ಲ

तत्वप्रदीपः – परसमयसाधारणसमीरितम् एतमेव दोषं स्वसमयेऽपि समानं समाशङ्क्यमानम् अपनोनुद्यते । न विलक्षणत्वादस्य तथात्वं च शब्दात् । न चेतरस्मृतिवद् वेदस्य उक्तफलोपलम्भ एव प्रामाण्यम् । नित्यत्वात् । पुंवाक्ये विप्रलम्भादिदोषाः सम्भवन्ति । न नित्यवाक्ये ते कल्प्याः । प्राप्त्यभावात् । नित्यवाक्यप्रामाण्यानङ्गीकारे धर्माधर्माद्यसिद्धिरिति चावादिष्म ।

(೧)ಇತರ ಸಮಯಗಳಲ್ಲಿ ಸಾಧಾರಣವಾದ ಯಾವ ದೋಷವನ್ನು ಹಿಂದಿನ ಅಧಿಕರಣದಲ್ಲಿ ಹೇಳಿದಿರೋ, ಅದು ನಿಮ್ಮ ಸಮಯದಲ್ಲೂ ಕೂಡ ಸಮಾನವಾಗಿದೆ. ಹೀಗೆ ಮಾಡುವ ಸಮಾನವಾದ ಆಶಂಕೆಯನ್ನು ಈ ಅಧಿಕರಣದಲ್ಲಿ ಪರಿಹಾರ ಮಾಡುತ್ತಿದ್ದಾರೆ 'ನ ವಿಲಕ್ಷಣತ್ವಾದಸ್ಯ ತಥಾತ್ವಂ ಚ ಶಬ್ದಾತ್' ಇತ್ಯಾದಿಯಾಗಿ.

ಪಾಶುಪತಾದಿಸ್ಮೃತಿಗಳಂತೆ ವೇದವು ತಾನು ಹೇಳಿದ ಫಲವು ದೊರಕುತ್ತಿರುವುದರಿಂದ ಪ್ರಮಾಣವಾಗಿದೆ ಎಂದು ನಾವು ಸಮರ್ಥನೆ ಮಾಡುವುದೇ ಇಲ್ಲ. ಅಪೌರುಷೇಯ-ವಾದ್ದರಿಂದ ಪ್ರಮಾಣವಾಗಿದೆ ಎನ್ನುತ್ತೇವೆ. ಪುರುಷವಾಕ್ಯದಲ್ಲಿ ಪುರುಷನಲ್ಲಿ ವಿಪ್ರಲಂಭಾದಿ ದೋಷಗಳಿಗೆ ಅವಕಾಶವಿದೆ. ಅಪೌರುಷೇಯವಾದ ವಾಕ್ಯದಲ್ಲಿ ಪುರುಷನಲ್ಲಿರುವ ವಿಪ್ರಲಂಭಾದಿ ದೋಷಗಳನ್ನು ಕಲ್ಪನೆ ಮಾಡಲು ಸಾಧ್ಯವೇ ಇಲ್ಲ. ಏಕೆಂದರೆ ಇದು ಪುರುಷ ನಿರ್ಮಿತವೇ ಅಲ್ಲ. ಒಂದು ವೇಳೆ ನಿತ್ಯವಾದ ವಾಕ್ಯಕ್ಕೆ ಪ್ರಾಮಾಣ್ಯವನ್ನು ಅಂಗೀಕಾರ ಮಾಡದೇ ಇದ್ದರೆ ಧರ್ಮಾಧರ್ಮಗಳೇ ಸಿದ್ಧವಾಗದಿರಬೇಕಾದೀತೆಂದು ಈಗಾಗಲೇ ಹೇಳಿದ್ದೇವೆ.

ವಿವರಣೆ - ಪಾಶುಪತಾದಿಸ್ಮೃತಿಗಳಲ್ಲಿ ಕೆಲವೊಂದು ಐಹಿಕ ಫಲಗಳು ದೊರಕುತ್ತವೆಂದು ಹೇಳಲಾಗಿದೆ. ಆದರೆ ಅದನ್ನು ಆಚರಣೆ ಮಾಡಿದಾಗಲೂ ಕೂಡ ಕೆಲವೊಮ್ಮೆ ಫಲವು ದೊರಕುತ್ತಿಲ್ಲ. ಆದ್ದರಿಂದ ಅವು ಅಪ್ರಮಾಣವಾಗಿವೆ ಎಂದು ಹಿಂದಿನ ಅಧಿಕರಣದಲ್ಲಿ ಹೇಳಲಾಯಿತು. ಈ ದೋಷ ನಿಮಗೂ ಕೂಡ ಸಮಾನವಲ್ಲವೇ? ಏಕೆಂದರೆ ವೇದದಲ್ಲಿ ಯಾವ ಫಲಗಳು ದೊರಕುತ್ತದೆಂದು ಹೇಳಲಾಗಿದೆಯೋ, ಅಂಥ ಫಲಗಳಲ್ಲಿ ಪ್ರತ್ಯಕ್ಷಸಿದ್ಧವಾದದ್ದು ಕೆಲವು ದೊರಕುತ್ತಿಲ್ಲ. ಆದ್ದರಿಂದ ಪಾಶುಪತಾದಿಸ್ಮೃತಿಗಳಂತೆ ವೇದವೂ ಕೂಡ ಅಪ್ರಮಾಣವಾಗುತ್ತವೆಂದು ಆಕ್ಷೇಪವು ಬಂದರೆ ಈ ಶ್ರುತಿನಿತ್ಯತ್ವಾಧಿಕರಣವು ಉತ್ತರಿಸುತ್ತಿದೆ.

ವೇದವು ಅಪೌರುಷೇಯವಾಗಿದೆ. ಯಾರೊಬ್ಬ ಪುರುಷನಿಂದಲೂ ಇದು ರಚಿತವಲ್ಲ. ಆದ್ದರಿಂದ ಪುರುಷನಲ್ಲಿರುವ ವಿಪ್ರಲಂಭಾದಿ ದೋಷಗಳನ್ನು ಇಲ್ಲಿ ಆಕ್ಷೇಪ ಮಾಡಲು ಸಾಧ್ಯವೂ ಇಲ್ಲ. ಆದರೆ ಪಾಶುಪತಾದಿಸ್ಮೃತಿಗಳು ಪೌರುಷೇಯ ಆಗಿರುವುದರಿಂದ ಪುರುಷನಲ್ಲಿರುವ ದೋಷಗಳಿಗೆ ಅವಕಾಶವಿದೆ. ಆದ್ದರಿಂದ ಬೇರೆ ಸಮಯಗಳಿಗೆ ಬರುವ ದೋಷವು ನಮ್ಮ ಸಮಯಕ್ಕೆ ಪ್ರಾಪ್ತವಾಗುವುದಿಲ್ಲ.

---

(೧) ಲೋಕದಲ್ಲಿ ಈ ಅಧಿಕರಣಕ್ಕೆ 'ನ ವಿಲಕ್ಷಣತ್ವಾಧಿಕರಣ' ಎಂಬ ಹೆಸರು ಪ್ರಸಿದ್ಧವಾಗಿದೆ. ಆದರೆ ಮುದ್ರಿತ ತತ್ವಪ್ರದೀಪದಲ್ಲಿ ಇದನ್ನು 'ಶ್ರುತಿನಿತ್ಯತ್ವಾಧಿಕರಣ' ಎಂದು ಹೆಸರಿಸಲಾಗಿದೆ.

ಆಶಂಕೆಯು ಸಾಕ್ಷಿಯ ತನಕ ಮಾತ್ರ

तत्वप्रदीपः – स्वतश्च प्रामाण्यमङ्गीकर्तव्यम् । परतश्चेत् तस्यापि परत इत्यनवस्था । न च नित्यप्रमाणस्य प्रामाण्यं परतः भवितुमर्हति । कदाचिदप्रामाण्ये सदा तथात्वप्रसङ्गात् । ननु स्वतः प्रामाण्यवादिनामपि वेदे दोषाभावः प्रमाणान्तरात् ज्ञायते । तदप्यदोषमेव दोषाभावे प्रामाणम् । तददोषत्वम् अन्यसाध्यम् इत्यनवस्था तत्रापि तुल्येति । नायं दोषः । साक्ष्यवधित्वात् दोषशङ्कायाः । यत्र हि साक्षी निर्दोषत्वं निश्चिनोति, न तत्र दोषशङ्का स्यात् । न च साक्षिणो दोषः कल्प्यः । तदनुभूतस्य अनन्यथात्वनियमात् । अन्यथा प्रमाणाप्रमाणविवेकाभावप्रसङ्गात् । न च साक्षिनिर्दोषत्वज्ञानं मानान्तरापेक्षम् । स्वसंवेद्यत्वात् तस्य । तस्मात् नास्मत्पक्षे अनवस्था ।

'ಪ್ರಾಮಾಣ್ಯಂ ಸ್ವತಃ' ಎಂದೇ ಅಂಗೀಕಾರ ಮಾಡಬೇಕು. 'ಪ್ರಾಮಾಣ್ಯಂ ಪರತಃ' ಎಂದು ಅಂಗೀಕಾರ ಮಾಡಿದರೆ ಅನವಸ್ಥಾದೋಷ ಬರುತ್ತದೆ. ನಿತ್ಯವಾದ ವೇದರೂಪವಾದ ಪ್ರಮಾಣಕ್ಕೆ ಪ್ರಾಮಾಣ್ಯವು ಮತ್ತೊಂದರಿಂದ ಹುಟ್ಟಲು ಸಾಧ್ಯವಿಲ್ಲವಷ್ಟೇ ? ಯಾವಾಗಲಾದರು ಅಪ್ರಾಮಾಣ್ಯವು ಬಂದರೆ ಆಗ ನಿರಂತರವಾಗಿ ಅದು ಅಪ್ರಮಾಣವೇ ಆಗುತ್ತದೆ. ಆದ್ದರಿಂದ ವೇದದಲ್ಲಿರುವ ಪ್ರಾಮಾಣ್ಯವು ಸಹಜವಾಗಿ ಇದೆ ಎಂದು ಹೇಳುತ್ತೇವೆ.

ಪ್ರಶ್ನೆ - ಸ್ವತಃ ಪ್ರಾಮಾಣ್ಯವಾದಿಗಳೂ ಕೂಡ ವೇದದಲ್ಲಿ ದೋಷವಿಲ್ಲ ಎಂಬುದನ್ನು ಮತ್ತೊಂದು ಪ್ರಮಾಣದಿಂದಲೇ ತಿಳಿಯಬೇಕು. ಆ ಮತ್ತೊಂದು ಪ್ರಮಾಣವು ನಿರ್ದುಷ್ಟವಾಗಿದ್ದರೆ ಮಾತ್ರ ವೇದದ ದೋಷಾಭಾವದಲ್ಲಿ ಪ್ರಮಾಣವಾಗಲು ಸಾಧ್ಯ. ಆದ್ದರಿಂದ ಅದರಲ್ಲಿರುವ ಅದೋಷತ್ವವನ್ನು ಮತ್ತೊಂದು ಪ್ರಮಾಣದಿಂದ ತಿಳಿಯಬೇಕು. ಅದರಲ್ಲೂ ಕೂಡ ಪ್ರಾಮಾಣ್ಯವನ್ನು ಇನ್ನೊಂದರಿಂದ ತಿಳಿಯಬೇಕೆಂಬುದು ಸಮಾನ. ಹೀಗೆ ಅನವಸ್ಥಾದೋಷವು ಸ್ವತಃ ಪ್ರಾಮಾಣ್ಯವಾದಿಗಳಿಗೂ ಕೂಡ ಸಮಾನವಾಗಿದೆಯಲ್ಲವೇ?

ಉತ್ತರ - ಅನವಸ್ಥಾದೋಷವು ಸ್ವತಃ ಪ್ರಾಮಾಣ್ಯವಾದಿಗಳಿಗೆ ಬರುವುದಿಲ್ಲ. ಏಕೆಂದರೆ ಸಾಕ್ಷಿಯು ಗ್ರಹಣ ಮಾಡುವ ತನಕ ಮಾತ್ರ ದೋಷಶಂಕೆಯು ಬರುತ್ತದೆ. ಎಲ್ಲಿ ಸಾಕ್ಷಿಯು

(೧)ಇತರ ಸಮಯಗಳಲ್ಲಿ ಸಾಧಾರಣವಾದ ಯಾವ ದೋಷವನ್ನು ಹಿಂದಿನ ಅಧಿಕರಣದಲ್ಲಿ ಹೇಳಿದಿರೋ, ಅದು ನಿಮ್ಮ ಸಮಯದಲ್ಲೂ ಕೂಡ ಸಮಾನವಾಗಿದೆ. ಹೀಗೆ ಮಾಡುವ ಸಮಾನವಾದ ಆಶಂಕೆಯನ್ನು ಈ ಅಧಿಕರಣದಲ್ಲಿ ಪರಿಹಾರ ಮಾಡುತ್ತಿದ್ದಾರೆ 'ನ ವಿಲಕ್ಷಣತ್ವಾದಸ್ಯ ತಥಾತ್ವಂ ಚ ಶಬ್ದಾತ್' ಇತ್ಯಾದಿಯಾಗಿ.

ಪಾಶುಪತಾದಿಸ್ಮೃತಿಗಳಂತೆ ವೇದವು ತಾನು ಹೇಳಿದ ಫಲವು ದೊರಕುತ್ತಿರುವುದರಿಂದ ಪ್ರಮಾಣವಾಗಿದೆ ಎಂದು ನಾವು ಸಮರ್ಥನೆ ಮಾಡುವುದೇ ಇಲ್ಲ. ಅಪೌರುಷೇಯ-ವಾದ್ದರಿಂದ ಪ್ರಮಾಣವಾಗಿದೆ ಎನ್ನುತ್ತೇವೆ. ಪುರುಷವಾಕ್ಯದಲ್ಲಿ ಪುರುಷನಲ್ಲಿ ವಿಪ್ರಲಂಭಾದಿ ದೋಷಗಳಿಗೆ ಅವಕಾಶವಿದೆ. ಅಪೌರುಷೇಯವಾದ ವಾಕ್ಯದಲ್ಲಿ ಪುರುಷನಲ್ಲಿರುವ ವಿಪ್ರಲಂಭಾದಿ ದೋಷಗಳನ್ನು ಕಲ್ಪನೆ ಮಾಡಲು ಸಾಧ್ಯವೇ ಇಲ್ಲ. ಏಕೆಂದರೆ ಇದು ಪುರುಷ ನಿರ್ಮಿತವೇ ಅಲ್ಲ. ಒಂದು ವೇಳೆ ನಿತ್ಯವಾದ ವಾಕ್ಯಕ್ಕೆ ಪ್ರಾಮಾಣ್ಯವನ್ನು ಅಂಗೀಕಾರ ಮಾಡದೇ ಇದ್ದರೆ ಧರ್ಮಾಧರ್ಮಗಳೇ ಸಿದ್ಧವಾಗದಿರಬೇಕಾದೀತೆಂದು ಈಗಾಗಲೇ ಹೇಳಿದ್ದೇವೆ.

ವಿವರಣೆ - ಪಾಶುಪತಾದಿಸ್ಮೃತಿಗಳಲ್ಲಿ ಕೆಲವೊಂದು ಐಹಿಕ ಫಲಗಳು ದೊರಕುತ್ತವೆಂದು ಹೇಳಲಾಗಿದೆ. ಆದರೆ ಅದನ್ನು ಆಚರಣೆ ಮಾಡಿದಾಗಲೂ ಕೂಡ ಕೆಲವೊಮ್ಮೆ ಫಲವು ದೊರಕುತ್ತಿಲ್ಲ. ಆದ್ದರಿಂದ ಅವು ಅಪ್ರಮಾಣವಾಗಿವೆ ಎಂದು ಹಿಂದಿನ ಅಧಿಕರಣದಲ್ಲಿ ಹೇಳಲಾಯಿತು. ಈ ದೋಷ ನಿಮಗೂ ಕೂಡ ಸಮಾನವಲ್ಲವೇ? ಏಕೆಂದರೆ ವೇದದಲ್ಲಿ ಯಾವ ಫಲಗಳು ದೊರಕುತ್ತದೆಂದು ಹೇಳಲಾಗಿದೆಯೋ, ಅಂಥ ಫಲಗಳಲ್ಲಿ ಪ್ರತ್ಯಕ್ಷಸಿದ್ಧವಾದದ್ದು ಕೆಲವು ದೊರಕುತ್ತಿಲ್ಲ. ಆದ್ದರಿಂದ ಪಾಶುಪತಾದಿಸ್ಮೃತಿಗಳಂತೆ ವೇದವೂ ಕೂಡ ಅಪ್ರಮಾಣವಾಗುತ್ತವೆಂದು ಆಕ್ಷೇಪವು ಬಂದರೆ ಈ ಶ್ರುತಿನಿತ್ಯತ್ವಾಧಿಕರಣವು ಉತ್ತರಿಸುತ್ತಿದೆ.

ವೇದವು ಅಪೌರುಷೇಯವಾಗಿದೆ. ಯಾರೊಬ್ಬ ಪುರುಷನಿಂದಲೂ ಇದು ರಚಿತವಲ್ಲ. ಆದ್ದರಿಂದ ಪುರುಷನಲ್ಲಿರುವ ವಿಪ್ರಲಂಭಾದಿ ದೋಷಗಳನ್ನು ಇಲ್ಲಿ ಆಕ್ಷೇಪ ಮಾಡಲು ಸಾಧ್ಯವೂ ಇಲ್ಲ. ಆದರೆ ಪಾಶುಪತಾದಿಸ್ಮೃತಿಗಳು ಪೌರುಷೇಯ ಆಗಿರುವುದರಿಂದ ಪುರುಷನಲ್ಲಿರುವ ದೋಷಗಳಿಗೆ ಅವಕಾಶವಿದೆ. ಆದ್ದರಿಂದ ಬೇರೆ ಸಮಯಗಳಿಗೆ ಬರುವ ದೋಷವು ನಮ್ಮ ಸಮಯಕ್ಕೆ ಪ್ರಾಪ್ತವಾಗುವುದಿಲ್ಲ.

---

(೧) ಲೋಕದಲ್ಲಿ ಈ ಅಧಿಕರಣಕ್ಕೆ 'ನ ವಿಲಕ್ಷಣತ್ವಾಧಿಕರಣ' ಎಂಬ ಹೆಸರು ಪ್ರಸಿದ್ಧವಾಗಿದೆ. ಆದರೆ ಮುದ್ರಿತ ತತ್ವಪ್ರದೀಪದಲ್ಲಿ ಇದನ್ನು 'ಶ್ರುತಿನಿತ್ಯತ್ವಾಧಿಕರಣ' ಎಂದು ಹೆಸರಿಸಲಾಗಿದೆ.

ಆಶಂಕೆಯು ಸಾಕ್ಷಿಯ ತನಕ ಮಾತ್ರ

तत्वप्रदीपः – स्वतश्च प्रामाण्यमङ्गीकर्तव्यम् । परतश्चेत् तस्यापि परत इत्यनवस्था । न च नित्यप्रमाणस्य प्रामाण्यं परतः भवितुमर्हति । कदाचिदप्रामाण्ये सदा तथात्वप्रसङ्गात् । ननु स्वतः प्रामाण्यवादिनामपि वेदे दोषाभावः प्रमाणान्तरात् ज्ञायते । तदप्यदोषमेव दोषाभावे प्रामाणम् । तददोषत्वम् अन्यसाध्यम् इत्यनवस्था तत्रापि तुल्येति । नायं दोषः । साक्ष्यवधित्वात् दोषशङ्कायाः । यत्र हि साक्षी निर्दोषत्वं निश्चिनोति, न तत्र दोषशङ्का स्यात् । न च साक्षिणो दोषः कल्प्यः । तदनुभूतस्य अनन्यथात्वनियमात् । अन्यथा प्रमाणाप्रमाणविवेकाभावप्रसङ्गात् । न च साक्षिनिर्दोषत्वज्ञानं मानान्तरापेक्षम् । स्वसंवेद्यत्वात् तस्य । तस्मात् नास्मत्पक्षे अनवस्था ।

'ಪ್ರಾಮಾಣ್ಯಂ ಸ್ವತಃ' ಎಂದೇ ಅಂಗೀಕಾರ ಮಾಡಬೇಕು. 'ಪ್ರಾಮಾಣ್ಯಂ ಪರತಃ' ಎಂದು ಅಂಗೀಕಾರ ಮಾಡಿದರೆ ಅನವಸ್ಥಾದೋಷ ಬರುತ್ತದೆ. ನಿತ್ಯವಾದ ವೇದರೂಪವಾದ ಪ್ರಮಾಣಕ್ಕೆ ಪ್ರಾಮಾಣ್ಯವು ಮತ್ತೊಂದರಿಂದ ಹುಟ್ಟಲು ಸಾಧ್ಯವಿಲ್ಲವಷ್ಟೇ ? ಯಾವಾಗಲಾದರು ಅಪ್ರಾಮಾಣ್ಯವು ಬಂದರೆ ಆಗ ನಿರಂತರವಾಗಿ ಅದು ಅಪ್ರಮಾಣವೇ ಆಗುತ್ತದೆ. ಆದ್ದರಿಂದ ವೇದದಲ್ಲಿರುವ ಪ್ರಾಮಾಣ್ಯವು ಸಹಜವಾಗಿ ಇದೆ ಎಂದು ಹೇಳುತ್ತೇವೆ.

ಪ್ರಶ್ನೆ - ಸ್ವತಃ ಪ್ರಾಮಾಣ್ಯವಾದಿಗಳೂ ಕೂಡ ವೇದದಲ್ಲಿ ದೋಷವಿಲ್ಲ ಎಂಬುದನ್ನು ಮತ್ತೊಂದು ಪ್ರಮಾಣದಿಂದಲೇ ತಿಳಿಯಬೇಕು. ಆ ಮತ್ತೊಂದು ಪ್ರಮಾಣವು ನಿರ್ದುಷ್ಟವಾಗಿದ್ದರೆ ಮಾತ್ರ ವೇದದ ದೋಷಾಭಾವದಲ್ಲಿ ಪ್ರಮಾಣವಾಗಲು ಸಾಧ್ಯ . ಆದ್ದರಿಂದ ಅದರಲ್ಲಿರುವ ಅದೋಷತ್ವವನ್ನು ಮತ್ತೊಂದು ಪ್ರಮಾಣದಿಂದ ತಿಳಿಯಬೇಕು. ಅದರಲ್ಲೂ ಕೂಡ ಪ್ರಾಮಾಣ್ಯವನ್ನು ಇನ್ನೊಂದರಿಂದ ತಿಳಿಯಬೇಕೆಂಬುದು ಸಮಾನ. ಹೀಗೆ ಅನವಸ್ಥಾದೋಷವು ಸ್ವತಃ ಪ್ರಾಮಾಣ್ಯವಾದಿಗಳಿಗೂ ಕೂಡ ಸಮಾನವಾಗಿದೆಯಲ್ಲವೇ?

ಉತ್ತರ - ಅನವಸ್ಥಾದೋಷವು ಸ್ವತಃ ಪ್ರಾಮಾಣ್ಯವಾದಿಗಳಿಗೆ ಬರುವುದಿಲ್ಲ. ಏಕೆಂದರೆ ಸಾಕ್ಷಿಯು ಗ್ರಹಣ ಮಾಡುವ ತನಕ ಮಾತ್ರ ದೋಷಶಂಕೆಯು ಬರುತ್ತದೆ. ಎಲ್ಲಿ ಸಾಕ್ಷಿಯು

ನಿರ್ದೋಷತ್ವವನ್ನು ನಿಶ್ಚಯ ಮಾಡುತ್ತದೋ, ಅದರ ಮುಂದೆ ದೋಷ ಶಂಕೆ ಬರಲು ಸಾಧ್ಯವೇ ಇಲ್ಲ.

ಪ್ರಶ್ನೆ - ಸಾಕ್ಷಿಯಲ್ಲೂ ಕೂಡ ದೋಷ ಇರಬಹುದಲ್ಲವೇ?

ಉತ್ತರ - ಹೀಗೆ ಕಲ್ಪನೆ ಮಾಡಬಾರದು. ಸಾಕ್ಷಿಯಿಂದ ಅನುಭೂತವಾದದ್ದು ಬೇರೆ ರೀತಿಯಲ್ಲಿ ಇರಲು ಸಾಧ್ಯವೇ ಇಲ್ಲ. ಸಾಕ್ಷಿಯು ಯಾವುದನ್ನು ಗ್ರಹಣ ಮಾಡಿರುತ್ತದೋ, ಅದು ಯಥಾರ್ಥವೇ ಆಗಿರುತ್ತದೆ. ಹೀಗೆ ಅಂಗೀಕಾರ ಮಾಡದೇ ಇದ್ದರೆ 'ಇದು ಪ್ರಮಾಣ' 'ಇದು ಪ್ರಮಾಣವಲ್ಲ' ಎಂಬ ವಿವೇಕವೇ ಸಾಧ್ಯವಾಗುವುದಿಲ್ಲ.

ಪ್ರಶ್ನೆ - ಸಾಕ್ಷಿಯಲ್ಲಿರುವ ನಿರ್ದೋಷತ್ವವನ್ನು ತಿಳಿಯಬೇಕೆಂದರೆ ಮತ್ತೊಂದು ಪ್ರಮಾಣ ಬೇಕಲ್ಲವೇ?

ಉತ್ತರ - ಅವಶ್ಯಕತೆಯಿಲ್ಲ. ತನ್ನಲ್ಲಿರುವ ನಿರ್ದೋಷತ್ವ ಜ್ಞಾನವನ್ನು ತಾನೇ ತಿಳಿಯುತ್ತದೆ. ಆದ್ದರಿಂದ ಸ್ವತಃ ಪ್ರಾಮಾಣ್ಯವಾದಿಗಳಾದ ನಮ್ಮ ಪಕ್ಷದಲ್ಲಿ ಅನವಸ್ಥಾದೋಷಕ್ಕೆ ಅವಕಾಶವಿಲ್ಲ.

ವ್ಯಾಘಾತದ ತನಕ ಮಾತ್ರ ಆಶಂಕೆ ಎಂಬುದಕ್ಕೆ ಉತ್ತರ

तत्वप्रदीपः – नन्वस्मत्पक्षेऽपि प्रामाण्यशङ्कानुत्पत्तौ न मानान्तरापेक्षेति नानवस्थेति चेत्, किं आशङ्कानिवारकम्? यया शङ्कया व्याहतिः स्यात् सा नैवोत्पद्यते, तस्माद् व्याघातो निवारकः, तदवधिरेवाऽशङ्का स्यात्, अतः परतः प्रामाण्येऽपि नानवस्थेति चेत्, एवं तर्हि व्याघातानुभवस्य स्वतः प्रामाण्यमिष्टम् । अतस्तस्य साक्षिणः स्वप्रामाण्य एव सर्वव्यवहारावस्थितिः तद्वत् वेदस्यापि स्वप्रामाण्यं स्थितम् ।

ಪ್ರಶ್ನೆ - ಪರತಃ ಪ್ರಾಮಾಣ್ಯವಾದಿಗಳ ಪಕ್ಷದಲ್ಲೂ ಕೂಡ ಪ್ರಾಮಾಣ್ಯದಲ್ಲಿ ಶಂಕೆಯೇ ಹುಟ್ಟದಿದ್ದರೆ ಮತ್ತೊಂದು ಪ್ರಮಾಣದ ಅಪೇಕ್ಷೆ ಇರುವುದಿಲ್ಲ. ಈ ಸ್ಥಿತಿಯಲ್ಲಿ ಅನವಸ್ಥಾದೋಷವನ್ನು ಹೇಗೆ ಹೇಳುವಿರಿ ?

ಉತ್ತರ - ಪ್ರಾಮಾಣ್ಯಶಂಕೆಗೆ ನಿವಾರಕವಾದದ್ದು ಯಾವುದು.

ಪ್ರಶ್ನೆ - ಯಾವ ಶಂಕೆಯು ಬಂದರೆ ವ್ಯಾಹತಿದೋಷ ಬರುತ್ತದೋ, ಆದರ ಮುಂದೆ ಪುನಃ ಶಂಕೆಯು ಹುಟ್ಟುವುದಿಲ್ಲ. ಆದ್ದರಿಂದ ಆತಂಕ ನಿವಾರಕವಾದದ್ದು ವ್ಯಾಘಾತದಲ್ಲಿ ಹೇಳುತ್ತೇವೆ. ವ್ಯಾಘಾತದ ತನಕ ಮಾತ್ರ ಆಶಂಕೆ ಬರುತ್ತದೆಂಬುದು ನಮ್ಮ ಅಭಿಪ್ರಾಯ. ಹಾಗಾಗಿ ನೀವು ಹೇಗೆ ಸಾಕ್ಷಿಯ ತನಕ ಮಾತ್ರ ಸಂಶಯ, ಅನಂತರ ಶಂಕೆ ಬರುವುದಿಲ್ಲವೆನ್ನುತ್ತೀರೋ, ಅದರಂತೆ ನಾವು ವ್ಯಾಘಾತ ದೋಷದ ತನಕ ಆಶಂಕೆ ಬರುತ್ತದೆ. ಆದರ ಮುಂದೆ ಆಶಂಕೆಯು ಹುಟ್ಟುವುದಿಲ್ಲ ಎಂದು ಹೇಳುತ್ತೇವೆ. ಆದ್ದರಿಂದ ಪರತಃಪ್ರಾಮಾಣ್ಯವಾದಿಗಳಿಗೂ ಕೂಡ ಅನವಸ್ಥಾದೋಷವು ಬರುವುದಿಲ್ಲ.

ಉತ್ತರ - ಹಾಗಾದರೆ ವ್ಯಾಘಾತಾನುಭವವನ್ನು ನೀವು ಸ್ವತಃ ಪ್ರಮಾಣ ಎಂದು ಒಪ್ಪಿದಂತಾಯಿತು. ಆ ವ್ಯಾಘಾತದ ಅನುಭವ ಬಂದಿರುವುದು ಸಾಕ್ಷಿಗೆ ಹೊರತು, ಮತ್ತೊಂದಕ್ಕಲ್ಲ. ಆ ಸಾಕ್ಷಿಯು ಸ್ವಪ್ರಮಾಣವೆಂದು ನೀವೂ ಕೂಡ ಒಪ್ಪಿದಂತೆ ಆಯಿತು. ಆದ್ದರಿಂದ ಸಾಕ್ಷಿಯು ಪ್ರಮಾಣವಾದರೆ ಮಾತ್ರ ಸಕಲ ವ್ಯವಹಾರಗಳು ಸ್ಥಿತವಾಗುತ್ತವೆ. ಅದರಂತೆ ವೇದಕ್ಕೂ ಕೂಡ ಸ್ವತಃ ಪ್ರಾಮಾಣ್ಯವು ಸಿದ್ಧವಾಯಿತು.

ಸ್ವತಃಪ್ರಾಮಾಣ್ಯಾದಿಗಳಲ್ಲಿ ಶ್ರುತಿ ಪ್ರಮಾಣ

ತತ್ವಪ್ರದೀಪಃ – ಸ್ವತಃಪ್ರಾಮಾಣ್ಯಂ ಚ ಶಬ್ದಾತ್ ಪ್ರತೀಯತೇ 'ನ ಚಕ್ಷುಃ' ಇತ್ಯಾದೇಃ । ನಿತ್ಯತ್ವಂ ಚ 'ತಸ್ಮೈ ನೂನಮ್' ಇತ್ಯಾದೇಃ । ಹೇ ವಿರೂಪ! ತಸ್ಮಾ ಅಭಿಗ್ವೇ ಸುಷ್ಟುತಿಂ ಚೋದಸ್ವ । 'ಅಭಿತೋ ದ್ಯೋತತ' ಇತಿ - ಅಭಿಗ್ವಃ । ವೃಷಾ ಶ್ರೇಷ್ಠಃ । 'ಸುಷ್ಠು ಸ್ತುತಿಂ ಪ್ರತಿ ಪ್ರೇರಯ' ಇತಿ ಪ್ರಾರ್ಥನಂ ವಿರೂಪಸ್ಯ ಋಷೇರನ್ತರ್ಯಾಮಿವಿಷಯಂ ಭವತಿ । 'ಋಚಃ ಸಾಮಾನಿ ಜಜ್ಞಿರೇ' ಇತ್ಯಾದಿ ಶಬ್ದಾತ್ ಉತ್ಪತ್ತಿಮತ್ವಮಾಶಙ್ಕ್ಯ, ಆಹ – ಅನಾದಿನಿಧನೇತ್ಯಾದಿ ।। ಅನಾಧಿನಿಧನತ್ವೇನ ನಿತ್ಯಾ, ನತ್ವನಿಧನತ್ವಮಾತ್ರೇಣ ।।

ಇತಿ ಶ್ರುತಿನಿತ್ಯತ್ವಾಧಿಕರಣಮ್ ।।

ಸ್ವತಃಪ್ರಾಮಾಣ್ಯವು ಶ್ರುತಿಯಿಂದಲೇ ಸಿದ್ಧವಾಗುತ್ತದೆ. ಇದನ್ನು 'ನ ಚಕ್ಷುಃ' ಇತ್ಯಾದಿ ಭಾಷ್ಯದಿಂದ ತಿಳಿಸಿದ್ದಾರೆ. ವೇದವು ನಿತ್ಯವಾಗಿದೆ ಎಂಬುದನ್ನು 'ತಸ್ಮೈ ನೂನಮ್' ಇತ್ಯಾದಿ ವೇದವಾಕ್ಯದಿಂದ ತಿಳಿಯಬೇಕು. ವಿರೂಪ ಎಂಬ ಋಷಿಯು ತನ್ನ ಅಂತರ್ಯಾಮಿಯಾದ

ಭಗವಂತನನ್ನು ಕುರಿತು, ಹೀಗೆ ಪ್ರಾರ್ಥನೆ ಮಾಡುತ್ತಾನೆ - ಎಲೈ ವಿರೂಪನೇ ! ಎಲ್ಲೆಡೆ ಪ್ರಕಾಶಮಾನನಾದ ಅತ್ಯಂತ ಶ್ರೇಷ್ಠನಾದ ಭಗವಂತನನ್ನು ಚೆನ್ನಾಗಿ ಸ್ತೋತ್ರ ಮಾಡಲು ಪ್ರೇರಣೆ ಮಾಡು ಎಂದು. (ತನ್ನನ್ನು ಕುರಿತು ತಾನೇ ಹೇಳಿಕೊಂಡಿದ್ದಾನೆ ಎಂದು ಈ ವಾಕ್ಯವನ್ನು ನೋಡಿದಾಗ ತಿಳಿಯುತ್ತದೆ. ಆದರೆ ತತ್ವಪ್ರದೀಪದಲ್ಲಿ ಅಂತರ್ಯಾಮಿಯಾದ ಭಗವಂತನನ್ನು ಕುರಿತು ಮಾಡುವ ಪ್ರಾರ್ಥನೆ ಎಂದು ಕಾಣಿಸುತ್ತದೆ. ತಾನು ವಿರೂಪ ಎಂಬ ಹೆಸರನ್ನು ಪಡೆದಿದ್ದರೂ ಕೂಡ ಅಂತರ್ಯಾಮಿಯಾದ ಭಗವಂತನೇ ನಿಜವಾದ ವಿರೂಪ ಎಂಬುದಾಗಿ ಸಂಬೋಧನೆ ಮಾಡಿ, ಪ್ರಾರ್ಥನೆ ಮಾಡಿದ್ದಾನೆ.)

'ಋಚಃ ಸಾಮಾನಿ ಜಜ್ಞಿರೇ' ಇತ್ಯಾದಿ ವೇದವಾಕ್ಯವನ್ನು ನೋಡಿದಾಗ ವೇದಕ್ಕೆ ಉತ್ಪತ್ತಿ ಇದೆ ಎಂಬ ಆಶಂಕೆ ಬರುತ್ತದೆ. ಇದರ ಪರಿಹಾರಕ್ಕೋಸ್ಕರ 'ಅನಾದಿನಿಧನಾ ನಿತ್ಯಾ' ಎಂಬ ಸ್ಮೃತಿಯನ್ನು ಉಲ್ಲೇಖಿಸುವ ಮೂಲಕ ಉತ್ತರಿಸುತ್ತಿದ್ದಾರೆ. ಆದಿಯೂ ಇಲ್ಲ, ಅಂತ್ಯವೂ ಇಲ್ಲ ಆದ್ದರಿಂದ ಇದು ನಿತ್ಯವಾಗಿದೆ ಎಂಬುದು ಸ್ಮೃತಿಯ ಅಭಿಪ್ರಾಯ. ಆದಿಯಿದೆ ಅಂತ್ಯವಿಲ್ಲ ಎಂಬ ಮಾತ್ರದಿಂದ ನಿತ್ಯವಾಗಿರುವುದಿಲ್ಲ.

॥ ಇಲ್ಲಿಗೆ ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ ತತ್ವಪ್ರದೀಪದಲ್ಲಿ
ಶ್ರುತಿನಿತ್ಯತ್ವಾಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

ಶ್ರೀಮಜ್ಜಯತೀರ್ಥಭಿಕ್ಷುಗಳಿಂದ ವಿರಚಿತವಾದ

ತತ್ವಪ್ರಕಾಶಿಕಾ

ವೇದಪ್ರಾಮಾಣ್ಯವನ್ನು ಸಮರ್ಥನೆ ಮಾಡುವುದಕ್ಕಾಗಿ 'ನ ವಿಲಕ್ಷಣತ್ವಾಧಿಕರಣ'

अत्र विष्णोर्जगत्कारणत्वे प्रमाणत्वेनोक्तवेदादिप्रामाण्यस्य युक्तिविरोधपरिहारादस्ति शास्त्रादिसङ्गतिः ।।

ಈ ಅಧಿಕರಣದಲ್ಲಿ ವಿಷ್ಣುವಿನ ಜಗತ್‌ಕಾರಣತ್ವ ವಿಷಯದಲ್ಲಿ ಯಾವ ವೇದಾದಿಗಳನ್ನು ಪ್ರಮಾಣಗಳನ್ನಾಗಿ ಹಿಂದೆ ಹೇಳಲಾಯಿತೋ, ಆ ವಿಷಯಗಳಲ್ಲಿ ಯುಕ್ತಿವಿರೋಧವನ್ನು ಪರಿಹಾರ ಮಾಡಲಾಗಿದೆ. ಆದ್ದರಿಂದ ಶಾಸ್ತ್ರಸಂಗತಿ, ಅಧ್ಯಾಯಸಂಗತಿ, ಪಾದಸಂಗತಿಗಳು ಇರುತ್ತವೆ.

ವಿವರಣೆ - ವೇದಪ್ರಾಮಾಣ್ಯಕ್ಕೆ ಯುಕ್ತಿವಿರೋಧವು ಪ್ರಾಪ್ತವಾದರೆ ವೇದವು ಪ್ರಾಮಾಣವೇ ಆಗುವುದಿಲ್ಲ. ಆಗ ತನ್ಮೂಲಕವಾಗಿ ಜಗತ್‌ಕಾರಣತ್ವವು ವಿಷ್ಣುವಿನಲ್ಲಿ ಸಿದ್ಧವಾಗುವುದಿಲ್ಲ. ಆದ್ದರಿಂದ ಯುಕ್ತಿವಿರೋಧವನ್ನು ಅವಶ್ಯವಾಗಿ ಪರಿಹಾರ ಮಾಡಲೇಬೇಕು. ಹೀಗೆ ಯುಕ್ತಿವಿರೋಧವನ್ನು ಪರಿಹಾರ ಮಾಡಲು ಹೊರಟಿರುವುದರಿಂದ ಅವಿರೋಧಾಧ್ಯಾಯದಲ್ಲಿ ಹಾಗೂ ಯುಕ್ತಿಪಾದದಲ್ಲಿ ಇದು ಸಂಗತವಾಗುತ್ತದೆ.

ಅಧಿಕರಣದ ವಿಷಯ ಸಂದೇಹಾದಿಗಳು

तत्वप्रकाशिका – श्रुत्यादिप्रामाण्यात् विष्णोर्जगत्कारणत्वं सिध्यतीत्युक्तम्। श्रुत्यादिप्रामाण्यस्य च युक्तिविरोधे न ब्रह्मणो जगत्कारणत्वसिद्धिः । अतोऽसौ परिहर्तव्य एव । श्रुत्याद्येव विषयः प्रमाणं न वेति सन्देहः । उभयविधवाक्योपलब्धिः, सन्देहबीजम् ।

ಶ್ರುತಿ-ಸ್ಮೃತಿಗಳು ಪ್ರಮಾಣವಾಗಿರುವುದರಿಂದ ವಿಷ್ಣುವಿಗೆ ಜಗತ್‌ಕಾರಣತ್ವವು ಸಿದ್ಧವಾಯಿತು. ಈ ಶ್ರುತ್ಯಾದಿಪ್ರಾಮಾಣ್ಯಕ್ಕೆ ಯುಕ್ತಿವಿರೋಧವು ಪ್ರಾಪ್ತವಾದರೆ ಬ್ರಹ್ಮನಿಗೆ ಜಗತ್‌ಕಾರಣತ್ವವು ಸಿದ್ಧವಾಗುವುದಿಲ್ಲ. ಆದ್ದರಿಂದ ಈ ವಿರೋಧವನ್ನು ಪರಿಹಾರ ಮಾಡಲೇಬೇಕು. ಶ್ರುತ್ಯಾದಿಗಳೇ ಅಧಿಕರಣಕ್ಕೆ ವಿಷಯ. ಶ್ರುತ್ಯಾದಿಗಳು ಪ್ರಮಾಣವೋ, ಅಲ್ಲವೋ ಎಂಬುದು ಅಧಿಕರಣದ ಸಂದೇಹ. ಎರಡು ಬಗೆಯ ವಾಕ್ಯಗಳ ಉಪಲಬ್ಧಿಯು ಸಂದೇಹಕ್ಕೆ ಕಾರಣ.

ಶ್ರುತಿಗಳು ಅಪ್ರಮಾಣವೆಂದು ಪೂರ್ವಪಕ್ಷ

तत्वप्रकाशिका – श्रुत्यादिकं न प्रमाणमिति पूर्वः पक्षः । 'कारीर्या यजेत वृष्टिकामः' इत्यादिश्रुतेः कारीर्याद्यनुष्ठानेऽपि वृष्ट्याद्यदृष्टाऽविद्यमानार्थाभिधायकत्वात् ।

ಶ್ರುತ್ಯಾದಿಗಳು ಪ್ರಮಾಣವಲ್ಲವೆಂದು ಪೂರ್ವಪಕ್ಷ. 'ಕಾರಿರ್ಯಾ ಯಜೇತ ವೃಷ್ಟಿಕಾಮಃ' ಮಳೆಯನ್ನು ಬಯಸುವವನು ಕಾರೀರ್ಯಾ ಯಾಗವನ್ನು ಆಚರಿಸಬೇಕು ಎಂಬುದಾಗಿ ಶ್ರುತಿಯು ಹೇಳುತ್ತಿದೆ. ಆದರೆ ಕಾರೀರ್ಯಾ ಯಾಗವನ್ನು ಅನುಷ್ಠಾನ ಮಾಡಿದರೂ ಕೂಡ ಕೆಲವೊಮ್ಮೆ ಮಳೆ ಬರುವುದು ಕಾಣಿಸುತ್ತಿಲ್ಲ. ಹೀಗೆ ಇಲ್ಲದೇ ಇರುವ ಅರ್ಥವನ್ನು ಪ್ರತಿಪಾದನೆ ಮಾಡುವುದರಿಂದ ಶ್ರುತಿಗಳು ಅಪ್ರಮಾಣವಾಗುತ್ತವೆ.

ಪಂಚರಾತ್ರಸ್ಮೃತಿಗಳು ಅಪ್ರಮಾಣವೆಂದು ಪೂರ್ವಪಕ್ಷ

तत्वप्रकाशिका – तथा स्मृतीनामप्यनुपलभ्यमानफलभिधायकत्वेनाविद्यमानार्थत्वात् । अविध्यमानाभिधायकानां च पाशुपतादिस्मृतिवदप्रामाण्यनियमात्।

ಇದೇ ರೀತಿಯಾಗಿ ಸ್ಮೃತಿಗಳೂ ಕೂಡ ಅಪ್ರಮಾಣವಾಗಿವೆ. ಏಕೆಂದರೆ ಆಯಾ ಸ್ಮೃತಿಗಳಲ್ಲಿ ಯಾವ ಕರ್ಮವನ್ನು ಅನುಷ್ಠಾನ ಮಾಡಿದರೆ, ಫಲವು ದೊರೆಯುತ್ತದೆಂದು ಹೇಳುತ್ತಿದೆಯೋ, ಆಯಾ ಕರ್ಮಗಳನ್ನು ಅನುಷ್ಠಾನ ಮಾಡಿದರೂ ಕೂಡ ಫಲಗಳು ದೊರೆಯುತ್ತಿಲ್ಲ. ಹೀಗೆ ಇಲ್ಲದೇ ಇರುವ ಅರ್ಥವನ್ನು ಪ್ರತಿಪಾದನೆ ಮಾಡುವುದರಿಂದ ಸ್ಮೃತಿಗಳೂ ಕೂಡ ಅಪ್ರಮಾಣವಾಗಿವೆ. ಪಾಶುಪತಾದಿಸ್ಮೃತಿಗಳು ಹೀಗೆ ಅವಿದ್ಯಮಾನವಾದ ಅರ್ಥವನ್ನು ಹೇಳುವುದರಿಂದ ಅಪ್ರಮಾಣವಾಗಿವೆಯೋ, ಅದರಂತೆ ಪಂಚರಾತ್ರಾದಿಸ್ಮೃತಿಗಳೂ ಕೂಡ ಅಪ್ರಮಾಣವಾಗುತ್ತವೆ.

ಯುಕ್ತಿಯಿಂದ ಅಪ್ರಾಮಾಣ್ಯ ಸಮರ್ಥನೆ

तत्वप्रकाशिका – अविद्यमानाभिधात्रीणामपि श्रुतिस्मृतीनां प्रामाण्ये, अन्यस्मृतीनामपि तत्प्रसङ्गात् । न हि अविद्यमानाभिधायकत्वसाम्येऽपि

'श्रुत्यादेरेव प्रामाण्यं, नान्यस्य' इति विभागे हेतुरस्ति । एवं च वेदाद्येकदेशस्याप्रामाण्येऽन्यदंशप्रमाणतयामनाश्वासान्न विष्णोर्जगत्कारणत्व-सिद्धिरिति ।

ಇಲ್ಲದೇ ಇರುವ ಅರ್ಥವನ್ನು ಪ್ರತಿಪಾದನೆ ಮಾಡಿದರೂ ಕೂಡ ಶ್ರುತಿ-ಸ್ಮೃತಿಗಳು ಪ್ರಮಾಣವಾಗುವುದಾದರೆ, ಪಾಶುಪತಾದಿಸ್ಮೃತಿಗಳೂ ಕೂಡ ಪ್ರಮಾಣವಾಗಲಿ. ಇಲ್ಲದೇ ಇರುವ ಅರ್ಥವನ್ನು ಪ್ರತಿಪಾದನೆ ಮಾಡುವಿಕೆ ಎಂಬುದು ಎರಡು ಕಡೆ ಸಮಾನವಾಗಿರುವಾಗ ಶ್ರುತಿಗಳು ಹಾಗೂ ಪಂಚರಾತ್ರಸ್ಮೃತಿಗಳು ಮಾತ್ರ ಪ್ರಮಾಣವಾಗುತ್ತವೆ. ಪಾಶುಪತಸ್ಮೃತಿಗಳು ಪ್ರಮಾಣವಾಗುವುದಿಲ್ಲ ಎಂದು ವಿಭಾಗ ಮಾಡಲು ಯಾವುದೇ ಕಾರಣ ಇರುವುದಿಲ್ಲ. ಹೀಗೆ ವೇದದ ಏಕದೇಶಕ್ಕೆ ಅಪ್ರಾಮಾಣ್ಯವು ಪ್ರಾಪ್ತವಾದಾಗ ಉಳಿದ ಏಕದೇಶವು ಪ್ರಮಾಣವಾಗಿವೆ ಎಂಬ ವಿಷಯದಲ್ಲಿ ವಿಶ್ವಾಸ ಬರುವುದಿಲ್ಲ. ಆದ್ದರಿಂದ ವಿಷ್ಣುವಿಗೆ ಜಗತ್‌ಕಾರಣತ್ವವು ಸಿದ್ಧವಾಗುವುದಿಲ್ಲ.

ವೇದ ಹಾಗೂ ತದನುಸಾರಿ ಸ್ಮೃತಿಗಳು ಪ್ರಮಾಣವೆಂದು ಸಿದ್ಧಾಂತ

तत्वप्रकाशिका – सिद्धान्तयत्सूत्रमुपन्यस्य प्रतिज्ञांशं तावद् व्याचष्टे – नेति ।। अस्य श्रुत्यादेस्तथात्वं पाशुपतादिस्मृतिवत्, उक्तानुपलब्धिहेतुनानाप्रामाण्यं कल्प्यमिति भावः । तत्र हेत्वाकाङ्क्षायां सौत्रं हेतुमुपन्यस्य व्याचष्टे – विलक्षणत्वादिति ।।

ಸಿದ್ಧಾಂತ ಸ್ಥಾಪಕವಾದ ಸೂತ್ರವನ್ನು ಪಠಿಸಿ ಪ್ರತಿಜ್ಞಾಭಾಗವನ್ನು 'ನ' ಇತ್ಯಾದಿಯಾಗಿ ವ್ಯಾಖ್ಯಾನ ಮಾಡುತ್ತಿದ್ದಾರೆ. 'ನ ಅಸ್ಯ ತಥಾತ್ವಮ್' ಎಂಬುದು ಸೂತ್ರದಲ್ಲಿರುವ ಪ್ರತಿಜ್ಞಾವಾಕ್ಯವಾಗಿದೆ. ಇದಕ್ಕೆ 'ವಿಲಕ್ಷಣತ್ವಾತ್' ಎಂಬುದು ಹೇತುವಾಕ್ಯವಾಗಿದೆ. 'ಶಬ್ದಾತ್' ಎಂಬುದು ಹೇತು ಸಮರ್ಥಕವಾದ ವಾಕ್ಯವಾಗಿದೆ. 'ಅಸ್ಯ' ಎಂಬ ಪದಕ್ಕೆ ಶ್ರುತ್ಯಾದಿಗಳಿಗೆ ಎಂದರ್ಥ. 'ನ ತಥಾತ್ವಮ್' ಎಂದರೆ ಪಾಶುಪತಾದಿಸ್ಮೃತಿಗಳಂತೆ 'ಅನುಪಲಬ್ಧಿ' ಎಂಬ ಹೇತುವಿನಿಂದ ಅಪ್ರಾಮಾಣ್ಯವನ್ನು ಕಲ್ಪನೆ ಮಾಡಬಾರದು ಎಂದಭಿಪ್ರಾಯ. ಈ ವಿಷಯದಲ್ಲಿ

ಹೇತುವಿನ ಆಕಾಂಕ್ಷೆಯು ಪ್ರಾಪ್ತವಾದರೆ, ಸೂತ್ರದಲ್ಲಿರುವ ಹೇತುವನ್ನು ಉಪನ್ಯಾಸ ಮಾಡಿ, ವ್ಯಾಖ್ಯಾನ ಮಾಡಲು 'ವಿಲಕ್ಷಣತ್ವಾತ್' ಇತ್ಯಾದಿಯಾಗಿ ಹೇಳುತ್ತಿದ್ದಾರೆ.

ಪಂಚರಾತ್ರಸ್ಮೃತಿಯಂತೆ ಪಾಶುಪತಸ್ಮೃತಿಗೆ ಪ್ರಾಮಾಣ್ಯವಿಲ್ಲ

तत्वप्रकाशिका – श्रुतेः पाशुपतादिस्मृतितो नित्यत्वाख्यवैलक्षण्यात्, स्मृतेः तदनुसारित्वाख्यवैलक्षण्यान्न पाशुपतादिस्मृतिवत्, श्रुत्यादेरप्रामाण्यमित्यर्थः। ननु नित्यत्वादिसद्भावेऽपि कुतोऽप्रामाण्याभाव इत्यत आह – नहीति ।।

ಪಾಶುಪತಾದಿಸ್ಮೃತಿಗಳಿಗಿಂತ ಶ್ರುತಿಯಲ್ಲಿ ನಿತ್ಯತ್ವವೆಂಬ ವೈಲಕ್ಷಣ್ಯವಿದೆ. ಪಂಚರಾತ್ರಾದಿ-ಸ್ಮೃತಿಗಳಲ್ಲಿ ವೇದಾನುಸಾರಿತ್ವ ಎಂಬ ವೈಲಕ್ಷಣ್ಯವಿದೆ. ಆದ್ದರಿಂದ ಶ್ರುತಿಗೆ ಹಾಗೂ ಪಂಚರಾತ್ರಸ್ಮೃತಿಗೆ ಪಾಶುಪತಸ್ಮೃತಿಯಂತೆ ಅಪ್ರಾಮಾಣ್ಯವನ್ನು ಹೇಳಬಾರದು ಎಂದಭಿಪ್ರಾಯ. ವೇದದಲ್ಲಿ ನಿತ್ಯತ್ವಾದಿಗಳಿದ್ದರೂ ಕೂಡ ಏಕೆ ಅಪ್ರಾಮಾಣ್ಯವನ್ನು ಹೇಳಬಾರದು ಎಂಬ ಪ್ರಶ್ನೆಗೆ 'ನಹಿ' ಇತ್ಯಾದಿ ಭಾಷ್ಯವಾಕ್ಯವು ಹೊರಟಿದೆ.

ವೇದದ ನಿರ್ದುಷ್ಟತ್ವಕ್ಕೆ ಕಾರಣ

तत्वप्रकाशिका – वाक्याप्रामाण्यं तावद् वक्तृदोषनिबन्धनम् । न हि नित्ये वेदे ते दोषाः कल्पयितुं शक्यन्ते । यतो नित्यत्वाददोषत्वं, ततोऽप्रामाण्याभावः श्रुतेः सिध्यति। प्रमाणानुकूलत्वात्, स्मृतेरपि तत्सिद्धिरिति भावः ।।

ವಕ್ತೃವಿನಲ್ಲಿ ದೋಷವಿದ್ದರೆ ಮಾತ್ರ ಅವನಿಂದ ಉಚ್ಚರಿಸಲ್ಪಟ್ಟ ವಾಕ್ಯವು ಅಪ್ರಮಾಣವಾಗುತ್ತದೆ. ವೇದವು ನಿತ್ಯವಾಗಿರುವುದರಿಂದ ಯಾವುದೇ ವ್ಯಕ್ತಿಯಿಂದ ಅದು ಉಚ್ಚರಿತವಾಗಿಲ್ಲ. ಆದ್ದರಿಂದ ಅದರಲ್ಲಿ ದೋಷವನ್ನು ಕಲ್ಪನೆ ಮಾಡಲು ಸಾಧ್ಯವಿಲ್ಲ. ಯಾವ ಕಾರಣದಿಂದ ವೇದವು ನಿತ್ಯವಾಗಿರುವುದರಿಂದ ದೋಷರಹಿತವಾಗಿದೆಯೋ, ಆದ್ದರಿಂದಲೇ ಅದು ಅಪ್ರಮಾಣವೂ ಕೂಡ ಆಗುವುದಿಲ್ಲ ಎಂದು ಸಿದ್ಧವಾಗುತ್ತದೆ. ಇಂಥ ವೇದಗಳಿಗೆ ಅನುಸಾರಿಯಾಗಿರುವುದರಿಂದ ಪಂಚರಾತ್ರಾದಿಸ್ಮೃತಿಗಳೂ ಕೂಡ ಅಪ್ರಮಾಣವಾಗುವುದಿಲ್ಲ ಎಂದಭಿಪ್ರಾಯ.

ಫಲವ್ಯಭಿಚಾರಕ್ಕೆ ಕಾರಣ

तत्वप्रकाशिका – 'फलव्यभिचारेऽपि न पाशुपतादिस्मृतिवद्वेदादेरप्रामाण्यम् इत्यत्रोक्तवैलक्षण्यास्त्र्यं हेतुं प्रकारान्तरेण व्याचष्टे – स्वतश्चेति ।।

ಫಲವ್ಯಭಿಚಾರವಿದ್ದರೂ ಕೂಡ ಪಾಶುಪತಾದಿಸ್ಮೃತಿಗಳಂತೆ ವೇದಾದಿಗಳಿಗೆ ಅಪ್ರಾಮಾಣ್ಯವನ್ನು ಹೇಳಬಾರದು. ಈ ವಿಷಯದಲ್ಲಿ ಪಾಶುಪತಾದಿಸ್ಮೃತಿಗಳಿಗಿಂತ ವೇದದಲ್ಲಿರುವ ವೈಲಕ್ಷಣ್ಯವನ್ನು ಮತ್ತೊಂದು ಪ್ರಕಾರದಿಂದ 'ಸ್ವತಶ್ಚ' ಇತ್ಯಾದಿಯಾಗಿ ವ್ಯಾಖ್ಯಾನ ಮಾಡುತ್ತಿದ್ದಾರೆ.

ವೇದಪ್ರಾಮಾಣ್ಯವು ಸಾಕ್ಷಿಸಿದ್ಧ

तत्वप्रकाशिका – भवेदुक्तानुपलब्ध्या वेदाद्यप्रामाण्यकल्पनं, यदि पाशुपतादिस्मतिवत् फलोपलब्ध्यादिसंवादाधीनज्ञानं तत्प्रामाण्यस्य स्यात् । नैतदस्ति। वेदादिप्रामाण्यस्य संवादनिरपेक्षतज्ज्ञानादेव सिद्ध्यङ्गीकारात् । न हि निर्दोषतदनुसारितत्तत्स्वरूपग्रहे पुनः प्रामाण्योपलब्ध्यै संवादसापेक्षताऽनुभूयते।

ಒಂದುವೇಳೆ ಹಿಂದೆ ಹೇಳಿದಂತೆ ಫಲದ ಅನುಪಲಬ್ಧಿಯಿಂದ ವೇದ ಹಾಗು ಪಂಚರಾತ್ರಗಳಿಗೆ ಅಪ್ರಾಮಾಣ್ಯವನ್ನು ಕಲ್ಪನೆ ಮಾಡಿದ್ದರೆ ನೀವು ಹೇಳಿದಂತೆ ವೇದವು ಅಪ್ರಮಾಣವಾಗುತ್ತಿತ್ತು. ಒಂದುವೇಳೆ ಪಾಶುಪತಾದಿ ಸ್ಮೃತಿಗಳಂತೆ ಪ್ರಾಮಾಣ್ಯವನ್ನು ಫಲೋಪಲಬ್ಧಿ ಮೊದಲಾದ ಸಂವಾದ ಪ್ರಮಾಣದ ಅಧೀನವಾಗಿ ತಿಳಿಯುವುದಾಗಿದ್ದಲ್ಲಿ; ಆದರೆ ವೇದಾದಿಗಳ ವಿಷಯದಲ್ಲಿ ಹೀಗಿಲ್ಲ. ವೇದಾದಿಗಳ ಪ್ರಾಮಾಣ್ಯವು ಸಂವಾದದ ಸಾಪೇಕ್ಷವಲ್ಲ. ಯಾವುದರಿಂದ ಜ್ಞಾನವು ಬರುತ್ತದೋ ಅದರಿಂದಲೇ ಅದರ ಪ್ರಾಮಾಣ್ಯವು ಕೂಡ ಸಾಕ್ಷಿಯಿಂದ ಸಿದ್ಧವಾಗುತ್ತದೆ. ಹೀಗಿರುವಾಗ ಫಲಸಂವಾದ ಇಲ್ಲದ ಕಾರಣ ಅಪ್ರಮಾಣವೆಂದು ಹೇಳಬಾರದು.

ಪಾಶುಪತಸ್ಮೃತಿಯಲ್ಲಿ ನಿರ್ದುಷ್ಟತ್ವವಿಲ್ಲ

तत्वप्रकाशिका – न च पाशुपतादिस्मृतीनामपि तथात्वं वाच्यम् । निर्दोषत्वाद्यनिश्चयादिति भावः ।

ಪಾಶುಪತಾದಿಸ್ಮೃತಿಗಳಲ್ಲೂ ಕೂಡ ಪ್ರಾಮಾಣ್ಯಸ್ವತಸ್ತ್ವವನ್ನು ಒಪ್ಪಬಹುದಲ್ಲವೆ ? ಎಂದು ಆಕ್ಷೇಪ ಮಾಡಬಾರದು. ಏಕೆಂದರೆ ವೇದದಲ್ಲಿ ನಿರ್ದೋಷತ್ವವು ಸಿದ್ಧವಾದುತೆ ಪಾಶುಪತಾದಿಸ್ಮೃತಿಗಳಲ್ಲಿ ನಿರ್ದೋಷತ್ವವು ಸಿದ್ಧವಾಗಿರುವುದಿಲ್ಲ.

ಪ್ರಾಮಾಣ್ಯಕ್ಕೆ ಸಂವಾದದ ಅಪೇಕ್ಷೆಯಿಲ್ಲ

तत्वप्रकाशिका – प्रामाण्यं संवादाधीनज्ञानमेव किं न स्यादित्यत आह –अन्यथेति ।।

ಸಕಲ ಪ್ರಮಾಣಗಳ ಪ್ರಾಮಾಣ್ಯವು ಸಂವಾದದಿಂದಲೇ ಗೃಹೀತವಾಗುತ್ತದೆಂದು ಏಕೆ ಒಪ್ಪಬಾರದು? ಎಂಬ ಆಕ್ಷೇಪಕ್ಕೆ 'ಅನ್ಯಥಾ' ಎಂಬ ಮಾತಿನಿಂದ ಉತ್ತರಿಸಿದ್ದಾರೆ.

ಪ್ರಾಮಾಣ್ಯವು ಸಹಜಸಿದ್ಧ

तत्वप्रकाशिका – यदि प्रामाण्यं संवादादेव ज्ञायते तर्हि संवादकप्रामाण्यमपि संवादान्तरेण ज्ञायते स्वत एव वा ।

ಒಂದುವೇಳೆ ಪ್ರಾಮಾಣ್ಯವು ಸಂವಾದದಿಂದಲೇ ಸಿದ್ಧವಾಗುತ್ತದೆ ಎಂದು ಹೇಳಿದರೆ ಆ ಸಂವಾದಕ ಪ್ರಮಾಣದಲ್ಲಿಯೂ ಪ್ರಾಮಾಣ್ಯವು ಗೃಹಿತವಾಗಬೇಕು. ಅದರಲ್ಲೂ ಪ್ರಾಮಾಣ್ಯವು ಮತ್ತೊಂದು ಸಂವಾದದಿಂದಲೇ ತಿಳಿಯುತ್ತದೆಂದು ಹೇಳುತ್ತಿರೋ ಅಥವಾ ಸ್ವತಃ ತಿಳಿಯುತ್ತದೆಂದು ಹೇಳುತ್ತಿರೋ?

ಇಲ್ಲದಿದ್ದಲ್ಲಿ ಅನವಸ್ಥಾದೋಷ

तत्वप्रकाशिका – आद्ये तदप्येवमित्यनवस्था स्यात् । द्वितीये परम्पराकल्पनं व्यर्थं स्यात् । आद्यप्रामाण्यस्यैव स्वतस्त्वाभ्युपगमोपपत्तेरिति भावः ।।

ಮೊದಲನೆಯ ಪಕ್ಷದಲ್ಲಿ ಸಂವಾದಕಪ್ರಮಾಣದ ಪ್ರಾಮಾಣ್ಯವು ಮತ್ತೊಂದು ಸಂವಾದ ಪ್ರಮಾಣದಿಂದಲೇ ತಿಳಿಯಬೇಕಾದ್ದರಿಂದ ಅನವಸ್ಥಾದೋಷವು ಪ್ರಾಪ್ತವಾಗುತ್ತದೆ. ಎರಡನೆಯ ಪಕ್ಷದಲ್ಲಿ ಸಂವಾದ ಪರಂಪರೆಯನ್ನು ಒಪ್ಪುವ ಅವಶ್ಯಕತೆಯೇ ಇರುವುದಿಲ್ಲ. ಮೊದಲ ಪ್ರಮಾಣದ ಪ್ರಾಮಾಣ್ಯವನ್ನು ಸ್ವತಃ ಎಂದೇ ಅಂಗೀಕರಿಸಬಹುದು.

ಪ್ರವೃತ್ತಿಗಾಗಿ ಪ್ರಾಮಾಣ್ಯದ ಜಿಜ್ಞಾಸೆ

तत्वप्रकाशिका – कदाचित् प्रामाण्यजिज्ञासायामेव संवादापेक्षणान्नानवस्थेति चेन्नैवम् । प्रामाण्याध्यवसायं विना प्रवृत्त्यनुपपत्तत्या तज्जिज्ञासाप्रौव्यात् ।

ಯಾವ ಸಂದರ್ಭದಲ್ಲಿ ಪ್ರಾಮಾಣ್ಯದ ಜಿಜ್ಞಾಸೆಯು ಉಂಟಾಗುತ್ತದೋ ಆವಾಗ ಮಾತ್ರ ಮತ್ತೊಂದು ಸಂವಾದಪ್ರಮಾಣದ ಅಪೇಕ್ಷೆ ಬೇಕಾಗುತ್ತದೆ. ಎಲ್ಲಿ ಜಿಜ್ಞಾಸೆ ಹುಟ್ಟುವುದಿಲ್ಲವೋ ಅಲ್ಲಿ ಪ್ರಾಮಾಣ್ಯಗ್ರಹಣಕ್ಕೆ ಮತ್ತೊಂದು ಸಂವಾದದ ಅಪೇಕ್ಷೆಯೇ ಇರುವುದಿಲ್ಲ. ಹೀಗಿರುವಾಗ ಅನವಸ್ಥಾ ದೋಷವನ್ನು ಹೇಗೆ ಹೇಳುವಿರಿ.

ಹೀಗೆ ಆಕ್ಷೇಪ ಮಾಡಬಾರದು ಏಕೆಂದರೆ ಪ್ರಾಮಾಣ್ಯವು ನಿಶ್ಚಯವಾಗದಿದ್ದರೆ ಪ್ರವೃತ್ತಿಯೇ ಉಂಟಾಗುವುದಿಲ್ಲ. ಪ್ರವೃತ್ತಿಗೋಸ್ಕರ ಪ್ರಾಮಾಣ್ಯದ ಜಿಜ್ಞಾಸೆಯನ್ನು ಮಾಡಲೇಬೇಕು.

ನಿಃಶಂಕಾ ಪ್ರವೃತ್ತಿಗೆ ಪ್ರಾಮಾಣ್ಯ ನಿಶ್ಚಯ ಅನಿವಾರ್ಯ

तत्वप्रकाशिका – फलसन्देहेऽपि कृष्यादौ प्रवृत्तिर्दृश्यत इति चेत् सत्यम् । सापि न निःशङ्का । यावत्तंकमेव संवादापेक्षणान्नानवस्थेति चेत् ।

ಫಲದಲ್ಲಿ ಸಂದೇಹವಿದ್ದರೂ ಪ್ರವೃತ್ತಿಯು ಉಂಟಾಗುತ್ತದೆ. ಕೃಷಿ ಮಾಡುವಾಗ ಸಂಶಯದಿಂದಲೇ ಮೊದಲು ಪ್ರವೃತ್ತಿ ಮಾಡುವುದು ಕಂಡಿದೆ. ಆದ್ದರಿಂದ ಪ್ರವೃತ್ತಿಯಾದಲು ಪ್ರಾಮಾಣ್ಯನಿಶ್ಚಯದ ಅವಶ್ಯಕತೆ ಇರುವುದಿಲ್ಲವಲ್ಲವೆ ?

ಹೀಗೆ ಆಕ್ಷೇಪ ಮಾಡಬಾರದು. ಕೃಷಿ ಮೊದಲಾದ ಲೌಕಿಕವ್ಯಾಪಾರಗಳಲ್ಲಿ ಸಂಶಯದಿಂದ ಪ್ರವೃತ್ತಿ ಮಾಡುವುದು ಸತ್ಯ. ಆದರೆ ಅದು ನಿಃಶಂಕಾಪ್ರವೃತ್ತಿಯೆಂದು ಕರೆಸಿಕೊಳ್ಳುವುದಿಲ್ಲ. ನಿಶ್ಶಂಕಾಪ್ರವೃತ್ತಿಗಾಗಿ ಪ್ರಾಮಾಣ್ಯದ ನಿಶ್ಚಯ ಆಗಲೇಬೇಕು. ಹಾಗಾದರೆ ಎಲ್ಲಿಯ ತನಕ ಶಂಕೆಯು ಇರುತ್ತದೋ ಅಲ್ಲಿಯ ತನಕ ಸಂವಾದದ ಅಪೇಕ್ಷೆ ಇರುತ್ತದೆ. ಶಂಕೆಯು ಪರಿಹಾರವಾದ ಕೂಡಲೇ ಸಂವಾದದ ಅಪೇಕ್ಷೆ ಇರುವುದಿಲ್ಲವಾದ್ದರಿಂದ ಅನವಸ್ಥಾದೋಷ ಹೇಗೆ ಬರುತ್ತದೆ ?

ಶಂಕೆಯು ಎಲ್ಲಿ ಬರುತ್ತದೆ ?

तत्वप्रकाशिका – तत्र वक्तव्यम् । किं शङ्का सर्वत्रानुवर्तते कचिन्नोत्पद्यत एव वा ?

ಇಲ್ಲಿ ಪ್ರಶ್ನಿಸುತ್ತೇವೆ - ಈ ಶಂಕೆಯು ಎಲ್ಲೆಡೆಯೂ ಸಮಾನವಾಗಿರುತ್ತದೋ, ಅಥವಾ ಕೆಲವೆಡೆ ಹುಟ್ಟುವುದೇ ಇಲ್ಲವೋ ?

ಅನವಸ್ಥಾದೋಷ

तत्वप्रकाशिका – आद्ये कथमनवस्थाऽभावः । द्वितीयो निरस्तप्रायः ।

ಮೊದಲ ಪಕ್ಷವನ್ನು ಒಪ್ಪಿದರೆ ಎಲ್ಲೆಡೆಯು ಶಂಕೆಯ ಪರಿಹಾರಕ್ಕಾಗಿ ಸಂವಾದವನ್ನು ಅಪೇಕ್ಷೆ ಪಡಲೇಬೇಕಾದ್ದರಿಂದ ಅನವಸ್ಥಾ ತಪ್ಪಿದ್ದಲ್ಲ. ಸಂಶಯ ಹುಟ್ಟುವುದಿಲ್ಲ ಎಂಬ ಎರಡನೆಯ ಪಕ್ಷವನ್ನು ಈಗಾಗಲೇ ನಿರಾಕರಿಸಿದ್ದಾಗಿದೆ.

ಪ್ರಾಮಾಣ್ಯನಿಶ್ಚಯಕ್ಕೆ ಸಂವಾದವು ಬೇಕೆಂದರೆ ವಿಕಲ್ಪದಿಂದ ನಿರಾಕರಣೆ

तत्वप्रकाशिका – अपि च संवादकमप्रामाण्यशङ्कां निवर्तयति प्रामाण्यं ज्ञापयति वा ।

ಪ್ರಾಮಾಣ್ಯವನ್ನು ನಿಶ್ಚಯಿಸಲು ಮತ್ತೊಂದು ಸಂವಾದಪ್ರಮಾಣವು ಬೇಕೇಬೇಕು ಎಂದು ಹೇಳುವುದಾದರೆ ಯಾವ ಕಾರಣಕ್ಕಾಗಿ ಬೇಕೆಂಬುದನ್ನು ಸ್ಪಷ್ಟಪಡಿಸಬೇಕು. ಅಪ್ರಾಮಾಣ್ಯಶಂಕೆಯನ್ನು ಪರಿಹರಿಸಲೋ ? ಅಥವಾ ಇರುವ ಪ್ರಾಮಾಣ್ಯವನ್ನು ತಿಳಿಸಲೋ ?

ಸಂವಾದಾಪೇಕ್ಷೆಯ ನಿರಾಕರಣೆ

तत्वप्रकाशिका – आद्ये प्रामाण्यस्य स्वतस्त्वप्राप्तिः । द्वितीये शङ्काभावेऽपि संवादापेक्षा स्यात् ।

ಮೊದಲನೆಯ ಪಕ್ಷದಲ್ಲಿ ಸಂವಾದಕಪ್ರಮಾಣವು ಅಪ್ರಾಮಾಣ್ಯಶಂಕೆಯನ್ನಷ್ಟೇ ಪರಿಹರಿಸುತ್ತದೆಂದು ಹೇಳುತ್ತಿರುವುದರಿಂದ ಪ್ರಾಮಾಣ್ಯಸ್ವತಸ್ತ್ವವನ್ನೇ ಒಪ್ಪಿದಂತಾಯಿತು.

ಎರಡನೆಯ ಪಕ್ಷದಲ್ಲಿ ಇರುವ ಪ್ರಾಮಾಣ್ಯವನ್ನು ತಿಳಿಸಲು ಮತ್ತೊಂದು ಸಂವಾದ ಪ್ರಮಾಣವು ಬೇಕೆಂದು ಹೇಳಿದಂತಾಗುತ್ತದೆ. ಆವಾಗ ಯಾವ ಸ್ಥಳದಲ್ಲಿ ಸಂಶಯವೇ ಇರುವುದಿಲ್ಲವೋ ಅಂಥ ಸ್ಥಳದಲ್ಲಿಯೂ ಸಂವಾದವು ಬೇಕು ಎಂದು ಹೇಳಿದಂತಾಗುತ್ತದೆ.

ಸಂಪಾದಕವು ಉಭಯತ್ರ ವ್ಯಾಪಾರವುಳ್ಳದ್ದಾಗಿದೆ ಎಂದು ಆಕ್ಷೇಪ

तत्वप्रकाशिका – संवादकमुभयत्रापि प्रवर्तत इति चेन्न ।

ಅಪ್ರಾಮಾಣ್ಯಶಂಕೆಯ ನಿವೃತ್ತಿಗಾಗಿ ಹಾಗೂ ಇರುವ ಪ್ರಾಮಾಣ್ಯದ ಗ್ರಹಣಕ್ಕಾಗಿ ಎರಡೂ ಪಕ್ಷಗಳಲ್ಲಿಯೂ ಮತ್ತೊಂದು ಸಂವಾದಪ್ರಮಾಣವು ಬೇಕೆಂದು ಹೇಳಬೇಕು. ಹೀಗೆ ಎರಡೂ ಪಕ್ಷವನ್ನು ಒಪ್ಪುವುದು ಸರಿಯಲ್ಲ.

ಬಾಧಕದಂತೆ ಏಕೆ ಹೇಳಬಾರದು ?

तत्वप्रकाशिका – कल्पकाभावात् । बाधकवद्भयत्र व्यापारः किं न स्यादिति चेन्न ।

ಹೀಗೆ ಕಲ್ಪಿಸಲು ಯಾವುದೇ ಪ್ರಮಾಣ ಇರುವುದಿಲ್ಲ.

ವಿಸಂವಾದಾದಿಬಾಧಕಕ್ಕೆ ಪ್ರಾಮಾಣ್ಯಶಂಕೆಯ ನಿರಾಸೆಯಲ್ಲಿ ಮತ್ತು ಅಪ್ರಾಮಾಣ್ಯಜ್ಞಾನದಲ್ಲಿ ವ್ಯಾಪಾರ ಇರುವುದು ಅನ್ವಯವ್ಯತಿರೇಕದಿಂದ ಸಿದ್ಧವಾಗಿದೆ. ಅದರಂತೆ ಸಂವಾದಪ್ರಮಾಣವೂ ಕೂಡ ಅಪ್ರಾಮಾಣ್ಯಶಂಕೆಯ ನಿವೃತ್ತಿ ಹಾಗೂ ಪ್ರಾಮಾಣ್ಯದ ನಿಶ್ಚಯ ಎರಡರಲ್ಲೂ ವ್ಯಾಪಾರವನ್ನು ಹೊಂದಿದೆ. ಏಕೆಂದರೆ 'तत्सत्वे तत्सत्वम् तदभावे तदभावः' ಎಂಬ ಅನ್ವಯವ್ಯತಿರೇಕವು ಇರುತ್ತದೆ ಹೀಗೆ ಹೇಳಬಹುದಲ್ಲವೆ ?

ವ್ಯತಿರೇಕ ವ್ಯಭಿಚಾರ

तत्वप्रकाशिका – अप्रामाण्यशङ्काशून्यस्य प्रामाण्यज्ञाने संवादनिरपेक्षत्वात्।

ಈ ಶಂಕೆ ತಪ್ಪು. ಯಾವ ಸ್ಥಳದಲ್ಲಿ ಅಪ್ರಾಮಾಣ್ಯದ ಶಂಕೆಯೇ ಹುಟ್ಟುವುದಿಲ್ಲವೋ ಅಂಥ ಸ್ಥಳದಲ್ಲಿ ಪ್ರಾಮಾಣ್ಯದ ನಿಶ್ಚಯಕ್ಕಾಗಿ ಮತ್ತೊಂದು ಸಂವಾದವು ಬೇಕಾಗಿರುವುದಿಲ್ಲ. ಉದಾಹರಣೆ

- ಸುಖಾದಿಜ್ಞಾನದಲ್ಲಿ ಅಪ್ರಾಮಾಣ್ಯಶಂಕೆಯು ಸ್ವಾಭಾವಿಕವಾಗಿಯೇ ಇಲ್ಲದಿರುವುದರಿಂದ ಪ್ರಾಮಾಣ್ಯದ ನಿಶ್ಚಯವು ಸ್ವತಃ ಬರುತ್ತದೆ. ಅಪ್ರಾಮಾಣ್ಯಶಂಕೆಯ ನಿವೃತ್ತಿಗೆ ಸಂವಾದವು ಕಾರಣವೇ ಆಗಿರುವುದಿಲ್ಲ. ಆದ್ದರಿಂದ ವ್ಯತಿರೇಕವ್ಯಭಿಚಾರವು ಬರುತ್ತದೆ.

ಉಭಯತ್ರ ವ್ಯಾಪಾರದ ಆಶಂಕೆಗೆ ಉತ್ತರ

तत्वप्रकाशिका – बाधकेन विना निवृत्ताप्रामाण्यशङ्कस्याप्यप्रामाण्य-बुध्यनुदयानुभवात् ।

ಯಾವುದೇ ಸಂವಾದಪ್ರಮಾಣವಿಲ್ಲದೆ ಸುಖಾದಿಗಳ ಜ್ಞಾನದಲ್ಲಿ ಪ್ರಾಮಾಣ್ಯವು ನಿಶ್ಚಯವಾಗುವುದು ಕಂಡಿದೆ. ಆದ್ದರಿಂದ ವ್ಯತಿರೇಕವ್ಯಭಿಚಾರ ಹೇಗೆ ಬರುತ್ತದೋ, ಅದರಂತೆ ಬಾಧಕವಿಲ್ಲದೆ ಅಪ್ರಾಮಾಣ್ಯಜ್ಞಾನವೂ ಕೂಡ ಬರುವುದಾದರೆ ವ್ಯತಿರೇಕವ್ಯಭಿಚಾರ ಬರುತ್ತದೆ. ಎಲ್ಲಿ ಬಾಧಕಪ್ರಮಾಣ ಇರುವುದಿಲ್ಲವೋ ಅಲ್ಲಿ ಅಪ್ರಾಮಾಣ್ಯನಿಶ್ಚಯ ಬರುವುದಿಲ್ಲ, ಪ್ರಾಮಾಣ್ಯನಿಶ್ಚಯವೇ ಬರುತ್ತದೆ. ಇದು ಎಲ್ಲರ ಅನುಭವದಿಂದ ಸಿದ್ಧವಾದ ವಿಚಾರ. ಆದ್ದರಿಂದ ಬಾಧಕವು ಹೇಗೆ ಪ್ರಾಮಾಣ್ಯಸಂದೇಹದ ನಿರಾಸ ಮತ್ತು ಅಪ್ರಾಮಾಣ್ಯಜ್ಞಾನಗಳಲ್ಲಿ ವ್ಯಾಪಾರ ಹೊಂದಿದೆಯೋ ಅದರಂತೆ ಸಂವಾದಕ್ಕೂ ಕೂಡ ಉಭಯತ್ರ ವ್ಯಾಪಾರವನ್ನು ಹೇಳುತ್ತೇವೆ ಎಂಬ ಆಶಂಕೆಯು ಅತ್ಯಂತ ಅಸಾಧುವೆಂದು ಸಿದ್ಧವಾಯಿತು.

ಪರತಃ ಪ್ರಾಮಾಣ್ಯಕ್ಕೆ ಅನುಮಾನದ ಆಧಾರ

तत्वप्रकाशिका – यदपि प्रामाण्यं परतो ज्ञायते अनभ्यासदशायां सांशयिकत्वात् अप्रामाण्यवदिति ।

ನೈಯಾಯಿಕರು ಪರತಃಪ್ರಮಾಣ್ಯವನ್ನು ಅನುಮಾನದಿಂದ ಹೀಗೆ ಸಾಧಿಸುತ್ತಾರೆ -

'ಪ್ರಾಮಾಣ್ಯಂ ಪರತಃ ಜ್ಞಾಯತೇ ಅನಭ್ಯಾಸದಶಾಯಾಮ್ ಸಾಂಶಯಿಕತ್ವಾತ್ ಅಪ್ರಾಮಾಣ್ಯವತ್' ಅಪ್ರಾಮಾಣ್ಯದಲ್ಲಿ ಸಾಂಶಯಿಕತ್ವ(ಸಂಶಯವಿಶಯತ್ವ) ಎಂಬ ಹೇತುವಿದೆ. ಮತ್ತು ಬಾಧಕಪ್ರಮಾಣವೆಂಬ ಮತ್ತೊಂದರಿಂದ ತಿಳಿಯಲ್ಪಟ್ಟಿರುವುದರಿಂದ ಸಾಧ್ಯವಿದೆ. ಇದೇ ರೀತಿಯಾಗಿ ಪ್ರಾಮಾಣ್ಯ ಎಂಬ ಪಕ್ಷದಲ್ಲಿ 'ಅನಭ್ಯಾಸದಶಾಯಾಂ ಸಾಂಶಯಿಕತ್ವ' ಎಂಬ

ಹೇತುವಿದೆ. ಯಾವ ವಿಷಯದಲ್ಲಿ ಹೆಚ್ಚಿನ ಅಭ್ಯಾಸವಿರುವುದಿಲ್ಲವೋ ಆ ವಿಷಯದ ಬಗ್ಗೆ ಜ್ಞಾನವು ಪ್ರಾಪ್ತವಾದಾಗ ಅದರ ಪ್ರಾಮಾಣ್ಯದಲ್ಲಿ ನಮಗೆ ಸಂದೇಹ ಬರುತ್ತದೆ. ಆದ್ದರಿಂದ ಸಂವಾದದಿಂದಲೇ ಪ್ರಾಮಾಣ್ಯವು ತಿಳಿಯಲ್ಪಡಬೇಕೆಂದು ಸಾಧಿಸುತ್ತೇವೆ. ಹೀಗಿರುವಾಗ ಪ್ರಾಮಾಣ್ಯಸ್ವತಸ್ತ್ವವನ್ನು ಒಪ್ಪುವ ಸಿದ್ಧಾಂತ ಸರಿಯಲ್ಲ. ಇಷ್ಟು ನೈಯಾಯಿಕರ ಆಕ್ಷೇಪ

ನೈಯಾಯಿಕರ ನಿರಾಕರಣೆ

तत्वप्रकाशिका – तदप्युक्तप्रतिकूलतर्कपराहतमनुकूलतर्कशून्यं च । संशयस्य च दोषादेवोपपत्तेः ।

ಹಿಂದೆ ನಿರೂಪಣೆ ಮಾಡಿದ ಪ್ರಕಾರ ಸಂವಾದದಿಂದ ಪ್ರಾಮಾಣ್ಯವನ್ನು ನಿಶ್ಚಯ ಮಾಡುವುದಾದರೆ ಆ ಸಂವಾದಪ್ರಮಾಣದ ಪ್ರಾಮಾಣ್ಯಕ್ಕೆ ಮತ್ತೊಂದು ಸಂವಾದಪ್ರಾಮಾಣ್ಯ ಬೇಕು. ಆದ್ದರಿಂದ ಅನವಸ್ಥಾದೋಷ ತಪ್ಪಿದ್ದಲ್ಲ. ಹೀಗೆ ಪ್ರತಿಕೂಲತರ್ಕದಿಂದ ನೈಯಾಯಿಕರ ಅನುಮಾನವು ಪರಾಹತವಾಗುತ್ತದೆ. ಮತ್ತು ಅನುಮಾನದಲ್ಲಿ 'ಅನಭ್ಯಾಸದಶಾಯಾಂ ಸಾಂಶಯಿಕತ್ವಾತ್' ಎಂಬ ಹೇತುವಿರಲಿ ಪರತಸ್ತ್ವವೆಂಬ ಸಾಧ್ಯವಿರುವುದು ಬೇಡ ಎಂದು ಅಪ್ರಯೋಜಕಾಶಂಕೆಯನ್ನು ಮಾಡಿದರೆ ನಿಮಗೆ ಅನುಕೂಲತರ್ಕವನ್ನು ಹೇಳಲು ಸಾಧ್ಯವಿಲ್ಲ.

ಧರ್ಮಿಜ್ಞಾನವಿದ್ದರೆ ಪ್ರಾಮಾಣ್ಯದ ನಿಶ್ಚಯ ಇದ್ದೇ ಇರುತ್ತದೆ

तत्वप्रकाशिका – स्वतस्त्वेनाभ्युपगतोपमानानुमानप्रामाण्येऽपि संशयदर्शनाच्च।

ಧರ್ಮಿಯ ಜ್ಞಾನವಿದೆ ಆದರೆ ಪ್ರಾಮಾಣ್ಯವು ನಿಶ್ಚಯವಾಗಿಲ್ಲ. ಹೀಗೆ ಅನುಕೂಲತರ್ಕವನ್ನು ಹೇಳಬಹುದಲ್ಲವೇ? ಎಂದು ಪ್ರಶ್ನಿಸಬಾರದು. ಹಾಗೆ ಹೇಳಿದರೆ ಪ್ರಾಮಾಣ್ಯಸ್ವತಸ್ತ್ವಕ್ಕೆ ಭಂಗ ಬರುತ್ತದೆ.

'ಅನಭ್ಯಾಸದಶಾಯಾಮ್ ಸಾಂಶಯಿಕತ್ವ' ಎಂಬ ಹೇತುವಿರಲಿ ಸಾಧ್ಯವಿರುವುದು ಬೇಡ ಎಂದು ಹೇಳಿದರೆ 'ಅನಭ್ಯಾಸದಶಾಯಾಮ್ ಸಾಂಶಯಿಕತ್ವ' ಎಂಬ ಹೇತುವೂ ಕೂಡ ಇರುವುದು ಬೇಡ ಎಂದು ಅನುಕೂಲತರ್ಕವನ್ನು ಹೇಳುತ್ತೇವೆ. ಎಲ್ಲಿ ಧರ್ಮಿಯ ಜ್ಞಾನ ಬರುತ್ತದೋ ಅಲ್ಲಿ ಪ್ರಾಮಾಣ್ಯವು ಗೃಹೀತವಾಗುವುದಿಲ್ಲ. ಹೀಗೆ ಹೇಳಿದರೆ ಪ್ರಾಮಾಣ್ಯಸ್ವತಸ್ತ್ವಕ್ಕೆ ಭಂಗ ಬರುತ್ತದೆ. ಅದಕ್ಕಾಗಿ ಧರ್ಮಿಯ ಜ್ಞಾನ ಬಂದಿರುವ ಸ್ಥಳದಲ್ಲಿ ಪ್ರಾಮಾಣ್ಯವು ಗೃಹೀತವಾಗಿದೆ ಎಂದೇ ಹೇಳಬೇಕು. ಆವಾಗ ಎರಡು ಕೋಟಿಗಳಲ್ಲಿ ಒಂದು ನಿಶ್ಚಯವಾಗಿದೆ

ಎಂದು ಒಪ್ಪಿದಂತಾಯಿತು. ಆಗ ಸಂಶಯ ಮೂಡಲು ಸಾಧ್ಯವಿಲ್ಲ. ಆದರೆ ನಮ್ಮೆಲ್ಲರ ಅನುಭವದಿಂದ ಸಂಶಯ ಬರುವುದು ಸಿದ್ಧವಾಗಿದೆ. ಆದ್ದರಿಂದ ಪ್ರಾಮಾಣ್ಯವನ್ನು ಸ್ವತಃ ಎಂದು ಹೇಳಲು ಬರುವುದಿಲ್ಲ. ಹೀಗೆ ಅನುಕೂಲತರ್ಕವನ್ನು ಹೇಳುತ್ತೇವೆ.

ಈ ಆಶಂಕೆಯು ತಪ್ಪು. ಧರ್ಮಿಜ್ಞಾನವಿದ್ದರೂ ತಾತ್ಪರ್ಯಭ್ರಮ ಮೊದಲಾದ ದೋಷದಿಂದಾಗಿ ಸಂಶಯವು ಹುಟ್ಟಬಹುದಾದ್ದರಿಂದ ಅನುಕೂಲತರ್ಕವನ್ನು ಹೇಳಲು ಸಾಧ್ಯವಿಲ್ಲ.

ಪ್ರಾಚೀನತಾರ್ಕಿಕರು ಉಪಮಿತಿ ಮತ್ತು ಅನುಮಿತಿಗಳಲ್ಲಿ ಪ್ರಾಮಾಣ್ಯಸ್ವತಸ್ತ್ವವನ್ನು ಒಪ್ಪಿರುತ್ತಾರೆ. ಆದರೂ ಅಲ್ಲಿ ಪ್ರಾಮಾಣ್ಯಸಂಶಯವು ಬರುತ್ತದೆ. ಏಕೆಂದರೆ ಬೌದ್ಧ ಚಾರ್ವಾಕ ಮೊದಲಾದ ದಾರ್ಶನಿಕರು ಅನುಮಾನವನ್ನು ಅಪ್ರಮಾಣವೆನ್ನುತ್ತಾರೆ. ಇದನ್ನು ಕೇಳಿದ ಮೂರನೇ ವ್ಯಕ್ತಿಗೆ ಅನುಮಾನವು ಪ್ರಮಾಣವೂ ಅಲ್ಲವೋ ? ಎಂಬ ಸಂಶಯವು ವಿಪ್ರತಿಪತ್ತಿಯಿಂದ ಹುಟ್ಟುತ್ತದೆ. ಹೀಗೆ ಸಂಶಯವು ಅನುಭವಸಿದ್ಧವಾಗಿದ್ದರೂ ಅನುಮಿತಿ-ಪ್ರಾಮಾಣ್ಯವನ್ನು ಸ್ವತಃ ಎಂದು ಹೇಗೆ ಒಪ್ಪಿದ್ದಾರೊ, ಅದರಂತೆ ನಾವೂ ಕೂಡ ಸಹ ಧರ್ಮಿಜ್ಞಾನವಿದ್ದರೂ ಪ್ರಾಮಾಣ್ಯವಿಷಯದಲ್ಲಿ ಸಂಶಯವಿದ್ದರೂ ಕೂಡ ಪ್ರಾಮಾಣ್ಯಸ್ವತಸ್ತ್ವವನ್ನು ಒಪ್ಪುತ್ತೇವೆ.

ಹೇತುವಿಗೆ ಭಾಗಾಸಿದ್ಧಿದೋಷ

तत्त्वप्रकाशिका – अनभ्यासदशायामपि सन्देहाभावस्यापि दर्शनाच्चेत्यलम् ।

ಇನ್ನು 'ಅನಭ್ಯಾಸದಶಾಯಾಮ್ ಸಾಂಶಯಿಕತ್ವಾತ್' ಎಂಬ ಹೇತುವಿನಲ್ಲಿ 'ಅನಭ್ಯಾಸದಶಾಯಾಂ' ಎಂಬ ವಿಶೇಷಣದಿಂದ 'ಅಭ್ಯಾಸವಿಲ್ಲದ ಸ್ಥಳದಲ್ಲಿ' ಎಂದು ಹೇಳಿರುತ್ತಾರೆ. ಇದಕ್ಕೆ ಭಾಗಾಸಿದ್ಧಿ ದೋಷ ಬರುತ್ತದೆ. ಏಕೆಂದರೆ ಆಗ ತಾನೇ ಹುಟ್ಟಿದ ಮಡಿಕೆಯನ್ನು ನೋಡಿ ಇದು ಘಟವೆಂದು ನಾವು ತಿಳಿಯುತ್ತೇವೆ. ಈ ಜ್ಞಾನವು ಪ್ರಮಾಣವೋ ಅಲ್ಲವೋ ? ಎಂಬ ಸಂಶಯ ನಮಗಿರುವುದಿಲ್ಲ. ಆದರೆ ಈ ಮಡಿಕೆಯನ್ನು ಹಿಂದೆ ನೋಡದ ಕಾರಣ ಅನಭ್ಯಾಸದಶಾಪನ್ನವಾಗಿದೆ. ಆದರೂ ಸಂಶಯವಿಲ್ಲದ ಕಾರಣ ಹೇತುವಿಗೆ ಭಾಗಾಸಿದ್ಧಿದೋಷ ಬರುತ್ತದೆ. ಇಷ್ಟು ಪ್ರಾಮಾಣ್ಯಸ್ವತಸ್ತ್ವದ ಸಂಕ್ಷೇಪ. ಹೆಚ್ಚಿನ ವಿಚಾರಗಳನ್ನು ಬೇರೆ ಗ್ರಂಥಗಳಿಂದ ತಿಳಿದುಕೊಳ್ಳಬೇಕು.

'ತಥಾತ್ವಂ ಚ ಶಬ್ದಾತ್' ಎಂಬ ಸೂತ್ರ ಭಾಗದ ವ್ಯಾಖ್ಯಾನ

तत्वप्रकाशिका – वेदस्य स्वतःप्रामाण्ये सूत्रसूचितां श्रुतिं चाह – नेति।।

ವೇದವು ಸ್ವತಃಪ್ರಮಾಣವಾಗಿದೆ ಎಂಬ ವಿಷಯದಲ್ಲಿ 'ತಥಾತ್ವಂ ಚ ಶಬ್ದಾತ್' ಎಂಬ ಸೂತ್ರಭಾಗವು ಶ್ರುತಿಯನ್ನು ಪ್ರಮಾಣವನ್ನಾಗಿ ಉಲ್ಲೇಖ ಮಾಡಿದೆ. ಅದನ್ನು ಶ್ರೀಮದಾನಂದತೀರ್ಥರು 'ನ ಚಕ್ಷುಃ ನ ಶ್ರೋತ್ರಂ' ಇತ್ಯಾದಿ ಭಾಷ್ಯದಿಂದ ಸ್ಪಷ್ಟಪಡಿಸುತ್ತಿದ್ದಾರೆ. 'ನ ಚಕ್ಷುಃ ನ ಶ್ರೋತ್ರಮ್ ನ ತರ್ಕೋ ನ ಸ್ಮೃತಿಃ ವೇದಾಹ್ಯೇವೇನಂ ವೇದಯಂತಿ' ಎಂಬುದು ವೇದದ ಪ್ರಾಮಾಣ್ಯಸ್ವತಸ್ತ್ವದಲ್ಲಿ ಪ್ರಮಾಣವಾಗಿದೆ.

ವೇದಗಳಿಗೆ ಸಂವಾದ ಪ್ರಮಾದದ ಅಪೇಕ್ಷೆ ಇಲ್ಲವೆಂದು ಸಿದ್ಧವಾಯಿತು

तत्वप्रकाशिका – अत्र चक्षुरादीनां परमात्माऽप्रमापकत्वमुक्त्वा वेदस्यैव तत् प्रमापकत्वोक्तेः संवादानपेक्षतया प्रामाण्यमित्युक्तं भवति । वेदस्य नित्यत्वं कुत इत्यत आह – नित्यत्वश्चेति ।

'ಪರಮಾತ್ಮನನ್ನು ತಿಳಿಯಲು ಚಕ್ಷುರಿಂದ್ರಿಯ ಶ್ರೋತ್ರೇಂದ್ರಿಯ ಮೊದಲಾದವುಗಳಿಗೆ ಸಾಧ್ಯವಿಲ್ಲ. ಅನುಮಾನದಿಂದಲೂ ಸಾಧ್ಯವಿಲ್ಲ. ಸ್ಮೃತಿಗಳಿಂದ ಸಾಧ್ಯವಿಲ್ಲ. ಕೇವಲ ವೇದಗಳು ಪರಮಾತ್ಮನನ್ನು ತಿಳಿಸಲು ಸಮರ್ಥವಾಗಿವೆ' ಎಂಬುದು ಶ್ರುತಿಯ ಅರ್ಥ. ಈ ಶ್ರುತಿಯಲ್ಲಿ ಕಣ್ಣು ಮೊದಲಾದ ಯಾವುದೇ ಇಂದ್ರಿಯಗಳು ಪರಮಾತ್ಮನನ್ನು ತಿಳಿಸುವುದಿಲ್ಲವೆಂದು ಹೇಳಿದ್ದರಿಂದ ಪರಮಾತ್ಮನನ್ನು ತಿಳಿಸುವ ವೇದಗಳಿಗೆ ಸಂವಾದಪ್ರಮಾಣವೇ ಇಲ್ಲವೆಂದು ಹೇಳಿದಂತಾಯಿತು. ಆದರೂ ವೇದಗಳು ಪರಮಾತ್ಮನ ವಿಷಯದಲ್ಲಿ ಪ್ರಮಾಣವೆಂದು ಹೇಳಿದ್ದರಿಂದ ಮತ್ತೊಂದು ಪ್ರಮಾಣದ ಅಪೇಕ್ಷೆ ಇಲ್ಲದೆ ವೇದಗಳು ಸ್ವತಃ ಪ್ರಮಾಣವಾಗಿವೆ ಎಂದು ಪ್ರಾಮಾಣ್ಯಸ್ವತಸ್ತ್ವವನ್ನು ಪ್ರತಿಪಾದನೆ ಮಾಡಿದಂತಾಯಿತು. (ವೇದವು ಅಪೌರುಷೇಯವೆಂಬುದು ಹೇಗೆ ಸಿದ್ಧವಾಯಿತು? ಎಂಬ ಪ್ರಶ್ನೆಗೆ 'ನಿತ್ವತ್ವಂ ಚ ಶಬ್ದಾದೇವ' ಎಂಬ ಭಾಷ್ಯದಿಂದ ಉತ್ತರಿಸಿದ್ದಾರೆ. ವೇದಗಳ ಅಪೌರುಷೇಯತ್ವವೂ ಕೂಡ ವೇದದಿಂದಲೇ ಸಿದ್ಧವಾಗಿದೆ ಎಂಬುದು ಭಾಷ್ಯಕಾರರ ಅಭಿಪ್ರಾಯ)

'ತಸ್ಮೈ ನೂನಮ್ ಅಭಿದ್ಯವೇ' ಎಂಬ ಶ್ರುತ್ಯರ್ಥ

तत्वप्रकाशिका – अनेन तथात्वमित्युभयतः सम्बध्यते इत्युक्तं भवति । तस्मै सर्वतः प्रकाशायातिसमर्थाय विष्णवे नित्यया वेदवाचा साध्वीं स्तुतिं प्रेरय कुर्वित्यर्थः ।

ಹೀಗೆ ವ್ಯಾಖ್ಯಾನ ಮಾಡಿದ್ದರಿಂದ ಸೂತ್ರದಲ್ಲಿರುವ 'ತಥಾತ್ವಮ್' ಎಂಬ ಪದಕ್ಕೆ ಎರಡು ಕಡೆ ಸಂಬಂಧವನ್ನು ಹೇಳಿದಂತಾಯಿತು. ಒಮ್ಮೆ ಸಂಬಂಧವನ್ನು ಹೊಂದಿರುವ 'ತಥಾತ್ವಮ್' ಎಂಬ ಪದಕ್ಕೆ 'ವೈಲಕ್ಷಣ್ಯ' ಎಂದರ್ಥ. ಮತ್ತೊಂದು ಬಾರಿ ಸಂಬಂಧವನ್ನು ಹೊಂದುವ 'ತಥಾತ್ವಮ್' ಎಂಬುದಕ್ಕೆ ನಿತ್ಯತ್ವ ಎಂದರ್ಥ.

ಭಾಷ್ಯದಲ್ಲಿ ಉದಾಹರಿಸಿದ 'ತಸ್ಮೈ ನೂನಮ್ ಅಭಿದ್ಯವೇ' ಎಂಬ ಶ್ರುತಿಯ ಅರ್ಥ ಹೀಗಿದೆ - 'ವಿರೂಪ' ಎಂಬುದಾಗಿ ತನ್ನನ್ನೇ ತಾನು ಸಂಬೋಧಿಸಿ ಎಲ್ಲಾ ರೀತಿಯಿಂದಲೂ ಪ್ರಕಾಶಮಾನನಾದ ಅತ್ಯಂತ ಸಮರ್ಥನಾದ ವಿಷ್ಣುವನ್ನು ಕುರಿತು ನಿತ್ಯವಾದ ವೇದಮಾತುಗಳಿಂದ ಒಳ್ಳೆಯ ಸ್ತೋತ್ರವನ್ನು ಮಾಡು. ಹೀಗೆ ವಿರೂಪ ಎಂಬ ಋಷಿಯು ಹೇಳಿರುತ್ತಾರೆ.

'ಅನಾದಿನಿಧನಾ ನಿತ್ಯಾ' ಇತ್ಯಾದಿ ಭಾಷ್ಯಕ್ಕೆ ವ್ಯಾಖ್ಯಾನ

तत्वप्रकाशिका – विरूपेति स्वात्मानं प्रति सम्बोधनम् । बहुकालीनत्वमात्रेण नित्यत्वोपचारः किं न स्यादित्यत आह – अनादीति ।।

ಈ ಶ್ರುತಿಯಲ್ಲಿ ನಿತ್ಯವೆಂಬ ಪದದಿಂದ ವೇದಗಳಿಗೆ ಅಪೌರುಷೇಯತ್ವವನ್ನು ಹೇಳಲಾಗಿದೆ. ಬಹುಕಾಲದಿಂದ ಇರುವುದರಿಂದಲೂ ನಿತ್ಯವೆಂದು ಔಪಚಾರಿಕವಾಗಿ ಕರೆಯಲಾಗಿದೆ ಎಂದು ಏಕೆ ವ್ಯಾಖ್ಯಾನ ಮಾಡಬಾರದು ? ಎಂಬ ಪ್ರಶ್ನೆಗೆ 'ಅನಾದಿನಿಧನಾ ನಿತ್ಯಾ ಇತಿ ಸ್ಮೃತೇಶ್ಚ' ಎಂಬುದಾಗಿ ಭಾಷ್ಯದಲ್ಲಿ ಉತ್ತರ ನೀಡಿದ್ದಾರೆ.

ನಿತ್ಯಪದದ ಅರ್ಥ

तत्वप्रकाशिका – अनादिनिधनतया नित्या न तु बहुकालीनतामात्रेण नित्यत्वोपचार इत्यर्थः ।

ನಿತ್ಯಪದಕ್ಕೆ ಉತ್ಪತ್ತಿನಾಶವಿಲ್ಲದ್ದು ಎಂದರ್ಥ. ಬಹುಕಾಲ ಇರುವುದೆಂಬ ಔಪಚಾರಿಕಾರ್ಥವನ್ನು ನಿತ್ಯಪದಕ್ಕೆ ತಿಳಿಯಬಾರದು.

ಯುಕ್ತಿಸಿದ್ಧವಾದದ್ದರಲ್ಲಿ ವೇದಪ್ರಾಮಾಣ್ಯ

तत्वप्रकाशिका – न च वाच्यं वेदप्रामाण्ये विव(दन्तं)दमानं प्रति कथं तत्प्रामाण्योपपादनायोपन्यस्तयोर्नित्यत्वस्वतःप्रामाण्ययोः साक्षितया श्रुत्युपादानं युक्तमिति । परेणापि फलव्यभिचारेणाप्रामाण्ये वेदस्यापि तत्प्रसङ्ग इत्यापादनमात्रस्य क्रियमाणत्वात् । युक्तेश्चोपन्यस्तत्वात् ।। ४ ।।

ವೇದಪ್ರಾಮಾಣ್ಯವಿಷಯದಲ್ಲಿ ವಿವಾದ ಮಾಡುವವನನ್ನು ಕುರಿತು ನಿತ್ಯತ್ವವಿಷಯದಲ್ಲಿ ಮತ್ತು ಸ್ವತಃ ಪ್ರಾಮಾಣ್ಯವಿಷಯದಲ್ಲಿ ವೇದವನ್ನು ಉದಾಹರಿಸುವುದು ತಪ್ಪು. ಏಕೆಂದರೆ ಪ್ರಾಮಾಣ್ಯವು ಸಿದ್ಧವಾದ ಮೇಲೆ ಅಂಥ ವೇದದಿಂದ ಪ್ರಾಮಾಣ್ಯಸ್ವತಸ್ತ್ವವು ಸಿದ್ಧವಾಗುತ್ತದೆ. ಪ್ರಾಮಾಣ್ಯಸ್ವತಸ್ತ್ವವು ಸಿದ್ಧವಾದ ಮೇಲೆ ವೇದವು ಪ್ರಮಾಣವೆಂದು ಸಿದ್ಧವಾಗುತ್ತದೆ. ಹೀಗೆ ಅನ್ಯೋನ್ಯಾಶ್ರಯದೋಷ ಬರುತ್ತದೆಂದು ಆಕ್ಷೇಪ ಮಾಡಬಾರದು.

ವೇದಪ್ರಾಮಾಣ್ಯವನ್ನು ಒಪ್ಪಿ ಪಾಶುಪತಾದಿಸ್ಮೃತಿಗಳು ಪ್ರಮಾಣವಲ್ಲವೆಂದು ಹೇಳಿದರೆ ವೇದೋಕ್ತವಾದ ಕರ್ಮಗಳನ್ನು ಅನುಷ್ಠಾನ ಮಾಡಿದರೂ ಫಲವು ದೊರೆಯದ ಕಾರಣ ಪಾಶುಪತಾದಿ ಸ್ಮೃತಿಗಳಂತೆ ವೇದವೂ ಸಹ ಅಪ್ರಮಾಣವಾಗಬೇಕಾದೀತು ಎಂದು ಈ ಅಧಿಕರಣದ ಪೂರ್ವಪಕ್ಷಿಯು ಆಪಾದನೆ ಮಾಡುತ್ತಿದ್ದಾನೆ. ಆದ್ದರಿಂದ ವೇದಪ್ರಾಮಾಣ್ಯವಿಷಯದಲ್ಲಿ ಪೂರ್ವಪಕ್ಷಿಗೆ ವಿವಾದವಿರುವುದಿಲ್ಲ. ಅಂಥವನನ್ನು ಕುರಿತು ಅಪೌರುಷೇಯತ್ವವನ್ನು ಹಾಗೂ ಸ್ವತಃಪ್ರಾಮಾಣ್ಯವನ್ನು ನಾವು ವೇದದಿಂದ ಸಮರ್ಥಿಸುವುದು ತಪ್ಪಾಗುವುದಿಲ್ಲ. ವೇದದ ನಿತ್ಯತ್ವ ಹಾಗೂ ಸ್ವತಃಪ್ರಾಮಾಣ್ಯಗಳನ್ನೂ ಯುಕ್ತಿಯಿಂದ ಈಗಾಗಲೇ ಸಮರ್ಥಿಸಿದ್ದಾಗಿದೆ. ಯುಕ್ತಿಸಿದ್ಧವಾದ ವಿಷಯದಲ್ಲಿ ವೇದಪ್ರಮಾಣವನ್ನು ಹೇಳಿದರೆ ಅನ್ಯೋನ್ಯಾಶ್ರಯದೋಷಕ್ಕೆ ಅವಕಾಶವಿಲ್ಲ.

ಮಂತ್ರಾಲಯ ಪ್ರಭುಗಳಾದ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ

ಭಾವದೀಪ

ಈ ಅಧಿಕರಣದ ಸಂಗತಿ :-

॥ न विलक्षणत्वादस्य तथात्वं च शब्दात् ॐ ॥ ४ ॥

भावदीपः – ॥ न विलक्षणत्वात् ॥ **उक्तेति ।।** शास्त्रयोनिसूत्र इत्यर्थः ॥ **युक्तीति ।।** तदुक्तानुपलब्धेरप्रामाण्यमिति भाष्ये वक्ष्यमाणयुक्तीत्यर्थः। अत्र विष्णोरित्युक्त्या शास्त्रे युक्तीत्युक्त्या पादे विरोधेत्याद्युक्त्याऽध्याये च सङ्गतिरुपपादिता बोध्या। एवमग्रेऽपि। पूर्वसङ्गतिमाह – **श्रुत्यादीति ।।**

ಟೀಕೆಯಲ್ಲಿ 'ಉಕ್ತವೇದಾದಿಪ್ರಾಮಾಣ್ಯಸ್ಯ' ಎಂದು ಹೇಳಿದ್ದಾರೆ. ಇಲ್ಲಿರುವ 'ಉಕ್ತ' ಎಂಬ ಪದಕ್ಕೆ ಶಾಸ್ತ್ರಯೋನಿ ಸೂತ್ರದಲ್ಲಿ ಹೇಳಲ್ಪಟ್ಟ ಎಂದರ್ಥ. 'ಯುಕ್ತಿವಿರೋಧಪರಿಹಾರಾತ್' ಎಂದು ಟೀಕೆಯಲ್ಲಿದೆ. ವೇದದಲ್ಲಿ ಹೇಳಲ್ಪಟ್ಟ ಅನುಷ್ಠಾನವನ್ನು ಆಚರಣೆ ಮಾಡಿದರೂ ಫಲವು ದೊರಕುತ್ತಿಲ್ಲ. ಆದ್ದರಿಂದ ಆ ವೇದಭಾಗಕ್ಕೆ ಅಪ್ರಾಮಾಣ್ಯವು ಬರುತ್ತದೆ ಎಂಬ ಯುಕ್ತಿವಿರೋಧವನ್ನು ಭಾಷ್ಯದಲ್ಲಿ ಮುಂದೆ ಹೇಳುತ್ತಿದ್ದಾರೆ. ಆ ಯುಕ್ತಿಯನ್ನು ಇಲ್ಲಿರುವ 'ಯುಕ್ತಿ' ಪದದ ಅರ್ಥವನ್ನಾಗಿ ತಿಳಿಯಬೇಕು.

ಈ ಅಧಿಕರಣದಲ್ಲಿರುವ ಶಾಸ್ತ್ರಾದಿಸಂಗತಿಗಳನ್ನು ಟೀಕೆಯಲ್ಲಿ 'ಅತ್ರ ವಿಷ್ಣೋಃ' ಇತ್ಯಾದಿ ವಾಕ್ಯದಿಂದಲೇ ತಿಳಿಸಿರುತ್ತಾರೆ. ಅದು ಹೀಗೆ – 'ಅತ್ರ ವಿಷ್ಣೋಃ' ಎಂಬ ಮಾತಿನಿಂದ ವಿಷ್ಣುವಿನ ಜಗತ್ಕಾರಣತ್ವದ ಪ್ರತಿಪಾದನೆಗಾಗಿಯೇ ಈ ಅಧಿಕರಣ ಹೊರಟಿರುವುದರಿಂದ ಇದಕ್ಕೆ ಶಾಸ್ತ್ರಸಂಗತಿ ಇದೆ. ಇದನ್ನು 'ಅತ್ರ ವಿಷ್ಣೋಃ' ಎಂಬ ಪದದಿಂದಲೇ ತಿಳಿಸಿದ್ದಾರೆ. ಯುಕ್ತಿವಿರೋಧವನ್ನು ಈ ಅಧಿಕರಣದಲ್ಲಿ ಪರಿಹರಿಸುತ್ತಿದ್ದಾರೆ. ಆದ್ದರಿಂದ ಇದಕ್ಕೆ ಅಧ್ಯಾಯ ಸಂಗತಿಯು ಇರುತ್ತದೆ. ಇದನ್ನು 'ವಿರೋಧಪರಿಹಾರಾತ್' ಎಂಬ ಪದದಿಂದಲೇ ತಿಳಿಸಿದ್ದಾರೆ. ಯುಕ್ತಿಯ ವಿರೋಧವನ್ನು ಪರಿಹರಿಸುತ್ತೇವೆ ಎಂದು ಹೇಳಿದ್ದರಿಂದ ಯುಕ್ತಿ ಎಂಬ ಪದದಿಂದ ಪಾದಾಂತರ್ಭಾವಸಂಗತಿಯನ್ನು ತಿಳಿಸಿದ್ದಾರೆ. ಹೀಗೆ ಟೀಕೆಯಲ್ಲಿ ಉಪಪಾದನೆ ಮಾಡಿದ ಸಂಗತಿಯ ಕ್ರಮವನ್ನು ಸೂಕ್ಷ್ಮವಾಗಿ ಗಮನಿಸಬೇಕು. ಇದರಂತೆ ಮುಂದಿನ ಅಧಿಕರಣಗಳಲ್ಲಿರುವ ಟೀಕಾಪಂಕ್ತಿಗಳಿಂದಲೂ ಕೂಡ ಸಂಗತಿಯ ವಿಚಾರವನ್ನು ತಿಳಿಯತಕ್ಕದ್ದು. ಈಗ ಹಿಂದಿನ ಅಧಿಕರಣದಿಂದ ಆವಶ್ಯಕವಾಗಿರುವ ಸಂಗತಿಯನ್ನು 'ಶ್ರುತ್ಯಾದಿ' ಎಂಬ ವಾಕ್ಯದಿಂದ ಉಪಪಾದನೆ ಮಾಡುತ್ತಿದ್ದಾರೆ.

ಏವಂ ಶ್ರುತೇಃ ಇತ್ಯಾದಿ ಭಾಷ್ಯಕ್ಕೆ ವ್ಯಾಖ್ಯಾನ

ಭಾವದೀಪಃ – ನ ಬ್ರಹ್ಮಣ ಇತಿ ವಿಚ್ಛೇದಃ। ಸೌತ್ರತಥಾತ್ವಪದೇನ ಪ್ರಾಕ್ತನಸಾಧ್ಯಹೇತ್ವೋರಪಿ ಸ್ಮೃತ್ಯಪ್ರಾಮಾಣ್ಯರೂಪದೃಷ್ಟಾನ್ತಸ್ಯ ಚ ಪರಾಮರ್ಶ ಇತಿ ಭಾವೇನ ಪ್ರವೃತ್ತಮೇವಮಿತ್ಯಾದ್ಯಪ್ರಾಮಾಣ್ಯಮಿತ್ಯನ್ತಭಾಷ್ಯಮಾಕಾಙ್ಕ್ಷಾಕ್ರಮೇಣ ವ್ಯನಕ್ತಿ॥ **ಶ್ರುತ್ಯಾದಿಕಮಿತಿ**।। ಶ್ರುತೇರಿತ್ಯೇತದ್ ವ್ಯನಕ್ತಿ – **ಕರೀರ್ಯೇತಿ**।। ತದನುಸಾರಿಸ್ಮೃತೇಶ್ಚೇತ್ಯೇತದ್ ವ್ಯಾಚಷ್ಟೇ – **ತಥೇತಿ**।। ಪಾಶುಪತಾದಿಸ್ಮೃತಿವದಿತ್ಯರ್ಥ ಕೈವಂಶಬ್ದಾರ್ಥಂ ವ್ಯನಕ್ತಿ – **ಅವಿದ್ಯಮಾನೇತಿ**।। ಅಪ್ರಯೋಜಕತ್ವನಿರಾಸಾಯ ವಿಲಕ್ಷಣತ್ವಾದಿತಿ ಹೇತುವ್ಯಾವರ್ತ್ಯಂ ಶ್ರುತೇಃ ರುದ್ರಾದಿಸ್ಮೃತಿಸಾಮ್ಯಮಿತ್ಯನ್ಯತ್ರೋಕ್ತಂ ವ್ಯನಕ್ತಿ॥

'ಯುಕ್ತಿವಿರೋಧೇನ' ಎಂದು ಪದಚ್ಛೇದ ಮಾಡಬಾರದು. 'ಯುಕ್ತಿವಿರೋಧೇ ನ ಬ್ರಹ್ಮಣಃ' ಎಂದು ಪದಚ್ಛೇದ ಮಾಡಬೇಕು. ಸೂತ್ರದಲ್ಲಿರುವ 'ತಥಾತ್ವ' ಎಂಬ ಪದದಿಂದ ಹಿಂದೆ ಪ್ರಸಕ್ತವಾದ ಸಾಧ್ಯ ಮತ್ತು ಹೇತುಗಳನ್ನು ಪರಾಮರ್ಶ ಮಾಡಬೇಕು ಹಾಗೂ ಸ್ಮೃತ್ಯಪ್ರಾಮಾಣ್ಯವೆಂಬ ದೃಷ್ಟಾಂತವನ್ನೂ ಕೂಡ ಪರಾಮರ್ಶೆ ಮಾಡಬೇಕು. ಈ ಅಭಿಪ್ರಾಯದಿಂದ 'ಏವಂ' ಎಂಬಲ್ಲಿಂದ ಪ್ರಾರಂಭ ಮಾಡಿ 'ಅಪ್ರಾಮಾಣ್ಯಂ' ಎಂಬಲ್ಲಿಯ ತನಕ ಇರುವ ಭಾಷ್ಯದ ಮಾತುಗಳು ಹೊರಟಿವೆ. ಈ ಭಾಷ್ಯವಾಕ್ಯದಲ್ಲಿರುವ ಪದಗಳನ್ನು ಆಕಾಂಕ್ಷಕ್ಕೆ ಅನುಗುಣವಾಗಿ ಟೀಕೆಯಲ್ಲಿ 'ಶ್ರುತ್ಯಾದಿ ಕಂ' ಇತ್ಯಾದಿ ಗ್ರಂಥದಿಂದ ವ್ಯಾಖ್ಯಾನ ಮಾಡಲು ಹೊರಟಿದ್ದಾರೆ. ಭಾಷ್ಯದಲ್ಲಿರುವ 'ಶ್ರುತೇಃ' ಎಂಬ ಪದವನ್ನು 'ಕಾರೀರ್ಯಾ' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನ ಮಾಡಿದ್ದಾರೆ. 'ತದನುಸಾರಿಸ್ಮೃತೇಶ್ಚ' ಎಂಬ ಭಾಷ್ಯದಲ್ಲಿರುವ ಮಾತನ್ನು 'ತಥಾ ಸ್ಮೃತೀನಾಂ ಅಪಿ' ಎಂಬ ವಾಕ್ಯದಿಂದ ವ್ಯಾಖ್ಯಾನ ಮಾಡಿದ್ದಾರೆ. 'ಪಾಶುಪತಾದಿಸ್ಮೃತಿವತ್' ಎಂಬ ಅರ್ಥದಲ್ಲಿರುವ 'ಏವಂ' ಶಬ್ದದ ಅರ್ಥವನ್ನು 'ಅವಿದ್ಯಮಾನ' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನ ಮಾಡಿದ್ದಾರೆ.

ಸಮಸ್ತವೇದವು ಅಪ್ರಮಾಣವೆಂದು ಪೂರ್ವಪಕ್ಷ

ಭಾವದೀಪಃ – **ಅವಿದ್ಯಮಾನೇತಿ**।। ಶ್ರುತೇರಿತ್ಯುಪಲಕ್ಷಣಂ ಮತ್ವಾ ಶ್ರುತಿಸ್ಮೃತೀನಾಮಿತ್ಯುಕ್ತಮ್। ಅಸ್ತ್ವೇವಂ ದೃಷ್ಟಾರ್ಥಕಭಾಗಸ್ಯ ಯತೋ ವಾ ಇತ್ಯಾದ್ಯದೃಷ್ಟಾರ್ಥಕಭಾಗಸ್ಯ ಕಿಮಾಯಾತಮಿತ್ಯತ ಆಹ – **ಏವಂ ಚೇತಿ**।। ತತ್ಸಾಮಾನ್ಯಾದಿತರೇಷು ತಥಾತ್ವಮಿತಿ ಜೈಮಿನೀಯನ್ಯಾಯಾದಿತಿ ಭಾವಃ॥ ಛ॥

ಭಾಷ್ಯದಲ್ಲಿರುವ 'ಶ್ರುತೇಃ' ಎಂಬುದು ಸ್ಮೃತಿಗೆ ಉಪಲಕ್ಷಕವಾಗಿದೆ ಎಂಬುದರ ಅಭಿಪ್ರಾಯದಿಂದ ಟೀಕೆಯಲ್ಲಿ 'ಶ್ರುತಿಸ್ಮೃತೀನಾಂ' ಎಂದು ಹೇಳಿದ್ದಾರೆ.

ವೇದದಲ್ಲಿರುವ ದೃಷ್ಟಫಲಕವಾದ ಭಾಗಕ್ಕೆ ಅಪ್ರಾಮಾಣ್ಯವು ಪ್ರಾಪ್ತವಾಗಲಿ. ಆದರೆ ಅದೃಷ್ಟವಿಷಯಕವಾದ 'ಯತೋ ವಾ ಇಮಾನಿ' ಇತ್ಯಾದಿ ವೇದಭಾಗಗಳಿಗೆ ಇದರಿಂದ ಏನು ಬಾಧಕ? ಎಂಬ ಪ್ರಶ್ನೆಗೆ 'ಏವಂ ಚ' ಇತ್ಯಾದಿ ವಾಕ್ಯದಿಂದ ಉತ್ತರಿಸಿದ್ದಾರೆ. 'ತತ್ಸಾಮಾನ್ಯಾದಿತರೇಷು ತಥಾತ್ವಂ' ಎಂಬ ಜೈಮಿನೀಸೂತ್ರದ ನ್ಯಾಯದಂತೆ ವೇದದ ಏಕದೇಶಕ್ಕೆ ಅಪ್ರಾಮಾಣ್ಯವು ಪ್ರಾಪ್ತವಾದರೆ ಸಮಾನನ್ಯಾಯದಿಂದ ಸಕಲವೇದಕ್ಕೂ ಅಪ್ರಾಮಾಣ್ಯವು ಪ್ರಾಪ್ತವಾಗುತ್ತದೆಂದು ತಿಳಿಯಬೇಕು.

ಸಾಕ್ಷಿಪ್ರಾಮಾಣ್ಯದಂತೆ ವೇದಪ್ರಾಮಾಣ್ಯ

ಭಾವದೀಪಃ – व्याख्येयसौत्रपदानि दर्शयन् भाष्यं व्याचष्टे – **अस्येति**॥ श्रुत्यादेरित्युक्त्या भाष्यदिशा अस्या इत्युक्तिः स्यादिति प्रत्युक्तम्। एवमित्यस्यार्थः पाशुपतादिस्मृतिवदिति। श्रुतेरित्यनेन भाष्ये श्रुतिस्मृतिपदे यथायोगमत्राप्यन्वीयेते इति दर्शितम्। एतेन किन्तु साक्षिप्रत्यक्षसाम्यमेव निरपेक्षत्वादिति न्यायविवरणस्थवाक्यशेषः। कर्तृनिरपेक्षत्वान्नित्यत्वेन साक्षिसाम्यमिति विवृतो भवति॥

ಸೂತ್ರದಲ್ಲಿರುವ ಯಾವ ಪದಗಳನ್ನು ವ್ಯಾಖ್ಯಾನ ಮಾಡಬೇಕೋ ಅವುಗಳನ್ನು ಉಲ್ಲೇಖ ಮಾಡುವ ಮೂಲಕ ಭಾಷ್ಯವನ್ನು ವ್ಯಾಖ್ಯಾನ ಮಾಡಲು 'ಅಸ್ಯ' ಇತ್ಯಾದಿ ಗ್ರಂಥವು ಹೊರಟಿದೆ. 'ಅಸ್ಯ' ಎಂಬ ಪದಕ್ಕೆ 'ಶ್ರುತ್ಯಾದೇಃ' ಎಂಬುದಾಗಿ ಅರ್ಥವನ್ನು ತಿಳಿಸಿದ್ದಾರೆ. ಇದರಿಂದ ಭಾಷ್ಯದ ಪ್ರಕಾರ 'ಅಸ್ಯಾಃ' ಎಂದಾಗಬೇಕಿತ್ತು? ಈ ಪ್ರಶ್ನೆಯನ್ನು ನಿರಾಕರಣೆ ಮಾಡಿದಂತಾಯಿತು. ಭಾಷ್ಯದಲ್ಲಿರುವ 'ಏವಂ' ಎಂಬ ಪದದ ಅರ್ಥವನ್ನು 'ಪಾಶುಪತಾದಿಸ್ಮೃತಿವತ್' ಎಂಬುದಾಗಿ ತಿಳಿಸಿದ್ದಾರೆ. 'ಶ್ರುತೇಃ' ಎಂಬ ಭಾಷ್ಯದಲ್ಲಿ ಶ್ರುತಿಸ್ಮೃತಿಗಳನ್ನು ಹೇಗೆ ವಿವಕ್ಷಿಸಲಾಯಿತೋ ಅದರಂತೆ ಇಲ್ಲಿಯೂ ಕೂಡ ಅನ್ವಯಾನುಗುಣವಾಗಿ ಶ್ರುತಿ ಹಾಗೂ ಸ್ಮೃತಿ ಪದಗಳನ್ನು ವಿವಕ್ಷಿಸಬೇಕು.

ಪಾಶುಪತಾದಿಸ್ಮೃತಿಗಳಂತೆ ಶ್ರುತ್ಯಾದಿಗಳಿಗೆ ಅಪ್ರಾಮಾಣ್ಯವನ್ನು ಕಲ್ಪನೆ ಮಾಡಬಾರದು ಎಂದು ಹೇಳಿದ ಅನಂತರ 'ಕಿಂತು ಸಾಕ್ಷಿಪ್ರತ್ಯಕ್ಷಸಾಮ್ಯಮೇವ ನಿರಪೇಕ್ಷತ್ವಾತ್' ಮತ್ತೇನೆಂದರೆ ಸಾಕ್ಷಿಪ್ರತ್ಯಕ್ಷಸಾಮ್ಯವನ್ನೇ ವೇದಕ್ಕೂ ಕೂಡ ಹೇಳಬೇಕು. ಏಕೆಂದರೆ ಯಾವುದನ್ನೂ ಕೂಡ ಇದು

ಅಪೇಕ್ಷಿಸುವುದಿಲ್ಲ ಎಂಬ ನ್ಯಾಯವಿವರಣದಲ್ಲಿರುವ ವಾಕ್ಯವನ್ನು ಶೇಷಪೂರಣ ಮಾಡಿಕೊಳ್ಳಬೇಕು. ಕರ್ತೃವಿನ ಅಪೇಕ್ಷೆ ಇಲ್ಲದ್ದರಿಂದ ನಿತ್ಯವಾಗಿರುವುದರಿಂದಲೇ ವೇದವು ಸಾಕ್ಷಿಪ್ರಾಮಾಣ್ಯಕ್ಕೆ ಸಮಾನವಾಗಿದೆ ಎಂಬುದಾಗಿ ಇದನ್ನು ವಿವರಿಸಿದಂತಾಯಿತು.

ಅನುವ್ಯಾಖ್ಯಾನ, ಅನುಭಾಷ್ಯ, ನ್ಯಾಯವಿವರಣಗಳ ಜೊತೆ ಭಾಷ್ಯಕ್ಕೆ ವ್ಯಾಖ್ಯಾನ

भावदीपः – वक्तृदोषेति।। 'नित्यत्वात्पुरुषोद्भवैः। उज्झितं सर्वदोषैश्च कथं नो मानतां व्रजेदित्यनुभाष्योक्तेरिति भावः। एतेन वेदा नित्यत्वान्मानमुत्तमम्' इत्यणुभाष्यमपि स्मृत्युपलक्षणतया व्याख्यातं ध्येयम्। श्रुतेरित्यादिन्यायविवरणस्थमाद्यं साम्यपदं संवादाधीनज्ञानप्रामाण्यरूपसाम्यपरम्। द्वितीयं तु तदनधीनसिद्धिक प्रामाण्यरूपसाम्यपरमिति प्रकारान्तरेण तद्वाक्यं विवृण्वानो भाष्यं व्याचष्टे – **भवेदिति।।**

ಟೀಕೆಯಲ್ಲಿ 'ವಕ್ತೃದೋಷನಿಬಂಧನಂ' ಎಂಬುದಾಗಿ ವಾಕ್ಯದ ಅಪ್ರಾಮಾಣ್ಯವು ವಕ್ತೃವಿನ ದೋಷಪ್ರಯುಕ್ತವಾಗಿ ಪ್ರಾಪ್ತವಾಗುತ್ತದೆಂದು ಹೇಳಿದ್ದಾರೆ. ಆದರೆ ವೇದವು ನಿತ್ಯವಾಗಿರುವುದರಿಂದ ಪುರುಷದೋಷಪ್ರಯುಕ್ತವಾದ ದೋಷವು ಪ್ರಾಪ್ತವಾಗುವುದಿಲ್ಲ. ಏಕೆಂದರೆ 'ನಿತ್ಯತ್ವಾತ್ ಪುರುಷೋದ್ಭವೈಃ ಉಜ್ಝಿತಂ ಸರ್ವದೋಷೈಶ್ಚ ಕಥಂ ನೋ ಮಾನತಾಂ ವ್ರಜೇತ್' 'ನಿತ್ಯವಾಗಿರುವುದರಿಂದ ಪುರುಷದೋಷಪ್ರಯುಕ್ತವಾದ ದೋಷವನ್ನು ವೇದದಲ್ಲಿ ಹೇಳಲು ಹೇಗೆ ಸಾಧ್ಯ?' ಎಂಬುದಾಗಿ ಅನುವ್ಯಾಖ್ಯಾನದಲ್ಲಿ ಹೇಳಿದ್ದಾರೆ. ಇದರಿಂದಲೇ 'ನಿತ್ಯತ್ವಾತ್ ಮಾನಮುತ್ತಮಂ' ನಿತ್ಯವಾಗಿರುವುದರಿಂದ ವೇದವು ಉತ್ತಮಪ್ರಮಾಣವಾಗಿದೆ ಎಂಬ ಅಣುಭಾಷ್ಯವನ್ನೂ ಕೂಡ ಸ್ಮೃತ್ಯುಪಲಕ್ಷಣವಾಗಿ ವ್ಯಾಖ್ಯಾನ ಮಾಡಿದಂತಾಯಿತು. 'ಶ್ರುತೇಃ' ಇತ್ಯಾದಿ ನ್ಯಾಯವಿವರಣದಲ್ಲಿರುವ ಮೊದಲನೆಯ ಸಾಮ್ಯಪದವು ಸಂವಾದಾಧೀನವಾದ ಜ್ಞಾನಪ್ರಾಮಾಣ್ಯದ ಸಾಮ್ಯವನ್ನು ಹೇಳುತ್ತಿದೆ. ಎರಡನೆಯ ಸಾಮ್ಯಪದವು ಸಂವಾದಾಧೀನವಾಗದ ಜ್ಞಾನಪ್ರಾಮಾಣ್ಯದ ಸಾಮ್ಯವನ್ನು ಹೇಳುತ್ತಿದೆ. ಹೀಗೆ ಮತ್ತೊಂದು ಪ್ರಕಾರದಿಂದ ನ್ಯಾಯವಿವರಣದ ವಾಕ್ಯವನ್ನು ವ್ಯಾಖ್ಯಾನ ಮಾಡುವವರಾಗಿ ಭಾಷ್ಯವನ್ನು ವ್ಯಾಖ್ಯಾನ ಮಾಡಲು 'ಭವೇತ್' ಇತ್ಯಾದಿ ಗ್ರಂಥವು ಹೊರಟಿದೆ.

ಉತ್ಪತ್ತೌಪ್ರಾಮಾಣ್ಯ ಸ್ವತಸ್ತ್ವವನ್ನು ದೇವತಾಧಿಕರಣದಲ್ಲಿ ಹೇಳಿದ್ದಾಗಿದೆ

ಭಾವದೀಪ: – ಸ್ವತಃ ಶಬ್ದಾರ್ಥಃ॥ **ಸಂವಾದನಿರಪೇಕ್ಷತಜ್ಞಾನಾದೇವೇತಿ ।।** ವೇದಾದಿಸ್ವರೂಪಜ್ಞಾನಾದೇವೇತ್ಯರ್ಥಃ। ಏತೇನ ನಿರಪೇಕ್ಷತ್ವಾದಿತ್ಯನ್ಯತ್ರೋಕ್ತೋ ಹೇತುಃ ಸಂವಾದನಿರಪೇಕ್ಷತ್ವಾದಿತಿ ವಿವೃತಃ॥ **ತತ್ತತ್ಸ್ವರೂಪೇತಿ ।।** ವೇದಾದಿಸ್ವರೂಪೇತ್ಯರ್ಥಃ। ಉತ್ಪತ್ತೌ ಪ್ರಾಮಾಣ್ಯಸ್ವತಸ್ತ್ವಸ್ಯ ದೇವತಾನಯೇ ಸ್ವತಃ ಪ್ರಾಮಾಣ್ಯಪ್ರಸಿದ್ಧೇಶ್ಚೇತಿ ಭಾಷ್ಯೇ ವ್ಯುತ್ಪಾದಿತತ್ವಾತ್ ಉತ್ತರಹೇತ್ವನುರೋಧೇನ ಜ್ಞಪ್ತೌ ಸ್ವತಸ್ತ್ವಪರತ್ವೇನೈವ ಭಾಷ್ಯಂ ವ್ಯಾಖ್ಯಾತಮ್।

'ಭವೇತ್' ಇತ್ಯಾದಿ ವಾಕ್ಯವು ಭಾಷ್ಯದಲ್ಲಿರುವ 'ಸ್ವತಃ' ಎಂಬ ಶಬ್ದದ ಅರ್ಥವನ್ನು ವಿವರಿಸುತ್ತಿದೆ. 'ಸಂವಾದನಿರಪೇಕ್ಷತಜ್ಞಾನಾದೇವ' ಎಂದು ಟೀಕೆಯಲ್ಲಿ ಹೇಳಿದ್ದಾರೆ. 'ವೇದಾದಿಸ್ವರೂಪಜ್ಞಾನದಿಂದಲೇ' ಎಂಬುದು ಇದರ ಅಭಿಪ್ರಾಯ. ಹೀಗೆ ಹೇಳಿದ್ದರಿಂದ 'ನಿರಪೇಕ್ಷತ್ವಾತ್' ಎಂಬುದಾಗಿ ಬೇರೆಡೆ ಹೇಳಿದ ಹೇತುವಿಗೆ ಸಂವಾದ ಪ್ರಮಾಣದ ಅಪೇಕ್ಷೆ ಇರುವುದಿಲ್ಲ ಎಂಬರ್ಥವನ್ನು ಹೇಳಿದಂತಾಯಿತು. 'ತತ್ಸ್ವರೂಪ' ಎಂಬುದಕ್ಕೆ 'ವೇದಾದಿ ಸ್ವರೂಪ' ಎಂದರ್ಥ. ಉತ್ಪತ್ತೌ ಪ್ರಾಮಾಣ್ಯಸ್ವತಸ್ತ್ವವನ್ನು ದೇವತಾಧಿಕರಣದ 'ಸ್ವತಃ ಪ್ರಾಮಾಣ್ಯಪ್ರಸಿದ್ದೇಶ್ಚ' ಎಂಬ ಭಾಷ್ಯದಲ್ಲಿ ವಿವರಿಸಿದ್ದಾಗಿದೆ. ಆದ್ದರಿಂದ ಪ್ರಕೃತ 'ಅನ್ಯಥಾ ಅನವಸ್ಥಿತೇಃ' ಎಂಬ ಭಾಷ್ಯದಲ್ಲಿ ಉಲ್ಲೇಖ ಮಾಡುವ ಮುಂದಿನ ಹೇತುವಿಗೆ ಅನುಕೂಲವಾಗಿ ಜ್ಞಪ್ತೌ ಸ್ವತಸ್ತ್ವ ಪರವಾಗಿ ಭಾಷ್ಯವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ.

ಕರಣಪ್ರಾಮಾಣ್ಯಕ್ಕೆ ಜ್ಞಪ್ತಿಯಲ್ಲಿ ಸ್ವತಸ್ತ್ವವನ್ನು ನಾವು ಅಂಗೀಕರಿಸಿಲ್ಲ, ಅಲ್ಲವೇ?

ಭಾವದೀಪ: – ನ ಚೈವಂ ಕರಣಪ್ರಾಮಾಣ್ಯಜ್ಞಪ್ತಿಸ್ತು ಪರತ ಏವೇಂದ್ರಿಯಲಿಙ್ಗಶಬ್ದಾನಾಂ ಯಥಾಯಥಮನುಮಾನಪ್ರತ್ಯಕ್ಷಾದಿವೇದ್ಯತ್ವಾತ್ ಯಥಾರ್ಥಜ್ಞಾನಸಾಧನತ್ವಸ್ಯ ತ್ವನುಮಾನವೇದ್ಯತ್ವಾದಿತಿ ಪದ್ಧತಿವಾಕ್ಯೇನ ಪ್ರತ್ಯಕ್ಷವಚ್ಚ ಪ್ರಾಮಾಣ್ಯಂ ಸ್ವತ ಏವಾಗಮಸ್ಯ ಹೀತ್ಯನುವ್ಯಾಖ್ಯಾನವ್ಯಾಖ್ಯಾವಸರೋಕ್ತೇನ ಕರಣಾನಾಂ ತು ಜ್ಞಪ್ತೌ ಸ್ವತಸ್ತ್ವಂ ನಾಙ್ಗೀಕ್ರಿಯತ ಏವೇತ್ಯಾದಿ ಸುಧಾವಾಕ್ಯೇನ ಚ ವಿರೋಧ ಇತಿ ವಾಚ್ಯಮ್।

ಪ್ರಶ್ನೆ – ಕರಣಪ್ರಾಮಾಣ್ಯಕ್ಕೆ ವ್ಯಕ್ತಿಯಲ್ಲಿ ಸ್ವತಸ್ತ್ವವಿಲ್ಲವೆಂದು ಪ್ರಮಾಣಪದ್ಧತಿಯಲ್ಲಿ ಹೇಳಿದ್ದಾರೆ. ಅದು ಹೀಗೆ – 'ಕರಣಪ್ರಾಮಾಣ್ಯಜ್ಞಪ್ತಿಸ್ತು ಪರತ ಏವೇಂದ್ರಿಯಲಿಂಗಶಬ್ದಾನಾಂ ಯಥಾಯಥಮನುಮಾನಪ್ರತ್ಯಕ್ಷಾದಿ ವೇದ್ಯತ್ವಾತ್'.

'ಕರಣಗಳ ಜ್ಞಾನಜನಕತ್ವ ಶಕ್ತಿಯೇ ಪ್ರಾಮಾಣ್ಯ ಜನನ ಶಕ್ತಿ ಎನಿಸುತ್ತದೆ. ಈ ಶಕ್ತಿಯು ಜ್ಞಾನ ಕರಣಗಳ ಕಾರಣದಿಂದ ಉಂಟಾಗುತ್ತದೆ. ಆದರೆ ಅಪ್ರಾಮಾಣ್ಯವನ್ನು ಹುಟ್ಟಿಸಲು ಬೇರೆ ಶಕ್ತಿಯ ಕರಣಗಳ ಕಾರಣಗಳಲ್ಲಿ ದೋಷವು ಇರುವುದರಿಂದ ಉಂಟಾಗುತ್ತದೆ. ಕರಣಗಳ ಪ್ರಾಮಾಣ್ಯ ಜ್ಞಪ್ತಿಯು ಬೇರೆ ಪ್ರಮಾಣದಿಂದ ಗ್ರಹಿಸಲ್ಪಡುತ್ತದೆ. ಏಕೆಂದರೆ ಇಂದ್ರಿಯಾದಿಗಳ ಸ್ವರೂಪವು ತಮ್ಮ ತಮ್ಮ ಉಚಿತವಾದ ಪ್ರಮಾಣಗಳಿಂದ ತಿಳಿಯಲ್ಪಡುತ್ತದೆ ಮತ್ತು ಅವುಗಳ ಯಥಾರ್ಥಜ್ಞಾನಸಾಧನತ್ವವು ಎಂದರೆ ಪ್ರಾಮಾಣ್ಯವು ಅನುಮಾನದಿಂದ ತಿಳಿಯಲ್ಪಡುತ್ತದೆ'.

ಪ್ರಮಾಣಪದ್ಧತಿಯಲ್ಲಿ ಮಾತ್ರ ಹೀಗೆ ಹೇಳಿದ್ದಲ್ಲ. 'ಪ್ರತ್ಯಕ್ಷವಚ್ಚ ಪ್ರಾಮಾಣ್ಯಂ ಸ್ವತ ಏವಾಗಮಸ್ಯ ಹಿ' ಎಂಬ ಅನುವ್ಯಾಖ್ಯಾನಕ್ಕೆ ವ್ಯಾಖ್ಯಾನ ಮಾಡುವ ಸಂದರ್ಭದಲ್ಲಿ ನ್ಯಾಯಸುಧೆಯಲ್ಲಿ ಹೀಗೆ ಹೇಳಿದ್ದಾರೆ– 'ಕರಣಾನಾಂ ತು ಜ್ಞಪ್ತೌ ಸ್ವತಸ್ತ್ವಂ ನಾಂಗೀಕ್ರಿಯತೇ ಏವ' 'ಜ್ಞಾನಕರಣಗಳಾದ ಇಂದ್ರಿಯಾದಿಗಳಿಗೆ ಜ್ಞಪ್ತಿಯಲ್ಲಿ ಸ್ವತಸ್ತ್ವವನ್ನು ಅಂಗೀಕಾರ ಮಾಡುವುದಿಲ್ಲ. ಏಕೆಂದರೆ ಕರಣಗಳ ಸ್ವರೂಪವು ಅವುಗಳ ಸ್ವಭಾವವನ್ನನುಸರಿಸಿ ಪ್ರತ್ಯಕ್ಷ ಮೊದಲಾದ ಪ್ರಮಾಣಗಳಿಂದ ತಿಳಿಯಲ್ಪಡುತ್ತದೆ. ಆದರೆ ಯಥಾರ್ಥಜ್ಞಾನಜನಕತ್ವರೂಪವಾದ ಪ್ರಾಮಾಣ್ಯವು ಅನುಮಾನದಿಂದ ತಿಳಿಯುತ್ತದೆ'. ಹೀಗಿರುವಾಗ ಕರಣಪ್ರಾಮಾಣ್ಯಕ್ಕೆ ಸ್ವತಸ್ತ್ವವನ್ನು ಹೇಗೆ ಹೇಳುತ್ತೀರಿ?

ವಿವರಣೆ – ಪ್ರಾಮಾಣ್ಯಕ್ಕೆ ಸ್ವತಸ್ತ್ವವನ್ನು ಒಪ್ಪಿದರೂ ಕೂಡ ಕರಣಪ್ರಾಮಾಣ್ಯ-ವಿಷಯದಲ್ಲಿ ಅಪವಾದವನ್ನು ಅಂಗೀಕರಿಸಲಾಗಿದೆ. ಜ್ಞಾನದಲ್ಲಿರುವ ಪ್ರಾಮಾಣ್ಯಕ್ಕೆ ಉತ್ಪತ್ತಿಯಲ್ಲಿ ಹಾಗೂ ಜ್ಞಪ್ತಿಯಲ್ಲಿ ಸ್ವತಸ್ತ್ವವಿದೆ. ಆದರೆ ಜ್ಞಾನ ಕರಣಗಳಲ್ಲಿರುವ ಪ್ರಾಮಾಣ್ಯಕ್ಕೆ ಉತ್ಪತ್ತಿಯಲ್ಲಿ ಮಾತ್ರ ಸ್ವತಸ್ತ್ವವಿದೆ, ಜ್ಞಪ್ತಿಯಲ್ಲಿ ಸ್ವತಸ್ತ್ವವಿಲ್ಲ. ಜ್ಞಾನಕರಣಗಳಾಗಿರುವ ಇಂದ್ರಿಯ, ಅನುಮಾನ ಹಾಗೂ ಶಬ್ದಗಳಿಗೆ ಪ್ರಾಮಾಣ್ಯವೆಂದರೆ ಯಥಾರ್ಥಜ್ಞಾನಜನಕತ್ವ ಎಂದರ್ಥ. ಇಂತಹ ಪ್ರಾಮಾಣ್ಯಕ್ಕೆ ಜ್ಞಪ್ತಿಯಲ್ಲಿ ಸ್ವತಸ್ತ್ವವೆಂದರೆ ಕರಣಗಳು ಯಾವ ಪ್ರಮಾಣದಿಂದ ತಿಳಿಯಲ್ಪಡುತ್ತವೋ ಅದೇ ಪ್ರಮಾಣದಿಂದ ಅವುಗಳ ಪ್ರಾಮಾಣ್ಯವೂ ಕೂಡ ತಿಳಿಯಬೇಕು ಎಂದು. ಆದರೆ ಇದು ಕೂಡುವುದಿಲ್ಲ. ಯಾವ ಪ್ರಮಾಣಗಳಿಂದ ಕರಣಗಳು ತಿಳಿಯಲ್ಪಡುತ್ತವೋ ಅದಕ್ಕಿಂತ ಬೇರೆ ಪ್ರಮಾಣಗಳಿಂದಲೇ ಅವುಗಳಲ್ಲಿರುವ ಪ್ರಾಮಾಣ್ಯವು ತಿಳಿಯಲ್ಪಡುತ್ತವೆ. ಉದಾ – ಚಕ್ಷುರಾದಿ ಇಂದ್ರಿಯಗಳೆಲ್ಲವೂ ಅತೀಂದ್ರಿಯವಾಗಿವೆ. ಹಾಗಾಗಿ ಅನುಮಾನದಿಂದಲೇ ಚಕ್ಷುರಾದಿ ಇಂದ್ರಿಯಗಳನ್ನು ನಾವು ತಿಳಿಯಬೇಕು. ದೇವದತ್ತನಿಗೆ ರೂಪಜ್ಞಾನ ಬರುತ್ತಿರುವುದರಿಂದ ಚಕ್ಷುರಿಂದ್ರಿಯವಿದೆ.

ಶಬ್ದಗ್ರಹಣ ಮಾಡುತ್ತಿರುವುದರಿಂದ ಶ್ರೋತ್ರೇಂದ್ರಿಯವಿದೆ ಎಂಬುದಾಗಿ ವಿಷಯಪ್ರತ್ಯಕ್ಷದಿಂದ ಬಾಹ್ಯೇಂದ್ರಿಯಗಳನ್ನು ಅನುಮಾನದ ಮೂಲಕ ತಿಳಿಯಬೇಕು. ಅದರಂತೆ ಮನಸ್ಸು ಎಂಬ ಇಂದ್ರಿಯವು ಸಾಕ್ಷೀಂದ್ರಿಯದಿಂದ ತಿಳಿಯುತ್ತದೆ. ಬೇರೆ ಜ್ಞಾನಕರಣಗಳಾದ ಲಿಂಗ ಹಾಗೂ ಶಬ್ದಗಳು ಚಕ್ಷುರಿಂದ್ರಿಯದಿಂದ ಹಾಗೂ ಶ್ರೋತ್ರೇಂದ್ರಿಯದಿಂದ ತಿಳಿಯಲ್ಪಡುತ್ತವೆ. ಪ್ರತ್ಯಕ್ಷ, ಲಿಂಗ, ಶಬ್ದ ಎಂಬ ಮೂರು ಜ್ಞಾನಕರಣಗಳ ಯಥಾರ್ಥಜ್ಞಾನಜನಕತ್ವರೂಪವಾದ ಪ್ರಾಮಾಣ್ಯವು ಅನುಮಾನದಿಂದ ಮಾತ್ರ ತಿಳಿಯುತ್ತದೆ. ಈ ಅನುಮಾನವು ಹೀಗಿದೆ– ಜ್ಞಾನಕರಣವು ಯಥಾರ್ಥಜ್ಞಾನಜನಕವಾಗಿದೆ, ಈ ಕರಣದಿಂದ ಹುಟ್ಟಿರುವ ಜ್ಞಾನವು ಇನ್ನೊಂದು ಯಥಾರ್ಥಜ್ಞಾನದ ಸಂವಾದವನ್ನು ಪಡೆದಿರುವುದರಿಂದ ಎಂದು. ಜ್ಞಾನಕರಣವನ್ನು ಗ್ರಹಿಸುವ ಪ್ರಮಾಣವೇ ಬೇರೆ, ಅವುಗಳ ಪ್ರಾಮಾಣ್ಯವನ್ನು ಗ್ರಹಿಸುವ ಅನುಮಾನವೇ ಬೇರೆ. ಆದ್ದರಿಂದ ಕರಣಗಳಲ್ಲಿರುವ ಪ್ರಾಮಾಣ್ಯಕ್ಕೆ ಜ್ಞಪ್ತಿಯಲ್ಲಿ ಸ್ವತಸ್ತ್ವವಿಲ್ಲವೆಂದು ಅಂಗೀಕರಿಸಬೇಕು.

ವಿವಕ್ಷಾಭೇದದಿಂದ ಜ್ಞಪ್ತಿಯಲ್ಲೂ ಸ್ವತಸ್ತ್ವ

ಭಾವದೀಪ: – इहापि प्रामाण्यग्रहे संवादानपेक्षतायामेव तात्पर्येण करणस्वरूपग्राहकेणैव तत्प्रामाण्यग्रह इत्यत्र तात्पर्याभावात् । यद्वा अन्यत्र शक्तिशक्तिम तोर्भेदमुपेत्य स्वरूपग्राह्यत्वरूपपरतस्त्वोक्तावपि इहाभेदमुपेत्य स्वरूपग्राहकमेव ज्ञानजनकशक्तिग्राहकम् । तदेव च प्रमाजनकशक्तिरूपप्रामाण्यग्राहकमिति भावेन संवादनिरपेक्षतज्ज्ञानादेवेत्याद्युक्तम् । ज्ञानजनकशक्तिग्राहकमात्रग्राह्यत्वरूपप्रमाजनन-शक्तिरूपप्रामाण्यस्वतस्त्वं तु ज्ञनजनकत्वं येन गृह्यते तत एव यथार्थज्ञानजनकत्वरूप-प्रामाण्यस्य तदीयस्य ग्राह्यत्वरूपं स्वतस्त्वमिति सुधोक्त्यानुमतमेवेतिभावः।

ಉತ್ತರ – ಮೇಲಿನ ಪ್ರಶ್ನೆಗೆ ಅವಕಾಶವಿಲ್ಲ. ಏಕೆಂದರೆ ಪ್ರಕೃತದಲ್ಲೂ ಕೂಡ ನಾವು ಪ್ರಾಮಾಣ್ಯವನ್ನು ಗ್ರಹಿಸಲು ಸಂವಾದದ ಅಪೇಕ್ಷೆ ಇರುವುದಿಲ್ಲ ಎಂದಷ್ಟೇ ತಾತ್ಪರ್ಯವನ್ನು ಹೊಂದಿದ್ದೇವೆ. ಇದನ್ನು ಬಿಟ್ಟು ಕರಣಸ್ವರೂಪಗ್ರಾಹಕದಿಂದಲೇ ಕರಣದಲ್ಲಿರುವ ಪ್ರಾಮಾಣ್ಯವು ತಿಳಿಯಲ್ಪಡುತ್ತದೆ ಎಂಬುದರಲ್ಲಿ ನಾವು ತಾತ್ಪರ್ಯವನ್ನು ಹೊಂದಿರುವುದಿಲ್ಲ.

ಅಥವಾ ಬೇರೆಡೆ ಶಕ್ತಿ ಹಾಗೂ ಶಕ್ತಿಯುಳ್ಳವುಗಳಿಗೆ ಭೇದವನ್ನು ಅಂಗೀಕಾರ ಮಾಡಿ ಸ್ವರೂಪಗ್ರಾಹಕದಿಂದ ಅಗ್ರಾಹ್ಯತ್ವ ರೂಪದಿಂದ ಪರತಸ್ತ್ವವನ್ನು ಹೇಳಿದ್ದರೂ ಕೂಡ ಪ್ರಕೃತದಲ್ಲಿ

ಅಭೇದವನ್ನು ಒಪ್ಪಿ ಸ್ವರೂಪಗ್ರಾಹಕದಿಂದಲೇ ಜ್ಞಾನಜನಕಶಕ್ತಿಗ್ರಾಹಕತ್ವವನ್ನು ಅಂಗೀಕರಿಸಲಾಗಿದೆ. ಇದೇ ಪ್ರಮಾ ಜನಕಶಕ್ತಿ ಎಂಬ ಪ್ರಾಮಾಣ್ಯಗ್ರಾಹಕ ಎನಿಸುತ್ತದೆ. ಈ ಅಭಿಪ್ರಾಯದಿಂದ ಗ್ರಂಥದಲ್ಲಿ 'ಸಂವಾದಿನಿರಪೇಕ್ಷತಜ್ಞಾನಾದೇವ' ಎಂದು ಹೇಳಿದ್ದಾರೆ. ಜ್ಞಾನಜನಕಶಕ್ತಿಗ್ರಾಹಕ ಮಾತ್ರಗ್ರಾಹ್ಯತ್ವವೆಂಬ ಪ್ರಮಾಜನನಶಕ್ತಿರೂಪವಾದ ಪ್ರಾಮಾಣ್ಯಸ್ವತಸ್ತ್ವ ಎಂದರೆ ಜ್ಞಾನಜನಕತ್ವವು ಯಾವುದರಿಂದ ಸಿದ್ಧವಾಗಿದೆಯೋ ಅದರಿಂದಲೇ ಅವುಗಳಿಗಿರುವ ಯಥಾರ್ಥಜ್ಞಾನಜನಕತ್ವರೂಪವಾದ ಪ್ರಾಮಾಣ್ಯವೂ ಕೂಡ ಗೃಹೀತವಾಗುತ್ತದೆ. ಆದ್ದರಿಂದ ಜ್ಞಾನಕರಣಗಳಿಗೂ ಕೂಡ ಜ್ಞಪ್ತಿಯಲ್ಲಿ ಸ್ವತಸ್ತ್ವವನ್ನು ಪ್ರಕಾರಾಂತರದಿಂದ ಒಪ್ಪಬಹುದು. ಹಿಂದೆ ಪ್ರಾಮಾಣ್ಯಕ್ಕೆ ಆಶ್ರಯವಾದದ್ದು ಯಾವುದರಿಂದ ಗೃಹೀತವಾಗಿದೆಯೋ ಅದರಿಂದಲೇ ಪ್ರಾಮಾಣ್ಯವು ಗೃಹೀತವಾಗುತ್ತದೆಂದು ಹೇಳಿದರೆ ಪ್ರಾಮಾಣ್ಯಕ್ಕೆ ಜ್ಞಪ್ತಿಯಲ್ಲಿ ಸ್ವತಸ್ತ್ವವನ್ನು ಹೇಳಲಾಗಿತ್ತು. ಅದರ ಪ್ರಕಾರ ಕರಣಪ್ರಾಮಾಣ್ಯಕ್ಕೆ ಜ್ಞಪ್ತಿಯಲ್ಲಿ ಸ್ವತಸ್ತ್ವವನ್ನು ಹೇಳಲು ಸಾಧ್ಯವಿಲ್ಲ. ಏಕೆಂದರೆ ಪ್ರಾಮಾಣ್ಯಕ್ಕೆ ಆಶ್ರಯವಾದ ಇಂದ್ರಿಯಾದಿಗಳನ್ನು ಗ್ರಹಿಸುವ ಪ್ರಮಾಣವೇ ಬೇರೆ, ಅವುಗಳಲ್ಲಿರುವ ಪ್ರಾಮಾಣ್ಯವನ್ನು ಗ್ರಹಿಸುವ ಪ್ರಮಾಣವೇ ಬೇರೆ ಎಂದು. ಆದರೆ ಪ್ರಕೃತ ಬೇರೆ ರೀತಿಯಲ್ಲಿಯೇ ನಾವು ಹೇಳುತ್ತಿರುವುದರಿಂದ ಕರಣಪ್ರಾಮಾಣ್ಯಕ್ಕೆ ಜ್ಞಪ್ತಿಯಲ್ಲಿ ಸ್ವತಸ್ತ್ವವನ್ನು ಹೇಳಬಹುದು. ಹೀಗೆ ನ್ಯಾಯಸುಧಾದಲ್ಲಿ ಜ್ಞಪ್ತೌ ಸ್ವತಸ್ತ್ವವೂ ಕೂಡ ಅಥವಾ ಎಂಬ ಶಬ್ದದಿಂದ ಉಪಪಾದನೆ ಮಾಡಿದ್ದಾರೆ.

ವಿವರಣೆ – ಪ್ರಾಮಾಣ್ಯಸ್ವತಸ್ತ್ವವು ಒಟ್ಟು ನಾಲ್ಕು ವಿಧ. ೧. ಜ್ಞಾನ ಪ್ರಾಮಾಣ್ಯದಲ್ಲಿ ಉತ್ಪತ್ತೌ ಸ್ವತಸ್ತ್ವ. ೨. ಕರಣ ಪ್ರಾಮಾಣ್ಯದಲ್ಲಿ ಉತ್ಪತ್ತೌ ಸ್ವತಸ್ತ್ವ. ೩. ಜ್ಞಾನಪ್ರಮಾಣ್ಯದಲ್ಲಿ ಜ್ಞಪ್ತೌ ಸ್ವತಸ್ತ್ವ. ೪. ಕರಣಪ್ರಾಮಾಣ್ಯದಲ್ಲಿ ಜ್ಞಪ್ತೌ ಸ್ವತಸ್ತ್ವ ಎಂದು. ಈ ನಾಲ್ಕರಲ್ಲಿ ಮೊದಲಿನ ಮೂರನ್ನು ನಾವು ಅಂಗೀಕರಿಸಿದ್ದೇವೆ. ಕೊನೆಯದಾದ ಕರಣ ಪ್ರಾಮಾಣ್ಯದ ಜ್ಞಪ್ತಿಯಲ್ಲಿ ಸ್ವತಸ್ತ್ವವನ್ನು ಅಂಗೀಕರಿಸಬೇಕೋ, ಬೇಡವೋ? ಎಂಬುದು ಇಲ್ಲಿ ಮಾಡಿರುವ ವಿಚಾರ.

ಇದನ್ನು ತಿಳಿಯಲು ಪೂರಕವಾದ ಮೂರು ಬಗೆಯ ಸ್ವತಸ್ತ್ವಗಳ ಬಗ್ಗೆ ಸಂಕ್ಷೇಪವಾಗಿ ಹೀಗೆ ತಿಳಿಯಬೇಕು – ಮೊದಲನೆಯ ಜ್ಞಾನಪ್ರಾಮಾಣ್ಯದ ಉತ್ಪತ್ತೌ ಸ್ವತಸ್ತ್ವ ಎಂಬುದರ ಅಭಿಪ್ರಾಯ ಹೀಗಿದೆ – ಜ್ಞಾನದ ಪ್ರಾಮಾಣ್ಯವೆಂದರೆ ಯಥಾರ್ಥವಾಗಿರುವಿಕೆ ಎಂದರ್ಥ. ವಸ್ತು ಇದ್ದಂತೆ ಗ್ರಹಿಸುವುದನ್ನೇ ಜ್ಞಾನದ ಪ್ರಾಮಾಣ್ಯ ಎನ್ನುತ್ತಾರೆ. ಜ್ಞಾನ ಹುಟ್ಟಿದಾಗಲೇ ಅದರಲ್ಲಿರುವ ಯಥಾರ್ಥತ್ವವೆಂಬ ಪ್ರಾಮಾಣ್ಯವೂ ಕೂಡ ಹುಟ್ಟುತ್ತದೆ. ಇಲ್ಲಿ ಸ್ವತಃ ಎಂಬ ಪದಕ್ಕೆ ಯಾವ ಕಾರಣಸಮುದಾಯವನ್ನು ಅವಲಂಬಿಸಿ ಜ್ಞಾನವು ಹುಟ್ಟಿದೆಯೋ ಅದಕ್ಕಿಂತ

ಬೇರೆ ಕಾರಣವನ್ನು ಅಪೇಕ್ಷೆ ಪಡದೇ ಪ್ರಾಮಾಣ್ಯವು ಹುಟ್ಟಿದೆ ಎಂದರ್ಥ. ಎದುರಿನಲ್ಲಿ ಘಟವಿದ್ದಾಗ 'ಅಯಂ ಘಟಃ' ಎಂಬ ಜ್ಞಾನವು ನಮಗೆ ಬರುತ್ತದೆ. ಈ ಜ್ಞಾನಕ್ಕೆ ಜನಕವಾದದ್ದು ಘಟ ಮತ್ತು ಚಕ್ಷುರಿಂದ್ರಿಯಕ್ಕೂ ಇರುವ ಸನ್ನಿಕರ್ಷ, ಹಾಗೂ ಚಕ್ಷುರಿಂದ್ರಿಯಕ್ಕೂ ಮನಸ್ಸಿಗೂ ಇರುವ ಸನ್ನಿಕರ್ಷ ಇವೇ ಮೊದಲಾದವು. 'ಅಯಂ ಘಟಃ' ಎಂಬ ಜ್ಞಾನದಲ್ಲಿರುವ ಪ್ರಾಮಾಣ್ಯವೂ ಕೂಡ ಈ ಕಾರಣವನ್ನು ಬಿಟ್ಟು ಬೇರೆ ಕಾರಣವನ್ನು ಅಪೇಕ್ಷಿಸುವುದಿಲ್ಲ. ಆದ್ದರಿಂದಲೇ ಜ್ಞಾನಪ್ರಾಮಾಣ್ಯಕ್ಕೆ ಉತ್ಪತ್ತಿಯಲ್ಲಿ ಸ್ವತಸ್ತ್ವವಿದೆ ಎಂದು ತತ್ವವಾದಿಗಳಾದ ನಾವು ಅಂಗೀಕರಿಸಿದ್ದೇವೆ.

ಕರಣಪ್ರಾಮಾಣ್ಯದಲ್ಲಿರುವ ಉತ್ಪತ್ತೌ ಸ್ವತಸ್ತ್ವವನ್ನು ಹೀಗೆ ತಿಳಿಯಬೇಕು– ಜ್ಞಾನಕ್ಕೆ ಕರಣವಾದದ್ದು ಪ್ರತ್ಯಕ್ಷ, ಅನುಮಾನ ಹಾಗೂ ಆಗಮ. ಇವುಗಳಲ್ಲಿರುವ ಪ್ರಾಮಾಣ್ಯದಲ್ಲಿ ಉತ್ಪತ್ತೌ ಸ್ವತಸ್ತ್ವವಿದೆ. ಅಂದರೆ ಜ್ಞಾನವನ್ನು ಹುಟ್ಟಿಸುವ ಕರಣಗಳಿಗೆ ಯಾವ ಸಾಮರ್ಥ್ಯವಿದೆಯೋ ಅದರಿಂದಲೇ ಜ್ಞಾನಪ್ರಾಮಾಣ್ಯವೂ ಕೂಡ ಹುಟ್ಟುತ್ತದೆ ಎಂದಭಿಪ್ರಾಯ. ಇಲ್ಲಿರುವ ಪ್ರಾಮಾಣ್ಯಶಬ್ದಕ್ಕೆ ಯಥಾರ್ಥಜ್ಞಾನಸಾಧನತ್ವ ಎಂದರ್ಥ. ಯಥಾರ್ಥಜ್ಞಾನಕ್ಕೆ ಕಾರಣವಾಗಿರಬೇಕು ಎಂಬುದು ಇದರ ಅಭಿಪ್ರಾಯ. ಜ್ಞಾನದ ಕರಣಗಳು ಯಾವ ಸಾಮರ್ಥ್ಯದಿಂದ ಜ್ಞಾನವನ್ನು ಹುಟ್ಟಿಸುತ್ತವೋ ಅದೇ ಸಾಮರ್ಥ್ಯದಿಂದಲೇ ಅದರಲ್ಲಿರುವ ಪ್ರಾಮಾಣ್ಯವನ್ನೂ ಕೂಡ ಹುಟ್ಟಿಸುತ್ತವೆ. ಅಥವಾ ಜ್ಞಾನಕರಣಗಳಿಗೆ ಜ್ಞಾನವನ್ನು ಉಂಟು ಮಾಡುವ ಸಾಮರ್ಥ್ಯವೇ ಜ್ಞಾನಪ್ರಾಮಾಣ್ಯವನ್ನು ಉಂಟು ಮಾಡುವ ಸಾಮರ್ಥ್ಯ ಎನಿಸಿವೆ. ಇದನ್ನು ಕರಣಪ್ರಾಮಾಣ್ಯದಲ್ಲಿ ಇರುವ ಉತ್ಪತ್ತೌ ಸ್ವತಸ್ತ್ವ ಎಂದು ಕರೆಯುತ್ತಾರೆ.

ಮೂರನೆಯದ್ದು ಜ್ಞಾನಪ್ರಾಮಾಣ್ಯದಲ್ಲಿರುವ ಜ್ಞಪ್ತೌ ಸ್ವತಸ್ತ್ವ– ಜ್ಞಾನದಲ್ಲಿರುವ ಯಾಥಾರ್ಥ್ಯವೆಂಬ ಪ್ರಾಮಾಣ್ಯಕ್ಕೆ ಜ್ಞಪ್ತಿಯಲ್ಲಿ ಸ್ವತಸ್ತ್ವ ಎಂದರೆ ಪ್ರಾಮಾಣ್ಯಕ್ಕೆ ಆಶ್ರಯವಾದ ಜ್ಞಾನವನ್ನು ಗ್ರಹಿಸುವ ಸಾಮಗ್ರಿಯಿಂದ ಮಾತ್ರ ಗ್ರಹಿಸಲ್ಪಡಬೇಕು ಎಂಬುದು ಇದರ ಅರ್ಥ. ಉದಾ – 'ಅಯಂ ಘಟಃ' ಎಂಬುದಾಗಿ ಜ್ಞಾನವು ಬರುತ್ತದೆ. ಈ ಜ್ಞಾನವನ್ನು 'ಅಹಂ ಘಟಂ ಜಾನಾಮಿ' ಎಂಬ ಸಾಕ್ಷೀಂದ್ರಿಯವು ಗ್ರಹಿಸುತ್ತದೆ. ಈ ಸಾಕ್ಷೀಂದ್ರಿಯವು 'ಅಯಂ ಘಟಃ' ಎಂಬ ಜ್ಞಾನವನ್ನು ಮಾತ್ರ ಗ್ರಹಿಸುವುದಲ್ಲ. ಅದರಲ್ಲಿರುವ ಪ್ರಾಮಾಣ್ಯವನ್ನೂ ಕೂಡ ಗ್ರಹಿಸುತ್ತದೆ ಎಂಬುದು ಜ್ಞಾನ ಪ್ರಾಮಾಣ್ಯದಲ್ಲಿರುವ ಜ್ಞಪ್ತೌ ಸ್ವತಸ್ತ್ವ ಎಂಬುದರ ಅಭಿಪ್ರಾಯವಾಗಿದೆ.

(೪) ಆದರೆ ಇಂದ್ರಿಯಗಳಿಗೆ ಜ್ಞಪ್ತಿಯಲ್ಲಿ ಸ್ವತಸ್ತ್ವವನ್ನು ಅಂಗೀಕಾರ ಮಾಡಿಲ್ಲ ಎಂಬುದನ್ನು ಹಿಂದೆ ವಿವರಿಸಿದಂತೆ ತಿಳಿಯಬೇಕು.

ನಿಃಶಂಕಾ ಪ್ರವೃತ್ತಿಗಾಗಿ ಪ್ರಾಮಾಣ್ಯನಿಶ್ಚಯವು ಅನಿವಾರ್ಯ

ಭಾವದೀಪಃ – प्रामाण्यनिश्चयं विनापि प्रवृत्तिदृष्ट्या प्रमाण्यजिज्ञासोपपत्तौ नानवस्थेति भावेन शङ्कते॥ **फलेति**।। **सापीति**।। तथा च बह्वायाससाध्ये कर्मणि निश्शङ्कं प्रवृत्तये निश्चयोऽपेक्षित एवेत्यनवस्थैवेतिभावः॥

ಪ್ರಾಮಾಣ್ಯದಲ್ಲಿ ನಿಶ್ಚಯವಿಲ್ಲದಿದ್ದರೂ ಕೂಡ ಪ್ರವೃತ್ತಿ ಮಾಡುವುದು ಕೃಷಿಕರಲ್ಲಿ ಕಂಡಿದೆ. ಆದ್ದರಿಂದ ಪ್ರಾಮಾಣ್ಯ ಜಿಜ್ಞಾಸೆಯನ್ನು ಮಾಡಿದಾಗ ಅನವಸ್ಥಾ ದೋಷವು ಹೇಗೆ ಬರುತ್ತದೆ. ಈ ಅಭಿಪ್ರಾಯದಿಂದ 'ಫಲಸಂದೇಹೇಪಿ' ಎಂದು ಆಶಂಕೆ ಮಾಡಲಾಗಿದೆ. 'ಸಾಪಿ' ಎಂಬ ವಾಕ್ಯಕ್ಕೆ 'ಬಹಳ ಆಯಾಸಸಾಧ್ಯವಾದ ಕರ್ಮದಲ್ಲಿ ನಿಶ್ಶಂಕಾ ಪ್ರವೃತ್ತಿಯನ್ನು ಮಾಡುವುದಕ್ಕಾಗಿ ಪ್ರಾಮಾಣ್ಯನಿಶ್ಚಯವು ಇರಲೇಬೇಕು. ಆದ್ದರಿಂದ ಅನವಸ್ಥಾ ದೋಷವು ಬಂದೇ ಬರುತ್ತದೆ' ಎಂಬುದು ಅಭಿಪ್ರಾಯ.

ಸಂವಾದಗಳು ಅನ್ಯತ್ರ ಉಪಕ್ಷೀಣ

ಭಾವದೀಪಃ – **निरस्तप्राय इति**।। प्रामाण्याग्रहणे शङ्काया आवश्यकत्वादिति शेषः॥ **स्वतस्त्वेति** ।। बुद्धिदोषनिरासमात्रकारणत्वाद्युक्तीनामिति तत्वनिर्णयोक्त्या संवादकस्यान्यत्रोपयोगे तदनपेक्षज्ञानग्राह्यत्वस्य प्राप्तेः स्वतस्त्व प्राप्तिरित्यर्थः॥ **शङ्काभावेपीति**।। अप्रामाण्यशङ्कानिवृत्तावपीत्यर्थः।

'ನಿರಸ್ತಪ್ರಾಯಃ' ಎಂದು ಟೀಕೆಯಲ್ಲಿ ಹೇಳಿದ್ದಾರೆ. ಪ್ರಾಮಾಣ್ಯವನ್ನು ಗ್ರಹಿಸದೇ ಇದ್ದರೆ ಶಂಕೆಯು ಬಂದೇ ಬರುತ್ತದೆ ಎಂಬುದನ್ನು ಇಲ್ಲಿ ಶೇಷಪೂರಣ ಮಾಡಿಕೊಳ್ಳಬೇಕು. 'ಸ್ವತಸ್ತ್ವಪ್ರಾಪ್ತಿಃ' ಎಂದು ಗ್ರಂಥದಲ್ಲಿ ಹೇಳಿದ್ದಾರೆ. ಬುದ್ಧಿದೋಷ ನಿರಾಸಕ್ಕೆ ಮಾತ್ರ ಕಾರಣತ್ವಾದ್ಯುಕ್ತಿಗಳು ಉಪಯುಕ್ತವಾಗುತ್ತವೆ ಇತ್ಯಾದಿಯಾಗಿ ತತ್ವನಿರ್ಣಯದಲ್ಲಿ ಹೇಳಿದ್ದಾರೆ. ಆದ್ದರಿಂದ ಸಂವಾದಕಗಳೆಲ್ಲವೂ ಅನ್ಯತ್ರ ಉಪಕ್ಷೀಣವಾಗುವುದರಿಂದ ಪ್ರಾಮಾಣ್ಯಕ್ಕೆ ಅವುಗಳ ಅಪೇಕ್ಷೆ ಇರುವುದಿಲ್ಲ. ಜ್ಞಾನಗ್ರಾಹಕಮಾತ್ರಗ್ರಾಹ್ಯತ್ವವು ಸಿದ್ಧವಾಗುವುದರಿಂದ ಸ್ವತಸ್ತ್ವವು ಪ್ರಾಪ್ತವಾಗುತ್ತದೆಂಬುದು ಇದರ ಅಭಿಪ್ರಾಯ. 'ಶಂಕಾಭಾವೇಪಿ' ಎಂದರೆ 'ಅಪ್ರಾಮಾಣ್ಯಶಂಕೆಯು ಪರಿಹಾರವಾದರೂ ಕೂಡ' ಎಂದರ್ಥ.

ಪ್ರಾಮಾಣ್ಯಕ್ಕೆ ಪರತಸ್ತ್ವ ನಿರಾಕರಣೆ

ಭಾವದೀಪ: – ननु यथा विसंवादादिरूपबाधकस्य प्रामाण्यशङ्कानिरासाप्रामाण्य-ज्ञानयोः व्यापारस्तदन्वय व्यतिरेकानुविधायित्वहेतुना कल्प्यते। तथेहापि तेनैव हेतुना कल्प्यतामिति शङ्कते॥ **बाधकवदिति**।। बाधकेऽव्यभिचरितान्वयव्यतिरेकाभ्यां तथा कल्पनेऽपि नेह तथा। सुखादिज्ञाने स्वत एव निवृत्ताप्रामाण्यशङ्कस्य प्रामाण्यज्ञानोदयेन व्यतिरेकव्यभिचारादिति भावेनाह – **अप्रामाण्येति**।। अप्रामाण्यज्ञप्तौ बाधकस्य व्यतिरेकव्यभिचारो नेत्याह – **बाधकेनेति**।। **उक्तेति**।। अनवस्थारूपेत्यर्थः॥ **अनुकूलेति**।। अस्तु संशयविषयत्वं मास्तु परतो ज्ञेयत्वमित्यत्र बाधकाभावादिति भावः।

ವಿಸಂವಾದ ಮೊದಲಾದ ಬಾಧಕವು ಪ್ರಾಮಾಣ್ಯಶಂಕೆಯನ್ನು ನಿರಾಸ ಮಾಡುವುದಷ್ಟೇ ಅಲ್ಲದೇ ಅಪ್ರಾಮಾಣ್ಯ ಜ್ಞಾನವನ್ನು ಹುಟ್ಟಿಸುವುದರಲ್ಲೂ ಕೂಡ ವ್ಯಾಪಾರವುಳ್ಳದ್ದಾಗಿದೆ ಎಂಬುದನ್ನು 'ತದನ್ವಯವ್ಯತಿರೇಕ ಅನುವಿಧಾಯಿತ್ವ' ಎಂಬ ಹೇತುವಿನಿಂದ ಕಲ್ಪನೆ ಮಾಡಲಾಗುತ್ತದೆ. ಅದರಂತೆ ಪ್ರಕೃತದಲ್ಲೂ ಕೂಡ 'ತದನ್ವಯವ್ಯತಿರೇಕ ಅನುವಿಧಾಯಿತ್ವ' ಎಂಬ ಹೇತುವಿನಿಂದ ಸಂವಾದವು ಅಪ್ರಾಮಾಣ್ಯಶಂಕೆಯ ನಿವೃತ್ತಿ ಹಾಗೂ ಪ್ರಾಮಾಣ್ಯ ನಿಶ್ಚಯ ಎಂಬೆರಡು ಕಾರ್ಯಗಳಿಗೆ ಕಾರಣವಾಗಲಿ ಎಂಬ ಆಶಂಕೆಯನ್ನು 'ಬಾಧಕವತ್' ಎಂಬುದರಿಂದ ಹೇಳಿರುತ್ತಾರೆ.

ಬಾಧಕದಲ್ಲಿ ಅವ್ಯಭಿಚರಿತವಾದ ಅನ್ವಯವ್ಯತಿರೇಕವೆಂಬ ಕಾರಣತ್ವವಿದೆ. ಆದ್ದರಿಂದ ಅಲ್ಲಿ ಎರಡು ಕಾರ್ಯಗಳಿಗೆ ಕಾರಣತ್ವವನ್ನು ಒಪ್ಪುವುದು ಅನಿವಾರ್ಯ. ಪ್ರಕೃತದಲ್ಲಿ ಅವ್ಯಭಿಚರಿತವಾದ ಅನ್ವಯ ವ್ಯತಿರೇಕಗಳು ಇರುವುದಿಲ್ಲ. ಏಕೆಂದರೆ ಸುಖಜ್ಞಾನವು ಬಂದಾಗ ಅದರಲ್ಲಿ ಅಪ್ರಾಮಾಣ್ಯಸಂಶಯವೇ ಬರುತ್ತಿಲ್ಲ. ಅಂತಹ ಜ್ಞಾನದಲ್ಲಿ ಪ್ರಾಮಾಣ್ಯವನ್ನು ತಿಳಿಯಲು ಸಂವಾದದ ಅಪೇಕ್ಷೆಯೂ ಕೂಡ ಇರುವುದಿಲ್ಲ. ಹೀಗೆ ವ್ಯಭಿಚಾರ ಇರುವುದರಿಂದ ಎರಡೂ ಕಡೆಯೂ ಸಂವಾದವು ಕಾರಣವಾಗುತ್ತದೆಂದು ಸಮರ್ಥನೆ ಮಾಡಲಾಗದು. ಈ ಅಭಿಪ್ರಾಯದಿಂದ 'ಅಪ್ರಾಮಾಣ್ಯಶಂಕಾಶೂನ್ಯಸ್ಯ' ಎಂಬುದಾಗಿ ಗ್ರಂಥದಲ್ಲಿ ಹೇಳಿರುತ್ತಾರೆ. ಬಾಧಕವಿಲ್ಲದೆಯೇ ಅಪ್ರಾಮಾಣ್ಯ ಜ್ಞಾನವು ಬರುವುದಾದರೆ ವ್ಯತಿರೇಕ ವ್ಯಭಿಚಾರವು ಬರುತ್ತದೆ. ಆದರೆ ಸುಖಜ್ಞಾನದಲ್ಲಿ ಅಪ್ರಾಮಾಣ್ಯಶಂಕೆಯೇ ಇರುವುದಿಲ್ಲ. ಆದರೂ

ಬಾಧಕ ಪ್ರಮಾಣವಿಲ್ಲದಿದ್ದಾಗ ಅಪ್ರಾಮಾಣ್ಯ ನಿಶ್ಚಯವು ಉಂಟಾಗುತ್ತಿಲ್ಲ. ಪ್ರಾಮಾಣ್ಯ ನಿಶ್ಚಯವೇ ಉಂಟಾಗುತ್ತಿದೆ. ಹೀಗೆ ಅಪ್ರಾಮಾಣ್ಯ ಜ್ಞಪ್ತಿಯಲ್ಲಿ ಬಾಧಕಕ್ಕೆ ವ್ಯತಿರೇಕ ವ್ಯಭಿಚಾರವಿಲ್ಲ ಎಂಬುದನ್ನು 'ಬಾಧಕೇನವಿನಾ' ಎಂಬ ವಾಕ್ಯದಿಂದ ಹೇಳಿದ್ದಾರೆ.

'ಉಕ್ತ ಪ್ರತಿಕೂಲತರ್ಕ' ಎಂಬಲ್ಲಿ 'ಉಕ್ತ' ಎಂಬ ಪದಕ್ಕೆ ಅನವಸ್ಥಾ ಎಂಬ ಪ್ರತಿಕೂಲ ತರ್ಕ ಎಂದರ್ಥ. ಅನುಕೂಲ ತರ್ಕ ಎಂದರೆ 'ಅಸ್ತು ಸಂಶಯವಿಷಯತ್ವಂ ಮಾಸ್ತು ಪರತೋ ಜ್ಞೇಯತ್ವಂ' ಎಂಬಲ್ಲಿ ಬಾಧಕವಿಲ್ಲದಿರುವುದರಿಂದ ಎಂದರ್ಥ.

ಪ್ರಾಮಾಣ್ಯಸ್ವತಸ್ತ್ವವನ್ನು ಒಪ್ಪಿದಾಗ ಸಂಶಯವನ್ನೂ ಕೂಡ ಕೂಡಿಸಬಹುದು

भावदीपः – धर्मिग्राहकेण तत्प्रामाण्याग्रहणे स्वतस्त्वभङ्गापत्या प्रामाण्य-ग्रहणावश्यंभावे विशेषदर्शनात्संशयानुपपत्तिरेवानुकूलतर्क इत्यत आह – **संशयस्य चेति** ।। यथा परमते जातिव्यक्त्योरेकवित्तिवेद्यत्वनियमेपि इदमिति शुक्तिज्ञाने सत्यपि सादृश्यादिदोषवशाच्छुक्तित्वाज्ञानेनेदं रूप्यमित्यादिभ्रमस्तथेहापि धर्मिज्ञाने सत्यपि तत्र तात्पर्यभ्रमादिजन्यत्वादिशङ्कारूपदोषवशात्प्रामाण्याग्रहणोपपत्त्या संशयोपपत्तेरित्यर्थः।

ಧರ್ಮಿಗ್ರಾಹಕದಿಂದ ತತ್‌ಪ್ರಾಮಾಣ್ಯವು ಗೃಹೀತವಾಗುವುದಿಲ್ಲ ಎನ್ನುವುದಾದರೆ ಪ್ರಾಮಾಣ್ಯಸ್ವತಸ್ತ್ವಕ್ಕೆ ಭಗ್ನ ಬರುತ್ತದೆ. ಆದ್ದರಿಂದ ಧರ್ಮಿಗ್ರಾಹಕದಿಂದ ತತ್‌ಪ್ರಾಮಾಣ್ಯವು ಗೃಹೀತವಾಗುತ್ತದೆಂದು ಅವಶ್ಯವಾಗಿ ಅಂಗೀಕಾರ ಮಾಡಲೇಬೇಕು. ಆಗ ಕೋಟಿನಿಶ್ಚಯವಾಗಿರುವ ಕಾರಣ ಸಂಶಯ ಬರಲು ಸಾಧ್ಯವೇ ಇಲ್ಲ. 'ಯದಿ ಪ್ರಾಮಾಣ್ಯಂ ಸ್ವತಃ ಸ್ಯಾತ್ ತರ್ಹಿ ಸಾಂಶಯಿಕತ್ವಮಪಿ ನ ಸ್ಯಾತ್' 'ಒಂದುವೇಳೆ ಪ್ರಾಮಾಣ್ಯವನ್ನು ಸ್ವತಃ ಎಂದು ಒಪ್ಪಿದರೆ ಸಂಶಯವೇ ಬರದೇ ಇರಬೇಕಾದೀತು' ಎಂಬುದನ್ನೇ ಅನುಕೂಲತರ್ಕವನ್ನಾಗಿ ಹೇಳಬಹುದಲ್ಲವೇ? ಎಂಬ ಪ್ರಶ್ನೆಗೆ 'ಸಂಶಯಸ್ಯಚ' ಎಂಬ ಟೀಕಾ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ತಾರ್ಕಿಕರು ಜಾತಿ ಮತ್ತು ವ್ಯಕ್ತಿಗಳು 'ತುಲ್ಯವಿತ್ತಿವೇದ್ಯ' ಆಗಿದೆ ಎಂಬ ನಿಯಮವನ್ನು ಒಪ್ಪುತ್ತಾರೆ. ಅಂದರೆ ಘಟವು ತಿಳಿಯುವಾಗಲೇ ಅದರಲ್ಲಿರುವ ಜಾತಿಯೂ ಕೂಡ ಅದೇ ಇಂದ್ರಿಯದಿಂದ ತಿಳಿಯುತ್ತದೆ ಎಂದು ಒಪ್ಪುತ್ತಾರೆ. ಹೀಗೆ ನಿಯಮವನ್ನು ಮಾಡಿಕೊಂಡಿದ್ದರೂ ಕೂಡ ಶುಕ್ತಿಯನ್ನು ನೋಡಿ 'ಇದಂ ರಜತಂ' ಎಂಬ ಭ್ರಾಂತಿ ಸ್ಥಳದಲ್ಲಿ 'ಇದಂ' ಎಂಬುದಾಗಿ ಶುಕ್ತಿ ಇದ್ದರೂ ಕೂಡ ಸಾದೃಶ್ಯಾದಿ ದೋಷಗಳಿಂದ ಅದರಲ್ಲಿರುವ ಶುಕ್ತಿತ್ವಎಂಬ ಜಾತಿ ಜ್ಞಾನವು ಬಂದಿರುವುದಿಲ್ಲ. ಆದ್ದರಿಂದ 'ಇದಂ

ರೂಪ್ಯಂ' ಎಂಬ ಭ್ರಾಂತಿಯು ಪ್ರಾಪ್ತವಾಗಿದೆ ಎಂಬುದಾಗಿ ತಾರ್ಕಿಕರು ಹೇಳುತ್ತಾರೆ. ಇದರಂತೆ ನಾವೂ ಕೂಡ ಧರ್ಮಿಜ್ಞಾನ ಇದ್ದರೂ ಕೂಡ ತಾತ್ಪರ್ಯಭ್ರಮೆ ಮೊದಲಾದ ದೋಷಗಳ ಶಂಕೆಯಿಂದ ಪ್ರಾಮಾಣ್ಯವು ಗೃಹೀತವಾಗಿಲ್ಲ ಎಂದು ಹೇಳುತ್ತೇವೆ. ಯಾವಾಗ ಪ್ರಾಮಾಣ್ಯವು ಗೃಹೀತವಾಗಿಲ್ಲವೋ ಅಂತಹ ಸಂದರ್ಭದಲ್ಲಿ ಕೋಟಿ ನಿಶ್ಚಯವಾಗದ ಕಾರಣ ಸಂಶಯವು ಉಪಪನ್ನವಾಗುತ್ತದೆ.

ಹೆಚ್ಚಿನ ವಿಚಾರಕ್ಕೆ ತರ್ಕತಾಂಡವ ಓದಬೇಕು

भावदीपः – प्राचीनतार्किकमतावष्टंभेनाह॥ **स्वतस्त्वेनेति॥** बौद्धचार्वाकादिविप्रतिपत्त्याऽनुमानप्रामाण्येपि संशयदर्शनादित्यर्थः। यद्वा लिङ्गादिज्ञानप्रामाण्यसन्देहे न तज्जन्यानुमितिसंशयदर्शनादित्यर्थः। हेतोर्भागासिद्धिं चाह – **अनभ्यासेति॥ इत्यलमिति॥** विस्तरस्तु तर्कताण्डवे।

ಪ್ರಾಚೀನ ತಾರ್ಕಿಕರ ಮತವನ್ನು ಅವಲಂಬಿಸಿ 'ಸ್ವತಸ್ತ್ವೇನ' ಇತ್ಯಾದಿ ವಾಕ್ಯವು ಹೊರಟಿದೆ. ಪ್ರಾಚೀನ ತಾರ್ಕಿಕರು ಉಪಮಿತಿ ಅನುಮಿತಿಗಳಲ್ಲಿ ಪ್ರಾಮಾಣ್ಯ ಸ್ವತಸ್ತ್ವವನ್ನು ಒಪ್ಪಿರುವುದಿಲ್ಲ. ಆದರೂ ಕೂಡ ಸಂಶಯವು ಪ್ರಾಪ್ತವಾಗುತ್ತದೆ. ಏಕೆಂದರೆ ಬೌದ್ಧಚಾರ್ವಾಕಾದಿಗಳು ಅನುಮಾನವನ್ನು ಪ್ರಮಾಣವೆಂದು ಒಪ್ಪದ ಕಾರಣ ವಿಪ್ರತಿಪತ್ತಿಯ ಮೂಲಕ ಅನುಮಾನ ಪ್ರಾಮಾಣ್ಯದಲ್ಲೂ ಕೂಡ ಸಂಶಯವು ಬರುವುದು ಕಂಡಿದೆ.

ಅಥವಾ ಅನುಮಿತಿಯನ್ನು ಕುರಿತು ಲಿಂಗಜ್ಞಾನ, ಪಕ್ಷಧರ್ಮತಾ ಜ್ಞಾನ, ವ್ಯಾಪ್ತಿಜ್ಞಾನ ಮೊದಲಾದವುಗಳು ಕಾರಣವಾಗಿವೆ. ಇವುಗಳಲ್ಲಿರುವ ಪ್ರಾಮಾಣ್ಯದಲ್ಲಿ ಸಂದೇಹವು ಬಂದರೆ ಅನುಮಿತಿಯ ಪ್ರಾಮಾಣ್ಯದಲ್ಲೂ ಕೂಡ ಸಂದೇಹವು ಬರುತ್ತದೆ. ಹೀಗೆ ತಾರ್ಕಿಕರು ಒಪ್ಪಿದಂತೆ ನಾವೂ ಕೂಡ ಪ್ರಕೃತದಲ್ಲಿ ಸಂಶಯವನ್ನು ಉಪಪಾದನೆ ಮಾಡುತ್ತೇವೆ.

ಅಭ್ಯಾಸನಿರತಸ್ಥಳದಲ್ಲಿ ಸಂಶಯವು ಬರುವುದರಿಂದ ಹೇತುವಿಗೆ ಭಾಗಾಸಿದ್ಧಿದೋಷವನ್ನು 'ಅನಭ್ಯಾಸದಶಾಯಾಂ' ಎಂಬ ವಾಕ್ಯದಿಂದ ನಿರೂಪಣೆ ಮಾಡಿದ್ದಾರೆ. 'ಇತ್ಯಲಮ್' ಎಂದರೆ ಇನ್ನೂ ಹೆಚ್ಚಿನ ವಿಚಾರವನ್ನು ತರ್ಕತಾಂಡವ ಗ್ರಂಥವನ್ನು ಓದಿ ತಿಳಿಯಬೇಕು ಎಂದರ್ಥ.

'ತಥಾತ್ವಂ ಚ ಶಬ್ದಾತ್' ಎಂಬ ಸೂತ್ರಭಾಗಕ್ಕೆ ಮತ್ತೊಂದು ವ್ಯಾಖ್ಯಾನ

ಭಾವದೀಪ: – ಭಾಷ್ಯೇ ಶ್ರುತೇಶ್ಚೇತ್ಯಸ್ಯ ಸ್ವತಶ್ಚ ಪ್ರಾಮಾಣ್ಯಮಿತಿ ಸಾಧ್ಯೇನಾನ್ವಯಂ ದರ್ಶಯನ್ನಾಹ – **ವೇದಸ್ಯೇತಿ ।।** ಸ್ವತಃ ಸಂವಾದಾನಪೇಕ್ಷಜ್ಞಾನಗ್ರಾಹ್ಯೇತ್ಯರ್ಥಃ॥ **ಶ್ರುತಿಂಚೇತಿ ।।** ತೇನಭಾಷ್ಯೇಶ್ರುತೇಶ್ಚೇತಿ ಚಶಾಬ್ದೇನಾನವಸ್ಥಿತೇರಿತ್ಯುಕ್ತಹೇತುಸಮುಚ್ಚಯ ಇತಿ ಸೂಚಿತಮ್ । ತಥಾತ್ವಂ ಚ ಶಾಬ್ದಾದಿತಿ ಸೂತ್ರಖಣ್ಡಸ್ಯೈಕಮರ್ಥಮುಕ್ತ್ವಾರ್ಥಾನ್ತರೋಕ್ತಿಪರಂ ಭಾಷ್ಯಂ ನಿತ್ಯತ್ವಂ ಚೇತ್ಯಾದಿ। ತದ್ವ್ಯಾಚಷ್ಟೇ – **ವೇದಸ್ಯ ನಿತ್ಯತ್ವಮಿತಿ ।।**

ಭಾಷ್ಯದಲ್ಲಿರುವ 'ಶ್ರುತೇಶ್ಚ' ಎಂಬುದಕ್ಕೆ 'ಸ್ವತಶ್ಚಪ್ರಾಮಾಣ್ಯಂ' ಎಂಬ ಸಾಧ್ಯದ ಜೊತೆ ಅನ್ವಯವನ್ನು ತಿಳಿಯಬೇಕು. ಆಗ ಈ ಶ್ರುತಿಪ್ರಾಮಾಣ್ಯದಿಂದಲೂ ಕೂಡ ಸ್ವತಃಪ್ರಾಮಾಣ್ಯವು ಸಿದ್ಧವಾಗುತ್ತದೆ ಎಂಬರ್ಥವು ದೊರೆಯುತ್ತದೆ. ಇದನ್ನು ಟೀಕೆಯಲ್ಲಿ 'ವೇದಸ್ಯ' ಇತ್ಯಾದಿ ವಾಕ್ಯದಿಂದ ಸಾಧಿಸಿದ್ದಾರೆ. 'ಸ್ವತಃ' ಎಂಬ ಪದಕ್ಕೆ ಸಂವಾದ ಅನಪೇಕ್ಷಿತವಾದ ಜ್ಞಾನಗ್ರಾಹ್ಯವಾದದ್ದು ಎಂದರ್ಥ. 'ಶ್ರುತಿಂಚ' ಎಂದು ಗ್ರಂಥದಲ್ಲಿ ಹೇಳಿದ್ದಾರೆ. ಭಾಷ್ಯದಲ್ಲಿ ಶ್ರುತೇಶ್ಚ ಎಂಬಲ್ಲಿರುವ ಚಶಬ್ದದಿಂದ 'ಅನವಸ್ಥಿತೇಃ' ಎಂಬಲ್ಲಿ ಹೇಳಲ್ಪಟ್ಟ ಹೇತುವನ್ನು ಸಮುಚ್ಚಯ ಮಾಡಬೇಕು ಎಂಬುದನ್ನು ಇದರಿಂದ ಸೂಚನೆ ಮಾಡಿದ್ದಾರೆ.

'ತಥಾತ್ವಂ ಚ ಶಬ್ದಾತ್' ಎಂಬ ಸೂತ್ರದಲ್ಲಿರುವ ಭಾಗಕ್ಕೆ ಒಂದು ಬಗೆಯಲ್ಲಿ ಇಲ್ಲಿಯತನಕ ವ್ಯಾಖ್ಯಾನ ಮಾಡಿದ್ದಾಯಿತು. ಈಗ ಮತ್ತೊಂದು ಬಗೆಯಲ್ಲಿ ವ್ಯಾಖ್ಯಾನ ಮಾಡಲು 'ನಿತ್ಯತ್ವಂ ಚ' ಇತ್ಯಾದಿ ಭಾಷ್ಯವಾಕ್ಯವು ಹೊರಟಿದೆ ಎಂಬುದಾಗಿ 'ವೇದಸ್ಯ ನಿತ್ಯತ್ವಂ' ಇತ್ಯಾದಿ ಟೀಕಾ ಗ್ರಂಥದಿಂದ ಸಾಧನೆ ಮಾಡುತ್ತಿದ್ದಾರೆ.

'ತಥಾತ್ವಂ' ಎಂಬ ಪದಕ್ಕೆ ದೆಹಲೀದೀಪನ್ಯಾಯದಿಂದ ಅನ್ವಯ

ಭಾವದೀಪ: – ನನು ಪೂರ್ವಂ ತಥಾತ್ವಮಿತ್ಯಸ್ಯಾಪ್ರಾಮಾಣ್ಯಮಿತ್ಯರ್ಥಂ ಮತ್ವಾ ಪೂರ್ವಾನ್ವಿತತ್ವೇನ ಭಾಷಿತತ್ವಾತ್ಸ್ವತಶ್ಚ ಪ್ರಾಮಾಣ್ಯಮಿತಿನಿತ್ಯತ್ವಂ ಚೇತಿ ಚ ಕಸ್ಯಾರ್ಥ ಇತ್ಯತ ಆಹ – **ಅನೇನೇತಿ ।।** ಸ್ವತಶ್ಚೇತ್ಯಾದಿ ಭಾಷ್ಯೇಣೇತ್ಯರ್ಥಃ। ತಸ್ಮೈ ನೂನಮಭಿದ್ಯವೇ ವಾಚಾ ವಿರೂಪನಿತ್ಯಯಾ। ವೃಷ್ಣೇ ಚೋದಸ್ವ ಸುಷ್ಟುತಿಮಿತಿ ಸಮಗ್ರಮನ್ತ್ರಾರ್ಥಮಾಹ – **ತಸ್ಮಾ ಇತಿ ।।**

ಹಿಂದೆ 'ತಥಾತ್ವಂ' ಎಂಬುದಕ್ಕೆ ಅಪ್ರಾಮಾಣ್ಯಂ ಎಂಬರ್ಥವನ್ನು ವಿವಕ್ಷಿಸಿ ಪಾಶುಪತಾದಿ ಸ್ಮೃತಿಗಳಂತೆ ಅಪ್ರಾಮಾಣ್ಯವನ್ನು ಹೇಳಬಾರದು ಎಂಬುದಾಗಿ ಹಿಂದಿನ ಪ್ರತಿಜ್ಞೆಯ ಜೊತೆ ಅನ್ವಯವನ್ನು ಮಾಡಲಾಯಿತು. ಹೀಗೆ ಹೇಳಿದರೆ 'ಸ್ವತಶ್ಚಪ್ರಾಮಾಣ್ಯಂ' ಎಂಬುದಕ್ಕೆ ಹಾಗೂ 'ನಿತ್ಯತ್ವಂ ಚ' ಎಂಬುದಕ್ಕೆ ಎಲ್ಲಿ ಅನ್ವಯ ಮಾಡಬೇಕು? ಎಂಬ ಪ್ರಶ್ನೆಗೆ 'ಅನೇನ' ಎಂಬ ಟೀಕಾವಾಕ್ಯದಿಂದ ಉತ್ತರಿಸಿದ್ದಾರೆ. 'ಅನೇನ' ಎಂಬ ಪದಕ್ಕೆ 'ಸ್ವತಶ್ಚ' ಇತ್ಯಾದಿ ಭಾಷ್ಯದಿಂದ ಎಂದರ್ಥ.

ಸೂತ್ರದಲ್ಲಿರುವ 'ತಥಾತ್ವಂ' ಎಂಬ ಪದಕ್ಕೆ ಎರಡೂ ಕಡೆ ಅನ್ವಯವನ್ನು ತಿಳಿಯಬೇಕು. (೧) 'ಅಸ್ಯ ತಥಾತ್ವಂ ನ' ಎಂಬ ಪ್ರತಿಜ್ಞೆಯ ಜೊತೆ 'ಅಸ್ಯ ತಥಾತ್ವಂ ಚ ಶಬ್ದಾತ್' ಎಂಬ ಹೇತುವಿನ ಜೊತೆ ಎಂಬುದು ಇದರ ಅಭಿಪ್ರಾಯ.

'ತಸ್ಮೈ ನೂನಮಭಿದ್ಯವೇ ವಾಚಾ ವಿರೂಪನಿತ್ಯಯಾ ವೃಷ್ಣೇ ಚೋದಸ್ಯ ಸುಷ್ಟುತಿಮ್' ಎಂಬ ಸಮಗ್ರ ಮಂತ್ರದ ಅರ್ಥವನ್ನು 'ತಸ್ಮೈ' ಇತ್ಯಾದಿಯಾಗಿ ಹೇಳುತ್ತಿದ್ದಾರೆ.

'ಅನಾದಿನಿಧನಾ ನಿತ್ಯಾ' ಎಂಬ ಸ್ಮೃತಿಯಲ್ಲಿ ಪುನರುಕ್ತಿ ಇಲ್ಲ

भावदीपः – अभिद्यवे सर्वतः प्रकाशाय । वृष्णे अतिसमर्थाय। चोदस्व प्रेरय। स्वात्मनोऽन्यस्याभावादाह – **कुर्वित्यर्थ इति।।** कस्यचिदृषेर्नाम विरूपेति। अपौनरुक्त्याय हेतुहेतुमद्भावेन व्याचष्टे ॥ **अनादिनिधनतयेति।।** आद्यन्तशून्यतयेत्यर्थः। भाष्ये यथासूत्रं न चक्षुरित्यादि शब्दमात्रे वाच्येऽनवस्थितेरित्युपलक्षणतया युक्तेरप्युक्तेरुपयोगं वक्तुं शङ्कामाह – **न च वाच्यमिति।।**

ಶ್ರುತಿಯಲ್ಲಿ 'ಅಭಿದ್ಯವೇ' ಎಂಬ ಪದಕ್ಕೆ 'ಎಲ್ಲ ರೀತಿಯಿಂದಲೂ ಪ್ರಕಾಶಮಾನನಾದ' ಎಂದರ್ಥ. 'ವೃಷ್ಣೇ' ಎಂಬ ಪದಕ್ಕೆ 'ಅತ್ಯಂತ ಸಮರ್ಥನಾದ' ಎಂದರ್ಥ. 'ಚೋದಸ್ವ' ಎಂಬ ಪದಕ್ಕೆ 'ಪ್ರೇರಣೆ ಮಾಡು' ಎಂದರ್ಥ. ತನ್ನನ್ನು ಬಿಟ್ಟು ಬೇರೆಯವರು ಇಲ್ಲದ ಕಾರಣ 'ಪ್ರೇರಯ' ಎಂಬ ಪದಕ್ಕೆ 'ಕುರು' ಎಂದರ್ಥವನ್ನು ಹೇಳಿರುತ್ತಾರೆ. ವಿರೂಪ ಎಂಬುದು ಒಬ್ಬ ಋಷಿಯ ಹೆಸರು. ತನ್ನನ್ನು ಕುರಿತು ತಾನೇ ಸಂಬೋಧನೆ ಮಾಡಿಕೊಂಡು ಹೇಳಿದ ವೇದಮಂತ್ರವಿದು.

'ಅನಾದಿನಿಧನಾ ನಿತ್ಯಾ' ಎಂಬ ಸ್ಮೃತಿವಾಕ್ಯದಲ್ಲಿ 'ಅನಾದಿ' ಎಂಬ ಪದಕ್ಕೂ 'ನಿತ್ಯ' ಎಂಬ ಪದಕ್ಕೂ ಪುನರುಕ್ತಿಯು ಬರಬಾರದೆಂಬ ದೃಷ್ಟಿಯಿಂದ ಹೇತುಹೇತುಮದ್ಭಾವವನ್ನು ವಿವಕ್ಷಿಸಿ 'ಅನಾದಿನಿಧನತಯಾ'

ಇತ್ಯಾದಿ ವ್ಯಾಖ್ಯಾನ ಮಾಡಿದ್ದಾರೆ. 'ಅನಾದಿನಿಧನತಯಾ' ಎಂಬ ಪದಕ್ಕೆ ಆದ್ಯಂತಗಳು ಇಲ್ಲದ್ದರಿಂದ ಎಂದರ್ಥ.

ಭಾಷ್ಯದಲ್ಲಿ ಸೂತ್ರಕ್ಕೆ ಅನುಗುಣವಾಗಿ 'ನ ಚಕ್ಷುಃ' ಎಂಬ ಶ್ರುತಿವಾಕ್ಯವನ್ನಷ್ಟೇ ಉದಾಹರಿಸಿದ್ದರೆ ಸಾಕಾಗಿತ್ತು. 'ಅನವಸ್ಥಿತೇಃ' ಎಂಬ ಯುಕ್ತಿಯನ್ನು ಉಪಲಕ್ಷಣಯಾ ವಿವಕ್ಷಿಸಬೇಕು ಎಂಬುದನ್ನು ತಿಳಿಸಲು ಶಂಕಾ ಪೂರ್ವಕವಾಗಿ ಸಮರ್ಥನೆ ಮಾಡಲು 'ನ ಚ ವಾಚ್ಯಂ' ಇತ್ಯಾದಿ ವಾಕ್ಯವು ಹೊರಟಿದೆ.

'ವಿವದಮಾನಂ' ಎಂಬ ಪಾಠಕ್ಕೆ ಸಾಧುತ್ವ ಸಮರ್ಥನೆ

ಭಾವದೀಪಃ – विवदमानमितिपाठः साधुः। भासनोपसंभाषाज्ञानयत्नविमत्युपमंत्रणेषु वद इत्यात्मनेपदविधानात्। विवदन्तमितिपाठे तु चान्द्रादयस्तु मन्यन्ते सर्वस्मादुभयं पदमित्युक्तेः परस्मैपदं समाधेयम् ॥ **आपादनेति** ॥ अन्यहेतुकस्याप्रामाण्यस्याभावं स्वीकृत्य विसंवादहेतुकाप्रामाण्यशङ्कामात्रस्य क्रियमाणत्वादित्यर्थः। सूत्रे शब्दादित्युपलक्षणमिति भावेनाह – **युक्तेश्चेति** ॥

ಕೆಲವು ಪುಸ್ತಕಗಳಲ್ಲಿ 'ವಿವದಂತಂ' ಎಂಬ ಪಾಠವಿದೆ. ಅದಕ್ಕಿಂತ 'ವಿವದಮಾನಂ' ಎಂಬ ಪಾಠವೇ ಸಾಧುವಾಗಿದೆ. ಏಕೆಂದರೆ 'ಭಾಸನೋಪಸಂಭಾಷಾಜ್ಞಾನಯತ್ನವಿಮತ್ಯುಪಮಂತ್ರಣೇಷು ವದಃ' ಎಂಬ ಸೂತ್ರದಲ್ಲಿ 'ವದ' ಎಂಬುದಕ್ಕೂ ಆತ್ಮನೇಪದವನ್ನೇ ವಿಧಾನ ಮಾಡಲಾಗಿದೆ. ಒಂದುವೇಳೆ 'ವಿವದಂತಂ' ಪಾಠವನ್ನು ವಿವಕ್ಷಿಸುವುದಾದರೆ 'ಚಾಂದ್ರಾದಯಸ್ತು ಮನ್ಯಂತೇ ಸರ್ವಸ್ಮಾದುಭಯಂ ಪದಂ' ಎಂಬ ಪ್ರಮಾಣದ ಆಧಾರದಲ್ಲಿ ಪರಸ್ಮೈಪದವನ್ನು ತಿಳಿಯಬೇಕು.

'ಆಪಾದನಮಾತ್ರಸ್ಯ' ಎಂಬುದಾಗಿ ಟೀಕೆಯಲ್ಲಿ ಹೇಳಿದ್ದಾರೆ. ಬೇರೆ ಕಾರಣದಿಂದ ಅಪ್ರಾಮಾಣ್ಯ ಬರುವುದಿಲ್ಲವೆಂದು ಒಪ್ಪಿ ವಿಸಂವಾದವೆಂಬ ಹೇತುವಿಂದಷ್ಟೇ ಅಪ್ರಾಮಾಣ್ಯವನ್ನು ಆಶಂಕಿಸುವುದರಿಂದ ಎಂಬುದು ಇದರ ಅಭಿಪ್ರಾಯ. ಸೂತ್ರದಲ್ಲಿ 'ಶಬ್ದಾತ್' ಎಂಬುದು ಉಪಲಕ್ಷಣವಾಗಿದೆ ಎಂಬ ಅಭಿಪ್ರಾಯದಿಂದ 'ಯುಕ್ತೇಶ್ಚ' ಎಂಬ ವಾಕ್ಯವು ಹೊರಟಿದೆ.

ಸೂತ್ರದಲ್ಲಿ ಯುಕ್ತಿಯೂ ಕೂಡ ವಿವಕ್ಷಿತ

ಭಾವದೀಪಃ – वेदस्य नित्यत्वे देवतानय भाष्ये स्वतः प्रामाण्ये चात्र

युक्तेरुपन्यस्तत्वादित्यर्थः। तथा च श्रुतौ विवादेत्युक्त्या तयोः। साधनमस्त्विति भावः। यद्वा युक्त्या वेदस्य नित्यत्वस्वतःप्रामाण्ययोः सिद्धिं मत्वा सूत्रेऽभ्युच्चयत्वेन शब्दादित्युक्तिरिति भावः॥ ४ ॥

ವೇದವು ನಿತ್ಯವಾಗಿದೆ ಎಂಬ ವಿಷಯವನ್ನು ದೇವತಾಧಿಕರಣದ ಭಾಷ್ಯದಲ್ಲಿ ಯುಕ್ತಿಬದ್ಧವಾಗಿ ಸಮರ್ಥಿಸಲಾಗಿದೆ. ಪ್ರಕೃತ ಸ್ವತಃಪ್ರಾಮಾಣ್ಯವಿಷಯವನ್ನು ಯುಕ್ತಿಬದ್ಧವಾಗಿ ಸಮರ್ಥಿಸಲಾಗಿದೆ ಎಂಬುದು ಇದರ ಅರ್ಥ. ಆದ್ದರಿಂದ ಶ್ರುತಿಯಲ್ಲಿ ಯಾರಿಗೆ ವಿವಾದವಿದೆಯೋ ಅಂತಹವರಿಗೆ ವೇದನಿತ್ಯತ್ವ ವಿಷಯದಲ್ಲಿ ಹಾಗೂ ಅದರ ಪ್ರಾಮಾಣ್ಯ ವಿಷಯದಲ್ಲಿ ಯುಕ್ತಿಗಳಿದೆ ಎಂದು ತಿಳಿಯಬೇಕು. ಅಥವಾ ಯುಕ್ತಿಯಿಂದ ವೇದಕ್ಕೆ ನಿತ್ಯತ್ವ ಹಾಗೂ ಪ್ರಾಮಾಣ್ಯಗಳು ಸಿದ್ಧವಾಗುತ್ತವೆ ಎಂಬುದನ್ನು ಒಪ್ಪಿಕೊಂಡು ಅಭ್ಯುಚ್ಚಯಕ್ಕೋಸ್ಕರ ಸೂತ್ರದಲ್ಲಿ ಶ್ರುತಿಪ್ರಾಮಾಣ್ಯವನ್ನು ಹೇಳಿರುತ್ತಾರೆ ಎಂಬುದೂ ಕೂಡ ಈ ವಾಕ್ಯದ ಅಭಿಪ್ರಾಯವಾಗಿದೆ.

ಬ್ರಹ್ಮಸೂತ್ರ

'ದೃಶ್ಯತೇ ತು' ಎಂಬ ಸೂತ್ರಕ್ಕೆ ವ್ಯಾಖ್ಯಾನ

ब्रह्मसूत्रम् – दृश्यते तु ॥२॥

ಸೂತ್ರಾರ್ಥ - ವೇದದಲ್ಲಿ ಹೇಳಿದ ಕರ್ಮಾನುಷ್ಠಾನದಿಂದ ಯೋಗ್ಯಾಧಿಕಾರಿಗಳಿಗೆ ಫಲವು ಖಂಡಿತವಾಗಿಯೂ ಲಭಿಸುತ್ತದೆ. ಆದ್ದರಿಂದ ವೇದವು ಅಪ್ರಮಾಣವೆಂದು ಆಶಂಕಿಸಬಾರದು.

'ತು' ಎಂಬ ಪದವು ವಿಶೇಷಾರ್ಥದಲ್ಲಿದೆ. ವೇದೋಕ್ತಫಲಕ್ಕೆ ಯೋಗ್ಯವಾದ ಅಧಿಕಾರಿವಿಶೇಷ ವರ್ಗಕ್ಕೆ ಶ್ರುತಿಯಲ್ಲಿ ಹೇಳಿದ ಫಲವು ದೃಶ್ಯತೇ = ಉಪಲಬ್ಧವಾಗುತ್ತಿದೆ. ಆದ್ದರಿಂದಲೂ ಅಪ್ರಾಮಾಣ್ಯವನ್ನು ಹೇಳಬಾರದು.

॥ ಶ್ರೀವೇದವ್ಯಾಸದೇವರಿಂದ ರಚಿಸಲ್ಪಟ್ಟ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ
ನ ವಿಲಕ್ಷಣತ್ವಾಧಿಕರಣವು ಸಮಾಪ್ತವಾಯಿತು ॥

ಬ್ರಹ್ಮಸೂತ್ರಭಾಷ್ಯ

ಯಾವುದು ಸ್ವತಃ ಪ್ರಮಾಣಗಳು

।। दृश्यते तु ।।२।।

ब्रह्मसूत्रभाष्यम् – अधिकारिणां फलम् ।

भविष्यत्पुराणे च –

'ऋग्यजुस्सामाथर्वाख्या मूलरामायणं तथा ।
भारतं पञ्चरात्रं च वेदा इत्येव शब्दिताः ।।
पुराणानि च यानीह वैष्णवानि विदो विदुः ।
स्वतः प्रामाण्यमेतेषां नात्र किञ्चिद्विचार्यते ।।

ಅನುವಾದ - ವೇದೋಕ್ತವಾದ ಕರ್ಮಗಳನ್ನು ಆಚರಣೆ ಮಾಡಿದರೆ ಫಲವು ದೊರೆಯುವುದಿಲ್ಲವೆಂಬ ಆಕ್ಷೇಪವು ತಪ್ಪು. ಯಾರು ನಿಜವಾದ ಅಧಿಕಾರಿಗಳಾಗಿರುತ್ತಾರೋ ಅವರು ವೇದೋಕ್ತಕರ್ಮಗಳನ್ನು ಅನುಷ್ಠಾನ ಮಾಡಿದರೆ ಉತ್ತಮವಾದ ಫಲವನ್ನು ಹೊಂದುತ್ತಾರೆ. ಭವಿಷ್ಯತ್ ಪುರಾಣದ ವಚನದಲ್ಲಿ ಪ್ರಾಮಾಣ್ಯಸ್ವತಸ್ತ್ವವನ್ನು ಹೀಗೆ ಸಮರ್ಥಿಸಲಾಗಿದೆ - ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ, ಮೂಲರಾಮಾಯಣ, ಮಹಾಭಾರತ, ಪಂಚರಾತ್ರ ಇವುಗಳೆಲ್ಲವೂ ವೇದವೆಂದೇ ಕರೆಸಿಕೊಳ್ಳುತ್ತವೆ. ಜ್ಞಾನಿಗಳು ಯಾವುದನ್ನು ವೈಷ್ಣವ ಪುರಾಣಗಳೆಂದು ಕರೆಯುತ್ತಾರೋ ಅವುಗಳು ಸ್ವತಃಪ್ರಮಾಣವಾಗಿವೆ. ಈ ವಿಷಯದಲ್ಲಿ ಸ್ವಲ್ಪವೂ ವಿಚಾರ ಮಾಡಬೇಕಾಗಿಲ್ಲ.

ಪ್ರತಿಪದಾರ್ಥ -- ಯಾರು ವೇದಗಳಿಗೆ ಸ್ವತಃಪ್ರಾಮಾಣ್ಯವನ್ನು ಒಪ್ಪುತ್ತಾರೊ, ಅವರು ಕೂಡ ದೊಷವನ್ನು ಕಂಡಾಗ ಅಪ್ರಾಮಾಣ್ಯವನ್ನು ಒಪ್ಪಬೇಕು. ವೇದದಲ್ಲಿ ಹೇಳಿದ ಕರ್ಮಗಳನ್ನು ಆಚರಣೆ ಮಾಡಿದರೆ ಫಲವು ದೊರೆಯುತ್ತಿಲ್ಲ. ಆದ್ದರಿಂದ ಅಪ್ರಾಮಾಣ್ಯವನ್ನು ಹೇಳಬೇಕಲ್ಲವೆ? ಈ ಆಶಂಕೆಯನ್ನು ಪರಿಹರಿಸಲು ಮುಂದಿನ ಸೂತ್ರ ಹೊರಟಿದೆ. ಅಧಿಕಾರಿಣಾಂ = ಕರ್ಮವೈಗುಣ್ಯ ಮೊದಲಾದ ದೋಷಗಳಿಂದ ರಹಿತರಾದ ಯೋಗ್ಯರಾದ ಅಧಿಕಾರಿಗಳಿಗೆ, ಫಲಂ = ವೇದದಲ್ಲಿ ಹೇಳಿದ ಸಂಪೂರ್ಣ

ಫಲವು ದೊರೆಯುವುದು ಕಂಡಿದೆ. ಭವಿಷ್ಯತ್ಪುರಾಣೇ ಚ = ಭವಿಷ್ಯತ್ ಪುರಾಣದಲ್ಲಿ ವೇದಪ್ರಾಮಾಣ್ಯವನ್ನು ಹೀಗೆ ಸಮರ್ಥಿಸಿದ್ದಾರೆ - ಋಗ್ಯಜುಸ್ಸಾಮಾಥರ್ವಾಖ್ಯಾ = ಋಗ್‌ವೇದ ಯಜುರ್ವೇದ ಸಾಮವೇದ ಅಥರ್ವವೇದಗಳು, ತಥಾ = ಹಾಗೆಯೇ, ಮೂಲರಾಮಾಯಣಂ = ಮೂಲರಾಮಾಯಣವು, ಚ = ಮತ್ತು, ಭಾರತಂ = ಮಹಾಭಾರತವು, ಪಂಚರಾತ್ರಂ = ಪಂಚರಾತ್ರಾಗಮವು, ವೇದಾ ಇತ್ಯೇವ = ವೇದಗಳು ಎಂದೇ, ಶಬ್ದಿತಾಃ = ಕರೆಸಿಕೊಳ್ಳುತ್ತವೆ. ಇಹ = ಈ ಪುರಾಣಗಳ ಮಧ್ಯದಲ್ಲಿ, ವಿದುಃ = ಜ್ಞಾನಿಗಳು, ಯಾನಿ = ಯಾವುಗಳನ್ನು, ವೈಷ್ಣವಾನಿ ಪುರಾಣಾನಿ = ವಿಷ್ಣುವಿನ ಉತ್ಕರ್ಷವನ್ನು ಹೇಳುವ ಪುರಾಣಗಳೆಂದು, ವಿದೋ ವಿದುಃ = ತಿಳಿಯುತ್ತಾರೋ, ತಾನಿ ಚ = ಅವುಗಳೆಲ್ಲವೂ, ಸ್ವತಃ = ಮತ್ತೊಂದನ್ನು ಅಪೇಕ್ಷಿಪಡದೆ, ಪ್ರಾಮಾಣ್ಯಮ್ = ಪ್ರಾಮಾಣ್ಯವನ್ನು ಹೊಂದುತ್ತವೆ. ಏತೇಷಾಂ = ಈ ಪುರಾಣಗಳ ಪ್ರಾಮಾಣ್ಯಜ್ಞಾನದಲ್ಲಿ, ಕಿಂಚದ್ = ಸಂವಾದಿಗಳನ್ನು, ಅತ್ರ ಏತೇಷಾಂ = ಈ ಪುರಾಣಾದಿಗಳ ಪ್ರಾಮಾಣ್ಯ-ವಿಷಯದಲ್ಲಿ, ಕಿಂಚಿತ್ = ಸಂವಾದಿವಿಚಾರಗಳನ್ನು, ನ ವಿಚಾರ್ಯತೇ = ಹುಡುಕಬೇಕಾಗಿಲ್ಲ.

ವೇದ ಹಾಗೂ ತದನುಸಾರಿಗಳಿಗೆ ಅಪ್ರಾಮಾಣ್ಯವಿಲ್ಲ

ಬ್ರಹ್ಮಸೂತ್ರಭಾಷ್ಯಮ್ –

ಯೀಯೇಷೂಕ್ತಂ ನ ದೃಶ್ಯೇತ ಪೂರ್ವಕರ್ಮಾತ್ರ ಕಾರಣಮ್ ।
ನಾಪ್ರಾಮಾಣ್ಯಂ ಭವೇದೇಷಾಂ ದೃಶ್ಯತೇ ಹ್ಯಧಿಕಾರತಃ ।।

ಅನುವಾದ - ವೇದ ಮತ್ತು ವೇದಾನುಸಾರಿಯಾದ ಪುರಾಣಗಳಲ್ಲಿ ಯಾವ ಕರ್ಮಗಳನ್ನು ವಿಧಾನ ಮಾಡಿದ್ದಾರೋ ಅದನ್ನು ಅನುಷ್ಠಾನ ಮಾಡಿದರೆ ಫಲವು ಕೇಲವೊಮ್ಮೆ ದೊರೆಯುತ್ತಿಲ್ಲ. ಇಂಥ ಸಂದರ್ಭಗಳಲ್ಲಿ ಕರ್ತುವಿನ ವೈಗುಣ್ಯವನ್ನು ಅಥವಾ ಪ್ರಾಚೀನಕರ್ಮಗಳ ಪ್ರತಿಬಂಧಕತ್ವವನ್ನು ಊಹಿಸಬೇಕು. ಹೊರತು ಅಪ್ರಾಮಾಣ್ಯವನ್ನು ಊಹಿಸಬಾರದು.

ಪ್ರತಿಪದಾರ್ಥ -- ಆ ವಿಷಯದಲ್ಲಿ ಕರ್ತೃವಿನ ಪ್ರಾಚೀನಕರ್ಮವು ಅಥವಾ ಕರ್ಮದ ವೈಗುಣ್ಯದೋಷವು, ಕಾರಣಮ್ = ಕಾರಣವಾಗಿದೆ.

ಏಷಾಂ = ಈ ಪುರಾಣ ಮತ್ತು ವೇದಗಳಿಗೆ, ಅಪ್ರಾಮಣ್ಯಮ್ = ಅಪ್ರಾಮಾಣ್ಯವನ್ನು, ನ ಭವೇತ್ = ಎಂದೂ ಕೂಡ ಒಪ್ಪಬಾರದು, ಅಧಿಕಾರತಃ = ಯೋಗ್ಯರಾದ ಅಧಿಕಾರಿಗಳ ಯೋಗ್ಯತಾನುಸಾರವಾಗಿ, ಏಷಾಂ = ಇವುಗಳಿಗೆ, ದೃಶ್ಯತೇ = ಫಲವು ದೊರೆಯುವುದು ಕಾಣಿಸುತ್ತದೆ.

ಪಾಶುಪತಾದಿಸ್ಮೃತಿಗಳಿಗೆ ಅಪ್ರಾಮಾಣ್ಯವಿದೆ

ಬ್ರಹ್ಮಸೂತ್ರಭಾಷ್ಯಮ್ –

ಇತಃ ಪ್ರಾಮಾಣ್ಯಮನ್ಯೇಷಾಂ ನ ಸ್ವತಸ್ತು ಕಥಞ್ಚನ ।
ಅದೃಶ್ಯೋಕ್ತೌ ತತಸ್ತೇಷಾಮಪ್ರಾಮಾಣ್ಯಂ ನ ಸಂಶಯಃ ।। ಇತಿ ।।೨।।

।। ಇತಿ ಶ್ರೀಮದಾನನ್ದತೀರ್ಥಭಗವತ್ಪಾದಾಚಾರ್ಯವಿರಚಿತೇ
ಬ್ರಹ್ಮಸೂತ್ರಭಾಷ್ಯೇ ನವಿಲಕ್ಷಣತ್ವಾಧಿಕರಣಮ್ ।। ೨ ।।

ಅನುವಾದ - ಪಾಶುಪತಾದಿಸ್ಮೃತಿಗಳಿಗೆ ಸ್ವತಃಪ್ರಾಮಾಣ್ಯವನ್ನು ಎಂದೂ ಕೂಡ ಒಪ್ಪಲು ಸಾಧ್ಯವಿಲ್ಲ. ಪಾಶುಪತಸ್ಮೃತಿಗಳಲ್ಲಿ ವಿಧಿಸಲ್ಪಟ್ಟ ಕರ್ಮವನ್ನು ಆಚರಣೆ ಮಾಡಿದಾಗ ಫಲವು ದೊರೆಯದಿದ್ದರೆ ಅವುಗಳಿಗೆ ಅಪ್ರಾಮಾಣ್ಯವನ್ನು ಒಪ್ಪಬೇಕು. ಈ ವಿಷಯದಲ್ಲಿ ಸಂಶಯವಿಲ್ಲ.

ಪ್ರತಿಪದಾರ್ಥ-- ಅನ್ಯೇಷಾಂ ತು = ಪಾಶುಪತಾದಿಶಾಸ್ತ್ರಗಳಾದರೂ, ಕಥಂಚನ = ಯಾವುದೇ ಕಾರಣದಿಂದಲೂ, ಇತಃ = ಫಲದರ್ಶದಿಂದಲೇ ಪ್ರಾಮಾಣ್ಯವನ್ನು ಬುದ್ಧಿದೋಷವನ್ನು ನಿರಾಸ ಮಾಡುವ ಮೂಲಕ ಒಪ್ಪಬೇಕು. ಹೊರತು ಸ್ವತಃ = ಪ್ರಾಮಾಣ್ಯವನ್ನು ಉತ್ಪತ್ತಿಯ ಮೂಲಕ, ಅದೃಶ್ಯೋಕ್ತೌ = ಅತೀಂದ್ರಿಯವಿಷದಲ್ಲಿ, ತೇಷಾಂ = ಶ್ರುತಿವಿರುದ್ಧವಾದ ಪಾಶುಪತಾದಿಶಾಸ್ತ್ರಗಳಿಗೆ, ಅಪ್ರಾಮಾಣ್ಯಂ = ಅಪ್ರಾಮಾಣ್ಯವನ್ನು ಹೇಳಲೇಬೇಕು, ನ ಸಂಶಯಃ = ಈ ವಿಷಯದಲ್ಲಿ ಯಾವುದೇ ಸಂಶಯವಿಲ್ಲ.

।। ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ವಿರಚಿತವಾದ ಬ್ರಹ್ಮಸೂತ್ರಭಾಷ್ಯದ ಕನ್ನಡಾನುವಾದದಲ್ಲಿ ನ ವಿಲಕ್ಷಣತ್ವಾಧಿಕರಣವು ಸಮಾಪ್ತವಾಯಿತು ।।

ಸತ್ತರ್ಕದೀಪಾವಳಿ

ಋಗ್ಯಜುಃಸಾಮಗಳಿಗೆ ಸ್ವತಃ ಪ್ರಾಮಾಣ್ಯ

सत्तर्कदीपावलिः – अधिकारसम्पत्तौ दृष्टार्थस्य कर्मणो वैदिकस्य फलदर्शनात् । क्वचित् फलादर्शनं प्रतिबन्धककर्मनिबन्धनमेव । नान्यथा । ऋग्यजुःसामादीनां स्वत एव प्रामाण्यनियमः । यत्र तु तदनुसारित्वं तत्र अन्यागमानामपि प्रामाण्यात् क्वचित् तदुक्तऐहिककर्मफलदर्शनं युज्यते । तदाह – दृश्यत इत्यादिना ।।

ಎಲ್ಲಾ ಬಗೆಯ ಅಧಿಕಾರಸಂಪತ್ತಿಯು ಇದ್ದಾಗ ದೃಷ್ಟ ಫಲಕವಾದ ಕರ್ಮವನ್ನು ಆಚರಿಸಿದರೆ ಅಂಥ ವೇದವಾಕ್ಯಗಳಿಂದ ಫಲ ದೊರಕುವುದು ಕಾಣಿಸುತ್ತಿದೆ. ಕೆಲವೊಮ್ಮೆ ಫಲವು ದೊರಕದೇ ಇರಬಹದು. ಅದಕ್ಕೆ ಕಾರಣ ಪ್ರತಿಬಂಧಕವಾದ ಕರ್ಮವೆಂದು ತಿಳಿಯಬೇಕು. ಇದನ್ನು ಬಿಟ್ಟು ಬೇರೆ ರೀತಿಯಲ್ಲಿ ಚಿಂತನೆ ಮಾಡಬಾರದು. ಋಗ್ವೇದ, ಯಜುರ್ವೇದ, ಸಾಮವೇದಗಳಿಗೆ ಸ್ವಾಭಾವಿಕವಾಗಿಯೇ ಪ್ರಾಮಾಣ್ಯದ ನಿಯಮವಿದೆ. ಮತ್ತು ಇವುಗಳಿಗೆ ಅನುಸಾರಿಯಾದ ಬೇರೆ ಆಗಮಗಳಿಗೂ ಕೂಡ ಸ್ವಾಭಾವಿಕವಾಗಿ ಪ್ರಾಮಾಣ್ಯವಿದೆ. ಅನೇಕ ಕಡೆ ಇವುಗಳಲ್ಲಿ ಹೇಳಿದ ಐಹಿಕ ಕರ್ಮಗಳನ್ನು ಆಚರಣೆ ಮಾಡಿದಾಗ ಫಲ ದೊರಕುವುದು ಕಾಣಿಸುತ್ತಿದೆ. ಇದನ್ನೇ 'ದೃಶ್ಯತೇ ತು' ಎಂಬ ಸೂತ್ರದಿಂದ ಉಪಪಾದನೆ ಮಾಡುತ್ತಿದ್ದಾರೆ.

॥ ಇಲ್ಲಿಗೆ ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ ಸತ್ತರ್ಕದೀಪಾವಳಿಯಲ್ಲಿ
ನ ವಿಲಕ್ಷಣತ್ವಾಧಿಕರಣದ ಕನ್ನಡಾನುವಾದವು ಸಮಾಪ್ತವಾಯಿತು ॥

ತತ್ತ್ವಪ್ರಕಾಶಿಕಾ

ವೇದೋಕ್ತವಾದದ್ದಕ್ಕೂ ವ್ಯಭಿಚಾರವಿದೆಯಲ್ಲವೇ?

तत्वप्रकाशिका – यदुदितं नित्यत्वेन निर्दोषस्य वैदस्य नाप्रामाण्यमिति न तद्युक्तम् । तदुक्तफलस्यादर्शनात् ।

ಹಿಂದೆ ವೇದವು ನಿತ್ಯವಾದ್ದರಿಂದ ನಿರ್ದುಷ್ಟವಾಗಿದೆ. ಆದ್ದರಿಂದ ಅಪ್ರಮಾಣವಾಗುವುದಿಲ್ಲವೆಂದು ಸಮರ್ಥಿಸಲಾಯಿತು. ಆದರೆ ಇದು ಸರಿಯಲ್ಲ. ಏಕೆಂದರೆ ವೇದದಲ್ಲಿ ಹೇಳಲ್ಪಟ್ಟ ಕರ್ಮವನ್ನು ಆಚರಣೆ ಮಾಡಿದರೂ ಕೂಡ ಫಲವು ಕಾಣಿಸುತ್ತಿಲ್ಲ. ಆದ್ದರಿಂದ ವೇದವು ಅಪ್ರಮಾಣ.

ಪ್ರಾಮಾಣ್ಯಸ್ವತಸ್ತ್ವವಾದಿಗೆ ಬರುವ ತೊಂದರೆ

तत्वप्रकाशिका – यावता तदेवाप्रामाण्यं न च प्रामाण्यस्य स्वतस्त्वेन संवादानपेक्षितेत्युक्तमिति वाच्यम् । स्वतःप्रामाण्यवादिनाऽपि दोषदर्शनेऽप्रामाण्यस्यावश्यं ग्राह्यत्वात् ।

ಅಪ್ರಾಮಾಣ್ಯವೆಂದರೆ 'ಕರ್ಮವನ್ನು ಆಚರಿಸಿದರೂ ಫಲವು ಕಾಣಿಸದಿರುವಿಕೆ' ಎಂದರ್ಥ. ಪ್ರಾಮಾಣ್ಯವನ್ನು ಸ್ವತಃ ಎಂದು ಸಮರ್ಥನೆ ಮಾಡಿರುವುದರಿಂದ ಫಲಸಂವಾದದ ಅಪೇಕ್ಷೆ ಇರುವುದಿಲ್ಲ. ಈ ವಿಷಯವನ್ನು ಈಗಾಗಲೇ ಸಮರ್ಥನೆ ಮಾಡಿದ್ದೇವಲ್ಲವೆ ? ಎಂದು ಪ್ರಶ್ನಿಸಬಾರದು. ಪ್ರಾಮಾಣ್ಯಸ್ವತಸ್ತ್ವವಾದಿಯೂ ಕೂಡ ದೋಷ ಕಂಡಾಗ ಜ್ಞಾನದಲ್ಲಿ ಅಪ್ರಾಮಾಣ್ಯವನ್ನು ಅವಶ್ಯವಾಗಿ ಒಪ್ಪಿಕೊಳ್ಳಲೇಬೇಕು.

ವೇದವು ಅಪ್ರಮಾಣವೆಂದು ಪೂರ್ವಪಕ್ಷ

तत्वप्रकाशिका – अयमेव हि दोषो यदुक्तस्यादर्शनमित्याशङ्कं परिहरत्सूत्रमुपन्यस्य तच्छेषं पूरयति – दृश्यते त्विति ।।

ಫಲ ಕಾಣದಿರುವುವಿಕೆ ಎಂಬ ದೋಷವಿರುವುದರಿಂದ ವೇದವು ಅಪ್ರಮಾಣವಾಗುತ್ತದೆ ಎಂಬ ಆಶಂಕೆಯನ್ನು ಪರಿಹರಿಸಲು ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ. ಮತ್ತು ಸೂತ್ರದಲ್ಲಿ ಶೇಷಪೂರಣ ಮಾಡಿಕೊಳ್ಳಬೇಕಾದ ಪದಗಳನ್ನು ಭಾಷ್ಯದಲ್ಲಿ ಉಲ್ಲೇಖಿಸುತ್ತಿವ್ವಾರೆ 'ದೃಶ್ಯತೇ ತು' ಇತ್ಯಾದಿಯಾಗಿ.

ಫಲ ದೊರೆಯದೇ ಇರಲು ಕರ್ತೃವೈಗುಣ್ಯವು ನಿಮಿತ್ತ

तत्वप्रकाशिका – न फलादर्शनेन श्रुत्यादेरप्रामाण्यं वक्तव्यम् । फलादर्शनस्य कर्तृरयोग्यतयोपपत्तेः । तत्कृतः कल्प्यते । योग्यानां फलदर्शनात् ।

ಫಲ ಕಾಣಿಸುತ್ತಿಲ್ಲವೆಂಬ ಕಾರಣದಿಂದ ಶ್ರುತ್ಯಾದಿಗಳಿಗೆ ಅಪ್ರಾಮಾಣ್ಯವನ್ನು ಹೇಳಬಾರದು. ಏಕೆಂದರೆ ಫಲವು ಕಾಣಿಸದಿರಲು ಬೇರೆ ಕಾರಣ ಇರಬಹುದು.

ಫಲ ಕಾಣಿಸದಿರಲು ವೇದವು ಅಪ್ರಮಾಣವಾಗಬೇಕಾಗಿಲ್ಲ. ಕರ್ತೃವಿನ ದೋಷದಿಂದ ಅಥವಾ ಫಲವನ್ನು ಪಡೆಯುವ ಯೋಗ್ಯತೆ ಕರ್ತೃವಿನಲ್ಲಿ ಇಲ್ಲದಿರುವುದರಿಂದ ಫಲವು ಕಾಣಿಸದಿರಬಹುದು. ಹೀಗೇಕೆ ಕಲ್ಪನೆ ಮಾಡಬೇಕು ? ಎಂದರೆ ಯೋಗ್ಯರಾದ ವ್ಯಕ್ತಿಗಳು ಅನುಷ್ಠಾನ ಮಾಡುವುದರಿಂದ ಫಲವು ಕಾಣಿಸುತ್ತಿದೆ. ಆದ್ದರಿಂದ ಫಲ ಕಾಣಿಸುತ್ತಿಲ್ಲವೆಂಬ ಕಾರಣದಿಂದ ವೇದಕ್ಕೆ ಅಪ್ರಾಮಾಣ್ಯವನ್ನು ಹೇಳಲು ಸಾಧ್ಯವಿಲ್ಲ.

ಪಾಶುಪತಾದಿ ಸ್ಮೃತಿಗಳಲ್ಲಿ ಇದು ಸಮಾನವಲ್ಲ

तत्वप्रकाशिका – न च शङ्कनीयं पाशुपतादिस्मृत्युक्तफलव्यभिचारस्यापि कर्तृरयोग्यतानिबन्धनतोपपत्तेर्नाप्रामाण्यं योग्यानां फलदर्शनादिति ।

ಪ್ರಶ್ನೆ - ಪಾಶುಪತಾದಿ ಸ್ಮೃತಿಗಳ ವಿಷಯದಲ್ಲಿಯೂ ಇದು ಸಮಾನ. ಪಾಶುಪತಾದಿ-ಸ್ಮೃತಿಗಳಲ್ಲಿ ಯಾವ ಕರ್ಮಗಳನ್ನು ಅನುಷ್ಠಾನ ಮಾಡಬೇಕೆಂದು ಹೇಳಿರುತ್ತಾರೋ ಅಂಥ ಫಲವು ದೊರೆಯದಿದ್ದರೆ ಕರ್ತೃವಿಗೆ ಯೋಗ್ಯತೆ ಇಲ್ಲವೆಂದೇ ಹೇಳುತ್ತೇವೆ. ಆದ್ದರಿಂದ ಫಲವ್ಯಭಿಚಾರದಿಂದ ಪಾಶುಪತಾದಿಸ್ಮೃತಿಗಳಿಗೂ ಕೂಡ ಅಪ್ರಾಮಾಣ್ಯವನ್ನು ಸಾಧಿಸಲಾಗದು.

ಉತ್ತರ - ಹೀಗೆ ಕಲ್ಪನೆ ಮಾಡಲು ಯಾವುದೇ ಆಧಾರವಿಲ್ಲ.

ವೇದಕ್ಕೆ ಹೀಗೆ ಒಪ್ಪಲು ಗಮಕವಿದೆ

तत्वप्रकाशिका – कल्पकाभावात् । वेदस्य तु निर्दोषतया स्वतःप्रामाण्ये सिद्धेऽवश्यं व्यभिचारस्य गत्यन्तरं कल्पनीयम् । पाशुपतादीनां फलदर्शनमन्तरेण प्रामाण्यसाधकाभावात् ।

ವೇದವು ನಿರ್ದುಷ್ಟವಾದ್ದರಿಂದ ಪ್ರಾಮಾಣ್ಯಸ್ವತಸ್ತ್ವವು ಸಿದ್ಧವಾಗಿದೆ. ಹೀಗಿರುವಾಗ ಫಲವ್ಯಭಿಚಾರವು ಕಂಡರೆ ಅದಕ್ಕೆ ಕರ್ತೃವೈಗುಣ್ಯಾದಿ ಗತ್ಯಂತರವನ್ನು ಕಲ್ಪನೆ ಮಾಡಬೇಕು.

ಆದರೆ ಪಾಶುಪತಾದಿಸ್ಮೃತಿಗಳಿಗೆ ಫಲದರ್ಶನದಿಂದಷ್ಟೆ ಪ್ರಾಮಾಣ್ಯವನ್ನು ಸಾಧಿಸಲು ಸಾಧ್ಯ. ಫಲವ್ಯಭಿಚಾರದಿಂದ ಅಪ್ರಾಮಾಣ್ಯವನ್ನು ಒಪ್ಪುವುದು ಅನಿವಾರ್ಯವಾಗುತ್ತದೆ.

ಪಾಶುಪತಸ್ಮೃತಿಯು ಸ್ವತಃ ಪ್ರಮಾಣವಲ್ಲ

तत्वप्रकाशिका – तस्यापि स्वतःप्रामाण्यमिति चेत् । सत्यम् । निर्दोषत्वानिर्णये फलविसंवाददर्शनेनाप्रामाण्यप्राप्तेरेवोक्तत्वादिति भावः ।

ಪ್ರಶ್ನೆ- ವೇದದಂತೆ ಪಾಶುಪತಾದಿಶಾಸ್ತ್ರಗಳಿಗೂ ಕೂಡ ಸ್ವತಃಪ್ರಾಮಾಣ್ಯವನ್ನು ಒಪ್ಪಬಹುದಲ್ಲವೆ?

ಉತ್ತರ - ಇದು ಸರಿಯಲ್ಲ. ಏಕೆಂದರೆ ಪಾಶುಪತಾದಿಸ್ಮೃತಿಗಳ ನಿರ್ದೋಷತ್ವವು ಇನ್ನು ಕೂಡ ನಿರ್ಧಾರವಾಗಿಲ್ಲ. ಅಷ್ಟೇ ಅಲ್ಲದೆ ಫಲಸಂವಾದವೇ ಕಾಣಿಸುತ್ತಿದೆ. ಆದ್ದರಿಂದ ಅಪ್ರಾಮಾಣ್ಯವೇ ಸಿದ್ಧವಾಗುತ್ತದೆ. ಹೊರತು ಪ್ರಾಮಾಣ್ಯವು ಸಿದ್ಧವಾಗುವುದಿಲ್ಲ. ಈ ವಿಷಯವನ್ನು ಹಿಂದೆಯೇ ನಾವು ಹೇಳಿರುತ್ತೇವೆ.

ಸೂತ್ರದಲ್ಲಿರುವ ತು ಶಬ್ದದ ವ್ಯಾಖ್ಯಾನ

तत्वप्रकाशिका – तुशब्दः कर्तृविशेषद्योतकः । अधिकारित्वं नाम तत्फलयोग्यत्वं कर्मवैगुण्यप्रतिबन्धादिशून्यत्वं वा।

ಸೂತ್ರದಲ್ಲಿರುವ 'ತು'ಶಬ್ದವು ಕರ್ತೃವಿಶೇಷವನ್ನು ತಿಳಿಸುತ್ತಿದೆ. ಎಲ್ಲಾ ಬಗೆಯ ಕರ್ತೃಗಳಿಗೂ ವೇದೋಕ್ತಕರ್ಮದಲ್ಲಿ ಅಧಿಕಾರವಿಲ್ಲ. ವಿಶೇಷ ಅಧಿಕಾರಿಗಳಿಗೆ ಮಾತ್ರ ಅಂಥ ಕರ್ಮಾಚರಣೆಯ ಯೋಗ್ಯತೆ ಇರುತ್ತದೆಂದು ಇದರ ಅಭಿಪ್ರಾಯ.

ಅಧಿಕರಣ ಪ್ರಮೇಯಕ್ಕೆ ಸ್ಮೃತಿಯ ಆಧಾರ

तत्वप्रकाशिका – अधिकरणार्थे स्मृतिं चाह – भविष्यत्पुरणे चेति ।।

'ಅಧಿಕಾರ' ಎಂದರೆ 'ತತ್‌ಫಲಯೋಗ್ಯತ್ವಮ್' 'ಕರ್ಮಫಲವನ್ನು ಪಡೆಯುವ ಅರ್ಹತೆ' ಎಂದರ್ಥ. ಅಥವಾ 'ಕರ್ಮವೈಗುಣ್ಯಪ್ರತಿಬಂಧಶೂನ್ಯತ್ವ' 'ಕರ್ಮದಲ್ಲಿ ನ್ಯೂನತೆ ಮೊದಲಾದ ಪ್ರತಿಬಂಧಕಗಳು ಇಲ್ಲದಿರುವಿಕೆ' ಎಂದರ್ಥ. ಸಂಪೂರ್ಣ ಅಧಿಕರಣದ ಅಭಿಪ್ರಾಯವನ್ನು ಭವಿಷ್ಯತ್- ಪುರಾಣದ ವಚನವು ಸ್ಪಷ್ಟಪಡಿಸುತ್ತಿದೆಂಬುದನ್ನು 'ಭವಿಷ್ಯತ್‌ಪುರಾಣೇ ಚ' ಇತ್ಯಾದಿ ಭಾಷ್ಯದಲ್ಲಿ ಹೇಳಿರುತ್ತಾರೆ.

ಫಲವು ಕಾಣಿಸದಿರಲು ಕಾರಣವೇನು ?

तत्वप्रकाशिका – स्वतःफलसंवादादिरहितनिर्दोषतयैव । पूर्वकर्मान्योपलक्षणम्।

ಈ ಭವಿಷ್ಯತ್‌ಪುರಾಣದ ವಚನದಲ್ಲಿ 'ಸ್ವತಃ' ಎಂಬ ಪದವಿದೆ. ಇದಕ್ಕೆ 'ಫಲಸಂವಾದದ ಅಪೇಕ್ಷೆ ಇಲ್ಲದೆ ನಿರ್ದುಷ್ಟವಾದ್ದರಿಂದ' ಎಂದರ್ಥ. ಅಥವಾ 'ಫಲವು ಕಾಣಿಸದಿರಲು ಹಿಂದಿನ ಕರ್ಮವು ಕಾರಣವಾಗಿದೆ' ಎಂಬುದನ್ನು ಉಪಲಕ್ಷಣಯಾ ವಿವಕ್ಷಿಸಬೇಕು.

ವೇದಪ್ರಾಮಾಣ್ಯವು ಯುಕ್ತಿವಿರುದ್ಧವಲ್ಲ

तत्वप्रकाशिका – इतः फलदर्शनतः । अदृश्योक्तौ अनुपलभ्यमानवचने । अतो वेदादिप्रामाण्यस्य युक्तिविरुद्धत्वाभावाद्युक्तं तेन हरेजगत्काणत्वमिति सिद्धम् ।।५।।

।। इति श्रीमज्जयतीर्थभिक्षुविरचितायां तत्वप्रकाशिकायाम्
न विलक्षणत्वाधिकरणम् ।।

'ಇತಃ' ಎಂಬ ಪದಕ್ಕೆ ಫಲದರ್ಶನದಿಂದ ಎಂದರ್ಥ. 'ಅದೃಶ್ಯೋಕ್ತೌ' ಎಂದರೆ ಯಾವ ಫಲವನ್ನು ಹೇಳಿರುತ್ತಾರೋ ಅದು ಕಾಣಿಸದಿದ್ದಾಗ ಎಂದರ್ಥ. ಹೀಗೆ ವೇದಪ್ರಾಮಣ್ಯವು ಯುಕ್ತಿವಿರುದ್ಧವಲ್ಲ ಎಂದು ಈ ಸೂತ್ರದಿಂದ ಸಿದ್ಧವಾಗುತ್ತದೆ. ಇಂಥ ನಿರ್ದುಷ್ಟವಾದ ವೇದದಿಂದ ಶ್ರೀಹರಿಯಲ್ಲಿ ಜಗಜ್ಜನ್ಮಾದಿಕಾರಣತ್ವವೆಂಬ ಲಕ್ಷಣವು ಸಿದ್ಧವಾಗುತ್ತದೆ.

।। ಇಲ್ಲಿಗೆ ಶ್ರೀಮಜ್ಜಯತೀರ್ಥಮುನಿಗಳಿಂದ ವಿರಚಿತವಾದ ತತ್ವಪ್ರಕಾಶಿಕಾಟೀಕೆಯಲ್ಲಿ
ನ ವಿಲಕ್ಷಣತ್ವಾಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ।।

ಭಾವದೀಪ

भावदीपः – ।। दृश्यते तु ।। सूत्रे फलदृष्ट्युक्तिर्नप्रामाण्यज्ञप्त्यै स्वतस्त्वभङ्गापत्तेः। किन्तु क्वचिददृष्टेर्गतिं वक्तुं स्मृत्यनुरोधादिति भावेनोक्तशङ्कां निरस्यन्व्याचष्टे – **न फलेति ।।** योग्यानां फलाधिकारिणां प्रतिबन्धकशून्यानामित्यर्थः। भाष्येऽधिकारिणामिति सौत्रतुशब्दार्थ इत्याह – **तु शब्द इति ।। अधिकारित्वं नामेति ।।** कर्मवैगुण्यप्रतिबन्धादिशून्यत्वरूपयोग्यत्वमधिकारित्वमित्यर्थः ।।**अधिकरणार्थ इति ।।** भाष्ये सार्धश्लोकेन स्मृतेः श्रुत्यनुसारित्वोक्तिरित्याहुः ।। **अन्येति ।।** कर्मवैगुण्योपलक्षण-मित्यर्थः ।। **अत इति ।।** शैवादिस्मृतिप्रामाण्यवैलक्षण्यात् विसंवादस्य वैगुण्यादि-हेतुकत्वाच्चेत्यर्थः ।।

।। इति राघवेन्द्रयतिकृते भावदीपे न विलक्षणत्वाधिकरणम् ।।

ಸೂತ್ರದಲ್ಲಿ ಫಲವು ಕಾಣಿಸುತ್ತದೆಂದು ಹೇಳಿರುವುದು ಪ್ರಾಮಾಣ್ಯದ ಜ್ಞಾನಕ್ಕೋಸ್ಕರ ಅಲ್ಲ. ಹಾಗೇನಾದರೂ ಹೇಳಿದರೆ ಸ್ವತಸ್ತ್ವವೇ ಭಂಗವಾಗುತ್ತದೆ. ಆದ್ದರಿಂದ ಎಲ್ಲಿಯಾದರೂ ಫಲವು ಕಾಣಿಸಿಲ್ಲ ಎಂದರೆ ಅಂತಹ ಸಂದರ್ಭದಲ್ಲಿ ಅದಕ್ಕೇನು ಕಾರಣ ಎಂಬ ಸಮರ್ಥನೆಗೋಸ್ಕರ ಸ್ಮೃತಿವಾಕ್ಯಕ್ಕೆ ಅನುಗುಣವಾಗಿ ಹಿಂದಿನ ಆಶಂಕೆಯನ್ನು ಪರಿಹರಿಸುವ ಮೂಲಕ ವ್ಯಾಖ್ಯಾನ ಮಾಡಲು 'ನ ಫಲ ಅದರ್ಶನೇನ' ಇತ್ಯಾದಿ ಟೀಕಾವಾಕ್ಯವು ಹೊರಟಿದೆ. ಯೋಗ್ಯರಾಗಿದ್ದು ಫಲವನ್ನು ಪಡೆಯಲು ಅಧಿ ಕಾರಿಯಾಗಿದ್ದು ಪ್ರತಿಬಂಧಕ ಇಲ್ಲದವರಿಗೆ ಫಲ ದೊರೆಯುವುದು ಕಂಡಿದೆ ಎಂದು ವಿವಕ್ಷಿಸಬೇಕು. ಭಾಷ್ಯದಲ್ಲಿ 'ಅಧಿಕಾರಿಣಾಂ' ಎಂದು ಹೇಳಿರುವುದು ಸೂತ್ರದ ತುಶಬ್ದಾರ್ಥವಾಗಿದೆ. ಇದನ್ನು ಟೀಕೆಯಲ್ಲಿ 'ತುಶಬ್ದಃ' ಎಂಬುದರಿಂದ ತೋರಿಸಿದ್ದಾರೆ. ಅಧಿಕಾರಿತ್ವಂ ನಾಮ' ಎಂದು ಟೀಕೆಯಲ್ಲಿ ಹೇಳಿದ್ದಾರೆ. 'ಕರ್ತೃವೈಗುಣ್ಯವೆಂಬ ಪ್ರತಿಬಂಧಕವಿಲ್ಲದ ಯೋಗ್ಯತ್ವವೇ ಅಧಿಕಾರಿತ್ವ ಎನಿಸುತ್ತದೆ' ಎಂಬುದು ಇದರ ಅರ್ಥ.

'ಅಧಿಕರಣಾರ್ಥೇ' ಎಂದು ಟೀಕೆಯಲ್ಲಿ ಹೇಳಿದ್ದಾರೆ. ಭಾಷ್ಯದಲ್ಲಿ ಅರ್ಧಶ್ಲೋಕದಿಂದ ಸ್ಮೃತಿಯು ಶ್ರುತ್ಯನುಸಾರಿಯಾಗಿದೆ ಎಂದು ತಿಳಿಸಿದ್ದಾರೆ ಎಂದು ಕೆಲವರು ಹೇಳುತ್ತಾರೆ. 'ಅನ್ಯ' ಎಂದರೆ ಕರ್ಮವೈಗುಣ್ಯವನ್ನು ಉಪಲಕ್ಷಣಯಾ ವಿವಕ್ಷಿಸಬೇಕು ಎಂದರ್ಥ. 'ಅತಃ' ಎಂದರೆ ಶೈವಾದಿ ಶ್ರುತಿಪ್ರಾಮಾಣ್ಯಕ್ಕಿಂತ ವೈಲಕ್ಷಣ್ಯವಿರುವುದರಿಂದ ವಿಸಂವಾದವು ವೈಗುಣ್ಯ ಹೇತುಕವಾಗಿರುವುದರಿಂದ ಎಂದರ್ಥ.

॥ ಇಲ್ಲಿಗೆ ಶ್ರೀಮದ್‌ರಾಘವೇಂದ್ರತೀರ್ಥರಿಂದ ವಿರಚಿತವಾದ ಭಾವದೀಪದ ನ ವಿಲಕ್ಷಣತ್ವಾಧಿಕರಣದ ಕನ್ನಡ ಅನುವಾದವು ಮುಗಿಯಿತು ॥

॥ ಶ್ರೀ ಮಧ್ವೇಶಾರ್ಪಣಮಸ್ತು ॥

।। श्रीजानकीवदनाम्भोजराजहंसाय रामचन्द्राय नमः ।।

।। श्री गुरुभ्यो नमः ।।

श्री राघवेन्द्रतीर्थविरचिता

तन्त्रदीपिका

न विलक्षणत्वाधिकरणम् (२।१।२)

ವೇದ ಹಾಗೂ ತದನುಸಾರಿ ಸ್ಮೃತಿಗಳಲ್ಲಿ ಸ್ವತಃ ಪ್ರಾಮಾಣ್ಯವಿದೆ

।। न विलक्षणत्वादस्य तथात्वं च शब्दात् ।।२-१-४।।

अत्र युक्त्यविरोध उच्यते । अस्य श्रुतिस्मृतिरूपस्य शास्त्रस्य तथात्वं शैवादिस्मृतिवदप्रामण्यं नास्ति । श्रुतेरपौरुषेयत्वेन श्रौतस्मृतेस्तदनुसारित्वेन

विलक्षणत्वात्, स्वतः प्रामाण्यरूपवैलक्षण्याच्च । तथात्वं चापौरुषेयत्वं तदनुसारित्वरूपं वैलक्षण्यं संवादानपेक्षत्वरूपं स्वतःप्रामाण्यरूपं च यथाक्रमं '' वाचा विरूप नित्यया'' इति, ''भारतं पञ्चरात्रं च वेदा'' इति, ''न चक्षुर्न श्रोत्रं न तर्को न स्मृतिर्वेदा ह्येवैनं वेदयन्ति'' इति शब्दात् सिद्धमित्यर्थः । तथात्वमित्यस्योभयत्रान्वयः । एवं च शैवादिस्मृतिवैलक्षण्यान्न फलविसंवादरूपयुक्त्या श्रुत्यादेस्तद्वदप्रामाण्यमिति भावः ।।

ಈ ಅಧಿಕರಣದಲ್ಲಿ ಯುಕ್ತಿವಿರೋಧವನ್ನು ಪರಿಹರಿಸಲಾಗಿದೆ. ಸೂತ್ರಾರ್ಥ ಹೀಗಿದೆ -

ಅಸ್ಯ = ಶ್ರುತಿ ಹಾಗೂ ಶ್ರುತ್ಯನುಸಾರಿಯಾದ ಸ್ಮೃತಿರೂಪವಾದ ಶಾಸ್ತ್ರಕ್ಕೆ, ತಥಾತ್ವಂ = ಶೈವಾದಿಸ್ಮೃತಿಗಳಿಗೆ ಅಪ್ರಾಮಾಣ್ಯವು, ನ = ಇರುವುದಿಲ್ಲ. ಏಕೆಂದರೆ ವಿಲಕ್ಷಣತ್ವಾತ್ = ಶ್ರುತಿಗಳು ಅಪೌರುಷೇಯವಾಗಿರುವುದರಿಂದ ಶ್ರೌತಸ್ಮೃತಿಗಳು ಅಂಥ ಶ್ರುತ್ಯನುಸಾರಿಯಾಗಿರುವುದರಿದ ಅವೈದಿಕ ಸ್ಮೃತಿಗಳಿಗಿಂತ ವಿಲಕ್ಷಣವಾಗಿದೆ. ಮತ್ತು ಸ್ವತಃ ಪ್ರಾಮಾಣ್ಯವೆಂಬ ವೈಲಕ್ಷಣ್ಯವನ್ನು ಹೊಂದಿವೆ. ('ತಥಾತ್ವಂ' ಎಂಬ ಪದವನ್ನು ಆವೃತ್ತಿ ಮಾಡಿಕೊಳ್ಳಬೇಕು) ತಥಾತ್ವಂ ಚ = ಅಪೌರುಷೇಯತ್ವ ಹಾಗೂ ತದನುಸಾರಿತ್ವ ಮತ್ತು ಸಂವಾದ ಅನಪೇಕ್ಷತ್ವ ಎಂಬ ಸ್ವತಃ ಪ್ರಾಮಾಣ್ಯವೆಂಬ ವೈಲಕ್ಷಣ್ಯವೂ ಕೂಡ ಕ್ರಮವಾಗಿ ಈ ಶ್ರುತಿಗಳಿಂದ ಸಿದ್ಧವಾಗಿದೆ. ಶಬ್ದಾತ್ = 'ವಾಚಾ ವಿರೂಪ ನಿತ್ಯಯಾ' ಎಂಬ ಶ್ರುತಿಯಿಂದ ಅಪೌರುಷೇಯತ್ವವು ಸಿದ್ಧವಾಗಿದೆ. 'ಭಾರತಂ ಪಂಚರಾತ್ರಂ ಚ ವೇದಾ' ಎಂಬುದರಿಂದ ಶ್ರೌತಸ್ಮೃತಿಗಳಿಗೆ ವೇದಾನುಸಾರಿತ್ವವು ಸಿದ್ಧವಾಗಿದೆ. 'ನ ಚಕ್ಷುರ್ನ ಶ್ರೋತ್ರಂ ನ ತರ್ಕೋ ನ ಸ್ಮೃತಿರ್ವೇದಾ ಹ್ಯೇವೈನಂ ವೇದಯಂತಿ' ಎಂಬ ಶ್ರುತಿಯಿಂದ ಸಂವಾದ ಅನಪೇಕ್ಷತ್ವವು ಸಿದ್ಧವಾಗಿದೆ. ಹೀಗೆ ತಥಾತ್ವಂ ಎಂಬುದಕ್ಕೆ ಎರಡೂ ಕಡೆ ಅನ್ವಯವನ್ನು ತಿಳಿಯಬೇಕು. ಆದ್ದರಿಂದ ಶೈವಾದಿ ಸ್ಮೃತಿಗಳಿಗಿಂತ ಶ್ರೌತ ಶ್ರುತಿಗಳಲ್ಲಿ ವೈಲಕ್ಷಣ್ಯವಿದೆ. ಹಾಗಾಗಿ ಫಲವಿಸಂವಾದಿಯೆಂಬ ಯುಕ್ತಿಯಿಂದ ಶ್ರುತ್ಯಾದಿಗಳಿಂದ ಶೈವಾದಿಸ್ಮೃತಿಗಳಂತೆ ಅಪ್ರಾಮಾಣ್ಯವನ್ನು ಹೇಳಬಾರದು ಎಂದಭಿಪ್ರಾಯ.

ಅಪವಾದದ ಮೂಲಕ ಅಪ್ರಾಮಾಣ್ಯವು ಪ್ರಾಪ್ತವಾಗದು

ननु श्रुत्यादेः स्वतःप्रामाण्येऽपि विसंवादरूपापवादेनप्रामाण्यं स्यादित्यत आह - ।। दृश्यते तु ।।२-१-५।।

तुशब्दोऽधिकारिविशेषद्योतकः । इतरेषामित्यत्र प्रसक्तं फलं अधिकारिणां दृश्यते । क्वचिद्विसंवादः कर्तृवैगुण्यनिमित्तक इति भावः।।२।।

ಶ್ರುತಿ ಹಾಗೂ ಶ್ರುತ್ಯಾನುಸಾರಿಯಾದ ಸ್ಮೃತಿಗಳು ಸ್ವತಃ ಪ್ರಮಾಣವಾಗಿವೆ ಎಂದು ಒಪ್ಪೋಣ. ಆದರೂ ಕೂಡ ವಿಸಂವಾದವೆಂಬ ಅಪವಾದವಿದ್ದರೆ ಅಪ್ರಾಮಾಣ್ಯವನ್ನು ಒಪ್ಪಲೇ ಬೇಕಲ್ಲವೇ? ಈ ಆಕ್ಷೇಪಕ್ಕೆ ಉತ್ತರವನ್ನು ನೀಡುವುದಕ್ಕಾಗಿ 'ದೃಶ್ಯತೇ ತು' ಎಂಬ ಮುಂದಿನ ಸೂತ್ರವು ಹೊರಟಿದೆ. 'ತು' ಶಬ್ದವು ಅಧಿಕಾರಿವಿಶೇಷವೆಂದು ಸೂಚನೆ ಮಾಡುತ್ತಿದೆ. 'ಇತರೇಷಾಂ' ಎಂಬಲ್ಲಿ ಯಾವ ಫಲವಿದೆಯೋ, ಅದು ಅಧಿಕಾರಿಗಳಿಗೆ ದೊರಕುವುದು ಕಂಡಿದೆ. (ಯಾರು ಯೋಗ್ಯಾಧಿಕಾರಿಗಳೋ, ಅವರು ವೇದೋಕ್ತಕರ್ಮಾನುಷ್ಠಾನವನ್ನು ಆಚರಿಸಿದರೆ ಫಲವು ದೊರಕುವುದರಲ್ಲಿ ಸಂದೇಹವಿಲ್ಲ. ಕೆಲವೊಮ್ಮೆ ವಿಸಂವಾದ ಕಾಣಬಹುದು. ಅದಕ್ಕೆ ಕರ್ತೃವಿನಲ್ಲಿರುವ ವೈಗುಣ್ಯಾದಿದೋಷಗಳೇ ಕಾರಣ ಎಂದಭಿಪ್ರಾಯ.

॥ ಇಲ್ಲಿಗೆ ತಂತ್ರದೀಪಿಕಾ ಕನ್ನಡಾನುವಾದದಲ್ಲಿ ನ ವಿಲಕ್ಷಣತ್ವಾಧಿಕರಣವು ಮುಗಿಯಿತು ॥

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥

ಅಭಿಮಾನ್ಯಧಿಕರಣ

ಬ್ರಹ್ಮಸೂತ್ರ, ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ತ್ವಪ್ರದೀಪ, ತತ್ತ್ವಪ್ರಕಾಶಿಕಾ, ಭಾವದೀಪ

ವಿಶೇಷವಿಚಾರದೊಂದಿಗೆ ಕನ್ನಡಭಾಷೆಯಲ್ಲಿ ಅನುವಾದ

ಮತ್ತು

ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆ

॥ ಹರಿಃ ಓಂ ॥

॥ ಶ್ರೀವೇದವ್ಯಾಸಾಯ ನಮಃ ॥

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಗುರುಭ್ಯೋ ನಮಃ ॥

॥ ಶ್ರೀಮದ್ರಾಘವೇಂದ್ರತೀರ್ಥಗುರುಭ್ಯೋ ನಮಃ ॥

॥ ಶ್ರೀಗುರುಭ್ಯೋ ನಮಃ ॥

ಅಭಿಮಾನ್ಯಧಿಕರಣ

ಬ್ರಹ್ಮಸೂತ್ರ

'ಅಭಿಮಾನಿವ್ಯಪದೇಶಸ್ತು ವಿಶೇಷಾನುಗತಿಭ್ಯಾಮ್' ಎಂಬ ಸೂತ್ರಕ್ಕೆ ವ್ಯಾಖ್ಯಾನ

ಬ್ರಹ್ಮಸೂತ್ರಮ್ – ಅಭಿಮಾನಿವ್ಯಪದೇಶಸ್ತು ವಿಶೇಷಾನುಗತಿಭ್ಯಾಮ್ ।।

'ಮಣ್ಣು ಮಾತನಾಡಿತು' ಮೊದಲಾದ ವೇದ ವಾಕ್ಯಗಳು ಯುಕ್ತಿಗೆ ವಿರುದ್ಧವಾಗಿದೆಯೆಂದು ಪ್ರಶ್ನಿಸಬಾರದು. ಸೂತ್ರದೀಪಿಕಾ.

ಅಂತಹ ವಾಕ್ಯಗಳಲ್ಲಿ ಅಭಿಮಾನಿ ದೇವತೆಗಳೇ ಪ್ರತಿಪಾದ್ಯರಾಗಿದ್ದಾರೆ. ಹೊರತು ಜಡವಸ್ತುಗಳಲ್ಲ. ಅಭಿಮಾನಿ ದೇವತೆಗಳು ಬೇರೆ ಚೇತನರಿಗಿಂತಲೂ ವಿಶಿಷ್ಟವಾದ ಅಂತರ್ಧಾನಶಕ್ತಿಯನ್ನೂ ಸರ್ವತ್ರ ವ್ಯಾಪ್ತಿಯನ್ನೂ ಹೊಂದಿದ್ದಾರೆ. ಆದ್ದರಿಂದ ವೇದವಾಕ್ಯಗಳಲ್ಲಿ ಹೇಳಿದ ವಿಷಯಗಳೆಲ್ಲವೂ ಯುಕ್ತಿಯುಕ್ತವೇ ಆಗಿದೆ.

'ತು' ಶಬ್ದವು ಅವಧಾರಣಾರ್ಥದಲ್ಲಿ ಇರುತ್ತದೆ. ಅಭಿಮಾನಿವ್ಯಪದೇಶಃ = 'ಮೃದಬ್ರವೀತ್' ಇತ್ಯಾದಿ ವಾಕ್ಯಗಳಲ್ಲಿ ಅಭಿಮಾನಿಯಾದ ಚೇತನರೇ ಪ್ರತಿಪಾದ್ಯರಾಗಿದ್ದಾರೆ ಹೊರತು ಜಡವಾದ ಮಣ್ಣು ಮೊದಲಾದವು ಅಲ್ಲ. ಏಕೆಂದರೆ 'ಮೃತ್ ನ ವಕ್ತ್ರೀ ಜಡತ್ವಾತ್' ಜಡವಾದ್ದರಿಂದ ಮಣ್ಣು ಮಾತನಾಡುವುದಿಲ್ಲ ಇತ್ಯಾದಿ ಯುಕ್ತಿಗಳ ವಿರೋಧವು ಬರುತ್ತದೆ.

ಅಭಿಮಾನಿ ದೇವತೆಗಳು ದೇಹವಿಲ್ಲದೆ ಇರಲಾರರು. ದೇಹವುಳ್ಳವರಾದರೆ ಅವರೇಕೆ ಕಾಣಿಸುವುದಿಲ್ಲ? ಮತ್ತು ಜಡಪದಾರ್ಥದಲ್ಲಿ ಅಧಿಷ್ಠಿತರಾಗಿ ಮಾತನಾಡಲು ಹೇಗೆ ಸಮರ್ಥರಾಗುತ್ತಾರೆ? ಜಡಪದಾರ್ಥಗಳು ಬಹಳಷ್ಟು ಇರುವುದರಿಂದ ಅವುಗಳಲ್ಲೆಲ್ಲಾ ಒಬ್ಬರೇ ಇರಲು ಹೇಗೆ ಸಾಧ್ಯ? ಹೀಗೆ ಪ್ರಶ್ನಿಸಬಾರದು. ಏಕೆಂದರೆ 'ವಿಶೇಷಾನುಗತಿಭ್ಯಾಂ' ಅಭಿಮಾನಿದೇವತೆಗಳಿಗೆ ಸಕಲ ಪದಾರ್ಥಗಳಲ್ಲಿ ನೆಲೆಸಿರುವಿಕೆಯೆಂಬ ಅಂತಹ ಸಾಮರ್ಥ್ಯವು ಯುಕ್ತವಾಗುತ್ತದೆ.

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ವಿರಚಿತವಾದ

ಬ್ರಹ್ಮಸೂತ್ರಭಾಷ್ಯ

ವೇದಕ್ಕೆ ದೃಢಯುಕ್ತಿಯ ವಿರೋಧ

ब्रह्मसूत्रभाष्यम् — ।। 'मृदब्रवीत्' (श.ब्रा.६.१.३) 'आपोऽब्रुवन्' (श.ब्रा.६.१.३) इत्यादिवचनाद् युक्तिविरुद्धो वेद इति ।

ಅನುವಾದ - ಈ ಅಧಿಕರಣದಲ್ಲಿ ವಿಷ್ಣುವಿನ ಜಗತ್‌ಕರ್ತೃತ್ವ ಪ್ರತಿಪಾದಕ ವೇದಕ್ಕೆ ದೃಢವಾದ ಯುಕ್ತಿವಿರೋಧವನ್ನು ಹೇಳುವ ಮೂಲಕ ಅಪ್ರಾಮಾಣ್ಯವನ್ನು ಆಕ್ಷೇಪ ಮಾಡಿ ಪರಿಹರಿಸಲಾಗಿದೆ. ಪೂರ್ವಪಕ್ಷವನ್ನು 'ಮೃದಬ್ರವೀತ್' ಇತ್ಯಾದಿ ಭಾಷ್ಯದಲ್ಲಿ ಸಮರ್ಥಿಸಿದ್ದಾರೆ.

ಪ್ರತಿಪದಾರ್ಥ -- ಮೃದಬ್ರವೀತ್ = ಮಣ್ಣು ಮಾತನಾಡಿತು, ಆಪೋऽಬ್ರುವನ್= ನೀರುಗಳು ಮಾತನಾಡಿದವು. ಇತ್ಯಾದಿವಚನಾದ್ = ಇವೇ ಮೊದಲಾದ ಮಾತುಗಳಿಂದ, ವೇದ = ಶ್ರುತಿಯು, ಯುಕ್ತಿವಿರುದ್ಧಃ = ಯುಕ್ತಿಯಿಂದ ವಿರುದ್ಧವಾಗುತ್ತದೆ. ಆದ್ದರಿಂದ ಅಪ್ರಮಾಣವಾಗಿದೆ.

'ಮೃದಬ್ರವೀತ್' ಇತ್ಯಾದಿ ವೇದವಚನಗಳಿಗೆ ವ್ಯಾಖ್ಯಾನ

ब्रह्मसूत्रभाष्यम् — अतोऽब्रवीत् —

।। अभिमानिव्यपदेशस्तु विशेषानुगतिभ्याम् ।।१।।

मृदाद्यभिमानिदेवता तत्र व्यपदिश्यते ।

ಅನುವಾದ - ಈ ಮೇಲಿನ ಆಕ್ಷೇಪಕ್ಕೆ ಸೂತ್ರಕಾರರು 'ಅಭಿಮಾನಿವ್ಯಪದೇಶಸ್ತು ವಿಶೇಷಾನುಗತಿಭ್ಯಾಮ್' ಎಂದು ಉತ್ತರಿಸುತ್ತಿದ್ದಾರೆ. 'ಮೃದಬ್ರವೀತ್' ಇತ್ಯಾದಿ ವೇದವಾಕ್ಯಗಳು ಜಡಪದಾರ್ಥಕ್ಕೆ ವಚನಕ್ರಿಯೆಯನ್ನು ಹೇಳುತ್ತಿಲ್ಲ. ಜಡಪದಾರ್ಥದಲ್ಲಿರುವ ಅಭಿಮಾನಿಗಳಾದ ದೇವತೆಗಳನ್ನು ಪ್ರತಿಪಾದನೆ ಮಾಡುತ್ತಿವೆ.

ಪ್ರತಿಪದಾರ್ಥ -- ಅತೋऽಬ್ರವೀತ್ = ಮೇಲಿನ ಆಕ್ಷೇಪಕ್ಕೆ ಸೂತ್ರಕಾರರು ಉತ್ತರಿಸುತ್ತಿದ್ದಾರೆ. ತತ್ರ = ಪ್ರತ್ಯಕ್ಷವಿರುದ್ಧವಾದ ಸ್ಥಳದಲ್ಲಿ, ಮೃದಾದ್ಯಭಿಮಾನಿ-ದೇವತಾ = ಮಣ್ಣು ಮೊದಲಾದ ಭೂತಪದಾರ್ಥಗಳ ಅಭಿಮಾನಿ-ದೇವತೆಗಳು, ವ್ಯಪದಿಶ್ಯತೇ = ಪ್ರತಿಪಾದ್ಯರಾಗಿದ್ದಾರೆ.

'ಮೃದಬ್ರವೀತ್' ಎಂಬ ಶ್ರುತಿಯು ಅಭಿಮಾನಿದೇವತಾ ಪರ

ब्रह्मसूत्रभाष्यम् – तासां चेतरेभ्यो विशिष्टं सामर्थ्यमनुगतिश्च सर्वत्र । अतस्तासां सर्वमुक्तं युज्यते ।।१।।

ಅನುವಾದ - ಅಭಿಮಾನಿದೇವತೆಗಳಿಗೆ ಬೇರೆ ಚೇತನಾದಿಗಳಿಗಿಂತ ವಿಶಿಷ್ಟವಾದ ಸಾಮರ್ಥ್ಯವಿದೆ. ಅಂತರ್ಧಾನ ಶಕ್ತಿ ಹಾಗೂ ಎಲ್ಲೆಡೆ ಇರುವಿಕೆ ಎಂಬ ಸಾಮರ್ಥ್ಯವಿರುವುದರಿಂದ ವೇದವಾಕ್ಯಗಳಲ್ಲಿ ಹೇಳಿದ ವಿಷಯವು ಯುಕ್ತಿ ಯುಕ್ತವೇ ಆಗಿದೆ.

ಆದರೂ ಕೂಡ ಅಭಿಮಾನಿದೇವತೆಗಳನ್ನು ಒಪ್ಪುವುದು ಕಷ್ಟ. ಏಕೆಂದರೆ ಅವರಿಗೆ ದೇಹವಿಲ್ಲವೆಂದು ಹೇಳಿದರೆ ವಚನಕರ್ತೃತ್ವವನ್ನು ನಿರಾಕರಣೆ ಮಾಡಿದಂತಾಗುತ್ತದೆ. ದೇಹವನ್ನು ಒಪ್ಪಿದರೆ ಅಭಿಮನ್ಯವಾದ ಸಕಲ ಪದಾರ್ಥಗಳಲ್ಲಿ ಇದ್ದಾರೆಂದು ಹೇಳಬೇಕು. ಆವಾಗ ಪ್ರತಿಯೊಬ್ಬರಿಗೂ ಅವರ ದರ್ಶನವಾಗಬೇಕಾಗುತ್ತದೆ. ಕೆಲವು ಅಭಿಮನ್ಯಮಾನವಾದ ವಸ್ತುಗಳಲ್ಲಿ ಇದ್ದಾರೆಂದು ಹೇಳಿದರೆ ಎಲ್ಲಿ ಇರುವುದಿಲ್ಲವೋ ಆ ಸ್ಥಳದಲ್ಲಿ ಅವರು ಇಲ್ಲದಿದ್ದರೂ ಯುಕ್ತವಾಗುವುದರಿಂದ ವೈಯರ್ಥ್ಯದೋಷ ಬರುತ್ತದೆ ಹೀಗೆ ಯುಕ್ತಿವಿರುದ್ಧವಾದ್ದರಿಂದ ಅಭಿಮಾನಿದೇವತೆಗಳನ್ನು ಒಪ್ಪದಿರುವುದೇ ಲೇಸು. ಈ ಆಕ್ಷೇಪಕ್ಕೆ 'ವಿಶೇಷಾನುಗತಿಭ್ಯಾಂ' ಎಂಬ ಸೂತ್ರಭಾಗವು ಉತ್ತರವನ್ನು ನೀಡುತ್ತಿದೆ. ಅದನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ.

ಪ್ರತಿಪದಾರ್ಥ -- ತಾಸಾಂ ಚ = ತತ್ತ್ವಾಭಿಮಾನಿದೇವತೆಗಳಿಗೆ, ಇತರೇಭ್ಯಃ = ಸಾಮಾನ್ಯದೇವತೆಗಳಿಗಿಂತ, ವಿಶಿಷ್ಟಂ ಸಾಮರ್ಥ್ಯಮ್ = ಹೆಚ್ಚಿನ

ಸಾಮಾರ್ಥ್ಯವು, ಸರ್ವತ್ರ = ಎಲ್ಲೆಡೆಯು, ಅನುಗತಿಶ್ಚ = ಇರುವಿಕೆಯೂ ಕೂಡ ಯುಕ್ತವಾಗುತ್ತದೆ. ಅತಃ = ಈ ವೈಶಿಷ್ಟ್ಯ ಇರುವುದರಿಂದ, ತಾಸಾಂ = ಆ ತತ್ತ್ವಾಭಿಮಾನಿದೇವತೆಗಳಿಗೆ, ಉಕ್ತಂ ಸರ್ವಂ = ಹಿಂದೆ ಹೇಳಿದ್ದೆಲ್ಲವೂ, ಯುಜ್ಯತೇ = ಯುಕ್ತಿಯುಕ್ತವಾಗುತ್ತದೆ.

ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ

ಸತ್ತರ್ಕದೀಪಾವಳಿ

'ಮೃದಬ್ರವೀತ್' ಇತ್ಯಾದಿ ವೇದವಾಕ್ಯಗಳೂ ಕೂಡ ಅಪ್ರಮಾಣವಲ್ಲ

सत्तर्कदीपावलिः – 'यत् मृदादिकं तत् न ब्रवीति' इति युक्त्या विरुद्धत्वात् 'मृदब्रवीत्' इत्यादिवेदैकदेशस्य अप्रामाण्यात् । तद्वत् जगत्कर्तृत्वप्रतिपादकस्य वेदस्य नाप्रामाण्यं शङ्कनीयम् । मृदादिशब्दानां पृथिव्याद्यनुमतवक्तृत्वादिविशेषशक्तियुक्ततत्तद्देवतावाचित्वेन अविरुद्धत्वात् । तदाह – मृदित्यादिना ।।

''ಮೃದಾದಿಕಂ ನ ಬ್ರವೀತಿ ಜಡತ್ವಾತ್'' ಎಂಬ ಯುಕ್ತಿಯಿಂದ ವಿರುದ್ಧವಾಗಿರುವ ಕಾರಣ 'ಮೃದಬ್ರವೀತ್' ಎಂಬ ವೇದೈಕದೇಶಕ್ಕೆ ಅಪ್ರಾಮಾಣ್ಯವು ಪ್ರಾಪ್ತವಾಗುತ್ತದೆ. ಅದರಂತೆ ಜಗತ್ ಕರ್ತೃತ್ವಪ್ರತಿಪಾದಕವಾದ ವೇದಕ್ಕೂ ಕೂಡ ಅಪ್ರಾಮಾಣ್ಯವು ಬರುತ್ತದೆ ?

ಹೀಗೆ ಆಶಂಕಿಸಬಾರದು. ಮೃದಾದಿ ಶಬ್ದಗಳು ಪೃಥಿವ್ಯಾದಿಗಳಲ್ಲಿ ಅನುಗತವಾದ ಅಭಿಮಾನಿದೇವತೆಗಳನ್ನು ಪ್ರತಿಪಾದನೆ ಮಾಡುತ್ತಿವೆ. ಅಂಥ ಅಭಿಮಾನಿದೇವತೆಗಳಲ್ಲಿ ವಕ್ತೃತ್ವಾದಿ ವಿಶೇಷ ಶಕ್ತಿಯು ಇರುತ್ತದೆ. ಆದ್ದರಿಂದ ಅನುಮಾನದ ವಿರೋಧವನ್ನು ಶ್ರುತಿಗಳಿಗೆ ಹೇಳಲು ಸಾಧ್ಯವಿಲ್ಲ. ಇದನ್ನೇ 'ಮೃದಬ್ರವೀತ್' ಇತ್ಯಾದಿ ಭಾಷ್ಯದಿಂದ ಉಪಪಾದನೆ ಮಾಡಿದ್ದಾರೆ.

सत्तर्कदीपावलिः – तदेतत्प्रमाणवचनेन द्रढयति । पृथिव्याद्यभिमानिना इत्यादिना ।।३।।

ಇದನ್ನೇ ಪ್ರಮಾಣವಚನದಿಂದ ಸ್ಪಷ್ಟ ಪಡಿಸುತ್ತಿದ್ದಾರೆ. 'ಪೃಥಿವ್ಯಾದ್ಯಭಿಮಾನಿನಾ' ಇತ್ಯಾದಿ ಭಾಷ್ಯದಿಂದ.

॥ ಇಲ್ಲಿಗೆ ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ ಸತ್ತರ್ಕದೀಪಾವಳಿಯಲ್ಲಿ
ಅಭಿಮಾನ್ಯಧಿಕರಣದ ಕನ್ನಡಾನುವಾದವು ಸಮಾಪ್ತವಾಯಿತು ॥

ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ

ತತ್ತ್ವಪ್ರದೀಪ

'ಮೃದಬ್ರವೀತ್' ಇತ್ಯಾದಿ ಶ್ರುತಿಗಳ ವ್ಯಾಖ್ಯಾನ

तत्वप्रदीपः – 'मृदब्रवीत्' 'तत् तेज ऐक्षत' इत्यादौ अचेतनानां वक्तृत्वाद्युक्तेर्युक्तिविरुद्धोऽयं वेदः । प्रत्यक्षमूला च सा न चालयितुं शक्यत इत्यतोऽब्रवीत् – अभिमानिव्यपदेशस्तु विशेषानुगतिभ्याम् ॥ मृदाद्यभिमानिन्यो देवतास्तत्र वक्त्र्यादयो व्यपदिश्यन्ते । नत्वभिमन्यमानाः। मृदादिशब्दाश्च तासु मुख्याः । तासाम् इतरेभ्यः सामर्थ्याऽविक्यात् सर्वगतत्वाच्च सर्वं उक्तिदृष्ट्यादिकं तत्र तत्र उक्तं युज्यते ॥ इत्यभिमान्यधिकरणम् (४४)

'ಮೃದಬ್ರವೀತ್' 'ತತ್ ತೇಜ ಐಕ್ಷತ' ಇತ್ಯಾದಿ ವೇದವಾಕ್ಯಗಳು ಜಡಪದಾರ್ಥದಲ್ಲೂ ವಕ್ತೃತ್ವಾದಿಗಳನ್ನು ಹೇಳುತ್ತಿದೆ. ಈ ವೇದವು ಯುಕ್ತಿವಿರುದ್ಧವಾಗಿದೆ. ಆ ಯುಕ್ತಿಯು ಪ್ರತ್ಯಕ್ಷಮೂಲವಾದ್ದರಿಂದ ಬಲಿಷ್ಠವಾಗಿದೆ. ಇದನ್ನು ಅಲ್ಲಾಡಿಸಲೂ ಕೂಡ ಸಾಧ್ಯವಿಲ್ಲ. ಈ ಪ್ರಶ್ನೆಗೆ ಉತ್ತರವನ್ನು ನೀಡುವುದಕ್ಕಾಗಿ 'ಅಭಿಮಾನಿವ್ಯಪದೇಶಸ್ತು ವಿಶೇಷಾನುಗತಿಭ್ಯಾಮ್' ಎಂಬ ಸೂತ್ರವು ಹೊರಟಿದೆ. 'ಮೃದಬ್ರವೀತ್' ಇತ್ಯಾದಿ ವೇದಮಂತ್ರವು ಮೃದಾದಿಗಳಿಗೆ ಯಾವ ಅಭಿಮಾನಿದೇವತೆಗಳಿದ್ದಾರೋ, ಅವರಲ್ಲಿ ವಕ್ತೃತ್ವಾದಿಗಳನ್ನು ಹೇಳುತ್ತಿದೆ. ಅವರಿಂದ

ಅಭಿಮನ್ಯಮಾನವಾದ ಜಡಪದಾರ್ಥದಲ್ಲಿ ವಕ್ತೃತ್ವಾದಿಗಳನ್ನು ಹೇಳುತ್ತಿಲ್ಲ. ಮೃದಾದಿ ಶಬ್ದಗಳು ಅಭಿಮಾನಿದೇವತೆಗಳಲ್ಲೇ ಮುಖ್ಯವಾಗಿ ಸಮನ್ವಯಗೊಳ್ಳುತ್ತವೆ. ಅಂಥ ಅಭಿಮಾನಿದೇವತೆಗಳ ಬೇರೆಯವರಿಗಿಂತ ಅಧಿಕವಾದ ಸಾಮರ್ಥ್ಯವನ್ನು ಹೊಂದಿದ್ದಾರೆ ಮತ್ತು ಸರ್ವಗತರಾಗಿದ್ದಾರೆ. ಆದ್ದರಿಂದ ಮಾತನಾಡುವಿಕೆ, ನೋಡುವಿಕೆ ಮೊದಲಾದ ಅಚಿಂತ್ಯಶಕ್ತಿಗಳು ಅವರಲ್ಲಿ ಯುಕ್ತವಾಗುತ್ತವೆ.

॥ ಇಲ್ಲಿಗೆ ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ ತತ್ತ್ವಪ್ರದೀಪದಲ್ಲಿ
ಅಭಿಮಾನ್ಯಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

ಶ್ರೀಮಜ್ಜಯತೀರ್ಥಭಿಕ್ಷುಗಳಿಂದ ವಿರಚಿತವಾದ

ತತ್ತ್ವಪ್ರಕಾಶಿಕಾ

ಅಧಿಕರಣಕ್ಕೆ ಶಾಸ್ತ್ರಾದಿಸಂಗತಿಗಳು

तत्वप्रकाशिका – अत्र पुनर्विष्णोः, सर्वकर्तृत्वादिप्रतिपादकवेदप्रामाण्ये युक्तिविरोधपरिहारादस्ति शास्त्रादिसङ्गतिः ।

ಈ ಅಧಿಕರಣದಲ್ಲಿ ಮಹಾವಿಷ್ಣು ಕರ್ತೃವಾಗಿದ್ದಾನೆ ಎಂದು ಪ್ರತಿಪಾದನೆ ಮಾಡುವ ವೇದಗಳಿಗೆ ಯುಕ್ತಿವಿರೋಧದ ಮೂಲಕ ಅಪ್ರಾಮಾಣ್ಯವನ್ನು ಆಶಂಕಿಸಿದರೆ ಅದನ್ನು ಪರಿಹಾರ ಮಾಡಲಾಗಿದೆ. ಆದ್ದರಿಂದ ಶಾಸ್ತ್ರಸಂಗತಿ, ಅಧ್ಯಾಯಸಂಗತಿ ಹಾಗೂ ಪಾದಸಂಗತಿಗಳು ಇರುತ್ತವೆ.

ವೇದಪ್ರಾಮಾಣ್ಯ ವಿಷಯದಲ್ಲಿ ಯುಕ್ತಿವಿರೋಧ ಪರಿಹಾರ

तत्वप्रकाशिका – वेदप्रामाण्यात् सर्वकारणत्वं विष्णोरित्युक्तम् । तत्प्रामाण्यस्य च युक्तिविरोधे न विष्णोर्जगत्कारणत्वं सिध्यतीत्यतोऽसौ परिहार्य एव ।

ಸಕಲವೇದಗಳು ಪ್ರಮಾಣವಾಗಿರುವುದರಿಂದ ಮಹಾವಿಷ್ಣುವೇ ಸಕಲಜಗಜ್ಜನ್ಮಾದಿಕಾರಣನಾಗಿದ್ದಾನೆಂದು ಈ ಹಿಂದೆ ಸಮರ್ಥಿಸಲಾಯಿತು. ಇಂಥ ವೇದಪ್ರಾಮಾಣ್ಯವಿಷಯದಲ್ಲಿ ಯುಕ್ತಿವಿರೋಧವನ್ನು ಪರಿಹಾರ ಮಾಡಲೇಬೇಕು.

ಅಧಿಕರಣದ ವಿಷಯಾದಿಗಳು

तत्वप्रकाशिका – स वेदो विषयः । प्रमाणं न वेति सन्देहः । पूर्वोक्तमेवात्र सन्देहबीजम् । पूर्वपक्षयति – मृदिति ।

ಈ ಅಧಿಕರಣದಲ್ಲಿ ಆಪಾತತಃ ಯುಕ್ತಿವಿರೋಧವಿರುವ ವೇದವಾಕ್ಯಗಳು ವಿಷಯವಾಗಿವೆ. ಅಂಥ ವೇದವಾಕ್ಯಗಳು ಪ್ರಮಾಣವೋ ಅಲ್ಲವೊ ? ಎಂಬುದೇ ಸಂದೇಹ. ಕೆಲವು ವೇದವಾಕ್ಯಗಳು ಫಲಸಂವಾದವಿಲ್ಲದ ಅರ್ಥವನ್ನು ಪ್ರತಿಪಾದನೆ ಮಾಡುತ್ತಿವೆ. ಇನ್ನು ಕೆಲವು ವಾಕ್ಯಗಳು ಫಲಸಂವಾದಿಯಾದ ಅರ್ಥವನ್ನು ಪ್ರತಿಪಾದನೆ ಮಾಡುತ್ತಿವೆ. ಇದು ಸಂದೇಹಕ್ಕೆ ಬೀಜ. ಪೂರ್ವಪಕ್ಷವನ್ನು 'ಮೃದಬ್ರವೀತ್' ಇತ್ಯಾದಿ ಭಾಷ್ಯದಿಂದ ತೋರಿಸುತ್ತಿದ್ದಾರೆ.

ಶ್ರುತಿಗಳು ಬಾಧಿತಾರ್ಥಕಗಳು

तत्वप्रकाशिका – न वेदः प्रमाणम् । 'मृदब्रवीत्' 'आपोऽपब्रुवन्', 'ता आप ऐक्षन्त' 'तत्तेज ऐक्षत' 'ओषधयः संवदन्ते' इत्यादिना मृदादीनां वचनदर्शनाद्यभिधायकत्वात् ।

ವೇದವು ಪ್ರಮಾಣವಲ್ಲ. ಏಕೆಂದರೆ 'ಮೃದಬ್ರವೀತ್' 'ಆಪೋ ಅಬ್ರುವನ್' 'ತಾ ಆಪ ಐಕ್ಷಂತ' 'ತತ್‌ತೇಜ ಐಕ್ಷತ' 'ಓಷಧಯಃ ಸಂವದಂತೇ' ಇವೇ ಮೊದಲಾದ ಶ್ರುತಿವಾಕ್ಯಗಳು ಜಡಪದಾರ್ಥಗಳಾದ ಮಣ್ಣು ನೀರು ಮೊದಲಾದವುಗಳಲ್ಲಿಯೂ 'ಮಾತನಾಡುವಿಕೆ' 'ನೋಡುವಿಕೆ' ಮೊದಲಾದ ಕ್ರಿಯೆಗಳನ್ನು ಪ್ರತಿಪಾದನೆ ಮಾಡುತ್ತಿವೆ. ಆದ್ದರಿಂದ ಇವುಗಳಿಗೆ ಅಪ್ರಾಮಾಣ್ಯವನ್ನು ಒಪ್ಪಬೇಕು.

ಯುಕ್ತಿವಿರುದ್ಧವಾದದ್ದಕ್ಕೆ ಪ್ರಾಮಾಣ್ಯವಿಲ್ಲ

तत्वप्रकाशिका – तथात्वेऽपि कुतोऽप्रामाण्यम् । मृन्न वक्त्री

जडत्वादित्यादियुक्तिविरुद्धत्वेन मृदादिवचनादेरसत्त्वात् । असदभिधायकत्वमेवाप्रामाण्यम् ।

ಜಡಪದಾರ್ಥಗಳಿಗೆ ದರ್ಶನಾದಿಕ್ರಿಯೆಗಳನ್ನು ಪ್ರತಿಪಾದನೆ ಮಾಡಿದ ಮಾತ್ರಕ್ಕೆ ಶ್ರುತಿಯು ಏಕೆ ಅಪ್ರಮಾಣವಾಗಬೇಕು ಎಂದು ಪ್ರಶ್ನಿಸಬಾರದು. 'ಮೃತ್ ನ ವದತಿ ಜಡತ್ವಾತ್' ಜಡವಾದ್ದರಿಂದ ಮಣ್ಣು ಮಾತನಾಡುವುದಿಲ್ಲ, ಇವೇ ಮೊದಲಾದ ಯುಕ್ತಿಯ ವಿರೋಧ ಇರುವುದರಿಂದ ಅಂಥ ವಾಕ್ಯಗಳು ಅಪ್ರಮಾಣವಾಗಲೇ ಬೇಕು. ಮಣ್ಣು ಮೊದಲಾದ ಜಡಪದಾರ್ಥಗಳಲ್ಲಿ ವಚನಕ್ರಿಯಾದಿಗಳು ಇರಲು ಸಾಧ್ಯವೇ ಇಲ್ಲ. ಇಲ್ಲದ ವಿಷಯವನ್ನು ಪ್ರತಿಪಾದನೆ ಮಾಡುವ ವೇದವಾಕ್ಯಗಳು ಅಪ್ರಾಮಾಣ್ಯವನ್ನು ಹೊಂದುತ್ತವೆ.

'ಯತೋ ವಾ ಇಮಾನಿ ಭೂತಾನಿ' ಇತ್ಯಾದಿ ಶ್ರುತಿಗಳೂ ಕೂಡ ಪ್ರಮಾಣ

तत्वप्रकाशिका – एवञ्च युक्तिविरुद्धार्थत्वेन वेदैकदेशस्याप्रामाण्येऽन्यस्याप्यप्रामाण्यमिति न विष्णोस्तेन जगत्कारणत्वसिद्धिरिति भावः ।

ಆದ್ದರಿಂದ ಯುಕ್ತಿವಿರುದ್ಧವಾದ ಅರ್ಥವನ್ನು ಪ್ರತಿಪಾದನೆ ಮಾಡುತ್ತಿರುವುದರಿಂದ 'ಮೃದಬ್ರವೀತ್' ಇತ್ಯಾದಿ ವೇದದ ಕೆಲವು ವಾಕ್ಯಗಳು ಅಪ್ರಮಾಣವಾಗುತ್ತವೆ ಎಂದು ಸಾಧಿಸಬಹುದು. ಆದ್ದರಿಂದ ವಿಷ್ಣುವಿಗೆ ಸರ್ವಕರ್ತೃತ್ವವನ್ನು ಪ್ರತಿಪಾದಿಸುವ 'ಯತೋ ವಾ ಇಮಾನಿ ಭೂತಾನಿ' ಇತ್ಯಾದಿ ವೇದವಾಕ್ಯಗಳೂ ಕೂಡ ಅಪ್ರಮಾಣವಾಗುತ್ತವೆ. ಆದ್ದರಿಂದ ವಿಷ್ಣುವಿಗೆ ಜಗತ್ಕಾರಣತ್ವವು ಸಿದ್ಧವಾಗುವುದಿಲ್ಲ. ಇಷ್ಟು ಪೂರ್ವಪಕ್ಷದ ಅಭಿಪ್ರಾಯ.

ಅಭಿಮಾನ್ಯಧಿಕರಣಕ್ಕೆ ಸಂಗತಿ ಹೇಗೆ ?

तत्वप्रकाशिका – ननु मृदादिवचनाद्यभिधायकवाक्यस्य प्रत्यक्षविरोध एव प्रथमं स्फुरत्यतो न पादसङ्गतिः ।

ಪ್ರಶ್ನೆ - 'ಮಣ್ಣು ಮಾತನಾಡುತ್ತದೆ' 'ನೀರು ನೋಡುತ್ತದೆ' ಇತ್ಯಾದಿಯಾಗಿ ಹೇಳುವ ಶ್ರುತಿವಾಕ್ಯಗಳಿಗೆ ಪ್ರತ್ಯಕ್ಷವಿರೋಧವೇ ಮೊಟ್ಟಮೊದಲು ಉಪಸ್ಥಿತವಾಗುತ್ತದೆ. ಹೀಗಿರುವಾಗ

ಯುಕ್ತಿವಿರೋಧವನ್ನು ಪರಿಹರಿಸುವ ಈ ಪಾದದಲ್ಲಿ ಅಭಿಮಾನ್ಯಧಿಕರಣಕ್ಕೆ ಹೇಗೆ ಸಂಗತಿಯು ಕೂಡುತ್ತದೆ ?

ಈ ಅಧಿಕರಣವು ಯುಕ್ತಿವಿರೋಧವನ್ನೇ ಪರಿಹರಿಸುತ್ತಿದೆ

तत्वप्रकाशिका – मैवम् । आदिसृष्टावेवपृथिव्यादीनां तदभिधानात् । तदानीन्ततनवचनाद्यभावस्यास्मदाद्यप्रत्यक्षत्वेन युक्तेरेवाश्रयणीयत्वात् ।

ಉತ್ತರ - ಈ ಆಕ್ಷೇಪ ಸರಿಯಲ್ಲ. ಏಕೆಂದರೆ 'ಮೃದಬ್ರವೀತ್' ಇತ್ಯಾದಿ ವೇದವಾಕ್ಯಗಳಲ್ಲಿ ಸೃಷ್ಟಿಯ ಪ್ರಾರಂಭದ ಪೃಥಿವ್ಯಾದಿಗಳನ್ನು ವಿವಕ್ಷಿಸಿ ವಚನಕ್ರಿಯೆಯನ್ನು ಹೇಳಲಾಗಿದೆ. ಸೃಷ್ಟಿಯ ಪ್ರಾರಂಭದ ಪೃಥಿವ್ಯಾದಿಗಳು ನಮ್ಮ ಪ್ರತ್ಯಕ್ಷದಿಂದ ಸಿದ್ಧವಾಗಿಲ್ಲ. ಹೀಗಿರುವಾಗ ಪ್ರತ್ಯಕ್ಷ-ವಿರೋಧವನ್ನು ಹೇಳಲು ಹೇಗೆ ಸಾಧ್ಯ ? ಆದ್ದರಿಂದ ಯುಕ್ತಿವಿರೋಧವನ್ನೇ ಆಶ್ರಯಿಸಬೇಕು. ವೇದವಾಕ್ಯಗಳಿಗೆ ಹೀಗೆ ಯುಕ್ತಿವಿರೋಧವೇ ಸ್ಪಷ್ಟವಾಗಿರುವುದರಿಂದ ಯುಕ್ತಿವಿರೋಧವನ್ನು ಪರಿಹರಿಸುವ ಈ ಪಾದದಲ್ಲಿ ಅಭಿಮಾನ್ಯಧಿಕರಣವು ಸಂಗತವಾಗುತ್ತದೆ.

ಅಧಿಕರಣದ ಸಿದ್ಧಾಂತ

तत्वप्रकाशिका – सिद्धान्तयत्सूत्रमवतार्य व्याचष्टे – अत इति ।। तुशब्दोऽवधारणे ।

ಸಿದ್ಧಾಂತಸ್ಥಾಪಕವಾದ ಸೂತ್ರಕ್ಕೆ ಅವತಾರಿಕೆ ನೀಡಿ ವ್ಯಾಖ್ಯಾನ ಮಾಡಲು 'ಅಥ' ಇತ್ಯಾದಿ ಭಾಷ್ಯದ ಮಾತು ಹೊರಟಿದೆ. 'ತು' ಶಬ್ದವು ಅವಧಾರಣಾರ್ಥದಲ್ಲಿದೆ.

ದೇವತೆಗಳಲ್ಲಿ ವಚನಕ್ರಿಯಾದಿಗಳನ್ನು ಹೇಳುತ್ತಿದೆ

तत्वप्रकाशिका – भवेदेतदुक्तं यद्यत्र मृदाद्येवोच्यते नैतदस्ति । मृदाद्यभिमानिनीनां देवतानामेव तत्र व्यपदेशादित्यर्थः ।

ಒಂದುವೇಳೆ 'ಮೃದಬ್ರವೀತ್' ಇತ್ಯಾದಿ ವಾಕ್ಯಗಳು ಜಡಪದಾರ್ಥಗಳಿಗೆ ವಚನಾದಿಗಳನ್ನು ಹೇಳಿದ್ದಲ್ಲಿ ಅಪ್ರಾಮಾಣ್ಯವು ಬರುತ್ತಿತ್ತು. ಆದರೆ ಜಡಪದಾರ್ಥಗಳಿಗೆ ವಚನಾದಿಕ್ರಿಯೆಗಳನ್ನು

ಹೇಳುವುದರಲ್ಲಿ ಶ್ರುತಿಗೆ ಅಭಿಪ್ರಾಯವಿಲ್ಲ. ಹೊರತು ಮಣ್ಣು, ನೀರು ಮೊದಲಾದ ಜಡಪದಾರ್ಥಗಳಲ್ಲಿ ಯಾವ ಅಭಿಮಾನಿದೇವತೆಗಳು ನೆಲೆಸಿದ್ದಾರೊ ಅಂಥ ದೇವತೆಗಳು ಮಾತನಾಡಿದರು, ನೋಡಿದರು ಎಂದು ಶ್ರುತಿ ಪ್ರತಿಪಾದನೆ ಮಾಡುತ್ತಿದೆ. ಚೇತನರಾದ ದೇವತೆಗಳಲ್ಲಿ ವಚನಾದಿಕ್ರಿಯೆಗಳು ಯುಕ್ತವಾಗುತ್ತವೆ.

ಅಪೌರುಷೇಯವಾದ ಶ್ರುತಿಯು ಅತ್ಯಂತ ಪ್ರಬಲ

तत्वप्रकाशिका – स्यान्मतम् । श्रुतियुक्त्योः श्रुतेरेव प्राबल्यात् तद्विरुद्ध-युक्तेवाप्रामाण्यं वक्तव्यं किं युक्तिविरोधपरिहाराय श्रुतेरन्यार्थकल्पनया ।

ಈ ಅಧಿಕರಣದಲ್ಲಿ ಯುಕ್ತಿವಿರೋಧವನ್ನು ಆಕ್ಷೇಪ ಮಾಡುತ್ತಿರುವುದೇ ತಪ್ಪು. ಏಕೆಂದರೆ ಶ್ರುತಿ ಮತ್ತು ಯುಕ್ತಿಗಳಲ್ಲಿ ಪರಸ್ಪರ ವಿರೋಧ ಬಂದಾಗ ಶ್ರುತಿಯು ಅಪೌರುಷೇಯವಾದ್ದರಿಂದ ಪ್ರಬಲವಾಗಿದೆ. ಅದರ ವಿರೋಧವನ್ನು ಯುಕ್ತಿಗೆ ಹೇಳಬೇಕೆ ಹೊರತು ದುರ್ಬಲವಾದ ಯುಕ್ತಿಯ ವಿರೋಧವನ್ನು ಶ್ರುತಿಗೆ ಹೇಳಬಾರದು. ಯುಕ್ತಿವಿರೋಧದಿಂದ ಶ್ರುತಿಗೆ ಅನ್ಯಾರ್ಥವನ್ನು ಏಕೆ ಕಲ್ಪಿಸುತ್ತಿದ್ದೀರಿ ?

'ಮೃದಬ್ರವೀತ್' ಎಂಬುದಕ್ಕೆ ಪ್ರತ್ಯಕ್ಷವಿರೋಧವಿಲ್ಲ

तत्वप्रकाशिका – न चोपजीव्यप्रत्यक्षविरोध इत्युक्तमिति ।

ವೇದವಾಕ್ಯಗಳಿಗೆ ಉಪಜೀವ್ಯವಾದ ಪ್ರತ್ಯಕ್ಷವಿರೋಧ ಬಂದಾಗ ಅನ್ಯಾರ್ಥವನ್ನು ಕಲ್ಪಿಸುವುದು ಕಂಡಿದೆ. ಆದರೆ 'ಮೃದಬ್ರವೀತ್' ಇತ್ಯಾದಿ ಸ್ಥಳದಲ್ಲಿ ಪ್ರತ್ಯಕ್ಷವಿರೋಧಕ್ಕೆ ಅವಕಾಶವೇ ಇಲ್ಲ ಎಂದು ಈ ಹಿಂದೆಯೇ ನಿರೂಪಣೆ ಮಾಡಿದ್ದಾಗಿದೆ. ಆದ್ದರಿಂದ ಅಭಿಮಾನಿದೇವತಾಪರವಾಗಿ ಈ ವಾಕ್ಯಗಳನ್ನು ಏಕೆ ವ್ಯಾಖ್ಯಾನ ಮಾಡುತ್ತಿದ್ದೀರಿ ?

ಮುಖ್ಯಾರ್ಥವನ್ನು ಬಿಟ್ಟಿಲ್ಲ

तत्वप्रकाशिका – मैवम् । अन्यार्थकल्पने मुख्यार्थलाभात् ।

ಉತ್ತರ - ಈ ಪ್ರಶ್ನೆ ಸರಿಯಿಲ್ಲ. ಏಕೆಂದರೆ 'ಮೃದಬ್ರವೀತ್' ಇತ್ಯಾದಿ ವೇದವಾಕ್ಯಗಳಿಗೆ

ಅನ್ಯಾರ್ಥವನ್ನು ಕಲ್ಪನೆ ಮಾಡುವುದರಿಂದಲೇ ಮುಖ್ಯಾರ್ಥವನ್ನು ಹೇಳಿದಂತಾಗುತ್ತದೆ. ಆದ್ದರಿಂದ ಮುಖ್ಯಾರ್ಥವನ್ನು ಬಿಟ್ಟರುವ ದೋಷವು ತಟ್ಟುವುದಿಲ್ಲ.

ಅಭಿಮಾನಿ ದೇವತೆಗಳು ಇದ್ದಾರೆಯೇ ?

तत्वप्रकाशिका – (ननु) नाभिमानिदेवता नाम सन्ति । तथाहि किं ता अभिमन्यमानव्यापिन्यः किं वा तदेकदेशवर्तिन्यः ।

ಅಭಿಮಾನಿದೇವತೆಗಳೇ ಇರುವುದಿಲ್ಲ. ಹೀಗಿರುವಾಗ 'ಅಭಿಮಾನಿದೇವತೆಯು ಮಾತನಾಡಿತು' ಎಂದು ಅರ್ಥೈಸುವುದು ಹೇಗೆ ಸರಿ ? ಏಕೆಂದರೆ ಅಭಿಮಾನಿದೇವತೆಗಳು ಇರುವುದಾದರೆ ಅಭಿಮಾನ್ಯಮಾನವಾದ ಸಕಲ ಪದಾರ್ಥಗಳಲ್ಲಿ ವ್ಯಾಪಿಸಿಕೊಂಡು ಇದ್ದರೋ, ಅಥವಾ ಏಕದೇಶದಲ್ಲಿ ಇದ್ದರೋ ? ಎಂಬ ಪ್ರಶ್ನೆಗೆ ಉತ್ತರಿಸಬೇಕು.

ಅಭಿಮಾನಿದೇವತೆಗಳನ್ನು ಕಲ್ಪಿಸುವುದು ವ್ಯರ್ಥವಲ್ಲವೇ?

तत्वप्रकाशिका – आद्येऽपि विग्रहवत्यो न वा । न प्रथमः । उपलम्भप्रसङ्गात्। न द्वितीयः । वचनाद्ययोगात् । नान्त्यः । तद्रहितदेशवद्देशा न्तरावस्थानोपपत्तौ तद्वैयर्थ्यादित्यत आह – तासां चेति ।।

ಅಭಿಮನ್ಯಮಾನವಾದ ಸಕಲ ಪದಾರ್ಥದಲ್ಲಿ ವ್ಯಾಪಿಸಿದ್ದಾರೆ ಎಂದು ಉತ್ತರಿಸುವುದಾದರೆ ಅವರಿಗೆ ಶರೀರ ಇದೆಯೋ, ಇಲ್ಲವೊ? ಎಂಬ ಪ್ರಶ್ನೆಗೆ ಉತ್ತರಿಸಬೇಕು. 'ಶರೀರ ಇದೆ' ಎನ್ನುವುದಾದರೆ ನಮಗೂ ಕಾಣಿಸಬೇಕಾದೀತು. ಶರೀರ ಇಲ್ಲದಿದ್ದರೆ ಮಾತನಾಡಲು ಅಸಮರ್ಥರಾಗುತ್ತಾರೆ. ಇನ್ನು ಏಕದೇಶದಲ್ಲಿ ಅಭಿಮಾನಿದೇವತೆಗಳು ಇರುತ್ತಾರೆ ಎಂದು ಹೇಳಬೇಕು. ಇದು ವ್ಯರ್ಥ. ಏಕೆಂದರೆ ಯಾವ ಏಕದೇಶದಲ್ಲಿ ಅಭಿಮಾನಿದೇತೆಗಳು ಇಲ್ಲವೊ, ಆದರೂ ಅಲ್ಲಿ ಹೇಗೆ ವ್ಯವಹಾರ ನಡೆಯುತ್ತದೋ; ಆದರಂತೆ ಉಳಿದ ಕಡೆಯು ಕೂಡಿಸಲು ಬರುವಾಗ ಕೆಲವು ಸ್ಥಳದಲ್ಲಿ ಮಾತ್ರ ಅಭಿಮಾನಿದೇವತೆಗಳನ್ನು ಕಲ್ಪಸುವುದು ವ್ಯರ್ಥವಾಗಿದೆ. ಈ ಆಕ್ಷೇಪಕ್ಕೆ 'ತಾಸಾಂಚ' ಇತ್ಯಾದಿ ಭಾಷ್ಯದ ಮಾತುಗಳಿಂದ ಉತ್ತರಿಸಿದ್ದಾರೆ.

ಅಭಿಮಾನಿದೇವತೆಗಳು ಇದ್ದಾರೆ

तत्वप्रकाशिका – न चाभिमानिदेवताभावो वाच्यः । यत् प्रागुक्तं तत्रास्त्येव तासां सर्वत्रानुगतिर्विग्रहश्चेति ब्रूमः ।

ಅಭಿಮಾನಿದೇವತೆಗಳೇ ಇಲ್ಲವೆಂದು ಹೇಳಬಾರದು. ಮತ್ತು ಹಿಂದೆ ಹೇಳಿದಂತೆ ಶರೀರವಿಲ್ಲವೆಂದು ಹೇಳಬಾರದು. ಅಭಿಮಾನಿದೇವತೆಗಳಿಗೆ ಅಭಿಮನ್ಯಮಾನವಸ್ತುಗಳಲ್ಲಿ ವ್ಯಾಪ್ತಿಯು ಬರುತ್ತದೆ. ಮತ್ತು ಶರೀರವೂ ಕೂಡ ಇರುತ್ತದೆ.

ಇದ್ದ ಮಾತ್ರಕ್ಕೆ ಕಾಣಿಸಬೇಕಾಗಿಲ್ಲ

तत्वप्रकाशिका – न च दर्शनप्रसङ्गः सर्वगतानां विग्रहवतीनामपि तासामितरपदार्थेभ्यो विशेषसामार्थ्येनादर्शनसम्भवादिति भावः ।

ಹಾಗಾದರೆ ಅಭಿಮಾನಿದೇವತೆಗಳ ದರ್ಶನವು ನಮಗೂ ಆಗಬೇಕಲ್ಲವೆ ? ಎಂದು ಪ್ರಶ್ನಿಸಬಾರದು. ಅಭಿಮಾನಿದೇವತೆಗಳು ಎಲ್ಲೆಡೆ ಇದ್ದರೂ, ಶರೀರವುಳ್ಳವರಾಗಿದ್ದರೂ ಉಳಿದ ಪದಾರ್ಥಗಳಿಗಿಂತ ವಿಶೇಷಸಾಮರ್ಥ್ಯವು ಅವರಲ್ಲಿದೆ. ನಮ್ಮ ಕಣ್ಣಿಗೆ ಕಾಣದೆ ಇರುವ ಶಕ್ತಿ ಅವರಲ್ಲಿ ಇದೆ. ಆದ್ದರಿಂದ ಯಾವುದೇ ದೋಷಕ್ಕೆ ಅವಕಾಶವಿಲ್ಲ.

ಅಭಿಮಾನಿದೇವತೆಗಳಲ್ಲೇ ವಚನಕ್ರಿಯಾದಿಗಳಿವೆ

तत्वप्रकाशिका – सन्तु देवताः प्रकृते किमायातमित्यत आह – अत इति।। यतोऽत्र मृदादिशब्दैर्देवता व्यपदिश्यन्तेऽतस्तासां चेतनत्वनेन श्रुत्युक्तं सर्वं वचनादिकं युक्तमतो न युक्तिविरुद्धं वेदवाक्यमिति भावः ।

ಅಭಿಮಾನಿದೇವತೆಗಳಿರಲಿ; ಅವರಲ್ಲಿ ಅಂಥ ವಿಶೇಷಶಕ್ತಿಯೂ ಕೂಡ ಇರಲಿ ಇದರಿಂದ ಪ್ರಕೃತದಲ್ಲಿ ಏನು ಹೇಳಿದಂತಾಯಿತು ? ಎಂಬ ಪ್ರಶ್ನೆಗೆ 'ಅಥ' ಎಂಬ ಭಾಷ್ಯದ ಮಾತಿನಿಂದ ಉತ್ತರಿಸಿದ್ದಾರೆ. ಯಾವ ಕಾರಣದಿಂದ ಮೃದಾದಿಶಬ್ದಗಳಿಂದ ಆಯಾ ದೇವತೆಗಳನ್ನು ಕರೆಯಲಾಗಿದೆಯೊ ಆ ಕಾರಣದಿಂದ ಚೇತನರಾದ ದೇವತೆಗಳಲ್ಲಿ ವಚನಕ್ರಿಯಾದಿಗಳೆಲ್ಲವೂ

ಸಂಗತವಾಗುತ್ತವೆ. ಮತ್ತು ವೇದವಾಕ್ಯಕ್ಕೆ ಹಿಂದೆ ಹೇಳಿದಂತೆ ಯುಕ್ತಿವಿರೋಧವು ಕೂಡ ಬರುವುದಿಲ್ಲ. ಇಷ್ಟು ಅಭಿಪ್ರಾಯವನ್ನು 'ಅತಃ' ಎಂಬ ವಾಕ್ಯಕ್ಕೆ ತಿಳಿಯಬೇಕು.

ಏಕವಚನ ಪ್ರಯೋಗಕ್ಕೆ ಕಾರಣ

तत्वप्रकाशिका – अत्रैकवचनस्य सूत्रगतत्वादभिमानिदेवतेत्युक्तम् । तच्च समुदायविवक्षयेति भावेन तासामित्यादि दृश्यते । चेत्युत्तरसूत्रानुगुण्येनात्र विग्रहस्य ग्राह्यत्वात् ।

'ಅಭಿಮಾನಿದೇವತಾ ವ್ಯಪದಿಶ್ಯತೇ' ಎಂಬಲ್ಲಿ ಏಕವಚನಪ್ರಯೋಗವನ್ನು ಮಾಡಿದ್ದಾರೆ. ವಾಸ್ತವಿಕವಾಗಿ ಅಭಿಮಾನಿದೇವತೆಗಳು ಅನೇಕ ಮಂದಿ ಇರುವುದರಿಂದ ಬಹುವಚನವನ್ನು ಪ್ರಯೋಗಿಸಬೇಕಿತ್ತು. ಆದರೂ ಏಕವಚನವನ್ನು ಹೇಗೆ ಪ್ರಯೋಗಿಸಿದರು ? ಅಭಿಮಾನಿದೇವತೆಗಳು ಅನೇಕರಿಲ್ಲದ ಕಾರಣ ಏಕವಚನವನ್ನು ಪ್ರಯೋಗಿಸಿದ್ದಾರೆ ಎನ್ನುವುದಾದರೆ ಮುಂದಿನ ವಾಕ್ಯದಲ್ಲಿ 'ತಾಸಾಂ ಚ' ಎಂಬುದಾಗಿ ಬಹುವಚನವನ್ನು ಪ್ರಯೋಗಿಸಿದ್ದಾರೆ. ಹಿಂದಿನ ವಾಕ್ಯದಲ್ಲಿ ಪ್ರಕೃತವಾದದ್ದನ್ನೇ ಮುಂದಿರುವ ಸರ್ವನಾಮಶಬ್ದದಿಂದ ಪರಾಮರ್ಶೆ ಮಾಡಬೇಕು. ಹೀಗಿರುವಾಗ ಏಕವಚನವನ್ನು ಪ್ರಯೋಗ ಮಾಡಿದ್ದು ತಪ್ಪು.

ಇದು ತಪ್ಪು. ಸೂತ್ರದಲ್ಲಿ ಏಕವಚನವಿರುವುದರಿಂದ ಅದಕ್ಕೆ ಅನುಗುಣವಾಗಿ ಭಾಷ್ಯದಲ್ಲಿಯೂ ಏಕವಚನವನ್ನೇ ಪ್ರಯೋಗಿಸಿದ್ದಾರೆ. ಸಮುದಾಯವನ್ನು ಹೇಳುವ ಸಂದರ್ಭದಲ್ಲಿ ಏಕವಚನವನ್ನು ಪ್ರಯೋಗ ಮಾಡಬೇಕೆಂಬ ನಿಯಮವಿದೆ. ಅದಕ್ಕೆ ಅನುಗುಣವಾಗಿ ಸೂತ್ರ ಹಾಗೂ ಭಾಷ್ಯಗಳಲ್ಲಿ ಏಕವಚನವನ್ನು ಪ್ರಯೋಗಿಸಿದ್ದಾರೆ. ಅದಕ್ಕೆ ಅನುಗುಣವಾಗಿ ಟೀಕೆಯಲ್ಲಿಯೂ ಕೂಡ ಏಕವಚನವನ್ನು ಕೂಡಿಸಬೇಕು. ಆದ್ದರಿಂದ ದೇವತೆಗಳು ಬಹಳ ಮಂದಿ ಇದ್ದಾರೆಂದು ತಿಳಿಯುತ್ತದೆ. ಆದ್ದರಿಂದ ಮುಂದಿನ ವಾಕ್ಯದಲ್ಲಿರುವ 'ತಾಸಾಮ್' ಎಂಬ ಬಹುವಚನಶಬ್ದದಿಂದ ಅನೇಕ ದೇವತೆಗಳನ್ನು ಪರಾಮರ್ಶೆ ಮಾಡಬಹುದು.

ಅಭಿಮಾನಿವ್ಯಪದೇಶ ಎಂಬಲ್ಲಿ ಹೇಗೆ ವಿಗ್ರಹ ?

तत्वप्रकाशिका – दृश्यन्ते मुनिभिरिति स्मृत्यानुकूल्यान्न तत्र शक्तिमात्रमुच्यते ॥६॥

ಸೂತ್ರದಲ್ಲಿ 'ಅಭಿಮಾನಿನಾಮ್ ವ್ಯಪದೇಶಃ' ಎಂದು ವಿಗ್ರಹ ಮಾಡಬೇಕೋ 'ಅಭಿಮಾನಿನಃ ವ್ಯಪದೇಶಃ' ಎಂದು ವಿಗ್ರಹ ಮಾಡಬೇಕೋ ? ಎಂಬ ಪ್ರಶ್ನೆಗೆ 'ದೃಶ್ಯತೇ ಚ' ಎಂಬ ಮುಂದಿನ ಸೂತ್ರದಲ್ಲಿ ಏಕವಚನವಿರುವುದರಿಂದ 'ಅಭಿಮಾನಿನಃ ವ್ಯಪದೇಶಃ' ಎಂದು ಏಕವಚನಾಂತವಿಗ್ರಹನ್ನು ಮಾಡಬೇಕು.

ಪ್ರಶ್ನೆ - 'ದೃಶ್ಯತೇ ಚ' ಎಂಬ ಸೂತ್ರದ ಭಾಷ್ಯದಲ್ಲಿ 'ದೃಶ್ಯಂತೇ ಮುನಿಭಿಃ' ಎಂಬುದಾಗಿ ಭವಿಷ್ಯತ್ ಪುರಾಣದ ಮಾತಿನಿಂದ ಬಹುವಚನವನ್ನು ಪ್ರಯೋಗಿಸಿದ್ದಾರೆ. ಅದಕ್ಕೆ ಅನುಗುಣವಾಗಿ ಸೂತ್ರದಲ್ಲಿರುವ 'ದೃಶ್ಯತೇ ಚ' ಎಂಬ ಏಕವಚನವನ್ನು ಕೂಡ ಬಹುವಚನಾರ್ಥದಲ್ಲೇ ವಿವಕ್ಷಿಸಬೇಕು. ಆದ್ದರಿಂದ ಅಭಿಮಾನಿದೇವತೆಗಳು ಮುನಿಗಳ ಪ್ರತ್ಯಕ್ಷದಿಂದ ಸಿದ್ಧರಾಗಿದ್ದಾರೆ. ಅಭಿಮಾನಿದೇವತೆಗಳ ಶಕ್ತಿ ಸಾಮರ್ಥ್ಯಗಳು ಕೂಡ ಮುನಿಗಳ ಪ್ರತ್ಯಕ್ಷದಿಂದ ಸಿದ್ಧವಾಗಿದೆ. ಇದಕ್ಕೆ ಅನುಗುಣವಾಗಿ 'ದೃಶ್ಯತೇ ಚ' ಎಂಬ ಸೂತ್ರಕ್ಕೆ ದೇವತೆಗಳನ್ನು ಅವರ ಸಾಮರ್ಥ್ಯವನ್ನು ಮುನಿಗಳು ಕಂಡಿದ್ದಾರೆ ಎಂದು ಅರ್ಥೈಸಬೇಕು. ಆದ್ದರಿಂದ ಸೂತ್ರದಲ್ಲಿ ಶಕ್ತಿಮಾತ್ರವನ್ನು ಹೇಳುತ್ತಿಲ್ಲವಾದ್ದರಿಂದ ಹಿಂದಿನ ಸೂತ್ರದ ವಿಗ್ರಹವಾಕ್ಯವು ನಿರ್ಣಯವಾಗುತ್ತದೆ.

ಮಂತ್ರಾಲಯ ಪ್ರಭುಗಳಾದ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ
ಭಾವದೀಪ

ದೃಢಯುಕ್ತಿಯ ವಿರೋಧ ಪರಿಹಾರಕ್ಕಾಗಿ ಅಭಿಮಾನ್ಯಧಿಕರಣ

भावदीपः – अभिमानि व्यपदेशस्तु ।। ६ ।। युक्तीति ।। श्रुतेः प्रतीतार्थप्रच्यावनं विना अनुपपद्यमानत्वरूपदृढयुक्तिविरोधपरिहारादित्यर्थः। दृढयुक्तिविरोधे तु सर्वत्र न्यायईदृश इत्यनुभाष्योक्तेः। तेन न पूर्वेण गतार्थत्वमितिज्ञेयम्। पूर्वसङ्गतिमाह – **वेदेति ।।**

ಗ್ರಂಥದಲ್ಲಿ 'ಯುಕ್ತಿವಿರೋಧಪರಿಹಾರಾತ್' ಎಂದು ಹೇಳಿದ್ದಾರೆ. 'ಶ್ರುತೇಃ ಪ್ರತೀತಾರ್ಥಪ್ರಚ್ಯಾನಂ ವಿನಾ ಅನುಪಪದ್ಯಮಾನತ್ವಂ' 'ಶ್ರುತಿಗೆ ಪ್ರತೀತಾರ್ಥವನ್ನು ಪರಿತ್ಯಾಗ ಮಾಡದಿದ್ದರೆ ಪ್ರಾಮಾಣ್ಯವು ಅನುಪಪದ್ಯಮಾನವಾಗುತ್ತದೆ' ಎಂಬ ದೃಢಯುಕ್ತಿಯ ವಿರೋಧವನ್ನು ಪರಿಹಾರ ಮಾಡುತ್ತಿರುವುದರಿಂದ ಎಂಬುದು ಇದರ ಅರ್ಥ.

'ದೃಢಯುಕ್ತಿವಿರೋಧೇ ತು ಸರ್ವತ್ರ ನ್ಯಾಯ ಈದೃಶಃ' 'ದೃಢಯುಕ್ತಿಯ ವಿರೋಧ ಬಂದಾಗ ಈ ನ್ಯಾಯವು ಎಲ್ಲೆಡೆಯೂ ಅನ್ವಯವಾಗುತ್ತದೆ' ಎಂಬ ಅನುವ್ಯಾಖ್ಯಾನದಲ್ಲಿ ಯುಕ್ತಿಯ ವಿರೋಧ ಬಂದಾಗ ಪ್ರತೀತಾರ್ಥವನ್ನು ಬಿಟ್ಟು ಬೇರೆ ಅರ್ಥವನ್ನು ಸ್ವೀಕರಿಸಬೇಕು ಎಂದು ಹೇಳಿರುವುದು ಇದಕ್ಕೆ ಗಮಕವಾಗಿದೆ. ಹೀಗೆ ದೃಢಯುಕ್ತಿಯ ಪರಿಹಾರಕ್ಕೋಸ್ಕರ ಈ ಅಧಿಕರಣ ಹೊರಟಿರುವುದರಿಂದ ಹಿಂದಿನ ಅಧಿಕರಣದಿಂದ ಪೌನಯು ಬರುವುದಿಲ್ಲ. ಏಕೆಂದರೆ ಹಿಂದಿನ ಅಧಿಕರಣದಲ್ಲಿ ಸಾಮಾನ್ಯವಾದ ಯುಕ್ತಿಯ ವಿರೋಧವನ್ನಷ್ಟೇ ಪರಿಹರಿಸಿದ್ದಾರೆ. ಈಗ ಹಿಂದಿನ ಅಧಿಕರಣದಿಂದ ಸಂಗತಿಯನ್ನು 'ವೇದಪ್ರಾಮಾಣ್ಯಾತ್' ಎಂಬ ವಾಕ್ಯದಿಂದ ಸಮರ್ಥನೆ ಮಾಡಿದ್ದಾರೆ.

'ಇತ್ಯಾದಿ ವಚನಾತ್ ಯುಕ್ತಿವಿರುದ್ಧ' ಎಂಬ ಭಾಷ್ಯಕ್ಕೆ ವ್ಯಾಖ್ಯಾನ

ಭಾವದೀಪ: – ಪೂರ್ವವದ್ವ್ಯಾಖ್ಯಾ । ಮೃದಾದೀನಾಂ ವಚನಾದ್ಯದೃಷ್ಟಿಃ ಶ್ರುತ್ಯಪ್ರಾಮಾಣ್ಯಕಾರಣಮಿತಿ ನ್ಯಾಯವಿವರಣಾನುಸಾರೇಣ ಪೂರ್ವಪಕ್ಷಭಾಷ್ಯಂ ವ್ಯಾಚಷ್ಟೇ ॥ **ನ ವೇದಃ ಪ್ರಮಾಣಮಿತ್ಯಾದಿನಾ ।।** ಮೃದಾದಿಶಬ್ದೈಃ ಸರ್ಗಾದ್ಯಕಾಲೀನಪೃಥಿವ್ಯಾದಿಕಮುಚ್ಯತೇ । ಇತ್ಯಾದಿವಚನಾದಿತ್ಯಸ್ಯಾರ್ಥ ಇತ್ಯಾದಿನೇತಿ। ಯುಕ್ತೀತ್ಯಾದಿ ವ್ಯಾಚಷ್ಟೇ ॥ **ತಥಾತ್ವೇಪೀತ್ಯಾದಿನಾ ।।** ಇತ್ಯಾದೀತ್ಯಾದಿಪದೇನ ಮೃತ್ತ್ವಾದ್ಘಟವದಿತಿ ಯುಕ್ತಿರ್ಗೃಹ್ಯತೇ। ಮೃತ್ವೇನೈವ ಹೇತುನಾ ಜಡತ್ವಂ ಸಿದ್ಧಮಿತಿ ಭಾವಃ।

'ವೇದಪ್ರಾಮಾಣ್ಯಾತ್' ಎಂಬ ವಾಕ್ಯವನ್ನು ಹಿಂದಿನ ಅಧಿಕರಣದಲ್ಲಿ ವ್ಯಾಖ್ಯಾನ ಮಾಡಿದಂತೆ ಸಂಗತಿ ಪರವಾಗಿ ವ್ಯಾಖ್ಯಾನವನ್ನು ತಿಳಿಯಬೇಕು. 'ಮೃದಾದೀನಾಂ ವಚನಾದ್ಯದೃಷ್ಟಿಃ ಶ್ರುತ್ಯಪ್ರಾಮಾಣ್ಯಕಾರಣಂ' 'ಮಣ್ಣು ಮೊದಲಾದವುಗಳು ಮಾತನಾಡುವುದು ಕಂಡಿಲ್ಲ. ಇದೇ ಶ್ರುತಿಯ ಅಪ್ರಾಮಾಣ್ಯಕ್ಕೆ ಕಾರಣವಾಗಿದೆ' ಎಂಬ ನ್ಯಾಯವಿವರಣದ ಮಾತಿಗೆ ಅನುಸಾರಿಯಾಗಿ ಪೂರ್ವಪಕ್ಷಭಾಷ್ಯವನ್ನು 'ನ ವೇದಃ ಪ್ರಮಾಣಂ' ಎಂಬುದಾಗಿ ಟೀಕೆಯಲ್ಲಿ ವ್ಯಾಖ್ಯಾನ ಮಾಡುತ್ತಿದ್ದಾರೆ. ಮೃತ್, ಆಪ, ತೇಜಸ್ಸು ಈ ಶಬ್ದಗಳಿಂದ ಸೃಷ್ಟಿಯ ಪ್ರಾರಂಭದಲ್ಲಿರುವ ಮಣ್ಣು, ನೀರು ಹಾಗೂ ತೇಜಸ್ಸುಗಳನ್ನು ವಿವಕ್ಷಿಸಬೇಕು. ಭಾಷ್ಯದಲ್ಲಿ 'ಇತ್ಯಾದಿವಚನಾತ್' ಎಂದು ಹೇಳಿದ್ದಾರೆ. ಇದರ ಅರ್ಥವನ್ನು ಟೀಕೆಯಲ್ಲಿ 'ಇತ್ಯಾದಿನಾ' ಎಂಬುದಾಗಿ ನಿರೂಪಣೆ ಮಾಡುತ್ತಿದ್ದಾರೆ. 'ಯುಕ್ತಿವಿರುದ್ಧಃ' ಎಂದು ಭಾಷ್ಯದಲ್ಲಿ ಹೇಳಿದ್ದಾರೆ. ಅದನ್ನೇ ಟೀಕೆಯಲ್ಲಿ 'ತಥಾತ್ವೇಪಿ' ಎಂಬ ಗ್ರಂಥದಿಂದ ನಿರೂಪಣೆ ಮಾಡಿದ್ದಾರೆ. 'ಇತ್ಯಾದಿ ಯುಕ್ತಿವಿರುದ್ಧತ್ವೇನ' ಎಂದು ಟೀಕೆಯಲ್ಲಿ ಹೇಳಿದ್ದಾರೆ. ಇಲ್ಲಿರುವ ಆದಿ ಪದದಿಂದ 'ಮೃತ್ ನ ವಕ್ತ್ರೀ ಮೃತ್ವಾತ್ ಘಟವತ್' ಎಂಬ ಯುಕ್ತಿಯನ್ನು ಸಂಗ್ರಹ ಮಾಡಬೇಕು. ಮೃತ್ವವೆಂಬ ಹೇತುವಿನಿಂದಲೇ ಜಡತ್ವವು ಸಿದ್ಧವಾಗುತ್ತದೆ ಎಂಬುದು ಇದರ ಅಭಿಪ್ರಾಯ.

ಯಾವುದು ಪಕ್ಷ?

भावदीपः – भाष्ये वेदैकदेश इति वाच्ये वेद इत्युक्तेरुपपत्तिमाह॥ **एवं चेति ।।** तत्सामान्यादिति न्यायदिति भावः॥ **युक्तेरेवेति ।।** प्रागुक्तजडत्वादियुक्तेरेवेत्यर्थः। न च युक्तेर्मृदब्रवीदित्यादिधर्मिग्राहिश्रुतिबाधः। इदानींतनमृदादिकारणत्वेनादिकालीनमृदाद्यनुमानसिद्धमात्रस्य पक्षीकरणाद्वा एतत् श्रुतेरनुमानधर्म्यसमर्पकत्वेन प्राबल्याभावादिति भावः ॥ छ ॥

ಭಾಷ್ಯದಲ್ಲಿ 'ವೇದೈಕದೇಶಃ' ಎಂದು ಹೇಳಬೇಕಿತ್ತು. ಹೀಗಿರುವಾಗ 'ವೇದಃ' ಎಂದೇಕೆ ಹೇಳಿದರು? ಈ ಪ್ರಶ್ನೆಗೆ ಉತ್ತರವನ್ನು ನೀಡಲು ಉಪಪತ್ತಿಯನ್ನು 'ಏವಂ ಚ' ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ. ಕೆಲವು ವಾಕ್ಯಗಳು ಈ ಯುಕ್ತಿಯಿಂದ ವಿರುದ್ಧವಾದ ಮೇಲೆ 'ತತ್ಸಾಮಾನ್ಯಾತ್' ಎಂಬ ಜೈಮಿನಿಯ ನ್ಯಾಯಕ್ಕೆ ಅನುಸಾರವಾಗಿ ಸಮಸ್ತ ವೇದವು ಅಪ್ರಮಾಣವಾಗುತ್ತದೆ ಎಂಬುದು ಈ ವಾಕ್ಯದ ಅಭಿಪ್ರಾಯ. 'ಯುಕ್ತೇರೇವ' ಎಂದು ಟೀಕೆಯಲ್ಲಿ ಹೇಳಿದ್ದಾರೆ. ಹಿಂದೆ ಹೇಳಲ್ಪಟ್ಟ ಜಡತ್ವಾದಿ ಯುಕ್ತಿಗಳನ್ನೇ ಎಂಬುದು ಇದರ ಅರ್ಥ.

ಪ್ರಶ್ನೆ – ಮೃತ್, ನ ವಕ್ತ್ರೀ. ಜಡತ್ವಾತ್ ಎಂಬ ಅನುಮಾನದಲ್ಲಿ ಮೃತ್ ಎಂಬುದು ಪಕ್ಷವಾಗಿದೆ. ಈ ಪಕ್ಷ ಎಂಬ ಧರ್ಮಿಯು ಸಿದ್ಧವಾಗುವುದೇ 'ಮೃದಬ್ರವೀತ್' ಎಂಬ ಶ್ರುತಿಯಿಂದ. ಆ ಶ್ರುತಿಯಿಂದ ಪಕ್ಷವು ಸಿದ್ಧವಾಗಬೇಕಾದರೆ ವಚನಕ್ರಿಯಾ ಉಳ್ಳದ್ದಾಗಿದೆ ಎಂದೇ ತಿಳಿಯುತ್ತದೆ. ಹೀಗಿರುವಾಗ ಅದಕ್ಕೆ ವಿರುದ್ಧವಾಗಿ ಅನುಮಾನವನ್ನು ಮಾಡಿದರೆ ಧರ್ಮಿಗ್ರಾಹಿ ಶ್ರುತಿಬಾಧವು ಬರುತ್ತದಲ್ಲವೇ?

ಉತ್ತರ – ಈ ಪ್ರಶ್ನೆ ತಪ್ಪು. ನಾವು ಮಾಡಿದ ಅನುಮಾನದಲ್ಲಿ ಯಾವ ಮೃತ್ ಎಂಬ ಪಕ್ಷವಿದೆಯೋ ಈ ಧರ್ಮಿಭೂತವಾದ ಪಕ್ಷವು ಶ್ರುತಿಯಿಂದ ಸಿದ್ಧವೇ ಆಗಿಲ್ಲ. ಕಣ್ಣಿಗೆ ಕಾಣಿಸುತ್ತಿರುವ ಮೃದಾದಿಗಳಿಗೆ ಕಾರಣವಾದುದ್ದು ಆದಿಕಾಲೀನವಾದ ಮೃತ್ ಎಂಬುದಾಗಿ ಅನುಮಾನವನ್ನು ಮಾಡುತ್ತೇವೆ. ಆ ಅನುಮಾನದಿಂದ ಸಿದ್ಧವಾದ್ದನ್ನು ಪಕ್ಷವನ್ನಾಗಿ ಮಾಡಿದ್ದೇವೆ. 'ಮೃದಬ್ರವೀತ್' ಎಂಬ ಶ್ರುತಿಯು ಹೀಗೆ ಅನುಮಾನದಲ್ಲಿ ಧರ್ಮಿಸಮರ್ಪಕ ಆಗುವುದಿಲ್ಲ ಎಂದು ತಿಳಿಯಬೇಕು. ಆದ್ದರಿಂದ ಶ್ರುತಿಗೆ ಪ್ರಾಬಲ್ಯವು ಕೂಡುವುದಿಲ್ಲ.

ಒಮ್ಮೆ ಏಕವಚನ ಮತ್ತೊಮ್ಮೆ ಬಹುವಚನ ಏಕೆ ?

ಭಾವದೀಪ: – तत्तन्नामान एवैते तत्तद्वस्त्वभिमानिन इत्यनुभाष्यदिशा सूत्रे तुशब्दो योग्यतयाभिमानिपदेनान्वेतीति भावेन तदर्थ योजनां च दर्शयन् भाष्यं व्याचष्टे।। **तुशब्द इति**।। भाष्येऽग्रेतनसूत्रानुरोधेन एकवचनान्त तया सूत्रार्थभाषणं समुदायाशयमिति भावेन देवतानामित्यादि बहुवचनप्रयोगस्तासामित्युत्तरभाष्यवाक्यानुरोधेन कृतः। दृश्यते मुतिभिश्च ता इति स्मृतौ तथा प्रयोगात् भाष्ये तासामिति बहुवतनोक्तिरिति भावः।

'तत्तन्नामान एवैते तत्तद्वस्त्वभिमानिनः' 'ಆಯಾ ವಸ್ತುಗಳ ಅಭಿಮಾನಿದೇವತೆಗಳು ಆಯಾ ಪದಾರ್ಥಗಳ ಹೆಸರುಗಳಿಂದ ಪ್ರತಿಪಾದ್ಯರಾಗಿದ್ದಾರೆ' ಎಂಬ ಅನುವ್ಯಾಖ್ಯಾನದ ಮಾತಿನಂತೆ ಸೂತ್ರದಲ್ಲಿರುವ 'ತು' ಎಂಬ ಶಬ್ದವು ಅನ್ವಯಯೋಗ್ಯವಾದ್ದರಿಂದ ಅಭಿಮಾನಿ ಪದದ ಜೊತೆ ಅನ್ವಯವನ್ನು ಹೊಂದುತ್ತದೆ. ಈ ಅಭಿಪ್ರಾಯದಿಂದ ತದರ್ಥವನ್ನು ಯೋಜನೆ ಮಾಡುವ ಮೂಲಕ ಭಾಷ್ಯವನ್ನು ವ್ಯಾಖ್ಯಾನ ಮಾಡಲು 'ತುಶಬ್ದಃ' ಎಂಬ ಟೀಕಾ ಪಂಕ್ತಿಯು ಹೊರಟಿದೆ.

ಭಾಷ್ಯದಲ್ಲಿ ಮುಂದಿನ ಸೂತ್ರಕ್ಕೆ ಅನುಗುಣವಾಗಿ ಏಕವಚನಾಂತವಾಗಿ ಸೂತ್ರವನ್ನು ವ್ಯಾಖ್ಯಾನವನ್ನು ಮಾಡಿದ್ದಾರೆ. ಈ ಏಕವಚನಾಂತವಾದ ಸೂತ್ರಾರ್ಥವು ಸಮುದಾಯಾಭಿಪ್ರಾಯದಲ್ಲಿದೆ ಎಂಬುದನ್ನು ತಿಳಿಸಲು 'ದೇವಾನಾಂ' ಇತ್ಯಾದಿಯಾಗಿ ಬಹುವಚನ ಪ್ರಯೋಗವನ್ನು 'ತಾಸಾಂ' ಎಂಬ ಉತ್ತರ ಭಾಷ್ಯಕ್ಕೆ ಅನುಸಾರಿಯಾಗಿ ಮಾಡಿದ್ದಾರೆ. 'ದೃಶ್ಯತೇ ಮುನಿಭಿಶ್ಚ ತಾಃ' ಎಂಬ ಶ್ರುತಿಯಲ್ಲಿ ಹೀಗೆಯೇ ಪ್ರಯೋಗ ಮಾಡಲಾಗಿದೆ. ಆದ್ದರಿಂದ ಭಾಷ್ಯದಲ್ಲಿ 'ತಾಸಾಂ' ಎಂಬ ಬಹುವಚನ ಪ್ರಯೋಗವನ್ನು ಮಾಡಿರುತ್ತಾರೆ.

ಶ್ರುತಿಗೆ ಹೇಗೆ ವ್ಯಾಖ್ಯಾನ ಮಾಡಬೇಕು ?

ಭಾವದೀಪ:– अवधारणार्थतुशब्दसूचितमुख्यत्वव्यावर्त्यचोद्यमाह – **स्यान्मतमिति**।। ननूपजीव्यविरोधे तु वेदस्यान्यार्थकल्पना । प्रत्यक्षमुपजीव्यं स्यात्प्रायोयुक्तिरपि क्वचिदिति पूर्वनयानुभाष्योक्त्याऽस्ति श्रुतेरप्यर्थान्तरकल्पनमित्यत आह – **न चेति**।। उपजीव्यप्रत्यक्षविरोधश्च नास्तीत्युक्तं पूर्वपक्षदशायामेवेत्यर्थः। इयं च युक्तिर्न श्रुतेरुपजीव्येति भावः।।

ಅವಧಾರಣಾರ್ಥದಲ್ಲಿರುವ ತುಶಬ್ದದಿಂದ ಸೂಚಿತವಾದ ಯಾವ ಮುಖ್ಯತ್ವವಿದೆಯೋ ಇದರಿಂದ ವ್ಯಾವರ್ತ್ಯವಾದ ಪೂರ್ವಪಕ್ಷವನ್ನು 'ಸ್ಯಾನ್‌ಮತಂ' ಎಂಬುದರಿಂದ ಹೇಳಿದ್ದಾರೆ.

'ಉಪಜೀವ್ಯವಿರೋಕೇತು ವೇದಸ್ಯಾನ್ಯಾರ್ಥಕಲ್ಪನಾ ಪ್ರತ್ಯಕ್ಷಮುಪಜೀವ್ಯಂ ಸ್ಯಾತ್ ಪ್ರಾಯೋ ಯುಕ್ತಿರಪಿ ಕ್ವಚಿತ್' 'ಉಪಜೀವ್ಯವಿರೋಧವು ಬಂದರೆ ವೇದಕ್ಕೆ ಅನ್ಯಾರ್ಥವನ್ನು ಕಲ್ಪನೆ ಮಾಡಬೇಕು. ಪ್ರತ್ಯಕ್ಷವೇ ಉಪಜೀವ್ಯ ಎನಿಸುತ್ತದೆ. ಕೆಲವೊಮ್ಮೆ ಯುಕ್ತಿಯೂ ಕೂಡ ಉಪಜೀವ್ಯ ಎನಿಸುತ್ತದೆ'. ಹೀಗೆ ಅನುವ್ಯಾಖ್ಯಾನದಲ್ಲಿ ಹೇಳಿದ್ದಾರೆ. ಆದ್ದರಿಂದ ಶ್ರುತಿಗೂ ಕೂಡ ಅನ್ಯಾರ್ಥವನ್ನು ಕಲ್ಪನೆ ಮಾಡುವುದು ಕಂಡಿದೆಯಲ್ಲವೇ? ಎಂಬ ಪ್ರಶ್ನೆಗೆ 'ನ ಚ ಉಪಜೀವ್ಯ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. ಉಪಜೀವ್ಯ ಪ್ರತ್ಯಕ್ಷ ವಿರೋಧವು ಬರುವುದಿಲ್ಲವೆಂದು ಪೂರ್ವಪಕ್ಷ ದೆಶೆಯಲ್ಲಿಯೇ ಹೇಳಲಾಗಿದೆ. ಈ ಯುಕ್ತಿಯು ಶ್ರುತಿಗೆ ಉಪಜೀವ್ಯವೇ ಅಲ್ಲ ಎಂಬುದು ಅಭಿಪ್ರಾಯ.

ಶ್ರುತಿಗೆ ಅನುಮಾನ ವಿರೋಧವಿಲ್ಲ

ಭಾವದೀಪಃ – ಮುಖ್ಯಾರ್ಥೇತಿ ।। अभिमन्यमानगतमृत्वादिमृदादिशब्दप्रवृत्ति-निमित्तस्याभिमान्यधीनत्वेन तदधीनत्वादिति न्यायेनाभिमानिनां मृदादिशब्द-मुख्यार्थत्वात्तैः। शब्दैस्तेषां ग्रहणे मुख्यार्थलाभात्। युक्तिविरोधेनापातप्रतीतार्थत्यागेन तात्पर्यार्थत्याग इत्यर्थः। तथा च मृन्नवदतीति जडस्य पक्षत्वे सिद्धसाधनम्। चेतनस्य पक्षत्वे हेतोरसिद्धिरित्यनुमानदूषणं व्यक्तमिति भावः।

ಟೀಕೆಯಲ್ಲಿರುವ 'ಮುಖ್ಯಾರ್ಥ' ಇತ್ಯಾದಿ ಮಾತಿನ ಅರ್ಥ ಹೀಗಿದೆ – ಅಭಿಮನ್ಯಮಾನವಾದ ಮೃದಾದಿಗಳಲ್ಲಿ ಯಾವ ಮೃತ್ವ ಎಂಬ ಪ್ರವೃತ್ತಿನಿಮಿತ್ತವಿದೆಯೋ ಅದು ಅಭಿಮಾನಿದೇವತಾಧೀನವಾಗಿದೆ. 'ತದಧೀನತ್ವಾತ್' ಎಂಬ ಸೂತ್ರದಲ್ಲಿ ಹೇಳಿದ ನ್ಯಾಯದಂತೆ ಮೃದಾದಿಶಬ್ದಗಳಿಂದ ಅಭಿಮಾನಿದೇವತೆಗಳೇ ಮುಖ್ಯವಾಗಿ ಪ್ರತಿಪಾದ್ಯರಾಗುತ್ತಾರೆ. ಅವರ ಅಧೀನವಾಗಿ ಜಡಪದಾರ್ಥವು ಪ್ರತಿಪಾದ್ಯವಾಗುತ್ತದೆ. 'ಮೃತ್' ಇತ್ಯಾದಿ ಶಬ್ದಗಳಿಂದ ಅಭಿಮಾನಿದೇವತೆಗಳನ್ನು ವಿವಕ್ಷಿಸಿದರೆ ಮುಖ್ಯಾರ್ಥವನ್ನೇ ಹೇಳಿದಂತಾಗುತ್ತದೆ, ಅಮುಖ್ಯಾರ್ಥವನ್ನು ಆಶ್ರಯಿಸಿದಂತೆ ಆಗುವುದಿಲ್ಲ. ಆದ್ದರಿಂದ ಯುಕ್ತಿವಿರೋಧವು ಬಂದಾಗ ಆಪಾತತಃ ಪ್ರತೀತವಾದ ಅರ್ಥವನ್ನು ತ್ಯಾಗ ಮಾಡಿದಂತಾಗುತ್ತದೆ ಹೊರತು ಮುಖ್ಯಾರ್ಥವನ್ನು ತ್ಯಾಗ ಮಾಡಿದಂತೆ ಆಗುವುದಿಲ್ಲ.

ಮೃತ್, ನ ವದತಿ ಎಂಬ ಅನುಮಾನದಲ್ಲಿ ಜಡವನ್ನು ಪಕ್ಷವನ್ನಾಗಿ ಮಾಡಿದರೆ ಸಿದ್ಧಸಾಧನತಾದೋಷವು ಬರುತ್ತದೆ. ಚೇತನವನ್ನು ಪಕ್ಷವನ್ನಾಗಿ ಮಾಡಿದರೆ ಜಡತ್ವ ಹೇತುವಿಗೆ ಅಸಿದ್ಧಿ ದೋಷವು ಬರುತ್ತದೆ. ಹೀಗೆ ಅನುಮಾನವನ್ನು ನಿರಾಕರಣೆ ಮಾಡಿದಂತಾಯಿತು. ಇಂತಹ ದುಷ್ಟವಾದ ಅನುಮಾನದ ವಿರೋಧವನ್ನು ಶ್ರುತಿಗೆ ಹೇಳಲು ಸಾಧ್ಯವಿಲ್ಲ ಎಂಬುದು ಅಭಿಪ್ರಾಯ.

'ಅಭಿಮಾನಿವ್ಯಪದೇಶಃ' ಎಂಬಲ್ಲಿ ವಿಗ್ರಹ ಹೇಗೆ ?

भावदीपः – सूत्रखण्डभाष्यमवतारयति॥ **(ननु)नाभिमानीति**॥ सूत्रभाष्ययोरनुगतिरूपलक्षणं मत्वाऽऽह – **अनुगतिर्विग्रहश्चेति**॥ देहश्चेत्यर्थः। भाष्ये पूर्वोत्तरविरोधमाशङ्क्याह – **अत्रेति** ॥ भाष्य इत्यर्थः। ननु एकवचनस्य सूत्रगतत्वादित्यसिद्धम्। अभिमानिनां व्यपदेश इत्यपि विग्रहप्रदर्शनस्य सुशकत्वादित्यत आह – **दृश्यते चेति**॥ विग्रहस्याभिमानिनो व्यपदेश इत्येवंरूपस्य समासार्थप्रदर्शकवाक्यस्येत्यर्थः।

ಸೂತ್ರ ಖಂಡವನ್ನು ವ್ಯಾಖ್ಯಾನ ಮಾಡುವ ಭಾಷ್ಯಕ್ಕೆ 'ನಾಭಿಮಾನಿದೇವತಾ' ಎಂಬುದರಿಂದ ಅವತಾರಿಕೆಯನ್ನು ನೀಡಿದ್ದಾರೆ. ಸೂತ್ರ ಹಾಗೂ ಭಾಷ್ಯದಲ್ಲಿರುವ ಅನುಗತಿ ಶಬ್ದವು ಉಪಲಕ್ಷಣವಾಗಿದೆ ಎಂಬ ಅಭಿಪ್ರಾಯದಿಂದ 'ಅನುಗತಿಃ ವಿಗ್ರಹಶ್ಚ' ಎಂದು ಟೀಕೆಯಲ್ಲಿ ಹೇಳಿದ್ದಾರೆ. ದೇವತೆಗಳು ಎಲ್ಲೆಡೆ ಅನುಗತರಾಗಿದ್ದಾರೆ ಎಂದಷ್ಟೇ ಅಲ್ಲ; ದೇಹವುಳ್ಳವರೂ ಕೂಡ ಆಗಿದ್ದಾರೆ ಎಂಬುದು ಇದರ ಅರ್ಥ. ಭಾಷ್ಯದ ಪೂರ್ವೋತ್ತರ ವಾಕ್ಯಗಳಿಗೆ ವಿರೋಧವನ್ನು 'ಅತ್ರ' ಇತ್ಯಾದಿ ವಾಕ್ಯದಿಂದ ಆಶಂಕಿಸಿದ್ದಾರೆ. 'ಅತ್ರ' ಎಂದರೆ ಭಾಷ್ಯದಲ್ಲಿ ಎಂದರ್ಥ.

ಸೂತ್ರದಲ್ಲಿ ಏಕವಚನವಿದೆ ಎಂದು ಹೇಳಿದ್ದೇ ತಪ್ಪು. ಏಕೆಂದರೆ 'ಅಭಿಮಾನಿನಾಂ ವ್ಯಪದೇಶಃ' ಎಂಬುದಾಗಿ ಬಹುವಚನಾಂತವಾಗಿಯೂ ಕೂಡ ವಿಗ್ರಹವನ್ನು ವಿವಕ್ಷಿಸಬಹುದು. ಈ ಪ್ರಶ್ನೆಗೆ 'ದೃಶ್ಯತೇ ಚ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. 'ಅಭಿಮಾನಿನಃ ವ್ಯಪದೇಶಃ' ಎಂಬ ಏಕವಚನಾಂತವಾದ ಸಮಾಸವನ್ನೇ ವಿವಕ್ಷಿಸಬೇಕು. ಈ ಅರ್ಥವನ್ನು ವಿವಕ್ಷಿಸದೇ ಇದ್ದರೆ ಮುಂದಿನ ಸೂತ್ರದಿಂದ ಅನಾನುಗುಣ್ಯದೋಷವು ಪ್ರಾಪ್ತವಾಗುತ್ತದೆ.

ಭಾಷ್ಯದ ಪೂರ್ವೋತ್ತರ ವಾಕ್ಯಗಳಿಗೆ ವಿರೋಧ ಪರಿಹಾರ

ಭಾವದೀಪಃ – ननूत्तरसूत्रे दृश्यते चाभिमानिदेवतेति यद्यर्थः स्यात्तदा तदनुसारात्पूर्वसूत्रेऽप्युक्तदिशा एकवचनानन्ततया विग्रहः स्यात् । नैतदस्ति। दृश्यते च तासां सामर्थ्यं महद्भिरित्येव तत्र भाषणादित्यत आह – **दृश्यन्त इति**।। तत्र तासां सामर्थ्यमिति भाष्ये न शक्तिमात्रमुच्यते किन्तु देवता चेत्युपलक्ष्यते कुतः दृश्यन्त इति तत्रोदाहरिष्यमाणस्मृत्यनुसारादित्यर्थः। स्मृतौ बहुवचनोक्तावपि समुदायविवक्षया दृश्यते च देवतेत्यपि विवक्षणीयमिति भावः॥ ६ ॥

ಮುಂದಿನ 'दृश्यते च' ಎಂಬ ಸೂತ್ರದಲ್ಲಿ 'अभिमानिदेवता दृश्यते' ಎಂಬುದಾಗಿ ಏಕವಚನಾಂತವಾಗಿ ಅರ್ಥವನ್ನು ವಿವಕ್ಷಿಸಿದರೆ ಇದಕ್ಕೆ ಅನುಸಾರಿಯಾಗಿ ಹಿಂದಿನ ಸೂತ್ರದಲ್ಲೂ ಕೂಡ ಏಕವಚನಾಂತವಾಗಿ 'अभिमानिनः व्यपदेशः' ಎಂದು ವಿವಕ್ಷಿಸುವುದು ಸಾಧುವಾಗುತ್ತದೆ. ಆದರೆ 'अभिमानिदेवता दृश्यते' ಎಂಬರ್ಥವನ್ನು ಮುಂದಿನ ಸೂತ್ರದಲ್ಲಿ ವಿವಕ್ಷಿಸುವುದೇ ಇಲ್ಲ. 'अभिमानिदेवानां सामर्थ्यं महद्भिः दृश्यते' ಎಂಬರ್ಥವನ್ನೇ ವಿವಕ್ಷಿಸಲಾಗುತ್ತದೆ. ಈ ಪ್ರಶ್ನೆಗೆ 'दृश्यन्ते' ಇತ್ಯಾದಿ ವಾಕ್ಯದಿಂದ ಉತ್ತರಿಸಿದ್ದಾರೆ.

ಭಾಷ್ಯದಲ್ಲಿ 'तासां सामर्थ्यं' ಎಂದು ಹೇಳಿದ್ದಾರೆ. ಮಹಾಜನರು ದೇವತೆಗಳ ಸಾಮರ್ಥ್ಯವನ್ನು ಕಂಡಿದ್ದಾರೆ ಎಂಬುದು ಇದರ ಅರ್ಥ. ಸಾಮರ್ಥ್ಯ ಮಾತ್ರವನ್ನಲ್ಲ ದೇವತೆಗಳನ್ನೂ ಕೂಡ ಕಂಡಿದ್ದಾರೆ ಎಂಬುದನ್ನು ಇಲ್ಲಿ ಉಪಲಕ್ಷಣಯಾ ವಿವಕ್ಷಿಸಬೇಕು. ಏಕೆಂದರೆ 'दृश्यन्ते मुनिभिश्च ताः' ಎಂಬ ಮುಂದೆ ಉದಾಹರಿಸುವ ಸ್ಮೃತಿಗೆ ಅನುಗುಣವಾಗಿದೆ. ಸ್ಮೃತಿಯಲ್ಲಿ ಬಹುವಚನವನ್ನು ಹೇಳಿದ್ದರೂ ಕೂಡ ಸಮುದಾಯಾರ್ಥದಲ್ಲಿ ಏಕವಚನದ ವಿವಕ್ಷೆಯಿಂದ 'दृश्यते च देवता' ಎಂಬುದಾಗಿಯೂ ಕೂಡ ವಿವಕ್ಷಿಸಬೇಕು.

ಬ್ರಹ್ಮಸೂತ್ರ

'ದೃಶ್ಯತೇ ಚ' ಎಂಬ ಸೂತ್ರಕ್ಕೆ ವ್ಯಾಖ್ಯಾನ

ಬ್ರಹ್ಮಸೂತ್ರಮ್ – ದೃಶ್ಯತೇ ಚ ।।೨।।

ಅಭಿಮಾನಿದೇವತೆಗಳಲ್ಲಿ ವಿಚಿತ್ರವಾದ ಸಾಮರ್ಥ್ಯವು ಇರುತ್ತದೆಂಬುದನ್ನು ಯೋಗಿಗಳು ಪ್ರತ್ಯಕ್ಷವಾಗಿ ಕಂಡಿರುತ್ತಾರೆ. ಆದ್ದರಿಂದ ವಿರೋಧವಿಲ್ಲ.

ಅರ್ಥ -- ದೃಶ್ಯತೇ ಚ = ಅಭಿಮಾನಿದೇವತೆಗಳಲ್ಲಿ ಇರುವಂತಹ ಅದ್ಭುತವಾದ ಸಾಮರ್ಥ್ಯವನ್ನು ಯೋಗಿಗಳು ತಮ್ಮ ಪ್ರತ್ಯಕ್ಷದಿಂದ ಕಾಣುತ್ತಾರೆ. ಆದ್ದರಿಂದ ಅದರ್ಶನವಿರೋಧಕ್ಕೆ ಕಾರಣವಿಲ್ಲ,

॥ ಶ್ರೀವೇದವ್ಯಾಸದೇವರಿಂದ ರಚಿಸಲ್ಪಟ್ಟ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ
ಅಭಿಮಾನ್ಯಧಿಕರಣವು ಸಮಾಪ್ತವಾಯಿತು ॥

ಬ್ರಹ್ಮಸೂತ್ರಭಾಷ್ಯ

ಅಭಿಮಾನಿದೇವತೆಗಳಲ್ಲಿ ವಿಶಿಷ್ಟ ಸಾಮರ್ಥ್ಯವಿದೆ

ಬ್ರಹ್ಮಸೂತ್ರಭಾಷ್ಯಮ್ – ।। ದೃಶ್ಯತೇ ಚ ।।೨।।

ತಾಸಾಂ ಸಮಾರ್ಥ್ಯಂ ಮಹರ್ಷಿಃ ।।

ಅನುವಾದ - ಅಭಿಮಾನಿದೇವತೆಗಳಿರುವ ವಿಶಿಷ್ಟಸಾಮರ್ಥ್ಯವು ಯೋಗಿ ಜನರಿಂದ ಕಾಣಲ್ಪಟ್ಟಿದೆ.

ಪ್ರತಿಪದಾರ್ಥ -- ಅಪ್ರಾಮಾಣಿಕವಾದ ಅಭಿಮಾನಿದೇವತೆಗಳನ್ನು ಒಪ್ಪಿ ಅವರಲ್ಲಿ ಅಪ್ರಾಮಾಣಿಕವಾದ ಸಾಮರ್ಥ್ಯವನ್ನು ಒಪ್ಪವುದಕ್ಕಿಂತ ಕೇವಲ ವೇದಕ್ಕೆ ಅಪ್ರಾಮಾಣ್ಯವನ್ನು ಒಪ್ಪುವುದು ಸುಲಭವಲ್ಲವೆ? ಎಂಬ ಪ್ರಶ್ನೆಗೆ ಮುಂದಿನ ಸೂತ್ರದಿಂದ ಉತ್ತರವನ್ನು ಹೇಳುತ್ತಿದ್ದಾರೆ. ತಾಸಾಂ = ಪೃಥಿವ್ಯಾದ್ಯಭಿಮಾನಿದೇವತೆಗಳ, ಸಾಮರ್ಥ್ಯಂ = ಅಂತರ್ಧಾನ ಶಕ್ತಿ ಹಾಗೂ ಎಲ್ಲೆಡೆ ಇರುವಿಕೆಯ ಸಾಮರ್ಥ್ಯವು, ಮಹರ್ಷಿಃ = ಜ್ಞಾನಿಜನರಿಂದ ಕಾಣಲ್ಪಟ್ಟಿದೆ,

ಈ ವಿಷಯದಲ್ಲಿ ಭವಿಷ್ಯತ್‌ಪುರಾಣವೇ ಆಧಾರ

ब्रह्मसूत्रभाष्यम् – भविष्यत्पुराणे च –

'पृथिव्याद्यभिमानिन्यो देवताः प्रथितौजसः ।
अचिन्त्याश्शक्तयस्तासां दृश्यन्ते मुनिभिश्च ताः ।
ताश्च सर्वगता नित्यं वासुदेवैकसंश्रयाः ।।' इति ।।२।।

।। इति श्रीमदानन्दतीर्थभगवत्पादाचार्यविरचिते
ब्रह्मसूत्रभाष्ये अभिमान्यधिकरणम् ।। ३ ।।

ಅನುವಾದ - ಭವಿಷ್ಯತ್‌ಪುರಾಣದಲ್ಲಿ ಇದನ್ನು ಸಮರ್ಥಿಸಿದ್ದಾರೆ. ಪ್ರಸಿದ್ಧವಾದ ಸಾಮರ್ಥ್ಯವುಳ್ಳ ಪೃಥಿವ್ಯಾದ್ಯಭಿಮಾನಿದೇವತೆಗಳು ಹಾಗೂ ಅವರಲ್ಲಿರುವ ಅಚಿಂತ್ಯವಾದ ಶಕ್ತಿಸಾಮರ್ಥ್ಯಗಳು ಜ್ಞಾನಿಜನರಿಂದ ಕಾಣಲ್ಪಟ್ಟಿದೆ. ಆ ದೇವತೆಗಳು ನಿರಂತರವಾಗಿ ಎಲ್ಲೆಡೆ ವ್ಯಾಪ್ತರಾಗಿ ಪರಮಾತ್ಮನನ್ನೇ ಆಶ್ರಯಿಸಿದ್ದಾರೆ.

ಪ್ರತಿಪದಾರ್ಥ -- 'ಪರಬುದ್ಧೇರಪ್ರತ್ಯಕ್ಷತ್ವಾತ್' ಎಂಬ ನಿಯಮದಂತೆ, ಜ್ಞಾನಿಜನರು ಅಭಿಮಾನಿದೇವತೆಗಳನ್ನು ಕಂಡಿದ್ದಾರೆ ಎಂಬ ಹೇತುವು ಅಸಿದ್ಧವಾಗಿದೆ. ಈ ಪ್ರಶ್ನೆಗೆ ಪ್ರಮಾಣವಾಕ್ಯವನ್ನು ಭವಿಷ್ಯತ್ ಪುರಾಣದಿಂದ ನೀಡಿದ್ದಾರೆ. ಭವಿಷ್ಯತ್ ಪುರಾಣೇ ಚ = ಭವಿಷ್ಯತ್ ಪುರಾಣದಲ್ಲಿ ಹೀಗೆ ಹೇಳಲ್ಪಟ್ಟಿದೆ - ಪೃಥಿವ್ಯಾದ್ಯಭಿಮಾನಿನ್ಯಃ = ಪೃಥಿವೀ, ಅಪ್ ಮೊದಲಾದ ಅಭಿಮಾನಿದೇವತೆಗಳಾದ, ದೇವತಾಃ = ದೇವತೆಗಳು ಪ್ರಥಿತೌಜಸಃ = ಪ್ರಸಿದ್ಧವಾದ ಶಕ್ತಿಯಿಂದ ಪೂರ್ಣರು, ತಾಸಾಂ = ಆ ದೇವತೆಗಳ, ಶಕ್ತಯಃ = ಸಾಮರ್ಥ್ಯವು, ಅಚಿಂತ್ಯಾಃ = ಚಿಂತಿಸಲು ಅಸಾಧ್ಯವಾಗಿದೆ. ಮುನಿಭಿಃ = ಜ್ಞಾನಿಜನರಿಂದ ತಾಃ = ಆ ಶಕ್ತಿಸಾಮರ್ಥ್ಯಗಳು, ದೃಶ್ಯಂತೇ = ಕಾಣಲ್ಪಡುತ್ತವೆ. ಯಾಃ = ಯಾವ ದೇವತೆಗಳು ನಿತ್ಯಂ = ನಿರಂತರವಾಗಿ, ಸರ್ವಗತಾಃ = ಎಲ್ಲೆಡೆ

ವ್ಯಾಪ್ತರಾಗಿರುವ, ವಾಸುದೇವೈಕಸಂಶ್ರಯಾಃ = ವಾಸುದೇವರೂಪಿಯಾದ ಪರಮಾತ್ಮನನ್ನು ಆಶ್ರಯಿಸಿರುತ್ತಾರೆ.

॥ ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ವಿರಚಿತವಾದ ಬ್ರಹ್ಮಸೂತ್ರಭಾಷ್ಯದ ಕನ್ನಡಾನುವಾದದಲ್ಲಿ ಅಭಿಮಾನ್ಯಧಿಕರಣವು ಸಮಾಪ್ತವಾಯಿತು ॥

ತತ್ವಪ್ರಕಾಶಿಕಾ

ವೇದವನ್ನು ಅಪ್ರಮಾಣವೆನ್ನುವುದೇ ಲೇಸು

नन्वत्राप्रामणिकदेवताकल्पनात्तासां च विशिष्टसामर्थ्यकल्पनाद्धरं वेदाप्रामाण्यग्रहणमेव लाघवात् ।

ಪ್ರಶ್ನೆ - 'ಮೃದಬ್ರವೀತ್' ಇವೇ ಮೊದಲಾದ ವೇದವಾಕ್ಯಗಳಿಗೆ ಪ್ರಾಮಾಣ್ಯವನ್ನು ಸಮರ್ಥಿಸುವುದಕ್ಕಾಗಿ 'ಅಭಿಮಾನಿದೇವತೆಗಳು ಮಾತನಾಡಿದರು' ಇತ್ಯಾದಿಯಾಗಿ ಅನ್ಯಾರ್ಥವನ್ನು ಕಲ್ಪನೆ ಮಾಡುತ್ತಿದ್ದೀರಿ. ಇಂಥ ದೇವತೆಗಳನ್ನು ಕಲ್ಪನೆ ಮಾಡಲು ಯಾವುದೇ ಪ್ರಮಾಣ ಇರುವುದಿಲ್ಲ. ಅಷ್ಟೇ ಅಲ್ಲದೆ ಕಲ್ಪಿಸಿದ ದೇವತೆಗಳಲ್ಲಿ ಮಾತನಾಡಲು ಆವಶ್ಯಕವಾದ ವಿಶಿಷ್ಟಸಾಮರ್ಥ್ಯಾದಿಗಳನ್ನು ಕೂಡ ಕಲ್ಪನೆ ಮಾಡಬೇಕು. ಹೀಗೆ ಅನೇಕ ವಿಷಯವನ್ನು ಕಲ್ಪನೆ ಮಾಡುವುದಕ್ಕಿಂತ ವೇದವನ್ನು ಅಪ್ರಮಾಣವೆಂದು ಕಲ್ಪನೆ ಮಾಡುವುದೇ ಲಘುಭೂತವಾಗಿದೆ.

ಈ ಶಂಕೆಯ ಪರಿಹಾರಕ್ಕಾಗಿ 'ದೃಶ್ಯತೇ ಚ' ಎಂಬ ಸೂತ್ರ

तत्वप्रकाशिका – न च वेदेन तत्सिद्धिस्तत्प्रामाण्ये विवादादित्याशङ्कं परिहरत्सूत्रं पठित्वा तच्छेषमेव पूरयति – दृश्यते चेति ।।

ವೇದದಿಂದಲೇ ದೇವತೆಗಳು ಸಿದ್ಧರಾಗಿದ್ದಾರೆ ಮತ್ತು ಅವರ ಸಾಮರ್ಥ್ಯವೂ ಕೂಡ ಸಿದ್ಧವಾಗಿದೆ ಆದ್ದರಿಂದ ಕಲ್ಪನಾಗೌರವದೋಷವು ಬರುವುದಿಲ್ಲವೆಂದು ಹೇಳಬಾರದು. ಏಕೆಂದರೆ ವೇದ ಪ್ರಾಮಾಣ್ಯವಿಷಯದಲ್ಲಿಯೇ ವಿವಾದವಿದೆ. ಎಂಬ ಶಂಕೆಯನ್ನು ಪರಿಹರಿಸುವ

ಸೂತ್ರವನ್ನು ಪಠನ ಮಾಡಿ ಸೂತ್ರದಲ್ಲಿ ಇಲ್ಲದೆ ಇರುವ ಪದಗಳನ್ನು ಅಧ್ಯಹಾರ ಮಾಡುವ ಮೂಲಕ ವ್ಯಾಖ್ಯಾನ ಮಾಡಲು ಭಾಷ್ಯದಲ್ಲಿ 'ದೃಶ್ಯತೇ ಚ' ಇತ್ಯಾದಿ ವಾಕ್ಯಗಳು ಹೊರಟಿವೆ.

ಮಹಾಜನರು ದೇವತೆಗಳ ಶಕ್ತಿಸಾಮರ್ಥ್ಯ ನೋಡಿದ್ದಾರೆ

तत्वप्रकाशिका – नाप्रामाणिकत्वमभिमानिदेवतानां तत्सामर्थ्यस्य च महद्भिर्दृश्यमानत्वादित्यर्थः :

ಅಭಿಮಾನಿದೇವತೆಗಳು ಅಪ್ರಾಮಾಣಿಕರಲ್ಲ. ಅವರಲ್ಲಿರುವ ವಿಶಿಷ್ಟಸಾಮರ್ಥ್ಯಾದಿಗಳೂ ಕೂಡ ಅಪ್ರಾಮಾಣಿಕವಲ್ಲ. ಏಕೆಂದರೆ ಮಹಾಜನರು ಅಂಥ ದೇವತೆಗಳನ್ನು, ಅವರಲ್ಲಿರುವ ಶಕ್ತಿ ಸಾಮರ್ಥ್ಯಾದಿಗಳನ್ನು ಸಾಕ್ಷಾತ್ತಾಗಿ ನೋಡಿರುತ್ತಾರೆ. ಇಷ್ಟು 'ದೃಷ್ಟತೇ ಚ' ಎಂಬ ಸೂತ್ರದ ಅರ್ಥ.

ಪುರಾಣವೂ ಇದನ್ನೇ ಹೇಳಿದೆ

तत्वप्रकाशिका – परबुद्धेरप्रत्यक्षत्वात् कुत एतदित्यत आह – भविष्यत्पुराणे चेति

'ಪರಬುದ್ಧೇರಪ್ರತ್ಯಕ್ಷತ್ವಾತ್' ಮತ್ತೊಬ್ಬರ ಬುದ್ಧಿಯು ಪ್ರತ್ಯಕ್ಷವಿಷಯವಲ್ಲ. ಆದ್ದರಿಂದ ಇದನ್ನು ಹೇಗೆ ನಿರ್ಣಯಿಸುತ್ತೀರಿ ? ಎಂಬ ಪ್ರಶ್ನೆಗೆ ಭವಿಷ್ಯತ್‌ಪುರಾಣದ ವಚನದಿಂದ ಸಿದ್ಧವಾಗಿದೆ. ಎಂದು ಉತ್ತರಿಸುತ್ತಿದ್ದಾರೆ. 'ಭವಿಷ್ಯತ್ ಪುರಾಣೇ ಚ' ಎಂಬುದಾಗಿ

ಅಭಿಮಾನಿದೇವತೆಗಳಿಗೆ ಶರೀರವಿಲ್ಲವೇ?

तत्वप्रकाशिका – ता देवताः शक्तयश्च । अथवा विग्रहवतीनां सर्वगतानां तासां दर्शनप्रसङ्ग इत्युक्ते प्रष्टव्यम् । किमज्ञैर्दृश्येरन् महद्भिर्वा ।

'मुनिभिश्च ताः' ಎಂಬಲ್ಲಿರುವ 'ताः' ಎಂಬ ಪದಕ್ಕೆ ದೇವತೆಗಳು ಮತ್ತು ಅವರ ಶಕ್ತಿ ಸಾಮರ್ಥ್ಯಗಳು ಎಂದರ್ಥ.

ಅಥವಾ ಅಭಿಮಾನಿದೇವತೆಗಳು ಶರೀರವನ್ನು ಹೊಂದಿದ್ದಾರೆ ಮತ್ತು ಎಲ್ಲೆಡೆ ವ್ಯಾಪ್ತರಾಗಿದ್ದಾರೆ ಆದ್ದರಿಂದ ಅವರು ಎಲ್ಲರಿಗೂ ಕಾಣಿಸಬೇಕಾದೀತು ಎಂದು ಆಕ್ಷೇಪಿಸಿದರೆ ಹೀಗೆ ಪ್ರಶ್ನಿಸುತ್ತೇವೆ - ಅಜ್ಞಜನರಿಗೆ ಕಾಣಿಸಬೇಕೆಂದು ಅಭಿಪ್ರಾಯವೋ ? ಮಹಾಜನರಿಗೆ ಕಾಣಿಸಬೇಕೆಂದು ಅಭಿಪ್ರಾಯವೊ?

ಶರೀರವಿದ್ದರೂ ಕಾಣಿಸುವುದಿಲ್ಲ

तत्वप्रकाशिका – आद्यस्योत्तरं विशेषसामर्थ्यम् । द्वितीयेऽभ्युपगमो दृश्यते चेति ।

ಅಜ್ಞಜನರಿಗೆ ದರ್ಶನವಾಗಲು ಸಾಧ್ಯವಿಲ್ಲ. ಏಕೆಂದರೆ ದೇವತೆಗಳಿಗೆ ವಿಶೇಷಸಾಮರ್ಥ್ಯ-ವಿರುವುದರಿಂದ ಅಜ್ಞಾನಿಗಳಿಗೆ ಅವರು ಕಾಣಿಸಿಕೊಳ್ಳುವುದಿಲ್ಲ. ಇನ್ನು ಮಹಜ್ಜನರಿಗೆ ಕಾಣಿಸಬೇಕಾದೀತು ಎಂಬ ಆಕ್ಷೇಪಕ್ಕೆ 'ದೃಶ್ಯತೇ ಚ' ಎಂಬ ಸೂತ್ರವೇ ಉತ್ತರಿಸುತ್ತಿದೆ. ಮಹಾತ್ಮರಿಗೆ ದೇವತೆಗಳ ಶಕ್ತಿ ಸಾಮರ್ಥ್ಯಗಳು ಪ್ರತ್ಯಕ್ಷವಾಗಿಯೇ ಸಿದ್ಧವಾಗಿದೆ.

ಅನುಪಲಬ್ಧಿದೋಷ ಪರಿಹಾರಕ್ಕಾಗಿ ಸೂತ್ರ ಹೊರಟಿದೆ

तत्वप्रकाशिका – अथवा वस्त्वन्तरमधिष्ठाय तासां वचनादिकं कथमित्यस्योत्तरं तासामिति । परिच्छिन्नानामभिमानिनीनां कथमनेकाभिमन्य-मानाधिष्ठातृत्वमपीत्यस्यानुगतिरिति । अनुपलब्धिबाधपरिहाराय सूत्रमिति ।

ಅಥವಾ ಮತ್ತೊಂದು ಬಗೆಯಲ್ಲಿಯೂ ಸೂತ್ರದ ಅರ್ಥವನ್ನು ತಿಳಿಯಬಹುದು-

ದೇವತೆಗಳು ಮತ್ತೊಂದು ವಸ್ತುವನ್ನು ಅಧಿಷ್ಠಾನವನ್ನಾಗಿ ಮಾಡಿಕೊಂಡು ವಚನಾದಿ-ಕ್ರಿಯೆಗಳಲ್ಲಿ ತೊಡಗುತ್ತಾರೆಂದು ಹೇಳುವುದು ಹೇಗೆ ಯುಕ್ತವಾಗುತ್ತದೆ ? ಎಂಬ ಪ್ರಶ್ನೆಗೆ 'ತಾಸಾಮ್' ಎಂಬ ಉತ್ತರವನ್ನು ನೀಡಿದ್ದಾರೆ. ದೇವತೆಗಳಿಗೆ ವಿಶಿಷ್ಟವಾದ ಸಾಮರ್ಥ್ಯ-ವಿರುವುದರಿಂದ ಬೇರೆ ವಸ್ತುವನ್ನು ಅಧಿಷ್ಠಾನವನ್ನಾಗಿ ಮಾಡಿಕೊಂಡು ವಚನಾದಿಕ್ರಿಯೆಗಳ ಕಾರ್ಯದಲ್ಲಿ ತೊಡಗಬಹುದು.

ಪರಿಚ್ಛಿನ್ನರಾದ ಅಭಿಮಾನಿದೇವತೆಗಳು ಅಭಿಮನ್ಯಮಾನವಾದ ಎಲ್ಲಾ ವಸ್ತುಗಳಲ್ಲಿಯೂ ಅಧಿಷ್ಠಿತರಾಗಿ ವಚನಾದಿಕ್ರಿಯೆಗಳನ್ನು ನಡೆಸಲು ಹೇಗೆ ಸಾಧ್ಯ ? ಎಂಬ ಆಶಂಕೆಗೆ 'ಅನುಗತಿಃ' ಎಂದು ಉತ್ತರಿಸಿದ್ದಾರೆ. ವಿಶೇಷಸಾಮರ್ಥ್ಯವುಳ್ಳ ದೇವತೆಗಳು ಎಲ್ಲಾ ಪದಾರ್ಥಗಳಲ್ಲಿ ಇರುವುದಾದರೆ ನಮ್ಮ ಕಣ್ಣಿಗೇಕೆ ಕಾಣಿಸುತ್ತಿಲ್ಲ. ಆದ್ದರಿಂದ ಅಂಥ ದೇವತೆಗಳು ಇಲ್ಲವೆಂದೇ ಹೇಳಬೇಕಲ್ಲವೆ ? ಎಂಬ ಅನುಪಲಬ್ಧಿ ದೋಷವನ್ನು ಪರಿಹಾರ ಮಾಡುವುದಕ್ಕಾಗಿ 'ದೃಶ್ಯತೇ ಚ' ಎಂಬ ಸೂತ್ರವು ಹೊರಟಿದೆ. ಜ್ಞಾನಿಗಳಿಗೆ ಆ ದೇವತೆಗಳು ಕಾಣಿಸುತ್ತಾರಾದ್ದರಿಂದ ಯಾವುದೇ ದೋಷಕ್ಕೂ ಅವಕಾಶವಿಲ್ಲ.

ಅನ್ಯಥಾನುಪಪತ್ತಿಪ್ರಮಾಣದಿಂದ ಅಭಿಮಾನಿದೇವತಾಪರ

तत्वप्रकाशिका – न च वाच्यं देवतासद्भावेऽपि कुतोऽत्र तद् व्यपदेशकल्पनेति । अचेतनानां वचनाद्यदृष्ट्या निर्दोषवाक्यस्याप्रामाण्यदृष्ट्या च तत्कल्पनोपपत्तेः ।

ಅಭಿಮಾನಿದೇವತೆಗಳು ಇರುತ್ತಾರೆಂದು ಒಪ್ಪೋಣ. ಆದರೆ ಅಂಥ ದೇವತೆಗಳನ್ನೇ ವಾಕ್ಯಗಳು ಪ್ರತಿಪಾದನೆ ಮಾಡುತ್ತವೆಂದೇಕೆ ಒಪ್ಪಬೇಕು ? ಎಂದು ಪ್ರಶ್ನಿಸಬಾರದು. ಏಕೆಂದರೆ ಜಡಪದಾರ್ಥವು ಮಾತನಾಡುವುದು ಲೋಕದಲ್ಲಿ ಎಲ್ಲಿಯೂ ಕಂಡಿಲ್ಲ. ವೇದಗಳು ನಿರ್ದುಷ್ಟವಾಗಿವೆ ಎಂದು ಸಿದ್ಧವಾಗಿದೆ. ನಿರ್ದುಷ್ಟವಾದ ವಾಕ್ಯಗಳು ಅಪ್ರಮಾಣವಾಗಲು ಸಾಧ್ಯವಿಲ್ಲ. ಇವೆರಡನ್ನು ಕೂಡಿಸಬೇಕೆಂದರೆ ಅಭಿಮಾನಿದೇವತೆಗಳನ್ನು ವೇದವು ಪ್ರತಿಪಾದನೆಮಾಡುತ್ತಿದೆಯೆಂದು ಒಪ್ಪಬೇಕು.

ಜಗಜ್ಜನ್ಮಾದಿಕಾರಣತ್ವವಿಷಯದಲ್ಲಿ ಯುಕ್ತಿವಿರೋಧವಿಲ್ಲ

तत्वप्रकाशिका – अतो वेदप्रामाण्ये युक्तिविरोधाभावयुक्तं तेन भगवतो जगत्कारणत्वसाधनमिति सिद्धम् ।। ७ ।।

।। इति श्रीमज्जयतीर्थभिक्षुविरचितायां तत्वप्रकाशिकायाम् अभिमान्यधिकरणम् ।।

ಆದ್ದರಿಂದ ವೇದಪ್ರಾಮಾಣ್ಯವಿಷಯದಲ್ಲಿ ಯಾವುದೇ ಯುಕ್ತಿಯ ಅವಶ್ಯಕತೆ ಇರುವುದಿಲ್ಲ. ಆದ್ದರಿಂದ ಅಂಥ ನಿರ್ದುಷ್ಟವಾದ ವೇದವಾಕ್ಯದಿಂದ ಭಗವಂತನಲ್ಲಿ ಜಗಜ್ಜನ್ಮಾದಿಕಾರಣತ್ವವೆಂಬ ಲಕ್ಷಣವು ಸಿದ್ಧವಾಗುತ್ತದೆ.

॥ ಇಲ್ಲಿಗೆ ಶ್ರೀಮಜ್ಜಯತೀರ್ಥಮುನಿಗಳಿಂದ ವಿರಚಿತವಾದ ತತ್ವಪ್ರಕಾಶಿಕಾಟೀಕೆಯಲ್ಲಿ
ಅಭಿಮಾನ್ಯಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

॥ ಶ್ರೀಕೃಷ್ಣಾರ್ಪಣಮಸ್ತು ॥

ಭಾವದೀಪ

'ದೃಶ್ಯತೇ ಚ' ಎಂಬ ಸೂತ್ರಕ್ಕೆ ಅವತಾರಿಕೆ

भावदीपः – दृश्यते च ।। ७ ।। ननु सूत्रे देवतातत्सामर्थ्ययोर्मानोक्तिर्निर्बीजा तदुक्तावपि श्रुत्युक्तिं विना प्रत्यक्षोक्तिर्निर्बीजेत्यतोऽवतारयति॥ **नन्विति ।।** तत्सिद्धिः तयोः सिद्धिरित्यर्थः। देवतातच्छक्तितपरत्वेन भाष्यं सूत्रान्विततया व्याचष्टे॥ **नाप्रामाणिकत्वमिति ।।**

ಸೂತ್ರದಲ್ಲಿ ದೇವತೆಗಳು ಹಾಗೂ ಅವರ ಸಾಮರ್ಥ್ಯ; ಈ ಎರಡು ವಿಷಯದಲ್ಲಿ ಪ್ರಮಾಣವನ್ನು ಹೇಳುವುದು ಅನಾವಶ್ಯಕ. ಹಾಗೇನಾದರೂ ಪ್ರಮಾಣ ಹೇಳುವುದಾದರೆ ಶ್ರುತಿಯನ್ನೇ ಹೇಳಬೇಕು. ಅದನ್ನು ಬಿಟ್ಟು ಪ್ರತ್ಯಕ್ಷ ಪ್ರಮಾಣವನ್ನು ಹೇಳುವುದು ವ್ಯರ್ಥ ಎಂಬ ಆಕ್ಷೇಪವನ್ನು ಮಾಡುವ ಮೂಲಕ 'ದೃಶ್ಯತೇ ಚ' ಎಂಬ ಸೂತ್ರಕ್ಕೆ ಅವತಾರಿಕೆಯನ್ನು 'ನನ್ವತ್ರ' ಇತ್ಯಾದಿ ಟೀಕಾವಾಕ್ಯದಿಂದ ಮಾಡುತ್ತಿದ್ದಾರೆ.

'ತತ್‌ಸಿದ್ಧಿಃ' ಎಂಬ ಪದಕ್ಕೆ ದೇವತೆಗಳು ಹಾಗೂ ಅವರ ಸಾಮರ್ಥ್ಯ ಇವುಗಳು ಸಿದ್ಧವಾಗುತ್ತವೆ ಎಂದರ್ಥ. ದೇವತೆಗಳು ಹಾಗೂ ಅವರ ಸಾಮರ್ಥ್ಯ ಎರಡನ್ನೂ ಭಾಷ್ಯದಲ್ಲಿ ವಿವಕ್ಷಿಸಬೇಕು ಎಂಬುದಾಗಿ ಸೂತ್ರದ ಜೊತೆ ಅನ್ವಯ ಮಾಡಿ ವ್ಯಾಖ್ಯಾನ ಮಾಡಲು 'ನ ಅಪ್ರಾಮಾಣಕತ್ವಂ' ಇತ್ಯಾದಿ ಟೀಕಾ ಪಂಕ್ತಿಯು ಹೊರಟಿದೆ.

ವೇದವನ್ನು ಬಿಟ್ಟು ಯೋಗಿಪ್ರತ್ಯಕ್ಷವನ್ನೇಕೆ ಪ್ರಮಾಣವೆಂದರು ?

ಭಾವದೀಪ: – ತಾ ಇತ್ಯನೂದ್ಯಾರ್ಥಮಾಹ – **ತಾ ದೇವತಾಶ್ಶಕ್ತಯಶ್ಚೇತಿ ।।** ದ್ವಯೋರಪಿ ಪ್ರಕೃತತ್ವಾದಿತಿ ಭಾವಃ। ನನು ವೇದಾದಿಪ್ರಾಮಾಣ್ಯವಿವಾದೇ ಬೀಜಾಭಾವಸ್ಯೋಕ್ತತ್ವಾತ್ತತ್ಯಾಗೇನ ದೇವತಾದೌ ಯೋಗಿಪ್ರತ್ಯಕ್ಷೋಕ್ತಿರಯುಕ್ತಾ। ಅನ್ಯಥಾ ಯೋಗಿಪ್ರತ್ಯಕ್ಷೇ ಸ್ಮೃತೇಃ ಪ್ರಮಾಣೀಕರಣಾಯೋಗಾದಿತಿ ಪೂರ್ವತ್ರಾರುಚ್ಯಾऽऽಹ – **ಅಥವೇತಿ ।।**

ಟೀಕೆಯಲ್ಲಿ 'ತಾಃ' ಎಂಬುದಾಗಿ ಭಾಷ್ಯದಲ್ಲಿರುವ ಪದವನ್ನು ಅನುವಾದ ಮಾಡಿ 'ದೇವತಾಃ, ಶಕ್ತೇಶ್ಚ' ಎಂಬುದಾಗಿ ಅರ್ಥವನ್ನು ಬರೆದಿದ್ದಾರೆ. ಏಕೆಂದರೆ ದೇವತೆಗಳು ಮಾತ್ರ ಪ್ರಸಕ್ತರಲ್ಲ, ಅವರ ಶಕ್ತಿಯೂ ಕೂಡ ಪ್ರಸಕ್ತವಾಗಿದೆ.

ವೇದಾದಿ ಪ್ರಾಮಾಣ್ಯದಲ್ಲಿ ವಿವಾದವಿದೆ ಎನ್ನಲು ಯಾವುದೇ ಕಾರಣವಿಲ್ಲ. ಹೀಗಿರುವಾಗ ಇದನ್ನು ಬಿಟ್ಟು ದೇವತೆಗಳು ಹಾಗೂ ಅವರ ಸಾಮರ್ಥ್ಯ ಈ ಎರಡರ ವಿಷಯದಲ್ಲಿ ಯೋಗಿ ಪ್ರತ್ಯಕ್ಷವನ್ನು ಪ್ರಮಾಣವನ್ನಾಗಿ ಏಕೆ ಹೇಳಿದರು? ಒಂದು ವೇಳೆ ವೇದಾದಿ ಪ್ರಾಮಾಣ್ಯದಲ್ಲಿ ವಿವಾದ ಇದೆ ಎನ್ನುವುದಾದರೆ ಆಗ ಯೋಗಿಪ್ರತ್ಯಕ್ಷಕ್ಕೆ ಸ್ಮೃತಿ ಪ್ರಮಾಣವನ್ನು ಆಧಾರವನ್ನಾಗಿ ನೀಡುವುದೂ ಕೂಡ ಅಯುಕ್ತವಾಗುತ್ತದೆ. ಏಕೆಂದರೆ ವೇದದಂತೆ ಸ್ಮೃತಿಯೂ ಕೂಡ ವಿವಾದಗ್ರಸ್ತವಾಗಿದೆ. ಹೀಗೆ ಹಿಂದಿನ ಪಕ್ಷದಲ್ಲಿ ಅಸ್ವಾರಸ್ಯವನ್ನು ಕಂಡು ಮತ್ತೊಂದು ಪಕ್ಷವನ್ನು 'ಅಥವಾ' ಇತ್ಯಾದಿ ಟೀಕಾವಾಕ್ಯದಿಂದ ಸಮರ್ಥನೆ ಮಾಡುತ್ತಿದ್ದಾರೆ.

'ವಿಶೇಷಾನುಗತಿಭ್ಯಾಂ' ಎಂಬ ಹೇತುವಿಗೆ ಎಲ್ಲಿ ಅನ್ವಯ ?

ಭಾವದೀಪ: – ಅತ್ರ ಪಕ್ಷದ್ವಯೇऽಪಿ ವಿಶೇಷಾನುಗತಿಭ್ಯಾಮಿತಿ ಹೇತ್ವೋರ್ನ ಚ ದರ್ಶನಪ್ರಸಙ್ಗ ಇತ್ಯಾದ್ಯಧ್ಯಾಹೃತಸಾಧ್ಯಾನ್ವಯಾದರುಚ್ಯಾऽಭಿಮಾನಿವ್ಯಪದೇಶ ಇತಿ ಶ್ರುತಸಾಧ್ಯಾನ್ವಯೇನ ಮತಾನ್ತರಮಾಹ – **ಅಥವಾ ವಸ್ತ್ವನ್ತರಮಿತಿ ।।** ತರ್ಹಿ ದೃಶ್ಯತೇ ಚೇತಿ ಸೂತ್ರಂ ಕಿಮರ್ಥಮಿತ್ಯತ ಆಹ – **ಅನುಪಲಬ್ಧೀತಿ ।।**

ಈ ಎರಡು ಪಕ್ಷಗಳಲ್ಲಿ 'ವಿಶೇಷಾನುಗತಿಭ್ಯಾಂ' ಎಂಬ ಹೇತುಗಳಿಗೆ 'ನ ದರ್ಶನ ಪ್ರಸಂಗಃ' ಎಂಬ ಅಧ್ಯಾಹೃತವಾದ ಸಾಧ್ಯದ ಜೊತೆ ಅನ್ವಯವನ್ನು ಮಾಡಿದ್ದಾರೆ. ಇದರಲ್ಲಿ ಅರುಚಿಯನ್ನು ಕಂಡು

'ಅಭಿಮಾನಿವ್ಯಪದೇಶಃ' ಎಂಬ ಸೂತ್ರದಲ್ಲಿ ಶ್ರುತವಾದ ಸಾಧ್ಯದ ಜೊತೆ ಅನ್ವಯವನ್ನು ಮಾಡುವುದಕ್ಕಾಗಿ 'ಅಥವಾ' ಎಂಬ ವಾಕ್ಯದಿಂದ ಮತ್ತೊಂದು ಪಕ್ಷವನ್ನು ಉಪಪಾದನೆ ಮಾಡುತ್ತಿದ್ದಾರೆ.

'ಅಭಿಮಾನಿವ್ಯಪದೇಶಃ' ಎಂಬ ಹಿಂದಿನ ಸೂತ್ರದ ಜೊತೆ ಅನ್ವಯವನ್ನು ಮಾಡುವುದಾದರೆ 'ದೃಶ್ಯತೇ ಚ' ಎಂಬ ಸೂತ್ರವು ವ್ಯರ್ಥವಲ್ಲವೇ? ಎಂಬ ಪ್ರಶ್ನೆಗೆ ಉತ್ತರವನ್ನು ನೀಡಲು 'ಅನುಪಲಬ್ಧಿ' ಎಂಬ ವಾಕ್ಯವು ಹೊರಟಿದೆ. 'ಅನುಪಲಬ್ಧಿ' ಎಂಬ ಬಾಧದ ಪರಿಹಾರಕ್ಕೋಸ್ಕರ ಎರಡನೇ ಸೂತ್ರವು ಸಾರ್ಥಕವಾಗಿದೆ.

ನ್ಯಾಯವಿವರಣಕ್ಕೆ ವ್ಯಾಖ್ಯಾನ

भावदीपः – योगिभिरप्यनुपलभ्यमानत्वान्नास्त्यभिमानिदेवतादीत्याशङ्कानिरसाय दृश्यते चेति सूत्रमित्यर्थः। न मृदादीनां वचनाद्यदृष्टिः श्रुत्यप्रामाण्यकारणं अपि तु वचनादिशक्ताया मृदादिदेवतायाः शब्दैर्वाच्यत्वद्योतिकैवेति न्यायविवरणे पूर्वपक्षांशस्य भाष्यव्याख्यायैव प्राग्विवृतत्वात्सिद्धान्तांशं अत्र योजयितुं शङ्कामाह – **न च वाच्यमिति।। अत इति।।**

मृदादिशब्दानामभिमानिदेवतापरत्वादित्यर्थः।। ७ ।। अ० ३ ।।

ಯೋಗಿಗಳಿಗೂ ಕೂಡ ದೇವತೆಗಳು ಕಂಡಿರುವುದಿಲ್ಲ. ಆದ್ದರಿಂದ ಅಭಿಮಾನಿದೇವತೆಯೇ ಇರುವುದಿಲ್ಲವೆಂದು ಆಕ್ಷೇಪ ಮಾಡಿದರೆ ಇದರ ಪರಿಹಾರಕ್ಕಾಗಿ 'ದೃಶ್ಯತೇ ಚ' ಎಂಬ ಸೂತ್ರವು ಹೊರಟಿದೆ ಎಂಬುದು ಅನುಪಲಬ್ಧಿ ಎಂಬ ವಾಕ್ಯದ ಅಭಿಪ್ರಾಯವಾಗಿದೆ.

ಮೃದಾದಿಗಳಲ್ಲಿ ಮಾತನಾಡುವಿಕೆಯು ಕಾಣಿಸುತ್ತಿಲ್ಲ. ಇದು ಶ್ರುತಿಯ ಅಪ್ರಾಮಾಣ್ಯಕ್ಕೆ ಕಾರಣವಲ್ಲ. ಮತ್ತೇನೆಂದರೆ ಮಾತನಾಡಲು ಸಮರ್ಥರಾದ ಮೃದಾದ್ಯಭಿಮಾನಿ ದೇವತೆಗಳು ಮೃತ್ ಮೊದಲಾದ ಶಬ್ದಗಳಿಂದ ಪ್ರತಿಪಾದ್ಯರಾಗಿದ್ದಾರೆ ಎಂಬುದಕ್ಕೆ ಮೃದಾದಿಗಳಲ್ಲಿರುವ ವಚನಾದ್ಯದೃಷ್ಟಿಯು ದ್ಯೋತಕವಾಗಿದೆ. ಹೀಗೆ ನ್ಯಾಯವಿವರಣದಲ್ಲಿ ಹೇಳಿರುತ್ತಾರೆ. ಇಲ್ಲಿರುವ ಪೂರ್ವಪಕ್ಷಾಂಶವನ್ನು ಭಾಷ್ಯವನ್ನು ವ್ಯಾಖ್ಯಾನ ಮಾಡುವ ಸಂದರ್ಭದಲ್ಲಿ ಈ ಹಿಂದೆಯೇ ವ್ಯಾಖ್ಯಾನಿಸಿದಂತಾಯಿತು. ಪ್ರಕೃತ ನ್ಯಾಯವಿವರಣದ ಸಿದ್ಧಾಂತ ಭಾಗವನ್ನು ಯೋಜನೆ ಮಾಡುವುದಕ್ಕಾಗಿ 'ನ ಚ ವಾಚ್ಯಂ' ಎಂಬ

ವಾಕ್ಯದಿಂದ ಆಶಂಕಿಸುತ್ತಿದ್ದಾರೆ. 'ಅತಃ' ಎಂಬ ಪದಕ್ಕೆ ಮೃದಾದಿ ಶಬ್ದಗಳು ಅಭಿಮಾನಿದೇವತಾ ಪರವಾಗಿರುವುದರಿಂದ ಎಂದರ್ಥ.

॥ ಇಲ್ಲಿಗೆ ಶ್ರೀಮದ್‌ರಾಘವೇಂದ್ರತೀರ್ಥರಿಂದ ವಿರಚಿತವಾದ ಭಾವದೀಪದ ಅಭಿಮಾನ್ಯಧಿಕರಣದ ಕನ್ನಡ ಅನುವಾದವು ಮುಗಿಯಿತು ॥

।। श्रीजानकीवदनाम्भोजराजहंसाय रामचन्द्राय नमः ।।

।। श्री गुरुभ्यो नमः ।।

श्री राघवेन्द्रतीर्थविरचिता

तन्त्रदीपिका

अभिमान्यधिकरणम् (२।१।३)

ಪ್ರಬಲ ಯುಕ್ತಿವಿರೋಧ ಪರಿಹಾರ

।। अभिमानिव्यपदेशस्तु विशेषानुगतिभ्याम् ।।२-१-६।।

अथ दृढयुक्त्यविरोध उच्यते । तुरेव । योग्यतयाऽभिमानिपदेनान्वेति । ''मृदब्रवीत्'', ''ता आप ऐक्षन्त'' इत्यादिश्रुतावभिमानिनश्चेतनस्यैव व्यपदेशः न तु जडस्य । येन मृन्न वक्त्री जडत्वादित्यादियुक्तिविरोधः स्यादिति भावः ।

ಈ ಅಧಿಕರಣದಲ್ಲಿ ಪ್ರಬಲವಾದ ಯುಕ್ತಿವಿರೋಧವನ್ನು ಪರಿಹರಿಸಲಾಗಿದೆ. ಸೂತ್ರದಲ್ಲಿರುವ 'ತು' ಶಬ್ದವು ಅವಧಾರಣಾರ್ಥದಲ್ಲಿದೆ. ಇದು ಅನ್ವಯಕ್ಕೆ ಯೋಗ್ಯವಾಗಿರುವುದರಿಂದ

ಅಭಿಮಾನಿಪದದ ಜೊತೆ ಅನ್ವಿತವಾಗುತ್ತದೆ. 'ಮೃದಬ್ರವೀತ್', 'ತಾ ಆಪ ಐಕ್ಷಂತ' ಇವೇ ಮೊದಲಾದ ಶ್ರುತಿಗಳಲ್ಲಿ ಅಭಿಮಾನಿಚೇತರನ್ನೇ ಹೇಳಲಾಗಿದೆ ಹೊರತು, ಜಡವನ್ನಲ್ಲ. ಜಡವನ್ನು ಹೇಳಿದ್ದಲ್ಲಿ 'ಮೃತ್ ನ ವಕ್ತ್ರೀ ಜಡತ್ವಾತ್' ಇತ್ಯಾದಿ ಯುಕ್ತಿವಿರೋಧವು ಪ್ರಾಪ್ತವಾಗುತ್ತಿತ್ತು ಎಂಬುದು ಸೂತ್ರದ ಅಭಿಪ್ರಾಯ.

नन्वभिमानिनः प्रादेशिकत्वविदेहत्वयोर्वैय्यर्थ्यं वक्तृत्वाद्ययोगो व्याप्तत्व सदेहत्वयोरनुपलम्भबाध इत्यत उक्तम् - विशेषेति । विशिष्यत इति विशेषः शक्तिः । अनुगतिर्व्याप्तिः, ताभ्याम् । व्याप्तत्वसदेहत्वयोरङ्गीकारेऽ-प्यन्तर्धानशक्त्या अदर्शनोपपत्तेरिति भावः ।

ಅಭಿಮಾನಿದೇವತೆಗಳಿಗೆ ಪ್ರಾದೇಶಿಕತ್ವ ಹಾಗೂ ವಿದೇಹತ್ವಗಳನ್ನು ಒಪ್ಪಿದರೆ ವೈಯರ್ಥ್ಯ ಬರುತ್ತದೆ. ಹಾಗೂ ವಕ್ತೃತ್ವವೂ ಕೂಡ ಕೂಡುವುದಿಲ್ಲ. ಒಂದುವೇಳೇ ವ್ಯಾಪ್ತತ್ವ ಮತ್ತು ಸದೇಹಗಳನ್ನು ಒಪ್ಪಿದರೆ ಅನುಪಲಂಭಬಾಧವು ಪ್ರಾಪ್ತವಾಗುತ್ತದೆ. ಈ [illegible] ಉತ್ತರಿಸುವುದಕ್ಕಾಗಿ 'ವಿಶೇಷಾನುಗತಿಭ್ಯಾಮ್' ಎಂಬ ಸೂತ್ರಭಾಗವು ಹೊರಟಿದೆ. ವಿಶೇಷ ಶಬ್ದಕ್ಕೆ 'ವಿಶಿಷ್ಯತೇ ಇತಿ ವಿಶೇಷಃ' ಎಂಬ ನಿಷ್ಪತ್ತಿಯಿಂದ ಶಕ್ತಿಯೆಂದರ್ಥ. 'ಅನುಗತಿ' ಶಬ್ದಕ್ಕೆ ವ್ಯಾಪ್ತಿ ಎಂದರ್ಥ. ಶಕ್ತಿ ಹಾಗೂ ವ್ಯಾಪ್ತಿಗಳಿರುವುದರಿಂದ ಎಂಬರ್ಥವನ್ನು ಹೇಳಿದಂತಾಗುತ್ತದೆ. ವ್ಯಾಪ್ತತ್ವ ಮತ್ತು ಸದೇಹತ್ವಗಳನ್ನು ಅಂಗೀಕಾರ ಮಾಡಿದರೂ ಕೂಡ ಅಂತರ್ಧಾನಶಕ್ತಿ-ಯಿರುವುದರಿಂದ ಕಾಣಿಸದಿರುವುದು ಉಪಪನ್ನವಾಗುತ್ತದೆ ಎಂಬುದು ಅಭಿಪ್ರಾಯ. (ಅಭಿಮನ್ಯಮಾನವೆಂದು ಹೇಳಲ್ಪಟ್ಟ ಯಾವ ವಸ್ತುವಿದೆಯೋ, ಅದರಲ್ಲಿ ಕೆಲವು ಭಾಗದಲ್ಲಿ ಮಾತ್ರ. ಯಾವ ಭಾಗದಲ್ಲಿ ಅಭಿಮಾನಿದೇವತೆಯು ಇರುವುದಿಲ್ಲವೋ, ಅದರಂತೆ ಇತರ ಭಾಗವೂ ಕೂಡ ಅಭಿಮಾನಿದೇವತೆಯು ಇರುವುದಿಲ್ಲವೆಂದು ಒಪ್ಪಬಹುದು. ಹಾಗಾಗಿ ಅಭಿಮಾನಿದೇವತೆಯನ್ನು ಒಪ್ಪುವುದು ವ್ಯರ್ಥವಾಗುತ್ತದೆ ಎಂಬುದು ಇದರ ಅಭಿಪ್ರಾಯ.)

ವಿವರಣೆ - ಅಭಿಮಾನಿದೇವತೆಯು ತನ್ನಿಂದ ಅಭಿಮನ್ಯಮಾನವಾದ ವಸ್ತುವಿನಲ್ಲಿ ಸಮಗ್ರವಾಗಿರುವುದಿಲ್ಲ. ಏಕದೇಶದಲ್ಲಿ ಮಾತ್ರ ಇರುತ್ತಾರೆ ಎಂಬುದಾಗಿ ಪ್ರಾದೇಶಿಕತ್ವವನ್ನು ಒಪ್ಪಿದರೆ ಅಥವಾ ಅಭಿಮಾನಿದೇವತೆಗೆ ದೇಹವೇ ಇರುವುದಿಲ್ಲವೆಂದು ಒಪ್ಪಿದರೆ ಅಂಥ ಅಭಿಮಾನಿದೇವತೆಯನ್ನು ಒಪ್ಪಿಯೂ ಕೂಡ ಉಪಯೋಗವಿಲ್ಲ. ಹಾಗೂ ದೇಹವೇ ಇಲ್ಲದ

ಕಾರಣ ವಕ್ತೃತ್ವವೂ ಕೂಡ ಯುಕ್ತವಾಗುವುದಿಲ್ಲ. ಆದಕ್ಕಾಗಿ ಅಭಿಮನ್ಯಮಾನವಾದ ವಸ್ತುವಿನಲ್ಲಿ ಅಭಿಮಾನಿದೇವತೆಯೇ ವ್ಯಾಪ್ತವಾಗಿರುತ್ತಾರೆ. ಮತ್ತು ದೇಹಸಹಿತವಾಗಿರುತ್ತಾರೆಂದೇ ಹೇಳಬೇಕು. ಹೀಗೆ ಹೇಳಿದರೆ ಅಭಿಮಾನಿದೇವತೆಯು ಇದ್ದೂ ಕೂಡ ಕಾಣಿಸುತ್ತಿಲ್ಲವಾದ್ದರಿಂದ ಅನುಪಲಂಭಬಾದವು ಬರುತ್ತದೆ. ಈ ಆಕ್ಷೇಪದ ಪರಿಹಾರಕ್ಕಾಗಿಯೇ 'ವಿಶೇಷಾನುಗತಿಭ್ಯಾಮ್' ಎಂಬುದಾಗಿ ಸೂತ್ರದಲ್ಲಿ ಹೇಳಿದ್ದಾರೆ.

ಅಭಿಮಾನಿದೇವತೆಗೆ ದೇಹವಿದ್ದರೂ ಕೂಡ ಅಂತರ್ಧಾನಶಕ್ತಿಯಿದೆ. ಮತ್ತು ಎಲ್ಲೆಡೆಯು ವ್ಯಾಪ್ತತ್ವವು ಇರುತ್ತದೆ. ಆದ್ದರಿಂದ ವಕ್ತೃತ್ವಾದ್ಯಯೋಗವಾಗಲೀ, ಅನುಪಲಂಬಬಾಧವಾಗಲೀ ಇರುವುದಿಲ್ಲ.

'ಅನುಗತಿವಿಶೇಷಾಭ್ಯಾಂ' ಎಂದು ಹೇಳಬೇಕಿತ್ತಲ್ಲವೇ?

अत्राकाङ्क्षाक्रमोल्लङ्घनेऽल्पाक्षरत्वं प्रयोजकम् । यद्वा कथमभिमानिनः पृथ्वियादिवस्त्वन्तरमधिष्ठाय वचनादिकम् । कथं च परिच्छिन्नस्यानेकाभिमन्यमानाधिष्ठातृत्वमित्यत उक्तं विशेषेति । तस्य तथा सामर्थ्यादभिमन्यमाने सर्वत्रांशतो व्याप्त्वाच्चेत्यर्थः ।

ಇಲ್ಲಿ ಆಕಾಂಕ್ಷಾಕ್ರಮವನ್ನು ಉಲ್ಲಂಘಿಸಲು ಅಲ್ಪಾಕ್ಷರತ್ವವು ಪ್ರಯೋಜಕವಾಗಿದೆ. ಅಥವಾ 'ವಿಶೇಷಾನುಗತಿಭ್ಯಾಂ' ಎಂಬುದಕ್ಕೆ ಮತ್ತೊಂದು ಬಗೆಯಲ್ಲಿ ವ್ಯಾಖ್ಯಾನವನ್ನು ತಿಳಿಯಬಹುದು - ಅಭಿಮಾನಿದೇವತೆಯು ಪೃಥಿವೀ ಮೊದಲಾದ ಬೇರೆ ವಸ್ತುವನ್ನೇ ಅಧಿಷ್ಠಾನ ಮಾಡಿಕೊಂಡು, ವಚನಾದಿಗಳನ್ನು ಹೊಂದಲು ಹೇಗೆ ಸಾಧ್ಯವಾಗುತ್ತದೆ ? ಅಥವಾ ಪರಿಚ್ಛಿನವಾದ ಅಭಿಮಾನಿದೇವತೆಯು ಅನೇಕ ಅಭಿಮನ್ಯವಾದ ಪದಾರ್ಥಗಳಲ್ಲಿ ಇರಲು ಹೇಗೆ ಸಾಧ್ಯ ? ಈ ಪ್ರಶ್ನೆಗೆ 'ವಿಶೇಷಾನುಗತಿಭ್ಯಾಂ' ಎಂಬುದರಿಂದ ಉತ್ತರಿಸಿದ್ದಾರೆ. ಅಭಿಮಾನಿದೇವತೆಗೆ ಅಂಥ ಸಾಮರ್ಥ್ಯವಿದೆ. ಮತ್ತು ಆ ಅಭಿಮನ್ಯಮಾನವಾದ ವಸ್ತುಗಳಲ್ಲೆಲ್ಲೆಡೆಯೂ ಅಂಶತಃ ವ್ಯಾಪ್ತಿಯೂ ಕೂಡ ಇರುತ್ತದೆ. ಆದ್ದರಿಂದ ಮೇಲಿನ ಆಕ್ಷೇಪಕ್ಕೆ ಅವಕಾಶವಿಲ್ಲ.

ವಿವರಣೆ - ಹಿಂದೆ ಅಭಿಮಾನಿದೇವತೆಯು ಒಂದು ಪ್ರದೇಶದಲ್ಲಿ ಇರುತ್ತಾರೋ, ಅಥವಾ ಎಲ್ಲೆಡೆಯೂ ಇರುತ್ತಾರೋ ಎಂಬುದಾಗಿ ವಿಕಲ್ಪವನ್ನು ಮಾಡಲಾಗಿತ್ತು. ಹಾಗೂ

ಆ ಅಭಿಮಾನಿದೇವತೆಗೆ ದೇಹವಿದೆಯೋ, ಇಲ್ಲವೋ ಎಂಬುದಾಗಿಯೂ ಕೂಡ ವಿಕಲ್ಪ ಮಾಡಲಾಗಿತ್ತು. ಈ ಆಕಾಂಕ್ಷೆಗೆ ಅನುಗುಣವಾಗಿ ಸೂತ್ರದಲ್ಲಿ ಅನುಗತಿಶಬ್ದನ್ನು ಮೊದಲು ಹೇಳಿ, ಅನಂತರ ವಿಶೇಷಶಬ್ದವನ್ನು ಪ್ರಯೋಗ ಮಾಡಬೇಕಿತ್ತು. ಈ ಆಕಾಂಕ್ಷಾಕ್ರಮವನ್ನು ಉಲ್ಲಂಘನೆ ಮಾಡಲು ಏನು ಕಾರಣ ? ಎಂಬ .ಪ್ರಶ್ನೆಗೆ 'ಅತ್ರ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. 'ವಿಶೇಷ' ಮತ್ತು 'ಅನುಗತಿ' ಎಂಬೆರಡು ಪದಗಳಲ್ಲಿ ವಿಶೇಷ ಎಂಬ ಪದವು ಅಲ್ಪಾಕ್ಷರವುಳ್ಳದ್ದಾಗಿದೆ. ದ್ವಂದ್ವಸಮಾಸದಲ್ಲಿ 'ಅಲ್ಪಾಚ್‌ತರಂ ಪೂರ್ವಂ' ಎಂಬ ಸೂತ್ರದಂತೆ ಅಲ್ಪಾಚ್‌ವುಳ್ಳ ಪದವೇ ಮೊದಲು ಪ್ರಯೋಗ ಮಾಡಬೇಕಾಗಿದ್ದರಿಂದ ವಿಶೇಷಶಬ್ದವನ್ನು ಮೊದಲು ಪ್ರಯೋಗಿಸಿದ್ದಾರೆ. ಅಥವಾ 'ವಿಶೇಷಾನುಗತಿಭ್ಯಾಂ' ಎಂಬ ಪ್ರಯೋಗಕ್ಕೆ ಮತ್ತೊಂದು ಕಾರಣ ಹೀಗಿದೆ - ಅಭಿಮಾನಿದೇವತೆಯು ಮತ್ತೊಂದು ಅಧಿಷ್ಠಾನವನ್ನು ಅಪೇಕ್ಷಿಸಿ ವಚನಕ್ರಿಯಾದಿಗಳನ್ನು ಹೊಂದುತ್ತಾನೆ ಎಂಬುದು ಹೇಗೆ ಯುಕ್ತವಾಗುತ್ತದೆ? ಎಂಬ ಪ್ರಶ್ನೆಗೆ 'ವಿಶೇಷ' ಎಂಬ ಪದದಿಂದ ಅಂಥ ಸಾಮರ್ಥ್ಯವು ಅಭಿಮಾನಿದೇವತೆಗಿದೆ ಎಂದು ಉತ್ತರಿಸಿದ್ದಾರೆ. ಪರಿಚ್ಛಿನ್ನನಾದ ಅಭಿಮಾನಿದೇವತೆಯು ಎಲ್ಲೆಡೆಯು ವ್ಯಾಪ್ತನಾಗಿರಲು ಹೇಗೆ ಸಾಧ್ಯ ? ಎಂಬ ಪ್ರಶ್ನೆಗೆ 'ಅನುಗತಿ' ಎಂಬ ಪದದಿಂದ ಅಭಿಮಾನಿದೇವತೆಯು ಅಂಶತಃ ಎಲ್ಲೆಡೆಯೂ ವ್ಯಾಪ್ತನಾಗಿರುತ್ತಾನೆ ಎಂಬುದಾಗಿ ಉತ್ತರಿಸಿದ್ದಾರೆ.

ಸೂತ್ರದಲ್ಲಿ ಚೇತನ ಪದವನ್ನು ಪ್ರಯೋಗಿಸಬಹುದಿತ್ತಲ್ಲವೇ?

अत्र चेतनेति वाच्येऽभिमानीत्युक्तिरभिमन्यमानगतमृत्वादिमृच्छब्द-प्रवृत्तिनिमित्तस्याभिमान्यधीनत्वादिदि न्यायो मृदादिशब्दानां मृदादिभ्योऽ-प्यभिमानिनि तुशब्दसूचितमुख्यत्वोपपादनायानुसन्धेय इति सूचनाय ।

ಸೂತ್ರದಲ್ಲಿ 'ಅಭಿಮಾನಿ' ಎಂಬ ಪದದ ಬದಲು 'ಚೇತನ' ಎಂಬ ಪದವನ್ನು ಪ್ರಯೋಗಿಸಬೇಕಿತ್ತಲ್ಲವೇ? ಎಂಬ ಪ್ರಶ್ನೆಗೆ ಉತ್ತರವನ್ನು ಹೀಗೆ ತಿಳಿಯಬೇಕು - ಮೃತ್ ಮೊದಲಾದ ಜಡಪದಾರ್ಥಗಳಿಗೆ ಯಾವ ಅಭಿಮಾನಿದೇವತೆಗಳು ಇದ್ದಾರೋ, ಅವರ ಅಧೀನವಾಗಿಯೇ ಮೃದಾದಿಗಳಲ್ಲಿ ಮೃತ್ವ ಮೊದಲಾದ ಧರ್ಮಗಳಿವೆ. ಈ ಪ್ರಮೇಯವನ್ನು ತಿಳಿಸಬೇಕಾಗಿದೆ. ಆದ್ದರಿಂದ 'ಮೃತ್' ಶಬ್ದದಿಂದ ಮೃತ್ವವೆಂಬ ಪ್ರವೃತ್ತಿನಿಮಿತ್ತವನ್ನು ಹೊಂದಿರುವ ಮಣ್ಣು ಎಂಬರ್ಥಕ್ಕಿಂತ ಅಭಿಮಾನಿದೇವತೆಯೆಂಬರ್ಥವೇ ಮುಖ್ಯಾರ್ಥವಾಗುತ್ತದೆ. ಇದನ್ನು ಉಪಪಾದನೆ ಮಾಡುವುದಕ್ಕಾಗಿ ಚೇತನ ಎಂಬ ಪದವನ್ನು ಪ್ರಯೋಗಿಸಿರುವುದಿಲ್ಲ.

ಸೂತ್ರದಲ್ಲಿರುವ ವಿಶೇಷಪದದ ಸ್ವಾರಸ್ಯ

तेन कथं युक्तिविरोधमात्रेण श्रुतेः प्रतीतार्थप्रच्यावनमिति निरस्तम् । चेतनग्रहणे मुख्यार्थलाभेन श्रुत्यर्थाबाधनादिति हेतोः । मुख्यत्वसूचकत्वं चान्यनिरासार्थकत्वादिति ध्येयम् । सर्वथाऽन्यनिरासायोगात् । शरीररूपक विन्यस्तगृहीतेरिति न्यायाद्वाक्यशेषे त्रिवृत्करणाद्युक्तेश्च । शक्तीति वाच्ये विशेषेत्युक्त्याऽस्मदादिभ्यो विशिष्टाऽतिशयिता सेति सूचयति ।

ಮೇಲೆ ತಿಳಿಸಿದ ಪ್ರಮೇಯದಂತೆ ಕೇವಲ ಯುಕ್ತಿವಿರೋಧ ಬಂದ ಮಾತ್ರದಿಂದ ಶ್ರುತಿಗೆ ಪ್ರತೀತಾರ್ಥವನ್ನು ಪರಿತ್ಯಾಗ ಮಾಡುವುದು ಅಯುಕ್ತವಲ್ಲವೇ ? ಎಂಬ ಆಕ್ಷೇಪವನ್ನು ನಿರಾಕರಿಸಿದಂತಾಯಿತು. ಏಕೆಂದರೆ ಮೃದಾದಿಶಬ್ದಗಳಿಂದ ತದಭಿಮಾನಿಯಾದ ಚೇತರನ್ನು ನಾವು ವಿವಕ್ಷಿಸಿದ್ದೇವೆ. ಆದ್ದರಿಂದ ಮುಖ್ಯಾರ್ಥವನ್ನೇ ಮೃದಾದಿಶಬ್ದಗಳಿಗೆ ಸ್ವೀಕರಿಸದಂತಾಗುತ್ತದೆ. ಹೀಗಿರುವಾಗ ಶ್ರುತ್ಯರ್ಥವನ್ನು ಪರಿತ್ಯಾಗ ಮಾಡಿದ ದೋಷ ಬರುವುದಿಲ್ಲ.

ಮೇಲೆ ಹೇಳಿದಂತೆ 'ತು' ಶಬ್ದವು ಮುಖ್ಯತ್ವವನ್ನು ಸೂಚನೆ ಮಾಡುತ್ತಿದೆ. ಅಭಿಮಾನಿದೇವತೆಯನ್ನು ಬಿಟ್ಟು, ಬೇರೆ ಅರ್ಥವು ಮೃದಾದಿಶಬ್ದಗಳಿಂದ ಪ್ರತಿಪಾದ್ಯ-ವಾಗುವುದಿಲ್ಲವೆಂದು ನಿರಾಕರಣೆ ಮಾಡುತ್ತಿದೆ. ಆದರೆ ಮೃದಾದಿಶಬ್ದಗಳಿಂದ ಮಣ್ಣು ಮೊದಲಾದವು ಪ್ರತಿಪಾದ್ಯವಾಗುವುದಿಲ್ಲವೆಂದು ಸರ್ವಥಾ ನಿರಾಕರಣೆ ಮಾಡುತ್ತಿಲ್ಲ. 'ಶರೀರರೂಪಕವಿನ್ಯಸ್ತಗೃಹೀತೇಃ' ಎಂಬಲ್ಲಿ ಹೇಳಲ್ಪಟ್ಟ ನ್ಯಾಯದಂತೆ ಹಾಗೂ ವಾಕ್ಯಶೇಷದಲ್ಲಿ ತ್ರಿವೃತ್ಕರಣಾದಿಗಳನ್ನು ಹೇಳಿರುವುದರಿಂದ ಮಣ್ಣು ಮೊದಲಾದವು ಮೃದಾದಿಶಬ್ದಗಳಿಂದ ಪ್ರತಿಪಾದ್ಯವೇ ಆಗುವುದಿಲ್ಲವೆಂದು ತಿಳಿಯಬಾರದು. ಮುಖ್ಯವಾಗಿ ಅಭಿಮಾನಿದೇವತೆಗಳು ಪ್ರತಿಪಾದ್ಯರೆಂದಷ್ಟೇ ತಿಳಿಯಬೇಕು.

ಸೂತ್ರದಲ್ಲಿ ವಿಶೇಷ ಎಂಬ ಪದದ ಬದಲು ಶಕ್ತಿಯೆಂದು ಹೇಳಬೇಕಿತ್ತು. ಆದರೆ ನಮ್ಮೆಲ್ಲರಿಗಿಂತಲೂ ಅಭಿಮಾನಿದೇವತೆಯಲ್ಲಿ ಅತಿಶಯಿತವಾದ ವೈಶಿಷ್ಟ್ಯವನ್ನು ತೋರಿಸಬೇಕಾಗಿದೆ. ಅದಕ್ಕಾಗಿ 'ವಿಶೇಷ' ಎಂಬ ಪದವನ್ನು ಪ್ರಯೋಗಿಸಿದ್ದಾರೆ.

ವಿವರಣೆ - 'ಮೃತ್' ಎಂಬ ಪದವು ಮಣ್ಣನ್ನು ಪ್ರತಿಪಾದನೆ ಮಾಡುತ್ತದೋ, ಅಥವಾ ಅಭಿಮಾನಿದೇವತೆಯನ್ನು ಪ್ರತಿಪಾದನೆ ಮಾಡುತ್ತದೋ, ಎಂಬುದು ಇಲ್ಲಿ ಮಾಡುತ್ತಿರುವ ವಿಚಾರ. ಈ ಸೂತ್ರವು ಅಭಿಮಾನಿದೇವತೆಯನ್ನೇ ಮುಖ್ಯವಾಗಿ ಪ್ರತಿಪಾದನೆ ಮಾಡುತ್ತಾ ಇದೆ ಎಂದು ಉತ್ತರಿಸುತ್ತಿದೆ. ಅಂದಮಾತ್ರಕ್ಕೆ ಮಣ್ಣು ಮೃದಾದಿ ಶಬ್ದಗಳಿಂದ ಪ್ರತಿಪಾದ್ಯ ಆಗುವುದಿಲ್ಲವೆಂದು ತಿಳಿಯಬಾರದು. ಅಭಿಮಾನಿದೇವತೆಯ ಅಧೀನವಾದ್ದರಿಂದ ಮಣ್ಣೂ ಕೂಡ ಅಮುಖ್ಯವಾಗಿ 'ಮೃತ್' ಎಂಬ ಪದದಿಂದ ಪ್ರತಿಪಾದ್ಯವಾಗುತ್ತದೆ.

ಬ್ರಹ್ಮನ ಸಂಬಂಧವಿರುವುದರಿಂದ ವಸ್ತುಗಳೂ ಕೂಡ ಬ್ರಹ್ಮಪ್ರತಿಪಾದಕವಾದ ಶಬ್ದಗಳಿಂದ ಪ್ರತಿಪಾದ್ಯವಾಗುತ್ತವೆ ಎಂಬ ನ್ಯಾಯವನ್ನು 'ಶರೀರರೂಪಕವಿನ್ಯಸ್ತಗೃಹೀತೇಃ' ಎಂಬ ಸೂತ್ರದಲ್ಲಿ ಹೇಳಿದ್ದಾರೆ. ಅದರಂತೆ ಪ್ರಕೃತ ಮೃದಭಿಮಾನಿ ದೇವತೆಗಳಲ್ಲಿರುವ ಶಬ್ದಗಳು ಅವರ ಸಂಬಂಧವನ್ನು ಹೊಂದಿರುವ ಪದಾರ್ಥಗಳಲ್ಲೂ ಕೂಡ ಪ್ರಯುಕ್ತವಾಗುತ್ತದೆ. ಮತ್ತು 'ತಾಸಾಂ ತ್ರಿವೃತಂ ತ್ರಿವೃತಂ ಏಕೈಕಾಮಕರೋತ್' ಎಂಬ ಛಾಂದೋಗ್ಯೋಪನಿಷತ್ತಿನ ವಾಕ್ಯಶೇಷದ ಬಲದಿಂದಲೂ ಕೂಡ ಮೃದಾದಿಶಬ್ದಗಳು ಮಣ್ಣು ಮೊದಲಾದವನ್ನು ಪ್ರತಿಪಾದನೆ ಮಾಡುತ್ತವೆಂದು ತಿಳಿಯುತ್ತದೆ. ಅದು ಹೀಗೆ - ಈ ಶ್ರುತಿಯು ತ್ರಿವೃತ್ಕರಣವನ್ನು ಹೇಳುತ್ತಿದೆ. ತ್ರಿವೃತ್ಕರಣವು ಉಪಪನ್ನವಾಗಬೇಕಾದರೆ ತೇಜಸ್ಸು, ನೀರು ಹಾಗೂ ಮಣ್ಣು ಇವುಗಳ ಮಿಶ್ರಣವನ್ನು ಶ್ರುತಿಯು ಹೇಳಬೇಕು. ಕೇವಲ ಅಭಿಮಾನಿದೇವತೆಯನ್ನಷ್ಟೇ ಹೇಳಿದರೆ ತ್ರಿವೃತ್ಕರಣವೇ ಅಸಿದ್ಧವಾಗುತ್ತದೆ. ಆದ್ದರಿಂದ ಅಭಿಮಾನಿದೇವತೆಯಲ್ಲಿ ಮೃದಾದಿಶಬ್ದಗಳು ಮುಖ್ಯವಾಗಿವೆ. ಜಡಪದಾರ್ಥಗಳಲ್ಲಿ ಅಮುಖ್ಯವಾಗಿವೆ ಎಂಬುದನ್ನು ಒಪ್ಪಬೇಕು.

ನ್ಯಾಯಸುಧೆಯ ಪ್ರಕಾರ 'ವಿಶೇಷಾನುಗತಿಭ್ಯಾಂ' ಎಂಬುದಕ್ಕೆ ವ್ಯಾಖ್ಯಾನ

सुधायां त्वभिमानितद्विग्रहतदन्तर्धानशक्त्यादेः मृत्त्वादियुक्तिमृदादि-वक्तृत्वश्रुत्युभयान्यथानुपपत्तिरूपार्थपत्त्यैव सिद्धेर्विशेषानुगतिपदेन तत्प्रतिपादकं पृथिव्याद्यभिमानिन्य इत्यादिवचनं गृह्यते । तथा च न केवलं अभिमान्यादिसकमर्थापत्त्यैव सिद्धमागमसिद्धं चेत्युक्तम् ।।

ನ್ಯಾಯಸುಧೆಯಲ್ಲಿ ಹೀಗೆ ಹೇಳಿದ್ದಾರೆ - 'ಮೃತ್ ನ ವಕ್ತ್ರೀ ಮೃತ್ವಾತ್' ಎಂಬ ಯುಕ್ತಿಯು ಮಣ್ಣಿನಲ್ಲಿ ವಕ್ತೃತ್ವವಿಲ್ಲವೆಂದು ಹೇಳುತ್ತಿದೆ. 'ಮೃದಬ್ರವೀತ್' ಎಂಬ ಶ್ರುತಿಯು ಮಣ್ಣಿನಲ್ಲಿ ವಕ್ತೃತ್ವವಿದೆಯೆಂದು ಹೇಳುತ್ತಿದೆ. ಅಭಿಮಾನಿದೇವತೆಯನ್ನು ಅಂಗೀಕಾರ ಮಾಡದಿದ್ದರೆ

ಇವೆರಡೂ ಕೂಡ ಪರಸ್ಪರವಿರುದ್ಧವಾಗಿ ಅಪ್ರಮಾಣವಾಗುತ್ತವೆ. ಆದ್ದರಿಂದ 'ಏತದುಭಯಾನ್ಯಥಾನುಪಪತ್ತಿ' ಎಂಬ ಪ್ರಮಾಣದಿಂದ ಅಭಿಮಾನಿದೇವತೆಯು ಹಾಗೂ ಅಭಿಮಾನಿದೇವತೆಯ ಶರೀರವು, ಅಭಿಮಾನಿದೇವತೆಯ ಅಂತರ್ಧಾನಶಕ್ತಿ ಇವುಗಳು ಸಿದ್ಧವಾಗುತ್ತವೆ. ಹೀಗೆ ಅರ್ಥಾಪತ್ತಿ ಪ್ರಮಾಣದಿಂದಲೇ ಇದೆಲ್ಲವನ್ನೂ ನ್ಯಾಯಸುಧೆಯಲ್ಲಿ ಸಮರ್ಥನೆ ಮಾಡಿದ್ದಾರೆ. ಈ ಪಕ್ಷದಲ್ಲಿ 'ವಿಶೇಷಾನುಗತಿ' ಎಂಬ ಪದದಿಂದ ಅಭಿಮಾನಿದೇವತೆಗಳಿಗಿರುವ ಶಕ್ತಿ ಹಾಗೂ ವ್ಯಾಪ್ತಿ ಇವುಗಳನ್ನು ಪ್ರತಿಪಾದನೆ ಮಾಡುವ 'ಪೃಥಿವ್ಯಾದ್ಯಭಿಮಾನಿನಃ' ಇವೇ ಮೊದಲಾದ ವಾಕ್ಯಗಳನ್ನು ವಿವಕ್ಷಿಸಬೇಕು. ಹಾಗಾಗಿ ಅಭಿಮಾನಿದೇವತೆಗಳು ಹಾಗೂ ಅವರಲ್ಲಿರುವ ಶಕ್ತಿ ಮೊದಲಾದವುಗಳು ಕೇವಲ ಅರ್ಥಾಪತ್ತಿಪ್ರಮಾಣದಿಂದಷ್ಟೇ ಸಿದ್ಧವಾಗಿರುವುದಲ್ಲ. ಆಗಮಪ್ರಮಾಣದಿಂದಲೂ ಕೂಡ ಸಿದ್ಧವಾಗಿದೆ ಎಂಬುದು ನ್ಯಾಯಸುಧೆಯ ಅಭಿಪ್ರಾಯವಾಗಿದೆ.

ಅಭಿಮಾನಿದೇವತೆಗಳು ಕಣ್ಣಿಗೆ ಕಾಣಿಸುತ್ತಾರೆ

विशेषेत्यादेराद्येऽर्थे अदर्शनमुपेत्य पूर्वं शक्त्या समाहितम् इदानीं तदेव नेति वा नास्त्येवाभिमानी अदर्शनादित्यतो वाह -

।। दृश्यते च ।।२-१-७।।

योगिभिरुपलभ्यते च । अभिमानीति बुद्धिविभागेनानुवर्तते । एतच्च ''दृश्यन्ते मुनिभिश्च ताः'' इत्यादिनाऽवसेयमिति भावः । सूत्रयोरेकवचनं समुदायाभिप्रायम् ।।३।।

ಹಿಂದಿನ ಸೂತ್ರದಲ್ಲಿ ವಿಶೇಷ ಇತ್ಯಾದಿ ಪದಕ್ಕೆ ಎರಡು ಅರ್ಥವನ್ನು ವ್ಯಾಖ್ಯಾನ ಮಾಡಲಾಯಿತು. ಅವೆರೆಡರಲ್ಲಿ ಮೊದಲನೆಯ ಅರ್ಥದಲ್ಲಿ ಅಭಿಮಾನಿದೇವತೆಗಳು ಕಣ್ಣಿಗೆ ಕಾಣಿಸುವುದಿಲ್ಲವೆಂದು ಅಂಗೀಕಾರ ಮಾಡಿ, ಅಂತರ್ಧಾನಶಕ್ತಿಯನ್ನು ಒಪ್ಪುವ ಮೂಲಕ ಸಮಾಧಾನವನ್ನು ನೀಡಲಾಯಿತು. ಪ್ರಕೃತ ಅಭಿಮಾನಿದೇವತೆಗಳು ಕಣ್ಣಿಗೆ ಕಾಣಿಸುವುದಿಲ್ಲ ಎಂಬುದೇ ತಪ್ಪು ಎಂಬುದನ್ನು ಸಮರ್ಥನೆ ಮಾಡುವುದಕ್ಕಾಗಿ ಅಥವಾ ಅಭಿಮಾನಿದೇವತೆಯೇ

ಇಲ್ಲವೆಂದು ಪೂರ್ವಪಕ್ಷಿಯು ಆಕ್ಷೇಪ ಮಾಡಿದರೆ ಅದರ ನಿರಾಕರಣೆಗಾಗಿ ದೃಶ್ಯತೇ ಚ' ಎಂಬ ಸೂತ್ರವು ಹೊರಟಿದೆ.

ಅಭಿಮಾನಿದೇವತೆಗಳನ್ನು ಯೋಗಿಜನರು ಕಣ್ಣಿಂದ ಕಾಣುತ್ತಿದ್ದಾರೆ. ಆದ್ದರಿಂದ ಕಣ್ಣಿಗೆ ಕಾಣಿಸುವುದಿಲ್ಲ ಎಂದು ಹೇಳಿದ್ದು ತಪ್ಪು. ಈ ಸೂತ್ರದಲ್ಲಿ ಹಿಂದಿನ ಸೂತ್ರದಿಂದ ಅಭಿಮಾನಿ ಎಂಬ ಪದವನ್ನು ಬುದ್ಧಿಯಿಂದ ವಿಭಾಗ ಮಾಡಿಕೊಂಡು ಅನುವೃತ್ತಿ ಮಾಡಿಕೊಳ್ಳಬೇಕು. ಈ ವಿಷಯವನ್ನು 'ದೃಶ್ಯಂತೇ ಮುನಿಭಿಶ್ಚ ತಾಃ' ಎಂಬ ಪ್ರಮಾಣವಾಕ್ಯದಿಂದ ಸ್ಪಷ್ಟವಾಗಿ ತಿಳಿಯಬೇಕು. ಎರಡು ಸೂತ್ರಗಳಲ್ಲಿರುವ ಏಕವಚನವು ಸಮುದಾಯಾಭಿಪ್ರಾಯವುಳ್ಳದ್ದಾಗಿದೆ.

॥ ಇಲ್ಲಿಗೆ ತಂತ್ರದೀಪಿಕಾ ಕನ್ನಡಾನುವಾದದಲ್ಲಿ ಅಭಿಮಾನ್ಯಧಿಕರಣವು ಮುಗಿಯಿತು ॥

ಪರಿಶಿಷ್ಟ

ಆನುಮಾನಿಕಾಧಿಕರಣ - ಸತ್ತರ್ಕದೀಪಾವಳಿ

ಸಮನ್ವಯ ಮುಗಿಯಿತು ಈಗ ಮಹಾಸಮನ್ವಯ

सत्तर्कदीपावलिः – ।। अनुमानिकमप्येकेषामिति चेन्न शरीररूपकविन्यस्तगृहीतेर्दर्शयति च ।।१-४-१।।

अधिगते सर्वाधिकारिसाधारणे समन्वये अतिमुख्याधिकारिविषये महासमन्वये दुर्गमेऽपि बुद्धिरप्रभवतीत्यधुना सोऽभिधीयते भगवत इति भावेन पादार्थमाह – श्रुतिः लिङ्गादिभिरिति ।

[1]ಸರ್ವಾಧಿಕಾರಿ ಸಾಧಾರಣವಾದ ಸಮನ್ವಯವನ್ನು ಹಿಂದಿನ ಮೂರುಪಾದಗಳಲ್ಲಿ ಮಾಡಿದ್ದಾಯಿತು. ಅತ್ಯಂತ ಮುಖ್ಯಾಧಿಕಾರಿಗಳಿಗೆ ಸಂಬಂಧಪಟ್ಟ ಮಹಾಸಮನ್ವಯವು ಈಗ ಉಳಿದಿದೆ. ಇದನ್ನು ಸಾಮಾನ್ಯರು ತಿಳಿಯುವುದು ಕಷ್ಟ. ಸಾಮಾನ್ಯ ಜನರಿಗೆ ಮಹಾಸಮನ್ವಯದಲ್ಲಿ ಬುದ್ಧಿಯು ತಿಳಿಯುವ ಸಾಮರ್ಥ್ಯವನ್ನು ಹೊಂದಿರುವುದಿಲ್ಲ. ಆದ್ದರಿಂದ ಕಠಿಣವಾದ ಕಾರಣ ಕೊನೆಯಲ್ಲಿ ಸೂತ್ರಕಾರರು ಈ ಮಹಾಸಮನ್ವಯವನ್ನು ಮಾಡಲು ಹೊರಟಿದ್ದಾರೆ. ಈ ಪಾದದ ಪ್ರಮೇಯವನ್ನು 'ಶ್ರುತಿಲಿಂಗಾದಿಭಿಃ' ಇತ್ಯಾದಿ ಭಾಷ್ಯದಿಂದ ಸಮರ್ಥನೆ ಮಾಡುತ್ತಿದ್ದಾರೆ.

ಅನ್ನ ಪ್ರಾಣಾದಿ ಶಬ್ದಗಳು ವಿಷ್ಣುವಿನಲ್ಲೂ ಪ್ರಸಿದ್ಧವೆನ್ನಬಾರದು

सत्तर्कदीपावलिः – न चान्यत्र प्रसिद्धानाम् अन्नप्राणेन्द्रादिशब्दानां समन्वयः प्रथमपाद एवोक्तः, न हि विष्ण्वावपि प्रसिद्धाः । तथा च सति

(೧) ಹಿಂದಿನ ಸಂಪುಟದಲ್ಲಿ ಆನುಮಾನಿಕಾಧಿಕರಣದ ಸತ್ತರ್ಕದೀಪಾವಳಿಯು ಪ್ರಮಾದದಿಂದ ಅನುವಾದ ಮಾಡುವುದು ಬಿಟ್ಟು ಹೋಗಿತ್ತು. ಅದನ್ನು ಗಮನಿಸಿ, ಈ ಸಂಪುಟದಲ್ಲಿ ಪ್ರತ್ಯೇಕವಾಗಿ ಇದನ್ನು ಮುದ್ರಿಸಿ ಅನುವಾದ ಮಾಡಲಾಗಿದೆ.

तृतीयपादभेदानुपपत्तिरित्यत उक्तम् । श्रुतिलिङ्गादिभिरिति ।

ಅನ್ಯತ್ರಪ್ರಸಿದ್ಧವಾದ ಅನ್ನ, ಪ್ರಾಣ, ಇಂದ್ರ ಮೊದಲಾದ ಶಬ್ದಗಳ ಸಮನ್ವಯವನ್ನು ಪ್ರಥಮಪಾದದಲ್ಲಿ ಮಾಡಿದ್ದಾಯಿತು. ಇದು ವಿಷ್ಣುವಿನಲ್ಲೂ ಕೂಡ ಪ್ರಸಿದ್ಧವೆಂದು ತಿಳಿಯಬಾರದು. ಹಾಗಾದಲ್ಲಿ ಉಭಯತ್ರಪ್ರಸಿದ್ಧವೆನಿಸುವುದರಿಂದ ತೃತೀಯಪಾದದಲ್ಲೇ ಇದರ ಸಮನ್ವಯವು ಪ್ರಸಕ್ತವಾಗುತ್ತದೆ. ಈ ಕಾರಣದಿಂದ 'ಶ್ರುತಿಲಿಂಗಾದಿಭಿಃ' ಇತ್ಯಾದಿ ವಾಕ್ಯವು ಹೊರಟಿದೆ.

ನಾಕನೇ ಪಾದದ ಸಮನ್ವಯ ವಿಷಯ

सत्तर्कदीपावलिः – अत्र प्राणेन्द्रादिशब्दानां बलवच्छ्रुत्यादिभिः विष्णौ समन्वय उक्तः । दुःखादिशब्दानां तु तैरप्यन्यत्रैव प्रसिद्धेः । प्रसिद्धश्चायं विशेषोऽन्नादिशब्देभ्यो दुःखादिशब्दानाम् । न चैतत्पादतया गोचरः कोऽपि वैदिकशब्दः दुर्गमत्वेऽपि शिष्यत इति वोत्तराधिकरण एकस्मिन्नेव स्वरवर्णपदात्मनापि सर्ववेदसमन्वयाभिधानात् वा सामस्त्येनेति । न चैवं सति भगवतः पुनरुक्तिसम्भवो वा शङ्कनीय इत्याह – विशेषहेतुभिरिति ।

ಪ್ರಾಣ, ಇಂದ್ರ ಮೊದಲಾದ ಶಬ್ದಗಳು ವಿಷ್ಣುವಿನಲ್ಲೇ ಸಮನ್ವಯವಾಗುತ್ತವೆಂಬುದನ್ನು ಬಲಿಷ್ಠವಾದ ಶ್ರುತಿಲಿಂಗಾದಿಗಳಿಂದ ಸಮರ್ಥನೆ ಮಾಡಿದ್ದಾಗಿದೆ. ಆದರೆ ದುಃಖೀ ಮೊದಲಾದ ಶಬ್ದಗಳು ವಿಷ್ಣುವನ್ನು ಬಿಟ್ಟು, ಬೇರೆಡೆಯೇ ಪ್ರಸಿದ್ಧವಾಗಿವೆ. ಈ ಶಬ್ದಗಳಿಗೆ ಅನ್ನಾದಿಶಬ್ದಗಳಿಗಿಂತ ವೈಲಕ್ಷಣ್ಯವಿರುವುದೂ ಕೂಡ ಸರ್ವಾನುಭೂತವಾಗಿದೆ. ಇಂಥ ದುಃಖಾದಿ ಶಬ್ದಗಳ ಸಮನ್ವಯಕ್ಕಾಗಿ ಈ ಪಾದವು ಹೊರಟಿದೆ. ಈ ಪಾದದಲ್ಲಿ ಸಮನ್ವಯ ಮಾಡುತ್ತಿರುವ ವೈದಿಕಶಬ್ದಗಳು ದುರ್ಗಮವಾಗಿವೆ. ಆದರೂ ಕೂಡ ಈ ಶಬ್ದಗಳ ಸಮನ್ವಯವನ್ನು ಮಾಡಲೇಬೇಕು. ಮುಂದಿನ ಅಧಿಕರಣದಲ್ಲಿ ವೇದದಲ್ಲಿರವ ಪ್ರತಿಯೊಂದು ಸ್ವರ, ವರ್ಣ, ಪದಗಳ ಸಮನ್ವಯವನ್ನು ಮಾಡುವ ಮೂಲಕ ಸರ್ವವೇದ ಸಮನ್ವಯವನ್ನು ಮಾಡಿದ್ದಾರೆ. ಆದ್ದರಿಂದ ಭಾಷ್ಯದಲ್ಲಿ 'ಸಾಮಸ್ತ್ಯೇನ' ಎಂಬ ಪದಪ್ರಯೋಗವನ್ನು ಮಾಡಿರುತ್ತಾರೆ. ಹಾಗಾದರೆ

ಒಮ್ಮೆ ಸಮನ್ವಯ ಮಾಡಿದ ಶಬ್ದಗಳನ್ನೇ ಪುನಃ ಸಮನ್ವಯ ಮಾಡುತ್ತಿರುವಿರಿ. ಆದ್ದರಿಂದ ಪುನರುಕ್ತಿ ಬರುತ್ತದಲ್ಲವೇ? ಎಂದು ಪ್ರಶ್ನಿಸಬಾರದು. 'ವಿಶೇಷಹೇತುಭಃ' ಎಂಬುದರಿಂದ ಈ ಪ್ರಶ್ನೆಗೆ ಉತ್ತರವನ್ನು ನೀಡಿದ್ದಾರೆ.

'ತತ್ತು ಸಮನ್ವಯಾತ್' ಎಂಬುದರ ವಿವರಣೆ

सत्तर्कदीपावलिः – ननु येषां वेदवचसामन्यपरत्वे ब्रह्मलक्षणमतिव्यापकं स्यात्तेषामेव समन्वयोऽभिधेयो न तु सर्वेषामिति शङ्कं परिहरत्सूत्रमुपन्यस्य तदंशोक्तं पूर्वपक्षं सविषयं सहेतुकं दर्शयति – तत्तु इति । ब्रह्मशब्दोक्तगुण-सर्वस्वसिद्धये हि तल्लक्षणमुक्तं सर्वजगज्जन्मादिकारणत्वात्सम्पूर्णं ब्रह्मेति । तदुभयं चास्य मूलम् । न ह्यानुमानिकमपि गुणसर्वस्वं शास्त्रं विना विशेषेण ज्ञातुं शक्यम् । अयमयं भगवद्गुण इति । अतस्तद्विशेषतो विज्ञापयितुं सर्वशब्द समन्वयश्चतुर्थसूत्र उक्तः ।।

ಯಾವ ಶಬ್ದಗಳು ಅನ್ಯಪರವಾದಾಗ ಬ್ರಹ್ಮನ ಲಕ್ಷಣಕ್ಕೆ ಅತಿವ್ಯಾಪ್ತಿ ದೋಷ ಬರುತ್ತದೋ, ಆ ಶಬ್ದಗಳ ಸಮನ್ವಯವನ್ನಷ್ಟೇ ಮಾಡಬೇಕು. ಅದನ್ನು ಬಿಟ್ಟು, ಎಲ್ಲಾ ಶಬ್ದಗಳ ಸಮನ್ವಯವನ್ನು ಮಾಡುವುದು ಅಯುಕ್ತವಲ್ಲವೇ?

ಈ ಆಶಂಕೆಯನ್ನು ಪರಿಹಾರ ಮಾಡುವ ಸೂತ್ರವನ್ನು ಉಪನ್ಯಾಸ ಮಾಡಿ, ಸೂತ್ರದಲ್ಲಿರುವ ಪೂರ್ವಪಕ್ಷಾಂಶವನ್ನು ಹೇತುಬದ್ಧವಾಗಿ ಸಮರ್ಥನೆ ಮಾಡಲು 'ತತ್ತು' ಇತ್ಯಾದಿ ಭಾಷ್ಯವಾಕ್ಯವು ಹೊರಟಿದೆ.

ಬ್ರಹ್ಮಶಬ್ದದಿಂದ ಹೇಳಲ್ಪಟ್ಟ ಗುಣಪರಿಪೂರ್ಣತ್ವದ ಸಮರ್ಥನೆಗೋಸ್ಕರ ಸಕಲಜಗಜ್ಜನ್ಮಾದಿ-ಕಾರಣತ್ವವೆಂಬ ಲಕ್ಷಣವನ್ನು ಬ್ರಹ್ಮನಿಗೆ ಹೇಳಲಾಯಿತು. ಇಂಥ ಜಗಜ್ಜನ್ಮಾದಿಕಾರಣತ್ವದ ಸಮನ್ವಯಕ್ಕೋಸ್ಕರವೇ ಸಕಲ ಶಬ್ದಗಳ ಸಮನ್ವಯವು ಪ್ರವೃತ್ತವಾಗಿದೆ. ಗುಣಪರಿಪೂರ್ಣತ್ವವು ಆನುಮಾನಿಕವಾದರೂ ಕೂಡ ಶಾಸ್ತ್ರವಿಲ್ಲದೇ ವಿಶೇಷವಾಗಿ ತಿಳಿಯಲು ಸಾಧ್ಯವಾಗುವುದಿಲ್ಲ. ಆದ್ದರಿಂದ ವಿಶೇಷವಾಗಿ ಅದನ್ನು ತಿಳಿಸುವುದಕ್ಕಾಗಿಯೇ ಸರ್ವಶಬ್ದದ ಸಮನ್ವಯಕ್ಕೋಸ್ಕರ ನಾಕನೆಯ ಸೂತ್ರವು ಹೊರಟಿದೆ.

तृतीयपादभेदानुपपत्तिरित्यत उक्तम् । श्रुतिलिङ्गादिभिरिति ।

ಅನ್ಯತ್ರಪ್ರಸಿದ್ಧವಾದ ಅನ್ನ, ಪ್ರಾಣ, ಇಂದ್ರ ಮೊದಲಾದ ಶಬ್ದಗಳ ಸಮನ್ವಯವನ್ನು ಪ್ರಥಮಪಾದದಲ್ಲಿ ಮಾಡಿದ್ದಾಯಿತು. ಇದು ವಿಷ್ಣುವಿನಲ್ಲೂ ಕೂಡ ಪ್ರಸಿದ್ಧವೆಂದು ತಿಳಿಯಬಾರದು. ಹಾಗಾದಲ್ಲಿ ಉಭಯತ್ರಪ್ರಸಿದ್ಧವೆನಿಸುವುದರಿಂದ ತೃತೀಯಪಾದದಲ್ಲೇ ಇದರ ಸಮನ್ವಯವು ಪ್ರಸಕ್ತವಾಗುತ್ತದೆ. ಈ ಕಾರಣದಿಂದ 'ಶ್ರುತಿಲಿಂಗಾದಿಭಿಃ' ಇತ್ಯಾದಿ ವಾಕ್ಯವು ಹೊರಟಿದೆ.

ನಾಕನೇ ಪಾದದ ಸಮನ್ವಯ ವಿಷಯ

सत्तर्कदीपावलिः – अत्र प्राणेन्द्रादिशब्दानां बलवच्छ्रुत्यादिभिः विष्णौ समन्वय उक्तः । दुःखादिशब्दानां तु तैरप्यन्यत्रैव प्रसिद्धेः । प्रसिद्धश्चायं विशेषोऽन्नादिशब्देभ्यो दुःखादिशब्दानाम् । न चैतत्पादतया गोचरः कोऽपि वैदिकशब्दः दुर्गमत्वेऽपि शिष्यत इति वोत्तराधिकरण एकस्मिन्नेव स्वरवर्णपदात्मनापि सर्ववेदसमन्वयाभिधानात् वा सामस्त्येनेति । न चैवं सति भगवतः पुनरुक्तिसम्भवो वा शङ्क्नीय इत्याह – विशेषहेतुभिरिति ।

ಪ್ರಾಣ, ಇಂದ್ರ ಮೊದಲಾದ ಶಬ್ದಗಳು ವಿಷ್ಣುವಿನಲ್ಲೇ ಸಮನ್ವಯವಾಗುತ್ತವೆಂಬುದನ್ನು ಬಲಿಷ್ಠವಾದ ಶ್ರುತಿಲಿಂಗಾದಿಗಳಿಂದ ಸಮರ್ಥನೆ ಮಾಡಿದ್ದಾಗಿದೆ. ಆದರೆ ದುಃಖೀ ಮೊದಲಾದ ಶಬ್ದಗಳು ವಿಷ್ಣುವನ್ನು ಬಿಟ್ಟು, ಬೇರೆಡೆಯೇ ಪ್ರಸಿದ್ಧವಾಗಿವೆ. ಈ ಶಬ್ದಗಳಿಗೆ ಅನ್ನಾದಿಶಬ್ದಗಳಿಗಿಂತ ವೈಲಕ್ಷಣ್ಯವಿರುವುದೂ ಕೂಡ ಸರ್ವಾನುಭೂತವಾಗಿದೆ. ಇಂಥ ದುಃಖಾದಿ ಶಬ್ದಗಳ ಸಮನ್ವಯಕ್ಕಾಗಿ ಈ ಪಾದವು ಹೊರಟಿದೆ. ಈ ಪಾದದಲ್ಲಿ ಸಮನ್ವಯ ಮಾಡುತ್ತಿರುವ ವೈದಿಕಶಬ್ದಗಳು ದುರ್ಗಮವಾಗಿವೆ. ಆದರೂ ಕೂಡ ಈ ಶಬ್ದಗಳ ಸಮನ್ವಯವನ್ನು ಮಾಡಲೇಬೇಕು. ಮುಂದಿನ ಅಧಿಕರಣದಲ್ಲಿ ವೇದದಲ್ಲಿರವ ಪ್ರತಿಯೊಂದು ಸ್ವರ, ವರ್ಣ, ಪದಗಳ ಸಮನ್ವಯವನ್ನು ಮಾಡುವ ಮೂಲಕ ಸರ್ವವೇದ ಸಮನ್ವಯವನ್ನು ಮಾಡಿದ್ದಾರೆ. ಆದ್ದರಿಂದ ಭಾಷ್ಯದಲ್ಲಿ 'ಸಾಮಸ್ತ್ಯೇನ' ಎಂಬ ಪದಪ್ರಯೋಗವನ್ನು ಮಾಡಿರುತ್ತಾರೆ. ಹಾಗಾದರೆ

ಒಮ್ಮೆ ಸಮನ್ವಯ ಮಾಡಿದ ಶಬ್ದಗಳನ್ನೇ ಪುನಃ ಸಮನ್ವಯ ಮಾಡುತ್ತಿರುವಿರಿ. ಆದ್ದರಿಂದ ಪುನರುಕ್ತಿ ಬರುತ್ತದಲ್ಲವೇ? ಎಂದು ಪ್ರಶ್ನಿಸಬಾರದು. 'ವಿಶೇಷಹೇತುಭಿಃ' ಎಂಬುದರಿಂದ ಈ ಪ್ರಶ್ನೆಗೆ ಉತ್ತರವನ್ನು ನೀಡಿದ್ದಾರೆ.

'ತತ್ತು ಸಮನ್ವಯಾತ್' ಎಂಬುದರ ವಿವರಣೆ

सत्तर्कदीपावलिः – ननु येषां वेदवचसामन्यपरत्वे ब्रह्मलक्षणमतिव्यापकं स्यात्तेषामेव समन्वयोऽभिधेयो न तु सर्वेषामिति शङ्कां परिहरत्सूत्रमुपन्यस्य तदंशोक्तं पूर्वपक्षं सविषयं सहेतुकं दर्शयति – तत्तु इति । ब्रह्मशब्दोक्तगुण-सर्वस्वसिद्धये हि तल्लक्षणमुक्तं सर्वजगज्जन्मादिकारणत्वात्सम्पूर्णं ब्रह्मेति । तदुभयं चास्य मूलम् । न ह्यानुमानिकमपि गुणसर्वस्वं शास्त्रं विना विशेषेण ज्ञातुं शक्यम् । अयमयं भगवद्गुण इति । अतस्तद्विशेषतो विज्ञापयितुं सर्वशब्द समन्वयश्चतुर्थसूत्र उक्तः ।।

ಯಾವ ಶಬ್ದಗಳು ಅನ್ಯಪರವಾದಾಗ ಬ್ರಹ್ಮನ ಲಕ್ಷಣಕ್ಕೆ ಅತಿವ್ಯಾಪ್ತಿ ದೋಷ ಬರುತ್ತದೋ, ಆ ಶಬ್ದಗಳ ಸಮನ್ವಯವನ್ನಷ್ಟೇ ಮಾಡಬೇಕು. ಅದನ್ನು ಬಿಟ್ಟು, ಎಲ್ಲಾ ಶಬ್ದಗಳ ಸಮನ್ವಯವನ್ನು ಮಾಡುವುದು ಅಯುಕ್ತವಲ್ಲವೇ?

ಈ ಆಶಂಕೆಯನ್ನು ಪರಿಹಾರ ಮಾಡುವ ಸೂತ್ರವನ್ನು ಉಪನ್ಯಾಸ ಮಾಡಿ, ಸೂತ್ರದಲ್ಲಿರುವ ಪೂರ್ವಪಕ್ಷಾಂಶವನ್ನು ಹೇತುಬದ್ಧವಾಗಿ ಸಮರ್ಥನೆ ಮಾಡಲು 'ತತ್ತು' ಇತ್ಯಾದಿ ಭಾಷ್ಯವಾಕ್ಯವು ಹೊರಟಿದೆ.

ಬ್ರಹ್ಮಶಬ್ದದಿಂದ ಹೇಳಲ್ಪಟ್ಟ ಗುಣಪರಿಪೂರ್ಣತ್ವದ ಸಮರ್ಥನೆಗೋಸ್ಕರ ಸಕಲಜಗಜ್ಜನ್ಮಾದಿ-ಕಾರಣತ್ವವೆಂಬ ಲಕ್ಷಣವನ್ನು ಬ್ರಹ್ಮನಿಗೆ ಹೇಳಲಾಯಿತು. ಇಂಥ ಜಗಜ್ಜನ್ಮಾದಿಕಾರಣತ್ವದ ಸಮನ್ವಯಕ್ಕೋಸ್ಕರವೇ ಸಕಲ ಶಬ್ದಗಳ ಸಮನ್ವಯವು ಪ್ರವೃತ್ತವಾಗಿದೆ. ಗುಣಪರಿಪೂರ್ಣತ್ವವು ಆನುಮಾನಿಕವಾದರೂ ಕೂಡ ಶಾಸ್ತ್ರವಿಲ್ಲದೇ ವಿಶೇಷವಾಗಿ ತಿಳಿಯಲು ಸಾಧ್ಯವಾಗುವುದಿಲ್ಲ. ಆದ್ದರಿಂದ ವಿಶೇಷವಾಗಿ ಅದನ್ನು ತಿಳಿಸುವುದಕ್ಕಾಗಿಯೇ ಸರ್ವಶಬ್ದದ ಸಮನ್ವಯಕ್ಕೋಸ್ಕರ ನಾಕನೆಯ ಸೂತ್ರವು ಹೊರಟಿದೆ.

ಜೀವೇಶ್ವರರಿಗೆ ಐಕ್ಯ ಒಪ್ಪಬೇಕೆಂಬುದು ಅಧಿಕರಣದ ಪೂರ್ವಪಕ್ಷ

सत्तर्कदीपावलिः – तन्न युज्यते इति ।। यस्मात्साङ्ख्यानुमानकल्पितमचित्प्रधानमप्यादिकार्यात् महतः परं विविधकार्याश्रयत्वेन व्याप्तमपि तत्तद्दोषानोक्तमिति सूक्ष्मं चेत्यादि महागुणमुच्यते । नायमव्यक्तशब्दार्थो भगवान् अव्यक्तात्पुरुषः पर इत्यस्य पुरुषादवरत्वावगमात् । पुरुषश्च अव्यक्तात् परतोऽत्र जीवो भवितुमर्हति तस्य योनिमन्ये प्रपद्यन्त इत्यादि दुःखसम्बन्धावगमात् । न च भगवान् दुःखी बद्धो अवरो वा सर्वप्रमाणविरोधात्। अतोऽत्र गुह्यं ब्रह्मेत्यादिवाक्या-पर्यालोचना अर्थाज्जीवपरयोरैक्यमागच्छतीत्यनया दिशा पूर्वपक्षकरणन्यायेन पूर्वपक्ष इति भावः ।

'तन्न युज्यते' ಎಂಬುದಾಗಿ ಭಾಷ್ಯದಲ್ಲಿ ಹೇಳಿದ್ದಾರೆ. ಯಾವ ಕಾರಣದಿಂದ ಸಾಂಖ್ಯರ ಅನುಮಾನದಿಂದ ಕಲ್ಪಿತವಾದ ಜಡಭೂತವಾದ ಪ್ರಕೃತಿಯು ಅವ್ಯಕ್ತಾದಿ ಶಬ್ದದಿಂದ ಪ್ರತಿಪಾದ್ಯವಾಗಿದೆಯೆಂದು ಪೂರ್ವಪಕ್ಷಕಾರರು ಹೇಳುತ್ತಾರೆ. 'ಮಹತಃ ಪರಂ ಧ್ರುವಮ್' ಎಂಬ ಶ್ರುತಿಯಿಂದಲೂ ಕೂಡ ಈ ಜಡಪ್ರಕೃತಿಯೇ ಪ್ರತಿಪಾದ್ಯವಾಗಿದೆ. ವಿವಿಧ ಕಾರ್ಯಗಳಿಗೆ ಆಶ್ರಯವಾಗಿದೆ. ಮತ್ತು ವ್ಯಾಪ್ತವಾಗಿದೆ. ಈ ಶ್ರುತಿಯಲ್ಲಿರುವ ಅವ್ಯಕ್ತಶಬ್ದದಿಂದ ಮಹಾವಿಷ್ಣುವು ಪ್ರತಿಪಾದ್ಯನಾಗಲಾರ. ಏಕೆಂದರೆ ಪುರುಷನೆನಿಸಿದ ಮಹಾವಿಷ್ಣುವಿನಿಗಿಂತ ಅವರತ್ವವನ್ನು ಈ ಶ್ರುತಿ ಹೇಳುತ್ತಿದೆ. ಈ ಅವರತ್ವವು ವಿಷ್ಣುವಿನಲ್ಲಿ ಸರ್ವಥಾ ಯುಕ್ತವಾಗುವುದಿಲ್ಲ.

ಪುರುಷಶಬ್ದದಿಂದ ಪ್ರತಿಪಾದ್ಯನಾದವನೂ ಕೂಡ ಜೀವನೇ ಆಗುತ್ತಾನೆ. ಏಕೆಂದರೆ 'ಯೋನಿಮನ್ಯೇ ಪ್ರಪದ್ಯಂತೇ' ಎಂಬುದಾಗಿ ಆ ಪುರುಷನಿಗೆ ದುಃಖಸಂಬಂಧವನ್ನು ಶ್ರುತಿಯು ಹೇಳುತ್ತಿದೆ. ಪರಮಾತ್ಮನು ದುಃಖದ ಸಂಬಂಧವುಳ್ಳವನಾಗಲು ಸಾಧ್ಯವಿಲ್ಲ. ಅದರಂತೆ ಬದ್ಧನೂ, ಅವರನೂ ಕೂಡ ಆಗಲು ಸಾಧ್ಯವಿಲ್ಲ. ಹಾಗಾದಲ್ಲಿ ಸರ್ವಪ್ರಮಾಣಗಳ ವಿರೋಧವು ಬರುತ್ತದೆ. ಆದ್ದರಿಂದ 'ಗುಹ್ಯಂ ಬ್ರಹ್ಮ' ಇತ್ಯಾದಿ ವಾಕ್ಯಗಳನ್ನು ಪರ್ಯಾಲೋಚನೆ ಮಾಡಿದಾಗ ಜೀವಪರಮಾತ್ಮರಿಗೆ ಐಕ್ಯವನ್ನೇ ಒಪ್ಪುವುದು ಸೂಕ್ತವಾಗುತ್ತವೆ. ಇಷ್ಟು ಈ ಅಧಿಕರಣದ ಪೂರ್ವಪಕ್ಷ.

ಜೀವಾದಿಗಳಿಗೆ ಪರಮಾತ್ಮನೇ ನಿಯಾಮಕನೆಂದು ಸಿದ್ಧಾಂತ

सत्तर्कदीपावलिः – सिद्धान्तांशं व्याचष्टे – नेत्यादिना । जीवे हिंसाहेतुत्वात् तत्प्रेर्यमाणत्वाच्छरीररूपकमव्यक्तम् । तस्यैव भगवत एव । जीवस्य तच्छरीरत्वावगमात् । य आत्मा शरीरं यस्य तेजः शरीरमित्यादौ शरीरतद्वतोश्च एकनियम्यत्वदर्शनात् । तद्वतस्य हरेरेव अव्यक्तनाम्ना उक्तेर्न उक्तदोष इत्यर्थः। शरीरस्य रूपमिव रूपमस्येति शरीररूपम् । जडाव्यक्तं तु शरीररूपमपि सम्यक् न भवति तुच्छशब्दादित्येतदर्थः कप्रत्यय इत्याह – कप्रत्यय इति ।

ಸೂತ್ರದ ಸಿದ್ಧಾಂತ ಭಾಗವನ್ನು ವ್ಯಾಖ್ಯಾನ ಮಾಡಲು 'ನ' ಇತ್ಯಾದಿ ಭಾಷ್ಯವಾಕ್ಯವು ಹೊರಟಿದೆ. ಜೀವನಲ್ಲಿರುವ ಹಿಂಸಾದಿಗಳಿಗೆ ಕಾರಣನಾದವನು ಪರಮಾತ್ಮನೇ ಆಗಿದ್ದಾನೆ. ಮತ್ತು ಜೀವರನ್ನು ಪ್ರೇರಣೆ ಮಾಡುವವನೂ ಕೂಡ ಪರಮಾತ್ಮನೇ ಆಗಿದ್ದಾನೆ. ಇಂಥ ಪರಮಾತ್ಮನಿಗೆ ಜೀವನು ಶರೀರದಂತೆ ಇದ್ದಾನೆ. 'ತಸ್ಯೈವ' ಎಂದರೆ 'ಭಗವಂತನಿಗೆ' ಎಂದರ್ಥ. 'ಯ ಆತ್ಮಾ ಶರೀರಂ ಯಸ್ಯ ತೇಜಃ ಶರೀರಮ್' ಇತ್ಯಾದಿ ವಾಕ್ಯಗಳನ್ನು ಪರ್ಯಾಲೋಚನೆ ಮಾಡಿದಾಗ ಶರೀರ ಹಾಗೂ ಶರೀರವುಳ್ಳವನಿಗೆ ಒಬ್ಬನೇ ನಿಯಾಮಕನೆಂದು ತಿಳಿಯುತ್ತಿದೆ. ಅಂಥ ಶ್ರೀಹರಿಯೇ ಅವ್ಯಕ್ತ ಇತ್ಯಾದಿ ಶಬ್ದಗಳಿಂದ ಪ್ರತಿಪಾದ್ಯನಾಗುತ್ತಾನೆ. ಆದ್ದರಿಂದ ಪೂರ್ವಪಕ್ಷದಲ್ಲಿ ಹೇಳಿದ ಯಾವುದೇ ದೋಷಗಳಿಗೆ ಅವಕಾಶವಿಲ್ಲ. 'ಶರೀರರೂಪ' ಎಂಬ ಪದಕ್ಕೆ ಶರೀರದಂತೆ ಇರುವವನು ಎಂದರ್ಥ. ಹೊರತು, ಜೀವನೇ ಪರಮಾತ್ಮನ ಶರೀರವೆಂದು ತಿಳಿಯಬಾರದು. ಜಡಭೂತವಾದ ಪ್ರಕೃತಿಯು ಶರೀರದಂತೆಯೂ ಕೂಡ ಆಗಲು ಸಾಧ್ಯವಿಲ್ಲ ಎಂಬುದನ್ನು 'ಕ'ಪ್ರತ್ಯಯದಿಂದ ಸೂತ್ರಕಾರರು ತಿಳಿಸಿದ್ದಾರೆ.

ಪರಮಾತ್ಮನೇ ಅವ್ಯಕ್ತಾದಿಗಳಲ್ಲಿ ನೆಲಸಿದ್ದಾನೆ

सत्तर्कदीपावलिः – ननु मञ्चस्थे मञ्चशब्दवदव्यक्तगहरावव्यक्तशब्दश्चौपचारिकः तत्र स्यादित्यत आह – परमात्मन एवेति । तुच्छतमेतत् जडाव्यक्तिं विन्यस्तं चात्र परमात्मेत्येतदर्थत्वेन सूत्रोपात्तश्रुतिं दर्शयति –

तुच्छेनेति । तुच्छं न भवति गुणतो तमः शब्दोक्तम् आसमन्तात् सर्वैर्गुणैः भूमात्मकम् । आनीदवातमित्युक्तं ब्रह्म । एवमव्यक्तविन्यस्तस्य परमात्मन एवाव्यक्तशब्दः सांख्यश्चेत् तत्र तस्य प्रयोगो योगश्चापेक्षितः । तत्र तावत्प्रयोगश्च शब्दसूचितश्रुतीतिहासयोरस्तीत्याह – अव्यक्तमित्यादिना ।

ಮಂಚನಲ್ಲಿರುವ ಪುರುಷನಲ್ಲಿ ಹೇಗೆ ಮಂಚ ಶಬ್ದವನ್ನು ಪ್ರಯೋಗ ಮಾಡಲಾಗುತ್ತದೋ, ಅದರಂತೆ ಅವ್ಯಕ್ತಾದಿಗಳಲ್ಲಿ ನೆಲಸಿರುವ ಪರಮಾತ್ಮನಲ್ಲಿ ಅವ್ಯಕ್ತಾದಿ ಶಬ್ದಗಳು ಗೌಣವಾಗಿವೆ ಎಂದು ಏಕೆ ಹೇಳಬಾರದು? ಈ ಪ್ರಶ್ನೆಗೆ 'ಪರಮಾತ್ಮನ ಏವ' ಎಂಬುದರಿಂದ ಉತ್ತರಿಸಿದ್ದಾರೆ.

ಪರಮಾತ್ಮನು ಅಂತರ್ಯಾಮಿಯಾಗಿರುವುದರಿಂದ ಅವ್ಯಕ್ತಾದಿ ಶಬ್ದಗಳು ಪರಮಾತ್ಮನದ್ದೇ ಹೆಸರಾಗಿದೆ ಎಂಬುದನ್ನು 'ತುಚ್ಛೇ ನ ಭವತಿ' ಎಂಬ ಶ್ರುತಿಯು ಹೇಳುತ್ತಿದೆ. ಸೂತ್ರದಲ್ಲಿ ಉಲ್ಲೇಖ ಮಾಡಿದ ಈ ಶ್ರುತಿಯನ್ನು ಭಾಷ್ಯದಲ್ಲಿ 'ತುಚ್ಛೇನ' ಇತ್ಯಾದಿಯಾಗಿ ಉಲ್ಲೇಖ ಮಾಡಿದ್ದಾರೆ. ಪರಮಾತ್ಮನಿಗಿಂತ ಗುಣದಲ್ಲಿ ಅತ್ಯಲ್ಪವಾದ ಪ್ರಕೃತ್ಯಾದಿಗಳು 'ತುಚ್ಛ' ಎನಿಸುತ್ತವೆ. ಪರಮಾತ್ಮನು ಸಕಲಗುಣಪರಿಪೂರ್ಣನಾಗಿರುವುದರಿಂದ ಭೂಮಾ ಎನಿಸುತ್ತಾನೆ.

ಹೀಗೆ ಅವ್ಯಕ್ತಾದಿಗಳಲ್ಲಿ ನೆಲಸಿರುವ ಪರಮಾತ್ಮನೇ ಅವ್ಯಕ್ತಶಬ್ದದಿಂದ ತಿಳಿಯಲು ಯೋಗ್ಯನಾಗಿದ್ದಾನೆ. ಅವನಲ್ಲೇ ಈ ಶಬ್ದಪ್ರಯೋಗವು, ಹಾಗೂ ಶಬ್ದಪ್ರಯೋಗದ ಯೌಗಿಕಾರ್ಥವು ಯುಕ್ತವಾಗುತ್ತದೆ. ಈ ವಿಷಯವು ಶ್ರುತಿ ಇತಿಹಾಸಗಳಿಂದ ಸಿದ್ಧವಾಗಿದೆ ಎಂಬುದನ್ನು 'ಅವ್ಯಕ್ತಮಚಲಮ್' ಇತ್ಯಾದಿ ಪ್ರಮಾಣದಿಂದ ಸಮರ್ಥನೆ ಮಾಡಿದ್ದಾರೆ.

ಅವ್ಯಕ್ತಶಬ್ದದ ಯೋಗಾರ್ಥ

सत्तर्कदीपावलिः – ।। सूक्ष्मं तु तदर्हत्वात् ।। १-४-२ ।।

योगोऽप्यस्ति न व्यज्यत इत्यव्यक्तमिति । तद्योगं तु सूक्ष्ममेव । तच्च परं ब्रह्मैव विष्ण्वाख्यमित्येवं सप्रमाणकं प्रतिपादयत्सूत्रमुपन्यस्य व्याचष्टे। सूक्ष्मं त्वित्यादिना । प्रधानस्यापि सूक्ष्मत्वात् तत्राप्ययं योगः किं न स्यादित्यत आह – मुख्ये चेदिति ।

ಅವ್ಯಕ್ತಶಬ್ದಕ್ಕೆ ಯೋಗಾರ್ಥವನ್ನೂ ಕೂಡ ವಿವಕ್ಷಿಸಬೇಕು. 'ನ ವ್ಯಜ್ಯತೇ ಇತಿ ಅವ್ಯಕ್ತಮ್' ಎಂಬುದು ಇದರ ನಿಷ್ಪತ್ತಿ. ಪರಮಾತ್ಮನು ಅತ್ಯಂತ ಸೂಕ್ಷ್ಮನಾಗಿರುವುದರಿಂದ ಇವನೇ ಯೋಗಿಕಾರ್ಥನಾಗಿದ್ದಾನೆ. ಇದನ್ನು ಪ್ರಮಾಣಪುರಸ್ಸರವಾಗಿ ಪ್ರತಿಪಾದನೆ ಮಾಡಲು ಸೂತ್ರವನ್ನು ಉಲ್ಲೇಖ ಮಾಡಿ ವ್ಯಾಖ್ಯಾನ ಮಾಡಲು 'ಸೂಕ್ಷ್ಮಂ ತು' ಇತ್ಯಾದಿ ಭಾಷ್ಯ ವಾಕ್ಯವು ಹೊರಟಿದೆ. ಪ್ರಧಾನವೂ ಕೂಡ ಸೂಕ್ಷ್ಮವಾಗಿರುವುದರಿಂದ ಅವ್ಯಕ್ತಶಬ್ದದ ಯೋಗಾರ್ಥವನ್ನು ಪ್ರಧಾನದಲ್ಲೇಕೆ ಹೇಳಬಾರದು ? ಈ ಪ್ರಶ್ನೆಗೆ ಉತ್ತರಿಸಲು 'ಮುಖ್ಯೇಚೇತ್' ಎಂಬ ವಾಕ್ಯವು ಹೊರಟಿದೆ.

'ತದಧೀನತ್ವ' ಸೂತ್ರಕ್ಕೆ ಪೀಠಿಕೆ

सत्तर्कदीपावलिः – ।। तदधीनत्वादर्थवत् ।। १-४-३ ।।

यदीशवदतिसूक्ष्मत्वाभावादानुमानिकस्याव्यक्तत्वम् अव्यक्तशब्दप्रवृत्ति-निमित्त भूतार्थरहितमनतिमुख्यं तर्ह्यवरदुःखिबद्धादिशब्दप्रवृत्तिनिमित्तजाड्य-दुःखबद्धाद्यर्थरहितमवरत्वदुःखिबद्धत्वादिकर्मोपचारिकमेव स्यात् भगवतः । अतोऽत्र प्रधानजीवावेवाव्यक्तपुरुषशब्दोक्ताविति शङ्कापरिहारत्वेनोत्तर-सूत्रमवतार्य व्याचष्टे – तदधीनत्वादित्यादिना ।

ಪರಮಾತ್ಮನಂತೆ ಅವ್ಯಕ್ತವು ಅತಿಸೂಕ್ಷ್ಮವಾಗಿರುವುದಿಲ್ಲ. ಆದ್ದರಿಂದ ಅನುಮಾನದಿಂದ ಸಿದ್ಧವಾಗುವ ಪ್ರಕೃತಿಯು ಅವ್ಯಕ್ತಶಬ್ದದ ಪ್ರವೃತ್ತಿನಿಮಿತ್ತವೆನಿಸಿದ ಸೂಕ್ಷ್ಮತ್ವವನ್ನು ಹೊಂದಿರುವುದಿಲ್ಲ. ಆದ್ದರಿಂದ ಅದರಲ್ಲಿ ಅವ್ಯಕ್ತಶಬ್ದವು ಮುಖ್ಯವಾಗಿ ಇರುವುದಿಲ್ಲ ಎಂದು ಹೇಳಿದಿರಿ. ಹಾಗಾದರೆ ಅವರ, ದುಃಖೀ, ಬದ್ಧ ಇವೇ ಮೊದಲಾದ ಶಬ್ದಗಳ ಪ್ರವೃತ್ತಿನಿಮಿತ್ತವೆನಿಸಿದ ಜಾಡ್ಯ, ದುಃಖ, ಬದ್ಧ ಇವುಗಳಿಂದ ರಹಿತವಾದ ಅವರತ್ವ, ದುಃಖೀ, ಬದ್ಧತ್ವಾದಿ ಕರ್ಮಗಳು ಔಪಚಾರಿಕವಾಗಿಯೇ ಪರಮಾತ್ಮನಲ್ಲಿ ಬರಬೇಕಾಗುತ್ತದೆ. ಆದ್ದರಿಂದ ಪ್ರಧಾನ ಹಾಗೂ ಜೀವರೇ ಅವ್ಯಕ್ತ, ಪುರುಷಾದಿ ಶಬ್ದಗಳಿಂದ ಪ್ರತಿಪಾದ್ಯರಾಗುತ್ತಾರೆ ಎಂದು ಹೇಳಬೇಕು. ಈ ಆಶಂಕೆಯ ಪರಿಹಾರಕ್ಕೋಸ್ಕರ ಮುಂದಿನ ಸೂತ್ರಕ್ಕೆ ಅವತಾರಿಕೆ ನೀಡಿ ವ್ಯಾಖ್ಯಾನ ಮಾಡಲು 'ತದಧೀನತ್ವಾತ್' ಇತ್ಯಾದಿ ಭಾಷ್ಯವಾಕ್ಯವು ಹೊರಟಿದೆ.

ಅವ್ಯಕ್ತತ್ವಾದಿಗಳು ಪರಮಾತ್ಮನಲ್ಲಿ

सत्तर्कदीपावलिः – न केवलं प्रकृतिजीवयोः अव्यक्तत्वपरत्व-पुरुषत्वादीनामीशापेक्षया अत्यल्पसूक्ष्मत्वादतिसूक्ष्मस्य सर्वोतमस्यातिपूरुष-षड्गुणस्येव अव्यक्तत्वादिकमव्यक्तशब्दादि प्रवृत्तिनिमित्तार्थवत् । किन्तु तद्गताव्यक्तत्वपरत्वपुरुषत्वादीनामपि ईशाधीनत्वाच्च ।

ಕೇವಲ ಪ್ರಕೃತಿ ಹಾಗೂ ಜೀವರಲ್ಲಿ ಅವ್ಯಕ್ತತ್ವ, ಪರತ್ವ, ಪುರುಷತ್ವಾದಿಗಳು ಈಶ್ವರನ ಅಪೇಕ್ಷೆಯಿಂದ ಅತಿಸೂಕ್ಷ್ಮವಾಗಿವೆ. ಅಂದರೆ ಅತ್ಯಲ್ಪಸೂಕ್ಷ್ಮನಾದವನು ಈಶ್ವರ. ಅವನಷ್ಟು ಸೂಕ್ಷ್ಮ ಇವುಗಳು ಆಗಿರುವುದಿಲ್ಲ. ಸರ್ವೋತ್ತಮನಾದವನು ಯಾರಲ್ಲೂ ಇಲ್ಲದ ಷಡ್ಗುಣಗಳುಳ್ಳವನಾಗಿದ್ದಾನೆ. ಅವ್ಯಕ್ತತ್ವಾದಿಗಳು ಅವ್ಯಕ್ತಶಬ್ದದ ಪ್ರವೃತ್ತಿನಿಮಿತ್ತವುಳ್ಳವುಗಳಾಗಿವೆ ಎಂಬುದಷ್ಟೇ ನಮ್ಮ ಅಭಿಪ್ರಾಯವಲ್ಲ. ಇವುಗಳಲ್ಲಿರುವ ಅವ್ಯಕ್ತತ್ವ, ಪರತ್ವ, ಪುರುಷತ್ವಾದಿಗಳೂ ಕೂಡ ಈಶ್ವರನ ಅಧೀನವೇ ಆಗಿವೆ.

ಎಲ್ಲಾ ಶಬ್ದಗಳು ಈಶ್ವರನಲ್ಲೇ ಮಉಖ್ಯ

सत्तर्कदीपावलिः – ईश्वरस्य तु निरनिष्टो निरवद्य इत्यादिश्रुत्या दोषासंस्पर्शनियमात् । अवरत्वदुःखित्वबद्धत्वादीनाम् अन्यगतानामेव ईशाधीनत्वात् । तस्यैवावरत्वादिकमर्थवत् प्रकृत्यादिगतादित्येषा दिक् । अतोऽसावेवातिमुख्यतो अव्यक्तपुरुषपरावरदुःखिशब्दार्थः ।

ಈಶ್ವರನು 'ನಿರನಿಷ್ಟೋ ನಿರವದ್ಯಃ' ಇತ್ಯಾದಿ ಶ್ರುತಿಯ ಆಧಾರದಿಂದ ದೋಷಸಂಸ್ಪರ್ಶಕ್ಕೆ ವಿಷಯವಾಗುವುದಿಲ್ಲ ಎಂಬ ನಿಯಮವುಳ್ಳವನಾಗಿದ್ದಾನೆ. ಅವರತ್ವ, ದುಃಖಿತ್ವ, ಬದ್ಧತ್ವಾದಿಗಳು ಈಶಾಧೀನವಾಗಿ ಅನ್ಯಗತವಾಗಿವೆ. ಬೇರೆಡೆ ಇರುವ ಅವರತ್ವಾದಿಗಳಿಗೆ ಇವನು ಸ್ವತಂತ್ರ-ನಾಗಿರುವುದರಿಂದ ಅವರಾದಿ ಶಬ್ದಗಳಿಂದ ಇವನೇ ಮುಖ್ಯವಾಗಿ ಪ್ರತಿಪಾದ್ಯನಾಗುತ್ತಾನೆ. ಆದ್ದರಿಂದ ಪ್ರಕೃತ್ಯಾದಿಗಳಲ್ಲಿರುವ ಅವರಶಬ್ದದ ಪ್ರಯೋಗಕ್ಕಿಂತ ಇವನಲ್ಲಿರುವ ಪ್ರಯೋಗವೇ ಮುಖ್ಯವಾಗಿದೆ. ಆದ್ದರಿಂದ ಅವ್ಯಕ್ತ, ಪುರುಷ, ಪರ, ಅವರ, ದುಃಖೀ ಇವುಗಳೆಲ್ಲಾ ಶಬ್ದಗಳು ಅತ್ಯಂತ ಮುಖ್ಯವಾಗಿ ಇವನಲ್ಲೇ ಮುಖ್ಯವಾಗುತ್ತವೆ.

ಎಲ್ಲೆಡೆಯೂ ಸ್ವಾಮಿಗೆ ಪ್ರಾಧಾನ್ಯ

सत्तर्कदीपावलिः – कथमन्यथा राज्ञि जयशब्दप्रयोगो अतिबहुभिः । यद्भृत्यविषयं तदाह – यदधीन इति । यथा परात्मा जीव इत्युच्यते । अनेन जीवेनेत्यादावित्यर्थः ।

ಹೀಗೊಪ್ಪದಿದ್ದರೆ ರಾಜನಲ್ಲಿ ಜಯಶಬ್ದದ ಪ್ರಯೋಗವನ್ನೇ ಲೋಕದಲ್ಲಿ ಅತ್ಯಂತ ಬಹಳವಾಗಿ ಮಾಡಲಾಗುತ್ತಿದೆ. ಇದು ಹೇಗೆ ತಾನೇ ಯುಕ್ತವಾಗಲು ಸಾಧ್ಯ? ಭೃತ್ಯನು ಗೆದ್ದರೆ ರಾಜನು ಗೆದ್ದನು ಎಂಬ ಪ್ರಯೋಗವು ಲೋಕದಲ್ಲಿದೆ. ಆದ್ದರಿಂದ ಯಾವ ಗುಣವು ಯಾರ ಅಧೀನವೋ ಆ ಸ್ವತಂತ್ರನಾದ ವ್ಯಕ್ತಿಯನ್ನೇ ಆ ಗುಣವುಳ್ಳವನೆಂದು ಕರೆಯಲಾಗಿದೆ. ಇದನ್ನೇ 'ಯದಧೀನ' ಇತ್ಯಾದಿ ಭಾಷ್ಯದಿಂದ ಸಮರ್ಥನೆ ಮಾಡಿದ್ದಾರೆ. ಪ್ರಕೃತ ಜೀವನು ಶ್ರೀಹರಿಯ ಅಧೀನನಾಗಿರುವುದರಿಂದ ಪರಮಾತ್ಮನನ್ನು ಜೀವ ಎಂದು ಅನೇನ ಜೀವ ಎಂಬ ಶ್ರುತಿಯಿಂದ ಕರೆಯಲಾಗುತ್ತದೆ ಎಂದರ್ಥ.

ಪುರುಷಾರ್ಥ ಬೇಕೆಂದರೆ ಮೊದಲು ಅದನ್ನು ತಿಳಿಯಬೇಕು

सत्तर्कदीपावलिः – ।। ज्ञेयत्वावचनाच्च ।। १-४-४ ।।

यो यं पुरुषार्थमिच्छति तस्य तदवाप्तये तदेवावश्यं विज्ञेयमित्युच्यते एतदेवाक्षरं ब्रह्मेत्यादौ । तदेवात्रोपनिषदि यथावद्वक्तव्यम् । जीवप्रधानादेस्तद्वचनात् । रूढमाह – ज्ञेयत्वेति ।

ಯಾರು ಯಾವ ಪುರುಷಾರ್ಥವನ್ನು ಹೊಂದಲು ಇಚ್ಛೆ ಪಡುತ್ತಾನೋ, ಅವನು ಅದನ್ನು ಪಡೆಯಲು ಆ ಪುರುಷಾರ್ಥವನ್ನೇ ತಿಳಿಯಬೇಕು. ಆ ಪುರುಷಾರ್ಥನೇ ಅಕ್ಷರಬ್ರಹ್ಮನಾಗಿದ್ದಾನೆ. ಅದರ ಬಗ್ಗೆಯೇ ಉಪನಿಷತ್ತು ವರ್ಣನೆ ಮಾಡುತ್ತಿದೆ. ಜೀವ, ಪ್ರಧಾನ ಈ ಎಲ್ಲಾ ಶಬ್ದಗಳಿಂದಲೂ ಅವನೇ ಪ್ರತಿಪಾದ್ಯನಾಗಿದ್ದಾನೆ. ರೂಢಿಯನ್ನು ಸಮರ್ಥನೆ ಮಾಡಲು 'ಜ್ಞೇಯತ್ವಾವಚನಾಚ್ಚ' ಎಂಬ ಸೂತ್ರವು ಹೊರಟಿದೆ.

ಸೂತ್ರದ ಪೂರ್ವಪಕ್ಷಾಂಶ ವ್ಯಾಖ್ಯಾನ

सत्तर्कदीपावलिः – ।। वदतीति चेन्न प्राज्ञो हि ।। १-४-५ ।।

ननु महतः सुतरां परं जीवं परमात्रं प्रधानं च उभयं च द्वयं निचाय्य मुच्यत इति ज्ञेयत्वोक्तेः । तयोरेवात्र वाच्यतया तदुभयविवेकज्ञानं मुक्तिसाधनमिति भावेन सूत्रपूर्वपक्षांशं व्याचष्टे । वदतीत्यादिना ।

ಮಹತ್ತತ್ವ ಹಾಗೂ ಜೀವ ಇವರಿಬ್ಬರನ್ನು ತಿಳಿದು ಮೋಕ್ಷವನ್ನು ಪಡೆಯುತ್ತಾನೆ ಎಂಬುದಾಗಿ 'ಮಹತಃ ಪರಂ ಧ್ರುವಂ' ಎಂಬ ಶ್ರುತಿ ಹೇಳುತ್ತಿದೆ. ಈ ಶ್ರುತಿಯಲ್ಲಿ ಪ್ರಧಾನ ಹಾಗೂ ಜೀವರೇ ಪ್ರತಿಪಾದ್ಯರಾಗಿರುವುದರಿಂದ ಇವರ ವಿವೇಕಜ್ಞಾನವೇ ಮುಕ್ತಿಸಾಧನವಾಗಿದೆ ಎಂಬುದು ಪೂರ್ವಪಕ್ಷ. ಸೂತ್ರದ ಪೂರ್ವಪಕ್ಷಾಂಶವನ್ನು ಮೊದಲು ಭಾಷ್ಯದಲ್ಲಿ 'ವದತಿ' ಇತ್ಯಾದಿಯಾಗಿ ವ್ಯಾಖ್ಯಾನ ಮಾಡಿದ್ದಾರೆ.

ಸೂತ್ರದ ಸಿದ್ಧಾಂತಾಂಶ ವ್ಯಾಖ್ಯಾನ

सत्तर्कदीपावलिः – महतः परं ध्रुवमित्यत्र परमात्मैवोच्यते परशब्देन । महतो महीयानात्मेत्यात्मनो महतो महत्त्वप्रसिद्धेः । न चायमात्मा जीवः तस्याणोर्महतो महत्त्वायोगादिति भावेन सिद्धान्तांशं व्याचष्टे । नन्वस्तु महतो महत्त्वं परमात्मनः प्रधानस्यापि तत्त्वान्तरपरत्वं तु ततोऽपि । अतो महतः परं प्रधानमेवेत्यत आह – सर्वस्मादिति ।

'ಮಹತಃ ಪರಂ ಧ್ರುವಂ' ಎಂಬಲ್ಲಿ ಪ್ರಕೃತಿ ಹಾಗೂ ಜೀವರು ಪ್ರತಿಪಾದ್ಯರೇ ಅಲ್ಲ. ಪರಮಾತ್ಮನೇ ಪ್ರತಿಪಾದ್ಯನಾಗಿದ್ದಾನೆ. ಏಕೆಂದರೆ 'ಪರ'ಶಬ್ದವು ಶ್ರುತವಾಗಿದೆ. 'ಮಹತೋ ಮಹೀಯಾನ್' ಎಂಬ ಶ್ರುತಿಯಲ್ಲಿ ಪರಮಾತ್ಮನು ಮಹತ್ತತ್ವಕ್ಕಿಂತಲೂ ಶ್ರೇಷ್ಠನಾಗಿದ್ದಾನೆಂದು ಹೇಳಲಾಗಿದೆ. ಇಂಥವನು ಜೀವನಾಗಲು ಸಾಧ್ಯವಿಲ್ಲ. ಏಕೆಂದರೆ ಅಣುವಾದ ಜೀವನು ಮಹತೋ ಮಹೀಯನಾಗಲು ಸಾಧ್ಯವೆ ಇಲ್ಲ. ಈ ಅಭಿಪ್ರಾಯದಿಂದ ಸೂತ್ರದ ಸಿದ್ಧಾಂತ ಭಾಗವನ್ನು ಪ್ರಾಜ್ಞ ಇತ್ಯಾದಿಯಾಗಿ ವ್ಯಾಖ್ಯಾನ ಮಾಡಿದ್ದಾರೆ. ಮಹತೋ ಮಹೀಯತ್ವವು

ಪರಮಾತ್ಮನಲ್ಲಿ ಇರಲಿ. ಪ್ರಧಾನಕ್ಕೂ ಕೂಡ ಬೇರೆ ತತ್ವಗಳಿಗಿಂತ ಪರತ್ವವು ಬರುತ್ತದೆ. ಆದ್ದರಿಂದ ಪ್ರಧಾನವನ್ನೇಕೆ ವಿವಕ್ಷಿಸಬಾರದು ? ಎಂಬ ಪ್ರಶ್ನೆಗೆ 'ಸರ್ವಸ್ಮಾತ್' ಎಂಬ ಭಾಷ್ಯದಿಂದ ಉತ್ತರಿಸಿದ್ದಾರೆ. ಎಲ್ಲದಕ್ಕಿಂತಲೂ ಉತ್ತಮನಾದವನಿಗೆ ಮಹತತ್ತ್ವಕ್ಕಿಂತ ಉತ್ತಮತ್ವವು ಯುಕ್ತವಾಗುತ್ತದೆ.

'ಸೋऽಧ್ವನೋ ಪಾರಮಾಪ್ನೋತಿ' ಎಂಬ ಶ್ರುತ್ಯರ್ಥ

ಸತ್ತರ್ಕದೀಪಾವಳಿಃ – ।। ಪ್ರಕರಣಾತ್ ।। ೧-೪-೬ ।।

ननु पकृतिपुरुषयोरुभयोरपि महतः परत्वे महतः परं ध्रुवमित्यत्र पुरुषस्यैव ग्रहणे को हेतुरित्यत आह – प्रकरणादिति । पृथिव्यादिप्रकृत्यन्तनिकाये स्वकीयेऽस्यामुपनिषद्युक्तवक्ष्यमाणप्रकारेण रथाख्ये पुरुषाख्ये वा श्रीविष्णोः परमस्थाने तिष्ठत्ययं जीवराशिरतः सकलमिदम् अहं त्वं च तदायत्तमिति यो विजानाति संसाराध्वनः पारमाप्नोति तत्परं विष्णोः परमं स्थानं क्षीराब्ध्यादौ मुक्तप्राप्यमिति मोक्षदविष्णुप्रकरणत्वात् । महतः परं ध्रुवं निचाय्येति स एव ज्ञेयत्वेनोच्यत इत्यर्थः ।छ

ಪ್ರಕೃತಿ ಹಾಗೂ ಪುರುಷ ಇವರಿಬ್ಬರೂ ಮಹತ್ತತ್ವಕ್ಕಿಂತ ಶ್ರೇಷ್ಠರಾಗುವುದಾದರೆ 'ಮಹತಃ ಪರಂ ಧ್ರುವಂ' ಎಂಬಲ್ಲಿ ಪುರುಷನನ್ನೇ ವಿವಕ್ಷಿಸಲು ಏನು ಹೇತು? ಎಂಬ ಪ್ರಶ್ನೆಗೆ ಉತ್ತರಿಸಲು 'ಪ್ರಕರಣಾತ್' ಎಂಬ ಸೂತ್ರವು ಹೊರಟಿದೆ. ಪೃಥಿವಿಯಿಂದ ಪ್ರಾರಂಭಿಸಿ, ಪ್ರಕೃತಿಯ ತನಕ ಇರುವ ತನ್ನ ಈ ಶರೀರವೇ ರಥ ಎನಿಸಿದೆ. ಉಪನಿಷತ್ತು ಮುಂದೆ ಇದನ್ನು ಪ್ರತಿಪಾದನೆ ಮಾಡಿದೆ.

ಪೃಥಿವಿಯಿಂದ ಪ್ರಕೃತಿಯ ತನಕ ಸಮಸ್ತವೂ ಕೂಡ ಪರಮಾತ್ಮನಿಗೆ ಶರೀರದಂತೆ ಇದೆ. ಈ ಉಪನಿಷತ್ತಿನಲ್ಲಿ ಹಿಂದೆ ಹೇಳಿದ, ಮುಂದೆ ಹೇಳಲ್ಪಡುವ ಪ್ರಕಾರದಂತೆ ವಿಷ್ಣುವಿನ ಪರಮಸ್ಥಾನದಲ್ಲಿ ಸಮಸ್ತಜೀವರಾಶಿಯೂ ನೆಲಸಿರುತ್ತದೆ. ಆದ್ದರಿಂದ ನಾನು, ನೀನು ಇತ್ಯಾದಿ ಎಲ್ಲಾ ಶಬ್ದಗಳೂ ಕೂಡ ವಿಷ್ಣುವನ್ನೇ ಪ್ರತಿಪಾದನೆ ಮಾಡುತ್ತವೆ ಎಂಬುದಾಗಿ ಯಾರು

ತಿಳಿಯುತ್ತಾನೋ, ಅವನು ಸಂಸಾರವನ್ನು ದಾಟಿ, ಮೋಕ್ಷವನ್ನು ಪಡೆಯುತ್ತಾನೆ. ಕ್ಷೀರಸಮುದ್ರಶಾಯಿಯಾದ ವಿಷ್ಣುವೇ ಮುಕ್ತರಿಂದ ಪ್ರಾಪ್ತನಾಗಿದ್ದಾನೆ. ಎಂಬುದಾಗಿ ಈ ಪ್ರಕರಣವು ವಿಷ್ಣುವಿಗೆ ಸಂಬಂಧಪಟ್ಟಿದೆ. ಇಂಥ ವಿಷ್ಣುವೇ ಜ್ಞೇಯತ್ವೇನ ವಿಷಯ-ನಾಗಿದ್ದಾನೆಂಬುದು 'ಮಹತಃ ಸೋ೭ಧ್ವನಃ' ಇತ್ಯಾದಿ ಶ್ರುತಿಯ ಅಭಿಪ್ರಾಯವಾಗಿದೆ.

ಪ್ರಶ್ನೋಪನ್ಯಾಸದ ಆಧಾರ

सत्तर्कदीपावलिः – ।। त्रयाणामेव चैवमुपन्यासः प्रश्नश्च ।। १-४-७ ।।

यथा प्रकरणं महतः परं ध्रुवमित्यादो भगवतोऽन्यस्य ज्ञेयत्वानुक्तौ प्रमाणम् । एवं प्रश्नोपन्यासावपीत्याह – त्रयाणामिति । ननु पितृसौमनस्यं प्रार्थनीयमेव न प्रष्टव्यम् । अन्यथा तस्य भगवतः अन्यस्यैव प्रश्नोपन्यासविषयत्वेन ज्ञेयत्वापत्तेः पूर्वसूत्रविरोध इत्यत आह – अविज्ञातेति। पितृसौमनस्यस्य तदा तेनाज्ञातत्वात् तद्विषयप्रार्थनं च प्रश्नः । एतादृक्प्रश्नोपन्यासविषयत्वं न ज्ञेयत्वापादकमिति भावः ।

ಹೇಗೆ ಪ್ರಕರಣವು 'ಮಹತಃ ಪರಂ ಧ್ರುವಂ' ಇತ್ಯಾದಿಯಾಗಿ ಭಗವಂತನನ್ನು ಬಿಟ್ಟು, ಬೇರೆ ಪದಾರ್ಥವನ್ನು ತಿಳಿಯಬಾರದೆನ್ನಲು ಪ್ರಮಾಣವಾಗಿದೆಯೋ, ಅದರಂತೆ ಪ್ರಶ್ನೋಪನ್ಯಾಸಗಳೂ ಕೂಡ ಪ್ರಮಾಣವಾಗಿವೆ ಎಂಬುದನ್ನು 'ತ್ರಯಾಣಾಮೇವ' ಇತ್ಯಾದಿ ಭಾಷ್ಯದಿಂದ ಉಪಪಾದನೆ ಮಾಡುತ್ತಿದ್ದಾರೆ. ಪಿತೃಸೌಮನಸ್ಯವನ್ನು ಪ್ರಾರ್ಥನೆ ಮಾಡಬೇಕೇ ವಿನಃ ಪ್ರಶ್ನಿಸಬಾರದು. ಹೀಗೊಪ್ಪದಿದ್ದರೆ ಪ್ರಶ್ನೋಪನ್ಯಾಸಗಳು ಭಗವಂತನನ್ನು ಬಿಟ್ಟು ಬೇರೆಯದ್ದನ್ನೇ ವಿಷಯೀಕರಿಸುತ್ತವೆ ಎಂದಂತಾಯಿತು. ಆಗ ಅವುಗಳೇ ಜ್ಞೇಯವಾಗಬೇಕಾಗುತ್ತದೆ. ಹೀಗೊಪ್ಪಿದರೆ ಹಿಂದಿನ ಸೂತ್ರದಿಂದ ವಿರೋಧವು ಬರುತ್ತದಲ್ಲವೇ? ಈ ಪ್ರಶ್ನೆಗೆ 'ಅವಿಜ್ಞಾತಪ್ರಾರ್ಥನಂ ಚ' ಎಂಬ ಭಾಷ್ಯದಿಂದ ಉತ್ತರಿಸಿದ್ದಾರೆ. ಪಿತೃಸೌಮನಸ್ಯಗಳು ಆಗ ನಚಿಕೇತನಿಗೆ ಅಜ್ಞಾತವಾಗಿತ್ತು. ಅಜ್ಞಾತವಿಷಯದಲ್ಲಿ ಮಾಡುವ ಪ್ರಾರ್ಥನೆಯೂ ಕೂಡ ಪ್ರಶ್ನೆಯೆಂದೇ ಕರೆಸಿಕೊಳ್ಳುತ್ತದೆ. ಇಂಥ ಪ್ರಶ್ನೋಪನ್ಯಾಸವಿಷಯತ್ವವು ಜ್ಞೇಯತ್ವಕ್ಕೆ ಆಪಾದಕವಾಗುವುದಿಲ್ಲ ಎಂಬುದು ಅಭಿಪ್ರಾಯ.

'ಮಹತಃ ಪರಂ ಧ್ರುವಂ' ಎಂಬಲ್ಲೂ ವಿಷ್ಣುವೇ ಪ್ರತಿಪಾದ್ಯ

ಸತ್ತರ್ಕದೀಪಾವಲಿಃ – ಮಹದ್ವಚ್ಚ ।। ೧-೪-೮ ।।

ಶಬ್ದಪ್ರವೃತ್ತಿನಿಮಿತ್ತಮುಖ್ಯತ್ವಪರ್ಯಾಲೋಚನಯಾ ಮಹಾನ್ತಂ ವಿಭುಮಾತ್ಮಾನಮ್ ಇತ್ಯಾದಾವಿವ ಮಹತಃ ಪರಂ ಧ್ರುವಮಿತ್ಯಾದಾವಪಿ ಭಗವಾನೇವ ಜ್ಞೇಯತ್ವೇನೋಚ್ಯತ ಇತಿ ಸಿದ್ಧ್ಯತೀತ್ಯಾಹ – ಮಹದ್ವಚ್ಚೇತ್ಯಾದಿನಾ । ಯಥಾ ಭಗವನ್ಮಹತ್ವಮಭಿಹಿತಂ ತದ್ವತ್ತಸ್ಯ ಪರತ್ವಧ್ರುವತ್ವಾದ್ಯನನ್ತತ್ವಾದಯೋऽಪೀತ್ಯರ್ಥಃ ।।

ಶಬ್ದ ಪ್ರವೃತ್ತಿನಿಮಿತ್ತವಾದ ಮುಖ್ಯತ್ವವನ್ನು ಪರ್ಯಾಲೋಚನೆ ಮಾಡಿದಾಗ 'ಮಹಾಂತಂ ವಿಭುಮಾತ್ಮಾನಂ' ಎಂಬಲ್ಲಿ ಹೇಗೆ ವಿಷ್ಣುವೇ ಜ್ಞೇಯತ್ವೇನ ಪ್ರತಿಪಾದ್ಯನಾಗಿದ್ದಾನೋ, ಅದರಂತೆ 'ಮಹತಃ ಪರಂ ಧ್ರುವಂ' ಎಂಬಲ್ಲಿಯೂ ಕೂಡ ವಿಷ್ಣುವೇ ಜ್ಞೇಯತ್ವೇನ ಪ್ರತಿಪಾದ್ಯನಾಗಿದ್ದಾನೆ. ಈ ವಿಷಯವನ್ನು 'ಮಹದ್ವಚ್ಚ' ಇತ್ಯಾದಿ ಭಾಷ್ಯದಿಂದ ಉಪಪಾದನೆ ಮಾಡುತ್ತಿದ್ದಾರೆ. ಹೇಗೆ ಪರಮಾತ್ಮನಲ್ಲಿ ಮಹತ್ವವನ್ನು ಉಪಪಾದನೆ ಮಾಡಲಾಯಿತೋ, ಅದರಂತೆ ಪರತ್ವ, ಧ್ರುವತ್ವ, ಅನಂತತ್ವಾದಿಗಳನ್ನೂ ಕೂಡ ಪರಮಾತ್ಮನಲ್ಲಿ ಉಪಪಾದನೆ ಮಾಡಬೇಕು.

ಅವ್ಯಕ್ತಾದಿಶಬ್ದಸಮನ್ವಯಕ್ಕೆ ಮತ್ತೊಂದು ಕಾರಣ

ಸತ್ತರ್ಕದೀಪಾವಲಿಃ – ।। ಚಮಸವದವಿಶೇಷಾತ್ ।। ೧-೪-೯ ।।

ಏವಂ ಭಗವತ ಏವ ಜ್ಞೇಯತ್ವವಚನಾತ್ ಸ ಏವಾವ್ಯಕತಪುರುಷಪರಾವರದುಃಖಿಶಬ್ದಾರ್ಥಃ । ಇತोऽಪಿ ಸ ಏವೈತಚ್ಛಬ್ದಾರ್ಥ ಇತ್ಯಾಹ – ಚಮಸವದಿತ್ಯಾದಿನಾ । ಯದ್ಯಪಿ ತ್ರಯಾಣಾಮೇವೇತಿ ಸೂತ್ರೇ ಭಗವತोऽನ್ಯಸ್ಯ ಜ್ಞೇಯತ್ವಾನುಕ್ತಿಪ್ರತಿಪಾದನಪರೇ ಅಗ್ನಿಸ್ಥಸ್ಯ ತಸ್ಯೈವ ಅಗ್ನಿಶಬ್ದಪರ ಮಮುಖ್ಯಾರ್ಥತ್ವಮುಕ್ತಮ್ । ತದನ್ವಿತಾರ್ಥಸ್ವಾರ್ಥಾಭಿಧಾನೇನ ಅಗ್ನಿಕಾಣ್ಡಸ್ಯ ತತ್ರ ವಾಕ್ಯಸಮನ್ವಯಶ್ಚ । ಅನೇನೈವ ನ್ಯಾಯೇನ ಜ್ಯೋತಿರಾದಿಕರ್ಮಸ್ವಪೀನ್ದ್ರಾದಿಗತಸ್ಯ ಭಗವತ ಏವ ತಚ್ಛಬ್ದಾರ್ಥಪರಮಮುಖ್ಯಾರ್ಥತ್ವೇನ ಸರ್ವಯಜ್ಞೇಽನ್ವಯತ್ವಾತ್ ಸಮಗ್ರಸ್ಯಾಪಿ ಕರ್ಮಕಾಣ್ಡಸ್ಯ ತತ್ರ ವಾಕ್ಯಸಮನ್ವಯಶ್ಚ।

ಇಲ್ಲಿಯತನಕ ಭಗವಂತನೇ ಜ್ಞೇಯನಾಗಿರುವುದರಿಂದ ಅವನಲ್ಲೇ ಅವ್ಯಕ್ತ, ಪುರುಷ, ಪರ, ಅವರ, ದುಃಖೀ ಮೊದಲಾದ ಶಬ್ದಗಳು ಸಮನ್ವಯ ಹೊಂದುತ್ತವೆ ಎಂದು ಸಮರ್ಥನೆ ಮಾಡಲಾಯಿತು. ಮತ್ತೊಂದು ಕಾರಣದಿಂದಲೂ ಕೂಡ ಪರಮಾತ್ಮನು ಈ ಎಲ್ಲಾ ಶಬ್ದಗಳಿಂದ ಪ್ರತಿಪಾದ್ಯನಾಗುತ್ತಾನೆಂಬುದನ್ನು ಉಪಪಾದನೆ ಮಾಡುವುದಕ್ಕಾಗಿ 'ಚಮಸವತ್' ಇತ್ಯಾದಿ ಭಾಷ್ಯವು ಹೊರಟಿದೆ. ವಾಸ್ತವಿಕವಾಗಿ 'ತ್ರಯಾಣಾಮೇವ' ಇತ್ಯಾದಿ ಸೂತ್ರದಲ್ಲಿ ಭಗವಂತನನ್ನು ಬಿಟ್ಟು, ಉಳಿದವುಗಳಿಗೆ ಜ್ಞೇಯತ್ವವನ್ನು ಹೇಳಿರುವುದಿಲ್ಲ ಎಂಬ ವಿಷಯವನ್ನು ಪ್ರತಿಪಾದನೆ ಮಾಡುವಾಗ ಅಗ್ನಿಯಲ್ಲಿರುವ ಪರಮಾತ್ಮನು ಅಗ್ನಿಶಬ್ದದ ಪರಮಮುಖ್ಯಾರ್ಥನೆಂದು ಹೇಳಲಾಯಿತು. ತದನ್ವಿತವಾದ ಅರ್ಥವನ್ನು ಪ್ರತಿಪಾದನೆ ಮಾಡುವ ಮೂಲಕ ಸಮಗ್ರ ಅಗ್ನಿಕಾಂಡವೇ ಪರಮಾತ್ಮನನ್ನು ಪ್ರತಿಪಾದನೆ ಮಾಡುತ್ತಿದೆ ಎಂದು ತಿಳಿಯಬೇಕು. ಇದರಿಂದ ವಾಕ್ಯಸಮನ್ವಯವು ಸಿದ್ಧವಾಗುತ್ತದೆ. ಇದೇ ನ್ಯಾಯದಿಂದ ಜ್ಯೋತಿರಾದಿಕರ್ಮಗಳಲ್ಲೂ ಕೂಡ ಇಂದ್ರಾದಿಗಳಲ್ಲಿರುವ ಭಗವಂತನೇ ಆಯಾ ಶಬ್ದಗಳ ಪರಮಮುಖ್ಯಾರ್ಥನಾಗಿ, ಸರ್ವಯಜ್ಞ ಆರಾಧ್ಯನಾಗಿದ್ದಾನೆ. ಅವನಲ್ಲೇ ಸಮಗ್ರ ಕರ್ಮಕಾಂಡವು ಅಲ್ಲಿರುವ ವಾಕ್ಯಸಮನ್ವಯವು ಆಗುತ್ತದೆಂದು ತಿಳಿಯಬೇಕು.

॥ ಇಲ್ಲಿಗೆ ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ ಸತ್ತರ್ಕದೀಪಾವಳಿಯಲ್ಲಿ
ಆನುಮಾನಿಕಾಧಿಕರಣದ ಕನ್ನಡಾನುವಾದವು ಸಮಾಪ್ತವಾಯಿತು ॥

ವಿವರವಾದ ವಿಷಯಾನುಕ್ರಮಣಿಕೆ

ಜ್ಯೋತಿರುಪಕ್ರಮಾಧಿಕರಣ

ಬ್ರಹ್ಮಸೂತ್ರ

'ಜ್ಯೋತಿರುಪಕ್ರಮಾತ್ತು ತಥಾ ಹ್ಯಧೀಯತೇ ಏಕೇ' ಎಂಬ ಸೂತ್ರದ ವ್ಯಾಖ್ಯಾನ ೨

ಬ್ರಹ್ಮಸೂತ್ರಭಾಷ್ಯ

ಬ್ರಹ್ಮನಲ್ಲಿ ಶಬ್ದಸಮನ್ವಯಕ್ಕೆ ಕರ್ಮಕಾಂಡದ ವಿರೋಧ ೩

ಕರ್ಮಪ್ರತಿಪಾದಕ ವಾಕ್ಯಗಳಿಂದ ಮಹಾವಿಷ್ಣುವೇ ಮುಖ್ಯಪ್ರತಿಪಾದ್ಯ ೪

ಸತ್ತರ್ಕದೀಪಾವಳಿ

'ವಸಂತೇ ವಸಂತೇ' ಇತ್ಯಾದಿ ಭಾಷ್ಯಕ್ಕೆ ವ್ಯಾಖ್ಯಾನ ೫

ಐತರೇಯೋಪನಿಷತ್ತಿನಲ್ಲಿ ಸಕಲಶಬ್ದ ಪ್ರತಿಪಾದ್ಯತ್ವದ ಬಗ್ಗೆ ೬

ತತ್ತ್ವಪ್ರದೀಪ

ಸಕಲಶಬ್ದ ಸಮನ್ವಯ ಮಾಡಿದರೆ ಕರ್ಮಾನುಷ್ಠಾನ ಹೇಗೆ ಸಾಧ್ಯ ? ೧೬

ಐತರೇಯಶಾಖೆಯಲ್ಲಿ ಇದಕ್ಕೆ ಉತ್ತರವಿದೆ ೧೭

'ಏಷ ಇಮಂ ಲೋಕಂ' ಎಂಬ ಶ್ರುತ್ಯರ್ಥ ೧೭

ಅನುವ್ಯಾಖ್ಯಾನದಲ್ಲಿ 'ಜ್ಯೋತಿಃ' ಮೊದಲಾದ ಶಬ್ದಗಳ ನಿಷ್ಪತ್ತಿ ೨೬

ತತ್ತ್ವಪ್ರಕಾಶಿಕಾ

ಎಲ್ಲವೂ ಬ್ರಹ್ಮಪರವಾದರೆ ಕರ್ಮಾಚರಣೆ ಎಂತು ? ೨೭

ಕರ್ಮಕಾಂಡವು ಕರ್ಮಪರವಾದರೆ ಸರ್ವಶಬ್ದವಾಚ್ಯತ್ವ ಎಂತು ? ೨೭

ಅಧಿಕರಣದ ವಿಷಯಾದಿಗಳು ೨೮

ಕರ್ಮಾಚರಣೆಗಳೇ ನಿಂತು ಹೋಗುತ್ತದೆ ೨೮

ಕರ್ಮಾಚರಣೆಗೆ ಬೇರೆ ಪ್ರಮಾಣವಿಲ್ಲ ೨೯

ಹಾಗೆಂದು ಕರ್ಮಪರತ್ವ ಒಪ್ಪಿದರೆ ಗುಣಪೂರ್ಣತ್ವವು ಅಸಿದ್ಧವಾಗುತ್ತದೆ ೨೯

ರೂಢಿಯಂತೇ ಯೋಗವೂ ಕೂಡ ಪರಮಾತ್ಮನಲ್ಲಿಲ್ಲ ೨೯

ಬ್ರಹ್ಮಪರವಾದಲ್ಲಿ ಶಬ್ದಗಳ ನಿಷ್ಪತ್ತಿಯೂ ನಿಂತುಹೋಗುತ್ತವೆ ೩೦

ನಿಷ್ಪತ್ತಿಗಾಗಿ ಅನ್ಯಪರತ್ವವನ್ನು ಒಪ್ಪಿದರೆ ಪುನಃ ಅದೇ ತೊಂದರೆ ೩೦

ಲಕ್ಷಣಾವೃತ್ತಿಯನ್ನು ಮಾತ್ರ ಒಪ್ಪಬೇಕಾಗುತ್ತದೆ ೩೧

ಸರ್ವಶಬ್ದಸಮನ್ವಯವನ್ನು ಕೈ ಬಿಡುವುದೇ ಲೇಸು ೩೧

ಸಿದ್ಧಾಂತ ಸ್ಥಾಪನೆ ೩೧

ಏನೆಂದು ಅಧ್ಯಯನ ಮಾಡುತ್ತಾರೆ ! ೩೨

ಪರಮಾತ್ಮನಲ್ಲಿ ಯೋಗವೃತ್ತಿಯಿಂದಲೇ ಅಧ್ಯಯನ	೩೨
'ತಸ್ಮಾಚ್ಛತರ್ಚಿನ್' ಎಂಬ ಶ್ರುತಿಯ ಅಭಿಪ್ರಾಯ	೩೨
ಪರಮಾತ್ಮನೇ 'ಶತರ್ಚಿ'	೩೨
ಪರಮಾತ್ಮನಲ್ಲಿ ವಿದ್ವದ್ಬೂಧಿಸಹಿತವಾದ ಯೋಗ	೩೩
ಸರ್ವಶಬ್ದಸಮನ್ವಯಕ್ಕೆ ಯಾವುದೇ ಬಾಧಕವಿಲ್ಲ	೩೩
ಸೂತ್ರಕಾರರೇಕೆ ವಸಂತ ಶಬ್ದವನ್ನು ಬಿಟ್ಟರು ?	೩೩
ಧ್ವನಿಯಿಂದಲೂ ಶ್ರೀಹರಿಯೇ ವಾಚ್ಯ	೩೪
ಭಾವದೀಪ	
ಅಧಿಕರಣದ ಉಪಾಧಿ	೩೫
ಈ ಅಧಿಕರಣ ಏಕೆ ?	೩೫
ಅಧಿಕರಣವು ಸಾರ್ಥಕ	೩೬
ಪದ, ವರ್ಣ, ಸ್ವರಗಳ ಸಮನ್ವಯಕ್ಕಾಗಿ ಈ ಅಧಿಕರಣ ಹೊರಟಿದೆ	೩೬
'ಸರ್ವ' ಎಂಬುದು ಅಧಿಕರಣದ ಉಪಾಧಿ	೩೭
ಹಿಂದಿನ ಅಧಿಕರಣದ ಭಾಷ್ಯವಾಕ್ಯವನ್ನು ಇಲ್ಲೂ ಯೋಜನೆ ಮಾಡಬೇಕು	೩೭
ಕರ್ಮಕ್ರಮಾದಿ ಇತ್ಯಾದಿ ಭಾಷ್ಯಕ್ರಮದ ತಾತ್ಪರ್ಯ	೩೭
ಸಂಗತಿಪರ ಭಾಷ್ಯವು ಪೂರ್ವಪಕ್ಷ ಪರವೂ ಹೌದು	೩೮
'ಕರ್ಮಕ್ರಮಾದಿ ವಿರೋಧಾತ್' ಎಂಬ ಭಾಷ್ಯಕ್ಕೆ ವ್ಯಾಖ್ಯಾನ	೩೮
ಅಧಿಕಾರಿ, ನಿಯೋಜ್ಯ, ಯಜಮಾನ ಇವುಗಳ ಅರ್ಥ	೩೮
ಪ್ರಸಿದ್ಧಪದದಿಂದ ಪೂರ್ವಪಕ್ಷವು ಸೂಚಿತ	೩೯
ಶ್ರೀಹರಿಯಲ್ಲಿ ರೂಢಿ ಒಪ್ಪಬಹುದೇ?	೩೯
ಸಕಲಗುಣಪರಿಪೂರ್ಣತ್ವಕ್ಕೆ ಸಕಲಶಬ್ದಸಮನ್ವಯವು ಕಾರಣವಾಯಿತು	೩೯
'ವ್ಯತ್ತತ್ತೇರಪ್ಯಶಕ್ಯತಾ' ಎಂಬುದರ ವ್ಯಾಖ್ಯಾನ	೪೦
'ಜ್ಯೋತಿಷಾಂ ಸ್ತೋಮಃ' ಎಂದೇಕೆ ಹೇಳಿಲ್ಲ ?	೪೦
'ಜ್ಯೋತಿಃ' ಎಂಬ ಪದವು ಜ್ಯೋತಿಷ್ಟೋಮಾರ್ಥಕ	೪೦
ಪುನರುಕ್ತಿಯ ಪರಿಹಾರ	೪೧
ರೂಢಿಗಿಂತಲು ಯೋಗವು ದುರ್ಬಲ	೪೧
'ಸ ಏವ' ಎಂಬ ಭಾಷ್ಯದ ವ್ಯಾಖ್ಯಾನ	೪೧
'ತಾ ವಾ ಏತಾಃ' ಎಂಬ ಭಾಷ್ಯದ ವ್ಯಾಖ್ಯಾನ	೪೨
'ತಥಾ' ಎಂಬ ಪದವನ್ನು ಅಧ್ಯಾಹಾರ ಮಾಡಬೇಕು	೪೨
ಅಧೀಯತೇ ಎಂಬುದರ ನಿಷ್ಪತ್ತಿ	೪೨
'ಉಪಕ್ರಮಾತ್' ಎಂಬ ಸೂತ್ರ ಭಾಗಕ್ಕೆ ವ್ಯಾಖ್ಯಾನ	೪೩

'ಶರ್ಚ' ಶ್ರುತಿಯು ಅಂತಿಮಪ್ರಾಣಾಧಿಕರಣದಲ್ಲಿದೆ ೪೩
'ಆಚಕ್ಷತೇ' ಎಂಬುದರ ಸ್ವಾರಸ್ಯ ೪೩
ವಿದ್ವದ್ರೂಢಿಯನ್ನು ವಿವಕ್ಷಿಸಲು ಕಾರಣ ೪೪
ಅಪ್ಯಭ್ಯುಪೇತ್ಯವಾದ ೪೪
ಶ್ರುತಿಯಿಂದಲೇ ಸಕಲಶಬ್ದ ವಾಚ್ಯತ್ವ ೪೫
'ವಸಂತೇ ಉಪಕ್ರಮಾತ್' ಎಂದೇಕೆ ಸೂತ್ರವಿಲ್ಲ? ೪೫
ಋಷಿವಾಚಕಶಬ್ದಗಳಷ್ಟೇ ಹರಿಪರವಲ್ಲ ೪೫
ಪ್ರಥಮಾಂತವಾಗಿ ಏಕೆ ವ್ಯಾಖ್ಯಾನ ಮಾಡಿರುವರು ? ೪೬
ಅಲ್ಪಜ್ಞರಿಗೂ ಕೂಡ ವಿಷ್ಣುಗುಣ ಬೋಧಕಗಳು ೪೭
ಬ್ರಹ್ಮಸೂತ್ರ ೪೭
'ಕಲ್ಪನೋಪದೇಶಾಚ್ಚ ಮಧ್ವಾದಿವದವಿರೋಧಃ' ಎಂಬ ಸೂತ್ರದ ವ್ಯಾಖ್ಯಾನ ೪೭
ಬ್ರಹ್ಮಸೂತ್ರಭಾಷ್ಯ ೪೮
ಪರಮಾತ್ಮ ಪ್ರತಿಪಾದ್ಯನಾದರೂ ಲೌಕಿಕಕರ್ಮಗಳಿಗೆ ಚ್ಯುತಿ ಇಲ್ಲ ೪೮
ಸತ್ತರ್ಕದೀಪಾವಳಿ ೪೯
ಛಾಂದೋಗ್ಯದಲ್ಲಿ ಮಧುವಿದ್ಯೆಯಂತೆ ೪೯
ಶ್ರೇಷ್ಠನಾದ ಮಹಾವಿಷ್ಣುವೇ ಸರ್ವಶಬ್ದಾರ್ಥ ೫೫
ಅನೇಕ ವೃತ್ತಿಪ್ರಭೇದಗಳಿಂದ ವಿರೋಧ ಪರಿಹಾರ ೫೬
ಬಾಲರೂಢಿಯಿಲ್ಲದ ಕಾರಣ ಕಲ್ಪನೋಪದೇಶ ೫೬
ತತ್ತ್ವಪ್ರದೀಪ ೫೭
ಕರ್ಮಕ್ರಮಾದಿಗಳ ವಿರೋಧಪರಿಹಾರ ೫೭
ಲೌಕಿಕಪದಾರ್ಥಗಳು ಮುಖ್ಯವೃತ್ತಿಯಿಂದ ಪ್ರತಿಪಾದ್ಯ ೫೮
ಪರಮಮುಖ್ಯವೃತ್ತಿಯಿಂದ ವಿಷ್ಣುವೇ ಪ್ರತಿಪಾದ್ಯ ೫೮
ತತ್ತ್ವಪ್ರಕಾಶಿಕಾ ೫೯
ವೃತ್ತಿಯ ಸಮರ್ಥನೆಗಾಗಿ ಈ ಸೂತ್ರ ೫೯
ಕರ್ಮಕ್ರಮದ ವಿರೋಧವೂ ಇಲ್ಲ, ವೃತ್ತಿಯೂ ಕೂಡುತ್ತದೆ ೬೦
ಈ ವಿಷಯದಲ್ಲಿ 'ಅಸೌ ವಾ ಆದಿತ್ಯೋ ದೇವಮಧು' ಎಂಬ ಶ್ರುತಿಯ ಉದಾಹರಣೆ ೬೦
ಈಶ್ವರನಲ್ಲಿ ಮಹಾಯೋಗವೃತ್ತಿಯಿಂದ ಸಮನ್ವಯ ೬೧
ಅನೇಕ ಬಗೆಯ ವೃತ್ತಿಗಳು ೬೧
'ಪ್ರಾಣ ಋಚ ಇತ್ಯೇವ ವಿದ್ಯಾತ್' ಎಂಬ ಶ್ರುತಿಯ ಆಧಾರ ೬೧
ಪರಮಾತ್ಮನಲ್ಲಿರುವ ಶಬ್ದಗಳು ಸಂಕೇತವಲ್ಲ ೬೨
ಸೂತ್ರದ 'ಚ' ಶಬ್ದಾರ್ಥ ೬೨

ಏಳು ಬಗೆಯ ವೃತ್ತಿಗಳ ಲಕ್ಷಣ ೭೨
ಯೋಗವೃತ್ತಿ ೭೨
ಯೋಗರೂಢಿ ೭೩
ಉಪಚಾರ ೭೩
ಲಕ್ಷಣಾ ೭೩
ಲಕ್ಷಣಾವೃತ್ತಿಗೆ ಉದಾಹರಣೆ ೭೪
ಎರಡು ಪ್ರಕಾರದ ವೃತ್ತಿಗಳು ಮಾತ್ರ ದೇವರಲ್ಲಿ ೭೪
ಮಹಾಯೋಗರೂಢಿಗೆ ಉದಾಹರಣೆ ೭೫
ಈಗ ಸಮನ್ವಯವು ನಿರಾತಂಕ ೭೫
ಭಾವದೀಪ
ಆಕಾಂಕ್ಷಾಕ್ರಮದಿಂದ ವ್ಯಾಖ್ಯಾನ ೭೬
ಭಾಷ್ಯದ ಮಾತು ಉಪಲಕ್ಷಣ ೭೬
'ತಾಃವಾ ಏತಾ' ಎಂಬ ಶ್ರುತ್ಯರ್ಥ ೭೬
ಹೇತುವನ್ನು ಪರಾಮರ್ಶಿಸಬೇಕು ೭೭
ನ್ಯಾಯವಿವರಣದ ಮಾತೂ ಕೂಡ ಉಪಲಕ್ಷಣ ೭೭
ಪರಮಾತ್ಮನಲ್ಲಿರುವ ಪ್ರವೃತಿನಿಮಿತ್ತವು ಅತ್ಯಧಿಕ ೭೮
ಸೂತ್ರದ 'ಚ' ಶಬ್ದವು ಅವಧಾರಣಾರ್ಥಕ ೭೮
ಯಾವುದನ್ನು ಸಮುಚ್ಚಯ ಮಾಡಬೇಕು ? ೭೮
ವೃತ್ತಿಗಳು ಒಂಬತ್ತು ೭೯
ಅನುವ್ಯಾಖ್ಯಾನದಲ್ಲಿ ರೂಢಿಯ ಬಗ್ಗೆ ೭೯
ಇನ್ನೂ ಹೆಚ್ಚಿನ ವಿಚಾರ ತರ್ಕತಾಂಡವದಲ್ಲಿ ೭೯
ಮಹಾರೂಢಿಯು ಶ್ರೀಹರಿಯಲ್ಲಿ ಏಕಿಲ್ಲ ? ೮೦
ಮಹಾಯೋಗ ಹಾಗೂ ಮಹಾರೂಢಿಯೋಗಗಳಿಗೆ ಸಾಂಕರ್ಯವಿಲ್ಲ ೮೦
ತಂತ್ರದೀಪಿಕಾ
ಸೂತ್ರದ ಪ್ರತಿಪದಾರ್ಥ ೮೧
'ಕಲ್ಪನೋಪದೇಶಾತ್' ಎಂಬ ಸೂತ್ರದ ಪ್ರತಿಪದಾರ್ಥ ೮೨
ಅದ್ವೈತಮತ ಹಾಗೂ ರಾಮಾನುಜಮತದಲ್ಲಿ ಜ್ಯೋತಿರುಪಕ್ರಮಾಧಿಕರಣ ೮೫

ನ ಸಂಖ್ಯೋಪಸಂಗ್ರಹಾಧಿಕರಣ

ಬ್ರಹ್ಮಸೂತ್ರ

'ನಸಂಖ್ಯೋಪಸಂಗ್ರಹಾದಪಿ ನಾನಾಭಾವಾದತಿರೇಕಾಚ್ಚ' ಎಂಬ ಸೂತ್ರ ವ್ಯಾಖ್ಯಾನ ೯೪

ಬ್ರಹ್ಮಸೂತ್ರಭಾಷ್ಯ

ಒಬ್ಬನೇ ಪರಮಾತ್ಮನಲ್ಲಿ ಬಹುತ್ವ ಸಂಖ್ಯೆ ಹಾಗೂ ಆಧಾರಾಧೇಯಭಾವವು ಯುಕ್ತವಾಗುತ್ತವೆ ೯೫

'ನಾನಾಭಾವಾತ್' ಎಂಬ ಹೇತುವಿನ ವ್ಯಾಖ್ಯಾನ ೯೬

ಸತ್ತರ್ಕದೀಪಾವಳಿ

ಏಕತ್ವವಿರುವವನಲ್ಲಿ ಬಹುತ್ವ ಹೇಗೆ ? ೯೭

ಒಬ್ಬನಿಗೆ ಅನೇಕ ರೂಪಗಳಿವೆ ೯೭

ಪಂಚಭೂತಗಳ ಬಂಧನದ ಮೋಚನಕ್ಕೆ ಉಪಾಯ ೯೮

ತತ್ತ್ವಪ್ರದೀಪ

ವಿಶೇಷಬಲದಿಂದ ಒಬ್ಬನೇ ಪರಮಾತ್ಮನಲ್ಲಿ ಅನೇಕತ್ವ ಸಂಖ್ಯೆ ಹಾಗೂ ಆಧಾರಾಧೇಯಭಾವ ೯೮

ತತ್ತ್ವಪ್ರಕಾಶಿಕಾ

ಪಂಚ ಜನಾದಿ ಶಬ್ದಸಮನ್ವಯಕ್ಕೆ ಎರಡು ಲಿಂಗಗಳು ೧೦೦

ವಾಜಸನೇಯ ಶಾಖಾದಲ್ಲಿ ವಿಷಯವಾಕ್ಯ ೧೦೧

ಒಬ್ಬನಾದ ಪ್ರೇಹರಿ ಐದು ಮಂದಿ ಆಗುವನೇ ? ೧೦೧

ಅಥವಾ ಆ ಐದು ಮಂದಿ ಬೇರೆಯವರೋ ? ೧೦೨

'ಏಕಮೇವಾದ್ವಿತೀಯಮ್' ಎಂಬ ಶ್ರುತಿ ಪರಮಾತ್ಮನನ್ನು ಒಬ್ಬನೇ ಎನ್ನುತ್ತಿದೆ ೧೦೨

ಒಬ್ಬನಲ್ಲಿ ಬಹುತ್ವ ಹೇಗೆ ? ೧೦೨

ತದಧೀನತ್ವನ್ಯಾಯವು ಉಪಯೋಗವಾಗುವುದಿಲ್ಲ ೧೦೩

ದುಃಖೀ ಬದ್ಧಾದಿ ಶಬ್ದಗಳಂತೆ ಇದಲ್ಲ ೧೦೩

ಏಕೆಂದರೆ ಇದಕ್ಕೆ ಪ್ರಮಾಣವಿಲ್ಲ ೧೦೩

'ಸರ್ವೇ ವೇದಾಃ' ಎಂಬ ಶ್ರುತಿಯೂ ಕೂಡ ಪ್ರಮಾಣವಲ್ಲ ೧೦೪

ದ್ವಿತ್ವಕ್ಕೆ ಆಶ್ರಯನಾದರೂ ಪಂಚತ್ವಕ್ಕೆ ಆಶ್ರಯನಾಗಲಾರ ೧೦೪

ಏಕೆಂದರೆ ಪ್ರಮಾಣವಿಲ್ಲ ೧೦೪

ಆಧಾರನಾದವನು ಆಧೇಯನಾಗಲಾರ ೧೦೫

ವಿರುದ್ಧವಾದ ಸ್ವಾಧಾರತ್ವ ಪರಮಾತ್ಮನಲ್ಲಿ ಹೇಗೆ ? ೧೦೫

ಸಮನ್ವಯ ಸೂತ್ರದ ಸಕಲಶಬ್ದವಾಚ್ಯತ್ವವನ್ನು ಕೈಬಿಡಬೇಕು ೧೦೫

ಸಿದ್ಧಾಂತ ಸ್ಥಾಪನೆ ೧೦೫

ಒಬ್ಬನನ್ನು ಐದುಮಂದಿ ಎನ್ನಬಹುದು ೧೦೬

ಆಧಾರನಾದ ಪ್ರೇಹರಿ ಆಧೇಯನೂ ಆಗಿದ್ದಾನೆ ೧೦೬

ಸಕಲಶಬ್ದವಾಚ್ಯತ್ವವು ಸಿದ್ಧವಾಯಿತು ೧೦೭
ಭಾವದೀಪ
ನ್ಯಾಯವಿವರಣದಲ್ಲಿ ಸೂಚಿಸಿದ ಅಧಿಕರಣದ ಲಿಂಗ ೧೦೭
ಬಾಹುಲ್ಯವು ಅಧಿಕರಣದ ಉಪಾಧಿ ೧೦೮
ಆನುಮಾನಿಕಾಧಿಕರಣದ ಭಾಷ್ಯದಲ್ಲಿ ಸಂಗತಿ ಸೂಚನೆ ೧೦೮
ಬೃಹದಾರಣ್ಯಕದ ಆರನೇ ಅಧ್ಯಾಯದ ವಿಷಯವಾಕ್ಯ ೧೦೮
ಪುನರುಕ್ತಿಯ ಪರಿಹಾರ ೧೦೯
ರಾಜನಲ್ಲಿ ವ್ಯಭಿಚಾರ ಹೇಗೆ ? ೧೦೯
ತಾತ್ಪರ್ಯಚಂದ್ರಿಕೆಯಲ್ಲಿ ಉತ್ತರ ೧೧೦
ಅನೇಕ ಪ್ರಮಾಣಗಳ ಆಧಾರ ೧೧೧
ಗುಹಾಧಿಕರಣದಿಂದ ಇದು ಗತಾರ್ಥವಲ್ಲ ೧೧೧
ಎರಡನೆಯ ಸೂತ್ರ ವ್ಯಾವರ್ತ್ಯವಾದ ಪೂರ್ವಪಕ್ಷ ೧೧೧
ನ್ಯಾಯವಿವರಣದ ಪ್ರಕಾರ ಮತ್ತೊಂದು ವ್ಯಾಖ್ಯಾನ ೧೧೨
ಆಧಾರನಾಗಿದ್ದಾನೆನ್ನಲು ಪ್ರಮಾಣ ೧೧೨
ಉತ್ಪತ್ತಿತತ್ವ ದೋಷವಿಲ್ಲ ೧೧೨
ಬಹುತ್ವಸಂಖ್ಯೆ ಪರಮಾತ್ಮನಲ್ಲಿ ಯುಕ್ತವಾಗಿದೆ ೧೧೩
'ನಾನಾಭಾವಾತ್ ನ ವಿರೋಧಃ' ಎಂಬ ಭಾಷ್ಯಕ್ಕೆ ವ್ಯಾಖ್ಯಾನ ೧೧೩
'ಆಕಾಶಾದಿಷು' ಎಂಬ ಭಾಷ್ಯಕ್ಕೆ ಸಾರ್ಥಕ್ಯ ೧೧೩
'ನಚ ಯಸ್ಮಿನ್' ಇತ್ಯಾದಿ ಟೀಕೆಗೆ ಪೀಠಿಕೆ ೧೧೪
ನ್ಯಾಯವಿವರಣದ ವಾಕ್ಯಕ್ಕೂ ಸಂಗತಿ ೧೧೪
ಬ್ರಹ್ಮಸೂತ್ರ
'ಪ್ರಾಣಾದಯೋ ವಾಕ್ಯಶೇಷಾತ್' ಎಂಬ ಸೂತ್ರದ ವ್ಯಾಖ್ಯಾನ ೧೧೫
ಬ್ರಹ್ಮಸೂತ್ರಭಾಷ್ಯ
ಭಗವಂತನ ಐದುರೂಪಗಳು ಪ್ರತಿಪಾದ್ಯ ೧೧೫
ಪಂಚ ಜನರು-ಭಗವಂತನ ಐದುರೂಪಗಳು ೧೧೬
ಸತರ್ಕದೀಪಾವಳಿ
ಲೀಲೆಗೊಳ್ಳರ ಸ್ವಾಧೀನತ್ವ ೧೧೭
ತತ್ವಪ್ರದೀಪ
ವಿಷ್ಣುವೇ 'ಪಂಚ ಜನಾ' ೧೧೭
ತತ್ವಪ್ರಕಾಶಿಕಾ
'ನಾಮಾನಿ ಸರ್ವಾಣಿ' ಎಂಬ ಶ್ರುತಿಯು ಸಾವಕಾಶವಲ್ಲವೇ? ೧೧೮

ಶ್ರೀಹರಿಯಲ್ಲಿ ಬಹುತ್ವವಿದ್ದರೂ ಪಂಚ ಜನ ಎನಿಸಲಾರ ೧೧೮
ಪಂಚ ಜನರ ಸ್ವರೂಪ ೧೧೯
ಐದು ಜನರು ಪ್ರಾಣಾದಿಗಳು ೧೧೯
ಅವನಲ್ಲಿ ಐದುರೂಪಗಳಿಂದ ಶ್ರೀಹರಿಯೇ ನೆಲಸಿರುವನು ೧೧೯

ಭಾವದೀಪ

'ವಿಶೇಷ ಹೇತು' ಹೇಳುವುದಕ್ಕಾಗಿ ಈ ಸೂತ್ರ ೧೨೦
'ಸರ್ವೇ ವೇದಾ' ಎಂಬ ಶ್ರುತಿಯನ್ನೂ ವಿವಕ್ಷಿಸಬೇಕು ೧೨೦
ಸೂತ್ರವು ಪಂಚ ಜನರ ಸ್ವರೂಪ ಹೇಳಲು ಹೇಗೆ ಸಾಧ್ಯ ? ೧೨೦
ಷಷ್ಠೀವಿಭಕ್ತ್ಯಂತಪದದಿಂದ ಪಂಚ ಜನರನ್ನು ವಿವಕ್ಷಿಸಬಾರದು ೧೨೧
ಬೃಹದಾರಣ್ಯಕದ ವಾಕ್ಯಶೇಷವು ಗ್ರಾಹ್ಯ ೧೨೧

ಬ್ರಹ್ಮಸೂತ್ರ

'ಜ್ಯೋತಿಷೈಕೇಷಾಮಸತ್ಯನ್ನೇ' ಎಂಬ ಸೂತ್ರದ ವ್ಯಾಖ್ಯಾನ ೧೨೨

ಬ್ರಹ್ಮಸೂತ್ರಭಾಷ್ಯ

ಕಾಣ್ವಶಾಖೆಯಲ್ಲಿಯೂ ಕೂಡ ಭಗವಂತನ ಐದುರೂಪಗಳೇ ಹೇಳಲ್ಪಟ್ಟವೆ ೧೨೨

ತತ್ತ್ವಪ್ರದೀಪ

ಅನ್ನದ ಬದಲು ಜ್ಯೋತಿ ೧೨೩

ತತ್ತ್ವಪ್ರಕಾಶಿಕಾ

ವಿಷ್ಣು ಪಂಚ ಜನ ಎನಿಸಲಾರ ಎನ್ನಲು ಅಧಿಕಾಕ್ಷೇಪ ೧೨೪
ಮಾಧ್ಯಂದಿನಶಾಖೆಯು ಐದುರೂಪಗಳನ್ನು ಹೇಳಿದೆ ೧೨೫
ವಾಕ್ಯಶೇಷದ ಬಲವೇ ಇಲ್ಲಿ ಮುಖ್ಯ ೧೨೫
ಅನ್ನ ಎಂಬ ಭಗವದ್ರೂಪವನ್ನು ಸೇರಿಸಬೇಕು ೧೨೬

ಭಾವದೀಪ

ಟೀಕೆಗೂ ಭಾಷ್ಯಕ್ಕೂ ಹೇಗೆ ಸಂಗತಿ ? ೧೨೭
ಮಾಧ್ಯಂದಿನ ಶಾಖೆ ಹಾಗೂ ಕಾಣ್ವಶಾಖೆಗಳಲ್ಲಿ ಹೇಳಿದ ರೂಪವು ಬೇರೆ ಬೇರೆಯಲ್ಲವೇ? ೧೨೭
ಉಪಾಸನಾಧಿಕಾರಿಗಳು ಮಾತ್ರ ಬೇರೆ ೧೨೮
ಪರಮಮುಖ್ಯವೃತ್ತಿಯಿಂದ ಶ್ರೀಹರಿಯೇ ಪಂಚಜನಾ ೧೨೮

ತಂತ್ರದೀಪಿಕಾ

ಬಹುತ್ವವಾಚಕ ಶಬ್ದಗಳ ಸಮನ್ವಯಕ್ಕಾಗಿ ಈ ಅಧಿಕರಣ ೧೨೯
ಭಗವಂತನೇ ಐದು ರೂಪಗಳಾಗಿದ್ದಾನೆನ್ನಲು ಕಾರಣ ೧೩೧
ಕಾಣ್ವಶಾಖೆಯಲ್ಲಿ ಅನ್ನ ಎಂಬ ರೂಪವೇ ಇಲ್ಲವಲ್ಲ ? ೧೩೨
ಅದ್ವೈತಮತ ಹಾಗೂ ರಾಮಾನುಜಮತದಲ್ಲಿ ನ ಸಂಖ್ಯೋಪಸಂಗ್ರಹಾಧಿಕರಣ ೧೩೪

ಆಕಾಶಾಧಿಕರಣ

ಬ್ರಹ್ಮಸೂತ್ರ ೧೪೪
'ಕಾರಣತ್ವೇನ ಚಾऽಕಾಶಾದಿಷು ಯಥಾವ್ಯಪದಿಷ್ಟೋಕ್ತೇಃ' ಎಂಬ ಸೂತ್ರ ವ್ಯಾಖ್ಯಾನ ೧೪೪
ಬ್ರಹ್ಮಸೂತ್ರಭಾಷ್ಯ
ಅವಾಂತರಕಾರಣನಾಗಿದ್ದಾನೆನ್ನಲು ಆಕಾಶಶಬ್ದ ಸಮನ್ವಯ ೧೪೫
ವಿಷ್ಣು ಆಕಾಶನೆನ್ನಲು ಕಾರಣ ನಿರೂಪಣೆ ೧೪೬
ಸತ್ತರ್ಕದೀಪಾವಳಿ
ಸ್ವತಂತ್ರನಲ್ಲಿ ಕಾರ್ಯತ್ವ ಹೇಗೆ ? ೧೪೭
'ಅನುಕ್ತಾವಪಿ ಮುಖ್ಯಾರ್ಥಸಂಭವೇ ಕಿಮುಕ್ತೌ' ೧೪೮
ತತ್ತ್ವಪ್ರದೀಪ
ಆಕಾಶಶಬ್ದದಿಂದ ವಿಷ್ಣುವು ಹೇಗೆ ಪ್ರತಿಪಾದ್ಯನಾಗುವನು ? ೧೪೯
ಅವಾಂತರಕಾರಣನೂ ಆಗಿರುವುದರಿಂದ ಆಕಾಶನೆನಿಸುವನು ೧೫೦
ತತ್ತ್ವಪ್ರಕಾಶಿಕಾ
'ಉತ್ಪತ್ತಿಮತ್ತ್ವ' ಎಂಬ ಲಿಂಗದಿಂದ ಶಬ್ದಸಮನ್ವಯ ೧೫೧
ಸಕಲಶಬ್ದಗಳ ನಡುವೆ ಆಕಾಶಶಬ್ದವೂ ಸೇರಿದೆ ೧೫೧
ಅಧಿಕರಣದ ವಿಷಯವಾಕ್ಯ ೧೫೨
ಆಕಾಶ ಎಂದರೆ ವಿಷ್ಣುವೋ? ಬೇರೆ ಪದಾರ್ಥವೋ? ೧೫೨
ಆತ್ಮನಿಂದ ಹುಟ್ಟಿದ್ದು ಆಕಾಶ ೧೫೩
ಒಬ್ಬನಲ್ಲಿಯೇ ಕಾರ್ಯಕಾರಣಭಾವ ವಿರುದ್ಧ ೧೫೩
ತದಧೀನತ್ವಲಿಂಗದಿಂದ ವಿಷ್ಣುವಿನಲ್ಲಿ ಕೂಡುವುದಿಲ್ಲ ೧೫೩
ಪೂರ್ವಪಕ್ಷದ ಉಪಸಂಹಾರ ೧೫೩
ಸಿದ್ಧಾಂತ ಸ್ಥಾಪನೆ ೧೫೪
ಶ್ರೀಹರಿಯು ಅವಾಂತರಕಾರಣನೂ ಹೌದು ೧೫೪
ವಿಷ್ಣುವಿನಲ್ಲಿ ಕಾರ್ಯಕಾರಣಭಾವಕ್ಕೆ ವಿರೋಧವಿಲ್ಲ ೧೫೫
ಪ್ರಮಾಣದ ಆಧಾರದಿಂದ ಅವಾಂತರಕಾರಣತ್ವದ ಸಮರ್ಥನೆ ೧೫೫
ಅದಕ್ಕಾಗಿ ಆಕಾಶಶಬ್ದ ಸಮನ್ವಯ ೧೫೬
ಅವಾಂತಕಾರಣನೆನ್ನಲು ವಿಶೇಷ ಕಾರಣ ೧೫೬
ಸರ್ವಶಬ್ದಸಮನ್ವಯವು ಸಮಂಜಸವಾಯಿತು ೧೫೭
ಭಾವದೀಪ
ನ್ಯಾಯವಿವರಣದ ವ್ಯಾಖ್ಯಾನ ೧೫೮

ಈ ಅಧಿಕರಣ ಪುನಃ ಏಕೆ ? ೧೫೮
'ವಿರೋಧಃ ಕಾರ್ಯತತ್ತ್ವದೋಃ' ಎಂಬ ಅನುವ್ಯಾಖ್ಯಾನಕ್ಕೆ ವ್ಯಾಖ್ಯಾನ ೧೫೮
ಅಧಿಕರಣದ ಸಂಗತಿ ವಿಚಾರ ೧೫೯
'ತದಧೀನತ್ವಾತ್ ಅರ್ಥವತ್' ಎಂಬ ಸೂತ್ರದಿಂದ ಪುನರುಕ್ತಿ ಇಲ್ಲ ೧೬೦
ಪೂರ್ವಪಕ್ಷಕ್ಕೆ ಪ್ರಾಬಲ್ಯ ಸಮರ್ಥನೆ ೧೬೦
'ಆತ್ಮನಃ ಆಕಾಶಃ ಸಂಭೂತಃ' ಇತ್ಯಾದಿ ಸೃಷ್ಟಿ ಪ್ರಕರಣಕ್ಕೆ ಏನು ಅರ್ಥ ? ೧೬೦
ಅವಾಂತರ ಕಾರಣ ಎಂದರೇನು ? ೧೬೧
ಪರಮಾತ್ಮನಲ್ಲಿ ಇದು ವಿರುದ್ಧವಲ್ಲವೇ? ೧೬೧
ಅವಾಂತರಕಾರಣನೆಂದು ಸೂತ್ರದಲ್ಲಿ ಹೇಳಿಲ್ಲವಲ್ಲ ? ೧೬೨
ಕಾರಣಶಬ್ದಕ್ಕೆ ಅವಾಂತರಕಾರಣ ಎಂದೇ ಅರ್ಥ ೧೬೨
ಭಾಷ್ಯದಲ್ಲಿರುವ 'ಅಪಿ' ಪದದ ವ್ಯಾಖ್ಯಾನ ೧೬೨
ಅಧ್ಯಾಹೃತ ಹೇತುವಿಗೆ ಅಸಿದ್ಧಿ ಪರಿಹಾರ ೧೬೨
'ಯಥಾ' ಇತ್ಯಾದಿ ಭಾಷ್ಯಕ್ಕೆ ವ್ಯಾಖ್ಯಾನ ೧೬೩
ಕಾರ್ಯಕಾರಣಗಳ ವಿರೋಧ ಪರಿಹಾರ ೧೬೩
ಆಕಾಶಶಬ್ದ ಸಮನ್ವಯಕ್ಕಾಗಿಯೇ ಈ ಸೂತ್ರ ಹೊರಟಿದೆ ೧೬೪
ನಾಮಸಮನ್ವಯಕ್ಕಾಗಿ ಈ ಅಧಿಕರಣ ೧೬೪
ಹಿಂದಿನ ಆಕ್ಷೇಪಕ್ಕೆ ಉತ್ತರ ೧೬೫
'ಯತ್ತು ವಿಶೇಷಂ ಚ' ಎಂಬ ಟೀಕೆಗೆ ಪೀಠಿಕೆ ೧೬೫

ತಂತ್ರದೀಪಿಕಾ

ಅವಾಂತರ ಕಾರಣತ್ವವನ್ನು ಹೇಳುವ ಮೂಲಕ ನಾಮಾತ್ಮಕ ಶಬ್ದದ ಉದ್ದೇಶವೂ ಇದೆ ೧೬೬
ಅದ್ವೈತಮತ ಹಾಗೂ ರಾಮಾನುಜಮತದಲ್ಲಿ ಆಕಾಶಾಧಿಕರಣ ೧೬೯

ಸಮಾಕರ್ಷಾಧಿಕರಣ

ಬ್ರಹ್ಮಸೂತ್ರ

'ಸಮಾಕರ್ಷಾತ್' ಎಂಬ ಸೂತ್ರ ವ್ಯಾಖ್ಯಾನ ೧೭೬

ಬ್ರಹ್ಮಸೂತ್ರಭಾಷ್ಯ

ಪರಮಾತ್ಮ ಪ್ರತಿಪಾದಕ ಶಬ್ದಗಳಿಂದಲೇ ಲೋಕವ್ಯವಹಾರ ಮಾಡಬಹುದು ೧೭೭
ಲೋಕವ್ಯವಹಾರಕ್ಕೆ ಚ್ಯುತಿಯಿಲ್ಲ ೧೭೮
ಪರಮಾತ್ಮ ಪ್ರತಿಪಾದಕವಾದ ಶಬ್ದಗಳಿಂದಲೇ ವ್ಯವಹಾರ ೧೭೮

ಸತ್ತರ್ಕದೀಪಾವಳಿ

ಮಹಾಸಮನ್ವಯದ ದಡ ತಲುಪಿದ್ದಾಯಿತು ೧೭೯

ಅನ್ಯಥಾನುಪಪತ್ತಿ ಪ್ರಮಾಣದಿಂದ ಲೌಕಿಕಾರ್ಥಪ್ರತಿಪಾದ್ಯತ್ವವನ್ನು ಒಪ್ಪಬೇಕಲ್ಲವೇ? ೧೭೯

'ಲೋಕವೇದಾನುಸಾರತಃ' ಎಂಬ ವಿಶೇಷಣದ ಬಗ್ಗೆ ಚಿಂತನೆ ೧೮೦

ತತ್ತ್ವಪ್ರದೀಪ

ಜಗತ್ತಿನಲ್ಲಿ ಎಷ್ಟುವಿನ ಶಬ್ದಗಳ ಸಮಾಕರ್ಷ ೧೮೧

ಅವ್ಯವಸ್ಥೆಯ ಪರಿಹಾರ ೧೮೧

ತತ್ತ್ವಪ್ರಕಾಶಿಕಾ

ಎಲ್ಲ ಶಬ್ದಗಳೂ ಹರಿಪರವಾದರೆ ವ್ಯವಹಾರ ಹೇಗೆ ? ೧೮೨

ಅನುಪಪತ್ತಿ ಇದ್ದಾಗ ನಿಯಮವನ್ನು ಕೈ ಬಿಡಬೇಕು ೧೮೨

ಅಧಿಕರಣದ ಸಂದೇಹ ೧೮೨

ಲೌಕಿಕ ವ್ಯವಹಾರಕ್ಕೆ ಶಬ್ದಗಳೇ ಇಲ್ಲ ೧೮೩

ಸ್ತಂಭಶಬ್ದವನ್ನು ಘಟದಲ್ಲೇಕೆ ಪ್ರಯೋಗಿಸಬಾರದು ? ೧೮೩

ಶಕ್ತಿವೃತ್ತಿಯೇ ಇಲ್ಲವೆಂದಾಗಬೇಕಾಗುತ್ತದೆ ೧೮೩

ಲೌಕಿಕ ಪದಾರ್ಥಗಳಲ್ಲಿ ಮುಖ್ಯವೃತ್ತಿಯನ್ನು ಒಪ್ಪಿದಂತಾಗುತ್ತದೆ ೧೮೪

ಅನೇಕಾರ್ಥಗಳಲ್ಲಿ ಮುಖ್ಯವೃತ್ತಿಯು ಕೂಡುವುದಿಲ್ಲ ೧೮೪

ಪರಮಾತ್ಮನು ಸಕಲಶಬ್ದವಾಚ್ಯನಾಗಲಾರ ೧೮೫

ಸಿದ್ಧಾಂತ ಸ್ಥಾಪನೆ ೧೮೫

'ಸಮಾಕರ್ಷಾತ್' ಎಂಬ ಸೂತ್ರ ವ್ಯಾಖ್ಯಾನ ೧೮೫

ರೂಢಿವೃತ್ತಿಯಿಂದ ಲೌಕಿಕ ವ್ಯವಹಾರ ೧೮೫

ಮುಖ್ಯವೃತ್ತಿ ಬೇರೆಡೆ ಇಲ್ಲ ೧೮೬

ಪರಮಾತ್ಮನಲ್ಲಿರುವ ಮುಖ್ಯವೃತ್ತಿ ಅತ್ಯಧಿಕ ೧೮೬

ಅಕ್ಷಾದಿ ಶಬ್ದಗಳು ಉದಾಹರಣೆ ಅಲ್ಲ ೧೮೭

ಅಜ್ಞರೂಢಿಯಿಂದ ಲೋಕವ್ಯವಹಾರ ೧೮೭

ವಿಶೇಷವಿಚಾರಕ್ಕಾಗಿ ಈ ಸೂತ್ರ ೧೮೭

ಭಾವದೀಪ

ಸಮಾಕರ್ಷಾಧಿಕರಣವು ಪ್ರತ್ಯೇಕವೇ? ೧೮೮

ಈ ಅಧಿಕರಣಕ್ಕೆ ಅವಸರ ಸಂಗತಿ ೧೮೯

ಈ ಅಧಿಕರಣಕ್ಕೆ ಪ್ರತ್ಯೇಕ ಉಪಾಧಿಯಿದೆ ೧೮೯

ಜ್ಯೋತಿರಧಿಕರಣದ ಉಪಾಧಿಯೇ ಇದಕ್ಕೂ ಉಪಾಧಿ ೧೮೯

ಪಾಠ ಪ್ರಕ್ಷೇಪದ ಬಗ್ಗೆ ೧೯೦
ಆಪಾದದಕ್ಕೆ ಅಸಿದ್ಧಿ ಪರಿಹಾರ ೧೯೦
'ಸಾಕ್ಷಾದಪಿ' ಎಂಬ ಸೂತ್ರದಿಂದ ಗತಾರ್ಥವಲ್ಲ ೧೯೧
'ಸಾಕ್ಷಾದಪ್ಯವಿರೋಧಂ ಜೈಮಿನಿಃ' ಎಂಬ ಸೂತ್ರದಲ್ಲಿ ಸಮನ್ವಯ ಮಾಡಿದ್ದೇನು? ೧೯೧
ಅವ್ಯವಸ್ಥಾ ಪದಕ್ಕೆ ಅರ್ಥ ೧೯೧
ಅನುಮಾನಿಕಸೂತ್ರದಲ್ಲಿ ಸಮನ್ವಯ ಮಾಡಿದ್ದೇನು ? ೧೯೧
ಪುನರುಕ್ತಿಯ ಪರಿಹಾರ ೧೯೨
'ಯೋಗರೂಢ್ಯೋರೇವ' ಎಂಬ ಟೀಕಾವಾಕ್ಯಕ್ಕೆ ಪೀಠಿಕೆ ೧೯೨
ಯೋಗರೂಢಿಗಳೆಂದರೆ ಯಾವುದು ? ೧೯೨
ಮುಖ್ಯವೃತ್ತಿ ಎಂದರೆ ಯಾವುದು ? ೧೯೩
ಸ್ವಾತಂತ್ರ್ಯ ಹಾಗೂ ತದ್ಗತತ್ವ ಇವೆರಡು ಪ್ರವೃತ್ತಿನಿಮಿತ್ತ ೧೯೩
ಭಾಷ್ಯಕ್ಕೆ ವ್ಯಾಖ್ಯಾನ ೧೯೪
'ನಾಮಾನಿ ಏಶ್ವನಿ' ಇತ್ಯಾದಿ ಶ್ರುತಿಗಳ ಆಧಾರ ೧೯೪
ಬೇರೆಡೆ ಇರುವ ಪ್ರವೃತ್ತಿನಿಮಿತ್ತವು ಅತ್ಯಲ್ಪ ೧೯೪
ಹಿಂದಿನ ಸೂತ್ರಗಳಿಂದ ವಿರೋಧವಿಲ್ಲ ೧೯೫
ಮಹಾಯೋಗ ವಿದ್ದದ್ಧೂಢಿಗಳಿಂದ ಪರಮಾತ್ಮನು ಪ್ರತಿಪಾದ್ಯ ೧೯೫

ಬ್ರಹ್ಮಸೂತ್ರ

'ಜಗದ್ವಾಚಿತ್ವಾತ್' ಎಂಬ ಸೂತ್ರದ ವ್ಯಾಖ್ಯಾನ ೧೯೬

ಬ್ರಹ್ಮಸೂತ್ರಭಾಷ್ಯ

ಎಲ್ಲಾ ಶಬ್ದಗಳು ಜಗತ್ತಿನಲ್ಲಿ ಹೇಗೆ ಪ್ರಸಿದ್ಧವಾದವು? ೧೯೬
ಅಜ್ಞರೂಢಿಯಿಂದ ವ್ಯವಹಾರ ೧೯೭

ಸತ್ತರ್ಕದೀಪಾವಳಿ

ಪ್ರಸಿದ್ಧಿಯ ಅನ್ಯಥಾನುಪಪತ್ತಿಯಿಂದ ಜಗದ್ವಾಚಕತ್ವವನ್ನು ಒಪ್ಪಬೇಕಲ್ಲವೇ? ೧೯೭
ಜಗತ್ತಿನಲ್ಲಿ ಶಬ್ದಗಳು ಹೇಗೆ ಪ್ರಸಿದ್ಧವಾದವು ? ೧೯೮

ತತ್ವಪ್ರದೀಪ

ಅಜ್ಞರೂಢಿಯಿಂದ ಲೋಕವ್ಯವಹಾರ ೧೯೮

ತತ್ವಪ್ರಕಾಶಿಕಾ

ಹರಿಪರವಾದ ಶಬ್ದಗಳಿಗೆ ಲೋಕದಲ್ಲಿ ಸಂಕೇತ ಮಾತ್ರ ೧೯೯
ಲೌಕಿಕಾರ್ಥಗಳಲ್ಲಿಯೂ ಮುಖ್ಯಾರ್ಥತ್ವವಿದೆ ೧೯೯
'ಅಗ್ನಿರ್ಮಾಣವಕಃ' ಎಂಬ ದೃಷ್ಟಾಂತವು ಸರಿಯಿಲ್ಲ ೨೦೦

ಮುಖ್ಯಶಬ್ದಕ್ಕೆ ಪರಮಮುಖ್ಯವೃತ್ತಿ ಎಂದರ್ಥ ೨೦೦
ಹೀನವೃತ್ತಿ ವಿಷಯದಲ್ಲಿ ಮಾಣವಕನ ದೃಷ್ಟಾಂತ ೨೦೧
'ಜಗದ್ವಾಚಿತ್ವಾತ್' ಎಂಬ ಸೂತ್ರಕ್ಕೆ ಅರ್ಥ ೨೦೧
ಈ ಶಬ್ದವು ಪ್ರಸಿದ್ಧಾರ್ಥಕ ೨೦೧
ಬ್ರಹ್ಮಸೂತ್ರ
'ಜೀವಮುಖ್ಯಪ್ರಾಣಲಿಂಗಾದಿತಿ ಚೇತ್ ತದ್ ವ್ಯಾಖ್ಯಾತಮ್' ಎಂಬ ಸೂತ್ರ ವ್ಯಾಖ್ಯಾನ ೨೦೨
ಬ್ರಹ್ಮಸೂತ್ರಭಾಷ್ಯ
ಪರಮಾತ್ಮನು ಮಾತ್ರ ಸರ್ವಶಬ್ದವಾಚ್ಯ ೨೦೩
ಮೂರು ಬಗೆಯ ಉಪಾಸನೆ ೨೦೪
ಸತ್ತರ್ಕದೀಪಾವಳಿ
ಜೀವ ಹಾಗೂ ವಾಯುಶಬ್ದಗಳಿಂದಲೂ ವಿಷ್ಣುವೇ ಪ್ರತಿಪಾದ್ಯ ೨೦೪
ಕರ್ಮಾದಿಗಳ ಜ್ಞಾನ ಮೋಕ್ಷಕ್ಕೋಸ್ಕರವಲ್ಲ ೨೦೫
ಯಾವುದನ್ನು ಮುಖ್ಯವಾಗಿ ತಿಳಿಯಬೇಕು ? ೨೦೬
ಮಗನಾದ ಶ್ವೇತಕೇತುವಿಗೆ ಭಗವತ್ತತ್ವದ ಉಪದೇಶ ೨೦೭
ಯೇನ ವಿಜ್ಞಾತೇನ ಸರ್ವಂ ವಿಜ್ಞಾತಂ ಭವತಿ ೨೦೮
ಸರ್ವವಿಜ್ಞಾನವು ಏಕವಿಜ್ಞಾನ ಹೇತುವಾದರೂ ಕೂಡ ವಿರೋಧವಿಲ್ಲ ೨೦೯
ತತ್ವಪ್ರದೀಪ
ಶಬ್ದವಾಚ್ಯತ್ವಕ್ಕೆ ಸ್ವಾತಂತ್ರ್ಯವೇ ಲಿಂಗ ೨೧೯
ತತ್ವಪ್ರಕಾಶಿಕಾ
ಸೂತ್ರದ ಆಕ್ಷೇಪ ಭಾಗಕ್ಕೆ ವ್ಯಾಖ್ಯಾನ ೨೨೦
ಸಕಲಶಬ್ದ ಮುಖ್ಯಾರ್ಥ ವಿಷ್ಣುವಲ್ಲ ೨೨೧
ಜೀವ ಹಾಗೂ ಮುಖ್ಯಪ್ರಾಣರೂ ಕೂಡ ಸಕಲಶಬ್ದವಾಚ್ಯರು ೨೨೧
ನಿಮಿತ್ತವಿದ್ದರೆ ನೈಮಿತ್ತಿಕವ್ಯವಹಾರವೂ ಬರುತ್ತದೆ ೨೨೧
ಸೂತ್ರದ ಪರಿಹಾರಭಾಗಕ್ಕೆ ವ್ಯಾಖ್ಯಾನ ೨೨೨
ಜೀವ ಹಾಗೂ ಮುಖ್ಯಪ್ರಾಣರಲ್ಲಿರುವ ಸಾಮರ್ಥ್ಯ ಭಗವಂತನದ್ದೇ ೨೨೨
ಭಾವದೀಪ
ಪೂರ್ವಪಕ್ಷದ ಫಲ ೨೨೩
ಅನುವ್ಯಾಖ್ಯಾನದಲ್ಲಿ ವಿವಕ್ಷಿಸಿದ ಪ್ರವೃತ್ತಿನಿಮಿತ್ತ ೨೨೩
'ತಜ್ಜೀವ' ಇತ್ಯಾದಿ ವಾಕ್ಯಕ್ಕೆ ವ್ಯಾಖ್ಯಾನ ೨೨೪
ಸರ್ವಪದಕ್ಕೆ ವ್ಯಾಖ್ಯಾನ ೨೨೪

ರಾಜಭೃತ್ಯರ ಉದಾಹರಣೆ ೨೨೪
ರಾಜನಲ್ಲಿ ವ್ಯಭಿಚಾರ ೨೨೫
ವ್ಯವಹಾರಕ್ಕೆ ಪ್ರವೃತ್ತಿನಿಮಿತ್ತವೇ ಕಾರಣ ೨೨೫
ತದಧೀನತ್ವವು ಹೇಗೆ ಪ್ರವೃತ್ತಿನಿಮಿತ್ತವಾಗುತ್ತದೆ ? ೨೨೬
ಪ್ರಯೋಗವಿದ್ದರೆ ನಿಮಿತ್ತ ಹುಡುಕಬೇಕು ೨೨೬
ಜೀವ ಶಬ್ದವು ಶ್ರೀಹರಿಯನ್ನೇ ಪ್ರತಿಪಾದಿಸುತ್ತದೆ ೨೨೬
ಈ ಅಧಿಕರಣದ ಆಕ್ಷೇಪ ತಪ್ಪಲ್ಲ ೨೨೭
'ಲಿಂಗೇನೈವ' ಎಂಬುದಕ್ಕೆ ವ್ಯಾಖ್ಯಾನ ೨೨೭
'ಉಪಾಸಾತ್ರೈವಿಧ್ಯಾತ್' ಎಂಬುದಕ್ಕೆ ವ್ಯಾಖ್ಯಾನ ೨೨೭
'ಯದ್ಯದ್‌ವಿಭೂತಿಮತ್ಸತ್ವಂ' ಎಂಬ ಗೀತೆಗೆ ವ್ಯಾಖ್ಯಾನ ೨೨೮
ಗೀತಾತಾತ್ಪರ್ಯ ಆಧಾರದಲ್ಲಿ ಟೀಕೆಗೆ ವ್ಯಾಖ್ಯಾನ ೨೨೮

ಬ್ರಹ್ಮಸೂತ್ರ
'ಅನ್ಯಾರ್ಥಂ ತು ಜೈಮಿನಿಃ' ಎಂಬ ಸೂತ್ರಕ್ಕೆ ವ್ಯಾಖ್ಯಾನ ೨೨೯

ಬ್ರಹ್ಮಸೂತ್ರಭಾಷ್ಯ
ಪರಮಾತ್ಮನ ಜ್ಞಾನಕ್ಕೋಸ್ಕರವೇ ಕರ್ಮಾದಿಗಳೆಂದು ಜೈಮಿನಿಗಳ ಮತ ೨೨೯
ಕರ್ಮಾದಿಗಳು ಭಗವಂತನ ಜ್ಞಾನಕ್ಕೋಸ್ಕರ ೨೩೧
ಛಾಂದೋಗ್ಯದಲ್ಲಿ ಶ್ವೇತಕೇತು ಉದ್ದಾಲಕರ ಸಂವಾದ ೨೩೨
ವಿಷ್ಣುವನ್ನು ತಿಳಿಯದಿದ್ದರೆ ಏನು ಪ್ರಯೋಜನ ? ೨೩೩

ಸತ್ತರ್ಕದೀಪಾವಳಿ
'ಅಸ್ಯ ವಾಮೀಯ' ಸೂಕ್ತಕ್ಕೆ ಅಪೂರ್ವವ್ಯಾಖ್ಯಾನ ೨೩೪

ತತ್ವಪ್ರದೀಪ
ಪರಮಾತ್ಮನ ಜ್ಞಾನಕ್ಕೋಸ್ಕರ ಜ್ಯೋತಿಷ್ಟೋಮಾದಿ ಕರ್ಮಗಳು ೨೩೫
ಶೌನಕ ಮತ್ತು ಅಂಗೀರಸರ ಪ್ರಶ್ನೋತ್ತರವೇ ಇದಕ್ಕೆ ಆಧಾರ ೨೩೬
ಆದೇಶ ಎಂದರೆ ಪರಮಾತ್ಮ ೨೩೭
ಛಾಂದೋಗ್ಯದಲ್ಲಿ ವಿಷ್ಣುಪಾರಮ್ಯ ೨೩೭
'ಯಸ್ತನ್ನ ವೇದ ಕಿಮೃಚಾ ಕರಿಷ್ಯತಿ' ಎಂಬ ಶ್ರುತ್ಯರ್ಥ ೨೪೧

ತತ್ವಪ್ರಕಾಶಿಕಾ
ವೈದಿಕಶಬ್ದಗಳನ್ನೇಕೆ ಸಮಾಕರ್ಷಣ ಮಾಡಬೇಕು ? ೨೪೨
ಭಗವಂತನ ಜ್ಞಾನವಷ್ಟೇ ಸಾಕಲ್ಲವೇ? ೨೪೨
ಸಮಾಕರ್ಷದಿಂದ ಏನು ಪ್ರಯೋಜನ ? ೨೪೨

ಅನ್ಯಪದಾರ್ಥದ ಜ್ಞಾನ ಪರಮಾತ್ಮನ ಜ್ಞಾನಗೋಸ್ಕರ ೨೪೩
ಶೌನಕರ ಪ್ರಶ್ನೆಗೆ ಉದ್ದಾಲಕರ ಉತ್ತರ ೨೪೩
ಪರಮಾತ್ಮನ ತಿಳಿದರೆ ಉಳಿದೆಲ್ಲವೂ ತಿಳಿದಂತೆ ೨೪೪
ಕೆಲವು ಶಾಖೆಗಳ ಸ್ವಪ್ನವಾದ ಅಧ್ಯಯನ ೨೪೪
ಸಕಲ ವೇದಾಧ್ಯಯನವು ಪರಮಾತ್ಮನ ಜ್ಞಾನಕ್ಕೋಸ್ಕರ ೨೪೫

ಭಾವದೀಪ

ಸಮಾಕರ್ಷದಿಂದ ಮುಮುಕ್ಷುಗಳಿಗೆ ಪ್ರಯೋಜನವಿದೆಯೇ ? ೨೪೫
ಕರ್ಮಜ್ಞಾನವನ್ನು ಅವಶ್ಯ ಪಡೆಯಬೇಕು ೨೪೫
'ರೋಚನಾರ್ಥಂ ಫಲಶ್ರುತಿಃ' ೨೪೬
ಉತ್ತಮಾಧಿಕಾರಿಗಳಿಗೂ ಕರ್ಮದ ಅಪೇಕ್ಷೆ ಇದೆ ೨೪೬
ಟೀಕೆಯಲ್ಲಿರುವ 'ಅತಃ' ಎಂಬ ಪದಕ್ಕೆ ವ್ಯಾಖ್ಯಾನ ೨೪೭
ಸೂತ್ರದಲ್ಲಿರುವ ಅನ್ಯಪದಕ್ಕೆ ವ್ಯಾಖ್ಯಾನ ೨೪೭
ಭಾಷ್ಯದಲ್ಲಿ 'ವದತಿ' ಪದಕ್ಕೆ ವ್ಯಾಖ್ಯಾನ ೨೪೭
ಕರ್ಮಜ್ಞಾನಕ್ಕೆ ಪ್ರಕೃತೋಪಯೋಗ ೨೪೮
ಕರ್ಮಜ್ಞಾನದ ಫಲ ೨೪೮
ಯಾವುದು ಪರವಿದ್ಯೆ ? ೨೪೮
ಅಂತಃಕರಣದ ಶುದ್ಧಿಗಾಗಿ ಕರ್ಮ ಬೇಕು ೨೪೯
'ಯೇನಾಶ್ರುತಂ' ಎಂಬ ವಾಕ್ಯಕ್ಕೆ ವ್ಯಾಖ್ಯಾನ ೨೪೯
ಮೃತ್ಪಿಂಡದ ಉದಾಹರಣೆ ೨೫೦
ಪರಂಪರೆಯಿಂದ ಕರ್ಮಾದಿಜ್ಞಾನವು ಆವಶ್ಯಕ ೨೫೦
'ಅಪಿಚ' ಎಂಬುದು ಅಖಂಡವಾದ ನಿಪಾತ ೨೫೦
'ಋಚೋ ಅಕ್ಷರೇ' ಎಂಬ ಸಮಗ್ರ ಶ್ರುತಿಯ ವಿಚಾರ ೨೫೧
'ಅಕ್ಷರ' ಎಂಬುದು ನಿಮಿತ್ತ ಸಪ್ತಮಿ ೨೫೧
'ಕರ್ಮಾದಿಕಮ್' ಇತ್ಯಾದಿ ಟೀಕೆಗೆ ವ್ಯಾಖ್ಯಾನ ೨೫೨

ಬ್ರಹ್ಮಸೂತ್ರ

'ವಾಕ್ಯಾನ್ವಯಾತ್' ಎಂಬ ಸೂತ್ರಕ್ಕೆ ವ್ಯಾಖ್ಯಾನ ೨೫೨

ಬ್ರಹ್ಮಸೂತ್ರಭಾಷ್ಯ

ವೇದದಲ್ಲಿರುವ ವಾಕ್ಯಗಳ ಸಮನ್ವಯ ೨೫೨

ಸತ್ತರ್ಕದೀಪಾವಳಿ

ಪರಮಾತ್ಮನಲ್ಲಿ ವಾಕ್ಯದ ಅನ್ವಯವಿದೆ ೨೫೩

'ಪೃಥಕ್‌ಪೃಥಕ್‌ಸ್ಥಿತಸ್ಯಾಪಿ' ಎಂಬುದರ ವ್ಯಾಖ್ಯಾನ ೨೫೪

ತತ್ತ್ವಪ್ರದೀಪ

ವಿಷ್ಣುವಿನಲ್ಲಿ ವಾಕ್ಯದ ಸಮನ್ವಯ ೨೫೪

ಬೇರೆ ಋಷಿಗಳ ಪ್ರಕಾರ ವಾಕ್ಯಗಳ ಕ್ರಮ ೨೫೫

ಇತರ ಮುನಿಗಳ ಅಭಿಪ್ರಾಯವು ವೇದವ್ಯಾಸರಿಗೆ ಸಮ್ಮತ ೨೫೫

ತತ್ತ್ವಪ್ರಕಾಶಿಕಾ

ಪರಮಾತ್ಮನ ಜ್ಞಾನ ನೇರವಾಗಿ ಬರುವುದಿಲ್ಲವೇ ? ೨೫೬

ವೃತ್ತಿಗೆ ಅವಯವಾರ್ಥ ಬೇಕೇ ಬೇಕು ೨೫೬

'ವಾಕ್ಯಾನ್ವಯಾತ್' ಎಂಬ ಸೂತ್ರ ಏಕೆ ಹೊರಟಿತು ? ೨೫೬

ವಾಕ್ಯಗಳ ಸಮನ್ವಯವೂ ವಿವಕ್ಷಿತ ೨೫೭

ವಾಕ್ಯಗಳ ಸಮನ್ವಯಗಳ ಹಂತ ೨೫೭

ವಾಕ್ಯಸಮನ್ವಯ ಎಂದರೇನು ? ೨೫೭

ವಾಕ್ಯಾನ್ವಯದ ಪ್ರಯೋಜನ ೨೫೮

ಮಧ್ಯಮಾಧಿಕಾರಿಗಳಿಗೆ ವಾಕ್ಯಸಮನ್ವಯ ೨೫೮

ಭಾವದೀಪ

ಪದಸಮನ್ವಯವಷ್ಟೇ ಸಾಕಲ್ಲವೇ? ೨೫೯

ತತ್ತ್ವನಿರ್ಣಯದಲ್ಲಿ ವಿಶೇಷವಿಚಾರ ೨೫೯

ಸೂತ್ರದಲ್ಲಿರುವ ಪಂಚಮಿಯು ನಿಮಿತ್ತಾರ್ಥಕ ೨೬೦

ಅನುವ್ಯಾಖ್ಯಾನದ ಯೋಜನೆ ೨೬೦

ಪದಸಮನ್ವಯಕ್ಕೆ ಎಲ್ಲರೂ ಅಧಿಕಾರಿಗಳಲ್ಲ ೨೬೦

ವಾಕ್ಯಸಮನ್ವಯವು ಅನಿರ್ವಾಯ ೨೬೧

ಬ್ರಹ್ಮಸೂತ್ರ

'ಪ್ರತಿಜ್ಞಾಸಿದ್ಧೇರ್ಲಿಂಗಮಾಶ್ಮರಥ್ಯಃ' ಎಂಬ ಸೂತ್ರ ವ್ಯಾಖ್ಯಾನ ೨೬೨

ಬ್ರಹ್ಮಸೂತ್ರಭಾಷ್ಯ

ಆಶ್ಮರಥ್ಯರ ಪ್ರಕಾರ ವೇದ ಸಮನ್ವಯ ೨೬೨

ಸತರ್ಕದೀಪಾವಳಿ

ಶಿಷ್ಯತ್ರಯರಿಂದ ಮೂರು ಉತ್ತರಗಳು ೨೬೩

'ನಾನ್ಯಃ ಪಂಥಾ ಅಯನಾಯ ವಿದ್ಯತೇ' ಎಂಬುದಕ್ಕೆ ಸುಂದರ ವ್ಯಾಖ್ಯಾನ ೨೬೪

ತತ್ತ್ವಪ್ರಕಾಶಿಕಾ

ಪರಮಾತ್ಮನ ಜ್ಞಾನಕ್ಕೊಳ್ಪರ ಲೌಕಿಕ ಜ್ಞಾನ ೨೬೬

ಜ್ಞಾನವೇ ಮೋಕ್ಷಕ್ಕೆ ಸಾಧನ ೨೬೬
ಕರ್ಮಾದಿಗಳು ಜ್ಞಾನಕ್ಕೆ ಪೂರಕ ೨೬೬
'ನಾನ್ಯಃಪಂಥಾ' ಎಂಬ ಶ್ರುತಿಯ ವ್ಯಾಖ್ಯಾನ ೨೬೭
'ಅಮೃತೋ ವಾವ' ಎಂಬ ಶ್ರುತ್ಯರ್ಥ ೨೬೭
ಕರ್ಮದ ಫಲವು ದುಃಖಮಿಶ್ರಿತ ೨೬೭
'ಪರೀಕ್ಷ್ಯ ಲೋಕಾನ್' ಎಂಬುದರ ವ್ಯಾಖ್ಯಾನ ೨೬೮
ಭಾವದೀಪ
ಟೀಕೆಯ ಕೆಲವು ಕಠಿಣಪದಾರ್ಥಗಳು ೨೬೮
ವೈರಾಗ್ಯವನ್ನು ಹುಟ್ಟಿಸುವ ಮೂಲಕ ಬ್ರಹ್ಮಜ್ಞಾನಕ್ಕೆ ಕಾರಣವಾಗುತ್ತದೆ ೨೬೯
ಬ್ರಹ್ಮಸೂತ್ರ
'ಉತ್ಕ್ರಮಿಷ್ಯತೇ ಏವಂಭಾವಾದಿತ್ಯೌಡುಲೋಮಿಃ' ಎಂಬ ಸೂತ್ರ ವ್ಯಾಖ್ಯಾನ ೨೭೦
ಬ್ರಹ್ಮಸೂತ್ರಭಾಷ್ಯ
ಔಡುಲೋಮಿಗಳ ಪ್ರಕಾರ ವೇದಸಮನ್ವಯ ೨೭೦
ಸತ್ತರ್ಕದೀಪಾವಳಿ
ಮುಮುಕ್ಷುವಿಗೇಕೆ ಕರ್ಮಜ್ಞಾನ ? ೨೭೧
ತತ್ವಪ್ರದೀಪ
ಕರ್ಮಕ್ಕೆ ಬ್ರಹ್ಮಜ್ಞಾನ ಸಾಧನದ ಸಮರ್ಥನೆ. ೨೭೧
ತತ್ವಪ್ರಕಾಶಿಕಾ
ಮತ್ತೊಂದು ಪ್ರಕಾರದಿಂದ ಕರ್ಮಾದಿಜ್ಞಾನಕ್ಕೆ ಸಾರ್ಥಕ್ಯ ೨೭೨
ಕರ್ಮಾದಿಗಳನ್ನು ಬಿಡುವಂತಿಲ್ಲ ೨೭೨
ಜ್ಞಾನವೇ ಮುಖ್ಯ ೨೭೩
ಔಡುಲೋಮಿ ಆಚಾರ್ಯರ ಅಭಿಪ್ರಾಯ ೨೭೩
ಭಾವದೀಪ
ಔಡುಲೋಮಿ ಆಚಾರ್ಯರು ಮತ್ತೊಂದು ಕ್ರಮದಲ್ಲಿ ಇದನ್ನೇ ಸಮರ್ಥಿಸಿದ್ದಾರೆ ೨೭೪
ಕರ್ಮಾನುಷ್ಠಾನದಿಂದ ಮನಸ್ಸು ನಿರ್ಮಲವಾಗುತ್ತದೆ ೨೭೪
ಬ್ರಹ್ಮಸೂತ್ರ
'ಅವಸ್ಥಿತೇರಿತಿ ಕಾಶಕೃತ್ಸ್ನಃ' ಎಂಬ ಸೂತ್ರವ್ಯಾಖ್ಯಾನ ೨೭೫
ಬ್ರಹ್ಮಸೂತ್ರಭಾಷ್ಯ
ಕರ್ಮಪ್ರತಿಪಾದಕ ವಾಕ್ಯಗಳ ವಿಷಯದಲ್ಲಿ ಕಾಶಕೃತ್ಸ್ನರ ಅಭಿಪ್ರಾಯ ೨೭೫
ಸತ್ತರ್ಕದೀಪಾವಳಿ

ಸಕಲ ಕರ್ಮಗಳು ಸಕಲ ದೇವತೆಗಳು ಬ್ರಹ್ಮನಲ್ಲೇ ನೆಲೆಗೊಂಡಿವೆ ೨೭೭
ತತ್ತ್ವಪ್ರದೀಪ
ಅವಸ್ಥಿತಿ ಎಂದರೆ ಐಕ್ಯವಲ್ಲ ೨೭೮
ತತ್ತ್ವಪ್ರಕಾಶಿಕಾ
ಮತ್ತೊಂದು ಪ್ರಕಾರದಲ್ಲಿ ಕರ್ಮಾದಿಗಳಿಗೆ ಸಾರ್ಥಕ್ಯ ಚಿಂತನೆ ೨೭೮
ಅಂತಃಕರಣಶುದ್ಧಿಗಾಗಿ ಕರ್ಮವು ಬೇಕು ೨೭೮
ಎಲ್ಲಾ ಋಷಿಗಳ ಅಭಿಪ್ರಾಯ ವೇದವ್ಯಾಸರಿಗೆ ಸಮ್ಮತ ೨೭೯
ಮುನಿಗಳಲ್ಲಿ ಅಭಿಪ್ರಾಯ ಭೇದವಿಲ್ಲ ೨೮೦
ಪರಮಮುಖ್ಯವೃತ್ತಿಯಂದ ಪರಮಾತ್ಮನೇ ಪ್ರತಿಪಾದ್ಯನೆಂಬುದು ಸಿದ್ಧವಾಯಿತು ೨೮೦
ಭಾವದೀಪ
ಕಾಶಕೃತ್ಸ್ನಾಚಾರ್ಯರ ಅಭಿಪ್ರಾಯ ೨೮೧
ಜೈಮಿನ್ಯಾದಿಗ್ರಹಣವು ಸಾವಕಾಶ ೨೮೧
ಸೂತ್ರಕಾರರಿಗೆ ಅಭಿಪ್ರೇತವೇ ಆಗಿದೆ ೨೮೨
ಜ್ಞಾನಸಂಪಾದನೆ ಮೊದಲು ಕರ್ಮದಲ್ಲಿ ತೊಡಗಬೇಕು ೨೮೨
ಇದಕ್ಕೆ ನ್ಯಾಯಸುಧೆಯ ಆಧಾರ ೨೮೩
ತಂತ್ರದೀಪಿಕಾ
'ಸಮಾಕರ್ಷಾತ್' ಎಂಬ ಸೂತ್ರದ ಪ್ರತಿಪದಾರ್ಥ ೨೮೪
'ತತ್ತು' ಎಂಬುದು ವಿವಕ್ಷಿತ ೨೮೫
'ಸಮ್' ಎಂಬ ಉಪಸರ್ಗದ ಅರ್ಥ ೨೮೫
ಮುಖ್ಯವೃತ್ತಿಯಲ್ಲಿಯೂ ತಾರತಮ್ಯವಿದೆ ೨೮೬
'ಜಗದ್ವಾಚಿತ್ವಾತ್' ಎಂಬ ಸೂತ್ರಕ್ಕೆ ಪೀಠಿಕೆ ೨೮೬
ಸೂತ್ರದ ಪ್ರತಿಪದಾರ್ಥ ೨೮೭
'ಜೀವಮುಖ್ಯಪ್ರಾಣಲಿಂಗಾದಿತಿ ಚೇತ್ ತದ್ವ್ಯಾಖ್ಯಾತಮ್' ಎಂಬ ಸೂತ್ರದ ಪ್ರತಿಪದಾರ್ಥ ೨೮೭
'ಅನ್ಯಾರ್ಥಂ ತು ಜೈಮಿನಿಃ' ಎಂಬ ಸೂತ್ರಕ್ಕೆ ಪೀಠಿಕೆ ೨೮೮
'ಅನ್ಯಾರ್ಥಂ ತು' ಇತ್ಯಾದಿ ಸೂತ್ರದ ಪ್ರತಿಪದಾರ್ಥ ೨೮೯
ಶ್ವೇತಕೇತು ಉದ್ದಾಲಕರ ಸಂವಾದದಿಂದಲೂ ತಿಳಿಯುತ್ತದೆ ೨೯೦
ಬ್ರಹ್ಮಜ್ಞಾನವೇ ಮುಖ್ಯ ೨೯೦
'ವಾಕ್ಯಾನ್ವಯಾತ್' ಎಂಬ ಸೂತ್ರಕ್ಕೆ ಪೀಠಿಕೆ ೨೯೧
'ಜಗದ್ವಾಚಿತ್ವಾತ್' ಎಂಬ ಸೂತ್ರದ ಪ್ರತಿಪದಾರ್ಥ ೨೯೧
'ವಾಕ್ಯಾನ್ವಯ' ಎಂದರೆ ? ೨೯೨

'ಪ್ರತಿಜ್ಞಾಸಿದ್ಧೇ' ಎಂಬ ಸೂತ್ರಕ್ಕೆ ಪೀಠಿಕೆ ೨೯೨
'ಪ್ರತಿಜ್ಞಾಸಿದ್ಧೇ' ಇತ್ಯಾದಿ ಸೂತ್ರದ ಪ್ರತಿಪದಾರ್ಥ ೨೯೨
ಎಲ್ಲಾ ಶಬ್ದಗಳೂ ಬ್ರಹ್ಮಜ್ಞಾನಕ್ಕೆ ಪೂರಕ ೨೯೩
'ಉತ್ಕ್ರಮಿಷ್ಯತೇ' ಇತ್ಯಾದಿ ಸೂತ್ರದ ಪ್ರತಿಪದಾರ್ಥ ೨೯೩
'ಏವಿದಷಂತಿ ಯಜ್ಞೇನ' ಎಂಬ ಶ್ರುತಿಯ ಆಧಾರ ೨೯೪
'ಅವಸ್ಥಿತೇರಿತಿ' ಎಂಬ ಸೂತ್ರಕ್ಕೆ ಪೀಠಿಕೆ ೨೯೪
'ಅವಸ್ಥಿತೇರಿತಿ' ಎಂಬ ಸೂತ್ರದ ಪ್ರತಿಪದಾರ್ಥ ೨೯೫
ಶಿಷ್ಟಪ್ರಸಿದ್ಧಿಗೊಸ್ಕರ ಋಷಿಗಳ ನಾಮಗ್ರಹಣ ೨೯೫
ಅದ್ವೈತಮತ ಹಾಗೂ ರಾಮಾನುಜಮತದಲ್ಲಿ ಸಮಾಕರ್ಷಾಧಿಕರಣ ೨೯೬

ಪ್ರಕೃತ್ಯಧಿಕರಣ

ಬ್ರಹ್ಮಸೂತ್ರ

'ಪ್ರಕೃತಿಶ್ಚ ಪ್ರತಿಜ್ಞಾದೃಷ್ಟಾಂತಾನುಪರೋಧಾತ್' ಎಂಬ ಸೂತ್ರಕ್ಕೆ ವ್ಯಾಖ್ಯಾನ ೩೦೬

ಬ್ರಹ್ಮಸೂತ್ರಭಾಷ್ಯ

ಸ್ತ್ರೀಶಬ್ದಗಳೂ ಕೂಡ ಪರಮಾತ್ಮನಲ್ಲೇ ಇದೆ ೩೦೭
'ಪ್ರತಿಜ್ಞಾದೃಷ್ಟಾಂತಾನುಪರೋಧಾತ್' ಎಂಬ ಹೇತುವಿನ ವಿವರಣೆ ೩೦೭

ಸತರ್ಕದೀಪಾವಳಿ

ಸ್ತ್ರೀವಾಚಕಶಬ್ದಗಳ ಸಮಾಕರ್ಷಣ ಸಾಧ್ಯವಿಲ್ಲವೆಂದು ಆಕ್ಷೇಪ ೩೦೯
ಶ್ರುತಿಯಲ್ಲಿ ನೀಡಿದ ನದಿಯ ದೃಷ್ಟಾಂತ ಅತ್ಯಂತ ಅರ್ಥಗರ್ಭಿತ ೩೦೯

ತತ್ತ್ವಪ್ರದೀಪ

ಸ್ತ್ರೀತ್ವ ಹಾಗೂ ಪುಂಸ್ತ್ವಗಳಿಗೆ ಸಾಮಾನಾಧಿಕರಣ್ಯ ಹೇಗೆ ? ೩೧೦
ಸೂತ್ರದಲ್ಲಿರುವ ಚಕಾರದಿಂದ ಸಕಲ ಸ್ತ್ರೀಲಿಂಗ ಶಬ್ದಗಳು ವಿವಕ್ಷಿತ ೩೧೧

ತತ್ತ್ವಪ್ರಕಾಶಿಕಾ

ಸ್ತ್ರೀಲಿಂಗತ್ವ ಎಂಬುದು ಪೂರ್ವಪಕ್ಷ ಯುಕ್ತಿ ೩೧೧
'ಏಷಾ ಹ್ಯೇವ ಪ್ರಕೃತಿಃ' ಎಂಬುದು ಅಧಿಕರಣದ ವಿಷಯವಾಕ್ಯ ೩೧೨
ಅಧಿಕರಣದ ವಿಷಯಾದಿಗಳು ೩೧೨
ಪುರುಷನಲ್ಲಿ ಸ್ತ್ರೀಲಿಂಗಶಬ್ದಗಳು ಹೇಗೆ ? ೩೧೩
'ನೈನಂ ವಾಚಾ ಸ್ತ್ರಿಯಂ ಬ್ರುವನ್' ೩೧೩

ನಪುಂಸಕಲಿಂಗಶಬ್ದದಂತೆ ಸ್ತ್ರೀಲಿಂಗಶಬ್ದವೇಕೆ ಇಲ್ಲ ?	೩೧೩
ತದಧೀನತ್ವನ್ಯಾಯವು ಅಪ್ರಯೋಜಕ	೩೧೪
'ನಾಮಾನಿ ಸರ್ವಾಣಿ' ಎಂಬ ಶ್ರುತಿಯು ಸಾವಕಾಶ	೩೧೪
ಪೂರ್ವಪಕ್ಷದ ಉಪಸಂಹಾರ	೩೧೪
ಪರಮಾತ್ಮನು ಸ್ತ್ರೀ ಕೂಡ ಹೌದು	
ಸಿದ್ಧಾಂತ	೩೧೫
'ಹಂತೈತಮೇವ' ಎಂಬ ಭಾಷ್ಯದ ವ್ಯಾಖ್ಯಾನ	೩೧೫
ದೃಷ್ಟಾಂತ ದಾರ್ಷ್ಟಾಂತಿಕಗಳಲ್ಲಿ ವೈಲಕ್ಷಣ್ಯವಿಲ್ಲ	೩೧೬
ಲಕ್ಷ್ಮೀವಾಚಕ ಶಬ್ದವನ್ನು ಸಮನ್ವಯ ಮಾಡಿದ ಮೇಲೆ ಉಳಿದ ಸ್ತ್ರೀಲಿಂಗ ಶಬ್ದಗಳೂ ಕೂಡ ಅರ್ಥಾತ್ ಸಿದ್ಧ ಭಾವದೀಪ	೩೧೬
ಎಲ್ಲಾ ಬಗೆಯ ಸ್ತ್ರೀಲಿಂಗಶಬ್ದಗಳ ಸಮನ್ವಯಕ್ಕಾಗಿ ಪ್ರಕೃತ್ಯಧಿಕರಣ	೩೧೭
ಸ್ತ್ರೀ ಶಬ್ದವೆಂದಷ್ಟೇ ವಿವಕ್ಷಿಸಬಾರದು	೩೧೭
ಈ ಅಧಿಕರಣಕ್ಕೇಕೆ ಪ್ರತ್ಯೇಕ ಸಂಗತಿಯಿಲ್ಲ	೩೧೭
ಹಿಂದಿನ ಪಾದದಲ್ಲಿ ಉದಾಹರಿಸಿದ್ದನ್ನೇ ಪುನಃ ಇಲ್ಲೇಕೆ ಹೇಳುತ್ತೀರಿ ?	೩೧೮
ಪರಮಮುಖ್ಯವೃತ್ತಿಯಿಂದ ಪರಮಾತ್ಮನೇ ಸ್ತ್ರೀಯೆನಿಸಿದ್ದಾನೆ	೩೧೮
'ಯಾ ಪ್ರಾಣೇನ' ಎಂಬ ಶ್ರುತಿಯ ಉಲ್ಲೇಖಕ್ಕೆ ಬೀಜ	೩೧೯
ಗಾಯತ್ರೀ ಶ್ರುತಿಯೂ ಕೂಡ ಈ ಅಧಿಕರಣದ ವಿಷಯವಾಕ್ಯ	೩೧೯
'ಅನ್ಯಪರತ್ವೇ' ಎಂಬುದಕ್ಕೆ ಮತ್ತೊಂದು ವ್ಯಾಖ್ಯಾನ	೩೧೯
ಅಧಿಕರಣದ ಪೂರ್ವಪಕ್ಷವೇನು ?	೩೨೦
'ನಾರಾಯಣೇ' ಇತ್ಯಾದಿ ಸ್ತ್ರೀರೂಪಗಳಿವೆಯಲ್ಲವೇ ?	೩೨೦
'ನೈನಂ ವಾಚಾ ಸ್ತ್ರಿಯಂ ಬ್ರುವನ್' ಎಂಬುದಕ್ಕೆ ವ್ಯಾಖ್ಯಾನ	೩೨೦
ರೂಪವಿಶೇಷವನ್ನು ವಿವಕ್ಷಿಸಬಹುದೇ ?	೩೨೨
ಗಾಯತ್ರ್ಯಧಿಕರಣದ ಪ್ರಮೇಯವೂ ಕೂಡ ಅಸಿದ್ಧವಾದೀತು	೩೨೨
'ದೇವತಾ' 'ಖಟ್ವಾ' ಮೊದಲಾದ ಶಬ್ದಗಳ ಉದಾಹರಣೆ	೩೨೨
'ನಾಮಾನಿ ಸರ್ವಾಣಿ' ಎಂಬ ಶ್ರುತಿಗೆ ಅರ್ಥಸಂಕೋಚ ಮಾಡಲು ಕಾರಣ	೩೨೩
ಸ್ತ್ರೀಶಬ್ದದ ಪ್ರವೃತ್ತಿನಿಮಿತ್ತ ಪರಮಾತ್ಮನಲ್ಲಿಲ್ಲ	೩೨೩
'ನಚಾऽಸ್ತ್ರೀಭೂತಸ್ಯಾಪಿ' ಎಂಬ ವಾಕ್ಯಕ್ಕೆ ಎರಡು ವ್ಯಾಖ್ಯಾನ	೩೨೪
ಪೂರ್ವಪಕ್ಷದ ಫಲ	೩೨೪
ಪುಲ್ಲಿಂಗ ಶಬ್ದಗಳಿಂದಷ್ಟೇ ಪರಮಾತ್ಮನು ಪ್ರತಿಪಾದ್ಯನಲ್ಲ	೩೨೪

ಎಲ್ಲಾ ಸ್ತ್ರೀಲಿಂಗಶಬ್ದಗಳೂ ಕೂಡ ಪರಮಾತ್ಮನಲ್ಲೇ ಮುಖ್ಯ ೩೨೫
ಬ್ರಹ್ಮಸೂತ್ರ
'ಅಭಿಧ್ಯೋಪದೇಶಾಚ್ಚ' ಎಂಬ ಸೂತ್ರಕ್ಕೆ ವ್ಯಾಖ್ಯಾನ ೩೨೬
ಬ್ರಹ್ಮಸೂತ್ರಭಾಷ್ಯ
ಮಾಯೆ, ಪ್ರಕೃತಿ, ವಾಸನಾ, ವಿಕೃತಿ ಇವೆಲ್ಲವೂ ಶ್ರೀಹರಿಯ ಹೆಸರುಗಳು ೩೨೬
ಪರಮಾತ್ಮನ ಇಚ್ಛೆಗೆ ಪ್ರಕೃತಿ ಎನ್ನುವರು ೩೨೭
ಸತ್ತರ್ಕದೀಪಾವಳಿ
ಸ್ವತಃ ತಾನೂ ಪ್ರಕೃತಿ ೩೨೮
ತತ್ತ್ವಪ್ರದೀಪ
ಸೂತ್ರಕ್ಕೆ ಎರಡು ಅರ್ಥ ೩೨೯
ಈಶ್ವರನು ಪ್ರದೇಶನೂ ಹೌದು, ಪ್ರದೇಶಿಯೂ ಹೌದು ! ೩೩೦
ಅವಯವವಿರುವುದರಿಂದ ಅನಿತ್ಯನಾಗಿರಬೇಕೆಂಬ ಮತದ ನಿರಾಕರಣೆ ೩೩೦
ತತ್ತ್ವಪ್ರಕಾಶಿಕಾ
ಪರಮಾತ್ಮನು ಸ್ತ್ರೀ ಕೂಡ ಆಗಿದ್ದಾನೆನ್ನಲು ಮತ್ತೊಂದು ಹೇತು ೩೩೧
ಇಚ್ಛೆಯು ಪ್ರಕೃತಿಯಾದ್ದರಿಂದ ತಾನೂ ಪ್ರಕೃತಿ ೩೩೨
ಮಾಯೆಯು ಪ್ರಕೃತಿಯಲ್ಲ ೩೩೨
ಸ್ಮೃತಿ ವಾಕ್ಯವು ಔಪಚಾರಿಕವಲ್ಲ ೩೩೨
ಪರಮಾತ್ಮನೇಕೆ ಪ್ರಕೃತಿಯಾಗಬೇಕು ? ೩೩೩
ಇಚ್ಛೆಗೂ ಪರಮಾತ್ಮನಿಗೂ ಭೇದವಿಲ್ಲ ೩೩೩
ಭಾವದೀಪ ೩೩೪
'ಪ್ರತಿಜ್ಞಾದೃಷ್ಟಾಂತಾನುಪರೋಧಮ್' ಎಂಬುದಷ್ಟೇ ಯುಕ್ತಿಯಲ್ಲ ೩೩೪
ಹಿಂದಿನ ಆಕ್ಷೇಪಕ್ಕೆ ಪರಿಹಾರ ೩೩೪
ಸಾಧಾರಣ ಶ್ರುತಿಯೂ ಕೂಡ ಪ್ರಮಾಣ ೩೩೪
'ಪ್ರಕೃತಿರ್ವಾಸನಾ' ಎಂಬ ಶ್ರುತಿಯ ಉಲ್ಲೇಖ ೩೩೫
ಶ್ರುತಿಯಷ್ಟೇ ಅಲ್ಲ ಸ್ಮೃತಿಯೂ ಪ್ರಮಾಣ ೩೩೫
ಪರಮಾತ್ಮನಲ್ಲಿ ಅಭಿಧ್ಯೋಪದೇಶ ೩೩೬
'ಮಾಯಿನಂ' ಎಂಬ ಶಬ್ದ ನಿಷ್ಪತ್ತಿ ಬಗ್ಗೆ ೩೩೬
ಮೂರನೆಯ ಅಧ್ಯಾಯದಲ್ಲಿ ಇಚ್ಛೆಯು ಶ್ರೀಹರಿಯ ಸ್ವರೂಪವೆಂಬುದು ಸ್ಪಷ್ಟವಾಗುವುದು ೩೩೬
ಬ್ರಹ್ಮಸೂತ್ರ
'ಸಾಕ್ಷಾಚ್ಚೋಭಯಾಮ್ನಾನಾತ್' ಎಂಬ ಸೂತ್ರಕ್ಕೆ ವ್ಯಾಖ್ಯಾನ ೩೩೭

ಬ್ರಹ್ಮಸೂತ್ರಭಾಷ್ಯ
ಪ್ರಕೃತಿ ಪುರುಷ ಶಬ್ದಗಳೆಲ್ಲವೂ ಶ್ರೀಹರಿಯದ್ದೇ ೩೩೭
ಸತ್ತರ್ಕದೀಪಾವಳಿ
ಪ್ರಯೋಗ ಬಾಹುಲ್ಯವನ್ನು ತೋರಿಸಿದ್ದಾಯಿತು ೩೩೮
ಪ್ರಕೃತಿಶಬ್ದಕ್ಕೆ ವಿದ್ವದ್ರೂಢಿಯೂ ಇದೆ ೩೩೯
ತತ್ತ್ವಪ್ರಕಾಶಿಕಾ
ಪ್ರಕೃತಿಶಬ್ದವಾಚ್ಯನೆನ್ನಲು ಯಾವ ಶ್ರುತಿ ಆಧಾರ ? ೩೩೯
'ಮಾಯಾಂ ತು ಪ್ರಕೃತಿಂ ವಿದ್ಯಾತ್' ಎಂಬುದು ಆಧಾರವಾಗುವುದೇ ? ೩೩೯
'ಏಷಃ ಸ್ತ್ರೀಷ ಪುರುಷಃ' ಎಂಬ ಶ್ರುತಿಯು ಆಧಾರವಾಗುವುದು ೩೪೦
ಭಾವದೀಪ
ಸ್ತ್ರೀ ಶಬ್ದ ಪ್ರತಿಪಾದ್ಯತ್ವಕ್ಕೆ ವಿಶೇಷ ಪ್ರಮಾಣ ೩೪೧
ಇಚ್ಛಾಮೂಲಕವಾಗಿ ಪ್ರಕೃತಿಯಷ್ಟೇ ಅಲ್ಲ ೩೪೧
ನೇರವಾಗಿಯೇ ಪ್ರಕೃತಿ ಶಬ್ದವಾಚ್ಯ ೩೪೧
'ಚ'ಶಬ್ದವು ಅವಧಾರಣಾರ್ಥ ೩೪೧
ಬ್ರಹ್ಮಸೂತ್ರ
'ಆತ್ಮಕೃತೇಃ ಪರಿಣಾಮಾತ್' ಎಂಬ ಸೂತ್ರ ವ್ಯಾಖ್ಯಾನ ೩೪೨
ಬ್ರಹ್ಮಸೂತ್ರಭಾಷ್ಯ
ಪ್ರಕೃತಿಶಬ್ದದ ನಿರ್ವಚನ ೩೪೨
ಪ್ರವೃತ್ತಿನಿಮಿತ್ತಕ್ಕೆ ಕಾರಣ ೩೪೩
ಶ್ರುತಿ-ಸ್ಮೃತಿಗಳ ಆಧಾರ ೩೪೩
ಪ್ರಕೃತಿಯಲ್ಲಿಯೂ ಪರಮಾತ್ಮನು ಪ್ರವೇಶಿಸುವನು ೩೪೪
ಅಪವ್ಯಾಖ್ಯಾನದ ನಿರಾಕರಣೆ ೩೪೫
ಸತ್ತರ್ಕದೀಪಾವಳಿ
ಪ್ರಕೃತಿ ಶಬ್ದದ ನಿರ್ವಚನ ೩೪೫
ತತ್ತ್ವಪ್ರದೀಪ
'ಪ್ರಕೃತೌ ಅನುಪ್ರವಿಶ್ಯ' ಇತ್ಯಾದಿ ಭಾಷ್ಯದ ವ್ಯಾಖ್ಯಾನ ೩೪೬
ಪ್ರಕೃತಿಶಬ್ದಕ್ಕೆ ಉಪಾದಾನಕಾರಣ ಎಂದರ್ಥವೇ? ೩೪೭
'ಬಹು ಸ್ಯಾಂ ಪ್ರಜಾಯೇಯ' ಎಂಬ ಶ್ರುತಿಯು ಉಪಾದಾನಕಾರಣಕ್ಕೆ ಪ್ರಮಾಣವಾಗುವುದಿಲ್ಲ ೩೪೭
'ಸಚ್ಚ ತ್ಯಚ್ಚಾಭವತ್' ಎಂಬ ಶ್ರುತಿಯೂ ಕೂಡ ಉಪಾದಾನತ್ವ ವಿಷಯದಲ್ಲಿ ಪ್ರಮಾಣವಲ್ಲ ೩೪೮
ಉಪಾದಾನತ್ವವಿಷಯದಲ್ಲಿ ಸೂತ್ರವೂ ಕೂಡ ಪ್ರಮಾಣವಲ್ಲ ೩೪೯

ರಜತಾಕಾರವಾಗಿ ಪರಿಣಾಮವನ್ನು ಹೊಂದುವ ಶುಕ್ತಿಯಂತೆ ಬ್ರಹ್ಮನಲ್ಲ ೩೪೯
ರಜತಕ್ಕೆ ಶುಕ್ತಿಯು ಉಪಾದಾನಕಾರಣವಲ್ಲ ೩೫೦
ಜಗತ್ತಿನಂತೆ ಬ್ರಹ್ಮನು ಅನಿರ್ವಾಚ್ಯನಾದ ೩೫೧
ಅದ್ವೈತಿಗಳ ತಪ್ಪು ಕಲ್ಪನೆ ೩೫೩
ಪ್ರತಿಜ್ಞಾದೃಷ್ಟಾಂತಾನುಪರೋಧವೂ ಕೂಡ ಆಧಾರವಲ್ಲ ೩೫೩
ವಾಚಾರಂಭಣ ಶಬ್ದಕ್ಕೆ ಮಿಥ್ಯಾ ಎಂದರ್ಥವಲ್ಲ ೩೫೪
ಶ್ರುತಿಗೆ ವ್ಯಾಖ್ಯಾನ ಮಾಡಲು ಬಾರದ ಅದ್ವೈತಿಗಳು ೩೫೫
ಅದ್ವೈತಿಗಳಿಗೆ ದೃಷ್ಟಾಂತವೇ ಕೂಡುವುದಿಲ್ಲ ೩೫೬
ವಾಚಾರಂಭಣ ಶ್ರುತಿಗೆ ಹೇಗೆ ವ್ಯಾಖ್ಯಾನ ಮಾಡಬೇಕು ? ೩೫೭
'ಮೃತ್ತಿಕೇತ್ಯೇವ ಸತ್ಯಂ' ಎಂಬುದಕ್ಕೆ ವ್ಯಾಖ್ಯಾನ ೩೫೭

ತತ್ತ್ವಪ್ರಕಾಶಿಕಾ

ಸಂಕೇತ ಮಾತ್ರದಿಂದಷ್ಟೇ ಪ್ರಕೃತಿಯಲ್ಲ ೩೬೦
ಪ್ರವೃತ್ತಿನಿಮಿತ್ತವಿಲ್ಲ ಎನ್ನಬಾರದು ೩೬೧
ಪರಮಾತ್ಮನ ಕೃತಿಯು ಅತ್ಯುತ್ತಮ ೩೬೧
ಪ್ರಕೃತಿಯನ್ನು ಪ್ರವೇಶಿಸುವನು ಎನ್ನಲು ಶ್ರುತಿಯ ಆಧಾರ ೩೬೧
ಬ್ರಹ್ಮನು ಜಗದುಪಾದಾನ ಎಂಬ ಅಪವ್ಯಾಖ್ಯಾನದ ನಿರಾಕರಣೆ ೩೬೨
ಉಪಾದಾನಕಾರಣವೆನ್ನಲು ಪ್ರಮಾಣವಿಲ್ಲ ೩೬೨
ಸಾಂಖ್ಯಮತನಿರಾಕರಣೆಗಾಗಿ ಈ ಸೂತ್ರ ಹೊರಟಿದೆ ಎಂದು ಪೂರ್ವಪಕ್ಷ ೩೬೩
ಅದ್ವೈತಮತದ ನಿರಾಕರಣೆ ೩೬೪
ಅದ್ವೈತಿಗಳಿಗೆ ಈ ಅಧಿಕರಣವು ಅಪ್ರಸ್ತುತ ೩೬೪
ಪ್ರಕೃತಿ ಪದಾರ್ಥದ ನಿರಾಕರಣೆ ಇಲ್ಲಿ ಅಸಂಗತ ೩೬೪
ಪ್ರಕೃತಿಯ ನಿರಾಕರಣೆಗೆ ಕಾರಣ ೩೬೫
ಅದ್ವೈತಿಗಳ ಸೂತ್ರ ವ್ಯಾಖ್ಯಾನ ಅಸಾಧು ೩೬೫

ಭಾವದೀಪ

ಗುಣಪೂರ್ಣತ್ವದ ಸಿದ್ಧಿಗಾಗಿ ಪ್ರಕೃತಿ ಶಬ್ದದ ಸಮನ್ವಯ ೩೬೬
'ಪರಿಣಾಮಾತ್' ಎಂಬಲ್ಲಿರುವ ಪಂಚಮಿಯ ಬಗ್ಗೆ ೩೬೬
'ಕ್ತ್ವಾ' ಪ್ರತ್ಯಯದ ಅಭಿಪ್ರಾಯ ೩೬೬
ಆತ್ಮಕೃತಿಯು ಸಾರ್ಥಕ ೩೬೭
'ಅಥ ಹ್ಯೇಷ ಆತ್ಮಾ' ಎಂಬ ಶ್ರುತಿಯ ಬಗ್ಗೆ ೩೬೭
'ನಚ ಅನ್ಯತ್‌ಕಲ್ಪ್ಯಮ್' ಎಂಬ ಭಾಷ್ಯವಾಕ್ಯದ ಸ್ವಾರಸ್ಯ ೩೬೭

ಪ್ರಕೃತಿಯ ಸಮರ್ಥನೆಯನ್ನು ಸೂತ್ರಕಾರರೇ ಮಾಡಿದ್ದಾರೆ ೩೬೮
ಪರಕೀಯರ ಭಾಷ್ಯದಲ್ಲಿ ಏನಿದೆ? ೩೬೮
ಪ್ರಕೃತಿಯ ಸ್ವರೂಪವನ್ನೇ ನಿಷೇಧ ಮಾಡುವರು ೩೬೮
ಜಗದುಪಾದಾನತ್ವವನ್ನು ಯೋಜನೆ ಮಾಡಬೇಕು ೩೬೮
ಅದ್ವೈತಿಗಳ ವ್ಯಾಖ್ಯಾನ ಅಪ್ರಾಮಾಣಿಕ ೩೬೯
'ಅಥಾಪಿ ಸ್ಯಾತ್' ಎಂಬ ಟೀಕೆಗೆ ವ್ಯಾಖ್ಯಾನ ೩೬೯

ಬ್ರಹ್ಮಸೂತ್ರ

'ಯೋನಿಶ್ಚ ಹಿ ಗೀಯತೇ' ಎಂಬ ಸೂತ್ರಕ್ಕೆ ವ್ಯಾಖ್ಯಾನ ೩೭೦

ಬ್ರಹ್ಮಸೂತ್ರಭಾಷ್ಯ

ಪುರುಷನಲ್ಲಿ ಸ್ತ್ರೀಲಿಂಗಶಬ್ದವನ್ನು ಪ್ರಯೋಗಿಸಬಹುದೇ ? ೩೭೦
ಪರಮಾತ್ಮನು ನೇರವಾಗಿಯೇ ಸಂತಾನೋತ್ಪತ್ತಿಗೆ ಕಾರಣನು ೩೭೧

ಸತ್ತರ್ಕದೀಪಾವಳಿ

ಪರಮಾತ್ಮನು ಸಾಕ್ಷಾತ್ತಾಗಿಯೇ ಸ್ತ್ರೀಶಬ್ದ ಪ್ರತಿಪಾದ್ಯ ೩೭೩
ಶ್ರೀಹರಿಯು ಪ್ರಕೃತಿಯೆನಿಸಬಹುದು, ಶೂನ್ಯ ಎನಿಸಲಾರ ಎಂದು ಪೂರ್ವಪಕ್ಷ ೩೭೩
ಪರಮಾತ್ಮನು ಶೂನ್ಯನೂ ಆಗಿದ್ದಾನೆ ೩೭೪
ಅಭಾವಾದಿಶಬ್ದಗಳ ಸಮನ್ವಯ ೩೭೪

ತತ್ವಪ್ರಕಾಶಿಕಾ

ಪರಮಾತ್ಮನನ್ನು ಪ್ರಕೃತಿಯೆನ್ನಲು ಕಾರಣ ೩೭೬
ತನ್ನ ದೇಹದಿಂದ ಪುತ್ರೋತ್ಪತ್ತಿ ಮಾಡುವನೇ ? ೩೭೬
'ಯದ್ಭೂತಯೋನಿಮ್' ಎಂಬ ಶ್ರುತಿಯು ಅದನ್ನೇ ಹೇಳುವುದು ೩೭೬
ಪರಮಾತ್ಮನು ಮಾಡುವ ಪುತ್ರೋತ್ಪತ್ತಿಗೆ ಸ್ತ್ರೀ ಅಪೇಕ್ಷೆಯಿಲ್ಲ ೩೭೭
'ನೈನಂ ವಾಚಾ ಸ್ತ್ರೀಯಂ ಬ್ರುವನ್' ಎಂಬುದಕ್ಕೆ ವ್ಯಾಖ್ಯಾನ ೩೭೭

ಭಾವದೀಪ

ಪ್ರಳಯಕಾಲದಲ್ಲಿ ಎಲ್ಲರೂ ಶ್ರೀಹರಿಯ ಉದರದಲ್ಲಿ ೩೭೮
ಶ್ರುತಿವಿರೋಧ ಪರಿಹಾರ ೩೭೮
ಪ್ರಕೃತಿಯೆನ್ನಲು ಸಾಧಕವಿದೆ ಬಾಧಕವಿಲ್ಲ ೩೭೯

ತಂತ್ರದೀಪಿಕಾ

ಎಲ್ಲಾ ಸ್ತ್ರೀಲಿಂಗಶಬ್ದಗಳನ್ನು ಉಪಲಕ್ಷಣಯಾ ವಿವಕ್ಷಿಸಬೇಕು ೩೮೦
ಪ್ರಸವ ಹೇತುತ್ವವಿರುವುದರಿಂದ ಪರಮಾತ್ಮನೇ ಪ್ರಕೃತಿ ೩೮೧
ಸರ್ವಶಬ್ದಕ್ಕೆ ಸಂಕೋಚ ಮಾಡಲಾಗದು ೩೮೧

'ಅಭಿಧ್ಯೋಪದೇಶಾಚ್ಚ' ಎಂಬ ಸೂತ್ರಕ್ಕೆ ಪೀಠಿಕೆ ೩೮೨
'ಅಭಿಧ್ಯಾ' ಎಂಬ ಪದವು ಎರಡು ಬಾರಿ ಆವೃತ್ತವಾಗುವುದು ೩೮೨
'ಸಾಕ್ಷಾಚ್ಚೋಭಯಾಮ್ನಾನಾತ್' ಎಂಬ ಸೂತ್ರಕ್ಕೆ ಪೀಠಿಕೆ ೩೮೩
ಸೂತ್ರದ ಕಠಿಣ ಪದಾರ್ಥ ೩೮೩
'ಆತ್ಮಕೃತೇಃ ಪರಿಣಾಮಾತ್' ಎಂಬ ಸೂತ್ರಕ್ಕೆ ಪೀಠಿಕೆ ೩೮೪
ಸೂತ್ರದ ಪ್ರತಿಪದಾರ್ಥ ೩೮೪
'ಯೋನಿಶ್ಚ ಹಿ ಗೀಯತೇ' ಎಂಬ ಸೂತ್ರಕ್ಕೆ ಪೀಠಿಕೆ ೩೮೫
ಸೂತ್ರದ ಪ್ರತಿಪದಾರ್ಥ ೩೮೫
ಸೂತ್ರಾರ್ಥಕ್ಕೆ ಶ್ರುತಿಯ ಆಧಾರ ೩೮೫
ಅದ್ವೈತಮತ ಹಾಗೂ ರಾಮಾನುಜಮತದಲ್ಲಿ ಪ್ರಕೃತ್ಯಧಿಕರಣ ೩೮೬

ಏತೇನಾಧಿಕರಣ

ಬ್ರಹ್ಮಸೂತ್ರ

'ಏತೇನ ಸರ್ವೇ ವ್ಯಾಖ್ಯಾತಾ ವ್ಯಾಖ್ಯಾತಾಃ' ಎಂಬ ಸೂತ್ರದ ವ್ಯಾಖ್ಯಾನ ೩೯೮

ಬ್ರಹ್ಮಸೂತ್ರಭಾಷ್ಯ

ನಿಷೇಧಾತ್ಮಕ ಶಬ್ದಗಳೂ ಕೂಡ ವಿಷ್ಣುನಾಮಗಳು ೩೯೯
ಶೂನ್ಯ ಹಾಗೂ ಅಭಾವ ಶಬ್ದಗಳ ಸಮನ್ವಯ ೪೦೦
ನಿಷೇಧವಾಚಕ ಶಬ್ದಸಮನ್ವಯಕ್ಕೆ ಮಹಾಕೌರ್ಮದ ಆಧಾರ ೪೦೧
'ಏತೇನ' ಎಂಬುದರ ವ್ಯಾಖ್ಯಾನ ೪೦೨
ಸೂತ್ರದಲ್ಲಿರುವ ದ್ವಿರುಕ್ತಿಗೆ ವ್ಯಾಖ್ಯಾನ ೪೦೨

ತತ್ತ್ವಪ್ರದೀಪ

'ತುಚ್ಛ' ನಾಶಾದಿಶಬ್ದಗಳಿಗೆ ಅಪೂರ್ವವ್ಯಾಖ್ಯಾನ ೪೦೪

ತತ್ತ್ವಪ್ರಕಾಶಿಕಾ

ಅನ್ಯತ್ರೈವ ಪ್ರಸಿದ್ಧವಾದ ಅಸದಾದಿ ಶಬ್ದಗಳ ಸಮನ್ವಯ ೪೦೫
ಅಭಾವವಾಚಕಶಬ್ದಗಳ ಸಮನ್ವಯವೂ ಅನಿವಾರ್ಯ ೪೦೬
ಈ ಶಬ್ದಗಳೂ ಕೂಡ ಅನ್ಯಪರವಾಗಬಾರದು ೪೦೬
ಅಧಿಕರಣದ ಸಂಶಯ ೪೦೬
ಭಾವರೂಪನಾದ ಪರಮಾತ್ಮನು ಅಭಾವನಾಗುವುದು ಹೇಗೆ ? ೪೦೭
ಶೂನ್ಯಾದಿಗಳು ಶ್ರೀಹರಿಯ ಅಧೀನವೇ ಅಲ್ಲ ೪೦೭

ಹರಿಯ ಅಧೀನವಾದರೂ ಹರಿಪರವಾಗುವುದಿಲ್ಲ ೪೦೭
ಅಧಿಕರಣದ ಸಿದ್ಧಾಂತ ೪೦೮
'ಏಷ ಹ್ಯೇವ' ಎಂಬ ಭಾಷ್ಯದಿಂದ ಸಿದ್ಧಾಂತ ೪೦೮
ಅಸದಾದಿಶಬ್ದಗಳ ನಿರ್ವಚನ ೪೦೮
ಶೂನ್ಯ ಹಾಗೂ ಅದೃಶ್ಯಶಬ್ದಗಳ ನಿರ್ವಚನ ೪೦೯
'ಏತೇನ' ಎಂಬ ಸೂತ್ರ ಭಾಗದ ವ್ಯಾಖ್ಯಾನ ೪೦೯
ಹಿಂದಿನ ಅಧಿಕರಣದ ಹೇತುವೂ ಕೂಡ ವಿವಕ್ಷಿತ ೪೦೯
'ಅಸತ್' ಪದಾರ್ಥವೂ ಕೂಡ ಶ್ರೀಹರಿಯ ಅಧೀನ ೪೧೦
ಸ್ವತಂತ್ರನಾದವನಲ್ಲಿ ದೋಷವಿಲ್ಲ ೪೧೦
ದಾರ್ಢ್ಯಕ್ಕಾಗಿ ದ್ವಿರುಕ್ತಿ ೪೧೦
ಪ್ರಥಮಾಧ್ಯಾಯದ ಉಪಸಂಹಾರ ೪೧೧

ಭಾವದೀಪ

ಅನುವ್ಯಾಖ್ಯಾನದಲ್ಲಿ ಅಧಿಕರಣದ ಲಿಂಗ ೪೧೨
ನಿಷೇಧಮುಖವೇದ್ಯನೇಕೆ ಆಗಬೇಕು ? ೪೧೩
ಅಭಾವವಾಚಕ ಶಬ್ದಗಳೆಂದರೆ ಯಾವುದು ? ೪೧೩
ಟೀಕೆಯಲ್ಲಿ ಹೇಳಿದ ಪ್ರವೃತ್ತಿನಿಮಿತ್ತಗಳು ಕೇವಲ ಉಪಲಕ್ಷಣಾ ೪೧೪
ಶ್ರುತಿಯಲ್ಲಿ ಹೇಳಿದ್ದು ಸ್ಮೃತ್ಯುಕ್ತವಾಗಿದೆ ೪೧೪
ತುಚ್ಛಾದಿಶಬ್ದಗಳ ನಿಷ್ಪತ್ತಿ ೪೧೫
ಸರ್ವಶಬ್ದಸಮನ್ವಯಕ್ಕೆ ಸಾಧಕಪ್ರಮಾಣವಿದೆ, ಬಾಧಕಪ್ರಮಾಣವಿಲ್ಲ ೪೧೫
ಸಕಲಶಬ್ದಗಳ ಸಮನ್ವಯದಿಂದ ಸಕಲಗುಣಪರಿಪೂರ್ಣತ್ವವು ಸಿದ್ಧವಾಯಿತು ೪೧೬

ತಂತ್ರದೀಪಿಕಾ

ಸೂತ್ರದ ಪ್ರತಿಪದಾರ್ಥ ೪೧೭
ಈ ಪಾದದ ಅಧಿಕರಣಗಳಲ್ಲಿ ಅನುಗುಣ್ಯ ೪೧೮
ಹೆಚ್ಚಿನ ವಿಚಾರಕ್ಕಾಗಿ ನ್ಯಾಯಸಂಗ್ರಹ ಓದಬೇಕು ೪೧೯
ಅದ್ವೈತಮತ ಹಾಗೂ ರಾಮಾನುಜಮತದಲ್ಲಿ ಏತೇನಾಧಿಕರಣ ೪೨೦

ಸ್ಮೃತ್ಯಧಿಕರಣ

ಬ್ರಹ್ಮಸೂತ್ರ

'ಸ್ಮೃತ್ಯನವಕಾಶದೋಷಪ್ರಸಂಗಃ' ಇತ್ಯಾದಿ ಸೂತ್ರದ ವ್ಯಾಖ್ಯಾನ ೪೩೪

ಬ್ರಹ್ಮಸೂತ್ರಭಾಷ್ಯ

ಪ್ರಥಮಾಧ್ಯಾಯದ ಪ್ರಮೇಯದಲ್ಲಿ ವಿರೋಧ ಪರಿಹಾರ ೪೩೫

ಪ್ರಥಮಾಧ್ಯಾಯದ ಪ್ರಮೇಯಕ್ಕೆ ಪಾಶುಪತಾದಿ ಸ್ಮೃತಿಗಳ ವಿರೋಧ ೪೩೬

ಪ್ರಥಮಾಧ್ಯಾಯದ ಪ್ರಮೇಯಕ್ಕೆ ಪಂಚರಾತ್ರಾದಿ ಸ್ಮೃತಿಗಳ ಬೆಂಬಲ ೪೩೭

ಸತ್ತರ್ಕದೀಪಾವಳಿ

ಸ್ಮೃತ್ಯಧಿಕರಣಕ್ಕೆ ಸಂಗತಿ ೪೩೮

ಶ್ರುತಿಮೂಲಕವಾದ ಪಂಚರಾತ್ರಾದಿಸ್ಮೃತಿಗಳೇ ಪ್ರಮಾಣ ೪೩೮

ತತ್ತ್ವಪ್ರದೀಪ

ಶಾಸ್ತ್ರಕ್ಕೆ ಪುಮರ್ಥಪರ್ಯವಸಾಯಿತ್ವಕೋಸ್ಕರ ಎರಡನೆಯ ಅಧ್ಯಾಯ ೪೩೯

ಪಾಶುಪತಾದಿಸ್ಮೃತಿಗಳು ವೇದಕ್ಕೆ ಸಮಾನವೆಂದು ಆಕ್ಷೇಪ ೪೪೦

ಶ್ರುತಿಗೆ ಅಪ್ರಾಮಾಣ್ಯವನ್ನು ಹೇಳಬೇಕೆಂದು ಪೂರ್ವಪಕ್ಷ ೪೪೨

ಇತರ ಆಗಮಗಳಿಗಿಂತ ವೇದದಲ್ಲಿರುವ ಪ್ರಾಮಾಣ್ಯವು ಅತ್ಯಧಿಕವಾಗಿದೆ ೪೪೨

ತತ್ತ್ವಪ್ರಕಾಶಿಕಾ

ಎರಡನೆಯ ಅಧ್ಯಾಯದ ಪ್ರಮೇಯ ೪೪೩

ಜಗಜ್ಜನ್ಮಾದಿಕಾರಣತ್ವದಲ್ಲಿ ಯುಕ್ತಿವಿರೋಧ ಪರಿಹಾರ ೪೪೪

ಪ್ರಥಮಾಧ್ಯಾಯದ ಪ್ರಮೇಯಕ್ಕೆ ನಾಕು ಬಗೆಯ ವಿರೋಧಗಳು ೪೪೫

ಸ್ಮೃತ್ಯಧಿಕರಣಕ್ಕೆ ಸಂಗತಿ ನಿರೂಪಣೆ ೪೪೫

ಪಾಶುಪತಾದಿಸ್ಮೃತಿಗಳ ವಿರೋಧವೇ ಪ್ರಬಲ ೪೪೭

ಅಧಿಕರಣದ ಸಂದೇಹಾದಿಗಳು ೪೪೮

ಶ್ರುತಿಗೆ ಅನ್ಯಾರ್ಥವನ್ನೇ ಕಲ್ಪನೆ ಮಾಡಬೇಕೆಂದು ಪೂರ್ವಪಕ್ಷ ೪೪೯

ವಸ್ತುವಿನಲ್ಲಿ ವಿಕಲ್ಪವಿಲ್ಲದ್ದರಿಂದ ಸ್ಮೃತಿ ಹೇಳಿದ್ದೇ ಸತ್ಯ ೪೪೯

ಶ್ರುತಿಗಳಲ್ಲಿರುವ ಅಕ್ಷರಗಳು ಆಕಸ್ಮಿಕ ೪೫೧

ಶ್ರುತಿಗೆ ಮೂಲ ಸ್ಮೃತಿ ೪೫೨

ವಿಷ್ಣುವಿನ ಜಿಜ್ಞಾಸೆಯು ಅನಾವಶ್ಯಕವೆಂದು ಪೂರ್ವಪಕ್ಷ ೪೫೩

ವಿಷ್ಣುವಿನ ಜಿಜ್ಞಾಸೆ ಅತ್ಯವಶ್ಯವೆಂದು ಸಿದ್ಧಾಂತ ೪೫೩

ಪಾಶುಪತಾದಿ ಸ್ಮೃತಿಗಳಿಗಿಂತಲೂ ಶ್ರುತಿಯಲ್ಲಿ ಆಧಿಕ್ಯವಿದೆ ೪೫೪

ಪಂಚರಾತ್ರಾದಿಸ್ಮೃತಿಗಳ ಬೆಂಬಲ ಶ್ರುತಿಗಳಿಗಿದೆ ೪೫೫

ಭಾವದೀಪ
ಮಂಗಳಾಚರಣೆ ೪೫೬
'ಉಕ್ತೇ ಅರ್ಥೇ' ಇತ್ಯಾದಿ ಭಾಷ್ಯಕ್ಕೆ ವ್ಯಾಖ್ಯಾನ ೪೫೬
ಪ್ರಥಮಾಧ್ಯಾಯಾರ್ಥದಲ್ಲಿ ಅಶೇಷಶಾಸ್ತ್ರಗಳೇ ಆಗಾರ ೪೫೭
ಪ್ರಥಮಾಧ್ಯಾಯಕ್ಕೂ ದ್ವಿತೀಯಾಧ್ಯಾಯಕ್ಕೂ ಪರಸ್ಪರ ಸಂಗತಿ ೪೫೮
ನ್ಯಾಯಸುಧೆಗೂ ತತ್ವಪ್ರಕಾಶಿಕೆಗೂ ಸಂಗತಿ ವಿಷಯದಲ್ಲಿ ಒಂದು ಸಣ್ಣ ವ್ಯತ್ಯಾಸ ೪೫೮
ಪ್ರಥಮಾಧ್ಯಾಯದಲ್ಲೂ ಕೆಲವು ಸೂತ್ರಗಳು ವಿರೋಧವನ್ನು ಪರಿಹರಿಸುತ್ತವಲ್ಲವೇ? ೪೫೯
ಈ ಅಧ್ಯಾಯದಲ್ಲಿ ಎಲ್ಲಾ ಸೂತ್ರಗಳೂ ವಿರೋಧ ಪರಿಹಾರಕ ೪೫೯
ಶೈವ ಸ್ಮೃತಿಗಳೂ ಕೂಡ ಯುಕ್ತಿ ಸಮಯಾದಿ ರೂಪ ೪೬೦
ಮಹಾಮಲ್ಲಭಂಗನ್ಯಾಯದಿಂದ ಸ್ಮೃತ್ಯಧಿಕರಣಕ್ಕೆ ಸಂಗತಿ ೪೬೦
ಈ ಅಧಿಕರಣಕ್ಕೆ ಎಲ್ಲಾ ಬಗೆಯ ಸಂಗತಿಗಳೂ ಇವೆ ಮತ್ತು ಫಲವೂ ಇದೆ ೪೬೧
ಸೂತ್ರದಲ್ಲಿರುವ ಸ್ಮೃತಿ ಪದಕ್ಕೆ ವ್ಯಾಖ್ಯಾನ ೪೬೨
ಸೂತ್ರದಲ್ಲಿರುವ ದೋಷಪ್ರಸಂಗಾತ್ ಎಂಬುದರ ವ್ಯಾಖ್ಯಾನ ೪೬೨
ವಿರೋಧಕ್ಕೆ ಅಸಿದ್ಧಿ ಹಾಗೂ ಅಪ್ರಯೋಜಕತ್ವಗಳ ನಿರಾಸ ೪೬೩
ವಸ್ತುವಿನಲ್ಲಿ ವಿಕಲ್ಪ ಕೂಡದು ೪೬೩
ಶ್ರುತಿವಿರೋಧ ಬಂದಾಗ ಸ್ಮೃತಿಗೆ ಅಪ್ರಾಮಾಣ್ಯ ಹೇಳಬೇಕಲ್ಲವೇ? ೪೬೪
ರುದ್ರಾದಿಗಳು ದೋಷರಹಿತರಷ್ಟೇ ಅಲ್ಲ, ಗುಣಭರಿತರೂ ಆಗಿದ್ದಾರೆ ೪೬೫
ಶ್ರುತಿಗೆ ಸ್ಮೃತಿಯನ್ನು ವಿರೋಧಿಸಲು ಸಾಧ್ಯವಿಲ್ಲ ೪೬೬
ಸಿದ್ಧಾಂತ ಭಾಷ್ಯಕ್ಕೆ ವ್ಯಾಖ್ಯಾನ ೪೬೬
ವಿಷ್ಣುವಿನಲ್ಲಿರುವ ಸಾರ್ವಜ್ಞವು ನಿರತಿಶಯ ಹಾಗೂ ನಿಸ್ಸಂಶಯ ೪೬೭
ವಿಷ್ಣುವಿನಲ್ಲಿ ಆಪ್ತತಮತ್ವವಿದೆ ೪೬೮
ಪಂಚರಾತ್ರದಲ್ಲಿ ಹೇಳಿದ್ದಕ್ಕೆ ಶ್ರುತಿಸಂವಾದ ಇದ್ದೇ ಇದೆ ೪೬೮
ಪಾಶುಪತಾದಿ ಸ್ಮೃತಿಗೆ ಬಾಧವಷ್ಟೇ ಅಲ್ಲ, ಅತಿಬಾಧವಿದೆ ೪೬೯
ಬ್ರಹ್ಮಸೂತ್ರ
'ಇತರೇಷಾಂ ಚಾನುಪಲಬ್ಧೇಃ' ಎಂಬ ಸೂತ್ರಕ್ಕೆ ವ್ಯಾಖ್ಯಾನ ೪೭೦
ಬ್ರಹ್ಮಸೂತ್ರಭಾಷ್ಯ
ಪಾಶುಪತಾದಿಸ್ಮೃತಿಗಳಲ್ಲಿ ಹೇಳಿದ ಫಲ ದೊರೆಯುತ್ತಿಲ್ಲ ೪೭೦
ಕೆಲವು ವಾಕ್ಯಗಳು ಪ್ರಮಾಣವಾದರೆ ಸಾಲದು ೪೭೧
ಸತ್ತರ್ಕದೀಪಾವಳಿ
ಅನುಮಾನ ಅಸಾಧಕ ೪೭೨

ತತ್ತ್ವಪ್ರಕಾಶಿಕಾ
ಆಪ್ತವಾಕ್ಯಕ್ಕೆ ಅಪ್ರಾಮಾಣ್ಯವನ್ನು ಒಪ್ಪಬಹುದೇ ? ೪೭೩
ರುದ್ರಾದಿಗಳು ಆಪ್ತರಾಗಿದ್ದಾರೆ ೪೭೪
ಪಾಶುಪತಾದಿಸ್ಮೃತಿಗಳು ಆಪ್ತೋಕ್ತವೇ ಅಲ್ಲ ೪೭೪
ಪಾಶುಪತಸ್ಮೃತಿಯು ಅಪ್ರಮಾಣ ೪೭೫
ಭಾವದೀಪ
ಭಾಷ್ಯದ ಪ್ರತಿಜ್ಞೆ ಹಾಗೂ ಹೇತುಗಳ ವ್ಯಾಖ್ಯಾನ ೪೭೬
ಸೂತ್ರದಲ್ಲಿರುವ ಅನುಪಲಬ್ಧೇಃ ಎಂಬ ಪದಕ್ಕೆ ಎರಡು ಕಡೆ ಅನ್ವಯ ೪೭೬
ಬ್ರಹ್ಮಸೂತ್ರ
'ಏತೇನ ಯೋಗಃ ಪ್ರತ್ಯುಕ್ತಃ' ಎಂಬ ಸೂತ್ರ ವ್ಯಾಖ್ಯಾನ ೪೭೭
ಬ್ರಹ್ಮಸೂತ್ರಭಾಷ್ಯ
ಪಾತಂಜಲಯೋಗದಲ್ಲಿ ಹೇಳಿದ್ದೂ ಕೂಡ ಸರಿಯಿಲ್ಲ ೪೭೮
ಸತ್ತರ್ಕದೀಪಾವಳಿ
'ವಾಚಾ ವಿರೂಪ ನಿತ್ಯಯಾ' ಎಂಬುದರಿಂದ ವೇದವು ನಿತ್ಯವೆಂದು ಸಿದ್ಧವಾಗಿದೆ ೪೭೯
ತತ್ತ್ವಪ್ರಕಾಶಿಕಾ
ಯೋಗಸ್ಮೃತಿಗಳಲ್ಲಿ ಹೇಳಿದ್ದು ನಿಯಮೇನ ದೊರಕುತ್ತಿಲ್ಲ ೪೮೧
ಯಾವುದೇ ಅವೈದಿಕ ಸ್ಮೃತಿಗಳು ಆಪ್ತೋಕ್ತವಲ್ಲ ೪೮೧
ಭಾವದೀಪ
ಈ ಸೂತ್ರ ಬೇರೆ ಅಧಿಕರಣಕ್ಕೆ ಸೇರಿದ್ದಲ್ಲ ೪೮೩
ತಂತ್ರದೀಪಿಕಾ
ದ್ವಿತೀಯಾಧ್ಯಾಯ ಏಕೆ ಹೊರಟಿದೆ ? ೪೮೪
ಸ್ಮೃತ್ಯಧಿಕರಣ ಏಕೆ ಹೊರಟಿದೆ ? ೪೮೫
ಸೂತ್ರದ ಪೂರ್ವಪಕ್ಷ ಭಾಗಕ್ಕೆ ಅರ್ಥ ೪೮೫
ಸೂತ್ರದ ಸಿದ್ಧಾಂತ ಭಾಗಕ್ಕೆ ಅರ್ಥ ೪೮೬
ಸೂತ್ರದ ಸಿದ್ಧಾಂತ ಭಾಗಕ್ಕೆ ಮತ್ತೊಂದು ವ್ಯಾಖ್ಯಾನ ೪೮೬
ಸಂಪೂರ್ಣ ಸೂತ್ರಕ್ಕೆ ಬೇರೆ ವ್ಯಾಖ್ಯಾನ ೪೮೭
ಆಪ್ತೋಕ್ತವಾದದ್ದಕ್ಕೆ ಅಪ್ರಾಮಾಣ್ಯ ಹೇಗೆ ? ೪೮೮
'ಅನುಪಲಬ್ಧೇಃ' ಎಂಬ ಶಬ್ದದ ಬಗ್ಗೆ ೪೮೮
ಸೂತ್ರಕ್ಕೆ ಎರಡನೆಯ ವ್ಯಾಖ್ಯಾನ ೪೮೯
ಅವೈದಿಕ ಸ್ಮೃತಿಯಾದರೂ ಕೂಡ ಯೋಗಸ್ಮೃತಿಯಲ್ಲಿ ವ್ಯಭಿಚಾರ ಇಲ್ಲ ಅಲ್ಲವೇ? ೪೯೦
ಸೂತ್ರಾರ್ಥ ೪೯೦
ಅದ್ವೈತಮತ ಹಾಗೂ ರಾಮಾನುಜಮತದಲ್ಲಿ ಸ್ಮೃತ್ಯಧಿಕರಣ ೪೯೧

ನ ವಿಲಕ್ಷಣತ್ವಾಧಿಕರಣ

ಬ್ರಹ್ಮಸೂತ್ರ

'ನ ವಿಲಕ್ಷಣತ್ವಾದಸ್ಯ ತಥಾತ್ವಂ ಚ ಶಬ್ದಾತ್' ಎಂಬ ಸೂತ್ರಕ್ಕೆ ವ್ಯಾಖ್ಯಾನ ೫೦೦

ಬ್ರಹ್ಮಸೂತ್ರಭಾಷ್ಯ

ಶ್ರುತಿ ಹಾಗೂ ತದನುಸಾರಿ ಸ್ಮೃತಿಗಳಿಗೆ ಅಪ್ರಾಮಾಣ್ಯವನ್ನು ಹೇಳಬಾರದು ೫೦೧

ಅಪೌರುಷೇಯ ವೇದದಲ್ಲಿ ದೋಷವಿಲ್ಲ ೫೦೨

ವೇದಗಳಿಂದ ಮಾತ್ರ ದೇವರನ್ನು ತಿಳಿಯಲು ಸಾಧ್ಯ ೫೦೨

ವೇದನಿತ್ಯತ್ವ ವಿಷಯದಲ್ಲಿ ಆಧಾರಗಳು ೫೦೩

ಸತ್ತರ್ಕದೀಪಾವಳಿ

ವೇದದಂತೆ ಪಾಶುಪತಸ್ಮೃತಿಗೆ ಪ್ರಾಮಾಣ್ಯವಿಲ್ಲ ೫೦೪

ಪ್ರಾಮಾಣ್ಯಸ್ವತಸ್ತ್ವ ಒಪ್ಪದಿದ್ದರೆ ಅನವಸ್ಥಾ ೫೦೪

ತತ್ತ್ವಪ್ರದೀಪ

ಸ್ವಸಮಯವು ಪರಸಮಯ ಸಮಾನವಲ್ಲ ೫೦೫

ಆಶಂಕೆಯು ಸಾಕ್ಷಿಯ ತನಕ ಮಾತ್ರ ೫೦೭

ವ್ಯಾಘಾತದ ತನಕ ಮಾತ್ರ ಆಶಂಕೆ ಎಂಬುದಕ್ಕೆ ಉತ್ತರ ೫೦೮

ಸ್ವತಃ ಪ್ರಾಮಾಣ್ಯಾದಿಗಳಲ್ಲಿ ಶ್ರುತಿ ಪ್ರಮಾಣ ೫೦೯

ತತ್ತ್ವಪ್ರಕಾಶಿಕಾ

ವೇದಪ್ರಾಮಾಣ್ಯವನ್ನು ಸಮರ್ಥನೆ ಮಾಡುವುದಕ್ಕಾಗಿ 'ನ ವಿಲಕ್ಷಣತ್ವಾಧಿಕರಣ' ೫೧೧

ಅಧಿಕರಣದ ವಿಷಯ ಸಂದೇಹಾದಿಗಳು ೫೧೧

ಶ್ರುತಿಗಳು ಅಪ್ರಮಾಣವೆಂದು ಪೂರ್ವಪಕ್ಷ ೫೧೨

ಪಂಚರಾತ್ರಸ್ಮೃತಿಗಳು ಅಪ್ರಮಾಣವೆಂದು ಪೂರ್ವಪಕ್ಷ ೫೧೨

ಯುಕ್ತಿಯಿಂದ ಅಪ್ರಾಮಾಣ್ಯ ಸಮರ್ಥನೆ ೫೧೨

ವೇದ ಹಾಗೂ ತದನುಸಾರಿ ಸ್ಮೃತಿಗಳು ಪ್ರಮಾಣವೆಂದು ಸಿದ್ಧಾಂತ ೫೧೩

ಪಂಚರಾತ್ರಸ್ಮೃತಿಯಂತೆ ಪಾಶುಪತಸ್ಮೃತಿಗೆ ಪ್ರಾಮಾಣ್ಯವಿಲ್ಲ ೫೧೪

ವೇದದ ನಿರ್ದುಷ್ಟತ್ವಕ್ಕೆ ಕಾರಣ ೫೧೪

ಫಲವ್ಯಭಿಚಾರಕ್ಕೆ ಕಾರಣ ೫೧೫

ವೇದಪ್ರಾಮಾಣ್ಯವು ಸಾಕ್ಷಿಸಿದ್ಧ ೫೧೫

ಪಾಶುಪತಸ್ಮೃತಿಯಲ್ಲಿ ನಿರ್ದುಷ್ಟತ್ವವಿಲ್ಲ ೫೧೫

ಪ್ರಾಮಾಣ್ಯಕ್ಕೆ ಸಂವಾದದ ಅಪೇಕ್ಷೆಯಿಲ್ಲ ೫೧೬

ಪ್ರಾಮಾಣ್ಯವು ಸಹಜಸಿದ್ಧ ೫೧೬

ಇಲ್ಲದಿದ್ದಲ್ಲಿ ಅನವಸ್ಥಾದೋಷ ೫೧೬
ಪ್ರವೃತ್ತಿಗಾಗಿ ಪ್ರಾಮಾಣ್ಯದ ಜಿಜ್ಞಾಸೆ ೫೧೭
ನಿಶಂಕಾ ಪ್ರವೃತ್ತಿಗೆ ಪ್ರಾಮಾಣ್ಯ ನಿಶ್ಚಯ ಅನಿವಾರ್ಯ ೫೧೭
ಶಂಕೆಯು ಎಲ್ಲಿ ಬರುತ್ತದೆ ? ೫೧೮
ಅನವಸ್ಥಾದೋಷ ೫೧೮
ಪ್ರಾಮಾಣ್ಯನಿಶ್ಚಯಕ್ಕೆ ಸಂವಾದವು ಬೇಕೆಂದರೆ ವಿಕಲ್ಪದಿಂದ ನಿರಾಕರಣೆ ೫೧೮
ಸಂವಾದಾಪೇಕ್ಷೆಯ ನಿರಾಕರಣೆ ೫೧೮
ಸಂವಾದಕವು ಉಭಯತ್ರ ವ್ಯಾಪಾರವುಳ್ಳದ್ದಾಗಿದೆ ಎಂದು ಆಕ್ಷೇಪ ೫೧೯
ಬಾಧಕದಂತೆ ಏಕೆ ಹೇಳಬಾರದು ? ೫೧೯
ವ್ಯತಿರೇಕ ವ್ಯಭಿಚಾರ ೫೧೯
ಉಭಯತ್ರ ವ್ಯಾಪಾರದ ಆಶಂಕೆಗೆ ಉತ್ತರ ೫೨೦
ಪರತಃ ಪ್ರಾಮಾಣ್ಯಕ್ಕೆ ಅನುಮಾನದ ಆಧಾರ ೫೨೧
ನೈಯಾಯಿಕರ ನಿರಾಕರಣೆ ೫೨೧
ಧರ್ಮಿಜ್ಞಾನವಿದ್ದರೆ ಪ್ರಾಮಾಣ್ಯದ ನಿಶ್ಚಯ ಇದ್ದೇ ಇರುತ್ತದೆ ೫೨೧
ಹೇತುವಿಗೆ ಭಾಗಾಸಿದ್ಧಿದೋಷ ೫೨೨
'ತಥಾತ್ವಂ ಚ ಶಬ್ದಾತ್' ಎಂಬ ಸೂತ್ರ ಭಾಗದ ವ್ಯಾಖ್ಯಾನ ೫೨೨
ವೇದಗಳಿಗೆ ಸಂವಾದ ಪ್ರಮಾದದ ಅಪೇಕ್ಷೆ ಇಲ್ಲವೆಂದು ಸಿದ್ಧವಾಯಿತು ೫೨೩
'ತಸ್ಮೈ ನೂನಮ್ ಅಭಿದ್ಯವೇ' ಎಂಬ ಶ್ರುತ್ಯರ್ಥ ೫೨೪
'ಅನಾದಿನಿಧನಾ ನಿತ್ಯಾ' ಇತ್ಯಾದಿ ಭಾಷ್ಯಕ್ಕೆ ವ್ಯಾಖ್ಯಾನ ೫೨೪
ನಿತ್ಯಪದದ ಅರ್ಥ ೫೨೪
ಯುಕ್ತಿಸಿದ್ಧವಾದದ್ದರಲ್ಲಿ ವೇದಪ್ರಾಮಾಣ್ಯ ೫೨೫
ಈ ಅಧಿಕರಣದ ಸಂಗತಿ ೫೨೬
ಏವಂ ಶ್ರುತೇಃ ಇತ್ಯಾದಿ ಭಾಷ್ಯಕ್ಕೆ ವ್ಯಾಖ್ಯಾನ ೫೨೭
ಸಮಸ್ತವೇದವು ಅಪ್ರಮಾಣವೆಂದು ಪೂರ್ವಪಕ್ಷ ೫೨೭
ಸಾಕ್ಷಿಪ್ರಾಮಾಣ್ಯದಂತೆ ವೇದಪ್ರಾಮಾಣ್ಯ ೫೨೮
ಅನುವ್ಯಾಖ್ಯಾನ, ಅನುಭಾಷ್ಯ, ನ್ಯಾಯವಿವರಣಗಳ ಜೊತೆ ಭಾಷ್ಯಕ್ಕೆ ವ್ಯಾಖ್ಯಾನ ೫೨೯
ಉತ್ಪತ್ತೌಪ್ರಾಮಾಣ್ಯ ಸ್ವತಸ್ತ್ವವನ್ನು ದೇವತಾಧಿಕರಣದಲ್ಲಿ ಹೇಳಿದ್ದಾಗಿದೆ ೫೩೦
ಕರಣಪ್ರಾಮಾಣ್ಯಕ್ಕೆ ಜ್ಞಪ್ತಿಯಲ್ಲಿ ಸ್ವತಸ್ತ್ವವನ್ನು ನಾವು ಅಂಗೀಕರಿಸಿಲ್ಲ, ಅಲ್ಲವೇ ? ೫೩೦
ವಿವಕ್ಷಭೇದದಿಂದ ಜ್ಞಪ್ತಿಯಲ್ಲೂ ಸ್ವತಸ್ತ್ವ ೫೩೨
ನಿಶಂಕಾ ಪ್ರವೃತ್ತಿಗಾಗಿ ಪ್ರಾಮಾಣ್ಯನಿಶ್ಚಯವು ಅನಿವಾರ್ಯ ೫೩೫
ಸಂವಾದಗಳು ಅನ್ಯತ್ರ ಉಪಕ್ಷೀಣ ೫೩೫

ಪ್ರಾಮಾಣ್ಯಕ್ಕೆ ಪರತಸ್ತ್ವ ನಿರಾಕರಣೆ ೫೩೬
ಪ್ರಾಮಾಣ್ಯಸ್ವತಸ್ತ್ವವನ್ನು ಒಪ್ಪಿದಾಗ ಸಂಶಯವನ್ನೂ ಕೂಡ ಕೂಡಿಸಬಹುದು ೫೩೭
ಹೆಚ್ಚಿನ ವಿಚಾರಕ್ಕೆ ತರ್ಕತಾಂಡವ ಓದಬೇಕು ೫೩೮
'ತಥಾತ್ವಂ ಚ ಶಬ್ದಾತ್' ಎಂಬ ಸೂತ್ರಭಾಗಕ್ಕೆ ಮತ್ತೊಂದು ವ್ಯಾಖ್ಯಾನ ೫೩೯
'ತಥಾತ್ವಂ' ಎಂಬ ಪದಕ್ಕೆ ದೆಹಲೀದೀಪನ್ಯಾಯದಿಂದ ಅನ್ವಯ ೫೩೯
'ಅನಾದಿನಿಧನಾ ನಿತ್ಯಾ' ಎಂಬ ಸ್ಮೃತಿಯಲ್ಲಿ ಪುನರುಕ್ತಿ ಇಲ್ಲ ೫೪೦
'ವಿವದಮಾನಂ' ಎಂಬ ಪಾಠಕ್ಕೆ ಸಾಧುತ್ವಸಮರ್ಥನೆ ೫೪೧
ಸೂತ್ರದಲ್ಲಿ ಯುಕ್ತಿಯೂ ಕೂಡ ವಿವಕ್ಷಿತ ೫೪೧

ಬ್ರಹ್ಮಸೂತ್ರ

'ದೃಶ್ಯತೇ ತು' ಎಂಬ ಸೂತ್ರಕ್ಕೆ ವ್ಯಾಖ್ಯಾನ ೫೪೨

ಬ್ರಹ್ಮಸೂತ್ರಭಾಷ್ಯ

ಯಾವುದು ಸ್ವತಃ ಪ್ರಮಾಣಗಳು ೫೪೩
ವೇದ ಹಾಗೂ ತದನುಸಾರಿಗಳಿಗೆ ಅಪ್ರಾಮಾಣ್ಯವಿಲ್ಲ ೫೪೪
ಪಾಶುಪತಾದಿಸ್ಮೃತಿಗಳಿಗೆ ಅಪ್ರಾಮಾಣ್ಯವಿದೆ ೫೪೫

ಸತ್ತರ್ಕದೀಪಾವಳಿ

ಋಗ್ಯಜುಃಸಾಮಗಳಿಗೆ ಸ್ವತಃ ಪ್ರಾಮಾಣ್ಯ ೫೪೬

ತತ್ವಪ್ರಕಾಶಿಕಾ

ವೇದೋಕ್ತವಾದದ್ದಕ್ಕೂ ವ್ಯಭಿಚಾರವಿದೆಯಲ್ಲವೇ? ೫೪೭
ಪ್ರಾಮಾಣ್ಯಸ್ವತಸ್ತ್ವವಾದಿಗೆ ಬರುವ ತೊಂದರೆ ೫೪೭
ವೇದವು ಅಪ್ರಾಮಾಣವೆಂದು ಪೂರ್ವಪಕ್ಷ ೫೪೭
ಫಲ ದೊರೆಯದೇ ಇರಲು ಕರ್ತೃವೈಗುಣ್ಯವು ನಿಮಿತ್ತ ೫೪೮
ಪಾಶುಪತಾದಿ ಸ್ಮೃತಿಗಳಿಗೆ ಇದು ಸಮಾನವಲ್ಲ ೫೪೮
ವೇದಕ್ಕೆ ಹೀಗೆ ಒಪ್ಪಲು ಗಮಕವಿದೆ ೫೪೮
ಪಾಶುಪತಸ್ಮೃತಿಯು ಸ್ವತಃ ಪ್ರಮಾಣವಲ್ಲ ೫೪೯
ಸೂತ್ರದಲ್ಲಿರುವ ತು ಶಬ್ದದ ವ್ಯಾಖ್ಯಾನ ೫೪೯
ಅಧಿಕರಣ ಪ್ರಮೇಯಕ್ಕೆ ಸ್ಮೃತಿಯ ಆಧಾರ ೫೪೯
ಫಲವು ಕಾಣಿಸದಿರಲು ಕಾರಣವೇನು ? ೫೫೦
ವೇದಪ್ರಾಮಾಯ್ಯವು ಯುಕ್ತಿವಿರುದ್ಧವಲ್ಲ ೫೫೦

ತಂತ್ರದೀಪಿಕಾ

ವೇದ ಹಾಗೂ ತದನುಸಾರಿ ಸ್ಮೃತಿಗಳಲ್ಲಿ ಸ್ವತಃ ಪ್ರಾಮಾಣ್ಯವಿದೆ ೫೫೨
ಅಪವಾದದ ಮೂಲಕ ಅಪ್ರಮಾಣ್ಯವು ಪ್ರಾಪ್ತವಾಗದು ೫೫೪

ಅಭಿಮಾನ್ಯಧಿಕರಣ

ಬ್ರಹ್ಮಸೂತ್ರ
'ಅಭಿಮಾನಿವ್ಯಪದೇಶಸ್ತು ವಿಶೇಷಾನುಗತಿಭ್ಯಾಮ್' ಎಂಬ ಸೂತ್ರಕ್ಕೆ ವ್ಯಾಖ್ಯಾನ ೫೫೬
ಬ್ರಹ್ಮಸೂತ್ರಭಾಷ್ಯ
ವೇದಕ್ಕೆ ದೃಢಯುಕ್ತಿಯ ವಿರೋಧ ೫೫೭
'ಮೃದಬ್ರವೀತ್' ಇತ್ಯಾದಿ ವೇದವಚನಗಳಿಗೆ ವ್ಯಾಖ್ಯಾನ ೫೫೭
'ಮೃದಬ್ರವೀತ್' ಎಂಬ ಶ್ರುತಿಯು ಅಭಿಮಾನಿದೇವತಾ ಪರ ೫೫೮
ಸತ್ತರ್ಕದೀಪಾವಳಿ
'ಮೃದಬ್ರವೀತ್' ಇತ್ಯಾದಿ ವೇದವಾಕ್ಯಗಳೂ ಕೂಡ ಅಪ್ರಮಾಣವಲ್ಲ ೫೫೯
ತತ್ತ್ವಪ್ರದೀಪ
'ಮೃದಬ್ರವೀತ್' ಇತ್ಯಾದಿ ಶ್ರುತಿಗಳ ವ್ಯಾಖ್ಯಾನ ೫೬೦
ತತ್ತ್ವಪ್ರಕಾಶಿಕಾ
ಅಧಿಕರಣಕ್ಕೆ ಶಾಸ್ತ್ರಾದಿಸಂಗತಿಗಳು ೫೬೧
ವೇದಪ್ರಾಮಾಣ್ಯ ವಿಷಯದಲ್ಲಿ ಯುಕ್ತಿವಿರೋಧ ಪರಿಹಾರ ೫೬೧
ಅಧಿಕರಣದ ವಿಷಯಾದಿಗಳು ೫೬೨
ಶ್ರುತಿಗಳು ಬಾಧಿತಾರ್ಥಕಗಳು ೫೬೨
ಯುಕ್ತಿವಿರುದ್ಧವಾದದ್ದಕ್ಕೆ ಪ್ರಾಮಾಣ್ಯವಿಲ್ಲ ೫೬೨
'ಯತೋ ವಾ ಇಮಾನಿ ಭೂತಾನಿ' ಇತ್ಯಾದಿ ಶ್ರುತಿಗಳೂ ಕೂಡ ಪ್ರಮಾಣ ೫೬೩
ಅಭಿಮಾನ್ಯಧಿಕರಣಕ್ಕೆ ಸಂಗತಿ ಹೇಗೆ ? ೫೬೩
ಈ ಅಧಿಕರಣವು ಯುಕ್ತಿವಿರೋಧವನ್ನೇ ಪರಿಹರಿಸುತ್ತಿದೆ ೫೬೪
ಅಧಿಕರಣದ ಸಿದ್ಧಾಂತ ೫೬೪
ದೇವತೆಗಳಲ್ಲಿ ವಚನಕ್ರಿಯಾದಿಗಳನ್ನು ಹೇಳುತ್ತಿದೆ ೫೬೪
ಅಪೌರುಷೇಯವಾದ ಶ್ರುತಿಯು ಅತ್ಯಂತ ಪ್ರಬಲ ೫೬೫
'ಮೃದಬ್ರವೀತ್' ಎಂಬುದಕ್ಕೆ ಪ್ರತ್ಯಕ್ಷವಿರೋಧವಿಲ್ಲ ೫೬೫
ಮುಖ್ಯಾರ್ಥವನ್ನು ಬಿಟ್ಟಲ್ಲ ೫೬೫
ಅಭಿಮಾನಿ ದೇವತೆಗಳು ಇದ್ದಾರೆಯೇ ? ೫೬೬
ಅಭಿಮಾನಿದೇವತೆಗಳನ್ನು ಕಲ್ಪಿಸುವುದು ವ್ಯರ್ಥವಲ್ಲವೇ? ೫೬೬
ಅಭಿಮಾನಿದೇವತೆಗಳು ಇದ್ದಾರೆ ೫೬೭
ಇದ್ದ ಮಾತ್ರಕ್ಕೆ ಕಾಣಿಸಬೇಕಾಗಿಲ್ಲ ೫೬೭

ಅಭಿಮಾನಿದೇವತೆಗಳಲ್ಲೇ ವಚನಕ್ರಿಯಾದಿಗಳಿವೆ ೫೬೭
ಏಕವಚನ ಪ್ರಯೋಗಕ್ಕೆ ಕಾರಣ ೫೬೮
ಅಭಿಮಾನಿವ್ಯಪದೇಶ ಎಂಬಲ್ಲಿ ಹೇಗೆ ವಿಗ್ರಹ ?
ಭಾವದೀಪ
ದೃಢಯುಕ್ತಿಯ ವಿರೋಧ ಪರಿಹಾರಕ್ಕಾಗಿ ಅಭಿಮಾನ್ಯಧಿಕರಣ ೫೬೯
'ಇತ್ಯಾದಿ ವಚನಾತ್ ಯುಕ್ತಿವಿರುದ್ಧ' ಎಂಬ ಭಾಷ್ಯಕ್ಕೆ ವ್ಯಾಖ್ಯಾನ ೫೭೦
ಯಾವುದು ಪಕ್ಷ ? ೫೭೧
ಒಮ್ಮೆ ಏಕವಚನ ಮತ್ತೊಮ್ಮೆ ಬಹುವಚನ ಏಕೆ ? ೫೭೨
ಶ್ರುತಿಗೆ ಹೇಗೆ ವ್ಯಾಖ್ಯಾನ ಮಾಡಬೇಕು ? ೫೭೨
ಶ್ರುತಿಗೆ ಅನುಮಾನ ವಿರೋಧವಿಲ್ಲ ೫೭೩
'ಅಭಿಮಾನಿವ್ಯಪದೇಶಃ' ಎಂಬಲ್ಲಿ ವಿಗ್ರಹ ಹೇಗೆ ? ೫೭೪
ಭಾಷ್ಯದ ಪೂರ್ವೋತ್ತರ ವಾಕ್ಯಗಳಿಗೆ ವಿರೋಧ ಪರಿಹಾರ ೫೭೫
ಬ್ರಹ್ಮಸೂತ್ರ
'ದೃಶ್ಯತೇ ಚ' ಎಂಬ ಸೂತ್ರಕ್ಕೆ ವ್ಯಾಖ್ಯಾನ ೫೭೬
ಬ್ರಹ್ಮಸೂತ್ರಭಾಷ್ಯ
ಅಭಿಮಾನಿದೇವತೆಗಳಲ್ಲಿ ವಿಶಿಷ್ಟ ಸಾಮರ್ಥ್ಯವಿದೆ ೫೭೬
ಈ ವಿಷಯದಲ್ಲಿ ಭವಿಷ್ಯತ್‌ಪುರಾಣವೇ ಆಧಾರ ೫೭೭
ತತ್ತ್ವಪ್ರಕಾಶಿಕಾ
ವೇದವನ್ನು ಅಪ್ರಮಾಣವೆನ್ನುವುದೇ ಲೇಸು ೫೭೮
ಈ ಶಂಕೆಯ ಪರಿಹಾರಕ್ಕಾಗಿ 'ದೃಶ್ಯತೇ ಚ' ಎಂಬ ಸೂತ್ರ ೫೭೮
ಮಹಾಜನರು ದೇವತೆಗಳ ಶಕ್ತಿಸಾಮರ್ಥ್ಯ ನೋಡಿದ್ದಾರೆ ೫೭೯
ಪುರಾಣವೂ ಇದನ್ನೇ ಹೇಳಿದೆ ೫೭೯
ಅಭಿಮಾನಿದೇವತೆಗಳಿಗೆ ಶರೀರವಿಲ್ಲವೇ? ೫೭೯
ಶರೀರವಿದ್ದರೂ ಕಾಣಿಸುವುದಿಲ್ಲ ೫೮೦
ಅನುಪಲಬ್ಧದೋಷ ಪರಿಹಾರಕ್ಕಾಗಿ ಸೂತ್ರ ಹೊರಟದೆ ೫೮೦
ಅನ್ಯಥಾನುಪಪತ್ತಿಪ್ರಮಾಣದಿಂದ ಅಭಿಮಾನಿದೇವತಾಪರ ೫೮೧
ಜಗಜ್ಜನ್ಮಾದಿಕಾರಣತ್ವವಿಷಯದಲ್ಲಿ ಯುಕ್ತಿವಿರೋಧವಿಲ್ಲ ೫೮೧
ಭಾವದೀಪ
'ದೃಶ್ಯತೇ ಚ' ಎಂಬ ಸೂತ್ರಕ್ಕೆ ಅವತಾರಿಕೆ ೫೮೨
ವೇದವನ್ನು ಬಿಟ್ಟು ಯೋಗಿಪ್ರತ್ಯಕ್ಷವನ್ನೇಕೆ ಪ್ರಮಾಣವೆಂದರು ? ೫೮೩
'ವಿಶೇಷಾನುಗತಿಭ್ಯಾಂ' ಎಂಬ ಹೇತುವಿಗೆ ಎಲ್ಲಿ ಅನ್ವಯ ? ೫೮೩

ನ್ಯಾಯವಿವರಣಕ್ಕೆ ವ್ಯಾಖ್ಯಾನ ೫೮೪
ಪ್ರಬಲ ಯುಕ್ತಿವಿರೋಧ ಪರಿಹಾರ ೫೮೫
'ಅನುಗತಿವಿಶೇಷಾಭ್ಯಾಂ' ಎಂದು ಹೇಳಬೇಕಿತ್ತಲ್ಲವೇ? ೫೮೭
ಸೂತ್ರದಲ್ಲಿ ಚೇತನ ಪದವನ್ನು ಪ್ರಯೋಗಿಸಬಹುದಿತ್ತಲ್ಲವೇ? ೫೮೮
ಸೂತ್ರದಲ್ಲಿರುವ ವಿಶೇಷಪದದ ಸ್ವಾರಸ್ಯ ೫೮೯
ನ್ಯಾಯಸುಧೆಯ ಪ್ರಕಾರ 'ವಿಶೇಷಾನುಗತಿಭ್ಯಾಂ' ಎಂಬುದಕ್ಕೆ ವ್ಯಾಖ್ಯಾನ ೫೯೦
ಅಭಿಮಾನಿದೇವತೆಗಳು ಕಣ್ಣಿಗೆ ಕಾಣಿಸುತ್ತಾರೆ ೫೯೧

ಪರಿಶಿಷ್ಟ
ಆನುಮಾನಿಕಾಧಿಕರಣ - ಸತ್ತರ್ಕದೀಪಾವಳಿ

ಸಮನ್ವಯ ಮುಗಿಯಿತು ಈಗ ಮಹಾಸಮನ್ವಯ ೫೯೩
ಅನ್ನ ಪ್ರಾಣಾದಿ ಶಬ್ದಗಳು ವಿಷ್ಣುವಿನಲ್ಲೂ ಪ್ರಸಿದ್ಧವೆನ್ನಬಾರದು ೫೯೩
ನಾಕನೇ ಪಾದದ ಸಮನ್ವಯ ವಿಷಯ ೫೯೪
'ತತ್ತು ಸಮನ್ವಯಾತ್' ಎಂಬುದರ ವಿವರಣೆ ೫೯೫
ಜೀವೇಶ್ವರರಿಗೆ ಐಕ್ಯ ಒಪ್ಪಬೇಕೆಂಬುದು ಅಧಿಕರಣದ ಪೂರ್ವಪಕ್ಷ ೫೯೬
ಜೀವಾದಿಗಳಿಗೆ ಪರಮಾತ್ಮನೇ ನಿಯಾಮಕನೆಂದು ಸಿದ್ಧಾಂತ ೫೯೭
ಪರಮಾತ್ಮನೇ ಅವ್ಯಕ್ತಾದಿಗಳಲ್ಲಿ ನೆಲಸಿದ್ದಾನೆ ೫೯೭
ಅವ್ಯಕ್ತಶಬ್ದದ ಯೋಗಾರ್ಥ ೫೯೮
'ತದಧೀನತ್ವ' ಸೂತ್ರಕ್ಕೆ ಪೀಠಿಕೆ ೫೯೯
ಅವ್ಯಕ್ತತ್ವಾದಿಗಳು ಪರಮಾತ್ಮನಲ್ಲಿ ೬೦೦
ಎಲ್ಲಾ ಶಬ್ದಗಳು ಈಶ್ವರನಲ್ಲೇ ಮಉಖ್ಯ ೬೦೦
ಎಲ್ಲೆಡೆಯೂ ಸ್ವಾಮಿಗೆ ಪ್ರಾಧಾನ್ಯ ೬೦೧
ಪುರುಷಾರ್ಥ ಬೇಕೆಂದರೆ ಮೊದಲು ಅದನ್ನು ತಿಳಿಯಬೇಕು ೬೦೧
ಸೂತ್ರದ ಪೂರ್ವಪಕ್ಷಾಂಶ ವ್ಯಾಖ್ಯಾನ ೬೦೨
ಸೂತ್ರದ ಸಿದ್ಧಾಂತಾಂಶ ವ್ಯಾಖ್ಯಾನ ೬೦೨
'ಸೋಽಧ್ವನೋ ಪಾರಮಾಪ್ನೋತಿ' ಎಂಬ ಶ್ರುತ್ಯರ್ಥ ೬೦೩
ಪ್ರಶ್ನೋಪನ್ಯಾಸದ ಆಧಾರ ೬೦೪
'ಮಹತಃ ಪರಂ ಧ್ರುವಂ' ಎಂಬಲ್ಲೂ ವಿಷ್ಣುವೇ ಪ್ರತಿಪಾದ್ಯ ೬೦೫
ಅವ್ಯಕ್ತಾದಿಶಬ್ದಸಮನ್ವಯಕ್ಕೆ ಮತ್ತೊಂದು ಕಾರಣ ೬೦೫

****

ಶುಭ್ರವರ್ಣ . . . ಹೊರ ಕತ್ತಲೆ ಕತ್ತರಿಸುವ ಶಕ್ತಿ. . .
ಸರ್ವಜ್ಞನಾದ ಶಿವನ ತಲೆಯೇ ನೆಲೆ. . . .
ಇದುವೇ ಚಂದ್ರಿಕಾ.

ಮಿನುಗುವ ವರ್ಣ . . . ಶರಣೆಂದವರ ಒಳ ಕತ್ತಲೆ
ಕತ್ತರಿಸುವ ಶಕ್ತಿ. . .
ಜ್ಞಾನಿವರೇಣ್ಯರ ತಲೆಯೇ ನೆಲೆ. . .
ಇದುವೇ ತಾತ್ಪರ್ಯಚಂದ್ರಿಕಾ.

ಚಂದ್ರಿಕೆಯ ಪ್ರಕಾಶ ಚಂದ್ರಿಕೆಯ ಜನಕರಿಂದಲೇ !

ಶ್ರೀವ್ಯಾಸರು ಬಿತ್ತಿದ ಬೀಜ ಬೆಳೆಯುತ್ತಾ ಬಂದು
ಇಂದು ಶ್ರೀರಾಘವೇಂದ್ರ ಗುರುಸಾರ್ವಭೌಮರ
ಅಮೃತಮಯಕೃತಿಗಳಿಂದ ಫಲಗಳುಂಟಾಗಿ
ಮಧ್ವಸಿದ್ಧಾಂತವೆಂಬ ಮಹಾವೃಕ್ಷವು
ಸೊಬಗಿನಿಂದ ಕಂಗೊಳಿಸುತ್ತಿದೆ.

ಸ್ಫೂರ್ತಿ :- ಗುರುಗುಣಸ್ತವನ

ಪ್ರಕಾಶನ
ಶ್ರೀ ಗುರುಸಾರ್ವಭೌಮ ಸಂಶೋಧನ ಮಂದಿರ
ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ
ಶ್ರೀ ರಾಘವೇಂದ್ರಸ್ವಾಮಿಗಳ ಮಠ
ಮಂತ್ರಾಲಯ - 518 345 (ಆಂಧ್ರ ಪ್ರದೇಶ)